
ಕೈಲಾಸಂ ಕೃತಿಗಳು

ಪ್ರಧಾನ ಸಂಪಾದಕ
ಡಾ. ಎಚ್. ತಿಪ್ಪೇರುದ್ರಸ್ವಾಮಿ

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
೧೯೮೭





ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ–೪೮೨
ಸಾರ್ವತ್ರಿಕ ಮಾಲೆ–೪೨

ಪ್ರಧಾನ ಸಂಪಾದಕ

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಕೈಲಾಸಂ ಕೃತಿಗಳು

'ಕೈಲಾಸಂ ಕೃತಿಗಳು' ಸುಲಭ ಬೆಲೆಯ ಆವೃತ್ತಿ
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ

ಹಾಗೂ

ಕರ್ನಾಟಕ ರಾಜ್ಯ
ನಾಟಕ ಅಕಾಡೆಮಿಯ ಉದಾರ ನೆರವಿನಿಂದ ಪ್ರಕಟವಾಗುತ್ತಿದೆ.
ಕರ್ನಾಟಕ ಸರ್ಕಾರಕ್ಕೆ ಮತ್ತು ನಾಟಕ ಅಕಾಡೆಮಿಗೆ
ನಮ್ಮ ಕೃತಜ್ಞತೆಗಳು



ಟಿ. ಪಿ. ಕೈಲಾಸಂ
(1884–1946)

ಕೈಲಾಸಂ ಕೃತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
೧೯೮೭

KAILĀSAM KṚTIGAḶU—Collected works of T. P. Kailasam; published by the Institute of Kannada Studies, University of Mysore, Manasa Gangotri, Mysore-570 006. Low priced Edition : 1987. pp. vii + 836.

ಮಾರಾಟ :

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಮುದ್ರಣ :

ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯಲೋಕ ತನ್ನ ಉಜ್ವಲ ಇತಿಹಾಸದಲ್ಲಿ ಕಂಡ ಅತ್ಯಂತ ಪ್ರತಿಭಾವಂತ ನಾಟಕಕಾರರಲ್ಲಿ ದಿ. ಟಿ. ಪಿ. ಕೈಲಾಸಂ ಅವರೂ ಒಬ್ಬರು. ಕನ್ನಡ ರಂಗಭೂಮಿಯನ್ನು ಸಾಂಪ್ರದಾಯಿಕತೆಯ ಸಂಕೋಲೆಗಳಿಂದ ಹೊರಗೆಳೆದು ತಂದು, ಅದಕ್ಕೆ ಹೊಸ ತಿರುವನ್ನೂ ಆಯಾಮಗಳನ್ನೂ ತಂದುಕೊಟ್ಟ ಹಿರಿಮೆ ಅವರದು.

ಕನ್ನಡ ನಾಟಕ ಕ್ಷೇತ್ರದ ಮೇಲೆ ಕೈಲಾಸಂ ಅವರು ಬೀರಿರುವ ವಿಶಿಷ್ಟ ಪ್ರಭಾವದ ಪ್ರತೀಕವಾಗಿಯೇ "ಕನ್ನಡಕ್ಕೊಬ್ಬನೆ ಕೈಲಾಸಂ" ಎಂಬ ಮಾತು ಹುಟ್ಟಿಕೊಂಡು ಅದು ಇಂದು ಗಾದೆ ಮಾತಿನಂತಾಗಿದೆ. ಒಂದು ಕಾಲದಲ್ಲಿ ಕನ್ನಡಿಗರ ಮನೆ ಮನೆಗಳಲ್ಲಿ ತಮ್ಮ ಹೆಸರು ಕೇಳಿಬರುವಷ್ಟರ ಮಟ್ಟಿಗೆ ಅವರು ಜನಪ್ರಿಯರೂ ಆಗಿದ್ದರು. ಅವರನ್ನು ಅನುಕರಿಸಲು ಅನೇಕರು ಪ್ರಯತ್ನಿಸಿದರೂ, ಅವರಲ್ಲಿ ಯಾರೂ ಅವರ ಮಟ್ಟಕ್ಕೆ ಏರಲಾರದೆ ಹೋದರು. ಅಂಥ ಅಪೂರ್ವ ಪ್ರತಿಭೆಯ ನಾಟಕಕಾರರು ಅವರಾಗಿದ್ದರು. ಕೈಲಾಸಂ ಅವರ ಕೃತಿಗಳಿಗೆ ಐತಿಹಾಸಿಕ ಮಹತ್ವವಲ್ಲದೆ, ಸಾಮಾಜಿಕ ಪ್ರಸ್ತುತತೆಯೂ ಉಳಿದುಕೊಂಡು ಬಂದಿದೆ. ಅವರ ಕೃತಿಗಳಲ್ಲಿನ ಭಾಷೆ ಇಂದು ನಮಗೆ ಸ್ವಲ್ಪ ವಿಚಿತ್ರವಾಗಿ ತೋರಬಹುದಾದರೂ, ವಸ್ತುವಿನ ಪ್ರಸ್ತುತತೆ ಅಥವಾ ಸಂಬದ್ಧತೆಯೇನೂ ಇಲ್ಲವಾಗಿಲ್ಲ. ಅವರ ಕೃತಿಗಳ ಓದು ಇಂದಿಗೂ ಫಲದಾಯಕವಾಗುತ್ತದೆ.

ಅವರು ಹುಟ್ಟಿದ ವರ್ಷದ ಬಗೆಗೆ ಸ್ವಲ್ಪ ಭಿನ್ನಾಭಿಪ್ರಾಯವಿದೆ : 1885. ಅಥವಾ 1886 ಎಂಬ ಅಭಿಪ್ರಾಯವಿದ್ದರೂ, 1984ರಲ್ಲಿ ಕರ್ನಾಟಕದಲ್ಲಿ ಮಾತ್ರವಲ್ಲದೆ ನಾಡಿನ ಇತರ ಕಡೆಗಳಲ್ಲಿಯೂ ಕೈಲಾಸಂ ಅವರ ಜನ್ಮಶತಮಾನೋತ್ಸವವನ್ನು ಆಚರಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಅಂತೆಯೇ ಕೇಂದ್ರ ಸಾಹಿತ್ಯ ಅಕಾಡೆಮಿ ಅವರ ಶತಮಾನೋತ್ಸವ ವಿಚಾರಗೋಷ್ಠಿಗಳನ್ನು ಏರ್ಪಡಿಸಿದ್ದುವು. 'ಪ್ರಬುದ್ಧ ಕರ್ಣಾಟಕ' ಕೈಲಾಸಂ ಅವರ ಬಗ್ಗೆ ವಿಶೇಷ ಸಂಚಿಕೆಯನ್ನೂ ಹೊರತಂದಿತು.

ಕೈಲಾಸಂ ಅವರ ಅನೇಕ ಕೃತಿಗಳು ದುರ್ಲಭವಾಗಿದ್ದುದನ್ನು ಗಮನಿಸಿ, ಅವರ ಶತಮಾನೋತ್ಸವದ ನೆನಪಿನಲ್ಲಿ ಅವರ ಕೃತಿಗಳ ಒಂದು ಸಮಗ್ರ ಸಂಪುಟವನ್ನು ಹೊರತರಬೇಕೆಂದು 1983ರಲ್ಲಿಯೇ ಅಧ್ಯಯನ ಸಂಸ್ಥೆ ಆಲೋಚಿಸಿತು. ಕೈಲಾಸಂ ಅವರು ಜೀವಂತವಾಗಿದ್ದ ಅವಧಿಯಲ್ಲಿ ಹೊರಬಂದಿದ್ದ 17 ಕನ್ನಡ ಮತ್ತು 4 ಇಂಗ್ಲಿಷ್ ನಾಟಕಗಳನ್ನು ಇದರಲ್ಲಿ ಅಳವಡಿಸಬೇಕೆಂದು ತೀರ್ಮಾನಿಸಲಾಯಿತು. ಹಲವಾರು ಕಾರಣಗಳಿಂದ, ಕೈಲಾಸಂ ಅವರು ತೀರಿಕೊಂಡ ತರುವಾಯ ಅವರ ಹೆಸರಿನಲ್ಲಿ ಹೊರಬಂದ, ಅವರ ಕಲ್ಪನೆಗಳನ್ನು ಆಧರಿಸಿದ್ದೆಂದು ಹೇಳಲಾದ ಕೃತಿಗಳನ್ನು ಕೈಬಿಡಬೇಕೆಂದೂ ತೀರ್ಮಾನಿಸಲಾಯಿತು.

ಅಧ್ಯಯನ ಸಂಸ್ಥೆ ಬಿ.ಎಂ.ಶ್ರೀ.ಯವರ ಸಮಗ್ರ ಕೃತಿಗಳನ್ನು 'ಶ್ರೀ ಸಾಹಿತ್ಯ' ಎಂಬ ಹೆಸರಿನಲ್ಲಿ ಸುಲಭ ಬೆಲೆಯಲ್ಲಿ ಹೊರತಂದಿದ್ದಂತೆಯೇ 'ಕೈಲಾಸಂ ಕೃತಿಗಳು' ಎಂಬ ಹೆಸರಿನಲ್ಲಿ ಈ ಸಂಪುಟದ ಸುಲಭ ಬೆಲೆಯ ಆವೃತ್ತಿಯನ್ನು ಹೊರತರುವ ಯೋಜನೆಯೊಂದನ್ನು ರೂಪಿಸಿ, ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿತು. ಅಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಶ್ರೀ ಎನ್. ಎಸ್. ಕಠಾವಿ, ವಿಶ್ವವಿದ್ಯಾನಿಲಯದ ಕುಲಸಚಿವರಾಗಿದ್ದ ಶ್ರೀ ಎನ್. ಆರ್. ವೆಂಕಟೇಶ್ ಮತ್ತು ಕುಲಪತಿಗಳಾಗಿದ್ದ ಪ್ರೊ. ಕೆ. ಎಸ್. ಹೆಗ್ಗಡೆ ಅವರು ಈ ವಿಷಯದಲ್ಲಿ ತೀವ್ರವಾದ ಆಸಕ್ತಿಯನ್ನು ತೋರಿದರು. ಕರ್ನಾಟಕ ಸರ್ಕಾರ ಈ ಯೋಜನೆಯನ್ನು ಒಪ್ಪಿ ಉದಾರ ಸಹಾಯ ಧನವನ್ನು ನೀಡಿತು. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಚಂದ್ರಶೇಖರ ಕಂಬಾರ ಮತ್ತು ರಿಜಿಸ್ಟ್ರಾರ್ ಆಗಿದ್ದ ಶ್ರೀ ಸುಧೀಂದ್ರ ಅವರು ಈ ವಿಷಯದಲ್ಲಿ ಆಸಕ್ತಿಯನ್ನು ತೋರಿ ನಾಟಕ ಅಕಾಡೆಮಿಯಿಂದಲೂ ಸಾಂಕೇತಿಕ ಸಹಾಯಧನ ದೊರೆಯುವಂತೆ ಮಾಡಿದರು. ಇದಕ್ಕಾಗಿ ಸಂಸ್ಥೆ ಎಲ್ಲರಿಗೂ ಕೃತಜ್ಞತೆಗಳನ್ನು ಸೂಚಿಸ ಬಯಸುತ್ತದೆ.

ಶ್ರೀ ಎನ್. ಎನ್. ಕಠಾವಿಯವರು ಈ ಹೊತ್ತಿನಲ್ಲಿ ನಮ್ಮೊಡನೆ ಇಲ್ಲದಿರುವುದು ನಮಗೆ ತುಂಬ ವಿಷಾದವನ್ನು ಉಂಟು ಮಾಡಿದೆ.

ಕೈಲಾಸಂ ಅವರ ನಾಟಕಗಳ ಜೊತೆಗೆ, ಅವರ ಕಥೆಗಳು ಮತ್ತು ಕವಿತೆಗಳನ್ನು, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ (1945) ಅವರು ಮಾಡಿದ್ದ ಅಧ್ಯಕ್ಷ ಭಾಷಣವನ್ನು ಮತ್ತು ಆ ಸಂದರ್ಭದಲ್ಲಿ ಅವರು ಮದರಾಸು ಆಕಾಶವಾಣಿಯಿಂದ ಮಾಡಿದ ಭಾಷಣವನ್ನು ಈ ಸಂಪುಟದಲ್ಲಿ ಸೇರಿಸಲಾಗಿದೆ. ಮತ್ತು ದಿ. ತಾರಾನಾಥ ಮತ್ತು ದಿ. ಟಿ. ಕೋದಂಡರಾವ್ ಅವರು ಕ್ರಮಶಃ 'ಹೋಂ ರೂಲ್' ಮತ್ತು *Little Lays and Plays* ಕೃತಿಗಳಿಗೆ ಬರೆದಿದ್ದ 'ಕಾಣಿಕೆ' ರೂಪದ ಮುನ್ನುಡಿಗಳನ್ನು ಅನುಬಂಧರೂಪವಾಗಿ ಕೊಡಲಾಗಿದೆ. ಒಟ್ಟಿನಲ್ಲಿ ಇದು ಕೈಲಾಸಂ ಅವರ ಕೃತಿಗಳ ಅಧಿಕೃತ ಆವೃತ್ತಿಯಾಗಿ ಉಳಿಯಲಿದೆ ಎಂದು ಹೇಳಬಹುದಾಗಿದೆ.

ಮೂಲತಃ ಕೈಲಾಸಂ ಅವರ ಬದುಕು-ಬರಹಗಳನ್ನು ಕುರಿತ ಪರಿಚಯಾತ್ಮಕವಾದ ಲೇಖನವೊಂದನ್ನು ಬರೆಸಿ ಇದರ ಜೊತೆಗೆ ಪ್ರಕಟಿಸಬೇಕೆಂದು ಯೋಜಿಸಲಾಗಿತ್ತು. ಆದರೆ ಕೈಮೀರಿದ ಕಾರಣಗಳಿಂದಾಗಿ ಹಾಗೆ ಮಾಡುವುದು ಸಾಧ್ಯವಾಗದೆ ಹೋದುದಕ್ಕಾಗಿ ನಾವು ವಿಷಾದಿಸುತ್ತೇವೆ. ಇದ್ದುದರಲ್ಲಿ ಸಮಾಧಾನದ ಸಂಗತಿ ಎಂದರೆ 'ಪ್ರಬುದ್ಧ ಕರ್ಣಾಟಕ'ದ ಕೈಲಾಸಂ ವಿಶೇಷ ಸಂಚಿಕೆಯನ್ನು 'ಕೈಲಾಸಂ : ಬದುಕು ಬರೆಹ' ಎಂಬ ಹೆಸರಿನಲ್ಲಿ ವಿಶ್ವವಿದ್ಯಾನಿಲಯದ ಪ್ರಸಾರಾಂಗವೇ ಹೊರತಂದಿದೆ ಎಂಬುದು. ಹೆಚ್ಚಿನ ವಿವರಗಳಿಗಾಗಿ ಆಸಕ್ತರು ಈ ಗ್ರಂಥವನ್ನು ನೋಡಬಹುದು ಎಂದು ಸೂಚಿಸಬಯಸುತ್ತೇವೆ.

ಈ ಸಂದರ್ಭದಲ್ಲಿ ಅಧ್ಯಯನ ಸಂಸ್ಥೆಯ ಹಿಂದಿನ ನಿರ್ದೇಶಕರಾಗಿದ್ದ ಡಾ. ಹಾ. ಮಾ. ನಾಯಕರ ಹೆಸರನ್ನು ವಿಶೇಷವಾಗಿ ಸ್ಮರಿಸಬೇಕು. ಅವರೇ ಈ ಸಂಪುಟವನ್ನು ಯೋಜಿಸಿ, ದುರ್ಲಭವಾಗಿದ್ದ ಕೈಲಾಸಂ ಅವರ ಕೃತಿಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ, ಯಾವ ಆವೃತ್ತಿಗಳನ್ನು ಆಕರವಾಗಿ ಬಳಸಿಕೊಳ್ಳಬೇಕೆಂಬುದನ್ನು ನಿರ್ಧರಿಸಿ, ಒಟ್ಟಿನಲ್ಲಿ ಸಮಸ್ತ ರೂಪರೇಷೆಗಳನ್ನು ಗೊತ್ತುಪಡಿಸಿ, ಸರ್ಕಾರದಿಂದ ಸಹಾಯಧನವನ್ನು ಪಡೆದು, ಮುದ್ರಣ ಕಾರ್ಯವನ್ನು ಆರಂಭಿಸಿದ್ದರು. ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅವರು ನೂತನ ಹೊಣೆಗಾರಿಕೆಯನ್ನು ವಹಿಸಿಕೊಂಡ ಬಳಿಕ, ಮುದ್ರಣಕಾರ್ಯವನ್ನು ನಿರ್ವಹಿಸುವ ಕಾರ್ಯವನ್ನಷ್ಟೇ ನಾವು ಪೂರೈಸಿದ್ದೇವೆ. ಇದು ಬಿಡುಗಡೆಯಾಗುವ ಹೊತ್ತಿಗೆ ಅವರು ಮತ್ತೆ ಕನ್ನಡ ಅಧ್ಯಯನ ಸಂಸ್ಥೆಗೆ ಪ್ರಾಧ್ಯಾಪಕರಾಗಿ ಮರಳಿ ಬಂದಿದ್ದಾರೆ. ಅವರ ನಿರೀಕ್ಷೆಗೆ ಅನುಗುಣವಾಗಿ ಬಂದಿರುವ ಈ ಸಂಪುಟ ಅವರಿಗೆ ಸಂತೋಷ-ಸಮಾಧಾನಗಳನ್ನು ತಂದುಕೊಡುತ್ತದೆಂದು ನಂಬಿದ್ದೇನೆ. ಅಂತೆಯೇ ಸಮಸ್ತ ಕನ್ನಡಿಗರಿಗೂ ಈ ಸಂಪುಟ ಪ್ರಿಯವಾಗುತ್ತದೆಂದು ನಂಬಿದ್ದೇನೆ.

ಈ ಸಂಪುಟದ ಮುದ್ರಣಕ್ಕೆ ಬಳಸಿಕೊಂಡಿರುವ ಆಕರಗಳನ್ನು ಒದಗಿಸಿಕೊಟ್ಟಿರುವ ಕನ್ನಡ ಸಾಹಿತ್ಯ ಪರಿಷತ್ತು, ಡಾ. ಹಾ. ಮಾ. ನಾಯಕ, ಶ್ರೀ ಕ. ವೆಂ. ರಾಜಗೋಪಾಲ್, ಶ್ರೀ ಶ್ರೀನಿವಾಸನ್ ಮತ್ತು ಶ್ರೀ ಹೊ. ಶ್ರೀನಿವಾಸಯ್ಯ ಅವರ ಕೃಪೆಗೆ ಸಂಸ್ಥೆ ಕೃತಜ್ಞವಾಗಿದೆ. ಕೈಲಾಸಂ ಅವರ ಆಕಾಶವಾಣಿಯ ಭಾಷಣ ಮೊದಲಾದ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಶ್ರೀ ಎನ್. ಎಸ್. ಶಾರದಾ ಪ್ರಸಾದ್ ಮತ್ತು ಈ ಸಂಪುಟದ ಕರಡು ಪರಿಶೀಲನೆಯಲ್ಲಿ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಈಗ ಅಧ್ಯಾಪಕರಾಗಿರುವ ಡಾ. ಎನ್. ಎಸ್. ತಾರಾನಾಥ್ ಅವರು ನೆರವಾಗಿದ್ದಾರೆ. ಅಂತೆಯೇ ಸಂಪುಟದ ಕರಡು ಪರಿಶೀಲನೆಯಲ್ಲಿ ನೆರವಾಗಿರುವ ಶ್ರೀ ಎಚ್. ಎಸ್. ಹರಿಶಂಕರ್, ಶ್ರೀ ಎನ್. ಎಸ್. ಶಾರದಾ ಪ್ರಸಾದ್, ಶ್ರೀ ಎಚ್. ಗಣೇಶ ಐತಾಳ್ ಮತ್ತು ಶ್ರೀ ಕೆ. ಜಿ. ಪ್ರಕಾಶ್ ಅವರಿಗೆ, ಮುದ್ರಣ ಕಾರ್ಯದಲ್ಲಿ ಸಹಕರಿಸಿರುವ ವಿಶ್ವವಿದ್ಯಾನಿಲಯ ಮುದ್ರಣಾಲಯದ ಕಾರ್ಯಭಾರಿ ನಿರ್ದೇಶಕರಾಗಿದ್ದ ಶ್ರೀ ಪಿ. ಎನ್. ಶ್ರೀನಿವಾಸಮೂರ್ತಿ ಹಾಗೂ ಈಗಿನ ನಿರ್ದೇಶಕರಾದ ಶ್ರೀ ಹನುಮಯ್ಯ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-6. ಎಚ್. ತಿಪ್ಪೇರುದ್ರಸ್ವಾಮಿ
31-3-1987 ಪ್ರಧಾನ ಸಂಪಾದಕ

ಪರಿವಿಡಿ

ಭಾಷಣಗಳು

Little Lays and Plays

ಅನುಬಂಧಗಳು

ಟೊಳ್ಳು ಗಟ್ಟಿ

ಅಥ್ವಾ

ಮಕ್ಕಳಿಸ್ಕೂಲ್ ಮನೇಲಲ್ವೇ ?

ಪಾತ್ರಗಳು

ಓರಿಯಣ್ಣಯ್ಯ :	ಕಸಬಾ ಹೋಬಳಿ ಹೆಡ್ ಮುನುಷಿ
ರಾಮಾಶಾಸ್ತ್ರಿ :	ರೀಡಿಂಗ್ ರೂಮ್ ರೈಟರು
ಪುಟ್ಟು :	ಓರಿಯಣ್ಣಯ್ಯನ ಹಿರೀಮಗ
ಮಾಧು :	" ಕಿರೀಮಗ
ಭಾಗೀರಥಮ್ಮ :	" ಪತ್ನಿ
ನಾಗಮ್ಮ :	" ತಂಗಿ (ವಿತಂತು)
ಪಾತು :	" ಹಿರೀಸೊಸೆ
ಸಾತು :	" ಕಿರೀಸೊಸೆ

ರೀಡಿಂಗ್ ರೂಮ್ ಮೆಂಬರುಗಳು. ನೆರೆಹೊರೆಯವರು. ಕೂಲಿ. ಕೂಸು.

ಪೂರ್ವರಂಗ

[ಗ್ರಂಥಕರ್ತನಾದ ಗುಂಡೂರಾಯನು ಹೂಮಾಲೆಯನ್ನು ಕೈಯಲ್ಲಿ ಹಿಡಿದು ರಂಗಸ್ಥಲದ ಮುಂಭಾಗದ ವಾಮಭಾಗದಲ್ಲಿ ಒಂದು ಕುರ್ಚಿಯ ಮೇಲಿಟ್ಟಿರುವ ಯುವರಾಜರ ಚಿತ್ರಪಟದೆದುರಿಗೆ ತಲೆಬಾಗಿ ನಿಂತು ಹಾಡುವನು.]

ರಾಗ : ಕಂಸಧ್ವನಿ ; ವೃತ್ತ : "ಗುಂಡೂ."

"ಶ್ರೀಮನ್ ಮಹೀಶೂರ ಮಹೀಪ ದಿವಂಗತ ಚಾಮರಾಜೇಂದ್ರಾತ್ಮಜ ರಾಜರಾಜೇಂದ್ರ ಶ್ರೀಕೃಷ್ಣರಾಜೇಂದ್ರ ಸಾರ್ವಭೌಮಾನುಜ ಶ್ರೀಮತ್ಸಕಲಗುಣಶೀಲ ಸೌಂದರ್ಯ ಸಂಪನ್ನ ಯುವ ರಾಜೇಂದ್ರ ಕಂಠೀರವ ನರಸರಾಜ ನಮೋಸ್ತು **ತೇ** ॥"

[ಹಾಡಿದಮೇಲೆ ಚಿತ್ರಪಟಕ್ಕೆ ಕೈಲಿರುವ ಮಾಲೆಯನ್ನು ಹಾಕಿ ನಮಸ್ಕರಿಸುವನು. ಅನಂತರ ರಂಗಸ್ಥಲದ ಉತ್ತರಭಾಗವನ್ನು ಸೇರಿ ತನ್ನ ಕಿಸೆಯಿಂದ ಪತ್ರಶಾಕಮಾಲೆಯೊಂದನ್ನೂ ಮುರುಕು ಕೈಗನ್ನಡಿಯನ್ನೂ ಹೊರಕ್ಕೆ ತೆಗೆದು, ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತಾ ಪ್ರೀತಿಹರ್ಷಗಳನ್ನು ಸೂಚಿಸುತ್ತಾ, ಪುನಃ ಹಾಡುವನು.]

ರಾಗ; ವೃತ್ತ: ಪೂರ್ವೋಕ್ತ.

"ಕಂಠೀರವ ನರಸರಾಜ ನಾಮಾಂಕಿತ ಪಾರಿತೋಷಕ ವಿಜಯಿ! ಗುಂಡೂ! ಗುಂಡೂ! ಗುಂಡೂ! ಕರ್ಣಾಟಕ ಪ್ರಹಸನ ಪ್ರಪಿತಾಮಹ! ಪಂಡಿತಮಂಡಲಾಗ್ರೇಸರ! ಚಂಡಪ್ರಚಂಡ ಗುಂಡೂ! ಗುಂಡೂರಾಯ ನಮೋಸ್ತು **ಮೇ** ॥"

[ಎಂದು ಹಾಡಿ ಪತ್ರಶಾಕಮಾಲೆಯನ್ನು ಕನ್ನಡಿಗಲಂಕರಿಸುವನು. ಕೂಡಲೇ ಸಭಿಕರ ಪರಿಹಾಸ ಧ್ವನಿಯು ಕೇಳಿಸುವುದು. ಆಗ ಗುಂಡೂರಾಯನು ಕೆಂಪೇರಿದ ಕಣ್ಣುಗಳಿಂದ]

ನಗ್ಬೇಕಾದ್ದೇನೂ ಇಲ್ಲ...ಈ ಕಾಲ್ದಲ್ಲಿ ಅವರವರ್ಯೋಗ್ತೆ ಅವರವರಿಗ್ಗೊತ್ತೇಹೊರ್ತು ಇತರ್ರಿಗೇನ್ಗೊತ್ತು? ಆ...English (ಇಂಗ್ಲಿಷಿ)ನಲ್ಲಿ Poet (ಪೊಯೆಟ್) ಅಂಬೋ ಕವಿ ಹೇಳ್ತಾನಲ್ಲಾ "To fall in love with one's own self is the only life-long passion possible" (ಟು ಫಾಲ್ ಇನ್ ಲವ್ ವಿತ್ ವನ್ಸ್ ಓನ್ ಸೆಲ್ಫ್ ಈಸ್ ದಿ ಓನ್ಲೀ ಲೈಫ್-ಲಾಂಗ್ ಪ್ಯಾಷನ್ ಪಾಸಿಬಲ್) ಎಂಬಂತೆ [ಮುರುಕು ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತಾ] ಕವಿಕೇಸರಿಗಳಲ್ಲಿ ನನಗಿರುವ ಮಮತೆ, ಮರ್ಯಾದೆ, ವಿಶ್ವಾಸ, ವ್ಯಾಮೋಹ, ಭಕ್ತಿ ಶ್ರದ್ಧಾದಿಗಳು ನನ್ನ ಯಾವಜ್ಜೀವವೂ ತೃಣಮಾತ್ರವೂ ಲೋಪಿಸದಿರುವುದರಲ್ಲಿ ಸಂದೇಹವೇ ಇಲ್ಲ. [ಮುರುಕು ಕನ್ನಡಿಯನ್ನೂ ಪತ್ರಶಾಕಮಾಲೆಯನ್ನೂ ಕಿಸೆಗೆ ಸೇರಿಸಿ] (ಆತ್ಮಗತಂ)

ಪಂಡಿತಮಹಾಶಯರಿಗೆ ಮರ್ಯಾದೆ ಮಾಡಿದ್ದಾಯ್ತು. ಸರ್ವಗುಣಸಂಪನ್ನರಾದ ಸಭಾಸಭಿಕ ಸರ್ವಜ್ಞ ಸರ್ವರೂ ಈ ನಾಟಕಾವಲೋಕನಾತುರರಾಗಿ ಸಂಗ್ರಹಿಸಿದಾರೆ...[ರಂಗಸ್ಥಳವನ್ನು ಸುತ್ತ ಮುತ್ತಲೂ ಚನ್ನಾಗಿ ನೋಡಿ] ರಂಗಸ್ಥಳ...ಜವಾಬ್ನೆ ಇಲ್ಲಾ...ಹೊರಕೋಂಗೇ ತಕ್ಲೀಫು!... [ಮೇಲ್ಭಾಗವನ್ನು ಗಮನಿಸಿ] ಪರದೆ ಬೀಳೋಹಾಗಿಲ್ಲ...ಈಗ...ಇನ್ನೇನು?... Conductor (ಕಂಡಕ್ಟ್ರು)! ಈ ಕಾಲ್ದಲ್ಲಿ ನಾಟ್ಕಬರದ ಕವಿಗ್ಳು ಕಂಡಕ್ಟರನ್ನಂಬೋದಕ್ಕಿಂತ ಕಾಡಿಗ್ಹೋಗೋದು ಮೇಲು...ಓಹೋ! [ಪ್ರವೇಶ...ಸುಬ್ಬಾಚಾರಿ] ಇದೋ ಬಂದ!...ಏನಯ್ಯಾ ಇದು? ಹುಡ್ಗಾಟಾಂತ ಅಂದ್ಕೊಂಡಿದ್ದೀಯಾ ನಾಟ್ಕಾಂಬೋದು?...ಅವತ್ತೇನೋ ನಾಟ್ಕ ಜರಿಗ್ಹೋದ್ರಲ್ಲಿ ಅದ್ವಿತೀಯ ಪಂಡಿತ

ಅಂತ [illegible]…ಈಗ…ಸಭಿಕ್ರೆಲ್ಲಾ ಕಾದಿರೋಸಮಯಕ್ಕೆ ಸರಿಯಾಗಿ ನಾಟ್ಕದ [illegible] ಮರೆತ್ಬಿಟ್ಟು ಧ್ರುವನ್ನಂಬ್ಕಾಗೆ ನಿಟ್ಕೊಂಡು ನಕ್ಷತ್ರಗಳನ್ನೆಣಿಸ್ತಿದ್ದೀರಾ? [ಸೂತ್ರಧಾರಿಯು ಸಮೀಪಕ್ಕೆ ಬರಲು] ಅಲ್ಲಾಂರಯ್ಯ! ಎಷ್ಟೋ ಸಹಸ್ರ ಜನ್ಮಗಳು ನಾಯಿ ನರಿ ಕತ್ತೆ ಕಿರುಬನಾಗಿ ಹುಟ್ಟಿ ಆಮೇಲೆ ಭಗವಂತನ ಅನುಗ್ರಹದಿಂದ ಮನುಷ್ಯಜನ್ಮ ಸಿಗೋದು ಅಪರೂಪ ಹೌದೋ!… ಆ ಮನುಷ್ಯರೂಪದ ಜನ್ಮಗಳಲ್ಲಿ ನಾಟ್ಕ ಬರೆಯೋ ಯೋಗ್ಯತೆ ಬರಬೇಕಾದ್ರೆ ಎಷ್ಟು [illegible]ಕೋ [illegible]…ನಾನೇ ಗೊತ್ತು. ಹಾಗೆ ಬರೆದ ನಾಟ್ಕಗಳು ಬರಿದೋ ಬರಹೋ. ಹಾಗೆ ಬರೆದ ಬರೆದರು ನಾಟ್ಕಗಳಲ್ಲಿ ರಂಗಸ್ಥಳದಲ್ಲಿ ಅಭಿನಯಿಸಿ ತೋರಿಸೋ ಯೋಗ್ಯತೆ ಇರೋದು ಬರಿ [illegible]…ಅಂತಾಗ್ಬಿಟ್ರೂ ಇಂಥಾ [illegible] [illegible] ಸಭಿಕರು [illegible]. ಇವನ್ನೆಲ್ಲಾ ಮರೆತು ಧ್ಯಾನ ಹಚ್ಚಿ ಕೊಡಹೆ[illegible] [illegible]—[illegible] ನಾಟಕಕ್ಕೆ ಇಲ್ಲ ತಪ್ಪ [illegible]!… ಏನು ಮಾಡಿಬಿಟ್ಟಿದ್ದೀ?…ಅಭಯ ಕೊಡಯ್ಯಾ!…ಆಕಾಶವಾಣಿ!…

ಸೂತ್ರಧಾರ : [illegible]…ಗುಂಡೂರಾಯ್ರು! [illegible]. ನಾಟ್ಕಕ್ಕೆ ಬೇಕಾದ Arrangements (ಅರೇಂಜ್‌ಮೆಂಟ್ಸ್)ಲ್ಲಾ Complete (ಕಂಪ್ಲೀಟ್) ಮಾಡ್ಬಿಟ್ಟಿದ್ದೀನಿ… [illegible] ಈ ಧಾನ ಬೆಳಕು [illegible]…[illegible]…ಈ ನಾಟ್ಕಕ್ಕೆ ಬೇಕಾದ [illegible]. ಇವನ್ನೆಲ್ಲಾ [illegible]. Rehearsals (ರಿಹರ್ಸಲ್ಸು) ನಡೆದ್ಹೋಯ್ತು. ನಾಟ್ಕವಿಷಯ ಇವನ್ನೆಲ್ಲಾ [illegible]…[illegible]…[illegible]…[illegible] ಬರುತ್ತಿದ್ದಾರೆ!…ಇದೇನ್ಸ್ವಾಮಿ ಸ್ವಾಮಿ. ಗುಂಡೂರಾಯ್ರು?

ಗುಂಡೂ : [illegible] ಸ್ವಾಮಿ!…ಗುಂಡೂರಾಯ್ರು!… [illegible]? [illegible]?…ಈಗ್ಲಾದ್ರೆ [illegible]!…[illegible]!… [illegible]… [illegible] ಒಂದೇ ದಿನ! ಒಂದೇ ನಕ್ಷತ್ರ!… ಒಂದೇ [illegible]!…[illegible]!…ಕೃಷ್ಣ…[illegible]…[illegible] [illegible] ಒಂದೇ ದಿನ!…ಒಂದೇ [illegible]!…ಒಂದೇ [illegible]…[illegible]…[illegible]… …[illegible]!…[illegible]… [illegible]—[illegible]…[illegible]… ಆ 'Noble sentiment of friendship' (ನೋಬಲ್ ಸೆಂಟಿಮೆಂಟ್ ಆಫ್ ಫ್ರೆಂಡ್‌ಷಿಪ್) [illegible] Whole (ಹೋಲ್) [illegible] Prove (ಪ್ರೂವ್) ಮಾಡ್ಬಿಟ್ಟ ಜ್ಞಾಪಕ! [illegible]…[illegible]…[illegible]…[illegible] …ಆ [illegible] [illegible] … [illegible] … [illegible] … [illegible] … [illegible] … [illegible] … ಆ ಕೈಲಾಸ … ಆ ಕೈಲಾಸ … [illegible] … [illegible] … [illegible] ಸ್ವಾಮಿ!…[illegible]…[illegible]…[illegible]…ಮಿತ್ರ…ಹಾಗೆ [illegible]…[illegible]…ಒಂದೇ [illegible]! ಸ್ವಾಮಿ!… Bond of Loveoo! (ಬಾಂಡ್ ಆಫ್ ಲವ್ವು!)…[illegible]…[illegible]… [illegible]. [illegible] Whole school (ಹೋಲ್‌ಸ್ಕೂಲು) [illegible] ಸ್ವಾಮಿ! Sun Shiningoo (ಸನ್ ಷೈನಿಂಗು!) Sublime sightoo! (ಸಬ್ಲೈಂ ಸೈಟು!) [illegible] ಕೈ [illegible]…ಕೃಷ್ಣ[illegible]…[illegible] ಮೊದಲ್ಕೆ ಬಿಟ್ಟಿಲ್ಲವಲ್ಲ!! ಇಂಥಾ [illegible]

ಸ್ನೇಹಾನ ಕರಗಿಸಿ ಬಿಟ್ಟಿಲ್ಲಾ ಸುಬ್ಬೂ! ಕಾಲ್‌ನಿಮಿಷದಲ್ಲಿ!...ಗುಂಡೂ...ರಾಯ್ರು! ಮಹಾಸ್ವಾಮಿ!! ಏನೇನೋ ಮಹಾನಾಟ್ಕಾನ ಬರೆದ್ಬಿಟ್ಟೆನಂತೆ...ನಾನು! ಯಶಸ್ಸು! ಅಂತಸ್ತು!...ಪ್ರೋಣಿಸ್ಕೊಂಡು ಬಂದ್ಬಿಟ್ಟಂತೆ...ನನಗೆ!...ಕಾಳಿದಾಸ...ಕೈಲಾಸ...ಕರಿಬಸಪ್ಪ...ಕೃಷ್ಣಮಾಚಾರ್ಲು ಪಂಗಡಕ್ಕೆ ಸೇರಿ ಬಿಟ್ಟೆನಂತೆ...ನಾನು! ನನ್ನ ಪ್ರಾಣಸ್ನೇಹಿತ! ಗುಂಡೂ...ರಾಯರೇ! ಮಹಾಸ್ವಾಮಿ! ಅಂತಾನೆ! ಹುಚ್ಚೋ! ಸುಬ್ಬೂ! ಇದೆಲ್ಲಾ ನಶ್ವರ...ಸುಬ್ಬೂ! ನಶ್ವರ! ಸ್ನೇಹಕ್ಕಿಂತ ದೊಡ್ಡವಸ್ತು ಯಾವ್ದೂ ಇಲ್ಲ...ಪ್ರಪಂಚದಲ್ಲಿ. ಸುಬ್ಬೂ! ಇವನ್ನೆಲ್ಲಾ ಬಿಟ್ಬಿಟ್ಟು...ಮುಂಚೆ ಕೂಗ್ತಿದ್ಯಲ್ಲಾ...ಮುನ್ನಾಗಿ ಗುಂಡೂ...ಗುಂಡೂ...ಗುಂಡೂ ಅಂತ...ಹಾಕ್ಕೂಗ್ಸುಬ್ಬೂ! [ಕೊಂಚ ನಿದಾನಿಸಿ]

ಸುಬ್ಬೂ! ಇದೇನು ಹೊಸ್ನಾಟ್ಕ? ಹೊಸ್ನಮೂನೆಯಾಗಿದೆಯಲ್ಲಾ? ಇದರ ಗುಟ್ಟೇನು? ಅಂತ್ಕೇಳ್ದೆ ನೋಡು...ಅಪ್ಪ...ಮೊದ್ಲೇ ನಿನಗ್ಹೇಳ್ಬಿಟ್ಟಿದ್ರೆ...ಇಷ್ಟು ತಕ್ಲೀಫ್ ತಕೊಂಡು ನಾಟ್ಕ ನೋಡ್ತಾಯಿರೋ ಇರ್ತಿದ್ಲೋ...ಅಂತ...ನಂಗೆ...ಶಂಕೆ...ಗುಮಾನಿ! ಈಗ ನಡ್ಯುತ್ತೆ ಅಂತ...ಅಭಯಕೊಟ್ಟಿಟ್ಟೆ ನೋಡು... ಈಗೀ ನಾಟ್ಕದ ವಿಷಯ...ತಟ್ಲೀಲಾಗಿ ವಿವರಿಸ್ತೇನು...ಲಾಲ್ಸು...ಸುಬ್ಬೂ! ಲಾಲ್ಸು.

ಸುಬ್ಬೂ...ಪ್ರಥಮ್ತಃ...ಇನ್ನಾಟ್ಕವೇ ಅಲ್ಲ! ಇದು ಲೆಕ್ಚರ್! ನಿನಿಜ್ಞಾಪ್ಕವಿದೆಯೆ ಸುಬ್ಬೂ! School Day (ಸ್ಕೂಲ್ಡೇ)ಸ್‌ನಲ್ಲಿ...ನಮ್ಮೇಷ್ಟ್ರುಗ್ಳು ಕೊಟ್ಟ ಲೆಕ್ಚರ್‌ಗಳು...ಕೇಳೋದು ಅಂದ್ರೆ ಎಷ್ಟೋ ಅನಿಷ್ಟ...ಜಲಹುತಭುಕನ್ಯಾಯ! [ಹರಿದು ಹೋಗಿರುವ ತನ್ನ ಕಸೆಯಲ್ಲಿ ಕೈಯನ್ನಿಟ್ಟು ಅದರ ತೂತಿನಲ್ಲಿ ತನ್ನ ಬೆರಳನ್ನು ಇಳೀಬಿಟ್ಟು ಕೈಯಾಡಿಸುತ್ತಾ]...ಅದಕ್ಕೇ ಈ ಸ್ಥಿತೀಗೆ ಬಂದಿರೋದು... ಅಂತಿಟ್ಕೋ...ಏನ್ Holeso (ಹೋಲ್ಸೋ) ಈ ಹೊಲಿಸು ಕೋಟು...ಹೊಲಿಸ್ಬೇಕು...ಸುಬ್ಬೂ! ನಿನ್ನ ಷರ್ಟ್ನಲ್ಲಿ ತೂತುಗ್ಳೇನಾದ್ರೂ ಇವೆಯೋ?

ಸುಬ್ಬೂ : ಇಲ್ವಲ್ಲಾ!

ಗುಂಡೂ : ನೆಗಮುಬಿದ್ದೆ...ಹಾಗಾದ್ರೆ! ನಿನ್ನ ಕೈಗಳು ತಲೆ, ಹ್ಯಾಗೆ ಇಳೀಬಿಟ್ಟೆ!...ಸುಬ್ಬೂ! ಚಿಕ್ಕಯಸ್ಸಿನಲ್ಲಿ ನಂಗೆ ಲೆಕ್ಚರ್‌ಗ್ಳು **ಕೇಳೋಕೆ** ಅಷ್ಟು ಅನಿಷ್ಟವಾಗಿದ್ರೂನೂವೆ,...ಈಗಿಂದೀಚೆ ಲೆಕ್ಚರ್ **ಕೊಡ್ಬೇಕು** ಅಂತ ಒಂದು ಚಪ್ಲಹುಟ್ಬಿಡ್ತು. ಏನ್ಮಾಡೋದು ಸುಬ್ಬೂ! ಈ ಕಾಲ್ದಲ್ಲಿ ಲೆಕ್ಚರ್ ಕೊಡ್ತೇನೆ ಅಂದ್ರೆ ಕೇಳೋಕೆ ಜನಗ್ಳು ಸಿಗೋದು...ದುರ್ಲಭ. ದುಟ್ಟಿದ್ದು ಯಳ್ಕೊಂಡ್ಬಂದು...ಕುರ್ಜೀಕ್ಕಟ್ಟಿ... ಕೂಡ್ಸಿದ್ರೇನೆ...ಕೇಳೋಕ್ಕಗೋದು ನಾಲಕ್ಮಂದಿ...ಹಾಗೂನೂ ಪಹಿಲ್ವಾನ್ರು ಪಟಿಂಗರಿಗೆ...ಪೈಸಾ ಕೊಟ್ಟು...ಕೆಲ್ಸಾ ಜರಿಗಿಸ್ಕೊಳೋಣಾಂತನೋಡ್ದೆ...ಅದೂನೂ ಸಾಧ್ಯವಾಗ್ಲಿಲ್ಲ. ಯಾಕೇಂತಂತೀಯೋ ...ವಿವರಿಸ್ತೇನೆ ಲಾಲ್ಸು...ಸುಬ್ಬೂ...ಈ ಕಾಲ್ದಲ್ಲಿ ಸುಬ್ಬೂ...ಸರ್ವರೂವೇ...ಈ Fashion (ಫ್ಯಾಷನ್) ಅಂತಂತಾರಲ್ಲ, ಆ ಇಲಾಖೆಗ ಸೇರ್ಬಿಟ್ಟು ಈ Crop (ಕ್ರಾಪ್) ...ಅಂತಂತಾರಲ್ಲ. ಅದಾಡ್ಸಿ ಕೊಂಡ್ಬಿಟ್ಟಿದ್ದಾರೆ...ಅದ್ರಿಂದ...ಹೀಗ್ಜುಟ್ಟಿಡ್ದು...ಜನಗಳನ್ನ... ಜವಾಯ್ಸೋಕೂ ಆಗಲಿಲ್ಲ. ಮತ್ತಿನ್ನೊಂದು ಒಕ್ಕತ್ತು Try (ಟ್ರೈ) ಮಾಡ್ದೆ...ಹಾಲ್ ತಕೊಂಡೆ... ಜಾಹೀರ್ಕೊಟ್ಟೆ...ದೀಪಗಳ್ಹಂಟಿಸ್ದೆ...ಕುರ್ಜಿಗಳ್ಮೇಲೆಲ್ಲಾ ಪುಟ್ಟುಟ್ಟ ದಿಂಬುಗಳ್ನ ಹಾಕ್ದೆ...ಹಾಲ್ನಕೊಂಡೆ ...ಒಂದ್ಸಂಪ ಕಾಫಿ ಕಾಯ್ಸಿಟ್ಟು...ಥೊಡ್ಡೊಂದು ತಟ್ಟೇಲಿ...ಮಲಿಹೀಪ ಅಡಿಕೆ,...ವೀಸೂರೆಲೆ.... ಚೆನ್ನಾಟ್ಣದ ಸುಣ್ಣ...ತಯಾರಾಗಿಟ್ಕೊಂಡೆ...ದಾನೀ ತುಂಬಾ ಪನ್ನೀರು... Otto Dilbahar (ಅಟ್ಟೋ ದಿಲ್ಬಹಾರು) ತುಂಬ್ಕೊಂಡು...ಈ ಜನೋಪ್ಕಾರೀ ಗೇಟಿದೆಯಲ್ಲಾ ಇದ್ರಹೊರ್ಗೆ ನಿಂತ್ಕೊಂಡು ...ಗೇಟ್ನಾಲ್ಲಿ ಹೋಗೋರ್ಗೆಲ್ಲಾ...ಆ ಪನ್ನೀರು ಎರ್ಡು ಚಿಮುಕು ಚಿಮುಕ್ಸಿ...ಎಲೆಅಡ್ಕೆ ಸುಣ್ಣ ಸವರಿ ಕೊಟ್ಟು...ಕೈಮುಗ್ಕೊಂಡು...ಕಣ್ಣೀರ್ಸುರಿಸ್ತಾ...ಅಪ್ಪಾ! ಒಂದೈಕ್ಚರ್‌ಕೊಡ್ತೇನು...ನಮ್ಮನ್ನೂ ತಪ್ಪ ಇಲ್ಲಾ...ಅರ್ಧಗಂಟೆಮೇಲ್ಕೆಲೋದಿಲ್ಲ...ಕುರ್ಜಿಗಳ್ಗೆಲ್ಲಾ ದಿಂಬುಗ್ಳು ಹಾಕಿದ್ದೇನೂ...ಕಾಫೀ ತಯಾರಿದೆ...ಸಿಮ್ಮನಿಗಳೆಲ್ಲಾ ಏಷ್ಟು ಬಿದ್ದೋಕಾಣೆ...ಮೋಡಾಮುಚ್ಕೊಂಡು ಮಳೇ ಬರೋ ಹಾಗಿದೆ ...ಹಾಲ್ಸೇರೋದಿಲ್ಲ...ದಯವಿಟ್ಟು ನನ್ನೆಕ್ಚರ್ ಕೇಳ್ಕೊಂಡು, ನನ್ನನ್ನ ಸಾರ್ಥಕವಾಡ್ರಪ್ಪಾ ಪುಣ್ಯಾತ್ಮರಾ! ಅಂತ ಕಾಲ್ಮೇಲ್ಬಿದ್ದು ಕೇಳ್ಕೊಂಡ್ರೂನೂವೇ,...ಆ ಪನ್ನೀರ್ನ ಚನ್ನಾಗಿ ಚಿಮುಕಿಸ್ಕೊಂಡು,

...ಸುಬ್ಬು! ೮ ವರ್ಷದ್ದೀನ ಬಾಗ್ಲಿ ತನ್ಕ. ನನ್ಮಟ್ಟಿಗೇನೆ ಗಾಗ್ಲ. ಹೇಗೋಹಾಗೇ ಹೊತ್ತೀನಿ. ಈ ಲೆಕ್ಕ್ರ, ಪಾತು ಕಮಿಗೆ ಹಾಕ್ಕೊಳ್ಳೋ ಕ್ರಮಗಳ್ ಇಲ್ಲಾ...ನಾನೇನ್ಮಾಡೋದು ಸುಬ್ಬು?...ಈ ಲೆಕ್ಕ್ರ ಕೊಡ್ಬೇಕೂ ಅಂತೋ ಈ ನನ್ಮಹಾನ ತೀರಿಸ್ಕೊಂಡ್ ಬಾಡ್ಡ ಪಡೇತೀನಿ ಅಂತ ನಾನು!...ಕೋಣೆಯಲ್ಲಿಗೆ ಹೋದ್ರೂ ಕೇಳ್ಕೊತೊಪ್ಪ ಇವನ ಲೆಕ್ಕದ ಅಂತ ಜಾಗ್ಗ!...ಹಾಗೆ ಹೊಂಡ್ಕೊಂಡು ಸುಬ್ಬು!...ಕೊರಗದೆ!...ಅದೇನು!!! ಈ ಘಟ್ ಅಂತ Perspi (ಪರ್ಸ್ಪಿ)... ಅಲ್ಲ...Inspiration (ಇನ್ಸ್ಪಿರೇಷನ್) ಅಂತಂತಾರಲ್ಲ ಹಾಗೆ ತೋಚಿತು...ಸುಬ್ಬು! ಹೊಡ್ದೆ! ಅದುನ್ನೆಲ್ಲಾ ಅಕ್ಕಪಟ್ಟೇಲಿ ಕುಕ್ಕರ್ಸಿಕೊಂಡು....ಅಗಾಗ್ಗ...ಅರಕೇಪಟೇಲಿ ಹೊಡೆದೆ...ಈ ಗ್ರಾಮಾ ಫೋನ್...ತಕ್ಕೊಂಡ್ಬಾ...ಇವ್ರಗ್ಳ (ಸುಬ್ಬಾಚಾರಿಯು ಬೇಗನಾಗಿ ಹೋಗುವನು)...ಗ್ರಾಮಾ ಫೋನ್ನೊಳ್ಗಿರ್ದೋ ಸುಬ್ಬು?...ಹಾಡ್ತೋ!...ಕರೀ ಪೆಟ್ಟಿಗೆ...ಘೊಡ್ಡೊಂದ್ರು ಬಿರಿಡಾ ತಕ್ಕೊಳ್ಳೀನಿ. ...ಪ್ಲೇಟಲ್ಲಾ ಕೋಣು...ಫಾಯಿಯಾರ್ದ ಹೊಟ್ಟೇರೋದನ್ನೆಲ್ಲಾ...ಹೊಟ್ಕೊಳ್ಳದ್ದೊನು. ಮುಚ್ಚಿ ...ಕಚ್ಚಿರದು ಒಂದು ಚಕ್ರ ತಿರ್ಸ್ಕೊಂದು...ರೇಟಿನೊಂದು ಕರೀ ಹೊಡೆ Record (ರೆಕಾರ್ಡ್). ಹೂಂ!...ಹಾಕೋದು. ...ಸೂಜೀ ಚುಚ್ಚಿ...ಚೆಕೊಂತ ಬಾಯ್ಬಿಡ್ತಾಯಿದೆಯೋ...ಕೊಂಯೊಂದು ... ತಗುಲ್ಸಿ ತಿರುಗಿಸ್ರಿ...ಸುಬ್ಬು! ಹೊಗುಳಿದ್ದಲ್ಲಾ ತಿರೀ ಹೊಗುಳುತ್ತೆ!! ..ತನ್ಸೀರ್ ಪೆಟ್ಗೆ ಗೊತ್ತಿಲ್ದೇ ಸುಬ್ಬು! Camera (ಕೆಮರಾ) ಅಂತ ಹೆಸ್ರು ಅದಕ್ಕೆ. ಅದೊಂದು ಜಂತು ಸುಬ್ಬು! ಪ್ರಾಣಿ! ಪಂಚಪಾದ ಅದಕ್ಕ...ಬಿದೆ ನಿಂತ್ಕೊಂಡು ಬುರ್ಬೀಹಾಕ್ಕೊಂಡು ಬಾರಿಸ್ತಾನಲ್ಲಾ. ಅದನ್ನೆಲ್ಲಾ ಕಾಲು ...ಪೆಟ್ಟೀದ್ದೂರು...ಐದು! ಏಕಾಕ್ಷಿ...ಕಣ್ಣೊಂದೇ...ಇದರೆದುರಿಗೆ ಜನಗಳು ನಿಂತ್ಕೊಂಡು...ಸ್ವರೂಪ ನಾಶ್ನ ಮಾಡ್ಕೊಳ್ಳೋದು!...ಇವೆರಡ್ನೂ ತಯಾರಾಗಿಟ್ಕೊಂಡು ಸುಬ್ಬು! ಸುತ್ತಮುತ್ತ ನಾನಾ ಜನಗ್ಳು...ಅವ್ರ ಭಾಷೆ ಸಂಭಾಷ್ಣೆಗಳೂ....ಅವರ ಕಷ್ಟ ಸುಖಗ್ಳು....ಇವ್ಗಳ್ನೆಲ್ಲಾ ಹಿಡ್ದು ಗ್ಬಿಡ್ಕೊಂಡು...ಯುಳ್ಕೊಂಡ್ಬಂದು...ರಂಗಸ್ಥಳಕ್ಕೆ...ಬಹಿರಂಗಪ್ಡಿಸಿ! ಸುಬ್ಬು!...ನಾನು ಲೆಕ್ಕದ್ದಿ ಏನೇನು ಬಗುಳ್ಬೇಕೂ ಅಂತಿದ್ನೋ ಅದನ್ನೆಲ್ಲಾ ಇವರಿಂದಯಿಂದ ಬಗುಳಿಸಿಬಿಟ್ಟಿದೇನೆ...ಜನಗಳು! ಇದೇನೋ ನಾಟ್ಕಾಂತ ಅಂದ್ಕೊಂಡು!...ಕಾಸ್ಕೊಟ್ಟು ಟಿಕೀಟುಗಳ್ಕೊಂಡು!...ಒಳಗ್ಬಂದ್ಕೂತ್ಕೊಂಡ್ರೆ ...ಇದು ಲೆಕ್ಕಾಂಬೋಗುಟ್ಟು ತಿಳ್ದಿದ್ರೂ ಕೂಡಾ...ಕೊಟ್ಕಾಸ್ಗೆ ನಾದ್ರೂವೇ...ಕೇಳ್ಕೇಳ್ಕೊಂತ ...ಕೊನೇವರ್ಗೂ ಕುಕ್ಕರ್ಸೇಕುಕ್ಕರ್ಸ್ತಾರೆ!! ನಾನೂ! ನನ್ನ ಲೆಕ್ಕದ್ರ, ಅವರ ಕಮಿಗೆ ಹಚ್ಚಿಹತ್ತಿ ಬಿಡ್ತೇನೆ!! ಅರ್ಥವೇ? [ಒಳಗೆ ಘಂಟೆಯು ಶಬ್ದವಾಗುವುದು.] ಅಗೋ...ಘಂಟೆ! ಸುಬ್ಬು! ನಿನ್ಗೆಲ್ಲಾ ನೀನ್ನೋಡ್ಕೋಗಪ್ಪಾ! [ಸುಬ್ಬಾಚಾರಿಯು ಹೊರಟುಹೋಗುತ್ತಿರಲು ಗುಂಡೂರಾಯನು ಅವನನ್ನು ಕರೆದು] ಸುಬ್ಬು! ಈ ನಾಟ್ಕಾಮಟ್ಗೆ...ನನ್ಗೆ...ಜರಿಗ್ಗ ಕೊಟ್ಟಿಟ್ರಿ. ಕೃತಜ್ಞತೇ ಇದೇ ನೋಡು....ಕೃತಜ್ಞತೆ! ಅದ್ನ...ಗಸಿ...ಗಸಿ...ಗಸೀ ಇಲ್ಲಿ ಬಿಚ್ಚಿಹಿಡಿದ್ದೇನೂ ನಿನ್ನ ಪಾದಗಳಿಗೆ... ಇನ್ನೇನು?...ವಿಜಯೀಭವ ಹೋಗು! ವಿಜಯೀಭವ!!

[ಇಬ್ಬರೂ ಒಳಕ್ಕೆ ಹೊರಟು ಹೋಗುವರು.]

ಸೀನ್ ೧

ಸ್ಥಳ—ಕಸ್ಬಾ ಹೋಟ್ಲೀ Reading Room (ರೀಡಿಂಗ್ ರೂಮು).

[೩–೫ ಮೆಂಬರುಗಳು ಪತ್ರಗಳನ್ನೋದುತ್ತಿರುವರು...ಗುಮಾಸ್ತೆ ರಾಮಾರಾಯ್ರು Subscription (ಸಬ್ಸ್ಕ್ರಿಪ್ಷನ್) ಬುಕ್ಕನ್ನು ಓದುತ್ತಿರುವನು. ಪ್ರವೇಶ...ಒಬ್ಬರ್ಯ್ಯಾಕ್ರು...ಒಂದು ಕಾಗದ ಕೊಂಡು, ತನಗೆ ಬೇಕಾದ ಪೇಪರು ಮೇಜಿನಮೇಲಿಲ್ಲದ್ದರಿಂದ...]

ಹಿರಿಯಣ್ಣಯ್ಯ :...ಶಾಸ್ತ್ರೀ!...

ರಾಮಾಶಾಸ್ತ್ರಿ : ಸ್ವಾಮಿಾ!

ಹಿರಿ : ಆ...Mail (ಮೆಯಿಲ್) ಪೇಪರು?...

ರಾಮಾ : ದೊಡ್ಡಸಾಹೇಬ್ರು...ನಿನ್ನೆ ಸಾಯಂಕಾಲ...

ಹಿರಿ : (ಆತ್ಮ) ಓಹೋ...ನೆಗೆದುಬಿದ್ಹೋಯ್ತು...(ಪ್ರಕಾಶ) ನಿನ್ನೇ...ಕರ್ಣಾಟ್ಕ?...

ರಾಮಾ : ...ಚಿಕ್ಕಸಾಹೇಬ್ರು...ಯಿಾಗ್ಕಳಿಸಿಬಿಡ್ತಾರೆ...

ಹಿರಿ : ಸರ್ಹೋಯ್ತು!...ಯಾವ್ದಕ್ಕೂ ಸಾಹೇಬ್ರೇ!...ಆಫೀಸ್ನಲ್ಲೋ ಇದ್ದೇಇದೆ ಪಣಬರ್ಹ... ಇಲ್ಬಂದ್ರೋ ಹೀಗೆ!...ಇಲ್ಲಿ...ನಮ್ಹುಟ್ಟು ಪ್ರ್ಯಾಕ್ಟೀಸ್ಮಾಡಿ ಮುಂದಕ್ಬಂದ್ರೆ ಆಗ ನನ್ಹೊಟ್ಟೆ ಉರಿ ತಣ್ಣಗಾದೀತು!...ದೇವರು...ನನ್ಗೆಷ್ಟುಕಷ್ಟಪಡಿಸಿದ್ರೂನೂ ಒಬ್ಬೊಳ್ಳೇ ಮಗನ್ನಾದ್ರೂ ಕೊಟ್ಟಿದ್ದಾನಲ್ಲ!...

ರಾಮಾ : ಒಬ್ಬೊಳ್ಳೇಮಗನ್ನೆ? ಅದ್ಯಾಕೆ, ನಿಮ್ಕಿರೀಮಗನ್ಗೇನ್ಕಮ್ಮಿ?

ಹಿರಿ : ಏನ್ಕಮ್ಮಿ?...Brains (ಬ್ರೈಯಿನ್ಸ್) ಕಮ್ಮಿ! ಇನ್ನೇನೂ ಇಲ್ಲಾ !!...Brainsoo (ಬ್ರೈಯಿನ್ಸೂ) ಕಮ್ಮಿ...ಹುಟ್ಟಿದ್ದಕ್ಸಾರ್ಥಕವೂ ಕಮ್ಮಿ!!...ಅಷ್ಟೇ!!...

ರಾಮಾ : ಅದ್ಯಾಕ್ಹಾಗೆ ಸ್ವಾಮಿ ಹೀಗ್ಹೇಳ್ತೀರಿ!...ನಿಮ್ಮಾಧೂ ಎಷ್ಟು ಗುಣಾಢ್ಯ!...ಎಷ್ಟು ಧೈರ್ಯಶಾಲಿ!...ಹೋದ್ತಿಂಗ್ಳು ಗುಡೀಭಾವೀಲಿ ಮಗು ಬಿದ್ದಾಗ ಧಾಂಡಿಗರಾದ ಎಂಟ್ಹತ್ತುಜನ ಹಲ್ಲಲ್ಲು ಕಿರ್ಕೊಂಡು...ಬೆಪ್ ಬೆಪ್ಪಾಗಿ ಸುತ್ತ್ಮುತ್ತ ನಿಂತ್ಕೊಂಡಿರ್ವಾಗ ಮಾಧೂ ಹಗ್ಗಾ ಹಿಡ್ಕೊಂಡು ಭಾವೀಗಿಳ್ದು ಆ ಮಗೂನ್ಮೇಗಿಲಿಲ್ವೇ?...ಆಮೇಲಲ್ವೆ ದೊಡ್ಡಸಾಹೇಬ್ರು... ಪ್ರಸೆಂಟ್ಮಾಡಿದಾಗ ಸ್ಪೀಚ್ನಲ್ಲಿ ಹೇಳಿದ್ದು ತಮ್ಗೆ ನೆನಪಿಲ್ವೇ? "ಇಂಥಾ ಧೈರ್ಯಶಾಲಿಯಾದ ಪುತ್ರರತ್ನಕ್ಕಿಂತಲೂ ಒಬ್ಬ ತಂದೆಗೆ ಶ್ರೇಷ್ಠತರವಾದ ಆಭರಣವೇ ಇಲ್ಲ" ಅಂದ್ರಲ್ಲಾ!...ಹೀಗಿರುವಾಗ ಅವನ್ಮರ್ತೇ ಬಿಟ್ರಲ್ಲಾ!...

[ರಾಮಾಶಾಸ್ತ್ರಿಯು ಹೀಗೆ ಮಾತನಾಡುತ್ತಿರಲು ಹಿರಿಯಣ್ಣಯ್ಯನು ಉದಾಸೀನತಿರಸ್ಕಾರ ಪೂರ್ವಕವಾದ ಮುಖಭಾವದಿಂದ ನಿಧಾನವಾಗಿ ತನ್ನ ಜೇಬಿನಲ್ಲಿರುವ ನಶ್ಯದಪಟ್ಟಿಯನ್ನು ಹೊರಕ್ಕೆ ತೆಗೆಯುತ್ತಾ...]

ಹಿರಿ : ಶಾಸ್ತ್ರಿ!...ನೀನು...ಆ Romantic (ರೋಮ್ಯಾಂಟಿಕ್) ಅಂತಂತಾರಲ್ಲ ಹಾಗೆ; ನಿನ್ನ ಸ್ವಭಾವದಲ್ಲಿ ಆ...ಅ...ಅ... Practical outlook of life (ಪ್ರಾಕ್ಟಿಕಲ್ ಔಟ್ಲುಕ್ ಆಫ್ ಲೈಫ್) ಅಂತಂತಾರಲ್ಲ...ಅದು ಸುತರಾಂ ಇಲ್ಲ. [ಪಟ್ಟಿಯನ್ನು ತಟ್ಟಿ ಅನಂತರ ಅದರಿಂದ ಒಂದು ಚಿಟಿಕೆ ನಶ್ಯವನ್ನು ತೆಗೆದು ಅದನ್ನು ಮೂಗಿಗೇರಿಸಿ ಮೂಗನ್ನು ಒರಸುತ್ತಾ] ಅಲ್ಲ್ಯಾಣಯ್ಯಾ? ...ಸಾಹೇಬ್ರೇನೋ ಮೀಟಿಂಗ್ನಲ್ಲಿ ಸ್ಪೀಚ್ಗೀಚ್ ಮಾಡೋವಾಗ ಭೂಷ್ಣ ಗೀಷ್ಣ, ಆಭರ್ಣ ಗೀಭರ್ಣ ಅಂತಂದ್ರು ಸರಿಯೇ...ಈಗ ನನ್ಮಗ ನನ್ಗೊಂದಾಭರ್ಣ ಅಂತ ಗಡ್ಯಾರದ್ಸರಪ್ಣೀಗೆ ತಗಿಲ್ಕೊಂಡು ತಿರಗಾಡ್ಲೇನು?...ಯಾವವಿಧದಲ್ಲೂ ಅವನಿಂದ ಪ್ರಯೋಜನವೂ ಸಹಾಯ್ವೂ ಇಲ್ದಿರೋವಾಗ್ಗೆ ಅವನಿದ್ರೇನು...ಇಲ್ದಿದ್ರೇನು?

ರಾಮಾ : ಹಾಗ್ಹೇಳ್ಬಹುದೇ ಸ್ವಾಮಿ! ಈಗೊಂದ್ವಾರದಿಂದ ತಂಪತ್ತಿ ಜಾಸ್ತಿಯಾಗಿರೋದ್ರಿಂದ ನಿಮ್ಮಾಧೂ ಫುಟ್ಬಾಲು ಕ್ರಿಕೆಟ್ಟು ಇವನ್ನೆಲ್ಲಾ ಬಿಟ್ಬಿಟ್ಟು ರಾತ್ರೀ ಹಗ್ಲೂ ಡಾಕ್ಟರ್ಮನೆಗೂ ತಮ್ಮನೆಗೂ ಓಡಾಡ್ತಿಲ್ವೇ? ಇದಕ್ಕಿಂತ್ಲೂ ಸಹಾಯ್ವೂ ಉಪಯೋಗ್ವೂ ಏನ್ಬೇಕು?

ಹಿರಿ : ಹೌದು...ಮನೇಲ್ಬಿಟ್ಟೇ ಅನ್ನ ಸಿಕ್ಕೋವಾಗ ಅಷ್ಟಾದ್ರೂ ಮಾಡ್ಬೇಕೋ ಇಲ್ವೋ?

ವೆಂಕಟರಾಯ : (ಓದುತ್ತ ಓದುತ್ತ) ಓಹೋ! ಇದ್ಕೇಳೀ ಸಾರ್!...The following are the numbers of the successful candidates in the matriculation examination held...

ಹಿರಿ : (ಪ್ರಯಾಸಿಯಾದಾತುರದಿಂದ) Results (ರಿಸಲ್ಟ್ಸ್) ಬಂತೇ?...164 ನಂಬರು...

ವೆಂಕ : ಫಸ್ಟ್‌ಕ್ಲಾಸ್!

ಹಿರಿ : ಭೇಷ್!! (ತೃಪ್ತ್ಯುತ್ಸೇಕಗಳಿಂದ) ನನ್ಗೆ ಮೊದ್ಲೇ ಗೊತ್ತು!...43 ನಂಬರು (ಆತ್ಮಗತಂ) ರಿಸಲ್ಟ್ಸೇನು ಗೊತ್ತೇ ಇದೆ...

ವೆಂಕ : ನಂಬ್ರೇ ಇಲ್ವಲ್ಲಾ!

ಹಿರಿ : ಸರಿಬಿಡು (ಶಾಸ್ತ್ರಿಯಕಡೆ ತಿರುಗಿ) ಆ ಶುಂಠನ ಹಣೇಬರ ಗೊತ್ತೇ ಇತ್ತು. (ಆತ್ಮಗತಂ) ...ಈಗ ನಮ್ಮುಟ್ಟು ಬೊಂಬಾಯ್ಗೇನೋ ಹೋಗ್ಬೇಕಂತಿದ್ದ...ಅದ್ರೆ...ಯಾತಕ್ಕೆ?...ಪಾಪ್ಯಾಯಿಲ್ಲ! ಆ ಘಟಿಂಗ್ಮಾಧೂಗೆ ಬಂದ್ವರದಕ್ಷಿಣೆ ದುಡ್ನ ಉಪಯೋಗಿಸ್ಕೋಭೌದು...(ಚತುರದಿಂದ ಕುರ್ಚಿಯಿಂದ ಎದ್ದು) ನಾನ್ಬರ್ತೇನೇ ಸಾರ್!

ಎಲ್ಲರೂ : Good Night ಸಾರ್! (ಗುಡ್ ನೈಟ್).

[ಪರದೆಯು ಬೀಳುವುದು.]

ಸೀನ್ ೨

[ಹಿರಿಯಣ್ಣಯ್ಯನ ಮನೆ; ಮುಂಭಾಗದ ಒಂದು ಕೋಣೆಯಲ್ಲಿ ಹಿರಿಯಣ್ಣಯ್ಯನ ಹೆಂಡತಿಯಾದ ಭಾಗೀರಥಮ್ಮನು ಖಾಯಿಲೆಯಿಂದ ನರಳುತ್ತಾ ಹಾಸಿಗೆಯ ಮೇಲೆ ಮಲಗಿರುವಳು. ಪಕ್ಕದಲ್ಲೇ ಜೋಲಿಯಲ್ಲಿ ಆಕೆಯ ಎಳೆಗೂಸು ಮಲಗಿರುವುದು. ಆ ಕೋಣೆಯ ಮುಂದುಗಡೆ ಹಜಾರದಲ್ಲಿ ಪುಟ್ಟುವು ಪುಸ್ತಕಗಳು ಹರಡಿರುವ ಮೇಜಿನ ಮುಂದೆ ಓದುತ್ತಾ ಕುಳಿತಿರುವನು. ಹಜಾರದಲ್ಲಿ ಪುಸ್ತಕಗಳು, ಚೆಂಡು...ದಾಂಡುಗಳು ಹರಡಿರುವ ಮಾಧುವಿನ ಮೇಜೂ ಇರುವುದು.]

ಭಾಗೀ : (ಆಯಾಸದಿಂದ ನರಳುತ್ತಾ) ಹಯ್ಯೋ...ದೇವ್ರೇ! ತಲೆ ಸೀಳ್ತಾ ಇದೆಯಲ್ಲಾ!... ಹಯ್ಯೋ!...ಗಂಟ್ಲು ನಾಲ್ಗೇ ಬತ್ತಿ ಹೋಯ್ತಲ್ಲಾ!...ಯಾರ್ರೇ ಅಲ್ಲಿ?...ಪಾತೂ!...ಪಾತೂ!... ನಿಮ್ಮ ಧರ್ಮಕ್ಕ್ಯಾರಾದ್ರೂ ಸ್ವಲ್ಪ ನೀರು ತಗೊಂಬರ್ರೇ...ಹಯ್ಯೋ!...ಯಾರೂ ಇಲ್ಲ...ದಾರಿಹೋಕ್ರೂ ಇಲ್ವೇ!...

ಪುಟ್ಟು : ...ಸರ್ಹೋಯ್ತು! ಹಗ್ಲೂರಾತ್ರಿ ಈ ಕೂಸ್ಕಿರಿಚ್ಕೊಳ್ಳೋ Nuisance (ನ್ಯೂಸೆನ್ಸ್) ಜೊತೇಲಿ ಈಗೊಂದು ವಾರದಿಂದ ಅಮ್ಮ ಖಾಯಿಲೇಲ್ಕಿರ್ಚಿಕೊಳ್ಳೋದು ಬೇರೆ ಸೇರಿದೆ. ಹೀಗಿದ್ದಾಗ Mind concentrate (ಮೈಂಡ್ ಕಾನ್ಸೆಂಟ್ರೇಟ್) ಮಾಡಿ Study (ಸ್ಟಡಿ) ಮಾಡೋದು... Impossible, Oh! Damn Nuisance!

[ಪ್ರವೇಶ—ಕೈಗಳಲ್ಲಿ ಔಷಧಿ. ಎಣ್ಣೆಯ ಸೀಸೆಗಳನ್ನೂ. ಕಂಕುಳಲ್ಲಿ ತರಕಾರಿಯ ಬುಟ್ಟಿಯನ್ನೂ ಇಟ್ಟುಕೊಂಡು ಮಾಧು...]

ಮಾಧು : (ಮಹದಾತುರದಿಂದ. ಪುಟ್ಟುವನ್ನು ಕುರಿತು) ಪುಟ್ಟೂ! ಅಮ್ಮ ಹ್ಯಾಗಿದ್ದಾಳೆ? ಈಗ ಜ್ವರ ಬಿಡ್ತೆ?

ಪುಟ್ಟು : (ಮುಖವನ್ನು ಗಂಟಿಕ್ಕಿ ಮೋರೆಯನ್ನೋರೆ ಮಾಡಿ) ನಾನೇನ್ಬಲ್ಲೆ?...ನೀನೇ?... ಹೋಗ್ನೋಡು...ಕೇಳು.

ಮಾಧು : [ಸೀಸೆಗಳನ್ನೂ ಬುಟ್ಟಿಯನ್ನೂ ಥಟ್ಟನೆ ಕೆಳಗಿಟ್ಟು. ಒಳಹೊಕ್ಕು ತಾಯಿಯ ಬಳಿಗೆ ಹೋಗಿ ಆಕೆಯ ಹಣೆಯನ್ನು ಮುಟ್ಟಿನೋಡಿ] ಅಮ್ಮಾ! ಈಗ ಹ್ಯಾಗಿದೆ?...ಅಯ್ಯೋ ಹಣೆ ಸುಡ್ತಾ

ಯಿದೆಯಲ್ಲಾ! ಜ್ವರ ಬಿಡ್ಲೇ ಇಲ್ವಲ್ಲ! Doctor (ಡಾಕ್ಟ್ರು) ಜ್ವರ ಬಿಟ್ಟಿದ್ರೆ ಈ ಔಷಧ ಕೊಡು ಅಂತ ಕೊಟ್ಟಿದ್ದಾರೆ...ಈಗೇನ್ಮಾಡೋದು?...ತಿರ್ಗಾ ಒಯ್ದ್ಹೋಗಿ ಕೇಳ್ಕೊಂಡ್ಬರ್ತೇನೆ. [ಪಕ್ಕಕ್ಕೆ ತಿರುಗಿ ಜೋಲಿಯಲ್ಲಿ ಮಲಗಿದ್ದ ಕೂಸನ್ನು ಗಮನಿಸಿ] ಕೂಸಿಗೆ ಹಾಲ್ಹಾಕಾಯ್ತೆ?

ಭಾಗೀ : ಮಧ್ಯಾನ್ನ ಹಾಕಿದ್ದು...ನಿಮ್ಮತ್ತೆ ಹಾಲ್ಗೋಸ್ಕರ ಮನೆಗೆ ಹೋಗೋಕ್ಯಾರೂ ಇಲ್ಲಾ ಅಂದ್ರೂ ...ಪುಟ್ಟೂ ಹೋ ಪುಸ್ತ್ಕ ಕೈಲ್ಹಿಡ್ಕೊಂಡು ಕೂತ್ಕೊಂಬಿಟ್ರೆ, ಮಾತಾಡಿಸ್ಕೊರ್ಮೇಲೆ ಹೆಬ್ಬುಲಿ ಹಾಗೆ ಬೀಳ್ತಾನೆ.

ಮಾಧು : ಪರವಾಗಿಲ್ಲ. ಡಾಕ್ಟರ್ಮನೆಯಿಂದ ತಿರುಗಿ ಬರೋವಾಗ ಹಾಲೂ ತರ್ತೇನೆ. [ಹೊರಡುವನು.]

ಪುಟ್ಟು : ಈ ಮಂಕು Peon (ಪ್ಯೂನ್) ಕೆಲ್ಸಕ್ಕೇ Fittu (ಫಿಟ್ಟು)! Gentlemanly dignity (ಜಂಟಲ್ಮ್ಯಾನ್ಲಿ ಡಿಗ್ನಿಟಿ) ಏನೂ ಇಲ್ಲ. ಹಾಲ್ತರೋದು; ಆಸ್ಪತ್ರೆಗೋಡೋದು: ತರ್ಕಾರಿ ಕೊಂಡ್ಕೊಂಡ್ಬರೋದು; ಹೆಂಗ್ಸರ್ಹಾಗೆ ನೀರ್ಸೇದೋದು: ಎಲೆ ಹಚ್ಕೋದು; ಇವನ್ನೆಲ್ಲಾ ಮಾಡ್ತಿದ್ರೆ Examination (ಯಗ್ಝಾಮಿನೇಷನ್) ಪ್ಯಾಸ್ಮಾಡಿ Future career (ಫ್ಯೂಚರ್ ಕೆರಿಯರ್) ಎಲ್ಲಿಂದ್ಬಂದೀತು?...Stupid fool (ಸ್ಟುಪಿಡ್ ಫೂಲ್)!...

[ಸಂತೋಷಾತಿಶಯದಿಂದ ಮೈಮರೆತು ಹಿರಿಯಣ್ಣಯ್ಯನು ಪ್ರವೇಶಿಸುವನು.]

ಹಿರಿ : (ಉತ್ಸಾಹದಿಂದ) ಪುಟ್ಟೂ! ನಿನ್ಗೆ First class (ಫಸ್ಟ್ ಕ್ಲಾಸ್)!

ಪುಟ್ಟು : (ತಾತ್ಸಾರದಿಂದ) ಅದ್ಸರಿ...Rank (ರ್ಯಾಂಕ್) ಗೀಂಕ್ ಏನಾದ್ರೂ ಗೊತ್ತೇ?

ಹಿರಿ : ಅದಿನ್ನೂ ಬಂದಿಲ್ಲ...ನೀನೇನು ಬೊಂಬಾಯೋ...ಮದರಾಸೋ?

ಪುಟ್ಟು : Expense (ಎಕ್ಸ್ಪೆನ್ಸ್)ಗೇನ್ಮಾಡೋದಪ್ಪ?

ಹಿರಿ : ಪುಟ್ಟೂ! ಆ ಯೋಚ್ನೆ ನಿನಗ್ಯಾಕೆ? ನಿನ್ನ First class (ಫಸ್ಟ್ ಕ್ಲಾಸ್) ನೀನು ಸಿಗೀತಾ ಬಾ. ಹಣದ ಯೋಚ್ನೆ ನನಗ್ಬಿಟ್ಬಿಡು.

ಪುಟ್ಟು : ಹಾಗಾದ್ರೆ ದುಡ್ಡು ನೀನೆಲ್ಲಿಂದ ತರ್ತೀಯಪ್ಪ?

ಹಿರಿ : ಯೋಚ್ನೆಯೇನು? ಮಾಧೂಗೆ ಅವರ್ಯಾವ ಮದ್ವೇಲಿ ಹಾಕಿದ ಪತ್ಕಮುಕ್ಕೂ, ಕೊಟ್ಟಿರಪಕ್ಷ್ಣ ನಿನ್ನ ಬಿ.ಎ. (B.A.) ವರ್ಗೂ ಸಾಲುತ್ತೆ. ಹಣದಿಂದೇನ್ಯೋಜ್ನ ಆ ಹೆಂಕ್ಕೆ! (ಸುತ್ತಮುತ್ತಲೂ ನೋಡಿ) ಆ ಪೋಲಿ ಎಲ್ಲಿ? ಮನೆಗೆ ಬಂದಿದ್ದಾನೋ ಇಲ್ಲಾ ಇನ್ನೂ ಬೀದಿ ಬೀದಿ ತಿರಗ್ತಾ ಇದ್ದಾನೋ?

ಪುಟ್ಟು : (ಕೇವಲ ತಾತ್ಸಾರ ಸ್ವರದಿಂದ) ಈಗೇನೋ ಬಂದ್ಹಾಗಿತ್ತು. ತಿರಿಗಿ ಗೊಣಗುಟ್ಕೊಂಡ್ಹೊರಟ್ಹೋದ...ಅವನಿಗೇನಾದ್ರೂ ಪ್ಯಾಸ್ಗೀಸ್ ಆಯ್ತೆ?

ಹಿರಿ : (ಕೋಪಾತಿರೇಕದಿಂದ ಹಲ್ಲುಹಲ್ಲು ಕಡಿಯುತ್ತಾ) ಪಾಸಾಸೂ ಇಲ್ಲ, ಠಪಾಸೂ ಇಲ್ಲ... ಬಿಚ್ಚಿ ತೋರಿಸ್ತೀನಿ...[ಕೋಣೆಯಲ್ಲಿ ಹಾಸಿಗೆಯಮೇಲೆ ನರಳುತ್ತಿರುವ ಹೆಂಡತಿಯನ್ನು ಕಂಡು ಜುಗುಪ್ಸೆಯಿಂದ] ಏನೇ!...ಇನ್ನೂ ಬಿದ್ಕೊಂಡಿದ್ದೀಯಾ?...ಹಾಳಾಗ್ಹೋಯ್ತು! (ಜೋಲಿಯನ್ನು ನೋಡಿ) ತಲೆಹುಳ್ಳೋ ಕಾಲಕ್ಕೆ ಸರಿಯಾಗಿ ತಲೆತೂಟಿ ಬಂದ್ಹಾಗೆ ಈ ಕೂಸ್ಬೇರೆ...ಇದೇ ಸಂಸಾರಾಸ್ಹೋದು (ಪುಟ್ಟು ಕಡೆ ನೋಡಿ) ಪುಟ್ಟೂ! ಈ ಕಷ್ಟಕ್ಕೆಲ್ಲಾ ನೀನೇ ಮೋಕ್ಷಸಾಧನ. ನೀನ್ಮುಟ್ಟ ಮುಂದಕ್ಬಂದಿಟ್ರೆ ಇವೆಲ್ಲಾ ಮರತ್ಬಿಡ್ತೇನೆ...[ಒಂದು ಕೈಲಿ ಔಷಧದ ಸೀಸೆಯನ್ನೂ ಮತ್ತೊಂದು ಕೈಯಲ್ಲಿ ಹಾಲಿನ ತಂಬಿಗೆಯನ್ನೂ ಹಿಡಿದು ಮಾಧುವು ಪ್ರವೇಶಿಸುತ್ತಿರುವುದನ್ನು ಹಿರಿಯಣ್ಣಯ್ಯನು ಕಂಡು] ಇದೋ ಬಂದ!...ಎಲ್ಹೋಗಿದ್ದ್ಯೋ? ಏಷ್ಹೊತ್ತಿಗೋ ಮನೆಗೆ ಬರೋದು? ಇದೇನ್ಸತ್ರಾ ಅಂತ ತಿಳ್ಕೊಂಡ್ಯೇನೋ?

ಮಾಧು : (ಮೆಲ್ಲಗೆ) ಅಮ್ಮಯ್ಯಗೆ...ಔಷಧ ತರೋದಕ್ಕೆ...ಡಾಕ್ಟರ್ರನೆಗೆ ..ಹೋಗಿದ್ದೆ ..ಜ್ವರ ಇಳಿದಿದೆಯೋ?...ಹ್ಯಾಗಿದ್ದಾಳೆ?...ಈಗ ಹ್ಯಾಗಿದೆ?

ಹಿರಿ : (ಪದಿಯನ್ನು ಬಡಿದುಕೊಳ್ಳುತ್ತ) ಮಗ್ನೋ! ಅಲ್ಲಿಂತಾತ...ತಾತ...ಪಾಸ್ಮಾಡ್ಲಿಗೆ (Pass) ಮಂಗ್ಳ ಮಾಡಾಕ...ಕಟ್ಟೆಗೆ ಇಟ್ಟೋಯಿಸ್ತಾಯ್ತು. ಕಿಟ್ಟೆರಿಯರ್ರು (Career)! ಇಟ್ಕಿಂದ್ ಕರಿಸ್ತಾರೆ... ಅಪ್ಪ...ಆಸ್ಪತ್ರೆ...ಕೂಸು...ಹಾಲು...ಹೋಯ್ತು...ಹೋಯ್ತು! ನಾಯಿಗ್ಯಾಕಿದ್ದಿನ್ನ ಸ್ವರ್ಗದ ಪ್ರಾಪ್ತಿ ಗ್ಯಾರಾ! ಥ್ಥ ಥ್ಥು ತ್!... [ಹೊರಡುವನು.]

ಮಾಧು : ಈಗೇನ್ಮಾಡೋದು?—ಮಾಡೋದೇನು? ತಿರುಗ್ಬೇಗಿ ಕೇಳ್ಕೊಂಡ್ಬರೋದೆ?... (ತಾಯಿಯು ಅಳುಗಾಡುವ್ರದನ್ನು ಕಂಡು) ಯಾಕಮ್ಮ? ಏನಿಹೀಯಾ? ಈಗ್ಯಾಗಿದೆ?...

ಭಾಗೀ : ಸ್ವಲ್ಪ ವಾಸಿ...ಮಾಧು...ಈ ತಲೆನೋವಿಗಾದ ನಿಂತ್ಬಿಟ್ರೆಲ್ಲಾ ನಿಂತ್ಹಾಗೆ...

ಮಾಧು : (ತೊಟ್ಟಿಲಿಯ ಕಡೆ ನೋಡಿ) ಓಹೋ! ಕೂಸಿಗ್ಹಾಲು! (ಗಟ್ಟಿಯಾಗಿ) ಅತ್ಗೇ! ಹಾಲ್ಬಂದಿದೇನೆ...ಕೂಸಿಗ್ರುದುಲ್ಹಾಕಿ ಹಾಕು...ಪಾಪ! ಹೊಟ್ಟೇಲೇನೂ ಇಲ್ಲ!

ನಾಗಮ್ಮ : (ಮನೆಯೊಳಗಿಂದ) ಸರ್ಹೋಯ್ತು!...ಹಾಲ್ಹಾಕ್ಬಾ ಒಲೆಯೂದ್ತಾಕ್ತಿದ್ರೆ ನೀರ್ಸೇದೋರ್ಯಾರು? ಈ ಹೊಸೆಗ್ಬೋ ಬರೀ ಬಡ್ಡದ ಬೀಸಣಿಗೆಗಳು! ಹಾರ್ಮೋನಿ (Harmonium) ಬಾರ್ಸ್ಸೋ ಕೈ ಹಾಲ್ಹಾಕಿಸೀತೇ?...

ಮಾಧು : ಪರ್ವಾ ಇಲ್ವತ್ತೆ...ನಾನೇನು ಈವತ್ತು ಅಟಗ್ಗೇಟಕ್ಕೋಗಿಲ್ಲ. ಪತ್ತಿಂಡಿಗೆ ನೀರು ಸೇದಿದರಾದ್ರೂ ನಿದ್ರಂದೀತು. ಮೊದಲು ಹಾಲ್ಹಾಕಿ ಮಗೂಗೆ ಕೊಡು. ಪಾಪ! ಮಧ್ಯಾಹ್ನದಿಂದ ಹೊಟ್ಟೇಲೇನೂ ಇಲ್ಲ.

[ಈ ಸಂಭಾಷಣವಾಗುತ್ತಿರಲು ಹಿರಿಯಣ್ಣಯ್ಯನು ಮತ್ತೆ ಹಜಾರವನ್ನು ಪ್ರವೇಶಿಸುವನು. ಮಾಧು ಒಳಕ್ಕೆ ಹೋಗುವನು.]

ಹಿರಿ : (ಹುಬ್ಬು ಗಂಟು ಹಾಕಿಕೊಂಡು) ನಾಗೂ...

ನಾಗಮ್ಮ : (ಒಳಗಿನಿಂದ) ಅಣ್ಣಾ! (ಪ್ರವೇಶಿಸಿ) ಪ್ಯಾಸ್ಗೀಸೂ ಅಂತ ಕಿವೀಗೆ ಕೇಳಿಸ್ತಲ್ಲಾ... ನಮ್ಹುಡುಗರ ಗತಿಯೇನಾಯ್ತು?

ಹಿರಿ : ಆಗೋದೇನು? ಮೊದಲೇ ನಾನ್ಹೇಳಿದಹಾಗೆ...ಪುಟ್ಟು ಫಸ್ಟ್ಕ್ಲಾಸು...ಮಾಧು Fail (ಫೇಲ್)...ಹಾಕೋ ಅನ್ನಕ್ಕೆ ಸ್ವಲ್ಪ ಕೆಲ್ಸವಾದ್ರೂ ಮಾಡ್ತಾನಲ್ಲ. ಇದ್ದಿದ್ರೆ ಈಗ್ಲೇ ಏನಾಗ್ಲಿಂದ ಒದ್ದು ಮನೆಯಿಂದ ಓಡಿಸಿಬಿಡ್ತಾ ಇದ್ದೆ...ನಾಗೂ!...ಇನ್ಮೇಲೆ ಅವನ್ಗೆ ಸಾರು ಅನ್ನಕ್ಕೆ ತುಪ್ಪ...ಮೊಸರು... ಮಲಗೋಕೆ ದಿಂಬು ಧಾವಳಿ ಮಾತಾಡ್ಕೂಡ್ದು ತಿಳೀತೋ?

[ತೆರೆಯು ಬೀಳುವುದು.]

ಸೀನ್ ೩

ಸ್ಥಾನ—ಹಿರಿಯಣ್ಣಯ್ಯನ ಮನೆ ಹಜಾರ.

[ಮಾಧುವಿನ ಮೇಜಿಗೆ ಒರಗಿಕೊಂಡು ಮಾಧುವಿನ ಟೋಪಿಯನ್ನು ಪ್ರೀತಿಯಿಂದ ಸವರುತ್ತಾ ಸಾತುವು ಕಣ್ಣೀರುಸುರಿಸುತ್ತಾ]

ಸಾತು : ಅಯ್ಯೋ ದೇವ್ರೇ! ಪ್ಯಾಸಾದ್ರೇನು ಸ್ವರ್ಗಸಾಧನವೇ? ಫೇಲಾದ್ರೇನು ನರಕ ಪ್ರಾಪ್ತಿಯೇ? ದುರಾದೃಷ್ಟದಿಂದ ಫೇಲಾದೋರ್ನ. ಅಣ್ಣಾ ಹೀಗ್ಯಾಕೆ ಹೀಗೆ ಚಿತ್ರಹಿಂಸೆ ಮಾಡೋದು?...

ನಮ್ಮಪ್ಪ ಯಾವ ಪ್ರಾಸೂ ಮಾಡ್ಲಿಲ್ಲಾ...ಆದರೂ ನಮ್ಮನೇಲಿ ನಾವೆಲ್ರೂ ಸಂತೋಷವಾಗಿ ಅನ್ಯೋನ್ಯವಾಗಿರಲಿಲ್ಲವೆ?...ಮನುಷ್ಯನಿಗೆ ಗುಣವಲ್ವೇ ಹೆಚ್ಚು. ಈ ಹಾಳು ಹಣ ಅಂತಸ್ತು ಇವ್ರುಗಳ ಬೇಟೇಲಿ ವಿಶ್ವಾಸ ಕನಿಕರ ಇವಗಳ್ನೆಲ್ಲಾ ಹಿಂದ್ಬಿಟ್ಟಿಡೋದೆ?

[ಪಾತುವು 'ಹಾರೆಸಯ್ಯಾ' ಎಂಬ ಹಿಂದುಸ್ತಾನಿ ಹಾಡನ್ನು ಹಾಡುತ್ತಾ ಪ್ರವೇಶಿಸಿ ಗೋಡೆಯಲ್ಲಿ ನೆಟ್ಟಿರುವ ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತಾ...]

ಪಾತು : ಏನ್ಮನೆಯೋ ಹಾಳ್ಮನೆ; ಕೂತ್ಕೋಕೊಂದು ಕುರ್ಚಿ ಇಲ್ಲ; Table (ಟೇಬಲ್) ಇಲ್ಲ; ನೋಡ್ಕೊಳ್ಳೋಕೊಂದು Decent (ಡೀಸೆಂಟ್) ಕನ್ನಡಿ ಇಲ್ಲ: ಇಷ್ಟಕ್ಕೂ ಇವರ ಜುಗ್ಗನ್ಗೋ ನಿವಾರಕವಿಲ್ಲ!

[ಹಿಂತಿರುಗಿ ಸಾತುವನ್ನು ಕಂಡು, ಹತ್ತಿರಕ್ಕೆ ಬಂದು]

ಪಾತು : ಯಾಕ್ಸಾತೂ, ಯಾಕ್ಗೋಳಾಡ್ತಿದ್ದೀ?

[ನಾಗಮ್ಮನು ಒಂದು ಸಾಬೂನಿನ ಬಿಲ್ಲೆಯನ್ನು ಒಂದು ಕೊಳ್ಳಿಯ ಕೊನೆಗೆ ಸಿಕ್ಕಿಸಿಕೊಂಡು ಅದನ್ನು ಕೈಲಿ ಹಿಡಿದುಕೊಂಡು ಕೋಪಾವೇಶದಿಂದ ಹಜಾರವನ್ನು ಪ್ರವೇಶಿಸುವಳು.]

ನಾಗು : (ಉಚ್ಚಸ್ವರದಿಂದ) ಬ್ರಾಹ್ಮಣರ ಮನೇಲಿ ಇದೇನ್ರೋ ಅನ್ಯಾಯ? ಸಾಬೂನ್ಹಾಕಿ ತಿಕ್ಕೊಂಡ್ರೇನ್ ಸುಣ್ಣ ಬಳದ್ಹಾಗೆ ಬೆಳ್ಳಗಾಗತ್ತೆ ಅಂತ ತಿಳಕೊಂಡಿದ್ದೀರಾ? ಮುತ್ತೈದೇರ್ಗೆ ದೇವರು ಕೊಟ್ಟ ಅರಿಶಿನವಿಲ್ವೇ? ಹಯ್ಯೋ? ಏನು ಹೊಲಸ್ನೋ ಈಕಾಲ್ದ ಹುಡ್ಗೀರು! ಕಣ್ಣಿಗೆ ಕಾಡ್ಗೇ ಇಲ್ಲ; ಹಣೇಗೆ ಕುಂಕ್ಮ ಇಲ್ಲ: ಕನ್ನೇಗಷ್ಟ್ನವಿಲ್ಲ; ಇದಕ್ಕೇ ಹುಡ್ಗೀರ್ನ ಕಳ್ಸಕೂಡ್ದು ಸ್ಕೂಲ್ಗೇ ಅನ್ನೋದು ದೊಡ್ಡೋರು. ಇಂಗ್ಲೀಷು. ಸಾಬೂನು, ಸುಡುಗಾಡು. ವಿಲಾಯಿತಿಬೂದಿ ಮುಖಕ್ಕೆ ಹಚ್ಕೊಳ್ಳೋದು; ಸೊಟ್ಟ ಬೈತಲೇ ತಗೊಳ್ಳೋದು: ಸೊಟ್ಟ ಸೂಜಿ ಚುಚ್ಕೊಳ್ಳೋದು, ಈ ದುರ್ವಿದ್ಯೆಗ್ಳು ಕಲ್ತ್ಕೊತಾರ್ಯೇ ಹೊರ್ತು ಮುತ್ತೈದೇರ್ಲಕ್ಷಣಗ್ಳಷ್ಟೋ ಅಷ್ಟಕ್ಕೂ ಎಳ್ಳೂ!—ಯಾರದ್ದ್ರೋ ಈ ಸಾಬೂನು?

ಪಾತು : ನಂದೂ ಅಂತ್ಕಾಣುತ್ತೆ.

ನಾಗು : (ಅಣಕಿಸುತ್ತಾ) ನಂದೂಂತ್ಕಾಣುತ್ತೆ. ಅರ್ಶ್ನ ಹಚ್ಕೊಳ್ಳೋಕೇನ್ಕೇಡೇ ನಿಂಗೆ?

ಪಾತು : (ತಿರಸ್ಕಾರಸ್ವರದಿಂದ) ಆಪತ್ತೇನೋ ದಿನ್ನಗಳೆಲ್ಲಾ ಧಾರಣೆ ಹೆಚ್ಚಾಗ್ತಾಬರತ್ತೆ ಅಂತ್ಲಾ, ಮನೆಗೆ ಸ್ವಲ್ಪ ಅರ್ಶ್ನವಾದ್ರೂ ಮಿಗ್ಲಿಅಂತ ನಮ್ಮನೇಯಿಂದ ತಂದ ಸಾಬೂನು ಉಪಯೋಗಿಸ್ದೆ.

ನಾಗು : ನಿಮ್ಮನೇ ಸಾಬೂನು ಗೊತ್ತು! ಅಧಿಕಪ್ರಸಂಗಿ! ಅರ್ಶ್ನ ಮಿಗ್ಲೀಅಂತ್ಲೇ...ಯಾರಿಗೆ ಮಿಗ್ಲಿಅಂತ...(ಗದ್ಗದಸ್ವರದಿಂದ) ನನಗ್ಮಿಗ್ಲೀ ಅಂತ್ಲೇ...(ಪಾತುವಿಗೆ ಪ್ರತ್ಯುತ್ತರ ಕೊಡಲು ಕೈಲಾಗದೆ ಸಾತುವಿನ ಕಡೆ ಕೈತೋರಿಸಿ) ಈ ಮೂದೇವಿ ಹೊಸಲ್ದಾಟದ ಮೂರ್ನೇ ತಿಂಗ್ಳಲ್ಲೇ ನನ್ನಿಂದ ಅರ್ಶ್ನಕ್ಕೆ ತಿಲೋದಕ ಬಿಡ್ಸಿಬಿಟ್ಳಲ್ಲಾ...(ಗೋಳಾಡುತ್ತಾ) ಅರ್ಶ್ನಕುಂಕುಮಕ್ಕೂ ನನಗೂ ಋಣವಿಮೋಚನೆ ಮಾಡಿಸಿಬಿಟ್ಳಲ್ಲಾ! (ರೋಷದಿಂದ ಸಾತುವನ್ನು ನೋಡಿ) ಏನೇ!—ನೀನ್ಮನೆಗೆ ಬಂದ ಸುಲಗ್ನದ್ಫಲ ಕೇಳಿದ್ಯೇನೇ? ನಿನ್ಗಂಡನ್ಗೆ Fail (ಫೇಲು)! ಇನ್ನವನ್ಗೇನೇಬರಹ—ಪೋಲೀ ತಿರುಗೋದು—ಮರ್ವಾರ್ಕೆ ಮಾಡೋದು ಅಷ್ಟೆ! (ಹೊರಟು ಹೋಗುತ್ತಾ) ಕುಟುಂಬಾನೇ ಹಾಳಾಗ್ಹೋಯಿತ್ತು. ಈ ಕಷ್ಟಗಳ್ನೆಲ್ಲಾ ಕಟ್ಕೊಂಡು ಗೋಳಾಡ್ಲೀಕೊಂತ ದೇವ್ರು ನನ್ಹಣೇಲಿ ಯಾಕ್ಬರದ್ನೋಕಾಣೆ—ಮುಂಡೆ—ಪಾಪಿಜನ್ಮ—ಪಾಪಿಜನ್ಮ ನನ್ದು...[ಹೊರಟು ಹೋಗುವಳು.]

ಪಾತು : (ನಾಗಮ್ಮನ ಧ್ವನಿಯನ್ನೇ ಅನುಕರಿಸಿ) ಪಾಪಿಜನ್ಮ—ಪಾಪಿಜನ್ಮ ನನ್ದು. ಇವಳ್ದನ್ನ ಪಾಪಿಜನ್ಮಾಂತ ಈಗ್ಲಾನೆ ತಿಳೀತೂ ಅಂತ್ಕಾಣುತ್ತೀ ಗೂಬೇಗೆ!

ಸಾತು : ಇವರಿಗೆ ಫೇಲಾದ್ದು ನಂತಪ್ಪೇ? ಈಕೆ ತಾಳೀಭಟ್ಟಿಯಾಗಿಲ್ಲದ್ದು ನನ್ನ ತಪ್ಪೆ? ಅಯ್ಯೋ! (ಕಣ್ಣೀರಿಡುವಳು.)

ಪಾತು : ಅಯ್ಯೋ! ಸಾತು; ಹೆಂಗಸ್ರಾಗೆ ಯಾಕೆ ಗೋಳಾಡ್ತೀಯೇ? ಈ ಗಂಡ ಗಂಡನ್ನ ಕಳಕೊಂಡದ್ದು ಅವಳ್ಗೆ ಹೇಳ್ದ್ರ...ಅವಳ್ಗೆ ಗೊತ್ತಾಗೋದ್ಹೇಗೆ ನೀನ್ಹೇಳ್ತೀಯೆ?...ಹೇಳ್ದ್ರೂ ಅದು ನಷ್ಟ ನಿಮ್ಮಣ್ಣನಿಗೆ...(ಪುಟ್ಟುವಿನ ಮೇಜನ್ನು ತೋರಿಸಿ) ಇವನ್ಯಾಕೆ ಹೀಗಾಯಿತು? ಇವಗೂನು ಇದ್ಕದ್ದೇ ಇರುತ್ತೆ. (ಪುಟ್ಟುವಿನ ಪುಸ್ತಕಗಳನ್ನು ನೋಡುತ್ತಾ) Oh! Damn nuisance! ಎಲ್ಲಿಕ್ಕೋ Damn nuisance! ಎಂದೋ ಕಿವಿಗೆ ಬಿದ್ದದ್ದನ್ನ ಧುಮುಕಿದೇ ಅಂತ ತಿಳ್ಕೊಂಡಿದೆ...ಇವಕ್ಕಿಂತಾ ಇಂಗ್ಲೀಷ್ನಲ್ಲಿ...ಗೊತ್ತಾಗಿ ಧಾರಾಳ? ಹಾಗ್ಹೋಯಿದ್ರೆ ನಮಪ್ಪ ನಂಗ ಕಲಿಸ್ದ ಇಂಗ್ಲೀಷು. ಟೂಲು. ಹಾರ್ಮೋನಿಯಂ... ಯಾವನ್ನಿಂದನಾನೇ ಬಿಟ್ಟಲ. ಗಿಣಿಹಾಗೆ ಸಾಕ್ತಾಯಿಲ್ಲ. ಈ ಹೆಣ್ಣ ಮಾಡುಕ್ಕೊಳ್ತಿದ್ದಾಯ್ತು. ಈಗ್ನಲ್ಲೇನ್ ಫಲ...ಯುಗಾದಿಗೆ ಹಬ್ಬಕ್ಕೆಗಾದ್ರೂ ಮನೆಗ್ಹೋಗ್ತೀನಲ್ಲಾ ಅಂತ ಸಮಾಧಾನ ಎಲ್ದಿದ್ರೇ ಈ ಮನೇಲಿ ಇಷ್ಟೊತ್ತಿಗೆ ನಂಗೆ ಹುಚ್ಚು ಹಿಡಿದ್ಬಿಡ್ತಿತ್ತು.

ಸಾತು : ಯುಗಾದಿಗೆ ನಿಮ್ಮನೆಗ್ಹೋಗ್ತೀಯಾ? ಅದು ಹ್ಯಾಗ್ಗೊತ್ತು ನಿಂಗೆ?

ಪಾತು : ಹ್ಯಾಗ್ಗೊತ್ತೇ? ನೋಡ್ತಿರು. ಈವತ್ತು ನಮ್ಮಪ್ಪಿಂದ ಯುಗಾದಿಗೆ ತಪ್ದೆ ನನ್ನ ಕಳ್ಸಿಕೊಡ್ಬೇಕೂಂತ ಮಾವನವ್ರಿಗೆ ಕಾಗ್ದ ಬರುತ್ತೆ ನೋಡ್ತಿರು.

ಸಾತು : ಅದ್ಹ್ಯಾನೆ ಹ್ಯಾಗ್ಗೊತ್ತು ನಿಂಗೆ?

ಪಾತು : ಹ್ಯಾಗ್ಗೊತ್ತೇ?...ಬರ್ದೇ...ನಮ್ಮಪ್ಪಿಗೆ ಕಾಗ್ದ. ಯುಗಾದಿಗೆ ಮನೆಗೆ ಕಳ್ಸದೆ ಕೊಳ್ದಿದ್ರೆ ಬಾವೀಲ್ಬಿದ್ದು ಸಾಯ್ತೀನೇಂತ!

ಸಾತು : ಇಲ್ಲಿಂದ ಹ್ಯಾಗ್ಬರ್ದೆ? ನಾನು ಬಂದ್ಹೊಸದ್ರಲ್ಲಿ...ಬಾಯಿಲೆಯಾಗಿದ್ದ ನಮ್ಮಪ್ಪ ವೈಹ್ಯಾಗಿದೆ ಅಂತ ನಮ್ಮಣ್ಣನಿಗೆ ಇಲ್ಲಿಂದ ನಾ ಬರ್ದ ಕಾಗ್ದಾನ ಅತ್ತೆ ಜೋರ್ಜೋರಾಗಿ ಓದಿ "ಈ ಮನೇಲಿ ಹೆಂಗಸ್ರ್ಯಾರಾದ್ರೂ ಬರ್ಯೋದು ಕಣ್ಣಿಗ್ಬಿದ್ರೆ ಕೈಮುರಿದು ಒಲೇಲಿಡ್ತೀನಿ" ಅಂತ ನಮ್ಮಿಬ್ಬನ್ನೂ ದುರುಗುಟ್ಕೊಂಡು ನೋಡಿ ಹೆದರಿಸ್ಲಿಲ್ವೇ?...ಆಕೆಗೆ ತಿಳೀದೇ ನೀನ್ಹ್ಯಾಗೆ ನಿಮ್ಮಪ್ಪಿಗೆ ಕಾಗದ ಬರೆದೆ?

ಪಾತು : ಅಯ್ಯೋ ಸಾತೂ! ಇಂಥಾ ಗೂಬೆಗಳ್ಗೆಲ್ಲಾ ಹೆದರ್ತೀನ್ಯೇ ನಾನೂ! ಪಕ್ಕದ್ಮನೇ ನಾಗೂ ಇದಾಳಲ್ಲ ಅವರ್ಮನೇಯಿಂದ ಬರ್ದು ಕಳಿಸ್ದೆ ಕಾಗ್ದ [ಹಿರಿಯಣ್ಣಯ್ಯನು ಕೈಲೊಂದು ಪತ್ರವನ್ನು ಹಿಡಿದು ಓದುತ್ತಾ ಬರುವುದನ್ನು ನೋಡಿ. ಮೆಲ್ಲಗೆ] ಅಕೋ ನೋಡು...ಮಾವನವ್ರು...ಕೈಲೇನೋ ಕಾಗ್ದ ಇದೆ... ನಮ್ಮಪ್ಪಿಂದ್ಲೇ ಇರಬಹ್ದು. ನಾನೂರಿಗ್ಹೋದ್ರೆ ನಿಮ್ಮನೆಗ್ಹೋಗಿ ನಿಮ್ಮಪ್ಪಿಂದ ಕಾಗ್ದ ಬರೆಸ್ತೀನಿ?

ಸಾತು : ಏನೂ ಬೇಡ ಪಾತೂ! (ಮಾಧುವಿನ ಮೇಜನ್ನು ಸೂಚಿಸಿ) ಇಲ್ಲೇ ಇದ್ರೆ ಇವರು ಪಡೋ ಕಷ್ಟಗಳ್ಲಲ್ಲಿ ಅರ್ಧವಾದ್ರೂ ನನ್ನಲೇಮೇಲ್ಬಿದ್ದೀತು.

[ಇಬ್ಬರೂ ಕೈಹಿಡಿದು ಒಳಹೋಗುವರು. ಹಿರಿಯಣ್ಣಯ್ಯನು ಪತ್ರವನ್ನು ಓದುತ್ತಾ ಹಜಾರ ವನ್ನು ಪ್ರವೇಶಿಸುವನು.]

ಹಿರಿ : ನಾಗೂ!

ನಾಗು : (ಒಳಗಿನಿಂದ) ಇದೋ ಬಂದೇಣ್ಣಾ.

ಹಿರಿ : ಇಷ್ಟೊತ್ನಲ್ಲಿ ಏನ್ಮಾಡ್ತೀ ಅಡ್ಗೇಮನೇಲಿ?

ನಾಗು : ಮಾಡೋದೇನೇ ಏನಿದೆ ನಮ್ಗೆ ಹಬ್ಬಕ್ಕೆ—ಅವಲಕ್ಕಿ ಮೊಸರು ಮಾಡ್ತೀದೇ.

ಹಿರಿ : ಹಾಗಾದ್ರೆ ಮುಂದ್ಬಿಟ್ಟಾ ಇಲ್ಲಿ (ಮತ್ತೆ ಪತ್ರವನ್ನೋದುವನು. ನಾಗಮ್ಮನು ಪ್ರವೇಶಿಸು ವಳು.)

ನಾಗು : ಅದೇನ್ಕಾಗ್ಬಾಣ್ಣ? ಯಾರಿಂದ್ಬಂತು? ಏನ್ ಸಮಾಚಾರ? ಯಾರು ಸತ್ರೂ?

ಹರಿ : ಸಾಕ್ಕಾಕು ನಿನ್ನಂಗ್ಯ ಪದ್ಯ. ಯಾರೂ ಸಾಯ್ಲಿಲ್ಲ. ನಮ್ಮುಟ್ಟು ಮಾವ ಬರ್ದಿದ್ದಾನೆ. ಋಷಿಪಂಚ್ಮೀಗೆ ಮಗಳ್ನ ಕಳ್ಸಿಕೊಡ್ಬೇಕೂಂತ...ಈಗಾ...

ನಾಗು : ಗೊತ್ತು. ಮುನ್ನೇ ಆಗೋವಾಗ್ಲೇ ಕಿರಿಚ್ತಿ; ಬಡುಕೊಂಡೆ. ನಸ್ಕುರ್ಚು ಕಿವೀಗ್ಹಾಕ್ಕೊಂಡ ಕೃಪಿ. ಒಂದಾದ್ರೂ ಇದ್ದಿದ್ರೆ ನನ್ನಾಳ್ಗೆ ಸೇದ್ಕೋತಿದ್ದಿ. ಈ ದೊಡ್ಡಮನುಷ್ಯರ ಸಹ್ವಾಸ ನಮಗ್ಬೇಡ... ಅವರ್ಮನೇ ಹುಡ್ಗೀರು ನಮ್ಮನೇಲಿಟ್ಟು ಜೆಮಾಡೋಕೆ ಯೋಗ್ಯವೇ ಹೊರ್ತು ಗೃಹಕೃತ್ಯ ವಿಷಯಕ್ಕೆ ಏನೂ ಸಹಾಯ್ಕಾಗಿರೋದಿಲ್ಲಾಂತ...ಸರಿ ಆದ್ದಾಯ್ತು; ಈಗೇನ್ಮಾಡ್ತೀಯಾ?

ಹರಿ : ಮಾಡೋದೇನಿದೆ ಬೇರೆ? ಉದ್ಯಾಪ್ನೆ ನಾಡಿದ್ದೂಂತಾನೆ! ಈ ರಾತ್ರೀನೇ ಕಳಿಸ್ಬಿಡ್ಬೇಕು! ಅಲ್ದೆ ನಾಳೆ ಪ್ರಟ್ಟೂ ಪ್ರ್ಯಾಕ್ಟೀಸು ಮಾಡ್ಕೊಂಡು ತಿರಿಗಿ ಬಂದಾಗ ಕೆಲ್ಸವಾಗೋದಕ್ಕೆ ಅವರ್ಮಾವನ ಶಿಫಾರ್ಸು ಬೇಕಾದ್ರೂ ಬೇಕಾದೀತು. ಅವನ್ನೀಗ್ಲೆ ಇಕ್ಕಿದ್ರಾದೀತೆ! ಈ ರಾತ್ರಿಯೇ ಅವಳ್ನ ಕರ್‍ಕೊಂಡ್ಹೋಗಿ ಬಿಟ್ಬಿಟ್ಬಾ.

ನಾಗು : ಹೌದು...ಈಗಾ ಥೂಹೆಂಡ್ತೀನ್ಮನೇಲಿಟ್ಕೊಂಡೇನ್ಮಾಡ್ತೀಯೋಚ್ನಣ್ಣ? ಆ ಪುಣ್ಯಾತ್ಗಿತ್ತಿ ನಮ್ಮೊಪ್ಪು ಪಾಟದಾರಭ್ಯ ನಮ್ಮನೇಲಿ ಏನಾದ್ರೂ ಅನಿಷ್ಟ ಸಂಭವಿಸ್ತಾನೇ ಇದೆ...(ರೋದಿಸುತ್ತಾ) ಆರಾಣೆ ಮನೆಗ್ಬಂದ ಮೂರ್ತಿಂಗ್ಳಲ್ಲೇ ನನ್ಗಂಡನ್ನನುಂಕ್ಕೊಂಡ್ಳು. ನನ್ನೋ...ತಲೆಸಾರ್ಸಿ,...ಗುಡ್ಸಿ,...ರಂಗೋಲಿಹಾಕಿ,...ಕೆಂಮಣ್‌ಸೀರೆ ಉಡ್ಸಿಬಿಟ್ಳು...ಅವಳ್ಗಂಡನ್ನೋ ಪುಟ್ಗೋಳೀಕಿರೀಕಟ್ಗೆಗಳಾಡೋದು, ...ಪರಿಚಾರಿಕೆ ಮಾಡೋದು,...ಈ ಯೋಗ್ಯತ್ಗೆ ತಂದಿಟ್ಬಿಟ್ಟಿದ್ದಾಳೆ...ಅತ್ತಿಗ್ಯೋ...ನಾನ್ಹೇಳಿದ್ದೊಂದೂ ಕಿವೀಗ್ಹಾಕ್ಕೊಳ್ಳೋದಿಲ್ಲ...ಪಾಪ! ಚಿಕ್ಕುಡಿಗಿ ಅಂದ್ಬಿಟ್ಟಾಳೆ. ಈಗೀಬಣ್ಣದ್ ಬೀಸಣಿಗೇ ನಿಟ್ಕೊಂಡೇನ್ಮಾಡೋದಣ್ಣಾ!

ಹರಿ : ಹೌದ್ಹಾಗೂ...ಆ ಕೆಲ್ಸಕ್ಬಾರ್ದ ಧಡ್ಡನ್ಗೆ ಅನ್ನಾಹಾಕೋದಲ್ದೆ ಅವನ್ಹೆಂಡ್ತೀಗೂ ಹಾಕ್ಬೇಕು! ಇವಳ್ಮನೇಗ್ಬಂದ್ಪ್ರಯೋಜ್ನ ಮಾಘೂ ವರದಕ್ಷೀಣೆ. ಮಾಘೂ ವರದಕ್ಷಿಣೆ ಪ್ರಯೋಜ್ನ ಪ್ರಟ್ಟೂ ಕಾಲೇಜು ಫೀಜು. ಇಲ್ಬೀಸೋ ಬೀಸಣಿಗೆ ಅವರ ತೌರ್ಮನೇಲೇ ಬೀಸ್ಕೊಳ್ಳಿ. ಇವಳ್ನೂ ಪಾತೂ ಜೊತೇಲಿ ಕರ್‍ಕೊಂಡ್ಹೋಗಿ ಬಿಟ್ಬಿಟ್ಬಂದ್ಬಿಡು.

ನಾಗು : ಆಗ್ಲಣ್ಣ...ಈ ರೈಲ್ನಲ್ಲೇ ಹೊರಡ್ತೇನೆ.

[ಹೊರಡುವಳು.]

ಹರಿ : (ಹಾಸಿಗೆಯ ಮೇಲಿರುವ ಹೆಂಡತಿಯನ್ನು ನೋಡಿ ಜುಗುಪ್ಸೆಯಿಂದ) ಲೇ! ಈಗ್ಹ್ಯಾಗಿದೆ?

ಭಾಗೀ : (ದುರ್ಬಲ ಸ್ವರದಿಂದ) ಸ್ವಲ್ಪ ವಾಸೀಂತ್ಕಾಣತ್ತೆ.

ಹರಿ : ಸ್ವಲ್ಪವಾಸಿ, ಸ್ವಲ್ಪವಾಸೀಂತ ಎಂಟ್ಹತ್ತುದಿನ್ದಿಂದ ಕಾಲ್ಚಾಚ್ಕೊಂಡು ಬಿದ್ದಿದ್ದೀಯಲ್ಲೇ!... ಈಗ್ನಿನ್ನ ಸೋಸೇರೂ ಹೊರಟ್ಹೋದ್ರು...ಕೆಲ್ಸಮಾಡೋರ್‍ಯಾರು? ಈಗ ನಿನ್ನೀ ಹಾಳ್ ಕೂಸ್ನೋಡ್ಕೊಳ್ಳೋರ್‍ಯಾರು?...ಏನೇ?...ಕುಟುಂಬಾನೇ ಫಜೀತೀಗ್ತಂದಿಟ್ಬಿಟ್ಟ್ಯಲ್ಲೇ!...ಎಲ್ಲಕ್ಕೂ ನಾಗೂ!...ಬೆಳಿಗ್ಗೇ ಎದ್ದೂ...ನಾಗೂ ಬರೋವರ್‍ಗಾದ್ರೂ...ತಕ್ಕಟ್ಟೇ...ಕೆಲ್ಸಾ ಮಾಡ್ತಿರು...ಮೈಗೂ ಒಳ್ಳೇದು...ಊಂ? ...ಊಂ...ನಾನು ಹಿಂದಿನ್ ಕೋಣೇಲಿ ಮಲಕ್ಕೊಳ್ತೇನೆ...ಅಷ್ಟೊತ್ತಿಗ್ಗೇ ಎಬ್ಬಿಸಿಬಿಡು...(ಬಟ್ಟೆಬರೆಗಳನ್ನು ಬಿಚ್ಚಿಡುತ್ತಾ) ಏನು ಥಳಿಂಗೋ ಹಾಳು! ಲೇ! ಆ ಕೋಣೇಲ್ಬಿಚ್ಚಾಗಿದೆಯೇನೆ?

ಭಾಗೀ : ಹೂಂ

ಹರಿ : ಹಾಗಾದ್ರೇ ಆ ಬೂರ್ನೀಸಿಲ್ಹಾಕು. [ಭಾಗೀರಥಮ್ಮನು ತಾನು ಹೊದ್ದಿದ್ದ ಬೂರ್ನೀಸನು ಕೊಡುವಳು; ಹರಿಯಣ್ಣಯ್ಯನು ಅದನ್ನು ಹೊದ್ದುಕೊಂಡು ಆಕಳಿಸಿ, ಬಾಯಿಗೆ ಚಿಟಿಕೆ ಹಾಕುತ್ತಾ... "ರಾಘವಾ!" ಎನ್ನುತ್ತಾ ಒಳಕ್ಕೆ ಹೋಗುವನು.]

[ಬಚ್ಚಲಬಾಗಿಲಿನಿಂದ ನಾಗೂ, ಸಾತೂ, ಪಾತೂ ಬಂದು ಹಿಂದೆ ಬಾಗಿಲಬಳಿ ನಿಲ್ಲುವರು. ನಾಗು ಕಂಕುಳಲ್ಲಿ ಕೃಷ್ಣಾಜಿನದ ಮಣಿ ಪೆಟ್ಟಿಗೆಯನ್ನೂ, ಕೈಯಲ್ಲೊಂದು ಚಿಕ್ಕಬುಟ್ಟಿಯ ಗಂಟನ್ನೂ ಹಿಡಿದಿರುವಳು. ಸಾತುವಿನ ಕೈಯಲ್ಲೂ ಒಂದು ಚಿಕ್ಕ ಗಂಟಿರುವುದು. ಪಾತುವು ಬರಿಗೈಯಲ್ಲಿರುವಳು. ಸಾತು ಪಾತುವಿಬ್ಬರೂ ಭಾಗೀರಥಮ್ಮನ ಬಳಿಗೆ ಹೋಗಿ ಆಕೆಗೆ ನಮಸ್ಕಾರಮಾಡಿ...]

ಪಾತು, ಸಾತು : ಅಮ್ಮಾ ನಾವು ಹೋಗ್ಬಿಟ್ಬರ್ತೇವೆ.

ಭಾಗೀ : ಅಯ್ಯೋ! ಹಣೇಗೆ ಕುಂಕುಮಾ ಇಟ್ಕೊಳ್ಳೋದಕ್ಕೆ ಕೂಡಾ ಯಾರೂ ಇಲ್ವಲ್ಲ... (ನಾಗಮ್ಮನು ಕೋಪದಿಂದ ಚಮಕಿತಳಾಗುವಳು. ಭಾಗೀರಥಮ್ಮನು ಪ್ರಯತ್ನಪೂರ್ವಕವಾಗಿ ಎದ್ದು ಕುಳಿತುಕೊಂಡು) ಸಾತೂ! ಭರಣೀತಕ್ಕೊಂಬಾ ಮಗೂ. (ಸಾತುವು ಕುಂಕುಮದ ಭರಣಿಯನ್ನು ತರಲು ಒಳಕ್ಕೆ ಹೋಗುವಳು.) ಪಾತೂ! ನಿಮ್ಮಮ್ಮನ ಕೇಳ್ದೇಂತ ಹೇಳು...ನನ್ನ ಮೈತಕ್ಕೊಟ್ಟಿಗೇ ಅವ್ಳು. ನಾನು ಬಹಳ ಕಾಯ್ಲೇಂತ ಹೇಳಿ ಹೆದರಿಸ್ಬೇಡ. (ಸಾತುವು ಕುಂಕುಮದ ಭರಣಿಯನ್ನು ತರುವಳು.) ಇಬ್ಬರೂ ಈಮನೆ ಗೋಳಾಟ ಸ್ವಲ್ಪ ಕಡ್ಮೆಯಾಗೋವರೆಗೂ ಬಿಟ್ಟುತ್ತವಿನ ಅಪ್ಪೀಗಾದು ನಿಧಾನವಾಗಿ ತಿರುಗ್ಬಂದು ಸೇರ್ರಿ. (ಭಾಗೀರಥಮ್ಮನು ಸೊಸೆಯರಿಗೆ ಕುಂಕುಮ ಹಚ್ಚಲು. ಸೊಸೆಯರಿಬ್ಬರೂ ಆಕೆಗೆ ನಮಸ್ಕಾರ ಮಾಡುವರು.) ತಾಲೀಕಟ್ಕೊಂಡು ಸುಖವಾಗಿರ್ರಿ.

ನಾಗು : (ತನ್ನಲ್ಲಿ ತಾನು) ತಾಲೀಕಟ್ಕೊಂಡು ಸುಖವಾಗಿರ್ರಿ. ಅದೇನು ಸುಖವ್ರೋ ನಾನ್ಕಾಣೆ ಕಾಣೆ.

ಭಾಗೀ : (ನಾಗಮ್ಮನನ್ನು ಉದ್ದೇಶಿಸಿ) ಹೋಗ್ಬತ್ತೀರಾ?

ನಾಗು : ಬರ್ತೇನೆ ಬರ್ತೇನೆ...(ಆತ್ಮ) ಅದಕ್ಕೇನೂ ಭಯವಿಲ್ಲ. ತಿರುಗ್ಬಂದೇ ಬರ್ತೇನೆ... (ಪಾತುವನ್ನು ನೋಡಿ) ನಿನ್ಗಂಟೆಲ್ಲೇ?

ಪಾತು : ನನ್ನ ಟ್ರಂಕೂ, ಹಾಸಿಗೆ ಒಳಗಿದೆ.

ನಾಗು : (ಪಾತುವಿನ ಸ್ವರವನ್ನು ಅನುಕರಿಸಿ) ಟ್ರಂಕೂ ಹಾಸ್ಗೇ...ಈ ದೊರೆಸಾನಿ ಟ್ರಂಕು ಕೊಂಡ್ಬರಟ್ರೆ ಕೈಯಲ್ಲಿ ಗಂಟಿದ್ರೆ ಅವಮಾನವೇನೋ! ಈಗ ನಿನ್ನ ಟ್ರಂಕೂ ಹಾಸ್ಗೆ ಹೊತ್ಕೊಂಡ್ಹೋಗೋರ್ಯಾರು? ನಾನೂಂತ ತಿಳ್ಕೊಂಡಿದ್ದೀಯೇನೇ?

ಪಾತು : ಕೂಲಿಗ್ಹೇಳಿಕಳ್ಸಿದೆ.

ನಾಗು : ಓಹೋ! ಕೂಲೀಬೇರೆ ನಿನ್ಯೋಗ್ಯತ್ಗೆ! ಕೂಲೀಗೆ ದುಡ್ಕೊಡೋರ್ಯಾರು?

ಪಾತು : ದುಡ್ಡು ನನ್ಹತ್ರಿದೆ.

ನಾಗು : ರಾಜ್ಯಲಕ್ಷ್ಮೀ ನೀನು!...ನಿನ್ಹತ್ರ ಎಲ್ಲಾ ಇದೆ ಗೊತ್ತು. ಮಾನ್ಮರ್ಯಾದೇವುಟ್ಗಿಲ್ಲ. [ಕೂಲಿಯೊಬ್ಬನು ಒಳಕ್ಕೆ ಬಂದು ಪಾತುವಿನ ಟ್ರಂಕನ್ನೂ, ಹಾಸಿಗೆಯನ್ನೂ ಹೊತ್ತುಕೊಂಡು ಹೊರಡುವನು]...ರೈಲ್ಗೆ ಹೋಗೋದಕ್ಕೆ ಜೋಡ್ಸುದ್ರೆ ಸಾರೋಟೇನಾದ್ರೂ ತಪ್ಲಿಲ್ವೋ?...ನಡಿ. [ಮೊದಲು ಕೂಲಿಯಾಳೂ, ಅನಂತರ ಸಾತೂ, ಪಾತೂ, ಹಿಂದೆ ನಾಗಮ್ಮನೂ ಹೋಗುತ್ತಾ...] ನಡಿ...ನಿನ್ಗಿಟ್ಟಿಥೇನೆ! ತೌರ್ಮನೆಯಿಂದ್ತಿರುಗ್ಬಾ ತೋರಿಸ್ತೇನೆ.

[ಭಾಗೀರಥಮ್ಮ ಆಕಳಿಸುತ್ತಾ ನಿದ್ದೆ ಹೋಗುವಳು. ಪ್ರವೇಶ: ಮಾಧು—ತಾಯಿಯ ಹತ್ತಿರ ಹೋಗಿ ನಿದ್ರಿಸುವುದನ್ನು ಗಮನಿಸಿ, ಔಷಧ ಶೀಸೆಯನ್ನೂ ಗಾಜಿನ ಬಟ್ಟಲನ್ನೂ ತನ್ನ ಮೇಜಿನ ಬಳಿ ತಂದಿಟ್ಟು, ಹಜಾರದ ದೀಪವನ್ನೂ ಪೆಟ್ಟುವಿನ ಮೇಜಿನ ದೀಪವನ್ನೂ ತಗ್ಗಿಸಿ, ಷರ್ಟನ್ನು ತೆಗೆಯುತ್ತಾ ಹರಕಲು ಚಾಪೆಯನ್ನು ಹಾಸಿ...ಧಾವಳಿಯನ್ನು ಕಾಣದೆ...]

ಮಾಧು : ನನ್ಗಾಧ್ಹಿ?...ಓಹೋ...ಮರ್ತೆ...ಫೆಯಿ (Fail) ಆದವ್ನಿಗೆ ಜ!...(ಷರ್ಟನ್ನೂ ಕೋಟನ್ನೂ ಪುನಃ ಹಾಕಿಕೊಳ್ಳುವನು—ಚಾಪೆಯಮೇಲೆ ಮಲಗುವಾಗ ದಿಂಬಿಲ್ಲದ್ದರಿಂದ ತಲೆಯು

ನೆಲಕ್ಕೆ ಬಡಿಯುತ್ತಲೆ...ಮುಗುಳುನಗೆಯೊಡನೆ...)ಸಹಾಪ್ಯೊ ತೇಲಿ ಕಠಿಣ ಸಹಾಸೂನೆ?...ಸುಸ್ತೇ ಕೊಟ್ಟೋದು...ಕರ್ದಿಬಿಡುದು...ಅದ್ರ ಪ್ಯಾಸಾಗದ್ದಾ ಪಮಟ್ಟೆಟ್ಟೋಬಾರ್ದು! [ಗಾಳಿ ಇಲ್ಲದ ಫುಟ್ ಬಾಲೊಂದನ್ನು (Foot ball) ದಿಂಬಾಗಿಟ್ಟುಕೊಂಡು ಮಲಗುವನು...ಪುಟ್ಟುವು ಪ್ರವೇಶಿಸಿ ತನ್ನ ದೀಪವನ್ನು ಹೆಚ್ಚಿಸಿ, ತನ್ನ ಹಾಸಿಗೆಯನ್ನು ಹಾಸಿಕೊಂಡು, ಪುಸ್ತಕವೊಂದನ್ನು ತೆಗೆದು ಗಟ್ಟಿಯಾಗಿ ಓದಲಾರಂಭಿಸುತ್ತಲೇ...]

ಮಾಧು : ಪುಟ್ಟೊ...ಮನಸ್ಸಲ್ಲೇ ಓದ್ಕೋ...ಕೂಸು ಅಮ್ಮ ಎಚ್ಚರಗೊಂಡಾರು!

ಪುಟ್ಟು : (ತಾತ್ಸಾರದಿಂದ) ಮಾಧೂ!...ನನ್ವಿದ್ಯೆ ಹೆಚ್ಚೋ ಕೂಸಿನ ನಿದ್ದೆ ಹೆಚ್ಚೋ?

ಮಾಧು : (ಕೆಣಕಿದ ಸರ್ಪದಂತೆ...ರೋಷದಿಂದ ತಲೆಯನ್ನೆತ್ತಿ) ನಿನ್ವಿದ್ಯೆವೇ!...ನಿದ್ದೆಮಾಡೋ ಕೂಸನ್ನೂ. ಜ್ವರದಿಂದ ನರಳೋ ತಾಯನ್ನೂ ಎಬ್ಬಿಸೋ ನಿನ್ವಿದ್ಯೆಗೆ ಬೆಂಕೀಹಾಕು! ನೀನು ಪ್ಯಾಸ್ಮಾಡಿ ಕಡಿದಿಲ್ಯಾರ್ಗ್ಗೇನಾಗಬೇಕು?

ಪುಟ್ಟು : ಏನಾಗ್ಬೇಕೆ? ನಾನ್ಪ್ಯಾಸ್ಮಾಡಿ High position (ಹೈ ಪೊಸಿಷನ್)ಗೆ ಬಂದ್ರೆ ನಮ್ಮ Family (ಫ್ಯಾಮಿಲಿ)ಗೆ ಬರೋ Credit (ಕ್ರೆಡಿಟ್) ಸಾಲದೇ?

ಮಾಧು : High...position (ಹೈ ಪೊಸಿಷನ್)ಗೆ ಬಂದ್ರೆ! ನಮ್ಮಾಗತ್ತೆಗೆ ಮೀಸೆ ಬಂದ್ರೆ! ...ಚಿಕ್ಕಪ್ಪಾಂತ ಕೂಗ್ಬಹುದು!...ಅಲ್ಲಾ ಪುಟ್ಟೂ? **ನನ**ಗಿಂತ ಘಟ್ಟಿಗಾ...ದೊಡ್ಡೋನು ನೀನು... ಅಪ್ಪನತ್ರೂ ಸಾಯ್ಲಿ ತಿಥಿಗೆ ವಡೆ ಸಿಕ್ಕೀತು ಅನ್ನೋಹಾಗೆ ತಂದೆ ತಾಯಿಗಳಿಗೆ ಯಾವವಿಧದಲ್ಲೂ ಸಹಾಯ್ವಾಗಿಲ್ದೆ ನಿನ್ಕೆಲ್ಸಾ ಮಟ್ಟಿಗೆ ನೀನ್ನೋಡ್ಕೋಳ್ತೀಯಲ್ಲಾ...ಇದೇನೆ ನಿನ್ವಿದ್ಯಾ?...ನಿನಗ್ಕಲ್ಸಿ ರೋಷು!...ಮನ್ನೆ ಅಮ್ಮ ಹೇಳಿದ್ದು ಜ್ಞಾಪ್ಕವಿಲ್ವೆ? ಈ ಭೂಮಿಯಲ್ಲಿ ವಾಸಿಸೋಕೆ ನಾವು ದೇವರಿಗೆ ಕೊಡಬೇಕಾದ್ಬಾಡ್ಗೆ ಏನೆಂದರೆ ನಮ್ಮ ಸುತ್ತಮುತ್ತಲೂ ಇರುವ ಜನರಿಗೆ ಉಪಯೋಗ...

ಪುಟ್ಟು : (ಅತ್ಯಂತ ಕೋಪದಿಂದ ತಲೆಯ ಬಳಿ ಇದ್ದ ದೀಪವನ್ನು ಥಟ್ಟನೆ ಆರಿಸಿ) ಸಾಕ್ಸಾಕು ನಿನ್ನ Curtain lecture (ಕರ್ಟನ್ ಲೆಕ್ಚರ್). ನಂಗೆ ನಿದ್ದೆಬರುತ್ತೆ. (ಹೊದ್ದುಕೊಂಡು ಮಲಗುವನು. ಮಾಧುವು ಮೆಲ್ಲನೆ ನಗುವನು. ಈ ಸದ್ದಿನಿಂದ ಭಾಗೀರಥಮ್ಮನು ಎದ್ದು...)

ಭಾಗೀ : ಮಾಧೂ!...ಇನ್ನೂ ಎದ್ದಿದ್ದೀಯಾ ಮಗೂ?...ಯಾಕ್ನಿದ್ದೇ ಬರ್ಲಿಲ್ವೇ?

ಮಾಧು : ಡಾಕ್ಟ್ರು ಹತ್ತುಂಸೊಂದ್ಗಂಟೆಹೊತ್ಗೆ ಒಂದ್ಡೋಸ್ (Dose) ಔಷ್ಧ ನಿನಗೆ ಕೊಡ ಬೇಕೂಂತ ಹೇಳಿದ್ದಾರೆ...ಅಗೋ ಕಛೇರೀಲೀಗ್ತಾನೆ ಹತ್ಹೊಡೀತಾ ಇದೆ. [ಎದ್ದು ಸೀಸೆಯಲ್ಲಿ ಔಷಧ ವನ್ನು ಗಾಜಿನ ಪಾತ್ರೆಗೆ ಬಗ್ಗಿಸಿ ತಾಯಿಗೆ ಕೊಟ್ಟು...] ಇದ್ಕುಡಿದ್ಬಿಟ್ಟು ಮಲಕ್ಕೋಮ್ಮಾ.

ಭಾಗೀ : [ಮಾಧು ಹೇಳಿದಂತೆ ಔಷಧವನ್ನು ಕುಡಿದು: ಅನಂತರ ಮಾಧುವಿನ ಕೈಯನ್ನು ಹಿಡಿದುಕೊಂಡು...] ಮಗೂ! ನಿನಗೇನಾದ್ರೂ ಪ್ಯಾಸ್ಗೀಸಾಯ್ತೇ?

ಮಾಧು : (ತಾಯಿಯ ಮುಖವನ್ನು ಸವರುತ್ತಾ) ಇಲ್ಲಮ್ಮಾ ಆದರೇನು? ಆಗ್ದಿದ್ರೇನು? ಪುಟ್ಟೂ ನನ್ನೂ ಸೇರಿಸಿ ಪ್ಯಾಸ್ಮಾಡ್ಬಿಟ್ಟಿದ್ದಾನೆ...ನಿನ್ಮೈ ಚನ್ನಾಗಿದ್ರೆ ನನಗೆ ಸಾಕಮ್ಮ...ನೀನ್ಯೋಚನೆ ಮಾಡಬೇಡಮ್ಮ...ಫೇಲಾದ್ರೆ ಮನೇಲಿಷ್ಟು ಗಲಭೆ ಗೋಳಾಟ ಆಗುತ್ತೆ ಅಂತ ಮೊದ್ಲೇ ನನಗ್ಗೊತ್ತಿದ್ದಿದ್ರೆ ಸ್ವಲ್ಪ ಚನ್ನಾಗೋದಿ ಪ್ಯಾಸ್ಮಾಡ್ತಿದ್ದೆ. ಭಯಪಡಬೇಡಮ್ಮ. ಈ ವರ್ಷ ಹೇಗಾದ್ರೂ ಮಾಡಿ... ನಿನ್ಸಂತೋಷಕ್ಕಾದ್ರೂ ಪ್ಯಾಸ್ಮಾಡ್ಬಿಡ್ತೇನಮ್ಮ.

ಭಾಗೀ : (ಮಾಧುವಿನ ತಲೆಯನ್ನು ಸವರುತ್ತಾ) ಏನೋಪ್ಪ....ಪ್ಯಾಸೋಗೀಸೋ... ಆಯುಷ್ಪೂರ್ತಿಯಾಗಿ ನೀವೆಲ್ಲಾ ಸುಖ್ವಾಗಿರೋದ್ನ ನನ್ಕಣ್ಣಿಂದಾ ನೋಡ್ತಿದ್ರೆ ನನಗದೇ ಸಂತೋಷ. ಹೋಗ್ಮಲಕ್ಕೋ ಕಂದ.

[ಅನಂತರ ಮಾಧುವು ತನ್ನ ಹಾಸಿಗೆಗೆ ಬಂದು ಮಲಗುವನು.]

[ಪರದೆಯು ಮೆಲ್ಲಗೆ ಬೀಳುವುದು—ಅನಂತರ ಏಳುವುದು.]

ಪುಟ್ಟು : (ಹಾಗೇಲೆದ್ದು ಕುಳಿತು...ಘಟ್ಟಿಯಾಗಿ ಮೂಗುಸೋಡಿ) ಇದೇನಿದೂ...ವಾಸ್ನೇ! (ಥಟಕ್ಕನೆ—ಅತಿ ಭೀತಿಯನ್ನು ತೋರಿಸುವ ಕಣ್ಣುಗಳನ್ನು ಓತ್ತಲಬಾಗಿಲಕಡೆ ತಿರುಗಿ...ಬೆಚ್ಚಿ ಬಿದ್ದದ್ದು) ಬೆಂಕಿ!...ಅಯ್ಯಯ್ಯೋ! [ದಿಗ್ಭ್ರಾಂತನಾಗಿ ತನ್ನ ಪುಸ್ತಕಗಳನ್ನು ಬಾಚಿಕೊಂಡು ಬೀದಿ ಬಾಗಿಲಿಂದ ನಿಷ್ಕ್ರಮಣ.]

ಮಾಧು : (ನಿದ್ರಾಘಾತನಾಗಿ ಎದ್ದು...ಕಣ್ಣುಗಳನ್ನು ಉಜ್ಜುತ್ತಾ...) ಬೆಂಕಿ? ಯಾರಂದದ್ದು? ...ಸ್ವಪ್ನವೆ?...ಬೆಂಕಿ? (ಸುತ್ತಲೂ ಮೂಸುತ್ತಾ ಓತ್ತಲುಬಾಗಿಲ ಹತ್ತಿರ ಓಡಿ ನೋಡಿ) ಅಯ್ಯೋ ಹೌದೇ!!...ಬೆಂಕಿ ಬಿದ್ದಿದೆ. (ಆತುರದಿಂದೆದ್ದು) ಬೆಂಕಿ!...ಅಮ್ಮಾ!...ಕೂಸು!...(ಒಳಹೊಕ್ಕು) ಅಮ್ಮಾ...ಹೆದರ್ಬೇಡಾ...ಮನೆಗೆ ಬೆಂಕಿಬಿದ್ದಿದೆ...ಕೂಸ್ನ ತಕ್ಕೊ! (ತಾಯಿಯನ್ನೂ, ಕೂಸನ್ನೂ ಕೋಣೆ ಯಿಂದ ಹೊರಕ್ಕೆ ಕರತಂದು) ಹೆದರ್ಬೇಡಮ್ಮಾ...ಮನೆ **ಹಿಂದ್ಗಡೆ** ಬೆಂಕಿ ಬಿದ್ದಿರೋದು...ಕಾಳ್ಕೋಬೇಡ ...ಧೈರ್ಯವಾಗಿರು...ನಂಜೊತೇಲ್ಲಾ...

ಭಾಗೀ : ಅಯ್ಯೋ...ನಿಮ್ತಂದೆ ಎಲ್ಲಿ ಮಗೂ!...

ಮಾಧು : ಎಲ್ಮಲಗಿದ್ದಾನಮ್ಮಾ?

ಭಾಗೀ : ಹಿಂದಿನ ಕೋಣೇಲಿ...ಈಗೇನ್ಗತಿ!...

ಮಾಧು : ಹೆದರ್ಬೇಡಮ್ಮಾ...ನೀನಿಲ್ಲಿಂದ ಕದಲ್ಬೇಡ. (ಒಳಕ್ಕೆ ಹೋಗಿ) ಅಪ್ಪಾ! ಏಳು ಏಳು! ಮನೇಗೆ ಬೆಂಕಿಬಿದ್ದಿದೆ!

ಹಿರಿ : (ಒಳಗಿನಿಂದ) ಅಯ್ಯೋ ದೇವ್ರೇ!...

ಮಾಧು : ಕಿರಿಚ್ಬೇಡಪ್ಪಾ...ನಂಜೊತೇಲಿ ಬಾ...

[ಮಾಧುವು ತಂದೆಯನ್ನು ನಡೆಸಿಕೊಂಡು ಹೊರತರುವನು...ಹೊಗೆಯು ಓತ್ತಲಬಾಗಿಲಿಂದ ಹೊರಪಡುವುದು.]

ಭಾಗೀ : (ಚೀತ್ಕಾರಮಾಡುವಳು.)

ಮಾಧು : ಹೆದರ್ಬೇಡಮ್ಮಾ...ಅಪ್ಪ ಬಂದ...

ಹಿರಿ : ಅಯ್ಯೋ! ಪುಟ್ಟು ಎಲ್ಲಿ? ಪುಟ್ಟೂ! (ಮಾಧುವನ್ನು ನೋಡಿ) ಅಯ್ಯೋ ಪಿಶಾಚಿ! ಪುಟ್ಟು ಒಳಗೆ ಸಿಕ್ಕೊಂಡಿರೋವಾಗ ಕಂಭದ ಹಾಗೆ ನಿಂತ್ಕೊಂಡಿದ್ದೀಯಲ್ಲೇ ಪಾಪಿ!

ಮಾಧು : (ಬೆಂಕಿಯು ಹೆಚ್ಚಾಗಿ ಹರಡಲು, ಕ್ಷಣಮಾತ್ರ ಹಿಂಜರಿದು ತಾಯಿಯನ್ನು ದುರುಗುಟ್ಟಿ ನೋಡಿ...) ಅಮ್ಮ...ಹೊರಗ್ಹೋಗು...ಕೂಸಿಗ್ಹೊಗೆ! (ಒಳಕ್ಕೆ ನುಗ್ಗುವನು)...(ಒಳಗಿನಿಂದ) ಪುಟ್ಟೂ, ಪುಟ್ಟೂ! ಮನೇಲಿ ಬೆಂಕಿಕಾಣೋ!...ಎಲ್ಲಿದ್ದೀಯೋ!...ಅಯ್ಯೋ!...

ಹಿರಿ : (ಹೆಂಡತಿಯನ್ನು ಹೊರಕ್ಕೆ ನೂಕುತ್ತಾ) ಹೋಗೇಹೇ! ಹೋಗೆ ಹೊರಗೆ...

[ಭಾಗೀರಥಮ್ಮ ಹೊರಡುವಳು.]

ಮಾಧು : (ಒಳಗಿನಿಂದ) ಮೈಸುಡ್ತಿದೆಯಲ್ಲಾ! (ಕಿಟಕಿಯಿಂದ) ಅಮ್ಮಾ! ಪುಟ್ಟು ಇಲ್ವಲ್ಲಾ!... ಪುಟ್ಟೂ...(ಧ್ವನಿಯು ಕ್ರಮೇಣ ಕುಂದುತ್ತಾ ಬರುವುದು.)

ಭಾಗೀ : (ಪುನಃ ಆತುರದಿಂದ ಪ್ರವೇಶಿಸಿ) ಹಯ್ಯೋ! ಜಗಲೀಮೇಲೆ ಕೂತಿದ್ದಾನಂತೆ ಪುಟ್ಟು! ಮಾಧೂನ್ಕರೀರೀಂದ್ರೆ!

ಹಿರಿ : ಪುಟ್ಟು ಇಧಾನ್ಯೇ? ಹೊರಗೆ?...ಪುಟ್ಟೂ! ಪುಟ್ಟೂ!

[ನಿಷ್ಕ್ರಮಣ—ಬೀದೀಬಾಗಿಲಲ್ಲಿ]

ಭಾಗೀ : ಮಾಧೂ! ತಿರಿಗಿಬಾ! ತಿರಿಗ್ಬಾ!...ಪುಟ್ಟೂ ಇಲ್ಲೇ ಇದಾನೆ. ಅಯ್ಯೋ! ಇದೇನ್ಗದ್ದಲಾ? (ಜನಗಳ ಗದ್ದಲವು ಕೇಳಿಬರುವುದು.)

(ಪ್ರವೇಶ—ರಾಮಾಶಾಸ್ತ್ರಿಯೂ, ನೆರೆಹೊರೆಯವರೂ)

ರಾಮಾ : ಮಿಕ್ಕೋರೆಲ್ಲಾ...ಭದ್ರವೆ?

ಭಾಗೀ : ಹಯ್ಯೋ!...ಮಾಧೂ!...

ರಾಮಾ : ಹೆದರ್ಬೇಡಿಯಮ್ಮಾ...ಎತ್ಕೊಂಡ್ಬರ್‍ತಿಧಾರೆ!

[ಪ್ರವೇಶ—ಮೂರ್ಛಿತನಾದ ಮಾಧುವನ್ನು ಹೊತ್ತುಕೊಂಡು ನಾಲ್ಕೈದು ಮಂದಿ...; ಹಿರಿಯಣ್ಣಯ್ಯನೂ ಪುಟ್ಟುವೂ ಬೀದೀಬಾಗಿಲಿನಿಂದ ಪ್ರವೇಶಿಸುವರು.]

ಎಲ್ಲರೂ : ನಿಮ್ಹುಡಗನ ಧೈರ್ಯ ಎಷ್ಟೂಂತ ಹೇಳೋಣ ಸ್ವಾಮಿ!...ಅವನೊಬ್ಬನಿಲ್ದಿದ್ರೆ ನಿಮ್ಕುಟುಂಬಾನೇ ಪಪ್ಪಾ ಆಗ್ತಿತ್ತಲ್ಲಾ! [ಮಾಧುವನ್ನು ತಾಯಿಯ ತೊಡೆಯಮೇಲೆ ಮಲಗಿಸುವರು. ಭಾಗೀರಥಮ್ಮ ಸೆರಗಿನಿಂದ ಬೀಸುವಳು.]

ರಾಮಾ : ಸ್ವಾಮಿ...ಹಿರಿಯಣ್ಣಯ್ನೋರೇ...ಈಗ್ಲಾದ್ರೂ ನೋಡಿದ್ರಾ ವ್ಯತ್ಯಾಸ?... ಪ್ಯಾಸಾದ್ರೇನು!...ಆಗ್ದಿದ್ರೇನು!...ಟೊಳ್ಳು ಟೊಳ್ಳೇ!...ಗಟ್ಟಿ ಗಟ್ಟಿಯೇ!

[ಪರದೆಯು ಬೀಳುವುದು.]

ಉತ್ತರರಂಗ

[ಪ್ರವೇಶ: ಗುಂಡೂರಾಯ]

ಗುಂಡೂ : ಸಭಿಕರಿಗೆ ವಿಜ್ಞಾಪ್ನೆ. ತಮ್ಗಳ್ನೆಲ್ಲಾ ಹೊಸ ನಮೂನೆಯಾಗಿ ಬರ್ದ ಈ ಪ್ರಥಮ ಪ್ರಯತ್ನಾನ...ನಿಮಗನಿಷ್ಟವಾಗಿದ್ದಾಗ್ಯೂ...ಕದಲ್ದಾಹಾಗೆ ಕೂಡ್ಸಿ ಕೇಳ್ಸಿದ್ದಕ್ಕೆ ಕ್ಷಮಾಪ್ನೆ ಬೇಡಿಕೊಳ್ತೇನು. ಈ ನಾಟಕ್ದಲ್ಲಿ ಚಾತುರ್ಯ ಚಮತ್ಕಾರಗ್ಳು...ರಾಗೀಕಾಳಷ್ಟೂ ಇಲ್ಲಾಂತೊಪ್ಪಿಕೊಳ್ತೇನು. ಆದ್ರೂನೂವೆ, ಒಂದ್ವಿಷ್ಯಮಟ್ಗೆ ಜನಿವಾರ ಹಿಡ್ಕೊಂಡು ಸ್ಥಾಪಿಸ್ಲೇ ಸ್ಥಾಪಿಸ್ತೇನು...ಇದರಲ್ಲಿ ಬರೋ ಜನಗಳು, ಅವರ ಸುಖದುಃಖಗಳು, ಅವರಾಡೋ ಮಾತುಗಳು, ಇವನ್ನೆಲ್ಲಾ ಎಳ್ಳಷ್ಟೂ ಹೆಚ್ಚು ಕಡ್ಮೆ ಮಾಡ್ದೆ ತದ್ರೂಪಾಗಿ ಪ್ರದರ್ಶಿಸಿದೇನು. ಈ ನಾಟಕ್ದಲ್ಲಿ 'ಎಗ್ಸಾಜಿರೇಷನ್' (Exaggeration) ಅಂತಂತಾರಲ್ಲ ಅದರ ವಾಸನೆಯೇ ಸುತರಾಂ ಇಲ್ಲ. ವಿವರಿಸ್ತೇನು ಲಾಲಿಸ್ಬೇಕು...ಮಸ್ಲಾ...ತಮ್ಮಳ್ಗೊಂದ್ವೇಳೆ ಹಿರಿಯಣ್ಣಯ್ನ ಫೇಲಾದ್ಮಗನಿಗೆ ಕೊಡೋ ಕಷ್ಟಗಳ್ನೆಲ್ಲಾ ನೋಡಿ,...ಹೆತ್ತ ತಂದೆ ಹೀಗೆಲ್ಲಾ ಹೊಟ್ಟೇಲ್ಹುಟ್ಟಿದ್ಮಗನ್ನ ಹಿಂಸಿಸೋದು ಸಹಜ್ವಲ್ಲಾ ಅಂತ ಒಂದ್ವೇಳೆ ತೋಚ್ಬಹುದು...ಮಗ ಫೇಲಾದ್ದಕ್ಕೆ ಅಪಸ್ಗಿಂಬು-ಧಾವಳಿ, ಸಾರೂ, ಅನ್ನಕ್ತುಪ್ಪ, ಮೊಸರು ಇವುಗಳ್ನೆಲ್ಲಾ ತಪ್ಸಿದ್ರೂನೂವೇ ನನಗೆ ತಿಳಿದ್ದಹುಮಂದಿ ತಂದೆಗ್ಳು ಫೇಲಾದ್ಮಕ್ಕಳಿಗ್ಮಾಡೋ ಪೂಜೇನ ತಮ್ಮಗಳಿಗೆ ವಿವರಿಸ್ಬೇ ಅಂದ್ರೆ...ಈ ಹಿರಿಯಣ್ಣಯ್ನನ್ನ ಪಾಕ ಇಳಿಸಿದ ಪಶ್ಚಾತ್ತಾಪಿಯಂತ್ಲೇ ಕೂಗ್ಬಿಡ್ತೀರಿ; ಸಂದೇಹಪಡಬೇಡಿ. ದೃಷ್ಟಾಂತ್ರಕ್ಕೆ ಹೇಳ್ತೇನು...ಲಾಲಿಸ್ಬೇಕು...ಹೆಸರುಗ್ಳು ಹೇಳಿದ್ರೆ ಜಗ್ಳ-ತಂದೆ ಸ್ವಲ್ಪ ಬಲಿಷ್ಟ-ಕೂತ್ಕೊಂಡಿದ್ದೇ ನೋಡಿ ಆಸ್ಪತ್ರೇಲಿ...ರಿಸಲ್ಟ್ಸು (Results) ಬಂದರ್ಧಘಂಟೇ ಕೂಡಾ ಇಲ್ಲ...ಹೊತ್ಕೊಂಬಂದ್ರು ಹುಡಗನ್ನ ...ಕೆಳಗಿಳಿಸುತ್ಲೂನೂವೆ...ಆ ಡಾಕ್ಟ್ರು ಅಂಗಿಬಿಚ್ಚ...ಬಾತ್ಕೊಂಡಿದ್ದು ನೋಡಿ...ಬಾಸುಂಡೆಗ್ಳು—ವಿನಾಯ್ಕಂಚೌತಿ...ಸಂಕ್ರಾಂತಿ ಎಡ್ರೂ ಪಕ್ರಿಸ್ಕೊಂಡಹಾಗೆ—ಕಡ್ಬು...ಕಬ್ಬು...ಕಬ್ಬು...ಕಡ್ಬು...

ವ್ಮೆಲೆಲ್ಲನೋಡಿದ್ರೂವೆ. ಏರ್ಪ್ಲೇನ್ ಕಾರ್ಖಾಲಿಕ್ಕೆಸ್ಟ್...ಅರ್ಧಬಂಡೆ ಹತ್ರ...ಆಸ್ಪತ್ರೆಗೆ ಏರ್ಪ್ಲೇನ್!... ಈ ಷೋಡಶೋಪಚಾರಗ್ಳೆಲ್ಲಾ...ಆ ಮಗೂಗ್ಯಾಕೇಂತ ಕೇಳ್ತೀರೋ...ಅದೆಂಥಾದ್ದು? ...ಆ ಲೆಕ್ಸ್ ...ಮ್ಯಾಟಿಕ್ಕಂತಂತಾರಲ್ಲ...ಅದರಲ್ಲಿ ಒಂದು ಮಾರ್ಕಿನಲ್ಲಿ ಹೋಯ್ತುಂತೆ...ಮರ್ಕ್ಯೋ! ಫೇಲು ಅಂತ ತಿಳೀತೂನೂವೇ ಮನೇಲ್ಲಮ್ಮಾ ಏಗ್ರಿಸ್ತಾರಂಬೋ ಭಯದಿಂದ ಭಾವೀಲ್ಬಿದ್ದು ಸತ್ತಿದ್ದಾರಂದ್ರೆ... ಎಷ್ಟೋಮಂದಿ ಹುಡುಗ್ರು!...ಹಿರಿಯಣ್ಣಯ್ಯ ಕರುಣಾನಿಧಿ! ...

ಈ ನಾಟ್ಕ ಷುರುವಾಗೋಕ್ಮುಂಚೆ...ನಮ್ಕಂಪಕ್ಕ್ರ ಸುಬ್ಬಾಚಾರ್ರುಪತ್ರ ಇದ್ದಾಬ್ರುವೇ ಅಲ್ಲ... ಇದು ಲೆಕ್ಚರ್ರು ಅಂತ ನನ್ಗಿಟ್ಟು ನಾನು ಹೇಳ್ತಿದ್ದಾಗ ತಾವುಗ್ಳೆಲ್ಲಾ ಇಲ್ಲಿದ್ದದ್ದು ನಾನು ಗಮನಿಸ್ಲಿಲ್ಲ. ಗುಟ್ಟು ಹೊರಕ್ಕೆ ಬಿದ್ದಮೇಲೆ ಬಚ್ಚಿಟ್ಕೊಂಡೇನ್ಪ್ರಯೋಜ್ನ? ಇದು ಲೆಕ್ಚರ್ರು ಅಂತ ಒಪ್ಕೊಂಡಿದ್ದೇನು. ಆದ್ರೆ ಲೆಕ್ಚರಿಗೀವೇಷಾಹಾಕಿ ನಿಮ್ಮ ಕಿವಿಗಳಲ್ತುರಿಕ್ತಿದ್ದೇಶವೇನೂ ಅಂತ್ಕೇಳ್ತೀರೋ?...ವಿವರ್ವಾಗಿ ವಿವರಿಸ್ತೇನೂ...ಕ್ಷಮಿಸಿ ಲಾಲಿಸ್ಬೇಕು. ಈ ಲೆಕ್ಚರ್ರು...ವಿದ್ಯಾಭ್ಯಾಸದ್ವಿಷಯದ್ದು; ವಿದ್ಯಾಭ್ಯಾಸಕ್ರಮಗ್ಳು. ಅವುಗಳ ಪ್ರಯೋಜ್ನಗಳು, ಮಹಿಮೆಗಳು, ಇವುಗಳಲ್ಲೆಲ್ಲಾ ನಂಗೆ ಬಹು ಪರಿಶ್ರಮವುಂಟು. ಅದ್ರಲ್ಲೂ ಈಗ ನಮ್ದೇಶ್ದಲ್ಲಿ ಇಂಗ್ಲೀಷು ವಿದ್ಯಾಭ್ಯಾಸಕ್ರಮಾಂತ್ಹೆಸರಿಟ್ಕೊಂಡು ಜರಿಗಿಸ್ತಾ ಇದ್ದೇವಲ್ಲಾ...ಆ ಕ್ರಮಾನ ಹೋಳ್ಹೋಳಾಗಿ ಹೆಚ್ಚಿ ಉಪ್ಪಿನಕಾಯ್ಹಾಕಿಟ್ಟಿದ್ದೇನೆ.—ಜಾಡೀ ಪಕ್ದಲ್ಲಿಟ್ಕೊಂಡೇ ಮಾತಾಡ್ತೇನು! ಈಗಿನ್ಕಾಲ್ದಲ್ಲಿ ನಮ್ಮನೆಗ್ಳಲ್ಲಿ ಗಂಡ್ಮಗೂ ಹುಟ್ಟುತ್ಲೂನೂವೇ ಪಂಚಾಕ್ಷರೀಜಪ ಒಂದು ಪ್ರಾರಂಭಿಸಿಬಿಡ್ತೇವು...**ಮುಂ ‥ ದ....ಕ್ಬ... ರ್ಬೇ ‥ ಕು** ಮುಂದಕ್ಬರ್ಬೇಕೂ ಅಂತ...ಮುಂದಕ್ಬರ್ಬೇಕೂ ಅಂದ್ರೇನೋ ದೇವರ್ಗೇ ಬೆಳ್ಕಂಬೆಳಕು. ಆ ಮಗನ್ನೋ ಐಂಟು ವಯಸ್ಸಾಗೋವರಿಗೂನೂ ಈ ಜಪ್ದಲ್ಲಿ ಅದ್ದೀ ಅದ್ದೀ ನೆನಸಿ, ಓದಿ ಪ್ಯಾಸ್ಮಾಡೋಕೆ ಸ್ಕೂಲಿಗೆ ಸಾಗಿಸಿಬಿಡ್ತೇವು...ಸ್ಕೂಲ್ನಲ್ಲಿ... ನಮ್ಹುಡುಗರು ಓದೋದೇನು?...ಪ್ಯಾಸ್ಮಾಡೋದಂದ್ರೇನು?...ಇವುಗಳ್ನೆಲ್ಲಾ ತಪ್ಪೀಲ್ದಾಗಿ ವಿವರಿಸ್ತೇನು ಲಾಲಿಸ್ಬೇಕು...ಸ್ಕೂಲಿನಲ್ಲಿ ಮೇಸ್ಟ್ರುಗಳು—(ಆತ್ಮಗತಂ) ಸರ್ವಜ್ಞರು! ಲೇವಡೀಗೇ ಲಾಯಕ್ಕು!— (ಪ್ರಕಾಶಂ) ಚೀನಾದೇಶದ ಚರಿತ್ರೆ! ಜಾರ್ಜಿಯಾದ ಜನಸಂಖ್ಯೆ! ಸೈಬೀರಿಯಾದ ಸಸ್ಯಾದಿಗಳು! ಅಬ್ಸೀನಿಯಾದ ಆಭರಣಗಳು!...ಇವೇ ಮುಂತಾದ, ನಮ್ಜನಗಳಿಗೆ ಬಿದ್ದು ಉಪಯೋಗವಾಗುವ ವಿಷಯಗಳ್ನ ವರ್ಷದ ಹನ್ನೆರಡ್ತಿಂಗಳಲ್ಲಿ ಹನ್ನೊಂದುತಿಂಗ್ಳು ಜಜ್ಜೀ. ಜಜ್ಜೀ. ತುರುಕಿ...ಈ ಅಮೋಘವಾದ ವಿಚಾರಗಳು ಮಕ್ಕಳ ಮನಸ್ಸಿಗೆ ನಾಟಿಥೆಯೋ ಇಲ್ವೋ ಎಂಬ ಶಂಕೆಹುಟ್ಟಿ ಅದು ಪರಿಹಾರ್ವಾಗೋದಕ್ಕೆ ಪರೀಕ್ಷೆ ಅಂತಿಡ್ತಾರೆ ಹನ್ನೆರಷ್ನೇ ತಿಂಗ್ಳಲ್ಲಿ!...ಡಿಸೆಂಬ್ರು ತಿಂಗ್ಳು...ಇಪ್ಪತ್ತಕ್ಕೊ ...ಇಪ್ಪತ್ತೊಂದಕ್ಕೂ ಬೀಳುತ್ತೆ ಪರೀಕ್ಷೆ!...ಪರೀಕ್ಷೆದಿನ ಮನೇಲಿ ಗಲಭೆಯೋ ಗಲಭೆ!...ನೆರೆ ಹೊರೆಯೋರೆಲ್ಲಾ ಮನೇಲಿ ಉದ್ಯಾಪ್ನೆ ಅಂತ ತಿಳ್ಕೊಳ್ಳೋದು!...ಅವತ್ಪಾರಣೇ ಇಲ್ಲಿ. ಇಲ್ಲಿರಲಿ, ...ಎಂಟೂವರೆ ಘಂಟೆಗಾಗ್ಲೇ ಊಟ...ಹುಡ್ಗನಿಗೆ!...ಪುಷ್ಕಳ್ವಾಗಿ ಇಂದ್ಬಿಟ್ಟು....ನಮ್ಹುಡ್ಗ... ದೇವರಿಗೆನಮಸ್ಕಾರಮಾಡ್ಬಿಟ್ಟು...ಅಮ್ಮನ ಬಾಯಿಂದ ಹರ್ಸಿಕೊಂಡು....ಅಜ್ಜಿ ಕೈಯಿಂದ ಹಣೇಗೆ ವಿಭೂತೀ ಇಡ್ಸಿಕೊಂಡು, ಹೊಡ್ತಾನೆ ನೋಡಿ...ಹುಡ್ಗ...ದಿಗ್ವಿಜಯಕ್ಕೆ!...ಜೋಂತ್ಕೇಳ್ತೇವೆ! ನೆನ್ಕೊಂಡ್ಬಂದ್ಸೇತ್ರಾನ್ಪಾಲ್ಗೆ...ಅಲ್ಲಿ ಅವನಿಗೆ ಸ್ವಾಗತ ಕೊಟ್ಟು. ...ಖೈದಿಗಳಿಕ್ಕೊಹೋ ಹಾಗೆ ಒಂದ್ನಂಬರ್ಕೊಟ್ಟು...ಮೇಜಿನ್ಮುಂದೆ ಕೂಡಿಸಿ....ಅರ್ಕಂಚಟ್ಟಿ...ತಾಂಬಾಳ...ಇವುಗಳಿಗೆ ಬದಲಾಗಿ ಬರೀ ಕಾಗದಗ್ಳು ಮೇಜಿನ್ಮೇಲೆ ಹರಡಿಟ್ಟು...ಪ್ರಶ್ನೆ ಕಾಗ್ದಾಂತ...ಕೊಡ್ತಾರಿವನ್ಕೈಲಿ!...ಅದನ್ನ... ನಮ್ಹುಡ್ಗ—ಭಕ್ತಶಿರೋಮಣಿ!—ಎದ್ನಿಂತ್ಕೊಂಡು....ಕಣ್ಮುಚ್ಕೊಂಡು....ಶ್ರೀಮನ್ನಾರಾಯಣನ್ಮೇಲೆ ಭಾರಾಹಾಕ್ಬಿಟ್ಟು....ಆ ಪೇನಾನ...ಆ ಮಸೀಲಿ ಅದ್ದ್ಕೊಂಡು ಆ ಪರೀಕ್ಷಕನ್ನಣ್ಣಗ್ಧ್ಯಾನದ್ವಾಗೆ... ಸೂಜೀ ಚುಚ್ಚೋಜಾಗ್ದಲ್ಲಿ ಶ್ರೀ ಅಂತ ಬರೆದ್ಬಿಟ್ಟು ಪ್ರಾರಂಭಿಸ್ತಾನ್ನೋಡಿ ಆ ಬರೀ ಕಾಗದ ಗಳ್ಮೇಲೆ...ವಾಂತೀ ಮಾಡೋದಕ್ಕೆ!...ಆ ಒಂದಿನ್ನನ್ನೊಂದು ತಿಂಗಳೂ...ಜಜ್ಜಿಜಜ್ಜೀ ತುರ್ಕ್ತೀವರೆಗೂ ತುರಿಕ್ಕೊಂಡ ಸಮಾಚಾರಗಳ್ನೆಲ್ಲಾ...ಆ ಮೂರು ಘಂಟೆಗಳೊಳಗೆ ಈ ಬರೀ ಕಾಗದಗಳ್ಮೇಲೆ ಬಕಬಕ ಬಕಾಂತ ಬಕಾಸುರನ್ಹಾಗ್ವಾಂತಿ ಮಾಡ್ಬಿಡ್ತಾನೆ! ಎಷ್ಟಕ್ಕಷ್ಟು ವಾಂತೀಮಾಡ್ತಾನೋ ಅಷ್ಟಕ್ಕಷ್ಟು ಗಟ್ಟಿಗಾಂತ್ಲೆಸ್ರು! ಇದೇ ಫಸ್ಟ್ಕ್ಲಾಸ್ ಅನ್ನೋದು!...ಈ ಬಕಾಸುರನ ಪ್ಯಾಸೊಂದ್ಸಲ ಮಾಡ್ಬಿಟ್ರೋ...ಇವನ್ತಲೇತಿರ್ಗಿ ಬ್ರಹ್ಮನಿಗಪ್ಪಾನೇ...ಸರಸ್ವತೀ ನನ್ಸೊಸೇಂತ

ತಿಳ್ಕೊಂಬಿಡ್ತಾನೆ! ಈ ತಲ್ತಿರುಗೋ ರೋಗ...ಈ ಪ್ಲೇಗ್...ಇನ್ಫ್ಲುಯಂಜ (Influenza) ಅಂತಂತಾರಲ್ಲ...ಹಾಗೆ ಅಂಟುರೋಗ. ಇವನು ಮನೆಗ್ಬರುತ್ಲೂನೂವೆ ಇವರಪ್ಪನಿಗೂ ಅಮ್ಮನಿಗೂ ಅಂಟ್ಕೊಂಡು,...ಅವರ ತಲೇನೂ ತಿರಿಗಿಸ್ಬಿಡುತ್ತೆ. ಈ ಇಲಾಖೆಗೆ ಸೇರಿದೋನೇ ಈ ನಾಟಕದಲ್ಲಿರೋ **ಪುಟ್ಟು!** ಇದೇ ಈ ಕಾಲ್ದಲ್ಲಿ ನಾವನುಸರಿಸ್ತಿರೋ ವಿದ್ಯಾಭ್ಯಾಸದ **ಗುಟ್ಟು!** ಹೇಳ್ತೀನೇ. ನಮ್ಹುಡುಗರ ಸ್ವಭಾವಾ ಅಂಬೋ...ಭಾವೀಲಿ, ಮನೇಲಿ ಜನ್ಮಾರಭ್ಯ ಜಪಿಸಿದ ಪಂಚಾಕ್ಷರಿ ಫಲದಿಂದ ಗುಣಗಳು ಅಂಬೋ ಬಿಂದಿಗೆ ತಂಬಿಗೆಗಳಿದ್ದವಲ್ದೇ...ಇವರನುಸರಿಸೋ ಇಂಗ್ಲೀಷು ವಿದ್ಯಾಭ್ಯಾಸಕ್ರಮಾ ಅಂಬೋ ಪಾತಾಳಗರಡೀಗೆ ಕೊಂಡಿಗ್ಳೇ ಇಲ್ಲ. ಇಂಥಾ ವಿದ್ಯಾಭ್ಯಾಸ ಕ್ರಮದ ಅನುಸರಣೆಯಿಂದ ನಮ್ಮ ದೇಶಕ್ಕಾಗೋಫಲ ಏನೂಂತ್ಕೇಳಿದ್ರೆ...ನಮ್ಮ ಪಾಠಶಾಲೆಗಳೆಲ್ಲಾ ಪುಟ್ಟೂಗಳ್ನ ತಯಾರ್ಮಾಡೋ ಕಾರ್ಖಾನೆಗಳಾಗಿ ಹೋಗಿವೆ. ಈ ನಾಟಕದಲ್ಲಿ ಹಿರಿಯಣ್ಣಯ್ಯನಿಂದ ಬೋಧಿಸಲ್ಪಟ್ಟ ಪುಟ್ಟೂಗೂ, ಭಾಗೀರಥಮ್ಮನಿಂದ ಸಾಕಲ್ಪಟ್ಟ ಮಾಧೂಗೂ ಸ್ವಭಾವದಲ್ಲಿರೋ ವ್ಯತ್ಯಾಸವನ್ನು ತಾವು ಗಮನಿಸಿರಬಹುದು. ಈಗ ನಾನು ತಮ್ಮಗಳಿಗೆಲ್ಲಾ ವಿನಯವಾಗಿ ಹೇಳ್ಕೊಳ್ಳೋದೇನೆಂದ್ರೇ...ನಮ್ಮ ಮನೆಗಳಲ್ಲಿ ಭಾಗೀರಥಮ್ಮ ಹೇಳಿದ್ಹಾಗೆ 'ಈ ಭೂಮೀಲಿ ಜೀವಿಸೋಕೆ ದೇವರಿಗೆ ಕೊಡೋ ಬಾಡಿಗೆ ಸುತ್ತಮುತ್ತಲೂ ಇರೋ ಜನರಿಗೆ ಉಪಯೋಗವಾಗಿರೋದೇ' ಎಂಬ ಉದ್ದೇಶಾನ ಮುಂದಿಟ್ಕೊಂಡು ನಮ್ಮಕ್ಳನ್ನಾಕಿ, ಗುಣಗಳನ್ನು ಬಿತ್ತಿ, ಬೆಳಿಸಿ, ಸ್ಕೂಲಿಗೆ ಕಳಿಸಿ, ಸ್ಕೂಲುಗಳಲ್ಲಿ ನಾವೀಗನುಸರಿಸುತ್ತಿರುವ ಕೊಂಡಿಇಲ್ಲದ ಪಾತಾಳಗರಡಿ ಕ್ರಮಾನ ಬಿಟ್ಬಿಟ್ಟು, ನಮ್ಮಕ್ಕಳ ಸ್ವಭಾವದಲ್ಲಿರುವ ಗುಣಗಳನ್ನು ಹೊರಕ್ಕೆ ಸೆಳೆಯುವ ವಿದ್ಯಾಭ್ಯಾಸಕ್ರಮವೊಂದನ್ನೇರ್ಪಡಿಸಿಕೊಂಡು ಅದನ್ನನುಸರಿಸಿದ್ರೇನೇ ನಮ್ಮ ದೇಶದೇಳಿಗೆ ಎಂಬೋ ನನ್ನ ಇಚ್ಛೆ ಕುಂಬಳ್ಕಾಯುಪ್ಪಿಲ್ಲಿದ್ರೂನೂವೆ ರಾಗೀಕಾಳಷ್ಟಾದರೂ ತಮ್ಮಗಳ ಮನಸ್ಸಿಗೆ ನಾಟಿದ್ಪಕ್ಷಕ್ಕೆ ನನ್ನೀ ಪ್ರಥಮ ಪ್ರಯತ್ನ ವ್ಯರ್ಥವಲ್ಲ.

[ಸಭಿಕರಿಗೆ ನಮಸ್ಕರಿಸುವನು.]

ಸಾಕೋದನ್ ಅರಿತಾತ—ಸಾವಿರಜನಕ್ ತ್ರಾತ!

ಪ್ರೋಲೀ ಕಿಟ್ಟೀ

(The story of a born scout)

ಪಾತ್ರಗಳು

ಕಿಟ್ಟಿ :		ಒಬ್ಬ 'ಫೋಲೀ'
ರಾಘು ಶಾಮಿ ಅಪ್ಪೂ ವಾಸು ಲಂಬು ರಾಮು ಮಗೂ	}	ಸ್ಕೌಟು ದಳದವರು
ಕೃಷ್ಣಪ್ಪ :		ಸ್ಕೌಟುಮಾಸ್ಟರ್
ಮನೆಯಾತ ಮನೆಯಾಕೆ	}	ಬೆಂಕಿ ಬಿದ್ದ ಮನೆಯುವರು

Chief Scout, Gentleman in attendance, Police Inspector, Policemen. Other Scouts, a Doctor, a Cyclist, an old ryot, a woman, with a child, Mother of ಮಗೂ, a child in cradle —ಇತರರು.

ದೃಶ್ಯ ೧

ಸ್ಥಳ—ಮುನಿಸಿಪಲ್ ಪಾರ್ಕಿನ ಒಂದು ಮೂಲೆ

[ಒಂದು ಬಾಯಿ ಹಾರ್ಮೋನಿಯಮ್ಮಿನಲ್ಲಿ "ಲೇರಾಮುದ್ದುಲ ಗುಮ್ಮಾ" ಊದುತ್ತಾ ಕಿಟ್ಟಿಯು ಪ್ರವೇಶಿಸುವನು. ತೆರೆಯ ಹಿಂದೆ ಒಂದು ಸ್ಕೌಟು ದಳದವರು "Sree Rama's Strength in duty" ಎಂಬ ಹಾಡನ್ನು ಹಾಡುವುದು ಕೇಳುವುದು. ಕಿಟ್ಟಿಯು ಆ ಹಾಡನ್ನು ತನ್ನ ವಾದ್ಯದಲ್ಲಿ ಬಾರಿಸುತ್ತಾ ಕಲಿಯುವನು. ಸ್ಕೌಟುದಳದವರು ಪ್ರವೇಶಿಸುವರು.]

ರಾಘು: ಯಾರೋ ಅದೂ? ನಮ್ಮ chorus ಬಾರ್‌ಸೋದು?

ಕಿಟ್ಟಿ: (ನಿಂತಿದ್ದ ಹಾಗೆಯೇ) ನಾನು (ಆತ್ಮಗತಂ) ಏನಪ್ಪಾ, ಇದ್ ತಕ್ರಾರು? (ಹಿಂದಕ್ಕೆ ತಿರುಗಿ...ಪ್ರಕಾಶ) ನಾನು (ಸ್ಕೌಟ್ ದಳವನ್ನು ಒಂದು ಕ್ಷಣನೋಡಿ...ಬಿರುಸಾಗಿ) ನಾನ್ ಕಣೋ!... (ಎರಡು ಹೆಜ್ಜೆ ಮುಂದಿಟ್ಟು) ನಿಮ್ಮಪ್ಪಾ ಕಾಣೋ!...(ರಾಘು ಸ್ವಲ್ಪ ಹೆದರಿ ಹಿಮ್ಮೆಟ್ಟುವನು. ಅವನ ದಳವೂ ಹಿಮ್ಮೆಟ್ಟುವುದು. ಕಿಟ್ಟಿಯು ಮತ್ತಷ್ಟು ಮುಂದುವರಿಯುವನು) ನಿಂ ತಾತನೋ! (ಅಂಗಿಯನ್ನು ಬಿಚ್ಚುತ್ತಾ) ನಿಮ್ ಮುತ್ತಾತನೋ!...(ತನ್ನ biceps ಕುಣಿಸುತ್ತಾ) **ಮೈನೋಡಿ ಮಾತಾಡೋ ಮುರ್‌ಗೈ !!**

[ದಳದವರು ಒಂದು ಬಾರು ಹಿಮ್ಮೆಟ್ಟುವರು.]

ಮಗೂ: (ಪಕ್ಕದವನೊಡನೆ) ಮುರ್‌ಗೈ ಅಂದ್ರೇನೋ ಅಪ್ಪೂ?

ಪಕ್ಕದವನು: ಅದು ತುರಕ್‌ನಲ್ಲಿ ಕೋಳೀಗೆ ಹೆಸ್ರೋ!

ಮಗೂ: ಹಾಗಾದ್ರೆ "ಜಂಬದ್‌ಕೋಳೀ"ಂತಿಟ್ ಹೆಸ್ರು ಹ್ಯಾಗೆ ಗೊತ್ತೋ ಇವನ್ಗೆ?

ರಾಘು: (ಮಗುವಿನ ಕಡೆ ತಿರುಗಿ) ಹೇಳ್‌ಕೊಡೋ ನೀನು... treacherous fellow! ...(ಗಟ್ಟಿಯಾಗಿ ಜೊತೆಯವರೊಂದಿಗೆ) ಒದಿಯೋಣ್ರೋ ಇವನ್ನ!

[ಕಿಟ್ಟಿಯ ಕಡೆಗೆ ಮುಂದಕ್ಕೆ ಬರುವನು.]

ಕಿಟ್ಟಿ: (ಅವನನ್ನು ಹಿಂದಕ್ಕೆ ತಳ್ಳಿ, ಅಪ್ಪುವನ್ನು ನೆಲಕ್ಕೆ ಕೆಡವಿಕೊಂಡು ಕೂಗುತ್ತಾ) ಘುಸೀಟ್ರೇ ಇಸೆ !!

ಅಪ್ಪೂ: (ನಿರೋಧಿಸುವ ಸ್ವರದಲ್ಲಿ) ಯಾಕೋ?

ಕಿಟ್ಟಿ: ಯೇ಼ ಯಾಕೋ! ಲೋ! ಹಿರಣ್ಯ ಕಶಿಪೂಗ್ ಕೂಡ ಗೈರತ್ ಇರ್ಲಿಲ್ಲ ಕಣೋ! ನರಸಿಂಹ ಹೊಟ್ಟೆ ಬಗೆದಾಗ...ಯಾಕೋಂತ್ ಸವಾಲು ಹಾಕೋಕೆ! (ನೆಲಕ್ಕೆ ಅದುಮುತ್ತಾ) ಕದಲ್ ಬೇಡವೂ ಕೇಕ್ಡಿ! (ಅವನ ಜೇಬುಗಳನ್ನು ಹುಡುಕುವನು.)

ಅಪ್ಪೂ: ಯೇನೋ ಇದು ನಿನ್ ಹಾಳು ಜಪ್ತಿ.

ಕಿಟ್ಟಿ: (ಅಪ್ಪೂವಿನ ಜೇಬಿನಲ್ಲಿದ್ದ ಸರಕನ್ನು ಬಾಯಿಗೆ ಹಾಕಿಕೊಳ್ಳುತ್ತಾ) My God! (ಆನಂದದಿಂದ) ಕಾಸ್ಟ್ರಷ್ಟಕ್ಕಿ! (ಕೆಳಗೆ ಬಿದ್ದಿದ್ದವನೊಡನೆ ಸ್ವಲ್ಪ ಅಸಹ್ಯದಿಂದ) ಏ಼ ಯಣ್ಣೇನೇನೋ?

ಅಪ್ಪೂ: ತುಪ್ಪಾ ಕಣೋ...(ಬಿಡಿಸಿಕೊಳ್ಳಲು ವ್ಯರ್ಥವಾಗಿ ಯತ್ನಿಸುತ್ತಾ)...ಬಿಡೋ!

ಕಿಟ್ಟಿ: Good !...for the body ! ಯಾರಂಗ್ಡೀದೋ?

ಅಪ್ಪೂ: ಅಲ್ಲ ಕಣೋ...ಮನೇಲಿ ಮಾಡಿದ್ದು...ನಮ್ಮಜ್ಜಿ! ಯಾಕೋ ನಿಂಗದೆಲ್ಲ?

ಕಿಟ್ಟಿ: ಅಜ್ಜ ಮಾಡಿದ್ರೋ!? ಏಕ್ ರಮಾರಮಿ ದೋಸೆಗಳು ಮಾಡ್ಲಿ ಬಿಟ್ಟೋಯ್ತೋರು... after all "ಅಜ್ಜಿಗಳ ಮುಂದೆ ಅಣ್ಣಯ್ಯಪ್ಪಗಳೇ!!"...ಲೋ! ನಿಮ್ಮ motto ಏನೋ?

ಅಪ್ಪು: (ಬಿಕ್ಕಿಕೊಳ್ಳಲು ಯತ್ನಿಸುತ್ತ)..."Be preparedoo". ಬಿಡೋ!

ಕಿಟ್ಟಿ: (ಅಪ್ಪುವಿನ ಮುಖವನ್ನು ಹಿಡಿದು ತಿರುಗಿಸಿಕೊಂಡು) ಬಿಡೋ! ಈಗ ಗೊತ್ತಾಯಿತ್ತು!... ನೀನು ರಾಮ್‌ರಾಯ್ರು ಮಗನಲ್ವೇನೋ? ಅಪ್ಪತ್ತ್ ಕಟ್ಟೇಮನೆ?... ದಿನಾ ರಾತ್ರಿ...ಮಲ್ಗೋ ಹೊತ್ತಿಗೆ ನಿಮ್ಮಪ್ಪಿಗೆ ರೀಡಿಂಗ್ ರೂಮಿಂದ Paper ತರ್ತೀಯಲ್ವೇನೋ...ಇನ್ನೇಲೆ ದಿನವೂ ..ಕಟ್ಟೆ ಮತ್ರ ನಾನೂ 'Be Prepared ಆಗಿರ್ತೇನೆ...(ಅವನನ್ನು ಒದರಿ) ಹೀಗು...ನಾಲ್ಕು...ಬಿಸಿಕಾಡ್ಡ್ತ್ರಿ... ಜೋಬೀಲ್ ಹಾಕ್ಕೊಂಡು Be Preparedoo! ಗೊತ್ತೇ! ಹೂಂ! (ಆತ್ಮಗತಂ) ಇನ್ನೇನು?... (ಪ್ರಕಾಶ) ಹೂಂ...ಆ chorus ಇನ್ನೊಂದು ಸಲ ಕಿರ್ಲ...ಕಲ್ತುಕೊಂಡ್‌ಬಿಡೋಣ!

[ಅಪ್ಪು ಕಣ್ಣೀರನ್ನು ಸುರಿಸುತ್ತಾ, ಆ ಹಾಡನ್ನು ಕಿರಲುವನು. ಕಿಟ್ಟಿಯು ಅದನ್ನು ಕೊಂಚ ಕೊಂಚವಾಗಿ ಕಲಿಯುವನು.]

ರಾಗ: ಇಂಗ್ಲೀಷ್ ನೋಟು; ತಾಳ: ಏಕ

Sree Rama's Strength in duty
ಸರಿ ಗಗ ಗಾ ರಿ ಸಾಸಾ
Sree Krishna's love devotion
ಸ ಗಾಗ ಗರಿ ಗಪಾಮ
Give unto us the Pattern of
ಗ ರೀರಿ ರಿ ಸ ರೀರಿ ರಿ
India's Perfection for e'er for e'er
ರೀ ರಿರಿ ಗಮಾಗ ರಿ ಸಾ ರಿ ಸಾ
In danger and distress
ರಿ ಗಾಗ ಗಾ ರಿಸಾ
There's none to be compared
ರಿ ಗಾ ಮ ಗಾ ರಿಸಾ
With the lads of India's Brilliant Star
ಗ ಮ ಪಾ ಪ ಪಾಪ ಪ ಮ ಗ ಮಾ
Th'lads of India's Brilliant Star
ಪಾ ಪ ಪಾಪ ಮ ಗ ರಿ ನಿ
With their motto "Be Prepared"
ದ ದ ಪಾಮ ಗಾ ರಿ ಸಾ

ಕಿಟ್ಟಿ: (ಅಪ್ಪುವನ್ನು ಎತ್ತೊಗೆಯುತ್ತಾ) ಇನ್ ಹಪರ್ಡೆ ನಿಂಮ್ ಗೂಡು ಸೇರ್ಕೊಳ್ತೀರೋ ಗುಗ್ಗುಗಳ್ರಾ!...ಇನ್ ನನ್ನಂಥ ಸಾಧುಗಳ್ನ ಸತಾಯಿಸ್ ಬೇಡ್ರೋ!

[ಹಾಡನ್ನು ಬಾರಿಸುತ್ತಾ ಹೊರಡುವನು.]

ರಾಘು: ಯೆರ್ರ್ cowardsರೋ! ಒಬ್ಬನ್ಗೆ ಹೆದರ್ಕೊಂಡು!?

ಮಂಗೂ: ನಾವೆಲ್ರೂ ಅವನ ಮೇಲೆಗರಿ ಬೀಳ್‌ಬೇಕೂಂತಿದ್ವಿ ಅದ್ರೆ ನೀನು ಹಿಂದೆ ಹಿಂದೆ ಜರಗ್ತಾ...ನಮ್ಮನ್ನೇ ಹಿಂದಕ್ಕೆ ದಬಾಯಿಸ್ತಾ back ಮಾಡುತಿದ್ರೆ ನಾವೇನು ಮಾಡ್ತೋದ್ದೋ?

ಅಪ್ಪೂ: ಲ್ರೋ! ಸಾಕ್ರೋಲ್ರೋ ನಿಂ ಸಾವಾಸ!!

ರಾಘು: ಒಳ್ಳೇ ರೋತಿ ಕಣೋ ನೀನು!...ಯಾಕೆ ಒದ್ದಾಡ್ತೀಯೋ?

ಅಪ್ಪೂ: ಯಾಕೆ!!?...ಕೈಕಾಲ್ ಮೈಯಲ್ಲಿ ಒಂದ್ ಎಮ್ಕೆ ಬಾಕಿ ಇಲ್ಲದೆ ಬಗ್ಗಿಸಿಬಿಟು ಹೋಗಿದಾನೆ—ಅವ್ನು! ನಾಚ್ಕೆ ಇಲ್ದೆ...ಅವನ್ಗೆ ಹೆದರ್ಕೊಂಡು...ಒಂದಿಷ್ಟು help ಕೊಡ್ದೆ... ಕಣ್‌ಕಣ್‌ಬಿಟ್ಟು ನಿಂತುಬಿಟ್ಟು ಈಗ ನನ್ ರೋತೀಂತ ಕೂಗಿ!...ಹೋಗ್ರೋ ಲ್ರೋ...ಹೆಣ್ಣಿಕ್ಸ್... Every one !...ಇನ್ನು ಅವ್ನು Be Prepared ಬೇರೆ ಹೇಳಿ ಬಿಟ್ಟು ಹೋಗಿದಾನೆ...ದಿನ ಅರ್ಧಾಣೆ ಹಾಕಿ ಒಂದು ಕಾರ್ಪವ್ಲಕ್ಕಿ ಘಂಡುಗಿಂಡು ಪಾಕ್ತಾಮಾಡಿದ್ರೋ...ಬದ್ಕಿದ್ರಿ!...ಇಲ್ದೆ ಇದ್ರೆ... ದೇವ್ರೇ ಗತಿ...

ಮಗೂ: ಯಾರೋ ಅವ್ನು?

ಅಪ್ಪೂ: ಕಿಟ್ಟೀನೋ ಅವನ ಹೆಸ್ರು! ಪೋಲೀ ಕಿಟ್ಟೀಂತ ನಂ ಕೇರೀಲೆಲ್ಲಾ famousoo. ತುರ್ಕರ್ ಜತೇಲೆಲ್ಲಾ ಕುಸ್ತಿ ಮಾಡತಾನವ್ನು...ಕಸಾಬರ್ ಜತೇಲಿ...ಖಬೂತರ್!...ಅಂದ್ರೇನೇ? ಪಾರ್‌ವಾಳ್ದ ಹಕ್ಕಿ ಹಾರ್ಸೋ ಪಟಿಂಗ ಕಣೋ ಅವ್ನು!

ಮಗೂ: ಏ fine bicepsಓ ಅವನ್ದು!

ರಾಘು: ಆಗ ನಮ್ಮೆಲ್ರಿಗೂ ಮೋಕ್ಕಾಮಾಡ್‌ಬಿಟ್ಟು ಹೋದದ್ದು ಮರೆತುಬಿಟ್ಟು...ಈಗ ನಾಚ್ಕೆ ಇಲ್ದೆ praise ಮಾಡ್ತಿರು ಅವನ್ನಾ! treacherous fellow !

ಮಗೂ: Praiseಏನೋ!...ಇದ್ದದ್ದು ಹೇಳ್ದೇ! ಈಗೇನು ಮಾಡೋದೂ...ಇವ್ನು ಹಿಡ್ಕೊಂಡ್ ದಿನಾ ಹೀಗೆ ಸತಾಯಿಸ್ತಿದ್ರೆ?

ರಾಘು: ನಾಳೆ ಬರ್ಲಿ...ನಾವೇಲ್ರೂ ಸೇರ್ಕೊಂಡು ನರಬಲಿ ಇಟ್‌ಬಿಡೋಣ ಅವನ್ನಾ!

ಅಪ್ಪೂ: ನಾಳೆ ನರಬಲೀನೋ...ಈವತ್ತಿನ ಹಾಗೇ!?...ಈವತ್ತು ಕಾರ್ದವ್ಲಕ್ಕಿ ಕಸ್ಕೊಂಡು ಹೋದವ್ನ ನೋಡ್ತಿದ್ರಲ್ಲೊ...ಕಣ್ ಬಾಯಿ ಬಿಟ್ಕೊಂಡು!...ಹಾಗೇ ನಾಳೇನೂ!?

ರಾಘು: ಮತ್ತೇನು ಮಾಡು ಅಂತೀರ್ರೋ? S.M. ಹತ್ರ complain ಮಾಡೋದೆ[?]

ಅಪ್ಪೂ: ಹೂಂ! complain ಮಾಡು!...ಆರುಜನ cubsoo ಸೇರಿ ಒಬ್ಬನ ಕೈಲಿ ಒದೆ ತಿಂದುಕೊಂಡುಬಂದು S.M. ಹತ್ರ complain ಮಾಡಿದ್ದು ಬೈಲಿಗೆ ಬೀಳ್ಲಿ...Brigade ಕೈಲಿ ನಗ್ಸಿ ಉಗಿಸ್ಕೊಳ್ಳಿ...!

ರಾಘು: ಮತ್ತೆ ಇಂದಿನ ಹಾಗೆ ಈ ಪೋಲಿ ಪೊಂಚುಹಾಕ್ಕೊಂಡಿದ್ದು...ಮೇಲೆ ಬೀಳ್ತಿದ್ರೆ ಏನು ಮಾಡೋದೋ?

ಮಗೂ: ಇದಕ್ಕೆಲ್ಲ ಒಂದೇ ದಾರಿ ಕಣ್ರೋ. ಅವನ್ನೂ Brigadeಗೆ ಸೇರಿಸ್ಕೊಂಡ್‌ಬಿಡೋಣ ...ಸೇರಿದಮೇಲೆ Brother scoutನ ಸತಾಯಿಸ್ದ ಹಾಗೆ ನೋಡಿ ಕೊಳ್ಳೋದು S.M. ಭಾರ! ಅದೂ ಅಲ್ದೆ ಹಾಗೊಬ್ಬ strong feller ಇದ್ರೆ (ಕಣ್ಣುಗಳಲ್ಲಿ ಸ್ವಲ್ಪ ಸಂತೋಷವನ್ನು ಸೂಚಿಸುತ್ತಾ) ...running....wrestling. Brigade sportsನಲ್ಲಿ ಒಂದು cupoo...prizeoo ಬಾಕಿ ಇಲ್ದೆ ನಂ patrolಏ ಲಪ್ಟಾಯಿಸ್ಬೋದು...

ಅಪ್ಪೂ: GOOD IDEA ಕಣೋ!

ರಾಘು: ಅವನು ಸೇರ್ತಾನೋ...ಇಲ್ವೋ...ಅದೂ ಅಲ್ದೆ ಈ hopeless ಪೋಲೀನ ನಂ ಜೊತೇಲಿ ಸೇರ್ಸಿಕೊಂಡೂ...?

ಅಪ್ಪೂ: ಅಲ್ರೋ! ನಿಮ್ಮ Scout Brigadeಗೆಸಲಾಂ! ಈಗ ಅವನ್ಸೇರಿಸಿಕೊಳ್ಳೋಕೆ ಅಷ್ಟು ಪಟ್ಕೊಂಡು ಕೂತಿರಿ. ನಾಳೆ ಅವನು (ಮುಷ್ಟಿಗಳನ್ನು ತೋರಿಸುತ್ತಾ) ಚೌಕ್ಸಲ್ಲಿ ನಿಂತ್ಕೊಂಡು ಉಂಡೆಗಳ್ ಬಟ್ವಾಡೆ ಮಾಡೋವಾಗ ನಾನು ಅಲ್ಲಿರೋಲ್ಲಪ್ಪ!

ರಾಘು: ಹಾಗಾದ್ರೆ ಏನ್ಮಾಡು ಅಂತೀರೋ?

ಅಪ್ಪೂ: ಮಗೂನ ಮೆಲ್ಲಗೆ ಕಳಿಸ್ಬಿಟ್ಟು ಅವನ್ನ ತಾರೀಫ್ ಗೀರೀಫ್ ಮಾಡಿ ಸೇರೋಕೆ ಒಪ್ಕೊಳ್ಳೋಹಾಗೆ ಮಾಡ್ಬೇಕು...ಮಾಡಿದ್ರೇನೆ ಏಡೋಚ್ನೆ ನಮ್ಗೆಲ್ಲಾ!

ರಾಘು: ಮಗೂ ಚಿಕ್ಕೋನು ಕಣೋ...ಅವನ್ಕೈಲಿ ಎಲ್ಲಾದ್ರೂ ಸಿಕ್ಕೊಂಡು...ಪಾಪ!

ಅಪ್ಪೂ: ಅದೇನು ಪೆದರ್ಕೆ ಇಲ್ಲ...ಚಿಕ್ಕೋರ ಮೇಲೇನೂ ಛಲ ಇಲ್ಲ ಅವನ್ಗೆ..."ಸಾಧುಗಳ್ನ ಸತಾಯಿಸ್ಬೇಡ" ಅಂತ ಕಿರಿಚ್‌ತಿರ್‌ತಾನೆ ಹಗ್ಲೂ ಇರ್ಲೂ!

ರಾಘು: (ಮಗುವಿನೊಡನೆ) ಹೋಗಿ try ಮಾಡ್ತೀಯೇನೋ ಗುಬ್ಬಚ್ಚಿ!

ಮಗೂ: ಹೂಂ ಕಣೋ...(ಹಲ್ಲು ಕಿರಿಯುತ್ತಾ ಪಕ್ಕಕ್ಕೆ ಸರಿಯುತ್ತಾ) ಕೋಳಿ!...ಕೋಳೀನ್ಕೋದಕ್ಕೆ ಏನಂದ ಅಪ್ಪೂ...ಮುರ್ಗ್ಗೆನ್ನೈ!

ಅಪ್ಪೂ: ಮುರ್ಗ್ಗೆ ಕಾಣೋ...ತುರಕ್ನಲ್ಲಿ ಥೇಟವ್ನು!

[ಎಲ್ಲರೂ ನಗುವರು.]

ರಾಘು: Shut up I say ! ಯಂಕೆಗಳ್ನ ಮುರಿದ್ಹಾಕ್‌ಬಿಟ್ಟೇನು ಬರೋಕೋಪಕ್ಕೆ...

ಅಪ್ಪೂ: ಓಹೋ ಕೋಪ ಬೇರೆ ಬರುತ್ತೊ ನಿಂಗೀಗ! ನನ್ನ ಕಾರ್ಬವಲ್ಕ್ಕೀನ ಕಸ್ಕೊಳ್‌ತಿದ್ದಾಗ ಗೊರ್ಕೆ...ಹೊಡೀತಿತ್ತೇನೋ ನಿನ್ಕೋಪ!...ಬರ್ರೊ ಹೋಗೋಣ ಮನೇಗೆ!

[ಸ್ಕೌಟುಗಳು ಸಾಲಾಗಿ ನಿಲ್ಲುವರು.]

ಮಗೂ: (ಕಾಡಿಸುತ್ತಾ) chorus ಷುರು ಮಾಡು ರಾಘೂ!

ರಾಘು: (ಹಲ್ಲುಕಡಿಯುತ್ತಾ) ಇನ್ನು ಅವನ್ಮಾತೆತ್ತಿದ್ರೆ...

[ಮುಷ್ಟಿಗಳನ್ನು ಬಿಗಿ ಹಿಡಿಯುವನು.]

ಮಗೂ: ಅವನ್ಮಾತು ಯಾರೋ ಎತ್ತಿದ್ದು?...ಒಳ್ಳೇ ಹುಳ್‌ಹುಳ್ಳೋ ನಿನ್ಮನಸ್ಸೂ...

ರಾಘು: ಆ ಪೋಲೀನ ಹಿಡ್ದು...ಮೆಲ್ಲಗೆ ಗಿಲೀಟ್ ಮಾಡಿ...ಸೇರೋಕೆ. influence ಮಾಡ್ತೋ?

ಮಗೂ: ಹೂನೋ!...

[ಎಲ್ಲರೂ ಹೊರಡುವರು.]

ದೃಶ್ಯ ೨

[ಸ್ಥಳ: ಬೀದಿ. Magoo surrounded by his patrol]

ರಾಘು: ಏನೋ? ನೀನು ಹೇಳೋದೊಂದೂ ಅರ್ಥ್ವಾಗೋದಿಲ್ಲ!...'ಸೇರೋದಿಲ್ಲಾಂ'ತ್ಲೂ ಅಂದಾಂತೀಯ...ನಿನ್ನ ಹಾಳ್ ಕಾರ್ಬವಲ್ಕ್ಕಿ "wasteoo ಆಗಿಲ್ಲ"...ಅಂತೀಯ. ಏನೋ ನೀನು ಹೇಳೋದರರ್ಥ?

ಮಗೂ: ಸುಧಾರ್ಸಿಕೊಳ್ತೀನೆ ಸ್ವಲ್ಪ ಇರ್ರೋ...ಓಡಿ ಬಂದಿಧೇನೆ...

ಅಪ್ಪೂ: (ಮಗುವನ್ನು ಕುರಿತು) ನಡೆದದ್ದೇನ್ ನಿಧಾನವಾಗಿ ಹೇಳೋ!...

ಮಗೂ: ನಡೆದದ್ದೇನ್ರೋ!...ಎತ್ಕೋತ ಒಂದಾಣೆ ಕಾರ್ಡ್ವಲ್ಲಕ್ಕಿ ಛಟ್ಟು...ಜೇಬಲ್ಲಿ ತುಂಬ ತುಂಬಿಕೊಂಡು...ಆ ಬೀದಿ ಕೊನೇಲಿ ಕಾದಿದ್ದೆ...ಬಂಡಿ ತುಂಬಾ ಭಕ್ಷಣ ತುಂಬ್ಕೊಂಡು ಬಕಾಸುರನಿಗೆ ಕಾದ್ಹಾಗೆ! ಬಾಯಿ ಹಾರ್ಮೋನಿಯಮ್ನಲ್ಲಿ ನಮ್ಮ ಕೋರಸ್ ಕೇಳಿಸ್ತ...ನನ್ಗೆ ಯಾಕ್ರೋಪ್ಪ!... ಅವನ biceps ಜ್ಞಾಪ್ಸಿಕೊಳ್ಳುತ್ತಿಲ್ಲ...ಕಂಬಿ ಕಿತ್ತುಬಿಡೋಣಾನ್ಸ್ತು...ಆದ್ರೆ ನೀವಿಲ್ಲಿ ನನ್ನ...ತರಾಟಿಗೆ ತಕೊಳ್ತಿರಅಂತ ನಮಗ್ಯಾನೇ ನಿಂತಿದ್ದೆ...ಬಂದಾ ನೋಡು ಭೂಪ್ತಿ...ಲೋ! ಒಳ್ಳೇ born scoutoo ಕಾಣ್ರೋ ಅವನು!...ಪಾಪ...ಜ್ವರವಂತೆ ಅವನ sisterಗೆ...ಹೋದ ಇನ್ಫ್ಲುಯೆನ್ಸ ಗಲಾಟೇಲಿ husbandನ ಕಳ್ಕೊಂಡಳಂತೆ...ಈಗ ಅವಳ್ಗೆ ಜ್ವರವಂತೆ ಮನೇಲಿ... ಔಷ್ದ ಕೊಂಡ್ಕೊಂಡು ಹೋಗ್ತಿದ್ದ...ಲ್ರೋ! ಅವನ್ಮನ್ಗೆ ಖರ್ಚಿಗೆ ದುಡ್ಡು ಹೇಗೆ ಕಮಾಯ್ಸ್ತಾನೆ ಗೊತ್ತೇ?...ಬೆಳಿಗ್ಗೆ ಆರ್ಘಂಟೇಗೆ ಹಾಜರು ರೈಲ್ವೆ ಸ್ಟೇಷನ್ನಲ್ಲಿ...Family ಜೊತೇಲಿ ಬಂದೋರ್ನ...ಗಿಲೀಟಾಗಿ ತೋಟ್ಟಪ್ಲೋರ್ ಛತ್ರಕ್ಕೆ ಕರಕೊಂಡು ಹೋಗೋದು...ಸಾಮಾನು ಗೀಮಾನು ಸಾಗ್ಸೋದು... ಊಟಕ್ಕೆ ಗೀಟಕ್ಕೆಲ್ಲಾ arrange ಮಾಡೋದು...ಈ ಬಾಬತ್ನಲ್ಲಿ ೨ ಆಣೆ ೪ ಆಣೆ ಹೀಗೆ ಸುಲ್ಕೊಂಡು ದಿಸಕ್ಕೆ ಒಂದು ರೂಪಾಯಿ ಕಮಾಯ್ಸಿ ಬಿಡ್ತಾನಪ್ಪ!...ಮನೇಲೆಲ್ಲಾ poor ಅಂತೆ ಪಾಪ! Father pensionoo ! ಬಲು sad history ಕಣ್ರೋ...(Smiling proudly) ಕುಸ್ತೀನೂ ಕಲಿಸಿ ಕೊಡ್ತಾನಂತೆ...ಅವ್ನ biceps ಹಾಗೆ ನನ್ಗೂನೂ ತಯಾರುಮಾಡಿ ಕೊಡ್ತೇನೆಂದ ಕಣ್ರೋ!

ರಾಘು: ನಿನ್ biceps ಬಲ್ತುಕೊಂಡ್ರೆ ನಮ್ಗೇನು ಬಂದಹಾಗೆ ಆಯ್ತೋ! ಹೋದ ಕೆಲ್ಸ ಏನಾಯ್ತೋ?

ಅಪ್ಪೂ: ನೀನವ್ನಿಗೆ ಕಾರ್ದ್ವಲ್ಲಕ್ಕಿ ಲಂಚಕೊಟ್ಟು ತಾರೀಫ್ ಮಾಡ್ದಾಕ್ಷಣವೇ ನಮ್ಮನ್ನ ಬಿಡ್ತಾನೇನೋ? ಅವ್ನೇನು patrolಗೆ ಸೇರ್ತಾನೋ ಇಲ್ವೋ? ಅದು ಬೊಗಳ್ಮುಂಚೆ!

ಮಗೂ: ಅವನ್ಗೇನೋ ಅಪ್ಪ...Boy Scoutಸೂಂದ್ರೆ ಬೆಂಕಿ...ಅವನು ಹೇಳಿದ್ದು ಇಷ್ಟು... 'ನಿನ್ ಸತಾಯ್ಸೋದಿಲ್ಲ...Scout ಆಗೋ ಮಾತು ಎತ್ಬೇಡ ನನ್ನ ಹತ್ರ...ನಿಂ ಜಂಬದಕೋಳಿ ನನ್ನ ಕೈಗೆ ಸಿಕ್ಲೀ' (ರಾಘುವಿನೊಡನೆ) ಅವನ್ಹೇಳಿದ್ದೋ!...'ಚಮ್ಡಾ ಯೆಗರ್ಸಿ ಚರಂಡೀಲಿ—ಅದೆಂಥಾದ್ದು?— ಸುಲಾಯ್ಸೋದಂತೆ!'...ಅದೇನ್ ಅಪ್ಪೂ?

ಅಪ್ಪೂ: ತುರಕ್ನಲ್ಲಿ ಮಲಗ್ಸೋದೋ!

ಮಗೂ: ಹೂಂ, ಅದ್‌ಮಾಡ್ತಾನಂತೆ ನಿನ್ಗೆ!

ರಾಘು: (in nervous tones) ಅಲ್ಕಣೋ. ಒಂದಾಣೆ ಕಾರ್ದ್ವಲ್ಲಕ್ಕಿ ಮಾಡಿಸಿಕೊಟ್ಟು ನಿನ್ನ ಕೈಲಿಟ್ಟು...ಈಗ ನನ್ನ ಚಮ್ಡಾ!?...ಹೂಂ! ಒಳ್ಳೇ treacherous fellow ಕಣೋ ನೀನು...ಬರೋ ಕೋಪದಲ್ಲಿ! (ಹೊಡೆಯುವವನಂತೆ ಮಗುವಿನ ಬಳಿ ಬರುವನು.)

ಅಪ್ಪೂ: (ರಾಘುವನ್ನು ಹಿಂದಕ್ಕೆಳೆಯುತ್ತಾ) ಹುಷಾರೋ ಲೋ ಮುಚ್ಚು!...ಇನ್ನು ಅವನ್ಹೋಗಿ ಆ ಪೋಲಿ ಹತ್ರ ನೀನು ಹೊಡೆದೇಂತ ಚಾಡಿ ಹೇಳಿ...ಛೂ ಬಿಟ್ಟುಬಿಡ್ಲಿ ನಿನ್ ಮೇಲೆ...ಅವನು ಮೊದಲೇ ನಿನ್ನ ಚಮ್ಡಾನೆಗರ್ಸಿ ಚರಂಡೀಲಿ ಸುಲಾಯ್ಸೋ ಮಾತೆತ್ತಿದಾನೆ...!?

ರಾಘು: (ಹಿಂದಕ್ಕೆ ಸರಿಯುತ್ತಾ) ಹೌದೋ! ಮರ್ತಿದ್ದೆ...(ದಳದವರನ್ನು ಕುರಿತು ರುಗ್ಣ ಸ್ವರದಿಂದ) ಈಗ ನೋಡ್ರೋ ತಕ್ರಾರು! ಅವನಿಗೆ ಹೆದರ್ತಿದ್ದವ್ರ ಜೊತೇಲಿ...ಈ ಗುಬ್ಬಚ್ಚೀಗೆ ಘಾಬ್ರಿ ಬೀಳಬೇಕಾಗಿದೆಯಲ್ಲೋ!?

ಮಗೂ: (ಹಲ್ಲು ಕಿರಿದು) ಅಪ್ಪೂ! ಲೇ! ಈ ಕಾರ್ದ್ವಲ್ಲಕ್ಕಿ ನಿಮ್ಮಜ್ಜಿ ಕೈಲಿ special ಆಗಿ ಮಾಡ್ಸಿದ್ದೊಂದೇ...ಅದಕ್ಕೆ ನಿಮ್ಮಜ್ಜೀಗೊಂದು message ಕೊಟ್ಟಿದ್ದಾನೋ ಅಪ್ಪೂ!

ಅಪ್ಪೂ: (ಕಾತರದಿಂದ) ಏನೋ ಅದು ?

ಮಗೂ: "ಇಷ್ಟೊಷ್ಟು ದಿನ old fashioned ಕಾರ್ಯಕ್ರಮಗಳ್ನೆ ಮಾಡುತಿದ್ದೋರು ನೀವು? ಸಾಯೋಕೆ ಮುಂಚೆ ಒಸ್ಲೆ up-to-date ಆಗಿ ಹಲ್ಲ ಧೂರೋಟು. ದೂದ್ಪೇಡ ಪಾಸ. ನಿಮ್ಮ ಮೊಮ್ಮಗನಿಗೆ 'ಬಿಲಾಯ್ತಿ' ಅಂದ್ರೆ—ತಿನ್ನೋದು—ಅಲ್ವೇನೋ?...ದೂಂ ಬಿಲಾಯ್ತಿ ಸಂತೋಷ ಮಾಡೋದು ಯಾವಾಗಾ" ಅಂತಂದಾಪ್ಪ...ತಕೊಂಡು ಹೋಗಿ ತಲ್ಪಿಸು ಬಿಡೂಪ್ಪ messageನ!

ಅಪ್ಪೂ: (ತೀವ್ರವಾಗಿ ಆಲೋಚಿಸಿ, ರಾಘುವಿನೊಡನೆ) ರಾಘೂ ಧೊಂರೋಟೂನ್ನೂತ್ತೇ ಒಂದು idea strike ಆಗುತ್ತೆ ಕಣೋ! ಆ ಪಟಿಂಗನ್ ಸೇರಿಸ್ಕೊಳ್ಳೋಕೆ ಇನ್ನೂ ಒಂದು chance ಇದೆಯೋ...ಆದ್ರೆ (ಸಂಶಯ ಸೂಚಿಸುತ್ತಾ) ನೀನೇನ್ ಹೇಳ್ತೀಯೋ?

ರಾಘು: ನಾನು ಹೇಳೋದೇನೋ...ಬೊಗ್ಳೋ...ತೋಚಿದ್ನ.

ಅಪ್ಪೂ: ಹಾಗಾದರೆ ಸೊಲ್ಪಿರೋ...(ಮಗುವಿನೊಡನೆ) ಲೋ ! ಕಿಟ್ಟಿ ಯಾವಾಗ್ಲೋ ಅವನ್ನ ನೋಡೋದು ?

ಮಗೂ: ಓಹೋ ! ಹೌದಪ್ಪ...ನಿಮ್ಮನ್ warn ಮಾಡೋಕೆ ದುತ್ತು ಬಿಟ್ಟಿದ್ದೆ "ಇನ್ನೊಂದು five minitiuesನಲ್ಲಿ ಈ ದಾರೀಲೇ ಬರ್ತೇನೇ...ನಿನ್ನ meet ಮಾಡ್ತೇನೇ"ದ ! (ದಳದವರೆಲ್ಲರೂ ಓಡಲು ಸಿದ್ಧವಾಗುವರು, ಅಪ್ಪೂ, ರಾಘು, ಅವರನ್ನು ಹಿಡಿದು ನಿಲ್ಲಿಸುವರು...)

ರಾಘು: ಸ್ವಲ್ಪಿ ರ್ರೋ ಪೆಣ್ಣಕ್ಸ್ ! – (ಅಪ್ಪೂವಿನೊಡನೆ) ಅದೇನೋ ನಿನ್ನ idea ಬೊಗಳೋದಾದ್ರೆ ಬೇಗ ಬೊಗ್ಳೋ...

ಅಪ್ಪೂ: ಈಗ್ನೋಡು ! ಈ ದಂರೋಟು. ದೂದ್ಪೇಡ. ಹಲ್ವಾಂದ್ರೆ ಅವನಿಗ್ ಪ್ರಾಣ... ಅವನು ಬರುತ್ಲೂನೂವೆ ಒಬ್ರೂ ಗಮನಿಸ್ಬೇಡಿ...ನಿನ್ ಕೇಳ್ತೇನೆ "ಆ ಹೋದ್ rallyಗೆ ಡೆಲ್ಲಿ ಯಿಂದ ದೂದ್ಪೇಡ ತರಿಸ್‌ಕೊಟ್ರಲ್ಲಾ ಸ್ಕೌಟುಗಳಿಗೆಲ್ಲಾ. ಇನ್ನಾ ಬರೋ rallyಗೆ ಏನ ತಲ್ಪಿ ಕೊಡ್ತಾರೋ" ಅಂತ ನಿನ್ನ ಕೇಳೋತ್ಲೂನೂವೆ. ನೀನು "ಬೊಂಬಾಯಿಯಿಂದ ಬಾದಾಮಿ ಹಲ್ವಾ ತರ್ಸ್‌ತಾರಂತೇ"ನ್ನು. ಆಗ ಮಗೂ. ನೀನೂ "ಲ್ರೋ ಹೀಗೆ ಮೂರ್‌ಮೂರ್ ಟಿನ್ ಮಿಠಾಯಿ ಒಬ್ಬೊಬ್ಬ ಸ್ಕೌಟ್ಗೆ ಕೊಡ್ತಾ ಬರ್ತಾರಲ್ಲ rallyಲಿ Chief Scoutoo-ಬಲು ಖರ್ಚಾಗಬೇಕಲ್ವೇ" ಅನ್ನು...ಅದಕ್ಕೆ ನಾನು..."ಯುವರಾಜರ್ಗೇನಪ್ಪ ಮೂರ್ ಟಿನ್ನಲ್ಲಿದ್ರೆ ಮೂವತ್ ಟಿನ್ ಕೊಡ್ತಾರೆ. ಖುಷಿ ಬಂದ್ರೇ" ಅಂತೇನೆ...ಇಷ್ಟೊತ್ತಿಗ್ತವನ್ಬಾಯಲ್ಲಿ ನೀರು ಕರ್ಗಿ. ಬಂದು ಬಿಡ್ತಾನೆ ನಂದಾರೀಗೆ. ನನಗೆ ತಿಳಿದ ಮಟ್ಟಿಗೂ ಇದೊಂದೇ ದಾರಿ ಅಪ್ಪ ! ಏನು ಹೇಳ್ತೀಯಾ ?

ರಾಘು: ಹೇಳೋದೇನು, try ಮಾಡೋಣ್ವೋ !

ಅಪ್ಪೂ: ಹಾಗಾದರೆ ಚೆನ್ನಾಗಿ rehearse ಮಾಡಿ ಬಿಡೋಣ ಒಂದೆರಡು ಸರ್ತಿ...

[ಎಲ್ಲರೂ ಈ ಮಾತುಗಳನ್ನು ಸರಿಯಾಗಿ ಮೂರು ಸಲ ಅಭ್ಯಾಸ ಮಾಡಿಕೊಳ್ಳುವರು. ಬಾಯಿ ಹಾರ್ಮೋನಿಯಂ ಶಬ್ದ ಕೇಳುತ್ತಲೇ ತಮ್ಮ ತಮ್ಮ ಸ್ಥಾನಗಳಲ್ಲಿ ನಿಲ್ಲುವರು: ಪ್ರೋಲೀ ಕಿಟ್ಟಿಯು chorus ಬಾರಿಸುತ್ತಾ ಪ್ರವೇಶಿಸುವನು; ದಳದವರು ಅವನಕಡೆ ನೋಡದೆ ನಿಂತಿರು ವರು.]

ಕಿಟ್ಟಿ: (ಆತ್ಮಗತಂ) ಓಹೋ ! ಇದೇನಿಲ್ಲಿ ಜಮಾಯ್ಸಿದೆ...ಪಟಾಲಂ...ಯುದ್ಧಕ್ಕೆ ಗಿದ್ಧಕ್ಕೆ ಹೊರ್ಡ್‌ತಾರೇನೋ ಕಾಣೆ...

ಅಪ್ಪೂ: ರಾಘೂ, ಹೋದ rallyಗೆ ನಮ್ಗೆಲ್ಲಾ ದೂದ್ಪೇಡ ದೆಲ್ಲಿಯಿಂದ ತರ್ಸ್‌ಕೊಟ್ರಲ್ಲಾ ...ಅದ್ನ ಜ್ಞಾಪಿಸ್‌ಕೊಂಡ್ರೆ...ನನ್ನ ಬಾಯ್ಲಿ ಈಗ್ಲೂ ನೀರು ಬರುತ್ತೆ...

ಕಿಟ್ಟಿ: (ಆತ್ಮಗತಂ) ಅದು ಕೇಳುತ್ಲೂ ನನ್ನ ಬಾಯಲ್ಲೂ ನೀರು ಬರುತ್ತೆ...ದೂ ದ್ಪೇ ಡ!... ತಕೋ!...rallyಲಿ ಕ್ಕೊಟ್ರೋ ಇವ್ರಿಗೆ? [ಸದ್ದಿಲ್ಲದೆ ಪೆಟ್ರೋಲಿನ ಹಿಂದೆ ಬಂದು ನಿಂತು ಅವರ ಮಾತನ್ನು ಗವುನಿಸುವನು]...

ಅಪ್ಪೂ: ಇನ್ನು ಬರೋ rallyಗೆ...ನಮ್ಗೆಲ್ಲಾ...ಏನ್ ಕೊಟ್ಟಾರೂ...ರಾಘೂ?

ರಾಘು: ಬೊಂಬಾಯಿಂದ ಬಾದಾವ್ ಹಲ್ವ ಬರತ್ತಂತೆ [ಅಪ್ಪುವು ಮಗುವನ್ನು ಚಿವುಟಿ "ಹೇಳೋ" ಎಂದು ಅವನ ಕಿವಿಯಲ್ಲೂದುವನು.]

ಮಗೂ: ಲ್ರೋ!...ಹೀಗೊಂದೊಂದು rallyಗೂನೂ ಒಬ್ಬೊಬ್ಬ ಸ್ಕೌಟ್‌ಗೂನೂ... ಮೂರ್‌ಮೂರ್ ಸೀಮೆಯೆಣ್ಣೆ ಟಿನ್ ತುಂಬ ಮಿಠಾಯಿ ಕೊಟ್‌ಬಿಡ್ತಾರಲ್ಲಾ...ಬಲು ಖರ್ಚಲ್ವೇನೋ Highnessಗೇ...?

ಅಪ್ಪೂ: ಅವರಿಗೇನಪ್ಪಾ?...ಖುಷಿ ಬಂದ್ರೆ ಮೂವತ್ ಟಿನ್ ಕೊಡ್ತಾರಪ್ಪ!

ಕಿಟ್ಟಿ: (ಆತ್ಮಗತಂ) ಓಹೋಹೋ! ತಕೋ! ಮೂರ್ ಮೂರ್ ಟಿನ್ನೋ! ತಕೋ! ದೂದ್ಪೇಡ, ಬಾದಾವ್ ಹಲ್ವ!!...ಹಾಗಾರೇನೋ sense ಇದೆ Boy Scout movementನಲ್ಲಿ! ಈಗ ಅರ್ಥ್ವಾಯ್ತು...ಯಾಕಪ್ಪಾಂತ್ ಇದ್ವ...ಹಿಂಡ್ ಹಿಂಡಾಗಿ ಸೇರ್ಕೊಂಡಿದ್ಧಾರೆ ಈ ಕುರಿಮರಿಗ್ಳೂಂತ... ಓಹೋ! ಮೂರ್ ಮೂರ್ ಟಿನ್ನು ಮಿಠಾಯಿ! My God! (ಪ್ರಕಾಶ) ಲ್ರೋ! ಈ ರ್‍ಯಾಲೀಂತಿರಲ್ಲ, ಈ ಮಿಠಾಯ್ ಬಟ್ವಾಡೆ...ಇದಕ್ಕೆ ಎಷ್ಟ್ ವರ್ಷ ಸರ್ವಿಸ್ ಹಾಕ್ಬೇಕೋ...ನಿಮ್ಮ Scout ಬಾಬತ್ ನಲ್ಲಿ?

ಅಪ್ಪೂ: (ರಾಘುವಿಗೆ aside) ನೀನು ಬಾಯಿ ಬಿಡ್ಬೇಡ...ನಾನು manage ಮಾಡ್ತೇನೆ... (ಕಿಟ್ಟೀಗೆ) (aloud) service ಏನೋ...Brigadeಗೆ ಸೇರುತ್ಲೂನೂವೆ...ಎಲ್ರೂ ಒಂದೇ!

ಕಿಟ್ಟಿ: (ಮಗುವಿಗೆ) ಮಗೂ! ಲೋ! ಈ ಸೀಮೆಯೆಣ್ಣೆ ಟಿನ್ನೊಂದ್ಯಲ್ಲ...ಈ ಮೂರ್‌ಮೂರ್ ಟಿನ್ನುಗ್ಳೂ ನಾವೇ ಪಾಕ್ತಾ ಮಾಡ್ಕೊಂಡು ಹೋಗ್‌ಬೇಕೋ rally rally ಗೂನೂ?... ನಮ್ಮನೇಲ್ ಕೈಯೆಣ್ಣೆ ಕಣೋ ದೀಪಕ್ಕೆ...

ಅಪ್ಪೂ: (ಮಗುವಿಗೆ) ಅವರೇ ಕೊಡ್ತಾರೇನ್ನೋ ಬೇಗ...

ಮಗೂ: (ಕಿಟ್ಟಿಗೆ)—ಅವರೇ ಕೊಡ್ತಾರೋ!

ಕಿಟ್ಟಿ: (ರಾಘು ಬಳಿಗೆ ಬಂದು)...ಲೇ ಜಂಬದೋಕ್ಕ...ಅಲ್ಲ Commanderರೋ...ಏನ್ ನೀನು? ಕರ್ನಲ್ಲೋ? ಜರ್ನಲ್ಲೋ? majorರೋ?...ಇನ್ಮೇಲೆ ನಿಮ್ಮನ್ನ ಸತಾಯ್ಸೋದಿಲ್ಲ ಕಣೋ... ನನ್ನೂವೆ (ಆತ್ಮಗತಂ) ಈಗ್ ಸ್ವಲ್ಪ ಥರಾಯ್ಸೋದು ಮೇಲು...(ಪ್ರಕಾಶಂ) ನಿಮ್ಮಗುಂಪ್ಗೆ...ದಾಖಲ್ ಮಾಡಿಕೊಳ್ರೋ...(ರಾಘುವು ಹಿಂಜರಿಯುವುದನ್ನು ಕಂಡು) ಇಲ್ದಿದ್ರಪ್ಪ...ನಾನೊಂದೇ ಮಾತ್ನಲ್ಲಿ ಹೇಳ್ಬಿಡ್ತೇನೆ ನೋಡಿ...ನನ್ನೂ ಸೇರಿಸ್ಕೊಳ್ದೇ ಹೋದ್ರೋ...ನಿಮ್ಮ್ಗೊಳ್ಳೇದಲ್ಲ...ಮೈಗೆ... ಬುರುಡೇಗೆ...ಚಮ್ಡಕ್ಕೆ ಒಳ್ಳೇದಲ್ಲಾ...ನಿಂ ತಬಿಯತ್ತಿಗೆ ತಕ್ಷೀಪು...ತಿಳಕೊಳ್ಳೀಪ್ಪ...

ಅಪ್ಪೂ: ಅದಕ್ಕೇನು ಕಿಟ್ಟೀ...ಸೇರು...ಸೇರು (ಕಿಟ್ಟಿಯ ಕೈ ಹಿಡಿದು) ರಾಘೂ! ನಂಕಿಟ್ಟೀ... ಸ್ವಲ್ಪ roughoo ಅಷ್ಟೇ...ಆದ್ರೆ ಒಳ್ಳೇ fine fellow ಕಣೋ...ನಿನ್ಗಿನ್ನೂ ಗೊತ್ತಿಲ್ಲ... kind heartedoo ಅವನು...ಅವನು ಹೇಳೋ ಹಾಗೆ...ಅವನ್ ಸೇರಿಸ್‌ಕೊಂಡ್ರೆ...ನಮ್ಗೆಲ್ಲ... ಒಳ್ಳೇದು...

ರಾಘು: (ನಗುವನ್ನು ತಡೆದು) ಹಾಗಾರೆ ಬರ್ರೋ...S.M. ಹತ್ರ ಹೋಗೋಣ (ಕಿಟ್ಟಿಯ ಕೈ ಹಿಡಿದು) Come on Kitty, dear boy!

ಕಿಟ್ಟಿ: ತಕೋ! Dear boy ಆವಾಗ್ಲೇ! ಲ್ರೋ! ಇನ್ನು ಯಾರೋಲ್ರೋ...! S.M. ಅನ್ನೋದು...Scout Major?...ನಿಂ commanderರೋ? ಸೊಂಟದಲ್ಲಿ ಏನಾದ್ರೂ sword ಗೀರ್ಡ್ರು ಸೆಕ್ಸಿಕೊಂಡಿರ್ತಾರೇನೋ?

ಅಪ್ಪೂ: ಇಲ್ಲ, ಕಣೋ...Sword ಸಾಣೇಗೆ ಕಳ್ಸಿದಾರೆ...ಬಾರೋ. ಹೋಚ್ಚೆ ಬಾ (ಇತರ ಸ್ಕೌಟುಗಳಿಗೆ) ಬರ್ರೋ...ಎಳಕೊಂಡು ಹೋಗ್ಬಿಡೋಣ...ಇದೇ chanceoo...

[ಸ್ಕೌಟುಗಳಿವನನ್ನು ಎಳೆಯುವರು.]

ಕಿಟ್ಟಿ: (ನಗುತ್ತಾ) ಲ್ರೋ? ಇದೇನೋ ಮೆಲ್ಲಗೆ ಗಿಲೀಟ್ ಮಾಡಿ ಯಾರಪತ್ರ ಎಳ್ಕೊಂಡು ಹೋಗ್ತೀರೋ ಏನೋ...ಏನ್! ಬಲೀ ಗಿಲೀ ಕೊಡ್ತೀರೇನ್ರೋ! ದೇವ್ರಿಗೇ ಗೊತ್ತು.

ಮಗೂ: (ಆನಂದದಿಂದ) ಕಿಟ್ಟೀ...ನಂ Brigadeಗೆ Band master ಆಗಿಹೋಗೋ ನೀನುಬಾರ್ಸು chorus...ನಾವೆಲ್ಲರೂ ಬಾಯಲ್ಲಿ ಕಿರ್ಚ್‌ತಾಬರ್ತೇವೆ ಜೊತೇಲಿ...ರಾಘೂ! chorus ಷುರುಮಾಡು.

["Sri Rama's Strength in duty" ಎಂಬ ಹಾಡನ್ನು ಹಾಡುತ್ತಾ ಕಿಟ್ಟಿಯನ್ನು ಎಲ್ಲರೂ ಎಳೆದೊಯ್ಯುವರು. ಕಿಟ್ಟಿಯು ಆ ಹಾಡನ್ನು ಬಾಯಿ–ಹಾರ್ಮೋನಿಯಮ್ಮಲ್ಲಿ ಬಾರಿಸುತ್ತಾ ಅವರೊಂದಿಗೆ ಹೊರಡುವನು.]

ದೃಶ್ಯ ೩

[ದೊಡ್ಡದಾದ ಸೌದೆಯ ಹೊರೆಯೊಂದನ್ನು ತಲೆಯಮೇಲೆ ಹೊತ್ತುಕೊಂಡು ಒಬ್ಬ ಮುದುಕನು ಪ್ರವೇಶಿಸಿ, ಮುಗ್ಗರಿಸುತ್ತಾ ಬೀದಿಯ ಮಧ್ಯದವರೆಗೂ ಬಂದು, ಬಲ ಸಾಲದೆ ಹೊರೆಯನ್ನು ಕೆಳಗೆ ಹಾಕಿ ಅದರಮೇಲೆಯೆ ಊರಿಕೊಂಡು ಸುಧಾರಿಸಿಕೊಳ್ಳುತ್ತಿರುವನು. ದೂರದಲ್ಲಿ ಪೋಲೀಸ್ ಸ್ಟೇಷನ್ನಿನಲ್ಲಿ ಎಂಟುಗಂಟೆ ಹೊಡೆಯುವುದು ಕೇಳಿಬರುವುದು. ಕಡೆಯ ಗಂಟೆಯಾಗುವುದಕ್ಕೆ ಸರಿಯಾಗಿ ಅವಸರದಿಂದ ಕಿಟ್ಟಿಯು ಪ್ರವೇಶಿಸುವನು.]

ಕಿಟ್ಟಿ: ತಕೋ! ಶನಿ! ಇಲ್ಲೇ ಎಂಟಾಗ್‌ಹೋಯ್ತು...ಇನ್ನು ಡ್ರಿಲ್ಲಿಗೆ ಹೋಗೋಷ್ಟರಲ್ಲಿ ಬಲು lateoo (ಸೌದೆಯ ಹೊರೆ ಮೇಲೂರಿಕೊಂಡಿರುವ ಮುದುಕನ ಮೇಲೆ ಬೀಳುವಂತೆ ನಟಿಸಿ) ಏನಯ್ಯಾ ಇದು?—ಇದೇನು ಜನಗ್ಳು ಹೋಗೋ ರಸ್ತೇನೋ...ನಿಮ್ಮನೇ ಜಗ್ಲೀನೋ?...ಸರ್ಕಾರ ರಸ್ತೇನ ಸೌದೆಮಂಡಿ ಮಾಡ್‌ಕೊಂಡು ಕೂತುಬಿಟ್ರೆ ನೀನು...ಸಂಚಾರಮಾಡೋದು ಹ್ಯಾಗಯ್ಯಾ ಜನಗ್ಳು?...

ಮುದುಕ: ಇಲ್ಲಾ...ದೂರ್ದಿಂದ ಒತ್ಕೊಂಬಂದಿದ್ದೆ ಸೌದೇನ...ದಣದ್ಬಿಟ್ಟೇ ಬುದ್ಧೀ...ಕಟ್ಟೀಳ್ಸಿ ಸುದಾರ್ಸಿಕೊಳ್ತಿದ್ದೆ.

ಕಿಟ್ಟಿ: (ಮುದುಕನನ್ನು ಆಪಾದಮಸ್ತಕವೂ ದುರದುರ ನೋಡುತ್ತಾ) ಅಲ್ಲಯ್ಯ?...ಒಳ್ಳೆ ಜಾಪ್ರಹುಳದ ಹಾಗೆ ಮೈ ಇಟ್ಕೊಂಡು...ಇಷ್ಟು ದೊಡ್ಕಟ್ ಸೌದೇನ ಎಷ್ಟುದೂರ ಹೊರ್ತೀಯ?...

ಮುದುಕ: (ಬೀದಿಯ ಕೊನೆಯನ್ನು ತೋರಿಸುತ್ತಾ) ಆ ಕೊನೇಲಿರೋ ಸೌದೆ ಮಂಡೀಲಿ ಇದನ್ಹಾಕ್ಬಿಟ್ಟು...(ಬೀದಿಯ ಮತ್ತೊಂದು ಕೊನೆಯನ್ನು ತೋರಿಸಿ)...ಆ ಅಸ್ಪತ್ರೆಕಟ್ಟೇ ಮೇಲೆ ಇನ್ನೊಂದು ಕಟ್ ಇಳ್ಸಿದ್ವಿ...ಅದ್ನೂವೇ ತಂದ್ ಮಂಡೀಗೆ ಸೇರ್ಸಿದ್ರೆಸೆ...ನಮ್ಮನೇಲಿ ಇಟ್ಟು ಎಲ್ರಿಗೂನು ಇವತ್ತು!

ಕಿಟ್ಟಿ: ಈವತ್ತಿನ ಪಿಟ್ಟೆರ್ಲಿ...ನೆನ್ನೇ ಪಿಟ್ಟು? ಮತ್ತೆ ನಾಳೇ ಪಿಟ್ಟು?...

ಮುದುಕ: ಇಂಗೇನೆ ನನ್ನೊಡೆಯಾ! ನಮ್ಮಳ್ಳೀಲ್ ಕಟ್ಗೆ ಒಡ್ದಿಟ್ಕೊಂಡು...ಜೆಣಾ... ಎರಡ್‌ಕಟ್ಟು...ಮುಂಡೀ ಸೇರ್ಸಿದ್ರೇನೆ...ಸನ್ನೆಂಡರ್ಗ್ಗೂ...ಐಕಳ್ಗೂ...ಒಟ್ಟೆ ತುಂಬೋದು... ನನ್ನೊಡ್ಯಾ...

ಕಿಟ್ಟಿ: (ಕಟ್ಟನ್ನೆತ್ತಿ ನೋಡುತ್ತಾ) ಅಲ್ಕಣಯ್ಯಾ...ಇಂಥಾ ಕಟ್ನಲ್ಲ್ ಎರ್ಡ್‌ರ್ಡು ನಿಂ ಹಳ್ಳಿಯಿಂದ ದಿನಾ ಹೊತ್ಕೊಂಡ್ ಬರ್‍ತಿದ್ರೆ ಇನ್ನೆಷ್ಟು ದಿನಕ್ಕಯ್ಯಾ ತಡೆಯೋದು...ನಿನ್ನೀ ಕೈಗಳೂ ಕಾಲುಗ್ಳೂ... ಒಳ್ಳೆ ಹಂಚೀಕಡ್ಡಿ ಜೋಡ್‌ಸಿದ್ ಹಾಗಿದೆಯಲ್ಲಾ ನಿನ್ ಜಿಸ್ಮು! ಇಷ್ಟು ಮುದ್ಕಾ ನೀನು...ಏನು ಸುಮಾರು ಎರ್ಡ್‌ಸಾವಿರ ವಯಸ್ಸಿರಬಹುದು ನೋಡಿದ್ರೆ!...ಕೆಲ್ಸಮಾಡೋಕೆ ಗಂಡು ಮಕ್ಳಿಲ್ವೇ ನಿನ್ಗೇ?

ಮುದುಕ: (ಒಣಗಿದ ಸ್ವರದಿಂದ) ಇದ್ರೂ ಬುದ್ದಿ...ಮೂರುಜನ ಪಾಯ್ದೋರು...ಒಬ್ ದೊಡ್ಡಳಿಯನೂ ಇದ್ದ...ಒಂದು ವಾರ್ದಲ್ಲಿ ನಾಕ್ ಜನಾನ್ನು ಕಳ್ಕೊಂಡೇ ಬುದ್ದೀ...ದೊಡ್ಮಾರಿ ಬಾಯಿಗೆ ತುತ್ತಿಟ್ಟು...

ಕಿಟ್ಟಿ: (ಅಣಕಿಸುವುದನ್ನು ಬಿಟ್ಟು) ನಾಕುಜನಾನು! ಒಂದು ವಾರ್ದಲ್ಲೇ!...ಮಾರೀ ಬಾಯಿಗೆ ತುತ್ತಿಟ್ಟು! ಯಾವ ಮಾರೀಗಯ್ಯಾ?

ಮುದುಕ: ಯಾವ್ದೇನು ಬುದ್ದಿ!?...ಬಂದಿರಲಿಲ್ವಾ...ಆ ದೊಡ್‌ಜರ...ಒಂದುಮನೆ ಬಿಡ್ದೆ ಕಣ್ಣೆದಿರ್‍ಗೆ ನುಂಗ್‌ಕೊಂಡೋಯ್ತಲ್ಲಾ ಮಕ್ಕಳೂ ಮರೀನೂವೆ...ಮಕ್ಳೂ...ಓದ್ರು ನನ್ನಳಿಯಾನೂ ಓದ...ನನ್ ಸೊಸೆಗ್ಳೂ...ನನ್ನ ಮಗ್ಳೂ...ಅವರ ಐಕ್ಳೂ ಎಲ್ಲರ್ಗೂ...ನಾನ್ ದುಡ್ದ್ ಆಕ್ದ್ರೇನೆ ಒಟ್ಟೆ ತುಂಬೋದು...

[ಕಿಟ್ಟಿಯು ತನ್ನ ಮನೆಯಲ್ಲಿ ಇನ್‌ಫ್ಲುಯೆಂzಾ ಸಾವುಗಳನ್ನು ನೆನೆಸಿಕೊಂಡು ಅಳುವುದಕ್ಕೆ ತೊಡಗುವಂತೆಯೇ ಇರುವನು.]

ಮುದುಕ: (ಕಣ್ಣೀರೊರೆಸಿಕೊಳ್ಳುತ್ತಾ) ನೀವೆಲ್ಲಿದ್ರೀ ಬುದ್ದೀ ಒಂದೊಂದ್ ಮನೇನೂ ನಮ್ದೇಶದಲ್ ಆ ಮಾರೀಗ್ ಬಲಿ ಕೊಡ್ತಿದ್ದಾಗ?...ಅದೆಂತಾದ್ದು "ಇಂಫ್ಲೂನ್ಸಾ"ಂತ ಆಸ್ಪತ್ರೇಲೆ ಸರಿಟ್ರು ಅದಕ್ಕೆ! ಒಂದ್ ಮನೇ ಬಿಡ್ದೇ?...

ಕಿಟ್ಟಿ: (ಮುಂದೆ ಕೇಳುವುದಕ್ಕಾಗದೆ ಕಿವಿಗಳನ್ನು ಮುಚ್ಚಿಕೊಂಡು) ಸಾಕೋ!...ಸಾಕೋ!!... ಸಾಕೋ!!!...(ಗಂಭೀರವಾಗಿ) ಅಲ್ಲಿರೋ ಕಟ್ನ ಇಲ್ಲಿ ಎತ್ಕೊಂಬಾ...ಅಷ್ಟ್ ಹೊತ್ಗೆ...ಇದ್ನಂಗಡೀ ಗ್ಯೇರಿಸ್‌ಬಿಟ್ ಬರ್‍ತೀನೆ...

[ಸುಲಭವಾಗಿ ಹೊರೆಯನ್ನು ಹೆಗಲಿಗೇರಿಸಿಕೊಳ್ಳುವನು.]

ಮುದುಕ: ಅಯ್ಯಯ್ಯೋ ಬುದ್ದಿ! ನೀವ್‌ಯಾಕ್...

ಕಿಟ್ಟಿ: (ಸೈರಿಸದೆ) ಹೇಳಿದ್ದ್ ಕೇಳಯ್ಯ...ಥ್ಪುತ್! [ಹೊರಡುವನು. ಮುದುಕನು ಮತ್ತೊಂದು ಕಡೆ ಹೊರಟು ಇನ್ನೊಂದು ಹೊರೆಯನ್ನು ಹೊತ್ತುಕೊಂಡು ಬರುವನು. ಕಿಟ್ಟಿಯು ಸಡಗರದಿಂದ ಪುನಃ ಬಂದು ಹೊರೆಯನ್ನು ಹೊತ್ತುಕೊಳ್ಳುವನು.]

ಕಿಟ್ಟಿ: ಅಯ್ಯಾ ಇಲ್ನೋಡು...(ಬೀದಿಯ ಒಂದು ಕೊನೆ ತೋರಿಸುತ್ತಾ)ಇಲ್ನೋಡು...ಬೀದಿ ಕೊನೇಲಾದೀಪ ಕಾಣ್ತಿತ್ತೆ ನೋಡು...ಮುನ್ಸಿಪಲ್ ದೀಪ...ಆ ಕಂಬದ ಮನೆ!...

ಮುದುಕ: ಆ ಸರ್ಕಾರಿ ಕಂಬಾನೆ...ಹೂಂ.

ಕಿಟ್ಟಿ: ಹೂಂ...ಅಲ್ಲಿಟ್‌ಬಿಡು ದಿನಾ ನಿನ್ನೆರಡು ಕಟ್ಟುಗ್ಳನ!...ನಾನ್ ಮುಂಡೀಲ್ ಹಾಕ್‌ಬಿಟ್ ಹೋಗ್ತೇನೆ...ನೀನು ಮೆಲ್ಲಗ್ ನಡದ್ ಬಂದು ಮುಂಡೀಲ್ ದುಡ್ಡಿಸ್ಕೋ...ಆ!?

ಮುದುಕ: ಹುಸ್ಬ್ಯೋ ನನ್ಮಾಡು ಕಟ್ಕೊಂಡು ನಿಮ್ಗೇನ್ ಬುದ್ಧಿ?

ಕಿಟ್ಟಿ: (ಮುದುಕನ ಮಾತಿಗವಕಾಶವನ್ನು ಕೊಡದೆ) ನಿನ್ನ ಯಾರಯ್ಯಾ ಕೇಳೋವುನ್ನದ್ದೆಲ್ಲಾ?... ಬಿನಾ ಹೀಗೇನಾದ್ರೂ ಮಾಡದಿದ್ದರೆ (ರೆಟ್ಟೆಗಳನ್ನು ತೋರಿಸುತ್ತಾ) ನನಗ್ ತಾಖತ್ ಕಮ್ಮಿ ಆಗುತ್ತೆ... ನಿಂಹಳ್ಳಿ ಯಾವ್ದು? ಎಷ್ಟುದೂರ ಇಲ್ಲಿಂದ?

ಮುದುಕ: ಕುರುಬಾರಳ್ಳಿ ಬುದ್ಧಿ...ಅರ್ಧಾ ಅರ್ಧಾರಿ ಏರ್ಡ್ನೇ ಕಲ್ಲು ಈ ರಸ್ತೇಲೇ...

ಕಿಟ್ಟಿ: ಇನ್ನು ನನಗ್ಗೊತ್ತಾಯ್ತು! ನಾನು ಹೇಳಿದ್ಹಾಗೆ ಕಟ್ಟುಗಳ್ ತಂದು ಮನೇ ಮುಂದೆ ಇಳಿಸಿಬಿಡು...ಇನ್ ಬರೋ ಭಾನ್ವಾರ ನಿಂ ಹಳ್ಳೀಗ್‌ಬಂದು...ಈ ಬಾಕಲ್ ರೆಟ್ಟೆಗಳ್ ಇಟ್ಕೊಂಡು ಹೇಗ್ತಾನೆ ಸೌದೆ ಒಡೀತೀಯಾ ಅದನ್ನೂ ನೋಡಿಬಿಡ್ತೇನೆ.

[ಓಡುತ್ತಾ ಹೊರಡುವನು.]

ಮುದುಕ: ಇದೇನುಚ್ಚೊ ಕಾಣೆ! (ಕಣ್ಣೀರೊರೆಸಿಕೊಳ್ಳುತ್ತಾ ಓಡಿದ ಕಿಟ್ಟಿಯನ್ನು ನೋಡಿ) ಮಿಕ್ಕವ್ರು ಬದ್ಕಿರೋ ಮಕ್ಕೆಲ್ಲಾ...ಇವಯ್ಯನಂಗ್ಹಾನಇದ್ಬಿಟ್ರೆ...ನನ್ನಂತಾವ್ರು ಮಕ್ಳ್ನ ಕಳ್ಕಂಡವ್ರೂ ಮರೆತ್‌ಬಿಡ್‌ಬೈದು...ನೋಡಿದ್ರೆ ನಮ್ಮಯ್ನ ಎದುರಿಗ್ ನಿಂತಂಗೈತೆ! ಯಾರುಡುಗ್ನೋ ಕಾಣೆ... ಯಾರಾದ್ರೇನು...ಇವ್ನೆತ್ಕೋರ್ ಒಟ್ಟೆ ತಣ್‌ಗಿರ್ಲಿ...

[ನಿಟ್ಟುಸಿರು ಬಿಡುತ್ತಾ ನಿಧಾನವಾಗಿ ಹೊರಡುವನು.]

[ಪರದೆ ಬೀಳುವುದು.]

ದೃಶ್ಯ ೪

[ಬಲು ವೇಗವಾಗಿ ಸೈಕಲ್ ಸವಾರಿಯನ್ನು ಮಾಡುತ್ತಾ ಒಬ್ಬನು ಬೈಸಿಕಲ್ಲಿನ ಸ್ವಾಧೀನನಾಗಿ ಬರುತ್ತಿರುವನು. ಆ ಸಮಯಕ್ಕೆ ಸರಿಯಾಗಿ ಅವನಿಗಡ್ಡಲಾಗಿ ಒಬ್ಬಾಕೆಯು ಒಂದು ಕೂಸಿನೊಡನೆ ಬಂದು ಪ್ರಜ್ಞೆತಪ್ಪಿ ಕಿರುಚುತ್ತಾ ಕೂಸನ್ನು ಬೈಸಿಕಲ್ಲಿನ ದಾರಿಗೆದುರಾಗಿ ಕೆಳಗೆ ಬಿಟ್ಟುಬಿಡುವಳು. ಕಿಟ್ಟಿಯು ಅತಿ ವೇಗವಾಗಿ ಪ್ರವೇಶಿಸಿ ಮಗುವಿಗೂ. ಬೈಸಿಕಲ್ಲಿಗೂ ಮಧ್ಯೆ ಬೀಳುವನು. ಬೈಸಿಕಲ್ ಅವನ ಬೆನ್ನಿನ ಮೇಲೆ ಹೊರಡುತ್ತಿರುವಷ್ಟರಲ್ಲಿ ಕಿಟ್ಟಿಯು ಎದ್ದು ಬೈಸಿಕಲ್ಲನ್ನೂ ಸವಾರನನ್ನೂ ನೆಲಕ್ಕೆ ತಳ್ಳುವನು. ಆಮೇಲೆ ಕೆಸರುಮಣ್ಣು ಸಹಿತವಾಗಿಯೇ ಎದ್ದು ಕೂಸನ್ನು ಎತ್ತಿ ಅದರ ತಾಯಿಗೆ ಕೊಟ್ಟು ಆ ಬೈಸಿಕಲ್ ಸವಾರನನ್ನು ಬಲವಾಗಿ ಹಿಡಿದೊದರುತ್ತ...]

ಕಿಟ್ಟಿ: ಏಳೋ ಲೇ! ಕಂಸಾವ್ತಾರ...ಅಲ್ಲ...ಶಕಟಾಸುರ! (ಅವನ ಷರಟು ಕಾಲರನ್ನು ಹಿಡಿದೆಳೆಯುತ್ತಾ) ಅಲ್ಕಣಯ್ಯಾ ಬೀದೀಲಿ ಹೋಗೋರ್ ಬೆನ್‌ಮುರಿಯೋಕೇನ್ ಹತ್ತೋದ್ ನೀನ್ ಬೈಸಿಕಲ್ನ? ಇದೇನ್ ರಸ್ತೇನೋ...ಇಲ್ಲ ನಿಮ್ತಾತನ್ಮನೆ ಹಜಾರ್ವೋ?

ಬೈಸಿಕಲ್ ಸವಾರ: ಅಲ್ಕಣ್ರಿ...ನಾನು ಲೆಫ್ಟ್‌ಸೈಡ್ (Left Side) ಆಗಿ ಬರುತ್ತಿದ್ದು... ಬೆಲ್ಲೂ ಕೂಡ ಹೊಡ್ದೆ...

ಕಿಟ್ಟಿ: ಓಹೋ...ಶಿಶುಗಳ್ನ ಬಲಿ ಕೊಡೋಕ್ ಮುಂಚೆ ಬೆಲ್ಲ್ ಬೇರೆ ಹೊಡೆಯೋದ್ ಇಟ್ಕೊಂಡಿದೀಯಾ! ಘಂಟಾಪೂಜಾ? ಇನ್ನ್ ಕರ್ಪೂರಾ...ಮಂಗ್ಳಾರ್ತಿ?...ಬಲಿ ಆದ್ಮೇಲೇನೋ! ಸ್ವಲ್ಪಿರು...ಇಲ್ಲ್‌ವಿಚಾರಿಸ್ಬಿಟ್ಟು...ನಿನಗೆ ಪ್ರಸಾದ...ವರಗ್ಳು ಎಲ್ಲಾ ಕೊಡ್ತೇನೆ...ನಾಟಕ್ದಲ್ಲಿ ಕಾಳ್ದಾ ದೇವಿ...ನರಮಾಂಸಾನ ನುಂಗ್ಬಿಟ್ ಹೇಳೋಹಾಗೆ ...'ವತ್ಸನೇ! ನಿನಗೆ ಬೇಕಾದ ವರಗಳನ್ನು ಬೇಡಿಕೋ ...ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವೆನು'...ಸ್ವಲ್ಪಿರು...(ಹೆಂಗಸಿನ ಕಡೆ ತಿರುಗಿ) ಅಮ್ಮಾ ಲೆಫ್ಟ್

ಸ್ಪೆಷೂ ಅಂಪರೆ ಗೊತ್ರೇ ನಿನ್ಗೇ? ಬೈಸಿಕಲ್ ಹತ್ತ್ ಬರೋವ್ರು...ಮೂತೀ ಮರ್ಗ್ನೂ ಹೊಡ್ಕೊಂಡು ಬಂದುಬಿಟ್ಟು...ಚಕ್ಲಿ ಹೊಡೆಯುತ್ತ್ಲನೂವೆ...ಎದುರಿಗೆ ನಿಲ್ದೆ ಆಕಾಶಕ್ಕೆ ಏಗರ್ಬೇಕೂಂತ ಗೊತ್ತಿಲ್ವೇ ನಿನ್ಗೆ ರೂಲ್ಸು? (ಸವಾರನ ಕಡೆಗೆ ತಿರುಗಿ) ಅಯ್ಯಾ! ಬೆಂಗ್ಳೂರ್ಗೆಲ್ಲ ಇಂಗ್ಲೀಷ್ ಹೇಳ್ಕೊಟ್‌ಬಿಟ್ಟು ಆಮೇಲೆ ಹತ್ತು ನಿನ್ನ್ ಹಾಳ್ ಬೈಸಿಕಲ್ನ...

[ಸವಾರನನ್ನು ಬಿಡುವನು.]

ಬೈಸಿಕಲ್ ಸವಾರ: I am very sorry !

[ಬೈಸಿಕಲ್ಲನ್ನೂ ಟೋಪಿಯನ್ನೂ ಸರಿಪಡಿಸಿಕೊಳ್ಳುವನು.]

ಕಿಟ್ಟಿ: ನಿನ್ನ ಸಾರಿ (sorry) ಪದಗಳ್ನೆಲ್ಲಾ ನಿನ್ ಸೋದರ್‌ಮಾವ ಸಂಚರಿಸ್ತಿದ್ದ...ಅವನ ಮುಂದೆ ಮೊರೆಯಿಡು (ಸುತ್ತಲೂ ನೋಡಿ. ದೂರದಲ್ಲಿ ಕಂಡವನಂತೆ ನಟಿಸುತ್ತಾ)...ಪೋಲೀಸ್... ಕಾನ್‌ಸ್ಟೇಬಲ್...!

ಬೈಸಿಕಲ್ ಸವಾರ: My God ! ....

[ಅರಚುತ್ತಾ ಬೈಸಿಕಲ್ಲನ್ನು ತಿರುಗಿಸಿಕೊಂಡು ಹೊರಡುವನು.]

ಕಿಟ್ಟಿ: (ಹೆಂಗಸಿನ ಕಡೆ ತಿರುಗಿ)...ಅಮ್ಮಾ! ಮಗೂನ್ ಸಾಯಿಸ್ಬೇಕೂ ಅಂದ್ರೆ ಮನೇಲಿ ಭಾವಿಯಿಲ್ವೇ?...ಇಷ್ಟು ತಸ್ದಿ ತಕೊಂಡು ಇಲ್ಲಿಗೆತ್ಕೊಂಡ್ ಬಂದು ಬೀದೀಲಿ ಹೋಗೋ ಬಂಡಿಗಳ ಮುಂದೆ ಹಾಕಿ...ಇಷ್ಟು ಜನಕ್ಕೆ ತೊಂದರೆ ಬದ್ಲಾಗಿ...ಮನೇಭಾವೀಲೇ ದಬ್‌ಬಿಟ್ರೆ ಎಲ್ರಿಗೂ ಸಲೀಸು! ...ನಿನ್ನ ಹಾಳ್‌ಮಗೂನ ಬಚಾಯ್ಸೋ ಗಲಾಟೇಲಿ ನನ್ನ ಮೈ ಬಟ್ಟೆಗಳೆಲ್ಲಾ ಕೆಸ್ರು! ಈ ಹಾಳು ಹೆಂಗಸ್ರು ಇರೋ ಕಡೆಯೆಲ್ಲಾ ಗೋಳೇ!...ಇನ್ ಡ್ರಿಲ್ಲಿಗೆ ಲೇಟೂ...ಇನ್ನಾಹಾಳ್ ಸ್ಕೌಟ್ ಮಾಸ್ಟರೂ... ಲೇಟಾಗ್ ಬಂದೇಂತ...next rallyಗೆ ಮಿಠಾಯಿ ತಪ್ಪಿಸಿಬಿಡ್ತಾನೋ ಏನೋ!? ಏನ್ಗತಿಯೋ!? [ಅವಸರದಿಂದ ಹೊರಡುವನು. ಹೆಂಗಸು ಮಾತನಾಡುವುದಕ್ಕೆ ತೋಚದೆ ಮಗುವನ್ನಪ್ಪಿಕೊಂಡು ನಿಧಾನವಾಗಿ ಹೊರಡುತ್ತಾ ತನ್ನಷ್ಟಕ್ಕೆ ತಾನೆ ಮಾತನಾಡುವಳು]

ಹೆಂಗಸು: ನೀನೇನ್ ಬೇಕಾದ್ರೂ ಬೈಕೋ...ಸನ್ರಾಜ...ನನ್ನ ಭಾಗಕ್ ದೇವ್ರುಹಾಗ್‌ಬಂದು (ಮಗುವನ್ನು ತಬ್ಬಿಕೊಳ್ಳುತ್ತಾ) ನನ್ನ ಕಂದನ್ನ ಕಾಪಾಡಿದ್ಯಲ್ಲ...ಅಷ್ಟೇ...ಸಾಕು (ನಗುವನ್ನು ಸೂಚಿಸುತ್ತಾ) ನನ್ನೇನ್ ಬೇಕಾದ್ರೂ ಅಂದ್ಕೋ!...ಮಗು!

(ನಿಧಾನವಾಗಿ ನಿಷ್ಕ್ರಮಿಸುವಳು.)

[ಪರದೆ ಬೀಳುವುದು.]

ದೃಶ್ಯ ೫

[ಸ್ಕೌಟು ಮೈದಾನ—ಸ್ಕೌಟುಗಳಿಗೆ ಸ್ಕೌಟ್‌ಮಾಸ್ಟರು ಡ್ರಿಲ್ ಮಾಡಿಸುತ್ತಿರುವರು]

ಸ್ಕೌಟು ಮಾಸ್ಟರ್: odd numbers···two Steps to the rear !···Even numbers···two steps to the front ! One !...Two !...[ಸ್ಕೌಟುಗಳು ಅನುಸರಿಸುವರು]

ಕಿಟ್ಟಿ: (ಆಗತಾನೇ ಬಂದು. ಸ್ಕೌಟು ಮಾಸ್ಟರಿನೊಡನೆ ಬಹಳ ದೈನ್ಯದಿಂದ) ಕ್ಷಮ್ಸಿ ಸಾರ್! ಪರ್ಮಿಷನ್ ಕೊಟ್ರೆ (ಸ್ಕೌಟು ಹಿಂದಳವನ್ನು ತೋರಿಸಿ) ಆ "ಆಡು"ಗಳ ಗುಂಪಿಗೆ ಸೇರ್ಕೊಂಡು ಬಿಡ್ತೇನೆ ಸಾರ್!

ಸ್ಕೌಟು ಮಾಸ್ಟರ್: (ಕನ್ನಡಕಗಳ ಮೂಲಕ ಅವನನ್ನು ನೋಡುತ್ತ) ಯಾವ ಆರ್ಡರ್ಗ್ಳೋ? ಅಲ್ಲ...ನೀನು...

ಕಿಟ್ಟಿ: (ಅಷ್ಟುಮಾತಾಗಿ, ಅಲ್ಲಿ...ಹಿಂದೆ ನಿಂತಿರೋ "ಆರ್ಡರ್"ಗ್ಳು ಸಾರ್...ನೆನ್ನೆ ಹೇಳಿದ್ರಲ್ಲಿ ಸಾರ್, ನೀವೇ! ಒಂದು, ಮೂರು, ಐದು, ಏಳು ಇತ್ಯಾದಿಗಳೆಲ್ಲಾ "ಆರ್ಡರ್"ಗ್ಳು!...ಎರಡು, ನಾಲ್ಕು, ಆರು ಇತ್ಯಾದಿಗಳೆಲ್ಲಾ "ಈವನ್ನು"ಗಳು! ಅದೂ ಅಲ್ದೆ "Two steps to the rear"... ಅಂದ್ರೆ "ಎರಡು ಹೆಜ್ಜೆಗಳನ್ನು ಹಿಂದಕ್ಕೆ ಹಾಕಿರಿ" ಅಂತ!...ನೆನ್ನೆ ಏಳಾಗಿದ್ದೆ ಸಾರ್...ಆರ್ಡರ್ಗಳಲ್ಲಿ ಏಳನೇದು ...ಈ ಹೆಜ್ಜೆಗಳನ್ನ ಹಿಂದೆ ಹಾಕೋದ್ರಲ್ಲಿ ಮೊದಲು ಎಡಗಾಲು ಹಿಂದೆ ಹಾಕಬೇಕಲ್ವೇ ಸಾರ್? (ಮಂಕನಹಾಗೆ ಒದರುತ್ತಾ) ಎಡ ಅಂದರೆ left...

ಸ್ಕೌಟು ಮಾಸ್ಟರ್: ಏನೋ ನಿನ್ನ ಚಾಲಾಕು? ಇಷ್ಟು ಹೊತ್ತು ಬಿಟ್ಕೊಂಡ್ ಬಂದ್ಬಿಟ್ಟು, ಯಾರ ಹತ್ರಲೋ ಈ ಮಾತು ಬದಲಾಯ್ಸೋ ಚಾಲಾಕು?...ಎಲ್ಲಿಂದ್ ಧುಮ್ಕಿದ್ಯೋ ಈಗ?

ಕಿಟ್ಟಿ: ಧುಮ್ಕಿದ್ದೆಲ್ಲಿಂದ ಸಾರ್?...ರಸ್ತೆ ಉದ್ದಕ್ಕೂ ಸರಸರಾಂತ ನಡ್ಕೊಂಬಂದೆ ಸಾರ್...

[ಹಿಂದಳದ ಕಡೆ ಹೊರಡುವನು.]

ಸ್ಕೌಟು ಮಾಸ್ಟರ್: ಎಷ್ಟು ಹೊತ್ನೋ ಬರೋದು ನೀನು?

ಕಿಟ್ಟಿ: ಕ್ಷಮ್ಸಿ ಸಾರ್...ನೀವೇ ನೆನ್ನೆ ಹೇಳಿದ್ರಲ್ಲಾ ಸಾರ್...ಏಂಟ್ ಘಂಟೇಗೆಲ್ಲ... ಇಲ್ಲಿರ್ಬೇಕೂಂತ...

ಸ್ಕೌಟು ಮಾಸ್ಟರ್: ಈಗೆಷ್ಟು ಘಂಟೆ?

ಕಿಟ್ಟಿ: ಸ್ವಲ್ಪ ಹಾಗೇ ಇರಿ ಸಾರ್. ಹೇಳ್ತೀನಿ ಸರಿಯಾಗಿ! (ಸ್ಕೌಟು ಮಾಸ್ಟರ ಕೈಗೆ ಕಟ್ಟಿದ್ದ ಗಡಿಯಾರವನ್ನು ಬಗ್ಗಿ ನೋಡಿ) ಏಂಟ್ ಬಜಾಯ್ಸಿ ಇಪ್ಪತ್ತು ನಿಮ್ಸ ಸಾರ್! Correct ಏನ್ಸಾರ್ ಆನ್ಸರೂ? ನೀವೇ ನೋಡಿ ಸಾರ್.

ಸ್ಕೌಟು ಮಾಸ್ಟರ್: ಅಲ್ಕಣೋ ಯಾಕಿಷ್ಟು ಲೇಟೋ ಅಂದ್ರೇ?...

ಕಿಟ್ಟಿ: ಬರೋಷ್ಟರಲ್ಲೆ ಟೈಮಾಗಿ ಹೋಯ್ತು ಸಾರ್...ಕ್ಷಮ್ಸಿ ಸಾರ್!

ಸ್ಕೌಟು ಮಾಸ್ಟರ್: ಅದೇನೋ ನಾನು ಕೇಳಿದ್ದು, ಯಾಕಿಷ್ಟು ಟೈಮಾಯ್ತೂಂತ?

ಕಿಟ್ಟಿ: ಟೈಮಾಗ್ಹೋಯ್ತು ಸಾರ್...ಅಲ್ಲ ಬರೋಷ್ಟ್ ಹೊತ್ತಿಗೆ ಬರ್ಲಿಲ್ಲ ಸಾರ್ ನಾನು: ಹ್ಯಾಗೆ ಬೇಕಾದ್ರೂ ಇಟ್ಕೊಳ್ಳಿ ಸಾರ್! ಸತ್ಯ ಸಾರ್! ಸುಳ್ಳು ಹೇಳ್ಬೇಕಾದ್ರೇನ್ಸಾರ್...ಪೇರಿಸಿಬಿಟ್ಟೀನು ಪರ್ವತ ದ್ಹಾಗೆ ಅಪದ್ಧಗ್ಳು?

ಸ್ಕೌಟು ಮಾಸ್ಟರ್: ಏಂಟ್ ಘಂಟೇಗೆಲ್ಲ ಇಲ್ಲಿ ಹಾಜರಾಗಿ ಇರೋಕೇನೋ ಕೇಡು? ಹೇಳೋ ನಿಜ!

ಕಿಟ್ಟಿ: (ಆತ್ಮಗತಂ) ಸರಿ! ಇವ್ರು ನಿಜ ನಂಬೋಹಾಗಿಲ್ಲ ಇನ್ನಪದ್ದಕ್ಕೆ ಅಷ್ಟೇನೆ...(ಸ್ಕೌಟ್ ಮಾಸ್ಟರೊಡನೆ ಗಟ್ಟಿಯಾಗಿ ಪಶ್ಚಾತ್ತಾಪದಿಂದ) ಮನೇ ಗಡಿಯಾರ ಜಪಾನೀಸ್ ಕ್ಲಾಕ್ ಸಾರ್: ಬೆಳಿಗ್ಗೆ ಕಣ್ಬಿಟ್ ಕಾಫೀಂತ್ ಕಿರ್ಚೋದ್ರಲ್ಲಿ...ಏಂಟ್‌ಘಂಟೆ ಹೊಡೆದ್ಬಿಡುತ್ತೆ ಸಾರ್ ಸಾ!

ಸ್ಕೌಟು ಮಾಸ್ಟರ್: ಹಾಗಾದ್ರಾರ್ಘಂಟೇಗೇ ಏಳ್ಬೇಕು.

ಕಿಟ್ಟಿ: (ಬೆಪ್ಪಾದ ನಗುವಿನಿಂದ) ಕ್ಷಮ್ಸಿ ಸಾರ್!

ಸ್ಕೌಟು ಮಾಸ್ಟರ್: (ತೋಚದೆ) ಯಾಕೋ?

ಕಿಟ್ಟಿ: (ಹಲ್ಲು ಕಿರಿಯುತ್ತಾ) ಹಾಗಂದ್ರೇನ್ ಸಾರ್? ಎರಡ್ಘಂಟೇಗೆ ಮೂರ್ಬೇಕು... ಮೂರ್ಘಂಟೇಗೆ ನಾಲಕ್ಬೇಕು...ಐದ್ಘಂಟೇಗಾರ್ಬೇಕು...ಆರ್ಘಂಟೇಗ್ ಏಳ್ಬೇಕೂಂದ್ರೆ...ಎಲ್ಲಾಗುತ್ತೆ... ಸಾರ್...ಒಂದ್ ಘಂಟೆ ಕಾದಿರ್ಬೇಕಲ್ಲ ಸಾರ್... ಕ್ಷಮಿಸ್ಸಿ ಸಾರ್!

ಸ್ಕೌಟು ಮಾಸ್ಟರ್: ಏನ್ ಕ್ಷಮಿಸ್ಸೀನೋ? ನೀನೋ ನಿನ್ನ ಅಪ್ಪಾರವೊ?

ಕಿಟ್ಟಿ: (ತನ್ನನ್ನೇ ನೋಡಿಕೊಳ್ಳುತ್ತ) ಯಾಕ್ ಸಾರ್! ನನ್ನವ್ತಾರಕ್ಕೇನು ಕಮ್ಮಿ ಸಾರ್?... ತಕ್ಕಟ್ಟಿಗಿಧೇಸಲ್ಲ ಸಾರ್?...ಗುಂಡ್ಸಿಗೇನ್ಸಾರ್...ಗೈರತ್ತು...ಗರಜು ಇದ್ರೆ ಸಾಲ್ದೇನ್ ಸಾರ್...?

ಸ್ಕೌಟು ಮಾಸ್ಟರ್: ಏನೋ ಷರ್ಟೆಲ್ಲಾ?

ಕಿಟ್ಟಿ: ಬರೋ ಆತುರ್ದಲ್ಲಿ ಮುಗ್ಗರಿಸಿಬಿದ್ದೆ...ಸ್ವಲ್ಪ ಮದರಿಂಡಿಯ (Mother India)... ಅಲ್ಲ...ಕೆಸ್ರು ಮೆತ್ಕೊಂಡ್‌ಬಿತ್ತೇನೋ! ಷರ್ಟೊಂದ್‌ಬಿಟ್ಟು ಮಿಕ್ಕ ವಿಷ್ಯದಲ್ಲೆಲ್ಲಾ ತೃಪ್ತಿಕರವಾಗಿಧೇನ್ಸಾರ್...ತಕ್ಕಟ್ಟಿಗೆ...

ಸ್ಕೌಟು ಮಾಸ್ಟರ್: ಏನ್ ಮಿಕ್ಕಿವಿಷ್ಯದಲ್ಲಿ?...ನಿನ್ ರುಮಾಲೆಲ್ಲೋ?

ಕಿಟ್ಟಿ: ಹಸ್ರಾಗಿದ್ರೂನೂವೆ...ಅಂಚುಗ್ಳು...ಹಳದಿ, ನಾಳೆ ಹರದ್ಬಿಟ್ಟು ಕಟ್ಕೊಂಬರ್ತೇನೆ ಸಾರ್!

ಸ್ಕೌಟು ಮಾಸ್ಟರ್: ಯಾವ್ದಕ್ಕೋ ಅಂಚು?

ಕಿಟ್ಟಿ: ನಮ್ಮನೇಲಿ...ಒಂದು ಹಸುರು ಸೀರೆ...ಅಲ್ಲ...ಉದ್ದಾದ ಬಟ್ಟೆ...

ಸ್ಕೌಟು ಮಾಸ್ಟರ್: ಚೆನ್ನಾಗಿಧೆ...ಒಂದೊಂದು ಕಾಲಿಗೆ ಒಂದೊಂದು ಬಣ್ಣದ ಸಾಕ್ಸು!... ಲೇಸ್ (Lace) ಇಲ್ಲದ ಬೂಟ್ಸು...ತಲೇಗೆ ಸೀರೆ...ಚೆನ್ನಾಗಿಧೆ ನಿನ್ ಯೂನಿಫಾರ್ಮು...(ಷರ್ಟನ್ನು ತೋರಿಸುತ್ತಾ) ಈಗಿರೋ ಷರ್ಟಿಗೆ ಗುಂಡಿಯಾದ್ರೂ ಸರಿಯಾಗಿ ಹಾಕ್ಕೊಡ್ದೇನೋ?

ಕಿಟ್ಟಿ: ಅಯ್ಯಯ್ಯೋ! ಹೌದೆ! ಕ್ಷಮಿಸ್ಸಿಸಾರ್ ನಮ್ಮಪ್ಪ ಹೇಳೋ ಹಾಗೆ...ಅಠಾರಾ ಕಚೇರಿ ಅರೇಂಜ್ಮೆಂಟಾಗಿದೆ!

ಸ್ಕೌಟು ಮಾಸ್ಟರ್: ಅದ್ಯಾವ್ ಅರೇಂಜ್ಮೆಂಟೋ?

ಕಿಟ್ಟಿ: ಏನ್ಲ್ಲ ಸಾರ್! ಗುಂಡಿಗಳಿಗೆಲ್ಲ ಒಳ್ಳೊಳ್ಳೆ ಪ್ರಮೋಷನ್ಗಳು...ಕಾಜಾಗಳಿಗೆಲ್ಲ...ಪಾಪ! ರಿಟ್ರೆಂಚ್‌ಮೆಂಟೂ!

ಸ್ಕೌಟು ಮಾಸ್ಟರ್: ಸಾಕು! ಇನ್ಮೇಲಾದ್ರೂ ಲೇಟಾಗಿ ಬರ್ದೇ ಇರು! ಸೇರ್ಕೊ...ನೀನ್ 'ಆಡುಗ್ಳೂ 'ಂದ್ಯಲ್ಲ...ಅವುಗಳ ಜೊತೇಲಿ!

[ಕಿಟ್ಟಿಯು ಹೋಗಿ ದಳದ ಹಿಂದಿನ ಸಾಲನ್ನು ಸೇರಿಕೊಳ್ಳುವನು.]

ಸ್ಕೌಟು ಮಾಸ್ಟರ್: ರೈಟ್‌ಟರ್ನ್!

ಕಿಟ್ಟಿ: (ಸಾಲಿನಲ್ಲಿದ್ದವರು ತಿರುಗುತ್ತಿರಲು ತನ್ನಲ್ಲಿಯೇ) ರೈಟ್...ಬಲ...ಟರ್ನ್...ತಿರುಗು...

[ನಿಧಾನವಾಗಿ ತಿರುಗುವನು.]

ಸ್ಕೌಟು ಮಾಸ್ಟರ್: ಎಷ್ಟು ಹೊತ್ತೋ ತಿರ್ಗೋಕೆ?

ಕಿಟ್ಟಿ: ತರ್ಜುಮೆ ಮಾಡೋ ತಕ್ರಾರಿನಲ್ಲಿ ದೇರಿ ಆಗ್ಬೋಗುತ್ತೆ ಸಾರ್...ಕನ್ನಡದಲ್ಲೆ ಮಾಡ್ಸಿ ಸಾರ್ ಆಗ ತೋರಿಸ್ತೇನೆ!

ಸ್ಕೌಟು ಮಾಸ್ಟರ್: (ಆತ್ಮಗತಂ) ಈ ಶುಂಠನ್ನ ಸ್ಕೌಟಾಗಿ ಹ್ಯಾಗ್ನಾನೆ ಮಾಡೋದೋ ಕಾಣೆ.

(ದಳದವರನ್ನು ಕುರಿತು) As you were !

[ದಳದವರು ಮೊದಲಿದ್ದಂತೆ ತಿರುಗುವರು.]

ಕಿಟ್ಟಿ: (ನೆರೆಯುವನಾದ ಮುಗುವನ್ನು ಕುರಿತು) ಲೇ!...ಗುಬ್ಬಚ್ಚಿ! ನೋಡ್ದೇನೋ ನಿನ್ನೆಲ್ಲ! ಅzಬಾದಾಗಿ ತಿರುಗ್ತಿದ್ದೋನ್ನ...ವೆಲ್ಲಗ್ ಕಾರ್ದವ್ನಕ್ಕಿ ಕೊಟ್ಟು...ಗಿಲೀಟ್‌ಮಾಡಿ...ಕರ್ಕೊಂಡ್ ಬಂದು ...ಸೇರಿಸ್ಬಿಟ್ಟಲ್ಲ ಈ ಶುಕ್ರಾಚಾರಿ ಸೈನ್ಯಕ್ಕೆ! ಇದೇನೇನೋ ಸೀನು ಮಿಠಾಯಿ ಗಟಾಯಿ ಅಂದ್ಯಾ?... ಈ ಡ್ರಿಲ್ಲಾಗ್ಲಿ...ತೋರಿಸ್ತೇನೆ...ನಿನ್ಗೆ ಯಾವತ್ತು ಹುಟ್ಟಿದ್ಹಬ್ಬ?

ಮುಗೂ: (ಗಾಬರಿಯಿಂದ) ನ...ನ...ಗ್ಗೊ...ತ್ತಿ...ಲ್ಲ...ಕಾ...ಣೋ...

ಕಿಟ್ಟಿ: ನನಗ್ಗೊತ್ತು...ಈವತ್ತು ಈ ಡ್ರಿಲ್ಲಾಗ್ಲಿ...ಮಾಡ್ತೇನೆ ಹಬ್ಬ !

ಮುಗೂ: (ನೆರೆಯುವನೊಡನೆ) ಅಪ್ಪು! ಲೇ! ದಮ್ಮಯ್ಯ ಕಣೋ!...ಇಲ್ಲಿ ಬಂದ್ಬಿಡೋ...

[ಅಪ್ಪು ತನ್ನ ಸ್ಥಾನ ಬಿಟ್ಟು ಬರುವನು.]

ಕಿಟ್ಟಿ: ಒಹೋಹೋ! ಅಲ್ಲಿ ಹೋದ್ರೇನ್ ತಪ್ಪಿಸ್ಕೊಂಡ್‌ಬಿಟ್ಟೇಂತ ತಿಳ್ಕೊಂಡ್ಯಾ...?

ಮುಗೂ: ಅಲ್ಲ ಕಣೊ...ಇಲ್ಲಿಂದ ಎಸ್ಸೆಮ್ಮಿನ (S.M.) ಮುಖ ಚನ್ನಾಗಿ ಕಾಣುತ್ತೆ.

ಕಿಟ್ಟಿ: ಹೂಂ...ಗುರುದರ್ಶನ ಚನ್ನಾಗಿ ಮಾಡ್ಕೊ...ಅವರ್‌ಹತ್ರ ಬರೊವಾಗ "ಮನೇಗೆ ಹೋಗಿ ಸೇರೋ ಹೊತ್ತಿಗೆ...ನನ್ಮೈ...ಕೈಗ್ಳು ಜೋಪಾನವಾಗಿರ್ಲಿ"ಂತೂ ಆಶೀರ್ವಾದ ಮಾಡಸ್ಕೋ...

ಸ್ಕೌಟು ಮಾಸ್ಟರ್: (ದಳದ ಮೊದಲನೆಯುವನೊಡನೆ) ನಿನ್ ಗುಡ್ ಟರ್ನ್ ಏನೋ ಇವತ್ತು?

೧ನೇ ಸ್ಕೌಟು: ನಮ್ಮ ಮದರ್ಗೆ ಕಾಯ್ಲೆ ಆಗಿತ್ತು...ಆಸ್ಪತ್ರೆಯಿಂದ ಔಷಧಿ ತಂದೆ ಸಾರ್.

ಸ್ಕೌಟು ಮಾಸ್ಟರ್: GOOD ! (ಎರಡನೆಯುವನೊಡನೆ) ನಿಂದು?

೨ನೇ ಸ್ಕೌಟು: ನನ್ನ ತಮ್ಮನ್ಗೇ ಹೋಂವರ್ಕ್ ಹೇಳ್ಕೊಟ್ಟೆ ಸಾರ್ !

ಸ್ಕೌಟು ಮಾಸ್ಟರ್: GOOD !

[ಹೀಗೆಯೆ ಪ್ರತಿಯೊಬ್ಬರನ್ನೂ ಕೇಳುತ್ತ ಬರೆದುಕೊಳ್ಳುತ್ತ ಇರುವನು.]

ಕಿಟ್ಟಿ: (ನೆರೆಯುವರೊಡನೆ) ಇದೇನೋ...ಈ ಗುಡ್ ಟರ್ನುಗಳ ಬಾಬ್ತು ಈವತ್ತು? ಏನೋ ಅದು ಗುಡ್‌ಟರ್ನು ಅಂದ್ರೆ?

ಅಪ್ಪೂ: ಅದೇ ಒಬ್ಬೊಬ್ರು ಹೇಳ್ತಿಧಾರಲ್ಲೋ! ಕಾಯಿಲೆಯಾದ ಮದರ್ಗೆ ಔಷಧಿ ತರೋದು ...ತಮ್ಮನಿಗೆ ಹೋಂವರ್ಕ್ ಹೇಳಿಕೊಡೋದ್ದು...ಹೀಗೆ...

ಕಿಟ್ಟಿ: ಹಾಗಾದರೆ ನಿಮ್ಮಮ್ಮನಿಗೆ ಜ್ವರಾನೇ?

ಅಪ್ಪೂ: ಇಲ್ಲ.

ಕಿಟ್ಟಿ: ಮತ್ತಿನಿಗೆ ತಮ್ಮೂ ಇಲ್ವಲ್ಲೋ...?

ಅಪ್ಪೂ: ಇಲ್ಲ್‌ದಿದ್ರೇನೋ?

ಕಿಟ್ಟಿ: ಹಾಗಾದ್ರು ಸಿಕ್ಕೊಳ್ತೀಯಲ್ವೇನೋ?

ಅಪ್ಪೂ: ಯಾಕೋ! ನಮ್ಮಪ್ಪಿಗೆ ನ್ಯೂಸ್‌ಪೇಪರ್ ತಂದದ್ದು ಹೇಳ್ಕೋತೇನೆ.

ಕಿಟ್ಟಿ: ಅದೂನೂ ಈ ಗುಡ್‌ಟರ್ನುಗಳ ಬಾಬ್ತಿಗೆ ಸೇರಿದ್ದೋ?

ಅಪ್ಪೂ: ಹೂಂ ಕಣೋ!

ಕಿಟ್ಟಿ: ಒಳ್ಳೇ ಕಾಟಕ್ಕೆ ತಗಲ್ಕೊಂಡ್ನಲ್ಲಾ! ನನಗೀ ಮೂರು ಬಾಬತ್ನಲ್ಲೂ ಸೊನ್ನೆ ಕಾಣೋ...

ಸ್ಕೌಟು ಮಾಸ್ಟರ್: (ಅಪ್ಪುವನ್ನು ಕುರಿತು) ನಿನ್ನ ಗುಡ್‌ಟರ್ನೇನೋ?

ಅಪ್ಪೂ: ನಂ ಫಾವರ‍್ಗೆ ನ್ಯೂಸ್‌ಪೇಪರ್ ತಂದ್ಕೊಟ್ಟೆ ಸಾರ್!

ಸ್ಕೌಟು ಮಾಸ್ಟರ್: GOOD ! (ಕಿಟ್ಟಿಯನ್ನು ಕುರಿತು) ನಿಂದು?

ಕಿಟ್ಟಿ: ಏನೂ...ಇಲ್ಲ ಸಾರ್!

ಸ್ಕೌಟು ಮಾಸ್ಟರ್: ಯಾಕಿಲ್ಲ?

ಕಿಟ್ಟಿ: ಆಪರ್ಚುನಿಟೀಸ್ ಇಲ್ಲ ಸಾರ್ ಮನೇಲಿ!

ಸ್ಕೌಟು ಮಾಸ್ಟರ್: ಅದು ಎಕ್ಸ್‌ಕ್ಯೂಸಲ್ಲ.

ಕಿಟ್ಟಿ: ಒಳ್ಳೇ...Excuse ಅಲ್ಲ...ಸಾರ್!...ನಮ್ಮಮ್ಮ ಸಾರ್...ಕಲ್ಗುಂಡಾಗಿದಾಳೆ ಸಾರ್! ಇನ್ನೊಳಿಗೆ ಜ್ವರ ಬಂದು...ನಾನಾಸ್ಪತ್ರೇಗೆ ಹೋಗಿ ಔಷದ ತಂದು...ನಿಮ್ಮ ಗುಡ್‌ಟರ್ನ್ ಪಟ್ಟೀಗೆ ದಾಖಲಾಗೋದು ಯಾವಾಗ್ಲೋ ದೇವ್ರಿಗೇ ಗೊತ್ತು! ಈ ನನ್ತಮ್ಮ ಅವನ ಹೋಂವರ್ಕ್ ಅವನೇ ಮಾಡ್ಕೊಂಡ್ಬಿಡ್ತಾನೆ ಸಾರ್!...ಕ್ಷಮ್ಸಿ...ಸಾರ್ ನಮ್ದು...Brainy...healthy... family ಸಾರ್...ಶನಿ!

ಸ್ಕೌಟು ಮಾಸ್ಟರ್: ಇಂಥಾ excuse ನಾಳೇಗಾಗ್ದು...ಹೊಸದಾಗಿ ಸೇರಿದವ್ನೂಂತ ಬಿಟ್ಬಿಟ್ಟಿಧೇ ನಿವತ್ತು. [ಹೊರಡುವನು.]

ಕಿಟ್ಟಿ: ಇದೇನ್ ಹಣೇ ಬರವೋ...ಇನ್ನಾ ರ‍್ಯಾಲಿ ಗೀಲಿಯಾದ್ರೂ ಆಗಾಗ್ಯೆ ಇದ್ರೆ ಮಿಠಾಯಿ ಬಟ್ವಾಡೇ ಗಲಾಟೇಲಿ...ಮರೆತ್ಬಿಡಬಹುದು ಈ ತಕ್ರಾರುಗ್ಳು. ನೆಕ್ಸ್ಟ್ ರ‍್ಯಾಲಿ ಯಾವಾಗ್ಲೋ?

ಅಪ್ಪೂ: (ಹೆದರುತ್ತ) ನನಗ್ಗೊತ್ತಿಲ್ಲ ಕಣೋ!

ಕಿಟ್ಟಿ: ಮತ್ ಇನ್ಯಾರಿಗ್ಗೊತ್ತು?

ಅಪ್ಪೂ: ಎಸ್ಸೆಂಗೆ!

ಕಿಟ್ಟಿ: ಕೇಳಿ ಹೇಳ್ತೀಯ?...ಇನ್ನದಾದ್ರೂ ತಿಳದ್ರೆ ಸ್ವಲ್ಪ ಹೋಪ್‌ಫುಲ್ ಆಗಿ...ತಡ್ಕೋಬಹ್ದು ...ಈ ತಪ್ಪಿಗಳ್ನ!

ಅಪ್ಪೂ: ನಾನ್ಕೇಳಿದ್ರೆ ಕೋಪಿಸಿಕೊಳ್ತಾರೋ!

ಸ್ಕೌಟು ಮಾಸ್ಟರ್: ಡಿಸ್ಮಿಸ್.

[ಎಲ್ಲರೂ ಬೇರೆ ಬೇರೆಯಾಗುವರು.]

ಅಪ್ಪೂ: (ಮೆಲ್ಲಗೆ ಮಗುವಿನೊಡನೆ) ಲೋ ರ‍್ಯಾಲಿ ಯಾವಾಗಾಂತ ಈಗ್ಲೇ ಷುರು ಮಾಡ್ಬಿಟ್ಟ ಕೇಳೋಕೆ...ನಾನ್ ಹೋಗ್ತೇನಪ್ಪ...ನೀನ್ಬೇಕಾದರೆ ಬಾ ಅಪನ್ಜೊತೇಲಿ!

[ಅಪ್ಪೂ ಹೊರಡುವನು.]

ಕಿಟ್ಟಿ: ಲೋ! ಮಗೂ! ಈ ರ‍್ಯಾಲಿ ಅಂಬೋದು ಯಾವಾಗ್ಲೋ? ಮಿಠಾಯಿ ಗಿಠಾಯಿ ಯೇನಾದ್ರೂ ಆರ್ಡರ್ ಮಾಡಿಧಾರ್ಕ್ಯೋ?

ಮಗೂ: (ಗಾಬರಿಪಟ್ಟು) ಇನ್ನೂ ಇಲ್ಲಾಂತ ಕಾಣುತ್ತೆ...ಇಷ್ಟು ಬೇಗ್ಲೆ ಗೊತ್ತಾಗೋದಿಲ್ಲ.

ಕಿಟ್ಟಿ: ಮುಮ್ಮೂರ್ಟಿನ್ನು ಅಂದ್ಯಲ್ಲ...ಅದಾದ್ರೂ ತಯಾರ್ ಮಾಡ್ತಿಧಾರೇನೋ?

ಮಗೂ: (ಆತ್ಮ) ಸರಿ! ಅಪ್ಪಾ ಕಿತ್ತಾಗೆ ಕಂಬಿ ಕೀಳೋದೆ ಮೇಲು. (ಪ್ರ) ಮೇಷ್ಟ್ರನ ಕೇಳು...ಎಲ್ಲ ಹೇಳ್ತಾರೆ.

[ಬೇಗ ಬೇಗ ಹೊರಡುವನು.]

ಕಿಟ್ಟಿ: (ಸ್ಕೌಟು ಮಾಸ್ಟರಿನೊಡನೆ ಒಬ್ಬನೇ) ಸಾರ್?...

ಸ್ಕೌಟು ಮಾಸ್ಟರ್: ಏನೋ?

ಕಿಟ್ಟಿ: ಈ...ರ್‍ಯಾಲಿ ಅಂಬೋದ್ಯಾವಾಗ...ಸಾರ್?

ಸ್ಕೌಟು ಮಾಸ್ಟರ್: ಇನ್ನೂ ಗೊತ್ತಿಲ್ಲ ಕಣೊ!

ಕಿಟ್ಟಿ: ಕ್ಷಮ್ಸಿ ಸಾರ್...ನಾಡಿದ್ದು...ಚಿಕ್ದಾಗೊಂದು...ರ್‍ಯಾಲಿ ಇಟ್ಕೊಳ್ಳಿ ಸಾರ್...?

ಸ್ಕೌಟು ಮಾಸ್ಟರ್: ಚಿಕ್ದಾಗೊಂದು ರ್‍ಯಾಲಿ!...ಏನೋ ನೀನ್ ಹೇಳೋದು?...ನಾಡಿದ್ದು ತಾನೇ ಏನ್ ವಿಶೇಷವೋ?

ಕಿಟ್ಟಿ: ನಮ್ಮನೇಗೆ ಶಾಸ್ತ್ರಿಗಳು ಬಂದಿದ್ರು ಸಾರ್:...ಬಂದು. ನಾಡಿದ್ದು..."ದಿವ್ಯವಾಗಿಧೆ" ಅದೇನೋ 'ದಿವ್ಯವಾಗಿಧೆ'ಯಂತೆ ಸಾರ್..."ದಿವ್ಯವಾಗಿಧೆ...ಯಾವ ಕೆಲ್ಸ ಬೇಕಾದ್ರೂ ನಾಡಿದ್ದು ಮಾಡಿದ್ರೆ ಒಳ್ಳೇದೂ" ಅಂತಂದ್ರು ಸಾರ್. ಅದಕ್ಕೇ ನಾನ್ಹೇಳಿದ್ದು ಒಂದು ಚಿಕ್ದೊಂದು ರ್‍ಯಾಲಿ ಇಟ್ಕೋತೀರ ನೀವು...ದಿವ್ಯವಾಗಿಧೆ...ಲಗ್ನ...ಅಂತ...?

ಸ್ಕೌಟು ಮಾಸ್ಟರ್: ಚಿಕ್ಕ ರ್‍ಯಾಲಿ ಅಂದ್ರೇನೋ?

ಕಿಟ್ಟಿ: ಚಿಕ್ ರ್‍ಯಾಲಿ ಅಂದ್ರೆ (ಯೋಚಿಸುತ್ತ) ಮೂರ್ಟಿನ್ನು ಇಲ್ದಿದ್ರೂನೂವೆ...ಒಂದು ಟಿನ್ನು, at least ಅರ್ಧ ಟಿನ್ನು...

ಸ್ಕೌಟು ಮಾಸ್ಟರ್: ಏನು ಹುಚ್ಚೋ ನಿನಗೆ? ರ್‍ಯಾಲಿ ಅಂದ್ರೆ ಟಿನ್ನುಗಳೂಂತೀಯ...ಲಗ್ನ ಅಂತೀಯ...ದಿನ ದಿವ್ಯವಾಗಿಧೇಂತೀಯ...ರ್‍ಯಾಲಿ ಅಂದ್ರೇನೋ? ನಿನಗೆ ಇಂಗ್ಲೀಷ್ ಗೊತ್ತೆ?

ಕಿಟ್ಟಿ: ಯಾಕೆ ಸಾರ್! ಆರ್ನೇಫಾರಂವರೆಗೂ ಮಣ್ಣು ಹಾಕಿಧೇನ್ಸಾರ್!

ಸ್ಕೌಟು ಮಾಸ್ಟರ್: ಆಮೇಲೆ?

ಕಿಟ್ಟಿ: ಮನೇಲಿ ಮಣ್ಣಾಗ್ಹೋಯ್ತು ಸಾರ್...ಸರ್ಕಂಸ್ಟೆನ್ಸಸ್ನೂ...!

ಸ್ಕೌಟು ಮಾಸ್ಟರ್: ಮತ್ತೆ ರ್‍ಯಾಲಿ ಅಂಬೋದು ಇಂಗ್ಲಿಷ್ ವರ್ಡ್ ಕಾಣೋ! ಎಲ್ಲಾದ್ರೂ ಓದಿಧೀಯಾ...ಇಲ್ಲ ಕಿವೀಲಾದ್ರೂ ಕೇಳಿಧೀಯಾ?

ಕಿಟ್ಟಿ: (ಯೋಚಿಸುತ್ತಾ) ರ್‍ಯಾಲಿ?...ರ್‍ಯಾಲಿ?...ಚೀಫ್‌ಸ್ಕೌಟೂ...ಹೈನೆಸ್ ಬರೋದು! ಎಲ್ಲೋ ಕಿಂಗ್ನೋ ಕ್ವೀನ್ನೋ ಬಂದು. ರ್‍ಯಾಲಿ...(ಮುಖದಲ್ಲಿ ಆನಂದವನ್ನೂ ಪ್ರಕಾಶವನ್ನೂ ತೋರಿಸುತ್ತಾ) ರ್‍ಯಾಲಿ ಗೊತ್ತಾಯ್ತು ಸಾರ್! ಸಿಕ್ಸ್ತ್ ಫಾರಂ ಟೆಕ್ಸ್ಟ್‌ನಲ್ಲಿ ರ್‍ಯಾಲೀಂತ ಬರುತ್ತೆ! ಸಾರ್!

ಸ್ಕೌಟು ಮಾಸ್ಟರ್: ಏನೋ ಗೊತ್ತಾಯ್ತು?

ಕಿಟ್ಟಿ: ರ್‍ಯಾಲಿ ಅಂದ್ರೆ ಸಾರ್...ಎಲ್ಲಾ ಸ್ಕೌಟು ಪಟಾಲಂಗಳನ್ನೂ ಜಮಾಯ್ಸೋದು! ಚೀಫ್ ಸ್ಕೌಟುಗ್ಳು...ಹೈನೆಸ್‌ಗ್ಳು...ಬರ್ತಾರೆ ಆವತ್ತು...ಅವರ್ನ ಮೆರ್‍ವಣಿಗೆ ಗಿರೀಟಾಗಿ ಒಳ್ಳೇ ಕೆಸರಿರೋ ಜಾಗಕ್ಕೆ ಕರಕೊಂಡು ಹೋಗಿ ನಂ ಸ್ಕೌಟುಗಳ ತಲೇಲಿರೋ ರುಮಾಲುಗಳನ್ನೆಲ್ಲಾ ಕಿತ್ತು ಆ ಕೆಸರ್ಮೇಲೆ ಹಾಸಿಬಿಟ್ಟು ಕೈಮುಕ್ಕೊಂಡ್ ನಿಂತುಕೊಂಡು "ಮಹಾಸ್ವಾಮಿ...ತಾವು ದಯಮಾಡಿಟ್ಟು ನಮ್ಮ ರುಮಾಲು

ಗಳ್ಮೇಲೆ ನಡೀಲೇ ಬೇಕೂಂ'ತ ಹಟ ಹಿಡಿಯೋದು. ಅದಕ್ಕೆ ಮಹಾಸ್ವಾಮಿಗ್ಳು... "ಪಾಪ ಬಡ್ಕೋ ತಾರಲ್ಲಾಂ'ತ ಹಾಗೇ ಮಾಡ್ಬಿಟ್ಟು...ಮೂಗ್ಮೇಲೆ ಬೆರಳಿಟ್ಕೊಂಡು "ಎಲಾ!...ನಸ್ತ್ಯೋಜಾಗೆ ಮಣ್ ಮೆತ್ಕೊಳ್ಳದ್ವಾಗೆ...ತಲೇಮೇಲಿದ್ದ ರುಮಾಲ್ನ...ಕೆಸರ್ ಮೇಲ್ ಹಾಸಿದ್ರಲ್ಲ...ಇವರು!" ಅಂತ ತಾರೀಫ್ ಪಟ್ಕೊಂಡು... "ಕೊಡ್ರೋ ಇವ್ರಿಗೆ ಶಾಲುಗಳ್ನ"! ಎಷ್ಟೆಂಗೆ ಶಾಲುಗ್ಳು ಸಾರ್... "ಕೊಡ್ರೋ ಇವರಿಗೆ ಜೋಡು ಅಲ್ಲ ಶಾಲ್ಜೋಡುಗಳ್ನ; ಸ್ಕೌಟುಗಳ್ಗೆಲ್ಲಾ ದೂದ್ಪೇಡ, ಖಿಲಾಯಿಸ್ರೋ" ಅಂತ ಖುಷಿಪಟ್ಕೊಂಡು ಬ್ರಿಗೇಡ್ಗೆಲ್ಲಾ ಬಕ್ಷೀಸ್ ಬಟ್ವಾಡೇಗೆ ಹುಕುಂ ಕೊಟ್ಟಿದ್ದಾರೆ...ಅಲ್ವೇ ಸಾರ್?

ಸ್ಕೌಟು ಮಾಸ್ಟರ್: (ಚಮಕಿತನಾಗಿ) ಯಾರೋ ಹೇಳಿದ್ ನಿನ್ಗೆ...ನಿನ್ ಟೆಕ್ಸ್ಟ್‌ನಲ್ಲೆಲ್ಲೋ ಬರತ್ತಿದೂ?

ಕಿಟ್ಟಿ: ಬರ್ದೇ ಏನ್ಸಾರ್? ವಾಲ್ಟರ್ ಅಂಬೋನು...ಹೀಗೆ ರ್‍ಯಾಲಿ ಮಾಡ್ಬಿಟ್ಟು Sir...ಟೈಟ್ಲು ಕಸ್ಕೊಂಬಿಟ್ಟ ಸಾರ್...ಕಿಂಗ್...ಅಲ್ಲ...ಕ್ವೀನ್ ಕೈಯಿಂದ! ಸಾರ್! ಕ್ವೀನೆಲಿಸಬೆತ್ತೂ (Queen Elizabethoo)...ಚೀಫ್ ಗರ್ಲ್‌ಗೈಡೇ ಸಾರ್?!

ಸ್ಕೌಟು ಮಾಸ್ಟರ್: ನೀನೋ ನಿನ್ನುದ್ಧೀನೋ!...ಒಳ್ಳೇ ವಿಚಿತ್ರ ಸ್ಕೌಟ್ ಬಂದು ಸೇರ್ಕೊಂಡೆ...ನಿನ್ನಿಟ್ಕೊಂಡು ಏನ್ಮಾಡೋದೋ ಕಾಣೆ!

ಕಿಟ್ಟಿ: ಕ್ಷಮ್ಸಿ ಸಾರ್, ಏನೋ ಹೀಗಿದ್ರೂನೂವೆ...ಸ್ವಲ್ಪ ತಸ್ದಿ ತಕೊಂಡು ತರ್ಬೇತ್ ಮಾಡಿದ್ರೆ ...ಒಳ್ಳೇ ಥೇಟಾಗಿ ತಯಾರಾಗ್ತೇನೆ ಸಾರ್ ರ್‍ಯಾಲಿ ಹೊತ್ತಿಗೆ...ಇನ್ನೂ ಎಷ್ಟ್ ದಿನ ಸಾರ್ ನಾನ್ ಥೇಟಾಗೋಕೆ...ಅಲ್ಲ...ರ್‍ಯಾಲೀಗೆ?

ಸ್ಕೌಟು ಮಾಸ್ಟರ್: ಇನ್ನೂ ಮೂರು ತಿಂಗಳಿದೆ ಕಾಣೋ...ಫೂಲ್!

[ಸ್ಕೌಟು ಮಾಸ್ಟರ್ ಹೊರಡುವನು.]

ಕಿಟ್ಟಿ: (ತನ್ನಲ್ಲಿ) ಫೂಲೋ ನಾನು! (ತನ್ನನ್ನೇ ನೋಡಿಕೊಳ್ಳುತ್ತಾ)...ನಿಜವೇ!...ರ್‍ಯಾಲೀಗೆ ಮೊದಲ್‌ದಿನ ಸೇರೋದು ಬಿಟ್ಬಿಟ್ಟು...ಮೂರ್ ತಿಂಗಳ್ ಮುಂಚೇನೆ ಸೇರ್ಕೊಂಡು ಒದ್ದಾಡ್ತೇನಲ್ಲ! ಅವನು ಹೇಳಿದ್ಹಾಗೆ ಫೂಲೇ ನಾನು! ಇನ್ ಮೂರ್ತಿಂಗಳ್ಯಾಕೋ? ಓಹೋ! ಈಗ ಬೇಸ್ಗೆ ಕಾಲ... ಕೆಸ್ರು ಸಿಕ್ಕೋದು ಕಷ್ಟ...ರ್‍ಯಾಲೀಗೊಂದು ಮಳೆಯಾದ್ರೂ ಬರ್ಬೇಕೋ ಏನೋ! ದೇವರ್‌ದಯ ಹೇಗಿರುತ್ತೋ!...ಮಳೇಗೇನೂ...ಒಂದು ಗಾಳಿ ಬೀಸಿ ಮೋಡಗ್ಳು ಕವಿತ್ಕೊಂಬಿಟ್ರೆ ಸರಿ!...ಅದಕ್ಕೇ ಆ ಶಾಸ್ತ್ರಿಗಳು ಹೇಳಿದ್ರೋ ಏನೋ...'ದಿವ್ಯವಾಗಿಧೇಂ'ತ...ಮಳೆ ಬಂದ್ರೂ ಬರಬಹುದು...ನಾದಿದ್ದು ...ನಾನುಗಾನ ಎಷ್ಟಂ ಆಗಿದ್ರೆ ಆಗಾಗ್ಗೆ ಕೊಳಾಯಿ ನೀರ್ನಲ್ಲೇ ಕೆಸ್ರು ಮಾಡ್ಕೊಂಡು...ಬೇಕು ಬೇಕಾದಾಗ ...ರ್‍ಯಾಲಿ ಇಟ್ಕೊಂಡು...

[ಹಾಗೆಯೇ ನಿಧಾನವಾಗಿ ಹೊರಡುವನು.]

ದೃಶ್ಯ ೭

[ಮಗುವಿನ ಮನೆಯ ದಿವಾನಖಾನೆ—(Drawing Room): ಸೋಫಾಗಳಿಂದಲೂ. ಗುಂಡು ಮೇಜುಗಳಿಂದಲೂ. ಗೋಡೆಗೆ ಹಾಕಿದ ದೊಡ್ಡ ನಿಲುಗನ್ನಡಿಗಳಿಂದಲೂ ತುಂಬಿರುವುದು]

[ಪ್ರವೇಶ: ಕಿಟ್ಟಿ, ಮಗೂ.]

ಕಿಟ್ಟಿ: (ಜುಗುಪ್ಸೆಯಿಂದ ಕೋಣೆಯ ಸುತ್ತಲೂ ನೋಡುತ್ತ) ಥೂತ್! ಲೋ! ನಿಮ್ ತಾಯಿ...ನನ್ನೊಬ್ಬಿ..."ಏನೋ ಹೇಳ್ಬೇಕೂಂತಾರೆ" ಅಂದ್ರಲ್ಲ...ಆ ಮರ್‍ಯಾದೇಗೆ ಬಂದ್ನೇ

ಹೊರ್ತು...(ಕೈಯಿಂದ ಕೋಣೆ ಸುತ್ತಲೂ ತೋರಿಸುತ್ತಾ) ಈ ಕುಜಾತೀಗೆ ಸೇರಿದವ್ರು ಇದ್ದಾಂತ ಮೊದ್ಲೇ ತಿಳ್ದಿದ್ರೆ ಬಾಯಿಬ್ಟ್ನ ಅಣಗೂ ಬರ್ತಿರಲಿಲ್ಲ...ಹಿಂಗೇ ಹಾಳು ಬಂಗ್ಲೆಗೆ!

ಮಗೂ: (ವಿಸ್ಮಿತನಾಗಿ) ಕುಜಾತಿ!...ನಾವೂ ನಿಮ್ ಜಾತೀನೇ ಕಣೋ...ಬ್ರಾಹ್ಮಣ್ರು... ಸ್ಮಾರ್ತರು...ಕರ್ಮಿಗಳು!

ಕಿಟ್ಟಿ: ನಾನು ಹೇಳೋ ಜಾತಿ ಆ ಜಾತಿ ಅಲ್ಲಾ ಕಣೋ. ಉಲ್ಲು!...ಈಗ್ ನೋಡು ಬ್ರಾಹ್ಮಣ್ರು...ಕ್ಷತ್ರಿಯರು...ಈ ಬಾಯ್ಬ್ರಗ್ಳು...ವೈಶ್ಯರು...ಸ್ಮಾರ್ತರು...ಈ ಬಾಯ್ಬ್ರಗ್ಳೇ ಅಲ್ಲ...ಇವ್ರಗಳ್ನೆಲ್ಲಾ ನಿರ್ಮಿಸಿದ್ದು ದೇವ್ರು...ಸ್ವಾಮಿಗಳು...ಮಠಾಧಿಪತಿಗಳು...ವಗೈರೆ!...ಈ ಬಾಯ್ಬ್ರಗಳೆಲ್ಲಾ ಹಿಗ್ಗಿಹೋಗಿ ಎಷ್ಟೋದಿನಾಗಳಾದ್ವು...ಈಗ ಸದ್ಯ ಇರೋ ಜಾತಿಗಳೆರಡೇ ಎರಡು.. ನಾವ್ ನಾವೆ ನಿರ್ಮಿಸಿಕೊಂಡದ್ದು... ದುಡ್ಡಿರೋವ್ರು...ದುಡ್ಡಿಲ್ಲೋರು ಅಂತ...ಅವರಲ್ಲೂ ಇನ್ ಬ್ರಾಹ್ಮಣ್ರಲ್ಲೋ. ದೇವರು ಹಣೇಲಿ ಬರೆದದ್ದು ಪಂಗ್ನಾಮದೇಳ್ಗ್ಳಿ...ಅಂಗಾರ ಮುದ್ರೇನೆ ಅಲ್ಲ... ಅಷ್ಟಂಥದೇ ಅಗ್ಲಿ...ಬ್ರಾಹ್ಮಣರಲ್ಲೆರಡೇ ಜಾತಿ!...ಬಡವ್ರು!...ಬಡಾಯಿಗಳೂಂತ! ...ದುಡ್ಡು ವೈಬೊಗ್ಗವ್ರು...ದುಡ್ಡಿಂದ್ತ್ಲೆ ಕೊಬ್ಬಿದ್ದ್ವ್ರಂತ ಎರಡೇ ಜಾತಿ!!

ಮಗೂ: ತಲೆ ಕೊಬ್ಬಿದ್ವ್ರಂದ್ರೇನೋ?...ನೀನು ಹೇಳೋದೊಂದೂ ಅರ್ಥವಾಗ್ಲಿಲ್ಲ!...

ಕಿಟ್ಟಿ: ಹಾಗಾದ್ರೆ...ನಂ ಶಾಸ್ತ್ರಿಗ್ಳು ಹೇಳೋಹಾಗೆ..."ಉದಾಹರಣ ಪೂರ್ವಕವಾಗಿ ಹೇಳುವಂಥಾವನಾಗುವೆನು...ಕೇಳುವಂಥಾವನಾಗೋ ಗುಗ್ಗು! ಕಿವಿ ಬಿಚ್ಕೊಂಡು ಕೇಳುವಂಥಾವನಾಗು"! (ಗೋಡೆಗೆ ತಗಲಿಸಿರುವ ದೊಡ್ಡ ನಿಲುಗನ್ನಡಿಯ ಬಳಿಗೆ ಹೋಗಿ) ಇಲ್ನೋಡೊ!...ಇದ್ಯಾರದೊ ಈ ಕನ್ನಡಿ?

ಮಗೂ: ನಮ್ಮಪ್ಪನ್ದು!...

ಕಿಟ್ಟಿ: ನಿಮ್ಮಪ್ಪನ್ದೋ...ಯಾಕೋ ಇದಿವ್ನಿಗೆ?

ಮಗೂ: ಒಳ್ಳೆ 'ಯಾಕೋ'!...ಯಾಕೇನೋ?...ಮುಖ ನೋಡ್ಕೊಳ್ಳೋಕೆ!...

ಕಿಟ್ಟಿ: (ಎರಡು ಅಂಗೈಗಳನ್ನೂ ಒಂದು ಮೊಳದಷ್ಟು ದೂರದೂರವಾಗಿಟ್ಟುಕೊಂಡು ತುಲುಕಿಸುತ್ತಾ) ಹಾಗಾದ್ರೆ...ನಿಮ್ಮಪ್ಪನಿಗೇನ್ ಇಷ್ಟು ದೊಡ್ಡ ತಲ್ಕಾಯೇ?...

ಮಗೂ: ಮುಖ ಒಂದೇ ಅಲ್ಲ ಕಣೋ. ಮೈಯೆಲ್ಲಾ ನೋಡ್ಕೋಬಹುದು...

ಕಿಟ್ಟಿ: (ನಗುತ್ತಾ) ಹಯ್ಯೋ ಮಂಕೂ! ಕುತ್ಗೆ ಬಗ್ಗಿಸ್ಕೊಂಡು ತನ್ನ ಕಣ್ನಿಂದ್ಲೇ ನೋಡಿದ್ರೆ... ಮೈ ಚೆನ್ನಾಗ್‌ಕಾಣತ್ತೋ...ಇಲ್ಲ...ಕನ್ನಡಿ ಎದುರಿಗೆ ಕುಣ್ದಾಡ್ತಾ...ಅದರಲ್ಲಿ ನೋಡ್ಕೊಂಡ್ರೆ ಕಂಡ್ಬರತ್ತೋ ಚೆನ್ನಾಗೀ...? (ತಾತ್ಸಾರದಿಂದ) ಕೈಲಿ ಹುಗ್ಗಿಗ್ಳಿದ್ದರೆ ಹ್ಯಾಗೆ ನೋಡ್ಕೊಳ್ಳೋದೋ ಈ ಕನ್ನಡೀಲಿ?...ಹೇಳ್ತೀನಿ ಕೇಳೋ...ಇದೆಲ್ಲಾ ದುಡ್ಡಿನ ಕೊಬ್ಬು ಕಣೋ...ಪಾಪ ಮಂಕೋ ಏನೋ ಅಲ್ಲಿ ಆಫೀಸ್‌ನಲ್ಲಿ ಸುರೀತಾನೆ ಖಜಾನೆ ದುಡ್ಡು!...ಅದನ್ನ ಬಾಚ್ಕೊಂಬರೋದು...ಅಲ್ಲಿ ಪಾಪ್ನ ಬೊಕ್ಸಕ್ಕೆ ಸುರಿಯೋದು...ಅಲ್ಲಿಂದ ಬಾಚ್ಕೊಂಬರೋದು ಅದನಿಗೆ ಜೇಡರ್ ಸಾಮಾನುಗಳೆಲ್ಲಾ...ಪೇರಿಸ್ಕೊಳ್ಳೋದು...ಮನೆ ತುಂಬಾ...ದೊಡ್ಡ ಮನುಷ್ಯರ ಜಾತಿ!...ನಮ್ಮಪ್ಪ ಕೂಡ... ನಂಜಾತಿಲ್ಹುಟ್ಟಿದೌನು...ಮುಂಡೇಗೆ ಹಣದ್ಕೊಬ್ಬು ಏರತ್ಲೂನೂವೆ...ಜಾತಿ ಖರಾಬಾಗ್ಹೋದ...

ಮಗೂ: ಏನ್ ಜಾತಿ ಖರಾಬಾಗ್ಹೋದ?

ಕಿಟ್ಟಿ: ನಂ ಜಾತಿ ಕೆಟ್ಟು ನಿಂ ಜಾತೀಗೆ ಸೇರ್ಕೊಂಬಿಟ್ಟ...ದೊಡ್ಡ ಮನುಷ್ಯರ ಜಾತೀಗೆ! ನಿಮ್ಹಾಗೆ ಡಿಸೂಸು ಗೋಡೆ ಕಟ್ಟಿದ ಮನೆ ಸುತ್ಲೂ...ಇನ್ನೊಂದ್ಗೋಡೆ ಕಟ್ಕೊಂಡು ಕೂತ್ಕೊಂಬಿಟ್ಟಾನೆ! ಕೂಡ್ಹಾಕ್ತಾ. ಕಾಸಿಗ್ಕಾಸು...."ತಾನೂ ತಿನ್ನ...ಪರರಿಗೂ ಕೊಡಾ"ಂತ...ಆ 'ಡಿ ಡಾಗ್ ಅಂಡ್ ದಿ ಮ್ಯಾನೇಜರ್' ಕಥೆ ಬರುತ್ತಲ್ಲಾ ಈಸೋಪ್ಸ್ ಫೇಬಲ್ಸಿನಲ್ಲಿ...ಹಾಗೆ...(ಸುತ್ತಮುತ್ತಲೂ

ನೋಡುತ್ತಾ) ನಿಮ್ಮ ಜಾತೀಗೆಲ್ಲಾ ಮೋಕ್ಷಕ್ಕೊಂದೇ ಛಾನ್ಸೂ ಕಣೋ! ನಿಂ ಕಾಫಿ ನಿಂ ಕಾಂಪೌಂಡು... ಎರಡೂ ಕಟಾಯಿಸ್ದ್ರೇನೆ ಕರಗೋದು ನಿಂಕೊಬ್ಬು!

[ಒಳಗಿನಿಂದ 'ಮಗೂ!' ಎಂದು ಕೇಳಿಬರುವುದು.]

ಮಗೂ: (ಥಟ್ಟನೆದ್ದು) ಓ! ನಂ ಮದರ್ ಕಣೋ!...(ಗಟ್ಟಿಯಾಗಿ) ಇಲ್ಲಿದೇನಮ್ಮಾ!...

ತಾಯಿ: (ಪ್ರವೇಶಿಸಿ) ಬಂದಿದ್ದೀಯ?...(ಕಿಟ್ಟಿಯನ್ನು ಗಮನಿಸಿ) ನಿನ್ ಸ್ನೇಹಿತನ್ನ ಕರ್ಕೊಂ ಬಂದಿದ್ದೀಯಾ! (ಕಿಟ್ಟಿಯನ್ನು ಕುರಿತು ಒಂದು ಸೋಫಾವನ್ನು ತೋರಿಸಿ) ಕೂತ್ಕೋ ಮಗೂ... ಯಾಕೆ ನಿಂತಿದ್ದೀಯಾ?...

ಕಿಟ್ಟಿ: (ಕೈಯಿಂದ ಸೋಫಾ ಕುರ್ಚಿಯನ್ನು ಸೂಚಿಸುತ್ತಾ, ಮುಖವನ್ನು ಸೂರಿಗ ಎತ್ತಿ) ಈ ಬಾಬತ್‌ಗಳಲ್ಲೆಲ್ಲಾ ಕುಕ್ಕುರ್ಸೋ ಅಭ್ಯಾಸ ಇಲ್ಲಮ್ಮಾ ನನಗೆ; ನೆಟ್ಕೊಂಡಿದ್ರೆ...ನೋಯೋ ಹಾಗೇನೂ ಇಲ್ಲ...ನನ್ನ್ ಕಾಲುಗ್ಳು!...ನಿಂತೇ ಇರ್ತೇನಮ್ಮಾ...

ತಾಯಿ: (ಮುಗುಳು ನಗೆಯಿಂದ) ಅಭ್ಯಾಸ ಏನು ಬೇಕಿದಕ್ಕೆ ಮಗೂ?

ಕಿಟ್ಟಿ: ನಂ ಮನೇಲಿ ಈ ಬಾಬತ್ಗಳೇನೂ ಇಲ್ಲಾಮ್ಮಾ; ನೆಲದಲ್ಲೇ ಕುಕ್ಕರ್ಸೋದು,...ಅದೂ ಅಲ್ದೆ......ನಿಂ ಜಾತಿಯವ್ರು...ಅಲ್ಲ...ದೊಡ್ಡ ಮನುಷ್ಯರ್ಗಳ ಮನೇಲಿ...ಹೆಜ್ಜೆ ಇಟ್ಟಿದ್ದು ಇದೇ ಮೊದಲ್ ದಫಾ...ಅಲ್ಲಾ...ಸಾರ್ತಿ. ಅದೂನೂ ನನ್ನ ಖುಷಿ...ಅಲ್ಲ...ನನ್ನ ಇಷ್ಟದ ಮೇಲಲ್ಲಾ, ಈ ಗುಬ್ಬಚ್ಚಿ...ಅಲ್ಲ...ಈ ಮಗುವಿನ ದೋಸ್ತಿ...ಅಲ್ಲ...ಸ್ನೇಹದ ಮೇಲೆ ಬಂದದ್ದು ಇಲ್ಲಿಗೆ...

[ತಾಯಿಯು ವಿಸ್ಮಿತಳಾಗಿ ಕಿಟ್ಟಿಯನ್ನು ರೆಪ್ಪೆ ಮುಚ್ಚದೆ ನೋಡುತ್ತಿರುವಳು.]

ಮಗೂ: (ಘೊಳ್ಳನೆ ನಕ್ಕು) ಈವತ್ತೆಲ್ಲಾ ಕಣ್ಬಿಟ್ ನೋಡ್ತಿದ್ರೂ...ನಂ ಕಿಟ್ಟೀನ್ ಸ್ವಭಾವ ಗೊತ್ತಾಗೋದಿಲ್ಲಮ್ಮ ನಿನ್ಗೆ...ಅವನು ಬಲು ಪ್ರೌಢೂ...ನಂ ಜಾತೀ ಅಂದ್ರೆ ಬೆಂಕಿ ಔನಿಗೆ...

ತಾಯಿ: 'ನಂ ಜಾತಿ'! ಯಾಕೆ ಈ ಮಗೂನೂ ಬ್ರಾಹ್ಮಣರ ಮಗು ಅಲ್ವೇ?

ಮಗೂ: (ಬದಲು ಹೇಳಲುದ್ಯುಕ್ತನಾದ ಕಿಟ್ಟಿಗೆ ಅಡ್ಡಮಾತಾಗಿ) ಸ್ವಲ್ಪಿರು ಕಿಟ್ಟಿ!...ನಾನೇ ಎಕ್ಸ್‌ಪ್ಲೇನ್ ಮಾಡ್ತೇನೆ! ದೊಡ್ಡಕಥೇನಮ್ಮಾ ಅದು (ತಾಯಿಯನ್ನು ಮೆಲ್ಲಗೆ ಸೋಫಾ ಮೇಲೆ ಕೂಡಿಸುತ್ತಾ) ಕೂತ್ಕೋಮ್ಮ ಹೇಳ್ತೇನೆ...(ತಾಯಿಯ ಪಾದಗಳ ಹತ್ತಿರ ನೆಲದ ಮೇಲೆ ಕುಳಿತು ಕೊಂಡು ತನ್ನ ಪಕ್ಕವನ್ನು ಸೂಚಿಸುತ್ತಾ) ಕಮಾನ್ (come-on) ನೆಲ ಕಿಟ್ಟೀ! ಕೂತ್ಕೋ!...ನಿಂ ಜಾತಿ ಮನೆಗಳಲ್ಲೂ ನೆಲ ಇಧೇ ಅಲ್ವೇ.

[ಕಿಟ್ಟಿಯು ಮೋರೆಯನ್ನು ಸೊಟ್ಟಮಾಡಿಕೊಂಡು ಕೂರುವನು.]

ತಾಯಿ: (ಮುಗುಳು ನಗೆಯಿಂದ) ಏನ್ಮಗೂ...ಜಾತಿ...ಜಾತೀನ್ನೋದು?

ಮಗೂ: ಕೇಳಮ್ಮಾ...ಕಿಟ್ಟೀ ಲೆಕ್ಕದ ಪ್ರಕಾರ...ಮೊದಲು ನಾವೆಲ್ರೂ ಬ್ರಾಹ್ಮಣರ ಜಾತೀಗ್ ಸೇರಿದ್ರೂನೂವೆ...ಈಗಿನ ಕಾಲ್ದಲ್ಲಿ...ಬ್ರಾಹ್ಮಣರಲ್ಲಿ ಕೆಲವ್ರು ಜಾತಿ...ಖರಾಬಾಗಿ ಹೋಗ್ಬಿಟ್ಟಿದ್ದಾರೆ...

ತಾಯಿ: (ವಿಸ್ಮಿತಳಾಗಿ) ಜಾತಿ ಖರಾಬ್ ಅಂದ್ರೇನೋ?...'ಖರಾಬು'?...ಎಲ್ಲಿ ಕಲೀತೀ ರೋಪ್ಪ ಈ ಮಾತುಗಳೆಲ್ಲಾ?...ಖರಾಬು ಅಂದ್ರೇನೋ?

ಮಗೂ: ಖರಾಬು ಅಂದ್ರೆ ಹಾಳಾಗ್‌ಹೋಗೋ...ಅಲ್ಲ...(ಕಿಟ್ಟಿಗೆ) ಕರೆಕ್ಟ್ ಮೀನಿಂಗ್ (correct meaning) ಏನ್ ಕಿಟ್ಟಿ ಖರಾಬ್ಗೆ?

ಕಿಟ್ಟಿ: (ಗುಸುಗುಟ್ಟುತ್ತಾ) ಒಳ್ಳೇ ಕಾಟಾನೋ ನಿಂದು! ಖರಾಬಾಗೋದು ಅಂದ್ರೆ...ಕೆಟ್ಹೋಗೋದು...ಜಾತಿ ಕೆಟ್ಹೋಗೋದು...ಯಾಕೆ ಬಿಚ್ತೀಯೋ ಈ ಕಂತೇನೆಲ್ಲಾ ಈಗ?

ಮಗೂ: (ತಾಯಿಗೆ) ಜಾತಿ ಕೆಟ್ಹೋಗಿಬಿಟ್ಟಿದಾರೆ!...ಇದಕ್ಕೆಲ್ಲಾ ಕಾರಣ ಏನಂತೆ?...ದುಡ್ಡು ಕೈ ಸೇರತ್ತೂನೂವೆ...ಮುಂಡೇ ತುಂಬಾ ಕೊಬ್ಬು ತುಂಬಿಸಿಬಿಟ್ಟು...ಬ್ರಾಹ್ಮಣ್ರ ಜಾತಿ ಕೆಡಿಸಿ... "ಬಡಾಯ್ ಜಾತೀಂ"ತ ಇನ್ನೊಂದು ಜಾತಿಗೆ ಸೇರಿಸಿ ಬಿಡುತ್ತಂತೆ!...ದುಡ್ಡು!...ಇವರಣ್ಣಾನೂ ಇವ್ರ ಜಾತೀಲೇ ಹುಟ್ಟಿ ಬೆಳ್ದು, ಅವನಿಗೆ ದುಡ್ಡು ಸೇರತ್ತೂನೂವೆ...ತಲ್ಯಾಯ ತುಂಬಾ...ಕೊಬ್ಬು ತುಂಬ್ಕೊಂಡ್...ಬಿಟ್ಟು ನಂ ಜಾತೀಗೆ ಇಳಿದ್ಬಿಟ್ಟಿದಾನಂತೆ ಈಗ!

ತಾಯಿ: ಇವರಣ್ಣ? (ಕಿಟ್ಟಿಗೆ) ಹೆಸರೇನ್ ಮಗೂ...ಏನ್ಕೆಲ್ಸ ನಿಮ್ಮಣ್ಣನಿಗೆ?

ಕಿಟ್ಟಿ: (ನೀರಸವಾಗಿ) ಕಛೇರಿ ಕೆಲ್ಸವಮ್ಮಾ...ಕಮಿಷ್ನೆರಿ ಕೆಲ್ಸ!

ತಾಯಿ: ಹೆಸರೇನ್ ಮಗೂ?

ಕಿಟ್ಟಿ: ರಾಮೂಂತ ಮನೇಲಿ ಕೂಗ್ತಿದ್ದು ಮೊದಲು...ಈಗ ಸಿ. ಆರ್. ರಾಮಚಂದ್ರಯ್ಯ, ಬಿ.ಎ., ಎಸ್ಕ್ವಯರ್. ಪಸ್ಕ್ವಯರ್...ಲೊಟ್ಟೊ ಲೊಸ್ಕೊಂತ...ಹಾರುದ್ವ ಬಾಲಂಗೋಚಿ ಕಟ್ಕೊಂಡು ಕೂತಿದಾನೆ...ಬಸ್ವನ್‌ಗುಡೀ ಬಂಗ್ಲೇಲಿ...!

ತಾಯಿ: ಓಹೋ! ಗೊತ್ತಾಯ್ತು ಮಗೂ!...ಅತನ್ನ ತಾನೇನೋ...ನನ್ನೆ ನಿಂ ತಂದೆ... "ಬಲು ಗಟ್ಟಿಗಾ ಅತಿ ಬುದ್ಧೀ" ಅಂತಂದದ್ದು?

ಕಿಟ್ಟಿ: "ಅತಿ ಬುದ್ಧೀಂದ್ರೆ" ಅವನೇ ಇರಬೇಕಮ್ಮಾ! ಜಗತ್ನಲ್ಲಿ ಯಾವ ಜಾಬತ್ನಲ್ಲೂ ..ಅತಿ... ನಮ್ಮಣ್ಣ!

ತಾಯಿ: (ಮಗುವಿಗೆ) ಹಾಗಾದ್ರೀ ಮಗೂ...ಬಸವನಗುಡೀಲಿದ್ಕೊಂಡು ನಿನ್ ಜೊತೇಲಿ ಹ್ಯಾಗೆ ಬರೋಕಾಗುತ್ತೆ...ದಿನಾನು?

ಮಗೂ: ಬಸವನ್‌ಗುಡೀಲಿರೋದು...ಇವರ ಅಣ್ಣಾವ್ರಮ್ಮ! ಕಿಟ್ಟಿ ಮನೆ ನಂಪೇಟೇಲೇ!

ತಾಯಿ: ಹಾಗಾದ್ರೆ...ನಿಂ ಜನಗಳ್ನ ಬಿಟ್ಟು...ನೀನೆಲ್ಲಿಧೀಯಾ ಮಗೂ?

ಮಗೂ: ಕಿಟ್ಟೀ ಜನಗಳೆಲ್ಲಾ ಇಲ್ಲೇ ಇಧಾರಮ್ಮಾ!...ಅವರಣ್ಣಾ ಮಾತ್ರ...ಜಾತಿಕೆಟ್ಟು... ಬಿಟ್ಹೋದ್ದು...ಬಂಗ್ಲೇಗೆ. ಅಲ್ವೇ ಕಿಟ್ಟೀ...(ಮೆಲ್ಲಗೆ ಕಿಟ್ಟಿಯ ಹೆಗಲ ಮೇಲೆ ಕೈ ಹಾಕಿಕೊಂಡು) ಕಿಟ್ಟೀಗೆ ಪಾಪ, ತಾಯಿ ಇಲ್ಲಾಮ್ಮಾ...ಮತ್ತೆ ಅವರಕ್ಕನೂ...

ಕಿಟ್ಟಿ: (ಮಗುವಿನ ಕೈಯನ್ನೊದರಿ) ಸಾಕು ನಿಲ್ಸೋ...

[ಥಟ್ಟನೆದ್ದು ಗೋಡೆ ಹತ್ತಿರ ಹೋಗಿ ಮುಖವನ್ನು ಗೋಡೆ ಕಡೆಗೆ ತಿರುಗಿಸಿ ಪಟವೊಂದನ್ನು ನೀರಸವಾಗಿ ಗಮನಿಸುತ್ತಿರುವನು...ಮಗೂ. ತಾಯಿಯ ಕಿವಿಯಲ್ಲಿ ಗುಸುಗುಟ್ಟುವನು.]

ತಾಯಿ: (ಥಟ್ಟನೆದ್ದು ಮುಖದಲ್ಲಿ ಪಶ್ಚಾತ್ತಾಪವನ್ನು ಪ್ರಕಟಿಸುತ್ತಾ, ಕಿಟ್ಟಿ ಇರುವ ಕಡೆಗೆ ಬಂದು)...ಇದ್ಯಾಕ್ ಮಗೂ?...ನಮ್ಮುಡುಗ...ಮನೇ ಮಾತು ಎತ್ತಿದಾಂತ. ಕೋಪವೇ?

ಕಿಟ್ಟಿ: (ದೈನ್ಯದಿಂದ) ಕೋಪ ಏನಮ್ಮಾ...

ತಾಯಿ: (ವಿನಯವಾಗಿ) ಮತ್ಯಾಕೆ ಎದ್ಬಂದದ್ದು ಮಗೂ?

ಕಿಟ್ಟಿ: (ಒಣಗಿದ ಸ್ವರದಿಂದ) ಏನೂ ಇಲ್ಲಮ್ಮಾ...ನಂ ತಾಯಿ ಜ್ಞಾಪಕ ಬಂದು...

ತಾಯಿ: (ಹತ್ತಿರ ಬಂದು, ಕಿಟ್ಟಿಯ ತಲೆಯನ್ನು ಸವರುತ್ತಾ ಮೃದುವಾಗಿ) ಪಾಪ...ಏನು ಮಾಡೋದಪ್ಪ...ಈ ಹಾಳ್ ಪ್ರಪಂಚದಲ್ಲಿ ಹುಟ್ಟಿದ ಮೇಲೆ...ದೇವ್ರು ಏನ್ ಕಷ್ಟಗಳನ್ನ ಕೊಟ್ರೂ ನೂನೆ...ಅನುಭವಿಸಿಯೇ ತೀರಬೇಕಪ್ಪಾ! ಅಕೇನೂ ಪಾಪ...ಮನೇಲಿ ಮಕ್ಕಳ್ನ ಬಿಟ್ಟು ಹೋಗೋವಾಗ ಎಷ್ಟು ಸಂಕಟ ಪಟ್ಟಿರಬೇಕೋ ಕಾಣೆ!

ಕಿಟ್ಟಿ: (ತುಳುಕಿ ಬರುವ ದುಃಖವನ್ನು ಅಡಗಿಸಲಾರದೆ) ಹೋಗೋ ಸಂಕ್ಟ ಒಂದೇ ಇದ್ದಿದ್ರೆ... ಎಷ್ಟೋ ಮೇಲಾಗಿರ್ತಿತ್ತಮ್ಮಾ!...ಅದೊಂದೇ ಅಲ್ದೆ...ಮನೇಲೆಷ್ಟೋ ಗೋಳುಗ್ಳೆಲ್ಲಾ ನೋಡೀ ನೋಡೀ...ಬದುಕ್ಬೇಕೊಂಬೋ ಆಸೆ ಕೂಡ ಇಲ್ಲದ ಸ್ಥಿತೀಗೆ ಬಂದುಬಿಟ್ಟೆಮ್ಮಾ...

ತಾಯಿ: (ಕಿಟ್ಟಿಯನ್ನು ಕೈ ಹಿಡಿದು ಕರೆದುಕೊಂಡು ಹೋಗಿ ಸೋಫಾವಿನಲ್ಲಿ ಮೆಲ್ಲಗೆ ಕೂಡಿಸಿ ಪಕ್ಕದಲ್ಲಿ ಕುಳಿತು ಅವನ ತಲೆಯನ್ನು ಸವರುತ್ತಾ) ತ್ಸ! ತ್ಸ! ತ್ಸ! ಏಷ್ಟು ದಿನ ಆಯ್ತು ಮಗು... ನಿಂ ತಾಯಿ ಹೋಗಿ? ಅದೂ ಅಲ್ದೆ ನಿಂಭಾವಾನೂ ಹೋಗ್ಬಿಟ್ಟಾಂತಾನಲ್ಲ ನಮ್ಗೂ ? ಇದ್ಯಾವಾಗ?

ಕಿಟ್ಟಿ: ಯಾವಾಗೇನಮ್ಮಾ...ಅದೇ...ಆ ಇನ್‌ಫ್ಲುಯೆಂಜಾ ಗಲಾಟೇಲಿ! (ಮೆಲ್ಲಗೆದ್ದು ನಿಂತುಕೊಂಡು ಮುಖವನ್ನು ತಿರುಗಿಸಿಕೊಂಡು) ಮೊದಲು ನಮ್ಮಮ್ಮನಿಗೇನೇ ಬಂದದ್ದು ಜ್ವರ...ಆಗ ನಂ ಮನೇಲಿ...ನಾನು, ನಮ್ಮಪ್ಪ, ನಮ್ಮಮ್ಮ...ಮೂರ್ ಜನಾನೇ ಇದ್ದದ್ದು ಮನೇಲಿ...ನಮ್ಮಮ್ಮ.... "ಅಕ್ಕನಿಗೇನೂ ಬರೀಬೇಡಾ...ಬಸರಿಗಿದರ‍್ಯಾಳು" ಅಂತಂದ್ಲು...ಅವ್ಳ ಮಾತು ಕೇಳ್ದೆ ನಮ್ಮಪ್ಪ. ...ಏನೋ! ಹ್ಯಾಗಿರುತ್ತೋಂತ ಹೆದರ್ಕೊಂಡು...ಬರ್ದೇ ಬಿಟ್ಟ...ನಮ್ಮಕ್ಕನಿಗೆ...ಬರದ ಮಾರ್ನೇ ದಿನ ಅವನೂ ಬಿದ್ಕೊಂಡ...ಆದ್ರೂನೂ. ಅಲ್ಲಿ. ಇಲ್ಲಿ. ಓಡಾಡಿ...ಔಷ್ಧಿ ಗಿವ್ಧಿ...ಸಂಪಾದಿಸ್ಕೊಂಡು ನೋಡ್ಕೊಳ್ತಾ ಇದ್ದೆ...ತಕ್ಕಟ್ಟಿಗೆ...ಅಷ್ಟರಲ್ಲೇ....ನಮ್ಮಕ್ಕ ...ಅವಳೊಬ್ಬ ಮಂಕು...'ಅಮ್ಮನಿಗ್ ಗುಣವಾದ್ಮೇಕೆ ಕಾಗ್ದ ಬರ್ಲಿಲ್ಲಾಂತ ಬೆದರ್ಕೊಂಡು ಗೋಳಾಡೋದ್ ನೋಡ್ಲಾರ್ದೆ...ನಂಭಾವ ಕೋಲಾರ್ದಲ್ಲಿ ಲಾಯರಿ ಮಾಡ್ತಿದ್ದಾಮ್ಮಾ ಅಕ್ಕನ್ನೂ ಅವಳ ಕೂಸ್ನೂ ಕರ್ಕೊಂಡ್ ಬಂದ್ಬಿಟ್ಟಾಮ್ಮ ಇಲ್ಲಿಗೆ ...(ದುಃಖವನ್ನು ತಡೆಯಲಾರದೆ) ಬಂದು ಮನೇಲಿ ಹೆಜ್ಜೆ ಇಟ್ಟ್ ದಿನಾನೆ ಅವ್ನೂ ಬಿದ್ಕೊಂಡಾಮ್ಮ! ಏನ್ ಶನೀ ಜ್ವರವ್ವೋ ಕಾಣೆ? ಒಂದ್‌ವಾರ್ದಿಂದ ನರಳ್ತಿದ್ದ...ವಯಸ್ಸಾದೋರು...ಅಮ್ಮನೂ ಅಪ್ಪನೂ ಗಟ್ಟಿಯಾಗಿದ್ರೂ...ಅವನು ಜ್ವರಾಬಂದ ಮಾರ್ನೇ ದಿನಾನೆ ಪ್ರಾಣ ಬಿಟ್ಟ!...ಅಮ್ಮನ ಗೋಳೋ... ಹೇಳೋಕಾಗ್ದು...ಅವಳೊಂದ್ಕಡೆ ನರಳ್ತಿದ್ದಾಗ...ಡಾಕ್ಟರು...ಪಾಪ!...ದುಡ್ಡು ಕೊಟ್ರೇನೆ ಔಷ್ಧ ಅಂತಾನೆ...ಮನೇಲೋ, ಗಂಜಿ ಮಾಡೋಕ್ ಗತಿಯಿಲ್ಲ...ಈ ನಮ್ಮಣ್ಣನ್ ಮಾತೆತ್ತಿದ್ರೋ, ನಮ್ಮಪ್ಪನಿಗೆ ಬೆಂಕಿ...ಅವನಿಗ್ಮೊದ್ಲು. ಯಾವಾಗ್ಲೋ ಹೋಗಿದ್ದಾಗ, ನೋಡೋಕ್ ಪುರ್ಸೊತ್ತಿಲ್ಲಾಂತ ನಮ್ಮಣ್ಣ ಅಂದದ್ದು ಜ್ಞಾಪ್ಕ...ನನ್ಗೋ..."ಎಷ್ಟು ಪಾಪಿಯಾದ್ರೂನೂವೆ...ಮನೇಲಿ ಹುಟ್ಟಿ ಬೆಳ್ದದ್ದು ಮರ್ತ್‌ಬಿಟ್ಟು ಸಹಾಯ ಮಾಡ್ದೆ ಇದ್ದಾನೆ! ಗಂಜೀಗೂ. ಔಷಧಕ್ಕೂ ಗತೀ ಇಲ್ದೆ ಸಾಯ್ತಾ ಬಿದ್ದಿರೋ...ಹೆತ್ತೋರ್ಗೆ...ಧರ್ಮಕ್ಕಾದ್ರೂ!" ಅಂಬೋ ಹುಚ್ಚಿನ ಮೇಲೆ ನಮ್ಮಣ್ಣನ ಹತ್ರ ಹೋದೆ ...ಅವನ್ನ ಬೈದು ಏನ್ ಪ್ರಯೋಜ್ನ? ಅವ್ನೂ ಮಕ್ಳುಮರಿಯೋನು! ಈ ಜ್ವರಾ ಅಂಟ್‌ರೋಗ ಅಂತ್ಲೋ ಯೇನೋ...ಗೇಟ್ ಒಳ್ಗೇ ನಿಂತ್ಕೊಂಡು... 'ಅವನಿಗೆ ಬರೋ ಸಂಬ್ಳಾ ಎಲ್ಲ...ಅವನಂತಸ್ತಿಗೆ ಸರಿಯಾಗಿ ಮಾಡೋ ಖರ್ಚಿಗೇ ಆಗುತ್ತೇ'ಂದ್ಬಿಟ್ಟ! ಇನ್ನೇನು! ಭಾವ ಸತ್ತಾ!...ಅವನ ಸಾವ್ನೂ... ನಮ್ಮಕ್ಕನ ಹಣೇ ಬರಹಾನ್ನೂ, ಜ್ಞಾನ ತಪ್ಪಿರೋ ನಮ್ಮಪ್ಪನ ಸ್ಥಿತೀನೂ ಇದೆಲ್ಲಾ ನೋಡ್ತಾ... ಬಡ್ಕೊಳ್ತಾ ಪ್ರಾಣ ಬಿಟ್ಳು ನಮ್ಮಮ್ಮನೂವೆ! (ಬಿಕ್ಕಿ ಬಿಕ್ಕಿ ಅಳುತ್ತಾ)...ನಮ್ಮಕ್ನೋ. ಗಂಡನ್ನೂ ಕಳ್ಕೊಂಡು...ತಾಯಿನೂ ಕಳ್ಕೊಂಡು ಕೂಸ್ನ ಒಂದ್ಕಡೇ ಕಿತ್ತ್ ಎಸೆದ್ಬಿಟ್ಟು...ತಲೆ ಚಚ್ಕೊಳ್ತಿದ್ಲು... ಒಂದು ಮೂಲೇಲಿ!...ಏನುಮಾಡೋದಮ್ಮಾ ನಾನೀ ಗಲಾಟೇಲಿ!? ನಂ ಭಾವನ್ನ ಸಾಗ್ಸಿ... ಇನ್ ಅವನಿಗ್ಬೇಕಾದ ಸೌದೆ ಸಂಪಾದ್ಸಿ...ಅವನ್ಸುಟ್ಟು...ತಿರುಗ್ಬಂದ ಮಾರ್ನೆದಿನಾನೆ...ನಮ್ಮಮ್ಮನೂ ಹೋದದ್ದು...ಏನ್ ಮಾಡೋದ್ ನಾನು!...ಅವಳನ್ನ್ ಸಾಗ್ಸೋದೆ? ಜ್ಞಾನ ಇಲ್ದೇ ಬಿದ್ದಿದ್ದ ನಮ್ಮಪ್ಪನ್ನ ನೋಡಿಕೊಳ್ಳೋದೆ? ನಮ್ಮಕ್ಕನ್ಗೆ ಧೈರ್ಯ ಹೇಳೋದೇ...ಇಲ್ಲ...ಆ ಕಿರ್ಚ್‌ತಿದ್ದ ಕೂಸನ್ನ ಸಮಾಸೋರ್ದೇ...ದಿಕ್ಕೇ ತೋಚ್ದೆ ಹೋಯ್ತು (ಬಿಕ್ಕಿ ಬಿಕ್ಕಿ ಅಳುವನು. ಮಗುವಿನ ತಾಯಿಯು ಹತ್ತಿರ ನಿಂತು ಅವನ ತಲೆಯನ್ನು ಸವರಲು...ಅಲ್ಪ ರೋಷದಿಂದ) ನಂ ಮನೆ ಗೋಳ್ ನಿಮಗ್ಯಾಕಮ್ಮಾ ...ನನಗ್ಯಾಕೆ ನೀವ್ ಹೇಳಿ ಕಳ್ಸಿದ್ದು?

ತಾಯಿ: (ಕಿಟ್ಟಿಯ ಕೈಯನ್ನು ಹಿಡಿದು) ಕೂತ್ಕೋ ಕಿಟ್ಟೀ ಹೇಳ್ತೀನೆ! ಕಿಟ್ಟೀಂತ ಕೂಗ್ತಾದೇ ನಾನೂ ನಿನ್ನ?

ಕಿಟ್ಟಿ: ಕೂಗೀವ್ಮಾ...ಅದಕ್ಕೇನು?

ತಾಯಿ: (ಕಿಟ್ಟಿಯನ್ನು ಸೋಫಾಮೇಲೆ ಪಕ್ಕ ಕುಳ್ಳಿರಿಸಿ ಪಕ್ಕದಲ್ಲಿ ಕುಳಿತು)...ಈಗ ನೋಡು ಕಿಟ್ಟೀ! ನಮ್ಗೆಲ್ಲ...ಈ ಡಾಯ್ ಸ್ಕ್ರೂ ಅಂತಾರಲ್ಲ...ಇದಕ್ಕೆ ಸೇರಿ ಒಂದು ವರ್ಷಕ್ಕೇಲೆ ಆಗ್ಹೋಯ್ತು...ಆದ್ರೂನೂವೆ...ಇವನ ಜತೇಲಿರೋವ್ರಲ್ಲಿ...ಒಬ್ರನ್ನಾದ್ರೂ...ಒಬ್ಬನ್ನೂ ಮನೇಲಿ ಇಟ್ಟಿಲ್ಲ! ಆದ್ರೆ ಈಗ ಒಂದ್ ಹದ್ನೈದ್ ದಿವಸದಿಂದ...ನೋಡು...ಹಗಲು ರಾತ್ರಿ..."ನಂ ಕಿಟ್ಟೀ ಹೀಗೆ" "ನಂ ಕಿಟ್ಟೀ ಹಾಗೆ"..."ನಂ ಕಿಟ್ಟೀ ಇವತ್ತಿದಂದಾ"..."ನಂ ಕಿಟ್ಟಿ ಇವತ್ತಿದ್ದಾ"ಂತ ಯಾವಾಗ್ಲೂ ನಿನ್ನೆಸ್ರೇ ಅವನ್ಬಾಯಲ್ಲಿ!...ಯಾವತ್ತೂ ಇಲ್ದೇ ಈ ಹದ್ನೈದ್ ದಿವಸದಲ್ಲಿ...ನನ್ನ ಮಗನ ತಲೆ ತುಂಬಾ ತುಂಬ್ಕೊಂಡಿರೋ ಈ ಅದ್ಭುತ ಸ್ನೇಹಿತನ್ನ...ಹ್ಯಾಗಾದ್ರೂ ನೋಡ್ಬೇಕೂಂತ ನನ್ನಾಸೆ...ಈಗ ನಿನ್ನ ನೋಡಿ ನನ್ನಾಸೆ ಪೂರೈಸ್ಕೊಂಡೆ! ದೇವ್ರು...ನಂ ಗುಣ...ನಂ ಧೈರ್ಯ...ನಂ ಧಾರಡ್ಡಾನ ಪರೀಕ್ಷೆ ಮಾಡೋಕೆ ಕಳ್ಸೋ ಕಷ್ಟಗಳನ್ನ ಹ್ಯಾಗಾದ್ರೂ ಅನುಭವಿಸಿಯೇ ತೀರ್ಬೇಕೂಪ್ಪ!...ನನ್ಗಿನ್ನೂ ಅರ್ಥವಾಗಿಲ್ಲ...ಇಷ್ಟ್ ಘಟ್ಟಿಗ...ಇಷ್ಟ್ ಬುದ್ಧಿವಂತ...ಇಷ್ಟ್ ಚಿಕ್ ವಯಸ್ನಲ್ಲೇ ಇಷ್ಟು ದೊಡ್ಡ ಕೆಲ್ಸ ಕ್ಕೊಂಡವ್ನು!.. ಹೆತ್ತವ್ರಿಗೆ ಕಷ್ಟ ಕಾಲ ಬಂದಾಗ...ಹೃದಯಾನ ಘಟ್ಟಿ ಮಾಡ್ಕೊಂಡು...ಸ್ವಲ್ಪವೂ ಸಹಾಯ ಮಾಡ್ದೆ...ಹ್ಯಾಗೆ ಸುಮ್ನಿದ್ದ?...ಚಿಕ್ಕಂದ್‌ನಲ್ಲೇ...ಒಂದ್‌ವೇಳೆ ಮನೇಲಿ ಜಗ್ಳ ಗಿಗ್ಳ ಏನಾದ್ರೂ ಆಡ್ಕೊಂಡು...ಮನೇ...ಬಿಟ್ಟು ಹೋಗ್ಬಿಟ್ನೇ?

ಕಿಟ್ಟಿ: ಚಿಕ್ಕಂದಿನಲ್ಲೇ ಜಗ್ಳ ಆಡ್ಕೊಂಡ್ ಹಾಳಾಗಿದ್ರೆ...ಎಷ್ಟೋ ಮೇಲಾಗಿತ್ತೂವ್ಮಾ! ನಾವೀಗಿರೋ ಸ್ಥಿತೀಗೆ ಬರ್ತಿರಲಿಲ್ಲ!...ನೀವ್ ಹೇಳಿದ್ರಲ್ಲ..."ಅತಿ ಬುದ್ಧೀ"ಂತ...ಅದ್ರಿಂದ್ಲೇ ಬಂದದ್ ಈ ಅವಸ್ಥೆಯೆಲ್ಲಾ!...ಮೊದಲು ಅವನು ಲೋವರ್ ಸೆಕೆಂಡರಿ ಫಸ್ಟಾಗಿ ಪ್ಯಾಸ್ ಮಾಡ್ದಾ... ನಮ್ಮಪ್ಪ..."ಯಾವ ಪುಣ್ಯ ಮಾಡಿದ್ನೋ ಕಾಣೆ! ಬೃಹಸ್ಪತಿ ಬಂದ್ ಸೇರ್ಕೊಂಡಿದಾನೆ ನಂ ಕುಟುಂಬ್ದಲ್ಲೀ ...ಇನ್ನ್ ಇವ್ನಿಗೆ ಮುಂದಕ್ಕ್ ಬರೋ ದಾರೀನ ತೋರಿಸಿ ತೋಡಿದ್ರೇನೇ ನನ್ ಜನ್ಮ ಸಾರ್ಥಕ್ವಾಗತ್ತೇಂ"ದ್ಕೊಂಡು...ಷುರು; ಯಾವ್ದಕ್ಕೂ ನಮ್ಮಣ್ಣನ್ನೇ ತಾರೀಫ್ ಮಾಡೋದಕ್ಕೆ! ಇನ್ ಮೆಟ್ರಿಕ್ಯುಲೇಷನ್ ಫಸ್ಟ್‌ಕ್ಲಾಸಿನಲ್ಲಿ ಗೆದ್ನೋ ಇಲ್ವೋ, ಬಂತು ಮನೇಗೆ ಜೇನ!...ನಮ್ಮಪ್ಪ ನಂ ಹಳ್ಳೀಲಿ ನಮ್ಮದು ಹೊಲ-ಗದ್ದೇನ ಮಾರ್ಬಿಟ್ಟು ನಮ್ಮೂರು ಕಾಲೇಜ್ ಸಾಲ್ದೂಂತ ಅವನ್ನ ಮದ್ರಾಸಿಗೆ ಕಳಿಸ್ದ... ಇದ್ದ್ ದುಡ್ಡೆಲ್ಲಾ ಖರ್ಚೂನು ಮಾಡ್ದ...ಎಫ್.ಎ.ನೂ ಫಸ್ಟಾಗಿ ಮಾಡ್ದ! ಇನ್ ಬಿಡ್ತಾನ್ಸ್ ಬಾಕಿಯಿಲ್ಲ. ಇನ್ನು ಬಿ.ಎ.ಗೆ ದಾರಿ ಏನೂಂತ ಔನು... "ಇದ್ ಸಾಧಾರಣ ಬುದ್ಧಿ ಅಲ್ಲ...ಇನ್ನ್ ಇವ್ನಿಗೆ ಹ್ಯಾಗಾದ್ರೂ ದುಡ್ಡೊದಗಿಸ್ಕೊಟ್ರೆ ಬಲು ಮುಂದಕ್ಬಂದ್ಬಿಡ್ತಾನೆ ಮುಡ್ಗ"ಂತ ನಮ್ಮಮ್ಮನೊಡ್ವೆಗಳ್ನೆಲ್ಲಾ ಮಾರಿ...ಜೆನ್ ಬಿ.ಎ.. ಖರ್ಚೂ ತೀರ್ತು. ಅದ್ನೂ ಫಸ್ಟಲ್ ಮಾಡ್ಕೊಂಡು ಮನೇಗ್ಬರುತ್ಲೂನೂವೆ ನಂ ಹುಡ್ಗ ದಿವಾನಿ ರಿವರ್‍ಗೂ ಮುಟ್ಟೋದ್ರಲ್ಲಿ ಸಂದೇಹವೇನೂ ಇಲ್ಲ!...ಕಮಿಷನ್ರು... ಪರೀಕ್ಷೆಗೆ...ಸಿವಿಲ್ ಸರ್ವಿಸ್ ಪರೀಕ್ಷೆ ಅಂತಾರಲ್ಲಮ್ಮ ಅದು...ಆ ಪರೀಕ್ಷೆಗೆ ಹೇಗಾದ್ರೂ ಕಳ್ಸೇಬಿಡ್ಬೇಕೂಂತ "ಕತ್ತಿಗೆ ಕರೀಮಣಿ ಸಾಕೂ"ಂತ ನಮ್ಮಮ್ಮನ್ ತಾಳೀ ಮಾರಿ...ಪರೀಕ್ಷೆಗೆ ದುಡ್ಕಟ್ಟಿದ ನಮ್ಮಪ್ಪ!...ಇನ್ನೇನು ಆ ಪ್ಯಾಸ್ನೂಮಾಡ್ದ...ಕೆಲ್ಸಾನೂ ಸಿಕ್ತು...ನಮ್ಮನೇಗೂ ಅವನ್ಗೂ ಇದ್ದ ಋಣಾನುಬಂಧಾನೂ ತೀರ್ತು!

ತಾಯಿ: ತೀರ್ತು ಅಂದ್ರೆ?

ಕಿಟ್ಟಿ: ಅಂದ್ರೆ ಏನೇ? ನಂಜಾತೀವರ್ನ...ಅಲ್ಲ...ಬಡವರ್ನ...ಜೀವೀಲ್ ನೋಡೋಕ್ಕೂದ ಅಸಹ್ಯಪಡೋ ದೊಡ್ಮನುಷ್ಯರಲ್ಲಿ ಒಬ್ಬ್ ಪಾಪಿ ಬಿಡ್ದೇ ನಮ್ಮಣ್ಣನ್ನ ಹಿಡ್ಕೊಂಡ್ರು!...ದಿವಾನ್ಗಿರಿಗೆ ದಾಖಲಾಗೋ ಇವನ್ನ ಅಳಿಯನಾಗಿ ಮಾಡ್ಕೊಳ್ಳೋಕೆ! ಇನ್ನೇನು ಆ ಜಾತೀಲಿ ಮದ್ವೆಮಾಡ್ಕೊಂಡ! ...ನಮ್ಮಪ್ಪ ಅಮ್ಮನ್ನ ಕೂಡ ಕರೀಲಿಲ್ಲ ಮದ್ವೇಗೆ!...ಅವನಾಯ್ತು! ಅವನ್ ಹೆಂಡ್ತಿ ಮಕ್ಕಳಾಯ್ತು! ...ಅವನ್ ಬಂಗ್ಲೇ ಆಯ್ತು...ನಮ್ಮಮ್ಮ ಹೇಳಿದ್ಹಾಗೆ..."ಇಷ್ಟ್ ಘಟ್ಟಿಗನ್ನ ಹೆತ್ತವಳ್ಲಾಂತ ಪಟ್ಟ ಸಂತೋಷಕ್ಕೆ ಗದ್ದೆ ಹೊಲಾನೂ ಮಾರಿ...ಒಡ್ವೆಗಳನ್ನೂ ಮಾರಿ...ಬೆಲೆ ಕೊಟ್ಹಾಗಾಯ್ತು: ಇನ್ ನಾವು ದರಿದ್ರರಾದ್ರೂನೂವೆ ದೊಡ್ಮನುಷ್ಯರಿಗೆ ಮಗನ್ ಧಾರೇ ಎರೆದ್ಹಾಗೂ ಆಯ್ತು!"

ತಾಯಿ: ಸ್ವರೀ!...ಬಿಡು ಮಗು! ಇನ್ನೇನವನ್‌ಮಾತು?...ಏನೋ ಇಷ್ಟು ಕಷ್ಟಾನನುಭವಿಸಿದ್ರೂವೆ...ನಿಂ ತಂದೇಗೆ...ಸೀನಾದ್ರು...ಇಷ್ಟೇಯಲ್ಲ! ಧೈರ್ಯವಾಗಿ ನಿನ್ನ ಕೈಲಾದವಟ್ಟಿಗೂ ...ಮನೇಗೆ ಸಹಾಯಮಾಡಪ್ಪಾ! ಅದಕ್ಕೇ ನಾನೂ ನಂ ಮಗೂ ಹತ್ರ ಹೇಳಿದ್ದು...ನಿನ್ನ ಕರ್ಕೊಂಡ್ಬಾ ಅಂತ...

ಕಿಟ್ಟಿ: (ವಿಸ್ಮಿತನಾಗಿ) 'ಅದಕ್ಕೆ'? ಯಾವ್ದಕ್ಕಮ್ಮಾ?!

ತಾಯಿ: ಈಗ ನೋಡು ಕಟ್ಟಿ ನಂ ಹುಡ್ಗ...ಈ ಬಾಯ್ ಸ್ಕೌಟಿಗೆ ಸೇರ್ದಾಗ್ನಿಂದ ೭-೭॥-೮-ಟೀಗೆ ಹೊತ್ತು ಬಿಟ್ಕೊಂಡ್ಬರ್ತಾನೆ ಮನೇಗೆ...ನನಗೋ, ಮಗು ಕತ್ಲಲ್ಲಿ ಒಬ್ನೇ ಬರ್ತಾನಲ್ಲಾಂತ ಹೆದ್ರಿಕೆ! ಇನ್ನು ಜವಾನನ್ನ ಕಳ್ಸೋಣ ಅಂದ್ರೋ "ನಾಚಿಕೆ ಆಗುತ್ತೆ ನನಗೆ...ಹಾಸ್ಯಮಾಡ್ತಾರೆ ನನ್ನ ಸ್ನೇಹಿತ್ರು" ಅಂತಾನೆ ಅಪ್ಪು...ಅದಕ್ಕೇ ನಿನ್ಗಿಂತ ದೊಡ್ಡೋನಾಗ್ಯೂ...ನಂ ಪೇಟೇಲೆ ಮನೇಲಿರೋ ಸ್ನೇಹಿತ...ಯಾರಾದ್ರೂ ಇದ್ರೆ ಅವನ್ಜೊತೇಲೇ ನಿತ್ಯಾನೂ ಮನೇಗ್ ಬಾಂತಂದೆ...ಇದ್ ನಿನಗೆ ಹೇಳೋಕೆ ಕರ್ಸಿದ್ ನಿನ್ನ...ಸಮ್ಮತವೇ ನಿನ್ ಮನಸ್ಸಿಗೆ?...(ಗಟ್ಟಿಯಾಗಿ) ನಾರಾಯಣಾ!...(ಒಳಗಿನಿಂದ 'ಅಮ್ಮಾ' ಎಂದು ಕೇಳಿಬರುವುದು)...ಆ ಟಿಫನ್ನು...ಕಾಫೀನೂ ತಕ್ಕೊಂಡ್ಬಾ ಮಕ್ಕಳಿಗೆ...!

ಕಿಟ್ಟಿ: ಸಮ್ಮತವಿಲ್ದೆ ಏನಮ್ಮಾ! ದಿನಾ ಬರೋವಾಗ ಮಗೂನ...ನಿಮ್ಮನೇಲಿ ಬಿಟ್ಬಿಟ್ಟು ಹೋಗೋದ್ರಲ್ಲಿ ನನ್ಗೇನೂ ತೊಂದ್ರೆ ಇಲ್ಲ...ಆದ್ರೆ...ನೀವು...ಯೋಗ್ಯ...ಗೀಗ್ಯ ಅಂತಂದ್ರಲ್ಲ...ಆ ಸರ್ಕೆಲ್ಲಾ ನಂ ಅಂಗ್ಡೀಲಿಲ್ಲ!...ಅಲ್ಲ...ಆ ಬಾಬ್ತಿಗೆ ಸೇರ್ದೋನಲ್ಲ ನಾನು!...

ತಾಯಿ: (ನಗುತ್ತಾ) ನೀನ್ ಸೇರ್ದಿದ್ರೆ...ಇನ್ನ್ ಯಾರ್ ಸೇರ್ತಾರೆ ಕಿಟ್ಟೀ!?

ಕಿಟ್ಟಿ: ಬಂಗ್ಲೇಲಿ ಬೆಳೆದ ಇಸಂಗ್ಳು...ಅಲ್ಲ...ದೊಡ್ಮನುಷ್ಯರ ಮಕ್ಳು ಅಮ್ಮಾ...ನನ್ನ ಬಾಬ್ತೇ ಬೇರೆ.

ತಾಯಿ: (ನಗುತ್ತಾ) ನಿನ್ನ ಬಾಬ್ತು ಅಂದ್ರೆ ಯಾವುದಪ್ಪಾ!

ಕಿಟ್ಟಿ: ಪೋಲೀ ಬಾಬ್ತಮ್ಮಾ! ನಿಂ ಹುಡುಗನ ಸಹ್ವಾಸಕ್ಕೆ ನನ್ನ ಸೇರ್ಸೋಕೆ ಮುಂಚೆ ನಿಮಗೆ ತಿಳಿಯಬೇಕಾದ ವಿಷ್ಯ ಇದು!...ನನ್ನ ಹೆಸ್ರೇ (ಮುಖವನ್ನು ಸೂರಿಗೆತ್ತಿ) ಪೋಲೀ ಕಿಟ್ಟೀಮ್ಮಾ!!

ತಾಯಿ: 'ಪೋಲೀ' ಅಂದ್ರೇನ್ ಕಿಟ್ಟೀ?

ಕಿಟ್ಟಿ: (ಹುಬ್ಬುಗಳನ್ನು ರಚಿಸಿ) 'ಪೋಲೀ'ಂದ್ರೆ ಹ್ಯಾಗೆ ಹೇಳೋದಮ್ಮಾ...ಅದು...ಯಾವ ವಿಧದಲ್ಲಿಯೂ...ಹೋಪ್ಲೆಸ್ಸ್...ಅಂತಾರಲ್ಲಾ...ಆ ಬಾಬ್ತೂಮ್ಮಾ!

ತಾಯಿ: (ಎದ್ದು ನಿಂತು ಕಿಟ್ಟಿಯ ತಲೆಯಮೇಲೆ ಕೈಯನ್ನಿಟ್ಟು) ಯಾರು ಯಾವ ಬಾಬ್ತೂಂತ್ಲಾದ್ರೂ ಅಂದ್ಕೊಳ್ಳೀ...ನಮ್ಗೇನ್ ಕಿಟ್ಟೀ? ನಮ್ಮಗೂನ ನಿನ್ನ ತಮ್ಮನ್ಹಾಗೇ ನೋಡ್ಕೊಂಡು, ಅವ್ನ ಧೈರ್ಯಶಾಲಿಯಾಗಿ ಬೆಳ್ಸಾಂದ್ರೆ...ಅಷ್ಟೇ ಸಾಕ್ನನ್ಗೆ...(ಪರಿಚಾರಕನು ಫಲಾಹಾರ ಕಾಫಿ ತಂದಿಟ್ಟು, ಹೋಗುವನು) ಮಗೂ! ಇಬ್ರೂ ಟಿಫನ್ ತಿಂದು ಕಾಫಿ ಕುಡಿರೀ...ನಾನೊಳಗ್ಹೋಗ್ತೇನೆ...

[ಹೋಗುವಳು.]

ಕಿಟ್ಟಿ: ಕೇಳ್ದೇನೋ ಲೋ! ಗುಬ್ಬಚ್ಚಿ! ನಿಂ ಮದರ್ ನಿನ್ನ ನನ್ನ ಛಾರ್ಜಿಗೆ ಕೊಟ್ಬಿಟ್ಟಿದ್ದಾ?... ಇನ್ಮೇಲೆ ನಾನ್ಹೇಳಿದ್ದು ಕೇಳ್ದಿದ್ರೆ ಎಂಕೆಗಳ್ ಬಗ್ಗಿಸಿಬಿಟ್ಟೇನು? ಹುಷಾರು!

ಮಗೂ: ಕಿಟ್ಟಿ ಲೇ! (ತನ್ನ ಬಾಹುವನ್ನು ಸವರುತ್ತಾ) ನನ್ನ ಬೈಸೆಪ್ಸ್ನ ಸಿಂದ್ರಾಗೇ ಆಗ್ಲಿ ಸ್ವಲ್ಪ...ಆಗ ನೋಡ್ತೇನೆ...ನೀನ್ ಯಮ್ಕೆಗಳ್ ಬಗ್ಗಿಸೋದ್ನ!...ಅದೆಲ್ಲಾ ಇರ್ಲೀ...ಈ ಬೋಂಡಾಗಳ್ನ ಬಾಯಿಗ್ಹಾಕ್ಕೊಮ್ಮೋಣ ಬಾ!

ಕಿಟ್ಟಿ: ಜೋಂಡ ನಿನ್ನ ಮೈಗೊಳ್ಳೇದಲ್ಲ ಕಣೋ!...ಜೊಂಡಾಗಳಿಗೂ ಟ್ರೈಸೆಪ್ಸಿಗೂ ಜನ್ಮಾಂತರ! ...ಟ್ರೈಸೆಪ್ಸ್ ಬೆಳ್ಸ್ತೋರೂ ಜೋಂಡಾ ತಿಂದ್ರೇನೂ ಬಾಧಕವಿಲ್ಲ!...(ಕಾಫಿಯನ್ನು ಕುಡಿದು ಸೊಟ್ಟ ಮೋರೆಯೊಡನೆ) ಯೇನೋ? ಇದು?

ಮಗೂ: ಯಾಕೋ?! ಕಾಫೀಗ್ ಸಕ್ರೆ ಸಾಲ್ದೇ?

ಕಿಟ್ಟಿ: ಕಾಫೀಗ್ ಸಕ್ರೆ! ಒಳ್ಳೇ ಗುಗ್ಗೂನೋ ನೀನು! ನಾನ್ ಯಾವಾಗ್ಲೂ ಸಕ್ರೇಗೆ ಕಾಫಿ ಹಾಕೊಂಡು ಕುಡಿಯೋದೋ!

ಮಗೂ: (ನಗುತ್ತ) ಹಾಗಾದ್ರೆ ತರ್ತೇನೆ, ಇರೋ!

[ನಿಷ್ಕ್ರಮಣ]

ಕಿಟ್ಟಿ: (ಸುತ್ತಮುತ್ತಲೂ ನೋಡುತ್ತಾ) **ಮಿಕ್ಕೋವ್ರು ಈ ಮನೇಲಿ ಹ್ಯಾಗಿದ್ರೂನೂ ....ಇವರಮ್ಮ...ನಮ್ಮ ಜಾತೀನೆ...ನಮ್ಮಮ್ಮನ್ಹಾಗೇನೇ!**

[ಮುಖವನ್ನು ಮೇಜಿನ ಮೇಲೊರಗಿಸುವನು]

[ಥರದೆ ಬೀಳುವುದು.]

ದೃಶ್ಯ ೭

[ಸ್ಥಳ—ಮೈದಾನ]

[ರಾಘುವಿನ ದಳದವರು ಕೋಟುಗಳಿಲ್ಲದೆ ಕುಸ್ತಿ, ಓಟ ಮುಂತಾದ ಪಂದ್ಯ ಪರೀಕ್ಷೆಗೆ ತಯಾರಾಗಿರುವರು.]

ಕಿಟ್ಟಿ: ಲ್ರೋ! ಹರಕಲ್ ಬನಿಯನ್ ಹಾಕ್ಕೊಂಡಿದ್ರೆ—ಬಯ್ಕೊಂಡಾರೇನೋ. ಶುಕ್ರಾಚಾರ್ರು? ಅಲ್ಲ...ಎಸ್ಸೆಮ್ಮೂ?

ಅಪ್ಪೂ: ಏನೂ ಇಲ್ಲಾ ಕಾಣೋ...ಯಾಕೋ...?

ಕಿಟ್ಟಿ: ಅಯ್ಯೋ! ಮೊದಲೇ **ಡ್ರಿಲ್‌ನಲ್ಲಿ ನಿನ್ ಷರಾಯಿ** ಹೀಗಿದೆ...ಕೋಟು ಹಾಗಿದೆ... ಗುಂಡಿ ಹಾಕಿಪ್ ಸರಿಯಿಲ್ಲ ಅಂದೋರು...ಈ ಹರಕಲ್ ಬನೀರ್ನ ನೋಡಿ ಬಯ್ಕೊಂಹಾರೋ ಏನೋಂತ ಕೇಳಿದ್ದು...ಆದ್ರೆ ಬಯ್ಕೊಂಡ್ರೆ ತಾನೇ ಏನು?...ಬನಿಯನ್ನು ಹೇಗಾದ್ರೂ ಕೋಟ್ ಮುಚ್ಕೊ ಬಾಬ್ತೂಂತ ಹೇಳ್ಕೋತೇನೆ...ಅದಕ್ಕೂ ಗೋಣಗುಟ್ಕೊಂಡ್ರೆ...ಕುಸ್ತೀಲಿ...ಕಿತ್ತು...ಹರ್ದ್ಹೋದೀತೂಂತ...ನನ್ ರೇಷ್ಮೆ ಷರ್ಟು...ಜರ್ತಾರಿ ಬನಿಯನ್ನು...ಇವುಗಳ್ನೆಲ್ಲಾ ಮನೇ ಪೆಟ್ಗೇಲಿಟ್ಟು...ಚಿನ್ನದ ಬೀಗಾ ಹಾಕಿ ...ಈ ಗಾಳೀ ತೂರೋ ಬಾಬ್ತು ಹಾಕ್ಕೊಂಬಂದಿಧ್ಧೇನೇಂದ್ರಾಯ್ತು!...ಓಹೋ? ಬಂದ್ಬಿಡ್ತು ಸುಲೋಚನಾ!

[ಪ್ರವೇಶ—ಸ್ಕೌಟು ಮಾಸ್ಟರು]

ಸ್ಕೌಟು ಮಾಸ್ಟರ್: ಫಾಲಿನ್ (Fall in)! (ಎಲ್ಲರೂ ಸಾಲಾಗಿ ನಿಲ್ಲುವರು) ಬ್ರಿಗೇಡ್ ಸ್ಪೋರ್ಟ್ಸ್ (Brigade Sports) ದಿನ...ರೆಸ್ಲಿಂಗ್ ಕಾಂಪಿಟಿಷನ್ನಿಗೆ (Wrestling

Competition) ನಂ ಪೇಟ್ರೋಲ್ನಿಂದ ಯಾರು ಹೋಗೋದು ಅಂತೋದ್ನ ಡಿಸೈಡ್ (decide) ಮಾಡ್ಬೇಡೋಣ ಇವೊತ್ತು; Eleven to fourteen years of age, ಎಷ್ಟು ಜನ ಇದ್ದೀರಿ, ಪೇಟ್ರೋಲ್ನಲ್ಲಿ?

ಮಗೂ, ಶಾಮಿ, ರಾಮು: ನಾವು ಸಾರ್!...

ಸ್ಕೌಟು ಮಾಸ್ಟರ್: Fourteen to Sixteen, ಎಷ್ಟು ಜನ?

ಅಪ್ಪೂ, ವಾಸು: ನಾವಿಬ್ರು ಸಾರ್!

ಸ್ಕೌಟು ಮಾಸ್ಟರ್: ಕ್ರಿಷ್ಣಾರಾವ್! ನಿನ್ಗೆಷ್ಟು ವಯಸ್ಸು!

ಕಿಟ್ಟಿ: ೧೮, ಸಾರ್!

ಸ್ಕೌಟು ಮಾಸ್ಟರ್: ಹಾಗಾದ್ರೆ, ನೀನೂ ರಾಘು ಒಂದು ಬ್ಯಾಚೂ (Batchoo)!... (ಎಲ್ಲರಿಗೂ) ಈ ಮೂರು ಬ್ಯಾಚ್ನಲ್ಲೂ ಒಂದೊಂದ್ರಲ್ಲೊಬ್ಬೊಬ್ಬನ್ನ ಡಿಸೈಡ್ಮಾಡಿ ವಿನ್ನರ್ಸೂ ಸ್ಪೋರ್ಟ್ಸ್ ದಿನ ಹಾಜರಾಗ್ಬೇಕು...(ರಾಘುವನ್ನು ಕುರಿತು)ಇನ್ ಟೆನ್ಮಿನಿಟ್ಸ್ನಲ್ಲಿ ಬರುತ್ತೇನೆ... ಅಷ್ಟರಲ್ಲೇ ರೆಸ್ಲಿಂಗಿಗೆಲ್ಲಾ ಅರೇಂಜ್ ಮಾಡಿರು.

[ನಿಷ್ಕ್ರಮಣ]

ಕಿಟ್ಟಿ: ರಾಘು ಲೋ! ನಾನ್ ನಿನ್ಜೊತೇಲಿ ಕುಸ್ತೀನೇ?

ರಾಘು: (ಸಿಡುಕಾಗಿ) ಹೌದೋ!

ಕಿಟ್ಟಿ: ಹಾಗಾದರೆ ಕಾಳ್ಯಾದೇವೀಗಿಧೇ ಈವತ್ತು ಒಂದ್ಕೋಳೀ ಬಲೀ?!

ರಾಘು: ಯಾವ ಕೋಳೀಯೋ?

ಕಿಟ್ಟಿ: ಅಲ್ಲ! ಜಂಭದ್ಕೋಳೀಂತದೊಂದ್ ಜಾತಿ!

[ರಾಘುವು ಕಿಟ್ಟಿಯನ್ನು ಬಿಟ್ಟು ಮಿಕ್ಕವರ ಹತ್ತಿರಕ್ಕೆ ಹೋಗಿ]

ರಾಘು: ಲ್ರೋ!...ಜೋಡಿಗ್ಳೆಲ್ಲಾ ತಯಾರಾಗಿ ನಿಲ್ರೋ ಎಸ್ಸೆಂ ಬರೋಷ್ಟ್ ಹೊತ್ಗೆ!...

ಅಪ್ಪು: ನಾವ್ ನೋಡ್ಕೋತೇವೋ ನಂ ಕೆಲ್ಸ...ಮೊದೂಲ್ಕುಸ್ತಿ ಯಾರ್ದು?...ಕಿಟ್ಟೀದೆ... ಅಲ್ಲಾ...ನಿಂದೇ?

[ರಾಘುವು ಉತ್ತರ ಕೊಡದಿರುವನು—ಪ್ರವೇಶ—ಸ್ಕೌಟುಮಾಸ್ಟರು]

ಸ್ಕೌಟು ಮಾಸ್ಟರ್: (ಪಟ್ಟಿಯಿಂದೋದುತ್ತಾ)...ರಾಘವೇಂದ್ರರಾವ್! ಕ್ರಿಷ್ಣಾರಾವ್! ಸ್ಟಾರ್ಟಾಫ್! (Strat off)!

ಕಿಟ್ಟಿ: ಹಾಗಾದರೆ ಷುರು ಮಾಡ್ಲೇ ಸಾರ್?

[ಕಿಟ್ಟಿಯು ಷರಾಯನ್ನು ತೊಡೆಯುವರೆಗೂ ಎತ್ತಿ ಸಿಕ್ಕಿಸಿಕೊಂಡು, ಗರಡಿ ಪೈಲ್ವಾನನಂತೆ ತೋಳು ತೊಡೆಗಳನ್ನು ತಟ್ಟುತ್ತಾ—ಬಗ್ಗಿ ಬಲಗೈಯಿಂದ ನೆಲದ ಮಣ್ಣನ್ನು ತೆಗೆದು ಎದೆಗೆ ಬಳಿದುಕೊಂಡು, ಮತ್ತೆ ತೊಡೆಯನ್ನು ತಟ್ಟುತ್ತಾ 'ಯಾ ಮೇರೆ ಮೌಲ' ಅನ್ನುತ್ತಾ ರಾಘುವಿನ ಕಡೆ ಹೆಜ್ಜೆ ಹಾಕುವನು.]

ಸ್ಕೌಟು ಮಾಸ್ಟರ್: ಇದೇನೋ ಇದು ನಿನ್ ಕುಣ್ದಾಟ...ಮೈಗ್ಯಾಕೋ ಮಣ್ತೂರ್ಕೊಂಡೇ? ...ಅದೇನೋ ಜಪಮಾಡ್ತಿರೋದ್ ನೀನು?

ಕಿಟ್ಟಿ: ಅದು ನಮ್ಮ ಅಖಾಡಾದ ಆಡತ್ತು ಸಾರ್...ಕುಸ್ತೀ ಗುತ್ತಾಯ್ತೋ ಹಾಗೆ. ಡಾಲ್ಡ್ಯಾನ ಛಾತೀಗ್ ಲಗಾಯ್ಸಿಕೊಂಡು...ವಸೆಲಾಲೀ ಹೆಸರ್ಹೇಳಿ...ಪಲೀಫರ್ನ ಬಾದ್ ಮಾಡ್ಕೊಂಡ್ರೆ...ಬಿಸೀ ತಾಕ್ಪತ್ ಬರತ್ತೇ ಸಾರ್...ತಾಕ್ಪತ್ತು! ಇದು ಆಡತ್ತು ಸಾರ್...ಅಖಾಡಾದಲ್ಲಿ!

ಸ್ಕೌಟು ಮಾಸ್ಟರ್: ನಿನ್ನಾರ್ ಸಾಕಿದ್ರೋ?...ಎಲ್ಲಿ ಬೆಳೆದ್ಯೋ?...ಬೆನ್ನಾಗಿದೆ! ಬರೀ ತುಂಟರ ಪುಂಡ ಬಂದ್ ಸೇರ್ಕೊಂಡಿತ ಬ್ರಿಗೇಡ್ಗೆ!...ಏನ್ ಭಾಷೇನೊ?...ಕಾಲ್‌ಪಾಲು ಕನ್ನಡ...?!

ಕಿಟ್ಟಿ: ಮುಕ್ಕಾಲ್ ಮುಸಲ್ಮಾನಿ ಸಾರ್! ತುರುಕ್ರು ಜಾಸ್ತಿ ಸಾರ್, ನಂ ತಾಲೀಂನಲ್ಲಿ...ನಾನ್ ನಾಲಕ್ಕ್ ವರ್ಷದಿಂದ ಸಾರ್, ನಂ ಬಸ್ತೀಲಿ...

ಸ್ಕೌಟು ಮಾಸ್ಟರ್: ಸಾಕೋ! ನಿನ್ನ ವಿಚಿತ್ರ ಚರಿತ್ರೆ...ಕುಸ್ತಿ ಮಾಡು...!

[ಕಿಟ್ಟಿಯು "ಹನುಮಂತ ಪಟ್ಟೆ"ಯನ್ನು ಹಾಕುತ್ತಾ, ರಾಘುವಿನ ಕಡೆ ನಡೆಯುವನು. ರಾಘುವು ಬೆಚ್ಚಿ ಬಿದ್ದು ನಿಲ್ಲುವನು.]

ಸ್ಕೌಟು ಮಾಸ್ಟರ್: ಏನ್ ಯೋಚಿಸ್ತಿಧೀಯೋ ಕುಸ್ತಿಮಾಡೋದ್ಬಿಟ್ಟು?

ರಾಘು: ಯೋಚ್ನೆಯೇನೂ ಇಲ್ಲ ಸಾರ್! ಇವನ್ನ ಕುಸ್ತಾಟ ನನಗರ್ಥವಾಗೋದಿಲ್ಲ ಸಾರ್!

ಕಿಟ್ಟಿ: (ರಾಘುವಿಗೆ) ಅರ್ಥವಾಗ್ದಿದ್ರೆ, ತರ್ಜುಮೆ ಮಾಡಿ ಹೇಳ್ತೀನೆ...ಇಲ್ಲಿ ಬಾ...

[ರಾಘುವು ಮುಂದಕ್ಕೆ ಬರುವನು. ಇಬ್ಬರೂ ಹಿಡಿದುಕೊಂಡು ಕ್ಷಣಮಾತ್ರ ಜಗ್ಗುವರು. ಕಿಟ್ಟಿಯು ಒಂದು "ಟಾಂಗ್"ನ್ನು ಕೊಟ್ಟು ರಾಘುವನ್ನು ಬೀಸಿ ಕೆಡವುವನು. ರಾಘುವು ಎದೆ ಮೇಲಾಗದೇ ಅಧೋಮುಖವಾಗಿ ತಿರುಗಿಕೊಂಡು ಬೀಳುವನು.]

ಕಿಟ್ಟಿ: (ನಿಂತಿದ್ದ ಹಾಗೆ) ಇದೇನ್ಕುಸ್ತೀ ಸಾರ್!

ಸ್ಕೌಟು ಮಾಸ್ಟರ್: ಯಾಕೋ?

ಕಿಟ್ಟಿ: ನಮ್ಗೆ ಸಮಜೋಡೀ ಅಲ್ಲಾ ಸಾರ್ ಈ ಜಂಬದ್ಕೋ...ಅಲ್ಲಿ...ಈ ರಾಘು...

ಸ್ಕೌಟು ಮಾಸ್ಟರ್: ಏನೋ? ಒಂದು ಟಾಂಗ್ ಕೊಟ್ಟು ಅವನು ಬಿದ್ದಾಕ್ಷಣವೇ ಇಷ್ಟು ಜಂಭಾನೇನೋ? ಮಾಡೋ ಕುಸ್ತಿ!...

ಕಿಟ್ಟಿ: ಜಂಭ್ವೇನ್ ಸಾರ್! ...ಬರೀ ಜಿಸ್ಸಮ್ಮಿನ ಮಾತು ನಾನೆತ್ತಿದ್ದು ಸಾರ್! (ರಾಘುವಿಗೆ) ಬಾರೋ! ಎದ್ದಾರೋ!...ಇಲ್ಲಾ...ಪೀಟ್...ಕೊಡ್ತೀಯಾ? (ರಾಘುವು ಥಟ್ಟನೆದ್ದು ಪುನಃ ಕಿಟ್ಟಿಯನ್ನೆದುರಿಸಲು ಒಂದು ಕ್ಷಣದ ಜಗ್ಗಾಟದಲ್ಲಿ ಕಿಟ್ಟಿಯು ರಾಘುವನ್ನು ತನ್ನ ಬೆನ್ನಿಗೆ ಏರಿಸಿ) ಸಾರ್! ಈ 'ದೋಬಿ ಪಟಕ್' ಅಂತಾರ್ನೋಡಿ ಸಾರ್!...ಅದ್ ತೋರಿಸ್ತೀನೆ! [ಅಗಸರು ಬಟ್ಟೆಯನ್ನು ಬಂಡೆಯ ಮೇಲೆ ಒಗೆಯುವಂತೆ ರಾಘುವನ್ನು ಹಿಂದಿನಿಂದ ಎತ್ತಿ ಮುಂದೊಗೆಯುವನು. ರಾಘುವು ಅಂಗತನಾಗಿ ಬೀಳುವನು.]

ಸ್ಕೌಟು ಮಾಸ್ಟರ್: (ಬರೆದುಕೊಳ್ಳುತ್ತಾ) "First fall to Krishna Rao!" ...ಒಂದೈದು ನಿಮಿಷ ಸುಧಾರಿಸ್ಕೊಳ್ಳಿ!...ಇದೋ ಬಂದೆ...

[ಮಿಕ್ಕ ಸ್ಕೌಟುಗಳನ್ನು ಬೇರೆಬೇರೆ ಕಡೆ ಕರೆದುಕೊಂಡು ಹೋಗಿ ಮಾತನಾಡಲುಪಕ್ರಮಿಸುವನು.]

ಕಿಟ್ಟಿ: (ಇನ್ನೂ ಬಿದ್ದಿರುವ ರಾಘುವನ್ನು, ಕೈಕೊಟ್ಟು ಏಳಿಸಿ ನಿಲ್ಲಿಸಿ) ಯಾಕೋ? ಬಿಟ್ ಗೀಟ್ ತಗಲ್ತೀನೊ? (ಅವನು ಬಿದ್ದ ಸ್ಥಳವನ್ನು ಕಾಲಿನಿಂದ ಒದ್ದು ನೋಡಿ) ನೆಲ...ನರ್ಮಾಗಿದೆಯಲ್ಲೋ!

(ರಾಘುವಿನ ಜನ್ನಿಗೆ ಮಣ್ಣನ್ನು ತಟ್ಟುತ್ತಾ) ಇನ್ನೂ ಸ್ವಲ್ಪ ಸುಧಾರಿಸ್ಕೋತೀಯಾ?...ಇಲ್ಲ ಷುರು ಮಾಡೋಣ್ವೋ ತಿರ್‍ಗೂ? (ರಾಘುವು ಪ್ರತ್ಯುತ್ತರಕೊಡದೇ ಇರಲು) ನನಗೇನೂ ನಿನ್ಮೇಲೆ ಜಿದ್ದಿಲ್ಲ ಕಣೋ...ಬೇಕಾದರೆ ಇನ್ನೊಂದು "ಲಡತ್" ನಾಳೆ ಇಟ್ಕೊಳ್ಳೋಣ...ಹೂಂ...?

ರಾಘು: ಅದೆಲ್ಲಾ ಎಸ್ಸೆಂ ಕೇಳೋದಿಲ್ಲ ಕಣೋ!...ಅದೂ ಅಲ್ದೆ ಯಾವಾಗಿಟ್ಕೊಂಡ್ರೆ ತಾನೇ ಏನೋ ? ಶನಿ!...

ಕಿಟ್ಟಿ: ರಿಸಲ್ಟ್ ಹೇಳ್ತೀಯಾ? ಅದ್ಸರಿ!...ನಿನಗಿಷ್ಟವಿಲ್ದಿದ್ರೇಪ್ಪಾ, ನಿನ್ಗ್ಸೊಂಟಾ ಸ್ವಲ್ಪ ಸಡಿಲ ಅಂತ ಹೇಳ್ತೇನೆ...ಎಸ್ಸೆಂಹತ್ರ...ಆರ್ ಕಂಡೀಷನ್ನೂ...

ರಾಘು: ಕಂಡಿಷನ್ನೇನೋ?

ಕಿಟ್ಟಿ: ಏನೂ ಇಲ್ಲ!...ದಿನಾ ಎರಡ್ ಜೋಬ್ತುಂಬಾ ತುಂಬ್ಕೊಂಬರ್ತೀಯಲ್ಲಾ ತಿಂಡೀನ...!...

ಸ್ಕೌಟು ಮಾಸ್ಟರ್: (ಪ್ರವೇಶಿಸಿ) ಏನೋ ರಾಘು? ರೆಡಿಯೋ ನೆಕ್ಸ್ಟ್ ಬೌಟಿಗೆ (Next bout)...?

ರಾಘು: (ಭ್ರಮಿತನಾಗಿ) ಹೂಂ, ಸಾರ್!

ಕಿಟ್ಟಿ: (ಪುನಃ ಹೋರಾಡುವಾಗ ಕೆಳಗೆ ಬಿದ್ದ ರಾಘುವಿಗೆ "ಕೋನಿ"ಯನ್ನು ಹಾಕಿ ತಿರುಗಿ ಸುತ್ತಾ) ಆಗ ಹೇಳ್ತಿದ್ದದ್ದುಮ್ಮಗಿಸಿಬಿಡ್ತೇನೋ ಈಗ...ಆ ಎರಡ್‌ಜೋಬ್ ತಿಂಡೀನೂ ನೀನೇ ತಿನ್ನ್ತೀಯಾ??

ರಾಘು: ಇನ್ಮೇಲೆಲ್ಲಿ್ರಗೂ ಕೊಡ್ತೇನೆ, ಬಿಡೋ!

ಕಿಟ್ಟಿ: (ಪಟ್ಟನ್ನು ಭದ್ರಿಸುತ್ತಾ) ಎಲ್ಲಾರ ಮಾತ್ ಕಟ್ಕೊಂಡ್ ನನಿಗ್ಯಾಕೇ...ನಿನಿಗ್ಯಾಕೇ?... ಫಲಾನ...ಒಬ್ನಿಗೇ!...ನನ್ನೋಡು!...ಒಬ್ನಿಗೇ!...ಯಾಕೇಂದ್ರೆ...ತಿಂಡೀಗ್ ತಿರುಪೆ ಎತ್ತೋವ್ನಲ್ಲ ನಾನು!...ಆದ್ರೂಸೂವೆ...ನಿನ್ನ ಹತ್ರಿಧಾನ್ ನೋಡು ಒಬ್ಬ... **ಅವನ್ಗೆ**...ಕೊಡ್ತೀಯಾ...ಸತ್ಯವಾಗಿ?

ರಾಘು : ಹೂಂ ಕಣೋ!

ಕಿಟ್ಟಿ: (ಸ್ಕೌಟು ಮಾಸ್ಟರನ್ನು ಕುರಿತು) ಕೋನೀಗ್ ಸಿಕ್ಕೊಂಡಿಧಾನೆ ಸಾರ್...ಫಿರಾಯ್ಸಿ "ಪೀಟ್ಮಾಡೋಣಾ"ಂದ್ರೆ...ಮೊದೂಲ್ಲಡತ್ನಲ್ಲಿ ಸೊಂಟ ಏನೋ ನೋಯುತ್ತೇಂತ ಹೇಳ್ತಿದ್ದ ಸಾರ್!... ಪಾಪ!...ನನ್ಗೇನೋ, ಫಿರಾಯ್ಸಿದ್ರೆ...ನೋವ್‌ಗೀವ್ ಜಾಸ್ತಿಯಾಗ್ಬಿಟ್ಟೀತೂಂತ ಸಾರ್...ಪಾಪ!... ನಂ ರಾಘು ಸಾರ್!

ಸ್ಕೌಟು ಮಾಸ್ಟರ್: That's the proper Scout spirit, my boy ! ಏನ್ ಕುಸ್ತೀ...ಸ್ಪೋರ್ಟ್ಸ್‌ನಲ್ಲಿ ಎಷ್ಟು ರೈವಲ್ರಿ (rivalry) ಇದ್ರೂ...ಫ್ರೆಂಡ್ಲಿ...ಬ್ರದರ್ಲಿ ರಿಗಾರ್ಡು... ಬಿಡ್ಬಾರ್ದು!

ಕಿಟ್ಟಿ: ಬಲು ಫ್ರೆಂಡ್ಲಿ ಸಾರ್ ನಾವು...ಅಲ್ವೇ ರಾಘೂ? ಏನ್ ತಿಂಡಿ ತಂದ್ರೂ ನನ್ಗರ್ಧ ಕೊಟ್ಬಿಟ್ಟೇ ತಿನ್ನೋದವ್ನು! ಅಲ್ವೇ ರಾಘು?

ಸ್ಕೌಟು ಮಾಸ್ಟರ್: ಸಾಕೇಳ್ರಿ!...You are too strong for him ! ಕಿಟ್ಟೀನ್ನೇ ವಿನ್ನರಾಗಿ ಬರ್ಕೊಳ್ಳೇ ರಾಘು?

ರಾಘು : ಹೂಂ...ಸಾರ್!

ಸ್ಕೌಟು ಮಾಸ್ಟರ್ : That's the spirit, my boy

[ಕಿಟ್ಟಿಯ ಹೆಸರನ್ನು ಪಟ್ಟಿಯಲ್ಲಿ ಬರೆದುಕೊಳ್ಳುವನು.]

[ಅಪ್ಪುವಿಗೂ ವಾಸುವಿಗೂ ಕುಸ್ತಿಯಾಗುವುದು. ಮೊದಲನೆಯ ಕುಸ್ತಿಯಲ್ಲಿ ಅಪ್ಪುವು ಸೋಲುವನು.]

ಸ್ಕ್ಯಾಟು ಮಾಸ್ಟರ್: (ಬರೆದುಕೊಳ್ಳುತ್ತಾ) First fall to Vasudeva Rao... ಏನಪ್ಪಾ? ಟೈಮಾಗ್ತಾ ಬಂತು...ವಾಸೂನೇ ದಾಖಲ್ಮಾಡಿಕೊಳ್ಳಲೋ? ಇಲ್ಲ ಇನ್ನೊಂದ್ ಬಾಟಿ ಟ್ರೈ (try) ಮಾಡ್ತೀಯೋ?

[ಅಪ್ಪುವು ಸಂದೇಹಪಡುವನು]

ಕಿಟ್ಟಿ: ಬಿಡೋದಿಲ್ಲಾನ್ನೋ, ಬೇಗೈರತ್!...ಮೊದಲ್ ಸರ್ತಿ ಬಿದ್ದದ್ದು...ಮುಲ್ಲು ಫ್ರಿಸ್ತ್ರಾಯಿದ್ದ ಕಣೋ!...(ಒಂದು ಮೂಲೆಗೆಳೆದುಕೊಂಡು ಹೋಗಿ) ನಿಸ್ಸಿಂತ ಒಂದೂವರೆ ಮಾರುದ್ದ ಇಧಾನಪ್ಪ, ನಿನಗೆ ಬೇಕಾದ್ದೊಂದೇ ಕಮಾಲು...'ಡುಬ್ಬು'! ಅರ್ಥವಾಯ್ತೇನೋ? ತೋಳಿಗ್ ತೋಳ್! ಕಟಾಯ್ಸೋವಾಗ ಥಟ್ಟನ್ ಕೈಬಿಟ್ಟು...ಅವನ್ ಕಾಲ್ಮಧ್ಯೆ ಮುಳ್ಗಿ...ಅದೇ 'ಡುಬ್ಬು'...ಮುಳು ಗಿದ್ದಾಗ ಎತ್ತಾಕು...ಇದೇ 'ಡುಬಾಯ್ಸೋದೂ'ಂತ! (ಮಾತಿಗೆ ಸರಿಯಾಗಿ ಅಪ್ಪುವಿನ ಎರಡು ಕಾಲುಗಳ ಮಧ್ಯೆ ನುಗ್ಗಿ ಎತ್ತಿಹಾಕಿ...ಬಿದ್ದ ಅಪ್ಪುವನ್ನು ತಿರುಗಿ ಎತ್ತಿ ನಿಲ್ಲಿಸಿ) ಅರ್ಥವಾಯ್ತೇನೋ?

ಅಪ್ಪೂ: ಹೂನೋ!...ಟ್ರೈ ಮಾಡ್ತೇನೆ!

ಕಿಟ್ಟಿ: ಆ ಶುಕ್ರಾಚಾರಿ ಹೇಳಿದ್ದಾಗೇ, 'That's the proper spirit my boy! ...ಅಲ್ದೆ ಹಂಚೀಕಡ್ಡಿಗಳಂಟ್ಸಿ ನಿಲ್ಲಿಸಿದ್ದಾಗಿರೋ ಆ ಜಾಡರ್ಹುಳಕ್ಕೆ ಒಂದು 'ದಂ'ನಲ್ಲೇ ಹೆದರ್ಕೊಂಡ್ ಹೋಗೋದೇನೋ?

ಸ್ಕ್ಯಾಟು ಮಾಸ್ಟರ್: (ಗಟ್ಟಿಯಾಗಿ) ಅವನ್ನ ಏನ್ ಕುಕ್ತಿದೀಯೋ? ಕುಸ್ತಿ ಮಾಡಿದವನ್ನ, ಪಾಪ!?

ಕಿಟ್ಟಿ: ಕಮಾಲ್ ಸಿಕ್ಸಾಯ್ಸ್ತಿದ್ದೆ ಸಾರ್!...ನನ್ 'ಷಾಗಿರ್ದ್' ಸಾರ್! ಅಪ್ಪು...ಅಲ್ಲ... ನನ್ಫ್ರೆಂಡು...(ಮುಂದಕ್ಕೆ ಬರುತ್ತಾ) ಮೆಸ್ಸೇಜ್ ಕೊಟ್ಟಿದಾನೆ ಸಾರ್!...ಕೊನೇವರ್ಗೂ ಮಾಡೇ ಮಾಡ್ತಾನಂತೆ ಸಾರ್! ಕುಸ್ತಿ...ಅಪ್ಪೂ...ಬುಲ್ಡಾಗೂ ಸಾರ್...ನೀವು ಅದೆಂಥಾದ್ದೋ 'spirit my boy' ಅಂದ್ರಲ್ಲ...ಆಬಾಬ್ತು ಸಾರ್ ಅಪ್ಪೂನು, ನಮ್ಮೆಲ್ಲಾರ ಹಾಗೇ...

ಸ್ಕ್ಯಾಟು ಮಾಸ್ಟರ್: start off, then!

[ಅಪ್ಪೂವೂ, ವಾಸುವೂ ಮತ್ತೆ ತಿರುಗಿ ಹೋರಾಡುವರು. ಅಪ್ಪುವು ಕಿಟ್ಟಿಯು ಹೇಳಿಕೊಟ್ಟಂತೆ, ಥಟ್ಟನೆ ವಾಸುವಿನ ತೋಳುಗಳನ್ನು ಬಿಟ್ಟು, ಅವನ ತೊಡೆಗಳ ಮಧ್ಯೆ ನುಗ್ಗಿ ಅವನನ್ನು ಎತ್ತಿಹಾಕುವನು.]

ಸ್ಕ್ಯಾಟು ಮಾಸ್ಟರ್: (ಬರೆಯುತ್ತಾ) Second fall to Appu Rao...one fall each...good fightoo...Now for the third bout ಇಲ್ಲಾ...ರೆಸ್ಟ್ ತಕೋತೀರೋ?

ಕಿಟ್ಟಿ: ಬೇಡಾನ್ನೋ!...ನಿನ್ಗಿರೋದದೊಂದೇ ಕಮಾಲು!...ಅದ್ನಿಗೆ ಜ್ಞಾನೋದಯವಾಗೋ ದಕ್ಮುಂಚೆ ತೀರಿಸ್ಬಿಡ್ಬೇಕು ಅವನ್ ಸಾಲಾನಾ...

ಅಪ್ಪೂ: ಹೂಂ ನೋ!...(ಸ್ಕ್ಯಾಟ್ ಮಾಸ್ಟರಿಗೆ) ನಾನ್ ರೆಡಿ ಸಾರ್...

ಸ್ಕ್ಯಾಟು ಮಾಸ್ಟರ್: Start off, then!

[ಅರೆ ಮನಸ್ಸಿನಿಂದ ಎದುರು ಬರುತ್ತಿರುವ ವಾಸುವಿನ ಭುಜಗಳನ್ನು ಹಿಡಿದು ಬಗ್ಗಿಸಿ. ಥಟ್ಟನೆ ಬಿಟ್ಟು, ಹಿಂದಿನಂತೆಯೇ ಅವನನ್ನು ಎತ್ತಿ ಹಾಕುವನು.]

ಸ್ಕ್ಯಾಟು ಮಾಸ್ಟರ್: (ಬರೆಯುತ್ತ) 'Third fall and match to Appu Rao' ...(ಪೆನ್ಸಿಲನ್ನು ಕಿವಿಗೆ ಸಿಕ್ಕಿಸಿಕೊಳ್ಳುತ್ತಾ) Now for the last lot...(ಮಗು.ಶಾಮು.ರಾಮು ವನ್ನು ಗಮನಿಸಿ)...ಮೂರ್ ಜನ ಇದ್ದೀರಲ್ರೋ...ಹ್ಯಾಗೆ ಅರ್ರೇಂಜ್ ಮಾಡ್ಕೋಳ್ತೀರೋ?

ರಾಘುಃ ಇಬ್ರೇ ಸಾರ್! ಇಬ್ರೂ ಫೋರ್ಟೀನು (fourteen)...ಮಗೂಗೆ ಈಗ್ನಾನೆ ಹನ್ನೊಂದಾಯ್ತು ವಯಸ್ಸು...ಅವ್ನಿಗೆ ಛಾನ್ಸಿಲ್ಲಾ...ಇನ್ನು ಏಟ್ಬೇರೆ.

ಕಿಟ್ಟಿ: (ರಾಘುವಿಗೆ) ಒಳ್ಳೇ ಲೀಡರೋ ನೀನು! ನಿನ್ನ ಪೆಟ್ರೊಲ್ಲಿಗ್ರೋ ಅಲ್ಪ ಸ್ವಲ್ಪ ಗಂಡಸ್ತನಾನ್ನ ...ಘಬರಾಯ್ಸಿ ಓಡಿಸ್ಬಿಡು...(ಮಗುವಿಗೆ) ಲೋ!...ಆ ಹುಳುಗಳಿಗೆ ಹೆದರ್ಕೊಂಡು...ಕುಷ್ತೀನಾ ...ನೀನ್ನಾಗನಾ ತಪ್ಪಿಸಿಕೊಂಡ್ಯೋ...ನಿನಿಗ್ ನನ್ನ ದೋಸ್ತಿ ಹೋಗೋದಲ್ದೆ...ನಿನ್ನ ಯಂಕೆಗಳ್ ಬಗ್ಸಿ...ನಿಮ್ಮನೆ ಮುಂದೆಸದು...' ಇದು ಗಂಡ್ಮಗುವಲ್ಲ...ಬೇರೆ ಹೆತ್ಕೊಡಿ ನಂಪೆಟ್ರೋಲಿಗೇ 'ಂತ ಕೇಳ್ತೀನೆ!...ಹೆದರ್ತಾನೆ! ಹೆಂಗ್ಸು!

[ಸ್ವಲ್ಪ ದೂರ ಜರಗುವನು.]

ಮಗೂ: (ಹತ್ತಿರ ಬಂದು ಕಿಟ್ಟಿಯ ತೋಳಿನ ಮೇಲೆ ಕೈ ಹಾಕಿಕೊಂಡು ನಿರ್ಭೀತನಾಗಿ ನಗುತ್ತಾ) ...ಈಗ ಹೆದ್ರಿಕೆಯಿಲ್ಲಾ ಕಾಣೋ?

ಕಿಟ್ಟಿ: (ಮಗುವಿನ ಹೆಗಲ ಮೇಲೆ ಕೈ ಹಾಕಿಕೊಂಡು)...ಅದು ರುಸ್ತುಂತನ!...ಗಂಡ್ಸಿಗೆ ಫಾಬ್ರೀಂದ್ರೇನೋ!?...ಈಗಿಲ್ಲಾಂದ್ಮಲ್ಲಾ...ಮೊದಲ್ ಫಾಬ್ರೀನೆ?

ಮಗೂಃ ಫಾಬ್ರಿ ಅಲ್ಲಾ ಕಾಣೋ!...ಅದೊಂದ್ ನಮೂನೆ... (ಹೊಟ್ಟೆಯನ್ನು ಸವರುತ್ತಾ) ...ಫೀಲಿಂಗು...ಕಾಣೋ!

ಕಿಟ್ಟಿ: ಅಂಥಾ ಫೀಲಿಂಗ್...ಫೀಲ್ ಆಗೋಷ್ಟ್ರಲ್ಲೇ...ಫನಾ ಮಾಡ್ಬಿಡ್ಬೇಕು...ಅಡಗ್ಸಿ ಇಟ್ಕೊಂಡಿದ್ರೆ...ಡೇಂಜರು! ಬರೋವಾಗ್ಲೆಲ್ಲಾ ದಿಗಿಲ್ಪಟ್ಕೊಂಡ್ ಉಡಾಯ್ಸುತ್ತೆ! ಈ ಹೊತ್ತಿನ್ ಕುಷ್ತೀನ್ನಾಗನಾ ಹಲ್‌ಕಚ್ಕೊಂಡು...ಸತ್ರೂ ಸರ್‍ಯೇಂತಮಾಡ್ಬಿಟ್ಯೋ...ಇನ್ ಸಾಯೋವರ್ಗೂ... ಎಂಥಾ ಡೇಂಜರ್ ಬಂದ್ರೂ ಹೆದರ್ಕೊಂಡು ಹಿಂಜರಿಯೋದಿಲ್ಲಾ...ನೀನು! ಮಂಡೇಗ್ ಹತ್ತಿತೇ?

ಮಗೂ: ಹೂನೋ!

ಸ್ಕೌಟು ಮಾಸ್ಟರ್: (ಮುಂದಕ್ಕೆ ಬರುತ್ತಾ) ಏನೋ...ಮಗೂ! ರಾಘು ಹೇಳೋ ಹಾಗೆ... ನಿನ್ಗೆ ಗೆಲ್ಲೋ ಛಾನ್ಸೂ...?

ಕಿಟ್ಟಿ: ಗೆಲ್ಲೋಕಲ್ಲಾ ಸಾರ್...ಅವನು ಕುಷ್ತಿ ಮಾಡೋದು...!?

ಸ್ಕೌಟು ಮಾಸ್ಟರ್: ಮತ್ತ್ಯಾಕೋ?

ಕಿಟ್ಟಿ: ಕುಷ್ತೀಗೇಂತ...ಅವನು ಕುಷ್ತಿ ಮಾಡೋದು... ಸಾರ್!

ಸ್ಕೌಟು ಮಾಸ್ಟರ್: ಕುಸ್ತೀಗೇಂತ...ಕುಸ್ತಿ!?...ಏನರ್ಥವೋ!...ಅದಿರ್ಲ್ಲಿ...ನೀನ್‌ಯಾರೋ ...ಅವನಿಗೆ ಮಾತಾಡೋಕೆ...ಅವನ್ನ್ ಲಾಯರೀನೆ?

ಕಿಟ್ಟಿ: ಛಾರ್ಜ್ (charge) ತಕೊಂಡಿಥೇನೆ ಸಾರ್...ಅವನ್ನ! ಅಲ್ಲ...ಅವನ್ ನನ್ನ ದೋಸ್ತು...(ಬೆಪ್ಪಾಗಿ)...ಅವನೇನೂ ಇಲ್ಲಾ ಸಾರ್...ನನಿಗೆ!

ಸ್ಕೌಟು ಮಾಸ್ಟರ್: ಸಾಕು! I cannot waste any more time! ಏನೋ ಮಗು?...

ಮಗೂ: ಮಾಡೇ ಬಿಡ್ತೇನೆ ಸಾರ್!

ಕಿಟ್ಟಿ: ನೀವ್ ಹೇಳಿದ ಹಾಗೆ...ಚಿಕ್ಕವ್ನು ಸಾರ್...ಎರಡು ಕುಷ್ತೀಗೆ ಬದ್ಲಾಗಿ...ಒಂದೇ ಮಾಡ್ಲಿ ಸಾರ್!

ಸ್ಕೌಟು ಮಾಸ್ಟರ್: ಹ್ಯಾಗೋ?

ಕಿಟ್ಟಿ: ಹ್ಯಾಗೇನ್ ಸಾರ್? ಆ fourteen years ನೋರು ಇಬ್ಬರ ಜತೇಲೂ ಮಾಡೋದ್ಬಿಟ್ಟು...ಅವರು ಕುಷ್ತಿ ಮಾಡಿದ ವಿನ್ನರ್ ಜತೇಲಿ ಮಾಡ್ಲಿ ಸಾರ್!

ಸ್ಕೌಟ್ ಮಾಸ್ಟರ್: (ಮುಗುಳ್ನಗೆಯೊಡನೆ) good! ನಿನ್ನ ತಲೇಲೂ ಸ್ವಲ್ಪ ಬ್ರೈನು (Brain) ಇದೆ!

ಕಿಟ್ಟಿ: ಸ್ವಲ್ಪ!?...ಬುರ್ಡೆಯೆಲ್ಲಾ ಬ್ರೈನೂ ಸಾರ್!

ಸ್ಕೌಟು ಮಾಸ್ಟರ್: ಸಾಕೋ, ನಿನ್ ಪ್ರತಾಪ! (ಪಟ್ಟಿಯನ್ನು ನೋಡುತ್ತಾ) ಶಾಮಣ್ಣ... ರಾಮಸ್ವಾಮಿ...start off!

[ಇಬ್ಬರೂ ಹೋರಾಡುವರು. ಶಾಮಿಯು ಎರಡು ಸಲ ಸೋಲಿಸುವನು.]

ಸ್ಕೌಟು ಮಾಸ್ಟರ್: (ಬರೆಯುತ್ತಾ) First two falls and match to Shamanna ...ಮಗು! ಗೆಟ್‌ರೆಡಿ !

ಕಿಟ್ಟಿ: ಇನ್ನೂ ಘಾಬ್ರೀನೇನೋ?

ಮಗೂ: (ನಗುತ್ತಾ) ಇಲ್ಲಾ...ಕಣೋ! (ಕಿಟ್ಟಿಯ ಕೆನ್ನೆಗೊಂದು ಪೆಟ್ಟನ್ನು ಬಿಗಿಯುತ್ತಾ) ತಗೋ...ಪ್ರೂಫೂ! (proofoo)!

ಕಿಟ್ಟಿ: (ಕೆನ್ನೆಯನ್ನು ಸವರಿಕೊಳ್ಳುತ್ತಾ) ಸಾಕೋ!...ಒಪ್ಕೊಂಡೆ! ದಯವಿಟ್ಟು ಮರೆತ್ಬಿಡು ನನಗಿನ್ನೊಂದ್ ಕೆನ್ನೆ ಇರೋದ್ನ!...ಇನ್ನ್‌ಹೋಗು!

[ಮಗು, ಶಾಮಿ, ಹೋರಾಡುವರು. ಸ್ವಲ್ಪ ಮಾತ್ರದಲ್ಲಿಯೇ ಶಾಮಿಯು ಮಗುವನ್ನು ಎತ್ತಿ ಕೆಡಹುವನು. ಕಾಲಿಗೆ ಪೆಟ್ಟು ತಗಲಿ ಮಗು ಏಳಲಾರದೇ ಇರುವನು.]

ಸ್ಕೌಟು ಮಾಸ್ಟರ್: ಏನೋ, ಏಟ್ ತಗಲ್ತೇನೋ?

ಮಗೂ: ಇಲ್ಲಾ ಸಾರ್!...ಸ್ವಲ್ಪ...ಯಲ್ಲೊ...

[ಎಲ್ಲರೂ ನೋಡಲು ಮುಂದಕ್ಕೆ ಬರುವರು.]

ಶಾಮಿ: (ಕಿಟ್ಟಿಗೆ, ಸ್ವಲ್ಪ ಭಯದಿಂದ)...ಬೇಕೂಂತೇನೂ ಮಾಡ್ಲಿಲ್ಲ ಕಣೋ...

ಕಿಟ್ಟಿ: ಗೊತ್ತೋ! ನಿನ್ನ ತಪ್ಪೇನೂ ಇಲ್ಲಾ! ವಜನ್ ಕಮ್ಮಿ ಅವ್ನ...ಲಾಟ್ವಾಗಿ ಸಿಕ್ಕೊಂಡ ನಿನ್ ಕೈಗೆ...ಪರ್ವಾ ಇಲ್ವೋ!

ಸ್ಕೌಟು ಮಾಸ್ಟರ್: If you are not hurt, it is all right; ಅದ್ರೂ You are too small for Shamanna ! (ಬರೆಯುತ್ತಾ) ಕೃಷ್ಣರಾವ್, ಅಪ್ಪೂರಾವ್. ಶಾಮಣ್ಣ, ...ಬ್ರಿಗೇಡ್ ಸ್ಪೋರ್ಟ್ಸ್‌ದಿನ...ರೆಡಿ ಆಗಿ!

ಮೂವರೂ: ಸರಿ ಸಾರ್!

ಕಿಟ್ಟಿ: ಆ ಹೊತ್ತು...ರ‍್ಯಾಲಿ...ಅಂಬೋದುಂಟೇ ಸಾರ್?

ಸ್ಕೌಟು ಮಾಸ್ಟರ್: (ಕಿಟ್ಟಿಯ ಮುಖವನ್ನು ದುರುಗುಟ್ಟಿ ನೋಡಿ) H o p e l e s s!!

[ಎಂದು ನಿಟ್ಟುಸಿರು ಬಿಡುತ್ತಾ ನಿಷ್ಕ್ರಮಣ]

ಕಿಟ್ಟಿ: ಕೇಳಿದ್ರೇನ್ರೋ! ಲ್ರೋ! ನಂ ಬಸ್ತೀನೆಲ್ಲ ಬೆದರ್ಸೋ ಭೂಪತೀನ...ನಿಂ ಶುಕ್ರಾಚಾರ್ರ‍್ರು ಅಂದದ್ದು ಕೇಳಿದ್ರೇನ್ರೋ?... (ಸ್ಕೌಟು ಮಾಸ್ಟರಿನಂತೆಯೇ ನಿಂತು ಅಣಕಿಸುತ್ತಾ) 'Hopeless'!

[ದಳದವರೆಲ್ಲರೂ ತಮ್ಮ ತಮ್ಮ ಅಂಗಿಗಳನ್ನು ಹಾಕಿಕೊಂಡು ಹೊರಡುವರು. ಮಗು. ಕಿಟ್ಟಿ. ಮಟ್ಟಿಗೆ ಇರುವರು.]

ಕಿಟ್ಟಿ: ಯಾಕಿನ್ನೂ ಬಿದ್ದಿದೀಯೋ?

ಮಗೂ: (ಎದ್ದು ಕುಂಟುತ್ತಾ ಬಂದು) ಕಾಲು ಪರ್ವಾ ಇಲ್ಲ...ನಡೀತೇನೆ...

ಕಿಟ್ಟಿ: ಅದು ಗಂಡಸ್ತನಾ! ಹೆಂಗಸ್ರಾಹ್ಗೆ ಹೆದರ್ಕ್ಕೊಂಡು ನೆಟ್ಗ ರೋದ್ ಮೇಲೋ?.... ಭೂಪತಿ ಹಾಗೆ ಕುಸ್ತೀಲಿ ಕಾಲ್ ಮುರ್ಕ್ಕೊಳ್ಳೋದು ಮೇಲೋ?

ಮಗೂ: (ನಗುತ್ತಾ) ಕಾಲ್ ಮುರ್ಕ್ಕೊಳ್ಳೋದೇ...?

ಕಿಟ್ಟಿ: ನಾರೆ ಮೇರಾ ಷೇರ್...ಚೆದರ್ಕ್ಕೊಂಡು ಬದ್ಕಿರೋದಕ್ಕೆ ಬದಲ್ಲಾಗೀ ಬ್ರೇವ್ ಆಗಿ ಬೆಂಕೀಲ್ ಬೀಳೋದ್ ಮೇಲೋ!...ಹೆಂಗಸ್ರೇ ಸಹಗಮನ ಮಾಡ್ತಿದ್ರಂತೆ!...ಬಾ!... ಎತ್ಕೊಂಡ್ ಹೋಗ್ತೇನೆ!...

ಮಗೂ: ಪರ್ವಾ ಇಲ್ವೋ, ನಡೀತೇನೆ! ನಾನೇನೂ ಹೆಂಗ್ಸಲ್ಲ!...

ಕಿಟ್ಟಿ: ಕುಟ್ಕೊಂಬರೋದ್ರಲ್ಲೇನೋ ಗಂಡಸ್ತನ!...ಅದೂ ಅಲ್ದೆ ನಡದ್ರೆ ಜಾಸ್ತಿ ಆಗತ್ತೆ ನೋವು...ಇನ್ನ್ ನೀನ್ ಬಿದ್ಕೊಂಡ್ರೆ...ನಿಮ್ಮಮ್ಮ "ಮಗೂನ ಕರ್ಕೊಂಡ್ಹೋಗಿ ಕಾಲ್ ಮುರ್ಕೊಂಡ್ ಬಂದ: ಕೊನೆಗೂ 'ಪೋಲಿ ಪೋಲೀನೆ' "ಅಂದುಕೊಂಡಾರು...ಬಾ...ಕೋಟ್ಹಾಕ್ಕೋ! (ಮಗುವಿಗೆ ಕೋಟನ್ನು ತೊಡಿಸಿ ಹೆಗಲಮೇಲೆತ್ತಿಕೊಂಡು) ಈ ತಾಲೀಂ ಹಾಡ್ ಕಲ್ತ್ಕೊಳ್ಳೋ! ಯಾವಾಗ್ಲೂ ಗೈರತ್ ಹೋಗೋದಿಲ್ಲ!

"ಕಸರತ್ ಘಟಿಯಾ
ಕಭಿನೈ ಹಟಿಯಾ!
ಅಭಿತಕ್ ಪಹಿಲ್ವಾನ್
ಕಭಿನೈ ಹಟಿಯಾ!"...**ಕಿರ್ಲೋ!!**

[ಕಿಟ್ಟಿಯೂ ಅವನ ಹೆಗಲ ಮೇಲೆ ಮಗುವೂ ಈ ಹಾಡನ್ನು ಹಾಡುತ್ತಾ ನಿಷ್ಕ್ರಮಣ.]

ದೃಶ್ಯ ೮

(ನೇಪಥ್ಯದಲ್ಲಿ)

"ಕಸರತ್ ಘಟಿಯಾ...
ಕಭಿನಹಿ ಹಟಿಯಾ...
ಅಭಿತಕ್ ಪಹಿಲ್ವಾ...
ಕಭಿನೈ ಹಟಿಯಾ!"...

[ಎಂದು ಹಾಡುತ್ತಿರುವ ಕಿಟ್ಟಿ ಮತ್ತು ಮಗುವಿನ ಧ್ವನಿಗಳು ಹಾಡುತ್ತಾ ಹಾಡುತ್ತಾ ಕ್ರಮೇಣ ಸಮೀಪಿಸುವುವು.]

ಕಿಟ್ಟಿ: (ಮಗುವನ್ನೆತ್ತಿಕೊಂಡು ಪ್ರವೇಶಿಸಿ) ಮಗೂ ಲೇ, (ಮಗುವನ್ನು ಇಳಿಸಿ ನೆಲಕ್ಕಿಟ್ಟು) ಇಲ್ಲಿಂದ ಎರಡ್ ಫರ್ಲಾಂಗ್ ಕೂಡ ಇಲ್ಲ ನಿಂ ಮನೆ. ಇನ್ ಹೀಗೇ ಎತ್ಕೊಂಡ್ ಹೋಗಿಳ್ಸಿದ್ರೆ ನಿಮ್ಮಮ್ಮನ್ ಮುಂದೆ "ಮೈ ಕೈ ಮುರ್ದು ಮನೇಗೆ ತಂದು ಕೆಡ್ವೋಕೇ ನಿನ್ನ ಸುಫರ್ದಿಗೆ ಬಿಟ್ಟಿದ್ದು ನನ್ನ ಮಗೂನಾ"ಂತ ಕೇಳೋವಾಗ, ನಾನ್ ಕತ್ತೆತ್ತೋಕೆ...ಗೈರತ್ತಿರೋದಿಲ್ವೋ...ಇದುವರ್ಗೂ ನಾನು ಯಾರ್ಹತ್ತರಲೂ ಸರ್ ರ್ಝುಕಾಯ್ಸಿದ್ದಿಲ್ಲ...ಅಭಿತಕ್ ಪಹಿಲ್ವಾನ್ ಕಭಿನಹಿ ಹಟಿಯಾ... ಅದಕ್ಕೋಸ್ಕರ ಸ್ವಲ್ಪ...walking practise ಮಾಡು...ಅರಮನೆ ಗೇಟ್‌ನಲ್ಲಿ ಸಿಪಾಯಿ— duty ಗುಜ್ರಾಯ್ಸೋ ಹಾಗೆ...ಇಲ್ಲಿಂದಲ್ಗೆ, ಅಲ್ಲಿಂದಿಲ್ಗೆ, "ಶುಕ್ರು" ಹೇಳ್ಕೊಟ್ಹಾಗೆ...Left... Right...Left...Right...about...turn ತಿರ್ಗಾ Left...Right...ಮಾಡ್ತಿರು.ಇವತ್

ಕುಸ್ತೀಗೆ ಉತ್ರಾಯಿಸ್ದಾಗಿಂದ, ಒಂದು ಜೀಪೀಗೂ ಜಿಪ್ಪಿಲ್ಲ...ಇದು public roadಉ...ನಂ ಕೊಂಪೆ ನಸ್ವೀಕು...ನೋಡಿದೋರು...ಗೇಡಿದೋರು ನಮ್ಮಪ್ನ ಹತ್ರ ಚುಕಾಯ್ಸಿದ್ರೋ ವರ್ತಮಾನಾನ ನಮ್ಮಪ್ನ ಕಿವೀಗೆ...ಇನ್ನು ಮುಂದೆ ಅಪ್ನಜೀಪ್ನ mental hospital ಊ! again there–fore (ಪ್ರವೇಶಿಸಿದ ಬಲಭಾಗವನ್ನು ಸೂಚಿಸಿ) ಆ ಮರದಕಟ್ಟೆ ಹಿಂದೆ ಪರ್ದೆ ದಮ್ಮು ಬೀಸ್ಕೊಳ್ತೇನೆ...ಅಷ್ಟ್ರವರ್ಗೂ ಸೀನಿಲ್ಲೇ ಠಳಾಯಿಸ್ತಿರು. ಆಗುತ್ತೋ ಇಲ್ವೋ?...ಇಲ್ಲಾ...ಏತ್ಕೊಂಡೇ...?

ಮಗೂ: (at once) ಯಾಕ್ ಕಿಟ್ಟೀ...ನಾನೇನ್ ಹೆಂಗ್ಸಲ್ಲ..."ಅಥಿತಕ್...ಪಟಿಲ್ವಾರ್... ಕಭಿನಹಿ ಹಟಿಯಾ" !!

ಕಿಟ್ಟಿ: ಹಾಗಾದ್ರೆ ಫೈಲ್ವಾರ್ ಆಗ್ಬೋದೇ ನೀನು?...ಅದೂ ಗಂಡಸ್ತನ ಗುಬ್‌ಚೀ...ನನ್ಗಾನ ಖಲೀಫ್ ಮಾಡ್ಕೊಂಡ್ಬೋ ಗುಬ್‌ಚೀಯಿಂದ ಗಿಡ್ಗ ಆಗ್ಬೋಗ್ತಿಯಾ ನೀನು (Magu's eyes gleam) ಷುರು ಮಾಡ್ ನಿನ್ನ್ ಕವಾತ್ನ!...ನೋಡೋಣ!

[ಮಗುವು ಪೆಟ್ಟು ತಿಂದ ಕಾಲನ್ನು ಅಂಗುಲವಷ್ಟೂ ಕದಲಿಸಲಶಕ್ತನಾದರೂ. ಕಿಟ್ಟಿಯು ಅಹರ್ನಿಶಿಯೂ ಜಪಿಸುವ ಗರಡಿ ವ್ಯಾಯಾಮ ಇತ್ಯಾದಿ ಮಹಾ ಸರ್ಪಗಳಿಂದ ಆವೇಷ್ಟಿತನಾಗಿ ಅವನ ರಜೋದ್ರೇಕ ವ್ಯಾಖ್ಯಾನಗಳಿಗೆ ಬೆಚ್ಚಿಬಿದ್ದು, ಹಲ್ಲು ಕಚ್ಚಿಕೊಂಡು, ನೊಂದು ಬಗ್ಗುವ ಕಾಲನ್ನು ನೆಟ್ಟಗೆ ಮಾಡಿ ರಂಗಸ್ಥಳಕ್ಕೆ ದಕ್ಷಿಣ–ವಾಮ ಪಹರೆಯನ್ನು ಕೊಡಲು ಉಪಕ್ರಮಿಸುವನು.]

ಭೇಷ್ ಗುಬ್‌ಚೀ! ನಿಮ್ಮಮ್ಮನ್ ಮುಂದೆ ಹೀಗೆ ಇವತ್ತ್ ರಾತ್ರೆ ನಡೆದ್ಬಿಟ್ಟು. ನನ್ ಮಾನಾ ಗಾನಾ ಬಚಾಯಿಸ್ಬಿಡ್ಡೀ, ನಾಳೆಯಿಂದ ನಾನ್ ನಿನ್ನ slave ಉ...ಹೀಗೇ ನೆಟ್ಟಗ್ ನಡೀತಿರು... ಬಂದೆ!

[ಕಿಸೆಯಿಂದ ಬೀಡಿ ಕಟ್ಟನ್ನೂ ಬೆಂಕಿ ಪೆಟ್ಟಿಗೆಯನ್ನೂ ಹೊರ ತಂದು. ಬೀಡಿಯೊಂದನ್ನು ಆರಿಸಿ. ಕೈಗೊಂಡು ಕಟ್ಟನ್ನು ಕಿಸೆಗೆ ತಳ್ಳಿ ದಕ್ಷಿಣತಹ ನಿಷ್ಕ್ರಮಿಸುವನು. ಮಗುವು ಮೇಲಿನಂತೆ ಮೇರೆಗೆ ಒಂದೆರಡು ಸಲ ಸಂಚರಿಸಿ ದಕ್ಷಿಣ ಮುಖನಾಗಿ ರಂಗಾರ್ಧವನ್ನು ಮೆಟ್ಟುತ್ತಿರಲು. ದೀರ್ಘಾಂಗಿಯಾದ ಸ್ತ್ರೀಯೊಬ್ಬಳು, ತಲೆಯಮೇಲಿಟ್ಟುಕೊಂಡ ತರಕಾರಿ ತುಂಬಿದ ಮಕ್ಕರಿಯನ್ನು ಪ್ರಾಂಶುವಾದ ದಕ್ಷಿಣ ಬಾಹುವಿನಿಂದ ಹಿಡಿದುಕೊಂಡು, ಸವ್ಯಬಾಹುವಿನಿಂದ ತನ್ನಂತೆಯೇ ಅತಿ ಕೃಷ್ಣವರ್ಣದ ಕೂಸೊಂದನ್ನು ತನ್ನ ಘನ ವಕ್ಷಕ್ಕೆ ಅಪ್ಪಿಕೊಳ್ಳುತ್ತಾ, ರಂಗ ದಕ್ಷಿಣದಿಂದ ಪ್ರವೇಶಿಸಿ, ಮಗುವಿನ, ಇಲ್ಲಿಂದಲ್ಲಿನ ಅಲ್ಲಿಂದಿಲ್ಲಿನ ನಡೆದಾಟವನ್ನು ನೋಡಿ ತನ್ನ ಅಸಿತಾಸ್ಯದಲ್ಲಿ ವಿಸ್ಮಯವನ್ನು ವ್ಯಕ್ತಗೊಳಿಸಿ. ಸ್ತಂಭಿತಳಾಗುವಳು.]

ಬಸವ್ವ: ಇದ್ಯಾಕಪ್ಪೀ...ಇಲ್ಲಿಂದಲ್ಗೇ...ಅಲ್ಲಿಂದಿಲ್ಗೇ ಓಡಾಡ್ತಿದೀಯಾ...ಇಂಗೆ? ಯಾಕ್ ಬುಡಾಕಿಲ್ವಾ ನಿನ್ನ ಈಗಲ್ಲಿಯಿಂದಾಚೀಚ್ಗೆ?

ಮಗೂ: (ನಡೆಯುತ್ತಾ) ಮಾತ್ನಾಡ್‌ಬೇಡಿ...ನಾನ್ ಸ್ಕೌಟು!

ಬಸವ್ವ: ಅದೆಂತಾದ್ದು?...ಕೌಟು!...ಅಂಗಂದ್ರೇನು...ಮರಿ ಪೋಲೀಸಾ...ನೀನು!...ಅದೇನ್ ನೀನಂದದ್ದು ಅಪ್ಪೀ?

ಮಗೂ: (ನಡೆಯುತ್ತಾ) ನಾನು Boy Scoutoo.

ಬಸವ್ವ: ಯಾಕದು?

ಮಗೂ : (ತಲೆಯನ್ನು ಕೆರೆದುಕೊಳ್ಳುತ್ತಾ) ಯಾಕೇಂದ್ರೆ...good-turn ಮಾಡೋಕೆ... ಅಂದ್ರೇ ಉಪ್ಕಾರ ಮಾಡೋಕೆ.

ಬಸವ್ವ : ಉಪ್ಕಾರಾ ಮಾಡಾಕಾ...ಇಂಗ್ ನೀನೋಡಾಡೋದು ... ಪ್ಲೀಸ್ನೋರಿಗ್ ಗೊತ್ತಾದ್ರೇನೋ ?...

ಮಗೂ: ಗೊತ್ತಾದ್ರೇನು ! ಅವ್ರು ನಾವು ಹೆಚ್ಚು ಕಮ್ಮಿ ಒಂದೇ !

ಬಸವ್ವ: ಅಂಗಾರ್ ನೀನು ಮರಿ ಪೋಲೀಸೇ ನಾನೇಳ್‌ದಂಗೇ ! "ಉಪ್ಕಾರಾ"ಂದ್ರ್ಯಲ್ಲ ಅಪ್ಣೀ ! ಯಾರಿಗ್ ಮಾಡೋಕ್ ಓಡಾಡ್ತಿರೋದ್ ನೀನು ?

ಮಗೂ: (ತಲೆಯನ್ನು ಕೆರೆದುಕೊಳ್ಳುತ್ತಾ) ಯಾರಿಗೇನು ? ಕೇಳ್ಬೋರ್ಗೆಲ್ಲಾ...

ಬಸವ್ವ: ನಂಗೂನೂವೆ— ?

ಮಗೂ: (hesitatingly)...ಹೂಂ...

ಬಸವ್ವ: ಕೂಲಿ ?

ಮಗೂ: ಏನೂ ಇಲ್ಲ (ಭ್ರುಕುಟಿಗಳನ್ನು ಎತ್ತುತ್ತಾ) ಏನೂ ಇಲ್ಲ !

ಬಸವ್ವ: (ಆತ್ಮಗತಂ) ಇದೇನು ಒಸವುಚ್ಗೋ !...ಸರ್ಕಾರೀದು...ಇಂಗೆ ಬಿಟ್ಟೀ ಕೂಲಿಗಳ್ನ ಇಡಾಕೆ ! [ಕಿಟ್ಟಿಯು ಅಜ್ಞಾತನಾಗಿ ಪ್ರವೇಶಿಸಿ ಬಸವ್ವನ ಹಿಂದೆ ನಿಂತು ಆಕೆಯ ವಚನಗಳನ್ನು ಆಕರ್ಷಿಸಿ ಮೋದಿಸುತ್ತಾ ನಿಲ್ಲುವನು.] ಅಂಗಾರೀ ಮಕ್ರಿ ವಲಿ ಎತ್ಕೋನಸ್ರಾಜ ! (ಶಾಕಾಭರಿತ ಪಿಟಕವನ್ನು ಮಗುವಿನ ಮೂರ್ಧನಿಯಮೇಲೆ ಪ್ರತಿಷ್ಠಿಸಿ) ಬುಟ್ಟುಗಿಟ್ಟೀಯಾ...ಬಲ್ತ್ ಸೋರೆ ಬುಲ್ತೆ ಅಂಗೆ ಬೆಳ್ದಿದ್ರೂನೂವೆ...ಎಂಗ್ಸು...ಎಂಗ್ಸೇ !...ಮೆಣಸ್ನ ಈಚ್ನಂಗೆ ಇದ್ದ್ರೂನೂವೆ, ಊರೋರ್ಗೆಲ್ಲಾ ಉಪ್ಕಾರ ಮಾಡೋಕೋಂಟ ನೀನು ಗಂಡ್ಸೇ ! ಬಾರಾನಾ...ಬುಟ್ಟೀ ?

ಮಗೂ: (ಹಲ್ಲು ಕಚ್ಚಿಕೊಳ್ಳುತ್ತಾ) ಇ...ಇ...ಇ...ಇ...ಲ್ಲಾ...!!

ಬಸವ್ವ: ಅಂಗಾದ್ರುಪ್ಪಾಜೀ...ನನ್ನೈದ್ನ ವಸಿ...ಇಡ್ಕೋ ! (ತನ್ನ ಕಂಕುಳಲ್ಲಿದ್ದ ಕೂಸನ್ನೂ ಮಗುವಿನ ಕಂಕುಳಿಗೆ ವರ್ಗಿಸಿ ಭದ್ರಿಸಿ) ಬುಟ್ಟ್‌ಗಿಟ್ಟೀಯಾ ! ಜೋಕೆ!...ಎಲೆ ಅಡ್ಕೆ ತಗಲ್ಸಿ ಏಟೊ ತ್ತಾಯ್ತೋ ನಾಲ್ಗೇಗೆ...ಕೂತ ನನ್ ಗಂಟಲ್ನಾ...ಎಬ್ಬರ್‌ಸ್ತೀನಿ ವಸಿ ! [ಮಡಿಲಿನಿಂದ ಸಂಚಿಯೊಂದನ್ನು ಹೊರತಂದು, ಯಥಾ ಸೌಕರ್ಯ ತಾಂಬೂಲ ಸಾಮಗ್ರಿಗಳನ್ನು ಸಂಯೋಗಿಸಿ, .ಮೆಲ್ಲುತ್ತಾ, ಈ ಸುಖವನ್ನು ಅನುಭವಿಸುವ ಆವೇಶದಲ್ಲಿ, ಮುರಿದ ಕಾಲಿನ ಅವಸ್ಥೆಯನ್ನೂ, ಮಸ್ತಕದ ಮೇಲಿರುವ ಮಕ್ಕರಿಯ ಭಾರವನ್ನೂ ಕಲ್ಕಣಜದಂತೆ ಕಂಕುಳನ್ನು ಕಚ್ಚಿ ಹಿಡಿದುಕೊಂಡಿರುವ ಶಿಶು ವೇಷಧಾರಿ ಯಾದ ಕಪ್ಪಂಕರೇ ಕಲ್ಲುಗುಂಡಿನ ಒಡ್ಡಾಟವನ್ನೂ ಗಮನಿಸದೇ ಹಲ್ಲು ಕಚ್ಚಿಕೊಂಡು ಹೆಜ್ಜೆ ಹಾಕುತ್ತಿರುವ "ಗುಬ್ಬಚ್ಚಿ"ಯ ಅವಸ್ಥೆಯನ್ನೂ...ಇದೆಲ್ಲವನ್ನೂ ಕೇಳಿ ನೋಡುತ್ತಾ ರೌದ್ರವನ್ನು ತಾಳಿ ಮುಷ್ಟಿಗಳನ್ನೂ ಬಿಗಿದು ಹಿಂಬರುವ ಕಿಟ್ಟಿಯನ್ನೂ ಗಮನಿಸದೇ, ಈ ಗಜಗಾತ್ರಿಯು ಮುಂದುಂ ಮುಂದುಂ ಮುಂದುವರಿಯುವಳು.]

ಕಿಟ್ಟಿ: ಇದ್ಯಾಕೋ ! ನಂದೇಶದ ಹೆಂಗಸ್ರೆಲ್ಲಾ two ವೇ two divisions ಉ !... ಹಂದಿ ! ಇಲ್ಲ ಹಲ್ಲಿ !...ಉಬ್ಬು ಇಲ್ಲ ವಣಕ್ಲು !...ಆನೆ...ಇಲ್ಲ...ಅಳಿಲು ! ನಂದೇಶದ ಹೆಂಗಸ್ರೇನೂ ...ಯಾವ್ ಹೆಂಗ್ಸೂನೂ...ನಮ್ಮಮ್ಮ ಇಲ್ಲ ಮಗೂ ಅಮ್ಮನ್ನಾಗೆ...ಗಾತ್ರ ಹೇಗಿದ್ರೂನೂವೆ—ದಿಲ್ಲು ನವಿರ್ಗಾಂತ ತಿಳ್ಕೊಂಡಿದ್ದೆ !...ಇವಳಾದ್ರೋ, ಹೆಂಗಸಿನ್ನಾಗೆ ಸೀರೆ ಉಟ್ಕೊಂಡಿದ್ರೂನೂವೆ...ಬೀದೀಲ್ ಹೋಗೋ ಬಚ್ಚಾನ್ ತಲೇಮೇಲೆ ಭರ್ತಿ ರೋಕ್ರೀನೂ ಹೊರಿಸ್ಬಿಟ್ಟು...ತಾನೆತ್ಲಾರ್ದ ಈ ಕೋಲ್ನಾ ಘಟ್ಟೀಕೆ ಅವಲ್ಯಾದ್ನೂ, ಅವನ್ ಬಗಲಲ್ಲಿ ಬಿತಾಯಿಸ್‌ಬಿಟ್ಟು. ಉಪ್ಕಾರ ಮಾಡಿಸ್ಕೋತಿದಾಳಲ್ಲಾ, ಮೆಲುಕ್‌ಹಾಕ್ತಾ !...ಹೀಗೆ ಊರ್ನೋರೆಲ್ಲಾ ಸ್ಕೌಟುಗ್ಳೆಲ್ಲಾರ್ ಕೈಲಿ ಉಪ್ಕಾರ ಮಾಡಿಸ್ಕೊಳ್ತಾ ಬಂದ್ರೇ ಊರ್ನೋರ ಕೈಯಿಂದ ಪ್ರತ್ಯುಪಕಾರಾನ ಮಾಡಿಸ್ಕೊಳ್ಳೋದು ಯಾವಾಗ್ಲೋ, ಸ್ಕೌಟುಗ್ಳು ?...ಯಾವಾಗೇನೂ !...ಊರ್ನೋರ್ ಒಬ್ಬೊಬ್ರು boy scouts ಆದ್ರೇನೇ...possibleಉ ! (ಮಗುವು ಹೊತ್ತಿರುವ ಮಕ್ಕರಿಯನ್ನು ಪರೀಕ್ಷಿಸಿ) ದೇವ್ರೇಗತಿ ! ಎತ್ಕೋತಾ ಕುಂಬ್ಳಕಾಯಿ, ಕುಕ್ಕೇಲಿ ! ಕಾಲ್ಮುರ್ದ ಗುಬ್ಬಚ್ಚೀನ ಕುತ್ಗೇನೂ ಮುರ್ದು ಮನೇಗ್ ಕಕೊಂಡ್ ಹೋಗೋಕೆ ನನಗ್ ಹೆದರ್ಕೆ...ಎತ್ಕೋತಾ ನನ್ನ first duty ಉಪ್ಕಾರ ಮಾಡ್ಬೇಕಾದ್ದು, ನಾನು. brother scoutಗೆ !...ಮಗೂಗೂ ಉಪ್ಕಾರಾ ಮಾಡಿ. ಪ್ರತ್ಯುಪ್ಕಾರಾನ ಮಾಡಿಸ್ಕೊಂಡು

ಮಗೂ ಮನೆ ನಾರಾಯಣನ್ ಕೈಲಿ ಇದ್ದ ಹಲ್ವಾ ಮಾಕ್ಸಿ ತಿಂದು, ಸಂತೋಷಪಟ್ಟು. ನನಗ್‌ಮಟ್ಗೆ special rally ಮಾಡಿಸ್ಕೊಂಡು, ಪ್ರಪಂಚದಲ್ಲಿ first rally ಮಾಡಿಸ್ದ England ದೇಶ್ದಲ್ಲಿ. Walter ಕೈಯಿಂದ good turn ಮಾಡಿಸಿಕೊಂಡ first girl guide Queen Elizabeth ನ ಹಾಗೆ ಈ ಕಾಲು ಹುಟ್ಟಿದ ಕರಿಗಿರಿರಂಗನ ಬೆಟ್ಟಾನ ಈ ಕ್ಷಣವೇ ಮೈಸೂರು ದೇಶದ ಮೊದಲು girl guide ಆಗಿ ಮಾಡೋದು ನನ್ನ second duty...(ಹುಷಾರಾಗಿ ಕುಂಟುಕಾಲನ್ನೆತ್ತುವನು ...ಭಾರವು ಕಮ್ಮಿಯಾಗುತ್ತಲೂ ತಿರುಗಿ ನೋಡಿದ ಮಗುವನ್ನು ಮುಪಿದ ರೌದ್ರದಿಂದಲೂ ತುಟಿಗಳಿಗೆ ತಗುಲಿಸಿದ ಬೆಟ್ಟಿನಿಂದಲೂ, ತೂಷ್ಣಿಸಿ)...ಆಸ್‌ಬಾಟು ವರ್ಜ...ದೊಡ್ಡಬಾಟ್ಲು...ಮುಂಡಾವ್ ಮೇಲೆ ಬಿಠಾಯಿಸ್ಕೊಂಡ್ರೋ. ಮುಂದೆ ವಿಚಾರ್ಣೆ ಆಗೋವಾಗ ಹೆಗಲ್ ಮುಟ್ಟಿ ನೋಡ್ಕೊಂಡು ಹೊರಗ್ಹಾಕಿ ಬಿಟ್ಟೇನು ಜೋರೀನ !...(ಕ್ಷಣಮಾತ್ರ ಯೋಚಿಸಿ ಕಾಲನ್ನು ಪರ್ಟಿನೋಳಮಡಿಸಿ) team ನಲ್ಲಿ ನಾನಿದ್ದಾಗೆ centre forward ಉ...ಆಗ್ ನಾನಿದ್ದಾಗೆ ಈಗ್ಲೂನೂ ! ಆದ್ರೆ ಇದು hopeless ಉ!...Therefore (ಕ್ಷಣಮಾತ್ರ ಯೋಚಿಸಿ ಪರಟಿನೊಳಗೆಯೇ ಕಾಲನ್ನು ಉರುಳಿಸಿ ಬೆನ್ನಿನ ಕಡೆ ರವಾನಿಸುತ್ತಾ) only chance ಉ, Chaney—Lon chaney (ಕಾಲನ್ನು ಆಗ್ರೀವಾಂತಂ ಬೆನ್ನಿಗೆ ತಿರುಗಿಸಿಕೊಂಡು) Hunch back of ನಾಟ್ರೀಡ್ಯಾಮ್ !! (ಮತ್ತೆ ಪುನಃ ಕುಕ್ಕೆಯನ್ನು ಇಣಿಕಿ ನೋಡಿ ತಲೆಯ ಟೋಪಿಯನ್ನು ತಲೆಕೆಳಕಾಗಿ ಸಿಕ್ಕಿಸಿಕೊಂಡು ತುಂಬುವಷ್ಟು ತರಕಾರಿಗಳಿಂದ ತುಂಬಿಕೊಂಡು, ಬಸವ್ವನಿಗೆ ಟೋಪಿ ಮತ್ತು ಬೆನ್ನಿನ ಮೇಲಿರುವ ಭಾರಗಳು ಕಂಡು ಬಾರದಷ್ಟು ದೂರ ಹಿಮ್ಮೆಟ್ಟಿ...ಥಟ್ಟನೆ ರೌದ್ರ ಸ್ವರದಿಂದ) constable ರಂಗಣ್ಣಾ ! Halt ! About turn ! (ಮಗುವು ದಕ್ಷಿಣಮುಖಂ ತಿರುಗುವನು.) ನಿನ್ನ ರಸ್ತೆ ನೋಡ್ಕೋಂತ ಕಳ್ಸಿದ್ದೇನು? —ನೀನೀಗ ಮಾಡ್ತಿರೋದೇನು ? fool !...quick march !...ಈ ಕೂಸ್ನೂ ಈ ಕುಕ್ಕೇನೂ ಈ ಓಣಿ ಕೊನೇಗೆ ಹೋಗಿ ಕುಕ್ಬಿಟ್‌ಬಾ, quick march ! (ಬೆಚ್ಚಿಬಿದ್ದ ಮಗುವು ಕಿಟ್ಟಿ ಹೇಳಿದಂತೆ ಹಾದು ಹೋಗುತ್ತಿರುವಾಗ) ಗುಬ್ಬೀ ಲೇ ! ಹೇಳಿದ್ದಾಗ್ ಮಾಡಿ ಬಚಾಯ್ಸ್ಲೋ ನನ್ನ ಇ z z ತ್ನಾ...Quick march !...Left...Right...Right...Left...ಓಣಿ ಕೊನೇಲ್ ಕುಕ್ಕು ಆಸ್ಬಾಬ್ನ ! ಆ ಮೇಲೆ about turn ವಾಪ್ಸು ಬಾ !

[ಬೆಚ್ಚಿ ಬಿದ್ದ ಮಗುವು, ಹಾಗೆಯೇ ಮಾಡಲು ದಕ್ಷಿಣತಃ ನಿಷ್ಕ್ರಮಿಸುವನು.]

ಬಸವ್ವ: (ಕೂಸೂ ಕುಕ್ಕೆಯೂ ಹೋಗುವ ಹೆದರಿಕೆಯಲ್ಲಿ ಕಿಟ್ಟಿಯ ಟೋಪಿ. ಬೆನ್ನುಗಳನ್ನು ಗಮನಿಸದೆ ತಿರುಗಿ) ಅಯ್ಯೋ ! ನನ್ ಐದಾ !...ನನ್ ಮಕ್ರೀ !...

ಕಿಟ್ಟಿ: ಮಾತ್ನಾಡ್ಬೇಡಿ !...ನಮ್ಮುಪ್ಕಾರ ! (ಕೈಯನ್ನು ಬೀಸಿ ತೋರಿಸುತ್ತಾ) ಅಲ್ಲಿಂದಿಲ್ಲೀಗೆ ಇಲ್ಲಿಂದಲ್ಲೀಗೆ double ಉಪ್ಕಾರ...ನಿಂಕೆಲ್ಸ ಯಥಾಪ್ರಕಾರ, ಕೂಸ್ನೂ, ಕುಕ್ಕೇನೂ. ಎಲ್ಲಿ ಇಳಿಸಿದ್ದೋ ಅಲ್ಲಿಂದ್ ಮುಂದಕ್ಕೆ....

ಬಸವ್ವ: (ಕಿರುಚುತ್ತಾ) ಅಯ್ಯೋ ! ನೀವ್ರೋ ! ನಿಮ್ಮುಪ್ಕಾರನೋ !...ನನ್ ತಕಾರಿ ! ...ನನ್ ಕುಕ್ಕೇ...ನನ್ ಐದಾ !

[ಅರಚುತ್ತಾ ದಕ್ಷಿಣತಃ ನಿಷ್ಕ್ರಮಿಸಿರುವ ಮಗುವನ್ನು ಹಿಂಬಾಲಿಸಿ ನಿಷ್ಕ್ರಮಿಸುವಳು]

ಕಿಟ್ಟಿ: [" Reverse gear "ನಲ್ಲಿ ಹಿಂದೆ ಸರಿಯುವ ಮೋಟಾರಿನಂತೆ. ತಾನು ಹೊತ್ತ ಹೊರೆಯು ಹೆಂಗಸಿಗೆ ಕಂಡು ಬರದಷ್ಟು ಹುಷಾರಾಗಿ ರಂಗದ ವಾಮತಃ ಹಿಮ್ಮೆಟ್ಟುತ್ತಾ] Constable ರಂಗಣ್ಣಾ ! ಓಡ್ಬಂದು join ಮಾಡ್ಕೋ ನಿನ್ನ duty ಗೆ !!

[ನಿಷ್ಕ್ರಮಿಸುವನು]

[ಮಗುವು ಕುಂಟುತ್ತಾ ಪ್ರವೇಶಿಸಿ ದಕ್ಷಿಣದಿಂದ ವಾಮವನ್ನು ಹಾದು ನಿಷ್ಕ್ರಮಿಸುವನು.]

[ದಕ್ಷಿಣತಃ ನೇಪಥ್ಯದಲ್ಲಿ ಬಸವ್ವನ ಆರ್ತನವು ಕೇಳಿಬಂದು ನಿಲ್ಲುತ್ತಾ, ಬೀದಿಯ ಪರದೆಯು ಎದ್ದು ಮತ್ತೊಂದು ಬೀದಿಯ ಮನೆಯ ಮುಂಭಾಗವು ವ್ಯಕ್ತವಾಗುವುದು.]

ಮಗೂ: (ಪಿಮ್ಮೆಟ್ಟುತ್ತಾ ತನ್ನ ಮುಂದುವರಿಯುವ ಕಿಟ್ಟಿಯೊಂದಿಗೆ ವಾಮತಃ ಪ್ರವೇಶಿಸಿ) ಇದೇನ್ ಕಿಟ್ಟಿ ! ತುರಕ್ ಭಾಷೇಲಿ ನೀನು ಥೇಟಾಗಿದ್ದಾಕ್ಷಣವೇ...ನಡ್ಯೋದ್ರಲ್ಲೂ ಆ ಭಾಷೇನ ಬರ್‍ಯೋ ಹಾಗೇ ನಡೀಬೇಕೇ ?

ಕಿಟ್ಟಿ: (ತಿರುಗಿ) ಬಲ್ ವzನ್ನೋ ! (ಮೆಲ್ಲಗೆ ಕೂಷ್ಮಾಂಡ ಇತ್ಯಾದಿ ಶಾಕಗಳನ್ನು ರಂಗದ ದಕ್ಷಿಣಾಂತ್ಯದಲ್ಲಿಟ್ಟು) ಗುಗ್ಗುಲೇ...ನಿನ್ನ ಗರ್ದನ್ನೂ...ಬಗಲ್ನೂ...ದುಖಾಯಿಸ್ದ...ಆ ಪಿಡಿಂಬಿ ಹತ್ರ ಲಪ್ಪಾಯಿಸಿದ ಬಾಬ್ತೋ ಇದು !

ಮಗೂ: ಓಹೋ !!...ಅದಕ್ಕೇನೋ ಬಚ್ಚಿಟ್ಟ್‌ಕೊಂಡು ನಡೆದಿದ್ದ್ ಹೀಗೆ ? !

ಕಿಟ್ಟಿ: ಹೂಂ!!...ಲಪ್ಪಾಲಜೀಲಿ first rule ಉ...**ಮಾಲೀಕ ಮರೆಯಾಗೋವರೆಗೂ ಮಾಲನ್ನು ಮರೆಮಾಚಿ ಇಡೂ!!** ಹೂಂ ! ಇತಿ ನನ್ನ ಅಮರಃ ! ಆ ಕಿರಾತಿಕೈಲೇ ಸಿಕ್ಕೊಳ್ಳೋದು ...ಕುಂಬ್ಳಕಾಯಿ...ಕಳ್ಳನಾಗಿ?...ನಾನು ?...Poli Kitti ? Never let···it be said !... Therefore...ಇಷ್ಟು ಮೆಹನತ್ತು ಅರ್ಥ್‌ವೇ?...ಈ ಬಾಬ್ತುಗ್ಳು ನಿಮ್ಮನೇ ನಾರಾಯಣ್‌ನ ಅಡ್ಗೇ office ಗೆ ದಾಖ್ಲಾಗೋವು...ಇಲ್ಲಿ ಬಂದ್ ಕೂತ್ಕೋ...(ಮಗುವು ಹಾಗೆ ಮಾಡುತ್ತಲೂ) ಇಲ್ಲ್ ನೋಡ್ ಮಗೂ ! ನೀನ್ ಗೂಡು ಸೇರೋವರ್‍ಗೂ ಘಬ್ರಾಯಿಸ್ತಿರ್‍ತಾಳೆ ನಿಮ್ಮಮ್ಮ !...ನ್ಯಾಯ! ಹೆತ್ತ್‌ಹೊಟ್ಟೇ ! ದೇವ್ರೇಗತಿ!...ಮರ್‍ತೇಬಿಟ್ಟೆ. ನಮ್ಮಪ್ಪನ್ನ...ನಿನ್ನ ಮನೇಗ್ ಸೇರ್‍ಸೋ ಗಲಾಟೇಲಿ...

ಮಗೂ: ಏನ್ ಮರ್‍ತದ್ ಕಿಟ್ಟೀ ?

ಕಿಟ್ಟಿ: ನಗ್ಬೇಡ ಗುಬ್ಬೀ...ನಮ್ಮಪ್ಪ ಹೆಣ್ಣಕ್ಸ...ನಮ್ಮಮ್ಮ್ ಸತ್ತಾಗ್ನಿಂದ ನೀನ್ ಮನೇ ಸೇರೋವರ್‍ಗೂ ನಿಮ್ಮಮ್ಮ ಹೆದರ್ತಿರೋ ಹಾಗೆ ಹೆದ್ರ್ತಿರ್‍ತಾನೆ ನನ್ಕೋತೀಮೂತೀನ ನೋಡೋವರ್‍ಗೂ!...ಹೊತ್ ಮುಳುಗುತ್ಲೂವೆ ನಂ ಕೇರೀನೆಲ್ಲಾ ಗಡ್‌ಗಡಾಯ್ಸೋ ನನ್ನ...ಭೂಪ್ತೀನ ...ಯಾವ್ ಗಾಡೀನೋ, ಯಾವ್ ಮೋಟ್ರೋ...ನಿಮ್ಮಪ್ಪ, ನಮ್ಮಣ್ಣನ್ ಹಾಗೆ, ದುಡ್ಡಿಂದ್ ಕೊಬ್ಬಿದ್ದೋರ ಕಾರಿನ ಕೆಳ್ಗೆ...ಸತ್ತಿರ್‍ತೇನೋಂತ...ಹೆಣ್ಣಕ್ಸಾಗಿ ಹೆದರ್ತಿರ್‍ತಾನೆ ಇಷ್ಟ್ ಹೊತ್ಗೆ... ಸಂಧ್ಯಾವಂದ್ನೇನ ಅಟ್ಸಿ...ಬೂದಿ ಬಳ್ಕೊಂಡ್ ನನ್ ಹಣೇಗೆ...ನಮ್ಮಪ್ಪಿಗೆ ದಿಕ್ಕಾಯ್ಸಿ...ಹಿತ್ಲು ಗೋಡೇನ್ ಹಾರಿ...ನಿನ್ನ ಬಂದ್ ಸೇರೋವರ್‍ಗೂ–, ನೀನಿಲ್ಲೇ, ನಂ ಮೋಟೋ ಹಾಗೆ Be prepared ಆಗಿರ್‍ಬೇಕು...ಆಮೋಲೇನ್ ಇದ್ದೇ ಇದೆ...ಯಥಾಪ್ರಕಾರ (ಮಗುವಿನ ಎರಡು ಕೆನ್ನೆಗಳನ್ನು ಎರಡು ಕೈಗಳಿಂದಲೂ ಬಡಿಯುತ್ತಾ) ನೀನು...ನಿಂ ಬಂಗ್ಲೆ! ನಿಮ್ಮಮ್ಮಂಗೆ ನಿನ್ ಮೊಖಾಬ್ಲೆ ...ನನಗೆ ನಾರಾಯಣನ ಮೊಕ್ಕಾಬ್ಲೆ! ಕಾಫಿ...ಉಪ್ಪಿಟ್ಟು ಎಟ್ಸೆಟ್ರಾ...ಇಲ್ಲಿಂದ ಕದಲ್ಬೇಡ...ಬಂದೇ ಬಿಡ್ತೇನೆ...**ಬಂದೇಬಿಡ್ತೇನೆ...**ಅಷ್ಟ್ರವರ್‍ಗೂ ಜಪಿಸ್ತಿರು...

"ಕಸರತ್ ಘಟಿಯಾ ಕಭಿನಹಿ ಹಟಿಯಾ"

ಕಾಲ್ ನೋಯುತ್ಯೇ ?

ಮಗೂ: ಏನೂ ಇಲ್ಲ... ಮೊಣಕಾಲು...ಸ್ವಲ್ಪ...

ಕಿಟ್ಟಿ: ಒಳ್ಳೇ ಗಂಡ್ಸೋ ! ... ಬೊಗಳ್ಬಾರ್‍ದೇ ?...ಶುಕ್ರಾಚಾರಿ...ಅಲ್ಲ ಎಸ್ಸೆಮ್ಮೂ— First aid ಬಾಬತ್‌ನಲ್ಲಿ ಗೋಳಾಡಿದ್ದಾಗೆ..."**ಕಾಲೂನಕ್ಕೊಲ್ಡ್ bandageoo**"...ಕದಲ್ದೆ ಇಲ್ಲೇ ಕುಕ್ಕರಸ್ಕೋ ! (tears his own banian into a strip ; rushes out saying "ಕೊಳಾಯಿಲ್ಲೇ ಇವೆ" and re-enters with the strip soaked)

ಕೊಳಾಯಿ convenient ಕಾಣ್ಸೋ ಕಾಲ್ ಮುರ್ಕೊಳ್ತೆ....(binds it around ಮುಗೂ's knee, and standing up) ಮರೀಬೇಡ ಮಗು...ಉತ್ತರಾರ್ಧ ಮರೀಬೇಡ..."ಅಭಿತಕ್ ಪಹಿಲ್ವಾನ್ ಕಭೀನೈ ಹಟಿಯಾ"! ಕದಲ್ಬೇಡ ಇಲ್ಲಿಂದ !...ಬಂದೇ ಬಿಟ್ತೀನಿ.

[Exit]

ಮುಗೂ : ಈಗ ಯಾರನ್ ನಂಬೋದೋ ಕಾಣೆ...ಒಂದ್‌ಕಡೆ ಜಂಬದ್ಕೋಳಿ ರಾಘು... ಒಂದ್‌ಕಡೆ ಅಮ್ಮ...ರಾಘು ಹೇಳೋದೋ. "ಆ ಪೋಲಿ ಸಹವಾಸ ತಪ್ಪು"ಂತ...ಅಮ್ಮನೋ "ನೀನು ಬಂದ್ ಮನೇ ಸೇರ್ಬ್ಯಲ್ಲಾ, ಕಿಟ್ಟಿಮನೇಲಿ. ಏನು, ಹ್ಯಾಗಿಧೆ ವಿಚಾರಿಸ್‌ಬಾ"ಂತಾಳೆ... ಇವನ್ ಹೇಳ್ದಹಾಗೆ ಥೇಟ್ ಪೋಲೀನೇ ಇವ್ನು...ಬೇಡವ್ ಕುಸ್ತೀನ್ ನನ್ನ ಕೈಲ್‌ಮಾಡ್ಸಿ...ಕಾಲ್ ಮುರ್ಸಿ...Cold Bandage ಕಟ್ಟಿ ಕುಕ್ಕರ್ಸಿಸಿ ನಡುರಸ್ತೇಲಿ...ಜಟಿಸ್ತಿರೂಂತ ಹೇಳ್ಬಿಟ್ ಹೋಗಿ ಧಾನೆ. ಆದ್ರೂ ರಾಘು ಜಂಬದ್ಕೋಳೀನೆ...ಅಮ್ಮ ಅಮ್ಮನೇ...ಅವ್ ಹೇಳೋವಾಗೆ ಕಿಟ್ಟಿ ಕಿಟ್ಟೀನೆ ! ಸರಿ ! "ಕಸರತ್ ಘಟಿಯಾ, ಕಭೀನಹಿ ಹಟಿಯಾ. ಅಭಿತಕ್ ಪಹಿಲ್ವಾನ್, ಕಭೀನಹಿ ಹಟಿಯಾ" ...ಇದೇನ್ ಬೆಳ್ಕು !...ಹಯ್ಯೋ ! ಬೆಂಕಿ !!

[ತಾನು ಕುಳಿತಿರುವ ಮನೆಯ ಮುಂಭಾಗದಲ್ಲಿರುವ ಬಾಗಿಲು ಕಿಟಕಿಗಳು ಫಟ್ಟನೆ ಬೆಳಕು ತುಂಬಿರುವುದನ್ನು ಗಮನಿಸಿ,]

ಅಯ್ಯೋ ! ಇದೇನಿದು...ಬೆಳ್ಕು. ಅಲ್ಲ ಬೆಂಕಿ...ಒಳಗೆ ಯಾರೂ ? (ಕಿವಿಯನ್ನು ಚಾಚುತ್ತಾ) ಹಯ್ಯೋ ! ಕಿಲ್ರ್ನ್‌ತಿಧಾರೆ (ಎದ್ದು ಕುಂಟುತ್ತಾ ಬಾಗಿಲನ್ನು ಸಮೀಪಿಸಿ) ಹಯ್ಯಯ್ಯೋ...ಹೆಂಗ್ಸು ಯಾರೋ...(ಹೆದರಿ) ಓಹೋ ! ಮರ್ತೆ (ಜೇಬಿನಿಂದ ಸೀಟಿಯನ್ನು ಸೆಳೆದು ಊದಿ)

[ನೇಪಥ್ಯದಲ್ಲಿ " ಹಯ್ಯೋ...ಇನ್ನೇನ್ ಗತೀ "]

ಇದೋ ! ಬಂದೇಮ್ಮಾ

[Exit through door]

[Re-enter limping, dragging a woman, latter shouting "ಕೂಸೂ...ಕೂಸು"..."ಇವ್ರು" !]

ಮುಗೂ : ನೋಡ್ದೇಮ್ಮಾ...ತೊಟ್ಲಲ್ಲಿ...ಇಲ್ಲೇ ಇರಿ...ಎತ್ಕೊಂಡ್ ಬರ್ತೀನಿ...ಭಯ್ ಪಡ್ಬೇಡಿ...ನಂಬೀಮ್ಮಾ (blows the whistle again) ಯಾಕ್ ಬರ್ಲಿಲ್ಲ...ಯಾರೂ ? ಕಿಟ್ಟೀನೂ ಇಲ್ಲ ! ಇನ್ನೂ ಅವ್ನ ಇದ್ದಿದ್ರೆ...(Exit as before...Re-enter with baby in cradle) ಇಕೋ ಕೂಸೂಮ್ಮಾ.

ಈಕೆ : (ತೊಟ್ಟಿಲು ಸಮೇತ ಮಗುವನ್ನು ಅಪ್ಪಿಕೊಂಡು)..."ಇವ್ರು"...! ?

ಮುಗೂ : ಎಲ್ಲಮ್ಮಾ ? (ಭಯದಿಂದ ಜ್ವಾಲೆಯನ್ನು ಕಾರುತ್ತಿರುವ ದ್ವಾರವನ್ನು ಸಮೀಪಿಸಿ) ಹಯ್ಯೋ ! ಯಾರೋ ಕಿಲ್ರ್ನ್‌ತಿಧಾರೆ ವಳಗ್ ಸಿಕ್ಕೊಂಡು...ಗಂಡ್ಸು "ಬೆಂಕಿ ಬೆಂಕೀ"ಂತ !

ಈಕೆ : ಹಯ್ಯೋ ಇವ್ರೇ ! ಜ್ವರ...ನಿಸ್ತ್ರಾಣಿ...ಪಡಸಾಲೇಲಿ...ಇನ್ನೇನ್ ಗತೀಃಃಃ !!!! [ತೊಟ್ಟಿಲಿನಲ್ಲಿರುವ ಮಗುವನ್ನು ಬಿಟ್ಟು ಹೋಗಲಾರದೆಯೂ. ಪತಿಯ ಸಮೀಪಕ್ಕೆ ಹೋಗ ಲಾಗದೆಯೂ, ಬಾಗಿಲಿಗೂ. ತೊಟ್ಟಿಲಿಗೂ. ಹಾರಾಡುತ್ತಿರುವಳು.]

ಮುಗೂ : (ಸೀಟಿಯನ್ನು ಮತ್ತೊಂದು ಸಲ ಊದಿ. ನಡುಗುವ ಧ್ವನಿಯಿಂದ) ಭಭಭಭಯ ಪಡ್ಬೇಡೀಮ್ಮಾ [Exit! Re-enter after fully a minute with the man. The man sits down and wife's attentions to revive him succeed.]

ಮನೆಯಾತ: (ಕಣ್ಣು ತೆರೆಯುತ್ತಾ) ಎಲ್ಲಿಧೇನೆ ! (ಥಟ್ಟನೆ) ಹಯ್ಯೋ ಹೌದು ಬೆಂಕಿ (to wife) ಇಧೀಯಾ (grabbing his wife's hand) ಕೂಸು ಭದ್ರವೇ ?

ಈಕೆ: ಹೂ...(ಮಗುವನ್ನು ತೋರಿಸಿ) ನಂ ಭಾಗದ್ ದೇವ್ರು ಹಾಗೆ ಬಂದ ಈ ಹುಡುಗನ್ ಧೈರ್ಯದಿಂದ...ಮನೇನೂ ಸಾಮಾನೂ ಬೆಂಕೀ ಪಾಲಾದ್ರೂನೂವೆ ನಾವ್‌ಭದ್ರ...ಹ್ಯಾಗ್ ಬಿತ್ತೀ ಬೆಂಕಿ...? ಮುಂದಿನ್ಕೋಣೆ ಸೀಮೆ ಎಣ್ಣೆ ದೀಪಾ ಏನಾದ್ರೂ...? ಇಲ್ಲ ಪಡ್ಸಾಲೇಲಿ ಪೆಟ್ಗೆ ಪಕ್ಕದಲ್ಲಿ ಇಟ್ಟ ದೀಪಾ ಏನಾದ್ರೂ ?...ಇಲ್ಲ; ನಾ ಬರೋವಾಗ್ ಕೂಡ ಉರೀತಾ ಇತ್ತು ಸರ್ಯಾಗಿ.

ಮನೆಯಾತ: ಪೆಟ್ಗೆ ಅಂದ್ರೆ ಜ್ಞಾಪ್ಕ ಬರುತ್ತೆ...ಹಯ್ಯೋ ! ಪೆಟ್ಗೆ ಮುಚ್ಲೂ ಇಲ್ಲ. ಬ್ಯಾಂಕ್ನಲ್ ನಂಬ್ಕೆ ಇಲ್ದೆ ಮೂರ್‌ವರ್ಷ್‌ದಿಂದ ಕೂಡ್ಹಾಕಿದ್ದ ದುಡ್ಡು ನೋಟ್‌ನೋಟಾಗಿ ತುಂಬಿಟ್ಟಿದ್ದೆ...ಹಯ್ಯೋ ! ಇನ್ನ್ ಬದುಕಿತಾನೇ ಏನುಪ್ರಯೊಜ್ನ...ಮನೇನೂ ಹೋಗಿ ಇದ್ದ ದುಡ್ಡೂ ಹೋದ್ಮೇಲೆ ಮನೆಮನ್ಗೂ ಹೋಗಿ ಭಿಕ್ಷಾ ಬೇಡೋದೇ? ಕೆಟ್ವಿಲ್ಲಾ...(gradually crawls up to the door and pointing) ಹಯ್ಯೋ ಇಲ್ಲೇ ಇಧೆ...ನನ್ನ ಕಣ್ಣಿಗ್ ಕಾಣ್ಸೋ ಹಾಗಿಧೆ...ನನ್ ಮೈಗಾನ ನೆಟ್ಟಗಿದ್ದಿದ್ರೆ ನಾನೇ ಹೋಗ್ತಿದ್ದೆ...(to ಮಗೂ). ಅಪಾಯ ಹೌದು...ಆದ್ರೂ ಅಷ್ಟ್‌ಕಷ್ಟವಲ್ಲಾ...ಇಲ್ಲೇ ಇಧೆ ನೋಡು... ಆ ಮಗು ತೊಟ್ಲಿತ್ತು ನೋಡು ಅಲ್ಲೇ...ಅದರ್ ಪಕ್ದಲ್ಲೇ...ಒಂದೆರಡ್ ಹೆಜ್ಜೆ ಮಗು ಅಷ್ಟೆ !...

ಈಕೆ: ಅಯ್ಯೋ ! ಜೇಡೀಂದ್ರೆ...ಬೆದ್ರೋ ಹಾಗಿಧೆ ಆ ಮಗು...ಯಾರ ಮಗೂನೋ ಪಾಪ...ಅದಿಷ್ಟ್‌ಮಟ್ಗೆ ಮಾಡಿದ್ದೇ ಎಷ್ಟೋ ಉಪ್ಕಾರಾಂದ್ರೆ....ಹಯ್ಯೋ !...ಒಂದ್ ಪ್ರಾಣಿ ಇಲ್ವೇ ಈ ಹಾಳಾದ್ ಬೀದೀಲೀ ?... ಒಬ್‌ಗಂಡ್ಸಿದ್ದಿದ್ರೆ ?

ಮಗೂ: (at once) ಯಾಕಮ್ಮಾ ನಾನೇನ್ ಹೆಂಗ್ಸೆ ? ಕಾಲು...ಪರ್ವಾಇಲ್ಲಮ್ಮಾ... ಯಾಕ್‌ಬರ್ಲಿಲ್ವೋ ಇನ್ನೂ ಯಾರೂ ?

[blows whistle and steps towards door.]

ಈಕೆ: ಹೆದರ್ಕೆ ಇದ್ರೆ ಬೇಡಾ ಮಗೂ ! ಬೇಡ...ಬೆಂಕಿ...ನಮ್ಗೆ...ಲಭ್ಯವಿದ್ರೆ...ಗಂಡಸ್ರು ಯಾರಾದ್ರೂ...

ಮಗೂ: (indignantly) ನಾನ್ ಹೆಂಗ್ಸಲ್ಲಮ್ಮಾ...ನಾನ್ ಗಂಡ್ಸು ! ನನ್ಕಾಲ್‌ಗಾನಾ ಸರೀಗಿದ್ದಿದ್ರೆ...ಬೆಂಕಿ ಆದ್ರೂನೂ...ಕಿಟ್ಟಿ ಹೇಳಿಧಾನೆ. ಹೆಂಗಸ್ರೇ ಬೆಂಕೀಂದ್ರೆ ಬೆದರ್‌ತಿರಲಿಲ್ವಂತೆ. ಕಿಟ್ಟೀಗಾನಾ ಈಗಿದ್ದಿದ್ರೆ ? ಈಗ...ನಾನ್ ಹೆದ್ರಿದ್ರೆ...ಹೆಂಗ್ಸೂ ಅಂದ್ ಬಿಡುತಾನೆ...ಗೊತ್ತು ! ಹ್ಯಾಗಿದ್ರೂ ಬಂದೇ ಬಿಡ್ತಾನೆ...ಆ...ಭಿ...ತ...ಕ್...ಪ...ಹಿ...ಲ್ವಾ...ಕ...ಭಿ...ನೈ...ಹ ....ಟಿ...ಯಾ [muttering, blows the whistle hysterically; finding no immediate response enters the burning building.]

[A sudden stream of men and women, and scouts, all shrieking and shouting incoherently in questions asked ; the forlorn family's answers given ; is hushed by S·M's entrance, who takes in the situation and plants himself at the door of the burning building.]

ಸ್ಕೌಟು ಮಾಸ್ಟರ್: Ranga Rao !...run to the Police Station !... Phoneoo...fire brigadeoo ! ಇದ್ದಿದ್ರೆ ಬಕೆಟ್ಸು. water house ಉ...ನರಸಿಂಹ ಮೂರ್ತಿ. ರಾಮಣ್ಣ. ರಂಗಣ್ಣ. ನೆರೆಹೊರೆಯೋರ್‌ಮನೆ...ಚೊಂಬು...ಬಿಂದ್ಗೆ... ಕೊಳಾಯಿ must be near!!...

[A number of Scouts press against him.]

ಅಪ್ಪೂ : Scout ಸಿಕ್ಕೊಂಡಿಧಾನ್ ಸಾರ್ ವಳ್ಗೇ!!...

ಸ್ಕೌಟು ಮಾಸ್ಟರ್ : ಹ್ಯಾಗ್ ಗೊತ್ತೋ !

ಅಪ್ಪೂ : ಈಕೆ ಹೇಳ್ತಾರ್ ಸಾರ್ ! " ನಿಂಹಾಗೆ ಹಸುರ್‌ರುಮಾಲ್ ಕಟ್ಟಿದ್ದ ...ಚಿಕ್‌ಮಕ್ಳು ...ಕುಂಟ್ತಾ ವಳಗ್ಹೋದಾಂತ...ಅಯ್ಯೋ ಮಗು ಸಾರ್ !...ರೆಸ್ಲಿಂಗ್ನಲ್ಲಿ ಪಟ್‌ತಿಂದು....ಅಷ್ಟೇ ಇರ್ಬೇಕ್ ಸಾರ್...ಮಗೂನೇ ಸಾರ್...ವಳಗ್‌ಸಿಕ್ಕೊಂಡಿಧಾನೆ. ಸಾರ್ !...

ಸ್ಕೌಟು ಮಾಸ್ಟರ್ : ಮಗು ಆಗ್ಲಿ ಯಾರೇ ಆಗ್ಲಿ...ಈಗ ಒಳಗ್ಹೋಗಿ ಬರೋದು hopelessoo!

[puts his hand against door rigidly and blows whistle repeatedly]

ಅಪ್ಪೂ : ರಾಘು ಲೇ, ಶಾಮಿ, ತಮ್ಮೂ, ಮಗು ಸಿಕ್ಕೊಂಡಿಧಾನೆ ಕಣ್ರೋ ! ಕತ್ತೆಗಳ್ಹಾಗೆ ನೀವ್ ಬೇಕಾದ್ರಿಲ್ಲಿ ನಿಲ್ಲಿ...ನನ್ಕೈಲಾಗೋದಿಲ್ಲ ! ನುಗ್ಗೇಬಿಡೋಣ ಒಳ್ಗೆ ! S.M. or no S.M. ! ಬರ್ರೋ ಹೆಣ್ಣಕ್ಸ್ !

ರಾಘು : ಹೌದು ಸಾರ್...ಮಗು ಸಾರ್...ಗುಬ್ಬಚ್ಚಿ ಸಾರ್... ಸುಮ್ನಿರ್ಬಾರ್ದು ಸಾರ್ ನಾವು.

ಸ್ಕೌಟು ಮಾಸ್ಟರ್ : (pushing them back and being pushed back) ತಪ್ಪೂ ಕಾಣ್ರೋ Fools !...ಒಬ್ ಸಾಯ್ತಿದ್ರೆ ನೀವೆಲ್ಲಾ ಸಾಯೋದ್ ತಪ್ಪು ಕಾಣ್ರೋ... Get Back ! **Get back !!**

[All this while, thick flames of smoke have been issuing out of the door and an unequal struggle between a sensible S.M. and hot headed hysterical scouts goes on, with the S.M. being worn down, with a great gaping crowd of men and women around them, watching helpless and whispering inane platitudes. **Suddenly**, behind the scenes, Kitti's voice, first faint, but gradually growing stronger, is heard.

" ನಬಿಕತು ಭೋಡ್ಕೆವಾ : !
ನಬಿಕೇ ಸಾತ್ ಫಿರ್ ನಿಕಲ್ಯಾವಾಃ !!
ಮೇರೆ ಪೇರಾಲಿ...(ರಾಗ–ಮಾಂಡ್)

ಈ Engine markoo too Strongooಪ್ಪ...ಇದು ನನಿಗ್ಬೇಡ ಕರೀಂ ಬೀಡಿಯೇ ಬೇಕು.]

ಕಿಟ್ಟಿ : (in panche and torn banian, with forehead ashed white, smoking a beedi) ಇದೇನ್ ಗಲಾಟೆ ?...ಮನೆ...ಬೆಳ್ಕು...ಜನಗ್ಳು...ಮಧ್ವೆ ...ಹಯ್ಯೋ ಶುಕ್ಲಾಚಾರಿ...ತಕೋ...ಎಲ್ಬಂದ್ರೂ ಇವನ್ ಸ್ವರೂಪ.

ಸ್ಕೌಟು ಮಾಸ್ಟರ್ : ಯಾರದು ? ಕ್ರಿಪ್ಪ್ರಾವ್ !!

ಕಿಟ್ಟಿ : ಕ್ಷಮ್ಸಿ ಸಾರ್, ತಿರ್ಗ್ಾ ಡ್ರಿಲ್ಲೂಂತ ನನಗ್ ಗೊತ್ತಿಲ್ಲ ಸಾರ್...ಕಿತ್ತ್‌ಹಾಕ್ಬಿಂದೆ ಸಾರ್ ನನ್ ಯೂನಿಫಾರಂನ !

ಸ್ಕೌಟು ಮಾಸ್ಟರ್ : ಕೃಷ್ಣಾವ್ ! come here ! ಚೆಂಕಿ, ಮನೆ, ನನ್ನ ತಕ್ಷಿ ಧಾರೆ ಹುಡುಗ್ರು...help...help ! ರಾಘೂನ್ ಗ್ಯಾಂಗ್ನ ಹಿಂತಳ್ಳೋಕೆ help...help ಮಾಡು !!

ಕಿಟ್ಟಿ : ಏನ್ ಜಂಬದ್ಕೋಳಿ ಪಟಾಲಂ ನಿಂಮ್ಮೇಲ್ ಕೈಯ್ಯೇ? (Jumps to S.M.'s side, pushing the crowd back) **ಇದು ಲಡತ್ತು ಸಾರ್ !** (Fisting the faces pressing on him) ಹ್ಯಾಗಿವ್ಯೋ ಉಂಡೆಗ್ಳು ?

ಅಪ್ಪೂ : ಮಂಕೂ, ಲೇ ! ಮಗು ವಳಗ್ ಸಿಕ್ಕೊಂಡಿಧಾನೋ ?!

ಕಿಟ್ಟಿ : ಮಗು ?...ವಳ್ಗೆ ?...

ಅಪ್ಪೂ : ಹೂಂ, ಕಾಣೋ, ಅವನ್ನ ಎಳ್ಕೊಂಬರೋಕೆ ಬಿಡೋದಿಲ್ಲ ಎಸ್ಸೆಮ್ಮೂ !

ಸ್ಕೌಟು ಮಾಸ್ಟರ್ : Hopeless ಕೃಷ್ಣಾವ್ ! ಒಬ್ಬ scout ನ save ಮಾಡೋಕ್ ಹೋಗಿ ಹತ್ ಸ್ಕೌಟುಗ್ಳು ಸಾಯೋದ್ ತಪ್ಪು !

ಕಿಟ್ಟಿ : (flaring up) ಒಳ್ಳೇ ತಪ್ಪೂ ಸಾರ್ !? ಮಗು **ನಬ್ಬ** ಸ್ಕೌಟ್ ಅಲ್ಲಾ ! Brigade Brigade ಏ **ಅವ್ನು** ಸಾರ !

[steps inside the door.]

ಸ್ಕೌಟು ಮಾಸ್ಟರ್ : (Grabbing Kitti's hand) ಕೃಷ್ಣಾವ್, ನೀನ್ ಹೊರ ಟ್ಹೋದ್ರೆ ಇವ್ರೆಲ್ಲಾ ನುಗ್ತಾರ್ ನಿನ್ನ್ ಹಿಂದೇ... !

ಕಿಟ್ಟಿ : (turning round and facing the others) ಲ್ರೋ, ಮಗೂನ್ ತರೋದ್ ನನ್‌ಭಾರ, ವಳಗ್ಗ್ ಗಿಳಕ್ ಬಂದ್ರೋ ಗರ್ದನ್ ಕತ್ತರಿಸ್ತೇನೆ...ತೆಪ್ಪೆ ಇಲ್ಲೇ ನಿಂತಿರಿ.

[is lost in the smoke]

[Enter some men and scouts with buckets and water and a few policemen too, chucking water at windows and doors and Exit through door and return.]

Policeman: ಒಳ್ಗೆ ಹೋಗೋದಾಗೋದಿಲ್ಲ ಸಾರ್, ಹೊಗೆ ಬಲ್ ಜಾಸ್ತಿ...(looking at side-wing left) ಅಕೋ, Inspector ಬಂದ್ರು.

[Enter more constables and Inspector]

[Sound of a passing car stopped; heard from within.]

(a voice from inside) ಏನದ್ ಗಲಾಟೆ ವಿಚಾರಿಸ್ಕೊಂಬನ್ನಿ. Trouble ಏನು ? (car engine stops)

Another Voice: ಚಿತ್ತ.

[Enter a gentleman, with turban, long black close-collar coat, white trousers and lace ಕಮ್ಮರ್ ಬಂದ್]

Gentleman: (addressing Inspector) ಏನಿದ್ ಗಲಾಟೆ ?...(ಹತ್ತಿರಕ್ಕೆ ಹೋಗಿ Inspector ಕಿವಿಯಲ್ಲಿ ಗುಸುಗುಟ್ಟುತ್ತಲೇ, ಆತನು ಬೆಚ್ಚಿಬಿದ್ದು, ನೆಟ್ಟಗೆ ನಿಂತು ರುಮಾಲು ಬಟ್ಟೆ, ನಡುಕಟ್ಟುಗಳನ್ನು ಸರಿಮಾಡಿಕೊಂಡು.)

Inspector: ಏನು ಇಲ್ಲೇ ಇಧಾರ್ಕೈ ?
Gentleman: ಹೌದು carನಲ್ಲಿ !
Inspector: Fall in !

[Police ನವರು ಲೈನಾಗಿ ನಿಲ್ಲುವರು.]

Inspector: "Shun"

[Police ನ ಲೈನು ನಿಷ್ಕಂಪವಾಗಿ ನಟ್ಟುಕೊಳ್ಳುವುದು.]

ಸ್ಕೌಟು ಮಾಸ್ಟರ್ : ಇದೇನ್ ಇನಿಸ್ಪೆಕ್ಟ್ರೇ ಡ್ರಿಲ್ಲು ಈಗ ?

[Inspector, S.M. ಕಿವಿಯಲ್ಲಿ ಗುಸುಗುಟ್ಟುವನು.]

ಸ್ಕೌಟು ಮಾಸ್ಟರ್ : (ಬೆಚ್ಚಿ ಬಿದ್ದು) Boys, Fall in !

[ಸ್ಕೌಟು ಹುಡುಗರು ಪಂಕ್ತಿ ಪಂಕ್ತಿಯಾಗಿ ನಿಲ್ಲುವರು.]

[ಇಷ್ಟರಲ್ಲಿ, ಇಲ್ಲಿಯ ವರ್ತಮಾನವನ್ನು ವಿಚಾರಿಸಿ ತಿಳಿದುಕೊಂಡ ದೊಡ್ಡ ಮನುಷ್ಯರು ನಿಷ್ಕ್ರಮಿಸಿ, ಇಷ್ಟು ಹೊತ್ತಿಗೆ ಪುನಃ ಪ್ರವೇಶಿಸುವರು.]

Inspector: ಅಕ್ಕಪಕ್ಕದಿಂದ ನೀರೆರ್‍ಚಿ ನಿಲ್ಸೋಕೆತ್ನ ಪಡ್ತಿಧಾರೆ...ನಿಲ್ಸೋದು ತಕ್ಕಟ್ಗೆ ಅಸಾಧ್ಯ.

Chief Scout: (Entering) ಯಾಕೆ, Fire Brigade ಇಲ್ವೇ ಊರ್‍ನಿ ?

Gentleman: ಇಲ್ಲ, ಮಹಾಸ್ವಾಮಿ...municipality...afford ಮಾಡೋದು ಕಷ್ಟ !

Chief Scout: (Turns round, gravely accepting the salutations round him, advances) ಯಾರ ಮನೆ ಇದು ? lifeಗೇನಾದ್ರೂ danger ಏ ?

Inspector: ಇಲ್ಲ ಮಹಾಸ್ವಾಮಿ !................ ....ಮನೇವ್ರು...ಅವ್ರ ಹೆಂಡ್ತಿ, ಮಗು, safe ಆಗ್ ಬಂದ್ಬಿಟ್ರು.

ಅಪ್ಪೂ : ಒಳ್ಳೇ lifeಗೆ danger ಇಲ್ಲ ! (to S. M.) Scouts ಸಿಕ್ಕೊಂಡ್ ಇದಾರೇಂತ್ ಹೇಳಿ ಸಾರ್ !

Chief Scout: ಏನು ! Scouts ಸಿಕ್ಕೊಂಡಿಧಾರ್‍ಕೈ ವಳ್ಗೆ ?

ಸ್ಕೌಟು ಮಾಸ್ಟರ್: (advancing and saluting) ಹೌದು ಮಹಾಸ್ವಾಮಿ, ನಾವ್ ಬರೋಷ್ಟ್ರಲ್ಲಿ ಒಬ್ಬ scout ಹೋಗಿದ್ದ...ಏನೋ property ಸೋ...ಏನೋ (doubtfully looks around him.)

ಅಪ್ಪೂ : ಮೊದ್ಲು ಮನೇಲಿದ್ದೋರ್‍ನ ಒಬ್ರೊಬ್ರನ್ನಾಗಿ rescue ಮಾಡ್ಬಿಟ್ಟು, ಆಮೇಲೇನೋ ದುಡ್ಡಿನ್ ಪೆಟ್ಗೆ ಇದೇಂತ ಹೇಳಿದ್ರು, ಅದನ್ ತರೋಕ್ ಹೋದ್ನಂತೆ ! ಆಮೇಲಿನ್ನೊಬ್ಬ scout ಹೋದ !

ಸ್ಕೌಟು ಮಾಸ್ಟರ್ : ಅಷ್ಟ್ ಹೊತ್ಗೇನೆ enter ಮಾಡೋದು fataloo ಅಂತ ನಿಶ್ಚಯಿಸಿಕೊಂಡು ತಡೀತಿದ್ದ ನನ್ನೇ ತಳ್ಬಿಟ್ಟ್ ಹೋದ ಆ ಹುಡ್ಗ !

Chief Scout: ಏನು ? ನಿಮ್ಮನ್ ತಳ್ಬಿಟ್ಟು...? ಹುಡ್ಗ...? (to Appu) ಏನು, Fellow scout ನ rescue ಮಾಡೋಕೆ ?

ಅಪ್ಪೂ : Scout ಅಂಬೋ ... ಅಂಬೋದೊಂದೇ ಅಲ್ಲ Sir...ಮಗು ಮೊದ್ಲ ಹೋದೋನು...ಚಿಕ್ ಹುಡ್ಗ...ಚಿಕ್ Scoutoo...ಚಿಕ್ ಕಬ್ಬು...ರೆಸ್ಲಿಂಗ್‌ನಲ್ಲಿ ಕಾಲ್‌ಬೇರೆ ಮುರ್ಕೊಂಡ ಇವತ್ತೂ...ಅವ್ನೇ ಮೊದಲ್ ಹೋದ್ದು (pointing to couple) ಇವರ್‍ನೂ, ಇವರ್ ಕೂಸಿನ್ನೂ, ಒಬ್ಬೊಬ್ಬರ್‍ನಾಗಿ ಹೊರಕ್ಕ್ ಸಾಗ್ಸಿ, ಇವರ್ ದುಡ್ಡಿನ್ ಪೆಟ್ಗೆ ತರೋಕೆ !... ಆಮೇಲೆ ಪೋಲಿ...ಕಿ...ಅಲ್ಲ...ಆ...ಎರಡ್ನೆಯೋನೂ ಒಳಗ್ಗೆ ಹೋದದ್ದು ಮಗೂಂತ್ ತಿಳೀತ್ಲೂ ನೂವೆ...ನಮ್ಮನ್ನೆಲ್ಲಾ ದಬಾಯಿಸ್ಬಿಟ್ಟು. ವಳಗ್ ನುಗ್ಗಿದ್ದು...ಅವರ್ ಮದರ್‍ಗೆ ಮಾತ್ ಕೊಟ್ಟಿದ್ದ ಮಹಾಸ್ವಾಮಿ...!

Chief Scout: ಯಾರ್ ಮದರ್‍ಗೆ...ಏನ್ ಮಾತು ?...ಯಾರು ಕೊಟ್ಟಿದ್ದು !

ಅಪ್ಪೂ : ಆ ಚಿಕ್ಕ್ ಹುಡುಗ್ನ ಮದರ್‍ಗೆ...ದಿನಾ ಮಗೂನ ಮನೇಗ್ ತಂದ್ ಸೇರಸ್ತೇನೇಂತ ಒಪ್ಕೊಂಡು ದಿನಾ ಕರ್ಕೊಂಡ್‌ಹೋಗಿ ಅವರ್ ಮನೇಲಿ ಬಿಡ್ತಿದ್ದ...ಇವತ್ತೂ ಮಗೂ **ವಳ್ಗಿ ಧಾನೇಂತ** ತಿಳೀತ್ಲೂವೆ...ಹ್ಯಾಗಾದ್ರೂ...

Chief Scout: ತ್ಸು ! ತ್ಸು ! ತ್ಸು !...ಬೆಂಕಿ ಬಿದ್ದ ಮನೇಗ್ ಮೂರ್ ಸಲ ನುಗ್ಗಿ ಮೂರ್ ಲೈವ್ಸ್ ಸೇವ್‌ಮಾಡಿ, ತಿರ್‍ಗಾ ನುಗ್ಗಿದ್ನೇ ?...cub ಏ...ಯಾರದು...ದುಡ್ಡ್ ತರೋಕೆ? ...ಯಾರ ದುಡ್ಡು ?

ಮನೆಯಾತ : ನಂದು ಮಹಾಸ್ವಾಮಿ...ಕ್ಷಮ್ಸಿ (ಏಳಲುಪಕ್ರಮಿಸಿ, ಆಗಲಾರದೇ ತಿರುಗಿ)...

ಒಬ್ಬ *Scout*: ರೋಗಿ, ಮಹಾಸ್ವಾಮಿ !

Chief Scout. (ರೋಗಿಗೆ) ಪರ್‍ವಾ ಇಲ್ಲ...ಏಳ್ಬೇಡಿ...ಕೂತ್ಕೊಳ್ಳಿ.

ಮನೆಯಾಕೆ : (ಗಂಡನಿಗೆ)ಅಯ್ಯೋ ಹೇಳೀಂದ್ರೆ ! ಏನು ತಿಳ್ಕೊಂಡಾರಾತ..." ತಾನ್ ಬೀಳೋಕ್ ಬೆದ್ರಿ ಕಂಡೋರ್ ಮಗೂನ ಬೆಂಕೀಲಿ ದಬ್ಬಿದ್ರೂ" ಅಂದ್ಕೊಂಡಾರು ... ಹೇಳೀಂದ್ರೆ ...ಹೆದರ್‍ಬೇಡಿ !

ಮನೆಯಾತ : ಕ್ಷಮ್ಸಿ, ಮಹಾಸ್ವಾಮಿ—ಮುದ್ಕ...ನಾನ್ ಕೂಡಿ ಹಾಕಿದ್ದ ದುಡ್ಡೆಲ್ಲಾ ಇತ್ತಾ, ಪೆಟ್ಗೇಲಿ...ಇಲ್ಲೇ ಹತ್ತಿರ್‍ದಲ್ಲೇ ಇತ್ತೂ...ಅಪಾಯವೇನೂ ಇಲ್ದೆ...ಹೆದರ್‍ದೆ...ಹೋದ ಆ ಹುಡ್ಗನ್ ಧೈರ್ಯದಿಂದ...ಮೋಸ ಹೋದೆ ಮಹಾಸ್ವಾಮಿ ! (ಬಿಕ್ಕಿ ಅಳುವನು.)

Chief Scout: ಹೌದು! ? ಅಷ್ಟ್ ದುಡ್ಡೂ ಪೆಟ್ಗೇಲಿಡೋದೆ ? ಈಗ ಆ ಮಗು...ಇನ್ನ್ ಅವನ ಮದರ್‍ಗೆ ಮಾತ್‌ಕೊಟ್ಟೇಂತ ಇನ್ನೊಬ್ನೂ...ಒಳಗೆ ಸಿಕ್ಕೊಂಡಿಧಾರೆ...! (to Inspector) Inspector, can nothing be done ?

Inspector: Everything that is possible is being done, Sir !... detached...houseoo...neighboursಗೇನೂ ಅಪಾಯ್‌ವಿಲ್ಲ...ಹಿಂದ್‌ಗಡೆ ನೀರ್ ಎರ್ಚ್‌ತಿದಾರೆ !...ಆದ್ರೆ ಈ scouts ನ rescue ಮಾಡೋದು, (drops his eyes)ಸ್ವಲ್ಪ...

Chief Scout: How awful !!?...Two scouts being roasted alive ! (ನಿಟ್ಟುಸಿರುಬಿಡುತ್ತಾ)...ಸುಮ್ನೇ ನಿಂತ್ಕೊಂಡ್ ಹ್ಯಾಗೆ watch ಮಾಡ್ತಿರೋದು ? ನಾವ್ ನಾವುಗ್ಳು comfortable ಆಗಿರೋವರ್‍ಗ್ಗೂ everything is all right around us ಊ ಅಂತ ಸುಮ್ನಿದ್ದ್‌ಬಿಡ್ತೇವೆ...ಘಟ್ಟಂತ ಹೀಗೇನಾದ್ರೂ ಒಂದು happen ಆಗುತ್ತೆ...ಆಗ್ ಗೊತ್ತಾಗುತ್ತೆ. ನಮ್ಮ helplessnessoo—awful! (His eyes seem to suddenly hear something inside the house) ಏನದ್ scuffle ಉ!? ನೋಡಿ!...ಎಲ್ಲೂ ಹೋಗ್‌ಬೇಡಿ...ಸ್ವಲ್ಪ ಸೀರೆರ್ಜ...ಆ smoke clear ಆದ್ರೆ ಒಳಗ್ಗೆ ಕಾಲಿಡಿ! ಏನೋ steps ಕೇಳಿಬರುತ್ತೆ (moves forward to the door himself.)

Scout Master and Inspector: ಕ್ಷಮಿಸ್ಬಿ ಮಹಾಸ್ವಾಮಿ! ತಾವ್ಪ ಹೀಗೆ ಬರಬೇಕು.

Chief Scout : Indignantly ನಾನಿಲ್ಲೀಂದ್ರೆ...ಅಲ್ಲೋಡಿ !

[A few of the Scouts, who have gone out and returned with buckets of water, go a step into the door, and emptying the buckets in the air…Re-enter.]

The two Scouts : (In excited tones, but breathing hard as though choked by the smoke) ಬರ್ತಿರೋ ಹಾಗಿದೆ...ಯಾರೋ...

[Everybody looks expectantly and with held breath at the door—Poli Kitti with Magu on his shoulder…The latter hugging tightly a steel deed box…stumbles out of the door and falls helplessly. The Chief Scout himself rushes forward, catches Magu in his arms and gently lowers him and Kitti to the floor. The scouts rush forward, some fanning the faces of the victims, others using artificial respiration, whilst one or two run out with buckets for water. A gentleman moves out of the crowd. which has hitherto been standing all struck and quiet. towards the victims.]

Gentleman: I am a Doctor…ದಾರೀ ಬಿಡಿ !

Chief Scout: ಯಾರು? ಡಾಕ್ಟ್ರೇ ?...Will you please…examine these boys, doctor ?

Doctor: Yes, Your Highness ! (bends down ; loosens the collar of Magu, puts his ear to the heart ; with a relieved look) ಪರ್ವಾ ಇಲ್ಲ, ಮಹಾಸ್ವಾಮಿ, serious ಏನೂ ಇಲ್ಲ...ಸ್ವಲ್ಪ open air ಏ ಸಾಕು restoring ಗೆ...ಅಂದ್ರೆ...ಕಾಲ್ ಮಟ್ಗೆ...seriously burnt ಉ...shift ಮಾಡ್ಬಿಡ್ಬೇಕು at once ಉ...to the hospital !

Chief Scout: Certainly!......ನನ್ ಕಾರಿದೆ!...ಯಾರ ಮಗು ಇದು ?

ಸ್ಕೌಟ್ ಮಾಸ್ಟರ್ : Mr. ರಾಮಣ್ಣೋರ ಮಗು; assistant commissioner ರಾಮಣ್ಣೋರು !

Chief Scout: Take him home doctor, and on to the hospital from there, if you think it best !...ಹೌದೂ ?...ಆ ಇನ್ನೊಬ್ಬ ಹುಡ್ಗ ?

Doctor: (bending over Kitti, shaking him and putting his ear over his heart for a second, gets up) ಪರ್ವಾ ಇಲ್ಲ ಮಹಾಸ್ವಾಮಿ... Strong boy ! ಸ್ವಲ್ಪ cold water ಉ...ಸ್ವಲ್ಪ artificial aid ಉ ಸಾಕು! in the meanwhile. (looking around him) will some body help me ? [bends down and lifts Magu, who is carried away by a few scouts]

Chief Scout: (to S.M.) ಹೌದೂ? ಈ ಮಗು father ಯಾರು ?...ಯಾವ ಸ್ಕೂಲು ?

ಸ್ಕೌಟು ಮಾಸ್ಟರ್: ತಂದೆ ಯಾರೋ ಗೊತ್ತಿಲ್ಲ ಮಹಾಸ್ವಾಮಿ!...ಸ್ಕೂಲು?... ಅವನೇನೂ ಓದೋ type ಅಲ್ಲಾಂತ ಕಾಣುತ್ತೆ.

Chief Scout—(bewildered and indignantly) Father ಗೊತ್ತಿಲ್ಲ !... ಓದೋ type ಅಲ್ಲ !...ಆ ಹುಡುಗ್ನ father ಗೊತ್ತು !. ಈ ಹುಡುಗ್ನ Father ಗೊತ್ತಿಲ್ಲ !... **ಈ ಮಗು ತಂದೆ assistant commissioner ಅಲ್ವೇನೊ?** ಈ ಮಗು ಯಾವ ಸ್ಕೂಲು ? ...ಅಲ್ಲ...ಯಾಕ್ ಹೋಗೋದಿಲ್ಲ ?...ಸ್ಕೂಲ್ಗೆ ? (ಇತರರಿಗೆ) ನಿಮಗೆ ಯಾರಿಗಾದರೂ ಗೊತ್ತೆ?

ಅಪ್ಪೂ: Father oldoo ಸಾರ್!...ಪೂರು...mother ಉ ಇಲ್ಲ...sister widow—Sixth form ನಲ್ಲಿ ಓದ್‌ತಿದ್ದ !...discontinue ಮಾಡ್ಬಿಟ್ಟ...circumstances ಊ!!

Chief Scout—**ತ್ಸು! ಎಷ್ಟ್ ದಿನಾಂತ ಈ circumstances ಊ circumstancesoo ಅಂಬೋ ದೆವ್ವ Stateಗೆ rob ಮಾಡ್ತಿರೋದು ಇಂಥಾ noble children's service ನ?** ಇವ್ನಿಗೇನ್ ನಷ್ಟ?...ಒಂದು khushy joboo...ಒಂದ್ ಬಂಗ್ಲೆ...one American car ಊ ! ಒಂದು pension to prevent chances of further workoo ! precious little lost !—**But the State can't afford to ignore him, and his name is legion**..(turning to S. M. and in Sad almost irritated indignation) ಕ್ಷಮಿಸಿ !...ನಿಮ್ಮ rank ಉ, designation ಉ !...ನೀವೇನು subaltern ಏ...major ಏ...ಕರ್ನಲ್ಲೇ ? ಲೆಫ್ಟಿನೆಂಟೇ...ಕ್ಯಾಪ್ಟನ್ನೇ ?

ಸ್ಕೌಟು ಮಾಸ್ಟರ್: (Standing at attention) ಸ್ಕೌಟು ಮಾಸ್ಟರು, ಮಹಾ ಸ್ವಾಮಿ !

Chief Scout—ಈ ಹುಡ್ಗ ಯಾರು, ಏನು...ಇವನ್ಗೆ educational facilities ಏನಾದ್ರೂ ಒದಗ್ಲೋದ್ ಹ್ಯಾಗೆ ? ಏನಾದರೂ ವಿಚಾರ ಮಾಡ್ತೀರಾ ?

ಸ್ಕೌಟು ಮಾಸ್ಟರ್: ಚಿತ್ತ ಮಹಾಸ್ವಾಮಿ...ಅವನ್ ಸೇರಿ ಇನ್ನೂ fortnight ಕೂಡ ಇಲ್ಲ. ಅದಕ್ಕೇ ಅವನ circumstances ಉ...ತಿಳ್ಕೊಳ್ಳೋಕೆ...

Chief Scout—ಏನ್ fortnight ಕೂಡ ಆಗಲಿಲ್ವೇ ಸೇರಿ ?

ಸ್ಕೌಟು ಮಾಸ್ಟರ್: ಹೌದು ಮಹಾಸ್ವಾಮಿ !

Chief Scout—Fortnight service ಕೂಡ ಇಲ್ದೆ "*Be prepared unto death to succour the distressed*" ಅಂಬೊ ನಂ Motto ನ ಇವತ್ತ್ ರಾತ್ರೆ uphold ಮಾಡಿದ ಹುಡ್ಗನ್ಗೆ (restlessly sighing)...Some mark of recognition ...(looking about himself up, his eyes suddenly gleam and rest upon his heavy wristlet watch;...snatching it off his wrist, he clasps it round the wrist of the still prone boy.—The series of movements is an impulsive but none the less deliberate noble gesture.—Rising up dignifiedly he steps back a pace or two)...Give him more air... Is he coming to ?

A Scout—ಹೌದ್ ಮಹಾಸ್ವಾಮಿ ! Breathing regular ಆಗ್ತಾ ಇದೆ! (dashes successive handfuls of cold water on Kitti, who slowly

opens his eyes and glares around at those who are rendering first aid.)

ಕಿಟ್ಟಿ: (Shaking them off roughly) ಯಾಕ್ರೋಲೋ...ಏನು ಯಾತಾ ನೇನ್ರೋ ನನ್ ಕೈಗ್ಳು ಹೀಗೆ ಹಲಾಯ್ರೋಕೆ?...ಯಾರಿದು...ಅಪ್ಪ...ಜಂಬದ್ಕೋಳಿ...ಎಲ್ಲಿಧೀನ್ರೋ ...?...(ಸುತ್ತಮುತ್ತಲೂ ನೋಡಿ) ಹೌದು ! ಬೆಂಕಿಬಿದ್ದ ಮನೆ...S.M. ಉ...ಲಡತ್ತ... (ಏಳುತ್ತಾ) ಮಗು...ಮಗು ... **ಮಗು**... ! ! ! ?... (ಅಪ್ಪುವಿಗೆ) ಅಪ್ಪು, ಲೇ ... ! ವಳ್ಗಿಧಾನೋ ಮಗು...ಗುಬ್ಬಚ್ಚಿ ... ಬೇಯ್ತಿಧಾನೋ ವಳ್ಗೆ...ಅವ್ರಮ್ಮ ಆದರ್ತಿರ್ತಾಳೆ ಮನೇಲಿ! (Struggles to get up)

ಅಪ್ಪೂ: (Forcing him down and dropping to his knees and tenderly nursing Kitti's brow and hair) ಇಲ್ಲ, ಕಿಟ್ಟೀ !...ಎತ್ಕೊಂಬಂದ್ಯಲ್ಲಾ ನೀನೇ...ಗುಬ್ಬಚ್ಚೀನ...ಜ್ಞಾಪಸ್ಕೋ...ಜ್ಞಾಪಸ್ಕೋ ! !

ಕಿಟ್ಟಿ: (Gently) ಅಪ್ಪು ಲೇ, ಯಾಕೋ ಸುಸ್ತು ಕಾಣೋ ನಾನು...ಘಿರ್ರಾಯಿಸ್ತಿಧೆ ನನ್ನೇಜ...ಎಲ್ಲೋ ಮಗು...ಮನೇಗ್ ಸೇರಿಸ್ಬೇಕೋ ನಾನು...ಕಾದಿರ್ತಾಳವರಮ್ಮ...ಅಪರಮ್ಮ ಸತ್ತ್. ನಮ್ಮಮ್ಮನ್ ಜಾತಿ ಕಾಣೋ ! (Shoots up to a sitting position and shooting his glances around) ಮಗು ಎಲ್ರೋ...ಲ್ರೋ !?

ಅಪ್ಪೂ: ಮನೇ ಸೇರ್ಬಿಟ್ಟ ಕಿಟ್ಟೀ !...

ರಾಘು: ಕಾರ್ನಲ್ಹೋದ...ಕಿಟ್ಟಿ !

ಕಿಟ್ಟಿ: ಕಾರ್ನಲ್ಲೋ ! (laughing in hysterical sardony) ಹ ! ಹ !! ಹ !!! ...ನಂ ಗುಬ್ಬಚ್ಚಿ ! (sarcastically) !...ಮರ್ತೆ...ದೊಡ್ಡಮನುಷ್ಯರ್ ಜಾತಿ...(his eyes suddenly catch the gleams of the gold wristlet and gleam in surprise, suspicion, and danger. And in tones, tearful, but full of fury) ಇದ್ ಹ್ಯಾಗ್ಬಂತ್ ನನ್ಕೈಲೀ ಈಗ...? (laughing hysterically)...ಥಕೋ, ಮೊದ್ಲೇ ಪೋಲಿ!...(darting glances around, and fixing on the Inspector) ಪೋಲೀಸ್ನೋರು ! (his eyes suddenly light on the prone owner of the burning house)...ನಿಮ್ದೇನ್ರಿ ಇದು ?...ಉರೀತಿದ್ದ್ ನಿಂ ಹಾಳ್ಮನೇಗೆ ನುಗ್ಗಿ...ಇದನ್ ಕೈಗ್ ಹಾಕ್ಕೊಳ್ಳೋಕೆ ಬಿಡ್ತಿತ್ತೇನ್ರಿ ?...(turns to S. M.) ನೀವಾದ್ರೂ ಹೇಳಿ ಸಾರ್ ಬರೋವಾಗೇನೂ ಇರ್ಲಿಲ್ಲ ಕೈಲಿ ಅಂತ ! (running his fingers through his hair with dazed look and voice) ನಿಮ್ಮನ್ನ ಇವರ್ ದಬಾಯಿಸ್ತಿದ್ದ್‌ದ್ದ್ ಯಾದು...ನಿಂ ಪಕ್ದಲ್ಲಿ ನಿಂತು ಕುಮ್ಮಕ್ ಕೊಡ್ತಾಲಡತ್ ಮಾಡ್ತಿದ್ದದ್ದ್ಯಾದು...ನೀವ್ ಕೂಗಿದ್ಯಾದು...ಗುಬ್ಬಚ್ಚೀನ್ ಬಚಾಯ್ಸೋಕ್ ನುಗ್ಗಿದ್ದ್ಯಾದು ! ಅಪ್ಪು ಎಬ್ಸಿದ್ ಯಾದು...ಈ ಗಲಾಟೇಲಿ ಇದನ್ ಲಪ್ಟಾಯ್ಸಿ ಕೈಗ್ ಲಗಾಯಿಸ್ಕೊಳ್ಳೋಕೆ ಎಲ್ಸಾರ್ ಬಿಡ್ತು ? (to himself as he unclasps the watch, agonised and sardonically) ಇದೊಂದೇ ಕಮ್ಮಿ ನಂ ಅಪ್ಪಿಗೆ ! ಮನೆಯೆಲ್ಲಾ ಹಾಳಾಗ್ಹೋಗಿ ಮಗ್ಳೂ ಕಳ್ತನ...?

Chief Scout—ಅಲ್ಲ ! ನಿಂದು ಮಗು...ಅದು ನಿಂದು !

ಕಿಟ್ಟಿ: ಮಗು...ನಾಸಲ್ಲ ಸಾರ್!...ಮಗು ಆ ದೊಡ್ಮನುಷ್ಯರ್ ಮಗ (sardonically) ...ಕಾರಲ್ಹೋದೋನು...ನಾನ್ಮಗು ಅಲ್ಲ...ನಾನು...ಪೋ...ಅಲ್ಲಾ...**ನಾನ್ ನಾನೇ.**

Chief Scout—ಗೊತ್ತೂ ಮಗು...ಅದ್‌ನಿಂದು...ನಾನೇ...ನಿನಗ್ ಕೊಟ್ಟಿದ್ದು.

ಕಿಟ್ಟಿ: (blazing in anger and suspicion, flinging the watch towards the Chief Scout along the floor, like boys play ducks and drakes with a Slab of Slate on water) ಯಾಕ್ಸಾರ್? ನೀವ್ಯಾಕ್‌ಸಾರ್ ನನಗೆ ಕೊಡ್ಬೇಕು watchನ?...ನಿಮ್ಗೇನಂಥಾ ದೋಸ್ತಿಸಾರ್...ನನ್ನೊಂದ್ಗೆ...?

ಅಪ್ಪೂ ಮುಂತಾದ ಸ್ಕೌಟುಗಳು: (ಮುಚ್ಚಿಕೊಂಡು) ಹುಚ್ಚೂ ಲೇ, ಹುಷಾರೋ, Chief Scout ಕಣೋ, ಬೆಪ್ಪ!

ಕಿಟ್ಟಿ: Chief Scout ಊ?

ಅಪ್ಪೂ: Highness ಕಣೋ!!

ಕಿಟ್ಟಿ: Highnessಊ...Rally!...ಡೆಲ್ಲಿ ದೂದ್‌ಫೇಡ...ಮೂಮರ್ೂರ್ಟಿನ್ನು... ಇವ್ರೇನೆ?

Scouts—(in hushed tones) ಹೌದು ಕಣೋ!

ಕಿಟ್ಟಿ: ಹಾಳಾಗ್ಹೋಯ್ತು! ಹಾಗಾರ್ಬ್ಚಾನೇನ್ನು next rally ಯಿಂದ!ತ್ಸು!ತ್ಸು...ತ್ಸು!ತ್ಸು... ಅಲ್ಲ ನನ್ನ ಕಿಸ್ಮತ್ ನೋಡ್ರೋ ಮುಚ್ಕೊಳ್ರೋ ನನ್ನ...ಅಪ್ಪುಲೇ ನೀನಾದ್ರೂ S. M. ಗೆ ಹೇಳಿ Highnessಗ್ಳ—Chief Scout ಗ್ಳ ಸೂರತ್ತಿನ ವಾಕೀಫ್ ಇಲ್ದೆ...ವಾಚ್ನ ಭಿರ್ಕಾಯಿಸ್ದ ಬೇವಕೂಫು..."ಇನ್ನೂ Boy Scout ಬಾಬತ್ನಲ್ಲಿ ಬಚ್ಚ ಅವನ್ಗೆ ಈ ಬಾಬತ್ನಲ್ಲಿ...ತಜ್ರೂಬ್ ಇಲ್ಲ...Rally ಹೊತ್ಗೆ ಥೇಟಾಗಿ ತಮ್ಕೈಲಿದ್ದ ವಾಚ್ನೂನೂ ಕಸ್ಕೊಳ್ಳೋ ಅಷ್ಟು ತಯಾರಿ ಕೊಡ್ತೇನೇ"ಂತ ಷಿಫಾರಸ್ಸು ಮಾಡ್ಸೋ;! ಈಗ ಹಿಂದ್ಹೇಟ್ ಹೊಡದ್ಯೋ (ಮುಷ್ಟಿಗಳನ್ನು ಬಿಗಿದು) ನಂ ಕಲೀಫ್ರಿಗೆ ಕುಮ್ಮಕ್ಕ್ ಕೊಟ್ಟದ್ಯಾದ್ಮಾಡ್ಕೊ!

[Scout ಗಳು ಕಿಟ್ಟಿಯನ್ನು ಎಬ್ಬಿಸಿ ನಿಲ್ಲಿಸುವರು]

Chief Scout—ಮಗೂ ಇಲ್ಬಾ...ನಿನ್ನ ಹೆಸ್ರೇನು?

ಕಿಟ್ಟಿ: (ತಡವರಿಸುತ್ತಾ ಮುಂದೆ ಬಂದು, ಅಧೋದೃಷ್ಟಿಯಿಂದ) ಪೋ...ಅಲ್ಲಾ...ಕಿಟ್ ಅಲ್ಲಾ...

ಸ್ಕೌಟ್ ಮಾಸ್ಟರ್: ಕೃಷ್ಣಾವ್!...ಇಲ್ಬಾ ಕೃಷ್ಣಾವ್!

[ಕಿಟ್ಟಿಯು ಮೊದಲು ಕೈಮುಗಿದು, ಮತ್ತೂ ಮುಗಿಯಲು ಜೋಡಿಸಿದ ಎರಡು ಹಸ್ತ ಗಳಿಂದಲೂ ಸಲಾಮನ್ನು ಮಾಡಲುದ್ಯುಕ್ತಿಸಿ...ಹೇಸಿ ಹಸ್ತಗಳನ್ನು ಹಿಸುಕುತ್ತಾ ತಡವರಿಸಿ ಮೆಟ್ಟಿ ಯುವರಾಜರನ್ನು ಸವಿಾಪಿಸುವನು.]

Chief Scout—ನಮ್ಮ brother-hood ಗೆ ನೀನು ಸೇರಿ ಹದ್ನೈದ್ ದಿವ್ಸಗ್ಳು ಕೂಡ ಆಗಿಲ್ಲವೆಂದು ನಿಮ್ಮ S. M. ತಿಳಿಸ್ತಾರೆ.

ಕಿಟ್ಟಿ: (ಕೈಮುಗಿಯುತ್ತಾ) ಹೌದು ... ಸಾರ್ ... ಹೈನೆಸ್‌ಗೈ ...ಶುಕ್ರ...S. M. ಗು, ಹೇಳೋದ್ ಸತ್ಯ (ಕಣ್ಣುಗಳನ್ನು ಇಳಿಸಿ ಎಡಗೈಯಿಂದ ಬಲಗೈನ ಬೆರಳುಗಳನ್ನು ಮಡಿಸಿ ಎಣಿಸುತ್ತಾ ನಾನ್ ದಾಖ್ಲಾದ್ದು ಶನಿವಾರ...ಇವತ್ತುಶನಿವಾರ...ಶನಿಯಿಂದಶನಿಗೆ ಹದ್ನೈದು...ದಿವ್ಸ...answer correct ಉ...ಅಲ್ಲ...ನಿಜ...ನನ್ನ ಸರ್ವಿಸ್ಸು...ಸ್ಕೌಟ್ ಪಟಾಲಂನಲ್ಲಿ...(ಅರ್ಧಾತ್ಮಗತಂ) ಇದೇನ್ ಸರ್ವಿಸ್ಸಿನ್ ಲೆಖ್ಖಾಚಾರ ಈಗ? ಟಿನ್ನುಗ್ಳಿಗೆ...ಅಲ್ಲ rallyಗೆ ಸರ್ವಿಸ್ಸಿನ್ ಲೆಖ್ಖಾ ಇಲ್ಲಾಂದ್ನಲ್ಲಾ ಅಪ್ಪು?...(ಆತ್ಮಗತಂ) ಅದ್ಯಾಕೋ ಈಗಾವಮಾತು?

Chief Scout—Scout-brother-hood ಲ್ಲಿ ಇಷ್ಟು short time ಇದ್ದಿದ್ರೂನೂ, ಸ್ಕೌಟ್‌ಗ್ಳ purpose...ಅನ್ಯೋಪ್ಕಾರಾಂಬೋದ್ನ ತಿಳ್ಕೊಂಡು ನಿನ್ನ ಪ್ರಾಣಭಯಾನೂ ಬಿಟ್ಟು,

ಬೆಂಕೀಂತಾನೂ ಬೆದರ್ದೆ ಸೀಸೀರಾತ್ರೆ ನಮ್ಮೆಲ್ರ ಎದುರಿಗ್ ತೋರ್ಸ್ಸಿದ ಅದ್ಭುತ ಧೈರ್ಯಸ್ಥೈರ್ಯಗಳಿಗೆ, scout brother hood ಪರ್ವಾಗಿ ನಾನ್ ಸಂತೋಷಪಡ್ತೇನೆ.

ಕಿಟ್ಟಿ: (ಮಹಾಸ್ವಾಮಿಗ್ಳು ಮೇಲಿನಂತೆ ಹೇಳುತ್ತಿರಲು ಕೈಮುಗಿದುಕೊಂಡು, ಸ್ಕೌಟುಗಳೂ, ಪೋಲೀಸ್ ಹುದ್ದೇದಾರರೂ, ತುಂಬಿತುಳುಕುವ ಜನಕೂಟವೂ, ಉಸಿರು ಹಿಡಿದು ಸ್ಪಷ್ಟವಾಗಿ ಕೇಳುತ್ತಿದ್ದ, ನಿಶ್ಶಬ್ದ ಸನ್ನಿವೇಶಾವೇಶದಲ್ಲಿ ಬಿದ್ದು...ಅರ್ಧಾತ್ಮಗತಂ) ಪಡೀಸಾರ್...ಅಲ್ಲ ಪ್ರೆಸೆನ್ಸ್ನಗೆ... ಪಡೀ...ಪಡೀ...

Chief Scout—ಈ ನಮ್ಮ ಸಂತೋಷವನ್ನು ಇನ್ನು ಮುಂದಕ್ಕೆ ನಿನ್ನ ಉದಾರ ಕರ್ಮದಲ್ಲಿ ನಮ್ಮ scout brother hoodನ "ಪರೋಪಕಾರಾಯ ಇದಂ ಶರೀರಂ" ಎಂಬ ನಿಮಿತ್ತವನ್ನು ಪ್ರದರ್ಶಿಸಿ ನಮ್ಮ ವಿಶ್ವಸಂಘಕ್ಕೆ ಗಣ್ಯತೆಯನ್ನು ತರುವೆ ಎಂಬ ಭರವಸೆಯನ್ನು ನಮಗೆ ಪ್ರದರ್ಶಿಸಿ, ನಿನಗೂ ಮುಂದಕ್ಕೆ ಜ್ಞಾಪಿಸುವ ಹಾಗೆ. ಕೊಡುವ, ಈ (putting out his watch) ಪಾರಿತೋಷಕವು ನಿನ್ನ ಕೈಯಲ್ಲಿಯೆ ಯಾವಾಗಲೂ ಇರಲಿ.

ಕಿಟ್ಟಿ: (ಗೊಣಗುಟ್ಟುತ್ತಾ) ಇರ್ಲಿ...ಮಹಾಸ್ವಾಮಿ...ಇರ್ಲಿ ! (ಗೊಣಗುಟ್ಟುತ್ತಾ, ಬೆದರಿ, ಅಪರಾಧಿಯು ನಾಚಿ ನಿಲ್ಲುವಂತೆ, ತಲೆಬಾಗಿ ನಿಲ್ಲುವನು)

[Sound of a car stopping is heard within]

Chief Scout—Scout master ! It is late in the night ; please see to it that the boy is really all right and gets home to his anxious parents.

[The Gentleman in attendance reverentially approaches the Chief Scout and whispers.]

Chief Scout—ಕಾರ್ ಬಂತೆ ?...ಆ little boy ಇ ?(putting his ear out) That's good ! Inspector !

Inspector—Fire ಆರ್ಸಿದ್ದಾಯ್ತು ಮಹಾಸ್ವಾಮಿ ! ಹಿಂದ್ಗಡೇಯಿಂದ!...detailsಊ ಬೆಳಗ್ಗೆ ಸರಿಮಾಡ್ಬಿಡ್ತೇನೆ.

Chief Scout—ಹೌದು ಈ family...?

Inspector—ರಾತ್ರೆ ಇಲ್ಲೇ ಮನೇ ಮುಂದ್ರ್ಗಿ ಕೋಣೇಲಿ ತಂಗಬಹುದು comfortable ಆಗಿ...ಮಿಕ್ಕ ವಿಷ್ಯಗಳ್ನೆಲ್ಲಾ ನಾನೇ ಬೆಳಿಗ್ಗೆ attend ಮಾಡ್ತೇನೆ ಮಹಾಸ್ವಾಮಿ ! [ರಂಗಸ್ಥಳದ ಮತ್ತೊಂದು ಸ್ಥಳದಲ್ಲಿ ಸ್ಕೌಟುಮಾಸ್ಟರು ಮತ್ತು ಸ್ಕೌಟುಗಳು ಸೇರಿರುವರು]

ಸ್ಕೌಟು ಮಾಸ್ಟರ್: Boys ! ಕಿಟ್ಟಿ ಮುಖಾ ಮೈಬಟ್ಟೆಗಳ್ನ ಸರಿಮಾಡಿ.

ಕಿಟ್ಟಿ: (half indignantly) ಯಾಕ್ಸಾರ್ ?...ನನ್ಮೂತೀಗೇನ್ಕಮ್ಮಿ ಸಾರ್...ಕ್ಷಮ್ಸಿ ಸಾರ್...

ಅಪ್ಪೂ: ಕಮ್ಮಿ ಅಲ್ಲ ಕಾಣೋ, ಜಾಸ್ತಿ...ಹುಬ್ಬಿಂದ ಗಲ್ಲದವರ್ಗೂ ಒಂದೇ ಮಸಿ ಕಾಣ್ಸೋ ...ಬರ್ರ್ರೋ ಲೋ ! ಎಳ್ಕೊಂಡ್ಹೋಗೋಣ...ಕೊಳಾಯಿನ್ಹತ್ರ...[The Scouts partly lead, partly drag and partly carry, exiting]

Chief Scout—(advancing L to owner of the house) ಬಿಡ್ಲೀಡಿ... ಪರ್ವಾಯಿಲ್ಲ. ಮೈಗಸ್ವಸ್ಥ ; ಮನೆ ಬೆಂಕಿ ಎಲ್ಲಾ ಆರಿಸಾಯ್ತು...ರಾತ್ರೆ ನಿಮ್ಮ ಮನೇಲೆ ತಂಗ್ಬಹುದು, ಇನ್ನು ಮುಂದಿನ ಅನಾನುಕೂಲಾನಾ ನಾಳೆ Inspector ಇತ್ಯಾದಿ ನಿವಾರಿಸ್ತಾರೆ...ಆದ್ರೆ ಮಂದ್ಯಾತು;

ದುಡ್ನ ನೀವೂ ಉಪ್ಯೋಗಿಸ್ದೆ. ಮನೇಗ್‌ಬಿದ್ದ ಬೆಂಕೀ ಪಾಲೋ ಕಳ್ಳ್ರಪಾಲೋ ಆಗೋಕೆ ಹೀಗೆ ಆಸ್ಪದ ಕೊಡೋದು ಶುದ್ಧ ಹುಚ್ಚು. ನಮ್ದೇಶದಲ್ಲಿ ದುಡ್ಡು, ಸಂಪಾದ್ಸಿದ್ದುಡ್ನ, ಬ್ಯಾಂಕ್ನಲ್ಲಿ ಹಾಕಿದ್ರೆ ನಿಮ್ಮ್ದು ದುಡ್ಡು, ಬೆಂಕೀ, ಕಳ್ಳ್ರ ಭಯವಿಲ್ದೆ, ಭದ್ರವಾಗಿದ್ದು, ಬಿತ್ತಿದ್ಬೀಜ, ಗಿಡವಾಗಿ ಫಲಿಸೋ ಹಾಗೆ, ಬಡ್ಡೀ ಸಮೇತ ವರ್ಧಿಸೋದೂ ಅಲ್ದೆ ದೇಶೋಪ್ಯೋಗಕ್ಕೆ ನಿಮ್ಮ ದುಡ್ನ ಬ್ಯಾಂಕೋ್ರು ಉಪ್ಯೋಗಿಸಬಹುದಾದ ಉಪ್ಕಾರಾನಾ ನೀವು ಮಾಡಿದ್ಹಾಗೂ ಆಗುತ್ತೆ. ಆದ್ದ್ರಿಂದ ಈ ಮುಪ್ಪಿನಲ್ಲಿ ನಿಮಗ್ ಮುಂದಕ್ಕೆ ವದಗ್ಬೇಕಾದ್ದುಡ್ನ ನೋಟ್ನೋಟಾಗಿ ಇಟ್ಕೊಂಡಿರೋದು ಅನುಚಿತ. ಈಗ್ಲೇ ಎಣ್ಸಿ Inspector ಕೈಲೊಪ್ಸಿ, ನಾಳೆ ಬ್ಯಾಂಕ್ನಲ್ಹಾಕೋದು ನಿಮ್ದುಡ್ಗೂ, ನಿಮ್ಮನೇಗೂ, ನಿಮ್ಗೂ ಭದ್ರ...ಸಮಾಜಕ್ಕೂ ಅನ್ಕೂಲ.

(significantly sweeping his eyes a round)

Officer ! take charge of the money and arrange at a Co-operative Bank agent, to convince this couple, typical of thousands like these, of the criminal folly of keeping loose money in the house, to its own danger and to the loss of the State... You understand ! ?

Inspector—(at attention, saluting) Yes, sir !

[The scouts lead in Kitti with washed face and dripping hair]

Chief scout—(putting his hand out to the Inspector) Good night, officer, I congratulate your men on their calm execution of their duties! (officer salutes. The Prince acknowledges, wheels round to S. M. and putting his hand out) Good night ! Scout master ! I congratulate you. You and your boys have acquitted yourselves through this trial in a manner befitting the ideals of the Brotherhood that I am proud to belong to and be chief of ! (shakes hands with S. M.)...where is that boy...“ಕಿಟ್ಟಿ”...I think, his name is...?

ಸ್ಕಾಟು ಮಾಸ್ಟರ್: Krishna Rao, sir !...Krishna Rao ! forward...!!

[Kitti is pressed forward by his brother-scouts]

Chief Scout—(Shaking hands with Kitti) I am glad to see that you are none the worse for your heroic hazarding of your life for a fellow scout and I hope your conduct to night will prove an example to the rest of us all in the Brother-hood of scouts, in which I sincerely hope, you will grow to live and serve in your youth prime and age, as brilliantly as you have started in your cub-hood ! (turning to S. M.) ಈ ಮಗುವಿನ್ಮನೇಗೆ ನೀವ್ಹೋಗಿ ಅವರ ತಂದೆಗೆ explain ಮಾಡ್ಬಿಟ್ಟು...ಇವನ ಮುಂದಿನ education ವಿಷ್ಯದಲ್ಲಿ ಈ boys ಹೇಳಿದ “circumstancessoo” ಅಂಬೋ obstacle ನ surmount ಮಾಡ್ಬೇಕಾದ details ನ ನಾಳೆ report ಮಾಡಿ ! Goodnight, every body... !!

[ಹೊರಡಲುಪಕ್ರಮಿಸುವರು.]

ಸ್ಕೌಟು ಮಾಸ್ಟರ್ : (haranguing at attention) Scouts of the Bangalore City "N"th brigade! 'SHUN!' Salute (The patrol salutes) **The Anthem !!**

['ಕಾಯೌ ಶ್ರೀ ಗೌರೀ' is sung]

[The Chief Scout stands at salute]

ಸ್ಕೌಟು ಮಾಸ್ಟರ್: Scouts! Stand at ease...stand easy!...(The scouts do accordingly.) Three cheers to his Highness the Chief Scout and the Royal House!...

Hip...Hip...Hip...Hurray!
(The scouts join in)
Hip...Hip...Hip...Hurray!
Hip...Hip...Hip...Hurray!

[To the sound of the cheers, the Chief Scout exits followed at a respectable distance by the Scout master, the Inspector. the scouts, the policemen and the crowd : Kitti with the couple is left behind.]

ಈಕೆ : (ತೊಟ್ಟಿಲನ್ನಾಡಿಸುತ್ತಾ) ನೀವಿಷ್ಟ್ ದಿನ ಹೇಳ್ತಾಲೇ ಇದ್ರಲ್ಲಾ... "ನಮಗ್ಯಾವೇ... ನಮಗ್ಯಾವೇ...ನಮ್ಕಷ್ಟಕಾಲಕ್ಕೆ ಯಾರೂ ವದಗೋದಿಲ್ಲಾ"ಂತ !...ಇವತ್ನೋಡಿ. ಮನೇಗೆ ಬೆಂಕೀನೂ ಬಿದ್ದು ನೀವೂ ಕದಲೋಕಾಗ್ದೆ ಬಿದ್ಕೊಂಡು. ಕೂಸೂ ನಾನೂ "ದೇವ್ರೇ ಕಾಪಾಡ್ಬೇಕೂ"ಂತ ಕಂಗೆಡ್ತಿದ್ದಾಗ, ಆ ಮಗು–ಆ ಮಗು ನಮಗ್ಯಾರು ? ನಾವು ಅವನಿಗ್ಯಾರು...ದೊಡ್ಮನುಷ್ರ ಮಗ್ನಂತೆ ...ಕುಂಟ್ತಿದ್ರೂನೂವೆ...ಬೆಂಕೀಗ್ ಬೆದರ್ದೆ ನಮ್ಮನ್ನೆಲ್ಲಾ ಹೊರಕ್ಕ್ ತಂದು ನಂದುಡ್ಡಿನ್ಪೆಟ್ಗೆ ತರೋಕೇಂತ ವಳಕ್ಕ್ ನುಗ್ಗಿದ್ನಲ್ಲಾ...ಆಮೇಲೆ ಅಷ್ಟೊಂದು ಜನ ಮುತ್ಕೊಂಡ್ ಪೇಚಾಡ್ತಿದ್ರಲ್ಲಾ...ಈ ಇನ್ನೊಬ್ಬ ಹುಡ್ಗ ಎಲ್ಲಿಂದ್ಲೋ ಬಂದು, ಆ ಮಗೂನೆದರ್ನೋಡ್ತಾ ಕಾದಿರೋ ಹೆತ್ತ್ ತಾಯಿ ಹಂಬಲಾನ ತೀರ್ಸೋಕೆ, ಹೊಗೇಗೂ ಬೆಂಕೀಗೂ ಹೆದರ್ದೆ ತನ್ನ ತಡ್ದೋರ್ನ ತಳ್ಬಿಟ್ಟು ಒಳಗ್ನುಗ್ಗಿ, ಆ ಹುಡ್ಗನ್ನೂ, ನಂ ದುಡ್ಡಿನ್ ಪೆಟ್ಗೇನೂ, ಹೊರಗ್ ತಂದ್ಬಾಕ್ದ. ಈ ಹುಡಗನ್ಗೆ ಆ ಹುಡುಗನೂ, ಆ ಮಗೂನ ಹೆತ್ತ ದೊಡ್ಡ್ಮನುಷ್ರೂ, ಯಾರು ?...ಇನ್ನಮ್ಮ ಮುಂದಿನ ಕ್ಷೇಮಕ್ಕ್ ಅಭ್ಯ ಕೊಟ್ಟು, ನಮ್ಮುಂದಿನನುಕೂಲಕ್ಕೆ ಏರ್ಪಾಡ್ಮಾಡಿ ಹೋದಯುವ್ರಾಜ್ರೆಲ್ಲಿ!??...ಏನೋ **ನಂ ನಂ ಸೌಕರ್ಯ ಗಳಲ್ಲಿ, ನಮಗ್ಯಾವೇಂತ ತಿಳ್ಕೊಂಡಿರ್ತೇವೆ ಹೊರ್ತು, ನಮ್ಕಷ್ಟಕಾಲಕ್ಕೆ ದೇವ್ರುಗಾನ ದಯವಿಟ್ರೆ ಎಲ್ಲಿಂದಾನ್ದ್ರೂ ಬರ್ತಾರೆ, ಸಹಾಯಕ್ಕೇಂತ!**–(to Kitti) ಪ್ಪ್ ಜಾಸ್ತಿ ಸುಟ್ಟಿಧ್ಯೇ ಮಗು ? ಹತ್ರಾ ಬಾ,...ಹತ್ರಾ ಬಾಪ್ಪಾ !...ಹೊತ್ತಾಯ್ತು : ಬೇಕಾದ್ರೆ ನಮ್ಮನೇಲೇ ಮಲಕ್ಕೋಪ್ಪಾ.

ಕಿಟ್ಟಿ: ಕ್ಷಮ್ಸ್ಯಮ್ಮ, ನಿಮ್ಮ ಜಾನ್ ಬಚಾಯ್ಸಿದ್ ನಾನಲ್ಲ. ಮೊದ್ಲು ಹೋದ ಹುಡ್ಗನ್ನೆತ್ಕೊಂಡ್ ಬಂದದ್ದ್ ನಾನು...ಅನ್ನೇ ಎತ್ಕೊಂಡ್ಬಂದದ್ದು ನಿಂ ಅzಬಾಬ್ನ...ಅವ್ನ ಅದನ್ನ ತಬ್ಕೊಂಡಿದ್ದ್ರೊತ್ಗೆ ಹೊರಗ್ಬಂತು ನಿಂದುಡ್ಡಿನ್ಪೆಟ್ಗೆ...ನಾನಲ್ಲ ಅದನ್ ತಂದದ್ದು...ನಿಮ್ಮ ಜಮಾನ್ನ ಹೇಳಿದ್ದ್ನಲ್ರಿ...ಯಾರಿಗ್ಯಾರೂ ಇಲ್ಲ. ನಿಮಗ್ಯಾನೂ ಇಲ್ಲ ನನಗ್ನೀವೂ ಇಲ್ಲ...ಈ ಜರ್ಕಿನ್ ಇರ್ಲೀ ! ...ಹಿಮ ಬೀಳ್ತಿಧೆ. ಎಳೀ ಕೂಸೂ. ಚಳೀ. ಕ್ಷಮ್ಸಿ ಏಳಿ...(taking up the cradle with

the baby in it) ಬನ್ನೀಮ್ಮಾ, ಇದನ್ನೆಲ್ಲ್ ಕುಕ್ಕೋದು ?... ಇಲ್ಲ... ಹಗ್ಗ ಕಟ್ಟಿ ಪಲಾಯ್ನೋ ಬಾಜ್ಲೋ ?...(looking into the cradle...in admiring Face and voice) ಒಳ್ಳೇ ರುಸ್ತುಂ ಕಾಣಮ್ಮಾ ನಿಂ ಹುಡ್ಗ ? ಅಲ್ಲಾ ಯೋಗೀಂತಾರಲ್ಲಾ ! ಆ ಬಾಬ್ತು !...ನಿಮ್ಮನೇಗ್ ಬೆಂಕೀಬಿದ್ದು, ಬೆಂಗ್ಳೂರ್ ಬೆಂಗ್ಳೂರೇ ಬಂದಿತ್ತು ಬಾಣ ಬಿರ್ಸು ನೋಡೋಕೆ...ಯುವ್ರಾಜ್ರಿಂದ್ ಹಿಡ್ದು. ಯಾರೂ ಬಿಡ್ಲೆ...ಇಲ್ಲಾದ್ಗಲಾಟೇ ಏನು ? ಕರ್ಲಾಟ ಏನೂ ? ಇವೆಲ್ಲಕ್ಕೂ ಭೋಂಡಾ ಆಗಿ, **ದುನ್ಯ ದುನ್ಯಾನೆ ಘನಾ ಆಗ್ತಿರೋವಾಗ, ಹೆಬ್ಬೆಟ್ಟು ಕಚ್ಕೊಂಡು, ಹಾಯಾಗ್ತೇಲ್ತಿರೋ ಆಲ್ದೆಲೆ ಕಿಟ್ಟೀ ಹಾಗೆ, ಒಳ್ಳೆಸ್ವಯಂಭೂವಮ್ಮಾ .. ನಿಮ್ಹುಡ್ಗ!**... ನಮ್ಮಕ್ಕನಿಗೊಬ್ಬ ಮಗಾ ಇಧಾನಮ್ಮಾ... ಇವ್ನಷ್ಟೇ ಅವ್ನೂವೆ—ನಾಳೆ ಬೇಕಾರೆತ್ತಿಕೊಂಡ್ಬರ್ತೀನೆ...ಸವ್ಜೋಡಿ...ಕುಪ್ತೀಗ್ಬಿಡ್ತೇನೆ ನೋಡೀ ಅವನ್ನೂರತ್ನ ! (exit through house-door followed by the lady and re-enters alone and helps the old man to rise) ಬನ್ನಿಸಾರ್, ಏಳಿ. ಬೆಂಕೀಗೆ ಬೆದರ್ಕೊಂಡು ಹೊರಗ್ಬಂದದ್ದಾಯ್ತು... ಈಗ್ಹೊರಗೆ ಛಳಿ...ಒಳಗ್ಬನ್ನಿ! ಪ್ರಪಂಚಾನೇ ಹೀಗೆ, ಅಲ್ವೇ ? ನಿನ್ನೆ ಮಳೆ...ಇವತ್ತು ಬೆಂಕಿ...ನಾಳೆ ಗಾಳಿ !...

ಮನೆಯಾತ: ಅಪ್ಪಾ...ನಿನ್ನದ್ತೆ, ನಿನ್ನಾಷೆ, ನಿನ್ನಾತು, ಒಂದಕ್ಕೊಂದು ಹೊಂದೋದೇ ಇಲ್ಲ. ಧೀರನ್ಹಾಗೆ ಬೆಂಕೀಗ್ ನುಗ್ತೀಯಾ ! ಹೆಂಗಸಿನ್ಹಾಗೆ ಮಗೂನ ಲಾಲಿಸ್ತೀಯಾ ; ತುರ್ಕಿ, ಸಂಸ್ಕೃತ, ಕನ್ನಡ ಇಂಗ್ಲೀಷು ಕಲಸ್ಮೇಲೋಗ್ರ ಮಾಡಿ ಮಾತಾಡ್ತೀಯಾ ! ಎಷ್ಟು ಯೋಚ್ಸಿದ್ರೂನೂವೆ ಬಿಡಿಸ್ಲಾಗ್ದ ಒಗ್ಟೆ ಹಾಗಿದ್ದೀಯಲ್ಲಪ್ಪಾ ನೀನು ?

ಕಿಟ್ಟ: (tenderly leading him through the door) ನಿಮಗೇನೂ ?... ಎಂಥೆಂಥಾ ಶುಕ್ರಾಚಾರ್ರುಗ್ಳಿಗೇನೇ ಬಿಡಿಸ್ಲಾಗ್ದ ಒಗ್ಟೇ ನಾನೂ !...ಬನ್ನಿ ಒಳಕ್ಕೆ [Exit with the old man, with the cash box under his arm]

[Enter—L. Appu, Raghu and the rest of the patrol]

ಅಪ್ಪೂ: ಆ ಗುಬ್ಬಚ್ಚೀ ಹೇಳಿದ್ದೊಂದೊಂದೂ ಚಾಲ್ತೀಗೆ ಬರ್ತಿಧೆ ಕಣೋ...ಜ್ಞಾಪಕ್ವಿಧ್ಯೇ ...ನನ್ಸ್ವಪಡಾಯ್ಸ್ಲಿ, ನನ್ಜೋಬ್ನಿಂದ ಕಾರದವ್ನಕ್ಕೀ ಛಿನಾಯಿಸ್ಕೊಂಡ್ನಲ್ಲಾ...

ರಾಘು: ಅದೇನೋ ಛಿನಾಯ್ಸೋದು ?

ಅಪ್ಪೂ: ಕಸುಕೊಳ್ಳೋದು ಕಣೋ !

ರಾಘು: Good wordsಓ...ಇನ್ಮೇಲ್ಕಲೀಬೇಕ್ಕಾಣ್ರೋ, ಕಿಟ್ಟಿ languageಉ!...ಹುಂ ಅದೇನ್ ಹೇಳ್ತಿದ್ದದ್ ನೀನು ?

ಅಪ್ಪೂ : ಏನೇನೋ ?...ಗುಬ್ಬಚ್ಚಿ ಹೇಳಿದ್ದು...ಜ್ಞಾಪಕ್ವಿಲ್ವೇ? ಆ ದಿನ...ನಿನ್ನ "ಮುಗ್ಠ್ಯ" ಅಂದ್ನಲ್ಲಾ ಅವತ್ತು...ಕೋಪಿಸ್ಕೋ ಬೇಡ ರಾಘೂ !...ಗುಬ್ಬಚ್ಚಿ ಹೇಳಿದಾ ನೋಡು " ಕಿಟ್ಟೀನ್ ಸೇರಿಸ್ಕೊಂಡ್ರೆ wrestlingಉ runningಉ swimmingಉ ಒಂದೊಂದ್ರಲ್ಲೂ cupಉ championshieldಉ ನಂ ಪೆಟ್ರೋಲೇ ಲಪ್ಟಾಯಿಸ್ಬಹ್ದೂ "ಂತ. ಅದೊಂದೊಂದೂ ಜಾರೀ ಗ್ಬರ್ತಾ ಇಧೆ ಕಣೋ ! mile raceನಲ್ಲಿ ಜಿಂಕೆ. jumpingನಲ್ಲೇಗೆ ; cupಉ ನಮ್ದು ! swimming ನಲ್ಲಿ ಒಳ್ಳೇಬಾತೂ, ಆ cupಉ ನಮ್ದೇ ! ಇನ್ನು wrestlingನಲ್ಲೋ, ಸಿಂಹ !!

ಶಾಮಿ: ಸಿಂಹ ?...ಲೋ ! ಥೇಟ್ ಖಾಸ್ ಬಂಗ್ಲೇನೋ ಕಿಟ್ಟಿ.

ಅಪ್ಪೂ : ಹೂಂ...ಅವನ್ನ wrestlingನಲ್ಲಿ ಗಿರಾಯ್ಸೋ ಗಾಮು ಇನ್ನೂ ಹುಟ್ಟಿಲ್ಲ... ನಮ್ಮ...brigadeನಲ್ಲಿ ; ಆ cupಊ ನಮ್ದೇ. ಪಟ್ಣದಲ್ಲಿ sports shieldಊ ನಮ್ದು ಖಾತ್ರಿ! (suddenly raising his voice triumphantly) ಆಯ್ತೋ !! ಕೇಳ್ರೋ...ಲ್ರೋ,

ಕಿಟ್ಟೀ ಹೇಳೋ ಹಾಗೆ, ಕೇಕ್ಸಿಗಳ್ರಾ! ಯುವ್ರಾಜ್ರು. ಕೊನೇಗೆ ಹೋಗೋವಾಗ ಹೇಳಿದ್ದು... ಕೇಳಿದ್ರೇನೋ ?...ವಳ್ಳಿ leader ಓ ನೀನು !!

ರಾಘು : ಅದೇನೋ ಹೇಳ್ತಿದ್ರೋ... ಇಂಗ್ಲೀಷಿನಲ್ಲಿ ! S. M ಊ, ಎಲ್ಲ್ರೂ ಮಾತ್ಕೊಂಡಿದ್ರೋ.

ಅಪ್ಪೂ : ನಮ್ಮ ಪೆಟ್ರೋಲ್ಗೇ, ಶುಕ್ರದೆಶೆ ಕಣ್ರೋ, ಶುಕ್ರ ದೆಶೇ Highness ಗ್ಳ್ ನಮ್ fa ವರ್ಗಾಯ್ಸಿ ಕಲ್ಸಾನ್ಸೋಬಿಟ್ಟು, award ಮಾಡಿಧಾರೆ ಕಣ್ರೋ! brigade. brigade ಏ ಬೆಚ್ಚೀಳತ್ಕೋಡ್ರೋ ಬೆಳಕ್ ಹರೀಲಿ !

ಶಾಮಿ : (ಥಟ್ಟನೆ ಎಚ್ಚರಿಸುವ ಧ್ವನಿಯಿಂದ) S.M. ರೋ!...S S S H H H H ! ! ! ! S.M. ರೋ !

(Enter S. M.)

ಸ್ಕೌಟು ಮಾಸ್ಟರ್ : I congratulate you Raghavendra Rao! (shakes hands with Raghu)...Troop ನಲ್ಲೆಲ್ಲಾ most coveted honour. ನಿನ್ನ patrolಗೇ...ನನ್ನ ದಬ್ಕೊಂಡ್ಹೋಗೋಕೆ ಪ್ರಯತ್ನ ಪಟ್ಟಿದ್ದು foolishoo ಆದಿರ್ಲಿ ನಿಮ್ಮೆಲ್ರ heroic behaviour ನ ಗಮನ್ಸಿ "life saving shield" ನ ನಿನ್ನ patrolಗೇ award ಮಾಡಿದ್ದಾರೆ Chief Scoutಉ !

ರಾಘು : (ದೃಷ್ಟಿಯಿಂದ patrolನ ಬೀಸಿ, ಅಪ್ಪುವನ್ನು ದುರುಗುಟ್ಟಿ ನೋಡಿ S. M. ಕಡೆ ತಿರುಗಿ) ನನ್ನ patrol ಏನ್ ಸಾರ್...ಗುಬ್ಬಚ್ಚಿ...ಅಲ್ಲ, ಮಗು ಇಲ್ದಿದ್ರೆ. ಮನೆಯುವ್ರ ಘಡ್ಡ. ಇನ್ನು ಕಿಟ್ಟಿ ಇಲ್ದಿದ್ರೆ ಮಗೂ ಘಡ್ಚ... ಅವ್ರಿಗೆ ಸಾರ್...shieldoo !

ಅಪ್ಪೂ : (anxiously) ಹೌದೂ ! ಮಗೂಗೆ ಹ್ಯಾಗಿದೆಸಾರ್ ? ಪರ್ವಾ ಇಲ್ವೇ ?

ಸ್ಕೌಟು ಮಾಸ್ಟರ್ : ಅವರನ್ನೂ ಮರೀಲಿಲ್ಲ Chief Scoutಗ್ಳು. ಇಬ್ಬರಿಗೂ "Life saving badgesಉ"...ರಂಗಣ್ಣೀಗೆ–ಮಗೂಂತಿರೋ ನೀವು! ?–danger ಏನೂ ಇಲ್ಲ. ಆದ್ರೆ ವಂದ್‌ತಿಂಗ್ಳು ಕದ್ಲೋ ಹಾಗಿಲ್ಲ ಮನೆಯಿಂದ...ಕಾಲ್ ಸುಟ್ಟಿಧೆ...ಇವ್ನೆಲ್ಹೋದ ಕಿಟ್ಟೀ ?... I mean young Krishna Rao ? ಮನೇಗ್ ಹೋಗ್ಬಿಟ್ನೇನೂ ? ನಾನ್ಹೋದ್ಲು ಹೋಗಿ explain ಮಾಡ್ಬೇಕೂಂತಿದ್ದೆ, ಅವರ fatherಗೆ...Chief Scout ಹೇಳಿದ್ದಾಗೆ...ಹೊರ್ಟೋಗ್ಬಿಟ್ನೇ ?

[looks around]

ಅಪ್ಪೂ : ಎಲ್ಹೋದಾನು ಸಾರ್ ! ಕೋಟು ನನ್ನ ಹತ್ರಾನೇ ಇಧೆ. ಜೋಬ್ನಲ್ಲಿ ಒಂದ್ಕಟ್ಟಿಂಜಿನ್...ಅಲ್ಲ...

ಸ್ಕೌಟು ಮಾಸ್ಟರ್ : ಜೋಬ್ನಲ್ಲೇನು ? ಇಂಜಿನ್ನೇ ?...

ಅಪ್ಪೂ : ನನಿಗೇನ್ಗೊತ್ತು ಸಾರ್ ! ಹ್ಯಾಗ್ನಾರ್ ಮಾಡೋದು ಜಪ್ತೀನ. fellow scout ಕೋಟ್ನ ? ಇಂಜಿನ್ನಲ್ಲ ಸಾರ್...ಜಿನ್ ಜಿನ್ ಅಂತ jingle ಮಾಡ್ತಿಧೆ ಸಾರ್ ಜೋಬ್ನಲ್ಲಿ! ದುಡ್ಡೋ ಏನೋ !? ಬಿಟ್ಹೋಗೋ ಬಾಬ್ತಲ್ಲ ಸಾರ್ (aside to Shami) ಕಿಟ್ಟಿ ಪರ್ಸ್‌ಕಣೋ :...ಗಫ್ !

ಸ್ಕೌಟು ಮಾಸ್ಟರ್ : ಮತ್ತೆಲ್ಲಿ ಅವ್ನು ? ನೋಡಿ !...

[The scouts disperse to look around. The lilt of a lullaby is heard within the house]

ರಾಘು : (giving his ear to the window) ಅಪ್ಪು ! ಶಾಮಿ ! ಲೋ! ಇಲ್ಕೇಳ್ರೊ ಕಿಟ್ಟೀನೇ ಅಲ್ವೇನ್ರೋ ?

(cautiously opens the window)

[heard within : ರಾಗ—ಕರ್ನಾಟ್ ತಾಳ—ಏಕ

ಮಧುರಾ ಪುರೀಗೆ ಬಂದು ।
ಮಾಯಾ ಕಂಸನ ಕೊಂದು ॥
ಜನಕೆ ಶಾಂತಿಯ ತಂದ ।
ಜಗರಾಜ ನಿನಗಿಂದು ॥
ಜೋ ಜೋ ಜೋ ಗೋಪಾಲ
ಕುವಲಯ ನೀಲಾ ॥ಪ॥

Kitti is seen singing and rocking a cradle to and fro to time]

ರಾಘು : After all **ಹೆಂಗ್ಸೇ ಕಾಣೋ, ನಮ್ಮ** hero !!

ಅಪ್ರೂ : ಹೌದೋ, ಮಕ್ಳು ಮರೀಂದ್ರೆ ಹೆಂಗ್ಸೇ ಅವ್ನು!... **ಗಂಡಸರೆದುರ್ಗೆ ಕಿರುಬ್ನಿಂದ ಕೋಳೀವಗರ್ಗೆ– ಕೋಪಸ್ಕೋಬೇಡ ರಾಘು—ಗಂಡ್ಸು!**

[Within—

ಮನೆಯಾಕೆ: ಎಷ್ಟ್ ಚನ್ನಾಗ್ಹಾಡ್ತೀಯಾ ಮಗೂ !? ಇದೆಲ್ಲಿ ಕಲ್ತೆ ಹೆಂಗಸ್ರ್ಹಾಡು ?

ಕಿಟ್ಟಿ : ಹಾಡ್ಕಲಿಯೋಕೆ ಎಲ್ಲವ್ಮ ಬಿಡ್ತು ಗಂಡಸ್ರಿಗೆ ? ಈ ಹಾಡ್ನ, ರಾತ್ ತಪ್ದೇ ರಾತು ನಮ್ಮಕ್ಕ ಅವಳ್ಮಕ್ಕಳಿಗೆ ಹಾಡ್ದಿದ್ರೆ, ಅವನಿಗೆ ನಿದ್ರೆ ಇಲ್ಲ ! ಅವ್ನಿಗ್ ನಿದ್ರೆ ಇಲ್ದಿದ್ರೇ, ನಮಗ್ನಿದ್ರೆ ಇಲ್ಲ ! ...ಗಡಾರೀವ್ಮಾ ಅವ್ನ ಗಂಟ್ಲು ... ನನ್ಮೈಸ್ರೇ ಇಟ್ಟಿಧಾಳೆ ಅವ್ನಿಗೆ ನಮ್ಮಕ್ಕ ... ವಟ್ನಲ್ಲಿ ಅವ್ನು ಬಾಯ್ಬಿಟ್ರೆ ಕೃಷ್ಣಗಡಾರಿ...ಮೇಘ್ನಾದ...ಈ ಘಟಿಂಗ್ನಿಗೂ-ಇವ್ನೂ-ಕೆಂಪು...ಅದೇ ಮಟ್ಟೇ ಪೋಕಿ ! ಸುಸ್ತೂವ್ಮ ಮಗು...ಇನ್ನೊರಡ್ತೇನೆ...ನಿಮ್ಹಾಳು ದುಡ್ಬಿನ್ಪೆಟ್ಗೇ ಜೋಪಾನ...ಹೆದರ್ಕೆ ಆದರೆ ಹೇಳಿ, ಇಲ್ಲೇ ಮಲಕ್ಕೋತೇನೆ...ನಮ್ಮಪ್ಪ ಬೆದರ್ತೀರ್ತಾನೆ ಏನು ಬೇನೆ ಬಂತೋ ನನ್ಗೇಂತ... ಹಿಂದಿನ್ಬಾಕ್ಲೆಲ್ಲಾ ಹಾಕಿಧೇನೆ...ಒಳಗ್ಯಾರೂ ಬರೋಹಾಗಿಲ್ಲ ! ಕಾಸಿದ್ಹಾಲು ಆ ಮೂಲೇಲಿಟ್ಟಿಧೇನೆ... ಕ್ಷಮ್ಸೀವ್ಮಾ ! ಉಕ್ಕಿಬಂದಾಗಿಳ್ಸಿದ ಗಲಾಟೇಲಿ ಸ್ವಲ್ಪ ಚಲ್ಹೋಯ್ತು

ಮನೆಯಾಕೆ : ಭಯವೇನೂ ಇಲ್ಲ,ಮಗು ! ಇಷ್ಟ್ದಿನವಿಲ್ದಿದ್ದ ಭಯ ಇವತ್ತೇನೂ ? **ಹೊರ್ಡು ಮಗು...ಕತ್ಲೆ...ಹುಷಾರಾಗ್ಹೋಗ್ಸೇರು** !]

[By this time the patrol and the S· M· who have over—heard all this, draw together to L]

ಕಿಟ್ಟಿ : [enters followed by ಮನೆಯಾಕೆ]

ಮನೆಯಾಕೆ : (standing on the door step) ಏನೋಪ್ಪ ಇವತ್ತಿನ್ ಕಷ್ಟಾನ್ನೂ ದೇವ್ರೇ ಕಳ್ಸಿ ನಮ್ಮನ್ನ್ ಶೋಧ್ಸೋಕೆ...ಅದನ್ನ್ ನಿವಾರ್ಸೋಕೂ ನಿಮ್ಮೆಲ್ರನ್ನೂ ಕಳಿಸ್ದ ಅದೇ ದೇವ್ರು! ನಿಮ್ಮುಪ್ಕಾರ ಯಾವಾಗ್ಲೂ ಮರ್ಯೋದಿಲ್ಲ, ನಾನೂ ಇವ್ರೂ ! ಇನ್ ನಮ್ಮಿಂದ ಅಲ್ಪ ಸ್ವಲ್ಪ ಉಪ್ಕಾರ ಏನಾದ್ರೂ ನಿನಿಗಾಗ್ಲೀ ಈ ನಿನ್ನ ಸ್ನೇಹಿತರಿಗಾಗ್ಲಿ ಆಗೋ ಪಕ್ಷಕ್ಕೆ. ಈ ದೊಡ್ಡು ಋಣಾನ ತೀರಿಸ್ಕೊಳ್ಳೋಕೆ ನಮಗವಕಾಶಾನ ಕೊಡೋಕೆ ಮರೀಬೇಡ ಮಗೂ !

ಕಿಟ್ಟಿ : ಹಾಗಾದ್ರೆ...ನನ್ಗೊಂದು ಉಪ್ಕಾರ ಮಾಡ್ತೀರಾವ್ಮ ?

ಮನೆಯಾಕೆ (anxiously) ಸತ್ಯವಾಗಿ ಮಾಡ್ತೀನಪ್ಪ....ಕೈಲಾದ್ರೆ...ಅದೇನ್ ಮಗು, ಹೇಳು! ?

ಕಿಟ್ಟಿ : ಹೆದರ್ಬೇಡೀಮ್ಮಾ ! ಅದೇನು, ಕೊಂಚ ಕೆಲ್ಸ ; ಇದೋ ಬಂದೆ ! (Exits R and re-enters with ಕುಂಬಳಕಾಯಿ and cap, full of vegetables) ತಕ್ಕೊಳ್ಳೀಮ್ಮ !! ಒಬ್ಬಾಕೇಗೆ ಉಪ್ಕಾರ ಮಾಡ್ಬೇಂದದ್ದಿದೆ ! ನೀವು ಏರಡನೇ girl guideಊಮ್ಮಾ !... ಕುಂಬ್ಳ ಕಾಂಯ್ಲಿ ಹಲ್ವಾ ಮಾಡೋದು ಗೊತ್ತೆ, ನಿಮ್ಗೇ...?

ಮನೆಯಾಕೆ : (ಹುಸಿನಗೆಯೊಡನೆ) ಹೂಂ...

ಕಿಟ್ಟಿ : ಹಾಗಾದರೆ ರುಣಾಂದ್ರೆಲ್ಲಾ, ತೀರ್ಸ್ಬೋಯುತ್ತೀಮ್ಮಾ, ವಂದೇ ಪಟ್ಗೆ ! ಅಣ್ಣ, ಮಜ್ಜಿಗೆ ಪಳಿದ್ಯಾಂತಾರಲ್ಲ, ಅದು ?...ಜಾಸ್ತಿ ಸಾಸ್ವೆ ಇಕರ್ಬೇಡ್ಬು !...ಸಾಸ್ವೇಮ್ಮಾ !. ಬಾಯುಗ್ರಾಚ ಹೊಟ್ಟೇಗ್ಬಿಚ್ಚು—ಅಂದ್ರೇ—ಚೇಳು ! (ತರಕಾರಿಗಳನ್ನು ವಿಂಗಡಿಸುತ್ತಾ) ಹುರುಳೀ ಕಾಯ್ಬುಕ್ಕೆ. ಅಕ್ಕಿ ಇದೆ ತಾನೆ ಮನೇಲಿ ? **ಇದು ತಾಜಾವಮ್ಮಾ**...ಮೊಸ್ರು ಬಜ್ಜೀಗೆ...ದೊಣ್ಣೆ ಮೆಣಸ್ನಾಯಿ !... ಇಲ್ಲ್ಬುತ್ರ ಮಂದ್ ಹಳ್ಳೀಲಿ ಸೌದೆ ವಡ್ಯೋ duty ನನ್ಗೆ, ಭಾನ್ವಾನ್ವಾರ...ನನ್ನ ಕೂಲಿ, ತರ್ಕಾರಿ, ಗಡ್ಗೆತುಂಬಾ ಕೆನೆ ಮೊಸ್ರೂ, ಅಲ್ದೆ ಬೇಕಾದಾಗ ಹಾಲು ತುಪ್ಪ ; ಗೌಡ ನನ್ ದೋಸ್ತು—ಅಲ್ಲಿ—ಸ್ನೇಹಿತ—ನಾಳೆ ಡ್ರಿಲ್ ತುಂಡು...ನಾಳೆ ಹತ್ಗಂಟೆಗೇನೆ ಹಾಜರಾಗ್ತೇನಮ್ಮಾ...ಪಚ್ಚಾ ಬಜ್ಜೀಗೆ ಮೊಸ್ರು, ಪಟಿಂಗ್ನಿಗೆ ಹಾಲು ಏಟ್ನೆಟ್ರಾನ ಎತ್ಕೊಂಡು ;...ಆದ್ರೆ ಹುಷಾರೂಮ್ಮಾ ! ಹುಟ್ಕೋವಾಗ ಹಲ್ವಾಗರ್ಧ, ಹುಳೀಗರ್ಧ ! (placing all the vegetables inside the house and coming out) ಬಾಕ್ಲ್ ಹಾಕೊಳ್ಳೀಮ್ಮಾ, ಬರ್ತೀನೆ.

ಮನೆಯಾಕೆ : ಹೋಗ್ಬಾ, ಮಗೂ !

[The door is bolted from within]

ಸ್ಕೌಟು ಮಾಸ್ಟರ್ : ಕೃಷ್ಣ್ರಾವ್ ! ಇನ್ನೂ ಇಲ್ಲೇ ಇದೀಯಾ! ? Late ಆಗ್ಲಿಲ್ವೇ ಮನೇಗೆ?

ಕಿಟ್ಟಿ : (stragglingly) ಕ್ಷಮಿಸ್ಬೀ ಸಾರ್!...ಚಂಕಿ ಬಿದ್ದ್ಮನೆ...ಎಲ್ಲಿ? ಏನು ? ಯಾವಾಗ? ಹ್ಯಾಗೆ ? ಏನೂ ? ಎತ್ತ ? ಹೀಗೋ ? ಹಾಗೋ ? ಹ್ಯಾಗೋ ? ಇವುಗಳ್ನೆಲ್ಲಾ ತಪ್ದೆ ಮಾಡ್ದೇ ಕೈ ಹಾಕಿದ್ಕೆಲ್ಲಾನ ಕಾಲು–ಹಾಗ–ಮುಪ್ಪಾಗವಾಗಿ ಬಿಟ್ಟು ಬಿಟ್ಟು ಬರೋದು ಕ್ರೀನ್ತೆಂಡಾಂತ. ತಂಗ್ಬೇ ಕಾಯ್ತು ಸಾರ್, ಸ್ವಲ್ಪ !...Be prepared ಅಂತನ್ನೋ ಹಾಗೇ...(ಕೈಗಳನ್ನು ಚಾಚುತ್ತಾ)... ನಮ್ಮನೇಗೊಮ್ದಲ್ಲಿ ಹೋಗ್ಬಿಟ್ಟು—ನಮ್ಮಪ್ಪ ಮುಂಗೋಪಿ ಸಾರ್...ಹೊತ್ತ್ ಬಿಟ್ಕೊಳ್ತೀದ್ರೆ ಚಂಕಿ ಸಾರ್—ನಾನ್ಯಾಕೆ ಇಷ್ಟು lateಊಂಜೋದ್ನ...ನೀವೇ ಹೇಳ್ಬಿಟ್ರೇ...(ಬಲಗೈಯನ್ನು ಚಾಚಿ) ಅಕೋ ! ಅಶ್ವತ್ಥಕಟ್ಟೇ ಹತ್ರ ಮ್ಯುನಿಸಿಪಲ್ ಲಾಂದ್ರದ ಎದುರ್ಗೆ...ಮನೆ !...ಸುಣ್ಣಹೊಡ್ಡು ಬಲ್ದಿನ ಮಾದ್ಬಣ್ಣ !...ಮೆಟ್ಲು ಹತ್ತೋವಾಗ ಹುಷಾರು ಸಾರ್!...ಯುರಡ್ನೇ ಮೆಟ್ಲಿನ್ಮೇಲೆ ಕಾಲಿಡ್ಬೇಡಿ ಸಾರ್...ಅದಿಲ್ಲ ಅಲ್ಲಿ–absent ಉ !!

ಸ್ಕೌಟು ಮಾಸ್ಟರ್ : Quite so! ನಾನ್ಹೇಳ್ತೋಗ್ತೇನೆ ! ನೀನ್...ನಿಧಾನ್ವಾಗಿ ಬಾ... By the way, ನಾಳೆ drill ಗೆ ಬರ್ಬೇಕಾದಿಲ್ಲ...take a rest !

ಕಿಟ್ಟಿ : (ಬೆದರಿ) Arrestoo ?! ಖಿದ್ದಾಗವ್ರೇ ಹಾಕ್ಬಿ, ಸಾರ್ ! ಹಾಕ್ತೀನೆ ! (ಎರಡು ಕೈಯನ್ನು ಚಾಚುತ್ತಾ) ಹ್ಯಾಂಡ್ಕಪ್ಸ್ ಗಳ್ನು !...ಇನ್ನ್ಯಾಗರ್ಬೆ arrest ಏ ಸಾರ್ ?!

ಸ್ಕೌಟು ಮಾಸ್ಟರ್ : Arrest ಅಲ್ಲಾ ಕಣೋ fool. ಅಲ್ಲಾ. silly! (ಮುಂದಕ್ಕೆ ಬಂದು ಕಿಟ್ಟಿಯ ತಲೆಯನ್ನು ಸವರುತ್ತಾ)...ಅಲ್ಲಾ poor foolish child! ...'rest ಉ ನಾನ್ಹೇಳಿದ್ದು, **rest** ಉ (to other scouts) ನೀವುಗಳ್ನು. ಕೃಷ್ಣ್ರಾವ್‌ನ ಮನೇನ್ತೋರಿಸ್ಬಿಟ್ಟು.

ನಿಮ್ಮಿಮ್ಮ ಮನೇಗ್ಳೇರ್ಕೊಳ್ಳಿ !...You will report to me, Raghu !, to-morrow morning. Good night all !

[Exit R]

[The moment he is out of sight, Raghu, Appu, Shami and Ramu, rush up to Kitti and " chair " him]

ಎಲ್ಲರೂ—ಕಿಟ್ಟೀಲೀ ! !

ಕಿಟ್ಟಿ : (Interrupting, in hushed voice) **ಹುಷಾರ್ರ್ರೋ ಲ್ರೋ! ಹುಚಪ್ಪ್ಯಾಸ್!** ಮಗು ಮಲಕ್ಕೊಂಡಿಧೆ ವಳ್ಗೆ...ಮುದುಕ್ರು ಪಾಪ ದಂಪತಿಗ್ಳು...ಮೊಮ್ಮಗು ! ಮಗ, ಸೊಸೆ... **ಇನ್‌ಪ್ಲೂಯೆಂಜಾಲಿ.!** ಅದಿರ್ಲ್ರೀ ! ಮಗು ... **ದೊಡ್ಕಿಟ್ಟ ದೊಡ್ಡಪೋಲೀಕಿಟ್ಟ** ತದ್ರೂಪ್ ತಪ್ಪೀರು ಸ್ವಲ್ಪಕೆಂಪು ಅಷ್ಟೆ !...

ಅಪ್ಪೂ: ದೊಡ್ಕಿಟ್ಟೀ ? ? !...ದೊಡ್ಪೋಲೀಕಿಟ್ಟೀ ? ! ಸಿನ್ನೀತ ದೊಡ್ಪೋಲಿ ! ? ಎಲ್ಲಿ? ಯಾರು ?

ಕಿಟ್ಟಿ: ಎಲ್ಲೀ ? ಯಾರೇ ? ಕೇಳ್ರೋ ಲ್ರೋ !! ಕಿಟ್ಟಿ ನಾನೇ !? ಪೋಲೀ ನಾನೇ !? ದೋಸ್ರ್ಸ್ನ ದುಷ್ಮನ್ಸ್ನ ಫರಕ್ಕಿಲ್ದೆ ಫನಾ ಮಾಡ್ಬಿಟ್ಟು ಕುರುಕ್ಷೇತ್ರದ ಜಂಗ್ನಲ್ಲಿ, ಇನ್ನು ತನ್ನ ಹರ್ನಲ್ಲಿ ಅಮ್ಮ ಅಪ್ಪ ಭಾಯಿ ಬೇಹರ್ ಬಚ್ಚೆ ಬಾಬತ್ಗಳೀ ಬಾಕೀ ಇಡ್ದೆ ಗುಮ್ಮಾಡ್ಬಿಟ್ಟು, ಕೊಳಲ್ಬಾರಸ್ತಾ ಕುಣೀತಿದ್ದ್ನಲ್ಲಾ ಅವ್ನುಬೇಕಾದ್ರೆ ಪೋಲೀ ! ದೊಡ್ಪೋಲೀ !! ಕಿಟ್ಟ ! ? ದೊಡ್ಕಿಟ್ಟೀ !! ಮಹಾಭಾರತದೋನು ! ಅವನ್ಮೇಲಿನ ಆಷಕ್ಕಿನ್ ಷೋಕೀ ಮೇಲೆ ನಮ್ಮಜ್ಜಿ ಅವನ್ದೆಸರ್ನ ನನಗಿಟ್ಟು ಅವನ್ಕಥೇನ ನನ್ನ ಬಚ್ಚತನದಲ್ಲಿ ಅವನ್ನ ಹೊಗಳ್ತಿದ್ಲಲ್ಲಾ, ಆ ಕಿಟ್ಟ ಬೇಕಾದ್ರೆ ಪೋಲಿ !! ನಾನಂತೆ !!....ಮನೇಲಿ ನಡಗ್ತಾ ಕಾದಿರೋ ಅಪ್ಪನ್ನೂ ಅಕ್ಕನ್ನೂ ಮರ್ತು ಬೀದೀಲ್ಹೋಗ್ತಾ, ಬೆಂಕಿ ಬಿದ್ಮನೆಗಳಲ್ಲಿ ಬುದ್ಧಿ ಇಲ್ದೇ ತಾನ್ತಾನಾಗಿ ಬಿದ್ದ ಬಚ್ಚಾಗಳ್ನ ಬಚಾಯ್ಸೋದೂ ಆಜಾದಾದ್ನಾನು ನನ್ಮೇಲೆ ಆಷಕ್ಮಾಷಕ್ ಇಲ್ದ ಶುಕ್ರಾಚಾರೀಗಾಗಿ ಲಡತ್ಮಾಡ್ತಾ ಅವನ್ ಸುಲೋಚ್ನ ಬಚಾಯ್ಸೋದೂ ;...ಸಮ್ಮನೇ ಗೋಳಲ್ದೆ; ನಮ್ಮಾಗೇ ಇರೋವ್ರು ಗೋಳ್ನೆಲ್ಲಾ ನನ್ನೆಗಲಿಗೆ ನಾನೇ ಹೇರಿಸ್ಕೊಂಡು ಕಣ್ಕಣ್ಬಿಡ್ತಾ...ನನ್ನಾಲ್ಗೇಲಿರೋ ಶನಿಸಿಹಿನರದ ತೀಟೆ ತೀರಿಸ್ಕೊಳ್ಳೋಕೆ ನಿಮ್ಮಾತುಗಳ್ಗೆ ಫಿಸ್ರಿಬಿದ್ದು, ನೀವ್ ಬೊಗುಳಿದ ಬೊಂಬಾಯ್ ಬಾದಾಮ್ ಹಲ್ವ-ಡೆಲ್ಲಿ ದೂದ್ಪೇಡ-ಇವುಗಳ್ನ ಎದುರ್ನೋಡ್ತಾ ನಿಮ್ಬಾಳು ಪಟಾಲಂಗೆ ದಾಖ್ಲಾಗಿ ಕಣ್ಕಣ್ಬಿಡ್ತಿರೋ ಈ ಕಪೋತ ! ಕೃಷ್ಣನಂತೆ ! ಪೋಲೀಂತೆ !... **ದೊಡ್ಕಿಟ್ಟ!....ದೊಡ್ಪೋಲೀ ಕಿಟ್ಟ!ಅವ್ನು!!** ಮಹಾಭಾರತ್ದೋನು ! ವಳ್ಗಿರೋನು ಅವನ್ತದ್ರೂಪು...ಸುಸ್ತಾಗಿ ನಿದ್ದೆ ಮಾಡ್ತಿಧಾನೆ ! ಅವ್ನು ಎದ್ರೆ ಎಲ್ಲಿಗೂ ತಕ್ರಾರು ! **therefore** (ಮೋಟಾರ್ ನಡೆಸುವವನು brake ನ್ನು ಹಾಕುವಂತೆ, ತನ್ನ ಕೈಯನ್ನು ಎತ್ತಿ ಆಡಿಸುತ್ತಾ) **brake** ಉ, ನಿಂ ಗಲಾಟೇಗೆ !!

ಅಪ್ಪೂ: ಹಾಗಾರ್ಬೀಗ್ಬರ್ರೋ ಲ್ರೋ !!

[Led by Appu, the patrol carries Kitti to the edge of the proscenium.]

ಕಿಟ್ಟಿ: ಏನ್ರೋ ಇದು ತಾರೀಫು ?...ಕುಸ್ತೀಲ್ಮುರ್ಕೊಂಡ ಕಾಲ್ನ ಬೆಂಕೀಲೂ ಸುಟ್ಕೊಂಡು ಮನೇಲ್ಮಲ್ಗಿರೋನು, ಮಗು ! ದೊಡ್ಮನುಷ್ಯರ್ಮಗ ! carನಲ್ಹೋದೋನು...ನಾನಲ್ಲ...ಪೋಲೀ ಕಿಟ್ಟಿ ಅಲ್ಲ... ಬಿಡ್ರೋ !!.

[struggles to find his feet]

ರಾಘು: ಅಲ್ಲ, ಕಿಟ್ಟೀ!...ನಿನಗ್ಗೊತ್ತಿಲ್ಲ, sports shield ಉ, life saving shieldoo...ನನ್ patrol ಗೇನೇ...

ಕಿಟ್ಟಿ: ನಿನ್ patrol ಓ?? ನಿಮ್ಮಪ್ಪ ಬರ್‍ಕೊಟ್ಟಿದ್ದ ಅಲ್ವೇ ನಿನ್ಗೆ?...

ರಾಘು: ಕೋಪಿಸ್ಕೋಬೇಡ, ಕಿಟ್ಟೀ, ನಂದೇನ್ ನಿಂದೇನು...**ನಮ್ದು** patrol ಗೆ!

ಕಿಟ್ಟಿ: ಹಾಗಾರ್ ಕಣ್ಬಿಟ್ಟಿದೀಯಾ? ಅದು better ಉ! (holding Raghu's shirt by the collar. softly) ಪರ್ವಾ ಇಲ್ಲ, ರಾಘು! ನಿನ್ಜಂಭ ಕರಗ್ತಿದೆ! ಇನ್ನು ನಿನ್ನೊಳೀ ತನದ ಕೊನೇ ತೊಟ್ಟು ಕುಗ್ಗುತ್ತೀನೂವೆ, ಹುಂಜ ಆಗ್ತೀಯಾ!

ರಾಘು: ಒಪ್ದೆ, ಕಿಟ್ಟೀ!

ಅಪ್ಪೂ: ನಮ್ಮ ರಾಘು ನಿನಗ್ಗೊತ್ತಿಲ್ಲ, ಕಿಟ್ಟೀ! ಅವ್ನ ಜಂಭದ ಬಾಬ್ತೇನೂ ಇಲ್ಲ ಈಗ! Grimm's fairy talesನಲ್ಲಿ ಬಂದ್ಹಾಗೆ—once upon a time ಉ...in days of yore ಉ...ಅಂದ್ರೆ ಒಂದಾನೊಂದು ಕಾಲದಲ್ಲಿ!

ಕಿಟ್ಟಿ: ಯಾರ್ಬತ್ತಲರ್ರೋ ನಿನ್ನ yore ನ ಜೋರು? ನಿನ್ನ English ಓ ನೀನೋ... ಅರ್ಥ ಹೇಳ್ಕೊಡ್ತಾನೆ...ನನ್ಗೆ...English ತಿಳೀದ ಗುಗ್ಗೂಂತ ತಿಳ್ಕೊಂಡ್ಯೇನೋ...ಅರ್ನ್ನೆ form ಗೆ ಮಣ್ಣಾಕ್ದ ಭೂಪ್ತೀಗೇ?

(struggles to get down in vain)

ದಳದವ್ರು: ಕೋಪಿಸ್ಕೋಬೇಡ ಕಿಟ್ಟೀ.

ಕಿಟ್ಟಿ: ಇದ್ಯಾಕ್ರೋ ಎತ್ಕೊಂಡಿದೀರಾ ನನ್ನ...ಅಮರದ್ಹಾಗೆ "ಪೌಲಸ್ತ್ಯೋ ನರವಾಹನಃ!" ಇತ್ಯಮರಃ !! ನಿಮ್ಮೆಲ್ಲವಾರಿ ಮಾಡೋಕೆ? (ಕೈಬೀಸಿ ಹೇಳುತ್ತಿರುವಾಗ ಕೈಯಲ್ಲಿರುವ ಗಡಿ ಯಾರದ ಕನಕದ ಹೊಳಪು ಕಣ್ಣಿಗೆ ತಾಕಲು) ಅಯ್ಯೋ ಹೌದೇ!! ಕುಬೇರ್ನೇ ನಾನು...ತಿಳಿತ್ರೋ... ಲ್ರೋ...ನಿಂ ತಾರೀfoo (ಎತ್ತಿಕೊಂಡಿದ್ದವರನ್ನೂ ವದ್ದುಕೊಂಡು ನೆಲಕ್ಕಿಳಿದು) ವರ್ದಾಚಾರಿ ಕಂಪ್ನಿ ಕಂದದಲ್ಲಿ ಹಾಡಿದ್ಹಾಗೆ,...ಈಗರ್ಥವಾಯ್ತ್ರೋ ನಿಮ್ತಾರೀfoo!; ನೀವ್ಮತ್ಕೊಳ್ಳೋದು ನನ್ನ!... S.M.ಗೆ ಈವತ್ಮಧ್ಯಾಹ್ನ "fool" ಉ; "hopeless" ನಾನು, ಅದೇ ನಾನು...ಈಗ್ಹೋಗೋ ವಾಗ ಸಿರ್‍ನ ಸವತರ್ನಾ "You poor child" ಉ.! ನಿಮಗೋ ವಾಕೀಫಾ ಆದ್ಮುಖತ್ತು 'ಪೋಲಿ.' ಈಗ "ಕಿಟ್ಟಿ, hero"; ಬಿಠಾಯಿಸ್ಕೊಳ್ಳೋಣ ಭುಜದ್ಮೇಲೆ ಥಕೋ!!...ಇದ್ಯಾಕೆ ಗೊತ್ತೇನ್ರೋ (ಕೈಯಿನ gold watch ನ್ನೂ ಮುಂಗೈಯನ್ನೂ ಅಲುಗಿಸುತ್ತಾ) ಇದು ಸುವರ್ಣ, gold ಉ, ಸಿರಿ; ವರ್ದಾಚಾರಿ ಕಂಪ್ನಿ ಕಂದದ್ಹಾಗೆ ಸಿರಿ! (ಹಾಡುವನು.)

ರಾಗ—ಕಾಂಭೋದಿ

" ಸಿರಿ ತಾಂ ಬರಲು ಷಕ್ಸಿಗೇ
ದುನಿಯಾನೇ ದೋಸ್ತುಗಳೂ ॥ "

Gold watch ಬರಲು brigade ಎಲ್ಲ ಬಂಧುಗಳೂ ॥

ಈಗ ಬಂದ್ಲೇರಿದ್ರಾ? ... (ದುಃಖವನ್ನು ನಟಿಸಿ, ಇಲ್ಲದ ಕಣ್ಣೀರನ್ನು ತೋರಿಸುತ್ತಾ) ಇನ್ನಿದ್ದೊ ರಟೋಯ್ತೋ...?!

(ಪುನಃ ಹಾಡುವನು)
ರಾಗ—ನೀಲಾಂಬರಿ
" ಸಿರಿ ತಾಂ ತೊಲಗಲು ಭಗಾಯಿಸುವರೂ

Gold watch ತೊಲಗಲೂ...

S.M. ಉಗಳು, S. ಉಗಳು, Cub ಉಗಳು, ದೌಡಾಯಿಸುವರೂ... ಶಿವಶಿವಾ. ಪರಿಪರೀ, ಹರಹರಾ. ಅಮಮಮಾ, ಸತ್ಯಂ, ದಿಟಂ, ನಿಜಂ ಥರೆಯೋಳ್, ಇಳೆಯೋಳ್, ವೋಣ್...ಅಕ್ಕುಂ"॥ (ಎಂದು ಗೋಳಾಡಿ ಥಟ್ಟನೆ ತಾತ್ಸಾರದ ನಗೆಯನ್ನು ನಟಿಸುತ್ತಾ) ಗೊತ್ತೈ್ರೋ ; ಲ್ರೋ! ಸಿವ್ ತಾರೀ fooಗ್ಳು ! ಹೆದರಸ್ತಾರೆ...ಹೆದರಸ್ತಾನೆ. yore ಊ ಗೀರೂ ಅಂತ ಇಂಗ್ಲೀಷ್ನಲ್ಲಿ...ನಾನೇನು ಸ್ಕೂಲಿಗ್ಹೋಗ್ಲಿಲ್ಲಾ...ಸ್ಕೂಲಿಗ್ ಮಣ್ಣ್ ಹಾಕಲಿಲ್ಲಾಂತ ತಿಳ್ಕೊಂಡಿಧೀರಾ ?

ಅಪ್ಪು : sixth from ನಲ್ಲಿ ಇದ್ದದ್ದು...ಅಲ್ಲ...ನಮ್ಮನ್ನೆಲ್ಲಾ ಒದ್ದದ್ದು...ಗೊತ್ತು... ಸ್ಕೂಲ್ ಬಿಟ್ಟದ್ದೂ...circumstanceಊ...ಅಂತ...

ಕಿಟ್ಟಿ : ಹಯ್ಯೋ, ಮಂಕೂ ! ನನ್ನ ಸ್ಕೂಲಿಂದ್ದೋಡ್ಸಿದ್ದು cir ಊ ಅಲ್ಲ, cum ಊ ಅಲ್ಲ, stances ಊ ಅಲ್ಲ; ಉರೀ ಕಾಣೋ, ಎದೆ ಉರಿ! ನನ್ನ ಸ್ಕೂಲು ಓಡಿಸ್ರೋ. .ಇಲ್ಲಾ. .ನಾನ್...ಬಿಟ್ಟು ಓಡಿದ್ನೋ...ಬರತರ್ಫೋ ಇಲ್ಲ ರಾಜೀನಾಮೇನೋ...ನೀನೇ ಹೇಳೋ cir ಊ cum ಊ stances ಓ...! ಕೇಳ್ರೋಲೋ...ಕಬ್ಬುಗಳ್ರಾ ! in days of yore ಊ ಅಂದೇ...yore ಏನೂ ?!...ಯಾರೇನೂ ?!...ಯಾರ್ less a man...ಈಗ್ಲೂ ಹೆದ್ರಿಕೆ ಬರತ್ತೆ...than Inspectroo! ಆತ ಹೈಸ್ಕೂಲಿಗೆ ಅಜ್ಮಾಯಿಷೀಗೆ ಬಂದಾಗ set ಮಾಡ್ದ Composition questionsನ್ನಲ್ಲಿ answer ಕೊಡೋವಾಗ ನಾನು ತೋರಿಸಿದ ನನ್ನ ಕೊಬ್ಬೇ... **ಹಚ** ಮಾಡಿದ್ದು... ನನ್ನ...ಹೈಸ್ಕೂಲಿಂದ!! ನನ್ನ ಇಂಗ್ಲೀಷೂ...ಯಾವಾಗ್ಲೂ strong ಊ ! ಆ ಇನ್ಸ್ಪೆಕ್ಟರು—ಆ ದೊಡ್ಡ ಮನುಷ್ಯ ಪ್ರಾಣೀ ಬಂದ್ದಿನ...ನಮ್ಮಣ್ಣನ್ ಜ್ಞಾಪ್ಕ ಬುತೂ...therefore ನನ್ನಿಂಗ್ಲೀಷು ಆವತ್ತು ಚಂಡಪ್ರಚಂಡ strongoo — strongoo ಅಂದ್ರೇನು ? ಒಂದು **ನಮೂನೆ** strongoo !! ಸಾಲದ್ದಕ್ಕೆ...ಹಕ್ಕೀಹಾಗೆ ಆzದಾಗ್ಪಾರಾಡ್ತಿದ್ನನ್ನ, ಸ್ಕೂಲು ಅಂಬೋ ಜೋನ್ನಲ್ಲಿ ನಮ್ಮಪ್ಪ ದಬ್ಬುತ್ಲೂನೂವೆ, ನನ್ಗಿರೋರೆಕ್ಕೆಗಳ್ನ ಮರ್ತು್ಜ, ಬೊಕ್ಕೇ ಮಾಲೀಕ್ರು, teachersಉ, ಉತ್ತಾಯಿಸ್ದ್ರು ನೋಡು...ಒಬ್ಬನ್ಮೇಲೊಬ್ರು...ನನ್ಹೊಟ್ಟೇಗೆ ಕಿಚ್ಚಿಡೋಕೆ !

ಎತ್ಕೋತಾ ಅರ್ಥ್‌ಮಿಟಿಕ್‌ನೋನು : ನನ್ಕೋಟೋ, open collarನ pin ಹಾಕಿ close collarಉ ! ಹಕ್ಲ್ರ !...ಒಳಗ್ಷರ್ಟಿಲ್ಲ...ಟೋಪಿ, ಚರಿತ್ರೆ ಹಾಸನದಲ್ಲಿ ಹೆಣದಮ್ತು, ಎರಡೆಕ್ರೆ ಭರತಾತ್ರೆ ಭರ್ತಿಯಾಗಿರೋ ಪಂಚೆ...ಬಡವರ ಬಚ್ಚ ನಾನು...ಬಿಸ್ಸಂ ಬಿಸ್ಲು...ಬಿರುದು ವಡೆದ ಪಾದ...ಬರೀಹೊಟ್ಟೆ...ಬಂದಿಧೇನೆ ಕ್ಲಾಸ್ಗೆ !...ಹಾಕ್ತಾನೆ ಕೊಶ್ಚನ್ನು...ಕಂಬ್ಳೀ ಕೋಟ್ ಹಾಕ್ಕೊಂಡು ...ಬೊಜ್ಜೆ...ಬಲ್ತು...ಎಲೆ ಅಡ್ಕೆ ಮೆಲ್ತಾ ನನ್ನ ಮ್ಯಾಥಮ್ಯಾಟಿಕ್ಸ್ ಟೀಚರ್ಉ Iyengar ಇ, ಮೇಲ್ಕೋಟೆ, ಗಿಳಿಮೂಗ್ ಗಳ್ಡಾಚಾರಿ ' practice ' ನಲ್ಲಿ ಕೊಶ್ಚನ್ನು...ಕೇಳ್ರೋ ! ಲ್ರೋ ಹೊಟ್ಟೆ ಹಸೀತಾ ಇರೋ ನನ್ಗೆ...ಕೊಶ್ಚನ್ ಹಾಕೋವ್ನು...ಹೊಟ್ಟೆ ತುಂಬ ತಿಂದು ಬಂದ teacherಉ... ಕೊಶ್ಚನ್ answer ಮಾಡೋನು ಹೊಟ್ಟೆ ಬೇಯ್ತಿರೋ ಬಿಚಾರಿ...ಕೊಶ್ಚನ್ನೋ, ಬೇಯೋ ಪಲೀಗೆ ಮತ್ತಿಷ್ಟು ಸೀಮೆಯೆಣ್ಣೆ ! sumಊ practice sumಊ!..." Find the cost of "... ಎಕ್ಸಟ್ರಾ...ಕೇಳ್ರೋ ಲ್ರೋ ! ಹಸ್ದೋನ್ಗೆ ಹಾಕೋ ಪ್ರಶ್ನೇನಾ ! "(1) 100 loafs of breadoo at one anna eachoo (2) 20 tons of apples at ಬಿಡ್ಗಾಸು ಮಂದಕ್ಕೆ (3) 1000 gallons of ಷರ್ಬತ್...at freeನೋ ಏನೋ...ಅಂತೂ cheapoo (4) 10 tons of ice...at ಬಿಟ್ಟಿ..." ಥಕ್ಕೋ ಯಾರಪ್ಪನ್ ಮನೇ ಗಂಟೂ ? (5) one pound of ಧಂರೋಟ್ at ಧಮ್ಡಿ a ಧಡಿಯ !..." ಸೋರಿ ಸುರ್ಯೋದಿಲ್ವೇನ್ರೋ ನಾಲ್ಗೆ ?

ಉರಿಯೋದಿಲ್ವೇನ್ರೋ ಉದ್ರ?...ಇದೊಂದೇ ಅಲ್ಲ! ಸ್ಕೂಲ್ ಫೀಸ್ಗೆ ಗತಿ ಇಲ್ದ ಹುಡಗರ್ನ **ಹತ್ಸಾವಿರ್ರೂಪಾಗಳ್ನ ಬ್ಯಾಂಕಿನಲ್ಲಿ, ನೀನು ಹಾಕಿದ್ರೆ ಶೇಕ್ಡಾ 4ರ ಪ್ರಕಾರ ನಾಲ್ಕು ವರ್ಷ ಮಿರಿದ ನಂತರ''?!** ಯಾಕ್ರೋ!? ಬಿಡಿಗಾಸಿಲ್ಲದ ಬಡವರ್ಗೆ...ಈ ಬ್ಯಾಂಕ್ನೋಚ್ಚೇ!? ಓಗೆಲ್ಲಾ ಕೇಳಿ ಕಾಡ್ಸೋದು. ಗರೀಬ್ ಹುಡುಗ್ರ ಹೊಟ್ಟೆ ಉರ್ಸೋಕಲ್ವೇನ್ರೋ?...ಇಷ್ಟೊಟ್ಟ ದುಷ್ಮನ್ನಾಯ್ತೋ?...

ಇನ್ನು Algebra ದೋನೋ!? ಆಚಾರಿ! ಮುದ್ರಾರಾಕ್ಷಸ!! alphabet complete ಆಗಿ ಗೊತ್ತಿಲ್ಲ ಅವನಿಗೆ!...A. B. C ಗೊತ್ತು! xyz ಗೊತ್ತು ಆಗಾಗ್ಗೆ PQRS ಉ! ಯಾವಾಗ್ಲಾದ್ರೂ Lಊ Mಊ Nಊ! ಆದ್ರೂನೂವೇ ಬ್ರಾಕೇಟುಗಳೂ ಅಂದ್ರೆ ಪ್ರಾಣ...ಆ ಮುದ್ರಾ ರಾಕ್ಷಸನಿಗೇ!..."half moon bracket ಊ, square bracketoo, flower braket ಉ" ಇದ್ರಲ್ಲ್ ಮುಳ್ಗಿ, ನನಗೆ marksoo ಅವ್ನ ಪುದ್ರೆ ಹಾಗೆ "full moon brackct ಉ" algebra ದಲ್ಲಿ ಬರೋವರ್ಗೂ boysನ ಸತಾಯಿಸ್ತಿದ್ದ, ಎರಡ್ನೇ ದುಷ್ಮನ್ನೂ! ಇನ್ನಿವರಲ್ದೆ, ಜಾಗರ್ಫಿಯೋನು: ಶಾಸ್ತ್ರಿ! ಘಾತ್ಕ! ನಮ್ಮ ಕೋಲಾರದಲ್ಲಿ ಚಿನ್ನದ ವ್ಯಾಪಾರ!, ನಮ್ಮದ್ದೂರ್ನಲ್ಲಿ ಆಸ್ಪತ್ರೆ ಐಬು!, ನಮ್ಮ್ ಆನೇಕಲ್ನಲ್ಲಿ ಅನಾವೃಷ್ಟಿ!, ಅಂಬೋ ನಮ್ಮ ಮೈಸೂರು ದೇಶದ ವಿಚಿತ್ರ ಚರಿತ್ರೇನ ಹೇಳೋದ್ಬಿಟ್ಟು ಆ ಘಾತ್ಕ....Kisdder minister carpetಗ್ಳು! ಸಹರಾದ ಸಸ್ಯಾದಿಗ್ಳು!...swiss ಸಾಗರದ ಮೇರೆಗ್ಳು! ಅಂತ ತಾನ್ಹುಟ್ಟಿ ಬೆಳ್ದ ಮೈಸೂರ್ನೇ ಮರ್ತ್‌ಬಿಟ್ಟು, ಹೊರದೇಶ್ದ ವರ್ತಮಾನಾನೆಲ್ಲ ಹುಡುಗರ ತಲೇಗೆ ಹತ್ತಿಸ್ತಿದ್ದ ಈ Geography ಶಾಸ್ತ್ರೀ ಒಬ್ಬ!. ಮೂರ್ನೇ ದುಷ್ಮನ್ನು! ಆಯ್ತು!? ಇನ್ನು History ಯೋನು! ಮನುಷ್ಯ...ಬ್ರಾಹ್ಮಣ! ಆದ್ರೂಲ್ಲೂವೆ ಅವನ್ಕೇಳೋ ಪ್ರಶ್ನೆ: "ನೈಸಾಮುಲ್ ಮುಲ್ಕ್ ಯಾವಾಗ ಸತ್ತ? ಸತ್ತೋದ ಯಾವ್ದೋ ಶತಮಾನದಲ್ಲಿ!...ಇವ್ನಿಗ್ಯಾಕೋ? ತಿಥಿ ಮಾಡೋಕೇ?..."ಭರತಮಾತೆಯನ್ನು ಅಗೆದು ನುಂಗಲು ಬಂದ ಅಲೆಕ್ಸಾಂಡರಿನ ಅಶ್ವದ ಹೆಸರೇನು?" ಅಲ್ದೆ. "ಸ್ವೀಡನ್ ರಾಜನ ರಾಯಭಾರಿಯ ಮಗನನ್ನು ಕಚ್ಚಿದ ವಿಷದಿಂದ ಸತ್ತ ನಾಯಿಪಿಳ್ಳೆ ಹೆಸ್ರೇನು?"; ಹೀಗೆಲ್ಲಾ ಹುಡುಗ್ರ ಹೊಟ್ಟೇಗೆ ಕಿಚ್ಚಾಚ್ತಿದ್ದ History teacherರೊಬ್ಬ. ನಾಲ್ಕನೇ ಬಾಲ ವೈರಿ!...ಇನ್ನಿವರಲ್ದೆ ಸಂಸ್ಕೃತದ Teacherಉ...ಶಾಸ್ತ್ರಿಗ್ಳು!..."ನಮಾಮಿ-ನಮಾವಃ-ನಮಾಮಃ" ಅನ್ನೇಕಂತೆ; ಆದ್ರೆ, "ಕರಾಮಿ-ಕರಾವಃ-ಕರಾಮಃ" ಅನ್ಬಾರ್ದಂತೆ!! ಯಾಕೋ? ಇಷ್ಟಕ್ಕೂ ನಮ್ = ನಮಿಸು; ! ಕರ್– ಮಾಡು!! ಬೇಡದ್ದಕ್ಕೆ English ಟೀಚ್ರು!! ಸಿ. ಯು. ಟಿ. cut ಅಂತೆ;—ಎಚ್. ಯು. ಟಿ. hut ಅಂತೆ;— ಆರ್. ಯು. ಟಿ. rut ಅಂತೆ;-ಪಿ. ಯು. ಟಿ. ಮಟ್ಟಿಗೂ put ಅಂತೆ!! ಯಾಕ್ರೋ...ಇದೂ?! ಹಿಡ್ಸುತ್ತೋ ಇಲ್ವೋ ಹುಚ್ಚು, ಹುಡುಗ್ರಿಗೇ? ಹೇಳ್ರೋ! ಹೀಗೊ ಬ್ಬೊಬ್ಬಾಲವೈರೀನೂ petrol ಹಾಕ್ತಾ ಹಾಕ್ತಾ ಉಕ್ತಿತ್ತು ನನ್ ಖೂನು! ಅರ್ಥಮಿಟಿಕ್‌ನೋನ ಪೌಂಡುಗ್ಳು—ಶೇಕ್ಡಾಗ್ಳು, algebraದೋನ ಹೂವು ಬ್ರಾಕೀಟುಗ್ಳು, ಜಾಗರ್ಫಿಯೋನ land surrounded by wateroo, history ಯೋನ causes of warsoo, Sanskrit ನೌನ ಸಾವಿರ exceptions to Bhandarkar's one ruleoo, ಇನ್ ಇಂಗ್ಲೀಷ್ ನೌನ charmingoo, chemistry, chamoisಗ್ಳೂ.—ಇಷ್ಟರ ಪೈಕಿ ಈ ಇಂಗ್ಲಿಷ್ ಟೀಚರೊಬ್ಬ —ಸಾಧು ಪ್ರಾಣಿ—ಮನೆ ತುಂಬ ಮಕ್ಳು—ಇಪ್ಪತ್ತೈದು ರೂಪಾಯಿ ಸಂಬ್ಳ—ಆ ಇನ್ಸ್ಪೆಕ್ಟರ್ ಪ್ರಾಣೀಗೆ ಇವನೂಂದ್ರೆ ಬೆಂಕಿಯಂತೆ...ಯಾಕೋ ಕಾಣೇ...

ಈ ಹಿಂಸೆಗಳ್ನ ತಪ್ಪಿಸ್ಕೊಳ್ಳೋಕೆ...ಪಂಜರದಲ್ಲಿ ಸಿಕ್ಕೊಂಡ ಪಾರಿವಾಳಕ್ಕೆ ಒಂದ್ ಚಾನ್ಸ್ ಸಿಕ್ಕೀತೇ ಅಂತ ಕಾದಿದ್ದೆ! ಸಿಕ್ತು! Inspectroo ಬಂದ!...ಬಂದೋನು ಕಾರಿನಿಂದಲೇ ಇವನ್ನೋಡಿ ರೇಗ್‌ಕೊಂಡೇ ಇದ್ದ...ಅವನೇನ್ಮಾಡಾನ್ ಪಾಪ!...ಅವನ್ನ ಡೊಡ್ಡ ಮನುಷ್ಯತನವ್ ಥೋರ್ಸೆ! ...ಥಿರ್‌ರ್...ಅಂತ...ಫಿರ್ಕಾಯಿಸ್ತಿದೆ ದಿಮಾಕ್ನ!...ತಗಲ್ಕೊಂಡ ಟೀಚರ್ನ...ಕ್ಲಾಸಿಗ್ ಬರುತ್ತೂವೆ! ...ಈ ಸಾಧು...ಬೆದರಿಕೊಂಡು...ಅರ್ಧಂಬರ್ದ ಬಾಯಿ ಬಿಡುತ್ತೂವೆ. "ನಿನ್‌ಗೇ ಇಂಗ್ಲೀಷ್

ಗೊತ್ತಿಲ್ಲ...ಟೀಚರ್ ಕೆಲಸಕ್ಕೆ ನೀನ್ ಲಾಯಕ್ಕಿಲ್ಲ...ಆದ್ರೂನೋಡೋಣ ನಿನ್ನ ಹುಡುಗರಿಗೆ ಕಲಿಸಿರೋ ಇಂಗ್ಲೀಷ್ನ" ಅಂತ ಬರ್ಡ್‌ಬೋರ್ಡ್‌ಮೇಲೆ ಚಾಕ್ನಲ್ಲಿ...ಕೊಶ್ಚನ್ನು...ಕಾಂಪೊಜ಼ಿಷ್ ಕೊಶ್ಚನ್ನು !! ಅವನ್ನ ಸುಲೋಚ್ನಾನೋ ... ಅವನ್ನರಾಯಿ ಬೂಟ್ನೋ ... ನೋಡುತ್ಲೂವೆ— ಆವನ್ನಾಗೆ ದೊಡ್ಮನುಷ್ಯನಾಗಿ ಮೆರ್ರ್ಯೋ ನಮ್ ಮನೆತನದ ಮಾರಿ !, ನಮ್ಮಣ್ಣನ್ನ ಜ್ಞಾಪ್ಸಿ...ನನ್ನ ಮುಯ್ಯಿ ತೀರಿಸ್ಕೊಳ್ಳೋಕೆ ಮೋಕ್ಕಾನೂ ತೋರಿಸ್ದ by his composition questionoo!

ಸ್ಕೌಟುಗಳೆಲ್ಲರೂ —ಅದೇನ್ composition ಕಿಟ್ಟೀ ?...ಹೇಳು ಕಥೇನ.

ಕಿಟ್ಟಿ : "Write a compositionoo" ಅತ್ಲೋ ಏನೋ ಮೊದ್ಲ ಹಾಕ್ಕೊಂಡ ತಸ್ಕರ ! ಆಚಾರೀ ! "The dog is a noble animaloo and man who loves dogoo is a noble manoo!" ಅದು (A)! ; ಇನ್ನು (B), "Give example, ನಿಮ್ಮ life ನಿಂದಾಂತ" ; ನಾನೋ, composition class ಬರುತ್ಲೂನೂವೆ ಕಿಟಿಕಿ ಧುಮ್ಕಿ ಓಡೋನು !!...ಒಂದನ್ನೂಲ ಕಾಣ್ರೋ ಹೈಸ್ಕೂಲ್ನಲ್ಲಿ ! low ಸ್ಕೂಲ್ನಲ್ಲಿ ಚೆನ್ನಾಗಿ ಓದಿ promotion ಸಂಪಾದ್ಸಿದ್ರೆ—low claassesನ ಕಿಟ್ಗಗಳ್ಗೆ ಕಂಬಿಗ್ಳು, ಹೈಸ್ಕೂಲ್ ಕ್ಲಾಸ್ ಕಿಟ್ಗಗಳ್ಗೆ ಇರೋದಿಲ್ಲ—attendance ಆಗತ್ಲೂನೂವೆ ಆzಾದಾಗಿ ಧುಮುಕ್ಬಹ್ದು foot ball fieldಗೆ!!! ಆದ್ರೆ, ಇವತ್ತೇನೊ ನಮ್ಮ ಸಾಧು ಟೀಚರ್ನ ತಾತ್ಸಾರ ಮಾಡಿದ, ನಮ್ಮಣ್ಣನ್ನ್ ಜ್ಞಾಪಿಸ್ದ, ಈ ದೊಡ್ಮನುಷ್ಯ ಇಸ್ಪೆಕ್ಟರ್ಗೆ ತೋರ್ಸ್ಬೇ ಬಿಡ್ಬೇಕು ನನ್ನ ಇಂಗ್ಲೀಷ್ನ ಅಂತ ನಾಟ್ಕೊಂಡು ಓಡ್ದೆ ನನ್ನ ಮನಸ್ಸಿನಲ್ಲಿ ಒಂದ್ಸಟ ! ಬರೆದೇ ನೋಡು ಭೂಪ್ತಿ...ಒಂದು compositionoo...

ಅಪ್ಪೂ : (With eyes gleaming) ಹೇಳು ಕಿಟ್ಟೀ! ...subjectಉ ? "The dog is a noble animal" ಏ? ಏನ್ಬರ್ದೆ?

ಕಿಟ್ಟಿ : Subject ಇರ್ಲೋ ! objectಊ ... ಉರಿ ... ಸೇಡು...ಮುಯ್ಯಿ... ಸ್ಕೂಲಿನ್ಮೇಲಿದ್ದ ಸೇಡ್ನೂ masters ಮೇಲಿದ್ದ ಮುಯ್ಯೂ ನಮ್ಮಣ್ಣನ್ಮೇಲಿದ್ದ ಅಂಗಾರ್ರೂ ಭುಜಾಯಿಸ್ಕೊಳ್ಳೋಕೆ chanceಉ...objectಉ!! predicateಉ, verboo! "A verb is a word that declares somethingoo"! ಡಿಕ್ಲೇರ್ ಮಾಡ್ದೇ ನೋಡು ನನ್ನ compositionನಲ್ಲಿ; ನನ್ನ ದಿಲ್‌ನಲ್ಲಿ ಜಲಾಯಿಸ್ತಿದ್ದ ಬೆಂಕೀನ ಇಸ್ತೇ ಮಾಲ್ಗೆ ತಂದೇ ನೋಡು ಈ ನಾಯಿ ಸಬ್ಜೆಕ್ಟ್ನ...ಕೇಳ್ರೋ, ಲ್ರೋ ! ಕೇಕ್ಸ್‌ಕೇಸ್ ! ಈ ನಾಯಿ subject ನ್ನಿಟ್ಕೊಂಡು...ನನ್ನ object ತೀರಿಸ್ಕೊಳ್ಳೋಕೆ ಬರೆದದ್ನ ! ಕೇಳ್ರೋ, ಲ್ರೋ ನನ್ನ high schoolನಿಂದ ಹಚ್ ಮಾಡ್ಸಿದ compositionನ !!

ರಾಘು : (Chastened by his witnessing that night, of a great Prince's humble but dignified solicitude for his helpless subjects... a crippled boy's rush into fire and a 'ಪೋಲೀ's blindness to fume and flame in succouring a brother scout—turning his eyes full of true affection towards Kitti) ಹೌದು ಕಿಟ್ಟೀ ! ನಿನ್ನ composition ಹೇಳು... ಚಾಚೂ ಬಿಡ್ದೆ...ವಪ್ಸ ಬರೆದಿದ್ದ...ನೋಡೋಣ ನಿನ್ನ memoryನ !

ಕಿಟ್ಟಿ : (Drawing Raghu's arm into his own) ಕೇಳ್ಬುಂಚಾ !...ಕೇಳ್ರೋ, ಲ್ರೋ ! ನಾನು ಸ್ಕೂಲ್ನಿಂದ ತಪ್ಸಿಸ್ಕೊಂಡ compositionನ ಕೇಳ್ರೋ, ಲ್ರೋ...ನಾನು ಸ್ಕೂಲ್ನಿಂದ ಬರ್ತರ್ಫಾಗಿ ಫರ್ತರ್ಫು ಬಂದ ಪುರಾಣಾನ ! (ಚಿನ್ಮುದ್ರೆಯನ್ನು ಧರಿಸಿಕೊಂಡು) ಶುನಕಾದಿ ಮಹರ್ಷಿಗಳೆ ! ಕೇಳ್ರೋ compositionನ, ಶೌನಕಾದಿ ಮಹರ್ಷಿಗಳ್ರಾ !

ಕೊಶ್ಚನ್ A: DOG IS NOBLE ANIMAL MAN WHO LOVES DOG IS NOBLEMAN

ANSWER

(a) Dog = 2÷s

1st ÷ dog = Country (ಕಂತ್ರಿ)
2nd ÷ dog = Caste (ಜಾತಿ)
1st ÷ dog's house = Street
∵ Contry dog's food = ಯೆಂಜ್ಲು
but ಯೆಂಜ್ಲು is in ತಿಪ್ಪೆ ಗುಂಡಿs
∵ 1st ÷ ಕಂತ್ರಿ dog's house is street

Q.E.D.

2nd ÷ dog is ಜಾತಿ
2nd ÷ dog's house is bungalay
∵ Bungalaywalas are afraid of robbers; again
∵ Bungalaywalas are ದೊಡ್ಮನುಷ್ಯರ್ಜಾತೀ !
∵ Keep money and jewels ಎಕ್ಸೆಟ್ರಾ !
But 2nd ÷ dogs also want food.
∴ money having ದೊಡ್ಮನುಷ್ಯಾs give food for
2nd ÷ dogs with flesh to make strong to bite
1st ÷ dogs, robbers and ಬಡ ಮನುಷ್ಯಾs.
But flesh market's master is ಕಸಾಬಾ ;

(ಕ=ಕಟುಕ, ಸಾಬಾ=ಸಾಬಿ=m u s s a l m a n - Gandhi-brother
∴ಕಟುಕ=ಕಸಾಬಾ=Gandhi brother)

∴wanted ಏ wantedಊ, food for 2nd÷dogs for strong teeths.

(b) Egsample from life !

I day I walk up road of Big-wigs pet (ದೊಡ್ಮನುಷ್ಯರ ಪೇಟೆ) full of Bangalows=ಬಂಗಲೆಗಳು.

I bungalow with name 'ಸುಖನಿವಾಸ' on gate door pillar= joyful living place. This out side bungalow.

∵ inside all bungalows quarrels etc.
∵ ದೊಡ್ಮನುಷ್ಯರ್ಸ್ get much pay ಎಕ್ಸೆಟ್ರಾ and buy many foods and grow fat.

Their quarrels is all empty fat=ಬರೀ ಕೊಬ್ಬು. Bungalay-walas being all fat, (∵ no muscle), always afraid of outside people. ∴keep dogs.

When I was before ಸುಖನಿವಾಸ್ ಬಂಗ್ಲೊ. a big black dog came and made noise.

Dog's noise=bark=ಬೊಗ್ಳು.

This dog which is noble animal, jumped on my legs and became hungry, took away one quarter ಸೇರು from my leg.

4 ಪಾವ್s = 1 ಸೇರು.

∴ 1 quarter ಸೇರ್ = 1 ಪಾವು Ans.

∴ To stop giving more meals to dog, I took a heavy stone in hand, I ಪಂಚೇರ್ weight.

5 ಸೇರ್ಸ್ = 1 ಪಂಚೇರು Ans.

I pressed ಪಂಚೇರ್ stone on noble animal's head strongly. Noble animal stopped meals with my leg and made crying noise = ಗೋಳು. Hearing noble animal's crying noise the ದೊಡ್ಮನುಷ್ಯ of the bungalow came out and sent ಜವಾನ್ = working man, in car for doctor.

∴ ದೊಡ್ಮನ್ಸ also noble man.

Doctor came and ದೊಡ್ಮನ್ಸ said "See boy's leg"! Doctor saw. ದೊಡ್ಮನ್ಸ asked "Has boy got any disease?" ∴ dog noble animal, price is 200 rupees. Please also see if dog's teeths broken, ∴ "that boy's leg very strong."

This is egsample fram life for

Dog is noble animal...

ಅಂತಾ ತೀಡ್ತಾ ತೀಡ್ತಾ ಇಧೇನೆ! ಪೆನ್ನೂ...ಪೇಪರ್ರೂ...!...ನಮ್ಮ teacher ಗೋ ಖುಷಿ-'ಯಾವತ್ತೂ ತಪ್ಪಿಸ್ಕೊಳ್ಳೋನು, ಈವತ್ತು ಕೂತ್ಕೊಂಡು, ದಸ್ತ್ಯೆನ್ಮೇಲ್ ದಸ್ತು extra paper ಮೇಲೆ ink ಸುರಿದು ಸಾರಿಸ್ತಿಧೇನೇ'ಂತ; ನಾನ್ಮಗ್ಗೋ ಅಷ್ಟೊತ್ಗೆ ಮಿಕ್ಕೋರ paper ಗಳ್ನೆಲ್ಲಾ correct ಮಾಡಿ. ಕಾದಿದ್ದ Inspector ಉ; ಕೇಳ್ರೋ!...ಎಡ್ಗುರ್ ಕೈಯಿಂದ್ಲೂ...because of ವzzanಊ. ನನ್ನಾಕಾಪ್ಗಾನ ಎತ್ಕೊಂಡ್ಹೋಗಿ, desk ಮೇಲಿಟ್ಟಿದ್ದು ವಂದ್ ಜ್ಞಾಪ್ಕ; ಸುಲೋಚ್ನ ಸಿಕ್ಕಿಸ್ಕೊಂಡು ಹಾಳೆ ಮೇಲೆ ಹಾಳ್ಯಾಗಿ ತಿರುವ್ತಾ!, ಪ್ರಾಣಿ, ಮೂತೀಲಿ ತೋರಸ್ತಾ... 'ಹಾವ ಭಾವಗ್ಳೂಂ'ತಾರಲ್ಲ ಅವುಗಳ್ನ ಆಗಾಗ್ಯೆ ಹೆಡೆ ಎತ್ತಿ ತೋರಸ್ತಾ, ಅವುಗ್ಳ ಯಾತ್ನೇನ ನೋಡಿ. ನನ್ನ objectಊ ವ್ಯರ್ಥವಲ್ಲಾಂತ ಆನಂದದಿಂದ್ನಾನು ಉಬ್ಬಿದ್ದೊಂದ್ ಜ್ಞಾಪ್ಕ, ಕೊನೇಗೆ ನನ್ನ composition ಓದಿದ್ದೀ, ನಮಣ್ಣನ್ಜಾತೀಗೆ ಸೇರಿದ ಜಾನ್‌ವಾರು, ಕಂಭದಿಂದಿಳಿದ ನರಹರಿ ಹಾಗೆ—ಕನ್ನಡ ಪ್ರೊಯೆಟ್ರೀಲಿ ಬರುತ್ತಲ್ಲಾ—"ದಂತಾವಳಿಯ ಕಟಕಟನೆ, ಕಡಿಯುತ ಕನಲಿ"-ಬಲಗೈ ಚಾಚ್ತಾ ಜೀದಿ ಬಾಗಲ್ಕಡೆ...judgementoo!...ತುಟಿ ಅದರ್ತಾ ಉಸಿರ್ದ! **Get out at once! Don't show your face again !!**" ಮೊಖ ಏನು?. recurring deci-malsoo ಅಂತ ತಿಳ್ಕೊಂಡ್ನೇನೋ?...ನನ್ನ ಇಂಗ್ಲೀಷ್ compositionನ resultಉ. **Leave ಊ! ಸಂಬಳ ಇಲ್ದೆ!!**

ರಾಘು: Leave ಊ? without payನೇ?...ಇಲ್ಲಾ, ಫರ್ಲೋನೆ?

ಕಿಟ್ಟಿ: ಅಲ್ಲ ಹುಂಜಾ! **ಲೋಫರ್, loaf + er!** loaf = ರೊಟ್ಟಿ, plus, er = ಮಾಡೋನು! equals ರೊಟ್ಟಿ ಮಾಡೋನು. equals ರೊಟ್ಟಿ ತುಂಬೋನು! ಆಗನಿಂದ

ಈಗಿನ್‌ವರೇಗೂ ನಮ್ಮನೇ ನಾಲ್ಕು ಹೊಟ್ಟೆಗ್ಳೂ ತುಂಬ್ತಿರೋದು, ನನ್ನ sixth formನಲ್ಲಿ, ನಮ್ಮಣ್ಣನ್ಮೇಲಿನ್ ಸೇಡು ತೀರಿಸ್ಕೊಳ್ಳೋಕೇಂತ್ಲೂ, ನಮ್ಮ ಸಾಧು ಇಂಗ್ಲೀಷ್ ಟೀಚರಿಗಾದ ಅವಮಾನಾನ avenge ಮಾಡ್ಕೋ ಬೇಕೂಂತ್ಲೂ. ನಾನ್ ಬರೆದ ನನ್ನ ಇಂಗ್ಲಿಷ್ composition ಪ್ರಭಾವ ! Therefore ನಾನು ಸ್ಕೂಲು ಬಿಟ್ಟಿದ್ದು ciroo ಅಲ್ಲ—cumoo ಅಲ್ಲ - stancesoo ಅಲ್ಲ! ಕೊಬ್ಬು! fatoo!! ಬರ್‍ರೀ ಕೊಬ್ಬು! Empty fatoo!! ಬರೀ ಮಸ್ತಿ!!! ಹೈಸ್ಕೂಲಿನಿಂದ ಹಚ ಆಗೋಕೆ, welcome ಚಪ್ಪರ !

ಅಪ್ಪೂ : ಆದ್ರೇನ್ ಕಿಟ್ಟಿ...S. M. ಗ್ಳು ನಿಮ್ಮಪ್ಪನ್ಹತ್ರ ಯಾತಕ್ಕೊಗಿರೋದು ಗೊತ್ತೇ ...ತಿರ್ಗೂ ನಿನ್ನ high schoolಗೆ ಸೇರ್ಸೋಕೇ !

ಕಿಟ್ಟಿ : ದಮ್ಮಯ್ಯಾ ! ಸಾಕು ನಿಮ್ಮ ಸ್ಕೂಲುಗ್ಳೂ !..."ನಾನಾಯ್ತು!...ಇನ್ನಾನಾಯ್ತು!" ಅಂತ ! ರೆಕ್ಕೆ ಹೋದ ಹಕ್ಕಿ ತಿರಿಗಿ ರೆಕ್ಕೆ ಬಂದು ಆಜಾದಾಗಿ ಹಾರ್ತಾ ಬಂದ ಹದ್ದು,...ಗೃಧ್ರ,... ಗರುಡ !! ಭೂಪ್ತೀ ಈಗತಾನೇ ಬೇಬಾಕೂಫ್ ಹಾಗೇ, ನಿಮ್ಮೀ ಹಾಳ್ ಸ್ಕೌಟ್ ಪಂಜರದಲ್ಲಿ ನನಗೆ ನಾನೇ, ದೂಧ್‌ಫೇಡಾ-ಹಲ್ವಾ ಚಪಲಕ್ಕೆ ಸಿಕ್ಕೊಂಡು ವದ್ದಾಡ್ತಿಧೇನೆ !

(ಕೈಗಳನ್ನು ಜೋಡಿಸಿಕೊಂಡು ವ್ಯೋಮವನ್ನು ಈಕ್ಷಿಸುತ್ತಾ)
"ಅಸ್ಸೀರ್ ಐಸಿನಾಅಕ್ಕರೋ ಕಿಸೀಕು ಕುರ್ದ್‌ಗಾರ್ !
ಇಕ್ಕುರ್ದಗಾರ್ ಷುಕ್ರತೇರಾಹೈ ಹಜಾರ್ರ್ ಬಾರ್ರ್ !"

ಅಪ್ಪೂ : ಹಾಗ್ಹೇಳಿ ಏನ್ಮಯೋಜ್ನ ಕಿಟ್ಟೀ ? ತಿರ್ಗು ಬಂದ್ಬಿಡ್ತೀಯಾ ನಮ್ಮ ಸ್ಕೂಲ್ಗೆ !

ಕಿಟ್ಟಿ : ನಾನು ! ತಿರ್ಗೂ ಸ್ಕೂಲು! ಅಲ್ದೆ...ಆ ತೀರ್ಥಂಕರರೂ...viz...ಗಿಣೀ ಮೂಗು ಗಲ್ಲಾಚಾರಿ, ಮುದ್ರಾ ರಾಕ್ಷಸ...ಅಷ್ಗಂಧ ಪಿಶಾಚಿ...

(ಮಂತ್ರದಂತೆ)

Kidderminister for its carpets
Sheffield for its cutlery
Newcastle for its coal export
Northampton for its boots—ಇತಿ—!!

ಇನ್ನು attendenceಉ ! lessonsಉ ! Home workಊ ! ಸಾಕಪ್ಪಾ...ಸತ್ತರೂ ಬೇಡ...

ಅಪ್ಪೂ : Chief Scout's order ಎದುರ್ಗೆ ಇಲ್ಲಾಂಬೋದು ಇಲ್ಲ ಕಿಟ್ಟೀ ! ಇಲ್ವೇ ಇಲ್ಲ ! ಬಂದೇಬಿಡ್ತೀಯ ನಮ್ಮ ಸ್ಕೂಲ್‌ಗೆ.

ಕಿಟ್ಟಿ : ಹಾಗ್ಬಂದರ್ತಾನೇ ಏನೋ ?! ಯಥಾ Inspector ಊ ! ಯಥಾ Composition Koschanoo ! ಯಥಾ ಭೂಪ್ತೀ answer ಉ! ಯಾವ subject ಇರ್ಲಿ; ನನ್ composition ವಂದೇ ವಂದು; ಯಥಾ furlough ; ಮುಂಚಿನ ಹಕ್ಕಿ ಅಲ್ಲಾ, ಗಿಡ್ಡ ನಾನೀಗ...ಯಥಾ ಹುಬ್ಬ್ಗಂಟು...ತಥಾ ಹಚಾ...ತಿರ್ಗೂ ಆಜಾದು ! ... ಬಿಡ್ರೋ ! ನನ್ನ ಕಟ್ಬ್ಹಾಕ್ಕೊಳ್ಳೋ ಕಾಲೇಜ್ನ ಕಟ್ಬೋಕೆ ಕಲ್ಲಿನ್ನೂ ಕೈಗ್ಸಿಕ್ಕಿಲ್ಲ ಕಂಟ್ರಾಕ್ಟರಿಗೆ...ಸದ್ಯ ಸುಲೋಚ್ನದ ಮಾತ್ಗೆ...ಬೆಚ್ಚಿದ್ದು ಎದರ್ ನೋಡ್ತಿರ್ತಾರೆ...ನಮ್ಮ ಮನೇಲಿ...ನಾನು ಬೆಂಕೀಲ್ಬಿದ್ದು, ಬದುಕಿ ಬಂದು ಬೂದಿಯೋ ಇಲ್ಲ, ಬಗ್ನೋಂತ. Therefore ನಾನ್ ನಮ್ಮನೇ ಕಡೆ at once ಊ ! (ತನ್ನ ಮನೆಯ ಕಡೆ ತಿರುಗಿ ನೋಡಿ, ಥಟ್ಟನೆ)

ಅಯ್ಯಯ್ಯೋ ! ಹೀಗೇ ಬರ್ತಾಯಿಧೆಯೋ ಸುಲೋಚ್ನಾ ತಿರ್ಗೂ ! ಯಾಕೋ ಕಾಣೆ !

ಸ್ಕೌಟು ಮಾಸ್ಟರ್ : [Entering, muttering to himself, absorbed in deep thought]

ತ್ಸು ! ತ್ಸು ! ತ್ಸು ! ಏನ್ ತಿಳ್ಕೊಂಡ್ರೋ ! ?

ಕಿಟ್ಟಿ ! ಯಾರ್ರು ಸಾರ್ !, ತಿಳ್ಕೊಳ್ಳೋದೂ ?

ಸ್ಕೌಟು ಮಾಸ್ಟರ್ : ಓ!! ಹೈನೆಸ್ಸು! : ಮಕ್ಕಳ್ನ ಒಳಗೆ ಬಿಟ್ಟಿಟ್ಟು ಧಾಂಡಿಗನ್ಹಾಗೆ ಹೊರಗೆ ನಿಂತಿದ್ನಲ್ಲಾ ನಾನು...?

ಕಿಟ್ಟಿ : ಏನ್ಸಾರ್ ನಿವೂನೂವೆ? (ವಾಚು ಕೈಯನ್ನು ಚಾಚಿ ತೋರಿಸುತ್ತಾ) **ಈ** ಫಿರಾವ್ ಬಾಬತ್ತು ಮೇಲೆ ನಿಗಾನೇ...ನಿಮ್ಗೇ ? ಒಳಗೆ ಗಾನಾ ಬಂದಿದ್ರೋ...ಎಂಟು ಎಂರ್ಜಿ ಮಾರ್ಕು ದರ್ಫ ಮಾಡೋನು ನಾನು!—ನನಗೇ ದಮ್ಮು ಗುಮಾಯಿಸ್ತಿತ್ತು...ಪತ್ಲಬ್ ಜಿಸ್ಮು ನಿಮ್ದು... ಅಲ್ಲ...ನಾಜೋಕು...!

ಸ್ಕೌಟು ಮಾಸ್ಟರ್ : ಏನು ಎಂಜಿನ್ ಮಾರ್ಕೋ...ದಫನ್ನೂ...ಎಂಟು ಕಟ್ಟೂ ?

ಕಿಟ್ಟಿ : (ಚಮಕಿತನಾಗಿ ಮುಖ ಬೆಪ್ಪಾಗಿ ನಾಲ್ಗೆ ತುದಿಯನ್ನು ಕಚ್ಚಿ) ಎಂಜಿನ್ನೂ ಅಂದರೆ ..."**ಎಂಜಿನ್ನೂ**" ಸಾರ್..."**ರೈಲೆಂಜಿನ್**" ಹಾಗೇ... "**ಹೊಗೇಬಿಡೋ**" ಹಾಗೆ...ನೀರು... ಅಲ್ಲಾ "**ನಮ್ಮನೇ ನೀರ್ಮನೆ**" ಸಾರ್..."ಎಂಟು ಕಟ್ಟು ಹಸೀ ಸೌದೆ" ಹಾಕಿ...**ಹೊಗೆ** ... ನನ್ಗೆ ರಾಬೀತು ಸಾರ್ ರೋಜೀನಾ...ಆದತ್ತು ಸಾರ್ !...ಅಂಥಾ **ನನ್ಗೇ** ತಕ್ಲೀಫಾಗಿತ್ತೂ !... ಇನ್ನೂ...ಅಲ್ದೇ...ಏನ್ಸಾರ್ !? ನೀವು ಗಾನಾ ಬಾಕಲ್ನಲ್ಲಿ ನಿಂತ್ಕೊಂಡು ಬೆದ್ರಿಸಿ ಭಗಾಯಿಸ್‌ದಿದ್ದರೇ ಒಳಕ್ನಗ್ಗೀ...ನಂಪಟಾಲಂ ಪಟಾಲಮ್ಮೇ ಗುಮ್ಮು ಸಾರ್!...ಸ್ಸಾರ್! ನಾಮರ್ದ್‌ಗಳೊಂತಿ ಳ್ಕೊಂಡಿದ್ದೆ ಸಾರ್ ನಮ್ಹುಡುಗರ್ನ...ಏನ್ನ್ ಸಾರ್ ! ಹೊಸಲಲ್ಲಿ ನಿಂತ್ಕೊಂಡು ಲಡ್ಡೂಗ್ಳು ಬಟ್ವಾಡೇ ಮಾಡ್ತಿಧೇನೆ ! **ನನ್ನೇ** ದಬಾಯ್ಸೋ ಗೈರತ್ತು ಸಾರ್ ಹುಡುಗರಿಗೆ...!? **ಒಬ್ಬ Boy Scout ಸಿಕ್ಕೊಂಡಿಧಾನೇಂದ್ರೆ, ಜಾನ್ ಕೊಟ್ಟಾದ್ರೂ ಬಚಾಯಿಸ್ಬೇಕೂಂಬೋ ಗರz್ ಇಧೆ ಸಾರ್ ಬ್ರಿಗೇಡ್ಗೆ !** ನೀವೇನ್ನ್ ಕಮ್ಮೀನೇ ಸಾರ್? ನಾನೂ ಒಂದ್ನಮೂನೆ. ನಿಮ್ಮನ್ನ...ಸತಾಯಿಸಿದ್ದಿದ್ದೇನ್ ಸಾರ್...**ಕ್ಷಮಿಸಿಬಿಡಿ ಸಾರ್! ಒಬ್ಬರು** ನಿಂತುಕೊಂಡು ಹತ್ತು ಜನಾನ ದಬಾಯ್ಸಿತ್ತಿದ್ರಲ್ಲಾ ಸಾರ್ ನೀವು ? ನನ್ಗೇನೇ ನಾಚ್ಕೆ ಆಗ್ತೋಯ್ತು **ಸಾರ್** !...(ತಲೆಯನ್ನು ತಗ್ಗಿಸಿ...ಅರ್ಧ ಗದ್ಗದ ಸ್ವರದಿಂದ ತೊದಲುತ್ತ)...ಸಾರ್! ನಾನೇನೋ **ಈ** ರ್‍ಯಾಲೀ ರುಚೀಲಿ...**ಈ** Scout ಬಾಬತ್ತಿನಲ್ಲಿ ಕಮ್ಮ್ ನಿಗಾ ಆಗಿದ್ದೆ ಸಾರ್ ! **ಈಗ** ಕೈಗೆ ವಾಚೂ ಬಂದ್ಬಿಡ್ತು! ಇದೇನ್ ಫಿರಾವ್ ಬಾಬ್ತೋ ಏನೋ! ಏನಾದ್ರೂ ಆಗ್ಲಿ...ಇನ್ಮೇಲೆ ಇದ್ನೇ ಆಗಾಗ್ಯೆ ಫಿರಾಯಿಸ್ಕೊಂಡು timeಗೆ ಸರಿಯಾಗಿ ಹಾಜರಾಗೋದು... good turnooಗ್ಳೂ ಮಾಡ್ಕೊಂಡು...good turnooಗ್ಳೂಂದ್ರೆ ಸಾರ್-ಪಾಠ ಹೇಳೋ ಬಾಬತ್ತು ತುಂಡೂ !—ಹೈಸ್ಕೂಲಿಂದ ಹಚ ಆದೋನ್ನಾನು !...ಊರಲ್ಲಿ ಯಾರ ಮನೇಗಾದ್ರೂ ನುಗ್ಗಿ ಒಂದಷ್ಟು ಮದ್ದೋ, ಮುಲಾಮೋ ಭಿರ್ಕಾಯ್ಸಿ...ಗುಡ್ ಟರ್ನ್ಸ್‌ಗ್ಳೂ ಬಾಬತ್ತ್ನಲ್ಲಿ ನನ್ನ ಇZzತ್ತೂ...ತಮ್ಮ ಇZzತ್ತೂ...ನಿಭಾಯಿಸ್ತೇನೆ ಸಾರ್ ! ಇನ್ನು ಮೇಲೆ ಸ್ವಲ್ಪ ತಸ್ದಿ ತಗೊಂಡು... ತಯಾರಾಗ್ತೇನೆ ಸಾರ್ ! ಯೋಚಿಸ್‌ಬೇಡಿ ಸಾರ್ !

[ಕಣ್ಣುಗಳಲ್ಲಿ ಹನಿಗೂಡುವುದು]

ಸ್ಕೌಟು ಮಾಸ್ಟರ್ : (ಇದನ್ನು ಕೇಳಿ ಅವರ, ಕಣ್ಣುಗಳಲ್ಲಿಯೂ ಹನಿಗೂಡಿ, ನಿಟ್ಟುಸಿರಿಡು ವರು : ಆತ್ಮಗತಂ) **What a born Scout !!** Join ಮಾಡ್ದಾಗ್ನಿಂದ ಅವ್ನ careerಊ, series of good turnsoo !...and...**he does not even know it!** (ನಿಟ್ಟುಸಿರಿಟ್ಟು) **ಇದು,** ideal of a scoutoo!...

[ಎಂದು ಹೇಳಿಕೊಳ್ಳುತ್ತ ನಿಷ್ಕ್ರಮಿಸುವನು L]

[ದಳದವರೆಲ್ಲ ಈ ಸಂಭಾಷಣೆ ಕೇಳಿ ಅವಾಕ್ಕಾಗಿ. ಕಿಟ್ಟಿಯನ್ನೇ ಎವೆಯಿಕ್ಕದೆ ನೋಡಿ ತಲ್ಲೀನ ರಾಗಿರುವರು]

ಕಿಟ್ಟಿ : (ಎಚ್ಚೆತ್ತು-recovering his usual sang-froid) ಏಳ್ರೋ ಲ್ರೋ! ಗುಗ್ಗುಗಳ್ರಾ! ನಿಮ್ಗೂ ಗೂಡುಗ್ಳಿವೇ ಅಂಬೋದು ಯಾದಿಲ್ಲ್ವೆ ನಡ್ರಾತ್ರೇಲಿ. ನಡ್ರಸ್ತೇಲಿ ನನ್ನ ತಾರೀಫ್ ಮಾಡ್ತಿಧೀರ?! ಏಳೋ! therefore ನಮ್ಮ...Scouts of the Nth patrol! 'FALL IN'! (automatically the scouts obey including Raghu) ಹೊರಗ್ಬಾರೋ...ಜಂಬದ್ಕೋ! ಅಲ್ಲ...ಹುಂಜಾ! (drags Raghu out and takes his place) ಕೋರಸ್ ಕಿರ್ಲೋ, ರಾಘು. ಮನೆಗ್ಳಿಗೆ march ಮಾಡೋಣ ನೀನು ಲೀಡರು (pulls out his mouth organ) ಗುಬ್ಬಚ್ಚಿ ಹೇಳಿದ್ದಾಗೆ ನಾನು band master ಆಗ್ತೇನೆ.

[Starts playing the chorus]

ರಾಘು: ಕಿಟ್ಟಿ, ಲೇ, ಇವತ್ತ್ ರಾತ್ರೆ ನಿಮ್ಮನೇವಟ್ಟಿಗಾದ್ರೂ ನೀನು ನಮ್ಮ leader ಉ! ಕೋರಸ್ ಕಿರ್ಲು. ನಾವೂ ಕಿರ್ಲ್ತೇವೆ.

[Pulls Kitti out by his banian and takes his place]

ಕಿಟ್ಟಿ: ಜ್ಞಾಪ್ಕ ಬಂತು!, ನನ್ನ coat ಎಲ್ರೋ?

ಅಪ್ಪೂ: (producing the coat held by Shami, reverently) ನಾನ್ ಇಟ್ಕೊಂಡಿದ್ದೆ ಕಿಟ್ಟೀ.

ಕಿಟ್ಟಿ: ನನಗ್ಗೊತ್ತ್ ಅಪ್ಪೂ! ನಿಂಗ್ ನಿಗಾಂತ (putting the coat on) hopeless coatಊ! ಆದ್ರೂ ಜೋಬ್ನಲ್ಲಿ one ಕಟ್ of ಇಂಜಿನ್ನೋ,...ಅಲ್ಲ ಮಿಷೀನೂ! (puts the mouth organ to his lips) Scouts of the Nth patrol...The chorus!

(ಎಲ್ಲರೂ ಹಾಡುವರು)

Sri Rama's strength in duty
Sri Krishna's love, devotion
Give unto us the pattern
of India's perfection
For e'er, for e'er...
In danger, and distress,
There is none to be compared
With the lads of India's brilliant star
With the lads of India's brilliant star
With the lads of India's brilliant star
With their motto "Be prepared"

[ಕಿಟ್ಟಿ, turns round facing R and starts exitting, marching, playing the mouth-organ; the patrol follows him marching two

paces to Kittee's rear, their steps synchopating with the tempo at which Kittee, marching ahead, is playing the Scout Chorus]

[Curtain drops slowly on Empty Stage]

ಭರತರಂಗ

THE GENESIS OF THIS PLAY

AN EXPLANATORY EPILOGUE

"It is an ill wind that brings no one any good" is an adage that was driven home to me by the following scrap of a local rag which unknowingly helped to slove what has been, these four weeks and more, a mystery that has intrigued two great personages and not a few others of more humble status.

To discuss and decide the practicability of bringing to pass an All-India-Scout-Jambooree in Bangalore, a conference was held a month ago at the Residency, in which His Highness The Chief Scout, The Hon'ble The Resident, The Chief Scout Commissioners of Mysore and Madras, took part.

As the Officer in command of the Inner Cordon waiting on His Highness The Chief Scout, I had the privilege of witnessing the proceedings of that function. At the very outset, quite a stir positively unusual on such occasions—pervaded the air, by the absence at the appointed moment, of the invariably punctual Chief Commissioner of Scouts of Mysore. He arrived no less than fifteen minutes beyond schedule; what chagrin the distinguished company waiting might have felt, faded away in the bizaarre condition, the belated Commissioner of Scouts of Mysore, presented himself in. It was but the dignified self-control of the Royal Scout that smothered the *mise on scene* from culminating in a farcical fiasco:

Trailing a stream of slime and mire as he walked, the Commissioner reached the dias and standing at attention saluted his seniors, gruffly murmuring appologies in unintelligible accents, with turban, tunic and breeches dripping mud and moss, his face, a death mask. The importance of the occasion precluded

personalities and the conference proceeded came to a close with all the decorum characteristic of such functions, and the distinguished assemblage dispersed.

At the end, on the basis of previous acquitance, I purposed to accost the Commissioner to learn the why and wherefore of the mishap to his proverbial spick and span smartness **Cap a pie**. But the forbidding grimness of his hard countenance, which had ever looked to me as a cross between a gorilla, a tiger and a button-hook, discouraged any advances and I wisely and severely let well alone. With the newspaper cutting given hereunder coming accidentlay under my eye, the mystery ceased to be one; and I may assure the writer with all my experience of lifelong companionship with the culprit, that no power on earth, in heaven and elsewhere too, can budge him an inch from his thoughts and actions. In explanation thereof, I have given the foregoing history of an entity, who in my eyes, is a phenomenon, a freak, and yet a MAN all the time. In publicising the biography of a man who has all my life exerted a weird influence on me—body, mind, heart, soul, character and career—, I must confess here and now, that nothing short of my status of Police Officer in the Service of His Highness The Maharaja of Mysore protects me from the drastic maltreatment that is invariably meted out to any one that takes liberties with the name and personality of "Polee Kittee."! With "Jambada Kolee" now a Major and an M. C., serving with the Imperial Forces in Italy, with "Appoo" and "Shamee" both holding Commissions from His Majesty and serving overseas in the Army Medical Corps, it has fallen to the lot of the youngest of the quintette of the earliest cubs in Mysore Scout History, to present for the entertainment and earnest emulation of present-day cubs,—"Gubbatchee" 's History of a Mysore Boy Scout who carried a COMMISSIONER'S BATON in his CUB'S HAVERSACK: Mr. Hassan Krishna Rao, Chief Commissioner of Scouts, Mysore State.

Saklespur Ranganna, M.A., M.C.S.,
Dist. Supt. of Police, Bangalore.

ಈ ಪಟಿಂಗನ ಪುಂಡನ್ನು ಅಡಗಿಸುವ ಪ್ರಭುಗಳಿಲ್ಲವೆ?

ದೇಶಾಭಿಮಾನಿ ಪತ್ರಿಕೆ ಸಂಪಾದಕರಲ್ಲಿ, ದೇಶಭಕ್ತನ ವಿಜ್ಞಾಪನೆಗಳು :

ಅಯ್ಯಾ,

"ಸತ್ಯಾನ್ನ ಪರೋಧರ್ಮಃ" "ಅಹಿಂಸಾ ಪರಮೋಧರ್ಮಃ'' "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದಾಂಕಿತರಾದ ನಮ್ಮ ಮಹಾಸ್ವಾಮಿಯವರು ನಮ್ಮನ್ನಾಳುತ್ತಿರುವಲ್ಲಿ, ಮೊನ್ನೆ ಶನಿವಾರ ಪ್ರಭಾತಾನಂತರ ಸುಮಾರು ಹತ್ತು ಹತ್ತೂವರೆ ಗಂಟೆ ಸಮಯದಲ್ಲಿ, ತಾರಾಮಂಡಲಪೇಟೆಯ ಮುನಿಯಮ್ಮ ಎಂಬ ಗೃಹಣಿಯು ತನ್ನ ಎರಡು ವಯಸ್ಸಿನ ಸೀಮಂತ ಪುತ್ರನನ್ನು ಸಂಪಂಗೀ ಕೆರೆಯ ಕಟ್ಟೆಯ ಮೇಲೆ ಕೂಡಿಸಿ ತನ್ನ ಸೀರೆ ಮತ್ತು ತನ್ನ ಗಂಡನ ಬಟ್ಟೆಗಳನ್ನು ಶುಚಿ ಮಾಡುತ್ತಿರುವಲ್ಲಿ, ಅರಿವಿಲ್ಲದ ಆ ಶಿಶುವು ಅಂಬೆಗಾಲು ಇಟ್ಟುಕೊಂಡು ಇಳಿಯುತ್ತಿರುವಲ್ಲಿ ಮೆಟ್ಟಲುಗಳ ಚೂಪಾದ ಅಂಚುಗಳು ಜಾನುಗಳಿಗೆ ಘರ್ಷಿಸಿ ಘಾತವಾಗಿ ರಕ್ತೋಸ್ಫಲನವಾಗಿ ಚಾರಿಬಿದ್ದು ಜಲದಲ್ಲಿ ಪತೀತನಾದ ಪುತ್ರನ ಅಸುವನ್ನು ರಕ್ಷಿಸಲೋಸುಗ ತಾನೂ ತಜ್ಜಲದಲ್ಲಿ ಮುಳುಗಿ ಎದ್ದು ಕಿರಲಿದ ಆರ್ತನ ಧ್ವನಿಯು ಸಂಪಂಗೀ ರಸ್ತೆಯ ಮೇಲೆ ಹೋಗುತ್ತಿದ್ದ ಖಾಕೀ ಯೂನಿಫಾರಂ ಟರ್ಬನ್ ಧರಿಸಿ, ಮೋಟಾರ್ ಸೈಕ್ಲಿಸ್ಟ್ ಒಬ್ಬನ ಕಿವಿಗೆ ಬೀಳುತ್ತಲೂ, ಅವನು ಅದೇ ಸೈಕಲ್ಲನ್ನು ತಿರುಗಿಸಿ, ಸಂಪಂಗೀ ಕೆರೆ ಕಟ್ಟೆಯನ್ನು ಸೇರಿ, ಸೈಕಲ್ಲನ್ನು ಒಗೆದು, ಅಂಗಿ ಷರಾಯಿ ಬೂಟ್ಸ್ ಸಮೇತ ನೀರಿನಲ್ಲಿ ಧುಮುಕಿ, ಮುಳುಗುತ್ತಿದ್ದ ಮುನಿಯಮ್ಮನ ಕೇಶವನ್ನು ಒಂದು ಹಸ್ತದಲ್ಲಿ ಹಿಡಿದುಕೊಂಡು, ಮುಳುಗಿ ಎದ್ದ ಮುನಿಯಮ್ಮನ ಶಿಶುವಿನ ಕೇಶವನ್ನು ದಂತಾವಳಿಯಿಂದ ಕಚ್ಚಿಕೊಂಡು, ಉಳಿದೊಂದು ಕೈಯಿಂದ ದಡಕ್ಕೆ ಈಜಿ, ಇಬ್ಬರನ್ನು ಫಸ್ಟ್ಎಯಿಡ್ (First aid) ಕ್ರಮದಿಂದ ಉಪಚಾರ ಮಾಡಿ, ಸಜೀವಿಗಳನ್ನಾಗಿ ಮಾಡಿದ್ದು ಶ್ಲಾಘನೀಯವೇ ! ಆದರೂ, ಸರ್ಕಾರೀ ಯೂನಿಫಾರಂ ಹಾಕಿರುವವರ ಕರ್ತವ್ಯ ; ಡ್ಯೂಟಿ ! ಅವರಿಗೆ ನಾವು ತೆರುವ ತೆರಿಗೆಯ ಋಣ ವಿಮೋಚಕಕ್ಕೆ ದ್ವಾರ, ತನ್ನ ಕಾರ್ಯದಿಂದ ತನ್ನ ಋಣವನ್ನು ತೀರಿಸಿಕೊಂಡ ಆತನು ಆ ಕುಟುಂಬ ಸ್ತ್ರೀಯ ನಾಸಿಕವನ್ನು ಎಡಗೈ ಬೆರಳುಗಳಿಂದ ಹಿಡಿದು ಬಲಗೈಯಿಂದ ಅವಳ ಕಪೋಲವನ್ನು ತಾಡಿಸಿ ಹುಯಗಡುಬನ್ನು ಮೀರಿಸುವಂತೆ ಉಬ್ಬಿಸುತ್ತಾ... "ಇನ್ಮೇಲೆ ಹಸುಮಕ್ಕಳ್ನ ಕೆರೇಗೆ **ತರ್‍ತಿಯಾ ?**......... **ತರ್‍ತೀಯಾ?**... **ತರ್‍ತೀಯಾ?** ಮನೇಲೇ ಬಿಟ್ಬಿಟ್ಟು **ಬರ್‍ತಿಯ ?**...... **ಬರ್‍ತೀಯಾ** ? **ಬರ್‍ತೀಯಾ ?**" ಎನ್ನುತ್ತಾ, ರಾವಣಾಸುರನು ಕೂಡ ಕುಟುಂಬಿನಿಯಾದ ಸೀತಾದೇವಿಗೂ ಮಾಡದ ಅಪಕಾರವನ್ನು ಮಾಡಿ ಪ್ರಾಣಿಯನ್ನು ತಟಾಕದ ಕಟ್ಟೆಗೆ ಬಿಸರಿ, ತೊಯ್ದ uniform ಸಮೇತ ಅದೇ ಕೆರೆಯಲ್ಲಿ ಪುನಃ ಧುಮುಕಿ ಈಜಿ, ಮೋಟಾರ್ ಬೈಸಿಕಲ್ಲನ್ನು ಸೇರಿ, ದಂಡಿನ ಕಡೆಗೆ ದಂಡಯಾತ್ರೆ ಮಾಡಿದ ಈ ಧಾಂಡಿಗನನ್ನು ದಂಡಿಸುವ ದಯಾಳುಗಳು ಈ ದೇಶದಲ್ಲಿಲ್ಲವೇ ? (ಘನ ಸರ್ಕಾರದವರು ಇಂತಹ ಆಫೀಸರುಗಳನ್ನು ಶಿಕ್ಷಿಸಿ ಸರಿಯಾದ ದಾರಿಗೆ ತರುವ ಕಾರ್ಯಕ್ರಮವನ್ನು ಕೈಗೊಳ್ಳುವರೇ ?)

ಕಂಡು ನೊಂದವ.

ಬಹಿಷ್ಕಾರ

—ಬಡವರಿಗೆ—

ಪಾತ್ರಗಳು

ರಂಗಣ್ಣ	ಕಚೇರಿ ಮುನ್ಶಿ
ಲಕ್ಷ್ಮೀಪತಿ	ಈತನ ಸ್ನೇಹಿತ—ಡಾಕ್ಟರು
ವೆಂಕಟಲಕ್ಷ್ಮಮ್ಮ	ರಂಗಣ್ಣನ ಪತ್ನಿ
ನರಸು	ಹಿರಿಯ ಮಗಳು
ಕಿಟ್ಟ	ಮಗ
ಪುಟ್ಟ	ಚಿಕ್ಕ ಮಗಳು

ಅವಸಾನಕಾಲ ಪ್ರಾಪ್ತಳಾದ ರಂಗಣ್ಣನ ತಾಯಿ

ಇಬ್ಬರು ಬ್ರಾಹ್ಮಣರು

ಸ್ಥಾನ—ರಾಮಪುರ ಕಾಲ—ಆಧುನಿಕ

ಪ್ರಥಮ ರಂಗ

ಸ್ಥಾನ:—ರಂಗಣ್ಣನ ಮನೆ ಮುಂದಿನ ಕೋಣೆ.

[ಈತನ ಮುದಿ ತಾಯಿಯು ಅಂತ್ಯ ಕಾಲಾವಸ್ಥೆಯಲ್ಲಿ ಮಂಚದ ಮೇಲೆ ಮಲಗಿರುವಳು. ರಂಗಣ್ಣನು ಪಕ್ಕದಲ್ಲಿರುವನು...ವೆಂಕಮ್ಮನು ನರಸುವನ್ನೂ, ಕಿಟ್ಟಿಯು ಕೂಸನ್ನೂ ಸಂತೈಸುತ್ತಿರುವರು. ಲಕ್ಷ್ಮೀಪತಿಯು ಕೋಣೆಯ ಮಧ್ಯದಲ್ಲಿ ಸ್ತಂಭಿತನಾಗಿ ನಿಂತಿರುವನು.]

ತಾಯಿ: (ರಂಗಣ್ಣನನ್ನು ಎಡಗೈಯಿಂದ ತಬ್ಬಿಕೊಂಡು) ಹಯ್ಯೋ! ಮಗೂ...ನನ್ನ ಹದ್ನಾರ್ನೇ ವಯಸ್ನಲ್ಲಿ ವರ್ಷ ಕೂಡ ತುಂಬದ ನಿನ್ನ...ನನ್ಕೈಲಿಟ್ಬಿಟ್ಟು...(ಮಗನನ್ನು ಬಾಚಿ ತಬ್ಬಿಕೊಳ್ಳುತ್ತಾ) ನಮ್ಮಿಬ್ರರನ್ನೂ ಬಿಟ್ಬಿಟ್ಹೋದ ನಿಮ್ಮಪ್ಪಂದೇಗೆ...ಈ ಎರಡು ವರ್ಷಗಳ ಶ್ರಾದ್ಧ ತಪ್ಹೋದ್ಮೇಲೆ... ಸತ್ರೂನೂವೆ ನನಗ್ಸದ್ಗತಿ ತಾನೇ ಎಲ್ಲೀದೂ?...ಹಯ್ಯೋ!...ಕಾದಿದ್ದೂ...ಕಾದಿದ್ದೂ...ಕೊನೇಗೆ... ಮೋಸ್ಹೋದ್ನೆಲ್ಲಾ...(ಕೈಯನ್ನು ನರಸುವಿನ ಕಡೆಗೆ ತೋರಿಸಿ) ಯಾಕ್ಹುಟ್ಟಿದ್ಲೀ ಶನೀ?...(ತಗ್ಗಿದ ಧ್ವನಿಯಿಂದ) ಗಂಗೋದ್ಕ...ಗಂಗೋದ್ಕ...ಮಗೂ...ಹೋಗ್ತಿದ್ದೇನೆ...ಕಿವೀಲಿ...ನಾರಾಯಣಾ, ನಾರಾಯಣಾನ್ನು.

ವೆಂಕಟಲಕ್ಷ್ಮಮ್ಮ: (ಥಟ್ಟನೆ ಕಾಶೀ ತಾಮ್ರದ ಗಂಗಾಕುಂಭವನ್ನು ಡಾಕ್ಟ್ರಿಗೆ ಕೈಯಿಂದ ತೋರಿಸಿ) ಡಾಕ್ಟ್ರೆ ಅಕೋ! ಅಲ್ಲಿ...ಪಂಚಪಾತ್ರೆ ಉದ್ಧರಣೆ ಪಕ್ದಲ್ಲೇ ಇದೆ.

[ಲಕ್ಷ್ಮೀಪತಿಯು ಗಂಗೋದಕವನ್ನು ತಾಮ್ರದ ಚೊಂಬಿನಿಂದ ಪಂಚಪಾತ್ರೆಗೆ ಬಗ್ಗಿಸಿ, ರಂಗಣ್ಣನು ಉದ್ಧರಣೆ, ಉದ್ಧರಣೆಯಾಗಿ..."ಅಮ್ಮಾ! ಅಮ್ಮಾ!!" ಎಂದು ಹಂಬಲಿಸುತ್ತಾ, "ನಾರಾಯಣ, ನಾರಾಯಣಾ" ಎಂದು ಜಪಿಸುತ್ತಾ, ತಾಯಿಯ ಬಾಯಿಗೆ ಗಂಗೆಯನ್ನು ಹಾಕುವನು.]

ನರಸು: (ತಾಯಿಯ ಭುಜಗಳನ್ನು ಹಿಡಿದು ಕುಲುಕಿ ಅಲುಗಿಸುತ್ತಾ) ಅಮ್ಮಾ!...ನನ್ನಾಕ್ಕೈಲಿತಾಳಜ್ಜಿ...ಸಾಯೋವಾಗ?

ವೆಂಕಮ್ಮ: (ನರಸುವನ್ನು ತಬ್ಬಿಕೊಂಡು ತಗ್ಗಿದ ಧ್ವನಿಯಿಂದ) ಷ್! ಸುಮ್ನಿರ್ಕಂದ... ಈಗ್ಸುಮ್ನಿರು.

ತಾಯಿ: ನಾ...ರಾ...ಯ...(ಪ್ರಾಣಗಳನ್ನು ಬಿಡುವಳು.)

ರಂಗಣ್ಣ: (ತಾಯಿಯ ದೇಹದ ಮೇಲೆ ಮುಖವನ್ನು ಹೊರಳಿಸುತ್ತಾ) ಹಯ್ಯೋಮ್ಮಾ!... ಸಾಯೋವಾಗ್ಲೂಡಾ...ಸದ್ಗತಿ ಮೇಲ್ಸಂದೇಹ ಪಟ್ಕೊಂಡ್ಸತ್ಯಾ?!!... ಸಾರ್ಥಕ್ವಿದೇನೇ ... ನಾನ್ಹುಟ್ಟಿದ್ದಕ್ಕೆನ್ಹುಟ್ಟೇಲಿ...(ನರಸುವನ್ನು ಸೂಚಿಸಿ) ಯಾಕ್ಹುಟ್ಟಿದ್ಲೀ ಶನೀ?...

ನರಸು: (ತಾಯಿಯ ಭುಜಗಳನ್ನು ಹಿಡಿದು ಕುಲುಕಿ ಅಲುಗಿಸುತ್ತಾ) ಅಮ್ಮಾ...ಅಪ್ಪೂನೇ!!... ಬಯ್ತಾನೇ...ಏನಮ್ಮಾ...ನಾನ್ಮಾಡಿದ್ದಪ್ಪು?

ವೆಂಕಮ್ಮ: (ನರಸುವಿನ ಹಣೆಯನ್ನಾಘ್ರಾಣಿಸುತ್ತಾ ಕಣ್ಣೀರು ಸುರಿಸುತ್ತಾ ಗದ್ಗದ ಧ್ವನಿಯಿಂದ) ದಮ್ಮಯ್ಯ...ನನ್ಕಂದ... ಸದ್ಯ ಈಗ್ಸುಮ್ನಿರು...

ಲಕ್ಷ್ಮೀಪತಿ: (ಮಂಚವನ್ನು ಸಮೀಪಿಸಿ ಮೃತಳಾದಾಕೆಯ ಕಣ್ಣುಗಳನ್ನು ಮುಚ್ಚುತ್ತಾ) ರಂಗಣಾ ... You must be brave...ನೀನೇ ಹೀಗೆ...give way...ಮಾಡ್ಬಿಟ್ರೆ ಮಿಕ್ಕೋರ ಗತಿಯೇನು? (ರಂಗಣ್ಣನನ್ನು ಮಂಚದಿಂದೀಚೆಗೆ ಸೆಳೆಯುತ್ತಾ)...ಇನ್ನಾಕೆ troubles ಏನು... ಮುಗೀತು!

ರಂಗಣ್ಣ: (ರಂಗಸ್ಥಳದ ಮುಂಭಾಗವನ್ನು ಸೇರಿ ಲಕ್ಷ್ಮೀಪತಿಯನ್ನು ತಬ್ಬಿಕೊಂಡು. ಹಣೆಯನ್ನು ಬಡಿದುಕೊಳ್ಳುತ್ತಾ)...Troubles ಮುಗೀತೂ !!...ಹುಯ್ಯೋ ! ಲಕ್ಷ್ಮೀಪತೀ...troubles ಎಲ್ಲ್ಮುಗೀತು?...ನಾಳೇ...ಶವಾನ...ಸಾಗ್ಸೋಕೆ...ಜನಗ್ಳು...ಸಿಕ್ಕೋಕಲ್ಲಾ !!! (ಜ್ಞಾನ ತಪ್ಪಿ ಲಕ್ಷ್ಮೀಪತಿಯ ಹೆಗಲ ಮೇಲೆ ಒರಗುವನು.)

[ಪರದೆಯು ಥಟ್ಟನೆ ಬೀಳುವುದು.]

ದ್ವಿತೀಯ ರಂಗ

[ಸ್ಥಾನ: ರಾಮಪುರದ ಒಂದು ಬೀದಿ.]

(ಕಾಲ: ಎರಡು ವರ್ಷಗಳ ಅನಂತರ. ರಂಗಣ್ಣನ ತಾಯಿಯ ಶ್ರಾದ್ಧದ ದಿನ.)

[ರಂಗಣ್ಣನು ತಲೆಯ ಮೇಲೆ ಗಂಟುಗಳನ್ನು ಇಟ್ಟುಕೊಂಡಿರುವ ಇಬ್ಬರು ಬ್ರಾಹ್ಮಣರೊಂದಿಗೆ ಪ್ರವೇಶಿಸುವನು.]

ರಂಗಣ್ಣ: ನಮ್ಮನೇ ಹೆಚ್ಗಟ್ಲೇಗೆ ಇವತ್ತು ಬ್ರಾಹ್ಮಣ್ರು ಸಿಕ್ಕೋದಸಾಧ್ಯ ಅಂತ ನಿಶ್ಚಯಿಸ್ಕೊಂಡು. ನಾನ್ಕೂತದ್ದೂ ದಾರೀ ತಪ್ಪಿ, ನಮ್ಮೂರ್ಕಡೆ ತಿರ್ಗಿ. ಹಸ್ದು ನೀವ್ಗಳು ನನ್ಸೇರಿದ್ದೂ. ಇವೆರ್ಡೂ ಏಕ್ಕಾಲದಲ್ಲೆ ಹೊಂದಿದ್ದು...ನೀವ್ಹೇಳೋ ಹಾಗೆ, ದೈವನಿಯಾಮ್ಕ!...ಆದ್ರೆ...ನಮ್ಮನೇ ಶ್ರಾದ್ಧಾನ ಜರಗ್ಸೋಕೆ ನನಗಿರೋ ಆತುರದಲ್ಲಿ, ತಡೀಲಾರ್ದ ಹಸ್ವನ್ನ ತೀರ್ಸ್ಕೊಳ್ಳೋಕಾತುರ್ಪಡ್ತಿರೊ ನಿಮ್ಮನ್ನ ನಮ್ಮನೇ ನಿಮಂತ್ರಣಕ್ಕೊಪ್ಪಿಸ್ಬಿಟ್ಟು...ಅದ್ರಿಂದ ಮುಂದೆ ನಿಮಗೊದಗ್ಬಹುದಾದ ಅಪಾಯಕ್ಕೆ ನಿಮ್ಮನ್ಗುರಿ ಮಾಡೋದು ನನಗೆ ಧರ್ಮವಲ್ಲ, ಬ್ರಾಹ್ಮಣ್ಯವಲ್ಲ. ಆದ್ರಿಂದ ನನ್ನ ಪೂರ್ವೋತ್ತರಾನ್ಕೇಳಿ ಮನಸ್ಸಿಗೆ ಮಂದಟ್ಮಾಡ್ಕೊಂಡು, ಈ ಕೆಲಸದಿಂದ ನಿಮ್ಹೆಗಲಿಗ್ಬತ್ಹುದಾದ ಜವಾಬ್ದಾರೀನ ವಹಿಸ್ಕೋಬೇಕೇ ಹೊರ್ತು ನೀವು ಕೇವ್ಲ ಕ್ಷುತ್ಪೀಡೇನ ತೀರಿಸ್ಕೊಳ್ಳೋ ಆತುರದಲ್ಲಿ...ದುಡುಕಬಾರ್ದು....ನನ್ಹೆಸ್ರು ರಂಗಣ್ಣ, ಗೋತ್ರ ವಾಸಿಷ್ಠ.

೧ನೇ ಬ್ರಾಹ್ಮಣ: ಮತ್ತಿನ್ನೇನ್ಬೇಕು, ಸ್ವಾಮಿ? ವಾಸಿಷ್ಠ ಗೋತ್ರದ ಬ್ರಾಹ್ಮಣನ್ಮನೇ ನಿಮಂತ್ರಣಕ್ಕೊಪ್ಕೊಂಡಾಕ್ಷಣ್ವೇ ಅಪಾಯಾ ಅಂದ್ರೇನ್ನಮಗೆ...?ಅದೇನ್ಜವಾಬ್ದಾರಿ ಹತ್ತೀತು ನಮ್ಹೆಗಲ್ನ...ನಾವೆಲ್ಲ...ಬ್ರಾಹ್ಮಣ್ರು ತಾನೆ?

೨ನೇ ಬ್ರಾಹ್ಮಣ: ಹೌದು ಭಟ್ರೆ...ಹೌದು ಸ್ವಾಮಿ. ಅದೇ ನನ್ಗೂ ಆಶ್ಚರ್ಯ...ನಿಮ್ಮನೇ ಬ್ರಾಹ್ಮಣಾರ್ಥಕ್ಕೊಪ್ಕೊಂಡು ನಿಮ್ಮಿವತ್ತಿನ್ಕೃತ್ಯಾನ ನಡ್ಸಿದ್ರಿಂದ ನಿಮ್ಪುರಾರ್ಥದಲ್ಲಿ ನಾವೂ ಭಾಗಿಗಳೇ ಹೊರ್ತು...ಅಪಾಯ ಎಂಥಾದ್ದು ನಮಗೆ?

ರಂಗಣ್ಣ: ಕೇಳೀ...ಇವತ್ತಿನ್ಕೆಲ್ಸಾನ ನೀವ್ಗಳ್ ನಡ್ಸಿಕೊಟ್ರೆ, ನಿಮಗೊಂದ್ವೇಳೆ ಒದಗೋ ಅಪಾಯಾನ...ಒಂದೇ ಮಾತ್ಲಿ ಹೇಳ್ಬಿಡ್ತೇನೆ...ಬಹಿಷ್ಕಾರ...ನನಗ್ಯಾವ ಸನ್ನಿಧಾನದಿಂದ ಬಹಿಷ್ಕಾರ ಬಿದ್ದಿದೆಯೋ ಅದೇ ಸನ್ನಿಧಾನದಿಂದ ನಿಮ್ಗೂ ಬೀಳ್ಬಹುದು. ಬಹಿಷ್ಕಾರ !!

೧ನೇ ಬ್ರಾಹ್ಮಣ: (ಬೆಚ್ಚಿಬಿದ್ದು) ಬಹಿಷ್ಕಾರ!? ನಿಮಗೆ ಸನ್ನಿಧಾನದಿಂದ!?...ಕ್ಷಮ್ಸೀ. ಎಷ್ಟೋ ಕೃತ್ರಿಮಾನ ಮಾಡ್ದೋರ್ನ ಕರುಣ ದೃಷ್ಟಿಯಿಂದ ನೋಡಿ...ಅಲ್ಪಸ್ವಲ್ಪ ಪ್ರಾಯಶ್ಚಿತ್ತದಿಂದ್ಲೇ ಪುನಃ ಶುದ್ಧಿ ಮಾಡಿ ಬ್ರಾಹ್ಮಣ್ಕ್ಕೇನುಳಿಸ್ಕೊಟ್ಟು ಬದಕ್ಸಿರೋ ಶಾಂತಿಮೂರ್ತಿಯಾದ ಸನ್ನಿಧಾನ...ನಿಮ್ಮಂಥವರಿಗೇಂದ್ರೇನು ?! ಬಹಿಷ್ಕಾರಾಂದ್ರೇನು?...ನೀವ್ಮಾಡಿದ್ಮಹತ್ಪಾಪ. ಕೋಪಿಸ್ಕೋಬೇಡಿ. ಏನ್ ಬ್ರಹ್ಮತ್ಯವೇ. ಸ್ತ್ರೀಹತ್ಯವೇ. ಶಿಶುಹತ್ಯವೇ...ಇಲ್ಲಾ. ನೀವೇನು ಮಾಂಸಾದರೇ? !...ಅರ್ಥ್ವಾಗ್ಲಿಲ್ಲಾ?...

ರಂಗಣ್ಣ: ದಯಪಿಟ್ಕೇಳೀ, ನೀವ್ಹೇಳೋ ಹತ್ಯಗಳ್ನ ನಾನ್ಮಾಡಿದ್ದೇ ಆದ್ರೆ, ಸನ್ನಿಧಾನ ಇಲ್ಲೀ ಸರ್ಕಾರಾನೇ ಗಲ್ಲಿಗ್ಹಾಕ್ತಿತ್ತನ್ನ! ಇನ್ ಮಾಂಸ ಭಕ್ಷಣ್ನೋ...ಮಾಂಸಭಕ್ಷಿಗ್ಳು. ಮಧುಪಾಯಿಗ್ಳು ಆದ ಎಷ್ಟೋ ಧನ್ವಂತ ಬ್ರಾಹ್ಮಣ್ರಿಗೆ ಇರೋ ಧನ ನನಗೂ ಇದ್ದಿದ್ರೆ, ಅವರಿಗುಳಿದಿರೊ ಬ್ರಾಹ್ಮಣ್ಯ ನನಗೂ ಉಳೀತಿತ್ತು...ನಾನೋ ನನ್ಧರ್ಮದಲ್ಲೂ ನನ್ನಾಚಾರದಲ್ಲೂ ಎಷ್ಟ್ರ ಮಟ್ಟಿಗೆ ಈ ಕಲಿಯುಗದಲ್ಲಿ. ಬ್ರಾಹ್ಮಣ, ಗೃಹಸ್ಥ, ತನ್ಜಾತೀ ಧರ್ಮಾನ ಜರಗ್ಸೋಕೆ ಸಾಧ್ಯವೋ ಅಷ್ಟನ್ನೂ, ಎಳೆಬಿಡದೇ ನಡಸ್ತಾ ಬಂದಿದ್ದೂನೂವೇ...ನನ್ಪಶ್ಚಾಪ ನನಗಾಲಕ್ಷ್ಮೀಕಟಾಕ್ಷವಿಲ್ಲದ್ದು. ಧನಪಿಶಾಚಿ ಬಾಯ್ಬಿಟ್ಟು. ಆ ಧನದಾವೇಶ್ದಲ್ಲಿರೋ ಸಮಾಜ, ಧನವಿಲ್ದಿರೋ ನನ್ಮೇಲೆ ಎತ್ತಿರೋ ಕೈಯ್ನ...ಸನ್ನಿಧಾನಾನೂ. ಅನು ಮೋದಿಸಿ, ಧನಸಂಚಯನ ಮಾಡೋ ವೈಶ್ಯವೃತ್ತೀನ್ನೂ ಸ್ವಧರ್ಮದಲ್ಲಿ ಸಂಯೋಗಿಸಿದ ಬ್ರಾಹ್ಮಣ ಬ್ರಾಹ್ಮಣ್ನೇ ಹೊರ್ತು, ಧನ್ವಿಲ್ದ ಬ್ರಾಹ್ಮಣ ಅಬ್ರಾಹ್ಮಣಾಂತ ತೀರ್ಮಾನ್ಸಿ, ಬಹಿಷ್ಕಾರಾನ ಕರುಣಿಸಿದ್ದು ...ತಾವ್ಹೇಳ್ದ ಕರುಣಾಪೂರಿತರಾದ ಶಾಂತಿಮೂರ್ತಿ...ಸನ್ನಿಧಾನ... **ಈ ಕಾಲ್ದಲ್ಲಿ ಭಾಗ್ಯವಂತ್ರಿಗೆ ಬ್ರಾಹ್ಮಣ್ಯೇನೇ ಹೊರ್ತು, ಭಾಗ್ಯವಿಲ್ದ ಬಡವ್ರಿಗೆ....ಬಹಿಷ್ಕಾರ**...ನನ್ಚರಿತ್ರೇನ ಹೇಳ್ತೀನಿ... ಅದನ್ನ ತಾಳ್ಮೆಯಿಂದ್ಕೇಳಿದ್ಮೇಲೇನೇ ತಮ್ಮುಂದಿನ್ಕ್ರಮಾನ ಯೋಚ್ಸಿ ನಿರ್ಣಯಿಸ್ಕೊಳ್ಬೇಕು. ಸನ್ಗೃಹಸ್ತ ಧರ್ಮಾನ ಯಥಾವಿಧಿ ಜರಗುಸ್ತಿದ್ದೆ...ನನ್ಹೊಟ್ಟೇಲ್ಹುಟ್ಟಿದ್ಮಗ್ಳು ವಿವಾಹವಯಸ್ನ ಹೊಂದಿದಾರಭ್ಯ... ವರನ್ನಿಶ್ಚಯ್ಸೋಕೆ ನಾನ್ಪಟ್ಕಷ್ಟ ಅಷ್ಟಿಷ್ಟಲ್ಲ...ಆದ್ರೆ ನಾನ್ಮೇಲ್ಹೇಳ್ದ್ಹಾಗೆ ಧನ ಪಿಶಾಚೀಗೆ ದಾಸರಾದ ಸಮಾಜ ಏರ್ಪಡ್ಸಿರೋ ವರಶುಲ್ಕಾ ಒದಗ್ಸೋ ಹಣ, ಕೇವ್ಲ ಬಡ ಬ್ರಾಹ್ಮಣ್ನಾದ ನನ್ನಲ್ಲಿ ಇಲ್ಲದ್ರಿಂದ ವರ ಸಿಕ್ಲಿಲ್ಲ...ಸಮಾಜ ಸನ್ನಿಧಾನಗಳ ಏರ್ಪಾಟಿಗೆ ವಳಪಡ್ದ ಪ್ರಕೃತಿ ನನ್ಮೇಲ್ಕನಿಕರ್ವಿಲ್ದೇ ಕಾಲ ಕ್ರಮೇಣ ನನ್ಪುತ್ರೀನಾ ರಜಸ್ವಲೆಯನ್ನಾಗಿ ಮಾಡ್ಬಿಟ್ಲು...ಇನ್ನು, ಅವಿವಾಹಿತಳಾದ ರಜಸ್ವಲೇನ ಮನೆಯಿಂದ ವದ್ದೋಡಸ್ದೆ ಇರೋ ಬ್ರಾಹ್ಮಣ, ಚಂಡಾಲ್ನಿಗೆ ಸಮಾನ ಅಂತ ತೀರ್ಮಾನ್ಸಿ ಬಹಿಷ್ಕಾರ ಕರುಣ್ಸಿದ್ದು...ಸನ್ನಿಧಾನ...ಇದ್ರ ಫಲ ಎರ್ಡು ವರ್ಷದ ಶ್ರಾದ್ಧ ತಪ್ಪೋಯ್ತು ನನ್ತಂದೇಗೆ. ಆಮೇಲ್ನನ್ನತ್ನಿ ನನ್ಕೈಯಿನ್ಪಿಂಡ ಮುಟ್ದೇ ಇರೋ ನಮ್ತಂದೇನ ಸೇರೊ ವಿಷ್ಯದಲ್ಲಿ ಸಂದೇಹ ಪಟ್ಕೊಂಡು ಪ್ರಾಣ ಬಿಟ್ಲು. ಅವ್ಳು ಹೋದ್ಮೇಲೋ ನನ್ನೈಹಿಕ ಸ್ಥಿತಿ ಸ್ವಲ್ಪ ಗುಣ್ವಾಗಿ, ಸರ್ಕಾರಿ ಉದ್ಯೋಗದಲ್ಲಿ ಇರೋ ನನ್ಗೆ ವರ್ಮಾನ ಹೆಚ್ಚುತ್ಲೂನೂವೆ...ಮಿಕ್ಮನೆಗ್ಳಲ್ಲಿ ಎಂಟಾಣೆಗೆ ಬಿಡೋ ತರ್ಪಣಕ್ಕೆ ಮುಂದೊದಗ್ಬಹುದಾದ ಪ್ರಾಯಶ್ಚಿತ್ತಕ್ಕೇಂತ ಎಂಟ್ರೂಪಾಯಿ ನನ್ನಿಂದ ಸುಲ್ಕೊಂಡು, ಶ್ರಾದ್ಧಕ್ಕೂನೂವೇ ಮಿಕ್ಕೋರ್ಮನೇಲ್ಸಂಪಾದ್ಸೋದ್ರ ಹತ್ರಷ್ಟು ನನ್ಹತ್ರ ಎಳ್ಕೊಂಡು ಈ ಎರ್ಡು ವರ್ಷ್ದಿಂ ನಮ್ಮನೇ ಕೃತ್ಯಗಳ್ನ...ನನಗ್ಬಹಿಷ್ಕಾರ ಬಿದ್ದಿದ್ರೂನೂವೇ ಸಾಂಗೋಪಾಂಗ್ವಾಗಿ ನಡಸ್ತಲೇ ಇಧಾರೆ, ಬ್ರಾಹ್ಮಣ್ರು. ಅದೇ ಪ್ರಕಾರ ನಿಮ್ಗೂನೂ ಕಟ್ಲೆ ಏರ್ಪಡ್ಸಿರೋ ಸಂಭಾವ್ನೆಗೆ ಹತ್ರಷ್ಟು ಒದಗ್ಸೋಕ್ನಾನೂ ಸಿದ್ಧ. ಆದ್ರೆ ನಿಮಗಿದನ್ನೆಲ್ಲಾ ವಿವರಸ್ದೇನೇನೆ ನಿಮ್ಕೈಯಿಂದ ನನ್ಸತ್ಕಾರ್ನ್ಮಾಡ ಸ್ಕೊಂಡು ಮುಂದಕ್ಕೆ ನಿಮ್ಮನ್ನೂ ಸಿಗ್ಹಾಕಿದ ಪಾಪ ನನ್ತಲೇಮೇಲೆ ಬೀಳ್ಬಾರ್ದು ಅಂತ ವಂಚ್ನೆ ಇಲ್ದೆ ವಿವರ್ಸಿದ್ದು. ನನ್ಚರಿತ್ರೇನ...ಅಕೋ ನೋಡಿ...ಈ ಬೀದಿಯುದ್ದಕ್ಕೂ ಎಡ್ಗಾರ್ಲುಗಳೂ...ನಮ್ಜ್ಞಾತಿಗ್ಳ ಮನೆಗ್ಳು...ಇವ್ರುಗಳೊಂದೊಂದ್ಮನೇಲೂ, ಅನ್ಯೋನ್ಯ ಐಕ್ಮತ್ಯಗಳ್ನ ಕೊಡ್ದಿದ್ರೂನೂವೇ. ಪರಸ್ಥಳದ ಬ್ರಾಹ್ಮಣ್ರಿಗನ್ನಾಹಾಕೋ ಯೋಗ್ತೆ ಕೊಟ್ಟಿಧಾನೇ ದೇವ್ರು ನಂಕುಟುಂಬಕ್ಕಿಲ್ಲಾ!...ಆದ್ರಿಂದ ಒಂದೊಂದ್ಮನೇಲೂ ವಿಚಾರ್ಸಿ...ನನ್ಚರಿತ್ರೇನ ಚನ್ನಾಗರಿತು ನನ್ಜ್ಞಾತಿಗಳ್ಕಥೇನೂ ಕೇಳಿದ್ಮೇಲೆ. ನಿಮ್ಮನ ಸ್ಸಂಪೂರ್ಣ್ವಾಗೊಪ್ಪಿ...ನಮ್ಮನೇ ಕರ್ಮಗಳ್ಗೊಪ್ಕೊಂಡು...ನನ್ಪಿತೃಗಳಿಗ್ಪಿಂಡಾನ್ನಲ್ಪೋನ ಸಹಾಯ ನ್ಮಾಡೋಕೆ ನಿಮಗಿಷ್ಟ್ವಾಗಿದ್ಪಕ್ಷಕ್ಕೇನೇ... ನನಗೂ...ನನ್ಗ್ಹಳಿಣೀಗೂ...ನಂಪಿತೃಗಳಿಗೂ... ತೃಪ್ತೀ ಅಂತ್ನಾನ್ಹೇಳ್ಬೇಕಾದ್ದನ್ನಾರ!...ನಾವೀಗ್ಹಾದ್ಬಂದ ಕಾಳಮ್ಮನ್ಗುಡಿ ಪ್ರಾಕಾರ್ದಲ್ಲೇ ಕಾದಿರ್ತೇನೆ. ಹೋಗ್ಬನ್ನಿ.

ಬ್ರಾಹ್ಮಣ್ರು: ಅದಕ್ಕೇನು ಸ್ವಾಮಿ? ನಿಮ್ಮಿಷ್ಟವಿದ್ದಂತೇ ಆಗ್ಲಿ.

[ರಂಗಣ್ಣನು ಹಿಂದಕ್ಕೂ, ಬ್ರಾಹ್ಮಣರು ಮುಂದಕ್ಕೂ ಹೋಗುವರು.]

ತೃತೀಯ ರಂಗ

(ಸ್ಥಾನ: ರಂಗಣ್ಣನ ಮನೆ ಮುಂದಿನ ಕೋಣೆ.)

[ರಂಗಣ್ಣನ ಐಹಿಕ ಸ್ಥಿತಿಯು ಗುಣವಾಗಿರುವುದು ಕೋಣೆಯಲ್ಲಿ ಏರ್ಪಡಿಸಲ್ಪಟ್ಟಿರುವ ಕುರ್ಚಿ, ಮೇಜು, ನಿಲುಗನ್ನಡಿ ಇತ್ಯಾದಿಗಳಿಂದ ವ್ಯಕ್ತಪಡುವುದು.]

ಕಾಲ: ದ್ವಿತೀಯ ರಂಗದ ಕಾಲ.

[ವೆಂಕಟಲಕ್ಷ್ಮಮ್ಮನೂ ನರಸುವೂ ಪ್ರವೇಶಿಸುವರು.]

ನರಸು: ಅಮ್ಮಾ, ಅನ್ನತ್ತಪ್ಲೇನಿಳ್ಸಿ...ಗಂಜೀ ಬಸ್ತದ್ದಾಯ್ತು...ತರ್ಕಾರಿ...ಗಡ್ಡೆಗೆಣ್ಸುಗ್ಳು ಬೇಯ್ತಾ ಇವೆ...ಇನ್ನೇನಮ್ಮಾ?

ವೆಂಕಮ್ಮ: ಬಾಳೇಯೆಲೆ ಕಟ್ಬಿಚ್ಚಿಡು...ಇದೋ ಬಂದೆ ನಾನೇ (ನರಸುವು ನಿಷ್ಕ್ರಮಿಸುವಳು)...ಕಿಟ್ಟೂ ಯಾಕ್ಬರ್ಲಿಲ್ವೋ!! ಇನ್ನೂ...ಇನ್ನಿವರ್ಗ್ಹೋದ್ಕೆಲ್ಸ್ವೇನಾಯ್ತೋ ಕಾಣ್ಲಿಲ್ಲಾ...ಇದ್ಯಾವ ಪುರಾಕೃತ ಪಾಪದ್ಫಲ್ವೋ...ಇದೆಂಥಾ ಪರೀಕ್ಷೆಯೋ...ದೇವ್ರೇ ಬಲ್ಲ...ಸದ್ಯ ಈವತ್ತಿನ್ಕರ್ಮಕ್ಕೆ ಇಬ್ರುಬ್ರಾಹ್ಮಣ್ರು ಸಿಕ್ಕಿದ್ರಲ್ಲಾ ಆದ್ಹಾಗಾಯ್ತು...(ಕಣ್ಣುಗಳಿಂದ ಕೇಳುತ್ತಾ) ಯಾರು! ಇವ್ರೇನೋ...ಅಲ್ಲಾ...ಓ...ಕಿಟ್ಟೂನೇ...!

ಕಿಟ್ಟೂ: (ಪ್ರವೇಶಿಸಿ) ಇಕೋಮ್ಮಾ ಪಂಚೆಗ್ಳು...ಇನ್ನೇನ್...ಸ್ನಾನಾ ಮಾಡಿ...ಧೋತ್ರಗಳ್ನ ನೆನಸಿ ಒಣಗ್ಹೋದ್ತಾನೆ?

ವೆಂಕಮ್ಮ: ಹೂಂ.

ಕಿಟ್ಟೂ: (ಬೀದಿಬಾಗಿಲ ಕಡೆ ತಿರುಗಿ) ಅಕ್ಕೋ ಅಪ್ಪಾ ಬಂದ...ಮುಖಾನ್ನೋಡಿದ್ರೆ, ಬ್ರಾಹ್ಮಣ್ರು ಸಿಕ್ಕಿದ್ಹಾಗ್ಯೇ ಕಾಣತ್ತೆ. ನಾನಿನ್ ಸ್ನಾನಕ್ಹೊರಡ್ತೇನಮ್ಮಾ; ಹಂಡೇಲ್ಲ್ನೀರಿಧೆ ತಾನೆ?

ವೆಂಕಮ್ಮ: ಹೂಂ ನೀರೂ ಸೇದಿ...ಹಂಡೇನೂ ತುಂಬಿ...ಕಟ್ಗೇನೂ ತಾನೆ ವಡ್ಡು...ಕಾಸಿಟ್ಟಿದಾಳಪ್ಪಾ...ನರ್ಸು...

[ಕಿಟ್ಟೂ ನಿಷ್ಕ್ರಮಿಸುವನು. ರಂಗಣ್ಣನು ಪ್ರವೇಶಿಸುವನು.]

ವೆಂಕಮ್ಮ: ಸಿಕ್ಕಿದ್ರೇ...ಬ್ರಾಹ್ಮಣ್ರು! ?

ರಂಗಣ್ಣ: (ಎಗತಾಳಿಯಿಂದ) ಸಿಕ್ಕಿದ್ರಾಹ್ದು...ಅಪ್ರವ್ರು...ಬ್ರಾಹ್ಮಣ್ರೋ! ಅಲ್ವೋ!...ನನಗಿನ್ನೂ...ಸಂದೇಹವೆ!

ವೆಂಕಮ್ಮ: (ಆತುರದಿಂದ) ಇದೇನಿದೂ?...ಅರ್ಥ್ವಾಗ್ಲಿಲ್ಲ ನನ್ಗೆ...ಯಾರದು...ವ್ರೊಫ್ಕೊಂಡಿರೋದು...ನಮ್ಮೂರಲ್ಲಿ?...ನಮುಗ್ಗಿಳಿದವ್ರು?

ರಂಗಣ್ಣ: ಯಾರೇನೂ? (ತಾತ್ಸಾರವಾಗಿ) ಈ ವೂರ್ನೋರೂಂಟೋ ಚಪ್ಲ...ಇನ್ನೂ ಇಟ್ಕೊಂಡಿದೀಯಾ ನಿನ್ಮನಸ್ನಲ್ಲಿ? ಬೆಳಗ್ಗಿಂದಾ ತಿರ್ಗಿ ತಿರ್ಗಿ...ವೂರ್ಬಾಕ್ಲು ಸೇರಿ...ಸುಂಕದ್ಕಟ್ಟೇಲ್ಕೂತಿದ್ದೆ...ಕಾಲ್ಹೋತು!...ಬಂದ್ಸೇರಿದ್ರುಬ್ರು ಪರಸ್ಥಳ್ದ ಬ್ರಾಹ್ಮಣ್ರು...ಕೇಳಿದರ್ಕ್ಕಥಾ ಪ್ರಕಾರ...ವೂರ್ವ್ಹಾಗಿಧೆ...ಮಳೆ ಹ್ಯಾಗೆ...ಬೆಳೆ ಹ್ಯಾಗೆ ಜನಸಂಖ್ಯೆ ಜನಾರೋಗ್ಯ...ಅಮಲ್ದಾರ್ರ ಹೆಸ್ರು...ಕೊನೇಗೂನೂ...ಯಥಾಪ್ರಕಾರವಾಗ್ಯೇ ಮುಟ್ಸೇ ಮುಟ್ಸಿದ್ರು...ಪ್ರಶ್ನೇನಾ...ಊಟದನ್ನೂಲ್ದ ವಿಷ್ಯಾನ...ಇನ್ನೇನು

ಹೇಳ್ಕೊಂಡೆ ಹಣೇಬರಾನ...ನಿಮಂತ್ರಣಕ್ಕೇಂತ...ಆಡ್ತಿದ್ನನ್ನ ಬ್ರಾಹ್ಮಣ್ರ ಬೇಟೇನಾ! ಇನ್ನೊಪ್ಕೊಳ್ಳೋಕೇನವರಿಗಭ್ಯಂತ್ರ!...ಊರ್ಕಡೆ ಕಾಲ್ಹಾಕ್ತಾ...ಹಣ್ಣಾರೋದು!...ಸಕ್ರೇಪಟ್ನದಲ್ಬೀಳೋದು!... ಹಾಲ್ನಲ್ಬಿವ್ಹೋದು, ಅಂಬೋ ಉಪ್ಮಾನಾನ; ನಾನ್ಪಡ್ಕಿ ದಣ್ದು, ಸುಂಕದ್ಕಟ್ಟೇಲಿ ಕೂತಿದ್ದದ್ದಕ್ಕೂ, ಅವ್ರಾನೂ ಆ ಕ್ಷಣ್ವೆ ಬಂದು ನನ್ನಂಧ್ಸಿದ್ದಕ್ಕೂ, ಹೊಂದಿದ್ದು, ದೈವನಿಯಾಮ್ಕ ಅಂತ ಹೇಳ್ಕೊಳ್ತಾ ಬಂದ್ನೇರಿದ್ವಿ ... ನಮ್ಜ್ಞಾತಿಗ್ಳ ಸರ್ಧದ್ನ ...ಇನ್ನೇನ್ನಿನಗೊತ್ತಿಲ್ಲದ್ದು!? ... ಬಂತು ...ಹೋದ್ವರ್ಷದ ಶ್ರಾದ್ಧದ ಜ್ಞಾಪ್ಕ!...ಬಂದ್ಬ್ರಾಣ್ರನ್ನೆಲ್ಲಾ...ಬಹಿಷ್ಕಾರದ ಗೊಗ್ಗಯ್ಯನ್ತೋರ್ಸಿ, ಹೆದರ್ಸೋಡ್ಸಿದ್ದು!... ಇನ್ನಸ್ಜ್ಞಾತಿಗ್ಳ ಬಾಯಿಂದ್ಹೊರಟು ಅವ್ರು ತಿಳ್ಕೊಳ್ಳೋಕ್ಬದ್ಲಾಗಿ...ನಾನೇ ತಿಳ್ಸೋದ್ಮೇಲೂ ಅಂತ... ನಮ್ಮನೇ ವಿಚಿತ್ರ ಚರಿತ್ರೇನ...ವಿವರ್ಸಿದ್ದಲ್ದೆ...ಅವ್ರಿಗೂ ಹೇಳ್ದೆ ಬುದ್ಧಿವಾದಾನ...ಹಸಿವಿನ್ಗಲಾಟೇಲಿ ನಮ್ಮನೆ ನಿಮಂತ್ರಣಕ್ಕೊಪ್ಕೊಂಬಿಟ್ಟು, ಮುಂದ್ಬೀಳ್ಬಹುದಾದ, ಬಹಿಷ್ಕಾರ್ದಅಪಾಯಾನ ಅವ್ರಿಗೆ ಮೊದ್ಲೇ ತಿಳಿಸ್ದೇ ಇದ್ದಾಪ ನನಗ್ಬೇಡ, ನಮ್ಜ್ಞಾತಿಗಳ್ನ ವಿಚಾರ್ಸಿ, ನನ್ಚರಿತ್ರೇನ ಅವರ್ಬಾಯಿಂದರ್ತು, ಆ ಮೇಲೊಂದ್ವೇಳೆ, ನನ್ನ ಸ್ಥಿತೀನಾ ಕನಿಕರ್ಸಿ, ಧೈರ್ಯದಿಂದ ಇವತ್ತಿನ್ಕೆಲ್ಸಾನ, ನಡ್ಸಿ ಕೊಡೋಕೆ ಒಪ್ಪೋದಾದ್ರೇನೆ ನನ್ಮನಸ್ಸಿಗೆ ನೆಮ್ದಿ. ಅಂತ್ಹೇಳಿ ಕಳ್ಸಿಬಿಟ್ಟು, ಹೃದಯಾ ಬೇಯ್ತಾ, ಕಾಳಮ್ಮನ್ಗುಡಿ ಪ್ರಕಾರದಲ್ಕೂತಿದ್ದೆ!... ನಾನ್ ಹಾಕ್ದಂದಾಜ್ಗಂಧ್ಗಂಟೇ ಮುಂಚೇನೇ ಬಂದ್ರುತಿರ್ಗಿ!...ಜರಗ್ದ ವ್ಯವ್ಹಾರ ವಿಶೇಷಗಳ್ನೆಲ್ಲಾ ವಿವಸ್ದ್ರುರ್!...ಹೊಸ್ದೇನೂ ಇಲ್ಲ!...ನನ್ದೊಡ್ಡಪ್ಪನ ಮಗ ತನ್ನವ್ಳೀ ಅಂಗ್ಡೀನೇ ಇವ್ರ ಮುಂದಿಟ್ಟು... ತನ್ಮನೇ ಮೃಷ್ಟಾನ್ನ ಬಿಟ್ಬಿಟ್ಟು... "ಈ ಊರಲ್ಲಿ ಜಾತ್ಗೆಟ್ಟ ರಂಗಣ್ಣನ್ಮನೇಲಿ ತಿಂದ್ಬ್ರಾಹ್ಮಣ್ನ ನಿಮ್ಮೆಲ್ಲಗ್ಗಿರ್ಣತೆ?...ಮತ್ತೆ ಮುಂದ್ಸಂಭವ್ಸೋ ಬಹಿಷ್ಕಾರಾನೂ ತಪ್ಪೀತೇ ನಿಮ್ದೆ...ಇಲ್ಲ, ಆ ಮನೆ ಧೋತ್ರದ್ಮೇಲೇಸಾದ್ರೂ ಚಪ್ಲ ಬಿದ್ದಕ್ಷಕ್ಕೆ...ನನ್ನಂಗ್ಡೀಲಿ ನಿಮಗ್ಬೇಕಾದ್ವಸ್ತ್ರಗಳ್ನಾ ನೀವಾಸ್ರ್ಸಿಕೊಂಡದ್ರಿಂದ ನನಗೇನೂ ನಷ್ಟ್ವಿಲ್ಲ!!...ಇನ್ನಿದರ್ಮೇಲೆ...ನೀವಲ್ಲೇ ಹೋಗೋದಾದ್ರೆ...ನಿಮ್ಮೂರ್ನೀವು ಮುಟ್ಟೋಕ್ಮುಂಚೆ ನಿಮ್ಮಾ ಪ್ರತಾಪ ನಿಮ್ಮೂರ್ತಲ್ಪೋ ವಿಷ್ಯದಲ್ಲೇನೂ ಸಂದೇಹ ಇಟ್ಕೊಳ್ಬೇಡೀ" ಅಂದದ್ದೂ, ಮತ್ತಿವ್ರು ತಲೆ ಕೆರೀತ...ಜನಿವಾರಗಳ್ನೀವ್ತಾ, ನ್ಯಾಯಾನ್ಯಾಯಗಳ್ನಾಲೋಚ್ಸಿ "ನಿಮಂತ್ರಣಕ್ಕೇಂತ...ಬ್ರಾಹ್ಮಣ್ರನ್ಹುಡುಕ್ತಾ...ಒಬ್ಬ ಗೃಹಸ್ಥ ಕಾದಿರೋವಾಗ...ಇನ್ನೊಂದ್ಕಡೆ ಭೋಜ್ನ ಮಾಡೋದು ಮಹಪಾಪಾ" ಅಂತ ತೀರ್ಮಾನಿಸ್ಕೊಂಡು ಬಂದ್ಬಿಟ್ಟದ್ದೂ, ಹೇಳ್ಕೊಂಡ್ರು!...ಅಲ್ದೇ ನಾನ್ನಿರೀಕ್ಷಿಸ್ದಾಹಾಗೇನೇ ಕೊನೇಗೆ ಶುಂಠೀನೂ ಸೋಕ್ಸಿದ್ರು!!...

ವೆಂಕಮ್ಮ (ಹುಬ್ಬುಗಳನ್ನು ಎತ್ತುತ್ತಾ) ಶುಂಠೀ!! ಅದೇನು?

ರಂಗಣ್ಣ: (ಅತಿ ಉದಾಸೀನವಾಗಿ) ಏನೇನೂ?...ನನ್ಗ್ಹೊಡ್ಮನ್ಸಿಗಿರೀಗೆ ಆದ ಪ್ರಮೋಷನ್ನು ಬಿತ್ತ್ರೊಂತ್ಕಾಣತ್ತೆ ಅವರ್ಕಿವೀಗೆ!...ಅವರಲ್ಲೊಬ್ನ ಭಾವಮೈದನ್ನ...ಇಲ್ನನ್ನಾಫೀಸಿಗೆ ಸೇರಿಸ್ಕೊಂಡ್ರೆ ಅವರ್ಕುಟುಂಬಕ್ಕೆಲ್ಲಾ ಮಹದುಪ್ಕಾರ್ವಂತೆ. ಅಲ್ದೇ ನಾಳೇ ವಂದ್ವೇಳೆ...ಬಹಿಷ್ಕಾರ...ಪ್ರಾಯಶ್ಚಿತ್ತ ಮುಂತಾದವುಗ್ಳು ದುರದೃಷ್ಟವಶಾತ್...ಒದಗುವ ಸಂಭವಕ್ಕೆ ತಯಾರಾಗಿರೋ ಹಾಗೆ ಸಹಾಯ ಮಾಡಬೇಕಾಗಿರೋ ಮಾತೆತ್ತಿದ್ರು!...ಒಪ್ಪಿಸ್ದೆ ಏಜಂಟ್ ಪಟ್ಟೇನಾ!...ಸನ್ನಿಧಾನದ ರೇಟ್ ಪ್ರಕಾರ ತಲಾ ನೂರುನೂರು ರೂಪಾಯ್ನೂ ಕೈಲ್ಕೊಟ್ಟು...ಸಂಪ್ರದಾಯದ್ಪ್ರಕಾರ...ಸಂಭಾವನೆ, ವಸನ ಇತ್ಯಾದಿ ಮರ್ಯಾದೆ, ದಾನಗಳನ್ನೂ ಮಾಡೋಕೊಪ್ಕೊಂಡು!! ದೇವ್ಗೆರೆ ಕಟ್ಟೇಲಿ ಸ್ನಾನಕ್ಬಿಟ್ಟು!...ಇಲ್ಬಂದೆ!... ಇದಕ್ಕೆ ನಾನು ಸಂದೇಹಪಟ್ಟದ್ದು. ದುಡ್ಡಾಸೆ ಪಟ್ಕೊಂಡು ಇವತ್ತಿನ್ಕೃತ್ಯಕ್ಕೊಪ್ಕೊಂಡೋರು, ಬ್ರಾಹ್ಮಣ್ರೊ ಅಲ್ವೋ ಅಂತ!!...

ವೆಂಕಮ್ಮ: ಏನೋ! ದೇವ್ರಿಷ್ಟ್ರವಟ್ಗೆ ದಯ್ವಿಟ್ಟು ಕಳ್ಸಿದ್ನಲ್ಲಾ!! ಅವರ್ನಾ!!...

ರಂಗಣ್ಣ: ಹಯ್ಯೋ! ವೆಂಕೂ...ದೇವ್ರೆಲ್ಲೀ?...ನಾವೆಲ್ಲೀ?... **ಬ್ರಾಹ್ಮಣ್ನಿಗ್ಬ್ರಹ್ಮಹಣವಾದ್ಮೇಲೆ ಇನ್ನ್ದೇವ್ರು ಬೇರೆ ಇದಾನೆಯೆನಿವಗ್ಗೆ ?** ನಾವೀಗಿರೋ ಹಣೇಬರಕ್ಕೆ ದಯ ಬೇರೆಯೇ ಅವ್ನಿಂದ?... ಈ ಹಾಳಿನ್ನೂರ್ರೂಪಾಯ್ನ ಮುಂದಿಟ್ಕೊಂಡು ಬಾ ಬಾ ಅನ್ನದಿದ್ರೆ ಬರ್ತಿದ್ರೇ ಈ ಬ್ರಾಹ್ಮಣ್ರು? ಹಯ್ಯೋ! ವೆಂಕೂ,ಇನ್ಮೇಗೆ ಶ್ರಾದ್ಧಕ್ಮನ್ನೂರ್ರೂಪಾಯಿ...ತಿಂಗ್ಳ್ತಿಂಗ್ಳ ಅಮಾವಾಸ್ಯೆ

ತರ್ಪಣಕ್ಕದ್ದೈದ್ರೂ ಪಾಯಿ...ದುರ್ಲಂಚಾ ಕೊಪ್ತಾ ಬಿಟ್ಟ್ನಾತಾನಂತ ಬ್ರಾಹ್ಮಣಕೇನುಬರಗ್ತೋದೋ! ನಾಸ್ತೀರೇ ಕಾಣೆ (ವ್ಯಸನದಿಂದಲೂ, ಹಸಿವಿನಿಂದಲೂ ನಿರ್ಜೀವ್ನಾಗಿ ಬಗ್ಗಿ ದುಃಖದಿಂದ ವೆಂಕಟ ಲಕ್ಷ್ಮಮ್ಮನ ಕೈಯನ್ನು ಹಿಡಿದುಕೊಂಡು) ಹಯ್ಯೋ ವೆಂಕೂ!...ಇದ್ರಲ್ಲಿಲ್ಲಾ...ಸೀನೂ...ಹಿಟ್ಟೋದು... ಪಡೋಕಷ್ಟ ಬೇರೆ. ನನ್ನೈದ್ವಾನ ತಿನ್ನಿದೇ...ನನ್ ಹಾಳ್ಕೈನ ಹಿಡ್ದದ್ದಕ್ಕೆ ನಿನ್ನೀ ವಯಸ್ನಲ್ಲಿ. ನಿನ್ನೈಯಿ ಮುಖಿ...ಹೀಗಾಗಿ ಕೂಡದ್ಲೂ...ಹೀಗ್ನರ್ತ್ತು...ಹಿಂಸೆ ಪಡ್ಡೇಕೂಂತ ಬರ್ದಿತ್ತೇ ನಿನ್ಹಣೇಲಿ ಈ ನರ್ಸ್ನ ಒಬ್ಳ್ನ ಇಲ್ದಿದ್ರೇ?...(ಈ ಸಮಯದಲ್ಲಿ. ನರ್ಸುವು ಹಿಂಬಾಗಿಲಿನಿಂದ ಬಂದು. ರಂಗಣ್ಣನ ಕೊನೆಯ ಮಾತನ್ನು ಕೇಳಿ ಮನನೊಂದು ಮುಖ ಕುಗ್ಗಿ ಮಾತನಾಡದೆ ಹಿಂತಿರುಗುವುದನ್ನು. ವೆಂಕಮ್ಮನು ಮಾತ್ರ ಗಮನಿಸುವಳು)

ವೆಂಕಮ್ಮ: (ವ್ಯಥೆಗೊಂಡು ಮೆಲ್ಲನೆ ಗಂಡನ ಕೈಯನ್ನು ಒದರಿ)...ಇಶ್ಶೀ...ದಮ್ಮಯ್ಯ... ನರಸೂ ಮಾತ್ನಾ...ಎತ್ತೇಡಿ. ಈಗೇನ್...ಅವಳ್ನೋವ್ವದಸ್ಥ...ನಿಮ್ಮಕ್ಕಿಂತ. ಕಮ್ಮಂತ ತಿಳ್ಕೊಂಡಿದೀರಾ?...ಅವಳ್ಬದ್ಕಿರೋದು(ಸ್ವಲ್ಪ ಸಿಟ್ಟಿನಿಂದ) ಅವಳ್ತಪ್ಪೇ? ಅವಳ್ಮದ್ವೆಗ್ಬೇಕಾದ್ದಣ ವಿಲ್ಲದ್ದೂ ಅವಳ್ತಪ್ಪೇ?...ನಿಮ್ತಾಯಿ ಹೋದ್ದಿನ್ನಿಂದ..."ಯಾಕೇ ಶನೀ ಹುಟ್ದಿದ್ಲೂ. ಯಾಕೀ ಶನಿ ಹುಟ್ಟಿದ್ಲೂ"...ಅಂತ ರಾತ್ರೀ ಹಗ್ಲೂ ಕೇಳೀ ಕೇಳೀ ಮನಸ್ನೂ ಮುರ್ಕೊಂಡು...ಹಗ್ಲೂ ರಾತ್ರಿ ಹುಟ್ಟಿದ್ನಾಲಾನ ಕೆಲ್ಸದಲ್ಲಾದ್ರೂ ತೀರ್ಸೋಣಾಂತ...ಮೈಮುರ್ಕೋ ಹಾಗೆ ಕೆಲ್ಸ ಮಾಡ್ತಿದೆ. ಆ ಮಗು!...(ಕಣ್ಣುಗಳನ್ನು ಕೈಗಳಿಂದ ಮುಚ್ಚಿಕೊಂಡು ಅಳುವಳು.)

ರಂಗಣ್ಣ: (ಒಂದು ಹೆಜ್ಜೆ ಹಿಮ್ಮೆಟ್ಟಿ. ಮುಷ್ಟಿಗಳನ್ನು ಬಿಗಿದು ಉದ್ರೇಕದಿಂದ...) ನಿಜ!... ವೆಂಕೂ...ನಿಜ. ನರ್ಸು ಬದ್ಕಿರೋದವಳ್ತಪ್ಪಲ್ಲ...ವೆಂಕೂ! ನಮ್ಮನಸ್ಸು. ನಮ್ಬುದ್ಧಿ. ನಮ್ಮಾತ್ಮ... ಎಷ್ಟೋ ದೊಡ್ದು ಅಂತ ನಾವು ಹೊಗಳ್ಕೊಂಡ್ರೂಸೂವೆ (ಬಿಗಿದ ಮುಷ್ಟಿಯಿಂದ ಎದೆಯನ್ನು ಗುದ್ದಿಕೊಳ್ಳುತ್ತಾ) ಇದು. ಇದು. ಇದ್ಕೊಬ್ಬಿರೊವರ್ಗ್ಗನೂ. ಆತ್ಮಕ್ಕೂ ಬುದ್ಧೀಗೂ. ಅವಕಾಶ್ವಿಲ್ಕೊಡತ್ತೀ ಹಾಳ್ದೇಹ? ನನಗ್ನೀನ್ನೀನಾಗಿರೊ ಹೊತ್ತಿಗೆ...ಸನ್ನಿಗ್ಭ್ರಮೇಲಿ. ನರ್ಸು ಹುಟ್ಟಿಬದ್ಕಿರೋದು ತಪ್ಪೂಂತೋಚ್ತಲ್ಲಾ! ಮಕ್ಳೂ...ಹಕ್ಕಿಗ್ಳೂ...ಹೂವುಗ್ಳೂ...ಹುಟ್ಟೋದ್ರಲ್ತಪ್ಪೆಲ್ಲಿದೂ? ಪ್ರಪಂಚ ಹುಟ್ಟಿದ್ದೇ ಅವುಗ್ಳಿಗಲ್ವೇ? ನರ್ಸು ಹುಟ್ಟಿದ್ತಪ್ಪೇ ಅಲ್ಲ. ಬದ್ಕಿರೋದ್ತಪ್ಪೇ ಅಲ್ಲ. ತಪ್ಪೇ ಅಲ್ಲ!! ...ಇನ್ನೀನ್ಹೆಳ್ದೇಲ್ಲಾ...ಅವಳ್ಮದ್ವೇಗ್ಬೇಕಾದ್ದಣಾಂತ...ಮದ್ವೇಂದ್ರೇನು? ಕನ್ನಿಕಾದಾನವ್ರೋ? ಕನಕಾ ದಾನವ್ರೋ? ಮದ್ವೆಯೋ...ಮದುವಣಿಗರ ಮಾರಾಟವ್ರೋ? ದಾನವಾಗಿ ಕನ್ಯೆಯನ್ನೊಪ್ಪೋಕಿಷ್ಟ ಪಟ್ಟ ಬ್ರಾಹ್ಮಣನ್ಹತ್ರ ಧನವಿಲ್ಲದ್ಮಾತ್ರಕ್ಕೆ ಅವನ್ಬ್ರಾಹ್ಮಣಕೇಗ್ಕೊರ್ತೆಯೋ?

ಬ್ರಾಹ್ಮಣ, ಪಾಪಿ!...ಬ್ರಹ್ಮಚಾರಿ!...ತನ್ನಾಚಾರ. ತನ್ನ ಧರ್ಮ ತನ್ನ ವ್ರತಗ್ಳ್ನ ಜರುಗಿ ಸ್ಕೊಳ್ತಾ...ತನ್ನ ಪಿತೃಗಳಿಗೆ ತನ್ಕೈಯಿನ್ನಿಂಡಗ್ಳು ಮುಟ್ಟೇಕಾದ್ದಕ್ಕೆ ಅನುಸರಿಸ್ಬೇಕಾದ ಧರ್ಮಗಳ್ನ ನಡಸ್ತಾ ತನ್ನ ಬ್ರಾಹ್ಮಣ್ಯೇನುಳುಸ್ಕೊಳ್ಳೋಕ್ಕೆ ತನ್ನ ಪಕ್ದಲ್ಲಿ ನಿಲ್ಲಲೇ ಬೇಕಾದ ಸಹಧರ್ಮಿಣೀಗೆ ಇವನು ಕಟ್ಟೋ ತಾಳೀಗೇ ಕೂಲಿ? ಈ ನೀಚನಿಗೆ ...ಕೂಲಿ!! ದುಡ್ಡಿನ...ಕೂಲಿ!!...ಸನ್ಯಾಸಿಯ್ಕಾರಾ ನನಿಗೆ?...ಗೃಹಸ್ಥನಿಗೆ?...ಧನ ಸಂಚಯಿಸೋದು ನನ್ನ ವೃತ್ತಿ ಅಲ್ಲಾ ಅಂತ ಸನ್ಮಾತಿಸ್ಮೃತ್ತೀನಾ! ಅನುಸರಿಸ್ತಿರೋ ಬ್ರಾಹ್ಮಣನಿಗೆ ಬಹಿಷ್ಕಾರ!!!...(ಮನೋವ್ಯಥೆಯ ಉನ್ಮಾದದಿಂದ ನಗುತ್ತಾ) ನಗುಬರುತ್ತನಿಗೆ! ಸತ್ಯವಾಗ್ಹೇಳ್ತೀನೆ ವೆಂಕೂ! ಇಲ್ಲಿ (ಎದೆಯನ್ನು ಗುದ್ದಿ! ತೋರುತ್ತಾ) ನನಿಗೆ ಲ್ಹೇಳುತ್ತೇ!...ಬ್ರಾಹ್ಮಣ ಯಾವಾಗ ಹೊನ್ನಿನ್ನಣ್ಣಾ ನೋಡಿ. ಬೆಚ್ಚಿದ್ನು. ಅವಕ್ಕಾದನ್ಹಾಂತ ಹರಿಟ್ಕೋ ಆ ಕ್ಷಣದಿಂದ ಧನಪಿಶಾಚೀಗೆ ದಾಸ್ನಾದ. ಈ ಪಾಪಿ ಮುಟ್ಟೋಂದಿಂಡಾನೂ ಮೇಲ್ಲೋಕಕ್ಕೋಗಿಲ್ಲಾ!! ...ಇವ್ನೆಲ್ಲಿ!...ಇವನ್ಪಾಯಲ್ಕೊಗ್ಗೋ ನುಷಿಗ್ಳೆಲ್ಲಿ!!?...ಅತ್ರಿ. ಭೃಗು. ವಸಿಷ್ಠ...ಇವರ್ಗ್ಗೆಲ್ಲಾಗ್ಳು ಹೇಳೋಕ್ಕೂಡ ನನಿಗ್ನಾಚಿಕೆಯಾಗುತ್ತೆ!...ಇನ್ನೀ ಪಿತೃಗ್ಳ ಗತಿಯೇನೂ ಅಂತೀಯೋ...ಇವರೆಲ್ಲಾ ಇಲ್ಲಿ. ಮೋಟ್ಲು ಮುಟ್ಟೆ...ಸಾಲ್, ಸಾಲ್, ಸಾಲಾಗಿ. ಆಕಾಶಕ್ಕೂ ಭೂಮಿಗೂ ಅಡಿಕೆ ನರಗಳ್ಹಾಗೆ ನೇತಾಡ್ತಿರೋ ಹಾಗ್ಕಾಣಿಸ್ತಾರೆ ನನ್ಕಣ್ಗೆ...ಇನ್ನಾಪ್ರಿಗೆ ಈ ತ್ರಿಶಂಕು ನರಕದಿಂದ ವಿಮೋಚ್ನೆ ಯಾವಾಗ

ಅಂತ್ಕೇಳ್ತೀಯೋ...ಇನ್ಮುಂದೆ ಯಾವ ಬ್ರಾಹ್ಮಣ ಹಣದ್ಮೇಲೆ ಹೇಸ್ಗೆ ಪಟ್ಕೊಂಡು ಹುಟ್ತಾನೋ, ಪುಣ್ಯಾತ್ಮ. ಅವನ್ಸೈಯುಂಪ! ಅವನ್ಕೆ ತಿಲೋದ್ಕದ ಯೋಗ್ಯತೇನ, ಹೇಳೋದಕ್ಕನಗ್ಯೋಗ್ತೆ ಇಲ್ಲಾ... ಆದ್ರೂನೂವೇ ಈ ಧನಕ್ಕದ್ಬೀಳೋ ಪಾಪಿಜಾಯ್ಗೆ ಹುಟ್ಟೋಕಾದ್ದುರ್ಲಂಚಾನ ಅ (ಲಕ್ಷ್ಮಿಯು ಚಿತ್ರಪಟ ವನ್ನು ತೋರಿಸುತ್ತಾ) ಚಂಚ್ಲಕಟಾಕ್ಷಿ...ಎಷ್ಟುವರಿಗೆ ವದಗಸ್ತಿರ್ತಾಳೋ ನಮ್ಕೈಗೆ ಅಷ್ಟುವರಿಗಾದ್ರೂ ಈ ಮಾಮೂಲ್ ಏರ್ಪಾಡ್ಕೆ ಬ್ರಾಹ್ಮಣ್ಕೇನಾದ್ರೂ ಜರಗಸ್ತಿರೋಣ...ನೆನಸೋಣಗ್ನು...ಧೋತ್ರಾನಾ ನೆನಸೋಣಗ್ನು!!

(ಘರದೆಯು ಥಟ್ಟನೆ ಬೀಳುವುದು)

ಚತುರ್ಥ ರಂಗ

[ಕಾಲ: ಏಳು ವರ್ಷಗಳ ಅನಂತರ.]

ಸ್ಥಾನ: ಯಥಾಪೂರ್ವಂ, ಕೋಣೆಯಲ್ಲಿನ ಸಾಮಾನುಗಳು, ರಂಗಣ್ಣನ ಸ್ಥಿತಿಯು ಬಹುಧಾ ವರ್ಧಿಸಿರುವುದೆಂಬುದನ್ನು ಸೂಚಿಸುವುವು...ದೊಡ್ಡದೊಂದು ನಿಲುಗನ್ನಡಿ; ಮೇಜಿನಿಂದ ಪ್ರತ್ಯೇಕವಾಗಿ ಬೀಗಡಿಸಲ್ಪಟ್ಟಿರುವ ಕೋಣೆಯ ದಕ್ಷಿಣಾಂಶದಲ್ಲಿ ಮಂಚದ ಮೇಲೆ ನರಸು ಜ್ವರದಿಂದ ನರಳುತ್ತಾ ಹೊರಳುತ್ತಿರುವಳು.

ವೆಂಕಮ್ಮ: (ಪ್ರವೇಶಿಸಿ) (ಮೇಜಿನ ಮೇಲೆ ಬಿದ್ದಿರುವ ಟಪ್ಪಾಲಿನಿಂದ ಬಂದ ಲಕೋಟೆಯನ್ನು ಗಮನಿಸಿ) ಇದೇನ್ಸೊಬಗೆರೆ? ಹಾಗಾದರೆ ಇಷ್ಟ್ಬೇಗ್ನೆ ಬರದ್ಬಿಟ್ಟಿದ್ದಾರೆ ಜವಾಬು?!! ಏನೂಂತ ಬರ್ದಿದಾರೋ ಕಾಣೆ!...ಜಾತ್ಕಾನೂ ಕಳ್ಸಿತ್ತಲ್ಲಾ!! (ಭ್ರುಕುಟಿ ರಚನೆಯನ್ನು ಮಾಡುತ್ತಾ) ಏನೂಂತ ಬರಾರವ್ರು ತಾನೇ...ನಮ್ಮನೇ ಹಣೇಬರ ಹೀಗಿರೋವಾಗ...ನಮ್ನುರ್ರೂನ್ನಮ್ದ್ವೆ ಇಲ್ದೆ ಮನೇ ಲಿಟ್ಕೊಂಡಿರೋವರೇಗೂ ಕನ್ಯಾದಾನ ಯಾರ್ಮಾನೆ ಮಾಡ್ಯಾರ್ನವ್ಮಿಟ್ಟೂಗೆ?...ಇನ್ನಿದುವರ್ಗೂ... ನಾವ್ಪಟ್ಟಿರೋ ಕಷ್ಟಗಳ್ಲೆ ಇನ್ಯಾವ್ಯಾವವಸ್ಥೆಗಳ್ಕಾದಿವ್ಯೋ ಕಾಣೆ...

ನರ್ಸು: ಹಯ್ಯೋ! ಹಯ್ಯೋ!!...ಹಯ್ಯೋ!!!...ಅಮ್ಮಾ...ಅಮ್ಮಾ...ಎಲ್ಲೀದಿಯಮ್ಮಾ?

ವೆಂಕಮ್ಮ: (ಮಗಳ ಪಕ್ಕಕ್ಕೆ ಓಡಿಬಂದು) ಏನ್ಕಂದಾ? ಹ್ಯಾಗಿದೆ ಈಗ? (ನರಸುವಿನ ಮುಖ ವನ್ನು ಕೈಗಳಿಂದ ಹಿಡಿದು ಕೇಳುವಳು.)

ನರ್ಸು: (ಸನ್ನಿಸೂಚಕ ದೃಷ್ಟಿಯಿಂದ ತಾಯಿಯನ್ನು ಈಕ್ಷಿಸುತ್ತಾ, ನೊಂದ ಕಂಠಸ್ವರದಿಂದ ಹಯ್ಯೋ ಅಮ್ಮಾ...ಹ್ಯಾಗಿದೇಂತ್ಹೇಳ್ಳಮ್ಮಾ...ನಾಲಿಗ್ಯೋ...ಒಣಗ್ಬೆಂಡಾಗಿದೆ...ತಲ್ಯೋ ಸಾವಿರ ಸೂಜಿಗ್ಳು ಚುಚ್ಚಿದ್ಹಾಗೆ ಎಲ್ನೋಡಿದ್ರೂ ಪ್ರೇಟುಗ್ಳು...ಇವಲ್ದೇ ಅಮ್ಮಾ—ಕನಸುಗ್ಳು... ಹಾಳ್ಕನಸುಗ್ಳು ಅಮ್ಮಾ...ಸುತ್ಗೆ...ಸೀಸದ್ನುತ್ಗೆಯಿಂದ್ಹೊಡ್ದ್ಹಾಗೆ...ಜಜ್ತಿವೇಮ್ಮಾ ತಲೇನ್ಜಜ್ತಿವೇ... "ಕಿಟ್ಟೂಗ್ಮದ್ವೆ"..."ಕಿಟ್ಟೂಗ್ಮದ್ವೇ"..."ಮದ್ವೇ ಎಲ್ಲಾದೀತ್ಕಿಟ್ಟೂಗೆ?"..."ಹೆಣ್ಯಾರ್ಕೊಟ್ಟಾರು?" ..."ಈ ಹಾಳ್ನರ್ಸು...ಬದ್ಕಿರೋವರ್ಗೂ"..."ಈ ಶನಿಯಾಕ್ಹುಟ್ಟಿದ್ಲೀ ಮನೇಲೀ" ಅಂತಮ್ಮಾ! ಈಗ ...ಈಗ...ಸನ್ನಿಪೀಲಿ...ಯಾರೋ ಕಿರ್ಚಿದ್ಹಾಗಿತ್ತೂ...ಅಮ್ಮಾ...ಕನ್ಸು...ಹಯ್ಯೋ...ಗಂಟ್ಲೊಣ್ಗ್ತಿ ದೇಮ್ಮಾ...ನೀರು...ನೀರು...

ವೆಂಕಮ್ಮ: ನೀರ್ಬೇಡ ಕಂದಾ (ಪಕ್ಕದಲ್ಲಿಟ್ಟಿರುವ ಹಾಲನ್ನು ಲೋಟಾಕ್ಕೆ ಬಗ್ಗಿಸಿ ನರಸುವಿಗೆ ಕುಡಿಸುತ್ತಾ) ಸದ್ಯ ಈ ಹಾಲ್ಕುಡೀ! ಡಾಕ್ಟರಿಗ್ಹೋದ್ಕಿಟ್ಟೂ ಇನ್ನೇನ್ಬಂದ್ಬಿಡ್ತಾನೆ. (ನರಸು, ಅಲ್ಪ ಶಾಂತಳಾಗಿ ತಲೆಯನ್ನು ದಿಂಬಿಗಿಳಿಸುವಳು...ಸಮೀಪಿಸುವ ಹೆಜ್ಜೆಗಳ ಸಪ್ಪಳವನ್ನು ಕೇಳಿ ವೆಂಕಮ್ಮನು ಬೀದಿ ಬಾಗಿಲನ್ನು ತೆಗೆಯುವಳು.)

(ರಂಗಣ್ಣ, ಡಾಕ್ಟರ್ ಲಕ್ಷ್ಮೀಪತಿ, ಮತ್ತು ಕಿಟ್ಟೂವು ಡಾಕ್ಟ್ರ ಔಷಧಿಗಳ ಚೀಲವನ್ನು ಹಿಡಿದು ಕೊಂಡು, ಪ್ರವೇಶಿಸುವರು.)

ಲಕ್ಷ್ಮೀಪತಿ: Patient ಹ್ಯಾಗಿದ್ಲೂ ಕಿಟ್ಟೂ? ನೀನ್ಮನೆ ಬಿಟ್ಟಾಗ?

ರಂಗಣ್ಣ: (ಲಕ್ಷ್ಮೀಪತಿಯ ಕೈ ಹಿಡಿದುಕೊಂಡು ಪ್ರವೇಶಿಸಿ) Patientoo?...Patientsoo ಅನ್ನು. ಲಕ್ಷ್ಮೀಪತೀ...ನೀನ್ನಮ್ಮೂರ್ಬಿಟ್ಟೋದೀ ಎಂಟ್ವರ್ಷದಲ್ಲೀ ಮನೇಲ್ಯಾರ್ರಾನೇ...ಯಾವಾಗ್ರಾನೇ ...ಮೈಕೈಲೂ ಮನಸ್ಲೂ...ಬುದ್ಧೀಲೂ...ಅಸ್ವಸ್ಥವಾಗಿಲ್ಲ?

ಲಕ್ಷ್ಮೀಪತಿ: (ರಂಗಣ್ಣನ ಬೆನ್ನು ತಟ್ಟುತ್ತಾ ಸಾಂತ್ವನ ಸ್ವರದಿಂದ) I understand dear boy,···I understand...ಸದ್ಯ ಈಗ್ನರ್ಸ್ ಹ್ಯಾಗಿಧಾಳೆ?

ವೆಂಕಮ್ಮ: ಈಗ್ತಾನೆ...ಗಂಟ್ನಿಂದ ಒಣಗ್ತಿದೆ...ತಲೆ ಭಾರ...ಅಂತ್ಹೇಳ್ಕೊಂಡ್ಳು...ಜ್ಞಾನ ಕೂಡ ತಪ್ಪಿರೋ ಭಯವಾಗುತ್ತೆ...ಹ್ಯಾಗಿದ್ದೀರ್ಡಾಕ್ಟ್ರೆ? ಮನೇಲೆಲ್ಲ ಸೌಖ್ಯ?

ಲಕ್ಷ್ಮೀಪತಿ: ನಮ್ಸೌಖ್ಯ ಹಾಗಿರ್ಲಮ್ಮ..., (ರಂಗಣ್ಣನಿಗೆ) ಜ್ಞಾನ ತಪ್ಪಿದೆಯೋ ಇಲ್ವೋ... ನನ್ನುಗ್ರತ್ತವ್ಳಿಗೆ ಸಿಗೋದ್ರಲ್ಲೇ ಗೊತ್ತಾಗುತ್ತೆ.

(ವೆಂಕಮ್ಮನು ರಂಗಣ್ಣ, ಲಕ್ಷ್ಮೀಪತಿ, ಔಷಧಿಯ ಚೀಲವನ್ನು ಹಿಡಿದಿರುವ ಕಿಟ್ಟಿ. ಇವರುಗಳನು ಹಾಸಿಗೆ ಹತ್ತಿರಕ್ಕೆ ಕರೆದುಕೊಂಡು ಹೋಗುವಳು.)

ರಂಗಣ್ಣ: (ನರಸುವಿನ ಮುಖವನ್ನು ಸವರುತ್ತಾ ಬಾಷ್ಪಭರಿತನಾಗಿ) ನರ್ಸೂ...ನರ್ಸೂ... ಇದ್ಯಾರಮ್ಮಾ ಬಂದಿರೋದು?...ನೋಡು, ಇದ್ಯಾರು, ಹೇಳ್ನೋಡೋಣ.

(ನರಸುವು ನಿಶ್ಚಲ ದೃಷ್ಟಿಯಿಂದ ಲಕ್ಷ್ಮೀಪತಿಯನ್ನು ಗಮನಿಸುವಳು)

ಲಕ್ಷ್ಮೀಪತಿ: ನರ್ಸಮ್ಮಾ...ನರ್ಸೂ...ಇಲ್ನೋಡಮ್ಮಾ (ನಾಡಿಯನ್ನು ಪರೀಕ್ಷಿಸುತ್ತಾ) ಇದ್ಯಾರಮ್ಮಾ ಇದು...ಮಾತಾಡ್ತಿರೋದು...ನಾನ್ಯಾರ್ನರ್ಸೂ?

(ಡಾಕ್ಟರರ ಧ್ವನಿಯು ಕೇಳುತ್ತಲೆ, ಕಣ್ಣುಗಳಲ್ಲಿ ಕ್ರಮೇಣ ಬೆಳಕೇರಿ ಥಟ್ಟನೆ ತಲೆಯನ್ನೆತ್ತಿ ಕೈಯಿಂದ ಸೂಚಿಸುತ್ತಾ, ಚೀತ್ಕರಿಸುತ್ತಾ)

ನರ್ಸು: ಡಾಕ್ಟ್ರು!!!...ಅಜ್ಜಿ ಸಾಯೋವಾಗ ಇದ್ರಾಕ್ಟ್ರು (ಕಣ್ಣೀರನ್ನು ಕಾರುತ್ತಾ ಬಾಹುಗಳನ್ನು ಒದರುತ್ತಾ) ಡಾಕ್ಟ್ರೇ? ಈಗ್ಗೊತ್ತಾಯ್ತು ಡಾಕ್ಟ್ರೇ! ಅಜ್ಜಿ ಸಾಯೋವಾಗ "ಯಾಕ್ಹುಟ್ಟಿದ್ಲೀ ಶನಿ" ಅಂತ...ಅಜ್ಜೀನೂ ಅಪ್ಪೂನವೇ...ನನ್ನ ಬೈದದ್ದು...ಈಗರ್ಥ್ವಾಗ್ತಿದೆ. ಡಾಕ್ಟ್ರೇ! ಡಾಕ್ಟ್ರೆ! (ದಣ್ದು ಅಧೋಮುಖಳಾಗಿ ಮಂಚದಂಚಿಗೆ ಬೀಳುವಳು.)

ಲಕ್ಷ್ಮೀಪತಿ: Ranganna!...She is bad···very bad(ನರಸುವನ್ನು ಮೆಲ್ಲಗೆ ಹಾಸಿಗೆ ಯಲ್ಲಿ ಮಲಗಿಸಿ, ವೆಂಕಮ್ಮನಿಗೆ) ಬಿಸ್ನೀರೂಮ್ಮಾ...ಬೇಗ...(ಕಿಟ್ಟೂಗೆ) ಕಿಟ್ಟೂ...ಬೇಗ್ನೆ...bag ನಲ್ಲಿ...ಚಿಕ್ಸೀಸೆ...white powderoo-label veronal...(ಕಿಟ್ಟು ಚೀಲದಿಂದ ತೆಗೆದುಕೊಡುವ ಸೀಸೆಯನ್ನು ತೆಗೆದುಕೊಳ್ಳುತ್ತಾ) That's it !

[ವೆಂಕಮ್ಮನು ಒಳಕ್ಕೆ ಹೋಗಿ ನೀರನ್ನು ತರುವಳು]

(ಲಕ್ಷ್ಮೀಪತಿಯು ಒಂದು ಗಾಜಿನ ಲೋಟಾದಲ್ಲಿ ೧॥ ಗ್ರಾಮ್ ವೆರೋನಾಲನ್ನೂ ನೀರನ್ನೂ ಮಿಶ್ರಮಾಡುತ್ತಿರುವನು)

ರಂಗಣ್ಣ: ಏನದ್ಕೊಡೋದು?

ಲಕ್ಷ್ಮೀಪತಿ: ಏನೀ sedativeoo! soporificoo! (ಔಷಧಿಯನ್ನು ನರಸುವಿಗೆ ಕುಡಿಸಿ. ಲೋಟಾವನ್ನು ಕೆಳಗಿಡುವನು.)

ರಂಗಣ್ಣ: (ನರಸುವಿನ ಹತ್ತಿರ ಬಂದು ಅವಳ ಮುಖವನ್ನು ಸವರುತ್ತಾ) ಈಗ್ಯಾ ಗಿದೆ ನರ್ಸೂ...ಸ್ವಲ್ಪ ಮೇಲೇ?

ನರ್ಸು: (ಕೈಯಿಂದ ತಂದೆಯ ಮುಖವನ್ನು ಸವರುತ್ತಾ...ಮೃದು ಸ್ವರದಿಂದ) ಮೇಲೂಪ್ಪಾ... ಮೇಲು...(ರಂಗಣ್ಣನ ಕೈಯನ್ನು ಮುತ್ತಿಟ್ಟು) ನನ್ವಿಷ್ಯವಾಗಿ ವಿಚಾರ್ಪಡ್ಬೇಡಪ್ಪಾ!...ಈಗ್ನಿನಿಗಿರೋ ವಿಚಾರಾನೇ ಸಾಕು. ನನ್ಗೆ ಸ್ವಲ್ಪ ಮೇಲು.

ರಂಗಣ್ಣ: ವಿಚಾರ್ಸ್ಬೇಡ್ವೆನ್ನಂದಾ (ನರಸುವನ್ನು ಮೆಲ್ಲಗೆ ಹಾಸಿಗೆಯ ಮೇಲೆ ಮಲಗಿಸಿ, ಅವಳ ಹಣೆಯನ್ನು ಮುದ್ದಿಡುತ್ತಾ) ಇನ್ನಿದ್ದೇ ಮಾಡ್ನನ್ನಂದಾ? (ಲಕ್ಷ್ಮೀಪತಿಯ ಹತ್ತಿರಕ್ಕೆ ಬಂದು) Serious ಏ Conditionoo?

ಲಕ್ಷ್ಮೀಪತಿ: Serious ಏನು?, Simple ಏನೂ? But I am in good time. ಇನ್ನೊಂದು ಹದ್ನೈದ್ದಿವ್ಸದಲ್ಲಿ ಸರಿ ಹೋಗ್ತಾಳೆ. ನಾಳೆ ಬೆಳಿಗ್ಗೆ ಬಂದ್ನೋಡ್ತೇನೆ...ಕಿಟ್ಟೂ, ಎತ್ಕೊಂಡ್ಬಾ ನಿನ್ನಂಗ್ಡೀ... (ವೆಂಕಮ್ಮನು ನಿಷ್ಕ್ರಮಿಸುವಳು.) Ranganna ಈ cot ನ ಮೇಲ್ಬಿದ್ಕೋ comfortable ಆಗಿ...(ಕಿಟ್ಟೂಗೆ) ಕಿಟ್ಟೂ, bagoo! (ಕಿಟ್ಟೂ ಚೀಲವನ್ನು ತರುವನು. ಲಕ್ಷ್ಮೀಪತಿಯು ಚೀಲದಿಂದ ಕೆಂಪು ಕಾಗದ ಹಚ್ಚಿದ ಕರಿಯ ಔಷಧದ ಸೀಸೆಯೊಂದನ್ನು ತೆಗೆದಿಡುವನು; ಗಾಜಿನ ಚಿಕ್ಕ ತಟ್ಟೆಯೊಂದರಲ್ಲಿ ಅಲ್ಪ ಔಷಧಿಯನ್ನು ಸುರಿದುಕೊಂಡು) ಒಂದ್ಹಂಚೀ ಕಡ್ಡೀ...clean end of the broom Stick (ಕಿಟ್ಟಿಯು ಹಂಚೀ ಕಡ್ಡಿಯನ್ನು ತಂದುಕೊಟ್ಟು ನಿಷ್ಕ್ರಮಿಸುವನು. ಚೀಲದಿಂದ ತೆಗೆದ ಹತ್ತಿಯಲ್ಲಿ ಅಲ್ಪಾಂಶವನ್ನು ಕಿಟ್ಟಿಯು ತಂದ ಹಂಚೀ ಕಡ್ಡಿಗೆ ಸುತ್ತಿ, ಗಾಜಿನ ತಟ್ಟೆಯೊಳಗಿನ ಕರೀ ಔಷಧದಲ್ಲಿ ಅದ್ದಿ ತೊಯ್ಸಿಕೊಂಡು) Now then my boy, we shall try your left knee...ನಿನಗೇನು?, the root of all troubles is simply exposureoo...ನೀನು ಸ್ವಲ್ಪ avoid ಮಾಡ್ಬೇಕು...ಕಾಲಿಗೆ! (ಮೊಣಕಾಲಿಗೆ ಸವರಲುಪಕ್ರಮಿಸುವನು.)

ರಂಗಣ್ಣ: ಹಯ್ಯೋ! ಲಕ್ಷ್ಮೀಪತೀ...ನನ್ಕಾಲ್ನಲ್ಲಿದೇಂತ ಕಂಡಿಡದ್ಬಿಟ್ಯೆಲ್ಲಾ...the root of all my troublesoo, ಹಯ್ಯೋ! Silly boy! the root of all my troublesoo...ನಮ್ಮಮ್ಮ ಸತ್ತ ಈ ಹನ್ನೊಂದ್ವರ್ಷಗ್ಳ troubles್ನ rootoo, ಲಕ್ಷ್ಮೀಪತೀ, ಇಲ್ಲಿದೆ, (ತನ್ನ ತಲೆ ಮತ್ತು ಹೃದಯಗಳನ್ನು ಮುಟ್ಟಿ ತೋರಿಸುವನು) ಇಲ್ಲಿದೆ...ತಲೆ ನರ್ತು, ನನ್ಹುಲದ್ಯಾ ಬಿರ್ದ್ದಿರೋದೇ rootoo!!

ಲಕ್ಷ್ಮೀಪತಿ: ಏನು?...ಏನದೂ?

ರಂಗಣ್ಣ: ಏನೇ?...ಸತ್ತಿತ್ತೇನೂ ಅಂಬೋ ಹೆದ್ರಿಕೆ!! ಹಯ್ಯೋ...(ಲಕ್ಷ್ಮೀಪತಿಯು ನಗುವನು) ನಗ್ಬೇಡ...ಸಾಯೋಕ್ಹೆದರ್ತೇನೇಂತ್ನಗ್ಬೇಡ...ಸಾಯೋಕಲ್ಲ ನಾನ್ಹೆದ್ರೋದು...ಲಕ್ಷ್ಮೀಪತೀ!... ಈಗ್ನೋಡು!...ನಾನೀಗೊಂದ್ವೇಳೆ ಸತ್ರೆ...ನನ್ಹಾಳ್ಹೆಣ್ಣನ್ನ ನನ್ಹೆಂಡ್ತಿ ಮಕ್ಳಿಟ್ಕೊಂಡೇನ್ಮಾಡ್ಯಾರು? ಹ್ಯಾಗ್ಸಾಗ್ಸ್ಯಾರು ಸ್ಮಶಾನಕ್ಕೆ...ಹ್ಯಾಗ್ಸುಟ್ಬುದಿ ಮಾಡ್ಯಾರು?

ನರ್ಸು: ಹಯ್ಯೋ! ಇದೇನಿದು...ಅಪ್ಪನ್ಹೆಣ?...ಅಪ್ಪನ್ಗೇನ್ಬಂತೂ? ಅಪ್ಪನ್ಸ್ಮಶಾನಕ್ಸಾಗ್ಸೋದು ಅಪ್ಪನ್ಸುಡೋದು...ಅಪ್ಪನ್ಬೂದಿ...ಹಯ್ಯೋ!...ಅಪ್ಪಾ! ಅಪ್ಪಾ!!...(ಹೊರಳಾಡುತ್ತಾ) ಇದೇನ್ಹಾಳ್ಕನ್ಸೂ??!

ರಂಗಣ್ಣ: ಇನ್ನಾನ್ಸತ್ಮೇಲೆ. ನನ್ಹೆಂಡ್ತಿ ಸತ್ರೆ. ಅವಳ್ಹೆಣದ್ಪಾಡೇನೂ!?

ನರ್ಸು: ಅಪ್ಪ ಮಾತಾಡಿದ್ಹಾಗಿತ್ತಲ್ಲಾ!...ಅಪ್ಪನ್ಹೆಂಡ್ತಿ! ನಮ್ಮಮ್ಮನ್ಹೆಣದ್ಪಾಡು?...ಹಯ್ಯೋ! ತಲೆ ಬಿರೀತ್ತಲ್ಲಾ...ಹಯ್ಯೋ!...ಅಪ್ಪನ್ಹೆಣ, ಅಮ್ಮನ್ಹೆಣ...ಅಮ್ಮ...ನಮ್ಮಮ್ಮ!!

ರಂಗಣ್ಣ: ಇನ್ನ್ ಕಿಟ್ಟೂ ಹೆಣ...ಲಕ್ಷ್ಮೀಪತೀ? (ಮೇಜಿನ ಮೇಲಿರುವ ಕಾಗದವನ್ನು ತೋರಿಸುತ್ತಾ) ನನ್ನ oldest friendoo...ನಮ್ಕಿಟ್ಟೂಗೆ ತನ್ನ daughterನ ಮದುವೆ ಮಾಡ್ಕೊಳ್ಳೋದೂ ಅಂತ...ನಾವಿಬ್ರು ಹತ್ವರ್ಷಕ್ಮುಂಚೇನೇ ಮಾಡ್ಕೊಂಡ ಏರ್ಪಾಡ್ನ ಜ್ಞಾಪ್ಕಿದ್ದಕ್ಕೆ ಬರಿತಾನೆ ನನಗಿತ್ರ "ಕಿಟ್ಟೂನ್ಬಿಟ್ಟು ನನಗ್ಬೇರೆ ಅಳಿಯ ಬೇಡ್ವೇ ಬೇಡ. ಅದ್ರ ನರ್ಸ್ನ ಮನೇಲಿರೋ ವರ ಮದ್ವೇನ ಜರಗ್ಸೋ ಅನಾಸ್ಕೂಲಾನ ಪಿವರ್ಸೋಕೆ ನನಗ್ಮನಸ್ಸ್ರಬ್ಬ" ಅಂತ ಅಂದ್ಬಿಟ್ಟೂ. "ಹತ್ಸಾವ್ರ ರೂಪಾಯಿ ವರ್ಗ್ಗೂ ಸಹಾಯಮಾಡೋಕೆ ತಯಾರಾಗಿದ್ದೇನೆ," ಅಂತಾನೆ ನರ್ಸ್ನನ್ನ ನೀಯಿಂದ ಸಾಗ್ಸೋಕೆ...

ನರ್ಸ್: ಹಯ್ಯೋ!...ನನ್ನಾಗ್ಹೋದು!?...ಸಾಯೋಕ್ತಯಾರಾಗಿಲ್ವೇ? ಹಾಳು ಜ್ವರ...ಹಾಳ್ದಾಕ್ಟ್ರು ...ಈ ಹಾಳ್ದಾಕ್ಟ್ರು ಯಾಕ್ಬಂದ್ರು?!

ರಂಗಣ್ಣ: ಇಸ್ಕಿಟ್ಟೂ ಹೆಣಾನ...ನರ್ಸ್. ಫುಟ್ಟಾ, ಏನ್ಮಾಡ್ತಾರು? ಆ ಮಕ್ಳು?...

ನರ್ಸ್: ಕಿಟ್ಟೂ ಹೆಣಾ?...ಹಯ್ಯೋ!...

ರಂಗಣ್ಣ: ಇನ್ನರ್ಸ್ನ ಸತ್ರೋ...ಅವಳ್ಹೆಣಾನ ಈ ವೂರಲ್ಮುಟ್ಟೋಲ್ಲ!! ಗಳೂಪಿಂದ ಕೂಡ!

ನರ್ಸ್: ನನ್ಹೆಣಾ...ಈ ವಂಭತ್ವರ್ಷ್ದಿಂ ಇಲ್ಲದ್ದಾಕ್ಟ್ರು, ಈಗ್ಯಾಕೆ ಬರ್ಬೇಕು?...

ರಂಗಣ್ಣ: ಇನ್ನುಟ್ಟ ಬೇರೊಂದ್ಕೂತಿದೆ, ನನ್ತಲೇಲಿ....ಅವಳ್ವಯಸ್ಸಾಗೋ ಒಂದೊಂದ್ವಾರ್ನೂ ...ನನ್ತಲೇಲಿ ಒಂದೊಂದ್ನರೆ ಕೂದ್ಲು, ಹೆಚ್ಚಾ ಬರುತ್ತೆ!...ಲಕ್ಷ್ಮೀಪತಿ!...ಇನ್ಮಾವೆಲ್ಲ ಸತ್ಮೇಲೇ ಆ ವಂದ್ಮಗು ಏನ್ಮಾಡೀತು?... (ಭಯಗರ್ಭಿತವಾದ ಸ್ವರದಿಂದ) ಏನೇನಾಹುತಗ್ಳು...ಕಷ್ಟಗ್ಳು ನಮ್ಕುಟುಂಬಕ್ಸಂಭವ್ಸಿದ್ರೂ ಲಕ್ಷ್ಮೀಪತೀ!...ಇನ್ನದೊಂದು...ಇಪ್ಪರಿಗೂ ಆಗಿಲ್ಲ...ಇನ್ಮೇ ಮಗು ಯಾವ್ಹುಲೀ ಬಾಯಲ್ಬೀಳತ್ಯೋ...ಅದೊಂದ್ಬೇರೇ ಇರೀತಿದೆ. ನನ್ನುದ್ದಾನ...ಇನ್ಮೇ ಹುಲಿಗಳ್ಮಧ್ಯೆ ...ಇನ್ನವಳ್ಗತಿ ಏನು?...

ನರ್ಸ್: ಹುಲೀಬಾಯ್ಲಿ!...ನವ್ ಪುಟ್ಟಾ? ಹಯ್ಯೋ!

ರಂಗಣ್ಣ: ಇದಕ್ಕೇ ಲಕ್ಷ್ಮೀಪತೀ, ನಾನ್ಸಾಯ್ಬಾರ್ದು ಅಂದದ್ದು...ಇವ್ರೆಲ್ಲಾ ಒಟ್ಗೆ ಪ್ರಾಣ್ಬಿಟ್ಟು ಸ್ಮಶಾನಕ್ಕವರನ್ನಾಗ್ಸಿ, ಬೂದೀ ಮಾಡಿ...ನನ್ಹತ್ರಿರೋ ಹಣ...ಐದ್ಸಾವರ್ರೂಪಾಯಿ cash ಇದೆ. ಲಕ್ಷ್ಮೀಪತೀ ನನ್ಹತ್ರೀಗಾ!...ದೇವ್ರಸ್ಮರ್ತು ಧನಪಿಶಾಚಿಯ ಕಾಲ್ಮೇಲೆ ಬಿದ್ಹೋಗ್ತಾ ಹೋ ಗೋಬ್ರಾಹ್ಮಣ್ರಿಗೆರಚಿಬಿಟ್ಟು, **ದೇವ್ರೇ ಇನ್ನನಿಗ್ಯಾವ ಜನ್ಮ ಬಂದ್ರೂ ಈ ಹಾಳು ಹಣಕ್ಕ ಡ್ಬೀಳೋ ಹಾರ್ವರ ಜನ್ಮ ಬೇಡ...ಬೇಡಾ...**ಅಂತ್ಬಡ್ಕೊಳ್ತಾ ಬಿಪಬೇಕೂಂತಿದ್ದೇನೆ. ಈ ದೇಹಾನ ...ಇದಕ್ಕೇ ಲಕ್ಷ್ಮೀಪತಿ ನೀನು cure ಮಾಡ್ಲೇ ಬೇಕೂ...ಇದಕ್ಕೇನೇ ನನ್ಹೆಂಡ್ತಿ ಮಕ್ಳು ಸತ್ಹೋಗಿ ಯಾಗೋವರ್ಗ್ಗೂ ನಾನ್ಸಾಯ್ಬಾರ್ದು ಅಂತ್ಹೆದರ್ತಿರೋದು ನಾನು...ಸಾವಿಗೆ!! ನಿಸ್ಸೈಯಿಂದಾಗ್ಲೋ ನಮ್ಕುಟುಂಬಕ್ಕೆಲ್ಲಾ ವಿಷಾನ್ಕೊಟ್ಟು, ನಾನೂ ಕುಡ್ದು. ಸಾಯ್ಬೇಕು. ಕೊನೇಲಿ! ಯಾಕೆ. ಅಂತೀಯೋ?...ನನ್ದುಡ್ಡೆಲ್ಲಾ ಮನೆ ಹೊಸಲ್ಮೇಲ್ಸುರ್ದು ಒಂದು will ನಲ್ಲಿ "ನಮ್ಮ್ಗೋ ಬದ್ಕೆಣಾನ ಯಥಾ ವಿಧಿ ಯಾರು ಸಂಸ್ಕಾರ ಮಾಡ್ತಾರೋ ಅವರ್ದೀ ದುಡ್ಡು" ಅಂತ ಬರದಿಟ್ಬಿಟ್ಟತ್ರೇನೋ...ಈ ಹಣಾನ್ಬಾಚ್ಕೊಳೋಕ್ಬರೋ ಬ್ರಾಹ್ಮಣ್ರ ಗಲಾಟೇಲಿ. ನಮ್ಮಲ್ಬಿದ್ದಿರೋ ಒಂದೊಂದ್ಹೆಣಕ್ಕೆ... ಹತ್ಹತ್ಬ್ರಾಹ್ಮಣ್ರ್ಹೆಣ...ಈ ಗುದ್ದಾಟ್ದಲ್ಲಿ ಬಿದ್ಹೋಗತ್ತೇ ಅಂತ್ನನಿಗಿಲ್ಲೇಳುತ್ತೆ!...ಈಗರ್ಥ್ವಾಗತ್ಯೇ ಲಕ್ಷ್ಮೀಪತೀ!...ಒಬ್ಬಾಯಿ...ತನ್ಕಣ್ಣೆದ್ರೂಗೆ...ತನ್ಮಕ್ಳು ಅನ್ವಿಲ್ದೆ ಸಾಯೋದ್ನ ನೋಡ್ಬಾರ್ದೇ... ಅವುಗ್ಳಿಗ್ವಿಷಾ ಕೊಟ್ಸಾಯ್ಸಿದ್ಲೂ ಅಂತ paperನಲ್ಲಿ ಓದಿ...ತಾಯೀಗ್ರಕ್ತನ್ನಾಯ್ತೋ ಪ್ರವ್ಹಾ ಹ್ಯಾಗ್ಬಂತೂಂತ್ಕೇಳ್ತಿದ್ವಲ್ಲಾ ... ಈಗರ್ಥವಾಯ್ತೋ ... ಲಕ್ಷ್ಮೀಪತಿ? ... ನಮ್ಮನ್ನೋಡಿ ... ನಮ್ಮಾಗ್ನ ನ್ನೋಡಿ...ಹತ್ಕುಟುಂಬ ಬದಿಕ್ಕೊಳ್ಳೋದಾದ್ರೆ ಒಂದ್ಕುಟುಂಬ "ಗುಂ" ಆಗ್ಲೇ ಬೇಕು... **ಹತ್ ಜನದ್ಹಾನಿ ತಪ್ಸೋ ವಿಷ್ಯದಲ್ಲಿ ಒಬ್ರು ಸಾಯೋಕ್ಹೆಂಜರೀಬಾರ್ದು !...** ಹಿಂಜರೀಬಾರ್ದು.

ನರ್ಸು: ಯಾರೀಗ ಹಿಂಜರೀತಾ ಇರೋದು? ಈ ಶನಿ, ಡಾಕ್ಟ್ರುಬ್ಬ ಬರ್ದೇ ಇದ್ರೆ ನಾನೂ ಸಾಯ್ತಿದ್ದೆ...ಎಲ್ಲಾನೂ ಸರ್ಹೋಗೋದಲ್ಲಾ...ಹಯ್ಯೋ!...ಹಯ್ಯೋ!...ಈಗ್ಯಾಕ್ಯಾಗ್ಸಾಯೋದೂ? ಈ ಶನಿ ಡಾಕ್ಟ್ರು ಬಂದ್ಬಿಟ್ನಲ್ಲಾ!! (ನರಳುತ್ತಾ ಹೊರಳುವಳು.)

ವೆಂಕಮ್ಮ: (ಪ್ರವೇಶಿಸಿ ಮೃದುವಾಗಿ) ಡಾಕ್ಟ್ರೇ...ನೀರ್ಯಾಕಿಟ್ಟಿದೇನೆ ಕಿಟ್ಟಿ ಹೇಳ್ದಾಗೆ...ಅದ್ನ ...ಹ್ಯಾಗೆ...?

ಲಕ್ಷ್ಮೀಪತಿ: ಏನೂ ಇಲ್ಲಮ್ಮಾ...ಒಂದ್ಪಾತ್ರೇಲ್ತಣ್ಣೀರು...ಒಂದ್ಪಾತ್ರೇಲ್ಬಿಸ್ನೀರು, ಕುದೀ ತಿರ್ಬೇಕೆಚ್ಚುಕಡ್ಮೆ, ಕಿಟ್ಟಿ ಒಂದು Tumbler ನೀವೊಂದು Tumbler...ಮೊಳಕಾಲ್ಮೇಲೆ (ರಂಗಣ್ಣನ ಮೊಳಕಾಲನ್ನು ತೋರಿಸುತ್ತಾ) ಬಿಸ್ನೀರ್ಮೇಲ್ತಣ್ಣೀರು, ತಣ್ಣೀರ್ಮೇಲ್ಬಿಸ್ನೀರು, ಕಾಲ್ಘಂಟೆ ಹೊತ್ತಾದ್ಮೇ ಹಾಕೋದು...ತಿರ್ಗೀ ಔಷಧಾ...ಕಿಟ್ಟಿ ಕೈಲ್ಕಳ್ಸ್ಕೊಡೋದು ಅಷ್ಟೆ. ಇನ್ನೇಳ್ರಂಗಣ್ಣಾ...ನೀರಾರೀತು.

[ವೆಂಕಮ್ಮನೂ ರಂಗಣ್ಣನೂ ನಿಷ್ಕ್ರಮಿಸುವರು]

ಲಕ್ಷ್ಮೀಪತಿ: (ಮೇಜಿನ ಮೇಲೆ ಒಂದು ಸೀಸೆಯನ್ನೂ ಅರಳೆಯನ್ನೂ ಇಟ್ಟು ಬಾಗಿಲಿಗೆ ಒರಗಿಕೊಂಡು ನಿಂತಿರುವ ಕಿಟ್ಟೂಗೆ) ಕಿಟ್ಟೂ! ಇದಿಲ್ಲಿಟ್ಹೋಗ್ತೇನೆ, ನಾಳೆ apply ಮಾಡೋಕೆ; Cottonoo ವೇ ಪಕ್ದಲ್ಲೇ ಇದೆ. ಹಂಚೀ ಕಡ್ಡೀಲಿ brush ಮಾಡ್ಕೊಂಡು ನೀನೇ ಹಚ್ಚು ...ಸೀಸಾಯಿ ಮಟ್ಗೆ ಹುಷಾರೂಪ್ಪ! Terrible Poisonoo, linament of Belladonna ಒಂದ್ಬಾಯಿ ನುಂಗ್ಬಿಟ್ರೆ ಯಾವ್ಡಾಕ್ಟ್ರು ಬಂದ್ರೂ ಬದಕ್ಸೋದಸಾಧ್ಯ...ಮಗು ಇರೋ ಮನೆ...ಹುಷಾರೂಪ್ಪ!... Good-Night

ಕಿಟ್ಟೂ: Good-Night ಡಾಕ್ಟ್ರೆ...ಬೆಳಿಗ್ಗೆ ಬಂದ್ನೋಳ್ತೇನೆ, ನರ್ಸುಗೆ ಸ್ಥಿತೀನ.
(ಲಕ್ಷ್ಮೀಪತಿಯು ಬೀದಿ ಬಾಗಿಲಿನಿಂದಲೂ ಕಿಟ್ಟಿಯು ಹಿಂದಿನ ಬಾಗಿಲಿನಿಂದಲೂ ನಿಷ್ಕ್ರಮಿಸುವರು.)

ನರ್ಸು: (ಕಣ್ಣುಗಳಲ್ಲಿಯೂ ಮುಖದಲ್ಲಿಯೂ ಉನ್ಮಾದವು ತುಂಬಿ ತುಳುಕುತ್ತ) ಯಾವ್ಡಾಕ್ಟ್ರ ಕೈಲೂ ಆಗೊಲ್ಲ...ಇದೊಂದ್ಬಾರಿ...ಈಗ್ಬಿದರ್ಬಾರ್ದು...ಅಪ್ಪೇಳ್ದ...ಹತ್ಜನದ್ಹಾನಿ ತಪ್ಸೋಕೆ ಒಬ್ರು ಸಾಯೋಕ್ಹಿಂಜರೀಬಾರ್ದು!...ಇನ್ನ್ಯಾನ್ನತ್ಹೋ...ಎಲ್ಲಾ ಸರ್ಹೋಗತ್ಮನೇಲಿ...ಅಪ್ನೂ ಅಮ್ಮೂನೇ ಸಾಯ್ಬೇಕಾದ್ದಿಲ್ಲ...ಕಿಟ್ಟೀಗೂ ಹೆಂಡ್ತಿ ಬರ್ತಾಳೆ...ಪುಟ್ಟಾನ್ನುಂಗೋಕೆ ಯಾವ್ಹುಲೀನೂ ಬರೋದಿಲ್ಲ... ಹಿಂಜರೀಬಾರ್ದು...(ಹಲ್ಲನ್ನು ಕಚ್ಚಿಕೊಂಡು ಉನ್ಮಾದಾವಸ್ಥೆಯಲ್ಲಿ ಮಂಚವನ್ನು ಇಳಿದು ಕೋಣೆಯ ವಾಮಾಂತವನ್ನು ಸೇರಿ ದ್ರಾವಕದ ಸೀಸೆಯನ್ನು ಮೇಜಿನಿಂದ ಕಸಿದು, ಸೀಸೆಯ ಬಿರಡೆಯನ್ನು ಕಿತ್ತೆಸೆದು ಸೀಸೆ ಬಾಯನ್ನು ತನ್ನ ಬಾಯಿಗೆ ಎತ್ತುವ ಪ್ರಯತ್ನದಲ್ಲಿ ಹಿಂಜರಿಯುವ ಕೈಯನ್ನೂ ಮತ್ತೊಂದು ಕೈಯಿಂದ ಜಗ್ಗಿಸಿ, ಬಾಯಿಗೆಳೆಯುತ್ತಾ) ಈಗ್ಬಿದರ್ಬಾರ್ದು!...ಹಿಂಜರೀಬಾರ್ದು!...

ಅಪ್ಪನ್ಸಾವು...ಅಮ್ಮನ್ಸಾವು...ಕಿಟ್ಟೀ ಸಾವು...ಪುಟ್ಟಾ ಹುಲಿ ಬಾಯ್ಗೆ ಬೀಳೋದು...ಇದ್ನೆಲ್ಲಾ ತಪ್ಸೋಕೆ...ಒಂದೇ ದಾರಿ...ಇದ್ನಗಾನ ಹೆದರ್ದೆ ಸುರ್ಕೊಂಡ್ಬೋ ಬಾಯ್ಗೆ...ಡಾಕ್ಟ್ರು ಹೇಳಿದ್ದಾರೆ... ಯಾರ್ಬದಕ್ಸೋಕೂ ಅಸಾಧ್ಯಾಂತ...ಬೆದರ್ಬಾರ್ದೀಗ...ಹಿಂಜರೀಬಾರ್ದೀಗ...(ಥಟ್ಟನೆ ದ್ರಾವಕವನ್ನು ಬಾಯಿಗೆ ಬಸಿದುಕೊಂಡು ವಾಂತಿಯಾಗಲು ಉದ್ಯೋಗಿಸುವ ಅವಸ್ಥೆಯನ್ನು ಹಲ್ಲು ಕಚ್ಚಿಕೊಂಡು ಅಡಗಿಸಿ...ಒಂದು ತೊಟ್ಟಾದರೂ ಹೊರಬೀಳುವುದಕ್ಕೆ ಆಸ್ಪದ ಒದಗದಂತೆ ಎರಡು ಕೈಗಳಿಂದಲೂ ಬಾಯನ್ನು ಬಿಗಿದು ಮುಚ್ಚಿ ನುಂಗಿದ ದ್ರಾವಕವು ಜಠರದಲ್ಲಿ ಕಿಸಿದ ವ್ಯಥೆಯನ್ನು ತಡೆಯಲಾರದೆ ನೆಲಕ್ಕೆ ಕುಸಿದುಬಿದ್ದು ಹೊಟ್ಟೆಯನ್ನು ಕೈಯ್ಗಳಿಂದ ಕಿವಿಚಿಕೊಳ್ಳುತ್ತಾ "ಹಯ್ಯೋ ಹಯ್ಯೋ" ಎಂದು ಹೊರಳಾಡುವಳು.)

ಪುಟ್ಟ: (ಪ್ರವೇಶಿಸಿ) ಏನಕ್ಕಾ ಇದೂ (ಬೆದರಿ ಬೆಚ್ಚಿಬಿದ್ದು) ಅಮ್ಮನ್ಕರಿತೇನೆ.

ನರ್ಸು: ಬೇಡಾ, ಇಲ್ಲಾ...ನೀರೂ...ನೀರು ಕಿಟ್ಟೂನ್ನಟ್ಟಿಗ್ಕರೀ...ಅಮ್ಮನಿಗ್ಹೇಳ್ಬೇಡ...ಅಪ್ಪನಿಗ್ಹೇಳ್ಬೇಡ...ನೀರೂ...(ನೆಲದ ಮೇಲೆ ಬಿದ್ದು ಹೊರಳಾಡುತ್ತಾ) ನೀರೂ...ಕಿಟ್ಟೂನ್ನಟ್ಟಿಗ್ಕರೀ...ಹಯ್ಯೋ ನೀರೂ!

ಪುಟ್ಟ: (ಬಾಗಿಲಿಗೆ ಓಡಿ) ಕಿಟ್ಟೂ...ಕಿಟ್ಟೂ...ಇಲ್ಲಾ...ಅಕ್ಕಿಗೆ...

ನರ್ಸು: ಮೆಲ್ಲಗ್ಕೂಗು ಪುಟ್ಟಾ...ನೀರೂ...ನೀರೂ...!!

ಪುಟ್ಟ: ತರ್‍ತೀನಕ್ಕಾ!...(ಹೋಗಿ ಒಂದು ಲೋಟ ನೀರನ್ನು ತರುವಳು.)

ನರ್ಸು: (ನೀರನ್ನು ಒಂದೇ ಗುಟುಕಿಗೆ ಕುಡಿದು) ಸಾಲ್ದೂ...ಸಾಲ್ದೂ...ಚೊಂಬ್ನಲ್ತಗೊಂಬಾ...ಬಿಂದ್ಗೇಲ್ತಗೊಂಬಾ...ಹಂಡೇಲ್ತಂದ್ರೂ ಸಾಲ್ದೂ...ಹಯ್ಯೋ! ಹಯ್ಯೋ...

ಕಿಟ್ಟೂ: (ಗಾಬರಿಯಿಂದ ಪ್ರವೇಶಿಸಿ) ಏನ್ನರ್ಸು ಇದೂ? (ಸುತ್ತಮುತ್ತಲೂ ವಾಸನೆಯನ್ನು ನೋಡಿ, ಖಾಲೀ ಸೀಸೆಯನ್ನು ನೋಡಿ) ಹಯ್ಯೋ ದೇವ್ರೇ! ಇದ್ನ ಕುಡಿದ್ಬಿಟ್ಯಾ?...(ಬೀದಿ ಬಾಗಿಲಕಡೆ ಹೆಜ್ಜೆ ಇಡುತ್ತಾ) ಡಾಕ್ಟ್ರನ ಕರೀತೇನೆ!!

ನರ್ಸು: (ಹೊರಳಿ ಹೊರಳಿ ಕಿಟ್ಟಿಯನ್ನು ಸಮೀಪಿಸಿ ಅವನ ಕಾಲನ್ನು ಹಿಡಿದ್ಕೊಂಡು ಅವನ ಪಾದದ ಮೇಲೆ ಮುಖವನ್ನು ಹೊರಳಿಸುತ್ತಾ) ದಮ್ಮಯ್ಯಾ...ಕಿಟ್ಟೀ...ಹೋಗ್ಬೇಡ...ಯಾವ್ಡಾಕ್ಟ್ರು ಬಂದ್ರೂ ಅಸಾಧ್ಯ!...ಬದ್ಕೋದಸಾಧ್ಯ...ದಮ್ಮಯ್ಯಾ...ಅಪ್ಪಿಗೂ, ಅಮ್ಮಿಗೂ ಹೇಳ್ಬೇಡಾ...ನೀರೂ ...(ಹಿಂದಕ್ಕೆ ಬಿದ್ದು ಹೊರಳಾಡುತ್ತಾ) ಪಾಪೀ ನೀರೋ...ನಿನ್ಧರ್ಮಕ್ನೀರೋ...(ಕಿಟ್ಟಿಯು ಒಳಕ್ಕೆ ಹೋಗಿ ಚೊಂಬಿನ ತುಂಬ ನೀರನ್ನು ತರುವನು) (ನರಸುವು ಅದನ್ನು ಕಿತ್ತುಕೊಂಡು ಕುಡಿದು) ಅಮ್ಮಾ... ಅಮ್ಮಾ (ಸ್ವಲ್ಪ ನಿಧಾನವಾಗಿ) ಹಯ್ಯೋ ಕಿಟ್ಟೀ...ನಾನ್ಹುಟ್ಟಿದಾರಭ್ಯ ಒಬ್ರಿಗೊಂದುಪ್ಕಾರ ಮಾಡ್ಲಿಲ್ಲಾ ...ಅಜ್ಜಿ ಸಾಯೋವಾಗ...ಅವ್ವೂನೂ, ಅಪ್ಪೂವೇ ಬಯ್ದಾಗ...ನಾನ್ಹುಟ್ಟಿದ್ದೇ ನಮ್ಮನೆಯವರ್ಕ್ಕೇ ಅಪ್ಕಾರ...ಈಗ್ನನ್ನಾಪ್ನಿಂದ ಅಪ್ಪಿಗೂ, ಅಮ್ಮಿಗೂ, ನಿನಗೂ, ಪುಟ್ಟಾಗೂ, ಆಗೋ ನಷ್ಟಪ್ಕಾರಾನ... ನಿನ್ಧರ್ಮಕ್ಕೆ ಕೆಡಸ್ಬೇಡ...ಕಿಟ್ಟೂ!...ಆ ಸೀಸೇನ ಮೂಲೇಗ್ಬಿಸಾಕು. ನಾನ್ಹೀಗ್ನರ್ತೇಂಜೋದು, ಹೊರಗ್ಬಿದ್ರೆ...ನಾಳೇ ನನ್ಹೆಣಾನ್ಹಾಗ್ಗೋದು...ಅಸಾಧ್ಯವಾಗುತ್ತೆ, ಅಪ್ಪಿಗೆ...ನೀರೂ...ನೀರೂ... ನೀರೂ...ನೀರೂ!!

ಕಿಟ್ಟೂ: (ಒಳಕ್ಕೆ ಹೋಗಿ ಚೊಂಬಿನ ತುಂಬ ನೀರನ್ನು ತರುವನು)

ನರ್ಸು: (ಕಿತ್ತುಕೊಂಡು ಕುಡಿದುಬಿಟ್ಟು) ನಿಲ್ಲಾರೇ...ನಿಲ್ಲಾರೇ...

ಕಿಟ್ಟೂ: (ಮೆಲ್ಲಗೆ ನರಸುವನ್ನು ಎತ್ತಿ ಮಂಚದ ಮೇಲೆ ಮಲಗಿಸುವನು.)

ನರ್ಸು: ಪುಟ್ಟಾನ್ಬಿಡ್ಬೇಡ...ಅಪ್ಪಿಗ್ಹೇಳ್ಬಿಟ್ಟಾಳು!!

ಕಿಟ್ಟೂ: ಇದ್ಯಾಪ್ವಲ್ವೇ ನರ್ಸೂ...ಹೀಗ್ಮಾಡ್ಬಹುದೇ?...ದೇವ್ರು ಒಪ್ತಾನೇ?

ನರ್ಸು: ಯಾವ್ದೇವ್ರು? ಕಿಟ್ಟೂ?...ಗಂಡಸ್ರಿಗಿಧಾನೆ ದೇವ್ರು...ಹೆಂಗಸ್ರಿಗೆ...ಗಂಡ್ನೇ ದೇವ್ರು ಅಂತಾರಲ್ಲಾ ದೊಡ್ಡವ್ರು...ಗಂಡ್ನೇ ಇಲ್ಲದ್ವನಿಗೆ ದೇವ್ರೆಲ್ಲೀ?...ನನ್ಪಾಪಾನ ಒಪ್ಕೋಳ್ಳೋಕಾಗ್ಲಿ...ತಪ್ಪೂ ಅನ್ನೋಕಾಗ್ಲಿ, ಗಂಡ್ನಿಲ್ಲದ್ವನಿಗೆ ದೇವ್ರೆಲ್ಲಿಧಾನೆ?...ಇನ್ನೀಪಾಪ್ದಿಂದ. ನಿನಗ್ಬಂದಕ್ಕಟರೋ ಹೆಂಡ್ತೀಗೆ. ದೇವ್ರನ್ನೂ ... ನಾನ್ಸತ್ಮೇಲೆ ಪುಟ್ಟಾಗಾಗೋ ಮದ್ವೆಯಿಂದ. ಅಪ್ಪಿಗೊಬ್ಬ ದೇವರ್‍ನೂ ... ನಾನ್ಮಾಡ್ಕೊಟ್ಟಾಗೆ ಆಗುತ್ತೆ ... ಕಿಟ್ಟು ... ಇದ್ಯಾಪ್ವಲ್ಲ ... ಪುಣ್ಯ ... ನಾನ್ಮಾಡ್ಕೋಳ್ಳದ್ದು ದೊಡ್ಡ ಪಾಪ...ಇದ್ವರ್‍ಗೂ ಬದ್ಕಿದ್ದದ್ದೇ ಪಾಪ...ಇನ್ನಾನ್ಸಾಯೋದ್ಪುಣ್ಯ. ಕಿಟ್ಟೀ...ಪುಣ್ಯ...ಕಿಟ್ಟೀ... ಹೋಗ್ತಿದೇನೆ...ಅಮ್ಮನ್ನೋಂದ್ಸಲ್ರಿ ನೋಡ್ಬೇಕೂಂತನ್ಸತ್ತೆ...ಅಪ್ಪಿಗ್ತಿಳೀದ್ದಾಗೆ, ಮೆಲ್ಲಗ್ಕರ್‍ಕೊಂಡ್ ಬರ್‍ತೀಯಾ...?

ಕಿಟ್ಟೂ: (ತನ್ನ ಅಳುವನ್ನು ತಡೆಯುತ್ತಾ) ಹೂಂ...ನರ್ಸು! (ನರ್ಸುವಿನ ಕೈಗಳನ್ನು ತೆಗೆದುಕೊಂಡು ಕಣ್ಣಿಗೆ ಒತ್ತಿಕೊಂಡು ಅಳುವನು.)

ನರ್ಸು: ಅತ್ತೇನ್ಮಾಯೋಜ್ನ? ಕಿಟ್ಟೀ...ಅಜ್ಜಿ ಸತ್ತಾಗ್ನಿಂದ...ಅಳುವಿನಲ್ಲೇ ಮುಳ್ಗಿರೋ ನಮ್ಮನೇ ...ಇವತ್ನಿಂದ ಆದ್ರೂ...ಅಳು ಅಡಗ್ಲಿ...ಕಿಟ್ಟೂ...(ಕಿಟ್ಟೂವಿನ ಮುಖವನ್ನು ತನ್ನ ಮುಖದ ಹತ್ತಿರ ಕೈಳೆದುಕೊಂಡು ಅವನ ಹಣೆಗೆ ಮುದ್ದಿಡುವಳು) ಕಿಟ್ಟೀ...ನಮ್ಮಿಕಿಟ್ಟಿ...ಅಮ್ಮನ್ಕರೀ...ರಾಜ... ನೋಡ್ಬಿಟ್ಟೊಬ್ಬೀಗ್ತೇನೆ!!

[ಕಿಟ್ಟಿಯು ಅಳುತ್ತಾ ನಿಷ್ಕ್ರಮಿಸುವನು]

ಪುಟ್ಟಿ: ಅಕ್ಕಾ...ನೋವ್ನಿಂತಿದೆಯೇ?...ಎಲ್ಲಾ ಸರ್ಹೋಗುತ್ಯೇ?

ನರ್ಸು: (ಪುಟ್ಟಾವಿನ ಮುಖವನ್ನು ಸವರುತ್ತಾ) ಇನ್ಮೇಲೆಲ್ಲಾ ಸರ್ಹೋಗತ್ನನ್ನಾಣೆ...ಆದ್ರೆ ನೋವು ಹಾಗೇ ಇದೆ...ಇನ್ನೂ ಹೆಚ್ತಿದೆ. ನೀರೂ...ನೀರೂ...!!

ಪುಟ್ಟಿ: ನೋವು ನಿಂತಿಲ್ವೇ?...ಹೆಚ್ತಿದೆಯೇ...ಮತ್ತೆ ಹ್ಯಾಗ್ಸರ್ಹೋಗತ್ತೇ?

ನರ್ಸು: ಹ್ಯಾಗ್ಗೊತ್ತಿಲ್ವೇ ಪುಟ್ಟಾ?...**ಎಲ್ಲಾ ಸರ್ಹೋಗೋಕ್ಮುಂಚೇನೇ ನೋವ್ಹೆಚ್ಚು... ಬೆಳ್ಳಂ ಬೆಳ್ಗಾಗೋಕ್ಮುಂಚೇನೇ ಕಕ್ಕಕ್ಕತ್ಲೆ ಹೆಚ್ಚು...ಹಕ್ಕಿಗ್ರಿಗೆ...ರೆಕ್ಕೆ ಬಂದು ಹಾರೋಕ್ಮುಂಚೇನೇ ಗೂಡಿನಿಕ್ಕಟ್ಟೆಬ್ಹೆಚ್ಚು!** (ಪುಟ್ಟನನ್ನು ತಬ್ಬಿಕೊಂಡು) ನನ್ಕಂದ...ಈಗ್ಯಾವ್ಹುಲಿ ಬರುತ್ನೋಡೋಣ, ನನ್ಕಂದನ್ನುಂಗೋಕೆ!...ಅಮ್ಮ ಬಂದ್ಲೇ ಪುಟ್ಟಾ...?

[ಕಿಟ್ಟೂ ಮತ್ತು ವೆಂಕಮ್ಮ ಇವರುಗಳು ಪ್ರವೇಶಿಸುವರು]

ಕಿಟ್ಟೂ: (ಬಾಗಿಲ ಬಳಿಯಲ್ಲಿ) ಅಮ್ಮಾ ಎಲ್ಲಾ ಆಗ್ಹೋಯ್ತು...ಹೋಗ್ತಿದಾಳೆ...ಅಳದೆ... ಮಾತಾಡ್ದೆ...ಸುಮ್ನೆ! (ಅಷ್ಟರಲ್ಲೇ ಬರುವ ದುಃಖವನ್ನು ತಡೆದುಕೊಂಡು, ಮಾತಾಡದೆ ಮಂಚದ ಕಡೆಗೆ ತೋರಿಸುವನು.)

ವೆಂಕಮ್ಮ: (ನರಸುವನ್ನು ವೇಗವಾಗಿ ಸೇರಿ) ಹಯ್ಯೋ ನರಸು! ಹೀಗ್ಯಾಕ್ಮಾಡ್ಬಹುದೇನೇ?

ನರ್ಸು: (ತಾಯಿಯನ್ನು ಪಕ್ಕದಲ್ಲಿರಿಸಿಕೊಂಡು ಅವಳ ಮುಖಕ್ಕೆ ತನ್ನ ಮುಖವನ್ನೊತ್ತುತ್ತ) ಅಮ್ಮಾ!...ನಮ್ಮಮ್ಮಾ!...ಅಮ್ಮಾ ನೀನಕ್ಕೆಷ್ಟಿದ್ದನಾ ಆಯ್ತಮ್ಮ...ನನ್ಗೆ ಮದ್ವೆ ಮಾಡ್ಬೇಕು ಅಂತ ನಿಶ್ಚಯಿಸ್ದದ್ದಿಂದ ಈಗಿನ್ವರಿಗೂ ಒಂದ್ಸಗೂ ನಲೀಲಿಲ್ಲಮ್ಮಾ...ನಿನ್ಮುಖದ್ಮೇಲೆ...ಆದ್ರಿನ್ಮೇಲ್ನಗ್ತೀ ಯಮ್ಮಾ...

ವೆಂಕಮ್ಮ: ಹಯ್ಯೋ! ನರ್ಸೂ...ನೀನ್ಹೋದ್ಮೇಲೆ ನಗೂ ಬೇರೇನೆ ನನ್ಗೇ?

ನರ್ಸು: ಇಲ್ದೇ ಏನಮ್ಮಾ!...ಇನ್ಸ್ವಲ್ಪಿದ್ದಿನ ದುಃಖ! ಅಷ್ಟೆ. ಕಿಟ್ಟೂಗ್ಮದ್ವೆ ಆಗಿ, ಮಕ್ಳುಹುಟ್ಟಿ, ಮನೆ ತುಂಬ, ಆ ಮಕ್ಳು ಅಂಬೆಗಾಲಿಡ್ತಿರೋವಾಗ ನಗು ಬರುತ್ತಮ್ಮಾ, ತನ್ನಷ್ಟಗ್ತಾನೇ ಬರುತ್ತಮ್ಮಾ! (ವೆಂಕಮ್ಮನ ತಲೆಯನ್ನು ಸವರುತ್ತಾ) ಅಮ್ಮಾ, ನಾನೊಡ್ಡೋಳಾಗೋಕ್ಮುಂಚೆ. ನಿನ್ತಲೇಲೊಂದ್ನರ್ತ ಕೂದ್ಲಿರ್ಲಿಲ್ಲಮ್ಮಾ ... ಹೇಳ್ತಾರಲ್ಲಾ ... **ಕೊರ್ತೆ ಬಂತೂತಂದ್ರೆ ಕೂದ್ಲು ನರ್ತ್ಹೋಗತ್ತೇಂತ...** ತಿರ್ಗ್ಸಂತೋಷ ಬಂದ್ರೇಮ್ಮಾ, ನರ್ತಕೂದಲು ತಿರಗೂನೂವೇ ಕಪ್ಪಾಗ್ಬೇಕಲ್ವೇ?...ಕಿಟ್ಟೂಗ್ಹೆಂಡ್ತಿ ಬಂದು, ಪುಟ್ಟಾಗ್ಗಂಡ್ನೂ ಬಂದು, ಮನೆಯೆಲ್ಲಾ ಮಕ್ಳ ನಗು...ಬ್ರಾಹ್ಮಣ್ರ ವೇದ ಘೋಷ ಮನೇ ತುಂಬ ತುಂಬ್ತಿರೋವಾಗ, ನಿನ್ಕೂದ್ಲೂ ಕಪ್ಪಾಗಿ ನಗ್ತೀಯಮ್ಮಾ ತಿರಗ್ನಗ್ತೀಯಾ...ಇದ್ನಾನ್ಮಾಡಿದ್ದಾಪಾಂದ ಕಿಟ್ಟು...ಹೆಂಗ್ಸಿಗೆ. ಗಂಡ್ನೇ ದೇವ್ರೂಂತ ಅಂತಾರಲ್ಲಾ... ಕಿಟ್ಟೂ ಹೆಂಡ್ತೀಗೂ, ಪುಟ್ಟಾಗೂ ದೇವ್ರನ್ನೂ. ನಿನ್ಮುಖಕ್ಕಗೂನೂ ಅಷ್ಟಿಗ್ಸಂತೋಷಾನೂ. ತರೋ ಇದ್ನ, ನಾನ್ಮಾಡಿದ್ದಾಷ್ಟೇ ಅಮ್ಮಾ?...ಇನ್ನು ಆಗ್ತಾದ್ರೂನೂ. ಯಾಕ್ಹುಟ್ಟಿದ್ಲೀ ಶನೀ, ಯಾಕ್ಹುಟ್ಟಿದ್ಲೀ ಶನೀ ಅಂತ ಅಜ್ಜೀ—(ತಟ್ಟನೆ ಎದ್ದು ಕುಳಿತು ಎರಡು ಕೈಗಳನ್ನೂ ಮೇಲಕ್ಕೆತ್ತಿ, ಸೂರಿನಲ್ಲಿ

ಯಾರನ್ನೋ ಕಂಡಂತೆ ದುರುಗುಟ್ಟಿ ದೃಷ್ಟಿಯನ್ನು ನಿಶ್ಚಲವಾಗಿ ನಿಲ್ಲಿಸಿ ಚೀತ್ಕಾರ ಧ್ವನಿಯಿಂದ) ಅಜ್ಜೀ...ಬಯ್ಬೇಡಾ ಅಜ್ಜಿ, ಶಪಿಸ್ಬೇಡಾ...ಇನ್ಮೇಲೆಲ್ಲಾ ಸರ್ಯೋಗುತ್ತೆ...ಅಜ್ಜೀ...ಬಯ್ಬೇಡ... ಅಜ್ಜೀ...ಬಯ್ಬೇಡಾ...ಹಾ? ...ಹಾಂ!...(ಥಟ್ಟನೆ ಬೀಳುವಳು. ಗತಪ್ರಾಣಳಾದ ನರಸುವಿನ ತಲೆಯು ಮಂಚದ ಅಂಚನ್ನು ಅತಿಕ್ರಮಿಸಿ ಬಿದ್ದು ತೂಗುವುದು. ಕೇಶರಾಶಿಯು ನೆಲಕ್ಕೆ ಬಿದ್ದು ಶವದ ಮುಖದಲ್ಲಿ ಮುಗುಳಿನ ಮುದ್ರೆಯು ಕಂಡುಬರುವುದು)...

ವೆಂಕಮ್ಮ: ಹಯ್ಯೋ! ನರ್ಸು! ಹೋದ್ಯಾ! (ಶವದ ಭುಜಪಾರ್ಶ್ವದಲ್ಲಿ ಮುಖವನ್ನು ಹೂತು ಬಿಕ್ಕಿ ಬಿಕ್ಕಿ ಅಳುವಳು. ಕಿಟ್ಟಿಯು ತಲೆಯ ಭಾಗದಲ್ಲಿಯೂ ಪುಟ್ಟು ಪಾದದ ಕಡೆಯೂ ಮುಖಗಳನ್ನು ಹೊರಳಿಸುತ್ತಾ "ನರಸೂ. ನರಸೂ, ಅಕ್ಕಾ. ನಮ್ಮಕ್ಕಾ" ಎಂದು ಬಿಕ್ಕಿ ಬಿಕ್ಕಿ ಗೋಳಾಡುತ್ತಿರುವರು.)

ರಂಗಣ್ಣ: (ನೆನೆದ ವಸನದೊಂದಿಗೆ ಪ್ರವೇಶಿಸಿ ಈ ದೃಶ್ಯವನ್ನು ನೋಡಿ) ಹಯ್ಯೋ ದೇವ್ರೇ!... ಇದೇನನಾಹುತಾ? (ಮೇಜಿನ ಮೇಲಿನ ಖಾಲಿ ಸೀಸೆಯನ್ನೂ ಗಮನಿಸಿ. ಹಣೆಯನ್ನು ಬಡಿದು ಕೊಳ್ಳುತ್ತ ಶವವನ್ನೂ ಸಮೀಪಿಸಿ ಅದರ ಮೇಲೆ ಮುಖವನ್ನು ಹೊರಳಿಸುತ್ತಾ...ಹೃದಯವನ್ನು ಭೇದಿಸುವ ಆರ್ತಧ್ವನಿಯಿಂದ) ಹಯ್ಯೋ! ನನ್ಕಂದಾ! ನನ್ನಜ್ಞಾನದ ಪಾಪಕ್ಕೆ. ಈ ಹಾಳ್ಮೂಢಾಚಾರದ ಬಾಯ್ಗೆ ಬಲಿಯಾಗೋಕ್ಕೊಟ್ನಲ್ಲಾ...ಪ್ರತ್ಯಕ್ಷ್ವೇನ ನಿನ್ನಾಪ್ಪ ತಂದೇಗೆ ತಿರಗ ಉಳಿಸ್ಕೊಡೋಕೆ ನಿನ್ನಲೀ ಆದ್ಯಾ!?...ಹಯ್ಯೋ! ಈ ತಪ್ಪ್ಯಾರದೂ!!! ಈ ತಪ್ಪ್ಯಾರ್ದೋ ?

(ಬಿಕ್ಕಿ ಬಿಕ್ಕಿ ಮಿಕ್ಕ ಮೂವರಂತೆ ಶವದ ಮೇಲೆ ಮುಖವನ್ನು ಹೊರಳಿಸುತ್ತಾ ಗೋಳಾಡುವನು.)

[ಪರದೆಯು ನಿಧಾನವಾಗಿ ಬೀಳುವುದು]

ಭೂತ ದಯವುಳ್ಳವರು ಜಗದೊಳು ।
ಭೂತನಾಥನ ಪ್ರೇಮಪಾತ್ರರು ।
ಭೂತ ದಯವನು ತೊರೆದ ಪಾಪಿಗಳೆಂಥ ಬ್ರಾಹ್ಮಣರೋ? ॥

ಭೂತದಯವೆಂಬುದನು ದುಡ್ಡಿಗೆ ।
ಸೋತಪಾರ್ವನು ತಿಳಿಯನೇನೈ ?
ನೀತಿ ಧರ್ಮದ ಮಾತು ರುಚಿಸುವುದೆಂತು ಘಾತುಕಗೇ ? ॥

—ಸಾ. ರಾ.

HOME RULEಉ

ಅಥ್ವಾ

ಹೊರಗಿನ ಹುಲಿ ಮನೇಲಿಲಿ

ಮಂಕ್ರ್ಯಾಚ್ಯೋ ಹೆಣ್ಣ್ಯ ಮನೆತನಕ್ರ್ಯಣ್ಣ್ಯ

ಅಥ್ವಾ

ಪಾರ್ಲಿಮೆಂಟ್ ಕೊಟ್ರ್ಯೊ ಪತ್ನಿಕೊಡಳು

ಮೈದಾನದ ಹೆಬ್ಬುಲಿ: ಮನೆಯ ಮೂಗಿಲಿ

" ಸಾ ಭಾರ್ಯಾಯಾಗೃಹೇದಕ್ಷಾ "

—ಸ್ತ್ರೀ ಸೂಕ್ತ

ಪಾತ್ರಗಳು

ರಾಮಣ್ಣ: ರಾಮಪುರದ ಲಾಯರ್ರು; ಮುನಿಸಿಪಲ್ ಕೌನ್ಸಿಲರ್: Social Reform ಸಂಘದ ಪ್ರೆಸಿಡೆಂಟ್; ಸನಾತನ ಧರ್ಮ-ವರ್ಣಾಶ್ರಮ ಧರ್ಮ. ಪ್ರಜಾಪ್ರತಿನಿಧಿ ಸಭೆಗಳ ನಾಮಿನೇಟೆಡ್ ಮೆಂಬರು: ಕಾಂಗ್ರೆಸ್ ಮೆಂಬರು; ಸ್ಟೇಟ್ ಕಮಿಷನರು; ದ್ವೈತಾದ್ವೈತಿ.

ವೆಂಕಮ್ಮ: ಈತನ ದ್ವಿತೀಯ ಪತ್ನಿ.

ಸುಬ್ಬಮ್ಮ: ಈತನ ಮುದಿತಾಯಿ; ವಿತಂತು.

ಬೋರ: ಜವಾನ.

ನಾರಾಯಣ: ಅಡಿಗೆಯವನು.

ಸಾವಿತ್ರಮ್ಮ: ಮತ್ತೊಬ್ಬ ನೆರೆಯ ಮುದಿ ವಿತಂತು.

ಸ್ನೇಹಿತರುಗಳು

ಸ್ಥಾನ: ರಾಮಪುರ.

ಕಾಲ: ಆಧುನಿಕ.

ಭಾಷೆ: ಆಧುನಿಕ ಸಾಮಾಜಿಕ.

ದೃಶ್ಯ ೧

ಸ್ಥಾನ: ರಾಮಪುರದ ಒಂದು ಬೀದಿ.

[ಸುಬ್ಬಮ್ಮನು ಬಲದಿಂದ ಎಡಕ್ಕೆ ಬರುತ್ತ ಎಡದಿಂದ ಬಲಕ್ಕೆ ಬರುವ ಮತ್ತೊಬ್ಬ ವೃದ್ಧಳನ್ನು ಸಂಧಿಸುವಳು.]

ಸುಬ್ಬಮ್ಮ : ಹತ್ತಿರದಲ್ಲೆಲ್ಲಾದ್ರೂ ಆಳ್ವಾದ ಭಾವೀ ಇಥೆಯೇ?

ಎದುರಾಕೆ: ಆಳ್ವಾದ ಭಾವೀ!...ಹತ್ತರ ನೀರಿದ್ರಲ್ಲವೇ ಅನುಕೂಲ...ಸೇದೋಕೆ ನೀರ್ನ...?

ಸುಬ್ಬಮ್ಮ : ಚೆನ್ನಾ...ಆ...ಯ್ತು! ಅಸುರಸಂಧಿ ಕೂಡೋ ವೇಳೇಲೀ ದಿಂಬು ಚೊಂಬು ಕೈಲಿಲ್ದೆ ನೀರ್ಸೇದೋಕ್ಕೊಟ್ಟೇಂತಿಳ್ಕೊಂಡ್ರಾ?

ಎದುರಾಕೆ: ಮತ್ತಿನ್ನಾಕೆ ಹುಡುಕ್ತಿರೋದು ಭಾವೀ?...ಅಲ್ದೆ...ಆಳ್ವಾದ ಭಾವೀ!

ಸುಬ್ಬಮ್ಮ : ಒಳಗೆ ಬಿದ್ರೂ ಉ...ಪ್ರಾಣಗಳ್ಬಿಡೋಕೆ...ಪಂಚಪ್ರಾಣಗಳ್ನಾ...ಬಿಟ್ಟೇಬಿಡೋಕೆ. ನೀರು ಹತ್ತಿರಗಿತ್ತರಿದೆ ಮೂರುಸರ್ತಿ ಮುಳುಗಿ ಮುಳುಗಿ ಸಾಯೋಷ್ಟ್ರಲ್ಲೇ ಯಾವ ಪ್ರಾಣಯಾದ್ರೂ ಹೊರಗೆಳ್ಬಿಟ್ಕ್ಯಾನೂಂಬೋ ಭಯಾ ಇರೋದಿಲ್ಲ...ಆಳ್ವಾದ ಭಾವೀಲಿ.

ಎದುರಾಕೆ: ಇದೇನು ಹುಚ್ಚು, ಸುಬ್ಬಮ್ಮನೋರೇ? ಅಯೋಧ್ಯ ಎಲ್ಲಾ ಶ್ರೀರಾಮನ್ನ ಹೊಗಳ್ಬಿಟ್ಟಾಗೆ ರಾಮಪುರಕ್ಕೆಲ್ಲಾ ಅಣ್ಣ ರಾಮಣ್ಣನಾಗಿ ಹೊಗಳಿಸ್ಕೊಳ್ಳೋ ನಿಮ್ಮಗನ ಅಂತಸ್ತನ್ನೂ ಐಶ್ವರ್ಯಾನೂ ನೋಡ್ತಾ ಆ ಪರಮಾತ್ಮ ನಿಮ್ಕಂಣ್ಣು ಮುಚ್ಕೋವರಿಗೂ ಆನಂದ ಪಡತಾ ಇರೋ ದ್ಬಿಟ್ಬಿಟ್ಟು ಭಾವೀಲ್ಬಿದ್ದು ಸಾಯ್ಬೇಕೂಂತೀರಲ್ಲಾ...ಇದೇನ್ಸುಚ್ಚು?

ಸುಬ್ಬಮ್ಮ : ಒಳ್ಳೆ ಅಯೋಧ್ಯೇ! ಒಳ್ಳೇ ರಾಮಚಂದ್ರ!...ಇದೇನು ಸಾವಿತ್ರಮ್ಮನೋರೇ... ನಮ್ಮನೆ ಸಂಸಾರದ ಗಲಾಟೆಯ ಸರ್ವಾಂಶಾನೂ ತಿಳ್ಕೊಂಡೂ ಇನ್ನಾನೂ ಇಹಲೋಕದಲ್ಲಿ ಆನಂದಪಡೋ ಒಂದಂಶಾ ಬೇರೆ ಬಾಕಿ ಇಥೆಯೇ ನಮ್ಮನೇಲಿ...ನನ್ನ ಎರಡನೆ ಸೊಸೆ ವಕ್ರಿಸ್ಕೊಂಡ್ಕೂತಿರೋವಾಗ?

ಸಾವಿತ್ರಮ್ಮ : ಹೌದೂ...ಊ? ನಿಮಗೂ ನಿಮ್ಮ ಸೊಸೇಗೂ ಏನಾದರೂ ಅನನ್ಯೋನ್ಯಗಳು ಉಂಟಾದ್ರೇ...ಅವಳ್ಗಂಡ...ನಿಮ್ಮಗ...ರಾಮು ನಿಮ್ಕಡೇನೇ ಅಲ್ವೇ...?...ತಾಯೀ ಕಡೆ... ಹೆತ್ತ ತಾಯೀ ಕಡೇ?

ಸುಬ್ಬಮ್ಮ : ದೇವ್ರೇ ೀ ೀ ಗತಿ! ನಮ್ಮ ರಾಮೂ...ನೀವ್ಹೇಳ್ದ ಈ ಅಭಿನವ ಶ್ರೀರಾಮ... ಹೆತ್ತಾಯೀನ್ಬಿಟ್ಬಿದ್ರಲ್ದೆ ಅವಳ ಕಡೇ ಸೇರ್ಕೊಂಡೂ ಅವನ್ತಾಯಿ ಮೆದೇಗೇ ಕವೆಗ್ಕೋಲ್ನಾಗೆ ಕುತ್ಗೇ ಬಿಗೀತಿಧಾನೆ...!

ಸಾವಿತ್ರಮ್ಮ : ಇನ್ನೇನ್ಗತೀ ೀ...?

ಸುಬ್ಬಮ್ಮ : ಗತಿಯೇನು...ಗೊತ್ತೇ ಇಥೆ. ನಮ್ರಾಮೂ ನನಗೆದುರು ನಿನ್ತ್ಮೇಲೆ...ಶ್ರೀರಾಮ ಕಪ್ಪೆ ಮೇಲೆ ಕೈಯೆತ್ತಿ ಆ ಪ್ರಾಣೀಗಾದ ಗತೀನೇ...ನನ್ಗೂವೆ.

ಸಾವಿತ್ರಮ್ಮ : ಶ್ರೀರಾಮ! ಕಪ್ಪೆ ಮೇಲೆ ಕೈಯೆತ್ತಿದ್ನೆ? ಹ್ಯಾಗೆ? ಯಾವಾಗ?

ಸುಬ್ಬಮ್ಮ : ಯಾವಾಗೇನೂ ಬೂ?...ತ್ರೇತಾಯುಗ...ದಾಶರಥೀ...ದಂಡಕಾರಣ್ಯ...ದಾಹ. ದೂರದಲ್ಲಿ ಕಂಡ ಸರಸ್ಸಿನ ಕಡೆ ಸರಸರಾಂತ ಕಾಲ್ಹಾಕ್ತಾನೇರಿ. ಬಿಲ್ಲಿನ್ನ ಬಿಸಾಟು ಬೆಗಲಿಗ್ತಗ್ಲಾಕ್ಕೊಂಡಿದ್ದ ಬತ್ತಳಿಕೇನೂ ಇಳೀಬಿಟ್ಟು. ಕೈಯ್ಯಲಿದ್ದೊಂದ್ಬಾಣಾನ ಕುಕ್ಕ್ಬಡದ ನೆಲಕ್ಕೆ...ಇನ್ನಿಳ್ದು ಪುಷ್ಕಳವಾಗಿ ಪಾನಾಮಾಡಿ ಮೇಲ್ಬಂದ್ಮೇರಿ ನೋಡ್ತಾನೆ ಆ ಪತೀತ ಪಾವನಾ...ತನ್ನಾ ಯಾರ್ಕೇ ಗಡಿಬಿಡೀಲೀ ಬಡಮುಕ್ಕ್ಬಾಣಾ ಒಂದು ಕಪ್ಪೇನ್ನೂ ಭೂದೇವೀನ್ನೂ ಎಡ್ರೂ ಪೋಣಿಸ್ಕೊಂಡು ನಿಟ್ಕೊಂಡಿಥೆ!

ಬಂತೂ ರಾಮುನಿಗೆ ಜ್ಞಾನ!...ತಾನು ಯಾರು?...ತಾನು ಇಹಲೋಕಕ್ಕೆ ಇದ್ದಾನೇ? ಇಹಲೋಕ ತನ್ನ ಕರಿಸಿಕೊಂಡಿದ್ದಾನೆ?...ಆಪದ್ಬಾಂಧವಾಂತ್ಲೊ ಗಳಿಸ್ಕೊಳ್ಳೋ ತಾನು ತನ್ನ ದಾಹದವಸ್ಥೇಲಿ ತಾನು ಬಾಣಾನ ಕುಕ್ಕಿದ ತನ್ನ ಕೊಬ್ಬಿನ ಜೋರಿನಿಂದ ಜೀವಹಿಂಸೆ ಒಂದ್ ಸಾಧುಜಂತೂಗೆ ಸಂಭವಿಸಿ. ಜಗತ್ತಿನ ಹಾಸ್ಯಕ್ಕೆ ಗುರಿಯಾದ್ನೆಲ್ಲಾಂಭೋ ತನ್ನೋಪ್ಪಲ್ಲಿ ಆ ಕಪ್ಪೇನ್ನೋಡಿ " ಎಲಾ ದುಂಕೆ!...ನಾನು ಬಾಣಾನ ಕುಕ್ಕೋಕೆ ಕೈಯೆತ್ತಿದಾಗ ನನ್ನ ನೋಡೋಕೆ ಕಣ್ಣುಗಳ್ಳೊ ' ನಾನಿಲ್ಲಿರ್ತೀನೇ 'ಂತ ಅರಚೋಕೆ ಬಾಯೂನೂ ನನ್ನ ಮಗ ಬ್ರಂಪ್ಪ ನಿನಗ್ಕೊಟ್ಟಿರೋವಾಗ. ಹುಚ್ಚು ದುಂಡೇ ಹಾಗೆ ಅವನ್ನೆಲ್ಲಾ ದಾರತು ನನ್ನೆ ಯಿಂದ್ಕುಕ್ಕಿಸ್ಕೊಂಡು ನರಳ್ತಿಧೀಯಲ್ಲಾ...! ಈಗ 'ಅಹಿಂಸಾ ಪರಮೋಧರ್ಮಃ 'ಂಬೋ ವೇದ ವಾಕ್ಯಾನ, ಕಪ್ಪೇ ರಕ್ತಾನ ಸುರಿಸಿದ್ನಾನೂ, ಹ್ಯಾಗೆ ಪ್ರಚುರ ಪಡಿಸೋದ್ರು ಪಂಚಕ್ಕೇ "ಂದ. ಅವನ ಪ್ರಶ್ನೆ ಅದಕ್ಕಿಲ್ಲಿಪ್ಪಿ ವೀಗ್ಬಿದ್ದು...ಬಂತೂ ಒಂದ್ಕಡೇ ಕೋಪ; " ಹುಚ್ಚು ದುಂಡೇ " ಅಂದ್ನ ಭ್ರಾಂತ! ಇನ್ನೊಂದ್ಕಡೆ ಬೆನ್ನಿಂದ್ಲೊಕ್ಕು ಎದೆಯಿಂದ್ಲೊ ಟ್ಟಿರೋ ಬಾಣದಿಂದಾದ ತಾಪ! ತನಗಿಲ್ಲದ್ದಂತಾವರ್ಣೀನ ಕಟಕಟ್ಟೆ ಕಪ್ಪೀತಾ ಆ ಇರಿದ ಬಾಣಾ ಬಿಟ್ಟ ಅಲ್ಪಸ್ವಲ್ಪ ಅವಕಾಶದಲ್ಲಿ ಕುತ್ಗೇನ್ನಿರುಪ್ಕೊಂಡು ಕೋಪದಿಂದ್ಹೇಳತ್ತಾ ಕಪ್ಪೇ... "ರಾಮಾ! ಮೊದಲ್ನಿನ್ನೀ ಹಾಳ್ಬಾಣಾನ್ನೀಳೂಊ....ಆಮೇಲೆ ಹೊಂದುಸ್ತೇನೆ ನೀನ್ಗೇಳಿದ್ಪ್ರಶ್ನ್ಯಾಯಾ" ಅಂತ. ಇದೇನೋ ಏನೋ ಕಾಣೆ ಆ 'ಕೋಪಮಂಡೂಕನ್ಯಾಯಾಂ 'ತಾರಲ್ಲಾ ಅದು!...ಕುಗ್ಗಾಕಿತ್ತ... ಬಾಣಾನ...ರಾಮು....ರಕ್ತ ಪ್ರವಾಹ...ಸುಸ್ತು...ಪ್ರಾಣೀ...." ಸ್ವಲ್ಪಿರು...ಸುಸ್ತಾಗಿರ್ಧೇನೆ: ಸುಧಾರಿ ಸ್ಕೊಂಡು, ಸಂಭಾಷಿಸ್ತೇನೆ ಆಮೇಲೇ "ಂತು ಪ್ರಾಣಿ. ಸುಧಾರಿಸ್ಕೊಂಡ್ಮೇಲೆ ಗದ್ಗದ ಸ್ವರದಿಂದ ಮೊರೆ ಯಿಡತ್ತೆ ಆ ಮಂಡೂಕ,..." ಅಯ್ಯೋ ರಾಮಾ! ನಾನು ಹುಟ್ಟಿದಾರಭ್ಯ ಹದ್ದುಗಳಾಗಲೀ ಹಾವು ಗಳಾಗಲೀ...ಇಲ್ಲಾ...ಕಲ್ನೆತ್ಕೊಂಬರೋ ಹುಡುಗರಾಗಲೀ ಹತ್ತರ ಬಂದಾಗೆಲ್ಲಾ 'ಹರಿ ಹರೀ! ಹಾರಾಮ! ಪಾಹಿಪಾಹೀ 'ಂತ್ಕಿರಲ್ತಿದ್ದ ನಾನೂ,...ಶ್ರೀರಾಮನೇ ನನ್ನ ಮೇಲೆ ರಾಮಬಾಣಾನ ಎತ್ತಿ ಕುಕ್ಕೋಕುದ್ಯುಕ್ತನಾದಾಗ, ಏನೂಂತಕಿಲೋರ್ಲದೂ "ಂತ ಬಿಡ್ತು ಪಂಚಪ್ರಾಣಗಳ್ನ! ಹಾಗೇ ನನ್ನ ಮಗ. ರಾಮೂ, ಸೀತೆ ಹಾಗಿದ್ದ ಮೊದಲನೇ ಹೆಂಡ್ತಿ ಸತ್ತ ಮೇಲೆ ಈಗ ಬಂದಿರೋ ತಾಟಕಿ ಜೊತೇಲಿ ಕೈ ಜೋಡಿಸ್ಕೊಂಡು ಕುಣೀತಿರೋವಾಗ...ಗಂಡನ್ಕಳ್ಕೊಂಡಿವನ ತಾಯಿ...ಕೌಸಲ್ಯೆ...ನನ್ಗ ತೀಯೋನೂ ...ಆಳ್ವಾದ್ಬಾವಿ ಇಧೆಯೇ?...ಹತ್ರದಲ್ಲಿ?

ಸಾವಿತ್ರಮ್ಮ : ಹಯ್ಯೋ ಸುಬ್ಬಮ್ಮನೋರೇ! ಕತ್ತಲೇನೋ ಕವಿತಾ ಬಂತೂ. ಇನ್ನಾಳ್ವಾದ ಭಾವೀ ಹುಡುಕೋದ್ರಲ್ಲಿ ಕಣ್ಣುಕಾಣದೇ ಎಡವಿಬಿದ್ದು ಕಾಲಿಗೆ ಪೆಟ್ಟಾದೀತೂಊ! ಈಗ ಸಧ್ಯ ಮನೇಗ್ಹೋಂತಿಗ್ಹೋರ್ಗಿ. ಮಗನಿಗೆ ಹೇಳೋದ್ನೆಲ್ಲಾ ಹೇಳಿ. ಇನ್ನೂ ಕೇಳ್ದೆ ಮೂರ್ಖನಾಗಿದ್ದಕ್ಕೆ ಮುಂದಿನ ಕ್ರಮಾನ ನಾಳೇ ಮಧ್ಯಾಹ್ನ ನಮ್ಮನೇಲಿ ತೀರ್ಮಾನಿಸೋಣಾ...ಬನ್ನಿ! ಬನ್ನಿ!

[ಸುಬ್ಬಮ್ಮನನ್ನು ಕರೆದುಕೊಂಡು ಬಲಗಡೆ ನಿಷ್ಕ್ರಮಣ.]

ದೃಶ್ಯ ೨

ಸ್ಥಾನ: ರಾಮಪುರದ ಒಂದು ಬೀದಿ.

[ಮೂವರು ವ್ಯಕ್ತಿಗಳು ನಡುಬೀದಿಯಲ್ಲಿ ನಿಂತು ಸಂಭಾಷಿಸುತ್ತಿರುವರು.]

ರಾಯ: ಇದೇನ್ಸೈಯ್ರೀ...ರಾಮಣ್ಣೋರು ಕೊಟ್ಟ lecture ಊ ನಿಮಗೆ ಸರಿಹೋಗ್ದಿದ್ರೇ ಅಲ್ಲೇ ಪ್ರಶ್ನೆ ಹಾಕಿ ಸಂದೇಹ ನಿವೃತ್ತಿ ಮಾಡ್ಕೊಳ್ಳೋದ್ಬಿಟ್ಟೊ. ಇಲ್ಲೀಗ ನಡ್ರಸ್ತೇಲಿ ನಮ್ಮತ್ರ ಗೋಳಾಡೇನ್ರಯೋಜ್ನ?

Iyeru: ವುಂಗಪತ್ರ ನಾನೇನೂ ಕೋಳಾಡಂ ಪಣ್ಣಲಿಲ್ಲ....ರಾಮಣ್ಣಾವರ್...ತೊಟ್ಟು ಪಾತ್ರ ಮೇಲೆ ಉಟಕ್ಕೀರುಕು ಮತುವೆ ಪಣ ಲೇೀ ಪೇಕು;...ಕೊರಪಟ್ಟ ವರ್ಕ್ಕು...ಅಂತರ ಅಂಪ್ಪುದಾಂ... ಶತ್ತುಪಿಡವರ್ಕ್ಕು...ತಿರುಂಬಿ ಮತುವೆಮಾಟಲೇೀ ಪೇಕೂ ಅನೀ ಹೇಳಿದ್ರೇ ಅಲ್ಲತೇ...ನಂಬ ಪುಸ್ತಕಳಲ್ಲಿ ಪೊಮ್ಮಂಪಾಟಿಗಳ permission ಶಿಕ್ಕುವ ತಾರಿ ತೋೀರಿಸಲಿಲ್ಲ. Lecture Hall ಲ್ಲೇ ಕೇಳಿ ತರೋ. ಪೆರೀಯ ಹುಲಿಯಾಟ್ಟ ಒಡಂಬು ಮೇಲೆ ಪಿತ್ತು ಬಿಡುತ್ತಾರೆ. ಇಲ್ಲಿ, ಇಲ್ಲಿ ರೋಟನಲ್ಲಿ ಪರುವಾಗ ಮೂಲೇಲಿ ನಾವು ಮೂಣು ಜನಂಗ್ಳು ಪುತ್ತಿಕ್ಕೊಂಡು ಮಾತಾಡಬೇಕೂಂತ್ ಕಾತು ಕೊಂಡಿತೇನೆ.

ರಾಯ: ಅರ್ಥವಾಯ್ತು....ಹಾಗಾದ್ರೆ ನನ್ಗೂ ಸಂಸಾರದಲ್ಲಿ ಹೆಂಗ್ಸ್ರು ಹದ್ದು ಹೆಚ್ಚು...ಪ್ರೌಢ ವಿವಾಹ...ವಿತಂತು ಪುನರ್ವಿವಾಹ ಇವುಗಳ್ಗೆ ಮನೆಯವರ್ನ ಒಪ್ಪೋಬಗೆ ನನ್ಗೂ ಸ್ವಲ್ಪ ಹಾಗ್ಗಾಗೆ. ...ನಿಮ್ಹಾಗೆ ನಾನೂವೆ ರಾಮಣ್ಣೋರು ಇಲ್ಹಾಸ್ಕ್ಹೋಗೋವಾಗ...ನಿವೃತ್ತಿ ಮಾಡ್ಕೋತೇನೆ... ಹೌದೂ! ನಿಮಗ್ಕನ್ನಡ ಗೊತ್ತಿಲ್ಲ...?...

Iyeru: (ಅಡ್ಡಮಾತಾಗಿ) ನನಕ್ಕು ಕನ್ನಡಂ ಕೊತ್ತು!

ರಾಯ: ಒಪ್ಪೆ!...ಆದ್ರೂವೆ ರಾಮಣ್ಣೋರು ಕರ್ಣಾಟಕರೂ,...ಕಮ್ಮೇಗ್ಳೂ...ಅವರ್ಗೆ ನಿಮ್ಕನ್ನಡ ಮುಂದಟ್ಹಾಗೋದಿಲ್ಲ.

Iyeru: ಅತುಪರ್ವ್ಹಾ ಇಲ್ಲಾ. ನನಕು ಕನ್ನಡಂ ಕೊತ್ತಿಲ್ಲ...ಕೊತ್ತಿಲ್ಲಾನ್ನಾ ಮೈಸೂರು ಕನ್ನಡಂ... ಶುತ್ತ ಕನ್ನಡಂ ಕೊತ್ತಿಲ್ಲಾ;...ಇಂದ ನಮ್ಮ Iyengar ಕೂ, ನನ್ನ ಇಂದ ಪಾಷೆಯೂ ಕೊತ್ತು... ಉಂಗ ಕನ್ನಡಮುಂ ಕೊತ್ತು. ಎನ್ನ Iyengar ರ್ರೇ! ರೊಂಡೂಂ...ಪುರಿಯಿಮೋಸ್ನೋ... ಉಂಗ್ಳುಕ್ಕೂ?

Iyengar: ತೆರಿಂಚಿಕ್ರುದು ತೆರಿಂಚಿಕ್ರುದು...ಉಂಗ್ಡೆ ವಾರ್ತೇನೂ ತೆರಿಂಚಿಕ್ರುದು...ಇವಾಳ್ಣಡ ವಾರ್ತೇನ ತೆರಿಂಚಿಕ್ರುದು; ಎಂಗ್ಡೆ ವಾರ್ತೇಲೆ ಉಂಗ್ಡೆರೆಂಡ್ವಾರ್ತೇಯುಂ ಈವಾಳಂಡೆ ವಾರ್ತೇಯೂ ವರ್ದ್ದು..(ನೇಪಥ್ಯವನ್ನು ಗಮನಿಸಿ) ಅಕೋ ಪಾಜರ್ೋ! ರಾಮಣ್ಣಾವಾಳ್...ಎಳ್ಳಿಕ್ರಾರು ಇನ್ದ್ಪಕ್ಕೆ.

ರಾಮಣ್ಣ : [ಪ್ರವೇಶಿಸಿ...ರಸ್ತೆಯ ಜಲ್ಲೀ ಕಲ್ಲೊಂದನ್ನು ಎಡವಿ ಪೆಟ್ಟುತಿಂದ ದಕ್ಷಿಣಪಾದ ವನ್ನು ಎತ್ತಿಕೊಂಡು, ವದನದಲ್ಲಿ ವಿಷಾದವನ್ನು ವ್ಯಕ್ತಿಸುತ್ತಲೂ ಪೆಟ್ಟು ತಪ್ಪಿಸಿಕೊಂಡ ವಾಮಪಾದ ದಲ್ಲಿ ತಾಂಢವಮೂರ್ತಿಯಂತೆ ಪೆಟ್ಟಿನವಸ್ಥೆಯಲ್ಲಿ ಕುಣಿಯುತ್ತಲೂ] ಹಾಳು ಕಂಟ್ರಾಕ್ಟ್ workoo!... ರೋಡುದ್ದಕ್ಕೂ ಜಲ್ಲಿ ! ನನ್ನ new rulesoo Municipalitee ಲಿ ಚಾಲ್ತಿಗೆ ಬರೋವಗರ್ೂ ...ಇನ್ನೆಲ್ಲು ದಿವ್ಸದಲ್ಲಿ ನಮ್ರೂಂಪುರ...ಸರ್ವಾಂಗರಹಿತ...ಜನಭರಿತ-ಪುರವಾಗೋದ್ರಲ್ಲೇನೂ ಸಂದೇಹವೇ ಇಲ್ಲ.

[ಎಂದು ನಡುರಸ್ತೆಯಲ್ಲಿ ನಿಷಣ್ಣನಿ, ಪೆಟ್ಟಿನ ಮೇಲೆ ಉರಿಸಿ ಊದಿ ಬಾಧೆಯನ್ನು ಶಮಿಸುತ್ತಿರುವನು]

ರಾಯ : [ಸಮೀಪಿಸಿ] ಅದೇನು ಹೊಸ Rulesoo ರಾಮಣ್ಣೋರೆ?

ರಾಮಣ್ಣ : ಓಹೋ ನಿಮಗ್ತಿಳೀದೇನೋ? ಇಲ್ಕೇಳಿ!

[ಕಿಸೆಯಿಂದ ಕಾಗದವನ್ನು ಹೊರಪಡಿಸಿ ಓದುತ್ತಾ]

Suggestions of conditions controlling the eligibility of intending candidates for councillorship at the ensuing municipal elections with further suggestions of conduct and procedure of the local Corporation after afore-said election :-

i. ''Each candidate for Councillorship must already possess a street lamp before his house."

ರಾಯರು : ಇದ್ಯಾಕ್ಸ್ವಾಮಿ......**point** ಏನು?

ರಾಮಣ್ಣ : Pointಏ? ಕೇಳಿ!—'This is to save the tax-payer from future Certain Expenences.

ii. If and when elected, no two Councillors may reside in the same street locally.'

Iyeru : ಇತರ್ ಎನ್ನತ್ಕ್ಕೇ!

ರಾಮಣ್ಣ : [ಓದುತ್ತಾ]—'This is to guarantee to the tax-payer at least as many clean kept streets in our City as there are Councillors in our Corporation—

iii. Each Councillor must be presented with a Gold Medal for every occasion that a Great personage arrives in the City, that he is *not* present on the occasion—This is to ensure the *bona fides* of the purpose of the candidate in seeking election—' ಹ್ಯಾಗಿಧೆ?......ಇನ್ನೂ ಕೇಳಿ?......ಕೊನೇದು?

iv. Free quarters must be provided for the President and irrespective of his owning a private palace or mansion it must be insisted that he resides in those quarters selected in the dirtiest parts of the City;......and as the surroundings of these quarters get clean and sanitary he will be shifted to other temporary quarters in the other dirty parts of the City.'......... ಆಯ್ತೇೕೕ! ಇನ್ನೊಂದೇ ಒಂದು.

v. " The day after the election *a la* the Lord-Mayor's Show of London, a procession of the new President and Councillors must be arranged for with a view for them to realize the nature and the extent of the work before them: and hence the venue of the procession will be selected from the worst-kept roads and least sanitary quarters of the City. It is incumbent upon the municipal body-corporate that they should negotiate the procession without shoes on their feet and bags over their noses; the latter to allay a local rumour that blind people in our city do not find their failing in their way of their getting about the City if their noses are functioning efficiently!"...ಹ್ಯಾಗಿವೆ. rulesoo? ಇವುಗಳ್ನಾಜಾರೀಗ್ಬಂದ್ಬಿಟ್ರೇ... ನಮ್ಮ್ರಾಮಪ್ಪ್ರೈದುರ್ಗ ಕುಬೇರನ್ಪಟ್ಣ ಕೊಂಪೆ!...ಕೊಂಪೆ!... ಹೌದೂ ಊ? ಅರ್ಥವಾಗ್ಲಿಲ್ಲ...ನೀವೆಲ್ಲಾ ನಪ್ರಸ್ಟೇಲಿ ಓಗ್ನಿಂತ್ಕೆದ್ದಿರೋದು!

ರಾಯರು: ಏನೂ ಇಲ್ಲಾ: ತಮ್ಮೆಲ್ಕ್ಸ್ರು attend ಮಾಡ್ಬಿಟ್ಟು ಮನೇಗ್ಹತ್ತಾರ್ ನಮ್ಮಮ್ಮಲ್ಲಿ ಹುಟ್ಟಿದ ಸಂದೇಹಾನಾ ತೀರ್ಸೋಣೋ ಸಂವಾದದಲ್ಲಿ ತಾವೂನೂ ಬಂದ್ಬಿಟ್ರಿ.

ರಾಮಣ್ಣ: ಅದೇನ್ಸಂದೇಹಾ?...ನಾನು ತಕ್ಕಟ್ಟಿಗೆ difinite ಅನ್ನಾನೇ ಹೇಳ್ದೆ ನನ್ ideas ನಾ?...ಸಂದೇಹಕ್ಕೆಲ್ಲಿ ಅವಕಾಶ?

ರಾಯ: ನೋಡೀ! ನೀವೇನೋ ಸಮಾಜ ಸುಧಾರಣೇಗೂ...ನಮ್ದೇಶ್ದೇಳ್ಗೇಗೂ... post puberty marriage ಊ...widow re-marriage ಊ ಇವೆರ್ಡೂ ಆಗ್ಲೇ ಬೇಕೂಂತ ಅಂದ್ಬಿಟ್ರೆ ಹೋರ್ತು...ನಮ್ಪುರಾಣೇತಿಹಾಸಗಳಲ್ಲಿ ಯಾವ ಭಾಗಗಳ್ನ ಮರ್ತರೂನೂವೆ, "ಸಾಭಾರ್ಯಾ ಯಾಗೃಹೇದಕ್ಷಾ" ಅಂತನ್ನೋ ಮಹಾಭಾರತೋಕ್ತೀನಾ ಮೇಲ್ಪಂಕ್ತಿ ಹಾಕ್ಕೊಂಡಿರೋನಮ್ಮನೆ ಆಕೆಗಳೂ ಮಿಕ್ಕೆಂಗ್ಸೂನೂ ಒಪ್ಪೋವರ್ಗೂನೂ, ಗಂಡ್ಗಂಡಸ್ರೂ ತವ್ lecture ಗಳಲ್ಲಿ ನಿಷ್ಕರ್ಷಿಸ್ಕೊಂಡ ಠರಾವ್‌ಗಳ್ಗೆ ಮನೇ ಹೆಂಗಸ್ರೂ "ಹೂಂ" ಮುದ್ರೆ ಒತ್ತಿದ್ರೆತಾನೇ ಜಾರೀಗೆ ಬರೋದು...social reform resolutionನ್ನುಗಳೂ?

ರಾಮಣ್ಣ: ಕ್ಷಮಿಸ್ಸಿ!...ನಮ್ಸಂಸಾರಾ ಜರಗ್ಬೋಬೀಗ್ಮುದ್ರೆ ನಿಮ್ಮನೇ ಹೆಂಗ್ಸ್ರ ಕೈಯಿಲ್ಲರೋದು ನೀವು ಮಿಾಶಯಿಂದ್ಲಾಟ್ಗೆ masculine ಆಗಿರೋದು, ನಿಮ್ಮಪ್ಪಲ್ದೆ lecture ಕೊಟ್ಟ ನನ್ನಪ್ಪಲ್ಲಾ... ಕೋಪಿಸ್ಕೋಬೇಡಿ. ನಿಮ್ daughterಗೆ ten ಆಗ್ನಾ ಬಂತು. ನೀವು ಮನುಷ್ಯರಾದ್ರೆ ಗಂಡ್ಸಾದ್ರೆ ...ವೈನೆರೆದ್ಮೇಲೇಸೇ ಮದ್ವೆ ಮಗಳ್ಗೇಂತ ಮುಷ್ಕರಾ ಹಿಡ್ದು ಸಾಧ್ಸಿ ನಿಮ್ಪಟಾನಾ! ಆವಾಗ "ಸೋಭರ್ತುರ್ಯೋಗೃಹೇದಕ್ಷಃ"ಂತ ಭಾರತ ಭಾರತಾನೆ ತಳ್ಕೆಳ್ಕಾಡಿ...ಭರತ್ಮಾತೆ ಮಾನಾನ ಬಚಾಯಿಸ್ದ ಹಾಗಾಗುತ್ತೆ!

ರಾಯ: ಒಪ್ದೇ ಸ್ವಾಮಿ!...ಒಪ್ದೆ!...ಮನೆ ಯಜ್ಮಾನ ಗಂಡ್ಸೂಂತಂದ್ರೂನೂವೆ, ತಂದೆ...ಇಲ್ಲ ತಾಯಿ....ಇವರ ಮಾತ್ನ ಎತ್ಹಾಕ್ಕೂಡ್ದೂಂತಿರೋವ್ರಗತಿ ಏನು!? ನೋಡೀ Post puberty marriageನಲ್ಲಿ ನನಗ್ನಂಬ್ಕೆ ಇದ್ರೂನೂವೆ, ಎಪ್ಪತ್ವರ್ಷ ತುಂಬಿದ್ನಮ್ಮಜ್ಜಿ ಹತ್ತ್ವರ್ಷ ಕೂಡ ತುಂಬದ ನಮ್ ಪಾತೂ ಮದ್ವೇನ ಈ ವರ್ಷವೇ ನೋಡ್ದಿದ್ರೆ...ಭಾವೀಲ್ಧುಮ್ಕಿ ಸಾಯ್ತೇನೇಂತ ಕೂತಿದ್ದಾಳಲ್ಲಾ, ಇದಕ್ಕೇನ್ಮಾಡೋದ್ಹಾನು...?

ರಾಮಣ್ಣ: Ri-di-cu-lous! ಇದೇ ಹೆಂಗಸ್ಗೆ ಹೆದ್ರಿದ ಗಂಡ್ಸೆದಿರ್ಗೆ, ಹೆಂಡ್ತಿಗಳೂ ಅಮ್ಮಗ್ಳೂ ಅಜ್ಜಿಗ್ಳೂ ಆಡೋ ತುರುಫ್ಹಾಸು..."ಬಾಯ್ಬಿಟ್ರೆ ಭಾವೀಲ್ಬೀಳ್ತೇನೇ"ಂತ,...ತುರುಫಿನ್ಮೇಲ್ರುಪ್ಪು ಮನೇ ಭಾವೀ ಮುಚ್ಚೀ, ನಲ್ಲಿ ಇಡೀ ನೀರಿಗೆ.

Iyeru: ಅತು ಆಗೋದೆಲ್ಲಾ ಸ್ವಾಮೀೀ!...ತೊಟ್ಟವ್ರಮಾತು ಚಿನ್ನವರ್ಊ ಕೇಳಪೇಕ್ಊ ಅಂಬೋದ್ಊ institution ಆಗಿಪೋೀಗಿತೆ, Indian ಮನೆಕಳಲ್ಲೀ!...

ರಾಮಣ್ಣ: Such institutions must be broken...uprooted!

Iyeru: ಅತು impracticable ಸ್ವಾಮಿ!...ಈಕ ನೋಡಿ! ರಾಜಾಮರಂನಾ ಚಿಕ್ಕದಾಕಿ ರೋಪಾಕಾ ಮಕ್ಕಳು ಕೂಡ ಪಿಟ್ಟಿಹಾಕಬಮುತು...ತೊಟ್ಟತಾತ ಮೇಲೆ ಒಂದು institution ಆಗಿ ಓಗುತ್ತದೆ...ರಾಜಾಮರಂ.

ರಾಮಣ್ಣ: "ರಾಜಾಮರಂ"! ಅದೇನ್ಮರಾ?

Iyeru: ಮರ್ಂ...ತೊಟ್ಟಮರ್ಂ...ಹೆಂಗಸರು ಶುತ್ತಿ ಶುತ್ತಿ ಬರುವತು...ಪ್ರತಕ್ಷಣೌಂ ಮಾಡುವತ್...ನಮಸ್ಕಾರ ಮಾಡುವತು...ಮಕ್ಕಳು ಉಟ್ಟುವತು...ರಾಜಾಮರಂ!

Iyengar: ಇದೇನದ್ಬೃಥೋ! ಪಸದ್ಲುಪರ್ಕೊರ್ಮರ್ಮ!...ಅದೆನ್ಮಾದ್ರಿಮರಂ?

Iyeru: ಎನ್ನಾ? ಪರ್ಕರಮರಮಾ? ಎನ್ನಭಾಷೇನ್ನೆನಚಿಂಡಿಕ್ರೇಳ್. ನೀಂಗೋೀ?

Iyengar: ತಮ್ಮೂನ್ನೂ ನೆನಚ್ಕೊಂಡಿಕ್ರೇನು...ನಾನು.

Iyeru: ನೀನಟಿಂಪಿಕ್ರ್ಣ ಭಾಷೆಯೇ sunlight soap ತೇಚು ಕಶ್ಕ ಬೇಕಾಂಗೋ...! [ರಾಮಣ್ಣನಿಗೆ] ಇಲ್ಲೆನ್ನೋಟೀ!...ಎನಕ್ ಕನ್ನಡಂ ಕೊತ್ತಿಲ್ಲಾ...ನಿಮಕು tamil ಕೊತ್ತಿಲ್ಲಾ ...ಇಂತ Iyengarಕೂ ರೆಂಡು ಬಾಷೆಯುಂ ಕೊತ್ತಿಲ್ಲಾ...ಅಲ್ಲತೆ ಕೊತ್ತಿಲಾನ್ನು ಕೊತ್ತಿಲ್ಲಾ... ...ನಿಮ್ಮ ಕನ್ನಡ ಪಾಷೆಕಿ ತೋಂಡಿಯುರಿಟ್ಟವಾಳ್ ಅರ್ಣ್ಟೂರ್ ನಿಮ್ಮ ಪೇರು! ಎಂಗ ಪಾಷೆಕಿ ವೋರ್...ಮಟ್ಟಿಕೆ ಉಳೀನ್ ಎಂಗಪೇರು ಇಂತ Iyengarಉ ಭಾಷೆ...ಒಂಗ ಪಾಷೆ ಅಲ್ಲ ಎಂಗ ವೋರ್ ಉಳೀಲೆ ಪೆರಂಟ್ಞ ತಿನ್ನುವ ಪಾಷೆ!...ಈತ ನಾವು ಆಟುವ ಮಾತು post puberty marriage...widow re-marriage..... ಮನೆ ಹೆಂಗಸರ ಮನಸಿನ ಮೇಲೆ ಮರ್ಯಾತೆ ಇರ್ರ್ಕನರ ನಮ್ಮಕಳ್ಕ್ಕೆ ನಿಮ್ಮ idealistic lecturoo...ಪ್ರಯೋಜನಮೇ ಇಲ್ಲ.

ರಾಮಣ್ಣ: [ಪಟಾಟೋಪದಿಂದ] ಪ್ರಯೋಜನ್ನಿಲ್ಲಾ! Of course ಪ್ರಯೋಜನ್ನಿಲ್ಲ ನಿಮಗೆ ...ನಾನ್ಕೊಟ್ಟ lecturoo ನಿಮಗಲ್ಲಾ...ಹೆಂಗಸರಗ್ಗದರ್ಕೊಂಡಿರೋ ಹೇಡಿಗಳಲ್ಲಾ!...ಹೋಂ ರೂಲು,...Home Ruloo. ಅಂತ ಹೇಳ್ತಾ Homeನಲ್ಲಿರೋ ಹೆಂಗಸರ್ಕೈಲಿ ಜುಟ್ಟು ಹಾಕೇನೂ ಕೊಟ್ಬಿಟ್ಟು ಕಂಗೆಡೋ ಕ್ರಿಮಿಗಳಿಗಲ್ಲಾ ಕೊಟ್ಟದ್ದು ನಾನು...ನನ್lectureನಾ!..

[ಕನಿಕರ ದೃಷ್ಟಿಯಿಂದ ಮೂವ್ವರನ್ನು ಈಕ್ಷಿಸಿ] ಹಯ್ಯೋ!...ಸಿಂಹಾಸನಕ್ಕೋಸ್ಕರ ಸ್ವರಾಜ್ಯ ಸ್ವರಾಜ್ಯಾಂತ ಸೀತ್ಕಾರ ಮಾಡೋ ಸಿಂಹಗಳೂ...ಮತ್ತೂ ರ್ಗ್ಗೆ ರೈಲ್ಲತ್ತತ್ತೂನೂವೇ ತೋಳಗೂ... ತಮ್ಕೇರೀಗೆ ಕಾಲ್ಹಾಕೋವಾಗ ಕತ್ತೆಗೂ...ಇನ್ನವಿಬ್ಬೇದೀಗ್ಗರುತ್ತೂನೂವೆ ಬೆಕ್ಕುಗೂ ಆಗಿ ಇನ್ನೊನ್ನೇ ಹೊಸಲ್ದಾಟತ್ಲೂನೂವೆ ಮನೆ ಆಕೇಗೆ ಬೆದರ್ಕೊಂಡು...ಮೂಲೇಲ್ಹುದರ್ಕೊಂಡು...ಮೂತಿ ಮುಚ್ಕೊಳ್ಳೋ ಮೂಗಿಲಿಗಳ್ರಾ!! ನಿಮಗಲ್ಲಾ...ನಾನ್ಕೊಟ್ಟ ನನ್ನ lectureooo!! ಗಂಡಸರ್ಗೆ!! ...ಗೈರತ್ತಿರೋ...ಗಂಡಸರ್ಗೆ !!

[ಹೋರಾಡಿ ಗೆದ್ದ ಹುಂಜದಂತೆ ಹೆಜ್ಜೆಯನ್ನು ಹಾಕುತ್ತಾ, ಹಿಗ್ಗುತ್ತಾ ರಾಮಣ್ಣನು ಹೊರಡುವನು.]

ರಾಯ: [ಬೆಚ್ಚಿಬಿದ್ದು-ರಾಮಣ್ಣನು ಹೋದ ಹಾದಿಯನ್ನು ಸಭೀತಿ ಭೀತಿಯಿಂದ ಅವಲೋಕಿಸುತ್ತಾ] ಕ್ಷಮ್ಸಿ ಸಾರ್! ಈ ಪ್ರಾಣಿ!...ಮಹಾಪ್ರಾಣಿ! ನಮ್ಮಂಥಾ ಗಂಡಸ್ರುಗಳೆದುರ್ಗೆ ಕುಗ್ಗಿಸಿ ಕರಗ್ಸೋವಾಗ...ಈ ಹೆಬ್ಬುಲಿ ಘರ್ಜನೇನಾ...ಈತನ್ನೇ ಹೆಂಗಸ್ರು ಹ್ಯಾಗ್ತಾನೇ ಸಹಿಸಿ ಬಾಳ್ತಾರ್ಲ್ಯೋ ಕಾಣೆ. ಬನ್ನಿ ಹೋಗೋಣಾ...ನಮ್ಮನ್ನೆಣಿಸ್ಕೋ ಬಹ್ದೋರ್...ಮನೇಲಿ. ಸಾಭಾರ್ಯಾಯಾಗ್ಗುಹುಕ್ತಾ!

[ನಿಷ್ಕ್ರಮಣ]

ದೃಶ್ಯ ೩

ಸ್ಥಾನ : ರಾಮಣ್ಣನ ಮನೆಯ ಮುಂದಿನ ಕೋಣೆ.

ರಾಮಣ್ಣ: [ಪ್ರವೇಶಿಸಿ, ಕೋಣೆಯ ಹೊರ ಹೊಸಲನ್ನು ದಾಟಲುದ್ಯುಕ್ತಳಾಗಿರುವ ತಾಯಿಯನ್ನು ಕುರಿತು] ಅದ್ಯಾಕಮ್ಮ ಹೀಗ್ನಿಂತಿಧೀಯಾ?

ಸುಬ್ಬಮ್ಮ: ಅದೇ ನನಗೂ ಆಶ್ಚರ್ಯ! ನಿಮ್ಮಪ್ಪನ್ನ ಸ್ಮಶಾನದಲ್ಲಿ ಸುಟ್ಟು ಬೂದಿ ಮಾಡಿದ್ಮೇಲ್ಲಾ, ಅವನ್ಸುಟ್ ಚಿತೇ ಮೇಲೆ ಎರಡು ಬೆಟ್ಟಗ್ಳವಾದರೂ ಸ್ಥಳ ಬಿಟ್ಟಿದ್ರೆ ಅದರ ಮೇಲೆ ಬಿದ್ದುಕೊಂಡು ಬೂದಿಯಾಗಬೇಕೂ ಅಂತಿದ್ದ ನನಿಗೇ, ಹಸುಮಗುವಾಗಿದ್ದ ನಿನ್ನ ಸಾಕೋಕೆ ಅಂತ ನಿಮ್ಮಪ್ಪ ಕಟ್ಟಿಟ್ಟು ನಿಮ್ಮಿಬ್ಬರ್ನೂ ಬಿಟ್ಟಿಟ್ಟು ಹೋದ ಈ ಮನೇಲಿ...ಆ ಮೊದಲನೇ ಮಾಂ ಸತ್ತದ್ದಕ್ಕೆ ನಾನೊಬ್ಬಳಿಗೂ ಸಂತೋಷಪಟ್ಕೊಂಡು ಸುಮ್ನಿರದೇ, ಬೇಡ...ಬೇಡ...ಬೇಡ...ಅಂತ ಬಡ್ಕೊಂಡ ನನ್ನಾತನ್ನೆತ್ತಾಕಿ

ಈ ಎರಡನೇ ಕಿರಾತಕೀನಾ ಕೈ ಹಿಡಿದು ಮನೆಗೆಳಕೊಂಡ್ ಬಂದಾರಭ್ಯ ಮುಳ್ ಮುತ್ತುಗದ ಮರದ ಮೇಲ್ಗೆ...ಘೇತಾಳ್‌ನ್ಹಾಗೆ ಸೂರಿಗೆ ಕಾಲು ನೆಲಕ್ಕೆ ತಲೆಯೂ ಆಗಿ ತೂಗಾಡೋದು ಬಿಟ್ಟು ಸರ್ವರ ಹಾಗೆ ಹೀಗೆ ನೆಟ್‌ಕೊಂಡು ನಿಂತಿರೋಕೆ ನನಗೆಲ್ಲಿ ಯೋಗ್ಯತೆ ಬಂತೂಂತ....ನನಗೂ ಅದೇ ಆಶ್ಚರ್ಯ!!

ರಾಮಣ್ಣ: ಅಮ್ಮಾ! ಅಪ್ಪ ದಿವಂಗತನಾದಾಗ,

"ತಿಸ್ರಃ ಕೋಟ್ಯೋರ್ಧ ಕೋಟೀಚ ಯಾನಿರೋಮಾಣಿ ಮಾನವೇ ।
ತಾವತ್ಕಾಲಂ ವಸೇತ್ಸ್ವರ್ಗೇ ಭರ್ತಾರಂ ಯಾನುಗಚ್ಛತಿ ॥"

ಎಂಬ ಪುರಾಣೋಕ್ತಿಪ್ರಕಾರ ಅಪ್ಪನ್‌ಜತೇಲಿ ಸ್ವರ್ಗಸುಖಗಳ್ನೆಲ್ಲಾ ಅನುಭವಿಸೋದ್ನ ಬಿಟ್ಬಿಟ್ಟು... "ಆತ್ಮಾವೈ ಪುತ್ರನಾಮಾಸೀ" ಅಂತ, ಅಪ್ಪನೇ ನಾನು ಅಂಬೋ ಭಾವದಿಂದ ಈ ನನ್ನ ಬೆಳಸಿದ ನೀನು ಈ ವಯಸ್ಸಿನಲ್ಲಿ ನನ್ನ ಕಣ್ಣೆದುರ್‌ಗೆ ಹೀಗೆ ಕಷ್ಟಪಡೋದು. ನನ್ನ ಹೃದಯಾನ ಇರೀತಿಧೆ...ಇದೊಂದ್ ಕಡೆ. ಇನ್ನೊಂದ್ ಕಡೆಯೋ, ನೀನು ಬೇಡ ಬೇಡಾಂತೆಷ್ಟು ಹೇಳಿದರೂ ಹುಚ್ಚಿಟ ಹಿಡ್ದು ಈ ಎರಡನೇ ಮದುವೆ ನಾವಮಾಡಿಕೊಂಡದ್ದು ಮನಸ್ಸಿಗೆ ಬಂದು. ಪಿತೃವಾಕ್ಯಪರಿಪಾಲಕನಾದ ಶ್ರೀರಾಮನ ಹೆಸರ್ನ ಮಾತೃವಾಕ್ಯೋಲ್ಲಂಘಕನಾದ ಈ ಘಾತುಕನಿಗೆ ಅದೇ ಹೆಸರಿಟ್ಟದ್ದು, ಹೃದಯಾನ ಕೊರೀತಿ ಧೇಮ್ಮಾ...ಕೊರ್‍ರೀತಿಧೇ ಆದರೂ ಈ ಹಸುಳೆ ನಿನ್ನ ಮಗೂ ಅನ್ನೋದ್ಮರೀದೆ ಮನಸ್ಸಿಗೆ ಶಾಂತಿ ತಂದು ಕೋಳ್ಳೋದು ನಿನ್ನ ಭಾರಾಮ್ಮಾ! (ಬಿರುಸಾಗಿ) ಆದರೆ ಈ ಪಿಶಾಚಿ ವಿಷಯದಲ್ಲಿ ಇನ್ನೇನೂ ಶಂಕೆ ಇಟ್ಕೋಬೇಡಮ್ಮಾ!

"ಸ್ತ್ರೀಣಾಮ್ ಶುದ್ಧ ಸ್ವಭಾವಾನಾಂ ಪತಿರೇವೀಶ್ವರ ಪ್ರಭುಃ" ಅನ್ನೋ ಭಾರತೋಕ್ತಿಗೂ "ಪತಿಮಾತಾ ಪರಾಗತಿಃ" ಅನ್ನೋ ಆಕಾರೋಕ್ತಿಗೂ ಪ್ರತಿಕೂಲವಾಗಿ ಅಲ್ಪ ಸ್ವಲ್ಪ ಕದಲಿದ್ರೋ... ಕೈಕಾಲು ಮುರಿದು ಒಲೇಲಿಟ್ಟು ನೀರ್‍ಕಾಯಿಸಿ ಅದರಲ್ಲಿ ಬೇಯಿಸಿದ ತನುತಲೆಗಳ್ನ ತೌರ್ಮನೆಗೆ ರವಾನ್ಸೋ ವಿಷಯದಲ್ಲಿ ಶಂಕೆ ಪಡ್ಬೇಡಮ್ಮ! ನಾರಾಯಣಾ!...ದೊಡ್ಡ ಜಮಾನಮ್ಮನೋರಿಗೆ ಜಪಕ್ಕಿಡು! ನಾನು ಊಟಕ್ಕೆ ಏಳೋಷ್ಟೊತ್ತಿಗೆ ಫಲಾರಕ್ಕೆ ತಯಾರಾಗಿರ್‍ಬೇಕಮ್ಮ!

ಸುಬ್ಬಮ್ಮ : (ನಿಷ್ಕ್ರಮಿಸುತ್ತಾ—ನಿಧಾನವಾಗಿ) ಆಗ್ಲಿ...ದಿನಾ ಹೀಗೆ ಹೊತ್ತಿಟ್ಕೊಂಡು ಬರ್‍ತೀಯಲ್ಲಾ, ಮೈಗಾಗುತ್ತೆಯೇ ಮಗೂ?!

ರಾಮಣ್ಣ : [ತನ್ನಲ್ಲಿ ತಾನೇ]Scylla...dodged! ಇನ್ನು...Charybdismಎಲ್ಲಿloom ಮಾಡುತ್ತೋ ಕಾಣೆ! As the boy-scouts ಹೇಳೋಹಾಗೆ. I must be prepared ಉ!!

[ವೆಂಕಮ್ಮನು ಬೋರನ ತಲೆಯ ಮೇಲೆ ಟ್ರಂಕು ಹಾಸಿಗೆಯನ್ನು ಹೊರಿಸಿ ಅವನ ಹಿಂಬಾಲಿಸಿ, ಒಳಗಿನಿಂದ ಹಜಾರಕ್ಕೆ ಪ್ರವೇಶಿಸುವಳು.]

ವೆಂಕಮ್ಮ : ನಡಿಯೋ!

ಬೋರ : ಸೀಮೊಗ್ಗೆಗೆ...ಈಟೊತ್ಗೆಲ್ರವ್ವಾ, ರೈಲೂ...?

ವೆಂಕಮ್ಮ : ಏಟೊತ್ತಿಗೆ ರೈಲೋ ಆಟೊತ್ತಿನವರಿಗೂ...ಅಲ್ಲೆ ಕುಕ್ಕರಿಸಿಕೊಂಡಿರೋದು ನಡಿಯೊ!...ಶನೀ!

ರಾಮಣ್ಣ : ಈಗೇನು ಮಾಡೋದು?...ಹೆದರಿಸಿದೆನೋ ಹೆದರೋದಿಲ್ಲ. ನಾನು ಹೆದರಿದೆನೋ double ಹೆದರಿಸ್ತಾಳೆ! ಇಲ್ಲಾ...Beg ಮಾಡಿದ್ರೋ ಇನ್ನೂ ತಲೇಗೆ ಹತ್ತಿಬಿಡ್ತಾಳೆ. ಹೆದರ್‍ಸ್ಕೋದೋ hopelessoo; Ergo· mild Surprise ಏ best methodoo... ಅಲ್ಲ...proceedure ಊ...[ಪ್ರಕಾಶ] ಓ ಹೋ...ಏನಿದೂ?!

ವೆಂಕಮ್ಮ : ಯಾವ್ದೇನೂ?!

ರಾಮಣ್ಣ : ...ಇ...ಇ...ದೂ?

ವೆಂಕಮ್ಮ : ಇದೇ?...ಮೇಲಿರೋದು ನನ್ನ ಟ್ರಂಕು ಹಾಸಿಗೆ...ನನ್ನ ತವರ್ಮನೆಯಿಂದ ತಂದದ್ದು. ಅದನ್ನು ಹೊತ್ತಿರೋ ಹೋತ, ನಿಮ್ಮ ಜವಾನ.

ರಾಮಣ್ಣ : ಅಲ್ಲಾ! ...ಎಲ್ಲಿಗೆ ಹೊರಟದ್ದೂ...?

ವೆಂಕಮ್ಮ : ಎಲ್ಲಿಗೇನೂ?...ನಮ್ಮೂರಿಗೆ, ನಮ್ಮನೇಗೆ...

ರಾಮಣ್ಣ: ಇಷ್ಟು ಹೊತ್ತಿನಲ್ಲೇ?...ನಮ್ಮ ಮಾವನವರೂ...ಸೌಖ್ಯ ತಾನೆ?

ವೆಂಕಮ್ಮ: ಸೌಖ್ಯವಿಲ್ಲದೆ ಏನು? ನಿಮ್ಮನೇಲಿ ನೀವೂ ನಿಮ್ಮ ತಾಯೀ ನಿಮ್ಮನೇಲೆಷ್ಟು ಸೌಖ್ಯವ್ವೋ ನಾನೂ ನಮ್ಮ ತಂದೇನೂ ಅಷ್ಟಕ್ಕಷ್ಟು ಸೌಖ್ಯವಾಗಿರ್ತೀವೆ...ನಾಳೆ, ನಮ್ಮೂರಿನಲ್ಲಿ (ಬೋರನಿಗೆ)...ನಡಿಯೋ!

ರಾಮಣ್ಣ : ಕ್ಷಮಿಸು dear!...ಒಂದು...three words ನಿನ್ನ ಕಿವೀಲಿ; (ಬೋರನಿಗೆ) ಒಳಗಿಡೋ !!

[ಬೋರನ ನಿಷ್ಕ್ರಮಣ]

ವೆಂಕಮ್ಮ : ಯಾಕದನ್ನ ಕಳ್ಸಿದ್ರೀವು ತಿರ್ಗೀ...?

ರಾಮಣ್ಣ : ಇಲ್ನೋಡು dear!...ಹೂಂ!...good news! motherಗೆ consumption ಅಂತೆ! From Anty mother's side ಅವರಮ್ಮನ್ಕಡೆಯಿಂದ! ಡಾಕ್ಟರ್ ಹೇಳಿದ್ರು! ಇಲ್ನೋಡು dear! ಅಮ್ಮನ್ಗೆ rheumatism· melancholia··· Sciatica, Lumgabo...ಓಗೆ ಜಗತ್ತಿನಲ್ಲಿರೋ ಜಾಡ್ಯಾನೆಲ್ಲಾ ಜೋಮಾಲೆ ಹಾಕ್ಬಿಟ್ಟಿದ್ದಾನೆ ಅಮ್ಮನ ಕುತ್ತಿಗೇಗೆ...ಡಾಕ್ಟರು. ಇನ್ನೆಷ್ಟು ದಿನಾಂತ ಬದ್ಕಿದ್ದಾಳೂ? ಇನ್ಮೂರು ತಿಂಗ್ಳಲ್ಲಿ sensible ಆಗಿ ಸತ್ತಳೋ? ಬದ್ಕಿದ್ಳೂ! ನಿಂತಳೋ!?, ಅದಕ್ ಬೇರೆ arrangement ಮಾಡಿದ್ದೇನೇ... ನಾರಾಯಣಾ!

ನಾರಾಯಣ : (ಪ್ರವೇಶಿಸಿ) ಸ್ವಾಮಿ!

ರಾಮಣ್ಣ : ನಿಮ್ಮಮ್ಮ ಯಾವಾಗ ಕಾಶೀಗ್ಹೊರಡೋದು...(ವೆಂಕಮ್ಮನಿಗೆ) ಕೇಳು dear!

ನಾರಾಯಣ : ಸ್ವಾಮಿ ಅವತ್ತೇ ಹೇಳಿದ್ರಲ್ಲಾ!...ಅನ್ಕೂಲಗಳು ಒದಗ್ಸಿ ಅನುಜ್ಞೇನೂ ಕೊಟ್ ತ-ತಕ್ಷಣವೇ!

ರಾಮಣ್ಣ : ಸರಿ...ಹೋಗು (ನಾರಾಯಣ: ನಿಷ್ಕ್ರಮಣ)...ಕೇಳು dear! ಇನ್ಮೂರ್ತಿಂಗಳಲ್ಲಿ ಸತ್ತಳೋ?,...ಬದ್ಕಿದ್ಳು!! ಇಲ್ನೋ?. ವಾರಣಾಸಿ! return ticket ನಿಲ್ಲಾ!...ಸಂಜಯನವ ವರೆಗೂ ನಾರಾಯಣಾ ಅಲ್ಲೇ ಠಿಕಾಣಿ...ಇನ್ಮೂರೇ ತಿಂಗಳು dear...

ವೆಂಕಮ್ಮ : (ನಿಧಾನವಾಗಿ ಒಳಗೆ ಹೋಗುತ್ತಾ) ಅದೇನ್ಮೂರ್ತಿಂಗ್ಳೋ. ಅದನ್ನೂ ನೋಡ್ಬಿಟ್ಟೇ ಹೋಗ್ತೇನೆ.

[ನಿಷ್ಕ್ರಮಣ]

ರಾಮಣ್ಣ : Oh my God!!...ಅಲ್ಲಾ? ಇನ್ನೆಷ್ಟು ದಿನಾಂತ್ಲೀಗೆ playing off one against the otheroo ಫಲಿಸುತ್ತೋ ಕಾಣೆ!!

[ನಿಷ್ಕ್ರಮಣ]

ದೃಶ್ಯ ೪

ಸ್ಥಾನ: ಪೂರ್ವವತ್

[ವೆಂಕಮ್ಮನು ಕುಳಿತಿರುವಳು—ಬೋರನು ತರಕಾರಿಯ ಬುಟ್ಟಿಯನ್ನು ಒಡಿದು ಪ್ರವೇಶಿಸುವನು.]

ವೆಂಕಮ್ಮ : ತರಕಾರಿ ಕೆಳಗಿಟ್ಟು...ವಿಂಗಡಿಸೋ!

ಬೋರ : ಯಜಮಾನ್‌ರೇಳವ್ರವ್ವಾ...ತರಕಾರೀನಾ ಮುಂದಿನ ಕೋಣೇಗಿಡಬಾರದೂಂತಾ...

ವೆಂಕಮ್ಮ : ಯಾಕೋ...ಕಾಣೇ?

ಬೋರ : ದಾರ್ರಿರೂಮ್ (Drawing Room) ಅಂತೆ...ತರಕಾರಿ, ಅಡಿಗೆ ಬಾಬ್ತು... ಇಂದಿನ ಕೋಣೇಗೆ...ಇಟ್ಕೋಬೇಕೂಂದ್ರೂರವ್ವಾ...ಯ...ಯಜಮಾನ್ರೂ!

ವೆಂಕಮ್ಮ : ಇಲ್ಲಿ ಬಾರೋ! ನಾನ್ಯಾರೋ?...

ಬೋರ : ಯಾಕ್ರವ್ವಾ?...ಅಮ್ಮಾವರೂರವ್ವಾ!

ವೆಂಕಮ್ಮ : ಯಾರೋ...ಸಂಬಳ...ಕೊಡೋರು?

ಬೋರ : ಯಾಕ್ರವ್ವಾ?...ತಾವೇರ್ರವ್ವಾ!

ವೆಂಕಮ್ಮ : ನಿನಗೇ ಸಂಬ್ಳದ್ ಗಿಂಬ್ಳದ್ ಮೇಲೆ ಕಣ್ಣಿರೋದಾದ್ರೆ, ಇರ್ದ ಮಟ್ಟಿಗೆ ಮರೀಬೇಡ...(Insistently) ಈ ಮನೆಗೆ ಯಜಮಾನ್ರು ಒಬ್ರೆ. **ಅದ್ನಾನು !** ಅರ್ಥವೇನೋ?

ಬೋರ : ಊರ್ರವ್ವಾ.

ವೆಂಕಮ್ಮ : ಹಾಗಾದ್ರಿಡು ಕೆಳ್ಗೆ!

ಬೋರ : [ಬುಟ್ಟಿಯನ್ನಿಳಿಸಿ ತರ್ಕ್ಕಾರಿಗಳನ್ನು ವಿಂಗಡಿಸುವನು]

ವೆಂಕಮ್ಮ : ಬಾಕಿ ಚಿಲ್ರೆಯೆಲ್ಲೋ?

ಬೋರ : ಇಕ್ಕೊಳ್ಳಿರವ್ವಾ.

[ಚಿಲ್ಲರೆಯನ್ನು ನೆಲದ ಮೇಲಿಡುವನು]

ವೆಂಕಮ್ಮ : ಸರಿ...ಹೋಗು. [ಬೋರನು ನಿಷ್ಕ್ರಮಿಸುವನು] [with a far away look around] ನನ್ನ ಕೈಪೆಟ್ಟಿಗೆ ಬೀಗದ ಕೈ ಎಲ್ಲೀ...?

[ಹುಡುಕಲು ಎದ್ದು ಒಳಗೆ ಹೋಗುವಳು]

ರಾಮಣ್ಣ : [ಪ್ರವೇಶಿಸಿ, ಹಠಾತ್ತಾಗಿ] **ಬೋರಾ! ! !**

ಬೋರ : (ಓಡಿ ಬಂದು) ಬುದ್ಧೀ!

ರಾಮಣ್ಣ : ಇದೇನೋ ಇದೂ?

ಬೋರ : ಯಾಕ್ಬುದ್ದೀ? ತರ್ಕಾರೀ ಬುದ್ದೀ!

ರಾಮಣ್ಣ : ಕಣ್ಕಾಣುತ್ತೇ?...ಹಾಗಾದ್ರೆ ಕಿವೀನು ಕೇಳಿಸ್‌ಬಹುದು!...ಆ ಹೊತ್ತೇನ್ಹೇಳ್ದೆ ನಿನಗೇ...?

ಬೋರ : ತರ್ಕಾರೀ ಇಂದಿನ ಕೋಣೇ ಒಳ್ಗೆ ಇಟ್ಟೇಕೊ ...ಅಂ...ತಾ...ಬುದ್ಧೀ.

ರಾಮಣ್ಣ : ಮತ್ಯಾಕೋ ಇಲ್ಲಿಧೇ?

ಬೋರ : ಯಜಮಾನ್ರು...ಇಡ...ಬ್ಯೆಯಿದು...ಅಂ...ತಂದ್ರು ಬುದ್ಧೀ!

ರಾಮಣ್ಣ : ಇಡಬಾರದು ಅಂತೇಳ್ತಿದ್ದೇನೆ **ನಾನು !** ಇಡಬೈದು ಅಂತಾರೋ ಯಾರು? ಈ ಮನೇಗೆ ಎಷ್ಟು ಜನಾನೋ ಯಜಮಾನ್ರೂ?

ಬೋರ : ಒಬ್ಬರೇ ಒಬ್ಬರು ಬುದ್ಧಿ! ಅಮ್ಮಾವ್ರೇಳವರೆ...ಅದೂ ತಾವೇ...ಅಂತ.

ರಾಮಣ್ಣ : (with great relief;triumphantly) ಹಾಗಾದರೆ ಒಪ್ಕೊಂಡ್ರು... ನಾನ್ಮನೇಯಜಮಾನ್ರೂಂತ!

ಬೋರ : ಅಲ್ಲ ಬುದ್ದೀ!...ತಾವೇ...ತ್ಯಾವೇ...ಅಂತ.

ರಾಮಣ್ಣ : I see! There is only one master in the house and that is the mistress!! ಇನ್ ನನ್ಮಾತ್ ಸುಳ್ಳಾಗ್ತಿರೋಕೇ ಆ ಮುಂದಿನ್ಬಾಗಲ್ನಾ. ಹಿತ್ತಲ್‌ಬಾಗಲ್‌ಗ್ಹಾಕಿಸ್‌ಬಿಡು...ತೊಲಗು! ನೀನ್ ನನ್ ಕಣ್ಣೆದುರ್ಗೆ ಇರಬೇಡ!

[ಬೋರನ ನಿಷ್ಕ್ರಮಣ]

(collapsing into a chair)...ಹೀಗೆ ಜವಾನ್ರೆದಿರ್‌ಗೆಲ್ಲಾ ಹೀಯಾಳ್ಸೋಕೆ ಶುರುವು ಮಾಡಿಬಿಟ್ಟಳಲ್ಲಾ!... What about my position? ಇಷ್ಟಕ್ಕೂ marriageನಲ್ಲಿ ಕಣ್ಬಿಡೋಕೆ ಅರಿಯದ ಕೂಸಾಗಿದ್ದು...awfully simple ಆಗಿದ್ದೋಳೂ ಈಗ... she has become simply awfulಉ! ಈ ಬಾಬತ್ ಗಾನಾ ಬೈಲಿಗೆ ಬಿತ್ರೋ ಬೋಳಿಸ್ದ್ಹಾಗೇ ನನ್ನ reputationoo. I know what it is! She has non-entetised me! ಈಗ್ಲೇ assert ಮಾಡಿಕೊಂಡ್‌ನೋ ನನ್ನ positionನ್ನಾ?, ಬದಿಕ್ದೇ!...ಇಲ್‌ಬಿದ್ರೋ?. I shudder to think what may happen!!......Oh! Eight O'clock!...... still no coffee! Good......excuse!...ಲ್ಲೇ!!

[Sail in ವೆಂಕಮ್ಮ]

ರಾಮಣ್ಣ : (ಕಿರುಚುತ್ತಾ) ಘಂಟೆ ಎಷ್ಟೇ?...?...

ವೆಂಕಮ್ಮ : (ಸ್ವಗತ) ಸರಿ!...ಬೆಳಕ್ಹರಿಯೊ ಹೊತ್ತಿಗೆ ಪ್ರಾರಂಭಿಸಿಬಿಟ್ಟರೆ ಹೀಗೆ...ಇನ್ನು ಸಂಜೆ ಹೊತ್ತಿಗೆ ಸೂರು ಮುರುದುಬಿಡುತ್ತೋ ಏನೋ ಕಾಣೆ...ಇದನ್ನೀಗ್ಲೇ ಅಡಗಿಸಿ ಬಿಡಬೇಕು! (ಪ್ರಕಾಶ) ...**ಏನದ್ ಕೇಳಿದ್ದೂ ?**

ರಾಮಣ್ಣ : ಅಲ್ಲ...ಘಂ...ಟೆ...ಎಷ್ಟೂಊಂತ ಕೇಳಿದ್ದು...

ವೆಂಕಮ್ಮ : ನನ್ಕೇಳ್ದೇಪ್ರಯೋಜನ? ನನಗ್ಗಡಿಯಾರ ಕೊಂಡ್ಕೊಡೋ ಯೋಗ್ಯತೆ ನಿಮಗೆ ಬಂದಾಗ ಕೇಳಿದರೆ ಸಾಲ್ದೇನೋ?...ಗಜದ ಹಾಗೆ ತಾವ್ ಗಡಿಯಾರಕ್ಕೆ ತಕ್ಕ ಸರಪಣಿ ಹಾಕ್ಕೊಂಡು ಜೇಬಿನಲ್ಲಿಟ್ಕೊಂಡು ನನ್ನ ಕೇಳುತ್ತೆ **ಗಂಡಸು, ಘಂಟೆ ಎಷ್ಟು ಅಂತ !**

ರಾಮಣ್ಣ : ಘಂಟೇ...ನನಗ್ಗೊತ್ತೊ...?...

ವೆಂಕಮ್ಮ : ಗೊತ್ತಿದ್ದೂ ಕೇಳಿದಿರಾ! ಇದೇನ್ ಅತಿ ಬುದ್ಧಿಯೋ?...ಹುಚ್ಚೋ? ಗಂಡಸಿಗೇನ್ ಎರಡೂ ಒಂದೇ...!

ರಾಮಣ್ಣ : ಅಲ್ಲಾ...ಆ...ಕಾಫೀಗ್ಯಾಕಿಷ್ಟೊತ್ತೂ...ಂತ...

ವೆಂಕಮ್ಮ : ಕಾಫೀಗ್ಯಾಕಿಷ್ಟೊತ್ತಾಯ್ತೂ ಅಂತ ಕೇಳೋಕೆ...ಇಷ್ಟೊಂದು ಬಳಸ್ಕೊಂಡು ಬಳಸ್ಕೊಂಡು ಪ್ರಶ್ನೇನೋ?...ಲಾಯರಿ ಅಲ್ವೇ ಲಾಯರಿ!...ಇಷ್ಟೊತ್ತೇನೂ?...ಹಾಲ್ನೋನು ಎಷ್ಟೊತ್ತಿಗೆ ಬರ್‍ತಾನೊ ಅಷ್ಟೊತ್ತಿಗೇ!...ಹಿಂದಿನಾರ್ತಿಂಗಳ ಲೆಖ್ಖಾನೂ ಬಾಕೀ ಇಟ್ಕೊಂಡು, ಬೆಳ್ಳಂ ಬೆಳಕು ಹರೀತಿರಲು ಸರಸರಾಂತ ಬಂದು ಸುರಿದ್ ಬಿಟ್ಟುಹೋಗೋಂದ್ರೆ ಎಲ್ಲಾಗುತ್ತೆ...? ನಿಮ್ಮ ಚಾಟೂಕ್ತಿಗಳಿಗೆಲ್ಲಾ ಚಪ್ಪಾಳೆ ತಟ್ಕೊಂಡು ಕುಣೀತಿರೋಕೆ ನನಗ ಬಿಡುವಿಲ್ಲಾ! ಕೆಲಸಗಳ್ ಬೇಕಾದಷ್ಟು ಬಿದ್ದಿವೆ!...**ತಕ್ಕೊಳ್ಳಿ !**

[ಕಾಫಿ ಚೊಂಬು-ಲೋಟಗಳನ್ನು ಮೇಜಿನ ಮೇಲೆ ಕುಕ್ಕುವಳು]

ರಾಮಣ್ಣ : (ಕಾಫಿಯನ್ನು ಲೋಟಕ್ಕೆ ಬಗ್ಗಿಸಿನೋಡಿ) ಏನೇಇದು...ಆ...ಏನೇ ಇದು ಈ ಕಾಫಿ ಬಣ್ಣಾ...?

ವೆಂಕಮ್ಮ : ಬಣ್ಣವೇನು, ಕಾಫಿ ಬಣ್ಣ! ಬೆಳ್ಳಂಬೆಳ್ಳಗೂ ಇರಬೇಕೂ, ಕಾಫೀಂತಲೂ ಆಗಬೇಕು ಊಂದ್ರೆಲ್ಲಾಗುತ್ತೆ!...ಏನು ಕಷಾಯಕ್ಕೆ ಹಾಲೋ ಹಾಲಿಗೆ ಕಷಾಯವ್ರೋ?...ಈಹೊತ್ತೇನಾ ಬಣ್ಣಾಂತ ಪ್ರಾರಂಭಿಸ್‌ಬಿಟ್ರೀ? ಆ ಹೊತ್ತು ಬೆಂಡೋಲೆ ಮಾತೆತ್ತಿದಾಕ್ಷಣವೇ "ಮಿಕ್ಕೋರ್ ನೋಡಿ ಸಂತೋಷಪಡೋಕೆ ನಮ್ಮ ಕೈಯಿಂದ್ ಕಾಸ್ತೆತ್ತು ಕೊಂಡ್ಕೊಂಡು ಯಾಕ್ತಗಲಿಸ್ಕೋಬೇಕ್ ಕಿವೀಗೇ?,ತನ್ ಕಿವೀಲಿರೋದು ತರಪಾಗಲೀ ಹರಳಾಗಲೀ ತಾನ್ನೋಡಿ ಸಂತೋಷ್ಪಡೋಕೆ ಕಿವೀಲೇನೂ ಕಣ್ಣಿಡಲಿಲ್ಲಾ ಭಗವಂತಾ"ಂತಂದ್ರಲ್ಲಾ!...ಈಗ ಅದೇ ಭಗವಂತಾ ಕಾಫಿ ಬಣ್ಣಾ ನೋಡಿ ಆನಂದ್ಪಡೋಕೆ ಹೊಟ್ಟೇತುಂಬ ಕಣ್ಣುಗಳು ಹೂತಿಟ್ಟಿದಾನೇನೋ!...**ಕ್ಕುಡೀರಿ ಅಂದ್ರೆ**...ಓಹೋ!

ರಾಮಣ್ಣ : ...ಏನ್...terribleಏ...ನಿನ್ನ tongueoo!

[ರಾಮಣ್ಣನು, ವೆಂಕಮ್ಮನು ಕೊಟ್ಟ ಕಾಫಿಯನ್ನು ಒಂದು ಗುಟುಕು ಕುಡಿದು, ಅದರ ರುಚಿಯನು ವದನದಲ್ಲಿ ವ್ಯಕ್ತಿಸುವನು.]

ವೆಂಕಮ್ಮ: ಇದೇನು!...ಏನಿದು ಮೋರೆ ವಿಕಾರ?...ಕುಡಿಯೋದೇನ್ ಕಾಫೀನೋ ಕೈಯೆಣ್ಣೇನೊ?

ರಾಮಣ್ಣ: ಅಲ್ಕಾಣೇ!...ಕಹಿ! ಸಕ್ಕರೆ! ಸಿಹಿ...ಉಂ...

ವೆಂಕಮ್ಮ: ಎಷ್ಟೊತ್ತೂಂತ ಎಗರಾಡಿದ್ದಾಯ್ತು. ಬಣ್ಣನೋಡಿ ಬಡುಕೊಂಡಿದ್ದಾಯ್ತು. ಈಗ "ಕಹಿ...ಸಿಹಿ...ಅಂತ್ಹೇಳೋಕೇ...ನರ ಇದೆಯೇನೊ...ಗಂಡಸ್ಗೆ...ನಾಲ್ಗೇಲಿ...?"

ರಾಮಣ್ಣ : ಲೇಏ!! ...ನನ್ನಾಲ್ಗೇಲಿ ನರವಿರೋದು ಹಾಗಿರ್‍ಲೇಏ ! ...ನಿನ್ನಬಾಯಿಗೆ brake ಏನಾದರೂ ಇದೆಯೇನೇಏ!...What a metalic mouth ಏ ನಿಂದೂಊ...?

ವೆಂಕಮ್ಮ: ಇದೊಂದು ಜಾಣತನ ಗಂಡಸರ್‌ದು! ಚರ್ಚೆಗೆ ಮಾತು ಹೊರಡದಿದ್ರೇ ಸರಿ... ಇಂಗ್ಲೀಷು!...

[Exiting ; to Bora]—ಬೋರಾ! ರಾಯರು ಕೋಣೇ ಬಿಟ್ಬ್ರೋದಾಗ ಹೇಳೋ ನನಗೇ !

[ನಿಷ್ಕ್ರಮಣ]

ರಾಮಣ್ಣ : Too late ಉ? Hಹಾಗಾರೆ too lateoo? ಈ tigressನ tame ಮಾಡೋದು too lateoo !!

[ರಾಮಣ್ಣನು ಅವಾಕ್ಕಾಗಿ ಅವಳು ಹೋದ ಕಡೆಯನ್ನೇ ಎವೆಯಿಕ್ಕದೆ ನೋಡಿ. ನಂತರ ಹತಾಶನಾಗಿ ತಲೆಯನ್ನು ನಿಧಾನವಾಗಿ ಮೇಜಿನಮೇಲೆ ತಗ್ಗಿಸುವನು.]

ದೃಶ್ಯ ೫

ಸ್ಥಾನ ; ಅದೇ

[ಮಾರ್ಕೆಟ್ಟಿನಿಂದ ತಂದ ತರಕಾರಿಯನ್ನು ಮುಂದಿಟ್ಟುಕೊಂಡು]

ವೆಂಕಮ್ಮ: ನಾರಾಯಣಾ! ಈಳಿಗೆ ಮಣೆ ತಕ್ಕೊಂಡ್ಬಾರೋ...ಹಾಗೇನೇ ಜಂಪಕ್‌ನೊಳಗೆ ನೀರೂನೂ...

ನಾರಾಯಣ: (ತರುವನು)

ವೆಂಕಮ್ಮ: ನಿನ್ನಾಕಫೀ ಅಂಗ್ಡೀಯೆಲ್ಲಾ ಯೆತ್ತಾಯ್ತೇನು?

ನಾರಾಯಣ: ಇಲ್ಲಮ್ಮ

ವೆಂಕಮ್ಮ: ಯಾಕೆ? ಎಂಟ್ಟೊಂಟ್ಯಾಗಿಲ್ವೇನು ಇನ್ನೂ?

ರಾಮಣ್ಣ: (ಒಳಗಿನಿಂದ) **ನಾರಾಯಣಾ!**

ನಾರಾಯಣ: ಇದ್ಕೋ ಬಂದೆ ಸ್ವಾಮಿ!

[ನಿಷ್ಕ್ರಮಣ]

ವೆಂಕಮ್ಮ: ಇದೇನ್ಗಲಾಟೆ ಆಫೀಸು ರೂಂನಲ್ಲಿ?

ನಾರಾಯಣ : (ಪ್ರವೇಶಿಸಿ) ಅಮ್ಮಾ ನಾಲಕ್ಜನಕ್ಕಾಫೀ ಆಗ್ಬೇಕಂತೆ

ವೆಂಕಮ್ಮ: ಗೊತ್ತು! ವರುಷ್ವೆಲ್ಲಾ ಇಲ್ಲದ ಸ್ನೇಹೋಪಚಾರಗ್ಳೆಲ್ಲಾ ಈ ಎಲೆಕ್‌ಷನ್ (election) ಕಾಲ ಬಂದ್ರೆ ಷುರು! (Vote) ವೋಟುಗಳ ಬೇಟೆಯೋನೋ! ಹೀಗೆ ಕಾಫಿ ಕೊಟ್ಟು Carನಲ್ಲಿ ಕೂಡಿಸ್ಕೊಂಡ್ಹೋಗಿ ಕಸುಕೊಂಡ ವೋಟುಗಳಿಂದ ಬಂದ ಕೌನ್‌ಸಿಲರ್ ಕೆಲಸವೆಷ್ಟಿದ್ರೇ ನ್ನಷ್ಟವೋ ಕಾಣೆ!...ಈಗಿನ್ನಿಷ್ಟ್ಜನಕ್ಕೆ ಪುಡಿ ತಂದೂ...

ನಾರಾಯಣ: ಪುಡಿ ಇದೇಮ್ಮ ಡಬ್ಬದಲ್ಲಿ!

ವೆಂಕಮ್ಮ: ಡಬ್ಬದಲ್ಲಿ ಪುಡಿ ಇದೆ ಗೊತ್ತು. ನಾಳೇ ಕಾಫೀಗೆ...ಮನೇಗೆ. ನಿನ್ನಾಕಫೀ ಅಂಗ್ಡಿ ಎತ್ತದ್ದೊಳ್ಗೇ ಕೆಲಸವಾಯ್ತು. ಆ ಸೋದಿಸಿದ್ಬಟ್ಟೇ ಮೇಲೆ ಒಂದ್ಸಾರಿ ಹಾಕಿದ ಪೌಡರ್ನ ಮರ್ಳೋ ನೀರ್ನಲ್ಹಾಕಿ ತಿರಗ್ಮರ್ಳಿಸಿ ಸೋದ್ಸಿ, ಒಂದಷ್ಟುಹಾಲ್ಹಾಕಿ ಹೋಗ್ಸುರಿ! ಸಕ್ರೆ ಜಾಸ್ತಿ ಹಾಕು. ಏನೂ ಗೊತ್ತಾಗೋದಿಲ್ಲ. ಇನ್ನಾಳೆಯಿಂದ ಆವತ್ತಾವತ್ತ್ಹಾಕಿದ ಪುಡೀನ್ನೆಲ್ಲಾ ಮಧ್ಯಾಹ್ನ ಬಿಸಿಲ್ನಾಡೀಲಿಟ್ಟು ಡಬ್ಬಕ್ಹಾಕಿಡು,—ಮಾರನೇ ದಿನದ ಎಲೆಕ್ಷನ್ ಕಾಫೀಗೆ—ಈ ವೋಟುಗಳ ಬೇಟೆ ನಿಲ್ಲೋವರೆಗೆ. (ನಾರಾಯಣನು ಹೊರಡುತ್ತಿರಲು) ಇಲ್ಲಾ...ಈ ವೋಟುಗ್ಳು ಸಂಪಾದಸೋ ವಿಜೃಂಭಣೇಲಿ ಮೈಮತೋರ್ಂದ್ವೇಳೆ ಊಟಕ್ಕೆ ನಿಲ್ಸಿದ್ರೂ ನಿಲ್ಸ್ಯಾರು: ಒಂದ್ವೇಳೆ ಅವರಿರೋಪಕ್ಷಕ್ಕೆ ದಪ್ಪಕ್ಕಿಹಾಕು ಎಲ್ರಿಗೂ. ಬಂದ ಸ್ನೇಹಿತರ್ಗೆಲ್ಲಾ ಸಣ್ಣಕ್ಕೀಲ್ಲಸಮಾರಾಧ್ನೆ ಮಾಡಿದ್ರೆ ಮೂರ್ದಿನ್ದಲ್ಲಿ ಮನೇ ಮಾರ್ಕೊಂಡ್ ಮೈದಾನದಲ್ಲಿ ನಿಲ್ಲಬೇಕಾಗುತ್ತೆ ಕೈಚಾಚ್ತಾ...!

ನಾರಾಯಣ: ದಪ್ಪಕ್ಕಿ ರಾಯರ ಮೈಗಾಗೊದಿಲ್ವಮ್ಮಾ?

ವೆಂಕಮ್ಮ: ಗೊತ್ತು. ಅವರಿಗ್ಮಟ್ಟಿಗ್ಹೋಳ್ಧೀ ಅಕ್ಕೀ ಹಾಕ್ಬಿಡು—ಅನ್ನಾನ್ಹೋಡಿ ಡಯಾಬಿಟಿಸ್ನೂಂತ (Diabetes) ಹೇಳ್ಕೊಳ್ಳೋ ಜಾಡ್ಯಸವೆ ಅವರಿಗೆ.

ನಾರಾಯಣ: (Hesitatingly) ತುಪ್ಪಾವಮ್ಮಾ?

ವೆಂಕಮ್ಮ: ಫಿನ್ನುಪ್ಪಾವಮ್ಮಾ ?

ನಾರಾಯಣ: ಗೊತ್ತಿಲ್ದೆ ಹ್ಯಾಗ್ಬಡಿಸೋದಮ್ಮ?

ವೆಂಕಮ್ಮ: ದೊಡ್ಡಿಳ್ಳೀಲಿಕಾಸಿತ್ತಪ್ಪ, ತುಂಬ್ಕೊಂಡು ಅಂಗ್ಡೀತುಪ್ಪದಡಕ್ಲಲ್ಲಿ ಭದ್ರವಾಗಿ ಹಿಡ್ಕೊಂಡು. ಹಿಳ್ಳೀದ್ರಾಯರಿಗೆ ಬಡ್ಸಿ. ಮಿಕ್ಕೋರ್ಗ್ಎಡಕ್ಲಲ್ಲಿರೋದ್ಬಡಿಸು. ಯಾರಿಗೂ ಗೊತ್ತಾಗೋದಿಲ್ಲ. ಇದು ರಾಯರು ಮೊದಲ್ಕೂತಿದ್ರ; ಮಂಕನ್ಹಾಗೆ ಮಧ್ಯದಲ್ಕೂತ್ರೇ ಅನ್ನದಲ್ಲೇ ಕಲ್ಸಾಕ್ಬಿಡು.

ನಾರಾಯಣ: ತರ್ಕಾರಿ ಕೊಂಚ್ವಾಗಿದೆಯಲ್ಲಮ್ಮ?...ಇಷ್ಟ್ಜನಕ್ಕೂ ಪಲ್ಯಕ್ಕೆ?...

ವೆಂಕಮ್ಮ: ಹಯ್ಯಯ್ಯೋ! ನಿನ್ಗೆ ತಲೆಯೆಲ್ಲಾ ಬುದ್ಧೀನ್ಯೋದು ತುಂಬಿ ತುಂಬಿ ತುಳುಕಿ ತುಳುಕಿ ಸುರೀತಿದೆ ಮುಖದಲ್ಲಿ! ಯೋಚ್ನೆ ಏನೋ? ಒಂದಿಷ್ಟ್ಬಲ್ಯಬೇರೆ ತಗದಿಟ್ಕೊ ಒಂದ್ಹಿಡಿ ಉಪ್ಪು ಜಾಸ್ತಿ ಹಾಕಿ ಬಂದೋರಿಗ್ಬಡ್ಸು!...ತಿರಿಗಿ ಕೇಳ್ತಾರೇನೋ ನೋಡೋಣ! ಇಷ್ಟ್ರಟ್ಗೆ ತಿಳೀದಿದ್ದ ನಿನ್ಹಾಣ್ತನಕ್ಕೆ ಬೆಂಕೀ ಹಾಕ್ಬೇಕು ಇನ್ಹೋಗು!...ತಿರಿಗೀ ಕಾಫೀ ಅಂತ್ಬಡಕೊಂಡಾರು.

ನಾರಾಯಣ: (ಸ್ವಗತ) ಅಬ್ಬಬ್ಬಾ! ನಮ್ಮ ಅಮ್ಮಾವ್ರಲ್ವೇ ಮಾಡ್ಬೇಕ್ ಲಾಯಿರಿ ಕೆಲ್ಸ! ಪಾಪಕ್ಕೇ ಗೆಷ್ಟು ಅಗ್ಲೂಂತ ಲೆಖ್ಖಾ ಗೊತ್ತಿರೋ ಈ ಯಮ್ಮ ಗಂಡ್ಸಾಗ್ಹುಟ್ಟಿದ್ರೆ ಕಾಡ್ಹಾಲೇ ಅಲ್ವೇ ಕಕ್ಷಿಗಾರರು!!

[ನಿಷ್ಕ್ರಮಣ]

ವೆಂಕಮ್ಮ: ಅಯ್ಯೋ ದೇವ್ರೇ? ಏನ್ಮಹೇಬರ್‍ರ ನನ್ನು! ಹೀಗ್ಯಾನ್ ಕಾಸಿಕ್ಯಾಸ್ಕೊಡ್ಬಾಕಿ ಈ ಹಾಳ್ಸಂಸಾರಾನುದ್ಧಾರ ಮಾಡಿ ಏನ್ಬಂದ್ಹಾಗಾಯ್ತು ನನಗೆ? ಈ ಕಾಲದ್ಹೆಂಗಸ್ರ ಗತಿಯೆಲ್ಲಾ ಹೀಗೇ! ತಕ್ಕಯಸ್ಸಿನ್ಗಂಡ, ಮಕ್ಳು, ಬೇಕೂಂದ್ರೇ ಮಾವಳ್ಳೀಲ್ಮನೆ, ಒಪ್ಪತ್ಹೂಟ, ಕಡ್ಡೀ ಅಗಲಂಚಿನ ಸೀರೆ ದೀಪಾವಳೀಗೆ—ಕತ್ತಿಕ್ಕರೀಮಣಿ!...ಇಲ್ಲಾ ?...ಅನ್ನ - ಅಂತಸ್ತು-ಸೀರೆ-ಒಡ್ವೆ—ಈ ಹೆಂಗಸ್ರ ಚಪ್ಲ ತೀರ್ಸ್ಕೊಳ್ಳಬೇಕೂಂದ್ರೆ ಮಿಸೆನೆರ್ದವನ್ಗೆ ಮದವಣ್ಗಿತ್ತಿ ಆಗ್ಬೇಕು!! ಆದ್ರೆ ಹೆಂಗ್ಸಿಗೇನು-ಮನೆ ಮಾವಳ್ಳೀಲ್ಹಾನೇ ಆಗ್ಲಿ...ಮಲ್ಲೇಶ್ವರದಲ್ಹಾನೇ ಆಗ್ಲಿ–ಮನೆ ತುಂಬಾ ಮಕ್ಳನ್ಸಾಕ್ಕೊಂಡ್ಸಂತೋಷ್ಪಡೋ ದಲ್ವೆ ಅವಳ್ಹುಟ್ಟಿದ್ದಕ್ಕಾರ್ಥ್ಕ! ನಾನ್ಹೆಂಗ್ಸಾಗಿ ಹುಟ್ಟಿದ್ದಕ್ಕೆ ಮುದ್ದಿಟ್ಸಾಕೋಕೊಂದ್ರಗೂ ಇಲ್ಲದ್ಮೇಲೆ ಈ ಶಸೀಗೆ ಹಸಿದ್ರೆ ತಾನೇ ಏನು? (Snivelling)......ಈಗ್ನಂಪ್ರಟ್ಟಾನ್ನಾದ್ರೂ ನಮ್ಮಕ್ಕನ್ಮಗನಿಗೆ ತಂದ್ಕೊಂಡು ಮನೇಲೇ ಇಟ್ಕೊಂಡಿರೋಣಾಂದ್ರೆ ಆ ಯೋಚ್ನೇಗೂ ಕಲ್ಬೀಳೋ ಹಾಗಿದೆ–ಈ ಮನೇ ಮುದ್ಕಿ, ಕೆಂಚೂ ವಿಷಯದಲ್ಲಿ ಹಿಡಿದಿರೋ ಹಟಾನ್ನೋಡಿದ್ರೆ! ಕಿಟ್ಟೂಗ್ ಮುವತ್ತೈದ್ವಯಸ್ಸಾಗ್ತಾ ಬಂತು. ಅವನಿಗೂ ಇಷ್ಟ್ವಲ್ಲ–ಇವನ್ನ ನಿರ್ಬಂಧಪಡ್ಸಿ ಚಿಕ್ಕಯಸ್ಸಿನ್ಹುಡ್ಗೀನ್ಯಾಕ್ಬಲೀಕೊಡ್ಬೇಕೀ ಮುದಿ ಗೂಬೆಗಳ್ಹುಚ್ಚಾಟ ತೀರ್ಸೋಕೆ? ಬೇರೆ ಯೇನು ನಾಗಮ್ಮನಾಸ್ತೀ ಎಲ್ಲಾ ಈ ಮನೆಗೆಳ್ಯೋಕೇ!!

[ಪ್ರವೇಶ ಸುಬ್ಬಮ್ಮ]

ಸುಬ್ಬಮ್ಮ: ಲೇ! ಏನ್ಮಾಡ್ತಿದ್ದೀಯಾ?

ವೆಂಕಮ್ಮ: (half sneeringly)...ಕೂತ್ಕೊಂಡು ಬರೀಕೈ ಬೀಸ್ತಿದೇನೆ.

ಸುಬ್ಬಮ್ಮ: ಅಲ್ಲಾ! ಸುಮ್ನೆ ಕೇಳಿದ್ದಕ್ಕಿಷ್ಟು ಪ್ರಸಂಗವೇ?

ವೆಂಕಮ್ಮ: ಕಣ್ಬಿಟ್ನೋಡೀ ತಿಳ್ಕೋಬೇಕಾದ್ದಿಷ್ಯಾನಾ ಬಾಯ್ಬಿಟ್ ಕೇಳಿದ್ರೇ ಪ್ರಾರಂಭ್ವೇ ಆಗುತ್ತೆ ...ಪ್ರಸಂಗ!

ಸುಬ್ಬಮ್ಮ: (ಸ್ವಗತ) ಸರಿ...ಈ ಪಿಶಾಚೀ ಬಾಯ್ಕೆದ್ರು ಬದುಕೋರ್‍ಯಾರು? (ಪ್ರಕಾಶ) ಆ ವಡ್ವೆಗಳ್ವಿಷ್ಯಾನೇನ್ಮಾಡಿಟ್ಟಿಧೀಯಾ?

ವೆಂಕಮ್ಮ: (ತಿಳಿಯದಹಾಗೆ ನಟಿಸಿ) ಯಾವ್ವೊಡ್ವೆಗಳ್ವಿಷ್ಯಾ?

ಸುಬ್ಬಮ್ಮ: ಹೀಗಹಾಕಿಟ್ಟಿದೀಯಾ? ಚೆನ್ನಾಯ್ತು! ಮದುವೇಗೆ ಇನ್ನೆರ್ಡು ತಿಂಗ್ಳುಕೂಡ ಇಲ್ಲಾ! ಈಗ್ಲೇ ಕೊಟ್ರೆತಾನೆ ದುಡ್ಡೆ ಹೊತ್ಗೆ ಚಿಕ್ಕದ್ಮಾಡಿ ತರ್ಸ್ತಹುದು?

ವೆಂಕಮ್ಮ: ಚಿಕ್ಕದ್ದಾಗ್ಹೋಯ್ತು! ಯಾಕೋಕಾಣೆ! ನೀವ್ಹೇಳೋದ್ ನನಗರ್ಥವಾಗ್ಲಿಲ್ಲ!

ಸುಬ್ಬಮ್ಮ: (ಘಟ್ಟಿಯಾಗಿ) ಯಾಕ್ಚಿಕ್ಕದ್ದಾಗ್ಹೋಯ್ತೇ? ನಂಕೆಂಚೂ ಕುತ್ತಿಗ್ಗೆ ಕೈಗೆ ಸರಿ ಹೋಗೋದಕ್ಕೆ...ಆ ಹೊತ್ತೇ ಹೇಳ್ಲಿಲ್ವೇ ನಾನು—ನಿನ್ಗಂಡ್ನೆದುರ್ಗೇ? ಅಕ್ಕಾಲೇಜ್ ಕಸರ್ತಾಂತಾ?

ವೆಂಕಮ್ಮ: ನಿಸ್ಕವೀಗ್ಲೀಳ್ತಿಲ್ವೇನೋ ಆ ಹೊತ್ತೊಂದ್ವೇಳೆ ನಾನ್ಕೇಳ್ಲೇ ಇಲ್ವೋಕಾಣೆ...ಆದ್ರೆ ನನಗೀಗ್ಲೂ ಅರ್ಥವಾಗ್ಲಿಲ್ಲ—ನಿಂಕೆಂಚೂಗೂ ನಂ ಪುಟ್ಟಾನ್ತಾಯಿ ಒಡ್ವೆಗಳಿಗೂ ಇರೋ ಸಂಬಂಧ! ಕಿಟ್ಟೂಗೆ ಕೆಂಚೂನ್ತಂದ್ಕೊಂಡು ಮದ್ವೇ ಮಾಡ್ಕೊಳ್ಳೋದ್ನಿಮ್ಗಿಷ್ಟ ಆದ್ರೆ ಅವಳ್ಗಾಕ್ಕೊಂಡ್ ನಗಾ ಡೋಕೆ ನಂ ಪುಟ್ಟಾನ್ತಾಯಿ ಒಡವೆಗಳಲ್ಲೊಂದು...ತಿರುಪ್ನೇ ಕೂಡಾ ಪೆಟ್ಗೇಯಿಂದ್ಹೊರಕ್ತೆಗ್ದೋದಿಲ್ಲ ...ಈ ಮಾತ್ರ ಖಂಡಿತ !

ಸುಬ್ಬಮ್ಮ: (hysterically) ಖಂಡಿತ! ಖಂಡಿತ! ಇದ್ಯಾರು ಯಾರ್ಗ್ಹೇಳ್ತಿದ್ದ ಮಾತು! ನೀ...

ವೆಂಕಮ್ಮ: (ಅಡ್ಡಮಾತನಾಡಿ) ಯಾರ್ಯಾರ್ಗ್ಹೇಳ್ತಿದ್ದ ಮಾತೂಂತ ತಿಳಿದೇ ನನ್ಗೇಳ್ತೀರಾ! ಇಲ್ಲ ನನ್ನ ಈಹೊತ್ಕಣ್ಬಿಟ್ಟ ಹಸುಮಗೂಂತ ಹೆದ್ರಿಸಿ ಹೇಳ್ತಿದ್ದೀರಾ ನನಗೆ! ಪುಟ್ಟಾ ತಾಯಿಯಿಲ್ದ ಮಗುವಾದಾಕ್ಷಣಕ್ಕೆ ... ಹೇಳೋರ್ ಕೇಳೋರಿಲ್ಲಾಂತಂದ್ಕೊಂಡು ...ಅವಳ್ತಾಯಿ ವಡ್ವೆಗಳ್ನ ಯೋಗ್ಯತೆ ಇಲ್ದ ಬೀದೀಲ್ಹೋಗೋ ಚಿಳ್ಳೆ ಪಿಳ್ಳೆಗಳ್ಗೆಲ್ಲಾ ಬಾಚ್ಕೊಡೋದೆ?

ಸುಬ್ಬಮ್ಮ: (ಚೀತ್ಕರಿಸುತ್ತಾ) ಏನಂದೆ? ಯೋಗ್ತೆ ಇಲ್ದ ಚಿಳ್ಳೆಪಿಳ್ಳೆನೇನೇ ನಂಕೆಂಚೂ! ಅವಳ್ಯೋಗ್ತೆ, ಅಂತಸ್ತ್ನಲ್ಲಿ ಅರ್ಥವಾದ್ರೂ ನಿನ್ಗಿದ್ದಿದ್ರೆ...ದೊಡ್ಡೋರ್ಯೋಗ್ಯತೇನ ಇಷ್ಟು ಸಿರಾ ಕರಿಸ್ತಿದ್ದಿಯಾ ನೀನು?

ವೆಂಕಮ್ಮ: (Superciliously) ಹಾಗಿದ್ದ್ಯೋಗ್ತೆ ಅಂತಸ್ತು ನಿಮ್ಗಿಂತೂಗೆ ಇದ್ದಿದ್ದಿದ್ರೆ ಅವಮಾನೇಯಿಂದ ದೊಡ್ ದೊಡ್ ನಗಗಳ್ನಾಕ್ಕೊಂಡ್ ಬಂದು...ನಿಗಿನಿಗಿನೀಂತ್ಕೊಳ್ಳಿ!... ಯಾರು ಬೇಡಾಂದ್ರು?! ನಂಪುಟ್ಟ! ಪಾಪ! ತಾಯೀಇಲ್ಲದ್ರಗೂ. ಅವಳ ತಾಯಿ ಜ್ಞಾಪಕಕ್ಕಾದ್ರೂ ಇಟ್ಕೊಂಡಿರೋ ಒಂದೆರಡು ಒಡ್ವೇನ ಸುಲ್ಕೊಂಡದ್ರಿಂದ ಏನ್ಬಂದ್ಹಾಗಾಯ್ತು ನಿಂ ಕೆಂಚೂಗೆ?

ಸುಬ್ಬಮ್ಮ: ಈ ಮಹಾ ಪೊಡ್ವೆಯಿಂದೇನ್ಬಂದ್ಹಾಗೂ ಆಗೋದಿಲ್ಲಾ! ಆದ್ರೆ ಮನೆ ಒಡ್ವೆಗ್ಳು ಮನೇಲೇ ಇಪ್ಪಾಳೋ ಸೊಸೇಗ್ ಕೊಡೋ ಸಂಪ್ರದಾಯ್ವೇ ಹೊರ್ತು...ಮನೇಬಿಟ್ ಹಾವನ್ಮನೇ ಗ್ಹೋಗ್ಬಿಡೋ ಮಗಳಿಗಲ್ಲ ಕೊಡೋ ಪದ್ಧತಿ!

ವೆಂಕಮ್ಮ: (With a sarcastic smile) ನೀವ್ಹೇಳೋ ನ್ಯಾಯಾ—ಕುಟುಂಬ್ದಲ್ಲಿ—ವಂಶ ಪರಂಪರೆಯಾಗ್ಬಂದಿರೋ ಒಡ್ವೆಗಳ್ಮಾತು! ಈಗ್ನಿವ್ಹಿಚ್ಚೀಗೆ ತಗಲ್ಕೊಂಡಿರೋ—ವಡ್ವೆಗ್ಳು—ಪುಟ್ಟ ನ್ತಾಯಿಗೆ—ಅವಳ್ತಂದೆ. ಗಂಡ. ಮಾವ ಇವ್ರೆಲ್ರೂ ಅವಳ್ಮೇಲಿನಾಶೇಗ್ಮಾಡ್ಸಿಕೊಟ್ಟು ಅವ್ರ ತಿರುವಾಗ್ಲೀ. ಹರಳಾಗ್ಲೀ—ಏತ್ತಾಳೆಯಾಗ್ಲೀ. ಭಂಗಾರ್ವಾಗ್ಲೀ. ಟೊಳ್ಳಾಗ್ಲೀ, ಗಟ್ಟಿ ಆಗ್ಲೀ—ಹ್ಯಾಗಿದ್ರೂ ಸರಿ. ಸಂತೋಷ್ದಿಂದ ತಾಯಿ ಜ್ಞಾಪಕಕ್ಕಾಕ್ಕೊಳ್ಳೋ ಮಗಳ್ದೇ ಹೊರ್ತು— ದುರ್ಬಿಗೇ ಹಾಕ್ಕೊಂಡಿ— ಒರೆಗಲ್ನಲ್ಲಿತಿಕ್ಕ್ನೋಡಿ...ಅಂದಾಜ್ಮಾಕ್ನೋಡಿ ತೂಟ್ಕೊಂಡ್ಹಾಳಿಯೋ ಸೊಸೆ ಸೌತಿಯುರ್ದಲ್ಲ! ಹಯ್ಯೊ! ಹೀಗೆಲ್ಲಾ ನೀವೂ ನಾನೂ ಕಾದಾಡಿ ಪ್ರಯೋಜ್ನವೇನೂ ಇಲ್ಲಾಂದ್ರೆ...ಮನೇಲಿ ಯಜಮಾನ್ರಿದ್ರೋ ವಾಗ! ಅವರಿಷ್ಟ ಹ್ಯಾಗೋ ಹಾಗಾಗುತ್ತೆ.

ಸುಬ್ಬಮ್ಮ: ನಿನ್ಗಂಡನ್ಗೆ ಜವಾಬ್ಕೆ ಬೇರೆ ಬಾಕೀ ಇಟ್ಟಿದ್ದೀಯಾ ನೀನು? ನೀನೀ ಮನೇ ಹೊಸಲ್ದಾಟಿದ ತಕ್ಷಣ್ವೇ...ಏನ್ಮಂಕ್ಬೂದಿ ತೂದ್ಬೋ ಕಾಣೆ...ನೀನ್ಹೇಳ್ದಾಕ್ತೆ ಬಲಗ್ಡೇಳ್ದಿ ಬೆಪ್ಪಾಗೊ ಹೋಗ್ತಾನೆ...ನಿನ್ನೋಚ್ನೆಗೂ. ನಿನ್ನಿತೂರಿಗೂ ಏಲ್ಲಾ ನನಗೊತ್ತಿಲ್ಲಾಂತಿಳ್ಕೊಂಡಿದ್ದೀಯೇನೊ?... ನಾ ಬೇಡಾ ಬೇಡಾಂತ್ಬಡುಕೊಂಡ್ರೂನೂ ಕಿಟ್ಟೂಗೆ ನಿಮ್ಮ ಅಣ್ಣನ್ಮಗಳ್ನ ತಂದ್ಕೊಂಡದ್ ನಿನ್ನಿತ್ರಿ ಮಾಂತ್ ನನಗೊತ್ತಿಲ್ವೇನು? ಇಷ್ಟಕ್ಕೂ ಆ ಮದ್ವೇ ಈ ಮನೇಲ್ಯಾರ್ಗೂ ಇಷ್ಟ್ವೇ ಇಲ್ಲ...

ವೆಂಕಮ್ಮ: (ಅಡ್ಡಮಾತನಾಡಿ) ಅವಳ್ನ ತಂದ್ಕೊಳ್ಳೋ ಇಷ್ಟವಿಲ್ವೇನೋ!...ಅವಳ್ನೊತ್ತೇಲಿ... ...ಈ ಮನೇ ಭೋಗ್ಯಾಬಿಡಿಸ್ಕೊಳ್ಳೋಕ್ ನಂಮನೊಟ್ಹಣ ಹುಳ್ಳಗಿರ್ಲಿಲ್ಲಪ್ಲಾ!! ಈ ಮದ್ವೇ ತಾನೇ ಏನು?...ನಿಮಗ್ಕೆಂಚೂ ಮೇಲಿರೋ ಮಮ್ತೆ ವಿಶ್ವಾಸಗ್ಳೂ ನನಗೊತ್ತಿಲ್ವೇ? ಈಗ್ನಿಮ್ಮಗಸ್ಗಿರೋ ಸಾಲಾಸ್ತೀರ್ಸೋಕೆ ಬೇಕಾದ ಹಣಾನ, ನಾಗಮ್ಮ ಕೆಂಚೂ ಹೆಗಲ್ಮೇಲ್ಹೇರ್ಸಿ ಹೊರ್ಸಿ ಕಳ್ಸೋದು... ನಂಕೆಂಚು!...ನಂಕೆಂಚೂಂತ!...ಬಿಡ್ಡಾಸಿಲ್ದೆ ಬರೀಕೈಬೀಸ್ಕೊಂಡ್ಬರ್ಲೀ ಮನೇಗೇ...ಆಗ್ನೋಡ್ತೇನೆ... (ಅಣಕಿಸುತ್ತಾ) ನಂ ಕೆಂಚೂ ನಂ ಕೆಂಚೂ ಅಂತ ಕುಣ್ಯೋದ್ನ!

ವೆಂಕಮ್ಮ: (in a loud whisper) ಸರಿ! ಈ ಚಿತ್ರಾಂಗೀ ಜೊತೇಲ್ಜರ್ಚೆ ಮಾಡೋಕ್ ಚರ್ಮದ ಬಾಯಿದ್ರೂ ಸಾಲ್ದು!

ವೆಂಕಮ್ಮ: ಚಿತ್ರಾಂಗಿ!...ಸರಿ! ನಾನೊಬ್ಳುಹುಚ್ಚು...ಹೆದ್ರಕೊಂಡ್ ಬಿದ್ದಿದೇನಲ್ಲ, ಈ ಹಲ್ಬಿದ್ದ ಹದ್ದುಗಳ್ಗೆ! ನನ್ನ...

ಸುಬ್ಬಮ್ಮ: ಹಲ್ಬಿದ್ದದ್ದೂ!...ಯಾರ್ನೇ ಹಲ್ಬಿದ್ದದ್ದೂಂತೀಯೂ? ಇನ್ನೀ ಮನೇಲ್ನಾನ್ಮರ್ಯಾದೇ ಕಳ್ಕೊಳ್ಳೋಕಿಂತ್ಲು ಭಾವೀಲ್ಬಿದ್ದುಸಾಯೋದ್ಮೇಲು—**ರಾಮೂ! ರಾಮೂ!**

ರಾಮಣ್ಣ: (ಒಳಗಿನಿಂದ) **ಏನದು....ಬಂದೇ!**

ವೆಂಕಮ್ಮ: ಬರ್ಲಿ! ಬರ್ಲಿ! ಬಂದೇನ್ಮಾಡತ್ತೋ ನೋಡೋಣ!

ರಾಮಣ್ಣ: (Precipitately) ಓಹೋ! ಸರಿ! ತಿರಿಗ್ಶುರುಮಾಡ್ಬಿಟ್ರಾ ಜಗ್ಳಾನ...ಅತ್ತೇನೂ ಸೊಸೇನೂ! ಇದೇನ್ಮನೇನೋ...ಇಲ್ಲ...ಮಾರ್ಕಟ್ಟೋ ಕಾಣೆ...! ಈ ನಿಮ್ಜಗ್ಳತೀರ್ಸೊಕಾದ್ರೂ ಇನ್ನೊಂದವ್ತಾರಾನೆತ್ಬಾರ್ದೆ ಜಗದೀಶ!...**ಏನ್ಜಗಳ ಇದು ?**

ಸುಬ್ಬಮ್ಮ: (hysterically) ಹಲ್ಬಿದ್ದದ್ದೂಂತ ಯಾರ್ನವಳಂದದ್ಕೇಳು...ಕೇಳವಳ್ನ...

ವೆಂಕಮ್ಮ: ಪಿಶಾಚಿ...ಚಿತ್ರಾಂಗೀಂತಂದ್ದಾಗಿತ್ತು ಯಾರೋ...ಅವರ್ನ ನಾನಂದದ್ದೂ... (ಬರೆದು) ಹಲ್ಲು...ಬಿದ್ದ...ಹದ್ದೂಂತ...

ಸುಬ್ಬಮ್ಮ: ನೋಡ್ದ್ಯಾ ತಿರ್ಗೂನೂ ನಿನ್ನೆದ್ರಿಗೇ ಬೈತಾಳೆ...ನಾನಿನ್ನೀಮನೇಲಿರೋದಿಲ್ಲ... ಎಲ್ಲಾದ್ರೂ ದೇಶಾಂತ್ರಕ್ಹೊರಟ್ಹೋಗಿ ಪ್ರಾಣಗಳ್ನ ಕಳ್ಕೋತೇನೆ...

ರಾಮಣ್ಣ: (Loudly) **ಲೇ....ದೊಡ್ಡೋರ್ನ .. ಹಾಗನ್ಬಹುದೇನೆ ?** ... ಏನೇ ... ದೊಡ್ಡೋರ್ನ...ಹಾಗನ್ಬಹುದೇನೆ......(Then meekly gesticulating) ಲೇ ಹಾಗನ್ಬಹುದೇನೆ ...ದೊಡ್ಡೋರ್ನ?

ವೆಂಕಮ್ಮ: ಸರಿ! ಸೇರ್ಬಿಟ್ರಾ ನೀವೂನೂ! ಈ ಮನೇಲಿನ್ನೇನ್ಕೆಲ್ಸ ನಂಗೆ...ಬದ್ಕಿ! ಬದ್ಕಿ! ನೆಮ್ಮದಿಯಾಗಿ ಬದ್ಕಿ! ತಾಯಿನೂ... ಮಗ್ನೂ...ಬೋರಾ! ನನ್ಟ್ರಂಕ್ನೂ ಹಾಸ್ಗೇನೂ ಹೊರಗ್ಜಗ್ಲೀಮೇಲಿಟ್ಟು ಒಂದ್ಜಟ್ಕಾನ ಹೊಡ್ಕೊಂಬಾರೋ!

[ಬೋರನು ಬಂದು ಹೋಗುವನು]

ರಾಮಣ್ಣ: ಹಯ್ಯಯ್ಯೋ...ನೀನೆಲ್ಹೋಗ್ತೀಯೋ ನನ್ಬಿಟ್ಟಿಟ್ಟೂ...?

ವೆಂಕಮ್ಮ: ಹೀರೆಲ್ಲಿಗೆ?...ನಂಮನೇಗೆ!...ಏನ್ಗತೀಕೆಟ್ಟೆಮ್ಮನೇಗ್ಬಂದೇನ್ಕೊಳ್ಕೊಂಡ್ರೇನು...?

ರಾಮಣ್ಣ: ಹಯ್ಯಯ್ಯೋ ನೀನ್ಯಾಕೇ ಹೋಗ್ಬೇಕೀಗ?...

ವೆಂಕಮ್ಮ: ಹೋಗ್ದೇ ಜೀರೇನಿಥೆ ಈ ಮನೇಲ್ನನ್ಗೆ?...ನಿಮ್ಮನ್ನ ಮದ್ವೇಯಾಗ್ಬಂದಾಕ್ಷಣ... ಇವರ್ಕಾಲಿಗೆ ಮದಿಗೂಟ ಕ್ಕೈಗಳ್ಕೇಳ್ಕೊಂಡ್ಬಿದ್ದಿರ್ಬೇಕೂಂತ್ಬರ್ದಿದೆಯೋ ನನ್ತಲೇಲಿ? ಅದ್ರಲ್ಲೂ ಲಾಯ್ರಂತೆ ಇನು! ಒಳ್ಳೇ ಲಾಯ್ರು! ಒಂದ್ಮಾತು...ಒಂದ್ಜರ್ಚೆ...ಒಂದ್ಸಂವಾದ...ಒಂದ್ವಾಗ್ವಾದಾ

ಜರಗ್ಹೊಂದ್ರೆ, ಏನು? ಎತ್ತ? ಯಾರೇನ್ಹೇಳಿದ್ರು? ಮಾತೆತ್ತಡೆ? ನ್ಯಾಯ್‌ವೆತ್ತದೇಂತ ವಿಚಾರಿಸ್ದೇ ಕೋಣೇಶ್ವರನ್ಹಾಗೆ ಕೊನೇಗ್ಹುಗ್ಗಿ, ಈ ಕಣ್ಣಂಗಿದ್ದಹ್ರೋತದ ಕಿರ್ಲಾಟಕ್ ಕಿವಿಕೊಟ್ಕೊಂಡ್ಬಿಟ್ಟ ಮೇಲ್ಬಿಟ್ಟೋ ಮುಂಕ್ಮುಚ್ಚೇ ಗಂಡ್ಸು, ಲಾಯರ್ರು ಕೆಲ್ಸ ಬೇರೆ ಮಾಡತ್ತಾಂತೆ?... ಲಾಯರ್ರು ಕೆಲ್ಸ!

ರಾಮಣ್ಣ: ಹಯ್ಯೋ! ಯೆಲ್ಲಾ ವಿಚಾರಿಸ್ತೇನೇ! ನಿಸ್ಕೋಪಾಸ್ ಸ್ವಲ್ಪ ಅವಗಾಕೊಳ್ಳೇ... ವಿಚಾರ್ಸಿ ಎಲ್ಲಾ ಫೈಸಲ್ ಮಾಡ್ತೇನೆ! (aside) ಒಳ್ಳೇ ಮರಣ ಸಂಕ್ಟ ಇದು! (to Bora who is bringing the trunk and bed) **ಲೋ!** ತಿರಿಗೊಳಕ್ಕೆತ್ಕೊಂಡ್ಹೋಗೋ **ಮುಂಕ!**

ವೆಂಕಮ್ಮ: (to Bora) ಹೊರಗಿಡೋ ಹುಚ್ಚು!

ಬೋರ: (aside) ಒಳ್ಳೇ ಕಾಟಕ್ಕಗಲ್ಕೊಂಡ್ನಲ್ಲಾ! ಒಳ್ಗಿಟ್ರೂ ಜಗ್ಳ! ಒರಗಿಟ್ರೂ ಜಗ್ಳ! ಸರಿ! ನರಸಿಂದ್ರೇವ್ರಿಟ್ಹಾಂಗೆ ಒಸಲ್ಮೇಲಿಟ್‌ಬಿಡ್ತೀನೀ ಕಾಣಪ್ಪ; (Placing the trunk and the bed on the door step) ನಮ್ಮನೇಲಿ ನಮ್ಮವ್ವನ ಬೈಸ್ಗೀದ್ರೊ ನನ್ನೆಂಡ್ರು...ಅಪ್ಪಳ್ಸಿ ಬಿಡ್ತಿದ್ದೆ ನನ್ನೆಂಡ್ರುನಾ...ಈ ಮನೆಗ್ಳಾಗ್ನ್ಯಾಯ ಅಂಗಲ್ಲ. ಕಾಪೀ ಕುಡ್ಯೋದು...ಕಾದಾಡೋದು... ಕಾದಾಡೋದು...ಕಾಪೀ ಕುಡ್ಯೋದು.

ರಾಮಣ್ಣ: ಲೇ...ವಿಚಾರ್ಸಿ ನಿನ್ನಿಷ್ಟದ್ಪ್ರಕಾರ ಫೈಸಲ್ಮಾಡ್ತೇನೇಂತ್ಹೇಳ್ತೊಟ್ಮೇಲಿನ್ನೂ ಕೋಪ್ವೇನೆ ನಿನ್ಗೆ?

ವೆಂಕಮ್ಮ: (Coyly) ಹಾಗಾದರೆ ಹೋಗಿ...ವಿಚಾರ್ಸಿ...ಏನು ಫೈಸಲ್ಮಾಡ್ತೀರೋ... ನೋಡ್ಬಿಟ್ಹೋಗ್ತೇನದ್ನೂನು!

ರಾಮಣ್ಣ: (approaching his mother) ಅಮ್ಮ! ಯಾವ ಮಾತಿನ್ಮೇಲಮ್ಮ ಹುಟ್ಟಿದ್ದೀಜಗ್ಳ? ಜಗಳ್ವೇನು...ವಾಗ್ವಾದಾ...ಅಲ್ಲಾ...ಸಂಭಾಷ್ಣೆ?

ಸುಬ್ಬಮ್ಮ: ನಂಗೂ ಅವಳಿಗೂ ಯಾವಾಗ್ಲೂ ಜಗಳ ಯಾವ್ಮಾತಿನ್ಮೇಲೆ ಶುರುವಾಗೋದು? ಈ ಮನೇ ಹಾಳಾಗಿ ಅವಳಿಂದ ಕಾಡ್ಪಾಲಾಗೋ ಮಾತಿನ್ಮೇಲೆ...ಈವತ್ತಿನ್ಜಗಳ ಈಗ್ಲೂ ಮಂಡ್ಗಿ ಒಡ್ವೇಗಳ್ಮೇಲ್ಬಂದದ್ದು...ಚಿಕ್ಕದ್ಮಾಡಿ ಕೆಂಚೂ ಬಂದಾಗ ಅವಳ್ಗೂ ಕುತ್ತಿಗ್ಗೂ ಸರಿಮಾಡಿಟ್ಟರೋ ದೂಂತ ಆವತ್ತೇ ಒಪ್ಕೊಂಡ್ಯಲ್ವೇ ನೀನೂ?

ರಾಮಣ್ಣ: ಹೌದೂ?

ಸುಬ್ಬಮ್ಮ: ಈಗ್ಕೇಳವಳ್ನ...ಆ ಒಡವೆಗಳ್ನ ಕೆಂಚೂಕ್ಕೊಡೋದಾದ್ರೆ ಒಂದ್ತಿರುಪ್ಪೇ ಕೂಡಾ ಹೊರಕ್ಕೊಡೋದಿಲ್ವಂತೆ... ಪುಟ್ಟಾ...

ರಾಮಣ್ಣ: ನಂಪುಟ್ಟಾ...?

ಸುಬ್ಬಮ್ಮ: ನಂಪ್ರುಟ್ಟಾ ಹೌದು ಆದ್ರೆ ಮರೀಬೇಡ...ನಿನ್ನೆಂಡ್ತಿ ಅಣ್ಣನ್ಹೊಮ್ಮಗಳೂ ಹೌದೂ. ಪುಟ್ಟಾಗೆ ಅವಳ್ಹಾಯಿ ಒಡ್ವೆ ಅವಳಿಗೇ ಇಟ್ಟಿರ್ಬೇಕಂತೇ...ಇದರರ್ಥ ನಿನಗ್ಗೊತ್ತಿಲ್ವಲ್ಲಾ...ಹೇಳ್ತೇನ್ಕೇಳು ಇವಳಿಗೆ ನಾವು ನಂಕೆಂಚೂನ್ತಂದ್ಕೊಳ್ಳೋದ್ರಲ್ಲಿ ಮೊಟ್ಮೊದ್ಲೇ ಇಷ್ಟ್ವಿಲ್ಲಾ...ಈ ಒಡ್ವೆಗಳ್ನೆಲ್ಲಾ ಹೀಗೆ ಇಟ್ಕೊಂಡಿದ್ದು...ನಂಪ್ರುಟ್ಟಾನ...ಅವಳಕ್ಕನ್ಮಗನಿಗೆ ತಂದ್ಕೊಂಡು...ಆ ಒಡ್ವೆಗಳ್ನೂ...ನಮ್ಮಮನೇನೂ ನುಂಕೊಂಡ್ಹೋಗ್ಬೇಕೊಂತ್ಹಂದಿರೋ ಮಾರಿ. ಇವಳು! ನಾನೋ...ಈವತ್ತಿದ್ದು ನಾಳೆ ನಾಯೋ ಮುದ್ಕಿ...ಭದ್ರ! ಭದ್ರ! ಭದ್ರ! ಅವಳೋ ನಂಕುಟುಂಬಕ್ಕಿಚ್ಚಿಟ್ಹೋಗೋಕ್ಬಂದಿರೋ ಕುಲಕಳಂಕಿ!... ಜೋಕೆ! ಜೋಕೆ!! ಜೋಕೆ!!! ನಿನ್ಗಂಡಸ್ತನಾ ಏನಾದ್ರೂ ಅವಳು ಅಲ್ಪ ಸ್ವಲ್ಪ ಬಾಕೀಗೀಕ ಇಟ್ಟಿರೋ ಪಕ್ಷದಲ್ಲಿ...ಈ ಕ್ಷಣವೇ ಆ ಒಡ್ವೆಗಳ್ನ ಹೊರಕ್ತೆಗ್ದು...ಚಿಕ್ಕದ್ಮಾಡ್ಸಿ...ಕೆಂಚೂ ಕೈಗ್ಹಾಕ್ಬಿಡು... ಆಮೇಲೇಳೂಟಕ್ಕೆ!

ರಾಮಣ್ಣ: My God!......This is serious...!...

ವೆಂಕಮ್ಮ: ಸರಿ...ಇವರ ವ್ಯೆಗಾಡೂ, ಮುಟಿಸಪ್ಪಗ್ಮಾಡ್ಕೊಂಡು serious ಅಂಬೋ ಸೂಚ್ನೇನೂ ನನಗೊತ್ತಿಲ್ವೆ? ಸೇರ್ಬಿಟ್ರುತ್ಕಡೆ! **ಅಬ್ಬ!**....ಹಣ, ಒಡ್ವೆಗಳಿರ್ಲಿ! **ಒಂದ್ವ್ಯಾಸು**... **ಒಂದ್ಬಿಡ್ಯಾಕ**ಸಿನ್ಲಾಭಾಯಿತ್ಕಡೇನೋ ಅತ್ಕಡೇ ಸೇರ್ಬಿಡೋದು, ಮಾನಮರ್ಯಾದೆ **ಮತಾ** ಕೂಡಾ ಬಿಟ್ಬಿಟ್ಟು! ಈಗೀ ಮುದ್ಕೀ ಮಾತ್ಕೇಳ್ಕೊಂಡು ಒಡ್ವೆಗಳ್ನ ಹೊರಗೆ ತೆಗೆದಿಡಊಂದ್ರೆ ಏನ್ಮಾಡೋದೂ? ...ಸರಿ!...ನಾನೂಅದೇ ತಂತೀನ್ಸ್ಮೀಟಿದ್ರೆ ತಾನೇ ತಿರಿಗ್ಬರ್ತಾರೆ ಹದಕ್ಕೆ...!...(looking coyly) ಇಲ್ಬನ್ನೀಂದ್ರೆ!

(Ramanna approaches Venkamma)

ವೆಂಕಮ್ಮ: (in an irritatingly low tone) **ಏನು !** ಯಾರನ್ ಬೆದರಿಸ್ತೀರಿ? ನ್ನಾನ್ನುಬ್ಟೇಂತ ತಿಳ್ಕೊಂಡ್ರಾ?...ಇಲ್ಲ ನೀವ್ಬುಟ್ಟೇ...ಈಗ ಈಮನೇಗೆ ನೀವೂ ನಾನೂ ಶಾಶ್ವತವ್ರೋ ಇಲ್ಲಾ "ಈ ಹೊತ್ತಿದ್ದು...ನಾಳೇ ಸಾಯೋ ಮುದ್ಕೀ ನಾನೂ"?ಂತ **ತಾನೇ ಒಪ್ಕೊಳ್ಳೋ ಆ ಮುದ್ಕೀ** ಶಾಶ್ವತ್ವೋ! ಈಗೇನ್ನಿಮ್ಮ್ನಾಗತ್ತೆ ಗತಿಗೆಟ್ಟಿರೋದು,...ಅವರ್ಕೆಂಚೂ ಒಡ್ವೆಯೋಚ್ನೆ ನಾವ್ಯಾಡ್ಬೇಕಾದ್ದಕ್ಕೆ? ಇಲ್ಲಿರೋ ಕಾಲ್ಕತ್ರಿಬಾವ್ಲಿ ಅರ್ಧ ಅಂದಿಲು ಮುಕ್ಕಾಲ್ ಮೂಗ್ತಿ ನಾವೇ ಹಾಕ್ಕೋತೇವೇಂದ್ರೆ ನಿಮ್ಯೋಗ್ಯತೆ ಪ್ರಕಾರ ಹಾಕೊಳ್ಳಿ ಒಡ್ವೆಗಳ್ನಾಂತ ಕೋಪಿಸಿಕೊಂಡು ತೆಪ್ಪನೆ ಇದ್ಬಿಡ್ತಾಳೆ! ಈ ಮನೆ ಸಾಲಾತೀರ್ಸೋ ಯೋಚ್ನೇಲಿರೋ ನಮ್ಕೈಲಿ ಸದ್ಯ ಒಡ್ವೆಮಾಡ್ಸೋದೆಲ್ಲಾ ಗುತ್ತೆ? ನಮ್ ಮನೇಲಿರೋ ವಡ್ವೆ ಅಷ್ಟ್ರಲ್ಲೇ ಇಧೆ...ಇರೋ ಅಲ್ಪ ಸ್ವಲ್ಪ, ಪುಟ್ಬಾನ್ತಾಯಿಗಾದು ಪುಟ್ಬಾಗೇಂತ ಇಟ್ಟಿದೇವೇ ಅಂದ್ರೆ...ಲಕ್ಷಾಧಿಕಾರಿ **ಅವ್ರು**...ಅವಳ **ಮದ್ಮ**ಗೂ ಕೆಂಚೂ;...ಅವರ್ಮ್ನೇ **ಕೊನೇ** ಮದ್ವೆ ಇದು; ಕೆಂಚೂ ಮುಖ ಮೈ ಕೈ ತುಂಬಾ ಒಡ್ವೆಗಳ್ನ ಆ ಯೋಗ್ಯತೆಪ್ರಕಾರ ಹೊರಿಸ್ಕಳಿಸ್ತಾಳೆ. ನಮ್ಮ್ನೇಗ್ ಆ ಒಡ್ವೆಗ್ಳೂ ಆಯ್ತು! **ಈಗಿರೋ ಒಡ್ವೆಗ್ಳೂ ಆಯ್ತು !** ಹೀಗ್ನಮ್ಮ್ನೇ **ಗೊಂದಕ್ಕೆ ಎರಡ್ಸೆಟ್ಸು** ಒಡ್ವೆ ಇದ್ರೆ **ಒಗರೇನು ? ಮನೇಗೆ ಮುಂದಕ್ಕೆ ಯಾವದ್ನಾ ಭಾಂಬೋ ಮುಂದ್ಯೋಚ್ನೆ ಇಲ್ದೆ ಮಾತಾಡೋ ಮುದಿಗೂಬೇ ಮಾತುಗಳಿಗೊಪ್ಕೊಂಡು ನಿಂತಿಧೀರಲ್ಲಾ ನಾನೂ ಒಬ್ಗಂಡ್ನೂಂತ!...ಅದಲ್ವೇ ನನಗಾಶ್ಚರ್ಯ!!**

ರಾಮಣ್ಣ: ಮನೇಗೆ two sets of jewelsoo! (face lights up) ಲೇ! ನಿನ್ Logicಊ Cogent ಆಗಿಧೆಯೇ!

ವೆಂಕಮ್ಮ: (Smiling aside) ಜುಟ್ಸಿಕ್ಕಿರೋವಾಗ್ಲೆ ಜಗ್ಗಿಸಿಬಿಡಬೇಕು! (ಪ್ರಕಾಶ) ಕೋಜೆಂಟೋ ಗೀಜೆಂಟೋ, ಅದಿಲ್ಬೇಳೇನ್ ಪ್ರಯೋಜ್ನ! ಅಲ್ಹೋಗ್ಬಿದರ್ದೆ ಹೇಳಿ...ಮಾತೂ ಚರ್ಚೆ ಇಷ್ಟಕ್ಸಾಕೂ...ಇನ್ನಾಸ್ತೀ ಮಾತಾಡಿದ್ರೆ ಆಕೆ ಮ್ಯೆಗೆ ಆಗೋದಿಲ್ಲಾಂತ ಹೇಳಿ!

ರಾಮಣ್ಣ: ಅವ್ಕೋಪ್ಪಲ್ಲಿಧಾಳೆಯೇ!! ಅದೆಲ್ಲಾ diplomatic ಆಗಿ ನಿಲ್ಲಿಸ್ತೇನೆ!...ಲೇ !

ವೆಂಕಮ್ಮ: ಈಗೇನ್ಬಂತು?!

ರಾಮಣ್ಣ: ಈಗ್ಲಾದ್ರೂ ನಿನ್ನ್ರಂಕೂ ಹಾಸ್ಗೇ ತಿರಿಗೊಳಕ್ಕೋಗ್‌ಬಹುದೇನೆ?

ವೆಂಕಮ್ಮ: (looking fascinatingly at him) ಹೂಂ!

ರಾಮಣ್ಣ: (to Bora) **ಒಳಗಿಡೋ ತೆಗೆದೂ!**

(Bora does not move)

ರಾಮಣ್ಣ: (appealingly to Venkamma) ಲೇ...!

ವೆಂಕಮ್ಮ: (to Bora) ತಗೊಂಡ್ಹೋಗೋ ತಿರಿಗೊಳ್ಗೆ!

ಬೋರ: (taking things back) ಈ ಮನೇ ಜೀಪ್ಕೋರ್ಟೇಕೋವಗೂರ್ ಕಮ್ಲೋ ಕಾಗಾಕಿಲ್ಲ ಒಂದ್ದೆಜ್ಜೇನೂ (Exit)

ರಾಮಣ್ಣ: (aside) ಈಗಮ್ಮನ approach ಮಾಡೋದ್ಹ್ಯಾಗೆ? ಈಗವಳ disposition ನೋ chronically choleric...(ಕ್ಷಣಮಾತ್ರ ಯೋಚಿಸುವನು)...ಸರಿ...ಗೊತ್ತು! ಇದೆ: Last resourceಉ...religion...philosophy... good old platitudesಊ... ....(approaching Subbamma gradually) ಅಮ್ಮಾ! ....ಈ ಪ್ರಪಂಚದಲ್ಲಿರೋ ಸಮಸ್ತ ಚರಾಚರ ವಸ್ತುಗ್ಳೂ ನಶ್ವರವಾಗಿರೋವಾಗ...ಈ ಕೇವಲ ರಕ್ತಮಾಂಸ ಮಯವಾದ ಈ ಮನುಷ್ಯದೇಹಾಂಬೋ ಈ ಪ್ರತ್ಪಿಂಡದಲ್ಲಿ ಸ್ಥಿರಾಭಿಮಾನಾನಿಟ್ಕೊಂಡು...ಹೀಗೆ... ಮನೆ...ಬಾಕ್ಲು...ಒಡ್ವೆ...ಯಜಮಾನಿಕೆ...ಬಿಡ್ಗಾಸೂಂತ...ವಯಸ್ಕರೂ ಜ್ಞಾನಿಗಳೂ ಆದ ನಾವ್ರ ಮಕ್ಳ್ಳುಗೆ ಕಾದಾಡೋದು ಉಚಿತ್ವೇನಮ್ಮಾ...?

ಸುಬ್ಬಮ್ಮ: (Opens her mouth wide; dumb-struck for a while) ಇದೇನ್ಬಂತೀಗ!

ರಾಮಣ್ಣ: ಏನೋ ಆ ಸರ್ವಲೋಕೈಕನಾಥ ಕೊಟ್ಟ ಅಲ್ಪ ಸ್ವಲ್ಪ ವಯಸ್ನ ಭಗವಧ್ಯಾನ್ದಲ್ಲಿ ಕಳೆದು ಕಾಲಕ್ರಮೇಣ ಕಣ್ಮುಚ್ಚಿ...ಆ ಜಗದೀಶನ ಪಾದಾರವಿಂದಗಳ್ನ ಹೊಂದಿ ಸಾಯುಜ್ಯಾನ್ಪಡ್ಯೋ ನಮ್ಗಳ್ಗೆ ಈ ಕೇವಲ ಐಹಿಕ ವಿಷ್ಯಗಳ್ನ ಮನಸ್ಸಿಗೆ ಹಚ್ಕೊಳ್ಳೋಕ್ ಬಿಟ್ಟಿದ್ದೇನಮ್ಮಾ? ಬಿಡುವ್ರ?

ಸುಬ್ಬಮ್ಮ: (Suddenly dropping a brass 'chemboo' from her hand) ನಿಸೂರೂರಾಯ್ತು!...ಎಲ್ಲಿಂದೆಲ್ಗೆ!...ಅಲ್ಲಾ...ಈಗ್ನೀನೊಂದು ಕ್ಷಣಕ್ಕ್ಮುಂಚೆ ಹೋದಾರ್ಭಟ ವೇನು! ಅಟ್ಟಹಾಸ್ವೇನು! ಈಗ್ನೀನ್ಬೆಕ್ಕಿನ್ಹಾಗೆ ಕ್ಹಾಗ್ಕಣ್ಬಿಡ್ತಾ ಬೆಪ್ಪಪ್ಪೀಂತ್ಹಾಯಿಬಿಡ್ತಾ ಇರೋದೇನು? ನಿನ್ನೀಗ ಈ ತತ್ವಕ್ಕಿಳಿಸ್ಬಿಟ್ಟೋ ಆ ತಾಟ್ಕೆ! ಚನ್ನಾಗಾಯ್ತು!...ನೀನ್ನಿಲ್ಲಿಸ್ದೇಡ...ಅವಳ್ಗೇಳ್ಕೊಟ್ಟ ಬಾಯಿಪಾಠ್ದಲ್ಲಿರೋ ಬಾಕೀ...ನೀನೊಪ್ಪಿಬಿಡೂ!

ರಾಮಣ್ಣ: ಹಯ್ಯೋ! ಇದೆಲ್ಲಾ ಯಾರೇನ್ಹೇಳ್ಕೊಡೋದಮ್ಮಾ...ಇದೆಲ್ಲ...ಆ ಕಪಟನಾಟಕ ಸೂತ್ರಧಾರ್ನ ಲೀಲೆಗ್ಳಮ್ಮಾ!

ಸುಬ್ಬಮ್ಮ: ಏನೂ?

ರಾಮಣ್ಣ: ಕಪಟನಾಟಕ ಸೂತ್ರಧಾರ್ನ ಲೀಲೆಗ್ಳಮ್ಮಾ!

ಸುಬ್ಬಮ್ಮ: (ಎದೆಬಡಿದುಕೊಳ್ಳುತ್ತಾ) ಹಯ್ಯೋ!...ನನಗ್ಗೊತ್ತಿಲ್ವೆ!...ಹೇಳ್ತೀನ್ಕೇಳೂ!...ಈ ಲೀಲೆಗ್ಳೆಲ್ಲಾ ಯಾವ **ಕಂಪ್ನಿ** ಸೂತ್ರಧಾರಂದೂ ಅಲ್ಲಾ...ನಿನಗೆ ಹೀಗ್ಗಂಡಸ್ತನದ ಗೌರ್ವಾನೋಗ್ವಾಡ್ಸಿಬಿಟ್ಟು ರಬ್ಬರ್ಗೊಂಬೆನ್ಹಾಗಲ್ಲಿಂದಿಲ್ಲಿಗೆ ಇಲ್ಲಿಂದಲ್ಗ್ಗೆ ಕುಣ್ಸೋ ಲೀಲೆಗ್ಳೆಲ್ಲ ಆ ಲಂಕಿಣೀದೂ!...(in sad submission) ಸರಿ! ಇನ್ನೋಳಾಡೇನ್ ಪ್ರಯೋಜ್ನ! ಯಾವತ್ತಿನ್ಹಾಗೇ ಈ ಹೊತ್ತೂ! **ಆ ಹಿಡಿಂಬಿ ಹಿಡಿದ್ದೆಟವೇ ಹಟ!**

ವೆಂಕಮ್ಮ: ಚನ್ನಾಯ್ತು! ದಾಸಗ್ರುಡ್ತು ದಕ್ಷಿಣೆ ಕೊಟ್ಟು ಪುರಾಣಕೇಳ್ದಕ್ಕು ಪಯೋಗ್ವಾದ್ರೂ ಇದೆಯಲ್ಲಾ!...ತಾಟಕೀ, ಲಂಕಿಣೀ.... ಹಿಡಿಂಬೀ... ದೇವ್ರೇಗತಿ! ಇನ್ನೇನು ರಾಣ್ಗಲ್ಲಿ ಪೂತ್ನಿಯೊಬ್ಳೇ ಬಾಕೀ! ಅವಳ್ನ ಹೊಂದಿಸ್ಬಿಡ್ತಾಳೀ ಮುದ್ಕೀ...ನನಗೊತ್ತು...**ಅಬ್ಬಬ್ಬಬ್ಬಬ್ಬಾ!** ಏನು ಬಾಯಿಯಾದ್ರೆ ಬರೋಕೋಪ್ದಲ್ಲಿ ಮುಂದಲೇ ಹಿಡಿದು ಎಳೆದು ಬಿಡೋಣಾನ್ಸತ್ತೇಂದ್ರೆ!

ರಾಮಣ್ಣ (aside to Venkamma) ನಿನ್ನಮರ್ಯಾದೆಕ್ಕಪ್ಪಿನ್ನರೇ...ಅದಪ್ಪದಕ್ಕಾಯಿಧಾಳೆ! (aloud) ಹಾಗಲ್ಲಾಮ್ಮಾ...ಈ ಚಪಲಗ್ಳೆಲ್ಲಾ ಆ (holding his hands aloft) ಮಾಯಾ ವಧೂ...

ಸುಬ್ಬಮ್ಮ (ಕೈ ಮುಗಿಯುತ್ತ) ಇನ್ನಾಕು ದಮ್ಮಯ್ಯಾ! ಇನ್ನಾಕು ಸುಮ್ನಿರೋ!...ನಿನ್ನಗ್ಗೆ ಗೃಹಿಣಿ...ಮುಂಕು ಮುಚ್ಚಿರೋ ಮಾಯಾವಧೂನಲ್ಲಿಲ್ಹೋರಿಸ್ಬೇಯಾ! ದೂಡಾನ! ಅಲ್ಲಲ್ಲೂ ಇಲ್ಲ...ನಿನ್ನಹೆಣ್ತಿದ್ಸ್ರಿಗೆ (pointing to Venkamma) ಅಪ್ಪಿಂತಿಧಾಳ್ಕೋಡು. **ಆ ಮಾರಿ!...**

ಇನ್ನಿದಕ್ಕೇಲೆ ಸಿನ್ನಂಸಾರ್ದ ಗೋಜಿಗೆ ನಾ ಬಂದ್ರೆ ಕೇಳು...(holding both hands aloft) ಗಂಡುಮಕ್ಕಳ್ನ ಹೆರೋ ತಾಯಿಗ್ಳ ಹಣೇಬರ್ಹವೆಲ್ಲ ಹೀಗೆ...ಹೊಟ್ಟೇಲ್ಹುಟ್ಟಿದ್ರಕ್ಕಿಂದ ಇದೇ ಅವರಿಗ್ಫಲ! (ಗದ್ಗದ ಸ್ವರದಿಂದ) ಒಂಭತ್ತಿಂಗ್ಳು ಹೊತ್ತು...ಹೆತ್ತು ಎದೆ ಹಾಲ್ಕೊಟ್ಟು...ತನ್ಪ್ರಾಣಕ್ಕಿಂತ್ಲೂ ಜಾಸ್ತಿ ಆಶೆ ಇಟ್ಕೊಂಡು...ಸಾಕೋದು! ಯಾಕೆ? ಯಾಕೆ? ಅವರ್ದೊಡ್ಡೋರಾಗುತ್ಲೂನೂ ಇಂಥ (pointing to Venkamma) **ಅಣ್ಣಮ್ಮಗಳಿಗಾಹುತಿ ಅರ್ಪ್ಸೋಕೆ!** ಇನ್ನಾಕ್ನಗೇ ಇಹಲೋಕದ್ಫಲಗ್ಳು!...

(ವಕ್ರವಾಗಿ ಗೋಳಾಡುವಳು)

(ಒಳಗೆ—**ಯಜಮಾನ್ರಿಧಾರೆಯೋ ಮನೇಲಿ?**)

ವೆಂಕಮ್ಮ: (looking at the door) ಯಾರೋ ಬಂದ್ಹಾಗಿದೆ! (to husband) ಹಯ್ಯೋ! ಇನ್ನೀ ಪ್ರಲಾಪಸಾಕು, ಅಡಗಿಸ್ಕೋ ಅನ್ನೀಂದ್ರೆ!...ಇದೇನ್ನಾಚಿಗ್ಕೇಡು! ಮನೇಗ್ಬಂದಿರೋರೇನ್ತಿಳ್ಕೊಂಡಾರು? ಯಾರಾದರೂ ಸತ್ತರೂಂದ್ಕೊಂಡಾರು!

ಸುಬ್ಬಮ್ಮ : ಅಂದ್ಕೊಳ್ಳಿ! ಇಲ್ಲದ್ದೇನಂದ್ಕೊಂಡಾರೂ...ನನಗಿನ್ನೀ ಮನೇಲೆಲ್ರೂ ಸತ್ಹಾಗ್ಹಾನೇ... [ಒಳಗೆ...ರಾಮಣ್ಣೋರಿಧಾರೇನು, ಯಜಮಾನ್ರೂ! ಯಜಮಾನ್ರಿಧಾರೇನು, ರಾಮಣ್ಣೋರು?]

ಸುಬ್ಬಮ್ಮ: ಯಾರೋ ಕಾಣೆ...ಬಡ್ಕೋತಿಧಾನೆ ಬಾಕ್ಲಲ್ಲಿ...ಯಜ್ಮಾನ್ರೂ...ರಾಮಣ್ಣೋರು! ರಾಮಣ್ಣೋರು...ಯಜ್ಮಾನ್ರೂಂತ...ಯಾರೋ ಕಾಣೆ...ಈ ಮನೇಗುಟ್ಟವನಿಗೆ ಗೊತ್ತಿಲ್ಲ! ಪಾಪ! ಈ ಯಜಮಾನ್ಸ್ಕೆ ಆ ರಾಮಣ್ಣಂದೂಂತ ತಿಳ್ಕೊಂಡಿಧಾನೇ ಆ ಮೂಢ!...ಸರಿ! ಆಫೀಸ್ರೂಮ್ಗೆ ಎಳ್ಕೊಂಡ್ಹೋಗಿ ಕುರ್ಚಿ ಮೇಲ್ಕೂಡ್ಸೀ...ಬೋಳ್ಸಿದ್ನಿಮ್ಮೇನವಳ ತುಟೀಗ್ತಗಲ್ಸೀ (ವೆಂಕಮ್ಮನನ್ನು ಸೂಚಿಸಿ) ತೋರ್ಸು! ಮನೇ ಯಜಮಾನ್ರನ್ನ! ಮೂಢಾ! ಮೂಢಾ!

[ತೆರೆ]

ಗಂಡಸ್ಕತ್ರಿ

ಪಾತ್ರಗಳು

ಈತ	ಅಶ್ವತ್ಥನಾರಾಯಣ—ಬಾಯರಿ
ಈತನ ಸಹಪಾಠಿ	ರಂಗಣ್ಣ-ಅಕ್ಕರು
ಈಕೆ	ಇವರಿಬ್ಬ ರಾಕೆ
ಚೋರ	ಜವಾನ

ದೃಶ್ಯ ೧

ಅಶ್ವತ್ಥನಾರಾಯಣನ ಮನೆಯ ಮುಂದಿನ ಕೋಣೆ

[ಈತನ ಹೆಂಡತಿಯು ಈತನ ಮೇಜಿನ ಮುಂದೆ ನಿಂತು ಅದರ ಮೇಲಿರುವ ಪುಸ್ತಕ, ಪತ್ರಿಕೆಗಳ ಮೇಲೆ ಕೈಯಾಡಿಸುತ್ತಿರುವಳು. ಔಷಧಿಯ ಸೀಸೆಯನ್ನು ಕೈಯಲ್ಲಿ ಹಿಡಿದು ಬೋರನು ಆಗತಾನೇ ಒಳಗೆ ಬರುವನು.]

ಈಕೆ: ಬೋರ! ದೇವೇಗೆ ಹೇಳು...ಬೆಳಿಗ್ಗೆ ರೂಮು ಗುಡಿಸೋವಾಗ...ಈ ಪುಸ್ತಕಗಳೆಲ್ಲಾ ಒಂದೊಂದೂ ತೆಗೆದು ಧೂಳಿಲ್ದೆ ತಿರಿಗಿ ಇಡದಿದ್ದರೆ ಮೊದಲ ತಾರೀಖು ಸಂಬಳಕ್ಕೆ ಬರಲೇಬೇಡಾಂತ... ಔಷಧಿ ತಂದೆಯಾ?

ಬೋರ : ಊಂ...ರ್ರವ್ವ.

ಈಕೆ: ಚಿಕ್ಕರಾಯರಿಗೆ ಕೆಮ್ಮು ಜಾಸ್ತಿ ಆಗಿದೆ...ಅರ್ಧ ರಾತ್ರೀಲಿ...ಪೋಲ್ಟೀಸಿಗೆ ಸ್ಟೌವ್ ಹಚ್ಚಬೇಕಾಗುತ್ತೋ ಏನೋ...ನಿದ್ದೆಹೋಗಬೇಡ...ನಾರಾಣಪ್ಪನಿಗೆ ಹೇಳು, ರಾಯರು ಬರೋ ಹೊತ್ತಾಯ್ತು...ಹಂಡೆ ಕಾದಿದ್ರೆ...ಚಿಕ್ಕಹಂಡೇ ತುಂಬಾ ತಣ್ಣೀರಿರಬೇಕು ಸ್ನಾನಕ್ಕೇ...ಅಂತ. ಹೋಗು.

[ನಿಷ್ಕ್ರಮಣ]

ದೃಶ್ಯ ೨

ಸ್ಥಾನ : ಹಿಂದಿನದು

ಕಾಲ: ಸಾಯಂಕಾಲ ಸುಮಾರು ೭ ಘಂಟೆ.

[ಅಶ್ವತ್ಥನಾರಾಯಣನೂ, ರಂಗಣ್ಣನೂ ಬೀದಿಯ ಬಾಗಿಲಿನಿಂದ ಮುಂದಿನ ಕೋಣೆಗೆ ಬಂದು ರುಮಾಲುಗಳನ್ನು ಸಾವಕಾಶವಾಗಿ ಮಾತನಾಡುತ್ತಲೇ ತೆಗೆದು ಗೂಟಗಳಿಗೆ ತಗುಲಿಸಿ ಮಧ್ಯದಲ್ಲಿರುವ ಸೋಫಾದ ಮೇಲೆ ಕುಳಿತುಕೊಳ್ಳುವರು.]

ಅಶ್ವತ್ಥ: ಹನ್ನೆರಡು ವರ್ಷ ಆಯ್ತು ರಂಗೂ ನಿನ್ನೋಡಿ...ಆಗಿದ್ದ್ಹಾಗೇ ಇದ್ದೀಯಾ!... ನನ್ನೋಡು! ಎಷ್ಟು differenceoo !...ಹ್ಯಾಗೆ ಮ್ಯಾನೇಜ್ ಮಾಡ್ತೀಯಾ?

ರಂಗಣ್ಣ : ದೇವರೇ ಗತಿ ! ನಿನ್ difference ಏನೋ ಗಮನಿಸ್ದೆ. ಆದರೆ ನಾನು ಆಗಿದ್ದಾಗ್ಗೆ...ಗೆ ಇದ್ದೇನೆ. ತಿಂಗಳು ತಪ್ಪದೆ ಇನ್ನೂರು ಮುನ್ನೂರು ರೂಪಾಯಿ ಬರ್ತಿದ್ದ ಕೆಲ್ಸಾನೂ ಒದರ್ಬಿಟ್ಟು ಹುಟ್ಟಾರಭ್ಯ ನನ್ನ ರಕ್ತದಲ್ಲಿ ತುಂಬ್ಕೊ ತುಳುಕ್ತಾ ನನ್ ಎದಳ್ಗೆ ಹತ್ತಿದ ನಾಟಕದ ಹುಚ್ಚಿಗೆ ಬಲಿಯಾಗಿ ಹಂದ್ ತಿಂಗಳ್ ಸಾವಿರಾ, ಮೂರ್ ತಿಂಗಳ್ ಸೊನ್ನೆ, ಹೀಗೆ ಹಿಂದ್ ಮುಂದ್ ದೃಷ್ಟಿಲ್ದೆ ನಾನೇ ಪೇಚಾಡೋದಲ್ದೆ ನನ್ನ ನಂಬಿರೋ ಹತ್ತಿಪ್ಪತ್ತು ಹುಡುಗರ ಜೀವನಾನ್ನು ಜರಿಗಿಸೋ ಜವಾಬ್ದಾರೀಗ್ ಕೈಹಾಕಿ ಕಣ್ ಕಣ್ ಬಿಡತಿರೋ...

ಅಶ್ವತ್ಥ : [ಅಡ್ಡಮಾತಾಡಿ] ಇದಲ್ಲ ನಾನು ಕೇಳಿದ್ ರಂಗೂ!—...ನಿನ್ನ ದೇಹಸ್ಥಿತಿ.

ರಂಗಣ್ಣ : ಅದಕ್ಕೇನ್ಮಾಡೋದು... ಚಿತ್ತಿದ್ದಾಗೇನೆ ಹೊತ್ತರ್ಲ ಬೆಳೆ...ಬಯಸಿದ್ದಾಗಲ್ಲ. ನಿನ್ನ ಕಾಲೇಜ್ ಲೈಫ್ ಎಲ್ಲಾ, ಲೈಬ್ರೀಲಿ–ನಂದು ಫುಟ್‌ಬಾಲ್ ಫೀಲ್ಡ್‌ನಲ್ಲಿ! ಫಲ–ನಿಂಗೆ ಬಂಗ್ಲೆ, ಕಾರು, ಪೊಸಿಷನ್ನು, ಪೆಲ್ಸು!...ನನಗೋ sound lungs, sound digestion, supple

muscles ಉ. ಈಗ ನನಗೆ ಇಲ್ಲದ ಸಂಪತ್ನ ಸಂಪಾದ್ಸೋದಾರಿ ಹುಡುಕ್ತಿಧೀನಿ ನಾನು. ನೀನಾದರೋ dyspepsia ಅಜೀರ್ಣಾನ ಹೋಗಲಾಡಿಸಿಕೊಳ್ಳೋ ದಾರಿ ನೋಡ್ತಿಧೀಯ ನೀನು!

ಅಶ್ವತ್ಥ : ನಿಜ ರಂಗು...ಅಜೀರ್ಣ ಅನ್ಸುತ್ಲೂ ಜ್ಞಾಪಕಕ್ಕೆ ಬರುತ್ತೆ. ನಿಂಗ್ ಹಸಿವ್ದೇ ಏನೋ!... ನನಗೆ ಡಾಕ್ಟರ್ ಹಾಕಿರೋ ಪ್ರೋಗ್ರಾಮು ಸೆವೆನ್ ಓ ಕ್ಲಾಕ್‌ಗೆ ಕೋಕೋ. hot bathಉ. breathing exercises ಉ. ಯೋಗಾಸನಾಸು. restoo: ಡಾಕೋ ಡಾಕ್ ಎಂಟು ಘಂಟೆಗೆ ಊಟ...ಈಗ ಏಳು ಆಗ್ತಾ ಬಂತು; ಹಸಿವೇ?...ಇಲ್ಲಾ...ನೀನೂ ಕೋಕೋ ಕುಡ್ದು ಇನ್ನು ಒಂದು ಘಂಟೆ ಉಪವಾಸ...ಪರವಾ ಇಲ್ವೆ?

ರಂಗಣ್ಣ : Don't be silly! ಹುಟ್ಟಿದಾರಭ್ಯ friendsoo! ಇದುವರೆಗೂ ಇಲ್ಲದ ಉಪಚಾರ ಈಗೇನು ಷುರು ಮಾಡಿಬಿಟ್ಟೆ?

ಅಶ್ವತ್ಥ: ಸರಿ ಹಾಗಾದ್ರೆ...(ಒಳ ಬಾಗಿಲ ಬಳಿ ಹೋಗಿ) ಇಧೀಯಾ?...ಕೋ ಕೋ... ಇಬ್ಬರಿಗೆ. (ವಾಪಸು ಬರುತ್ತ ತಿರುಗಿ) ಊಟಾನೂ...ಇಬ್ಬರಿಗೆ! (ವಾಪಸು ಬರುತ್ತ ವಿಸ್ಮಯವನ್ನು ಸೂಚಿಸುತ್ತಿರುವ ರಂಗಣ್ಣನ ಮುಖವನ್ನು ನೋಡಿ) ಹೌದು ರಂಗೂ! ನಿನ್ನ ನಾನ್ last ನೋಡಿದಾಗ ನನ್ wifeನ ಕಳ್ಕೊಂಡು. ಅವಳ್ ಬಿಟ್‌ಹೋದ ಕೈಕೂಸ್ನೂ ಇಟ್ಕೊಂಡು ಪೇಚಾಡ್ತಿದ್ದೆ. ನನ್ ಮುದಿತಾಯಿ ದಿನವಹೀ ಎತ್ತಿದ್ದ marriage questionoo ಅಸಹ್ಯವಾಗಿದ್ರೂ. ಹಾಗೇ ನಾಲ್ಕೈದು ವರ್ಷ ಕಳೆದು ಬರ್ತಾ ಬರ್ತಾ ಬರ್ತಾ ನನಗೆ ಆಗಿದ್ದ ಅಲ್ಪ ಸ್ಥಿತೀಲಿ. ಕೂಸ್ನೂ ನೋಡ್ಕೋತಾ ಮನೇಕೆಲ್ಸಾನೂ ಮಾಡ್ತಾ ನರಳ್ತಿದ್ದ ನಮ್ಮಮ್ಮನ ಕಷ್ಟಾನ್ ನೋಡಲಾರ್ದೆ...(ಕಿರುನಗೆಯಿಂದ) Don't be shocked !...ಇದು Social reform ಕಾಲ!...ಹದಿನೆಂಟಿಪ್ಪತ್ ವಯಸ್ನಾಗಿ, ಗಂಡನ್ನ ಕಳ್ಕೊಂಡು ದಿಕ್ ಕೆಡ್ತಿದ್ದ ಒಬ್ಬ poor widowನ marriage ಮಾಡ್ಕೊಂಡೆ. ಆಗಿಂದ ಈಗ್ಗೆ ಎಂಟು ವರ್ಷಾನೂ regular saint ಹಾಗೆ. ನಮ್ಮಮ್ಮ ಸತ್ತಮೇಲೆ ನನ್ನೂ ನನ್ delicate ಮಗನ್ನೂ ನೋಡ್ಕೊಳ್ತಿಧಾಳೆ. ನನ್ನ wife ಉ...God bless her !.... ಈ ಸೆಕೆಂಡ್ ಮ್ಯಾರೇಜ್‌ನಿಂದ ಕೋಪಿಸಿಕೊಂಡ ನಮ್ಮ ಮಾವ ನನ್ನ ಹೆಂಡ್ತಿ ಬಿಟ್ಟು ಹೋದ ನನ್ನ ಮಗನ ಮೇಲಿನಾಶೆಯಿಂದ, ಆತನ ಎಪ್ಪತ್ತು ಸಾವಿರದ propertyಲಿ. ನನಗ್ ಮೂವತ್ತು. ಆ ನನ್ನ ಬೇಬಿ...ಆತನ ಮೊಮ್ಮಗನಿಗೆ–ನಲವತ್ತೊಂತ ಹಂಚಿಬಿಟ್ಟು ಕಣ್ಣು ಮುಚ್ಚಿದ. ಇದೇ. ಮುಂದಕ್ಕೆ ನಾನು ನನ್ನ wifeನೂ ನನ್ನ ಮಗನ್ನೂ comfortable ಆಗಿ ಬಿಟ್ಟು ಹೋಗೋಕೆ assurance ಉ.

ರಂಗಣ್ಣ: ಮಗ delicate ಏ...?...ವಯಸ್ಸೇನೂ?

ಅಶ್ವತ್ಥ : ಹನ್ನೆರಡು. ಡಾಕ್ಟ್ರು ಹೇಳ್ತಾನೆ. consumption ಉ....congenital ಅಂತ ಇನ್ ಹಾರ್ಟೂ ವೀಕು–ಅವರಪ್ಪನನುಗ್ರಹ!...ಅವನ್ನ ತನ್ನ ಮಗನ ಹಾಗೆ ನೋಡ್ಕೊಳ್ತಿಧಾಳೆ ಮನೆ ಕೆಲಸದ ಜೊತೇಲಿ...(ಕಣ್ಣುಗಳಿಂದ ಕೇಳುತ್ತ) ಅಕೋ ಬಂತು...ಕೋ ಕೋ!

[ಒಂದು ಬೆಳ್ಳಿಯ ತಟ್ಟೆಯ ಮೇಲೆ ಎರಡು ಬೆಳ್ಳಿಯ ಲೋಟಗಳ ತುಂಬ ಕೋಕೋ ತೆಗೆದು ಕೊಂಡು ಅಶ್ವತ್ಥನ ಹೆಂಡತಿಯು. ಅವನಿಗದನ್ನು ಕೊಡಲು ಬಾಗಿಲನ್ನು ದಾಟಿ ಕೋಣೆಯೊಳಕ್ಕೆ ಎರಡು ಹೆಜ್ಜೆ ಬರುವಷ್ಟರಲ್ಲಿ ಅಶ್ವತ್ಥನು ಹೋಗಿ ಅವಳಿಂದ ಅವುಗಳನ್ನು ತೆಗೆದುಕೊಳ್ಳುವನು. ಅಶ್ವತ್ಥನನ್ನೇ ಹಿಂಬಾಲಿಸಿದ್ದ ರಂಗಣ್ಣನ ಕಣ್ಣುಗಳೂ. ದೀಪದ ಬೆಳಕು ಮುಖದ ಮೇಲೆ ಬಿದ್ದು ಹೋಯಿತಾದ ಆಕೆಯ ಕಣ್ಣುಗಳೂ. ಕ್ಷಣಮಾತ್ರ ಸೇರುವುವು. ರಂಗಣ್ಣನು ಮೊದಲು ಬೆಚ್ಚಿ, ಮನಸ್ಸಿನಲ್ಲುಂಟಾದ ವಿಷಿದ ಸಂಕಟ ವನ್ನೂ ಭಯವನ್ನೂ ಅಶ್ವತ್ಥನ ಕಣ್ಣಿಗೆ ಬೀಳದಂತೆ ತನ್ನ ನಟನಾಚಾತುರ್ಯದಿಂದ ಮರೆಸುವನು].

ರಂಗಣ್ಣ : (ಮೆಲ್ಲನೆ) ಅಯ್ಯೋ ದೇವರೇ...ಇದೂ ನಿನ್ನ ವಿಚಿತ್ರವೇ?...ಇವಳ್ಲೂ ಬಂದ್ಲು ಇಲ್ಲೀ...!! ? ?

ಅಶ್ವತ್ಥ: ಇಕೋ, ಕೋ ಕೋ...

[ರಂಗಣ್ಣನ ಮುಂದೆ ಮೇಜಿನ ಮೇಲೆ ಒಂದು ಲೋಟವನ್ನಿಟ್ಟು, ತನ್ನ ಲೋಟದ ಕೋಕೋ ಕುಡಿದು ಬೀದಿಯ ಬಾಗಿಲ ಕಡೆ ನೋಡಿ "ಯಾರದು–ಬೋರಸೇ" ಎಂದು ಕೂಗುತ್ತ ಬಾಗಿಲ ಬಳಿ ಹೋಗಿ, ದುಡ್ಡು ಕೊಟ್ಟು ಬೋರಸನ್ನು ಕಳುಹಿಸಿ ಬಲಗಡೆ ಇರುವ ತನ್ನ ದಿವಾನಖಾನೆಯ ಒಳಗೆ ಹೋಗುವನು.]

ರಂಗಣ್ಣ : ಹೌದೂ...regular Saintoo !...ತನ್ನ ಮಗನ ಹಾಗೇ ನೋಡ್ಕೊಳ್ತಿಧಾಳೆ, ಈ delicate boyನ ತ್ಸು! ತ್ಸು!! (ತಲೆದೂಗುತ್ತ) ಏನೋ, ಹೀಗೊಂದ್ವೇಳೆ, ಹಳೇ ಚಾಳೀನೆಲ್ಲಾ ಹೂತಿಟ್ಟು ಈತನ ಗುಣಕ್ಕನುವಾಗಿ ಇರ್‍ತಿರೋಳ್ನ, ಬದುಕಿಲ್ಲದೆ ಒದ್ದೋಡಿಸೋದು ಧರ್ಮವಲ್ಲ!... ಇಲ್ಲಿಂದ ಹೊರಟು ಹೋಗೋದೇ best thingoo !...ಹೌದೂಊ! ಇನ್ನು ಮುಂದೆ ಯಾವಾಗ ಲಾದರೂ ಇವಳ ಚರಿತ್ರೆ ನನ್ನ ಸ್ನೇಹಿತನ ಕಿವೀಗೆ ಬಿದ್ದುಗಿದ್ರೆ...ಇವಳ ಗತೀ ಏನೂ?!...ಇಲ್ಲಾ, ಮಾಡಿದ ಪಾಪಕ್ಕೆ ಪಶ್ಚಾತ್ತಾಪಪಟ್ಟು ಇದುವರಗೂ ಯೋಗ್ಯಳಾಗಿ ಇದ್ದದ್ದೂ ವ್ಯರ್ಥವಾಗಿ ಕಾಡು ಪಾಲಾಗೋ ಗತಿ ಸಂಭವಿಸದ್ದಾಗೆ ನೋಡ್ಕೊಳ್ಳೋದೂ ನನ್ನ ಧರ್ಮ...ಇಂಥಾ ಸನ್ನಿವೇಶದಲ್ಲಿ... ಇವನ ಅಭಿಪ್ರಾಯಾನ ಈಗಲೇ ಇತ್ಯರ್ಥ ಮಾಡಿಕೊಂಡರೇನೇ ನನ್ನ ಮುಂದಿನ ಕ್ರಮಾನ ಬಿಂಗಡಿಸ್ಕೋ ಬಹುದ್ ನಾನು!...ಹ್ಯಾಗೆತ್ತೋದು ಈ ಮಾತ್ನ...ಇವನ ಹತ್ರ?

[ಅಂಗೈಯಲ್ಲಿ ಮುಖವನ್ನು ಮುಚ್ಚಿ ನಿಟ್ಟುಸಿರಿಡುವನು]

ಅಶ್ವತ್ಥ : [ಕೋಟನ್ನು ಬಿಚ್ಚಿಟ್ಟು, ಭುಜದ ಮೇಲೆ ಪಂಚೆಯನ್ನೂ ಟವಲನ್ನೂ ಹಾಕಿಕೊಂಡು, ಬಲಗೈಯಲ್ಲಿ ರಂಗಣ್ಣನಿಗೋಸುಗ ಟವಲೊಂದನ್ನೂ ಎಡಗೈಯಲ್ಲಿ ಒಂದೆರಡು ವರ್ತಮಾನ ಪತ್ರಿಕೆ ಗಳನ್ನೂ ಮಾಸಪತ್ರಿಕೆಗಳನ್ನೂ ಹಿಡಿದುಕೊಂಡು ಕಿರುಮನೆಯಿಂದ ಹೊರಬಿದ್ದ ಅಶ್ವತ್ಥನು ಅದುವರೆಗೆ ಬೀದಿಯ ಬಾಗಿಲಿಗೆ ಬಂದಿದ್ದ ಬೋರನ ಕೈಯಿಂದ ಸಿಗರೇಟು ಪ್ಯಾಕನ್ನೂ ಬೆಂಕಿಯ ಪೆಟ್ಟಿಗೆಯನ್ನೂ ತೆಗೆದುಕೊಂಡು, ಮೇಜಿನ ಬಳಿ ಬಂದು, ಸೋಫಾದ ಮೇಲೆ ಟವಲನ್ನು ಹಾಕಿ]

ಇಕೋ! ಟವಲು—some old magazines you are usually fond of looking into...and...ನಿನ್ನ poisonoo. ನಿನ್ನ ಹಳೇ ಅಭ್ಯಾಸಾನ ನಾನಿನ್ನೂ ಮರ್‍ತಿಲ್ಲ!

[ಸಿಗರೇಟ್ ಪ್ಯಾಕನ್ನು ಮೇಜಿನ ಮೇಲಿರಿಸಲು ಹೋಗಿ ಕೋಕೋ ಹಾಗೆಯೇ ಇದ್ದದ್ದನ್ನು ನೋಡಿ]

ಇದೇನು ಕೋಕೋ ಹಾಗೇ ಇಧೆ!?

[ರಂಗಣ್ಣನ ಕಡೆ ಚೆನ್ನಾಗಿ ನೋಡಿ]

ಇದೇನು?...ಯೋಚನೆ ನಿಂಗೆ...ಈಗ? ...

ರಂಗಣ್ಣ : ...ಏನೂ ಇಲ್ಲಾ...

[ಕೋಕೋ ಕುಡಿದು, ಸಿಗರೇಟನ್ನು ಹಚ್ಚಿ ಸೇದುತ್ತಾ]

ಒಂದು small problem ಊ...psychological ಊ...to err is human... to forgive is divine ಕೇಳಿಲ್ವೇ?...Repent and ye shall be forgiven ಅಂತ ಹೇಳತ್ತೆ ಬೈಬಲ್ಲು.

[ಹೊಗೆಯನ್ನು ಬಿಡುತ್ತ]

ಅದೇ ಪ್ರಕಾರ ಬರುತ್ತೆ ಪ್ರಾಬ್ಲಮ್ಮೂ...ನನ್ನ ಡ್ರಾಮಾದಲ್ಲಿ ಒಂದು situation ಇದು! Erring wifeoo...ಜಾರಿದ್ದೂನೂವೆ. ಅವಳ ಆಮೇಲಿನ ಒಳ್ಳೇ ನಡತೇನ ಗಮನಿಸಿ ಅವಳ್ನ ಕ್ಷಮಿಸಿ ಆದರಿಸೋದ್ ತಾನೆ...correct solutionoo....... ?

ಅಶ್ವತ್ಥ : ಹೌದು. ನಿಮ್ಮ ನಾಟಕದಲ್ಲಿದೇ correct solutionoo !...**ಸಮಾಜ ಜೀವನದಲ್ಲಿ...incorrectoo**...ಸಮಾಜದ ಕಣ್ಣು ಮುಂದೆ, ಹೆಂಡತಿ, ಮನೆ, ಮಕ್ಕಳು ಅಂಬೋ ಜವಾಬ್ದಾರೀನ ಒಪ್ಕೊಂಡು ಇವರಿಗೂ ಕೂಳೊದಗಿಸೋಕೆ ದಿನವೂ ಮೈಮುರಿಯೋ ಹಾಗೆ ದುಡೀತಿರೋ ಗೃಹಸ್ಥನಿಗೇ...ನಿಮ್ಮ ನಾಟಕದ ಲೆಕ್ಕಾಚಾರ ಸರಿ ಹೋಗೋದಿಲ್ಲ. ಸಮಾಜದಲ್ಲಿ... ಜಾರಿದ ಸ್ತ್ರೀ ಮತ್ತಿರಿಗಿ ಜಾರಿದ್ದರಿಂದ ತನ್ನ ಕುಟುಂಬಕ್ಕೂ ಗಂಡನ ಕುಟುಂಬಕ್ಕೂ ಆಗೋ ಅವಮಾನಕ್ಕೇ ಅಲ್ದೆ, ಮುಂದೆ ತಮ್ಮ ಮಕ್ಕಳಿಗೂ ಆಗಬಹುದಾದ ಅನಾಹುತಕ್ಕೆ ಆಸ್ಪದಾ ಕೊಡದೇನೂ ಮನೆಯಿಂದ ಒದ್ದು ಓಡ್ಸೋದೊಂದೇ ದಾರಿ...ಕೋಪಿಸ್ಕೋಬೇಡಾ. ನಿನ್ನ ಹೃದಯಕ್ಕಿಂತ ನನ್ನದೇನೂ ಕಠಿಣವಲ್ಲಾ...ಆದ್ರೂನೂವೆ ನೀನು ಹೇಳೋ ದಾರಿ ನಿನ್ನ stageಗೂ public lectureಗೂ ಸರಿಹೋಗುತ್ತೇಯೋ ಹೊರ್ತು...ಸಮಾಜ ಸರಿಯಾಗಿ ಬದುಕೊ ದಾರಿ ಅಲ್ಲ. **ವ್ಯಕ್ತಿ ಸಮಾಜದ ಸುಖಕ್ಕೇ ಹೊರತು, ಸಮಾಜ ವ್ಯಕ್ತಿ ಸುಖಕ್ಕಲ್ಲ**-except of course you artists ಊ— ಯಾಕೇಂದ್ರೇ ನೀವು ಮೊದಲೇ abnormalಉ. ನಿಮ್ಮಿಂದ ಸಮಾಜಕ್ಕಾಗೋ abnormal ಲಾಭಾನಾ ಗಮನಿಸ್ಯೇ, ನನ್ನಂಥಾ normal ವ್ಯಕ್ತಿಗಳಲ್ಲಿ ಕಂಡುಬಂದ್ರೆ ತಪ್ಪೂಂತ ತೋಚೋ abnormalities ನಿಮ್ಮಲ್ಲಿ ಕಂಡುಬಂದ್ರೂನೂವೆ. ಒಟ್ಟಿನಲ್ಲಿ ಈಗಿನ ಸಮಾಜಕ್ಕೂ ಇನ್ನು ಮುಂದೆ ಬರೋ ಸಮಾಜಕ್ಕೂ ನಿಮ್ಮಿಂದಾಗೋ ಪ್ರಯೋಜನಾನ್ನ ನಿಮ್ಮ ತಪ್ಪುಗಳಿಗೆ ಎದುರು ತೂಗಿ ಕಣ್ಣು ಮುಚ್ಚಿಕೊಂಡು condone ಮಾಡ್ತೇವೆಯೋ ಹೊರ್ತು, ಸಮಾಜಕ್ಕಾಗೋ ಲಾಭಾ ವಂದಿಷ್ಟೂ ಇಲ್ದಿದ್ರೆ ಸಾಮಾಜಿಕ ಜೀವನದಲ್ಲಿ ನಿಮಗೆ ಸ್ಥಳವೇ ಇಲ್ಲ. ಆದ್ರಿಂದ ಜಾರಿದ ಹೆಂಗ್ಸು ತಿರಗಿ ಜಾರ್ತ್ಯಾಳೂಂಬೋದ್ನ ಮರೀದೆ, ಮನೆತನದ ಮಾನವನ್ನ ಕಾಪಾಡಿಕೊಳ್ಳೋದು ಮುಖ್ಯವೇ ಹೊರ್ತು. ಮನೆತನದ ಮಾನವನ್ನು ಮರೆತು ತನ್ನ ಗಂಡನೊದಗಿಸ್ದ ಅನ್ನದಿಂದ ಬೆಳೆದ ರಕ್ತಮಾಂಸದ ಕೊಬ್ಬನ್ನ ಕರಗಿಸಿಕೊಳ್ಳೋಕೇಂತ ಜಾರಿದ ವ್ಯಕ್ತಿಯ ಮುಂದಿನ ಗತೀನ ಗಮನಿಸೋಕೆ ಬಿಡುವಿಲ್ಲ—ಗೃಹಸ್ಥನಿಗೆ! ಅದು ಹೋಗಲಿ; comfortable ಆಗಿ ಓದ್ತಿರು. Exerciseoo. ಸ್ನಾನಮುಗಿಸಿಕೊಂಡು ಬಂದ್ಬಿಡ್ತೇನೆ ಬೇಗ......say in twenty minutes–

[ನಿಷ್ಕ್ರಮಣ]

ರಂಗಣ್ಣ : ಚೆನ್ನಾಗಿದೆ situationoo ! ಇವಳ ಸ್ವಭಾವ ನಾಂಚಿನ ಹಾಗಿದ್ರೇನೋ... ಅಶ್ವತ್ಥನಿಗಪಾಯ...ಇಲ್ಲಾ. ಇವಳು ಈಗ ನೆಟ್ಟಗಿದ್ದು, ಇವಳ ಚರಿತ್ರೆ ಇವನ ಕಿವೀಗೆ ಬಿದ್ರೇನೋ ಇವಳಿಗೆ ಅಪಾಯ ಮುಂದಕ್ಕೆ...ಈಗೇನ್ ಮಾಡೋದು ನಾನು?...

[ಹಂಡೆಯ ನೀರನ್ನು ಚೊಂಬಿನಿಂದ ತುಂಬಿ ಸ್ನಾನ ಮಾಡಲು ಸುರಿಯುತ್ತಿರುವ ಶಬ್ದ]

[ಅಶ್ವತ್ಥನ ಪೆಂಡತಿಯು ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಾ ರಂಗಣ್ಣನ ಬಳಿ ಬಂದು ಸ್ವಲ್ಪದೂರದಲ್ಲಿ ನಿಲ್ಲುವಳು]

ಈಕೆ : (ನಡುಗುವ ಸ್ವರದಲ್ಲಿ) ...ಈಗೇನ್ಮಾಡ್ತೀರಿ...ಹೇಳೇ ಬಿಡ್ತೀರಾ...?

ರಂಗಣ್ಣ : ಹೇಳದೇ ಏನೂ?...ನನ್ನ ಪ್ರಾಣಸ್ನೇಹಿತ!?...ನನ್ನ ನೀನು ಬಿಟ್ಬಿಟ್ಟು ಹೋದ ಹಾಗೆ ಆತನ್ನೂ ಕಿಚ್ಚಿನ ಪಾಲುಮಾಡಿ ಹೋಗೋ ಅಪಾಯದಿಂದ ತಪ್ಪಿಸೋದು ನನ್ನ ಧರ್ಮ. ನನ್ನ ಸ್ನೇಹಿತನಿಗೆ ಹೇಳದೇಇರೋ...

ಈಕೆ : (ಅತ್ತುಮಾತಾಡಿ)...ಹಯ್ಯೋ!...ನೀವ್ರೋ...ಜ್ಞಾನವಿಲ್ದೆ ಬಿದ್ದಿದ್ರಿ...ಆ ಡಾಕ್ಟ್ರು... ಬೆಳಕು ಹರಿಯೋತನಕ ಪ್ರಾಣಗಳಿರೋದಿಲ್ಲಾಂದೇ ಬಿಟ್ರು...!! ನಾನೇನ್ಮಾಡೋದು?...ಹೊಸೂರು ...ಹೊಸ ಜನರು...ನಾಟಕದೋರು ಸುತ್ತು ಮುತ್ತಲೂ...ವಯಸ್ಸೂ ಚಿಕ್ಕದು. ಇನ್ ಜ್ಞಾನ ಬೇರೇ ಬರೋದಿಲ್ಲಾಂದ ಡಾಕ್ಟ್ರು...ಇನ್ನು ಹ್ಯಾಗಿದ್ರೂ ನೀವು ತಪ್ಪೋದಿಲ್ಲಾಂತ ಗಟ್ಟಿ ಮಾಡ್ಕೊಂಡು.ನಮ್ಮಮ್ಮನ್ನ ಜ್ಞಾಪಿಸ್ಕೊಂಡು ನಿಮ್ಮನ್ನ ಬಿಟ್ಟು ಹೋದಾಗ.ನನ್ನ ಮೈಮೇಲೆ ಜ್ಞಾನವೇ ಇರಲಿಲ್ಲ ಅಂದ್ರೆ !

...ಪಂದೇ ಜ್ವರದಲ್ಲಿ ಮೂರು ತಿಂಗಳು ಬಿದ್ಕೊಂಡೆ...ನಾನು ಬದುಕಿದ್ದೆ ಪುನರ್ಜನ್ಮ!...ಆಮೇಲೆ ವಿಚಾರಿಸ್ತೇ ಇದ್ವ ಜನಗಳೇ ಇಲ್ಲ... ಓದ್ದೇ ಇದ್ದ ಪೇಪರೇ ಇಲ್ಲ...ನಿಮ್ಮ ಸುದ್ದೀನೇ ಇಲ್ಲ!...ಕೂದ್ಲೂ ಹೋಗಿ ಕೆಂಪು ಸೀರೇನೊ ಕಟ್ಕೊಂಡು ನಮ್ಮಮ್ಮ ಸತ್ತದ್ನೂ ಕಣ್ಣಾರ ನೋಡಿ, ದಿಕ್ಕಿಲ್ದೆ, ದೆಶೆ ಇಲ್ದೆ ನಾನು ಪಟ್ಟ ಪಾಡು ಪರಮಾತ್ಮನಿಗೆ ಗೊತ್ತು! ಈಗ ನಿಮಗ್ಗೊತ್ತು! ಈಗ ನಿಮ್ಮ ಮನಸ್ಸಿಗೆ ನನ್ನ ತಪ್ಪು ಹ್ಯಾಗಿದ್ರೂನೂವೆ ನನ್ನ ಮನಸ್ಗೇನೊ ನೀವು ಬದ್ಕಿ ಚೆನ್ನಾಗಿರೋದು ಎಷ್ಟು ಸಂತೋಷಾಂತ ಬಾಯಿಂದ ಹೇಳಲಾರೆ...

[ಮುಂದಕ್ಕೆ ಮೆಲ್ಲನೆ ಸರಿದು ರಂಗಣ್ಣನ ತೋಳಿನ ಮೇಲೆ ಕೈಗಳನ್ನಿಡಲು ಉದ್ಯುಕ್ತಳಾಗುತ್ತ]

...ಈಗೇನ್ಮಾಡ್ತೀರಿ...?

ರಂಗಣ್ಣ : ಮಾಡೋದೇನು!

[ಅವಳೆರಡು ಕೈಗಳನ್ನೂ ತೆಗೆದು ತನ್ನ ಕೈಗಳಲ್ಲಿ ಹಿಡಿದುಕೊಂಡು]

ನಿನ್ನ ಗಂ...ಅಲ್ಲ, ನನ್ನ ಸ್ನೇಹಿತನಿಗ...ಯಾರ ತಪ್ಪೂ ಇಲ್ದೆ ಒದಗಿರೋ ಈ ಸನ್ನಿವೇಶಾನ ಇತ್ಯರ್ಥ ಮಾಡಿ ಬಿಟ್ಟು...

ನಾವಿಬ್ಬರೂ ಇಲ್ಲಿಂದ ಈಗ್ಲೆ ಹೊರಡೋದಲ್ದೆ ಬೇರೇ ಏನು ಮಾಡೋದು?

ಈಕೆ : ಈಗೆಲ್ಲಿಧೀರಾ...ಕಂಪ್ನೀನೇ...ಕಲೆಕ್ಷನ್ನೂ...ಸಂಪಾದ್ನೇ...?

ರಂಗಣ್ಣ : ನನ್ನ ಕಂಪ್ನಿ ಹೋಗಿ ನಾಲಕ್ ವರ್ಷದ ಮೇಲಾಯ್ತು ಈಗ್ ನನ್ ಸಂಪಾದ್ನೇ... ನಲವತ್ತು ಐವತ್ತಕ್ಕೆ ಇಳಿದಿದೆ. ಆದರೇನು (ಹತ್ತಿರ ಬರುತ್ತಾ)...ನಾವಿಬ್ಬರೂ...ಅನ್ಯೋನ್ಯವಾಗಿರೋ ವಾಗ ಐವತ್ತು ಆದರೇನು, ಐದು ಆದರೇನು...ಆತ ಬಂದ್ ಮೇಲೆ ಹೇಳಿ ಹೋಗೋದೆ...?...

(ಸ್ವಲ್ಪ ಯೋಚಿಸಿ, ಮೇಜಿನ ಹತ್ತಿರ ಸರಿದು ಲೇಖಣಿಯನ್ನು ಮಸಿಯಲ್ಲಿ ಅದ್ದಿ ಕಾಗದದ ಮೇಲೆ ಬರೆಯಲುದ್ಯುಕ್ತನಾಗುತ್ತ)...

ಇಲ್ಲಾ...ಬರೆದುಬಿಟ್ಟು ಹೋಗೋದೇ ಮೇಲು...

ಈಕೆ: (ಹಾರಿಹೋಗಿ, ಬರೆಯುವ ಆತನ ಕೈಯನ್ನು ನಿಲ್ಲಿಸಿ)

ಅಯ್ಯೋ ಬೇಡೀಂದ್ರೆ...ಇಲ್ಲಿ ಬನ್ನಿ ಹೇಳ್ತೀನೆ.

[ರಂಗಣ್ಣ ಮುಂದಕ್ಕೆ ಬರುವನು]

ಇದೀಗ್ಲೇ ತಿಳಿದುಬಿಟ್ರೆ ಇವರಿಗೆ, ಆತನಿಗೂ ವಳ್ಳೇದಲ್ಲ. ನಮ್ಮಿಬ್ಬರಿಗೂ ವಳ್ಳೇದಲ್ಲ!!

ರಂಗಣ್ಣ: ಆತನಿಗೂ ವಳ್ಳೇದಲ್ಲಾ?! ಅದ್ಹ್ಯಾಗದು...?

ಈಕೆ : ಈಗ ನೋಡಿ! ಆತನಿಗೆ ಮೈ ಚೆನ್ನಾಗಿಲ್ಲ....heartಊಂತಂತಾರಲ್ಲ...ಹೃದ್ಯ...ಅದು ಸರಿಯಾಗಿಲ್ಲವಂತೆ. ಡಾಕ್ಟ್ರು ಹೇಳಿದಾರೆ. ಥಟ್ನೆ ಏನಾದ್ರೂ ಆದ್ರೆ ನಿಂತೇ ಹೋಗುತ್ತದೆ. ಹೀಗಿರೋ ವಾಗ ಅವ್ರಿಗೂ ಅಪಾಯಾನ್ ತಂದಿಡ್ದೆ...ಸ್ವಲ್ಪ ದಿನದ ಮಟ್ಟಿಗೆ ನಾವಿಬ್ಬರೂ ಬೇರೆ ಬೇರೆಯಾಗಿದ್ಬಿಟ್ರೆ, ನಮಗೆ. ಇನ್ ಕೊಂಚ ದಿನದಲ್ಲಿ...ಆತನ ನಂತರ ಸೌಖ್ಯವಾಗಿರೋದು...ಬಿಟ್ಟು...ನಿಮ್ಮ ಈ ಚಿಕ್ಕ ಸಂಪಾದ್ನೇಲಿ, ನನ್ನ ಜವಾಬ್ದಾರೀನೂ ಯಾಕ್ ಕಟ್ಕೊಬೇಕೂಂದ್ರೆ ನೀವು?

ರಂಗಣ್ಣ : ಆತನ ನಂತರ...ಬರೋ...ಸೌಖ್ಯವೇನು? ಈಗಿಲ್ಲದ್ದು?

ಈಕೆ : ಇಲ್ನೋಡೀಂದ್ರೇ...ವಿಲ್ ಬರ್ದಿಧಾರೆ! ಎಪ್ಪತ್ತು ಸಾವಿರ ಅವರ ಆಸ್ತಿ! ಮೂವತ್ತು ನನಗೆ!...ಕೆಮ್ಮೀ ಕೆಮ್ಮೀ ಹಗಲು ರಾತ್ರಿ. ನನಗೆ ಬಿಡುವೂ ನಿದ್ರೇನೂ ತಪ್ಪಸ್ತಾ ಕ್ಷಯರೋಗ ಹಿಡಿದ ಆ ಹುಡುಗನಿಗೆ ನಲವತ್ತು!...ಇನ್ನವನಿಗೆ ಹದ್ನೆಂಟು ವಯಸ್ಸು ತುಂಬೋವರ್ಗೂ ಆ ದುಡ್ಡಿನ್

ಬಡ್ಡಿ ನನ್ ಕೈಲಿ!... ಆ ವಯಸ್ಸು ನೋಡೋ ಹಾಗೂ ಇಲ್ಲ ಅವನು!...ಇನ್ನು ಈ ಮಾಗಿಹೋದ್ರೆ ...ನಿಮ್ಮಂಥಾವರು ಸುಮ್ಮನೆ ನೂಕಿದರೆ ಪ್ರಾಣ ಬಿಟ್ ಬಿಡುತ್ತೆ! ಡಾಕ್ಟ್ರು ಹೇಳಿದ್ದರ ಮೇಲೆ ನಿಮಗೂ ಅಪಾಯವಿರೋದಿಲ್ಲ! ಹೀಗಿರೋವಾಗ ಎಷ್ಟು ಬೇಗ...ಈತನ ವಿಲ್ಲಿನ ಲಾಭಾ ನಮ್ಗೆ ಗೊತ್ತಾಗುತ್ತೋ ಅಷ್ಟು ಬೇಗ ನಾವಿಬ್ರೂ...

ರಂಗಣ್ಣ: ಎಷ್ಟು ಬೇಗಾ...ಂ...ದ್ರೆ? ಇವತ್ತು ರಾತ್ರೀನೇ ಅಂತ ಇಟ್ಕೊ-ಮಾತಿ-ನೀನು ಹೇಳಿದ ಹಾಗೆ–ನಾನು ತಿಳಿದೇ ನೂಕಿ...ಒಂದುವೇಳೆ...ಆತನು...

[ಮುಖದಲ್ಲಿ ಭಯವನ್ನು ಪ್ರಕಟಿಸುವನು]

ಈಕೆ : ಅಯ್ಯೋ ಬೆದರಬೇಡಿ ಅಂದ್ರೇ! ಡಾಕ್ಟ್ರು ಹೇಳಿಧಾರೆ!

ರಂಗಣ್ಣ : ಆ ಮೇಲೆ...?

ಈಕೆ: ಆ ಮೇ ಲೇ ನು!

[ಹತ್ತಿರ ಸರಿದು ರಂಗಣ್ಣನ ಕೈಯನ್ನು ಹಿಡಿದು ಸವರುತ್ತಾ...ಥಟ್ಟನೆ]

ಅಕೋ! ಬರ್ತಿಧೆ!

[ಅವನ ಕೈಯನ್ನು ಕೊಡವಿ ಬಾಗಿಲಿನ ಹತ್ತಿರಕ್ಕೆ ಓಡಿ ಹೋಗಿ ಅರ್ಧ ಓಂತಿರುಗಿ]

ನಮ್ಮಿಬ್ಬರ ಸೌಖ್ಯಕ್ಕೆ...ದೇವರು...ನಿಮ್ಮ ಧೈರ್ಯಾನೇ ದಾರೀ...ತೋರಿಸಬೇಕು.

[ಮುಗುಳುನಗೆಯೊಡನೆ]

ನಮ್ಮಿಬ್ಬರ ಮುಂದಿನ ಗತಿ ನಿಮ್ಮ ಕೈಯಲ್ಲೆ ಇದೆ.

[ಹೋಗುವಳು]

ರಂಗಣ್ಣ: (ಸಿಗರೇಟೊಂದನ್ನು ಹಚ್ಚಿಸಿಕೊಳ್ಳುತ್ತ...ತಾನೇ)

ಚನ್ನಾಗಿದೆ!...Tragic situationsಗೆ grotesquely comic back-ground ಊ–ಬೇಕಾದಹಾಗೆ ಈಗ ನನ್ನ ನಗು. poor ಅಶ್ವತ್ಥನಿಗೆ ಮುಂದೆ ಬರೋ shockಗೆ. back-ground ಊ!...ಇರ್ಲಿ...**ಇನ್ನು ಈ ಗಂಡಸ್ಕತ್ರಿ ಈ ಸ್ತ್ರೀಮುಖವ್ಯಾಘ್ರದ ಬಾಯಿಗೆ ನಾನು ತುತ್ತಾಗೋದಿರಲಿ, ನನ್ನ ಸ್ನೇಹಿತನೂ ಅವನಿಗಿರೋ ಮಗನೂ ತುತ್ತಾಗದ ಹಾಗೇ safeguard ಮಾಡೋದೊಂದೇ ಈಗ ನನ್ನ ಧರ್ಮ!**

[ಹೊಗೆಯನ್ನು ಬಿಡುತ್ತ ಯೋಚಿಸುತ್ತಿರುವನು]

(ಅಶ್ವತ್ಥನು ಬರುವನು)

ಅಶ್ವತ್ಥ ! Sorry ರಂಗೂ! ಇಷ್ಟು late ಆದ್ದಕ್ಕೆ...ಇದೇನಿದು...worried ಆಗಿಧೀಯಾ...?

ರಂಗಣ್ಣ : ಏನೂ ಇಲ್ಲ!.. ನಾಳೆ ನನ್ನ drama: tragic end ಊ. ರಿಹರ್ಸಲ್ಲೂ ಮಾಡ್ತೇನೇ ಅಂತೊಪ್ಕೊಂಡಿದ್ದೆ. ನಮ್ಮ conductor ಹತ್ರ. ಅದನ್ನು ಮರೆತು ಇಲ್ಲಿಗೆ ಬಂದ್ರೂ, ಈ atmosphere ನಲ್ಲಿ ನಾನೇ ಒಂದ್‌ಸಾರ್ತಿ ರಿಹರ್ಸಲ್ ಮಾಡ್ಕೊಬೇಕೂಂತ ಯೋಚಿಸ್ತಾ ಇದ್ದೆ... ಆದರೆ ಇನ್ನೊಬ್ಬ Partner ಊ ಇದ್ದಿದ್ರೆ...perfect ಆಗಿರೋದು.

[ಹೊಗೆಯನ್ನು ಬಿಡುವನು]

ಅಶ್ವತ್ಥ : Why not get on ?

ರಂಗಣ್ಣ : ಹಾಗಾದ್ರೆ co-operate ಮಾಡ್ತೀಯಾ...ನಿಜವಾಗಿ?

ಅಶ್ವತ್ಥ : Certainly !...ನನಗ್ಯಾವಾಗಲೂ ರಂಗೂ, ನಿನ್ನ brilliance on-the-stageಉ ಎಷ್ಟರಮಟ್ಟಿಗೆ extempore ಉ...ಎಷ್ಟರಮಟ್ಟಿಗೆ practised ಊಂತ wonder ಮಾಡ್ತಿದ್ದ ನನಗೆ ನಿನ್ನ ಈ ರಿಹರ್ಸಲ್ ನೋಡ್ಬೇಕೂಂತ ಅನ್ನಿಸುತ್ತೆ.

ರಂಗಣ್ಣ : ನೋಡು! ಆದ್ರೆ on one condition. ಯಾಕೇಂದ್ರೆ...situation seriousoo...ಮರ್ಡರ್‌ಸೀನೂ ! (murder sceneoo) !

ಅಶ್ವತ್ಥ : Condition ಏನೊ! ?

ರಂಗಣ್ಣ: ಏನೂ ಇಲ್ಲ...ನೀನು ಸುಮ್ಮನೆ ಸೋಫಾ ಮೇಲೆ ಮಲಕ್ಕೊಂಡಿರಬೇಕು, ಒಂದ್ five minutes ಉ...during that time ನಾನು ಏನೇ ಮಾತನಾಡ್ಲಿ, ಎಷ್ಟು ತಾನೇ ಕಿರಿಚಿಕೊಳ್ಲಿ...ಒಂದನ್ನೂ ಗಮನಿಸದೆ ತೆಪ್ಪನಿರಬೇಕು. ಮಧ್ಯದಲ್ಲಿ disturb ಮಾಡಿದ್ರ್ಯೋ... ನಾನು ರಂಗಣ್ಣ, ನೀನು ಅಶ್ವತ್ಥ; ನಾನು ಗೆಸ್ಟು, ನೀನು ಹೋಸ್ಟು, ಅಂಜೋದು ಜ್ಞಾಪಕಕ್ಕೆ ಬಂದು ನನ್ನ atmosphere ಕೆಟ್ಟುಹೋಗುತ್ತೆ. ನಾನು murdereroo...ನನ್ನ ಕೆಲಸದಲ್ಲಿ ನನ್ನ actionsoo ನನ್ನ voiceoo ಕೇಳಿ ನೀನು ಹೆದರ್ಬಾರ್ದು. Quiet ಆಗಿ ಬಿದ್ದುಕೊಂಡಿರ್‌ತೀಯಾ ...Promise ಏ?

ಅಶ್ವತ್ಥ : ಹೋ! ready !

[ಅಶ್ವತ್ಥನು ಸೋಫಾದ ಮೇಲೆ ಮಲಗಿಕೊಳ್ಳುವನು]

ರಂಗಣ್ಣ : (ದೀಪವನ್ನು ಸಣ್ಣದು ಮಾಡಿ) Low light ಊ!!

[ಗಟ್ಟಿಯಾಗಿ]

You have no right to keep her here...ನನ್ನ ಹೆಂಡ್ತಿ ಅವಳು! ನಿಂಗೆ ಹಕ್ಕಿಲ್ಲ !...ಹಯ್ಯೋ...ಹಯ್ಯೋ...ಹಯ್ಯೋ-ಹಯ್ಯೋ-ರಂಗಣ್ಣ-ಬೇಡ-ಬೇಡ-ಬೇಡ-ಬೇಡಾ... Be damned.

(ಸುತ್ತಮುತ್ತಲಿರುವ ಕುರ್ಚಿ, ಮೇಜು ಇತ್ಯಾದಿಗಳನ್ನು ತಳ್ಳಿ, ದಬ್ಬಿ ನೂರಾರು ಜನಗಳ ಗಲಾಟೆಯನ್ನು ಹೊರಡಿಸುತ್ತಾ) ಸಾಯಿ...ಸಾಯಿ...ಅಯ್ಯೋ-ಅಯ್ಯೋ-ಅಯ್ಯೋ-ಅಯ್ಯೋ-ಅಯ್ಯೋ-ಆ

(ಅಶ್ವತ್ಥನ ಕೊರಳಿನ ಮೇಲೊಂದು ದಿಂಬನ್ನಿಟ್ಟು ಅದುಮಿ, ಮುಖದ ಮೇಲೆ ಒಂದು ಟವಲನ್ನು ಮುಚ್ಚಿ, ಮೆಲ್ಲನೆ ಹಲ್ಲುಗಳ ಸಂದಿಯಲ್ಲಿ)

ಸುಮ್ಮ್‌ನಿರು!! Part of my rehearsal !!

[ಒಂದು ನಿಮಿಷಪೂರ್ತಿ ಕೋಣೆಯಲ್ಲಿ ನಿಶ್ಶಬ್ದ]

(ಬಾಗಿಲು ಮೆಲ್ಲನೆ ತೆರೆಯುವುದು. ಆಸೆ, ಸಂತೋಷ, ಕೊರತೆ, ಮತ್ತು ಜಯ ಇವುಗಳನ್ನು ಕಣ್ಣಿನಲ್ಲಿ ಹೊಳೆಯಿಸುತ್ತಾ ಹಾವಿನಂತೆ ಮೆಲ್ಲನೆ ಆಕೆಯು ಒಳಗೆಸರಿದು ಬರುವಳು. ರಂಗಣ್ಣನು ದೀಪವನ್ನು ಹೆಚ್ಚಿಸುವನು.]

ಆಕೆ : [ಗಟ್ಟಿಯಾದ ಪಿಸುಮಾತಿನಲ್ಲಿ]

ಆಯ್ತೆ?...ಆಗಿಹೋಯ್ತು? ಎಲ್ಲಾ ಆಗಿಹೋಯ್ತೆ?

ರಂಗಣ್ಣ: ಹೌದು! ಎಲ್ಲಾ ಆಗಿಹೋಯ್ತು. ಪೋಲೀಸಿನೋರ ಹೆದರಿಕೇನೂ ಇಲ್ಲ!...ಕುತ್ತಿಗೇನ ಒಸಕಿದ ನನ್ನ ಬೆರಳುಗುರ್ತುರ್ನ ಕಂಡುಬರದಹಾಗೆ ಮುಚ್ಚಿಟ್ಕೊಂಡು...ಎಲ್ಲಾ ಆಗ್ಹೋಯ್ತು!...ಈಗ ಮುಂದಿನ ಕ್ರಮ...?

[ಆಕೆಯು ಸೋಫಾ ಬಳಿಗೆ ಬರಲುದ್ಯುಕ್ತಳಾದ ಒಡನೆಯೇ, ರಂಗಣ್ಣನು ಮುಖದ ಮೇಲಿನ ಬಟ್ಟೆಯನ್ನು ಅರ್ಧ ತೆಗೆದು. ತಾನೇ ಮುಖವನ್ನು ನೋಡಲಾರದೆ ಅಸಹ್ಯದಿಂದಲೂ ಭಯದಿಂದಲೂ ಬಟ್ಟೆಯನ್ನು ಪುನಃ ಮುಖದ ಮೇಲೆಯೇ ಕೊಡುವುವನು.]

ಈಕೆ : [ಮುಖವನ್ನು ನೋಡಲು ಹೆದರಿ, ದೂರಸರಿದು]

ಮುಂದಿನ ಕ್ರಮಾ...?...ನೀವೇ ಹೇಳಿ!

ರಂಗಣ್ಣ : ಈಗ...ಡಾಕ್ಟರಿಗೆ ಹೇಳಿಕಳುಹಿಸಿ ಇವರ heart weak ಆಗಿರೋದ್ನನ್ನು shocks ಊಂದ್ರೆ ಸಾಯುತಾರೇಂತ ಡಾಕ್ಟ್ರು ಹೇಳಿದ್ರೂಂದ್ಮೆಲ್ಲಾ!...ಅತನ್ನೇ ಕರಿಸಿ ಹಾಗೇ ಆಗ್ಹೋಯ್ತೂಂತ ಆತನ ಕೈಲಿ ಸರ್ಟಿಫಿಕೇಟು ತಕ್ಕೊಳ್ಳೋದೇ ಅಲ್ವೆ...ಕ್ರಮ....?

ಈಕೆ : [ಗಟ್ಟಿಯಾಗಿ]

ಡಾಕ್ಟರಿಗಲ್ಲಾ ಹೇಳಿಕಳಿಸೋದು! ಪೋಲೀಸಿಗೆ!...

[ಕಿರಿಚುತ್ತ]

ಬೋರಾ! ಬೋರಾ! ಬೋರಾ! ಏನೋ ಆಗಿಹೋಗಿದೆ ಯಜಮಾನರಿಗೆ! ಖೂನಿ! ಖೂನಿ! ಖೂನಿ! ! ! ಬೋರಾ! ಬೋರಾ!

[ಬೋರನು ಓಡಿ ಬರುವನು]

ಬೋರ: ಏನ್‌ರವ್ವ!

ಈಕೆ: ಪೋಲೀಸ್ನೋರ್ನ ಕರಕೊಂಡು ಬಾ! ಖೂನಿ! ಖೂನಿ!

[ಬೋರನು "ಅಯ್ಯೋ ದೇವರೇ !" ಎಂದು ಕೂಗುತ್ತಾ ಹೊರಗೋಡುವನು]

ರಂಗಣ್ಣ : ಪೋಲೀಸ್ ಯಾಕೆ ಈಗ? !

ಈಕೆ : ಹ ! ಹ್ಹ ! ಹ್ಹ ! ಜೋಪಾನವಾಗಿ ಸಾಗಿಸೋಕೆ...ನಿಮ್ಮನ್ನ! Heart weak ಆದೋರು ಪ್ರಾಣಸ್ನೇಹಿತನ್ನ ಪಕ್ಕದಲ್ಲಿಟ್ಟುಕೊಂಡು ಸತ್ತರೆ ಕೋಣೆ ಸಾಮಾನೆಲ್ಲಾ ಹೀಗುರುಳಿರುತ್ತೆಯೆ?

ರಂಗಣ್ಣ: (ಅವಸರವಸರವಾಗಿ ಕೋಣೆ ಸಾಮಾನುಗಳನ್ನು ಸರಿಯಾಗಿಡಲುಪಕ್ರಮಿಸುವನು.)

ಈಕೆ: ಅದೇನೂ ಪ್ರಯೋಜನವಿಲ್ಲ! ಬೋರ ನೋಡಿಬಿಟ್ಟ...ಕೋಣೆ ಇದ್ದ ಸ್ಥಿತಿ! ಕೋರ್ಟಿನಲ್ಲಿ ಅದೇ ಕೈಫಿಯತ್ತು ಕೊಡ್ತಾನೆ.

[ರಾಕ್ಷಸಿಯಂತೆ ನಗುತ್ತಾ]

ಹ್ಹ! ಹ್ಹ! ಹ್ಹ! ಅಬ್ಬಾ! ಇದಕ್ಕೆ ನಾನು ಕಾದಿದ್ದದ್ದು...ಯಾವಾಗ ಈ ಮುದಿಗೊಡ್ಡು ಸತ್ತು, ವಿಲ್ಲಿನಲ್ಲಿ ಬರೆದಿಟ್ಟ ಮೂವತ್ತು ಸಾವಿರ ನನ್ನ ಕೈಸೇರತ್ತೇಂತ!...ನಿಮ್ಮ ಹೆದರಿಕೆ ಒಂದೇಟು ನನಗಿದ್ದದ್ದು! ...ನನ್ನ ಹಾಳು ಚರಿತ್ರೇನ ಎಲ್ಲಿ ಹೊರಗೆ ಹಾಕಿಬಿಡುತೀರೋ ಅಂತ! ಈಗ ಆ ಭಯಾನೂ ಇಲ್ಲ!

ರಂಗಣ್ಣ : ಯಾಕಿಲ್ಲ?...ನನಗೆ ಬಾಯಿಲ್ಲವೇ ಹೇಳೋಕೆ...ಹತ್ತು ಜನದ ಮುಂದೆ...?

ಈಕೆ: ಈಗಿದೆ...ಆದ್ರೆ ಪೋಲೀಸಿನೋನು ಬಂದೂ ನಿಮ್ಮ ಬಾಯಿಮುಚ್ಚಿಸೀ, ಕೈಗೆ ಕಂಕಣ ತೊಡಿಸೀ. ಮಾವನಮನೆ ಸೇರಿಸಿ ಮೊಕದ್ದಮೆ ಆಗಿ, **ಗಲ್ಲಿಗೆ** ಕಳಿಸೋವಾಗ ಇರೋದಿಲ್ಲಾ ನಿಮಗೆ ಈ **ಬಾಯಿ!** ನಿಮ್ದೇ ಉಪಕಾರದಿಂದ ನನ್ನ ಕೈಸೇರೋ ಆಸ್ತಿ ಜೊತೇಲಿ, ಕ್ಷಯರೋಗದಿಂದ ಈಗಲೋ ಆಗಲೋ ಸಾಯೋ ಆ ಹುಡುಗನ ನಲವತ್ತು ಸಾವಿರಾನೂ ನನ್ನ ಕೈಸೇರಿಸೋಕೆ, ಆ ಹುಡುಗನ ಕುತ್ತಿಗೇನೂ ಹೀಗೇ ಕಿವಿಚಿಬಿಟ್ರೆ...ಮಹದುಪಕಾರ! ದೇವರು ಇದಕ್ಕೇ ನಿಮ್ಮನ್ನ ಈ ರಾತ್ರಿ ಈ ಮನೇಗೆ ಕಳುಹಿಸಿದಹಾಗೆ ಆಯ್ತು.

ಇನ್ನು ನೀವು ಆಯ್ತು, (ಹಣವನ್ನು ತೋರಿಸುತ್ತಾ) ನೀವು ಖೂನಿಮಾಡಿದ ಈ ಗೊಡ್ಡು ಹೆಣವಾಯ್ತು...ಪೋಲೀಸು ಆಯ್ತು...ಕೋರ್ಟು, ಕಛೇರಿ, ಗಲ್ಲಾಯ್ತು! ! ! ...ಅಬ್ಬಾ! ಈ ಮುದಿ ಗೊಡ್ಡು...!

[ಅಶ್ವತ್ಥನು ನಿಧಾನವಾಗಿ ಮೇಲಕ್ಕೆ ಎದ್ದು ಕೂಡುವನು]

ಈಕೆ : (ಚೀರಿ ಭಯದಿಂದ ತನ್ನ ಮುಖವನ್ನು ಕೈಗಳಲ್ಲಿ ಮುಚ್ಚಿಕೊಂಡು...ಬಿಕ್ಕಿ ಬಿಕ್ಕಿ ಅಳುವಳು]

ಬೋರ: (ಓಡಿಬಂದು) ಬಂದವ್ನವ್ವ ಪೋಲೀಸಿನೋನು!

[ಕೋಣೆಯಲ್ಲಿ ಯಜಮಾನರನ್ನು ನೋಡಿ ಅವಾಕ್ಕಾಗಿ ನಿಲ್ಲುವನು]

ಅಶ್ವತ್ಥ : (ಸಿಗರೇಟಿನ ಪ್ಯಾಕನ್ನು ಮೇಜಿನಿಂದ ತೆಗೆಯುತ್ತ) ಆ ಪೋಲೀಸಿನವನಿಂದ ಐ. ಜಿ. ಸಾಹೇಬರು ಊರಲ್ಲಿದ್ದಾರೆಯೋ ಇಲ್ಲವೇ ತಿಳುಕೊಂಡು ಅವನ್ನ ಕಳಿಸಿ ಬಿಟ್ಬಾ... ...

[ಒತ್ತಿಹೇಳುತ್ತ]

ಅವ್ಮಾ ಅವರು ಹೊರಗೆ ಹೋಗ್ತಾರೇ! ಹೋದ ಮೇಲೆ ಗೇಟು ಮುಚ್ಚಿ ಬಾಗಲು ಹಾಕ್ಕೊಂಡು ಮಲಕ್ಕೊ!

(ಆಕೆಯು ಬಿಕ್ಕಿ ಬಿಕ್ಕಿ ಅಳುತ್ತ ಹೊರಗೆ ಹೋಗುವಳು. ಬೋರನು ಹಿಂದೆಯೇ ಹೋಗುವನು)

(ಅಶ್ವತ್ಥನು ಉಕ್ಕಿಬರುವ ಉದ್ವೇಗವನ್ನು ಮನಸ್ಸಿನಲ್ಲಿಯೇ ಹಿಡಿದಿಡಲಾರದೆ ಅಲ್ಲಿಯೇ ಗೋಡೆಗೆ ತಗುಲಿಸಿರುವ ಸಣ್ಣ ಮಗುವಿನ ಪಟವೊಂದನ್ನು ಕೈಯಲ್ಲಿ ತೆಗೆದುಕೊಂಡು ಅದನ್ನೇ ನೋಡುತ್ತ ಕುರ್ಚಿಯಮೇಲೆ ಕೂಡುವನು. ರಂಗಣ್ಣನು ನಿಧಾನವಾಗಿ ಸಿಗರೇಟನ್ನು ತೆಗೆದು ಹಚ್ಚಿ ಒಂದ್ಸಾರ್ರಿ ಹೊಗೆಯನ್ನು ಬಿಟ್ಟು ಅದೇ ಕುರ್ಚಿಯ ಕೈಯಮೇಲೆ ಊರಿ ನಿಲ್ಲುವನು. ಒಳಗಡೆಯಿಂದ ಚಿಕ್ಕ ಹುಡುಗನು ಅತಿಯಾಗಿ ಕೆಮ್ಮುವುದು ಕೇಳಿಬರುವುದು. ಒಳಗೆ ಬಂದ ಬೋರನು ಬೇಗನೆ, ಸದ್ದು ಕೇಳಿ ಬಂದ ಬಾಗಿಲ ಕಡೆಗೆ ಹೋಗುವನು)

[ಪರದೆಯು ನಿಧಾನವಾಗಿ]

ವೈದ್ಯನ ವ್ಯಾಧಿ

ಅಥ್ವಾ

ನೆರೆಹೊರ್ಕೆ ನೆರೆಹೊರ್ಕೆನೇವೇಯೋ!

ಪಾತ್ರಗಳು

ಈತ	ರಂಗಣ್ಣ
ಈಕೆ	ಸೀತಮ್ಮ
ಈಕೆಯ ತಾಯಿ (ವಿತಂತು)	ಸಾವಿತ್ರಮ್ಮ
ನೆರೆಯಾತ	ಸುಬ್ಬಣ್ಣ
ನೆರೆಯಾಕೆ	ಪಾರ್ವತಮ್ಮ
ನೆರೆಯಾಕೆಯ ತಾಯಿ (ವಿತಂತು)	ಲಕ್ಷ್ಮೀದೇವಮ್ಮ

ಸ್ಥಳ : ಬುಳ್ಳಾಪುರದ ಬೀದಿ [ಇವರ ಅಕ್ಕಪಕ್ಕದ ಮನೆಗಳ ಜಗಲಿಗಳು. ಮನೆಗಳ ಮುಂದೆ ಮುನ್ಸಿಪಲ್ ತೊಟ್ಟಿ]

ರಂಗ—೧

[ಪರದೆಯು ಏಳುತ್ತಲೆ ಸುಬ್ಬಣ್ಣನು ಬಲಗಡೆಯ ಜಗಲಿಯ ಮೇಲೆ ನಿಂತು ಕೈ ತೊಳೆಯುತ್ತ, ಮುನಿಸಿಪಲ್ ತೊಟ್ಟಿಯಲ್ಲಿ ಪಾರ್ವತಮ್ಮನು ಎಂಜಲೆಲೆಯನ್ನು ಎಸೆಯುವ ಸಮಯಕ್ಕೆ ಸರಿಯಾಗಿ ರಂಗಣ್ಣನು ಪಕ್ಕದ ಮನೆಯ ಜಗಲಿಯಿಂದ ಅದೇ ತೊಟ್ಟಿಯಲ್ಲಿ ತನ್ನ ಎಂಜಲೆಲೆಯನ್ನು ಹಾಕುವನು. ನಂತರ ಸರ್ವರೂ ನಿಷ್ಕ್ರಮಣ ಅವರವರ ಮನೆಯೊಳಕ್ಕೆ. ಒಂದು ನಿಮಿಷವಾಗುತ್ತಲೆ ರಂಗಣ್ಣನೂ ಸುಬ್ಬಣ್ಣನೂ ತಮ್ಮ ತಮ್ಮ ಮನೆಯಿಂದ ಹೊರಗೆ ಬಂದು, ಸುಬ್ಬಣ್ಣನು ಮನೆಯನ್ನು ಬಿಟ್ಟು ತಿಪ್ಪೆ ತೊಟ್ಟಿಯನ್ನು ಹಾಸಿ ರಂಗಣ್ಣನ ಮನೆಯನ್ನು ಸೇರುವನು.]

ಸುಬ್ಬಣ್ಣ: ಆಯ್ತೆ ಊಟ?...ಕೇಳೋದೇನೂ...ನಾನು ಕೈತೊಳ್ಕೊ...ನಮ್ಮಾಕೆ...ನನ್ನೆಂಜ್ಲೆಲೇನ ತೊಟ್ಟೀಲಿ ಹಾಕೋವಾಗ್ಲೆ...ತಾವೂನೂ...ಕ್ಷಮಿಸ್ಸಿ...ತಮ್ಮೆಂಜ್ಲೆಲೇನ ತಾವೇ ತೊಟ್ಟೀಲಿ...ಇದೆಲ್ಲಾ ಯಾಕೇ...ಒಟ್ನಲ್ಲಿ ನಮ್ಮಿಬ್ರಿಗೂ ಊಟಾ ಆಯ್ತು! (ಜಗಲಿಯಮೇಲೆ ಕುಳ್ಳುತ್ತಾ) ಕೂತ್ಕೊಳ್ರೀ! ಆಯ್ತೋ ತಾಂಬೂಲ?

ರಂಗಣ್ಣ: ನೋಡೀ! ಇವತ್ತೇನೋ...ಯಾವತ್ತೂ ಇಲ್ಲದ...ಹಲ್ನೋವೂ...

ಸುಬ್ಬಣ್ಣ: ಗೊತ್ತು...ನಿಮಗೆ ಇಂಥಾ...ಹಲ್ನೋವು ಬಾರಿಬಾರಿಗೂ ಬರ್ಲೀ ಬರುತ್ತೇಂತ ನಿರ್ಧರಿಸ್ಕೊಂಡೇ ಬಂದದ್ದು ನಾನು...ಔಷಧ ಸಮೇತ; (ಕೈಯಲ್ಲಿದ್ದ ಪೊಟ್ಟಣವನ್ನು ಬಿಚ್ಚುತ್ತಾ) ಹಾಕ್ಕೊಳ್ಳಿ ಚಿಗ್ರೆಲೆ! ಅಂಬಾಡಿ ಅಲ್ಲಾ...ಖಾಸಾ ಮೈಸೂರು; ಸುಣ್ಣ...ನಂಭಾವಮೈದ ದಫೇದಾರ...ಪೋಲೀಸು...ಮದ್ದೂರ್ಕಡೆ;...ಅಡ್ಕೆ ನಮ್ಮತ್ತೇಗ್ಬರೋ ಬಾಬ್ತು...ಮಲ್ನೀಮೆ ಕಡೇಯಿಂದ...ಇನ್ನಾಕಿ ಜಾಪತ್ರೆ, ಜಾಯಿಕಾಯಿ, ಜಾಪಾಳ, ಕೊಬ್ರಿ, ಹಾಡಲ್ಬರೋಹಾಗೆ "ಪುನಗು, ಜವ್ವಾಜಿ, ಕೇಸರಿ, ಕಸ್ತೂರಿ" ಈ ಗಲಾಟೆಗಳೆಲ್ಲಾ...ನಮ್ಮಾಕೇಡು...ನಂಗ್ಯಾಕ್ಬೇಡು...ಹಾಕ್ಕೊಳ್ಳಿ... ಸಂಕೋಚ್ವೇನು...; ಹೇಳ್ತೀನೆ, ನೆರೆಹೊರ್ಕೆ...ನೆರೆಹೊರ್ಕೇನೇ ಸ್ವಾಮಿ!...ಈ ಅನ್ಯೋನ್ಯ ಧರ್ಮಾನ ವ್ಯವಸ್ಥೆಗೆ ತರೋದು ನನ್ನ ಧರ್ಮಾಂತ ತಿಳ್ದೇ ಬಂದಿರೋದು ನಾನು ಈಗ ಇಲ್ಲಿಗೆ (ಮಾತನಾಡಲು ಉದ್ಯಮಿಸುವ ರಂಗಣ್ಣನಿಗೆ ಅಡ್ಡಮಾತಾಗಿ) ಹಯ್ಯೋ...ಗೊತ್ತು!...ಎಲ್ಲಾ ಗೊತ್ತು. ನಮ್ಮಿಬ್ರ ಮನೇನೂ...ಒಂದೇ ಬಿಲ್ಡಿಂಗು; ಕಂಟ್ರಾಕ್ಟ್ ಕೆಲ್ಸ, ಗೋಡೆಗಳೆಲ್ಲಾ...ಬರೀ ಇಟ್ಟಿಗೆ ಪುಡಿ, ಮಣ್ಣೆತ್ತಿದ ಬಿದಿರು. ನಿಮ್ಮನೇಲಿ ನಿಂಪತ್ನಿ...ನಿಮ್ಮತ್ತೆ ಅವರ್ಗಳ ಗಲಾಟೇಲೀ ನಿಮ್ಮ ಉಸುರು ಉಛ್ವಾಸ ನಿಶ್ವಾಸಗಳೆಲ್ಲಾ...ನಾಯಿಕೆಮ್ಮಾಗೆ ಕೇಳ್ಸರುತ್ತೆ...ನಮ್ಮನೇಲಿ...ಮನಸ್ಸಿಗೆ ತಂದ್ಕೊಬೇಡಿ ಹೇಳ್ತೀ ನಲ್ಲಾಂತ;...ಈ ಎರಡು ಮನೇಲಿ ಇಬ್ರೇ ಗಂಡಸ್ರು! ನಾಲ್ಕ್ಹೆಂಗಸ್ರು...ಆದ್ರೂನೂವೇ...ನನ್ಕೆಲ್ಸ, ನನ್ಸಂಬಳ ಮತ್ತು ನನ್ಚೈತನ್ಯದಿಂದ ನಾನು ನನ್ಪತ್ನೀನ್ನೂ, ಆಕೆ ತಾಯಿನ್ನೂ ಕಾಪಾಡುತ್ತಿರೋ ಹಾಗ್ಯೇ ನಿಮ್ಮನೇಲಿ...ನೀವು ದಿನವೆಲ್ಲಾ...ದನದಹಾಗೆ ದುಡ್ದು...ದಣ್ದು ಸಂಪಾದಿಸಿದ ಸಂಬಳ್ದಲ್ಲಿ...ಜೀವಿಸ್ತಿರೋ ತಂಪತ್ನೀನೂ...ತಮ್ಮನ್ನಂಬಿ ಕೈಹಿಡ್ದ ಪತ್ನೀನೂ ಆಕೆ ತಾಯಿನೂ ಬದುಕಿದ್ರೂನೂವೇ (ಮುನ್ಸಿಪಲ್ ತೊಟ್ಟೀನ ಸೂಚಿಸುತ್ತಾ ಗದ್ಗದ ಸ್ವರದಿಂದ)...ಇದೇ ತೊಟ್ಟೀಲಿ ನನ್ನೆಂಜ್ಲೆಲೇನ, ನನ್ಹೆಂಡ್ತಿ ಈ ತೊಟ್ಟೀಲಿ ಎಸೀತಿರೋವಾಗ ತಮ್ಮೆಂಜ್ಲೆಲೇನ ತಾವು ತಾವೇ ಅದೇ ತೊಟ್ಟೀಗೆ...ತಮ್ಮನೇಲಿ ತಮ್ಮಿಂದ ಬದ್ಕಿರೋ ಇಬ್ಬರ್ಹೆಂಗ್ಸಿದ್ರೂನೂವೆ...ತಾವೇ ತಮ್ಮೆಂಜ್ಲೆಲೇನಾ...ಈ ತಿಪ್ಪೆ ತೊಟ್ಟೀಲಿ ಹಾಕ್ತಿದ್ದನ್ನ ನೋಡಿ ನನ್ಗೆ ಯಾಕೋ...ಕೋಪಿಸ್ಕೊ ಬೇಡಿ...ಮನೆ ಯಜಮಾನ್ನ ಮನೆ ಯಾತಸ್ನು ಅಂಬೋದ್ನ ಮರ್ತು 'ಜಡಭರತನೋ' ಇಲ್ಲಾ 'ಶುಕಬ್ರಹ್ಮಋಷಿಯೋ'...ಈ ಕಾಲ್ದಲ್ಲಿ...ಈ ಕಲಿಯುಗ್ದಲ್ಲಿ ಯಾವ ಪುರಾಕೃತ ಕರ್ಮಾನೊ...ಈ ಪುರಾಣದಲ್ಬರೊ ದೊಡ್ಡ ದೊಡ್ಡ ತಪಸ್ವಿಗಳ್ಗೆಲ್ಲಾ ಒಂದು ದೊಡ್ಡ ಖಬು...ಇವರ ಬ್ರಹ್ಮಚರ್ಯದ ಗಲಾಟೇಲಿ...ಹೆಂಗಸಿನ ಸ್ವಭಾವ ತಿಳಿಯೋ ಬಾಬ್ತನಲ್ಲಿ ಇವ್ರೆಲ್ಲಾ ಸೊನ್ನೇಂಬೋದ್ನ ತಿಳ್ಕೊಂಡೇ...ತಮ್ಮ ಸಾತ್ವಿಕ ಸ್ವಭಾವಾನ ತಿಳಿದ್ರೂನೂವೇ ಒಟ್ನಲ್ಲಿ...ಕೋಪಿಸ್ಕೋಬೇಡಿ...ದ್ರೌಪದಿಯಿಂದ ಪಾಂಡವರು ಕೆಟ್ಟಿದ್ದೂ ಸೀತೆಯಿಂದ ರಾಮ ರಾಕ್ಷಸ್ರ ಪಾಲಾದ್ದೂ...ಹೇಳೋಕಲ್ಲಾ ಬಂದಿರೋದ್ನಾನು...ಮನುಷ್ಯ...ವ್ಯಕ್ತಿ...ಪುರುಷ...ಹೇಳ್ತೀನಿ. ಗಂಡ್ಸು

ತಾನು ದುಡ್ಡು ತಂದ್ಹಾಕಿದ ಧಾನ್ಯ ತರಕಾರಿ ಇತ್ಯಾದಿಗಳ್ನ ಪಚನಮಾಡಿ...ಲೋಪಾಮುದ್ರೆ, ಅರುಂಧತಿಗ್ಳಂತೆ 'ಅಗ್ನಿ ಏದುರ್ಗೆ' ಪತಿ. ತನ್ಕುತ್ತಿಗೆ ಕಟ್ಟಿದ ತಾಳೀ ಅಂಬೋ ಏಣೀಮೂಲ್ಯವಾಗಿ ಅತ್ನ ಶಿಶ್ರೂಷೆ. ಅತ್ನ ಸೇವೆ...ಸಂತೋಷ ಈ ಮೆಟ್ಟುಗ್ಳಿಂದ್ಲೇನೇವೇಯೋ ಆ ಏಣೀ ತುದೀಲಿರೋ...ಲಕ್ಷ್ಮೀ. ಸರಸ್ವತಿ, ಚಾಮುಂಡಿ ಈ ಬಾಬ್ತು ಹೆಂಗ್ಸ್ರ ದೇವತೆಗಳ ದರ್ಶನಾಂಬೋ ತತ್ವಜ್ಞಾನ ಮುಕ್ತಿ... ರೇಗ್ಬೇಡಿ...ತಿಂಗಳಿಗೆ ಏಪ್ಪತ್ತೈದು ರೂಪಾಯಿ ಸಿಂಬಳ...ಸಂಪಾದ್ಸೋ ಐವತ್ತು ರೂಪಾಯಿ... ಮಾವನ ಮನೆ ಕಡೆ ಬಂಬಲ್ಪಿದೆ...ಆದ್ರೂನೂವೆ...ನಮ್ಮನೆ ಹೆಂಗಸ್ರು ನನ್ಗೆ...ನನ್ನಾಗಕ್ಕೆ...ನನ್ನ ಸಂತೋಷ ಸೌಕರ್ಯಗಳಿಗೆ ತಲೆಬಾಗಿ ನಡೀತಿರೋವಾಗ...ರೀತಿ...ರಂಗ...ಗತಿ...ಗಮನ...ಕೆಟ್ಟು. ನಿಮ್ಮಿಂದ್ಲೇ...ರೇಗ್ಬೇಡಿ...ನಿಮ್ಮಿಂದ್ಲೇ...ಬದುಕಿರೋ...ಈ ಎರಡು ಹೆಂಗಸ್ರು...ಸ್ತ್ರೀ ಧರ್ಮ ರೀತೀನ ಮರ್ತು ನಿಮ್ಮಂಜ್ಲೇಲೇನಾ ನೀವೇ ಈ ಮುನಿಸಿಪಲ್ ತೊಟ್ಟೀಲಿ...ನನಗೇನೋ...ಭೂದೇವಿ ಬಿರಿಬಾರ್ದೇ...ಆಕಾಶ ಒಡಿಬಾರ್ದೇ...ಸಿಡ್ಲು...ಕ್ಷಿಪ್ಸ್ಲ: ಇದೆಲ್ಲಾ...ಇದೆಲ್ಲಾ ಅಂದ್ರೇನೂ. ಗೃಹಸ್ಥ ಗೃಹದ ಆಡಳಿತ. ಇಂದ್ರ ಸ್ವರ್ಗದ ಆಡಳಿತ. ಹೀಗೆ ಒಂದೊಂದ್ಲೋಕಕ್ಲೂ ರಾಣೀಗ್ರು ಲಕ್ಷ್ಮೀ. ಸರಸ್ವತಿ, ಪಾರ್ವತಿ. ಇಂದ್ರಾಣಿ ಎಂಥೆಂಥಾ ಹೆಣ್ಣು ಪ್ರಭೃತಿಗಳು ಇದ್ರೂನೂವೇ ಆಯಾ ಲೋಕಕ್ಕಾಗಲೀ ರಾಜ್ಯಕ್ಕಾಗ್ಲೀ, ಗೃಹಗಳಿಗಾಗ್ಲೀ ಮುಖ್ಯಪ್ರಾಣ ಗಂಡ್ಸೇ ಹೊರ್ತು ಹೆಂಗ್ಸಲ್ಲ ಅಂಬೋದ್ನ ಮರ್ತು ಮಹರ್ಷಿಗಳ ಹಾಗೆ...ಮಹರ್ಷಿಗಳೇನೂ...ಜಾತಾ...ಬಾಕಿ...ಜಮಾಬಿರ್ಜು...ತಿಳೀದೇ. ಜಡಭರತನ ಹಾಗೆ...ಕ್ಷಮಿಸಿ...ರೇಗ್ಬೇಡಿ...

ರಂಗಣ್ಣ: (ಅಡ್ಡಮಾತಾಗಿ) ಬಯ್ಯಿರಿ...ಬಯ್ರಿ...ಬೇಕಾದಷ್ಟು ಬಯ್ರಿ...ನೀವ್ಹೇಳೋದೆಲ್ಲಾ ಮಂದಟ್ಟಾಗುತ್ತೆ...ನನಗೆ ತಿಳಿಯದ್ದೇನೂ ನೀವ್ಹೇಳ್ಲಿಲ್ಲ...ಆದ್ರೇನ್ಮಾಡ್ಲೀ...ಲಾಗಾಯ್ತಿಂದ ಹ್ಯಾಗೊ ಕಾಣೆ ಹೀಗ್ಬಂತು...ಬಂದ್ಬಿಡ್ತು...ಬಂದ್ಬಿಟ್ಟಿದೆ...ಬಂದ್ಬಿಟ್ಟಿದ್ನ ಕೊನೇವರೆಗೂ ಏಗೋದೇ...ಅಲ್ವೆ... ಗಂಡಸಿನ...ಗುಣ...?

ಸುಬ್ಬಣ್ಣ: ಏಗೋದೂ...? ಎಷ್ಟುವರ್ಗೆ ಏಗೋದ್ರೀ...? ಎಷ್ಟುವರ್ಗ್ರೀ ಏಗೋದೂ! ಅಲ್ರೀ ಗಂಡ್ಸು ಸಂಪಾದ್ಸಿತಂದ್ಹಾಕ್ದ ಸ್ವತ್ನ ತಿಂದೂತಿಂದೂ ತೇಗಿ ಬೆಳೆದ ಮೇದಸ್ಸು ತನಗೆ ತಾಳಿ ಕಟ್ಟಿದ ಗಂಡ ತನ್ನೆಂಜ್ಲೇಲೇನ ತಾನೇನೇವೇ ಮುನಿಸಿಪಲ್ ತೊಟ್ಟೀಲಿ ಹಾಕೋ ಸ್ಥಿತೀಗೆ...ಹೆಂಡ್ತಿ ತನ್ನ ತರೋ ವರಿಗೂ ಏಗೋದೇನ್ರೀ...ತಮ್ಮನ್ನ ತಾಮ್ರತರ್ರ್ಗವೇ...ತಮ್ಮ ಮೇಲೆ...ಮಮತೆ...ಮರ್ಯಾದೆ ಇಟ್ಕೊಂಡಿರೋ ಈ ಪಾಪಿ. ನಾನು; ನಿಮ್ಮನ್ನ ಮರೀಲಿಲ್ಲ; ಆದ್ರೆ ಮಮತೆ. ವಿಶ್ವಾಸ. ಪ್ರೇಮ ಬಿಟ್ಟಲ್ಲಿ ತಮ್ಮೇಲಿನ ಭಕ್ತಿ ಅಂಬೋ ಅಸ್ತಿಭಾರದ ಮೇಲೇವೇಯೋ ತಮ್ಮನ್ನ ರೇಗಿಸೋ. ಅಪಾಯಾನ್ನೂ ಮರ್ತು, ದುಡ್ಕಿ...ನಾನು ನನ್ನ ಅಲ್ಪ ಸ್ವಲ್ಪ ಸಂಸಾರಿಕ ಅನುಭವದಿಂದ ತಿಳ್ಕೊಂಡ ಗೃಹಸ್ಥ ಸೌಖ್ಯಾನ ಅನುಭವಿಸ್ತಿರೋ ಸೂಕ್ಷ್ಮ...ಸೂತ್ರ...ಬಿಟ್ಟಲ್ಲಿ...ಗುಟ್ಟು ತಮ್ಗೆ ಸೋಕ್ಸಿ...ಮನೆ ಯಜಮಾನ...ತನ್ನ ಯಜಮಾನ್ಕೆ ಸಾಗಿಸ್ಬೇಕಾದ್ರೆ...ಮನೆ ಹೆಂಗಸ್ರನ್ನ...ಹತೋಟೀಲಿ. ವಸ್ನಲ್ಲಿ ಇಡಬೇಕೂ ಅಂಬೋ ಸೂಕ್ಷ್ಮಾನ್ನ ನನ್ಗೆ ತಿಳ್ದಿರೋ ಹಾಗೆ ನಿಮ್ಗೆ ಉಪದೇಶ ಮಾಡ್ಬೇಕೂಂತ ಬಂದ ನಾನು ನೆರೆಹೊರ್ಕೆ ಅಂಬೋ. ಗಂಡಸ್ರು ಗಂಡಸಿಗೆ ತೀರಸ್ಬೇಕಾದ ಋಣಾನ ತೀರ್ಸೋಕೆ ಬಂದಿರೋದು ನಾನು.

ರಂಗಣ್ಣ: ಹೌದ್ರೀ...ನೀವು ಹೇಳೋದೆಲ್ಲಾ ಸರ್ಯೇ...ಆದ್ರೇ ದಾರಿ ತಪ್ಪೋನು ಅಲ್ಪ ಸ್ವಲ್ಪ ತಪ್ಪಿದ್ರೆ ಅಷ್ಟಿಷ್ಟರಲ್ಲೇ ಸರ್ಪಡ್ಸಬಹುದು: ಆದ್ರೆ ಸಕೀಬೀಡ್ಗೇ ಅಂತ ಹೊರಟೋನು ಹಾರ್ನಹಳ್ಳಿಗೆ ಬಂದು ಸೇರಿರೋವಾಗ ಏನ್ಮಾರೀ...ಏನ್ಮಾನೇ ತೋರ್ಸ್ಲೋದು? ಈಗ ನನ್ನ ಈ ಸ್ಥಿತೀಲಿ...?

ಸುಬ್ಬಣ್ಣ: ಏನ್ಮಾರ್ಕ್ಯೆನ್ರೀ...ನನ್ಮಾರಿ! "ನನ್ಮನೇ ಗಂಡ್ಸು ನಾನು: ಮನೆ ಬಾಡ್ಗೆ ಕೊಡೋನು ನಾನು:...ಮನೆ ದಿನ್ಸು ಧಾನ್ಯ ತರ್ಕಾರಿ ತಂದ್ಹಾಕೋನು ನಾನು:...ಅನ್ನ ನನ್ಹೊಟ್ಟೇಗೂ ತನ್ಹೊಟ್ಟೇಗೂ ಬೇಯ್ಸಿ ಬಡ್ಸೋಳು ನಾನ್ಮಾಳಿ ಕಟ್ಟಿ ತಾನು ಅಗ್ನಿಸಾಕ್ಷಿಯಾಗಿ ನನ್ನೈ ಹಿಡ್ದ ನನ್ಹೆಂಡ್ತಿ:...ಇನ್ನನೇ ಸುತ್ತುತ್ತ ಕೆಲ್ಸಕ್ಕೋ. ಗಂಡಸ್ನೂ ಕಟ್ಕೊಂಡು ದಿಕ್ಕಲ್ದೆ ಪಾಡಿಲ್ದೆ ತನ್ನ್ಯಾಗೇ ನಂಟರ ಆಳಿಯನ್ನೇ ತಾನೂ ನಂಬ್ಕೊಂಡು ವಾರ್ಧಿಕಾನ್ನ ಕಳೆಯೋಕೆ ಅಂತ ಮನೆಮೂಲೇಲಿ ಮುದರ್ಕೊಂಡಿದ್ದಿರೋ ಮುದ್ಕೊಡ್ಡು ನಮ್ಮತ್ತೆ! ಸುತ್ಮುತ್ ಕೆಲಸಕ್ಕೆ ನಗಣೇ ಬಾಜಿ. ಗೋಮುಖ ಇಡೋಕೆ!"...ಇದು

ಕಾಣ್ರೀ ಸ್ವಾಮೀ! ಈದಾರೀನ್ಬಿಟ್ಟು ಪರೀಜೀವೇನು, ಪಾರ್ವ್ತೀ ಏನು, ಪಂಪಾಪ್ರರ್ವೇನು...ಬತೇರಾಂ ಪುರಿವರೆಗೂ ಕಾಲ್ನಟ್ಟಿ ಕಂಗೆಟ್ಟಿದ್ರೂನೂವೇ ನೀವು ಒಂದು ಕ್ಷಣವಾತ್ರ...ಪಂಚಾಕ್ಷರಿ...ಷಡಾಕ್ಷರಿ ಉಪದೇಶ್ಗಳ್ನೀ...ಪ್ರಪಂಚಾನುರುಳ್ಸೋ ದಾರಿ. ದೊಡ್ಡ ದೊಡ್ಡ ಗುರುಗ್ಳೂ ಹಿಂದೆ ನಮ್ಹಿರಿಯರ್ಗೆ ಉಪದೇಶಿಸಿದ ಹಾಗೆ...ನಾನು ನನ್ ಸಂಸಾರಾನ ಆಳೋಹಾಗೆ ನೀವ್ಗೂನೂ ನಾಳೆ ರಾತ್ರಿ ಇಷ್ಟೊತ್ತಿಗೆ ನಿಂಸಂಸಾರಾನ ಆಳೆ ಅನುಭವಿಸೋ ಸೂತ್ರ ಹೇಳ್ಕೊಡ್ತೇನೆ ಸ್ವಾಮಿ! ಆದ್ರೊಂದು ಮಾತು. ರಾತ್ರಿಕಾಲ ಹಬ್ಬ ಬಲ್ಲೂರ ಬಿಡುತ್ತೇ, ನಮ್ಮಾತ್ಮಾನ ನಿಮ್ಮನೆ ಹೆಂಗಸ್ರು ಕಿವೀಗ್ಹಾಕ್ಕೊತೀ ನೆಗದ್ಬಿಟ್ಟಿಗೇನೇ ನಕ್ಷತ್ರಗಳು. ಚಂದ್ರಿಕೆ ಗುಡಿವರ್ಗೂ ನಡದ್ಬಿಟ್ಟು ಬರೋಣ, ಬನ್ನಿ...(ರಂಗಣ್ಣನು ಜಗುಲಿಯನ್ನು ಬಿಟ್ಟು ಆತನನ್ನು ಸೇರಿ ನಡೆಯುತ್ತಿರುವನು) ನೋಡಿ ಸ್ವಾಮಿ! ನಾಳೆ ಸಿಂಬಳ ಎಪ್ಪತ್ತೈದು ರೂಪಾಯ್ ಕೈಗೆ ಬಿದ್ಬಿಡುತ್ತೆ. ನಿಮ್ಮಾಕೆ ತೌರುಮನೆ ಪಟ್ಣ; ಹತ್ರುತ್ರ, ಎರಡು ರೂಪಾಯ್ಲಿ ಆಡ್ಹೋಗುತ್ತೆ ಇಬ್ರೆಂಗಸ್ರ ರೈಲುಛಾರ್ಜು...ಇದರ್ಮೇಲೆ ಅವರೊಳ್ಳಿ ಒಂತಿಂಗಳ್ಜೀವ್ನಕ್ಕೆ ಇಪ್ಪತ್ತೊರು ರೂಪಾಯಿ ಕೊಟ್ಟು ಒಪ್ಸಿದ್ರೂನೂವೇ. ಜಾತಾ ಬಾಕಿ ಐವತ್ತು ರೂಪಾಯ್ನೀ ಒಂತಿಂಗ್ಳು ಜೀವ್ನ ನಿಭಾಯಿಸ್ಕೊಂಡು ಬಿದ್ಕಿದ ಪಕ್ಷಕ್ಕೆ...(ಎನ್ನುತ್ತಾ ರಂಗಣ್ಣನನ್ನು ಕೈ ಹಿಡಿದುಕೊಂಡು, ಇಬ್ಬರೂ ನಿಷ್ಕ್ರಮಿಸುವರು.)

ಸಾವಿತ್ರಮ್ಮ: (ಸುಬ್ಬಣ್ಣನು ಇದುವರೆಗೂ ಮಾತನಾಡುತ್ತಿದ್ದುದನ್ನು ಹೊಂಚುಕೇಳುತ್ತಿದ್ದ ರಂಗಣ್ಣನ ಗೃಹಿಣಿಯೂ ಅತ್ತೆಯೂ. ಗಂಡಸರು ನಿಷ್ಕ್ರಮಿಸುತ್ತಲೂ...ಒಬ್ಬಳ ಮುಖವನ್ನೊಬ್ಬಳು ನೋಡಿ)...ಇದೇನನ್ಯಾಯಾನೇ ಸೀತೂ!...

ಸೀತಮ್ಮ: ಅನ್ಯಾಯ! ಅನಾಹುತಾವ್ಮ! ಸರ್ವನಾಶ! ಈಗ್ಲೇನೇ ಪಕ್ಕದ್ಮನೇಗ್ಹೋಗಿ ಆಕೇನಬ್ಸಿ ...? (ಎಂದು ಚೀತ್ಕರಿಸಿ ಬೀದಿ ಬಾಗಿಲನ್ನು ಬಿರುಸಾಗಿ ತೆಗೆದು ತಾಯಿಯೂ ಮಗಳೂ ಹೊರಬರುವರು)

ಸಾವಿತ್ರಮ್ಮ: ಇದೇನ್ಹುಚ್ಚೀ...?

ಸೀತಮ್ಮ: ಹುಚ್ಚು! ಈಗ ಸುಮ್ನಿರೋದು ಹುಚ್ಚು! ನೀನ್ ಕಿವ್ಡೇಮ್ಮ? ಆ ಶನಿಗಂಡ್ಸು ಹೇಳಿದ್ದು ಕೇಳ್ಲಿಲ್ವೇ ನೀನು? ರೈಲುಛಾರ್ಜು ಕೊಟ್ಟು ಕೈಲಿಪ್ಪತ್ತೊಮ್ರು ರೂಪಾಯಿ ಇಟ್ಟು ನಮ್ಮನ್ನೋಡ್ಸೋದಂತೆ. ಪಟ್ಣಕ್ಕೆ...! ಅದ್ರ ಮಾತ್ನೇನಾದ್ರೂ ಈ ಗಂಡ್ಸು ಕೇಳ್ಕೊಂಡು ಒಂದ್ವೇಳೆ... ನಮ್ಗತಿ ಏನಮ್ಮಾ?

ಸಾವಿತ್ರಮ್ಮ: ಗತಿ? (ತಟ್ಟನೆ ಜಗಲಿಯಮೇಲೆ ಕುಸಿದು ಕುಳ್ಳಿ) ಗತಿ...ಗಗನ್ವೇ ಗತಿ!...ಇದಕ್ಕೆ ನಿನ್ನುಪಾಯ್ವೇನು?

ಸೀತಮ್ಮ: ಈಗ್ಲೇ ಆ ಶನಿಯ ಹೆಂಡ್ತಿನೆಬ್ಬಿ ಮುದ್ಗೊಡ್ತು ಅಂದ್ನಲ್ಲಾ ಆ ಮುದಿ ಪ್ರಾಣೇನ್ನೂ ಎಬ್ಬಿ ಅವರ್ಗ್ಹೇಳಿ..."ನಿಮ್ಮನೇಯಾತನ್ನೆದ್ರಿಕೇಗೆ...ನೀವು ಬೆದರ್ಕೊಂಡು ಮುದರ್ಕೊಂದು ಬಿದ್ದಿದ್ರೂವೇ...ಈ ಪ್ರಪಂಚದಲ್ಲಿರೋ ಹೆಂಗಸ್ರೆಲ್ಲಾ ನಿಮ್ಹಾಗಲ್ಲ; ನಮ್ಮ ಗಂಡಸ್ಗೆ ದುರ್ಬೋಧ್ನೆ ಮಾಡೋಕ್ಹೊರ್ಟಿರೋ ನಿಮ್ಮಾಳು ಗಂಡಸ್ನ ಕಟ್ಬಾಡ್ನಲ್ಲಿ ಇಟ್ಕೋಬೇಕು...ನೀವೇ" ಅಂತ ಆಕೆಗೆ...

ಸಾವಿತ್ರಮ್ಮ: ಹಯ್ಯೋ ಮಂಕು! ಆ ಘಾತ್ಕ! ಆ ಇಬ್ರೆಂಗಸ್ರು ಬೆನ್ನೆಲ್ಬನ್ನ ಬಗ್ಸಿ ಅವನ್ಮಾಯ್ಸಿಟ್ಟಾಗೆಲ್ಲಾ ಆದ್ರಿರೋ ಹೆಂಗಸ್ರನ್ನ ಈಗ...ಇಷ್ಟೊತ್ನಲ್ಲಿ...ನಿದ್ದೆಯಿಂದೆಬ್ಬಿ...ನಾವಿಬ್ರೂ ಎಷ್ಟು ಬಡುಕೊಂಡ್ರೂನೂವೇ ಮಂಪಟ್ಟಾಗುತ್ಯೇ ಆ ಮಂಕುಗಳಿಗೆ...? ಹೇಳ್ತೇನೆ ಕೇಳು: ಆ ಪಟಿಂಗ...ಆ ಪುರುಷಪ್ರೇತ...ನಿನ್ಗಂಡಸ್ಗೆ...ಮನೆ ಯಜಮಾನ್ಕೆ ಗಂಡ್ಸ್ಗ ಅಂಬೋ ಸೂಕ್ಷ್ಮಾನ ಹ್ಯಾಗೆ ಈಗ ಉಪದೇಶ ಮಾಡ್ತಿದಾನೋ...ಅದೇ ಪ್ರಕಾರ ನಾವಿಬ್ರೂನೂವೇ ನಾಳೆ ಈ ಇಬ್ರು ಗಂಡ್ಸ್ಗಳೂ ಅವರವರ ಆಫೀಸ್ಗೆ ಹೋದ್ಮೇಲೆ...ಮನೆ ಆವಕ್ಕಾನ ಹೆಂಗಸ್ರೇ ಜರಗ್ಸೋ ಸೂಕ್ಷ್ಮಾನ ಅವರಿಬ್ಬರ್ಗೂ ಉಪದೇಶ ಮಾಡಿ. ನಾವಿಬ್ರೂ ಬದುಕ್ಕೊಳ್ಳೋದು ಅಲ್ದೆ...ಮನೆ ಗಂಡಸ್ಗೆ ಬೆದರ್ಕೊಂಡು ಮುದರ್ಕೊಂಡು ಬಿದ್ದಿರೋ ಆ ಪಾಪ ಮತಿಗೆಟ್ಟ ಹೆಂಗಸ್ರೂ ಬದಿಕ್ಕೊಳ್ಳೋಹಾಗೆ ಅವ್ರ ಕಿವೀಲಿ ನಮ್ಮ ಸೂಕ್ಷ್ಮಾನ ಸಾಂಗೋಪಾಂಗ್ವಾಗಿ ಉಪದೇಶಿಸೋದು ಜಾಣ್ತನ್ವೋ ಇಲ್ಲಾ ಹೀಗೆ ಹುಚ್ಚುಚ್ಚಾಗಿ ಇಷ್ಟೊತ್ನಲ್ಲಿ... ಗಲಾಟೆಮಾಡಿ...

ಸೀತಮ್ಮ: ಹೌದಮ್ಮ. ಆ ಶನಿ ಮಾತು ಕೇಳ್ಕೊಂಡು ಬರ್ಲಿ...ಈ ಗಂಡ್ಸು!...ನಾಳೆ ಆ ಶನಿ ಆಫೀಸ್ನಿಂದ ತಿರ್ಗಿ ಬರೋ ಹೊತ್ಗೆ...ನಮಗ್ತಿಳ್ದಿದ್ದೆಲ್ಲಾ ಆ ಹೆಂಗಸ್ಗಿಗೆ ಹೇಳಿ...

ಸಾವಿತ್ರಮ್ಮ: ನಾ ಹೇಳಿದ್ನ ತಿರ್ಗಿ ನೀ ಹೇಳ್ಬೇಡ್ವೇ! ಆ ಗಂಡ್ಸು ಹೇಳ್ದ್ಹಾಗೆ "ನೆರೆಹೊರ್ಕೆ ನೆರೆಹೊರ್ಕೆನೇದೇಂಡು; ಗಂಡ್ಸು ಗಂಡಸ್ಗೆ ಗಂಡಸ್ತನ್ದ ಸೂಕ್ಷ್ಮ ಹೇಳ್ಕೊಡೋಹಾಗೆ. ಹೆಂಗ್ಸೂನೂವೆ ಹೆಂಗಸ್ತನ್ದ ಸೂಕ್ಷ್ಮಾನ ಅವರಿಬ್ಬರ್ಗೂ ಹೇಳ್ಕೊಟ್ಟು...ನಮ್ಮ ನಮ್ಮ ನೆರೆಹೊರ್ಕೆ ಗುಣಾನ ನಾವ್ನೋಡ್ಕೊಳ್ಳೋದು...ಈ ಗಂಡುಗ್ಳು ಆಫೀಸ್ನೊಳ್ಗೆ ಹೋಗ್ತೀದ್ಮೇಲೆ! ನಾಳೆ! ಈಗಲ್ಲಿ...ಈ ಸಮಾಚಾರ್ತೀಲಿಲ್ಲಾ! ಬಾ ಒಳ್ಗೆ! ಬಂದ್ಗಿಂದ್ಬಿಟ್ಟಾವು!...

(ನಿಷ್ಕ್ರಮಣ ಒಳಗೆ)

(ಪರದೆ ಬೀಳುವುದು)

ರಂಗ—೨

ಮೂರನೇ ದಿನದ ಮಧ್ಯಾಹ್ನ

[ಸುಬ್ಬಣ್ಣನ ಜಗುಲಿ. ಸೀತಮ್ಮ-ಸಾವಿತ್ರಮ್ಮನೂ. ಪಾರ್ವತಿ-ಲಕ್ಷ್ಮೀದೇವಮ್ಮನೂ ಕುಳಿತಿರುವರು.]

ಪಾರ್ವತಮ್ಮ: (ತಲೆಬಾಗಿ ನಮ್ರತೆಯಿಂದ) ನೀವಿಬ್ರೂ ಹೇಳೋದೆಲ್ಲಾ ಸರೀಮ್ಮಾ: ಆದ್ರೆ ನಾವೇನ್ಮಾಡೋದು? ಎಷ್ಟಾದ್ರೂನೂವೇ ಹೆಂಗಸ್ರು ನಾವು; ಹೆಂಗ್ಸಾಗ್ಲೀ ಗಂಡ್ಸಾಗ್ಲೀ...ಯಾರಾದ್ರೂನೂವೇ, ಅವರ್ನಡ್ತೆ...ಆಚರ್ಣೆ ಇವುಗ್ಳೆಲ್ಲಾ ಅವರವರ ಚಿಕ್ಕಂದ್ನಲ್ಲಿ ತಂದೆ, ತಾಯಿಗಳು. ಇತ್ಯಾದಿ ಹಿರಿಯರು ಕಲಿಸಿದ ಬುದ್ಧಿ ಪ್ರಕಾರ...ಒಟ್ನಲ್ಲಿ ಹೇಳ್ತೀನೆ ಗಿಡ ನೆಟ್ಟೋಗ ಸೊಟ್ಟೋಗ ಬೆಳೆಯೋದು ಎಲ್ಲಾ ಸಸಿಯಾಗಿರೋವಾಗ್ಲೇನೇವೇಯೇ ತೋಟಗಾರ ತೀರ್ಮಾನಿಸ್ದಾಗೆ:...ನನ್ಚಿಕ್ಕಂದ್ನಿಂದ......" ಹೆಂಗಸ್ಗೆ ಗಂಡನಲ್ದೆ ಗುಡಿಯಿಲ್ಲಾ, ಗೋಪ್ರವಿಲ್ಲಾ! ತನ್ಕತ್ಗೆ ತಾಳಿ ಕಟ್ಟೋನಲ್ದೆ ಬೇರೆ ದೇವ್ರಿಲ್ಲಾ. ದೇವ್ರಿಲ್ಲಾ" ಅಂತ ಕಲ್ಸಿ ಬೆಳೆಸಿದ್ಳು ನಮ್ತಾಯಿ...ನನ್ನ:...ಏನಮ್ಮಾ? ಸಂಸ್ಕೃತ ಗೊತ್ತು ನಂತಾಯೀಗೆ!

ಲಕ್ಷ್ಮೀದೇವಮ್ಮ: ಹೂಂ! ಪಾತು! ಛಿಃ; ಸಂಸ್ಕೃತ ನಿನ್ಗೆ ಗೊತ್ತಿಲ್ಲ! ನನ್ನಂಸಾರದ ಗಲಾಟೇಲಿ ನಿನ್ಗೆ ಸಂಸ್ಕೃತಾ ಕಲ್ಸೋಕೆ ನನ್ಗೆ ಬಿಡ್ವಿರ್ಲಿಲ್ಲಾ. ಆದ್ರೆ ನಮ್ಮಮ್ಮ...ಅವಳ್ಜೆನ್ರೀ ನಿನ್ಗೂ ಇಷ್ಟಿದ್ದೂ... ಅವಳ್ಹೇಳ್ತಿದ್ದಾಗೆ "ದುರ್ಗುಣೋವಾ ದುರಾಚಾರೋ! ಸರ್ವದೋಷ ಸಮನ್ವಿತಃ ॥ ಸ್ತ್ರೀಣಾಂ ಶುದ್ಧ ಸ್ವಭಾವಾನಾಂ! ಪತಿರೇವೀಶ್ವರ ಪ್ರಭುಃ ॥" ಅಂದ್ಹಾಗೆ...ಗಂಡ ಹ್ಯಾಗಿದ್ರೂನೂವೇ ಅವನ್ಪಾದ ಪೂಜೆ ಮಾಡಿ, ಅವನ್ನ ಸಂತೋಷ್ಪಡ್ಸಿ, ಅವನೆದುರ್ಗೇನೇವೇ. ಅವನ್ಕಟ್ಟಿದ್ತಾಳಿ ಅವನಿಟ್ಟುಂಕ್ಮ ಅಗ್ನಿನದ ಜೊತೇಲಿ ಆತ್ಮಹತ್ಯ ಮಾಡ್ಕೊಂಡಾದ್ರೂ, ಅವನ್ನಾಯೋಕ್ಮುಂಚೇನೇವೇಯೇ, ಕಾಪ್ಕೋಳ್ಳೋದೇ ಹೆಂಗಸ್ಗೆ ಪರಗತಿ! ಇದು ನನ್ಗಿಲ್ದಿದ್ರೂನೂವೇ...ಸಾವಿತ್ರಮ್ನೋರೆ. ನಿಮ್ಗೂ ಇಲ್ದಿದ್ರೂನೂವೇಯೇ. ರೇಗ್ಬೇಡಿ!...ಸೀತಾದೇವಿ ಅಂತ ಹೆಸ್ರಿಟ್ಟ ನಿಮ್ಮಮಗಳು ಇಂಥಾ ದುರ್ಯೋಚ್ನೆಗಳ್ನ ಒಂದೂ ತಿಳಿಯದ್ನಂಪಾತೂಗೆ ಬೋಧಿಸ್ತಿರೋದ್ನ ನೀವ್ನೊಂದ್ಮಾತೂ ಆಡ್ದೇ ಕೇಳ್ತಿರೋದು ಉಚಿತ್ವೇ?...ಮಾತ್ರ ಧರ್ಮ್ವೇ? ಸ್ತ್ರೀ ಧರ್ಮ್ವೇ? ನನ್ಗಿಂತ ದೊಡ್ಡೋವ್ರು ನೀವು! ಕೆಟ್ಟುಹೋಗ್ತಾನ ಕುಮಾರ್ಗೋದು ಪುಣ್ಯ: ಧರ್ಮ; ಪಾತಿವ್ರತ್ಯ. ಪತಿಸೇವೆ. ಸ್ತ್ರೀಧರ್ಮನೀತಿ ಇತ್ಯಾದಿಗಳ್ನ ಮುಂದಿಟ್ಕೊಂಡ್ನಡೀತಿರೋ ನನ್ನಾಥ ಮಗಳ್ಗೆ ಹೀಗೆಲ್ಲಾ ದುರ್ಬೋಧ್ನೆ ಮಾಡ್ತಿರೋ ನಿಮ್ಮ ಸೀತೂಗೂ ಇದ್ನೆಲ್ಲಾ ಕೇಳ್ತಾ ಕೂತಿರೋ ತಮಗೂ ರೌರವಾದಿ ನರ್ಕ ಪ್ರಾಪ್ತವಾಗ್ಬಾರ್ದೂ: ಅಂಬೋದೊಂದೇ ನನ್ನ ಹಾರೈಕೆ! ದಮ್ಮಯ್ಯ ಹೋಗ್ಬನ್ನಿ!

ಸಾವಿತ್ರಮ್ಮ: ಬಾ! ಸೀತೂ! ಬಾ! ಇಲ್ಲೇನೂ ಆಗೋಹಾಗಿಲ್ಲ. ನಾನ್ತಿಳ್ಕೊಂಡಿದ್ದೇ ಈ ಗಂಡ್ಸು ಬರೀ ಬಡಾಯಿ ಮಾತಿನಿಂದ ಇವರ್ಬೆನ್ನೆಲುಬುಗಳ್ನ ಬಗ್ಸಿಧಾನೆ ಅಂತಿಳ್ಕೊಂಡಿದ್ದೆ! ತಪ್ಪು! ಬಗ್ಸಿಲ್ಲಾ......ಸುತ್ರಾಮ್ ಮುರ್ದೇ ಹಾಕ್ಬಿಟ್ಟಿದ್ದಾನೆ ಸೊಂಟದ ಸಮೇತ! ಇಂಥಾ ಬೆನ್ಮುರ್ದಗುಂಡ್ಸ್ಗೆ ಇಲ್ದ ಬೆಪ್ಪಕ್ಕಿಗ್ಳು ಗಂಡಸರು ಬರೆದ ಭಾರತ, ಭಾಗ್ವತಾನ, ಬೆಬ್ಬೆಬ್ಬೇಂತ ತೊದಲ್ತಿರೋ ವರ್ಗ್ಗೂ ಗತಿ ಎಲ್ಲಿ ಹೆಂಗಸರ್ಗೆ! ಮುಂದಿನ್ಗತೀ ಎಲ್ಲೀದು ಹೆಂಗ್ಸರ್ಗೆ ಪ್ರಪಂಚ್ದಲ್ಲಿ!...

ಸೀತಮ್ಮ: ಪ್ರಪಂಚ್ದ್ದೆಂಗಸ್ರು ಹಾಳಾಗ್ಹೋಗ್ಲೀಮ್ಮಾ! ನಮ್ಗತೀ ಹೇಳು ಈಗ! ಈ ವೊಂಡುಗಳೋ ಹೆಂಗಸ್ರನಾನ್ನೇ ಮರ್ತುರ್ಕೋಣಗಳ್ಹಾಗೆ, ಹೊಟ್ಟೆಗೆ ಕೂಳು ಹುಯ್ಯೋನೇ ಪರಮಾತ್ಮ ಅಂತ ಮಲ್ಗಿವೆ! ಇವರ್ನ "ನೀವೂ ನಮ್ಹಾಗೆ ಹೆಂಗಸ್ರು! ಕುರಿ ಮೇಕೆಗಳಲ್ಲಾ! ಚೇತಸ್ರ್ಕೊಳ್ಳಿ" ಅಂಬೋಕೆ ನಮ್ಗೆ ಬಿಡ್ವಿಲ್ಲಾಮ್ಮಾ. ಅವ್ರು ಹಣೇಲೂ ಬರೀಲಿಲ್ಲ!...(ಮೆಲ್ಲಗೆ) ಅವರ್ಹೇಗಾದ್ರೂ ಹೋಗ್ಲೀ; ಸಧ್ಯ ಈ ಗಂಡ್ಸು ಇವರ್ಮನೆ ಭೇತಾಳ್ನ ದುರ್ಬೋಧ್ನೇಗೆ ಬೆಚ್ಚಿದ್ದು...ಒಂದ್ವೇಳೆ ಹುಚ್ಚ್ಹಿಡಿದ್ರೆ... ನಮ್ಮನ್ನ...ಪಟ್ಣಕ್ಕೆ...

ಸಾವಿತ್ರಮ್ಮ: (ಅಡ್ಡಮಾತಾಗಿ ಮೆಲ್ಲನೆ) ಉಷ್! ಅದೇ ನನ್ಗೂನೂವೇ ಯೋಚ್ನೆ. ಮಾತು... ಮನೇಲ್ತೀರ್ಮಾನಿಸ್ಕೊಳ್ಳೋಣ ಬಾ!

[ಇಬ್ಬರೂ ತಿಪ್ಪೆ ತೊಟ್ಟಿಯನ್ನು ಹಾಯ್ದು ಬಂದು ತಮ್ಮ ಮನೆಯನ್ನು ಸೇರಿ, ಪ್ರವೇಶಿಸಿ ಬಾಗಿಲನ್ನು ಹಾಕಿಕೊಳ್ಳುವರು]

(ಪರದೆಯು ಬೀಳುವುದು)

ರಂಗ—೩

ಅದೇ ರಾತ್ರಿ

ಸ್ಥಾನ: ರಂಗಣ್ಣನ ಮನೆಯ ಮುಂದಿನ ಭಾಗ.

[ಮನೆಯ ಮುಂದೆ ರಂಗಣ್ಣ...ಮನೆಯ ಬಾಗಿಲ ಹೊರಗೆ ಕೈಕೈ ಹಿಸುಕುತ್ತ ನಿಂತಿರುವ ಸೀತಮ್ಮನೂ ಸಾವಿತ್ರಮ್ಮನೂ... ಒಬ್ಬರನ್ನೊಬ್ಬರೂ, ಜಗಲಿಯ ಮೇಲೆ ಇಟ್ಟಿರುವ ಟ್ರಂಕು, ಹಾಸಿಗೆ, ಕೃಷ್ಣಾಜಿನ ಪೆಟ್ಟಿಗೆ, ತಾಮ್ರದ ಚೊಂಬು, ಕೆಂಪು ಮಡಿ ಸೀರೆ ಇತ್ಯಾದಿಗಳನ್ನೂ ಗಮನಿಸುತ್ತ...ಕಣ್ಣು ಕಣ್ಣು ಬಿಡುತ್ತಿರುವರು. ನೇಪಥ್ಯದಲ್ಲಿ ಜಟಕಾ ಗಾಡಿಯನ್ನೂ ಕುದುರೆಯ ಪಶ್ಚಾರ್ಧವನ್ನೂ ಬಿಟ್ಟು ರಂಗಸ್ಥಳದಲ್ಲಿ ಅಶ್ವದ ಪೂರ್ವಾರ್ಧವನ್ನು ಕಾಣಿಸಿಕೊಂಡು ಜಟಕಾ ಸಾಬಿಯು ವಾಹನದ ಮುಂದೆ ನಿಂತಿರುವನು.]

ಸಾವಿತ್ರಮ್ಮ: (ಗದ್ಗದ ಸ್ವರದಿಂದ) ಒಪ್ಪಿದ್ವಿ! ಆದ್ರೆ ನಮ್ಗೀಗಿರೋ ಯೋಚ್ನೆ...ಊರ್ಗ್ಹೋಗ್ತೇವಲ್ಲಾ ಅಂತಲ್ಲ! ನಾವ್ಹೋದ್ಮೇಲೆ...ನಾವಿಲ್ದೇನೇವೆ...ನೀವೊಬ್ರೇ ಇದ್ಕೊಂಡು...ಮನೆ ನೋಡ್ಕೊಳ್ಳೋದೂ...ಚೊಕ್ಕಟವಾಗಿಟ್ಕೊಳ್ಳೋದೂ...ಅಲ್ದೆ ಊಟಪಾಟಗಳು ನೀವೇ ಮಾಡ್ಕೊಳ್ಳೋದೂ, ಇವೆಲ್ಲಾ ಅಲ್ದೆ ಆಫೀಸ್‌ಗೀಫೀಸು: ಹೀಗೆ ಮನೆ ಬಿಟ್ಹೋದಾಗ ಕಳ್ಳರ್ಕಾಟ...ಇದೆಲ್ಲಾ ಅಲ್ದೆ... ರಾತ್ರಿ ಹೊತ್ತು...ಕಗ್ಗತ್ತ್ಲೇಲಿ ಒಬ್ರೆ...ಮನೇಲಿ; ಓತ್ಕಲ್‌ಕಡೆ...ಮೈದಾನ...ಮುಸಲ್ಮಾನ್ರು ಗೋರಿಗ್ಳು ...ದೆವ್ವ...ಪಿಶಾಚಿ...ಜನಗಳು ಹೇಳ್ಕೋತಾರೆ...ಕಂಡ್ಬಂದಿವೆ ಅಂತ...ಅದಕ್ಕೇ ಬಾಡ್ಗೆ ಕಮ್ಮಿ... ನನಗ್ನಂಬ್ಕೆಯಿಲ್ಲ...ಆದ್ರೂ ಅಪಾಯಕ್ಕೆ ಆಸ್ಪದ...ಪ್ರಾಣಭೀತಿ...ನನ್ಮಗ್ಳ ತಾಳಿ ಗಟ್ಯಾಗಿರೊ ಯೋಚ್ನೆ ಮೇಲೆ...ಪೇಚಾಡ್ತಿದ್ದೇವೆ. ಒಟ್ನಲ್ಲಿ ಒಬ್ರೇ ಒಬ್ರು ನೀವು...ಒಂದೇಮನೆ...ಸಾವಿಬ್ರು ಇಹದಲ್ಲಿ ಇದ್ರೂನೂವೆ...ಸಮ್ಮನ್ನ ಸಾಗ್ಸಿ ನೀವು ಒಬ್ಬೊಂಟಿಗ್ರಾಗಿ ಹ್ಯಾಗೆ...?

ರಂಗಣ್ಣ : (ಅಡ್ಡಮಾತಾಗಿ, ಬಿರುಸಾಗಿ) ಹ್ಯಾಗ್ಬದಿಕರ್ತೀನಿ ಅಂತೀರ ನೀವು? ಅದನ್ನ ಕ್ಲಿಪ್ತ ಪಡಿಸ್ಕೋಬೇಕೂಂಬೋದೇ...ನನ್ನಾಟ. ತಿಂಗಳ್ಗೆ ಏಪ್ಪತ್ತೈದು ರೂಪಾಯಿ ಸಂಪಾದ್ಸೋ ಗಂಡ್ಸು ಹೆಂಡ್ತಿ ಅತ್ತೆವ್ರ ಜೀವ್ನಕ್ಕೆ ಇಪ್ಪತ್ತೈದು ರೂಪಾಯಿ ಜಾತ ಬಾಕಿ ಐವತ್ತು ರೂಪಾಯಿಲಿ ಬದುಕಿರೋಕೆ ಆಗುತ್ತ್ಯೇ...ಇಲ್ವೆ?...ಅಲ್ದೆ ಇದುವರಿಗೂ ಕಾಣಿಸ್ಕೊಳ್ಳೀನೂ ಕಾಣ್ದೇನೂ. ಇಬ್ರ ಹೆಂಗಸರ್ಗೆ ಹೆದರ್ಕೊಂಡು ತಪ್ಸ್ಕೊಂಡಿದ್ದ ದೆವ್ವಗಳೆಲ್ಲ ಈಗ ಒಬ್ಬ ಗಂಡಸ್ನ ಏನ್ಮಾಡ್ತ್ಯಾವು ಅಂಬೋದ್ನ ನಿಷ್ಕರ್ಷಿಸೋದೇ ನನ್ನಾಟ! ಚರ್ಚೆಯಿಂದೇನೂ ಫಲವಿಲ್ಲ. ಜಟ್ಕ ಕಾದಿದೆ...ರೈಲ್ಗೆ ಅರ್ಧ ಘಂಟೆ. ಅಕ್ಕಪಕ್ಕದೋರು ಗಮನಿಸ್ತಿದಾರೆ. ಗಲಾಟೆಯಿಲ್ದೆ ಹೋಗ್ಬನ್ನಿ...ಬನ್ನಿ ಏನೂ?...(ಏಸ್ಕಾತ್ರಾ ಸಾಬಿಗೆ) ಅಜೀ. ಓ ಸಾಮಾನೋಂ ಜಟ್ಕಾಮೆ ರಖೋ. ಬುಡ್ಡಮ್ಮ ಉನ್ಕಾಸಾಮಾನೋಂ ಉಸೋಜ್ ರಖ್ಲೇಶಿಂ.

[ಜಟ್ಕಾ ಸಾಬಿಯು ಟ್ರಂಕನ್ನೂ ಹಾಸಿಗೆಯನ್ನೂ ಎತ್ತಿಕೊಂಡು ಹೋಗುವನು.]

ಸೀತಮ್ಮ: ಏಪ್ರೀತಕ್ಕಂತಲ್ಲಮ್ಮಾ! ಕ್ರಿಮಿಹಾಗೆ ಮುದರ್ಕೊಂಡ್ಬಿದ್ದಿದ್ದ ಈ ಪ್ರಾಣಿ ಈಗ ಕಾಳಿಂಗನ್ಹಾಗೆ, ಹೆಡೆ ಎತ್ಕೊಂಡು ನಮ್ಮನ್ನ ಹೊರಡಿಸ್ತಿರೋವಾಗ (ಹಲ್ಲುಗಳನ್ನು ಕಟಕಟನೆ ಕಡಿಯುತ್ತ) ಈ ಫಜೀತಿನೆಲ್ಲಾ ತಂದಿಟ್ಟದ್ದು ಆ ಪಕ್ಕದ್ಮನೆ ಪಿಶಾಚಿ ಗಂಡ್ಸು...ಈಗೇನ್ಮಾಡೋದಮ್ಮಾ?

ಸಾವಿತ್ರಮ್ಮ: ಮಾಡೋದೇನು...ನಿನ್ಗಂಡನ್ನ ಬೆದರ್ಸಿ ಮುದರ್ಸಿದ್ದಾಲ ಮುಗ್ದೋಯ್ತು. ಸಧ್ಯ ನನಗ್ತೋಚೋದು ಒಂದೇ ದಾರಿ. ನಿನ್ಗಂಡನ್ಗೆ ದುರ್ಬೋಧನೆ ಮಾಡಿದ ಆ ಧಾಂಡಿಗನ್ನೇ ಹಿಡಿದು...ಕಾಲಿನ್ಹೊಡ್ದೋ...ಕಾಲಿಗ್ಬಿದ್ದೋ...ಹೇಗಾದ್ರು...ಅದರ್ಬಾಯಿಂದ ಇದಕ್ಕೆ ಹೊಗಳ್ಸಿ...ಇದರ್ಕೋಪಾನ ಶಾಂತಿ ಮಾಡ್ಸಿ...

ಸೀತಮ್ಮ: ಹೂಂಮ್ಮ! ನೀನೇ ಹೋಗು ಬೇಗ.

ಸಾವಿತ್ರಮ್ಮ : ನೋಡಿ...ಹೋಗೋದೇನೊ ಹೋಗ್ತೀವೆ...ಹೋಗ್ತಿರೋದು ಹತ್ತು ದಿನಾನೊ, ಹದಿನೈದು ದಿನಾನೊ ಅಂದ್ಕೊಂಡಿದ್ವಿ. ಆದ್ರೆ ತಿಂಗಳ್ ತಿಂಗಳಿಗೂ ದುಡ್ಡಿನ್ಪ್ರಮಾಣ ಮಾತು ನೀವು ಮುಷ್ಕರವಾಗಿ ಹೇಳ್ಬಿಟ್ಮೇಲೆ ನಾವಿಬ್ರೂ ತಿರುಗ್ಬರೋದು...ತಕ್ಕಷ್ಟೂ ತಡವಾಗತ್ತೇ ಅಂಬೋದ್ನ ತೀರ್ಮಾನಿಸ್ಕೊಂಡ್ವಿ...ಪಾರ್ವತಮ್ನೋರು ಲಕ್ಷ್ಮೀದೇವಮ್ನೋರು ಇಬ್ರಿಗೂ ಹೇಳ್ಕೊಂಡು...ಅವರ ಕುಟುಂಬ್ದಿಂದ ನಮಗೆ ಆಗ್ತಿಂದ ಉಪಕಾರಾನ್ನೆಲ್ಲಾ ಒಪ್ಕೊಂಡು...ಹೋಗ್ಬರ್ತೀವೆ ಅಂತ ಹೇಳ್ಕೊಂಡು ಬರ್ತೀವೆ. ಹೇಗಿದ್ರೂವೆ ನೆರೆಹೊರ್ಕೆ ನೆರೆಹೊರ್ಕೇನೇವೆಯೆ! (ಸೀತಮ್ಮನಿಗೆ) ಬಾರೆ ಜೊತೇಲಿ!

[ಇಬ್ಬರು ಹೆಂಗಸೂ ಸುಬ್ಬಣ್ಣನ ಮನೆ ಬಾಗಿಲಿಗೆ ಬಂದು ಸಾವಿತ್ರಮ್ಮನು ಬಾಗಿಲನ್ನು ತಟ್ಟಲು ಕೈಯ್ಯನ್ನೆತ್ತುವಳು]

ಸುಬ್ಬಣ್ಣ : (ಇದುವರ್ಗೂ ಪಕ್ಕದ ಮನೆಯಲ್ಲಿ ಜರುಗುತ್ತಿದ್ದುದನ್ನೆಲ್ಲಾ ಹೊಂಚು ಕೇಳಿ ನೋಡಿ... ಈಗ ಜಗಲಿಯ ಕತ್ತಲೆ ಕವಿತ ತಾನು ಅಡುಗಿಕೊಂಡಿದ್ದ ಮೂಲೆಯನ್ನು ಬಿಟ್ಟು ಮುಂದಕ್ಕೆ ಬಂದು) ಕ್ಷಮಿಸ್ರೀಮ್ಮಾ...ಯಾರ್ಬೇಕು?...ಏನ್ಬೇಕು?...ಇಷ್ಟೊತ್ನಲ್ಲಿ!

ಸಾವಿತ್ರಮ್ಮ : ಹಯ್ಯೋ ಇಲ್ಲೇ ಇಧೀರಾ!...ಇಷ್ಟೊತ್ತೂ ಇಲ್ಲೇ ಇದ್ರಾ...ನೀವು ನೆನ್ನೆ ರಾತ್ರಿ ನಮ್ಮಳಿಯಂದಿರಿಗೆ ಮಾಡಿದ ಉಪದೇಶದ ಫಲಾನಾ ಅನುಭವಿಸ್ತಿದ್ದಾ್ರ !...! ನೋಡಿ: ನಮ್ಮನೇವ್ರೋ ಸಾಧು ಪ್ರಾಣಿ. ನೀವ್ರೋ ಘಾಟಿ. ಆದ್ರೆ ಒಂದ್ಮರೀಬೇಡಿ. ನಿಮ್ಮಾಕೆ ನಿಮ್ಮತ್ತೆ ಇಬ್ರೂವೆ ದೆವ್ವಕ್ಕಿಗಳಾಗಿರೊ ಹೊತ್ಗೆ...ಅವರ ಬೆನ್ನೆಲುಬುಗಳ್ನ ಮುರಿದು ನೀವು ಆಡಿಸ್ದ್ಹಾಗೆಲ್ಲಾ ಆಡೋ ಅಂತಂಥ ಹೆಂಗಸ್ರಲ್ಲಾ ನಾವು;...ಒಂದೊಂದ್ಸಂಸಾರಕ್ಕೆ ಒಂದೊಂದು ದಾರಿ. ನೀವು ಹೇಳ್ದ್ಹಾಗೆಲ್ಲಾ ನಿಮ್ಮನೆ ಹೆಂಗಸ್ರು ಕೇಳ್ತಾರೋ....ಇಲ್ಲ ನಾವು ಹೇಳ್ದ್ಹಾಗೆ ನಮ್ಗಂಡಸ್ರು ಕೇಳ್ತಾರೋ...ಹೀಗೋ ಹಾಗೋ... ಹೇಗಾದ್ರೂವೆ ಒಟ್ನಲ್ಲಿ ಸಂಸಾರಗ್ಳು ಅವವುಗ್ಳ ಅಂತರಂಗ ರಹಸ್ಯ ರೀತಿ ಮೇಲೆ ಸಾಗೋದು ಮುಖ್ಯವೇ ಹೊರ್ತು...“ನಮ್ಮನೆ ದಾರಿ ನಿಮ್ಮನೆ ಹಿಡೀಬೇಕೂ!...ನಿಮ್ಮನೆ ದಾರಿ ಊರೆಲ್ಲಾ ಹಿಡೀಬೇಕೂ!”

ಅಂತ ತಿಳ್ಕೊಂಡಿರೋದಾಗ್ಲಿ, ತಿಳಿಸೋದಾಗ್ಲಿ, ವಾದ್ಸಿ ಸಾಧಿಸೋದಾಗ್ಲಿ...ಹುಚ್ಚು ಅಂದ್ರೆ! ...ಶುದ್ಧ ಹುಚ್ಚು! ಹ್ಯಾಗಿದ್ರೂವೆ, ಗೃಹಸ್ಥರು ನೀವು. ಸಂಸಾರ ಸಂಪತ್ತ್ನ ಅನುಭವಿಸೋವ್ರು. ಮನೆಗಳ್ನ ಕುದುರ್ಸೋದು ಕಷ್ಟ! ಕಷ್ಟವಾದ್ರೂ ಪುಣ್ಯ! ಧರ್ಮ! ನೋಡಿ, ನೀವ್ರೋ ಒಬ್ರೊಂಟಿಗ್ರೇ ಆದ್ರೂ ಬದುಕ್ಕೊಳ್ಳೋಕೆ ಶಕ್ತಿಯಿದೆ. ಚೈತನ್ಯವಿದೆ! ಆದ್ರೆ ಆ ಪ್ರಾಣಿ ಹಾಗಲ್ಲ; ಶುದ್ಧ ಮಂಕೂ... ಅಲ್ಲ ಸಾಧು ಪ್ರಾಣಿ! **ತಪ್ಪು ಅಂಬೋದು ಸರ್ವರಲ್ಲೂ ಇದೆ. ತಪ್ಪಿಲ್ಲದ್ಪ್ರಾಣಿ ಪರಮಾತ್ಮ ಒಬ್ನೆ. ನಮ್ಮಗ್ಳಲ್ಲಿ ತಪ್ಪು ಇರೋಹೊತ್ಗೇನೇವೇ ಭೂಮಿಲ್ಹುಟ್ಟಿದ್ದ್ವಿ್ವು. ನಿಮ್ಮಲ್ಲೂ ತಪ್ಪಿದೆ, ಆತ್ನಲ್ಲೂ ತಪ್ಪಿದೆ....ತಪ್ಪಿರೋದು ಆಶ್ಚರ್ಯವಲ್ಲ ...ಆದ್ರೆ ಇರೊ ತಪ್ನ ಒಬ್ಬರಿಗೊಬ್ರು ಒಪ್ಕೊಂಡು....ಒಟ್ನಲ್ಲಿ ಒಬ್ಬರಿಗೊಬ್ರು ಅನ್ಯೋನ್ಯವಾಗಿ ಸಂಸಾರ ಜರುಗ್ಸೋಕೆ ದಾರೀನ ನೀವು ಆತನಿಗೇ ಈಕ್ಷಣ ಹೇಳ್ಕೊಡೋದು ನಿಮ್ಜಾಣತನದ ಚಿನ್ಹೆ....ನಿಮ್ಮ ನೆರೆ ಹೊರ್ಕೆ ಧರ್ಮವೇ ಹೊರ್ತು** ನೀವ್ಮಟ್ಟೂ ನಿಮ್ಮ ಕುಟುಂಬಾನ ಕೈಲ್ಬಾಕ್ಕೊಂಡು ಸುಖಪಡ್ತಾ... ನೆರೆ ಸಂಸಾರಾನ್ನ ಗಂಡ ಒಂದ್ಕಡೆ ಹೆಂಡ್ತಿ ಒಂದ್ಕಡೆ...ಓಗ್ಮಾಡೋದು ನೆರೆಹೊರ್ಕೆ ಧರ್ಮ್ವೇ? ಬೇಗ ನಿಶ್ಚಯ್ಸಿ.

ಸುಬ್ಬಣ್ಣ: (ಮನೆ ಮೆಟ್ಲನ್ನಿಳಿದು...ಮುನಿಸಿಪಲ್ ತೊಟ್ಟಿಯನ್ನು ಹಾಸುತ್ತ)ಅರ್ಥವಾಯಿತು ...ಓಗ್ಬನ್ನಿ ತಾಯೀ...ನೀವೂ ಬನ್ನೀಮ್ಮ.

ರಂಗಣ್ಣ: ಇದೇನ್ಬಂತ್ರೀ? ಈಗ?

ಸುಬ್ಬಣ್ಣ: (ಮೆಲ್ಲಗೆ) ತೆಪ್ಪ್ಗಿರ್ರೀ!...ನಾನ್ಹೇಳಿದ್ವಾರೀಗೇ ಬರ್ರಿಧಾರೆ ಇಬ್ರೂವೆ; ಸುಮ್ನಿರ್ರೀ ನೀವು...ಸರಿಮಾಡ್ತೇನೆ ಎಲ್ಲಾನು. (ಘಟ್ಟಿಯಾಗಿ) ಬನ್ನ್ರೀಮ್ಮ!...ಈಗ್ನೋಡಿ! ನಿಮ್ಸಂಸಾರ ನಿಮ್ಮ ನಿಮ್ಮದೆ ಆದ್ರೂನೂವೆ...ಪಕ್ಕದ್ಮನೇಲೇ ಇದ್ಕೊಂಡು ನಿಮ್ಮಿಮ್ಮಲ್ಲಿ ಅನ್ಯೋನ್ಯತೇಗೆ ಒದಗಿದ ಅಡಚಣೆಗಳ್ನ ನೋಡಿ ನೋಡಿ...ನಮ್ಮನೇಲಿ ನಾನು ಅನುಭವ್ಸೊ ಸುಖಾನ್ನೂ...ನನ್ನ ನೆರೆಯಾತ ತನ್ನ್ಮನೇಲಿ ಅನುಭವ್ಸೊ ತಾಪಾನ್ನೂ ಹೋಲ್ಸೀ...ದುಃಖ ತುಂಬೀ ತುಂಬೀ ತುಳುಕೀ ತುಳುಕೀ... ತಡೀಲಾರ್ದೆ...ಉಕ್ಕಿ ಬಂದು...ಈತನಿಗೆ ನೆನ್ನೆ ರಾತ್ರಿ ನಾನು ಹೇಳಿದ್ದಲ್ಲಾ ಉಪಕಾರನೊ ಇಲ್ಲ ಅಪಕಾರನೊ ಅಂಬೋದ್ನ...ಮೇಲುರೀತಿರೊ...ಈಗುರಿದಿದ್ರೂವೆ ನಾಳೆ ಬೆಳಿಕ್ಹರೀತ್ಲೂವೆ ಉರಿಯೊ...ಸೂರ್ಯನಾರಾಯಣನ್ಗೇ ಬೆಳಕು. ಆದ್ರೆ ತಾಯಿ, ತಾವೇ ಒಪ್ಕೊಂಡ್ರಿ...ಇಹಲೋಕ್ದಲ್ಲಿ ಕರ್ಮ ಋಣಾನ ತೀರ್ಸೋಕೇ ಹುಟ್ಟಿರೋ ನಮ್ಮೆಲ್ಲರಲ್ಲಿಯೂ ತಪ್ಪಿದೆ ಅಂತ, ತಾವೇ ಹೇಳಿದ ಅಪ್ಪಿಭಾರದ್ಮೇಲೇನೇವೆ ಈಗ ನಾನ್ಹೇಳ್ತೇನೆ:...ಮನೆಗೆ ಧನ ಧಾನ್ಯ ಶಾಕಾದಿಗಳು ತಂದ್ಹಾಕಿ ಮನೆ ಬಾಡ್ಗೇನೂ ಒದಗ್ಸೋಕೆ ಬೇಕಾದ ದ್ರವ್ಯಾನ ಸಂಪಾದ್ಸೋಕೆ...ದಿನವೆಲ್ಲಾ ದನದ ಹಾಗೆ ದುಡ್ದು ದಣ್ದು ಮನೇಗೆ ಬಂದ ಪತೀಗೆ ಊಟ ಉಪಚಾರ...ಉಪಚಾರವೇನು ಮಹಾ...ಬರುತ್ಲೂ ಕೈ ಕಾಲ್ತೊಳಿಯೋಕೆ ಒಂದ್ಕೊಡ ನೀರು...ಸಂಧ್ಯಾವಂದ್ನೇಗೆ ಪಂಚಪಾತ್ರೆ ಉದ್ಧರಣೆ...ತರ್ಪಣಕ್ಕೆ ತಟ್ಟೆ; ಆಗುತ್ಲೂನೂವೆ ಎಲೆಹಾಕಿ ಬಿಸಿ ಬಿಸಿ ಅನ್ನ...ಸಾರು, ಮಜ್ಗೆ, ಚೈತನ್ಯದ ಪ್ರಕಾರ ಹುಳಿ, ಪಲ್ಯ, ಚಟ್ನಿ, ಇತ್ಯಾದಿ...ಒಟ್ನಲ್ಲಿ ಕ್ಷುದ್ಬಾಧೆ ಪತಿ ದೇವತೇಗೆ ತೀರ್ಸಿ ತಾಂಬೂಲ ಕೊಟ್ಟು...ನೆರೆಹೊರೇವ್ರು ತನ್ನಂಜ್ಲೇನ ತಿಪ್ಪೆ ತೊಟ್ಟೀಲಿ ಎಸ್ಯೋದ್ನ ನೋಡಿ ಹಂಗ್ಸೋ ಅಪಮಾನ ಒದಗ್ದಹಾಗೆ ನೋಡ್ಕೊಳ್ಳೋದೇ ನಾಳೆಯಿಂದ ನಿಮ್ಧರ್ಮ ಅಂತ...ಸೀತಮ್ನೋರೆ ತಾವೇ ಒಪ್ಕೊಂಡು ತಂಪತೀಗೂ ತಂಮಾತೇಗೂ ನಮಸ್ಕಾರಮಾಡಿ ಅವರಿಬ್ರ ಆಶೀರ್ವಾದಾನ್ನ ಪಡೆಯೋ ಪಕ್ಷಕ್ಕೆ...ಸಾಮಾನುಗಳ್ನ ಜಟ್ಕಾದಿಂಪತೆಗ್ಸಿ ಒಳಗ್ಹಾಕ್ಸಿ ಜಟ್ಕಾನ ಖಾಲಿ ಹೊಡ್ಸೋ ಜವಾಬ್ದಾರೀನ ನಾನ್ವಹಿಸ್ತೇನೆ., ಇನ್ನಿದಕ್ಕಿಂತ ನನ್ನ ನೆರೆಹೊರ್ಕೆ ಧರ್ಮಾನ ಹ್ಯಾಗೆ...ವರ್ತಿಸೋದು. (ರಂಗಣ್ಣನ ಬಾಹುವನ್ನು ಹಿಸುಕುತ್ತ, ಗುಸುಗುಟ್ಟಿ) ಈಗ್ನೋಡ್ರೀ...ಎಲ್ಲಾ ಸರಿಹೋಗುತ್ತೆ...(ರಂಗಣ್ಣನನ್ನು ಸೆಳೆದುಕೊಂಡು ಜಟ್ಕ ಕುದುರೆಯನ್ನು ಸಮೀಪಿಸುವನು.)

ಸೀತಮ್ಮ: ಇದೇನಮ್ಮಾ ನಡ್ರಸ್ತೇಲಿ ನಮಸ್ಕಾರ ಮಾಡೂಂತ ಹುಕುಂ ಕೊಡುತ್ತೆ ಈ ಹಾಳ್ಪಿಶಾಚಿ...!

ಸಾವಿತ್ರಮ್ಮ: ಹಾಗ್ಬಂದ್ಬಿಟ್ಟಿದಿಯೇ ಈಗ! ಹಾಗ್ಬಂದ್ಬಿಟ್ಟಿದ್ಯೇ! ಈಗ್ಗಾನ ಪೇಸ್ಗೆಪಟ್ಟು ಓಂಜರಿದ್ರೋ...ಹಾನಿ **ನವುಗೆ**...ಸರ್ವನಾಶ! ಆ ಪಿಶಾಚಿ ಮೇಲೆ ನಾವು ಸಪ್ನೇಪು ತೀರ್ಸ್ಕೊಳ್ಳೋಕೆ ...ಅವಕಾಶಾನ ಪರಮಾತ್ಮ ನಾಳೆನೋ ನಾಳಿದ್ದೋ...ಈ ಹೊತ್ತಿಲ್ಲಿದ್ದೂರುಸೂವೆ ಯಾವ್ಪೊತ್ತಾದ್ರೂ ಒದಗಿಸ್ಲೇ ಒದಗಿಸ್ತಾನೆ! ಸಧ್ಯ ನನಗೊಂದು ನವುಸ್ಕಾರ ವಾಡಿ...ನಾಚ್ಕೇಸ್ಕೇಗಿ ನಿಸ್ಸಂಜಸಿಗೆ... “ಇನ್ಮೇಲೆ ಸರಿಯಾಗಿರ್ತೇವೆ” ಅಂತ ಬೊಗಳ್ಬಿಟ್ಬಾ...**ಬೇಗ**.

[ಸೀತಮ್ಮನು ವಾತೆಗೆ ನವುಸ್ಕರಿಸಿ...ಪತಿಯುನ್ನು ಸಮೀಪಿಸಿ “ಇನ್ಮೇಲೆ ಸರಿಯಾಗಿರ್ತೇವೇ” ಎಂದು ಹೇಳಿ ನವುಸ್ಕರಿಸಿ ವಾತೆಯುನ್ನು ತಿರುಗಿ ಬಂದು ಸೇರುವಳು.]

ಸುಬ್ಬಣ್ಣ: ಇನ್ನೇನ್ಬೇಕ್ರೀ ನಿಮಗೆ...ಅಜೀ ಸಾವಮಾನೋ ಫಿರ್ ಅಂದರ್ ರಖೋ.

ಜಾಫರ್: ಕ್ಯಾ ಸಾಮಿ...ಸಾಮಿಾಕೆ ಬಾತ್ಮೆ ಆಜಾಕೆ...ದುಸ್ರ ಬಾಢಾಫಿ ಗವಾಲಿಯಾ! (ಟ್ರಂಕು ಹಾಸಿಗೆಯುನ್ನು ಜಗಲಿಯಮೇಲೆ ಕುಕ್ಕಿ) ಅಬ್ ಕ್ಯಾ ಖಾಲಿ ಗಾಡಿ, ಖಾಲಿ ಹಾತ್ ಹಮಾರ ದಳಾಲ್ಕೊ ದಿಖಾಯೇತೋ ಜೂತಿಕಾ ಮಾರ್ ಸಾಮಿ!...ಮೇರ ಹಾಲ್ ಕ್ಯಾ ಸಮಜ್ತೇಂ?...ಇನ್ಸಾಫ್ಸೆ ಸೋಚೋ ಸಾಮಿಾ! ಜನಿವಾರ್ ಕು ದೇಖ್ತೀಂ...? ಜಾನ್‌ವಾರ್‌ಕು ದೇಖೋ ಸಾಮಿಾ...ಮುಗು ಜೀವ ಇದ್ದಾದೆ ಸಾಮಿಾ...! ನಾಕ್ಕೆ ಜಾನ್‌ವಾರ್...!

ಸುಬ್ಬಣ್ಣ: ಏ ದೊ ಆನೆ ಲೇವ್...(ಜಗಲಿಯಲ್ಲಿರುವ ನೋಟುಗಳ ಮೇಲೆ ಇರುವ ಎರಡಾಣೆ ಯನ್ನು ಎತ್ತಿ ಜಾಫರಿಗೆ ಕೊಡುತ್ತಾ) ಬಸ್ ಜೀ!...ಲೇಕೊಜಾವ್ಜೀ...ನಸ್ದೀಕ್ ಹೈಜಿ...ಪೋಲೀಸ್ ಸ್ಟೇಷನ್...ತಂಟ ಕರೊನಕ್ಕೋ.

[ಜಾಫರು ಕುದುರೆಯುನ್ನು ಹಿಂದೆ ತಳ್ಳುತ್ತ “ಸಿರ್ ಪೆ ಪಹಾಡ್ ಫ್ಸಿಸರ್ ತೇಹೀ ಸಯ್ಯಾತೋ ಕ್ಯಾಕರೀಜ್ನಾ । ಬೊಮ್ಮನೋಂಕೆ ಹಾಲ್ ಐಸೀ ರಹೇತೊ ಫಿರ್ಯಾದ್ ಕಹಾಂಕರೀಜ್ನಾ ॥” ಎಂದು ಗಟ್ಟಿ ಯಾಗಿ ಗೊಣಗುಟ್ಟುತ್ತಾ...ನಿಷ್ಕ್ರಮಿಸುವನು.]

ಸುಬ್ಬಣ್ಣ: ಒಳಕ್ಕೊಹೋರ್ಡಿ ಸಾರ್...ಬನ್ನೀಮ್ಮ ಒಳಗೆ!

(ಟ್ರಂಕನ್ನೂ ಹಾಸಿಗೆಯನ್ನೂ ಎತ್ತಿಕೊಂಡು ಒಳಗೆ ಹೆಂಗಸರ ಹಿಂದೆ ಹೊರಡಲು ಉಪಕ್ರಮಿಸು ವನು.)

ಪಾರ್ವತಮ್ಮ : (ಥಟ್ಟನೆ ಪ್ರವೇಶಿಸಿ) ಇದೇನ್ನುಚ್ಚು, ಬೆಳಗ್ಗಿನ ಮುಸುರೆ ಹಾಗೇಯೇ ಬಿದ್ದಿದೆ ಹಿತ್ತಲ್ಲಿ ; ಅದ್ನೂ ತೊಳೀದೆ ನಿಮ್ಬೊಟ್ಟೇಪಾಡ್ನೂ ನೋಡ್ಕೊಳ್ದೆ...ಊರ್ಗೆಲ್ಲಾ ಕೂಲಿಕೆಲ್ಸ ಮಾಡೋದು...ಇಷ್ಟೊಹೊತ್ನಲ್ಲಿ...ಇದೇನ್ಹುಚ್ಚು ಅಂದ್ರೆ?

ಸುಬ್ಬಣ್ಣ: (ಕಣ್ಣುಕಣ್ಣು ಬಿಡುತ್ತಾ) ಅಲ್ಲ...ಉಪಕಾರ...ನೆರೆಹೊರ್ಕೆ...

ಪಾರ್ವತಮ್ಮ: ಒಳ್ಳೆ ಉಪ್ಕಾರ ಅಂದ್ರೆ! ನೆಗದ್ಬಿತ್ತು ನಿಮ್ಬಾಳು “ನೆರೆಹೊರ್ಕೆ!” ಈವತ್ರಾತ್ರಿ ನಿಮ್ಮ ಹಸಿವು ತೀರಬೇಕೂ ಅಂದ್ರೆ ನೀವು ಅಡಿಗೆ ಮಾಡ್ಕೊಂಡ್ರೇನೇವೇಯೋ, ಮುಸ್ರೆ ತೊಳದ್ಬಾತ್ರೇಲಿ. ಅಮ್ಮನ್ಹಲಾರಾನೇ ನನ್ಗೂ ಆಗ್ಹೋಯ್ತು. ಆ ಹಾಳು ಸಾಮಾನುಗಳ್ನ ಚರಂಡೀಲಿ ಎಸ್ದು...ಬಂದು ಸೇರ್ತೀರಾ...ಇಲ್ಲ...ಬಾಕಲು ಹಾಕ್ಕೊಂಡು ಮಲಕ್ಕೊಳ್ಳೋದೋ ನಾವು...ನಿಮ್ಮನ್ನ ಜಗ್ಲೀ ಪಾಲ್ಮಾಡಿ?

ಲಕ್ಷ್ಮೀದೇವಮ್ಮ: (ಥಟ್ಟನೆ ಪಾರ್ವತಮ್ಮನ ಪಕ್ಕಕ್ಕೆ ಬಂದು) ಜಗಲೀಪಾಲು?...ಚೆನ್ನಾಯ್ತು! ಅಲ್ಲಾಕಣೆ, ಮನೇಲಿ ಗೋಮ ಹಚ್ಚೋಕೆ ಒಂದು ಗುಲಗಂಜಿ ಅಷ್ಟು ಗೋಮಯ ಇಲ್ಲ! ...(ಕೈಯಲ್ಲಿನ ಮಕ್ಕರಿಯನ್ನು ಮಗಳ ಕೈಗೆ ಕೊಟ್ಟು) “ಈ ಮಕ್ರೀ ತುಂಬ ಸಗಣಿ ತಂದು ಮನೆಯೆಲ್ಲಾ ಸಾರ್ಸಿ ದ್ಮೇಲೇನೇಯೇ ಊಟಕ್ಕೆ ಒಲೆ ಹಚ್ಕೊಳ್ಳೋದು ನೀನು: ಇಲ್ದಿದ್ರೋ ಬಾಕ್ಲು ತೆಗೆಯುವ ಹಾಗಿಲ್ಲಾಂತ ಹೇಳು ನಿನ್ಗಂಡನಿಗೆ.

ಸುಬ್ಬಣ್ಣ: (ಟ್ರಂಕು ಹಾಸಿಗೆಯನ್ನು ಜಗಲಿಯಮೇಲೆ ಜೋಪಾನವಾಗಿ ಇಳಿಸಿ, ಗದ್ಗದಸ್ವರದಿಂದ) ಅಲ್ಕಾಣೆ...

ಪಾರ್ವತಮ್ಮ: ಅಲ್ಕಾಣೋದಿರ್ಲಿ .. ಇಲ್ಕೊಳ್ಳಿ ! (ಮಕ್ಕರಿಯನ್ನು ಪತಿಯ ಕೈಯಲ್ಲಿಟ್ಟು) ಅವ್ಳೇಳಿದ್ಹಾಗೆ ಬುಟ್ಬೇನ್ಪರ್ತಿಮಾಡ್ಕೊಂಡ್ಬನ್ನೀ ! ಇನ್ಮುಂದಿನ್ ಚರ್ಚೆ...ಇಲ್ಲಲ್ಲಾ!...ಮನೇಲಿ!

ಸುಬ್ಬಣ್ಣ: ಅಲ್ಕಾಣೆ ಇಷ್ಟ್ಹೊತ್ನಲ್ಲಿ **ಈ** ಕುಕ್ಕೆ ತುಂಬ... **ಸಗಣೀನ** ಎಲ್ಲಿಂದ್ಲೆ ತರೋದು ನಾನು?

ಲಕ್ಷ್ಮೀದೇವಮ್ಮ: ಏನೊ! ದೇವರದಯ! ಗುಡೀಯಿಂದ ದರ್ಶ್ನ ಮಾಡ್ಕೊಂಡು ಬರೋವಾಗ ...ಬುಳ್ಳಪ್ಪನಛತ್ರದ ಮುಂದೆ...ಒಂದಲ್ಲ, ಎರಡಲ್ಲ, ಎಂಟು ಎತ್ತಿನ ಗಾಡಿಗಳು ಬಂದಿಳಿದಿದ್ವು. ಕೃಷ್ಣ ಪಕ್ಷ, ಕತ್ಲೆ, ಯಾರ್ರೂ ಕಾಣೋ ಹಾಗಿಲ್ಲಾ!...ಬಾರೆ! ಒಳಗ್ಹೋಗೋಣ...

[ಪಾರ್ವತಮ್ಮನೂ ಲಕ್ಷ್ಮೀದೇವಮ್ಮನೂ ನಿಷ್ಕ್ರಮಣ]

[ಈ ಕಲಹವನ್ನು ನೋಡಿ ಕೇಳಿ ಉಕ್ಕಿಬರುವ ನಗುವನ್ನು ತಡೆಯಲಾರದೆ ಸೀತಮ್ಮನೂ ಸಾವಿತ್ರಮ್ಮನೂ ಸೆರಗಿನಿಂದಲೂ ಮುಸುಕಿನಿಂದಲೂ ಮುಖವನ್ನು ಮುಚ್ಚಿಕೊಂಡು ಮನೆಯೊಳಕ್ಕೆ ನುಗ್ಗುವರು]

ರಂಗಣ್ಣ: (ಸುಬ್ಬಣ್ಣನನ್ನು ಸಮೀಪಿಸಿ ಮೃದುವಚನಗಳಿಂದ) ಕತ್ಲೆ...ಲಾಂದ್ರ ಕೊಡ್ಲೆ?

ಸುಬ್ಬಣ್ಣ : (ರೇಗಿ) ಕತ್ಲೆ ಭಯ ಏನ್ಸಂತ್ರೀ! ಬೆಳೆದ ಗಂಡಸ್ಗೆ?

ರಂಗಣ್ಣ: ಆ ಕುಕ್ಕೆ ಇಲ್ಕೊಡಿ (ಎಂದು ಕುಕ್ಕೆಯನ್ನು ಕಸಿದುಕೊಂಡು ಕೆಳಗೆ ಹಾಕಿ ಕಾಲಿನಿಂದ ಜಜ್ಜಿ, ಎರಡು ಕೈಗಳಿಂದಲೂ ಕಿತ್ತ ಚೂರುಗಳನ್ನು ಮುನಿಸಿಪಲ್ ತೊಟ್ಟಿಯಲ್ಲಿ ಎಸೆದು) ಯೋಚ್ನೆ ಯಾಕ್ರಿ? ನನ್ನ ವ್ಯಾಧೀಗೆ ಔಷಧಿಯಾಗಿ ಈ ಹೊತ್ತು ಒದಗಿದ ಇಪ್ಪತ್ತೈದು ರೂಪಾಯಿ ಓಡಿಹೋಗೋದಿಲ್ಲ. ನಾಳೆ ರಾತ್ರಿ ನಿಮ್ಮ ಜಗಲೀಲಿಟ್ಟು ಅದೇ ಜಟ್ಕಾನ್ನ ತರ್ಸಿ...ಅದೇ ನಮಸ್ಕಾರ...ಇರ್ಲಿ ಬನ್ನಿ ಸುಬ್ಬಣ್ಣನನ್ನು ಎಳೆದು ತನ್ನ ಮನೆಯ ಜಗಲಿಯನ್ನು ಹತ್ತಿಸಿ)**...ಲೇ !!!**

ಸೀತಮ್ಮ ಸಾವಿತ್ರಮ್ಮ : (ಇಬ್ಬರೂ ಓಡಿ ಬಂದು ಏಕಗ್ರೀವದಿಂದ) ಏನು??!!

ರಂಗಣ್ಣ : (ಗರ್ಜಿಸುತ್ತ) ಒಂದ್ಕೊಡದಲ್ಲಿ ನೀರು, ಚೊಂಬು! ! [ಹೇಳಿ ಮುಗಿಸುವಷ್ಟರಲ್ಲಿ ಸೀತಮ್ಮನು ನೀರು ತುಂಬಿದ ಕೊಡವನ್ನೂ ಸಾವಿತ್ರಮ್ಮನು ಖಾಲಿ ಚೊಂಬನ್ನೂ ಜಗಲಿಯ ಮೇಲೆ ತಂದಿಡುವರು.]

ರಂಗಣ್ಣ : ಮನೇಲಿ ರವೇನೊ, ನುಚ್ಚೋ...ಉಪ್ಪಿಟ್ಟು...ಒಂದು ಚಟ್ನಿ ಬುಳ್ಳಪ್ಪನ ಛತ್ರದಲ್ಲಿ ನೆರೆಯಾಕೆ ಹೇಳಿದ್ಹಾಗೆ ಎತ್ತಿನ್ಬಂಡಿಗ್ಳು ಬಂದಿಳಿದಿರೋ ಪಕ್ಷಕ್ಕೆ ಎದುರಂಗ್ಡಿ...ಮುನಿಯಮ್ಮನ ಅಂಗ್ಡಿ ಮುಚ್ಚಿರೋದಿಲ್ಲ. ಒಂದ್ಕಾಳಿ ಎಲೆ, ಅಡಿಕೆ, ಸುಣ್ಣ...ಚಿಲ್ರೆ ಇದೆತಾನೆ ನಿಮ್ಮಮ್ನಹತ್ರ?

ಸಾವಿತ್ರಮ್ಮ : (ವಿನಯದಿಂದ) ಹೂಂ [ರಭಸದಿಂದ ಮೆಟ್ಲಿಳಿದು ನಿಷ್ಕ್ರಮಣ. ಸೀತಮ್ಮನೂ ಒಳಕ್ಕೆ ನಿಷ್ಕ್ರಮಣ]

ರಂಗಣ್ಣ : ನೋಡಿ ಸುಬ್ಬಣ್ನೋರೆ! ಇಷ್ಟು ಹೊತ್ನಲ್ಲಿ ಸಿಕ್ಕೊ ಎಲೆ ಮೈಸೂರು ಚಿಗರೊ ಅಂಬಾಡಿಸೊ...ಸುಣ್ಣಕ್ಕೆ...ಮದ್ದೂರ್ಕಡೆ ಸೆಂಟ್ರಿಲ್ಲ...ಇನ್ನು ಅಡಿಕೆ...ನಮ್ಮತ್ತೇಗೆ ತೋಟ ಇಲ್ಲ ಮಲ್ನಾಡ್ಕಡೆ!...

ಸುಬ್ಬಣ್ಣ : (ಪಂಚೆಯನ್ನು ಮೊಣಕಾಲಿನ ಮೇಲೆ ಏರಿಸಿ ಕಟ್ಟಿಕೊಂಡು ಕೊಡದ ನೀರನ್ನು ಚೊಂಬಿಗೆ ವರ್ಗಾಯಿಸುತ್ತಾ)

ಸ್ವಾಮಿ, ಶರಣಾಗತನ್ನ ಕಾಪಾಡ್ಬೇಕು! ಸಿಕ್ಕಿದ್ದ ಪ್ರಾಣೀನ ಸತಾಯ್ಸೋದು ಸಮುಸಲ್ಲ!

ರಂಗಣ್ಣ : ಇರ್ಲಿ ಸುಬ್ಬಣ್ಣೋರೆ...ನೆನ್ನೆ ತಕ್ಕಪಟ್ಟೆ ಬಂದೋಬಸ್ತ್‌ನಲ್ಲಿ ಇದ್ದ ನಿಮ್ಮ ಸಂಸಾರ ಈ ಹೊತ್ತು ಯಾಕೆ ಹೀಗೆ ಪಲ್ಟಿ ಹಾಕ್ತು?

ಸುಬ್ಬಣ್ಣ : (ಸಿಡುಕು ಮುಖದಿಂದ) ಏನು ಪಲ್ಟೀರಿ?

ರಂಗಣ್ಣ: ಪಲ್ಟಿ ಅಲ್ದೆ ಏನ್ರಿ! ನೆನ್ನೆ ಇಷ್ಟೊತ್ತಿಗೆ ನೀವು ಊಟಮಾಡಿದ ನಿಮ್ಮ ಎಂಜಲೆಲೇನ ಸಭಕ್ತಿಯಿಂದ ಎತ್ತಿ ತಂದು ಇದೇ ತೊಟ್ಟೀಲಿ ಹಾಕದ ಸಂಪತ್ನಿ...ಈಹೊತ್ತು ಏಕೆ ಹೀಗೆ ತಿರುಗಿ ಕೊಂಡದ್ದು?

ಸುಬ್ಬಣ್ಣ: ಒಳ್ಳೇ ಚಿತ್ರಹಿಂಸೇರಿ ನಿಮ್ದು! ನೆನ್ನೆ ಏನು! ಈ ಹೊತ್ತು ಏನು! ಲಾಗಾಯ್ತಿಂದ ಒಂದೇ ಹಣೇ ಬರಹ ರೀ ನಂದು! ಅವಳು ಹಾಕಿದ ಎಂಜ್ಲೆಲೆ. ಅವಳು ಊಟಮಾಡಿದ್ಲು! ನಾನೂಟ ಮಾಡಿದ್ದಲ್ಲ!

ರಂಗಣ್ಣ: ಮತ್ತೆ ನೀವು ಊಟಮಾಡಿ...ಕೈ ತೊಳೀತಿದ್ದದ್ದು?

ಸುಬ್ಬಣ್ಣ: ಕೈತೊಳೀತಿದ್ದದ್ದು ದಿಟ ಕಾಣ್ರಿ! ಆದ್ರೆ ಊಟ ಮಾಡಿ ಅಲ್ಲ!...ಆ ಹಾಳು ಹೆಂಗ್ಸು ಊಟಮಾಡಿದ ಸ್ಥಳಾನ ಗೋಮ ಹಚ್ಚೀ...ಕೈ ತೊಳೀತಿದ್ದದ್ದು ನಾನು! ದಮ್ಮಯ್ಯ ಸಾಕು ನಿಂಪ್ರಶ್ನೆಗ್ಳು! ಭೂತದಯೇಂತ ಕೇಳಿಧೀರಾ...?

ರಂಗಣ್ಣ: ಕ್ಷಮ್ಸಿ!...ಕೈಕಾಲು ತೊಳ್ಕೊಂಡು ಒಳಕ್ಬನ್ನಿ...ನೀವೇನು ಹೇಳಿದ್ರೂ....ನೆರೆಹೊರ್ಕೆ ನೆರೆಹೊರ್ಕೇನೇವೇಯೋ!

[ಪರದೆಯು ಮೆಲ್ಲನೆ ಬೀಳುವುದು]

ತಾಳೀಕಟ್ಟೋಕ್ಕೂಲೀನೇ ?

ತಾಳೀಕಟ್ಟೋಕ್ಕೊಲೀನೇ ?

(ಮೂರು ಭಾಗ)

೧

ಪಾತೂ ತೌರ್ಮನೆ

೨

ಸಾತೂ ತೌರ್ಮನೆ

೩

ಯೋಧ್ರುವಾಣಿ

ಪೂರ್ವ ಕಥಾ ಪರಿಚಯ

"ತಾಳೀ ಕಟ್ಟೋಕ್ ಕೂಲೀನೇ?" ಎಂಬ ಈ ದೃಶ್ಯಮಾಲೆ **"ಟೊಳ್ಳುಗಟ್ಟಿ ಅಥವಾ ಮಕ್ಕಳಿಸ್ಕೂಲ್ ಮನೇಲಲ್ವೇ?"** ಎಂಬ ದೃಶ್ಯದ ಮುಂದಿನ ಭಾಗ. ಆದ್ದರಿಂದ ಇದನ್ನು ಓದುವ ಮುಂಚೆ ಪೂರ್ವಭಾಗದ ಕಥಾಪರಿಚಯ ಆಗಿದ್ದರೆ ಅನುಕೂಲ.

ಇದು ಪೂರ್ವ ಕಥಾ ಪರಿಚಯ :

ಹಿರಿಯಣ್ಣಯ್ಯ ಕಸಬಾಹೋಬಳಿ ಹೆಡ್ಮಾಸ್ಟ್ರು. ಅವನ ಹಿರೀ ಮಗ ಪುಟ್ಟು, ಕಿರೀಮಗ ಮಾಧು. ಇವರಿಬ್ಬರಿಗೂ ತಾಯಿ ಭಾಗೀರಥಮ್ಮ **"ಈ ಭೂಮೀಲಿ ವಾಸಿಸೋಕೆ ನಾವು ದೇವರಿಗೆ ಕೊಡ ಬೇಕಾದ ಬಾಡಿಗೆ ಅಂದ್ರೆ ನಂಸುತ್ತಮುತ್ಲೂ ಇರೋ ಜನರಿಗೆ ಉಪಯೋಗ"** ಅಂತ ಹೇಳಿ ಕೊಟ್ಟಿದ್ರೂನೂವೆ, ಮಾಧು ಅದನ್ನ ಕಲ್ತಿದ್ದ, ಪುಟ್ಟು ಅದನ್ನ ಮರ್ತಿದ್ದ.

'ಯಾವ್ದೆಲ್ಲಾರೂ ಹೋಗ್ಲಿ, ಯಾರೇನಾರೂ ಆಗ್ಲಿ; ನಾನೂ ನನ್‌ಪುಸ್ತ್ಕ, ನನ್‌ಫಸ್ಟ್‌ಕ್ಲಾಸೂ'ಂತ ಪರೀಕ್ಷೆಗಳ್ನ ಸಿಗಿದು ಸಿಪ್ಪೇ ಹಾಕ್ತಿದ್ದ ಪುಟ್ಟು. ಅಮ್ಮನಿಗೆ ಜ್ವರ ಬಂದ್ರೆ, ಮಗೂಗ್ ಹಾಲ್ ಹಾಕ್ಬೇಕಾದ್ರೆ, ನೀರ್ಮನೆ ಹಂಡೆ ತುಂಬ್‌ಬೇಕಾದ್ರೆ, ಕಂಡವರ ಕೂಸು ಬಾವೀಲ್ ಬಿದ್ರೆ, ಸಮಯಕ್ ನಾನೂ ಅಂತ ಬರೋ ಭರಾಟೇಲಿ ಓದೋಕ್ ಬಿಡುವಿಲ್ದೆ—ಒಳ್ಳೇ Bright Fellow ಆದ್ರೂನೂವೆ—ಫೇಲಾಗ್ತಿದ್ದ ಮಾಧು.

ಇವರಿಬ್ಬರಲ್ಲಿ, 'ಅಪ್ಪ್‌ಸತ್ರೂ ಸಾಯ್ಲಿ, ತಿಥೀಗ್ ವಡೆ ಸಿಕ್ತು' ಅನ್ನೋ ಹಾಗೆ ತಾಯಿ ತಂದೆಗೆ ಯಾವ ವಿಧದಲ್ಲೂ ಸಹಾಯವಾಗಿಲ್ದೆ ತನ್ಕೆಲ್ಸಾ ಮಟ್ಟಿಗ್ ತಾನ್ ನೋಡ್ಕೊಳ್ಳೋ ಪುಟ್ಟೂನ ತಲೇಮೇಲೆ ಕೂರಿಸಿಕೊಂಡಿದ್ದ ಹಿರಿಯಣ್ಣಯ್ಯನಿಗೆ ಮನೇ ಗೊಂದ್ ದಿಕ್ಕಾಗಿರೋ ಮಾಧು ಅಂದ್ರೆ ಕಾಲ್ಕೆಳಗಿನ ಕಸಕ್ಕಿಂತ ಕಡೆ.

ಪುಟ್ಟೂಗೂ ಮಾಧೂಗೂ ಮದುವೆ ಆಗಿತ್ತು. ಪುಟ್ಟು ಹೆಂಡ್ತಿ ಪಾತು ರಾಮಪುರದ ಮಾಮಲೇ ದಾರ್ ರಾಮಣ್ಣನ ಮಗಳು; ದೊಡ್ಕುಟುಂಬ, ದೊಡ್ಡಕ್ತ. 'ಇದಕ್ pass ಆದ್ರಿಂದ ಇದರ ಅಂತಸ್ತ್ ಏನ್ ಹೆಚ್ಚಾಯ್ತು? ಇದರ ಗುಣ ಇದಕ್ಕೆ' ಅಂತ ಗಂಡನ್ನ ಗುಡಿಸಿದ್ಳು ಮೂಲೇಗೆ. ಅಲ್ದೆ, ಭಾವೀಬಿದ್‌ಸಾಯ್ತೇನೇಂತ ಹೆದರ್ಸಿ, ತೌರ್ಮನೆಯೋರು ತನ್ನ ಕರೆಸಿಕೊಳ್ಳೋ ಹಾಗೆ ಕಾಗದ ಬರೆಸಿಸಿ, ಕಟ್ಟಿದ ಟ್ರಂಕು ಹಾಸಿಗೆ ಸಮೇತ ತುದಿಗಾಲ್‌ತುದೀಲಿ ನಿಂತಿದ್ದಳು, ತವರ್ಮನೇಗೆ ತೆರಳೋಕೆ, ಪಾತು. ಅವಳ ಓರಗಿತ್ತಿ–ಸಾತು–ಮಾಧು ಹೆಂಡ್ತಿ—ಗುಮಾಸ್ತೆ ರಂಗಣ್ಣನ ಮಗಳು. ಅವಳೂ ರಾಮಪುರದವಳೆ. 'ಊರೂ ಬೇಡ, ತೌರೂ ಬೇಡ. ಇಲ್ಲೇ ಇದ್ರೆ ಇವರು ಪಡೋ ಕಷ್ಟಗಳಲ್ಲಿ ಅರ್ಧವಾದ್ರೂ ನನ್ನಲೇ ಮೇಲೆ ಬಿದ್ದೀತೂ'ಂತ ಗಂಡನ ಜೊತೇಗೇ ನಿಲ್ಲೊ ಹೆಣ್ಣು, ಅವಳು.

ಒಂದು ಸಲ ಹಿರಿಯಣ್ಣಯ್ಯ, ಪುಟ್ಟೂ ಹೆಂಡ್ತಿ ಪಾತೂನ ಅವರ ಅಪ್ಪನ ಮನೇಗೆ ಕಳಿಸ್ಬೇಕಾಯ್ತು ...'ಪುಟ್ಟೂ ಪಾಸಾದ್ಮೇಲೆ ಕೆಲಸಕ್ಕೆ ಅವನ ಮಾವನ ಶಿಫಾರಸ್ಸು ಬೇಕಾದೀತೂ'ಂತ. ಅದೇ ಸಮಯ ದಲ್ಲೇ 'ಆ ಕೆಲಸಕ್ ಬಾರದ ದಡ್ಡನ್ಗೆ ಅನ್ನ ಹಾಕೋದಲ್ದೆ ಅವನ ಹೆಂಡ್ತಿಗೂ ಯಾಕ್ ಹಾಕ್ಬೇಕು' ಅಂತ ಮಾಧೂ ಹೆಂಡ್ತಿ ಸಾತೂನ್ನೂ ಅವಳ ತೌರ್ಮನೆಗೆ ಕಳಿಸಿದ, ಹಿರಿಯಣ್ಣಯ್ಯ. ಹೀಗೆ ಇಬ್ಬರು ಸೊಸೇರ್ನೂ ಹಿರಿಯಣ್ಣಯ್ಯನ ವಿತಂತು ತಂಗಿ ನಾಗತ್ತೆ ರಾಮಪುರದಲ್ಲಿರೋ ಅವರ ತೌರ್ಮನೇಗೆ ಕರಕೊಂಡ್ಹೋದ್ಳು.

ಅದೇ ರಾತ್ರಿ ಹಿರಿಯಣ್ಣಯ್ಯನ ಮನೇಗೆ ಬೆಂಕಿ ಬಿತ್ತು. ಆಗ ಪುತ್ರರತ್ನ ಪುಟ್ಟು...ಲಾಗಾಯತ್ ನಿಂದ ಪರೀಕ್ಷೆಗಳಲ್ಲಿ First class ಸಿಗೀತಾ ಬಂದವನು...ಅಪ್ಪ, ಅಮ್ಮ, ಕೈಕೂಸು ಬೆಂಕೀ ಬಾಯಿಗ್ಸಿಕ್ಕಿದ್ದರೋ ಈ ಪರೀಕ್ಷೆ ಕಾಲದಲ್ಲಿ ದಿಗ್ಭ್ರಾಂತನಾಗಿ ತನ್ನ ಪುಸ್ತಕಗಳನ್ನು ತಾನು ಬಾಚ್ಕೊಂಡು ಬೀದೀಗೋಡಿಹೋದ. ಆದರೆ ಮಾಧು...ಪರೀಕ್ಷೇಲಿ ಅಣ್ಣನ ಹಾಗೆ pass ಆಗ್ದೆ ಇದ್ದವನು, ಈ ಪರೀಕ್ಷೇಲಿ ತಾನು ಧೈರ್ಯಗೆಡದೆ, ಒಳಗಿದ್ದವರಿಗೂ ಧೈರ್ಯ ಹೇಳಿ, ತಾಯೀನೂ ಕೂಸ್ನೂ

ಹೊರಕ್ಕರತಂದು. ಒಂದಿನ ಕೋಣೇಲಿದ್ದ್ ತಂದೇನೂ ಮುಂದಕ್ಕಡಸ್ಕೊಂಡ್ಬಂದು. ಪ್ರಸಃ ಪುಟ್ಟೂನ ಹಿಡಕ್ಕೊಂಡು ಉರಿಯೋ ಮನೇ ಒಳಕ್ನುಗ್ಗಿದ. ಕಡೇಗೆ. ಮೂರ್ಛೆಬಿದ್ದ ಮಾಧೂನ ನಾಲ್ಕಾರು ಜನ ಉಳಿಸಿಕೊಂಡ್ಬರಬೇಕಾಯ್ತು.

ಅಂತೂ, ಆ ದಿನ ಮಾಧೂ ಇಲ್ದಿದ್ರೆ—ಆ ಊರವರು ಹೇಳಿದ್ಹಾಗೆ—ಆ ಕುಟುಂಬಕ್ ಕುಟುಂಬಾನೇ ಪಡ್ಚಾ ಆಗ್ತಿತ್ತು. ಆ ಊರಿನ ರೀಡಿಂಗ್ ರೂಂ ರೈಟರು ರಾಮಾಶಾಸ್ತ್ರಿ... ಆ ಮನೇಗ್ಬಿದ್ದ ಅಗ್ನಿ ಎದುರಿಗೆ ಸಾಕ್ಷಿಯಾಗಿ... "ಸ್ವಾಮಿ ಹಿರಿಯಣ್ಣಯ್ನೋರೇ... ಪಶ್ಚಾತ್ತಾಪಪಟ್ಟ್ರೇನು!... ಅಗ್ದಿದ್ರೇನು! ಟೊಳ್ಳು ಟೊಳ್ಳೇ!...ಗಟ್ಟಿ ಗಟ್ಟಿಯೇ!" ಅಂತ ಜಸಿ ವಾರ ಹಿಡಕೊಂಡ್ ಸ್ಥಾಪಿಸ್ದಾಗ...ತಂದೆ ತಾನು ಬೋಧಿಸಿದ ಪುಟ್ಟೂಗೂ, ತಾಯಿ ಭಾಗೀರಥಮ್ಮ ಸಾಕಿದ ಮಾಧೂಗೂ, ಸ್ವಭಾವದಲ್ಲಿದ್ದ ವ್ಯತ್ಯಾಸ ಕುಂಬಳಕಾಯಷ್ಟಿಲ್ದಿದ್ರೂ ನೂವೆ ರಾಗಿ ಕಾಳಷ್ಟಾದರೂ—ಹಿರಿಯಣ್ಣಯ್ಯನ ಮನಸ್ಸಿಗೆ ಹೊಳದೇ ಇರಬೇಕು. "ಮಕ್ಕಳಿಸ್ಕೂಲ್ ಮನೇಲೇನೇ" ಅನ್ನೋದೂ "ಸಾಕೋದನ್ ಅರಿತ ಆತ ಸಾವಿರ ಜನಕ್ ತ್ರಾತ" ಅನ್ನೋದೂ ಅವನ ಮಂಡೇಗೂ ಮಂದಟ್ಟಾಗಿರಬೇಕು.

—ಇದು ಪೂರ್ವ ಕಥೆಯ ಪರಿಚಯ—

ತಾಳೀಕಟ್ಟೋಕ್ಕೂಲೀನೇ ?

೧

ಪಾತೂ ತೌರ್ಮನೆ

ಪಾತ್ರಗಳು

ಟೊಳ್ಳುಗಟ್ಟಿಯ ನಾಗತ್ತೆ

ಟೊಳ್ಳುಗಟ್ಟಿಯ ಪಾತು

ಟೊಳ್ಳುಗಟ್ಟಿಯ ಸಾತು

ರಾಮಣ್ಣ	ಪಾತುವಿನ ತಂದೆ: ರಾಮಪುರದ ಮಾಮಲೇದಾರ್
ಲಕ್ಷ್ಮೀದೇವಮ್ಮ	ಪಾತುವಿನ ತಾಯಿ
ಕಿಟ್ಟಿ	ಪಾತುವಿನ ಅಣ್ಣ
Miss ಪ್ರಭಾವಮಣಿ	ಲಕ್ಷ್ಮೀದೇವಮ್ಮನ ಸಹಕಾರಿಣಿ
ಬೋರ, ಯಾಕೂಬ	ಜವಾನರು
ನರಸಿಂಹಯ್ಯ	ರಾಮಪುರದ ಲಾಯರಿ
ಪಾರ್ವತಮ್ಮ	ಈತನ ಪತ್ನಿ
ಪುರೋಹಿತ	ರಾಮಣ್ಣನ ಮನೆಯುವ

ಕಾಲ ಮತ್ತು ಭಾಷಾ : ಆಧುನಿಕ

ಸ್ಥಳ : ರಾಮಪುರ

ಸೀನ್ ೧

ನರಸಿಂಹಯ್ಯನ ಆಫೀಸು ಕೋಣೆ

[ನರಸಿಂಹಯ್ಯನು ಪ್ರವೇಶಿಸಿ ಮೇಜಿನ ಮೇಲಿರುವ ಕೆಲವು ಕಾಗದ ಪತ್ರಗಳನ್ನು ವಿಂಗಡಿಸಿಟ್ಟು ಗೋಡೆಗೆ ತಗಲಿಸಿರುವ ಗಡಿಯಾರವನ್ನು ನೋಡಿ..." ಎಂಟೂವರೆ ಘಂಟೆ...ಇನ್ನೂ ಬರಲಿಲ್ಲ ಇವ್ನು" ಎನ್ನುತ್ತಾ ಬೀದಿ ಬಾಗಿಲಿನ ಪಕ್ಕದ ಕಿಟಕಿಯಿಂದ ನೋಡುತ್ತಾನೆ.]

ನರಸಿಂಹಯ್ಯ: ಇಕೋ ಬಂದ...ಇವ್ನಲ್ಲ...ಪೋಸ್ಟ್‌ಮನ್ನು...ಇದೇನಿಷ್ಟುಬೇಗ?... ಮೇಲ್ಬರೋದೊಂಬತ್ತೂವರೆ...ಲೆದರ್ ಬ್ಯಾಗ್ನಲ್ಲಿ ಕೈಹಾಕ್ತಿದಾನೆ!...ಅರ್ಥವಾಯಿತು. ಯಾವ್ದೋ ಮನಿಯಾರ್ಡರು ನಿನ್ನೆ ಬಂದದ್ದು...ಮಧ್ಯಾಹ್ನದ್ಹೊತ್ತು ಕೋರ್ಟಿನ ಗಲಾಟೆಯಲ್ಲಿರ್ತೇನೇಂತಾ ಮನೇಗೆ ತಂದ್ಬಿಟ್ಟಿದಾನೆ ಈಗ...(ಬಾಗಿಲನ್ನು ತೆಗೆಯುತ್ತಾ) ಗಿಲೀಟಾಗಿ ಮಾತಾಡ್ಸಿ ಅವನ್ ಕಮೀಶನ್ನ ಮರೆಸಿಸಿಬಿಡಬೇಕು...(ಬಾಗಿಲ ಹೊರಗೆ ತಲೆಯನ್ನು ಚಾಚಿ ಘಟ್ಟಿಯಾಗಿ) ಬಾ ತಮ್ಮ ಒಳ್ಗೆ. ಬಿಸ್ಲು ಹೊರಗೆ, ಬಿಸ್ಲು...ಒಳಗ್ಬಾ (ಪ್ರವೇಶ, ಪೋಸ್ಟ್‌ಮನ್) ಏನ್ ಕಾಲಿಗ್ ಜೋಡಿಲ್ವೆ...at least... ಎಕ್ಡ?

ಪೋಸ್ಟ್‌ಮನ್: ಎಕ್ಡ! ಈಗ ಸಿಗೋ ಸಂಬ್ಳ ಹೊಟ್ಟೆಪಾಡ್ಗೇ ಸಾಲ್ದು...ಇನ್ನೆಕ್ಡಕ್ಕೆಲ್ಲಿಂದ್ ತರೋದು ದುಡ್ನ!...ಏನೋ ತಮ್ಮಂಥ ಧನ್ವಂತ್ರು ನನ್ನಂಥ ಬಡವನ್ಮೇಲೆ...

ನರಸಿಂಹಯ್ಯ: (ಅಡ್ಡಮಾತಾಗಿ) ಹಾಗಾದ್ರೆಷ್ಟು ಸಂಬ್ಳ ನಿನ್ಗೆ?

ಪೋಸ್ಟ್‌ಮನ್: ಮೂವತ್ತುದಿನ್ವಾಗ್ಲಿ ಮೂವತ್ತೊಂದಿನ್ವಾಗ್ಲಿ ಹದ್‌ನೈದು ರೂಪಾಯಿ... ತಿಂಗ್ಳಿಗೆ.

ನರಸಿಂಹಯ್ಯ: ಜೋಡಿಲ್ದೆ ನಡಿಯೋದು ತಪ್ಪು ನನ್ನ ತಮ್ಮ!...(hook-worm) ಹುಕ್ವರ್ಮು ನನ್ರಾಜಾ...ಕಾಲಿಂದ ಹೊಕ್ಕು ಮೈಯೆಲ್ಲಾ ಹತ್ತಿ ಮನುಷ್ಯನ ವಪೇ ವಪೇನೇ ಹೀರ್ಬಿಡತ್ತೆ ...ಈ ಪೋಸ್ಟ್‌ಮೆನ್ನಿಗೆ ವರ್ಷಕ್ಕೊಂದ್ಹೊಡೆ, ಎರಡುಜೊತೆ ಎಕ್ಡಗಳು ಕೊಡಲೇಬೇಕು ಅಂತಾ ಪೇಪರಿಗೆ ಬರೀತೇನೆ ನಾನು!...ಬೆದರಬೇಡ!...ಹೌದೂ, ಪೋಸ್ಟ್‌ಕಾಗದ ಇತ್ಯಾದಿಗ್ಳೆಲ್ಲಾ ಕೈನಲ್ಲಿರೊ ಕಟ್ನಲ್ಲಾಯಿತು. ಆದರಾ ಬ್ಯಾಗ್ನಲ್ಲಿ (Bag)?...ಮನಿಯಾರ್ಡರ್ಸ್ ಮನಿ, ಇತ್ಯಾದಿಗ್ಳೇನೊ? ಹೌದೂ! ಹದಿನೈದ್ರೂಪಾಯಿ ಸಂಬ್ಳ ಅಂದ್ಯಲ್ಲ, ಏನ್ಪಾಸ್ಮಾಡಿದೀಯ, ಬಿ.ಯೆ.,?...ಮೆಟ್ರಿಕ್ಯುಲೇಷನ್?

ಪೋಸ್ಟ್‌ಮನ್: ಇಲ್ಲ ಸಾರ್ ...F.A.

ನರಸಿಂಹಯ್ಯ: F.A. ಪ್ಯಾಸೇ...?

ಪೋಸ್ಟ್‌ಮನ್: ಅಲ್ಲ ಸಾರ್ Fail...Lower secondary ಒಂದೇ ಪ್ಯಾಸಾದ್ದು... ಆಗುತ್ಲೂವೇ...ನನ್ನ circumstan...

ನರಸಿಂಹಯ್ಯ: (ಅಡ್ಡಮಾತಾಗಿ) ಅರ್ಥವಾಯಿತು...ಸಂಸಾರ, ತಾಪತ್ರಯ, ಪಾಪ ಸಹಸ್ರ. ಇವ್ದೇ ಇದೆ, ನನಗಿಲ್ವೆ?...ಯಾರಿಗೆತಾನೆ ಇಲ್ಲ...Suffering ಅಂಬೋದು ಸರ್ವತ್ರ...ಸತ್ಮೇಲೇನೇ ಇವುಗ್ಳಿಂದ ವಿಮೋಚ್ನೆ...ಹೌದೂ? ಈಗ ನನಗ್ಬಂದಿರೋ ಪೋಸ್ಟ್ ಬಾಬತ್ತು...ಎಷ್ಟು ರೂಪಾಯಿನ ಸಮಾಚಾರ?

ಪೋಸ್ಟ್‌ಮನ್: (ಬ್ಯಾಗಿನಿಂದ ಒಂದು ಕಾಗದವನ್ನು ತೆಗೆಯುತ್ತಾ) ರೂಪಾಯಿಗಳ ಸಮಾಚಾರ ವಲ್ಲ: ಆಣೆಗಳ ಸಮಾಚಾರ...ಎರಡೂವರಾಣೆ.

ನರಸಿಂಹಯ್ಯ: ಎರ್ಡೂವರಾಣೆಗೆ ಯಾರು ನನಗ್ ಮನಿಯಾರ್ಡ್ರು ಮಾಡೋರೂ?

ಪೋಸ್ಟ್‌ಮನ್: (ಕಾಗದವೊಂದನ್ನು ನೀಡಿ) ಮನಿಯಾರ್ಡರಲ್ಲ. ಬರೀ ಲೆಟ್ರು (Letter)... ನಾಟ್‌ಪೇಡು (Not-paid)!

ನರಸಿಂಹಯ್ಯ : (ಉದ್ರೇಕದಿಂದೆದ್ದು ಘರ್ಜಿಸುತ್ತಾ) **ನಾಟ್‌ಪೈಡ್! ನನ್ನಲ್ಲ... ಹೊರಟ್ಹೋಗು!!!**

ಪೋಸ್ಟ್‌ಮನ್: ಒಳ್ಳೇ ಹೊರಟ್ಹೋಗು ಸಾರ್. ನರಸಿಂಹಯ್ಯ ಅಂತ ಬರೆದಿದೇ ವಿಳಾಸಾ...?

ನರಸಿಂಹಯ್ಯ: ವಿಳಾಸ ಬರೆದಿದ್ರೇನು? ನರಸಿಂಹಯ್ಯ ನಾನೊಬ್ನೇನೇ? ಬಿರ್‍ಮ್ಕಲ್ಪ ಹುಟ್ಟಿದಾಗಿನಿಂದ ಲಕ್ಷಾಂತರ ನರಸಿಂಹಯ್ಯಗಳು ಬಂದು. ಇದ್ದು. ಸತ್ಹೋಗಿದಾರೆ!

ಪೋಸ್ಟ್‌ಮನ್: ಈ ಊರ್ನಲ್ಲಿ ನರಸಿಂಹಯ್ಯ...ನೀವು ಒಬ್ರೆ...

ನರಸಿಂಹಯ್ಯ: ನಾನೊಬ್ನೆ ಅಲ್ಲ; ಯಾಕೆ ಗುಡೀಲಿಲ್ವೇನು ನರಸಿಂಹಸ್ವಾಮಿ! ಅಲ್ಲಿ ಡೆಲಿವರ್ ಮಾಡು. ನಿಮ್ಮ ಪೋಸ್ಟಾಫೀಸ್ ಕಂಬದೆದುರ್ಗೆ ನಿಂತೂ, ಪ್ರಹ್ಲಾದನ್ನ ನೆನೆಸ್ಕೊಂಡು. ನೀಡು ನಿನ್ನಾಳ್ ನಾಟ್ಪೇಡ್ನ...ಕಂಬ ಬಿರ್ಕ್ಕೊಂಡು ಬರ್ತಾನೆ ನರಸಿಂಹ ನಿನ್ನೆರಡೂವರಾಣೆ ಕೊಡೋಕೆ!...ಲಕ್ಷ್ಮೀಪತಿ ಅವ್ನ! ಹೊರ್ಡು!

ಪೋಸ್ಟ್‌ಮನ್: ಏನ್ಸಾರ್ ಹಳ್ಳಿಗಮಾರ್ರ್ ನೀವೂ?...ಇದ್ದಾಗ ಕೊಡ್ದಿದ್ರೆ ಪೋಸ್ಟಿನಲ್ಲಿ ಬರೋ ಒಂದ್ಸಾಬ್ನೂನು ಡೆಲಿವರ್ ಆಗೋದಿಲ್ಲ ನಿಮ್ಗೆ. ಈವತ್ತೆರ್ಡೂವರಾಣೆಗೆ ಹಿಂಜರಿದ್ರೆ ನಾಳೆ ಬರೋ ಕಾಗದಗಳಿಗೂ, ಬರಬಹುದಾದ ಮನಿಯಾರ್ಡರ್ಗಳಿಗೂ ತುಂಡು ಬೀಳುತ್ತೆ ಸಾರ್!

(ಕಾಗದವನ್ನು ಪುನಃ ನೀಡುವನು)

ನರಸಿಂಹಯ್ಯ: ಸರಿ! ನನ್ಗ್ಯಾಕೆ ನಿನ್ಮೇಲ್ಕೋಪ ನಿರುಪಯೋಗ...ಈ ದಂಡ ಕೆತ್ತಿ ಬರ್ದವ್ನ ಯಾರೋ ಅವನ್ನ ಬಲಿ ಇಡ್ತೇನೆ. ಇಲ್ತಾ...

(ಎಂದು ಕೈಯನ್ನು ಚಾಚುವನು)

ಪೋಸ್ಟ್‌ಮನ್: (ಕೈಯನ್ನು ಹಿಂದೆಳೆಯುತ್ತಾ) ಕ್ಷಮಿಸಿ ಸಾರ್. ದುಡ್ಕೊಡುಬಿಟ್ಟೂ...

ನರಸಿಂಹಯ್ಯ : ನಂಬ್ಕೇ ಅಂಬೋದು ಇಲ್ದಿರೋ ಹೊತ್ಗೇನೆ ನಿನ್ನ ಜಿಸಲ್ನಲ್ಲಿ ಓಡಾಡ್ಸಿ ಭಸ್ಮಮಾಡ್ತಿರೋದು ಭಗವಂತ!

(ಕೈಯನ್ನು ಕೋಟಿಗಿರುವ ಆರು ಕಿಸೆಗಳಲ್ಲಿಯೂ ಒಂದಾದಮೇಲೊಂದು ಕೈಹಾಕಿ ಬರೀ ಕೈಯನ್ನು ಹೊರತೆಗೆದು ಮುಖವನ್ನು ಗಂಟುಹಾಕಿಕೊಂಡು ಕ್ರಮೇಣ ಕೈಯನ್ನು ಪುನಃ ಕಿಸೆಯಲ್ಲಿ ಇಳಿಸಿ ವಿಷಮತಃ ಹೊರಕ್ಕೆಳೆದು ಎರಡಾಣೆಯನ್ನು ಪೋಸ್ಟ್‌ಮನ್ನಿನ ಕೈಯಲ್ಲಿಡಲು ತೊಡಗುವನು)

ಪೋಸ್ಟ್‌ಮನ್: ಏನ್ಸಾರ್ ಇದು ಚೌಕಾಸಿ...ಇದೇನಂಗ್ಡೀನೆ? ತೆಗೀರಿನ್ನೊಂದರ್ಧಾಣೆ...

ನರಸಿಂಹಯ್ಯ: ಕೊಡೋದಿಲ್ಲ.

ಪೋಸ್ಟ್‌ಮನ್: ಒಳ್ಳೇ ಕೊಡೋದಿಲ್ಲ ಸಾರ್...ನೀವ್ ಕೊಡದಿದ್ದರ್ಧಾಣೆ ನನ್ ಕೈಯಿಂದ ಹಾಕೋದೆ?

ನರಸಿಂಹಯ್ಯ: ಅದಕ್ಕೇನ್ಮಾಡೋದು? ನೀನ್ ಬೀದಿ ಉದ್ದಕ್ಕೂ ನಡಕೊಂಡ್ ಬಂದು ಮೂರ್ಕಾಸಿ ಪುದರಿಂಡಿಯಾನ ನನ್ಗೂ ಮಲ್ತಂದು ಕೊಡಪದಿಯಲ್ಲ. ಅದ್ನ ನನ್‌ಕೈಯಿಂದ್ಕಾಣ್ತೆಗೆತ್ತಾಕ್ಕೊ. ಹಾಗೇ ನನ್ನಿಂದಾದ ಹೆಚ್ಚುಕಮ್ಮೀನ ನಿನ್ ಕೈಯಿಂದ...

ಪೋಸ್ಟ್‌ಮನ್: ಏನ್ಸಾರ್ ಮೂರ್ಕಾಸಿ ಪುಣ್ಣೆ? ಅದಕ್ಕೆಕ್ಕಾಲಾಣೆ ಆಯಿತಲ್ಲಾ ಸಾರ್ (ಎನ್ನುತ್ತಾ ಕಾಗದವನ್ನು ಬ್ಯಾಗಿಗೆ ಹಾಕತೊಡಗುವನು.)

ನರಸಿಂಹಯ್ಯ: ಸ್ವಲ್ಪ ತಾಳೋ ಚಿತ್ರಗುಪ್ತ! ಸ್ವಲ್ಪ ತಾಳು.

(ಪೂರ್ವತಃ ಏಳು ಕಿಸೆಗಳನ್ನೂ ಶೋಧಿಸಿ ಎಂಟನೇ ಕಿಸೆಯಲ್ಲಿ ಕೈಯನ್ನಿಳಿಸಿ ಅರ್ಧಾಣೆ ಬಿಲ್ಲೆಯನ್ನು ಹೊರಕ್ಕೆ ತೆಗೆದು, ಎರಡೂವರಾಣೆಯನ್ನು ಪೋಸ್ಟ್‌ಮನ್‌ನ ಕೈನಲ್ಲಿಟ್ಟು ಕಾಗದವನ್ನು ತೆಗೆದುಕೊಳ್ಳುವನು.)

ಪೋಸ್ಟ್‌ಮನ್: (ತಾವ್ರುದ ನಾಣ್ಯವನ್ನು ಪರೀಕ್ಷಿಸಿ) ಸಮಕಲು ಕಾಸು ಸಾರ್!

ನರಸಿಂಹಯ್ಯ: ನಿನ್ಹಾಳ್ಕಾಗ್ಹಾನೂ ಸಮಕ್ಲೆ. ನಿನ್ಹಾಳ್ಹಿಪಾರ್ಲ್‌ಮೆಂಟಿನವ್ರು ಸವರಿ ಸವರಿ, ಮುಟ್ಟಿಮುಟ್ಟಿ, ಕುಟ್ಟಿಕುಟ್ಟಿ ಸಮದ್ಹೋಗಿರೊ ನನ್ನಾಗ್ಡಕ್ಕೂ ನಾನ್ಕೊಟ್ಟಸಮಕಲ್ಕಾಸಿಗೂ ಸರ್ಹೋಯಿತು ...ಇನ್ನಿಲ್ಲಿಂತು ರೇಗಿಸ್ಬೇಡ ನನ್ನ...ಹುಚ್ಚಿಡ್ಸತ್ತೆ ನಿನ್ಮುಖಾರವಿಂದ! ನೀನೋ, ನಿನ್ನ FACE ಓ!...

ಪೋಸ್ಟ್‌ಮನ್: ಕೋಪ್ಸ್‌ಕೋಬೇಡಿ ಸಾರ್...Good morning ಸಾರ್!

ನರಸಿಂಹಯ್ಯ: (ಶ್ಲೇಷಪೂರಿತ ಧ್ವನಿಯಿಂದ) Good morning, God bless you!... ...That is what I **say**ಏ...but you know what I **m-e-a-n** Good...ಏನು morning ಏನು?...ಗುಡುಗು ಸಿಡ್ಲು ನಿನ್‌ತಲೇಮೇಲೆ ಬಿದ್ರೆ ನನಗೇನ್ನಷ್ಟ...ಮುಖ್ಯ ಎರ್‍ಡೂವರಾಣೆ ನನ್‌ಕೈಯಿಂದ ಛಟ್ಟು.... **ತೊಲಗು!** (ಪೋಸ್ಟ್‌ಮನ್ ನಿಷ್ಕ್ರಮಿಸುವನು)...

ನನ್‌ಕೈಯಿಂದ ಎರಡೂವರಾಣೆ ಹೋಗೋ ಹಾಗೆ ಮಾಡಿದ ಕಡುಪಾಪಿ ಯಾರಿದೂ? (ಎಂದು ಕಾಗದದ ವಿಳಾಸವನ್ನು ಪರೀಕ್ಷಿಸುವನು). ಓಹೋ ಇನ್ಯಾರು?...ನನ್ನ Genealogical treeನ ಬುಡಸಮೇತ ಬೋಳ್ಸೋಕೆ ಅಂತ ನನ್ಹೊಟ್ಟೇಲಿ ಹುಟ್ಟಿದ ಈ **ಕೊಡ್ಲಿಮರಿ!** (ಲಕೋಟೆಯನ್ನು ಹಸ್ತದಲ್ಲಿ ಹಿಡಿದು ಮತ್ತೊಂದು ಹಸ್ತದಲ್ಲಿ ಕಿಸೆಯಲ್ಲಿಯ ಸುಲೋಚನವನ್ನು ಹೊರಹಾಕಿ ಅಲಂಕರಿಸಿಕೊಂಡು ಓದುತ್ತಾ)

"ತೀ॥ ರೂಪ॥...ಪಾದಪದ್ಮ"...ಈ ತಾರೀಫ್‌ಗಳನ್ನೆಲ್ಲಾ ತಸ್ಕರಹಾಕ್ಕೊಂಡೇ ಇಳೀಬಿಡೋದು ಇವ್ನ ಕೈನ, Parental pocketನೊಳಗೆ...ಈ ಸಲದ ದರೋಡೆ ಎಷ್ಟು ನೋಡೋಣ. (ಪತ್ರವನ್ನು ಅಲ್ಲಿಯೂ ಇಲ್ಲಿಯೂ ತಿರುಗಿಸಿ ಓದಿ) ಸರಿ Thirty Rupees ಈ ಸರತಿ...ಅಲ್ಲಾ! ನಾನೇನ್ರೂಪಾಯಿ ಗಿಡ ಹಾಕಿದೀನಿ ಹಿತ್ತಲ್ಬಾಕ್ಲಲ್ಲೀಂತ ತಿಳಕೊಂಡಿಧಾನೆಯೇ......(ನೇಪಥ್ಯದಿಂದ ಪ್ರವೇಶಿಸುತ್ತಿರುವ ಪತ್ನಿಯನ್ನು ಗಮನಿಸಿ) ಅವನ್ಹೆತ್ತವಳೇ ಬರ್ತಿದಾಳೆ. ಇಲ್ನೋಡೇ ನಿನ್ಮಗ, ನಿನ್ ಶ್ರೀಮಂತಪುತ್ರ, ಬರೆದಿದಾನೆ ೩೦ ರೂಪಾಯಿಗೆ...ಅವ್ನ ಕಾಗ್ದ ನನ್‌ಕೈಮುಟ್ಬೋವಾಗ್ಲೆ ಎರ್‍ಡೂವರಾಣೇಗೆ ಕಚ್ತು...ಇನ್ನಿದಲ್ದೆ ಇನ್ಮೂವತ್ತು ರೂಪಾಯಿ ಕಳಿಸ್ಬೇಕಂತೆ...ಹೀಗಿವ್ನು ಹತ್ತು ಇಪ್ಪತ್ತು ಮೂವತ್ತು ಅಂತಾ ಸುಲಕೊಳ್ತಾ ಬರ್ತಿಧ್ರೆ ನಮ್‌ಗತಿಯೇನೆ? ಮನೆ ಹೊಲಾನೆಲ್ಲ ಮಾರ್ರ್ಕೊಂಡ್ರು ನಿನ್ಮಗನ ಬೂಟ್ಸ್‌ಹಾಕ್ಕೊಂಡ್ ಪಾದಾರವಿಂದಕ್ಕೊಪ್ಪಿಸ್ಬಿಟ್ಟು, ಮೈದಾನದಲ್ನಿಂತ್ಕೊಂಡು ಕೈಕೈ ಹಿಸುಕ್ತಾ ಕಣ್‌ಕಣ್ ಬಿಡ್‌ತಿರ್‌ಬೇಕಾಗತ್ತಲ್ಲೇ...ಒಂದ್ಮಟ್ಗೆ ನಿರ್ಧರವಾಯ್ತು...ವೆಂಕೂ ಮದುವೆ ಈ ವರ್ಷ ಆಗೋಹಾಗಿಲ್ಲ. ಈ ಮಾತ್ತಂಡಿತ. **ಇದ್ನನ್ತಪ್ಪಲ್ಲ.** ಮನೇ ದುಡ್ನೆಲ್ಲ ನಾಲಕ್ಕಡೆ ಎರ್‌ಚೋಕೆ ಅಂತ ಹುಟ್ಟಿರೋ ನಿನ್ಮಗನ್ ಪ್ರಭಾವ!...ಅಲ್ಲಾ...

ಪಾರ್ವತಮ್ಮ: ಹಯ್ಯೊ ಸಾಕು ನಿಲ್ಸೀ ಅಂದ್ರೆ! ನನ್ಮಗನಾಗ್ಹೋದ್ನೋ ಈಗ...ಅವನು ಪಾಸ್ಮಾಡಿದ ಹೊಸದ್ರಲ್ಲಿ ನಿಮ್ಕೋರ್ಟೂ, ನಿಮ್ಮ ಕ್ಲಬ್ಬು, ಅಲ್ದೆ ಒಂದು ಪೇಟೆ, ಒಂದು ಕೇರಿ, ಒಂದು ಬೀದಿ, ಒಂದು ಮನೆ ಬಿಡದೆ ಬುಡುಬುಡಿಕೆಯವನು ಸಾರಿದ ಹಾಗೆ "My boy you know... First class you know" ಅಂತಾ ಬೊಗಳ್ತಾ ಬಂದ ಅದೇ ಬಾಯಲ್ಲೇ ಈಗ ನನ್ಮಗಾ ಅಂದ್ಬಿಟ್ರಲ್ಲಾ! ಇರ್ಲಿ! ನನ್ಮಗ್ನೇ ಆಗ್ಲಿ...ಮಗೂ ಪಾಪ ತಂದೆತಾಯಿಗ್ಳನ್ ಬಿಟ್ಟು ದೂರ್ದೇಶಹೋಗಿ ಓದ್ತಿಧೆ...ಏನಾಪತ್ತೋ, ಏನ್ವಿಪತ್ತೋ, ಜ್ವರದಲ್ಲಿ ನರಳ್ತಿಧಾನೋ, ಇಲ್ಲ ಬಂಡಿ ಗಿಂಡಿ ಮೇಲೆ ಹತ್ತಿ ಆಸ್ಪತ್ರೆಯಲ್ಲಿ ಬಿದ್ಕೊಂಡು ಪ್ರಾಣ ಬಿಡ್ತಿಧಾನೊ ಏನೊ...ಕಾಗದದ ಸ್ಟಾಂಪಿಗ್ಗತಿ ಇಲ್ದೆ ನಾಟ್‌ಪೈಡ್

ಬರದ ನನ್ನಿಂದ ಒಂದು ಶನಿ ೩೦ ರೂಪಾಯಿ ಕೇಳಿದ್ರೆ ಅದಕ್ಕಿಷ್ಟು ಏಗ್ರಾಟ್ಟೆ...ಅವನ್ಕೇಳಿ ೩೦ ರೂಪಾಯಿ ನಾನ್‌ಕಳಿಸ್ತೇನೆ. (ಕೊರಳನ್ನು ಮುಟ್ಟಿ ತೋರಿಸಿ) **ನನ್ನೌತ್ಮರ್ನನೇಲಿ** ಹಾಕಿದ ಅವಲಕ್ಕಿ ಸರಾನ ಕುರೂಪ್ ಚಂದನ ಅಂಗ್ಡೀಲಿ ಕುದುಪಿಟ್ಟಾದ್ರೂ ಕಳಸೇಕಳಸ್ತೇನೆ; ನಿಮಗಾ ಯೋಚ್ನೆ ಬೇಡ!... ಹೌದು!...ಇದಕ್ಕೂ ...ವೆಂಕೂ ಮದುವೆ ನಿಲ್ಲೋದಕ್ಕೂ ಸಂಬಂಧವೇನು?

ನರಸಿಂಹಯ್ಯ: ಏನೇನೆ?...ಅದೇ...ಸೀಜನ್ನೂ ಆಗ್ಹಾ ಬಂತು...ವರ ಹುಡ್ಕೀ...ಸಿಕ್ಕೀ ಜಾತ್ಕಾ ಹೊಂದ್ಸೀ ವರದಕ್ಷಿಣೆ ಟರ್ಮ್ಸ್ನೆಲ್ಲಾ ಮಾತಾಡಿ...ಲಗ್ನ fix ಮಾಡೀ...ಯಾವಾಗ...ಏನು...?

ಪಾರ್ವತಮ್ಮ: (ಅಡ್ಡಮಾತಾಗಿ) ಹಯ್ಯೊ! ಸಾಕೂಂದ್ರೆ! ಹುಡುಕೋದೇನ್ ವರಗಳ್ನಾ... ಇರೋದೆರಡೇ ವರಗಳು, ಮಾಮಲೆ ರಾಮಣ್ಣೋರ ಮಗ ಕೃಷ್ಣಮೂರ್ತಿ ಒಬ್ಬ...ಗುಮಾಸ್ತೆ ರಂಗಣ್ಣೋರ ಮಗ ಅಶ್ವತ್ಥ ಒಬ್ಬ...ಅವನಿಗೆ ಮೆಟ್ರಿಕ್ಲೇಷನ್ ಇಲ್ದಿದ್ರೂನೂವೆ ದೊಡ್ಡಟುಂಬ. ತಂದೆ ಆಫೀಸರು...ಇಲ್ಲ ಇವನಿಗೆ ಬಿ.ಎ. ಆಗಿದ್ರೂನೂವೆ ಆಸ್ತಿಯಿಲ್ಲ ಪಾಸ್ತಿಯಿಲ್ಲ. ಅಪ್ಪ ಗುಮಾಸ್ತೆ..., ಎರಡು ಜಾತ್ಕಾನೂ ಹೊಂದುತ್ತೆ. ಇಬ್ರನ್ನೂ ನೋಡ್ದಾ, ಮಾತಾಡ್ದಾ. ಜೋಯಿಸನ್ಕರ್ಸಿ ಲಗ್ನ ಅಂಟಿಸ್ದಾ ಅಂಬೋದ್ಬಿಟ್ಟು ಮಡುವಿನಲ್ಲಿ ಸಿಕ್ಕೊಂಡವನ್ಹಾಗೆ ಕಣ್ ಕಣ್ ಬಿಡ್ತಾ ನಿಂತಿರೋದೆ ಗಂಡಸುತನ...

ನರಸಿಂಹಯ್ಯ: ಅದ್ಕೇ ಕಾಣೇ, ಕೋಟುಗೀಟು ಹಾಕ್ಕೊಂಡು ಹೊರಟದ್ದೂ. ರಾಮಣ್ಣೋರ್ಮನೇಗೆ ಹೋಗೀ ವಿಚಾರ್ಸಿಕೊಂಡು ಬರೋಣಾ ಅಂತ.

ಪಾರ್ವತಮ್ಮ: ಅದು ಮೊದಲೇ ಬೊಗಳ್ಬಾ...ಅಲ್ಲಾ ಹೇಳ್ಬಾರ್ದಾಗಿತ್ತೆ...ಸ್ವಲ್ಪಿರಿ. ಎಸರಿಗಿಟ್ ಬಿಟ್ ಬರ್ತೇನೆ. ನೀ...

ನರಸಿಂಹಯ್ಯ: ನೀನೆಲ್ಲೀಗೆ ಬರ್ತೀಯೋ? ನಾನು ಹೋಗಿ ನೋಡ್ಕೊಂಡು ಬರ್ತೇನೆ.

ಪಾರ್ವತಮ್ಮ: ಹಯ್ಯೊ, ನೀವೇನ್ನೋಡೀರೀಂದ್ರೆ ಗಂಡಸ್ರೂ...ಡಸಾ ಪಸಾಂತ ಇಂಗ್ಲೀಷಿನಲ್ಲಿ ಮಾತಾಡೋಕೆ ಗೊತ್ತೇ ಹೊರ್ತು ನಮ್ಬುದ್ಧಿಗ್ಗಿ ಮುಂದ್ಬಾಳೋ ಮನೆ, ಮನೆ ಹ್ಯಾಗಿದೆ. ಮನೆಯುವ್ರ ಗುಣಾ ಏನೂ ಈ ಬಾಬ್ತುಗಳೆಲ್ಲ ನಿಮ್ಕಣ್ಣಿಗೆ ಬೀಳುತ್ತೆಯೋ?...ನಾನ್ಬಂದ್ರೆ...

ನರಸಿಂಹಯ್ಯ: ಒಪ್ದೆ, ಒಪ್ದೆ, ಒಪ್ದೆ. ದಮ್ಮಯ್ಯ ಬಾ. ಆದರೆ ಬೇಗ ಹೊರಡು.

ಪಾರ್ವತಮ್ಮ: ಬೇಗೇನು? ಹೊಸ ಸೀರೆ ಕಟ್ಕೊಂಡೇ ಬರ್ಬೇಕು; ದೊಡ್ಡ ಸ್ಥಳ!

ನರಸಿಂಹಯ್ಯ: (ನಿಷ್ಕ್ರಮಿಸುತ್ತಾ) ಸರಿ ಹಾಗಾದ್ರೆ! ಜಗಲೀಮೇಲ್ಕೂತಿರ್ತೇನೆ. ಅಲಂಕಾರ ಪೂರ್ತಿಯಾದರೆ ಬಾ. (ನಿಷ್ಕ್ರಮಣ)

[ಪಾರ್ವತಮ್ಮನು ಒಳಬಾಗಿಲ ಕಡೆ ನಿಷ್ಕ್ರಮಿಸುತ್ತಿರುವಾಗ ಪರದೆಯು ಮೆಲ್ಲನೆ ಬೀಳುವುದು].

ಸೀನ್ ೨

ರಾಮಪುರದ ಒಂದು ಬೀದಿ

[ಪ್ರವೇಶ: ಗಂಟುಗಳನ್ನು ಹಿಡಿದುಕೊಂಡಿರುವ ನಾಗತ್ತೆಯೂ ಸಾತೂವೂ...ಬರೀ ಕೈಯಿಂದಿರುವ ಪಾತುವೂ]

ನಾಗತ್ತೆ: ಹಿಂದ್ಮುಂದ್ನೋಡದ್ದಿಲ್ವೇನೆ ನಿಮ್ಗೇ ಹಾಳೂರ್ನ?...ನಾಚ್ಕೆ ಹೇಸ್ಗೆ ಇಲ್ದೆ ಹೆಂಗ್ಸಂ ಬೋದ್ಮರ್ತು...ಅತ್ತಿತ್ನೋಡ್ತಾ ನಲೀಬೇಡ...ನಡಿ ನಡಿ. ಹೆಜ್ಜೆಮುಂದ್ಹೆಜ್ಜೆ ಹಾಕ್ತಾ ನಡಿ.

ಪಾತು: (ಮುಖದಲ್ಲಿಯೂ ಧ್ವನಿಯಲ್ಲಿಯೂ ಕೋಪ ತಾತ್ಸಾರಗಳನ್ನು ತುಂಬಿ) ಅದಕ್ಕೇ ನಾನ್ಹೇಳಿದ್ದು, ಜಟ್ಕಾದಲ್ಲಿ ಬರೋಣಾಂತ!

ನಾಗತ್ತೆ: **ಜಟ್ಕಾ — ಜನ್ಮಕ್ಕೆ** ! ಪೊಲಸುಕುದುರೆ, ಚಕ್ರದ ಸಾಮಾನು...ಕಂಡೋರ್ಕ್ಯಾಣದವರು ಕೂತಗಾಡಿ...ಸುವಾಸ್ನೀ ಸುಪ್ಪುತ್ತಿಗೆ...ಇನ್ನಾಲದ್ದಕ್ಕ ಸಾಬಿಗ್ಳ ಸಾರಥ್ಯ...!**ಜಾತಿ** ಬೇರೆ ಉಳಿಯುತ್ತೇ ನಿನ್ಗೆ ಜಟ್ಕಾಲಿ ಜಂಬೂಸವಾರಿ ಮಾಡಿದ್ಮೇಲೆ! [ಪಾತುವು ಎದುರು ಬರುತ್ತಿರುವ ಶೂದ್ರನೊಬ್ಬನು ಎಳೆದುಕೊಂಡು ಬರುತ್ತಿರುವ ನಾಯಿಯೊಂದರ ಹತ್ತಿರ ಓಡಿಹೋಗಿ ಅದರ ತಲೆಯನ್ನು ಸವರುತ್ತಾ "ಟೈಗರ್-ಟೈಗರ್" ಎನ್ನುವಳು.]

ಅಯ್ಯಯ್ಯೋ ಇದೇನೇ ಹೊಲಸ್ನ! ಮುತ್ತೈದೆ ನಾಯೀನ್ಮುಟ್ಟಿಕೊಳ್ಳೋದು !

ಪಾತು: (ನಾಯಿಯನ್ನು ಅಪ್ಪಿಕೊಳ್ಳುತ್ತಾ) ಕಂತ್ರಿಯಲ್ಲ...ಜಾತಿ ನಾಯಿ, ಹೌಂಡು.

ನಾಗತ್ತೆ: ಹೌಂದು-ಹೌಂದು!

ಬೋರ: ಕೈಮುಗ್ದೇರವ್ವ! ಇದ್ಯಾಕ್ರವ್ವ ಇಂಗ್ಬಂದ್ಬಿಟ್ರಿ? ಒಂದು ತಂತೀನ್ಹಾಗನ ಕಳ್ಸಿದ್ರೆ, ಗಾಡೀ ತರ್ತಿದ್ನೆಲ್ಲ ಟೇಸನ್ನಿಗೆ, ಸಾಮಾನೆಲ್ರವ್ವಾ...?

ಪಾತು: (Constable) ಕಾನ್‌ಸ್ಟೇಬಲ್ಗೆ ಹೇಳಿದೇನೆ, ಕಳಸ್ತಾನೆ ಮನೇಗೆ.

ನಾಗತ್ತೆ: ಇದೇನಿದೂ? ಶೂದ್ರನ್ಹತ್ರ ಮಾತೂ?

ಪಾತು: (ತಿರುಗದೆ) ಬರೀ ಶೂದ್ರನಲ್ಲ. ನಮ್‌ಜವಾನ. ಮನೇಲಿ ಸೌಖ್ಯವೇನೋ ಎಲ್ರೂ?

ಬೋರ: ಉಂರವ್ವಾ.

ಪಾತು: ಎಲ್ಲಿ ಕರ್ಕೊಂಡ್ಹೋಗ್ತಿದ್ದೀಯಾ ನಾಯೀನಾ?

ಬೋರ: ಕೆರೆ ಕಟ್ಗೇ ಮೈತೊಳಿಯಾಕ್ರವ್ವಾ.

ನಾಗತ್ತೆ: ಅಲ್ವೇ ಮತ್ತೆ?! ಜಾತಿ ನಾಯೀ...ಹುಂ...ಕೆರೇಲಿ **ಶುಭ್ರವಾಗಿ** ಸ್ನಾನ ಮಾಡ್ಬಿಟ್ಟು, ಸ್ವಾಮಿ ದರ್ಶನ ಮಾಡಿಕೊಂಡ್ ಬರುತ್ತೇನೋ, ಈ **ಶ್ವಾನ ಮುಂಡೇದು!**...ಮುಂಜಿಯೇನಾದ್ರೂ ಆಗಿದೆಯೇನು ಈ ಮೃಗಕ್ಕೇ?...ಜಾತೀ ನಾಯೀ! ! ! ! ... ಇದಲ್ದೆ ಇನ್ನೆಷ್ಟು ಜಾತಿ ಮೃಗಗಳಿವೆ ನಿಮ್ಮ ಅರಮನೇಲಿ...?

ಪಾತು: (ಬೋರನಿಗೆ) ಚಿಕ್ರಾಯರು ಊರಿಂದ್‌ತಿರ್ಗಿ ಬಂದ್ಬಿಟ್ರೇನೋ?

ನಾಗತ್ತೆ: ಎಷ್ಟುರಾಯ್ರೋ ನಿಮ್ಮನೇಲಿ...?

ಪಾತು: ಚಿಕ್ರಾಯ್ರೂ ಅಂದ್ರೆ, ನಮ್ಮಣ್ಣ!

ನಾಗತ್ತೆ: ನಿಮ್ಮಣ್ಣಾ?...ಯಾವಣ್ಣಾ!...ಓಹೋ. ನಿನ್ಮದುವೇಲಿ ಕತ್ತೇ ಹಾಗೇ ಕೇಕೇ ಹಾಕ್ತಾ ಕುಣಿದಾಡ್ತಿತ್ತಲ್ಲಾ ಆ ಮಂಗ್ನೋ...

ಪಾತು: (ಕೋಪದಿಂದ ತೀಕ್ಷ್ಣ ದೃಷ್ಟಿಯನ್ನು ನಾಗತ್ತೆ ಮೇಲೆ ತಿರುಗಿಸಿ) ನಮ್ಮಣ್ಣನೇನು ಮಂಗ್ನಲ್ಲ!

ನಾಗತ್ತೆ: **ಸರಿ, ಮಾರ!** ಇಟ್ಕೋ...ವ್ಯತ್ಯಾಸ್ವೇನು? **ಮಾರನಿಗೆ ಸುಟ್ಕೋರೆ ನಿಮ್ಮಣ್ಣನಿಗೆ ಸೊಟ್ಕೋರೆ!**...ನಡಿ. ನಡಿ. [ನಾಗತ್ತೆ ಮೊದಲಾದವರು ಒಂದು ದಿಕ್ಕಿಗೂ, ಬೋರನೂ ನಾಯಿಯೂ ಇನ್ನೊಂದು ದಿಕ್ಕಿಗೂ ನಿಷ್ಕ್ರಮಣ.]

ಸೀನ್. ೩

[ರಾಮಣ್ಣನವರ ಬಂಗ್ಲೆಯ ಗೇಟಿನೆದುರಿಗೆ ನಾಗತ್ತೆ ಇತ್ಯಾದಿ ಬಂದು ಸೇರುವರು.]

ನಾಗತ್ತೆ: ಇದೇನೋ ನಿಮ್ಮನೆ?

ಪಾತು: ಹೌಸು (House-ಉ) ನಮ್ದು. (Site-ಉ) ಸೈಟು ನಾವೇ ತಗೊಂಡು (Build) ಬಿಲ್ಡ್ ಮಾಡಿಕೊಂಡದ್ದು.

ನಾಗತ್ತೆ: ಏ...ನೂ?

ಪಾತು: (ಘಟ್ಟಿಯಾಗಿ) **House ನಮ್ದು. Site ನಾವೇ ತಗೊಂಡು Build ಮಾಡಿಕೊಂಡದ್ದು.**

ನಾಗತ್ತೆ: (ಕಿಡಿಕಿಡಿಯಾಗಿ) ಏಷ್ಟುದೊಡ್ಡೇ ನಿನ್ಗಂಟ್ಲೂ...ದೊಡ್ಡಿಪತ್ರ ಏರ್ತಾ ಏರ್ತಾ ದೊಡ್ಗಂಟ್ಲಲ್ಲಿ ಕಿರ್‍ಲೋ ಕತ್ತೆಮರಿ ಹಾಗೆ ಏತ್ತತಾಳೆ ಸ್ವರಾನ...! ಇದೇನೇ ಸಾಲಿ ಹುಡುಗರು ಹಲಗೆ ಮೇಲೆ ಬರದಹಾಗೆ ಬಾಕ್ಲಿಗೆ ತಗಲ್ಸಿದೆ...?

ಪಾತು: ಅದು ನಮ್ಮನೆ ಹೆಸ್ರು...ಜ್ಞಾನ ವಿಲ್ಲ (Villa) ಅಂತ.

ನಾಗತ್ತೆ: ಗೊತ್ತೂ! ಅದನ್ನ ನಾಚಿಕೆ ಹೇಸ್ಕೆ ಇಲ್ದೇ ಬೀದೀಲಿ ಬಡಕೊಳ್ಳೋದೇ?...!

ಪಾತು: ವಿಲ್ಲ (Villa) ಅಂಬೋದು ಇಂಗ್ಲೀಷು..."ಇಲ್ಲಾ" ಅಂತಲ್ಲ...

ನಾಗತ್ತೆ: ಗೊತ್ತು! ಇಧೆ ಇಧೇ ಅಂತರ್ಥ...ಇಂಗ್ಲೀಷ್ ಭಾಷೇ...ತಳ್ಕಳ್ಕು...ತುರುಕಿನ ಹಾಗೆ ...**ಇಲ್ಲಾ ಅಂದ್ರೆ ಇಧೆ. ಮನೆ ಅಂದ್ರೆ ಮಷಾಣ**...ಮನುಷ್ಯರು ಅಂದ್ರೆ ಪ್ರೇತಗಳೂ...! ನಡಿ. ನಡಿ [ಗೇಟನ್ನು ಪ್ರವೇಶಿಸಿ ವೆರಾಂಡಾ ಮೆಟ್ಲಿನ ಪಕ್ಕದಲ್ಲಿರುವ ಕ್ರೋಟನ್ ಗಿಡಗಳ ಮರೆಯನ್ನು ಸೇರುತ್ತಲೇ ಅಲ್ಲಿ ಕೂತು ಸಂಭಾಷಿಸುತ್ತಿರುವವರ ಕೆಳಗಿನ ವಾಕ್ಯಗಳು ಕೇಳಿಬರುವುವು]

[**ಲಕ್ಷ್ಮೀ**: ಮೀಟಿಂಗ್ attend ಮಾಡೋಕೆ try ಮಾಡ್ತೇನೆ. Miss ಪ್ರಭಾಮಣಿ! Manage ಮಾಡೋಕಾಗದಿದ್ರೆ ನನ್ನ sympathy ಎಲ್ಲ ನಿಮ್ಮ movement ನಲ್ಲಿ ಸಂಪೂರ್ಣ ವಾಗಿದೆ ಅಂಬೋದು ಮರೀಬಾರದು. After all, heart ಅಲ್ವೆ ದೊಡ್ಡು.

Miss **ಪ್ರಭಾಮಣಿ**: ಅದು ನಿಜ್ವಯ...Mrs. ರಾಮಣ್ಣಾ...]

ನಾಗತ್ತೆ: ಇದೇನೇ ಇದೂ! ಯಾರಮನೇ?...ಕೊಂಗರ ಮನೇನೋ...ಚಟ್ಟೀಗಾರರ ಮನೇನೋ...ಕನ್ನಡ ಇಂಗ್ಲೀಷ್‌ನ ಕಲಸುಮೇಲೋಗರ ಮಾತಾಡ್ತಿಧಾರೆ...!

ಪಾತು: ಮಾತಾಡ್ತಿರೋದು ನಮ್ಮ Mother ಉ ಇನ್ನೊಬ್ರು; ಯಾರೋ visitorಊ...

[Miss. **ಪ್ರಭಾಮಣಿ**: ಇಂಥೂ ಸ್ತ್ರೀಗಳು ನಿಮ್ಮ ಆಗೆ ಇದ್ದರೆಟಾನೆ...Future ನಲ್ಲಿ ಸೀಮೆ. ಡೊರೆಸಾನಿಗಲ ಹಾಗೆ ಆಗಬಹುದು.

ಲಕ್ಷ್ಮೀ: ನಿಜ...of course ನಿಜ...ಹೊರ್ಟುಬಿಟ್ರಿರಾ...? ನಿಮ್ಮ Visitಗೆ ಬಹಳ thanks ಉ]

ನಾಗತ್ತೆ: ಓಹೋ! ಸೀಮೆ ದೊರೆಸಾನಿಗಳಾಗಬೇಕೋ! ಒ ಹ್ಹೋ ಹೊ! ಈಗ ಅರ್ಥವಾಯಿತು. ನಿನ್ನ ಹಾಳು ಚಾಳಿಗಳೆಲ್ಲ ಎಲ್ಲಿಂದ ಬಂತೂ ಅಂತ. ಈ ಹಾಳು ಕಾರ್ಬಾನೇಲಿ ತಯಾರಾಗಿರೋ ಹೊತ್ತಿಗೇನೆ ಮನೆ ಬಿಟ್ಟು ಮಾವನ ಮನೆಗೆ ಬಂದ್ಬಿಟ್ರಾನೂವೆ. ಸೊಟ್ಟಬೈತಲೆ ತಲೇಲಿ. ಸೀಮೆಸುಣ್ಣ ಮುಖಕ್ಕೆ. ಜಾತಿ ನಾಯಿ ನೆಕ್ಕಿ ಕುಂಕುಮವಿಲ್ಲದ ಹಣೆ. ಈ ದೊರಸಾನಿತನ. ಎಲ್ಲಾ...

[Miss. **ಪ್ರಭಾಮಣಿ**: (ಮೆಟ್ಟಿಲನ್ನು ಇಳಿಯುತ್ತಾ) Good Morning Mrs. ರಾಮಣ್ಣಾ.

ಲಕ್ಷ್ಮೀ: (ತಾನೂ ಇಳಿದು Miss. ಪ್ರಭಾಮಣಿಯು ಚಾಚಿದ ಕೈಯನ್ನು ಹಿಡಿದು ಕುಲುಕುತ್ತಾ) Good Morning Miss. ಪ್ರಭಾಮಣಿ.]

ನಾಗತ್ತೆ: **ಪ್ರಭಾಮಣಿ**...ಪ್ರಭಾ! ಮಣಿ!...ಮಿಸ್ಸು...ನೀನೇನ್ ತಾನೇ ಇಂಗ್ಲೀಷ್ ಕಿಲರ್ಕ್, ನೀನೆಷ್ಟು ತಾನೆ ಕೈಕುಲಕು ಆದರೆ ನಿನ್ನ ಕಪ್ಪು ಮುಖದ ಕಪ್ಪಂ ಕಪ್ಪೇನೋ ಹೋಗೋ ಹಾಗಿಲ್ಲ ಕಲಿಯುಗ ತೀರೋವರೆಗೆ! ಹೆಸರು ನೋಡು ಪ್ರಭಾಮಣಿ!...ಅಗ್ನೀಗೆ ಅಭಿಷೇಕ ಮಾಡಿ ಅಂಬಾರಿಯಲ್ಲಿಟ್ಟು ಜಂಬೂಸವಾರಿ ಹೊರಡಿಸಿದ ಹಾಗೆ ಇದೆ ಇವಳ ಪ್ರಭೆ!...ಈ ಪ್ರಭಾಮಣಿ ಜ್ವಾಲೆ ಶಮನ ಮಾಡೋಕೆ ಬಿಳೀ ಸೀರೆ ಬೇರೆ!...ಒಂದು ಹತ್ತು ವರ್ಷ ಸುಣ್ಣದ ಗೂಡ್‌ನಲ್ಲಿ ಕುಕ್ಕರ್ಸಿಸಿ ಅದೃಷ್ಟವಾಸ ಮಾಡಿಸಿದ್ರೆ ಒಂದು ವೇಳೆ ಬಣ್ಣ ಸ್ವಲ್ಪ...ಊ ಹೂಂ. ಅದೂ ಸಂದೇಹವೆ!

Miss **ಪ್ರಭಾಮಣಿ**: (ಪಾತುವನ್ನು ಗಮನಿಸಿ) Mrs. ರಾಮಣ್ಣಾ, ಪರ್ವಾಟಿ ಅಮ್ಮನವರು!... (ಪಾತುವಿನ ಹತ್ತಿರ ಬಂದು ಕೈಯನ್ನು ಚಾಚುತ್ತಾ) ಪರ್ವಾಟಿ ಅಮ್ಮನವರೇ, ನಿಮ್ಮ ಯಜಮಾನರು ಸೌಕಿಯವಾಗಿ ಇಧಾರೆಯೇ?

ಪಾತು: (ಕೈಯನ್ನು ಕುಲಕುತ್ತಾ) ಇಧಾರೆ.

ನಾಗತ್ತೆ: ಇಧಾನಿಧಾನೆ...ಗಂಡನ ಮನೆ ಬಿಟ್ಟು ಹೆತ್ತವರ ಮನೆಗೆ ಬಂದರೂನೂನೆ ತಾಳೀ ಕಟ್ಟಿದ್ದೊಂದು ಕ್ರಿಮಿ ಇನ್ನೂ ಇಧೇ ಅಂತಾದರೂ ಜ್ಞಾಪಕ ಇಧೆಯಲ್ಲ!...ಆಶ್ಚರ್ಯ! ಪರಮಾಶ್ಚರ್ಯ!

(Miss. ಪ್ರಭಾಮಣಿಯು ಪ್ರಯಾಣೀಕರನ್ನು ಹಾಸಿ ನಿಷ್ಕ್ರಮಿಸುವಳು)

ಪಾತು: (ಮಾತೆಯನ್ನು ಸೇರಿ) ಅಮ್ಮಾ, ನಾಗತ್ತೆ ಬಂದಿಧಾರೆ. (ಮೆಟ್ಲು ಹತ್ತಿ ವರಾಂಡಾದ ಆರಾಮ ಕುರ್ಚಿಯನ್ನು ಅಲಂಕರಿಸಿ ಕಾಲುಗಳನ್ನು ತೂಗುತ್ತ ಕೂಡುವಳು.)

ಲಕ್ಷ್ಮೀ: ಬಂದ್ರಾ... ?

ನಾಗತ್ತೆ: ಇಲ್ಲ! ಇನ್ನೂ ಊರ್ನಲ್ಲೇ ಇಧೇನೆ!...ಇದೇನು ಜಾಣತನದ ಪ್ರಶ್ನೆಯೋ?...ಊರು ಬಿಟ್ಟು ಊರಿಗೆ ಬಂದು ಎದುರಿಗೆ ನಿಂತಿರೋಪ್‌ರನ್ನ ನೋಡಿ ಬಂದ್ರಾ ಅಂದ್ರೆ, ಏನು ಬುದ್ಧಿ ಮಂದಾನೋ, ಇಲ್ಲ ದೃಷ್ಟಿ ಮಧ್ಯಸ್ಥಾನೋ, ನನಗೇನ್ಗೊತ್ತು!...?

ಲಕ್ಷ್ಮೀ: ಸಾತೂ! ಬಂದ್ಯಾ ಮಗೂ. ಬನ್ನಿ ಒಳಗೆ (ಮೂವರೂ ಮೆಟ್ಲನ್ನು ಹತ್ತಿ ವೆರಾಂಡಾ ಸೇರುವರು.)

ಪಾತು: ಅದೇನಮ್ಮ Miss. ಪ್ರಭಾಮಣಿ ಬಂದಿದ್ದದ್ದು?

ಲಕ್ಷ್ಮೀ: ಏನೇನು? Association Secretary ಅಪ್ಳು. ನಾನು President ಉ Next meeting arrange ಮಾಡೋಕೂ, ನಾನು last Lecture ಕೊಟ್ಟಿದ್ರ ವಿಷಯ Hindu Paperನಲ್ಲಿ ಬಂದ cuttingನೂ ತಂದು ಕೊಡೋಕೆ ಬಂದಿದ್ಲು. ಇಕೋ ನೋಡು, (ವರ್ತಮಾನ ಪತ್ರದಿಂದ ಕತ್ತರಿಸಿದ ಒಂದು ಅಂಶವನ್ನು ಪಾತುವಿಗೆ ನೀಡಿ) ಓದು.

ಪಾತು: (ಚಾಚಿದ ಕಾಲುಗಳನ್ನು ಅತ್ತಿತ್ತ ಆಡಿಸುತ್ತಾ ಓದುವಳು.)

"Rampur Notes

Women's Progressive Union. Mrs. Ramanna, our popular President delivered a well thought out lecture on ideal methods of up-bringing of children. The discourse was listened to with rapt attention. It is felt assured that brought upon the lines laid down by this most enlightened lady the future generation of Rampur

will take the most prominent part in the activities of our motherland". ಇದೇನಮ್ಮ? ಇಷ್ಟೇನೆ?

ಲಕ್ಷ್ಮೀ: ಇನ್ನೆಷ್ಟು ಬೇಕೂ?

ಪಾತು: ಅದೇನ್ ನೀನುಕೊಟ್ಟ lectureಉ?

ಲಕ್ಷ್ಮೀ: ಬರದಿದೆಯಲ್ಲ. Ideal methods of upbringingಉ ಅಂತ.

ನಾಗತ್ತೆ: ಲೆಕ್ಚರ್ ಕೊಟ್ರಾ ನೀವೂ...? ಅದೇನ್ ಲೆಕ್ಚರೂ...?

ಲಕ್ಷ್ಮೀ: ಮನೆಗಳಲ್ಲಿ ಹುಟ್ಟಿದ ಮಕ್ಕಳು ಮುಂದಕ್ಕೆ ನಮ್ಮ ಮಾತೃಭೂಮಿಗೆ ಉಪಯೋಗವಾಗೋ ಪ್ರಜೆಗಳಾಗಲು ಚಿಕ್ಕಂದಿನಲ್ಲಿಯೇ ಎಂಥೆಂಥ ಶಿಕ್ಷೆ...ತರಪೇತು. ತಾಯಿ ತಂದೆಗಳು ಕೊಡಬೇಕಾದ್ದು, ಅಂಬೋ ವಿಷಯ...

ನಾಗತ್ತೆ: ಓಹೋ! ಅದೆಂಥ ತರಪೇತು ಕೊಡಬೇಕೋ? ಕೇಳಬಹುದೋ?

ಲಕ್ಷ್ಮೀ: ಅದಕ್ಕೇನು ಕೇಳಿ, ಮೇಲೆ ಬನ್ನಿ.

ನಾಗತ್ತೆ: ಕ್ಷಮಿಸಿ. ಆ ಮಸೀ ಮುಖದ ಸುಪ್ರದೀಪ ಕಾಲಿಟ್ಟ ಜಮಖಾನೆ! ನಾನೇನು ಕಿವುಡಲ್ಲಾ: ಇಲ್ಲಿಂದ್ಲೇ ಕೇಳತೇನೆ.

ಲಕ್ಷ್ಮೀ: ನಿಮ್ಮಿಷ್ಟ. ಮಕ್ಕಳನ್ನ ಸಾಕೋದು ಹೂವಿನ ಗಿಡ ಸಾಕಿದ ಹಾಗೆ ಸಾಕಬೇಕು; ಪಾತಿ ಚೆನ್ನಾಗಿ ಕಟ್ಟಿ, ಆಹಾರ ಇತ್ಯಾದಿಗಳನ್ನ ಚೆಲ್ಲಿ ಶುಭ್ರವಾದ ನೀರು ಬಿಟ್ಟು ನಾಜೋಕಾಗಿ ಹ್ಯಾಗೆ ಹೂವಿನ ಗಿಡಗಳನ್ನ ಬೆಳಸ್ತೇವೋ ಅದೇಪ್ರಕಾರ ಮಕ್ಕಳು ಬೆಳೆಯೋ ಪರಿಸ್ಥಿತೀನೆಲ್ಲಾ ಪರಿಶುದ್ಧವಾಗಿಟ್ಟು. ಇರೋ ದುರ್ಗುಣಗಳನ್ನೆಲ್ಲಾ ತಿದ್ದಿ. ಸುಗುಣಗಳನ್ನ ಚಿತ್ರಿ ಬೆಳಸಿದ್ದರ ಫಲ. ಸುವಾಸನೆಭರಿತವಾದ ಕುಸುಮಗಳಾಗಿ ಮುಂದಕ್ಕೆ ಬಂದು. ಬೆಳೆಸಿದವರಿಗೂ ಅವುಗಳ ಅನ್ಯೋನ್ಯತೇನ ಅನುಭವಿಸುವವರಿಗೂ ಆನಂದವನ್ನು ಕೊಡುವುದರಲ್ಲಿ ಸಂಶಯವೇನೂ ಇಲ್ಲ. ಅಂಬೋದು ನನ್ನ lectureನ ಸಾರಾಂಶ.

ನಾಗತ್ತೆ: ಹ್ಯಾಗಿರಬೇಕು. ಹ್ಯಾಗೆ ಮಾಡಬೇಕು. ಅಂಬೋದ್ನೆಲ್ಲಾ ಸಿಕ್ಕಾಪಟ್ಟೆ ಬಾಯಿಂದ ಬೊಗಳೋಕೆ ಬದಲಾಗಿ ತಾನೇ ತನ್ನ ಹೊಟ್ಟೇಲಿ ಹೆತ್ತ ಒಂದೆರಡು ಮಕ್ಕಳನ್ನ ಸಾಕಿ **ನಮೂನೆಯಾಗಿ** ತೋರ್ಸ್ಸೋದಲ್ವೇ ಉತ್ತಮಾ? ಸುಮ್ಮನೆ ಬಾಯಿಂದ ಕುಸುಮಾ ಅಂತ ಕಿರಚಿದಾಕ್ಷಣವೇ...

ಲಕ್ಷ್ಮೀ: ಯಾಕೇ...?ನಮ್ಮ ಪಾತು...?

ನಾಗತ್ತೆ: ಓಹೋ! ಇದನ್ನ ಕುಸುಮದ ಲೆಕ್ಕಾಚಾರಕ್ಕೆ ಸೇರಿಸಿಬಿಟ್ರಾ!...? ಈ ಪಕ್ಕದ ಹೂವು. ನಿಮ್ಮ ಕಣ್ಣಿಗೊಂದುವೇಳೆ ಕುಸುಮದ ಹಾಗಿದ್ರೂನೂವೆ ಮಿಕ್ಕೋರ ಕಣ್ಣಿಗೆ ಕಳ್ಳೀ ಹಾಲು! ಅಲ್ಲಾ. ಬ್ರಹ್ಮಕುಲದಲ್ಲಿ ಹುಟ್ಟಿ ಬ್ರಾಹ್ಮಣಿಕೇನ ಮೂಲೇಗೆ ಕುಕ್ಕಿ ಒಂದ್‌ಮಡೀ ಒಂದ್‌ಆಚಾರ ಇಲ್ದೇ. ಹೆಗ್ಗಣ ಹಂದಿ ತಿನ್ನುವ ಪರಂಗಿಯವರ ಚಮ್ಮಡಕ್ಕರಿಗಿ. ತೊನ್ನಿನ ತೊಗಲು-ಚೆಕ್ಕಿನ ಕಣ್ಣು-ಕೆಂಗೂದ್ಲು-ಬಿಟ್ಟು. ಮಿಕ್ಕ ವಿಷಯದಲ್ಲೆಲ್ಲಾ. ಸೀಮೆ ದೊರಸಾನಿಗಳಾಗಬೇಕೂಂತಾ ಉತ್ತಮಜಾತಿ ಕುಲಸ್ತ್ರೀಯರು ನಲಿದಾಡೋ ಮನೆಗಳಲ್ಲಿ ಹುಟ್ಟಿದ್ಮಕ್ಳೂ ನಮ್ಮ ದೇಶದ ನಡತೆ ಆಚಾರಾನ ಮುಂದಕ್ಕೆ ಹ್ಯಾಗ್ನಡಸ್ತಾರೂ? "ಪಿರಿಯಕ್ಕನ ಚಾಳಿ ಮನೆಗೆಲ್ಲ" ಅಂತ ಹಿರಿಯರಂಬೋ ಸಾಮತಿ ಸುಳ್ಳೇ...? ಶಿವಶಿವ. ನನ್ಗ್ಯಾಕೆ ನಿಮ್‌ಲೆಕ್ಚರಿನ ಮಾತು. ನಾನಿಲ್ಲಿ ಬಂದದ್ದೂ. ಹುಟ್ಟಿದ ಮನೆ ಸೇರುತ್ಲೂ ಹಿರಿಯರೂ ಅಂಬೋ ಮರ್ಯಾದೆ ಇಲ್ದೇ ಕಾಲ್ಚಾಚಿಕೊಂಡ್‌ಬಿದ್ದಿರೋ ಈ ಕತ್ತೇಮರಿ....ಅಲ್ಲ...ನಿಮ್ಮ ಕುಮಾರೀನ ...ತಲ್ಬಿಸೋಕೆ...ಬರ್ತೇನೆ! ನಡಿ, ಸಾತೂ!

ಲಕ್ಷ್ಮೀ: ಯಾಕೆ, ಇಲ್ಲೆ ಸ್ನಾನಮಾಡಿಬಿಟ್ಟು, ಊಟ...?...

ನಾಗತ್ತೆ: ಕ್ಷಮಿಸಿ, ತೊಂದರೆ! (ತಾತ್ಸಾರಭರಿತವಾದ ಮುಗುಳು ನಗೆಯಿಂದ) ತೊಂದರೆ! ನಿಮ್ಮ ಕಪ್ಪು ದೊರೆಸಾನಿಗ್ಳೂ, ನಿಮ್ಮ ಬೋರಗ್ಳೂ, ಇಂಥ ಪುಣ್ಯಜನರ ಪಾದಾರವಿಂದ ತಗಲಿದ ಈ ಮನೇನ ಗುಡ್ಸಿ ಸಾರ್ಸಿ ಪುಣ್ಯಾಚನಾ ಮಾಡಿ, ನಾನೂ ತಕ್ಕ ಪ್ರಾಯಶ್ಚಿತ್ತಾನೂ ಮಾಡಿಕೊಂಡೂ, ಆಮೇಲೆ ಊಟಕ್ಕೇಳೋದು, ತೊಂದ್ರೆ ತೊಂದ್ರೆ...! (ಕ್ರಮೇಣ ಮುಖವು ರೌದ್ರವನ್ನು ತಾಳಿ) **ಒಡೆದು ಹೇಳಿಬಿಡತೇನೆ ಕೇಳೀ! ನಿಮ್ಮೀ ಹಾಳು ಆಚಾರಗೆಟ್ಟಮನೇಲಿ ಕಾಲಿಟ್ಟೆದ್ ಪಾಪಕ್ಕೇನೆ** ರೌರವಾದಿ ನರಕ ನನಗೆ ಕಾದಿರೋದಲ್ದೇ, ಒಂದು ತೊಟ್ಟು ಜಲಪಾನ ಮಾಡಿದ್ನೋ ನಿಮ್ಮನೇಲಿ, ನನ್ಜಾತಿ ನಾಶಾ ಆಗೋದಲ್ದೇ ಬಿರುಗಾಳೀಗೆ ಹುಣಸೇ ಹಣ್ಣುಗಳು ಉದರಿದ ಹಾಗೆ ಪಟಪಟ ಪಟಪಟ ಪಟಾಂತ ನಮ್ಮ ಕುಲದ ಪಿತೃಗಳು ಉದುರಿಬಿಟ್ಟಾರು ಮೇಲ್‌ಲೋಕದಿಂದಾ... ಬರ್ತೇನೆ! ನಡೀ, ಸಾತೂ! (ನಾಗತ್ತೆಯೂ ಸಾತೂ ನಿಷ್ಕ್ರಮಣ)

ಲಕ್ಷ್ಮೀ: ಅಬ್ಬಾ! ಏನು ಹೆಂಗ್ಸೆ!

ಪಾತು: ಹುಷಾರಮ್ಮ! ಅವಳ ಕಿವೀಗ್ ಬಿದ್ದೀತೂ...ತಿರಿಗಿ ಬಂದು ತಿಂದ್ಬಿಟ್ಟಾಳು, ನಿನ್ನೂ ನನ್ನೂ (ಕುರ್ಚಿಯನ್ನು ಬಿಟ್ಟು ನಾಲ್ಕೈದು ಮೆಟ್ಲುಗಳನ್ನು ಇಳಿದು ಬಗ್ಗಿನೋಡಿ) **ಇನ್ಬೇಕಾದ್ದು ಹೇಳ್ಕೋ! ತೊಲಗಿತಾ ಪಿಶಾಚಿ!**

ಲಕ್ಷ್ಮೀ: ಅದೆಲ್ಲಾ ಇರ್ಲೀ! ನೀನೇನ್ ಕಾಗದಬರದು ಹೆದಸ್ರೋದು, ಭಾವೀಲ್ಬಿದ್ದ್ ಸಾಯ್ತೀನೆ ಅಂತಾ?

ಪಾತು: ಹೆದಸ್ರೋದೇನು, ದಿಟಾನೇ! ಬರದದ್ದು, ಇಲ್ಲಿ ಮನೆಗೆ ಕರಸ್ಕೊಳ್ಳೋಕೆ...ನಿನ್ನೆದುರ್ಗೇ ಹೋಗಿದಾಳಲ್ಲ ಈ ಪಿಶಾಚಿ, ಅವರ್ಮನೇಲೀ ಸಾವಿರ ದೆವ್ವಾ ಹತ್ತಾವು ಪಿಶಾಚಿ ಪಾಕ ಇಳಿಸಿದ **ಖೋವಾ** ಅಮ್ಮ ಅವ್ಳು. **ಒಂದೇ ಮಾತ್ನಲ್ಲಿ ಹೇಳ್ತೀನಮ್ಮ, ಇನ್ನಾರ್ತಿಂಗ್ಳು ನಾನು ಆ ಮನೇಗೆ ಹೋಗೋ ಮಾತೆತ್ತಿದ್ರೋ, ಈ ಮನೇಲಿ ಒಂದು ಭಾವಿ ಇರೋದ್ನ...ನನಗೆ ಜ್ಞಾಪಿಸ ಬೇಕಾದ್ದಿಲ್ಲ....ಈ ಮಾತು ಖಂಡಿತ.**

ಲಕ್ಷ್ಮೀ: ಏನು ಹಟವೇ ನಿನ್‌ದು. ಚೆನ್ನಾಗಿ ಹೇಳಿದ್ಲಾಕೆ,...'ಎಕ್ಕದ ಹೂವು, **ಕಳ್ಳೀ** ಹಾಲು, **ಕತ್ತೆ**ಮರಿ'...ಅಂತ!...(ಗೇಟಿನ ಕಡೆಗೆ ಕಿವಿಗೊಟ್ಟು) ಯಾರದು, ಬಂದ್ಹಾಗಿದೆ?

[ನರಸಿಂಹಯ್ಯನೂ ಪಾರ್ವತಮ್ಮನೂ Verandah ಮೆಟ್ಲನ್ನು ಸೇರುವರು.] 'ಹೋಗಿ ನಿಮ್ಮ ತಂದೇನ ಕರಿಯೆ. (ಪಾತುವು ನಿಷ್ಕ್ರಮಿಸುವಳು)

(ಪಾರ್ವತಮ್ಮನಿಗೆ) ಬನ್ನಿ ಒಳಗೆ.

[ಪಾರ್ವತಮ್ಮನು ಮೆಟ್ಲನ್ನು ಹತ್ತಿ ಲಕ್ಷ್ಮೀದೇವಮ್ಮನೊಡನೆ ಮನೆಯೊಳಗೆ ಪ್ರವೇಶಿಸುವಳು. ನರಸಿಂಹಯ್ಯನು ಗೋಡೆಗೆ ತಗುಲಿಸಿರುವ ಚಿತ್ರಪಟಗಳನ್ನು ಒಂದೊಂದಾಗಿ ನೋಡುತ್ತಿರುವನು.]

ರಾಮಣ್ಣ: (ಪ್ರವೇಶಿಸಿ) My dear boy ಬಂದೆಯಾ, goodಉ! ಕೂತ್ಕೊ.

ನರ: ಕೂತ್ಕೋತೇನೆ, ಆದ್ರೆ ಯಾರದ್ದೀ ಫೋಟೋ?

ರಾಮ: Most eccentric man in India ಆತ! ಮೊಳದುದ್ದ ಜುಟ್ಟು ದಾಡಿ ಇಟ್ಕೊಂಡು ಬೋಳಪುರದಲ್ಲಿ ಸ್ಕೂಲು ಇಟ್ಟಿದಾನೆ. **ಬೋಳಪುರ...ಜೋಕು** (ಎನ್ನುತ್ತಾ ಬೆಟ್ಟಿನಿಂದ ನರಸಿಂಹಯ್ಯನ ಪಕ್ಕೆಯನ್ನು ಚುಚ್ಚುವನು)...ಬಾ. Sit down. ನಿನ್ನ expect ಮಾಡ್ದೆ ನಾನು. Clubನಲ್ಲಿ, ಕೃಷ್ಣರಾಯ ನಿನ್ನ daughter ವಿಷಯ ನಿನ್ನೆ broach ಮಾಡಿದಾಗ್ಲೇ ಇವತ್ತೋ ನಾಳೇನೊ honour of your visit ದಯಪಾಲಿಸ್ತೀಯಾ ಅಂತ expect ಮಾಡ್‌ತಿದ್ದೆ... come into the office!......have a cup of coffee!

ನರ: (ಎದ್ದು ರಾಮಣ್ಣನನ್ನು ಹಿಂಬಾಲಿಸುತ್ತಾ) ಬೆಳಿಗ್ಗೇನೇ ಆಯಿತು ನನಗೆ...

ರಾಮು: ಅದ್ರೇನು...ಅಗ್ನಿ ಇನ್ನೊಂದು doseಉ! (ಘಟ್ಟಿಯಾಗಿ) **ನಾರಾಯಣಾ!**

(ಆಫೀಸ್ ರೂಮಿನ ದ್ವಾರದಿಂದ ನರಸಿಂಹಯ್ಯನು ಅತನ ಹಿಂದೆ ನಿಷ್ಕ್ರಮಿಸು.)

ಲಕ್ಷ್ಮೀ: (ಬೇರೊಂದು ಬಾಗಿಲಿಂದ ಪಾರ್ವತಮ್ಮನೊಂದಿಗೆ ಪ್ರವೇಶಿಸಿ) ಬನ್ನಿ ಯಾರೂ ಇಲ್ಲ. ಆಫೀಸ್ ರೂಂನಲ್ಲಿಧಾರೆ. ಕೂತುಕೊಳ್ಳಿ...(ಪಾರ್ವತಮ್ಮನು ಸುತ್ತಲೂ ನೋಡುವುದನ್ನು ಗಮನಿಸಿ) ಏನು, ಮಗಳು ಮುಂದೆ ಬಾಳೋ ಮನೆ ಹ್ಯಾಗಿದೇಂತ ನೋಡತೀರಾ?...ನಿನ್ನೇ ಹೇಳಿದ್ರಿವ್ರು. ಒಂದ್ವೇಳೆ ನೀವಿಬ್ರೂ ಬಂದೀರಿ ಅಂತ. ಜೋಯಿಸ್ರೂ ಹೇಳಿದ್ರು. ನಿಮ್ಮ ಹುಡುಗಿ ಜಾತಕ ದಿವ್ಯವಾಗಿಧೆ, ನಮ್ಮ ಕಿಟ್ಟಿ ಜಾತಕಕ್ಕೆ ಸರಿಯಾಗಿ...ಅರುಂಧತಿ ವಸಿಷ್ಠರ ಜಾತಕಗಳ ಹಾಗೆ ಹೊಂದುತ್ತೆ ಅಂದ್ರು. ನಾವೇನೋ ಬಹಳ ಆಶೆಯಿಂದ ಎದುರುನೋಡ್‌ತಿಧೇವೆ. ನಿಮ್ಮಗಳ ಅಭಿಪ್ರಾಯವೇನೋ...?...ಆದ್ರೆ ಹಿರಿಯರು ಹೇಳೋ ಹಾಗೆ ಶುಭಸ್ಯ ಶೀಘ್ರಂ ಅಂತಾ ಎಷ್ಟಕ್ಕೆಷ್ಟು ಬೇಗನೆ ತೀರ್ಮಾನ ಮಾಡಿ ಕಾರ್ಯಾನ ನೆರವೇರಿಸ್‌ತೇವ್ರೋ ಅಷ್ಟಕ್ಕಷ್ಟು ಬೇಗನೆ ಹಿರಿಯರ ಯೋಚ್ನೆ ತಪ್ಪುತ್ತೆ. ನಮ್ಮತ್ತೆ...ಅದೇ ಕಿಟ್ಟಿ ಅಜ್ಜಿ. ಅವನು ಗೃಹಸ್ಥಾಶ್ರಮ ಅವಲಂಬಿಸಿದ್ರೇನೇ ಅವನಿಗಿಟ್ಟಿರೋ ಆಸ್ತಿ ಅವನ ಕೈಗಿಡತೇನೇಂತ ಕೂತಿಧಾಳೆ...ವಯಸ್ಸಾದ ಮುದ್ಕಿ...ಮೊದಲೆ! ನಿಮ್ಮ ಅಭಿಪ್ರಾಯ ಏನೊ...?

ಪಾರ್ವ: ನಮ್ಮ ಯಜಮಾನ್ರ ಅಭಿಪ್ರಾಯ ಹ್ಯಾಗೋ ಹಾಗೆ...

ಲಕ್ಷ್ಮೀ: ಹಾಗಾದ್‌ರೆ ಅವರ ಅಭಿಪ್ರಾಯತಾನೆ ಏನು?

ಪಾರ್ವ: ಏನೇನೂ?...ಸಮ್ಮಂಧದಲ್ಲಿ ಇಷ್ಟವೆ. ಆದ್ರೆ ನಮಗೂ ಕಾಲೇಜಿನಲ್ಲಿ ಓದ್‌ತಾ ಇರೋ ಮಗನ ಮುಂದಿನ್ಯೋಚ್ನೆಯ ಜವಾಬ್ದಾರೀ ಬಿದ್ದಿರೋದ್ರಿಂದಾ ನಮ್ಮ ವೆಂಕೂ ವಿಷಯದಲ್ಲಿ... ಮದ್ವೇ ಖರ್ಚು ನಿಧಾನಿಸಿ ನಿರ್ಧರಿಸಬೇಕಾಗಿದೆ.

ಲಕ್ಷ್ಮೀ: ಒಳ್ಳೆ ಮದುವೆ ಖರ್ಚು ಅಂದ್ರೆ. ನಾಲ್ಕು ಬ್ರಾಹ್ಮಣ್ರನ ಕರದು ಹೋಮಾನೋ ಅದೆಂಥಾದ್ದೋ ಮಾಡಿಸಿ, ಬ್ರಾಹ್ಮಣರಿಗೆ ಅನ್ನ ಹಾಕಿ ತಾಳೀಕಟ್ಟೋ ಬಾಬತ್ತಿಗೆ ಖರ್ಚೇನು ಯೋಚನೆಯೇನು?

ಪಾರ್ವ: ಅದೊಂದೇ ಖರ್ಚಲ್ಲಾ. ಆದ್ರೆ ಈ ಕಾಲದಲ್ಲಿ...ಈ ವರದಕ್ಷಿಣೇಂತಾ ಏರ್ಪಾಟಾಗಿಧೆಯಲ್ಲ ಅದು ಈ ವಿಷಯದಲ್ಲಿ ಎಷ್ಟಾಗುತ್ತೋ ಏನೋ ಅಂತ ನಮ್ಮ ಯಜಮಾನ್ರಿಗೆ ಯೋಚ್ನೆ.

ಲಕ್ಷ್ಮೀ: (ಗಂಭೀರವಾಗಿ) **ದಯವಿಟ್ಟು ಆ ವರದಕ್ಷಿಣೆ ಮಾತು ಈ ಮನೇಲಿ ಎತ್ತಬೇಡಿ !**

ಪಾರ್ವ: ಕೋಪಿಸಬಾರದು. ಎಂಥೆಂಥಾ ಅಂತಸ್ತು ಐಶ್ವರ್ಯ ಇರೋ ಕುಟುಂಬಗಳಲ್ಲೂ ಈ ವರದಕ್ಷಿಣೆ ಅಂಬೋದು ಸಂಪ್ರದಾಯವಾಗಿ ಹೋಗಿರೋದರಿಂದಲೇ...ಮುಂದಕ್ಕೆ ನಮ್ಮ ನಮ್ಮಲ್ಲಿ ಮನಸ್ತಾಪ ಬರಬಾರದೂ ಅಂತಾ ನಾನ್ಹೇಳಿದ್ದು. ಕೋಪಿಸಿಕೋಬಾರದು.

ಲಕ್ಷ್ಮೀ: ಕೋಪವೇನೂ ಇಲ್ಲ. ಆದರೆ ನೀವು ಹೇಳಿದಹಾಗೆ ಎಂಥೆಂಥಾ ಅಂತಸ್ತು ಐಶ್ವರ್ಯ ಇರೋ ಕುಟುಂಬಗಳಲ್ಲಿ ಈ ಸಂಪ್ರದಾಯ ಇದ್ರೂವೆ ಅಂಥ ಅಂಥಾ ಅಂತಸ್ತು ಐಶ್ವರ್ಯ ನಮಗೆ ಇಲ್ಲದಿದ್ರೂನೂವೆ **ಮಗನ್ನ ದುಡ್ಡಿಗೆ ಮಾರಿಕೊಂಡು ಸೊಸೇನ ಮನೇಗೆ ತಂದುಕೊಳ್ಳೋ ತುಚ್ಛಸ್ಥಿತೀಗೆ ನಮ್ಮ ಕುಟುಂಬ ಇನ್ನೂ ಇಳೀಲಿಲ್ಲ. ಇದನ್ನ ನೀವು ದಯವಿಟ್ಟು ಮರೀಬಾರದು.** (ಪಾರ್ವತಮ್ಮನ ಮುಖವು ತಿಳಿಯಾಗುವುದು)...ಏನೋ ಹಕ್ಕಿಗಳ ಹಾಗೆ ಹುಟ್ಟಿದವು ನಮ್ಮ ಮಕ್ಕಳು. ಹಕ್ಕಿಗಳ ಹಾಗೆ ಬೆಳೆದವು. ಅವುಗಳಿಗೆ ರೆಕ್ಕೆಗಳು ಬಂದು ತಾವು ತಾವೇ ಹಾರೋಕೆ ಶಕ್ತಿ ಬರುತ್ಲೂನೂವೆ ಒಂದು ಕುಟುಂಬಾ ಅಂತಾ ಅವುಗಳಿಗೆ ಕುದುರಿಸಿಕೊಟ್ಟು ಅವುಗಳು ಮಾಡೋ ಸಂಸಾರಾನ ಅಲ್ಪಸ್ವಲ್ಪ ದಿನ ನೋಡಿ ಸಂತೋಷಪಟ್‌ಬಿಟ್ಟು ಶಾಂತಮನಸ್ಕರಾಗಿ ಕಣ್ಮುಚ್ಚೋದಲ್ವೆ... ನಮ್ಮಗಳ ಕರ್ತವ್ಯ...? (ಪಾರ್ವತಮ್ಮನು ಮಾತಿನಲ್ಲಿ ಮೈಮರೆತಿರುವಳು)

ಲಕ್ಷ್ಮೀ: ಹಾಗೇ ನೀವು ಒಪ್ಕೋಪಕ್ಷಕ್ಕೆ...ಹಕ್ಕಿಗಳು ಅಂದೆ...ಆ ಹಕ್ಕಿಗಳಿಗೂ ವಾಸ ಮಾಡೋಕೆ ಒಂದು ಗೂಡು ಬೇಡವೆ?...ನಿಮ್ಮ ಮಗಳು, ಮುಂದಕ್ಕೆ ಅವಳ ಗಂಡ. ನಿಮ್ಮೊಮ್ಮಕ್ಳು, ಯಾವ ಅಡಚಣೆಯೂ ಇಲ್ದೆ ಸಂತೋಷ ಸೌಕರ್ಯದಿಂದ ವಾಸಮಾಡೋಕೆ. ಭೋಗ್ಯಕ್ಕೆ ಬಿಟ್ಟಿರೋ ಈ ಮನೇನ ನಿಮ್ಮಗಳಿಗೆ ಬಿಡಿಸಿಕೊಡೋ ವಿಷಯದಲ್ಲಿ ನೀವೂ ನಿಮ್ಮ ಯಜಮಾನ್ರೂ ಉತ್ಸಾಹಿಸೋ ಪಕ್ಷಕ್ಕೆ, **ಬೇಡಾ** ಅಂತ ಹೇಳೋ ಹಕ್ಕು **ನನಗಾಗ್ಲಿ** ನಮ್ಮ **ಯಜಮಾನ್ರಿಗಾಗ್ಲಿ ಇಲ್ವೇ ಇಲ್ಲ** ಅಂತ ನಾನೊಪ್ಪಿಕೊಳ್ಳೇಬೇಕು.

ಪಾರ್ವತಿ : (ಚಮಕಿತಳಾಗಿ) ಭೋಗ್ಯಕ್ಕೆ ಬಿಟ್ಟಿದೆಯೆ!...ಹೊಸಮನೆ! !

ಲಕ್ಷ್ಮೀ : ಹೊಸಮನೆ ಅಂದ್ರೇನು! ಹೊಸಲು ದಾಟೋವರೇಗೂ ಹೊಸಮನೆ... ಅರ್ಥವಾಯಿತು ನಿಮಗಾಗೋ ಆಶ್ಚರ್ಯ... ಸರ್ಕಾರಿ ಸಂಬಳ, ಅಲ್ಲದೆ ಸಂಪಾದ್ನೆ, ಆಸ್ತಿ ಬಡ್ಡಿ, ಇಷ್ಟಿಟ್ಕೊಂಡು ಲೋಕದೆದುರಿಗೆ ದೊಡ್ಕುಟುಂಬಾ ಅಂತ ಅನ್ನಿಸಿಕೊಳ್ತಿರೋರಿಗೆ, ಹೊಸದಾಗಿ ಕಟ್ಟಿದ ಬಂಗ್ಲೆಗೆ ಭೋಗ್ಯದ ತಕ್ರಾರು ಎಲ್ಲೀದೂ ಅಂತ ನಿಮಗೆ ತೋಚೋದು ಸಹಜವೆ!!!! ಆದರೆ ದೊಡ್ಡ ಕುಟುಂಬಗಳನ್ನು ನೋಡಿ ಬೆರಗಾಗೋ ಬಡ ಜನಗಳಿಗೆ ದೊಡ್ಡ ಮನುಷ್ಯರಿಗೆ ಇರೋ...ಕೊರತೆಗಳು ಗೊತ್ತಾಗೋದಿಲ್ಲ. ಎಷ್ಟು ಕಷ್ಟಬಂದ್ರೂನೂವೆ **ಹೇಗಾದ್ರೂ ಹಲ್ಲು ಕಚ್ಚಿಕೊಂಡು ಅಡಗಿಸ್ಕೊಂಡು, ಅಂತಸ್ತನ್ನ ಕಾಪಾಡಿಕೋಬೇಕಾಗುತ್ತೆ**...ಆದ್ರೆ ನಮಗೆಷ್ಟು ನಷ್ಟವಾಗಿದ್ರೂನೂವೆ ಎಷು ಖರ್ಚಾಗಿದ್ರೂನೂವೆ ವ್ಯರ್ಥವಲ್ಲ. ಆದರಿಂದ ಮುಂದಕ್ಕೆ ಬರೋ ಫಲಾ ನಮ್ಮ ಕಿಟ್ಟು ಮೂಲಕ ನೀವೇ ಅನುಭವಿಸ್ತೀರಾ...ಹೇಳ್ತೇನ್ಕೇಳಿ! ನಮ್ಮ ಕಿಟ್ಟೂ ಹುಟ್ಟೋವಾಗ್ಲೇ ಬಲು ನಾಜೋಕು...ಅದೇಥಾದ್ದೊ... ಹಗುರ....ಅಲ್ಲಾ ನಯ...delicate ಅಂತಾರಲ್ಲ ಇಂಗ್ಲೀಷಿನಲ್ಲಿ, ಅದು. ಮೂರ್ ಡಾಕ್ಟರುಗಳು ನಾಲ್ಕುನರ್ಸುಗಳು...ಬೆಳೀತಾ ಬೆಳೀತಾನೂ ನಾಜೋಕೆ. "ಮಂಗಳಾರತಿ ತಕ್ಕೊಂಡ್ರೆ ಉಷ್ಣಾ ತೀರ್ಥ ಪ್ರೋಕ್ಷಿಸಿದರೆ ಶೀತ" ಅಂತಾ ಹಾಸ್ಯಕ್ಕೆ ಹೇಳೋದುಂಟು. ಆದ್ರೂನೂವೆ ನನ್ನ ಅನುಭವದಲ್ಲಿ ನಮ್ಮ ಕಿಟ್ಟಿಗೆ ಒಪ್ಪುತ್ತೆ ಆ ಸಾಮತಿ...ಅವನ ಜಾತಕರಣ ಅವನ ನಾಮಕರಣ ಅವನ ಚೌಲ, ಅವನ ಉಪನಯನ ಇವೆಲ್ಲಾನೂ ನಮ್ಮ ಅಂತಸ್ತು ಪ್ರಕಾರ ಜರಗ್ಸಿದ್ದಕ್ಕೆ ಆದ ಖರ್ಚು ಅಷ್ಟಿಷ್ಟಲ್ಲ. ಇನ್ನ್ವಿದ್ಯಾಭ್ಯಾಸ ಪ್ರಾರಂಭ. ಬುದ್ಧಿ ಹುಟ್ಟೋವಾಗ್ಲಿಂದ್ಲೇ ಚುರುಕು. ಕನ್ನಡ ಎಲ್ಲಾ ತೀರಿಸ್ಕೊಂಡು. **ಇಂಗ್ಲೀಷು**, ಅಂದ. ಅಲ್ಲಿ firstಉ. secondಉ ಅಂತ standardಗಳು ಐದೋ ಹತ್ತೋ. ಅವಾಗುತ್ಲೂ ಫಾರ್ಮುಗಳು. firstಉ secondಉ, ಹೀಗೆ ಇವುಗಳಿಗೆಲ್ಲಾ ಪುಸ್ತಕದ ಖರ್ಚು, ಮೇಷ್ಟರುಗಳ ಫೀಜು—ಸ್ಕೂಲ್ ಫೀಜು...ನಿಮ್ಮ ಮಗನೂ ಓದುತಾನೆ ಅಂದ್ರೆಲ್ಲ. ನಾನು ಹೇಳಬೇಕಾದ್ದಿಲ್ಲ. ಅಲ್ಲದೆ, ಆಗಾಗ ಒಂದೊಂದು ಕ್ಲಾಸಿನಲ್ಲಿ ಮೇಷ್ಟ್ರಮೇಲೆ ಇಷ್ಟವೋ, ಇಲ್ಲಾ ಓದಿದ ಪುಸ್ತಕಗಳಮೇಲೆ ಇಷ್ಟವೋ...ಎರಡೆರಡು ಮೂರು ಮೂರು ಸರತಿ ಓದಿದಾ. ಕೊನೇಗೆ ಆರನೆ ಫಾರ್ಮು... matriculation ಅನ್ನ್ತಾರಲ್ಲ ಅಲ್ಲಿಗೆ ಬಂದ. ಅಷ್ಟು ಹೊತ್ತಿಗೆ, ಡಾಕ್ಟರು ಕೈಯೆತ್ತಿದರು: "ಇದು ಸಾಧಾರಣ (Brain) ಬ್ರೇನಲ್ಲ....ಮಿದಳು ಅಂತಾರಲ್ಲ ಬುದ್ಧಿ. ಅದು ಜಾಸ್ತಿ ಈ ಮಗೂಗೆ, ಆದ್ರೆ ದೇಹ ನಾಜೋಕೂ. ಆದ್ದರಿಂದ ಒಂದೆರಡು ವರ್ಷ ವಿಶ್ರಾಂತಿ ತಗೋಬೇಕು." ಅಂತ ಅವರು ಹೇಳಿದ ಪ್ರಕಾರ ಒಂದೆರಡು ವರ್ಷನಿಲ್ಲಿಸಿದ ಹೊತ್ತಿಗೇನೆ **ಮೆಟ್ರಿಕ್ಯುಲೇಷನ್** ಬರೋದರಲ್ಲಿ ಇಷ್ಟು ವಯಸ್ಸಾಗಿ ಹೋಯಿತು. ಇನ್ನಿವನ್ಯಾವಾಗ ಬಿ.ಎ., ಪ್ಯಾಸ್ ಮಾಡೋದು ಅಂತ ಕೇಳಿದ ಪ್ರಶ್ನೆಗೆ, "ಬಿ.ಎ., ಯಾಕೆ ಇವನಿಗೆ? ಏನು. ಕೆಲಸಕ್ಕೆ ಸೇರಬೇಕೆ? ಮಕ್ಕಳಿಲ್ಲದ. ನಮ್ಮ ಸೋದರಮಾವನ ಕಾಫಿ ತೋಟಾ. ಅಜ್ಜಿ ಬಿಟ್ಹೋಗೋಸ್ವತ್ತು, ಇನ್ನು ನಾವು ಬಿಟ್ಟು ಹೋಗೋ ಅಲ್ಪ ಸ್ವಲ್ಪ ಆಸ್ತಿ, ಎಲ್ಲ ಇಟ್ಕೊಂಡು ಅನುಭವಿಸೋದು ಬಿ.ಎ.. ಇಲ್ದಿದ್ರಾಗೋದಿಲ್ವೆ" ಅಂತಾರೆ ಅವನ ತಂದೆ. ಇನ್ನದಲ್ದೆ ಅಲ್ಪ ಸ್ವಲ್ಪ ಒಡವೆಗ್ಳು;...ಹಯ್ಯೋ ಜ್ಞಾಪಕಕ್ಕೆ ಬಂತು....ಒಡವೆಗಳೆಲ್ಲ ಹಳೇಕಟ್ಟಡ. ಒಂದೆರಡಾದ್ರೂ ಹೊಸನಮೂನೆಯಾಗಿ ಮದುವೆ ಹೆಣ್ಣಿಗೆ ಸರಿಯಾಗಿ ಚಿಕ್ಕದು ಮಾಡಬೇಕೂ ಅಂತಾ ನಮ್ಮ ಅತ್ತೇವ್ರು ಹೇಳಿದ್ದು ಈಗ ಜ್ಞಾಪಕಕ್ಕೆ ಬರುತ್ತೆ...(ಘಟ್ಟಿಯಾಗಿ) **ಯಾಕೂಬ್!**

ಯಾಕೂಬ್: (ಬಂದು) ಅಮ್ಮಾ!

ಲಕ್ಷ್ಮೀ: ಆ ಒಡವೆ ಬೀರೂ ಎತ್ತಿಕೊಂಬಾರೊ ಹುಷಾರಾಗಿ!

(ಯಾಕೂಬನ ನಿಷ್ಕ್ರಮಣ)

ರತ್ನಗಳ ಪರೀಕ್ಷೆ ನಿಮಗೆ ಗೊತ್ತೆ...ಹಳೇಕಾಲದ ಕಲ್ಲುಗಳು. ವಜ್ರಗಳೇನೂ ಹೀಗೆ ಕಮಲಗಳಲ್ಲ ...(Cutting) ಕಟ್ಟಿಂಗ್ ಹಳೇದು. ಆದ್ರೆ...ಕೆಂಪುಗಳು ರಕ್ತ ವರ್ಣ. ಪಚ್ಚೆ ಕಲ್ಲಿಗೆ. ಏನುವಾಳ್ಳು ಅಂತಾರಲ್ಲ...ಅವಕ್ಕೆ ಹೆಸರುವಾಸಿ ನಮ್ಮ ಯಜಮಾನರ ಕುಟುಂಬ! [ಯಾಕೂಬ್ ಪೆಟ್ಟಿಗೆಯನ್ನು ಲಕ್ಷ್ಮೀದೇವಮ್ಮನ ಪಕ್ಕದಲ್ಲಿ ತಂದಿಟ್ಟು ಹೋಗುವನು. ಮುಚ್ಚಳವನ್ನು ತೆಗೆದು ಲಕ್ಷಾಂತರ ರೂಪಾಯಿ ಬೆಲೆಬಾಳುವ ಸರಗಳು, ಪದಕಗಳು, ಒಂಕಿ. ಬಾಜಿಬಂದು. ನಾಗರಮುರವು. ಜಿಮಿಕಿ. ಜಡೆಬಂಗಾರ. ಜೋಮಾಲೆ. ಮುಖರ, ಪಾಟ್ಲಿ, ಬೇಸರಿ. ಚಂದ್ರ ಮುರುವು ಇತ್ಯಾದಿಗಳನ್ನು ಪಾರ್ವತಮ್ಮನ ಮುಂದೆ ವಿಂಗಡಿಸಿಡುತ್ತಾ, ಆಕೆಯು ಇವುಗಳನ್ನೆಲ್ಲ ನೋಡಿ ಬೆಚ್ಚಿಬಿದ್ದು ಬೆರಗಾಗುವುದನ್ನು ಸೂಕ್ಷ್ಮವಾಗಿ ಗಮನಿಸಿ. ತನಗೆ ಬರುವ ನಸುನಗುವನ್ನು ಅಡಗಿಸಿಕೊಂಡು] ನಾನ್ಹೇಳಿದ್ಹಾಗೆಲ್ಲ ಹಳೇಕಾಲದ ಒಡವೆಗಳೂ. ಆದ್ರೆ ಈ ಕೆಂಪಿನ ಸರ, ಈ ವಜ್ರದ ಪದಕ, ಈ ಜೋಮಾಲೆ. ಈ ಪಚ್ಚೆ ಕೆತ್ತಿದ ಪಾಟು. ಸಧ್ಯ ಉಪಯೋಗ ವಾಗುತ್ತೆ ಮದುವೇಗೆ. ಆಮೇಲೆ ಮಿಕ್ಕದ್ದೆಲ್ಲ ಸಮಯೋಚಿತವಾಗಿ ಚಿಕ್ಕದುಮಾಡಿಕೋಬಹುದು. ಇದೆಲ್ಲ ನಮ್ಮ ಅತ್ತೇವ್ರು ನಮ್ಮ ಪಾತು ಕೂಡ ಮುಟ್ಟಬಾರದು. ಎಲ್ಲ ಕಟ್ಟಿ ಪೆಟ್ಟಿಗೇಲಿ ಇಟ್ಟಿಧಾರೆ. ಅದೊಂದು ದೊಡ್ಡ ಕೋಪಾ ನಮ್ಮ ಪಾತೂಗೆ. ಆದ್ರೆ ಹೆಂಗ್ಸು ಪಾಪ ಅವ್ಳು. ಚಿಕ್ಕ ವಯಸ್ಸು, ಆಶೆ! "ಕುಟುಂಬದ ಒಡವೆಗಳು ಮನೇಗೆ ಬಂದು ಸಂಸಾರ ಮಾಡೋ ಸೊಸೆಗಳಿಗೇ ಹೊರ್ತು ಮನೆ ಬಿಟ್ಟು ಮಾವನ ಮನೆಗೆ ಓಡೋ ಮಗಳಿಗಲ್ಲ" ಅಂತಾ ಅವಳ ಅಜ್ಜಿ ಹಟ. ಈ ಪಾಟ್ಲಿ ನೋಡಿ! (ಪಚ್ಚೆ ಕಲ್ಲುಗಳು ಕೆತ್ತಿದ ಪಾಟಲಿಯೊಂದನ್ನು ಪಾರ್ವತಮ್ಮನ ಕೈಗಿಟ್ಟು) ನಮ್ಮ ಹುಡುಗನ್ನ ನೋಡಿಧೀ ರಲ್ವೇ? ನಿಮ್ಮ ಮನಸ್ಸಿಗೆ ಒಪ್ಪಿತೇ?

ಪಾರ್ವ: (ಆ ಪಾಟಲಿಯ ಪ್ರಭೆಯಲ್ಲಿ ಮಗ್ನಳಾಗಿ) ಚೆನ್ನಾಗಿಧಾನೆ...ಹೌದೂ! ಈ ಭೋಗ್ಯ ಅಂದ್ರಲ್ಲ ಎಷ್ಟು ರೂಪಾಯಿಗೂ?

ಲಕ್ಷ್ಮೀ: ಪೂರ್ತಿಯಾಗಿ ಭೋಗ್ಯವಲ್ಲ. ಮನೆ ಹನ್ನೆರಡು ಸಾವಿರ ರೂಪಾಯಿ ಬಾಳುತ್ತೆ. ಕನಿಷ್ಟಪಕ್ಷ ನಾವು ಮಾಡಿರೋದು ೨.೭೦೦ಊನು ಜಿಲ್ಲರೆ. ಲೆಖ್ಖ ಗಂಡಸ್ರಿಗೆ ಗೊತ್ತು... ಹಯ್ಯೋ ಹೀಗೇ ಕೂತಿದ್ರೆ, ಮನೆಯಲ್ಲಿ ಅತಿಥಿಗಳು ಬಂದಾಗ...ಊಟದ ಏರ್ಪಾಡು ಮಾಡಿಬಿಟ್ಟು ಬರ್ತೇನೆ. (ಎದ್ದು ನಿಲ್ಲುವಳು)

ಪಾರ್ವ: ಊಟದ ತೊಂದ್ರೆ ಬೇಡೀ ಅಂದ್ರೆ. ಮನೇಲಿ ಎಸರಿಗಿಟ್ಟು ಬಂದಿದ್ದೇನೆ ನಾನು...

ಲಕ್ಷ್ಮೀ: ಹಾಗಾದ್ರೆ ಅಡಿಗೇ ಅವನಿಗೆ ಹೇಳಿಬಿಟ್ಟು ಬರ್ತೇನೆ. (ನಿಷ್ಕ್ರಮಣ)

ಪಾರ್ವ: ಅಬ್ಬಬ್ಬ! ಏನು ಘಾಟಿ ಅಂತೇನೆ ಈಕೆ!......ವರದಕ್ಷಿಣೆ ಮಾತು ಈ ಮನೇಲೆತ್ತೋದು ತಪ್ಪು ಅಂದ್‌ಬಿಟ್ರೂ ಕೊನೇಗೂನೂ ಮುಟ್ಟಿಸಿಬಿಟ್ಟಳಲ್ಲ. ಎರಡು ಸಾವಿರ ದೇಳ್ನೂರಿಗೆ! ಈಗ ನಾವು ಲೆಕ್ಕಹಾಕೋದು ಮದುವೆ ಖರ್ಚಿಗೊಂದು ಸಾವಿರ. ವರದಕ್ಷಿಣೆ ಬಾಬತ್ತೊಂದೆರಡು ಸಾವಿರ. ಜ್ಯೇಷ್ಟಪಕ್ಷ. ಒಟ್ಟು ಮೂರ್ಸಾವಿರಾ ಅಂತ...ಈ ಲೆಖ್ಖಾನ್ಸೋಡಿದ್ರೆ... ಇನ್ನೊಂದೇಳ್ನೂರ್ ರೂಪಾಯಿ ಎಲ್ಲಿಂದ ತರೋದು?...ಬಲು ದುಬಾರಿ....ಆಗೋದಾಗಿಲ್ಲ... ಆದರೆ ಈ ಒಡವೆಗಳು!!

(ನಿಟ್ಟುಸಿರು ಬಿಡುತ್ತಾ ವಜ್ರದ ಸರವೊಂದನ್ನೆತ್ತಿ ಅಲುಗಿಸುತ್ತಾ)...ನಮ್ಮ ಪೆಂಕೂ ಕುತ್ತಿಗೆಗೂ ಇದಕ್ಕೂ...(ಸರವನ್ನಿಟ್ಟು ಕೆಂಪು ಕಲ್ಲಿನಲ್ಲಿ ಕಟ್ಟಿದ ಒಂದು ಬಾಜಿಬಂದನ್ನು ತೆಗೆದು)...ನಮ್ಮ ಪೆಂಕೂ ಬಣ್ಣಕ್ಕೂ ಈ ಕೆಂಪುಗಳ ಜ್ವಾಲೇಗೂ...(ಒಡವೆಯನ್ನು ಕೆಳಗಿಟ್ಟು)...ಏಳ್ನೂರು ರೂಪಾಯಿತಾನೆ... ಇವರ ಇನ್‌ಷೂರೆನ್ಸಿನಮೇಲೆ ಒಂದು ಸಾವಿರ ರೂಪಾಯಿ ಹೊರಡದೆ ಏನು...ಈ ಒಡವೆಗಳು. ಈ ಮನೆ. ಅಜ್ಜೀ ಆಸ್ತಿ, ಅಪ್ಪ ಕಾಫಿತೋಟಾಂತ...ಇಲ್ಲ. ಬಿಡಬಾರದು ಈ ಅವಕಾಶ. ಆಕೆ ಹೇಳಿದ

ಹಾಗೆ 'ಶುಭಸ್ಯ ಶೀಘ್ರಂ'ಎಂಬೋದ್ನ **ಇವರ** ಮನಸ್ಸಿಗೆ ಮನದಟ್ಟಾಗಿ ಒಪ್ಪಿಸಿ, ಮುಂದಿನ ಕಾರ್ಯ ಬೇಗ ಪ್ರಾರಂಭಿಸಿಬಿಡಬೇಕು...ಅಕೋ ಬಂದ್ಲು!

(ಒಡವೆಗಳನ್ನೆಲ್ಲ ಪೆಟ್ಟಿಗೆಯಲ್ಲಿ ತಿರುಗಿ ಇಡುವಳು. ಬಂದ ಲಕ್ಷ್ಮೀದೇವಮ್ಮನಿಗೆ) ಒಳಗಿಟ್ ಬಿಟ್ಟೆ ಫೇನೆ. ಭಾರಿ ಒಡವೆಗಳು...ಒಂದು ಸರತಿ ನೋಡಿಕೊಂಡ್‌ಬಿಡಿ.

ಲಕ್ಷ್ಮೀ : (ನಗುತ್ತಾ) ಇನ್ನೊಂದ್ ತಿಂಗಳಲ್ಲಿ ನಿಮ್ಮದೇ ಆಗುವ ಒಡವೆಗಳನ್ನ ನಾನೇನು ನೋಡಿಕೊಳ್ಳೋದು. ಬನ್ನಿ, ಮನೇ ನೋಡಿ. ಭಾವೀಗೆ ಪಂಪು; ನೀರು ಸೇದೋ ಕಷ್ಟಾನೂ ಇಲ್ಲ. (ಎಂದು ತೋಟದಲ್ಲಿರುವ ಭಾವಿಯನ್ನು ತೋರಿಸಲು ಆಕೆಯ ಕೈಯನ್ನು ಹಿಡಿದುಕೊಂಡು ಒಳಕ ಕರೆದುಕೊಂಡು ಹೋಗುವಳು.)

[ಆಫೀಸಿನ ಬಾಗಿಲಿನಿಂದ ಪ್ರವೇಶ, ರಾಮಣ್ಣ ಮತ್ತು ನರಸಿಂಪಯ್ಯ]

ರಾಮಣ್ಣ: (ಕೈಯನ್ನು ನರಸಿಂಹಯ್ಯನ ಮೇಲೆ ಹಾಕಿ ಕರೆದುಕೊಂಡುಬರುತ್ತಾ) ಕ್ಷಮಿಸು dear boy. ನಾನು use ಮಾಡಿದ strong languageಉ ಎಷ್ಟೊ control ಮಾಡೋಕೆ ನೋಡಿದೆ; ಆದ್ರೆ ನಾನು educatedಉ, man of culture, broad mindedಉ ಅಂಬೋದ್ನೆಲ್ಲಾ ಮರ್ತುಬಿಟ್ಟು ನನ್ನೇನೋ ಹಳ್ಳಿಕಡೆಯಲ್ಲಿ ಹುಟ್ಟಿದ commercial minded ಗಮಾರ ಅಂತ ತಿಳ್ಕೊಂಡು......holy alliance of marriage arrange ಮಾಡೋ sacred occasionನಲ್ಲಿ dowry ಎಷ್ಟು ಅಂತ ಕೇಳಿದೆಯಲ್ಲಾ? ನನ್ನ ರಕ್ತಮಾಂಸ ತಡೆದೀತೆ?! ನನ್ನ bloodಉ boiling pointಗೆ ಬರದೆ ಇದ್ದೀತೆ? !.......... ಕೂತ್ಕೊಂಡು cool ಆಗಿ consider ಮಾಡಿ ನೋಡು.

ನರ: I am sorry. ಆದ್ರೆ ಎಂಥ most educated familiesಉ ಈ dowry ಬಾಬತ್ತಿನಿಂದ immune ಆಗಿ ಇಲ್ದೆಇರೋಹೊತ್ತಿಗೇನೆ ಮುಂದಕ್ಕೆ misunderstandings ಏನೂ ಬರಬಾರದೂ ಅಂತಾ plain ಆಗಿ ನಾನ್ ಕೇಳಿಬಿಟ್ಟದ್ದು. Forgive ಮಾಡೋದು ನಿಮ್ಮ ಭಾರ. ನನ್ನ honest bluntnessಏ ನನ್ನ excuseಉ.

ರಾಮಣ್ಣ: (ನರಸಿಂಹಯ್ಯನ ಬೆನ್ನನ್ನು ತಟ್ಟುತ್ತಾ) I understand dear boy, I understand. ನೀನ್ ಹೇಳೋ ಹಾಗೆ 'Matrimony' ಈಗಿನ ಕಾಲದಲ್ಲಿ 'matter o' money' ಆಗ್ಹೋಗಿದೆ...**'Matrimony—matter of money—Jokeಉ**! (ನಗುತ್ತಾ ನರಸಿಂಹಯ್ಯನ ಪಕ್ಕೆಯನ್ನು ಬೆಟ್ಟಿನಿಂದ ಚುಚ್ಚುವನು). ಇಲ್ಲಿ ನೋಡು. dear boy. God has given you health-wealth-prosperity, and your beautiful daughterಉ. God has also given me everything in the shape of a sonನ್ನು...your dauhter is after all your daughterಉ and my son is my sonnoo. But though your daughter is your daughterಉ and my son is my sonnoo, their children will be (ನರಸಿಂಹಯ್ಯನ ಕುತ್ತಿಗೆಯನ್ನು ಬಲಬಾಹುವಿನಿಂದ ತಬ್ಬಿ ಅಪ್ಪಿಕೊಳ್ಳುತ್ತಾ) **OUR** grandchildrenಉ dear boy. They will send us pindas (ಪಿಂಡ) my boy, when we are both in heaven! ಅರ್ಥವೇ? Heavenನಲ್ಲಿ as our ancients and elders assure us according to our Vedas and shastras ಪಿತೃಗಳು....ಪೌತ್ರರು ವರ್ಷ ತಪ್ಪದೆ ಪಿಂಡಗಳನ್ನ ಮೇಲ್‌ಲೋಕಕ್ಕೆ ಮುಟ್ಟಿಸ್‌ತಿರೋವರಿಗೂ ವಾಸಮಾಡಬಹುದೂ...ಆ annual instalments of pindas ತುಂಡಾಯಿತೋ, precipitate ಆಗ್‌ತೇವಂತೆ

ನರಕಕ್ಕೆ. Therefore dear boy, ನಾವು ಸ್ವರ್ಗದಲ್ಲಿರೋದಕ್ಕೆ ಇಲ್ಲಿ ನಮ್ಮ ಪೌತ್ರರು ಕಳ್ಸಬೇಕಾದ ಓಂದಕ್ಕೆ proper arrangementsಉ ಮಾಡಿಬಿಟ್ಟು ಹೋಗೋದೆ sensible ಅಲ್ವೆ?

(ನರಸಿಂಹಯ್ಯನು ವಿಸ್ಮಿತನಾಗಿ ರಾಮಣ್ಣನನ್ನು ನೋಡುವನು.) Therefore dear boy! our grandchildrenಉ prosperous circumstanceನಲ್ಲಿ ಇರೋಕೆ obstacles ಆಗಿರೋ ಕೆಲವು difficultiesನ ನೀನು consider ಮಾಡಬೇಕು. You are my friendಉ. I am your friend in needಉ, ಇನ್ನ್ deed ಎಲ್ಲ ನಿನ್ಗದೆ... you must unlock all prosperity for us because you are my ಬೀಗ... ಬೀಗ—**lock**ಉ—**Joke**ಉ! (ಎಂದು ನರಸಿಂಹಯ್ಯನ ಪಕ್ಕೆಯನ್ನು ಪುನಃ ಬೆಟ್ಟಿನಿಂದ ಚುಚ್ಚುವನು.)

ನರ: (ಸವರಿಕೊಳ್ಳುತ್ತಾ ವಿಸ್ಮಿತನಾಗಿ) ಅದೇನು difficulties ಓ?!

ರಾಮಣ್ಣ: Difficulties ಗಳಿಗೆಲ್ಲ root cause ಏನೂ?...filthy lucreಉ. You see dear boy! family difficulties, commitments, through circumstances over which no body could have any control;... ನಿನಗೆ ಗೊತ್ತಿಲ್ವೆ, Lawyerಉ, ನೀನು family fundsಉ, cousinly black guardsu, partition ತಕ್ರಾರುಗಳು,......... ವಿತನ್ಮಧ್ಯೆ ನನ್ನ official positionನ್ನು. all precipitating in my present difficulties,—which you must dissolve by liquidating my aforesaid commitments: **Precipitate—dissolve,—liquid—Joke**ಉ (ನಗುತ್ತಾ ನರಸಿಂಹಯ್ಯನ ಪಕ್ಕೆಯನ್ನು ಬೆಟ್ಟಿನಿಂದ ಚುಚ್ಚುವನು.)

ನರ: (ಪುನಃ ಸವರಿಕೊಳ್ಳುತ್ತಾ grimly) ಎಷ್ಟು amountಉ?

ರಾಮಣ್ಣ: ಛೇಛೇಛೇ!!! Forgive me dear boy, ಇಷ್ಟು serious ಆಗಿ ತಕೋಬೇಕೂಡದು ಈ simple matterನ......ಸಧ್ಯ worth speaking ಆದ ಬಾಧೆ ಏನೂ ಇಲ್ಲ ನನಗೆ. ಆದರೆ future ನೋಡಿ ಹೇಳ್ತೀನಿ...money market tightಉ. World wide financial depressionನ್ನು...ಎಲ್ಲೆಲ್ಲಿ ನೋಡಿದರೂ unemploymentಉ... seasons ಎಲ್ಲ ತಲೆಕೆಳಕಾಗಿ ಬರ್‍ತಿವೆ. ಇನ್ನೀಗ್ಲೆ ಹೀಗಿಥೆಯಲ್ಲಿ portending disasterಉ............. ಇನ್ನು ನಮ್ಮ..... ...... (ಬಾಹುವಿನಿಂದ ನರಸಿಂಹಯ್ಯನ ಕಂಠವನ್ನು ಬಿಗಿಯುತ್ತಾ) unborn sweet little grand childrenನು born ಆಗಿ ಬೆಳೆಯೋ ಹೊತ್ತಿಗೆ financial outlookಉ imagine ಮಾಡಿದರೆ shudder ಆಗುತ್ತೆ ನನ್ನ being ಎಲ್ಲ. ಅದಕ್ಕೇ ನಾನು ಕೇಳೋದು ನೀನು ಸ್ವಲ್ಪ interest ತಕೋಬೇಕು ಈ ವಿಷಯದಲ್ಲಿ ಅಂತ: I am asking on principle; capital idea ಅಲ್ಲವೆ?............**Interest—principle—Capital—JOKE**ಉ! (ಎಂದು ಬೆಟ್ಟಿನಿಂದ ಪುನಃ ನರಸಿಂಹಯ್ಯನ ಪಕ್ಕೆಯನ್ನು ಚುಚ್ಚಿ ನಗುವನು)

ನರ: (ರೇಗಿ) ಹಾಗಾದರೆ ಎಷ್ಟು ನಿಮ್ಮ liabilitiesಉ? **Lie—abilities—JOKE**ಉ! (ಇದುವರೆಗೂ ರಾಮಣ್ಣನು ಚುಚ್ಚಿ ಆದ ನೋವೆಲ್ಲವನ್ನೂ ಜ್ಞಾಪಿಸಿಕೊಳ್ಳುತ್ತಾ ದೇಹದಲ್ಲಿರುವ ಶಕ್ತಿಯೆಲ್ಲಕ್ಕೂ ತನ್ನ ಬೆಟ್ಟನ್ನು ಕೇಂದ್ರಸ್ಥಾನವನ್ನಾಗಿ ಮಾಡಿ ರಾಮಣ್ಣನ ಪಕ್ಕೆಯಮೇಲೆ ಪ್ರಯೋಗಿಸುವನು.)

ರಾಮಣ್ಣ: (ಪಕ್ಕೆಯನ್ನು ಸವರಿಕೊಳ್ಳುತ್ತಾ) ಕ್ಷಮಿಸು dear boy! ನಿನಗೆ ಇಷ್ಟು sharp sense of humour ಇರೋದು ನನಗೆ ಗೊತ್ತಿರಲಿಲ್ಲ. But joking apart (ದೂರ

ಸರಿದು ಕೂತು) ನೀನ್ ಕೇಳಿದ amountಉ only a meagre sum of ಮೂರು ಸಾವಿರದ ಮುನ್ನೂರು. ನಾನು assets ಹೇಳಬೇಕಾದದ್ದಿಲ್ಲ. ಈ houseಉ plus expectations from many quarters—ನಮ್ಮ family ಬಲು widely distributedಉ —plus ನಮ್ಮ ಕಿಟ್ಟಿ prospectsಉ slow but sureಉ!

ನರ: ಈ ೩,೩೦೦ ಒಂದೇ sumವ್ವೋ? ಇಲ್ಲ. ಇದೂನೂ ನಿಮ್ಮ family ಹಾಗನೆ widely distributedಡೋ?

ರಾಮಣ್ಣ: **You will have your jokeಉ dear boy**......ಆ ತೊಂದರೆ ಏನ್ ಇರೋದಿಲ್ಲ ನಿನಗೆ. ನನ್ನ creditors ಎಲ್ಲಾ unfortunately for me and fortunately for you,—are all localಉ...ನಮ್ಮೂರಿನವ್ರೇ. I mean ನಿಮ್ಮೂರಿನವ್ರು...ಬಂದೆ, ಒಂದು ನಿಮಿಷ......list of the various amounts ತಂದುಬಿಡ್ತೇನೆ (ಆಫೀಸ್ ರೂಮಿನೊಳಕ್ಕೆ ನಿಷ್ಕ್ರಮಣ) [ಪಾರ್ವತಮ್ಮನು ಪ್ರವೇಶಿಸಿ ಬಾಗಿಲಿನ ಹೊಸಲಿನಿಂದೀಚೆಗೆ ಕಾಲಿಡುತ್ತಿರುವಲ್ಲಿ ಆಕೆಯು ಹಿಂದೆ ಲಕ್ಷ್ಮೀದೇವಮ್ಮನು "ಕೂತುಕೊಳ್ಳಿ ಎಲೆ ಅಡಿಕೆ ಕುಂಕುಮ ತರ್ತೇನೆ" ಎಂದು ಹೇಳುವುದು ಕೇಳಿಬರುವುದು.]

ಪಾರ್ವ: (ಪತಿಯು ಏಕಾಂಗಿಯಾಗಿ ಇರುವುದನ್ನು ಗಮನಿಸಿ ಸಮೀಪಿಸಿ,) ಏನೋ... ನಾವೇನೊ ಹೆದರಿಕೊಂಡದಕ್ಕೆ...ಹೆಚ್ಚು ಕಡಿಮೆ ನಾವು ಹಾಕಿದ ಲೆಖ್ಖದ ಪ್ರಕಾರಾನೆ ಲಗ್ನ ತೀರೋ ಹಾಗಿಧೆ. ಸದ್ಯ ಇಷ್ಟು ದಿನ ಮುಚ್ಚಿಕೊಂಡಿದ್ದ ವೆಂಕೂ ಮದುವೆ ಯೋಚನೆ ತಪ್ಪಿತು.

ನರ: ಏನೇ! ಎಲ್ಲಿಧೀಯೆ...ನಾವು ಹಾಕಿದ ಲೆಖ್ಖವೆಲ್ಲೀ, ಇವರು ಸುಲಕೊಳ್ಳೋಕೆ ಹೊರಟಿರೋ ಲೆಖ್ಖವೆಲ್ಲೀ...?!

ಪಾರ್ವ: (ಅಷ್ಟಮಾತಾಗಿ) ಹಯ್ಯೊ ಬಿಡೀ ಅಂದ್ರೆ!...ನೀವ್ ಯಾವಾಗಲೂ ಹೀಗೇ. ಲಕ್ಷ ಲಕ್ಷಾಂತರ ಲಾಭವಾಗೋ ಕಡೆ ಒಂದು ನೂರು ಇನ್ನೂರು ರೂಪಾಯಿಗೆ ಗುದ್ದಾಡೋದೆ?

ನರ: ನೂರಿನ್ನೂರು?...ಅವನು ಕೇಳೋದು (ರಾಮಣ್ಣನು ಚುಚ್ಚಿದ ಸ್ಥಳವನ್ನು ಸವರಿಕೊಳ್ಳುತ್ತಾ) meagresum of ೩,೩೦೦. ನಾವು ಹಾಕಿದ ಲೆಖ್ಖಕ್ ಮೇಲೆ ೩೦೦ ಆಗೋದಲ್ದೆ ಮದುವೆ ಖರ್ಚಿಗೆಲ್ಲಿಂದ ತರೋದೆ?

ಪಾರ್ವ: ಚನ್ನಾಯಿತು, ೨,೭೦೦ ಅಂದ್ರೆ!

ನರ: ೩,೩೦೦ ಅಂತ ಬೊಗುಳಿ ಸಾಲಗಾರರ ಪಟ್ಟಿ ತರೋಕೆ ಹೋಗಿದಾನೇ...?!

ಪಾರ್ವ: ಸಾಲ ಅಲ್ಲಾಂದ್ರೆ, ಭೋಗ್ಯಕ್ಕೆ ಈ ಮನೇಬಿಟ್ಟಿರೋದು, ೨,೭೦೦ ರೂಪಾಯಿಗೆ! ಬಡ್ಡಿ ಸಮೇತ, ಈಕೆ ಹೇಳಿದಾಳೆ ಈಗತಾನೆ.

ನರ: ಎಲ ಎಲಾ, ಪಾಪಿದಂಪತಿಗಳಿರಾ! ! !

ಪಾರ್ವ: ದಂಪತಿಗಳು!

ನರ: ಅಯ್ಯೋ ಬೆಪ್ಪೆ! ನಿನಗಿನ್ನೂ ಅರ್ಥವಾಗಲಿಲ್ಲವೆ?............**double ಡಕಾಯಿತಿ ಕಾಣೇ!!** ಭೋಗ್ಯದ ಬಾಬತ್ತು ನಿನ್ನ ಮುಂಡೇಗ್ ಹಾಕಿ. ಸಾಲಗಾರರ ಪಟ್ಟಿ ನನ್ನ ಕಿಸೇಲಿ ಸೆಕ್ಕಿಸಿ, ಮಂಗಳಾರತಿ ಮಾಡಿ ಕಳ್ಸೋದು ಕಾಣೇ, ಅವರಿಬ್ಬರ ಪಿತೂರೀ. ಜುಂಲಾ ಎಷ್ಟಾಯಿತು ನೋಡು... ೬,೦೦೦,...ನಮ್ಮಿಂದ ಆಗೋ ಕೆಲಸವಲ್ಲ ಇದೂ! ಗುಮಾಸ್ತೆ ರಂಗಣ್ಣೋರ ಮನೆಗೆ ಹೋಗಿ ಅವರ ಮಗನ ವಿಷಯ...

ಪಾರ್ವ: ಹಯ್ಯೋ ಆ ಹುಡುಗನ ಬಣ್ಣ ನಿದಾನ ಅಂದ್ರೆ!

ನರ: ಬಣ್ಣ! ! ಈಗ ನಮ್ಮ ಕುಟುಂಬಾ ಏನೇ ಕೆಂಪ್ರ ಕೆಂಪಾಗಿ ತೇಲ್ತಿರೋದು? ಆ ಹುಡುಗ ಬಿ.ಎ., ಪ್ಯಾಸ್ ಮಾಡಿದಾನೆ. ಈ ಮನೆ ಕೆಂಪು ಮುಖದ ಕಪೀಗೆ ೧೯ ವಯಸ್ಸು ಆಗಿ Matriculationನ್ನು ಮೋಚಿಕೊಂಡು ಹೋಗಿದೆ!

ಪಾರ್ವ: ಅದಕ್ಕೇನು ಮಾಡೋದು? ದೊಡ್ಡಕುಟುಂಬಾ. ದೊಡ್ಡ ರ್ರಕ್ತಾ. ನಾಜೋಕು... ಬಿ.ಎ., ಆಗ್ಲಿ ಎಂ.ಎ., ಆಗ್ಲಿ ಪ್ಯಾಸ್ ಮಾಡೋದು ದುಡ್ಡಿಗೆ ತಾನೇ?...ಲಕ್ಷಾಂತರ ರೂಪಾಯಿ ಸ್ವತ್ತು ಇರೋ ಇವರಿಗೆ, ಕೆಲಸಕ್ಕೆ ಯಾಕೆ ಸೇರಬೇಕೂ ಅಂದ್ರೆ?

ರಾಮು: ಲಕ್ಷಾಂತರ ಯಾರಿಗಿಧಿಯೆ?

ಪಾರ್ವ: ಯಾಕೆ ಇವರಿಗಿಧೆ ಅಂದ್ರೆ...ಆಕೆ ಹೇಳಿದ್ಲು...ಅಜ್ಜಿ ಆಸ್ತಿ. ಕಾಫಿ ಎಸ್ಟೇಟು ಮತ್ತೆ ಒಡವೆಗಳು...?!

ನರ: ಸುಮ್ಮನೆ ತೊದಲಬೇಡ. ಇವರ ಅಜ್ಜಿ ಆಸ್ತಿ ಒಂದು ಜಪಮಾಲೆ. ಇವರಿಗೆಲೋ ಕಾಫಿ ಎಸ್ಟೇಟೆಲ್ಲ ಅಡಿಗೆ ಮನೆಯಲ್ಲಿ ಡಬ್ಬೀಲಿ ಹಾಕಿಟ್ಟಿಧಾರೆ. ಇನ್‌ಬೇಡದ್ದಕ್ಕೆ ಒಡವೆಗಳು! ಆಕೆ ಏನೋ ಹೇಳಿದಳಂತೆ, ನೀನೇನೋ ಕೇಳಿದೆಯಂತೆ!

ಪಾರ್ವ: ನಾನೇನು ಕುರುಡೆ; ಅಕ್ಕೊ ನೋಡಿ!...(ಒಡವೆ ಪೆಟ್ಟಿಗೆಯನ್ನು ತೋರಿಸಿ) ಆ ಪೆಟ್ಟಿಗೆ ತುಂಬಾ, ಲಕ್ಷ ಲಕ್ಷ ಬಾಳೋ ವಜ್ರಗಳು ಕೆಂಪುಗಳು...

ನರ: ಆಪಾದಮಸ್ತಕ ಸಾಲ ತುಂಬಿದ ಇವರಿಗೆ ವಜ್ರ ಅಂದ್ರೇನೆ ವೈಢೂರ್ಯ ಅಂದ್ರೇನೆ?

ಪಾರ್ವ: ಹಯ್ಯೋ ನಾನ್ನೋಡಿದೆ! ಕಣ್ಣಾರ ನೋಡಿದೆ ಅಂದ್ರೆ...!?

ನರ: ಯಾವ ಗಾಜೋ,...ಕನಡೀನೋ ನಿನಗೆ ತೋರ್ಸಿ...ಪುಸಲಾಯಿಸಿದಾರೆ... ನಿನಗೇನು ಗೊತ್ತೇ ವಡವೆಗಳ ಪರೀಕ್ಷೇ...?

ಪಾರ್ವ: ಹಯ್ಯೋ! ನಿಮ್ಮ ಹಾಳುಕುಟುಂಬದಲ್ಲಿ ಒಂದು ಒಡವೆ ನೋಡ್ದಿದ್ರೂನೂವೆ ...ನಾನು ಭಾರಿ ಒಡವೆಗಳು ನೋಡ್‌ಲಿಲ್ಲ. ತೊಟ್‌ಕೊಳ್ಳಿಲ್ಲ...ಅಂತ ತಿಳಕೋಬೇಡಿ.

ನರ: ಒಪ್ದೆ, ಒಪ್ದೆ, ಒಪ್ದೆ! ವಜ್ರ ಪರೀಕ್ಷೇಲಿ ನೀನು ಫಸ್ಟು! ದಮ್ಮಯ್ಯ. ಒಪ್ದೆ! ನಿನ್ನ ತೌರ್ಮನೆಮಾತಿಗೆ ದಯುಪಿಟ್ಟು ತುಂಡು ಹಾಕು...ಪರಸ್ಥಳ ಇದು...ಬಂದಕಡೆ ನನ್ನ ರೇಗಿಸಿ ಮಾನ ಮರ್ಯಾದೆ ಫಾಳಿ ಪಾಲು ಮಾಡಬೇಡ...! ಅಕೋ ಆಕೆ ಬರ್ತಿಧಾಳೆ!
[ರಾಮಣ್ಣನು ಆಫೀಸ್‌ಬಾಗಿಲಿನಿಂದಲೂ. ಲಕ್ಷ್ಮೀದೇವಮ್ಮನು. ಬೆಳ್ಳಿಯ ತಟ್ಟೆಯಲ್ಲಿ ಎಲೆ ಅಡಿಕೆಯನ್ನು ಹಿಡಿದುಕೊಂಡು ಮತ್ತೊಂದು ಬಾಗಿಲಿನಿಂದಲೂ ಪ್ರವೇಶಿಸುವರು.]

ರಾಮು: ......Here you are dear boy......listು (ಒಂದು ಲಕೋಟೆಯನ್ನು ನರಸಿಂಹಯ್ಯನ ಜೇಬಿನಲ್ಲಿ ಇಳೀಬಿಟ್ಟು) ಮನೆ ಸೇರಿ...at your leisure, peruse ಮಾಡು:...
[ಇಷ್ಟರಲ್ಲಿ ಲಕ್ಷ್ಮೀದೇವಮ್ಮನು ಬಂದಾಕೆಗೆ ಕುಂಕುಮವನ್ನಿಟ್ಟು ತಾಂಬೂಲವನ್ನು ಕೊಟ್ಟಾಗಿರುವುದು]
with your permission dear boy! (ಸ್ವಲ್ಪ ಮುಂದಕ್ಕೆ ಬಂದು ಮುಖವನ್ನು ಸೂರಿಗೆತ್ತಿ ಉಚ್ಚಧ್ವನಿಯಿಂದ) ಏನೋ ನಮ್ಮ ಕಿಟ್ಟೀಗೆ ಎಷ್ಟೆಷ್ಟು ಕಡೆಯಿಂದಲೋ ವಧುಗಳ ಮಾತು ಬಂದುವು. ಆದರೆ ಇಂಥ ಅಮೋಘವಾದ ಸ್ಥಳದಿಂದ ನಮಗೆ ಸಂಬಂಧ ಒದಗೋ ಲಭ್ಯ ನನಗೂ ನನ್ನ ಗೃಹಿಣೀಗೂ ಸಂಘಟಿಸುತ್ತೆ ಅಂತಾ ಈ ಪಾಪಿ. ನಮ್ಮ ಸ್ವಪ್ನದಲ್ಲೂ ಎದುರು ನೋಡ್ತಿರಲಿಲ್ಲ. ಇದೆಲ್ಲ ಪರಮಾತ್ಮನ ಕೃಪೆ. ನಮ್ಮಗಳ ಶಕ್ತಿ ಅಂತಸ್ತುಗಳ್ನ ಎಷ್ಟು ಹೊಗಳಿಕೊಂಡರೂ. ಮುಖ್ಯ...ದೈವ ಸಂಕಲ್ಪ ಪ್ರಕಾರವೆ ಪ್ರಕೃತಿ ಕಾರ್ಯಗಳೆಲ್ಲ ಆಗತ್ತೆ. ಅಂಥೋದನ್ನ ಈ ಮೂಢ ಹೇಳಬೇಕಾದ್ದೇನೂ ಇಲ್ಲ. ಮುಖ್ಯ...ನಮ್ಮ ಸಂಬಂಧದಿಂದ ಸರ್ವಜನರಿಗೂ ಶಾಂತಿ ಸುಖಗಳು ಉತ್ಪನ್ನವಾಗಬೇಕೂಂತ ನಾನೂ ನನ್ನ ಸಹಧರ್ಮಿಣಿಯೂ ಹಾರೈಸ್ತೇವೆ (ನರಸಿಂಹಯ್ಯನಿಗೆ) Thank you, dear boy!

ನರ: (ರಾಮಣ್ಣನಿಗೆ) ನಾನು ಬರ್ತೀನೆ.

ಲಕ್ಷ್ಮೀ: (ಪಾರ್ವತಮ್ಮನಿಗೆ) ಬರ್ತೀರಾ! (ಪಾರ್ವತಮ್ಮನು ತಲೆಯನ್ನು ಆಡಿಸುವಳು)

[ನರಸಿಂಹಯ್ಯ ಪಾರ್ವತಮ್ಮ ಇವರು ವೆರಾಂಡಾ ಮೆಟ್ಟಿಲಿಳಿದು ನಿಷ್ಕ್ರಮಣ]

ರಾಮು: (ಮೆಟ್ಟಿಲಿಳಿದು ಬಂದು ದಂಪತಿಗಳು ಹೋದ ದಾರಿಯನ್ನು ಇಣಿಕಿನೋಡಿ ಮತ್ತೆ ತಿರುಗಿ ಮೆಟ್ಟಿಲನ್ನು ಹತ್ತಿ) ಏನೇ, ಭೋಗ್ಯದ ಮಾತು...?

ಲಕ್ಷ್ಮೀ: ಹೇಳ್ದೆ!...ಸಾಲದ ಬಾಬ್ತು...?

ರಾಮು: complete list ಕೊಟ್ಟಿದ್ದೇನೆ...ನಿನಗೆ ಹ್ಯಾಗೆ ಕಾಣುತ್ತೆ. ಒಪ್ಪ್ಯಾರೆ?

ಲಕ್ಷ್ಮೀ: ನೀವೇ ನೋಡಿ. ಒಬ್ಬ ಹುಡುಗನ್ನ ಬಿ.ಎ., ಓದಿಸ್ತಿದಾರೆ...ಏನೋ ಅಲ್ಪ ಸ್ವಲ್ಪ ಸ್ವತ್ತು ಸ್ವಯಾರ್ಜಿತ...ಆಕೇನೆ ವರದಕ್ಷಿಣೆ ಮಾತು ಎತ್ತಿದ್ರಿಂದ...ಅದಕ್ಕೆ ಇಷ್ಟು ಅಂತಾ ಲೆಕ್ಕ ಹಾಕಿಟ್ಟಿರೋ ಹಾಗೆ ತೋಚಿತು ನನಗೆ. ಎಷ್ಟಾದ್ರೂನೂವೆ ಒಂದು ಮೂರು-ನಾಲ್ಕು ಸಾವಿರ ರೂಪಾಯಿ ಅಂದಾಜು ಹಾಕಿದ್ದಿರಬಹುದು.

ರಾಮು: ೩–೪೦೦೦ ಅಂದ್ರೆ!...ನಮ್ಮೆರಡು itemಉ ೬,೦೦೦ಕ್ಕೆ ಬರುತ್ತಲ್ವೇ?! ಇನ್ನು ಮುದುವೆ ಖರ್ಚೋ?! ಎಲ್ಲ ವಿಷಪತ್ತಿದ ಹಾಗೆ ಏಳೋ ಎಂಟೋ ಆಗತ್ತೇ ಅಂತ ಬೆದರಿಕೊಂಡು ಅವನು give up ಮಾಡಿಬಿಟ್ರೂ ಮಾಡಿಬಿಡಬಹುದು. ಬೇಡದ್ದಕ್ಕೆ ಈ ಮಂಕುಮುಚ್ಚಿದ ಮಂಗನಿಗೆ ಎರಡನೇ once moreಉ......matriculationನಲ್ಲಿ...ಇನ್ನು ಸಾಲಗಾರರ ತಗಾದೇನ ನನ್ನ official ಜಬರ್‌ದಸ್ತ್‌ನಲ್ಲಿ ಎಷ್ಟು ದಿನಾ ಅಂತಾ postpone ಮಾಡೋದೇ? ಬೇಕಾದರೆ ನರಸಿಂಹಯ್ಯನನ್ನೇ ನಾನು ನೋಡಿ. ಸ್ವಲ್ಪ ಹೆಚ್ಚುಕಮ್ಮಿ ಆದ್ರೂನೂವೆ...

ಲಕ್ಷ್ಮೀ: ಬೇಡಿ ಅಂದ್ರೆ. ಎಲ್ಲ ಸರಿಹೋಗುತ್ತೆ.

ರಾಮು: "ಸರಿಹೋಗುತ್ತೆ"? ಯಾವ ಅಸ್ತಿಭಾರದಮೇಲೇ...ಮಾತಾಡತೀಯಾ?

ಲಕ್ಷ್ಮೀ: "ರುಚಿ ಕಂಡ ಬೆಕ್ಕು" ಅಂಬೋ ಲೋಕ್ಯಾಚಾರದ ಪ್ರಕಾರ.

ರಾಮು: ಅರ್ಥವಾಗಲಿಲ್ಲ...?!

ಲಕ್ಷ್ಮೀ: ಇತ್ಯರ್ಥಮಾಡತೇನೆ. ಅಕೋ ನೋಡಿ! ನೆನ್ನೆ ಪೋಲೀಸಿನವರು ತಂದಿಟ್ಟಿರಲ್ಲಾ ಒಡವೆಪೆಟ್ಟಿಗೆ. ಅದನ್ನ ಬಿಚ್ಚಿ. ಅದರಲ್ಲಿದ್ದ ಒಡವೆಗಳನ್ನೆಲ್ಲ ಆಕೆಗೆ, ಮನೆ ಆಸ್ತಿ ಅಂತಾ...ಸೊಸೇಗೇ!

ರಾಮು : (ಅತ್ಯಾನಂದದಿಂದ ಉಕ್ಕುತ್ತಾ) **Good work**ಉ ಕಾಣೆ Good work ಉ! ನೀನ್ ಹೇಳಿದಹಾಗೆ ಆ jewelsಉ ನೋಡಿದ ಮೇಲೆ ಹ್ಯಾಗಾದರೂ ಮಾಡಿ ಮದುವೇನ bring off ಮಾಡೇಬಿಡ್ತಾಳೆ ಆಕೆ. ದೇವರು ನಮ್ಮ ಭಾಗದಲ್ಲಿರೋ ಹೊತ್ತಿಗೆ, ತಾಲ್ಲೂಕ್ treasury ಮುಚ್ಚಿದಮೇಲೆ ಬಂದವು ಆ ಒಡವೆಗಳು.

ಲಕ್ಷ್ಮೀ : ಯಾವ ಒಡವೆಗಳೂ ?....... treasuryಗೆ ಯಾಕೇ ?

ರಾಮು : ಜ್ಞಾಪಕವಿಲ್ವೇನೆ, ತಾವರೆಕೆರೇಲಿ ಸಾವಕಾರ ವೆಂಕಟಪ್ಪನ ಮನೇಲಿ ಆದ ಕಳವು ಎಂಟು ತಿಂಗಳ ಹಿಂದೇ ? ಪೋಲೀಸಿನವರು ಪತ್ತೇಮಾಡಿ, ಕಳ್ಳರನ್ನೂ propertyನ್ನೂ ನೆನ್ನೆ ೫ ಘಂಟೆಗೆ ತಂದ್ರೂ ; ಕೈದಿಗಳಂತೂ Lock up ಆಯಿತೂ, ಖಜಾನೆ ಮುಚ್ಚಿತ್ತೂ, ಕಾಪಾಡೋ ಜವಾಬ್ದಾರಿ ನನ್ನದಲ್ಲವೇನೆ ? ರಾತ್ರಿಯೆಲ್ಲಾ ನನಗೂ ಯೋಚನೆಯಾಗಿತ್ತು..... ಏನೊ ದೇವರ ದಯದಿಂದ ನಿನ್ನ ಬೀಗ್‌ತೀಗೆ ಬೆಪ್ಪು ಓದಿಸಿ ವರದಕ್ಷಿಣೆ ಒಪ್ಪಿಸಿ ನಮ್ಮ ಅನಾನುಕೂಲ ತೀರ್ಸೋ ಉಪಯೋಗಕ್ಕೆ ಈ ಒಡವೆಗಳು ಬಂದದ್ದು ನಮ್ಮ ಅದೃಷ್ಟ. ಆದರೂ whole creditಉ ನಿನ್ನ ingenious brainಗೆ ಕೊಡಬೇಕು. (ಘಟ್ಟಿಯಾಗಿ) ಯಾಕೂಬ್ !

ಯಾಕೂಬ್ : (ಬಂದು) ಸಾಮಿ

ರಾಮು : ಎಲ್ಲಿ ಹೋಗಿದ್ಯೋ ಬೆಳಿಗ್ಗೆ ಎಲ್ಲಾ....?

ಯಾಕೂಬ್ : ದೇವಲ್ ಪೂಜಾಕರನೇಕಾ........ಬೊಮ್ಮನ್........ಬಿರಾಮುರು... ಮನಿಗೆ ಹೋಗಿ ಇದ್ದೆ.

ರಾಮು : ಯಾರು ಜೋಯಿಸರೆ? ಜೋಯಿಸರ ಮನೇಲಿ ನಿನಗೇನೋ ಕೆಲಸ?........ ತಲೆ ಬೋಳಿಸಿಕೊಳ್ಳೋಕೆ ದಿನಾ ನೋಡೋಕೇ?

ಯಾಕೂಬ್: ನನಗ ಇಲ್ಲ ಹುಝೂರ್, ಬಡಾ ಅಮ್ಮಾವರಿಗೆ....... ಕಾರ್ಯೋಂಕಾ ಕಿತಾಬ್.....(ಆಕಾಶವನ್ನು ತೋರಿಸಿ) ಆಸ್ಮಾನ್........ಬುಕ್ಕು....ತಕ್ಕಂಡೀಬರಾಕೆ. ಬಡಾ ಅಮ್ಮಾ ಅವ್ರು ಕಳ್ಸಿದ್ರು ಹುಝೂರ್!

ರಾಮು : ಏನು ಪಂಚಾಂಗವೆ? ಅಲ್ಲಾಹೋ ಪಂಚಾಂಗಾನ ನೀನು ಮುಟ್ಟಿಕೊಂಡು ಊರುದ್ದಕ್ಕೂ ತೋರಿಸ್ಕೊಂಡು ಬರ್ತಿದ್ದೆಯೇನೊ?

ಯಾಕೂಬ್ : ನಹಿ ಹುಝೂರ್! ಮೌಸ್‌ಕೆ ಎಲೆ....ಬಾಳೆ ಫತ್ತರ್‌ದಲ್ಲಿ ಲಪಟ್‌ಕಂಡೀ ತಕ್ಕಂಡೀ ಬಂದೆ........

ರಾಮು : ಇಲ್ಲೀರ್! ಆ ಪೆಟ್ಟಿಗೆತುಂಬ ಒಡವೆ. ಹುಷಾರಾಗಿ ಎತ್ತಿಕೊಂಡುಹೋಗಿ ನಮ್ಮ ಕೋರ್ಟಿನಲ್ಲಿ Inspectorಗೆ ಒಪ್ಪಿಸಿ ರಸೀದಿ ತಗೊಂಬಾ. ತಲ್‌ಪಿಸಿದ್ರಕ್ಕೆ........ಹುಷಾರು! ಅಜ್‌ಬಾಬ್ ಎಲ್ಲ ಸರಕಾರದ್ದು.

ಯಾಕೂಬ್ : ಜೀ!

[ಪೆಟ್ಟಿಗೆಯುನ್ನು ಎತ್ತಿ ತಲೆಯಮೇಲಿಟ್ಟುಕೊಂಡು ಮೆಟ್ಟಿಲಿಳಿದು ನಿಷ್ಕ್ರಮಣ]

ರಾಮು : ಸ್ನಾನಕ್ಕೆ ನೀರು ತಯಾರಿ ತಾನೆ? ಕೋರ್ಟಿಗೆ......ಹೊತ್ತಾಯಿತು......!

ಲಕ್ಷ್ಮೀ : ಹೂಂ.

[ರಾಮಣ್ಣನು ಆಫೀಸ್ ಬಾಗಿಲಿನಿಂದಲೂ ಲಕ್ಷ್ಮೀದೇವಮ್ಮನು ತಾನು ಬಂದ ಬಾಗಿಲಿನಿಂದಲೂ ನಿಷ್ಕ್ರಮಣ]

[**"ಬೋರಾ"! "ಬೋರಾ"!** ಎಂದುಚ್ಚೀತ್ಕರಿಸುತ್ತಾ ಟೋಪಿ ಕೋಟು ಕಾಲರ್ ಷರಾಯಿ ಕಾಲ್ ಚೀಲಗಳಿಂದ ಅಲಂಕೃತನಾದ ಕಿಟ್ಟುವು ಒಳ ಬಾಗಿಲಿನಿಂದ ಪ್ರವೇಶಿಸುವನು.]

ಕಿಟ್ಟು : ಬೋರಾ! ಎಲ್ಲಿದೀಯೋ ಬೇಕೂಫಾ?

ಸಾತು : (ಪ್ರವೇಶಿಸಿ) ಇದೇನಿದು ಹೊಸ ಫ್ಯಾಷನ್ನು, (fashion) ಬೂಟ್ಸ್ ಇಲ್ಲದೆ ಬರೀ ಸಾಕ್ಸೂ (Socks) ...... ?

ಕಿಟ್ಟು : ನಿನ್ಯಾರೆ ಕೇಳಿದ್ದೂ? Mind your own business I say! ನೀನೆಲ್ಲಿಂದ ಧುಮುಕಿದೆಯೆ?........... ಗಲಾಟೆಯಿಲ್ಲದೆ peaceful ಆಗಿದ್ದ ಮನೇಗೆ ಯಾವ ಸುಂಟರಗಾಳಿ ಹೊತ್ತುಕೊಂಡು ಬಂದು ಹಾಕ್ತೇ ನಿನ್ನಾ? (ಪ್ರವೇಶಿಸಿದ ಲಕ್ಷ್ಮೀದೇವಮ್ಮನನ್ನು ನೋಡಿ)...........ನೋಡಮ್ಮಾ ಇವಳನ್ನ! insult ಮಾಡತಾಳೆ ನನ್ನ!

ಸಾತು : ನಿನ್ನ ಮೂತೀಗಿಂತಾ ದೊಡ್ಡ insultಉ ಬೇರೆ ಯಾರೂ ಮಾಡೋಹಾಗಿಲ್ಲ!

ಕಿಟ್ಟು : (ಕುಪಿತನಾಗಿ) ನನ್ನ ಮೂತೀಗೇನೆ ಕಮ್ಮೀ? What is less for my face I say?

ಪಾತು: What is lessಸೇ ?....... ನಿನ್ನ ಒಂದು ಮುಖವಾಡ lessಸು ! ಒಂದು Mask ಗಾನಾ ಹಾಕ್ಕೊಂಡುಬಿಟ್ಟೆ ಅಂದ್ರೆ ಮನ್ಮಥನ equal ಆಗಿ ಹೋಗ್ತಿ....... ! ಮನ್ಮಥ ಅಂದ್ರೆ ಜ್ಞಾಪಕಕ್ಕೆ ಬರುತ್ತೆ ನಮ್ಮ ನಾಗತ್ತೆ ನಿನ್ನ beautyಗೆ certificate ಕೊಟ್ಟಿದಾಳೆ........ ಮಾರನಿಗೆ ಸುಟ್ಟವೋರೆ ನಿನಗೆ ಸೊಟ್ಟವೋರೆ ಅಂತಾ!........

ಕಿಟ್ಟು: ನೋಡವ್ಮಾ........!

ಲಕ್ಷ್ಮೀ: (ಮೇಜಿನಮೇಲಿನ ಬೆಳ್ಳಿ ತಟ್ಟೆಯನ್ನು ತೆಗೆದುಕೊಂಡು ಪಾತುವನ್ನು ಒಳ ಬಾಗಿಲಕಡೆ ದಬ್ಬುತ್ತಾ) ಅವನ್ನ ಯಾಕೆ tease ಮಾಡ್ತೀಯಾ?.......ನಡಿ, ನಿಮ್ಮ ತಂದೆ ಊಟಕ್ಕೆ ಬರೋ ಹೊತ್ತಾಯ್ತು.

[ಇಬ್ಬರೂ ನಿಷ್ಕ್ರಮಣ]

ಕಿಟ್ಟು: (ಘಟ್ಟಿಯಾಗಿ) ಚೋರಾ!

ಚೋರ: (ಪ್ರವೇಶಿಸಿ ಮೆಟ್ಟಲನ್ನು ರಭಸವಾಗಿ ಹತ್ತಿ) ಬಂದೆ ಬುದ್ದೀ ..... !

ಕಿಟ್ಟು: ಎಲ್ಲಿ ಹೋಗಿದ್ಯೋ.......ಇಷ್ಟು ಹೊತ್ತೂ?

ಚೋರ: ಟೈಗರ್‌ನಾ ಕೆರೆಗೊಯ್ದು ಮೈತೊಳಕೊಂಬಂದೆ ಬುದ್ದೀ...!

ಕಿಟ್ಟು: ಅಲ್ಕಾಣೋ! ನಾಯೀಗೆ ಮೈತೊಳೆದು ಕುದುರೇಗೆ ಹಲ್ಲುಜ್ಜಿ ಕೋಣನಿಗೆ ರುಮಾಲುಕಟ್ಟತಾ ಕೂತಿದ್ರೆ ನನ್ನ ಬೂಟ್ಸಿಗೆ ಬ್ಲ್ಯಾಕ್ ಯಾವಾಗ್ಲೋ ಹಾಕೋದು!

ಚೋರ: ಆಕ್ದೆ ಬುದ್ದೀ ಬೂಟ್ಸಿಗೆ ಬ್ಲಾಕಾ, ಕರೇ ಬೂಟ್ಸಿಗೆ!

ಕಿಟ್ಟು: ನಾನ್ ಕೇಳೋದು ಕೆಂಪು ಬೂಟ್ಸಿಗೇ ಕಾಣೋ?

ಚೋರ: ಕೆಂಪು ಬೂಟ್ಸಿಗೆ ಕೆಂಪು ಬ್ಲಾಕು ಆಗೋಯಿತು ಬುದ್ದೀ. ಇನ್ನು ದೊಡ್ರಾಯರ ಬಿಳೀ ಬೂಟ್ಸಿಗೆ ಬಿಳೀ ಬ್ಲಾಕೂ ಇಲ್ಲ.

ಲಕ್ಷ್ಮೀ: (ಪ್ರವೇಶಿಸಿ) ಏನೋ ಇದು ಗಲಾಟೇ? ನಿನ್ನ ಧರ್ಮಕ್ಕೆ...ನಿಮ್ಮ ತಂದೆ ಆಫೀಸಿಗೆ ಹೋಗೋವರೀಗಾದರೂ quiet ಆಗಿ ಇರಬಾರದೇನೋ?

ಕಿಟ್ಟು: ಏನವ್ಮಾ ಇದು? ಟೈಗರಿಗೆ toilet soapಪು....ನನ್ನ brown bootsಗೆ polish ಇಲ್ಲಾ, ಏನವ್ಮಾ ಇದೂ........?

ಲಕ್ಷ್ಮೀ: ಮುಚ್ಕೋಬಾಯಿ!........ಅಳಬೇಡ. ಸಾಯಂಕಾಲ ತರಿಸಿದ್ರಾಯಿತು.

[ಚೋರನ ನಿಷ್ಕ್ರಮಣ]

ಕಿಟ್ಟು: ಈ ಶನೀನ್ನೋಡವ್ಮಾ...!

ಲಕ್ಷ್ಮೀ: ಯಾವ ಶನಿಯೋ? ಮನೇಲಿ ಎಷ್ಟೋ ಶನಿಗಳು!

ಕಿಟ್ಟು: ಈ ನನ್ನ ಜುಟ್ಟು ನೋಡವ್ಮಾ!

ಲಕ್ಷ್ಮೀ: ಅದಕ್ಕೇನು ಬಂತು ಕೇಡು?

ಕಿಟ್ಟು: ಕೇಡೇನೂ ಬರ್ಲಿಲ್ಲ, ಅದೇ ತಕ್ರಾರು. ಇಲ್ನೋಡವ್ಮಾ! ನಾನೆಷ್ಟು ಜೋರಾಗಿ ಡ್ರೆಸ್ಸು ಮಾಡಿಕೊಂಡ್ರೂ—ಜುಟ್ less ಆಗೋವರಿಗೂ ಜೋರು ಕಂಡುಬರೋದಿಲ್ಲ. ಕ್ರಾಪಿಗೆ (Crop) ಯಾವಾಗ consent ಕೊಡತೀಯಾ ಅವ್ಮಾ?

ಲಕ್ಷ್ಮೀ: ಚನ್ನಾಗಿಥೆ ನಿನ್ನ ಬುದ್ಧಿ! ನಿಮ್ಮಜ್ಜಿ ಕೈಲಿರೋದು ೨೦೦೦ ರೂಪಾಯಿ. ನಿನಗೇ ಅಂತ ಹೇಳಿಥಾಳೆ. ಇವತ್ತೋ ನಾಳೆಯೋ ಸಾಯೋ ಹಾಗೂ ಇಥಾಳೆ........ಇಷ್ಟರಲ್ಲಿ

ನೀನು ತಲೆ ಬೋಳಿಸಿಕೊಂಡು ನಿಲ್ಲೂ....ಇದನ್ನೋಡಿ "ಈ ಕೊಂಗನ ಕೈಪಿಂಡ ನನಗೆಲ್ಲಿ ಮುಟ್ಟುತ್ತೆ ಮೇಲೆ ಲೋಕದಲ್ಲೀ" ಅಂತಾ .... ಕಾಶೀನೋ ರಾಮೇಶ್ವರಾನೋ ಎದ್ದು ಬಿದ್ದೆ ಅವಳು ....ಕೈಗೆ ಬಂದ ರೂಪಾಯಿನೂ ಕಳಕೊಂಡು..........ನಿನ್ನ ಕ್ರಾಪ್ ತಲೇನೂ ಸವರಿಕೊಳ್ಳ್ತಾ, ಕಣ್ಣುಕಣ್ಣು ಬಿಡೋ, ಕಪಿಯೇ !

ಕಿಟ್ಟು : ಅದಿರಲೀ ! What about my career ಉ ಅಮ್ಮಾ !

ಲಕ್ಷ್ಮೀ : ಸರಿ, ಕ್ರಾಪಾಯಿತೋ ಇನ್ನೀ careerರು. ಅಲ್ಲೋ Matriculationನ ಮೂರನೇ ದರ್ಶನಕ್ಕೆ ಎದುರುನೋಡ್ತಿರೋ ನಿನಗೆ career ಯೋಚ್ನೇಗೇನೋ ಇಷ್ಟು ಅವಸರ...!

ಕಿಟ್ಟು : ಅದೇ ನಾನೂ ಹೇಳೋದು. ಇಲ್ನೋಡಮ್ಮ! ನನಗೋ ಎರಡು ವರ್ಷಾನೂ S. S. L. C. ಡುಮ್ಕಿ ಮೇಲೆ ಡುಮ್ಕಿ. ಇನ್ನು future prospects ನೋ ನನಗೆ ತಿಳಿದ ಮಟ್ಟಿಗೂ ಠೋಕರ್ ಮೇಲೆ ಠೋಕರು....unless ಇವರು curriculumನಾ change ಮಾಡಿ...of course that is impossible—sense ಎಲ್ಲಿದೆ ಈ universityಗೆ —ಎಲ್ಲ ಹುಟ್ಟೋವಾಗ್ಲೆ specialise ಅಂತಾ ಅಭಿಮನ್ಯು ಬಾಬತ್ತು ಮಾಡಿಟ್ಟುಬಿಟ್ಟಿಧಾರೆ— Therefore ಅಮ್ಮಾ, ಇದಕ್ಕೆಲ್ಲಾ ಒಂದೇ ದಾರಿ...I must be England returnedಊ ಅಮ್ಮಾ ! ಇದಕ್ಕೆಲ್ಲ ಯೋಚಿಸಿ careful ಆಗಿ ನಾನು ಹಾಕಿದ Budgetನಾ ಅಪ್ಪಾ approve ಮಾಡಿ, ಈ amountನ ನನ್ನ father-in-law ಕೈಯಿಂದಲೇ ಹೊರಡಿಸೋದು best thingಉ ಅಂತಾ opinion ಕೊಟ್ಟಿದಾನೆ. ಈಗ ಬಂದಿದ್ರಲ್ಲಮ್ಮ partiesಉ. ಏನು arrange ಮಾಡಿಧೀಯಾ ?

ಲಕ್ಷ್ಮೀ : Arrange ಏನು ! ಮನೆ Mortgageನ ೨೭೦೦ ರೂಪಾಯಿ ನಾನು ಕೇಳಿಧೇನೆ. ನಿಮ್ಮ ತಂದೇಗಿರೋ ೩೦೦೦ ರೂಪಾಯಿ ಚಿಲ್ಲರೆ ಸಾಲದ ಮಾತು ಆವರೆತ್ತಿದಾರೆ.

ಕಿಟ್ಟು : ಮತ್ತೆ ನನಗೇನು ಬಂದ ಹಾಗಾಯಿತಮ್ಮ ? **ಕ್ರಾಪೂ put offಉ, careerಉ cut offಉ**....ಏನ್ ಬಂದ ಹಾಗಾಯಿತಮ್ಮಾ...?

ಲಕ್ಷ್ಮೀ : ಬಂಗಾರದಂಥ ಹೆಂಡತಿ ಬಂದಹಾಗಾಯಿತು.

ಕಿಟ್ಟು : ಒಳ್ಳೇ ಬಂಗಾರದ ಹೆಂಡತಿ ! ನನಗೆ ಆಗಾಗ ಆಗೋ expenseಗೆ ಮೂಗು ಕಿವೀನ ಗಿಲ್ಲಿಕೊಂಡು ತೀರಿಸಿಕೊಳ್ಳೋದೆ? What is this ಅಮ್ಮಾ? ನಾನೇ ಹೋಗಿ Mr. ನರಸಿಂಹಯ್ಯನ ಹತ್ತಿರ ನನ್ನ difficulties ವಿಷಯವಾಗಿ broach ಮಾಡ್ತೇನೆ !

ಲಕ್ಷ್ಮೀ : ಹಯ್ಯೋ ಮಂಕು ! ಆಕೆ ಬರೀ ೨೭೦೦ಉ ಅಂತ ತಿಳಕೊಂಡ್ ಇಧಾಳೆ. ಇನ್ನು ಆತ್ನೋ, ನಿಮ್ಮ ತಂದೆ ಹೇಳಿದ ೩೦೦೦ ಚಿಲ್ಲರೆ ಅಂತ ತಿಳಿಕೊಂಡಿಧಾನೆ. ಇನ್ನು ದಂಪತಿಗಳು notes compare ಮಾಡಿಕೊಂಡು ೬೦೦೦ ಅಂತ ಮನದಟ್ಟಾಗತ್ಲೂ, ಹುಚ್ಚು ಹಿಡೀದೆ ಇತ್ತೋ....ನಮ್ಮ ಭಾಗ್ಯ ! ಏತನ್ಮಧ್ಯೆ ನೀನು ಓಡಿಹೋಗಿ ನಿನ್ನ ಕೋತಿ ಮುಖಾನ ತೋರ್ಸಿ ಇಲ್ಲಿ ಪರೀಕ್ಷೆಗಳಲ್ಲಿ ಬರೋ once moreಗಳ ಜೊತೇಲಿ Englandನಲ್ಲೀ?... ನಾನು ಹೇಳೋದು ಕೇಳೂ ! Eldersಗೆ ಬಿಟ್ಟುಬಿಡು ನಿನ್ನ futureನಾ !

ಕಿಟ್ಟು : ಒಳ್ಳೇ ಬಿಟ್ಟುಬಿಡೂ ಅಮ್ಮಾ ! ನಾನು desperateಉ ಅಮ್ಮಾ ! ನೀವು ಗಾನ at once ನನ್ನ English tripಗೆ arrange ಮಾಡ್ದೆ ಹೋದ್ರೇ, Mesopotamiaಗೆ ಓಡಿಹೋಗಿಬಿಡತೇನೆ. ನಾನು desperateಉ....ನರಸಿಂಹಯ್ಯನೋರಿಗೆ ಒಂದು ಕಾಗದ ಬರದೂ...

ಲಕ್ಷ್ಮೀ : (ಹತ್ತಿರಕ್ಕೆ ಬಂದು ಕಿಟ್ಟಿಯ ಟೋಪಿಯನ್ನು ತೆಗೆದು ಮೇಜಿನ ಮೇಲಿಟ್ಟು ತಲೆಯನ್ನು ಸವರುತ್ತಾ...ಮೃದುವಚನಗಳಿಂದ) ಇಲ್ಲಿ ನೋಡು ಮಗೂ! ಈ ೬೦೦೦ ಅಲ್ದೆ

ಮದುವೆ ಖರ್ಚು ಕನಿಷ್ಟಪಕ್ಷ ೧೦೦೦......ಇದು ತಿಳಿಯುತ್ತೂನೂವೆ ಕೈಕ್ಕೆ ಓಸಕತಾ, ನಿಂತಿರೋ ಅವರನ್ನ, ನಿನ್ನ England ಖರ್ಚುಗಳೂ ಈಗಲೇನೆ ಕೇಳಿದರೆ paralytic stroke ಬಂದೀತು ಅವರಿಗೇ ! (ಕಿಟ್ಟಿಯನ್ನು ಪಕ್ಕಕ್ಕೆಳೆದು) ಮನೆ ಭೋಗ್ಯಾನೂ ಬಿಡಿಸಿಕೊಂಡು ನಿಮ್ಮ ತಂದೆ ಸಾಲಾನೂ ತೀರಿ ನಿನ್ನ ಖರ್ಚಿಗೂ ಆಗೋ ದುಡ್ಡಿಗೆ ದಾರಿ ಹೇಳತೇನೆ, ಕೇಳು ನನ್ನ planನ...!

ಕಿಟ್ಟು : (ಮುಖದಲ್ಲಿ ಜಿಗುಪ್ಸೆಯನ್ನು ತೋರಿಸುತ್ತಾ) ಏನು plan ಅಮ್ಮ ನಿನ್ದು......? (ಕಿವಿಯನ್ನು ಕೊಡುವನು)

ಲಕ್ಷ್ಮೀ : Carefulಆಗಿ ಕೇಳು !

(ಎರಡು ನಿಮಿಷಗಳು ಕಿವಿಯಲ್ಲಿ ಹೇಳುತ್ತಾ ಹೇಳುತ್ತಾ ಕಿಟ್ಟಿಯ ಮುಖವು ಜಿಗುಪ್ಸೆಯಿಂದ ವಿಸ್ಮಯ, ವಿಸ್ಮಯದಿಂದ............ ಆನಂದ ಮುದ್ರೆಗಳನ್ನು ಅವಲಂಬಿಸುವುದು.)

ಕಿಟ್ಟು : (ನಗುತ್ತಾ) ಏನು scoundrelಲೇ ಅಮ್ಮಾ, ಅಲ್ಲಾ ಏನು cleverಉ ಅಮ್ಮ ನೀನು ! ನೀನು ಹೇಳೋಹಾಗೆ, birds of passage ಅಲ್ಲ ಅವರು ನಮ್ಮ ಹಾಗೆ ! ಈ ಪೂರಿನವರು. Lot of relationsಉ respectable family............disgrace ಗಿಂತ deathಏ ಮೇಲೂ ಅಂಬೋಬಾಬ್ತು. Besides, ನಾವು ಕೇಳೋ ಸಮಯ, ನಮ್ಮ Head master ಹೇಳೋಹಾಗೆ ಓಳ್ಳೇ ...."ಪಿ ಸ್ ಕ ಲಾ ಜಿ ಕ ಲ್ ಮೊ ಮೆ ಂ ಟು" (Momentಉ) ಅಮ್ಮಾ...!

[ಪರದೆಯು ಬೀಳುವುದು]

ತಾಳೀಕಟ್ಟೋಕ್ಕೂಲೀನೇ?

೨

ಸಾತೂ ತೌರ್ಮನೆ

ಪಾತ್ರಗಳು

ನಾಗತ್ತೆ	....	ಟೊಳ್ಳು ಗಟ್ಟಿಯು
ಸಾತೂ	....	"
ರಂಗಣ್ಣ	....	ಸಾತು ತಂದೆ
ನರಸಮ್ಮ	....	ಸಾತು ತಾಯಿ
ಶಾಮಿ	....	ಸಾತು ತಮ್ಮಂದಿರು
ಮಗು	....	ಸಾತು ತಮ್ಮಂದಿರು
ಕೂಸು	....	ಸಾತು ತಮ್ಮಂದಿರು
ಪುಟ್ಟು	....	ಸಾತೂ ತಂಗಿ
ನರಸಿಂಹಯ್ಯ	....	ಪಾತೂ ತೌರ್ಮನೆಯು
ಪಾರ್ವತಮ್ಮ	....	"
ಕಾಲ	....	ಆಧುನಿಕ
ಭಾಷಾ	....	ತಥಾ
ಸ್ಥಳ	....	ರಾಮಪುರ — ರಂಗಣ್ಣನ ಮನೆ

ಸೀನ್ ೧

ರಂಗಣ್ಣನ ಮನೆ ಮುಂದಿನ ಕೋಣೆ

[ಜೋಲಿಯಲ್ಲಿರುವ ಕೂಸನ್ನು ಆಗಾಗ್ಗೆ ಆಡಿಸುತ್ತಾ....ತನ್ನ ನಾಲಿಗೆಯನ್ನು ಅಲ್ಪದೂರ ಬಿಟ್ಟುಕೊಂಡು ಮಗುವು "ಕಾಪಿ"ಯನ್ನು ಬರೆಯುತ್ತಿರುವನು. ಹಿಂದಿನ ಬಾಗಿಲಿನಿಂದ ಪುಟ್ಟಾ, ಒಂದು ಕೈಯಲ್ಲಿ ಮುರಿದ ಗೊಂಬೆಯನ್ನು ಮತ್ತೊಂದು ಕೈಯಲ್ಲಿ ಆ ಗೊಂಬೆಯು ಮುರಿದ ಕೈಯನ್ನು ಹಿಡಿದುಕೊಂಡು ಮಗುವನ್ನು ಸಮೀಪಿಸುವಳು.]

ಪುಟ್ಟಾ : ಲೋ ! ಮಗು, ಈ ಗೊಂಬೆ ಸರಿಮಾಡಿಕೊಡೋ.

ಮಗು : ಲೇ ! ಏನೆ ಇದೂ ; ಅಣ್ಣನ್ನ, ಗಂಡಸಿನ್ನ, ಭೂಪತೀನ ಲೋ ಮಗು ಅಂತೀಯಾ ....? ನನಗೇನು ನಿನ್ನ ಗೊಂಬೆ ರಿಪೇರಿ ಮಾಡೋದೇ ಕೆಲ್ಸಅಂತ ತಿಳಕೊಂಡೆಯಾ? ------ ಈ ಭೂಪತಿ ಬರೀತಿರೋದು ಗೊತ್ತಿಲ್ವೆ............?

ಪುಟ್ಟಾ : ಏನೋ ನೀನ್ ಬರೀತಿರೋದು ಮಹಾ........?

ಮಗು : ಮಹಾ ಅಲ್ದೆ ಮತ್ತೇನೆ............? ಕಾಪಿ ಬರೀತಿದೇನೆ ಇಂಗ್ಲಿಷಿನಲ್ಲಿ.....-- "admire, good men" ಅಂತಾ........

ಪುಟ್ಟಾ : ಹಾಗಂದ್ರೇನೋ........?

ಮಗು : (ಬೆರಳಿನಿಂದ, ಮುಂದೆ ಬೆಳೆದರೆ ಮೀಸೆ ಇರಬೇಕಾದ ಸ್ಥಳವನ್ನು ಸವರುತ್ತಾ) Men ಅಂದರೆ ನಾವು ಭೂಪತಿಗಳು........admire ಅಂದ್ರೆ .... ಊಂ............ಊಂ ....ಸಂಗಾತ ಇಟ್ಕೋ............good ಒಳ್ಳೇದು........... ಅಂದ್ರೆ ಗಂಡಸರ ಸಹವಾಸ ಒಳ್ಳೇದು........ಹೆಂಗಸ್ರು ಸಹವಾಸ hopelessಊ............**ಹೊರಟ್ಹೋಗ್ತಿರು !!!** ------

(ಪುನಃ ಬರೆಯಲುಪಕ್ರಮಿಸುವನು.)

ಪುಟ್ಟಾ : (ಖಿನ್ನಳಾಗಿ) ಏನೋ ಇದೂ............ಹೆಂಗಸರು ಹೆಂಗಸರು ಅಂತಾ ಸುಮ್ಮನೆ ಬೈತೀಯಾ ......ನಾವೇನುಮಾಡಿದ್ವೋ ನಿನಗೆ ?

ಮಗು : ಮಾಡಬೇಕಾದದ್ದೇನಿದೆಯೆ ....? ಮೊದಲೇ ನೀವೆಲ್ಲಾ hopelessಊ ಕಾಣ್ರೆಲ್ರೇ........!

ಪುಟ್ಟಾ : ಹೋಪ್‌ಲೆಸ್ಸು ಅಂದ್ರೇನೊ ?

ಮಗು : Hopelessಉ ಅಂದ್ರೆ.... ಊಂ ಯಾವ ಬಾಬತ್ತೂ hopelessoo ಅಂತ.... !

ಪುಟ್ಟಾ : ಮತ್ತಿರಿಗಿ ಹೋಪ್‌ಲೆಸ್ ...... ಅಂದ್ರೇನೊ........ ?

ಮಗು : ಹೇಳ್ತೀನೆ...ಇರೇ...hopelessoo ಅಂದ್ರೆ...ನೀವೆಲ್ಲ...ಬರೀ ಅಡಿಗೇ ಬಾಬತ್ತಿಗೆ ಲಾಯಖ್ಖು ! ಮಿಕ್ಕ ಸಮಾಚಾರದಲ್ಲೆಲ್ಲಾ ಸೊನ್ನೇ ಅಂತ ಅರ್ಥ.

ಪುಟ್ಟಾ : ನೀವು ಮಟ್ಟಿಗೇನೊ ಮಹಾ............ ! ?

ಮಗು : ನಾವೇ ? ಭೂಪತಿಗಳೇ... ! ಒಳ್ಳೇ ಕಾಪಿ ಗೀಪಿ ಬರಕೊಂಡು ಹೋಗಿ ಮಾಷ್ಟರಿಗೆ ತೋರಿಸಿ, ಮಾರ್ಕ್ಸ್ ತಕ್ಕೊಂಡು, ಪ್ಯಾಸು ಮಾಡಿ, ಕೆಲಸಕ್ಕೆ ಸೇರಿ, ದುಡ್ಡು ಸಂಪಾದ್ಸಿ, ಅಂಗಡೀಗೆ ಹೋಗಿ ಅಕ್ಕಿ ಬೇಳೆ ತರಕಾರಿ ವಗೈರೆ ತಕ್ಕೊಂಡ್ ಬಂದು, ಕಿತ್ತುಎರಚೋದು ನಿಮ್ಮೆದುರಿಗೇ........ ಅದನ್ನೆಲ್ಲ ನೀವು, ಹೆಂಗಸರು, ಜೋಪಾನವಾಗಿ ಒಲೆ ಮುಂದೆತ್ತಿಕೊಂಡ್‌ಹೋಗಿ ಹುಷಾರಾಗಿ ಅಡಿಗೆ ಮಾಡಿ, ಬಡಿಸಬೇಕ್ರೆಲ್ರೇ ನೀವೂ...........ನಮಗೆ, ಭೂಪತಿಗಳಿಗೆ, ಬಡಿಸಬೇಕು ನೀವು !

ಪುಟ್ಟಾ : ನಾವುಗಾನ ಅಡಿಗೆ ಮಾಡಿ ಬಡಿಸದೆ ಇದ್ದರೆ ಬರೀ ಅಕ್ಕಿ ಹಸಿ ತರಕಾರೀನ ತಿನ್ನ ಬೇಕಲ್ಲ ನೀವೂ............ ?

ಮಗು : ನೀವು ಬಡಿಸದಿದ್ರೆ ಅಷ್ಟೇಹೋಯ್ತೇ ? ಪರಿಚಾರಕರನ್ನ ಇಟ್ಕೊಳ್ತೇವೇ ಭೂಪತಿಗಳೂ, ಪರಿಚಾರಕರನ್ನಾ ....

ಪುಟ್ಟಾ : ಯಾವ ಹೆಸರಿಟ್ಟರೇನು ? ಮತ್ತೆ ತಿರುಗೂ ನಾವೇ ಅಡಿಗೆ ಮಾಡಬೇಕಲ್ಲವೇ....?

ಮಗು : ಪರಿಚಾರಕರು ಅಂದ್ರೆ ಹೆಂಗಸರಲ್ಲ ಕಣೇ........ಗಂಡಸರು !

ಪುಟ್ಟಾ : ಹಾಗಾದರೆ........ಗಂಡಸರು........ಭೂಪತಿಗಳು, ಅಡಿಗೇನೂ ಮಾಡತಾರೋ ?

ಮಗು : (ಒಂದು ಕ್ಷಣ ತಂಗಿಯನ್ನು ದುರುಗುಟ್ಟಿ ನೋಡಿ) ಅದಕ್ಕೇನು ಮಾಡೋದು ? ಕಾಪಿ ಗೀಪಿ ಬರಿಯೋದನ್ನ ಬಿಟ್ಬುಬಿಟ್ಟೂ ಹೆಂಗಸರ ಮುರುಕಲ ಗೊಂಬೆಗಳ್ನ ರಿಪೇರಿಮಾಡ್ತಾ ಕೂತಿದ್ರೆ ಪ್ಯಾಸೂಆಗದೆ ಕೆಲಸಾನೂ ಮಾಡದೆ ಹೊಟ್ಟೆಪಾಡಿಗೆ ಅಡಿಗೆ ಮಾಡೋದು ತಿಳೀಲೇಬೇಕು.

ಪುಟ್ಟಾ : ಪ್ಯಾಸೂ ಅಂದ್ರೆ ಜ್ಞಾಪಕ ಬರುತ್ತೆ. ನಮ್ಮ ಮಿಸ್ಟ್ರೆಸ್ಸು ಪ್ಯಾಸ್ ಮಾಡಿದಾಳ ಲ್ವೇನೋ ?

ಮಗು : ಇಲ್ಲದಿದ್ರೆ teacher ಕೆಲಸ ಕೊಡತಿದ್ರೇನೆ ?

ಪುಟ್ಟಾ : ಹಾಗಾದರೆ ಅವಳಿಗೂ ಸಂಬಳ ಉಂಟಲ್ವೇ ?

ಮಗು : ಮತ್ತೇನು ಬಿಟ್ಟೀಕೆಲಸ ಮಾಡ್ತ್ಯಾಳೇ ...... ?

ಪುಟ್ಟಾ : ಹಾಗಾರೆ ಕೆಲವು ಗಂಡಸರು ಪ್ಯಾಸ್‌ಗೀಸ್ ಮಾಡಿ ಸಂಬಳ ಬಂದ್ರೆ ಅವರಿಗೆ ಪ್ಯಾಸ್ ಆಗದ ಹೆಂಗಸರು ಅಡಿಗೆ ಮಾಡಬೇಕು. ಮತ್ತೆ, ಕೆಲವು ಹೆಂಗಸರು ಪ್ಯಾಸ್ ಮಾಡಿದರೆ. ಅವರಿಗೆ ಪ್ಯಾಸಾಗದ ಭೂಪತಿಗಳು ಅಡಿಗೆ ಮಾಡಬೇಕು, ಅಲ್ವೇ............?

ಮಗು : (ರೇಗಿ) ಎಷ್ಟೆ ನಿನ್ನ ನಾಲಿಗೆ......ಗಂಡಸರನ್ನ ಬೈತೀಯಾ...ಹಾಗಾದರೆ ನಿನ್ನ ಗೊಂಬೆ ನೀನೇ ರಿಪೇರಿ ಮಾಡಿಕೋ .... !

ಪುಟ್ಟಾ : ಇಲ್ಲಾ ಕಣೋ....ಬಯ್ಯೋದಿಲ್ಲ....ನೀವೆಲ್ಲ ಭೂಪತಿಗಳು....ನಾವೆಲ್ಲ ಹೋಪ್ ಲೆಸ್ಸೂ ....ಇದು ಸರಿಮಾಡಿಕೊಡೋ ಗೊಂಬೇನಾ........(ಹತ್ತಿರ ಬಂದು ಗೊಂಬೆಯನ್ನು ನೀಡುವಾಗ್ಗೆ ಮಗುವಿನ ಕಾಪೀ ಪುಸ್ತಕವನ್ನು ಗಮನಿಸಿ) ನನಗ್‌ಕೊಡೋ ನವಿಲಗರೀ........

ಮಗು : ಇಲ್ಲಾಕಣೇ........ಅದು ಹಾಗೇ ಇಟ್ಟಿದ್ರೆ ಮುರೀಹಾಕುತ್ತೆ........ಆಮೇಲೆ ಮುರೀನ ಕೊಡ್ತೇನೇ............

[ಈ ಸಂವಾದ ಸಂಭ್ರಮದಲ್ಲಿ ಜೋಲಿಯನ್ನು ಆಡಿಸದೆ ಕೂಸು ರೋದಿಸುವುದು]

ನರಸಮ್ಮ : (ಒಳಗಿನಿಂದ) ಏನುಮಾಡ್ತಿಧೀಯೋ ಮಗೂ ....? ಅಳಸ್ತಿದೀಯಾ ಕೂಸ್‌ನಾ ? ಒಂದು ಕೈಲಿ ಬರೀತಿದ್ರೆ ಇನ್ನೊಂದು ಕೈಯಿಂದ ಆ ಜೋಲೀನ ಆಡಸ್‌ಬಾರದ್ಯಾಕೋ ?

ಮಗು : ಇಕೋ ಆಡಸ್ತೇನಮ್ಮ.

ಪುಟ್ಟಾ : ಜೋಲೀ ಆಡ್ಸೋ ಭೂಪತೀ ! ಜೋಲೀ ಆಡ್ಸೋ ಭೂಪತೀ !

(ಕಿಸೆಯಿಂದ ಒಂದು ಕಲ್ಲುಸಕ್ಕರೆ ತುಂಡನ್ನು ತೆಗೆದು ತಿನ್ನಲುಪಕ್ರಮಿಸುವಳು.)

ಮಗು : (ಜೋಲಿಯನ್ನು ಆಡಿಸುತ್ತಾ) ನನಗೊಂದು ತುಂಡು ಕೊಡೇ.

ಪುಟ್ಟಾ : (ಸಕ್ಕರೆಕಲ್ಲನ್ನು ತತ್‌ಕ್ಷಣವೇ ಕಿಸೆಗೆ ಹಾಕಿ) ಜೋಬಿನಲ್ಲಿರಲೀ....... ಮರೀಹಾಕುತ್ತೇ. ಹಾಕಿದಮೇಲೆ, ನೀನ್ ನವಲ್‌ಗರೀ ಮರೀ ಕೊಟ್ಟಾಗ, ನನ್ನ ಕಲ್‌ಸಕ್ರೆ ಮರಿ ಕೊಡತೇನೆ ನಿನಗೆ.... ಮರಿ ಹಾಕತ್ತಂತೆ ನವಲ್‌ಗಿರಿ .... !

ಮಗು : ಏನು ಮೀನೇ (Mean) ನೀನು !

ಪುಟ್ಟಾ : ಏನೋ ನನ್ನ ಮೀನು ಅಂತೀಯಾ (ರೋದಿಸಲುಪಕ್ರಮಿಸುತ್ತಾ) ನೀನೇನೊ ಮಹಾ....ಮೊಸಳೇ........ !

ಮಗು : ಹಯ್ಯಯ್ಯೋ ! ಮೀನು ಅಂದ್ರೆ ಕನ್ನಡ ಮೀನಲ್ಲ ಕಾಣೆ ಇಂಗ್ಲೀಷ್ ಮೀನು (mean).

ಪುಟ್ಟಾ : ಹಾಗಂದ್ರೆತಾನೆ ಏನೋ...... ?

ಮಗು : ಮೀನು ಅಂದ್ರೆ ರೋತೀ ಅಂತಾ.

ಪುಟ್ಟಾ : (ಅಳುತ್ತಾ) ರೋತೀ ಅಂತೀಯಾ ನನ್ನ........ಅಮ್ಮಾ !

(ಒಳಗೆ ಹೋಗಲು ಪ್ರಾರಂಭಿಸುವಳು.)

ಮಗು : (ಹೆದರಿ) ಅಲ್ಲಿ ಹೋಗಬೇಡವೆ ! ದಮ್ಮಯ್ಯ ! ಇಲ್ಲಿ ಬಾರೇ !........... ರೋತಿ ಅಂದ್ರೆ ಬೈಗಳಲ್ಲಕಾಣೇ———ರೋತೀ ಅಂದ್ರೆ ರಾಣೀ ಅಂತ. ನೀನು ಮಹಾರೋತಿ ; ಅಂದ್ರೆ ಮಹಾರಾಣೀ ಅಂತ ....ಇಲ್ಲಿ ಬಾ, ಆ ಗೊಂಬೇನೂ ರಿಪೇರಿ ಮಾಡಿಕೊಡತೇನೆ.

ನರಸಮ್ಮ : (ಒಳಗಿನಿಂದ) ಕೂಸನ್ನ, ಪುಟ್ಟಾನ ಆಡ್ಸುಅಂತ ಹೇಳಿ............ಇಲ್ಲಿ ಬಂದು ಈ ಬದನೇಕಾಯಿನ್ ತೊಟ್ಟು ಆರಿಸಿ ಕೊಡು.

ಪುಟ್ಟಾ : (ಕಲ್ಲುಸಕ್ಕರೆಯನ್ನು ಹೊರತೆಗೆದು ಆನಂದದಿಂದ ಹೀರುತ್ತಾ)

ಹೇಳೋ ಅಮ್ಮನಿಗೇ !

(ಕಲ್ಲುಸಕ್ಕರೆಯನ್ನು ಹಿಡಿಯದ ಕೈಯಿಂದ ಮೇಲುತುಟಿಯನ್ನು ಸವರಿಕೊಳ್ಳುತ್ತಾ) ನಾವು ಗಂಡಸ್ರೂ. ಭೂಪತಿಗ್ಳೂ, ಬದನೆಕಾಯಿ ತೊಟ್ಟಾರ್ಸೋದಿಲ್ಲಾ, ಅಂತ ಹೇಳೋ............ !

ನರಸಮ್ಮ : (ಒಳಗಿನಿಂದ) ಏನೋ ಇದು. ಕಿವುಡೇನೋ ?

ಮಗು : ಇದೋ ಬಂದೇ ಅಮ್ಮಾ ! ಲೇ, ನನ್ನ ಕೈಮುರಿದ್ರೂನೂ ನಿನ್ನ ಗೊಂಬೆ ರಿಪೇರಿ ಮಾಡೋದಿಲ್ಲ ....ಇರ್ಲಿ ! ಇರ್ಲಿ !

(ಎಂದು ಗೊಣಗುತ್ತಾ ಒಳಕ್ಕೆ ನಿಷ್ಕ್ರಮಣ)

ಪುಟ್ಟಾ : (ಒಳಬಾಗಿಲಿನಿಂದ ಮಗುವನ್ನು ಇಣಿಕಿ ನೋಡಿ) ಬದನೇಕಾಯಿ ತೊಟ್ಟು ಆರಿಸೋ ಭೂಪತೀ ! ಬದನೇಕಾಯಿ ತೊಟ್ಟು ಆರಿಸೋ ! .... ಅಲ್ಲಾ ಮತ್ತೆ (ಜೋಲಿಯನ್ನು ಸಮೀಪಿಸುತ್ತ)........... ಅಲ್ಲಾ ಮತ್ತೆ, ಹೆಂಗಸ್ರು ! ಹೆಂಗಸ್ರು ! ಅಂತ ಯಾವಾಗಲೂ ಬೈತಿರ್ತಾನೆ ! ನೀವೇನೋ .... ಮಹಾ........... ಭೂಪತಿಗಳು ! (ಒಂದು ಕೈಯಲ್ಲಿ ಹಿಡಿದ ಕಲ್ಲುಸಕ್ಕರೆಯನ್ನು ಹೀರುತ್ತಾ ಮತ್ತೊಂದು ಕೈಯಿಂದ ಜೋಲಿಯನ್ನು ಆಡಿಸುತ್ತಿರುವಳು.)

[ರಂಗಣ್ಣ ಪ್ರವೇಶ]

ರಂಗಣ್ಣ : (ಒಳಗೆ ಬಂದು ಎದುರು ಗೋಡೆಯಲ್ಲಿರುವ ಗೂಟಕ್ಕೆ ರುಮಾಲನ್ನು ತಗುಲಿಸಿ ಅಂಗಿಯನ್ನು ಬಿಚ್ಚುತ್ತಾ)

ಇದೇನು ಪುಟ್ಟಾ, ಮಗೂನ ಸುದಾರಿಸೋ ಜವಾಬ್ದಾರಿ ನಿನ್ನ ಮೇಲೆ ಬಿತ್ತು? ಅವರೆಲ್ಲ ಎಲ್ಲಿ ಅಶ್ವತ್ಥ, ಶಾಮಿ, ಮಗೂ ...... ?

ಪುಟ್ಟಾ : ಅಪ್ಪಾ ! .... (ಬೆಟ್ಟಸ್ನು ಮೇಲ್ಮುಟಿಯ ಮೇಲೆ ಸವರುತ್ತಾ ಸವರುತ್ತಾ) ಭೂಪತಿಗ್ಳು ಅಂದ್ರೇನಪ್ಪಾ............

ರಂಗಣ್ಣ : (ಪುಟ್ಟಾನನ್ನು ಎತ್ತಿಕೊಂಡು ಕೆನ್ನೆಯನ್ನು ಹಿಂಡುತ್ತಾ) ಇದೆಲ್ಲ ಏನು ಕಲೀತೀಯೆ ಘಟಿಂಗಿ ? (ಜೋಲಿಯನ್ನು ತಾನೇ ಆಡಿಸುತ್ತಾ ಘಟ್ಟಿಯಾಗಿ) ಇಧೀಯಾ ?

ನರಸಮ್ಮ : (ಒಳಗಿನಿಂದ) ನಿಮ್ಮ ತಂದೆ ಕೂಗುತಾರೇನೋ ನೋಡೋ ಮಗೂ............ ಅರ್ಧ ತೊಟ್ಟಾರ್ಸಿ ಅರ್ಧ ತೊಟ್ಟಿನ ಸಮೇತ ಹಾಗೇ ಬಿಡು ! ನಿನ್‌ಸಹಾಯ ಸಾಕು ! ಓಡು.

[ಮಗುವು ಒಳಬಾಗಿಲಿನಿಂದ ಪ್ರವೇಶಿಸಿದಹಾಗೆಯೇ ಶಾಮಿಯು ಬೀದಿ ಬಾಗಿಲಿನಿಂದ ಎಡ ಕಂಕುಳಲ್ಲಿ ಮೂರು ಪುಸ್ತಕಗಳನ್ನು ಜೋಡಿಸಿಕೊಂಡು,ಬಲಗೈಯಲ್ಲಿ ಹೂವಿನ ಬುಟ್ಟಿಯನ್ನು ಹಿಡಿದುಕೊಂಡು, ಪ್ರವೇಶಿಸುವನು.]

ಶಾಮಿ : (ಬುಟ್ಟಿಯನ್ನು ಒಳಬಾಗಿಲಿನ ಹೊಸಲಾಚೆ ಮುಂದಾಸನದ ಮುಂದೆ ಇಟ್ಟು ಹೊರಗೆ ಬಂದು) ಅಪ್ಪಾ, ನಿನ್ನ booksಉ. (ಮೂಲೆಯಲ್ಲಿರುವ ಮೇಜಿನ ಮೇಲಿಡುವನು) ಇನ್ನೊಂದು ಪುಸ್ತಕ libraryಯಲ್ಲಿ ಇಲ್ಲ....Out ಅಂತೆ.

ಪುಟ್ಟಾ : (ತಂದೆಯಿಂದ ಬಿಡಿಸಿಕೊಂಡು ಇಳಿದುಬಂದು) ಶಾಮೀ ! ರೋತೀ ಅಂದ್ರೇನೋ. ರಾಣೀನೇ............?

ಶಾಮಿ : ರಾಣಿ !! ಎಲ್ಲಿಧೆ ? ! ರೋತಿ ಅಂದ್ರೆ ಗೋಳೋ ಅಂತ ಅಳೋ ಬಾಬ್ತು.

ರಂಗಣ್ಣ : ದರ್ಜಿ ಹತ್ತಿರ ಹೋಗಿ ನಿನ್ನ ಖಾಕಿ ಸೂಟಿಗೆ ಅಳತೆ ಕೊಟ್ಯಾ?

ಶಾಮಿ : ಹೂಂ.

ಮಗು : ಇಲ್ನೋಡಮ್ಮ....(ಒಳಗೆ ನುಗ್ಗಿ) ಏನಮ್ಮ ? (ರೋಧನ ಧ್ವನಿಯಿಂದ) ಶಾಮೀಗೆ ಮಟ್ಟಿಗೆ ಹೊಸ ಸೂಟು, ನನಗೆ ಹರಕಲು ಪಂಚೆ, ಏನಮ್ಮ ಇದು ......? (ರೋಧಿಸುವನು).

ಪುಟ್ಟಾ : (ಒಳ ಬಾಗಿಲ ಹತ್ತಿರ ಇಣಿಕಿನೋಡಿ) ರೋತೀ ! ರೋತೀ, ರೋತೀ !

ಮಗು : (ಹೊರಕ್ಕೋಡಿಬಂದು) ಯಾರನ್ನೇ ರೋತಿ ಅಂತೀಯಾ ?

ಪುಟ್ಟಾ : (ಅಟ್ಟಿಬರುವ ಮಗುವಿನ ಕೈತಪ್ಪಿಸಿಕೊಂಡು ತಂದೆಯ ಹಿಂದೆ ಅವಿತುಕೊಂಡು) ರೋತಿ ಅಂದ್ರೆ ಬೈಗಳಲ್ಲಾಕಾಣೋ ! ರೋತೀ ಅಂದ್ರೆ ರಾಜ......! ನೀನು ಮಹಾ ರೋತಿ. ಅಂದ್ರೆ ಮಹಾರಾಜಾ !

ಮಗು : (ಹಲ್ಲುಗಳನ್ನು ಕಚ್ಚುತ್ತಾ) ನನ್ನ ಕೈಗೆ ಸಿಕ್ಕು ನೀನೂ......

ರಂಗಣ್ಣ : ಏನು ಗಂಡಸೋ ನೀನೂ, ಸೂಟಿಲ್ಲದಾಕ್ಷಣವೆ ಗಂಡಸು ಅಂಬೋದು ಮರ್ತುಬಿಟ್ಟು ಹೆಂಗ್ಸಿನ್ಹಾಗೆ ಅಳೋದಲ್ದೆ ಚಿಕ್ಕ ಹುಡುಗೀರ ಜೊತೆಗೆ ಜಗಳ ಆಡತೀಯಾ ? ಶಾಮೀ scoutಉ. ಅವನಿಗೆ uniformಉ......ನೀನೂ ಸ್ಕೌಟ್ ಆದಾಗ ....

ಮಗು : ನಾನೂ ಕಬ್ಬಾಗತೇನೇಂದ್ರೆ ಸೇರ್ಸೋದಿಲ್ಲಾಪ್ಪ. ಶಾಮಿ.

ಶಾಮಿ : ಪುಟ್ಟಾನ್ನ ಬೆದರಿಸೋದು. ಅಮ್ಮನ್ನ ರೇಗಿಸೋದು ಈ ಹ್ಯಾಬಿಟ್ಸ್ ತನ ಇರೋವರಿಗೂನೂ ಕಬ್ಬಾಗೋದು ತುಂಡು.

ನರಸಮ್ಮ : (ಒಳಗಿನಿಂದ) ಯಾರದು ಶಾಮೀನೇ ?........ಶಾಸ್ತ್ರಿಗಳ ಮನೆಗೆ ಹೋಗಿದ್ದೆಯಾ........ಏನು ಹೇಳಿದ್ರೂ ? ಬರ್ತಾರೆಯೇ ನಾಳೆ .... ?

ಶಾಮಿ : (ಒಳಬಾಗಿಲನ್ನು ಸಮೀಪಿಸಿ ಅಂಗಿಯನ್ನು ಬಿಚ್ಚುತ್ತಾ) ಹೋಗಿದ್ದೆ ಅಮ್ಮಾ ಕಂಡಿದ್ದೆ ಶಾಸ್ತ್ರಿಗಳನ್ನ...ಬೇರೊಂದುಕಡೆ ನಿಮಂತ್ರಣಕ್ಕೆ ಒಪ್ಕೊಂಡುಬಿಟ್ಟಿದಾರಂತೆ....... ಬೇಕಾದ್ರೆ ಅವರ ಭಾವಮೈದನ್ ತಮ್ಮನ್ನ...ಕಳಿಸ್ತಾರಂತೆ.

ನರಸಮ್ಮ : (ಒಳಗಿನಿಂದ) ಆ ಹುಡುಗನ ಕೈಲೇನಾದೀತೂ...?

ಶಾಮಿ : ಅದೂ ಕೇಳ್ದೆ. ಆಯುಷ್ಯಹೋಮಕ್ಕೂ ಆಶೀರ್ವಾದಕ್ಕೂ ಎಷ್ಟು ಬೇಕೋ ಅಷ್ಟು ಮಂತ್ರ ಅವನಿಗೆ ಗೊತ್ತು ಅಂದ್ರು...ಬರೋದಕ್ಕೂ ಬೇಡದ್ದಕ್ಕೂ ಸಾಯಂಕಾಲ ಬಂದು ತಿಳಿಸು ಅಂದ್ರು. ಏನು ಮಾಡೋದು ?

[ರಂಗಣ್ಣನು ಕೋಟು ಷರ್ಟನ್ನು ಬಿಚ್ಚಿ ಗೋಡೆಗೆ ತಗುಲಿಸಿ ಒಂದು ಚೌಕವನ್ನು ಹೊದ್ದುಕೊಂಡು ಒಳಕ್ಕೆ ನಿಷ್ಕ್ರಮಿಸುವನು]

ನರಸಮ್ಮ : (ಒಳಗಿನಿಂದ) ಮಾಡೋದೇನು, ಬರಲಿ ಅನ್ನೋದೇ.........ಸಾಯಂಕಾಲ ಹೋಗಿ ಹೇಳಿಬಿಡು.

ಪುಟ್ಟಾ : (ಜೋಲಿಯನ್ನಾಡಿಸುತ್ತಾ) ಆಯುಷ್ಯಹೋಮ ಅಂದ್ರೇನೋ ?

ಮಗು : ಅದೊಂದು ಹಬ್ಬಕಾಣೆ...ಗಂಡಸ್ರಿಗೆ...ಭೂಪತಿಗಳಿಗೆ...ನಾಳೆ ಹುಟ್ಟಿದ ಹಬ್ಬ ಕಾಣೆ...ಕೂಸಿಗೆ, ಭೂಪತೀಗೆ...ಶಾಸ್ತ್ರಿಗಳ್ನ ಕರೆಸಿ, ಹೋಮಗೀಮ ಮಾಡ್ಸಿ, ಕೂಸಿಗೆ........ ಮಗುಟಾ ಗಿಗಟಾ ಸುತ್ತಿ ಮಣೆಮೇಲೆ ಕೂಡ್ಸಿ, ಆರತಿ ಎತ್ತಿ, ಒಬ್ಬಟ್ಟು, ಲಾಡು, ಫೇಣಿ ಬಾಬೈಲ್ಲ ಬಡ್ಸಿ ಎಲ್ಲ್ರಿಗೂ ಔತನ ಮಾಡಿ ತಿರುಗೂ ರಾತ್ರಿ ಹಸೆ ಮೇಲಿಟ್ಟು ದೀಪಗೀಪ ಹಚ್ಚಿ, ಒಳ್ಳೆ ಜಗಜ್ಜ್ಯೋತಿ ಮಾಡ್‌ಹಾಕ್‌ಬಿಡ್ತೇವೇ........... ಹುಟ್ಟಿದ ಹಬ್ಬ ಕಾಣೆ ಕೂಸು ಭೂಪತೀಗೆ ! ನಿನ್ನ ಹಾಗೆ ಹೆಂಗ್ಸು ಅಂತ ತಿಳಕೊಂಡ್ಯಾ ಅವನು...?

ಪುಟ್ಟಾ : ಯಾಕೋ ನನಗ್ ಹುಟ್ಟಿದ ಹಬ್ಬಾ...?

ಮಗು : ಹೆಹೆಹೆ....ನಗೂ ಬರುತ್ತೆ...ನೀವು ಹೆಂಗಸರು........ಹುಟ್ಟಿದ ದಿನಾನೇ ಹಾಳ್ ಹೆಣ್ಣು ಹುಟ್ಟಿತಲ್ಲಾ....... ಗಂಡು ಹುಟ್‌ಲಿಲ್ಲವಲ್ಲಾಂತ ಗೋಳಾಟ. ಆಮೇಲೆ ಮುರುಕ್ಲು ಗೊಂಬೆ ಕೈಯಲ್ಲಿ ಕೊಟ್ಟು ಹರಕ್ಲು ಲಂಗಾಗಿಂಗ ಉಡ್ಸಿ ಗಿಲೀಟಾಗಿ ಸಾಕಿಬಿಟ್ಟು ಮೆಲ್ಲಗೆ ಬೀದೀಲಿ ಹೋಗುವ ಯಾರಾದ್ರೂ ಒಬ್ಬನ ಕೈಲಿ ತಾಳೀ ಕಟ್ಟಿಸಿ ಒದ್ದು ಓಡಿಸ್‌ಬಿಡೋದು ಮಾವನ ಮನೇಗೆ...! ಭೂಪತಿಗಳೇ ಮನೇಗೆ ಖಾಯಂಕಾಣೆ...ನೀವೆಲ್ಲ ಟೆಂಪರವರಿ ಕಾಣ್ರೇಲ್ರೇ....! ಟೆಂಪರ್‌ವರೀ !

ಪುಟ್ಟಾ : (ಕಣ್ಣೀರುಕ್ಕುತ್ತಾ) ನನ್ನ್ಯಾಕೋ ಮನೆಯಿಂದೊದ್ದು ಓಡಿಸೋದೂ ? ಅಮ್ಮ !

(ಎಂದು ಒಳಬಾಗಿಲನ್ನು ಸಮೀಪಿಸುವಳು)

ಮಗು : (ಸ್ವಲ್ಪ ಚೆದರಿ) ಇಲ್ಲ್ಯಾಣೆ ! ದಮ್ಮಯ್ಯ ಬಾರೇ ! ಮಾವನ ಮನೆಗೆ ಓದ್ಸೋಡಿ ಸೋದಿಲ್ಲಕಾಣೇ ನಿನ್ನ ; ಪೀತಾಂಬರ ಕಟ್ಟಿ ನೀರಾಜಿ ನಿನ್ನ ತಲೇಗೆ ಸುತ್ತಿ ಮಂದಾಸನಕ್ಕೆ ನಿನ್ನ ಬಿಗಿದು ಹಗಲೂ ರಾತ್ರಿ ನಿನ್ನ ಮೂರ್ತಿಗೆ ಮಂಗಳಾರತಿ ಎತ್ತಾ ನಿನ್ನ ಮನೇಲಿಟ್ಟುಕೊಳ್ತೇವೇ... ಇಲ್ಲಿ ಬಾರೇ ಅಳಬೇಡ...ಲೇ...ರೋತಿ...ಅಲ್ಲ ರಾಣೀ...!

ಪುಟ್ಟಾ : ಏನೋ ಇದು, ತಿರುಗೂ ರೋತಿ. ....

[ಬೀದಿಯ ಬಾಗಿಲನ್ನು ಗಮನಿಸಿ ಮುಖದಲ್ಲಿ ಅತ್ಯಾಶ್ಚರ್ಯವನ್ನೂ ಆನಂದವನ್ನೂ ಘಟ್ಟನೆ ತಳೆದು]

ಅಕ್ಕಾ

(ಒಂದು ಹಾರು ಹಾರಿ ಆಗತಾನೇ ಪ್ರವೇಶಿಸಿದ ಸಾತುವನ್ನು ತಬ್ಬಿಕೊಂಡು ಗಟ್ಟಿಯಾಗಿ)

ಅಮ್ಮ ! ಅಕ್ಕ ಬಂದಿದಾಳೆ ! ಶಾಮೀ ! ಅಕ್ಕ !

ಮಗು : (ಥಟ್ಟನೆ ತಿರುಗಿ ತಾನೂ ಸಾತುವನ್ನು ಸಮೀಪಿಸಿ. ಸಾತು ಕೈಯನ್ನು ಹಿಡಿದು ಒಳಕ್ಕೆಳೆಯುತ್ತಾ) ಶಾಮೀ ಲೇ, ಅಕ್ಕ ! ಅಕ್ಕಾ. ಅಣ್ಣ ಬಿ. ಎ.. ಪ್ಯಾಸು IInd Classಉ.... ಅಪ್ಪಾ ! ಅಕ್ಕ ಬಂದಿದಾಳೆ...

[ಸಾತುವು ಜೋಲಿಯಲ್ಲಿರುವ ಮಗುವನ್ನು ಎತ್ತಿಕೊಂಡು ಮುದ್ದಿಡುತ್ತಾ "ಏನು ಬೆಳೆದು ಬಿಟ್ಟಿದ್ಧಾನೆ ಆರು ತಿಂಗಳಲ್ಲಿ" ಎಂದು, ಬೀದಿಬಾಗಿಲನ್ನು ಸಮೀಪಿಸಿ "ಬನ್ನೀ ನಾಗತ್ತೆ ಬೇರೆ ಯಾರೂ ಇಲ್ಲ. ನಾವು ನಾವೇ, ಅಮ್ಮ ಅಡಿಗೇಮನೇಲಿ, ಈಗ ಬಂದ್ಲು" ಎಂದು ಹೇಳಿ ಒಳ ಬಾಗಿಲನ್ನು ಸಮೀಪಿಸುವಳು]

ನರಸಮ್ಮ : (ಪ್ರವೇಶಿಸಿ, ತನ್ನ ಕೈಯಲ್ಲಿ ಕೂಸನ್ನು ಕೊಟ್ಟು ಕಾಲಿಗೆರಗುವ ಸಾತುವನ್ನು ಹರಸುವಳು. ಕೂಸನ್ನು ಪುನಃ ಸಾತುವಿನ ಕೈಯಲ್ಲಿ ಕೊಟ್ಟು ಬೀದಿ ಬಾಗಿಲಕಡೆ ಬಂದು)

ಬನ್ನೀ ಅಮ್ಮಾ ! ಅದೇಕೆ ಅಲ್ಲೇ ನಿಂತಿಧೀರಾ ?

ನಾಗತ್ತೆ : (ಪ್ರವೇಶಿಸಿ) ಬೀದಿ ಉದ್ದಕ್ಕೂ ನಡಕೊಂಡು ಬಂದಿವಿ........ [........ನಮಸ್ಕಾರ ಮಾಡುವ—ಶಾಮಿ—ಮಗು—ಪುಟ್ಟಾ ಇವರಿಗೆ........] ...ಕಾಲೆಲ್ಲ ಧೂಳು ....ದೂರದಿಂದ ನಮಸ್ಕಾರ ಮಾಡ್ರಿ ನನ್ನ ಕಂದಗ್ಳಾ....ಸಾವಿರ ವರ್ಷ ಆಯಸ್ಸೂ....!

ನರಸಮ್ಮ : ಊರಲ್ಲೆಲ್ಲಾ ಸೌಖ್ಯವೆ ?

ನಾಗತ್ತೆ : ಏನೋ ದೊಡ್ಡೋರ ಆಶೀರ್ವಾದ. ಆದ್ರೆ ಅತ್ತಿಗೆ ಮಟ್ಟಿಗೆ ಸ್ವಲ್ಪ ದುರ್ಬಲ. ಇನ್ನು ಕೈಕೂಸೊಂದು...ನೋಡಿಕೊಳ್ಳೋರಿಲ್ಲ...ಆದ್ರೂ ಪಾತು ಅವರ ಅಜ್ಜಿ ಉದ್ಯಾಪ್ನೇಗೆ ಬರ ಬೇಕೂಂತ ಅವರಪ್ಪ ಬರಕೊಂಡ್ಮೇಲೆ. ಸಾತೂನೂ ಆರ್‌ತಿಂಗ್ಳಾಯ್ತು. ನಿಮ್ಮನ್ನೆಲ್ಲಾ ನೋಡೀ ಅಂತಾ. ಇಬ್ಬರನ್ನೂ ತಲ್ಪಿಸೋಕ್‌ಬಂದದ್ದು ನಾನು ; ಮನೇಲಿ ನೋಡಿಕೊಳ್ಳೋಕೆ ಯಾರೂ ಇಲ್ಲ. ತಿರಿಗೂ ಈ ಮಧ್ಯಾಹ್ನದ ಗಾಡೀಗೆ ಹೊರಟೇಬಿಡಬೇಕು. ಆದ್ರೆ ಏಕಾದಶಿ.......ನಿಮ್ಮೂರು ವಿರೂಪಾಕ್ಷ ದೇವರನ್ನ ದರ್ಶನಮಾಡೊ ಪುಣ್ಯ ನನಗಿತ್ತು. ಗುಡೀಗೀಗ್ಲೆ ಹೊರಟರೆ ದೇವಗೆರೆಯಲ್ಲಿ ಸ್ನಾನಾಮಾಡಿ ದರ್ಶನ ಮಾಡಿಕೊಂಡು ಬರೋಕೆ ಆಗತ್ಮಲ್ವೆ. ರೈಲು ಹೊರಡೋಷ್ಟರಲ್ಲೇ?

ಶಾಮಿ : ಆಗದೆ ಏನ್ ಅತ್ತೆ...ಈಗಲೇ ಹೊರಟ್ರೆ...

ನರಸಮ್ಮ : ಹಯ್ಯೋ. ಬಂದಪ್ಪಕ್ಕೆ ಒಂದೆರಡು ದಿನ ಇರಬಾರದಾಗಿತ್ತೆ ! ಆದ್ರೆ ನೀವ್ ಹೇಳೋಹಾಗೆ ನಮ್ಮ ಬೀಗಿತ್ತೀಗೆ ಸ್ವಸ್ಥವಿಲ್ದೇ ಇರೋವಾಗ ನೀವಿಲ್ಲದ್ದು ಅನಾನುಕೂಲವೆ... ಶಾಮೀ ! ನಿಮ್ಮ ತಂದೇಗೆ ಹೇಳಿಕೋತೇನೆ. ಅತ್ತೇ ಜೊತೇಗೆ ಹೋಗಿ ಗುಡಿ ತೋರಿಸ್ಕೊಂಡು ಬಂದು ಸೇರು...(ಮೆಲ್ಲಗೆ) ... **ಕೊಳದಲ್ಲಿ ನೀನೇನಾದ್ರೂ ಈಜೋದಕ್ ಗೀಜೋದಕ್ ಇಳಿದೀಯಿ, ಹುಷಾರು !**

ನಾಗತ್ತೆ : ಹಾಗಾದರೆ ಬೇಗ ಹೋಗಿ ಬರ್ತೇನೆ.

ನರಸಮ್ಮ : ಊಟಕ್ಕೆ......

ನಾಗತ್ತೆ : ಊಟವೆಲ್ಲೀದು ನನ್ನ ಹಣೇಬರಹಕ್ಕೆ ? ಏಕಾದಶೀ ಅಂದೆನೆಲ್ಲಾ........!

ನರಸಮ್ಮ : ಹಾಗಾದರೆ ಫಲಹಾರಕ್ಕೆ........

ನಾಗತ್ತೆ : ಫಲಾರವೇನು ಪಂಚಾಮೃತವೇನು ! ಎರಡು ಬಾಳೆ ಹಣ್ಣು ;....ಇದ್ರೆ... ಒಂದು ಬಾಯಿ...

ಸಾತೂ : ಹಾಲೂ, ಅಮ್ಮ....!

ನರಸಮ್ಮ : ಅಯ್ಯೋ, ಹಾಲಿಗೇನು ಕಮ್ಮಿ....? !

ನಾಗತ್ತೆ : ಹಾಗಾರೆ ಬೇಗ ಹೋಗಿ ಬರ್ತೇನೆ....(ಶಾಮಿಗೆ) ಬಾ ಕಂದ !....

(ಶಾಮಿಯೂ ನಾಗತ್ತೆಯೂ ನಿಷ್ಕ್ರಮಣ)

ಸಾತೂ : ಅಯ್ಯಯ್ಯೋ, ಹೆಗಲು ಕಚ್ಚಿಬಿಟ್ಟ ! ಹಾಳಾಗ್ಹೋಗಾ....ಹಲ್ಲೆಲ್ಲಿ ಬಂತು ಇವನಿಗೆ....?

ನರಸಮ್ಮ ಹೌದೇ........ಹೇಳೋಕೆ ಮರ್ತ್ಬಿಟ್ಟೆ,........ಅವನ್ನ ಮೊಗುಚಿ ಎತ್ತಿ ಕೊಳ್ಳೋದರ ಅಪಾಯಾನ. ಹಲ್ಲು ಬರದೇ ಏನು ? ನಾಳೇಗೆ ತುಂಬುತ್ತೆ ಒಂದು ವರ್ಷ... ನಾಲಕ್ ಹಲ್ಲು ಬಂದಿದೆ !

(ಒಳಕ್ಕೆ ನಿಷ್ಕ್ರಮಿಸುವಳು)

ಮಗು : ಒಂದೇ ಪರಸೆಯಲ್ಲ, ಎದುರುಬದುರು...ಭೂಪತಿ ಬಾಯಿಗೆ ಸಿಕ್ಕಿದ್ದೆಲ್ಲ ಕಟಾಯಿಸಿಬಿಡ್ತಾನೆ...ಏಕ್ ಮಾರ್ ದೋ ತುಕ್ಡಾ, ಬಾಯಿಗೆ ಬೆಟ್ಟು ಕೊಟ್ಟು ನೋಡು ಗೊತ್ತಾಗುತ್ತೆ......ಅಕೋ ಅಣ್ಣ ಬಂದ............(ಬೀದಿ ಬಾಗಿಲಿಗೆ ನೆಗೆಯುತ್ತಾ) ಅಣ್ಣಾ ! ಅಕ್ಕ ಬಂದಿದಾಳೆ...ಏನದು ಕೈಲಿ...ಗೊತ್ತು ! ಕೂಸಿನ ಅಂಗೀಗೆ...ಹುಟ್ಟಿದ ಹಬ್ಬ...ವೆಲ್ವೆಟ್ಟು (Velvet).

[ನಿಷ್ಕ್ರಮಿಸಿದ ಒಂದು ಕ್ಷಣದಲ್ಲಿಯೇ ಅಶ್ವತ್ಥನನ್ನು ಎಳೆದುಕೊಂಡು ಪುನಃ ಪ್ರವೇಶಿಸುವನು]

ಅಶ್ವತ್ಥ : ಮೈಲಿನಲ್ಲಿ ಬಂದೆಯಾ ಸಾತೂ...?

ಸಾತೂ : ಹೂಂ.

ಅಶ್ವತ್ಥ : ಜೊತೆ...?

ಸಾತೂ : ನಾಗತ್ತೆ...ತಿರುಗಿ ಹನ್ನೆರಡು ಘಂಟೆ ರೈಲಿಗೆ ಹೋಗ್ತಾರೆ....ಏಕಾದಶಿ... ಬಂಪಷ್ಟಕ್ಕೆ ದೇವಗೆರೆಯಲ್ಲಿ ಸ್ನಾನ ಮಾಡಿ ದೇವರ ದರ್ಶನ ಮಾಡಿಕೊಂಡು ಇದೇ ರೈಲಲ್ಲಿ ಹೋಗ್ತಾರೆ !

ಅಶ್ವತ್ಥ : ಅಲ್ಕಾಣೆ, ಮಂಕೂ ! ನಿಮ್ಮನೇಲಿ ಎಲ್ಲರಿಗೂ ಹುಲಿ ಅಂತೀಯಾ........? ಬಂದದ್ದು ಬಂದಿಧಾಳೆ. ಒಂದೆರಡು ದಿನ ಇಟ್ಟುಕೊಂಡೂ ಊರುಗೀರೆಲ್ಲ ತೋರ್ಸಿ, ಗಿಲೀಟಾಗಿ ಕಳಿಸಿದ್ರೇ ಮುಂದಕ್ಕೆ ಉಪಯೋಗ ಅಲ್ವೆ...?

ಸಾತೂ : ಅತ್ತೆ ಮೈ ಚೆನ್ನಾಗಿಲ್ಲ. ಕೈಲಿ ಕೂಸು.

ಅಶ್ವತ್ಥ : ಮತ್ತೆ ನೀನು ಬಂದದ್ದೇನು...?

ಸಾತೂ : ಪಾತೂ ಮನೇಲಿ ಉದ್ಯಾಪನೇಂತ ಬರೆದಿದ್ರು..............ಮಾಮಲೇದಾರ್ರು ನೀ ಹೇಳಿದ ಮುಂದಕ್ಕುಪಯೋಗದ ನ್ಯಾಯದ ಮೇಲೆ...ಪಾತೂನ ಕಳಿಸಿದ್ದು. ನನ್ಹೋದಿಸಿದ್ದು ಬೇರೆ ಲೆಕ್ಕಾಚಾರ...ಪಾತೂ ಯಜಮಾನರು ಫಸ್ಟ್ಕ್ಲಾಸ್. ಮುಂದಕ್ಕೆ ಬಂದು ಕುಟುಂಬಕ್ಕೆ ಯಶಸ್ಸು ತರೋದು ಘಟ್ಟಿ...ಇವರು ಫೇಲು.

ಅಶ್ವತ್ಥ : ಯಾಕೇ...? ! ನಿನ್ನ ಗಂಡ ಒಳ್ಳೆ bright fellowಉ...? ಯಾಕೆ lazyನೇ? ಓದೋದಿಲ್ವೇ ?

ಸಾತೂ : (ಖಿನ್ನ ಧ್ವನಿಯಿಂದ) ಓದೋಕೆಲ್ಲಿ ಅವಕಾಶ ? ಬೆಳಗಿನಿಂದ ಸಂಜೆವರಿಗೂ ಹೂ ತರೋದು, ಹಾಲ್ ತರೋದು, ಆಸ್ಪತ್ರೆ ಮಾರ್ಕೆಟ್ಟು ಈ ಬಾಬತ್ತುಗಳಿಗೆಲ್ಲ ಓಡಿಸ್ತಿರ್ತಾರೆ. ಬಿಡುವಿದ್ರೆ ಹಂಡೆ ತುಂಬೋದು, ಬಾವೀ ನೀರು ತಂದು ! ಇನ್ನೋದೋದ್ ಯಾವಾಗ...? ಮುಂದಕ್ಕೇನೂ ಪ್ರಯೋಜನ ಇಲ್ಲ; ಇನ್ನು ಸೊಸೆಯೊಬ್ಬಳು ಯಾಕೆ ಸುಮ್ಮನೆ ತಿಂದುಕೊಂಡು ಇರಬೇಕೂಂತಾ........ಅದೆಲ್ಲಾ ದೊಡ್ಡ ಕಥೆ ಅಣ್ಣಾ ...... ಆದರೆ ನೀನು ಗಿಲೀಟ್ ಅನ್ನುತ್ಲೂ ಜ್ಞಾಪಕಕ್ಕೆ ಬರುತ್ತೇ...ಅದರ ಬೆಲೆ ಜಾಸ್ತಿಯಾಗುತ್ತ್ಯೋ ಏನೋ ಕಾಣೆ......ಅದೇನು Velvetಉ ಅಂದನಲ್ಲ ಮಗೂ......?

ಅಶ್ವತ್ಥ : (ಕೈಯಲ್ಲಿರುವ ಕಟ್ಟನ್ನು ಬಿಚ್ಚಿ ಚಮಕಿ ಹಾಕಿದ ಒಂದು ಮಖಮಲ್ ಕುಲಾವಿ ಯನ್ನೂ ರೇಷ್ಮೆಯ ಅಂಗಿಯು ಷರಾಯಿಯನ್ನೂ ಸಾತು ಕೈಗೆ ಕೊಡುತ್ತ) ಜಾಕೆಟ್ ಗೀಕೆಟ್ ನಿನಗೇನಾದ್ರೂಬೇಕಾದ್ರೆ ಈಗ್ಲೆ ಮಾಡಿಸ್ಕೊ...ರೇಷ್ಮೆ ಗೀಷ್ಮೆ ಬಟ್ಟೆಯೆಲ್ಲಾ ಸ್ಟಾಕ್ ಹೆಚ್ಚಾಗಿ, ಬಲು ಅಗ್ಗ! ಬೆಲೆ ಅನ್ಯಾಯ ಇಳಿದುಹೋಗಿದೆ !

ಸಾತೂ : ಹಾಗಾರೆ ನನ್ಗ್ಯೋಚ್ನೆ........

ಅಶ್ವತ್ಥ : ಏನದು ಹೇಳು .... ರೇಷ್ಮೆ........

ಸಾತೂ : ರೇಷ್ಮೆ ಅಂತೀಯಲ್ಲ ! ನಾಗತ್ತೆ ....ಪಾಪ........ನಾರ್‌ಮಡಿ ನಾರ್‌ಮಡಿ ಅಂತ ಬಡುಕೊಳ್ಳತಾಳೆ. ಅವರ್‌ಮನೇಲೆ ಕಿವೀಗೆ ಹಾಕ್ಕೊಳ್ಳೋದಿಲ್ಲ. ಇಲ್ಲಿ...ನೀ ಹೇಳೋ ಹಾಗೆ ಬಲು ಅಗ್ಗವಾಗಿದ್ರೆ, ಅಮ್ಮನೂ ಅಪ್ಪನೂ ಒಪ್ಪೋಪಕ್ಷಕ್ಕೆ, ಹದ್ನಾರುಮೊಳವಾದ್ರೂ ಇದ್ದೇ ಇರಬೇಕು...ಹದ್ನೆಂಟು ಉತ್ತಮ...ಏನು ಬೆಲೆಯಾಗುತ್ತ್ಯೋ...?

ಅಶ್ವತ್ಥ : Brilliant idea ಸಾತೂ ! Bribery............Corruptionಉ ....ಹೆದರಬೇಡ ಹತ್ತು ಹನ್ನೆರಡು ರೂಪಾಯಲ್ಲಿ ಅಡಗಿ ಹೋಗುತ್ತೆ. ಅಪ್ಪನಿಗೆ ಹೇಳಿ ಹೇಗಾದರೂ ಒಡಂಬಡಿಸ್ತೇನೆ...ನೀನ್ ಹೇಳೋಹಾಗೆ ಮಧ್ಯಾಹ್ನದ ಗಾಡೀಲೆ ತಿರಿಗೆ ಹೊರ್ಡೋದಾದ್ರೆ........ಈಗಲೇ ಹೋಗಿಬರಬೇಕು ಅಂಗಡೀಗೆ......

[ಕೂಸಿನ ಹೊಸ ಬಟ್ಟೆಗಳನ್ನೆಲ್ಲಾ ಸಾತುವಿನ ಕೈಯಲ್ಲಿಟ್ಟು ಒಳಗೆ ನಿಷ್ಕ್ರಮಿಸುವನು.]

ಸಾತೂ : ಅಮ್ಮಾ ! ಕೂಸಿಗೆ ಹೊಸದಾಗಿ ಕುಲಾವಿ ಬಂದಿದೆ. ಎಲ್ಲಿ ಇಡೋದು ?

ಮಗು : ಇಲ್‌ಕೊಡಕ್ಕಾ, ನನ್‌ಪೆಟ್ಟಿಗೇಲಿಡ್‌ತೇನೆ.

ಪುಟ್ಟಾ : ಬೇಡಕ್ಕಾ ! ನಾನ್ ಇಟ್ಕೊಂಡಿರ್ತೇನೆ......ಯಾವುದಕ್ಕೂ ಇವನೇ...... ಮಹಾ......!

ಸಾತೂ : ಜಗಳ ಆಡಬೇಡಿ !

ನರಸಮ್ಮ : ಇಲ್ಲಿ ತಗೊಂಬಾ ಸಾತು........... ಅಲ್ಲೆಲ್ಲಾದ್ರೂ ಇಟ್ಟರೆ ಇಬ್ಬರು ಘಟಂಗ್ರೂ ಕಿತ್ತಾಡಿ ಚಿಂದಿ ಮಾಡಿ ಇಟ್‌ಬಿಡ್ತಾರೆ.

(ಸಾತೂ ಕೂಸನ್ನು ಜೋಲಿಯಲ್ಲಿ ಹಾಕಿ "ಸ್ವಲ್ಪ ಆಡಿಸ್ತಿರೋ ಮಗೂ" ಎಂದು ಹೇಳಿ ಒಳಕ್ಕೆ ನಿಷ್ಕ್ರಮಣ)

ಅಶ್ವತ್ಥ : (ಪ್ರವೇಶಿಸುತ್ತಾ) ಎಲ್ಲಾ ಸರ್‌ಹೋಯ್ತು ಸಾತೂ ....ತಂದ್‌ಬಿಡ್‌ತೇನೆ.

ಮಗು : ಎಲ್ಲಿ ಹೋಗ್ತೀಯ ಅಣ್ಣಾ......?

ಪುಟ್ಟಾ : ಹಾಗ್ ಕೇಳ್ಬಾರ್ದೂ ಅಂತ ಎಷ್ಟು ಸರ್ತಿ ಹೇಳಿದ್ದಮ್ಮ ! ನಾನ್ಕೇಳೋದಿಲ್ಲ ಎಲ್ಲಿಹೋಗ್ತೀಯಾಂತ; ನೀನೇ ಹೇಳಣ್ಣ......

ಅಶ್ವತ್ಥ : ತಿರುಗಿ ಬಂದ್ಮೇಲೆ ಗೊತ್ತಾಗುತ್ತೆ.

(ಬೀದಿ ಬಾಗಿಲಿನಿಂದ ನಿಷ್ಕ್ರಮಣ)

ನರಸಮ್ಮ : (ಒಳಗಿನಿಂದ) ಏನ್‌ಮಾಡ್‌ತಿದೀಯೋ ಮಗೂ......?

ಮಗು : ಜೋಲೀ ತೂಗ್‌ತಿದೇನಮ್ಮ.

ನರಸಮ್ಮ : ನಿನ್ನ ಜವಾಬ್ದಾರಿ ಪುಟ್ಟಾಗೊಪ್ಪಿಸಿಬಿಟ್ಟೂ ....ನಿವ್ ತಂದೇಗೇನ್ ಬೇಕ್ ಕೇಳು. ಶಾಮಿನೂ ಇಲ್ಲ ಮನೇಲಿ.

(ಮಗು ನಿಷ್ಕ್ರಮಣ ; ಪುಟ್ಟಾ ಜೋಲಿಯನ್ನಾಡಿಸುತ್ತಿರುವಳು)

ಪುಟ್ಟಾ : (ಹಳೆಯ ಒಂದು ಜೋಗುಳವನ್ನು ಹಾಡುತ್ತಾ, ಬೀದಿ ಬಾಗಿಲಕಡೆ ತಿರುಗಿ)

ಹಯ್ಯೋ, ಇಷ್ಟು ಬೇಗ ಬಂದ್‌ಬಿಟ್ರೇ ಗುಡೀಗೆ ಹೋದವ್ರು !

[ಪ್ರವೇಶ : ನರಸಿಂಹಯ್ಯ ಪಾರ್ವತಮ್ಮ ಹೊರಬಾಗಿಲಿನಿಂದ]

ಅಯ್ಯಯ್ಯೋ ಯಾರೋ ಹೊಸಬ್ರು ! (ಗಟ್ಟಿಯಾಗಿ) ಅಮ್ಮಾ, ಯಾರೋ ಬಂದಿದ್ದಾರೆ !

ನರಸಮ್ಮ : (ಪ್ರವೇಶಿಸಿ) ನಿಮ್ಮ ತಂದೇನ ಕೂಗ್‌ಹೋಗೆ. ಬನ್ನೀಮ್ಮಾ ಒಳಗೆ !
(ಪಾರ್ವತಮ್ಮನು ನರಸಮ್ಮನನ್ನು ಸಮೀಪಿಸುವಳು)

(ನರಸಿಂಹಯ್ಯನು "ನಾನು ಜಗ್ಲೀಮೇಲೆ ಕೂತಿರ್ತೀನೆ" ಎಂದು ಪತ್ನಿಗೆ ಹೇಳಿ ಬೀದಿ ಬಾಗಿಲಿನ ಹೊರಗೆ ನಿಷ್ಕ್ರಮಿಸುವನು)

[ಒಳಗಿನಿಂದ ಬಂದ ಪತಿಗೆ ನರಸಮ್ಮನು, ನರಸಿಂಹಯ್ಯನು ಹೊರಗೆ ಕಾದಿರುವುದನ್ನು ವಿವರಿಸುತ್ತಲೆ ರಂಗಣ್ಣನು ಬೀದಿ ಬಾಗಿಲಿನಿಂದ ನಿಷ್ಕ್ರಮಿಸುವನು.]

ನರಸಮ್ಮ : ಆ ಚಾಪೆ ಇಲ್ಲಿ ತಾರೆ ಪುಟ್ಟಾ......!

(ಪುಟ್ಟಾ ತಂದ ಚಾಪೆಯನ್ನು ಹಾಸಿ) ಕೂತ್ಕೊಳ್ಳೀ ಅಮ್ಮಾ.

ಪಾರ್ವತಮ್ಮ : ಹುಡುಗನ ಬಿ.ಎ., ಆಯಿತಂತೇ......?

ನರಸಮ್ಮ : ಏನೋ ದೊಡ್ಡೋರ ಕೃಪೆಯಿಂದ ತಪ್ಪಿಸ್ಕೊಂಡ.

ಪಾರ್ವತಮ್ಮ : ಮುಂದಿನ ಯೋಚ್ನೆ ?

ನರಸಮ್ಮ : ಯೋಚ್ನೆಯೇನು...............ಯಾವದಾದ್ರೂ ಕೆಲಸಕ್ಕೆ ಸೇರಿಕೊಳ್ಳೋದೆ. ಆದರೆ ಬಿ.ಎ.ಗಳಿಗೆ ಈ ಕಾಲ್ದಲ್ಲಿ ಬೆಲೆಕಮ್ಮಿ, ಕೆಲಸ ಸಿಕ್ಕೋದ್‌ಕಷ್ಟ, ಅಂತಾರೆ ಇವರು. ಅವನೇನೋ ಲಾಯರಿಗೆ ಮದ್ರಾಸಲ್ಲಿ ಓದಬೇಕೂಂತಾನೆ...ಆದ್ರೆ ಅಷ್ಟರಮಟ್ಟಿಗೂ ಸಲ್ಲಿಸೋಕೆ ಇಲ್ಲಿ ಚೈತನ್ಯವಿಲ್ಲ...ಅದೇಯೋಚ್ನೆ....ನಿಮ್ಮ ಹುಡುಗ ಬಿ.ಎ.,ಗೆ ಓದ್‌ತಿಧಾನಂತೆ. ನಮ್ಮ ಹುಡುಗ ಕಂಡಿದ್ದ್‌ನಂತೆ, ಕಾಲೇಜಿನಲ್ಲಿ...ಘಟ್ಟಿಗಾ ಅಂತಾನೆ.

ಪಾರ್ವತಮ್ಮ : ಜೋಯಿಸ್ರು ನಮ್ಮ ವೆಂಕೂ ಮದ್ವೆ ವಿಷಯದಲ್ಲಿ ನಿಮ್‌ಹುಡುಗನ ಜಾತಕದ ಮಾತು ಎತ್ತಿದ್ದೂ...ಆದ್ರೆ ನಿಮ್ಮ ಅಭಿಪ್ರಾಯ...?

ನರಸಮ್ಮ : ನನ್ನ ಅಭಿಪ್ರಾಯವೇನು !...ಯಾವ ವಿಷಯದಲ್ಲೂ ಮನೆ ಗಂಡಸರು ಹ್ಯಾಗೆ ನಿಶ್ಚಯಿಸ್ತಾರೋ ಹಾಗೆ.

ಪಾರ್ವತಮ್ಮ : (ಕೋಣೆಯನ್ನು ಮೇಲೂ ಕೆಳಗೂ ನೋಡಿ) ಮನೆ ಸ್ವಂತ...ಅಲ್ವೇ...?

ನರಸಮ್ಮ : ಹೂಂ! ಪುರಾತನಕಾಲದ್ದು. ಚಳಿಗಾಲಕ್ಕೆ ಸರಿ. ಬೇಸಿಗೇಗೆ ಸ್ವಲ್ಪ ಕಷ್ಟ.

ಪಾರ್ವತಮ್ಮ : ಸ್ವಂತ ಅಂದ್ರೇನು. ಭೋಗ್ಯದ ಗಲಾಟೆ ಏನೂ ಇಲ್ಲವಲ್ಲ ?

ನರಸಮ್ಮ : (ಮುಖದಲ್ಲಿ ಮೊದಲು ಹೊಳೆದ ವಿಸ್ಮಯವನ್ನು ಅಡಗಿಸಿಕೊಂಡು) ನನಗೆ ತಿಳಿದ ಮಟ್ಟಿಗೆ ಹಾಗೇನೂ ಇಲ್ಲ.

ಪಾರ್ವತಮ್ಮ : (ಮಗುವನ್ನು ಸೂಚಿಸಿ) ಎರಡನೇ ಮಗನೋ ?

ನರಸಮ್ಮ : ಅಲ್ಲ! ಇವನಿಗೂ ಮೂರು ವರ್ಷ ದೊಡ್ಡೋನು ಇಧಾನೆ ಒಬ್ನ...

ಪಾರ್ವತಮ್ಮ : (ಜೋಲಿಯನ್ನು ಸೂಚಿಸಿ) ಇವಳಿಗೆಷ್ಟು ತಿಂಗಳು...?

ನರಸಮ್ಮ : (ಮುಗುಳುನಗೆಯಿಂದ ಕೂಸನ್ನೆತ್ತಿಕೊಂಡು) **ಇವಳಲ್ಲ.... . .ಇವನು !** ನಾಳೆಗೆ ಒಂದುವರ್ಷ ತುಂಬುತ್ತೆ...

ಪಾರ್ವತಮ್ಮ : ಇದೂ ಗಂಡೇ !........ಹಾಗಾರ್ ನಾಲಕ್ಕ್ ಗಂಡು ಮಕ್ಕಳೂ...! ? ಮನೇಗೆ ನಲ್ಲೀ ಇಧೆಯೇ ನೀರಿಗೆ...?

ನರಸಮ್ಮ : ಇಲ್ಲ. ಸೇದೋ ಭಾವಿ...ಸೀ ನೀರು. ಆದರೆ ನೀರು ಬಹಳ ಕೆಳಗೆ.

ಪಾರ್ವತಮ್ಮ : (ಅರ್ಧ ಆತ್ಮಗತ) ಪಂಪು...ಪರವಾ ಇಲ್ಲ (ಏಳುತ್ತಾ) ಮನೆ ನೋಡ ಬಹುದೇ?

ನರಸಮ್ಮ : ಅದಕ್ಕೇನು ! ಲೋ ! ಮಗೂ ! ಒಳಗೆ ಬರಬಹುದು ಅಂತ ನಿಮ್ ತಂದೇಗೆ ಹೇಳೋ ! ಈಗಲೇ ಅರ್ಧ ಮನೇನೋಡಿದಹಾಗೇ ! ಇನ್ನೆರಡು ಕೋಣೆ. ಚಿಕ್ಕದೊಂದು ಹಜಾರ...ನೀರ್‌ಮನೆ...ಹಿತ್ತಲ ಕಡೆ ಒಂದಿಷ್ಟು ತೋಟ......ತರಕಾರಿ. ಪೂಜೆ ಹೂವಿಗೆ. ಬನ್ನಿ. (ಒಳಬಾಗಿಲನ್ನು ಸಮೀಪಿಸಿ) ಬನ್ನಿ.

[ಪಾರ್ವತಮ್ಮನೂ, ಕೂಸನ್ನೆತ್ತಿಕೊಂಡು ನರಸಮ್ಮನೂ ಒಳಬಾಗಿಲಿನಿಂದ ನಿಷ್ಕ್ರಮಣ. ಪುಟ್ಟಾನೂ ಹಿಂಬಾಲಿಸುವಳು. ಮಗೂ ಬೀದಿಬಾಗಿಲಿನಿಂದ ನಿಷ್ಕ್ರಮಣ. ರಂಗಣ್ಣ. ನರಸಿಂಹಯ್ಯ ನವರ ಪ್ರವೇಶ.]

ರಂಗಣ್ಣ : ಕೂತುಕೊಳ್ಳಿ. ನಿಮ್ಮ ಮೆಂಕು ಏನು ನಮಗೆ ಗೊತ್ತಿಲ್ಲವ್ವಲ್ಲ, (ಕುರ್ಚಿಯನ್ನು ಸೂಚಿಸಿ. ನರಸಿಂಹಯ್ಯನು ಕೂಡುತ್ತಲೆ, ತಾನೊಂದು ಬೆಂಚಿನ ಮೇಲೆ ಕೂಡುವನು)

ನಮ್ಮ ಸಾತೂ ಸ್ಕೂಲಿಗೆ ಹೋಗ್‌ತಿದ್ದಾಗ—ಆಗ ನಿಮ್ಮ ಹುಡುಗಿ ಚಿಕ್ಕ ಕ್ಲಾಸೂ. ನಮ್ಮ ಮನೇಗೆ ಬರ್ತಿದ್ಲು. ನಮ್ಮನೇಲಿ ಎಲ್ಲರಿಗೂ ಇಷ್ಟ. ಆದರೆ, ನೋಡಿ! ಆಗಾಗ್ಗೆ ಬರೋದಕ್ಕೂ ಮನೇಗೆ ಬಂದು ಖಾಯಂ ಆಗಿರೋದಕ್ಕೂ ಅಷ್ಟಿಷ್ಟಲ್ಲ ವ್ಯತ್ಯಾಸ! ನಮ್ಮ ಸಾತೂನ ಕೊಟ್ಟಿರೋ ಮನೇಗೇ ಮಾಮಲೆ ರಾಮಣ್ಣೋರ ಮಗಳ್ನೂ ಕೊಟ್ಟಿರೋದು. ಅದ್ರೆ ನಮ್ಮ ಬೀಗರು. ಹಿರಿಯಣ್ಣಯ್ಯನೋರ ಸಂಸಾರ ಸಾಧಾರಣ. ಆದರೆ ಸೊಸೆ ಬಂಗಲೇಲಿ ಬೆಳೆದ ಮೊಗ್ಗೂ ! ಐಶ್ವರ್ಯವಂತರ ಮನೇಲಿ ಹುಟ್ಟಿಬೆಳೆದ ಹುಡಿಗೀರು...ಚಿಕ್ಕ ಅಂತಸ್ತಿನೋರ ಮನೇಲಿ ಸಂಸಾರ ಅಂದ್ರೆ...ಮನಸ್ಸಿಗೆ ಆಲಸ್ಯವಾಗುತ್ತೆ. ನಮ್ ಹುಡುಗೀಗೇನೋ ಸರಿಹೋಗುತ್ತೆ. ಆದ್ರೆ ರಾಮಣ್ಣೋರ ಮಗಳು ಬಹಳ ನೊಂದುಕೋತಾಳೆ ಅಂಬೋದು ತಿಳಿದೇ ನಾನು ನಿಮ್ಮ ಹುಡುಗೀ ವಿಷಯದಲ್ಲಿ ಹಿಂಜರಿಯೋದು. ಇದುವರಿಗೂನೂ ನಮ್ಮ ಮನೆ ಲಗ್ನಗಳ್ನೆಲ್ಲ ನಮ್ಮ ನಮ್ಮ ನೆಂಟರಲ್ಲೇ ಸರಿಪಡಿಸಿಕೊಳ್ತಾ ಬಂದದ್ದರಿಂದ್ಲೋ ಏನೋ ಕಾಣೆ. ವರದಕ್ಷಿಣೆ ನಮ್ಮ ಹುಡುಗೀರ ಮದುವೇಗೆ ಯಥಾಶಕ್ತಿ **ಕೊಟ್ಟಿದೇವೇಹೊರ್ತು ತಗೊಂಡದ್ದಿಲ್ಲ.** ನಮ್ಮ ಹುಡುಗನಿಗೂ ಬಿ.ಎ., ಆಗಿಹೋಯಿತು. B.L.,ಗೆ ಆಶೇಪಣ್ ತಿಧಾನೆ. ನೀವೂ ಲಾ (Law)ನೇ ಉತ್ತಮ ಅಂತ

ಉತ್ಸಾಹಿಸ್ತೀರಾ...? ಮದುವೆ ಆದ್ಮೇಲೆ ನಿಮ್ಮ ಅಳಿಯನ ವಿಷಯದಲ್ಲಿ ನೀವು ಮಾಡೋ ಯೋಚನೇಗೆ—ನಿಮಗೊಂದು ಹಕ್ಕಿರುತ್ತೆ. ಆ ವಿಷಯಾನ ಮದುವೆ ಮುಂಚೆ ಒಂದು conditionಆಗಿ ಮಾಡೋದಕ್ಕೆ ನನಗೆ ಇಷ್ಟವಿಲ್ಲ. ಅವನು ಕೆಲಸಕ್ಕೆ ಸೇರಿದರೇನೆ ಆಗ್ಲಿ, ಇಲ್ಲ ಮುಂದಕ್ ಲಾಯಿರಿ ಆದ್ರೆತಾನೆ ಆಗ್ಲಿ, ಬೇರೆ ಸಂಸಾರ ಬೇರೆ ಇಡೋದಿಲ್ಲ ಅವ್ನು. ನಮ್ಮೊಂದಿಗೇ ಇರ್ತಾನೆ; ಅವ್ನು ಮುಂದಕ್ಕೆ ಅವನ ಹೆಂಡತೀನೂ; ನನಗೋ Pensionಗೆ ವಯಸ್ಸಾಗತಾ ಬಂತು. ಅಲ್ಪಸ್ವಲ್ಪ ಭೂಮಿ ಕಾಣೇನೂ ಇಧೆ...ನನ್ನ ವಾರ್ಧಕ್ಯದಲ್ಲಿ ನಾನೂ ನನ್ನ ಹೆಂಡತೀನೂ, ಇರೋ ಅಲ್ಪಸ್ವಲ್ಪ ಆಯುಸ್ಸನ್ನ ಮಕ್ಕಳೊಂದಿಗೆ ಸಂತೋಷವಾಗಿ ಕಳೀಬೇಕೆಂಬೂದೇನೆ ನಮ್ಮ ಇಚ್ಛೆ. ಭಾಗ್ಯವಂತರ ಮನೇಲಿ ಬೆಳೆದು...ಥಟ್ಟನೆ ನಮ್ಮ ಮನೇಗೆ ಬರೋದು ಅಂದರೆ, ಮನಸ್ಸು ಬೇಸರವಾಗಬಹುದು...ನಿಮ್ಮ ಹುಡುಗೀಗೆ. ಮತ್ತ್ಯಾವ ವಿಷಯದಲ್ಲೂ ನನಗೆ ಅಭ್ಯಂತರವಿಲ್ಲ— ಈ ಮದುವೆ ವಿಷಯದಲ್ಲಿ. ಅದರೆ ಒಂದು condition-ಉ! ನಿಮ್ಮ ವೆಂಕೂ ನಮ್ಮ ಮನೇಲಿ ಹದಿನೈದು ದಿವಸವಾದರೂ ನಮ್ಮೊಂದಿಗೆ ಇದ್ದೇ ಬಿಡಬೇಕು...ಇದ್ದು ನಮ್ಮೊಂದಿಗೆ, ನಮ್ಮ ಸಂಸಾರದ ಸುಖದುಃಖಗಳ್ನ ಗಮನಿಸಿ ಅನುಭವಿಸಿ, ಆಮೇಲೆ ಅವಳೇ ಒಪ್ಪಿದಳು ಅಂದ್ರೆ, ಮುಂದಕ್ಕೆ ಅವಳಿಗೂ ಬೇಸರ ಬಾರದೆ ಇರೋದ್ರಲ್ಲಿ ಸಂದೇಹವಿಲ್ಲ. ಇದೊಂದೇ ನನ್ನ ಕೋರಿಕೆ. ಮಿಕ್ಕ ಅಂಶಗಳೆಲ್ಲಾ ನಿಮ್ಮ ಚಿತ್ತ. ಈ ವಿಷಯದಲ್ಲಿ ನನ್ನ ಗೃಹಿಣಿಯ ಅಭಿಪ್ರಾಯವೂ, ನಮ್ಮ ಹುಡುಗನ ಅಭಿಪ್ರಾಯವೂ, ಇದೇ. ಜೋಯಿಸರು ನಮ್ಮ ಹುಡುಗನ ಜಾತಕ ಕೇಳೋ ವಾಗ್ಲೆ ನಾವು ಮಾತಾಡಿ ತೀರ್ಮಾನಿಸಿ ಇಧೇವೆ.

ನರಸಿಂಹಯ್ಯ: ನೀವ್‌ಹೇಳಿದ್ದ್ ಒಪ್ದೆ! (ಕಿಸೆಯಲ್ಲಿದ್ದ ವಾಚನ್ನು ತೆಗೆದು ನೋಡಿ) ಕೋರ್ಟಿಗೆ ಹೊತ್ತಾಯಿತು. ಇನ್ ಮನೇಗೆಹೋಗಿ ಊಟಾಮಾಡಿ ಹೊರಡಬೇಕು...ನಮ್ಮಾಕೆ...

ರಂಗಣ್ಣ: (ಗಟ್ಟಿಯಾಗಿ) ಪುಟ್ಟಾ!...(ಬರುತ್ತಲೂ) ಕಾದಿದಾರೆ ಅಂತ ಹೇಳು, ನಿಮ್ಮಮ್ಮನಿಗೆ...(ಪುಟ್ಟಾ ನಿಷ್ಕ್ರಮಣ)...

[ಪಾರ್ವತಮ್ಮನೂ, ನರಸಮ್ಮನೂ ಒಳಗಿನಿಂದ ಪ್ರವೇಶಿಸುತ್ತಿರುವಾಗ ಹೊರಕ್ಕೆ ರಂಗಣ್ಣ, ನರಸಿಂಹಯ್ಯ ನಿಷ್ಕ್ರಮಿಸುವರು]

ನರಸಮ್ಮ: ಸಾತೂ! ಭರಣಿ ತಕ್ಕೊಂಬಾ.

(ಸಾತೂ ಒಂದು ಭರಣಿವುಚ್ಚಳವನ್ನು ತೆಗೆದು ತಾಯಿಯ ಕೈಗೆ ಕೊಡುವಳು.)

ನರಸಮ್ಮ: (ಭರಣಿಯನ್ನು ಪಾರ್ವತಮ್ಮನಿಗೆ ನೀಡುತ್ತಾ) ಮಗಳು! ಈವತ್ತುತಾನೆ ಬಂದಳು, ಗಂಡನಮನೆಯಿಂದ.

ಪಾರ್ವತಮ್ಮ: (ಕುಂಕುಮನ್ನಿಟ್ಟುಕೊಳ್ಳುತ್ತಾ) ಮಾಮಲೆ ರಾಮಣ್ಣೋರ ಮಗಳ್ನೂ ನಿಮ್ಮಗಳ್ನೂ ಒಂದೇ ಕಡೆ ಅಲ್ವೇ ಕೊಟ್ಟಿರೋದು?

ನರಸಮ್ಮ: ಹೌದು...ಇವಳ ವಾರಗಿತ್ತೀನೂ ಬಂದಿದಾಳೆ ತೌರ್ಮನೆಗೆ.

ಪಾರ್ವತಮ್ಮ: ಹೌದು, ಹೇಳಿಕೊಂಡ್ರು ಯಾರೋ .... ನಾನು ಬರ್ತೇನಮ್ಮ. ಯಾವ ವಿಷಯಕ್ಕೂ ಯೋಚಿಸಿ ಹೇಳ್ತೇನೆ ನಿಮಗೆ.

ನರಸಮ್ಮ: ಹಯ್ಯೋ ಬಿಡಿ ಅಂದ್ರೆ! ಮನೆ ಗಂಡಸರಿಗೆ ತಿಳಿದರೆ ಸಾಕು... [ಪಾರ್ವತಮ್ಮನ ನಿಷ್ಕ್ರಮಣ]...ಇದೇನ್ ಇಷ್ಟು ಧೋರಣೆ ಈಕೇಗೆ ಇವ್ರೊತ್ತೂ........ಅಗಾಗ್ಗೆ ಅಲ್ಲಲ್ಲೇ, ಅರಿಶಿನಕುಂಕುಮಕ್ಕೆ, ಅದಕ್ಕೆ ಇದಕ್ಕೆ, ಕಂಡಿದೇನೆ ಈಕೇನ!...ಎಷ್ಟು ನಯ,...ಎಷ್ಟು ಗಂಭೀರ, ಅಂತ ತಿಳುಕೊಂಡಿದ್ದೆ! ಈಗ ಯಾವತ್ತೂ ಇಲ್ಲದ ಬಿಂಕ ಈವತ್ತೇನುಬಂತೂ...? ಮನೆ ಸ್ವಂತಾನೆ, ಅನ್‌ತಾಳೆ...ಭೋಗ್ಯದ ಗಲಾಟೆ ಉಂಟೆ ಅಂತ ಕೇಳಿದ್ಲು...ಒಂದು ಇಂಗ್ಲೀಷ್ ಮಾತು ಒಂದೆ ಆಡಿದ್ದಿಲ್ಲ. ಈಗ, ಭಾವೀಗೆ ಪಂಪು ಗಿಂಪು ಅಂದ್ಲು! ಇನ್ನ್ ಸಾಲದ್ದಕ್ಕೆ

ಪಿತ್ರಾರ್ಜಿತ ಆಸ್ತಿ ಏನಿಥೆ ಅಂತ ಕೇಳಿದ್ಲು ! ಇನ್ನು ಕೊನೇಗೆ ನಾಲಕ್ಕ್ ಗಂಡು ಮಕ್ಳೇ ನಿಮಗೇ ಅಂದ್ಲಲ್ಲ...? ಅರ್ಥವಾಗಲಿಲ್ಲ ನನಗೆ...!

ಸಾತೂ : ನನಗರ್ಥವಾಗುತ್ತೆ ಅಮ್ಮ ! ಇದೆಲ್ಲ ಸಹವಾಸ ದೋಷ. ಇವರೇನ್ ಮನೇ ಬಿಟ್ಟು ನೆಟ್ಟಗೆ ಇಲ್ಲಿಗೆ ಬಂದ ಹಾಗಿಲ್ಲ. ಇವರ ಮನೆ ಕೃಷ್ಣರಾಜ ಪೇಟೇಲಿ. ನಾವೂ ಪಾತೂ ಮನೆ ಬಿಟ್ಟು ಬರ್‌ತ್ತಿದ್ದಾಗ extension ಕಡೇನೇ ಹೋಗ್‌ತಿದ್ರು; ನೋಡಿದ್ವಿ ! ಅಲ್ ಪಾತೂ ಮನೇಗೆ ಹೋಗಿ ಪಾತೂ ಅಣ್ಣ ಕಿಟ್ಟೀನ ವಿಚಾರ್ಸಿ ತಿಳಕೊಳ್ಳೋ ಸಂಭ್ರಮದಲ್ಲಿ. ಪಾತೂ ತಾಯಿ ಧೋರಣೆ–ಬಿಂಕ ಸೋಕಿದೆ,...ಅಂತ ಕಾಣುತ್ತೆ ·......ಆದರೆ ......

ನರಸಮ್ಮ : ಸಾತೂ ದೊಡ್ಡೋರ ಮಾತು ನಿನ್‌ಗ್ಯಾಕೆ..........(ಬೀದೀ ಬಾಗಿಲ ಕಡೆ ಕಿವಿಗೊಟ್ಟು) ಅಕೋ ! ಗುಡಿಯಿಂದ ಅವರು ಬಂದ ಹಾಗಿದೆ.

ರಂಗಣ್ಣ : (ಹೊರಗಿನಿಂದ ಪ್ರವೇಶಿಸಿ) ಬನ್ನಿ ! (ನಾಗತ್ತೆಯೂ ಶಾಮಿಯೂ ಪ್ರವೇಶಿಸುವರು) ಅವಸರವೇನೂ ಇಲ್ಲ. ರೈಲಿಗಿನ್ನೂ ಅರ್ಧ ಗಂಟೆ ಇಥೆ. ಬಂದದ್ದಕ್ಕೆರಡು ದಿನ ಇರಬಹುದಾಗಿತ್ತೂ, ಆದರೆ ಅಲ್ಲಿ ಮನೆಯಲ್ಲಿರೋ ಅನಾನುಕೂಲ ಇವಳು ಹೇಳಿದ್ಲು. ಈ ಸಮಯದಲ್ಲಿ ಸಾತೂನ ಅಲ್ಲೇ ಇಟ್ಕೋಬಹುದಾಗಿತ್ತೂ...ಕೆಲಸಗಿಲ್ಸಕ್ಕೆ...

ನಾಗತ್ತೆ : ಏನು ಮಹಾ ಕೆಲಸ ! ಒಬ್ಬಳು ನೋಡಿಕೊಳ್ಳೋ ಕೆಲಸ...ನನ್ನ ಕೈಲಿ ಆಗದ ಕೆಲಸಾ...? ಸಾತೂನೂ ನಿಮ್ಮನ್ನೆಲ್ಲಾ ನೋಡಿ ಆರ್ ಏಳ್ ತಿಂಗಳಾಗಿತ್ತೂ. ಸ್ವಲ್ಪದಿನ ಇನ್ಲೇ ಇರ್ಲಿ ಅಂತ ಕರಕೊಂಡು ಬಂದದ್ದು. ನಿಮ್ಮ ಅಳಿಯನಿಗೆ ಪಾಪ ಈ ಸಾರ್‌ತಿ ಪ್ಯಾಸಾಗಲಿಲ್ಲ. ಆದರೇನು, ಚಿಕ್ಕವಯಸ್ಸು. ಒಂದು ವರ್ಷ ಹಿಂದು ಮುಂದಾದ್ರೇನೂ ಪರವಾ ಇಲ್ಲ. ಅಂದ. ನಮ್ಮ ಅಣ್ಣ...ರೈಲಿಗೆ ಅವಸರವಿಲ್ಲವೆ?

ನರಸಮ್ಮ : ಅವಸರವಿಲ್ಲದಿದ್ರೂ ಫಲಾರ ಮಾಡಿಬಿಟ್ರೆ ಆಮೇಲೆ ನಿಧಾನವಾಗಿ ;...ಶಾಮಿ! ಒಂದು ಜಟ್ಕಾ ಹಿಡಕೊಂಡು ಬಾ.

ನಾಗತ್ತೆ : ಹಯ್ಯೋ ಬೇಡಿ ಅಂದ್ರೆ ! ಏಕಾದಶಿ, ಸ್ವಾಮಿ ದರ್ಶನ ಮಾಡಿಕೊಂಡು, ಜಟ್ಕಾಲಿ ! ?...ರೈಲಿನಲ್ಲಿ....... ಹೋಗೋದೇ ಮನಸ್ಸಿಗೆ ಹ್ಯಾಗೋ ಇಥೆ...ಟೇಸನ್ನೂ ಹತ್ತರ ...ದಾರಿ ಉದ್ದಕ್ಕೂ ಸಾಲು ಮರಗಳು...ನೆರಳಿನಲ್ಲಿ ತಾನೇ ನಡಕೊಂಡು ಹೋಗಬೇಕು... (ಶಾಮೀಗೆ) ಜಟ್ಕಾ ಏನೂ ಬೇಡ ನನ್ ಕಂದಾ...! ಅವನೆಲ್ಲಿ ದೊಡ್ಡವ್ನು...ಜಿ.ಯ್ಯೆ. ಪ್ಯಾಸಾಗಿಥೆ ಯಂತೆ ? ಏನೋ ದೇವರು ಕಣ್ಣಿಟ್ಟು ಅವನ್ನ ಮುಂದಕ್ಕೆ ತಂದು ಕುಟುಂಬಕ್ಕೆ ಯಶಸ್ಸು ತರಬೇಕು.

ನರಸಮ್ಮ : ಈಗೆಲ್ಲೊ ಅಂಗಡಿ ಬೀದಿ ಕಡೆ ಹೋದ. ಬಂದು ಬಿಡ್‌ತಾನೆ ತಿರ್‌ಗಿ... ಬನ್ನಿ !...

(ನರಸಮ್ಮನೂ ನಾಗತ್ತೆಯೂ ಸಾತೂವೂ ಒಳಕ್ಕೆ ನಿಷ್ಕ್ರಮಣ)

ಶಾಮಿ : (ಬಾಗಿಲ ಕಡೆ ತಿರುಗಿ) ಇಕೋ ! ಅಣ್ಣ...

(ಅಶ್ವತ್ಥನು ಪ್ರವೇಶಿಸುವನು) ಎಲ್ಲಿ ಹೋಗಿದ್ದೆ, ಅಣ್ಣಾ !...ನಾಗತ್ತೆ ಕೇಳಿದ್ಲು ನಿನ್ನ. ಏನದು ಕೈಯಲ್ಲಿ ಪಾರ್ಸಲ್ಲು...?

ಅಶ್ವತ್ಥ : (ತುಟಿಯ ಮೇಲೆ ಬೆರಳನ್ನಿಟ್ಟು......ಮೆಲ್ಲನೆ) ಶ್ಶ್ !...ಕಿರ್ಲ್ ಬೇಡವೋ ಕೋತಿ ! ಅಕ್ಕನ ಕರಿ,...ಅತ್ತೇಗೆ ತಿಳೀದ ಹಾಗೆ !

(ಶಾಮಿ ಒಳಕ್ಕೆ ನಿಷ್ಕ್ರಮಣ)

ರಂಗಣ್ಣ : ಸಿಕ್ಕಿತೇ ಒಳ್ಳೇದು...ಎಷ್ಟು ಮೊಳ ?

ಅಶ್ವತ್ಥ : ಹದಿನೆಂಟು ಮೊಳ, ಅಪ್ಪ...ಒಂದೇ ಇದ್ದದ್ದು. ಚೆನ್ನಾಗಿದೆ ! ಆದರೆ ನಾವು ಹಾಕಿದ ಅಂದಾಜಿಗಿಂತ ಸ್ವಲ್ಪ ಜಾಸ್ತಿ...ಆದರೆ ಮಾಲು ಒಳ್ಳೇದಂತೆ...ತಂದ್ಬಿಟ್ಟೆ...ಬೇಕಾದ್ರೆ...

ರಂಗಣ್ಣ : ಒಳ್ಳೇ ಕೆಲಸ ಮಾಡಿದೆ !...ನನಗೇನು ತೋರಸ್ತೀಯಾ...ಸಾತು ಒಪ್ಪಿದರೆ ಸರಿ. ಅಕೋ ಬಂದ್ಲು !

ಸಾತೂ :(ಪ್ರವೇಶಿಸಿ ರಭಸದಿಂದ ಅಶ್ವತ್ಥನನ್ನು ಸಮೀಪಿಸಿ) ಎಲ್ಲಿ ನೋಡೋಣ ?

ಅಶ್ವತ್ಥ : (ಕೈಯ್ಯಲ್ಲಿದ್ದ ಕಟ್ಟನ್ನು ಬಿಚ್ಚಿ ಕೆಂಪುರೇಷ್ಮೆ ಅಂಚುಹಾಕಿದ ಬಿಳಿಯ ನಾರುಮಡಿ ಸೀರೆಯನ್ನು ಸಾತುವಿನ ಕೈಯ್ಯಲ್ಲಿಟ್ಟು)

ಇನ್ನಿದಕ್ಕಿಂತ ಭಾರಿ ಇಹ ಲೋಕದಲ್ಲಿಲ್ಲಾ.......... ಇನ್ನು ಮೇಲೆ ನಿಮ್ಮನೇಗೆ ನೀನೇ ಯಜಮಾನಿ ! ಹ್ಯಾಗಿದೆ...?

ಸಾತೂ : (ಸೀರೆಯನ್ನು ಜೋಲುಹಾಕಿಕೊಂಡು) ಅಗಲ, ಬೇಕಾದಷ್ಟಿದೆ...(ಬಟ್ಟೆಯನ್ನು ಪರೀಕ್ಷಿಸುತ್ತಾ) ಅಯ್ಯೋ, ಬಲುಚೆನ್ನಾಗಿದೆ ಅಂದ್ರೆ...ಬಲು ಸಂತೋಷಪಟ್ಬಿಡ್‌ತಾಳೆ........ ಯಾರೂ ಏನೂ ಹೇಳಬೇಡಿ ! ಅಮ್ಮನೇ ಕೊಡ್‌ಲಿ.

(ಮೂಲೆಯಲ್ಲಿ ಮೇಜಿನ ಮೇಲಿರುವ ಪುಸ್ತಕಗಳ ಕೆಳಗೆ ಸೀರೆಯನ್ನು ಬಚ್ಚಿಡುವಳು.)

ನರಸಮ್ಮ : (ಪ್ರವೇಶಿಸಿ) ಅಶ್ವತ್ಥಾ ! ಬಂದೆಯಾ, ?...ತಂದೆಯಾ?

ಸಾತೂ : ಇಲ್ಲಿದೆ, ಅಮ್ಮ !...

(ನರಸಮ್ಮನನ್ನು ಮೇಜಿನ ಬಳಿಗೆ ಕರೆದುಕೊಂಡು ಹೋಗಿ ಸೀರೆಯನ್ನು ತೋರಿಸುವಳು. ನರಸಮ್ಮನು ಪರೀಕ್ಷಿಸಿ, ತನ್ನ ಸಮ್ಮತವನ್ನು ತಲೆಯಾಡಿಸಿ, ಸೂಚಿಸಿ "ಇಲ್ಲೇ ಇರ್ಲಿ" ಎಂದು ಪುನಃ ಪುಸ್ತಕಗಳ ಕೆಳಗೆ ಇಡುವಳು. ನಾಗತ್ತೆಯು ತನ್ನ ಕೃಷ್ಣಾಜಿನದ ಚೀಲ—ತಾಮ್ರದ ಚೊಂಬಿನೊಂದಿಗೆ ಪ್ರವೇಶಿಸುವಳು.)

ನರಸಮ್ಮ : (ಮುಂದಕ್ಕೆ ಬಂದು) ಮಡೀ ಚೀಲ ಸ್ವಲ್ಪ ಇಲ್ಲಿ ಕೊಡಿ !

ನಾಗತ್ತೆ : ಯಾಕೇ...?

ನರಸಮ್ಮ : ಪರವಾ ಇಲ್ಲ. ನಾನಿನ್ನೂ ಮಡಿ (ಎಂದು ನಾಗತ್ತೆಯ ಕೈಯಿಂದ ಚೀಲ ವನ್ನು ತೆಗೆದುಕೊಂಡು ಮೇಜನ್ನು ಸಮೀಪಿಸಿ ಚೀಲವನ್ನು ಬಿಚ್ಚಿ ಚೀಲದ ಬಾಯಿಗೆ ಸರಿಯಾಗಿ ಹೊಸ ಸೀರೆಯನ್ನು ಹಿಡಿಯುತ್ತಾ) ನೀವು ಮನಸ್ಸಿಗೇನೂ ತಿಳಕೋಬಾರ್ದು.

ನಾಗತ್ತೆ : (ರಭಸದಿಂದ ಹತ್ತಿರಬಂದು) ಹಯ್ಯಯ್ಯೋ ಇದೇನು ಹುಚ್ಚು ಅಂದ್ರೆ...! ?

ನರಸಮ್ಮ : ಕೋಪಿಸಿಕೋಬೇಡಿ........ಅದೇನು ಹಾಳ್‌ಜಿತ್ತೋ ಕಾಣೆ ವ್ಯಾಪಾರಕ್ಕೆ ; ಬಟ್ಟೆಬರೆಯೆಲ್ಲ ಅನ್ಯಾಯ ಅಗ್ಗ ಈ ಊರ್ನಲ್ಲಿ.................ಅದಕ್ಕೇ ನಿಮಗೆ ಉಪಯೋಗ ವಾದೀತೂ ಅಂತಾ.......... (ಸೀರೆಯನ್ನು ನಾಗತ್ತೆಯ ಕೈಯ್ಯಲ್ಲಿ ಕೊಟ್ಟು) ನೋಡಿಬಿಟ್ಟು ಕೊಡಿ.

ನಾಗತ್ತೆ : (ಚಕಿತಳಾಗಿ, ಅತ್ಯಂತ ಸಂತೋಷವನ್ನು ಅತಿಶಯದಿಂದ ಅಡಗಿಸಿಕೊಳ್ಳುತ್ತಾ, ಕೋಪವನ್ನು ಅರ್ಧನಟಿಸುತ್ತಾ...ಓರೆಗಣ್ಣಿನಿಂದ ಸೀರೆಯ ಹೆಣೆ, ಅಂಚು, ಅಗಲ ಇತ್ಯಾದಿಗಳನ್ನು ಪರೀಕ್ಷಿಸುತ್ತಾ) ಇದೆಲ್ಲ ಶುದ್ಧತಪ್ಪು ಅಂದ್ರೆ...ತಪ್ಪು...ನನ್ನ ಹಾಳು ಯೋಗ್ಯತೇಗೆ...ಇಷ್ಟು ದುಡ್ನು ಅನ್ಯಾಯ ಮಾಡಿ...ಶುದ್ಧ ಹುಚ್ಚು...ತಪ್ಪು !

ನರಸಮ್ಮ : (ಸೀರೆಯನ್ನು ನಾಗತ್ತೆಯ ಕೈಯಿಂದ ತೆಗೆದುಕೊಂಡು ಚೀಲದಲ್ಲಿಟ್ಟು ಬಾಯನ್ನು ಕಟ್ಟುತ್ತಾ) ಹುಚ್ಚು ಅಂತ ಬೇಕಾದರೆ ಅನ್ನಿ...ತಪ್ಪೇನು...? ದೊಡ್ಡವರು ಅಂಬೋ

ವಾಗ, ಮರ್ಯಾದೆ, ಯೋಗ್ಯತೆ, ಆಶೆ, ಸ್ನೇಹ ಈ ವಿಷಯಗಳಲ್ಲೆಲ್ಲಾ......ರೂಪಾಯಿ ಲೆಕ್ಕಾಚಾರಾ ಹಾಕೋಕಾಗುತ್ಯೇ?...ಆದ್ರೂ, ನೀವು ಬರೋದು ಬಹಳ ಅಪರೂಪ......ನಿಮಗೆ ಅಲ್ಪ ಸ್ವಲ್ಪ ಮನಸ್ಸು ಅಸಮಾಧಾನವಾದರೂ ನಮ್ಮ ಸಂತೋಷಕ್ಕಾದರೂ...

[ಸಾತುವು, ಕೂಸನ್ನು ಬೆನ್ನು ಹಿಡಿದು ನಾಗತ್ತೆಯ ಕಾಲಿಗೆ ಸೋಕಿಸುವಳು]

ನಾಗತ್ತೆ : ಅಯ್ಯೋ ಭದ್ರಾನೇ !...(ಬಗ್ಗಿ ಮಗುವಿನ ತಲೆಯನ್ನು ಸವರಿ) ಸಾವಿರ ವರ್ಷ ಆಯುಸ್ಸಿಟ್ಟುಕೊಂಡು ದೊಡ್ಡ ದೊಡ್ಡ ಪ್ಯಾಸುಗಳೆಲ್ಲಾ ಮಾಡಿ ಲಕ್ಷಾಂತರ ಸಂಪಾದಿಸಿ ಕುಟುಂಬಕ್ಕೆ ಯಶಸ್ಸು ತಗೊಂಬಾ ನನ್ನ ರಾಜ ! ನನ್ನ ಕಂದ ! (ಕೂಸನ್ನು ಸಾತುವಿನ ಕೈಯಿಂದ ಬಿಡಿಸಿ ತಾನೆತ್ತಿಕೊಂಡು ತಲೆಯನ್ನು ಆಘ್ರಾಣಿಸುತ್ತಾ) ಏನ್ನ್ ನಗ್‌ತೀಯಾ ನನ್ನ ಚಿನ್ನದ ಪ್ರತಿಮೇ...? ಅದೇನು ಪುರಾಕೃತ ಪುಣ್ಯಾನ ಜ್ಞಾಪಿಸಿಕೊಂಡು ನಗುತ್ಯೋ ಏನೋ !...ನನ್ನಂಥಾ ಪಾಪಿಗಳಿಗೆ ಹ್ಯಾಗೆ ಗೊತ್ತಾಗಬೇಕು...? (ಕೂಸನ್ನು ಕೆನ್ನೆಯಮೇಲೆ ಮುದ್ದಿಟ್ಟು) **ಇದು ಬೇಕಾದರೆ ಪುಷ್ಪ ! !** .... ಪುಷ್ಪಗಳನ್ನ ಬೆಳಸ್‌ಬೇಕೂಂತ ಲೆಕ್‌ಚರ್ ಕೊಡತಾಳಂತೆ...!

ನರಸಮ್ಮ : ಯಾರು... ?

ನಾಗತ್ತೆ : ಯಾರೇನು ? ಪಾತೂನ ಹೆತ್ತವಳು ! ಯಕ್ಕದ ಹೂ ಹಾಗೆ ಮಗಳನ್ನ ಬೆಳಿಸಿಬಿಟ್ಟು, ಊರಿಗೆಲ್ಲ ಮಕ್ಕಳನ್ನ ಮುಂದಕ್ಕೆ ತರೋ ವಿಧಾನ ಸಾರ್‌ತಿಧಾಳೆ, ನಾಚಿಕೆಹೇಸ್ಕೆ ಇಲ್ದೆ... ಇನ್ನ್ ಅವಳ ಸ್ನೇಹಿತೆ, ಒಂದು ಸುಪ್ರದೀಪ,...ಒಳ್ಳೇ ತೊಳೆದ ಕೆಂಡದ ಹಾಗೆ......ಏನ್ ಅವಳ ಹೆಸರು ? ಸ್ವಯಂಪ್ರಭೇನೆ...ಅಲ್ಲ...ಮಣಿ...ಸ್ಯಮಂತಕಮಣಿ...ಅಲ್ಲ...ಮಣಿಪ್ರಭೆ !......ಆ ಪ್ರಸೇನನ ಕಥೆ ಜ್ಞಾಪಕಕ್ಕೆ ಬಂತು......ಜಾಂಬವತಿ !......ಅಲ್ಲ......ನೀನ್ ಹೇಳೇ ಸಾತೂ ! ಆ ಗುಹೇ ಹಾಗೆ ಇದ್ದಲಲ್ಲೇ...?

ಸಾತೂ : (ನಗುವನ್ನು ಅಡಗಿಸಿಕೊಳ್ಳಲಾರದೆ ತಲೆಬಾಗಿ) ಮಿಸ್ ಪ್ರಭಾಮಣಿ !

ನಾಗತ್ತೆ : ಹೂ, ಪ್ರಭಾಮ್ನಿ !...ಮಿಸ್ಸು !...ಆ ಜಂತೂನೂ ಈ ಪಾತು ತಾಯೀನೂ ಲೆಕ್‌ಚರ್ ಕೊಟ್ಟು ಸೀಮೆ ದೊರೆಸಾನಿಗಳು ಆಗೋ ದಾರಿ ಇತ್ಯರ್ಥ ಮಾಡ್‌ತ್ತಿದಾಗ್ಲೆ ನಾವು ಅವರ ಮನೆಗೆ ಹೋಗಿದ್ದದ್ದು......

(ಕೈಲಿದ್ದ ಕೂಸನ್ನು ನರಸಮ್ಮನಿಗೆ ಒಪ್ಪಿಸಿ, ನಮಸ್ಕಾರ ಮಾಡುವ ಪುಟ್ಟಾಗೆ.)

ಒಳ್ಳೇ ಮನ್ಮಥನಂಥ ಕೋಟೀಶ್ವರನನ್ ಮದುವೆ ಮಾಡಿಕೊಂಡು ದೀರ್ಘ ಸುಮಂಗಲಿಯಾಗಿರೂ ....(ಪುಟ್ಟಾ ಎದ್ದು ನಿಲ್ಲುತ್ತಲೆ) ಗೊಂಬೆಗಳನ್ನಿಟ್ಟುಕೊಂಡು ಆಡ್‌ತಿಧೀಯಾ?...ಆಡು ! ಆಡು ! ಇನ್ನೆಷ್ಟುದಿನಾಂತ ಆಡೀಯಾ ? ಆಮೇಲೆ (ನರಸಮ್ಮನಿಗೆ) ಇವಳಿಗೊಬ್ಬ ಗಂಡನ್ನ ಹಿಡಿದು...ಮದುವೆ ಮಾಡಿ...ಸಂಸಾರ ಕುದುರಿಸೀ...ಜಗದೀಶ್ವರನ ಕೆಲಸ ಜರಗತ್ತಲೇ ಇರಬೇಕು, ಜಗದಲ್ಲಿ...!

ಮಗು : ಏನ್...ನಾಗತ್ತೆ ! ಬರುತ್ಲೂ ಹೀಗೆ ಹೊರಟ್ಹೋಗೋದೆ ?...ಇಲ್ಲೇ ಒಂದು ಹತ್ತು ದಿನ ಇದ್ದು...ಮುಂಚೆ ಒಂದು ಸರತಿ ಬಂದಾಗ ಗೋವಿನ ಕಥೆ ಹೇಳ್ಕಿದ್ದೆಯೇಲ್ಲ ಹಾಗೆಲ್ಲ... ಕಥೆ ಗಿಥೆ ಹೇಳದೇನೇ ಊರಿಗೆ...? . (ನಮಸ್ಕರಿಸಿ ಏಳುವನು.)

ನಾಗತ್ತೆ : (ಮಗುವಿನ ತಲೆಯನ್ನು ಸವರುತ್ತಾ) ಘಟಿಂಗಾ!! ಏನ್ ನೆನಪೋ ನಿನಗೆ ! (ನರಸಮ್ಮನಿಗೆ) ಮದುವೇಲಿ ಜೋಟುದ್ದ ಕೂಡ ಇರಲಿಲ್ಲ ಇವನು. ಗೋವಿನ ಕಥೆ ಹೇಳಿ ಸುದಾರ್ಸ್‌ತಿದ್ದದ್ದು ಇನ್ನೂ ಜ್ಞಾಪಕ ಇಟ್ಕೊಂಡಿಧಾನೆ ನೋಡಿ ! (ಮಗುವಿಗೆ)

ಖಂಡ್ವಿದ್ಕೊ ಮಾಂಸ್ವಿದ್ಕೋ
ಗುಂಡಿಗೆಯ ಬಿಸಿರಕ್ತ್ವಿದ್ಕೊ
ನೀನಿದೆಲ್ಲವ ನುಂಡು ಸಂತಸ
ದಿಂದಿರೈ ಹುಲಿ........ ....

(ಮಗುವಿನ ಕೆನ್ನೆಯನ್ನು ಸಲಿಗೆಯಿಂದ ಮಾತಿಗೆ ಸರಿಯಾಗಿ ಮೆಲ್ಲನೆ ತಟ್ಟಿ)

ರಾಯನೇ ! ಘಟಿಂಗಾ !...ಊರಲ್ಲಿ ಮನೇಲಿ ಖಾಯಿಲೆ ನನ್ನ ಕಂದಾ ! ...ಹೋಗಲೇ ಬೇಕೀಗ !...ತಿರುಗಿ ಸಾತೂನ ಕರ್ಕೊಂಡು ಹೋಗೋಕ್ ಬರತೇನಲ್ಲ ಆಗ ಎರಡು ಮೂರು ದಿನ ಇಲ್ಲೇ ಇದ್ದು...ಗೋವಿನ ಕಥೇ ಯಾಕೆ ?...ದೊಡ್ಡವನಾಗಿ ಬೆಳೆದು ಬಿಟ್ಟೆ ಈಗಾ...ಪ್ರಹ್ಲಾದ ಕುಮಾರನ ಕಥೇ...ಲವಕುಶರ ಕಥೇ...ಅವರೂ ನಿನ್ನ ಹಾಗೇ ಘಟಿಂಗರು !...ಎಲ್ಲಾ ಹೇಳತೇನೆ ನನ್ನ ರಾಜಾ !

(ಮುಂದಕ್ಕೆ ಬಂದು ನಮಸ್ಕಾರ ಮಾಡುತ್ತಿರುವ ಅಶ್ವತ್ಥ, ಶಾಮಿ ಇವರಿಗೆ)

ದೀರ್ಘಾಯಿಷ್ಮುಗಳಾಗಿ ಇರ್ರಿ, ಅಪ್ಪಾ ! ನೀವೋ, ಇಂಗ್ಲೀಷು ಗಿಂಗ್ಲೀಷು ಓದೋ ಈ ಕಾಲದ ವಿದ್ಯಾವಂತರು. ನಾನೇನು ಹೇಳೇನು ನಿಮಗೆ...? ಒಟ್ಟನಲ್ಲಿ ಬುದ್ಧಿಯಾಗಿದ್ದು ಮನೇಗೆ ಒಳ್ಳೇ ಹೆಸರು ತರ್ರಿ. (ಅಶ್ವತ್ಥ, ಶಾಮಿ, ಎದ್ದು ಗೋಡೆ ನೇರಕ್ಕೆ ಹೋದನಂತರ ನಮಸ್ಕಾರ ಮಾಡುವ ಸಾತುವಿಗೆ) ಸಾವಿರ ವರ್ಷ ತಾಳೀ ಕಟ್ಕೊಂಡು ಸುಖವಾಗಿರಮ್ಮ ! (ಮನಸ್ಸಿನಲ್ಲಿ ಉಕ್ಕಿ ಉಕ್ಕಿ ಬರುವ ದುಃಖವನ್ನು ತಡೆಯಲಾರದೆ ಕಣ್ಣೀರು ಸುರಿಸುತ್ತಾ ಗದ್ಗದಸ್ವರದಿಂದ) ಕುಂಕ್ಮಾ........ ಕುಂಕ್ಮಾ...ಇಡೋ...ಯೋಗ್ಯತೆ......ಹೊರಟ್ಹೋಯಿತು ! (ಮುಸುಕಿನಿಂದ ಬಾಯನ್ನು ಮುಚ್ಚಿ ಕೊಂಡು) ಬರ್ತೇನೆ............ಕೂಸ್‌ನ್ನ ಜೋಪಾನವಾಗಿ ನೋಡಿಕೊಳ್ಳಿ...ಬರ್ತೇನೆ (ಕ್ರಮೇಣ ಬೀದಿ ಬಾಗಿಲಿನಿಂದ ನಿಷ್ಕ್ರಮಣ.)

ರಂಗಣ್ಣ : (ನಾಗತ್ತೆಯ ಚೀಲವನ್ನೂ ಚೊಂಬನ್ನೂ ಕೈಲಿಹಿಡಿದಿರುವ ಅಶ್ವತ್ಥನಿಗೆ) ಜೊತೇಲಿಹೋಗಿ ಒಳ್ಳೇ ಗಾಡೀಲಿ ಕೂಡಿಸಿ ಟಿಕೆಟ್ಟು ತೆಕ್ಕೊಟ್‌ಬಿಟ್ ಬಾ........

ನರಸಮ್ಮ : ಸ್ವಲ್ಪ ಇರು !........ಬೇಡ ! ನೀನು ಹೋಗು !....... ಕೂಜಾಲಿ ಹಾಲಿಥೆ, ಶಾಮಿ ಎತ್ತಿಕೊಂಡು ಬರ್ತಾನೆ......ತಿರುಗಿ ಬರೋವಾಗ ತಂದರೆ ಸಾಕು ಕೂಜಾನ, ಅಂತ ಹೇಳು.

(ಅಶ್ವತ್ಥನು ಬೀದಿ ಬಾಗಿಲಿನಿಂದ ನಿಷ್ಕ್ರಮಿಸುವನು. ನರಸಮ್ಮನು ಒಳಕ್ಕೆ ಹೋಗಿ ಕಂಚಿನ ಕೂಜಾವನ್ನು ತಂದು ಶಾಮಿ ಕೈಲಿಟ್ಟು) ಓಡೋ...!

ರಂಗಣ್ಣ : ಓಡೋದರಲ್ಲೀ ಮುಗ್ಗರಿಸಿ ಬಿದ್ದು ಮಂಡೀನೂ ತರ್ಕೊಂಡು ಕೂಜಾನೂ ಚರಂಡೀಲಿ ಉರುಳಿಸಬೇಡ . ಮೆಲ್ಲಗೆ ಹೋಗು (ಶಾಮಿ ನಿಷ್ಕ್ರಮಣ) ಬೇಕಾದಷ್ಟಿದೆ ಟೈಮು .... (ನರಸಮ್ಮನಿಗೆ) ಪೂಜೇಗೆ ಸಿದ್ಧ ತಾನೆ ?

ನರಸಮ್ಮ : ಹೂಂ.

(ರಂಗಣ್ಣ ಒಳಕ್ಕೆ ನಿಷ್ಕ್ರಮಣ) ಹೋಗೋ ಮಗೂ. ಚೊಕ್ಕಟವಾಗಿ ಮೈತೊಳಕೊಂಡು ಹಂಡೇಗೆ ಇನ್ನೆರಡು ಬಿಂದಿಗೆ ನೀರು ಸುರಿದು, ಎರಡು ಕಟ್ಟಿಗೆ ಒಲೇಗೆ ಇಟ್ಟು ಕೈತೊಳಕೊಂಡು, ನಿಮ್ಮ ತಂದೇ ಪಕ್ಕದಲ್ಲಿ ನಿಂತಿರು. ಪೂಜೇ ಆಗೋವಾಗ......(ಮಗೂ ನಿಷ್ಕ್ರಮಣ. ಬೀದಿಯ ಬಾಗಿಲನ್ನು ಹಾಕುತ್ತಾ) ಪಾಪ ! ಈ ವಯಸ್ಸಿನಲ್ಲಿ ಮನೆಯಲ್ಲಿ ಹಗಲೂ ರಾತ್ರಿ ದುಡಿಯೋದಲ್ದೆ ರೈಲು ಪ್ರಯಾಣದ ಕಷ್ಟಾನೆಲ್ಲಾ ತಡಕೊಂಡೂ........ಬಿಸಿಲ್‌ನಲ್ಲಿ ನಡಕೊಂಡು ಹೋಗತಿಥೆ ಪ್ರಾಣಿ, ಪಾಪ !

ಸಾತೂ : ನನಗೂ, ಪಾಪ ಅನ್ಸುತ್ತೆ ಅಮ್ಮ ! ಆದರೆ...ಆ ಮನೇಲಿ........ಒಂದೊಂದು ಸರತಿ ಅನ್ಯಾಯ.............ಹಿಂಸೆ.........

ನರಸಮ್ಮ : (ಕೋಪದಿಂದ) ಸಾತೂ ! ಒಂದು ಮಾತು ಹೇಳ್ತೇನೆ....... ಸಾಯೋವರಿಗೂ ಮರೀಬೇಡ !......**ಲೋಕದಲ್ಲಿ ಕಷ್ಟಪಟ್ಟು ನರಳೋವ್ರು ದೇವರಿಗೆ ಸಮಾನ............ ನಮ್ಮ ಕಣ್ಣಿಗೆ ದೇವರಿಗಿಂತಲೂ ಜಾಸ್ತಿ.** ಈಗ್ನೋಡು ! (ಮೃದುವಾಗಿ) ಈ ಕೂಸಿಗೆ ಸ್ವಲ್ಪ ಮೈ ಬೆಚ್ಚಗಾಯಿತು ಅಂದ್ರೆ ನನ್ನ ಗುಂಡಿಗೆ ಬಿರಿದಹಾಗಾಗುತ್ತೆ............ಇಷ್ಟು ಮಕ್ಕಳೂ ಇದ್ದೂ, ದೇವರ ದಯದಿಂದ ಮನೆ ಬಾಗಲು ಅಂಬೋದನ್ನ ಅನುಭವಿಸ್ತಿದ್ರೂ, ಸ್ವಲ್ಪ ಹೆಚ್ಚು ಕಡಿಮೆ ಆಗುತ್ಲೂನೂವೆ ನನಗೆ ಇಷ್ಟು ಯಾತನೆ ಆಗುತ್ತಲ್ಲಾ............ ಈಕೆ ಅಂಥಾ ಹೆಂಗಸರು ಪಾಪ ! ಕೈಹಿಡಿದವನನ್ನೂ ಕಳಕೊಂಡು, ತನ್ನ ಹಣೆಯಲ್ಲಿ ಬರೆಯದ ಸಂಸಾರದ ಸುಖಾನ ಸುತ್ತ ಮುತ್ತಲೂ ಇರೋರು ಅನುಭವಿಸೋದ್ನೂ...ತನಗೆ ಮಕ್ಕಳಿಲ್ಲದ್ದಲ್ಲದೆ. ಇತರರು ಮಕ್ಕಳನ್ನ ಹೆತ್ತು ಸಾಕೋ ಸುಖಾನ ನೋಡುತ್ಲೂ ಇಧಾರಲ್ಲಾ...! **ಇವರಿಗೆ ಹುಚ್ಚು ಹಿಡೀದೆ ಇರೋದು ಆಶ್ಚರ್ಯ............! ತನ್ನ ಭಾಗ್ಯಾನ ಕಳಕೊಂಡ ಯಾತನೇಲಿ ಅಲ್ಪಸ್ವಲ್ಪ ರೇಗಿದಾ ಕ್ಷಣವೇ, ನಾವು ಮನಸ್ಸಿಗೆ ತಂದ್ಕೊಳ್ಳೋದೇ ? ತಪ್ಪು ಸಾತೂ.........ಇನ್ನುಮೇಲೆ ನಾಗತ್ತೆ ಏನ್ ಹೇಳಿದರೂ ಏನ್ ಮಾಡಿದರೂ......ಖಾಯಿಲೇಲಿ ರೋಗಿಗಳು ನೋವು ತಡೀಲಾರದೆ ರೇಗಿದರೆ ಹ್ಯಾಗೆ ಮನಸ್ಸಿಗೆ ತಂದುಕೋಬಾರದೊ ಹಾಗೆ ಮನಸ್ಸಿಗೆ ತಂದುಕೊಳ್ಳದೇ ನಡಕೊಳ್ಳೋದು......ಅದು ಜಾಣತನ!! ಅರ್ಥವೇ......?**

ಮಗು : (ರಭಸದಿಂದ ಪ್ರವೇಶಿಸಿ) ಇದಕ್ಕೇ ಹೆಂಗಸರು ಹೋಪ್‌ಲೆಸ್ಸೂ ಅಂಬೋದು...... ಇಲ್ಲಿ ನಿಂತ್ಕೊಂಡು ಹರಟೇಬಡೀತಿರಿ !............ಅಲ್ಲಿ ಅಪ್ಪಾ ಕಾದಿಧಾನೆ ಮಂಗಳಾರತೀಗೆ......!

ನರಸಮ್ಮ : ಸಾಕು ನಿಲ್ಲ್‌ಸೋ ! ಅಧಿಕ ಪ್ರಸಂಗಿ! (ಕೂಸನ್ನು ಸಾತುವಿನ ಕೈಯಲ್ಲಿಟ್ಟು ತ್ವರೆಯಿಂದ ಒಳಕ್ಕೆ ಹೋಗುವಳು. ಮಗುವೂ. ಪುಟ್ಟಾನೂ. ಹಿಂಬಾಲಿಸುವರು.)

... ...

[ಒಳಗೆ, ಮಂಗಳಾರತಿಯ ಘಂಟೆಯ ಶಬ್ದ ಕೇಳಿಬರುವುದು. ಒಂದೆರಡು ಕ್ಷಣಗಳಲ್ಲಿಯೇ ಮಗುವು, ಕರ್ಪೂರವು ಉರಿಯುತ್ತಿರುವ ಮಂಗಳಾರತಿ ತಟ್ಟೆಯನ್ನು ತಂದು ನೆಲದ ಮೇಲಿಟ್ಟು "**ಅಕ್ಕಾ ! ತೀರ್ಥ**" ಎನ್ನುವನು.]

ಸಾತೂ : ಅಣ್ಣಾನೂ ಶಾಮಿಾನೂ ಬರಲಿ........ನೀನ್ ಹೋಗು.

[ಮಗು ಒಳಕ್ಕೆ ನಿಷ್ಕ್ರಮಣ]

(ಕೂಸನ್ನು ಮೊಗುಚಿ ಹಿಡಿದುಕೊಂಡು ಉರಿಯುವ ಕರ್ಪೂರಕ್ಕೆ ಕೂಸಿನ ಮುಖವನ್ನು ಸಮಿಾಪಿಸಿ)

ದೇವ್ರು !............ದೇವ್ರು ! ನನ್ನ ಕಂದಾ !............ದೇವ್ರು !

(ಕೂಸು. ಉರಿಯುವ ಕರ್ಪೂರಕ್ಕೆ ಚಾಚುವ ಕೈಯನ್ನು ಥಟ್ಟನೆ ಹಿಂದೆಳೆಯುತ್ತ)

ಬೆಂಕೀನೋ, ಕೋತಿ !!!!

[ಪರದೆಯು ಮೆಲ್ಲನೆ ಬೀಳುವುದು.]

ತಾಳೀಕಟ್ಟೋಕ್ಕೂಲೀನೇ ?

೩

"ಯೋಧ್ಯವಾಣಿ...."

ಪಾತ್ರಗಳು

ನರಸಿಂಹಯ್ಯ	...	ಪಾತು ತೌವರ್ಣನೆಯು
ರಾಮಣ್ಣ	...	,,
ರಂಗಣ್ಣ	...	ಸಾತು ,,
ಶಾಸ್ತ್ರಿಗಳು	...	ನರಸಿಂಹಯ್ಯನ ಮನೆಯು
ಪುರೋಹಿತರು	...	,,
ಅತಿಥಿಗಳು	...	ನರಸಿಂಹಯ್ಯನ ಬಳಗ
ಪಾರ್ವತಮ್ಮ	...	,, ಪತ್ನಿ
ಮುತ್ತೈದೆಯರು	...	ರಾಮಪುರದವರು
ಶಂಕರ	...	ನರಸಿಂಹಯ್ಯನ ಮಗ

ಸ್ಥಳ :— ನರಸಿಂಹಯ್ಯನ ಮನೆ

ಭಾಷಾ :— ಹಿಂದಿನಂತೆ

ನರಸಿಂಹಯ್ಯನ ಮನೆ ಪಡಸಾಲೆ

[ಮುಹೂರ್ತದ ಗಲಾಟೆ. ಒಂದು ಕಡೆಯಲ್ಲಿ ಬ್ರಾಹ್ಮಣರು ನವಗ್ರಹ ಪೂಜೆಯನ್ನು ಮುಗಿಸುತ್ತಿರುವರು. ಮತ್ತೊಂದು ಕಡೆಯಲ್ಲಿ ವಧುವಿಗೆ ಅಲಂಕಾರ ಮಾಡುವ ಗಲಾಟೆ. ಪಡಸಾಲೆಯ ಮುಂಭಾಗದಲ್ಲಿ ಅತಿಥಿಗಳು ಕೂತು ತಾಂಬೂಲ ಕಲ್ಲುಸಕ್ಕರೆ ಇತ್ಯಾದಿ ವಸ್ತುಗಳನ್ನು ಸೇವಿಸುತ್ತಾ ಮಾತನಾಡಿಕೊಳ್ಳುತ್ತಿರುವರು. ಮನೆಯಾಕೆ-ಮನೆಯಾತ, ಆಗಾಗ್ಗೆ ಒಳಗೂ ಹೊರಗೂ ಬಂದು ಹೋಗುತ್ತಾ ಏರ್ಪಾಟುಗಳನ್ನು ವಿಚಾರಿಸಿ ಕೊಳ್ಳುತ್ತಾ ಇರುವರು.

ಪಡಸಾಲೆಯ ಪಕ್ಕದ ಗೋಡೆಯಮೇಲೆ ತಗುಲಿಸಿರುವ ದೊಡ್ಡ ಗಡಿಯಾರವು ಒಂಬತ್ತು ಘಂಟೆ ಹೊಡೆಯುವ ಶಬ್ದವು ಕೇಳುವಷ್ಟರಲ್ಲೇ ನರಸಿಂಹಯ್ಯನು ಬೀದಿಬಾಗಿಲಕಡೆ ಬಂದು ಅಸಮಾಧಾನದಿಂದಲೂ ಕಳವಳದಿಂದಲೂ "ಶಂಕರಾ! ...... ಎಲ್ಲೀ ಅವನು ....**ಶಂಕರಾ**!!" ಎಂದು ಕೂಗುವನು. ಶಂಕರನು ಒಳಗಿನಿಂದ ಓಡಿಬಂದು ತಂದೆಯನ್ನು ಸಮೀಪಿಸುವನು.]

ನರಸಿಂಹಯ್ಯ : ಎಲ್ಲಿದ್ಯೋ?........ಏನ್ಮಾಡ್ತಿದ್ಯೋ........?

ಶಂಕರ : ಬಂದೋರಿಗೆ ...... ಕಾಫಿ!...ಇಡ್ಲಿ!....... ಅಮ್ಮ ಹೇಳ್ತಾರೆ ಆ ಮನೆಯಿಂದ ಹೆಂಗಸರು ಯಾರೂ ಬಂದಿಲ್ಲ........ಅಂತ!

ನರಸಿಂಹಯ್ಯ : ಅದಕ್ಕೇ ನಾನು ಪೇಚಾಡ್‌ತಿರೋದು!...ಘಂಟೆ ಒಂಭತ್ತು ಹೊಡೆದಾಯಿತು...ಮುಹೂರ್ತಕ್ಕೆ ಇನ್ನೊಂದೇ ಘಂಟೆ! ಅವರಿನ್ನೂ........ನಾವು ಹೊರಡೋಕೆ ಏನೂ ಹೇಳಿಕಳಿಸ್‌ಲಿಲ್ಲ...ಬೈಸಿಕಲ್ ಹತ್ತಿಕೊಂಡುಹೋಗಿ ಏನ್ಸ್‌ತಡ ಅಂತ ವಿಚಾರಿಸಿಕೊಂಡು ಬಾ guestsನ ನಾನು ನೋಡಿಕೋತೇನೆ.

(ಶಂಕರನು ಬೀದಿ ಬಾಗಿಲಿನಿಂದ ನಿಷ್ಕ್ರಮಣ)

ಅತಿಥಿಗಳಲ್ಲೊಬ್ಬ : (ಎದ್ದು ಬಂದು) ಏನಪ್ಪಾ ಇನ್ನೂ delay! ಬೀಗರ Bungalow, ಒಂದೂವರೆ ಮೈಲು ಇದೆ ಇನ್ನೂ ಇಲ್ಲಿಂದ ನೀವು ಹೊರಟು ಅವರನ್ನ ಕರಕೊಂಡ್‌ಬಂದೂ ——ಮುಹೂರ್ತ......ಹತ್ತೂಕಾಲು?

ನರಸಿಂಹಯ್ಯ : ಕಾರು(Car)ಗಳು arrange ಮಾಡಿದೇನೆ........... three Cars——— !

ಅತಿಥಿ : ಮತ್ತಿನ್ನಾಕೆ ಹೊರಡಬಾರದೂ ?............

ನರಸಿಂಹಯ್ಯ : ಸ್ವಲ್ಪ, ಅಲ್ಲೇನೋ...........ಸ್ವಲ್ಪ............ಮನೇಲಿ ಮುದುಕಿ ——— orthodoxಉ......superstitiousಉ......ಏನೋ ಅಪಶಕುನವಂತೆ......... ಇಂಥಾದ್ದು ಅಂತ ಗೊತ್ತಿಲ್ಲ........... ಹಲ್ಲಿ ಬಿತ್ತೋ......ಬೆಕ್ಕು ಅಡ್ಡಹಾಸ್ತೋ......ಏನೋ ಗೊತ್ತಿಲ್ಲ......ಅದೇ......ಶಾಂತೀಗೇಂತ......ಸ್ವಲ್ಪ delay ಅಂತ ಕಾಣುತ್ತೆ......

ಅತಿಥಿ : ಹಾಗಾರ್ ಸರಿ......(ಪುನಃ ಸ್ವಸ್ಥಾನದಲ್ಲಿ ಕುಳಿತುಕೊಳ್ಳುವನು.)

[ನರಸಿಂಹಯ್ಯನು ಆತುರವನ್ನು ತಡೆಯಲಾರದೆ............ಬೀದಿ ಬಾಗಿಲನ್ನು ಸಮೀಪಿಸುತ್ತಿರಲು ಶಂಕರನು ರಭಸದಿಂದ ಪ್ರವೇಶಿಸುವನು.]

ಶಂಕರ : (ಓಡಿಬಂದ ಆಯಾಸದ ನಿಟ್ಟುಸಿರುಬಿಡುತ್ತಾ) ಹಪ್ಪಾ.........ಪವರು.........ರಾಮಣ್ಣೋರು......

(ತಂದೆಯ ಕೈಹಿಡಿದು ಪಡಸಾಲೆ ಮುಂಭಾಗದ ಅಂಚಿಗೆ ಎಳೆದುಕೊಂಡು ಹೋಗಿ) ಅಪ್ಪಾ! ರಾಮಣ್ಣೋರು.........ಅದ್ಯಾಕೋ ಕಾಣೆ! ಜಟ್ಕಾದಲ್ಲಿ ಹತ್ಕೊಂಡು......ನನ್ನೆದುರಿಗೇ ಬರ್ತಿದ್ರು......ನನಗೇನೋ ಎದೆ......'ಧ ನ್' ಅಂತು......ವಿಚಾರ್ಸೋಕೆ ಧೈರ್ಯ ಬರಲಿಲ್ಲ...ಪೈಸಿಕಲ್ ತಿರುಗಿಸ್ಕೊಂಡು ಬಂದುಬಿಟ್ಟೇ......!

(ಬೀದಿ ಬಾಗಿಲಕಡೆ ಕಿವಿಗೊಟ್ಟು) ಅಕೋ! ಜಟ್ಕಾ ನಿಂತ್ರು...ಅವ್ರೇ!!!

[ನರಸಿಂಹಯ್ಯನು ತನ್ನ ತೋಳಿನಮೇಲೆ ಇದ್ದ ಶಂಕರನ ಕೈಯನ್ನು ಒದರಿ...ಉದ್ದುದ್ದ ಹೆಜ್ಜೆ ಹಾಕುತ್ತ ಬೀದಿಬಾಗಿಲನ್ನು ಸೇರುವನು. ಎರಡು ಅಂಗುಲ ಜರತಾರಿ ಅಂಚುಗಳ ರುಮಾಲು, ಕರೀಬನಾತಿನ ದರಬಾರ್ ಲಾಂಗ್‌ಕೋಟು, ನಾಲ್ಕು ಅಂಗುಲ ಜರತಾರಿ ಅಂಚಿನ ಅಂಗವಸ್ತ್ರ, ಮೂರು ಅಂಗುಲ ಜರತಾರಿ ರೇಷ್ಮೆ ಅಂಚಿನ ಧೋತ್ರ...ಹುಲಿಯ ಹಲ್ಲು ಹಿಡಿ ಕಟ್ಟಿದ ಕರೀಮರದ ಕೋಲು. ಸುವರ್ಣದ ಕಟ್ಟುಹಾಕಿರುವ ಸುಲೋಚನಾ, ಇವುಗಳಿಂದ "ಅಲಂಕೃತನಾಗಿ" ರಾಮಣ್ಣನು ಪರಮಾನಂದವು ಉಕ್ಕಿಬರುವ ಮುದ್ರೆಯನ್ನು ತಾಳಿ......ಪ್ರವೇಶಿಸುವನು.]

ರಾಮಣ್ಣ : (ಮೆಟ್ಟಿಲನ್ನು ಹತ್ತಿ ಹೊಸ ಪಾಪಾಸನ್ನು ಬಾಗಿಲ ಅಂಚಿನಲ್ಲಿ ಬಿಟ್ಟು ಮುಂದಕ್ಕೆ ಬರುವನು...ನರಸಿಂಹಯ್ಯನ ಎರಡೂ ಕೈಗಳನ್ನೂ ತನ್ನ ಕೈಗಳಿಂದ ಹಿಡಿದು ಕುಲುಕುತ್ತಾ)

Hear I am at last, dear boy!...ನೀನು anxious ಆಗಿರ್‌ತೀಯ ಅಂತ ಗೊತ್ತು...But ಹೆದರಬೇಡ...every thing···is···at least will be···I hope··· all right;

(ನರಸಿಂಹಯ್ಯನನ್ನು ಬಿಟ್ಟು ಮುಂದಕ್ಕೆ ಬಂದು...ಸಂಗ್ರಹಿಸಿರುವ ಅತಿಥಿಗಳಿಗೆ ಕೈಮುಗಿದು ...ಹಸನ್ಮುಖನಾಗಿ)

Good morning gentlemen···ನಾನು, ನನ್ನ dear brother,......that is to be, Mr. ನರಸಿಂಹಯ್ಯ .... ದೊಡ್ಡ ಕಾರ್ಯಕ್ಕೆ ಕೈ ಹಾಕಿದೇವೆ...ತಮ್ಮಗಳ ಆಶೀರ್ವಾದ...assistance···ದಯಪಾಲಿಸಿ ಕೆಲಸ....................(ಪಕ್ಕದಲ್ಲಿದ್ದ ಪುರೋಹಿತನನ್ನು ನೋಡಿ)........... ಹ್ಯಾಗೆ ಹೇಳೋದು ಶಾಸ್ತ್ರಿಣಃ...ಸಾಂಗೋಪಾಂಗವಾಗಿ ಮುಗಿಸಿ, "ಸರ್ವೇಜನಾಃ ಸುಖಿನೋಭವಂತು"........ಗೆ........ತಂದು ಬಿಟ್ಟುಬಿಡಬೇಕು.

ನರಸಿಂಹಯ್ಯ : ಹೌದು ಸರ್!...ಒಂಬತ್ತೂಕಾಲು ಆಗ್‌ತಾಬಂತಲ್ಲ...ಇನ್ ನಾವು ಹೊರಟು........? ? ಅಲ್ಲದೇ ನೀವೇನೂ ಹೀಗ್ ಬಂದ್ಬಿಟ್ಟದ್ದೂ ...... ? ನಾವು ಬಂದೂ........ ಕಾರಿನಲ್ಲಿ ?

ರಾಮಣ್ಣ : (ಕೈಗಳನ್ನು ನರಸಿಂಹಯ್ಯನ ಭುಜಗಳ ಮೇಲೆ ಹಾಕಿ ಮಮತೆಯು ಸುರಿಯುತ್ತಿರುವ ಕಣ್ಣುಗಳಿಂದ ನೋಡುತ್ತಾ)

My dear boy···be calm···ಕಾಮಾಗಿರು...ನೀನು impatient ಆಗಿರ್‌ತೀಯ ಅಂಬೋದ್ನ think ಮಾಡಿಯೇ ನಾನ್ ಬಂದದ್ದು ಮೊದಲು!........ಏನೀಗ ...... a few minutes ಹಾಗೂ ಹೀಗೂ ಆದಾಕ್ಷಣವೆ?...After all ನಮ್ಮ orthodoxy···thanks to the broad-mindedness of our fairly up-to-date purohits, is fairly elastic; ಸ್ವಲ್ಪ up and downಉ, late and early···give and takeಉ. ಈ libertiesಗೆಲ್ಲ ಸ್ವಲ್ಪ margin...... (ಪುರೋಹಿತನಿಗೆ) ಏನ್ ಶಾಸ್ತ್ರಿಣಃ: ಪುರಾತನ ಕಾಲದಹಾಗೆ ಪರಿಪೂರ್ಣವಾಗಿ ವೈದಿಕವಾಗಿಯೇ ಕರ್ಮಗಳನ್ನ ಜರಗಸ್‌ಬೇಕೂ ಅಂದ್ರೆ...ಸಾಧ್ಯವೆ...

ಈ ಆಧುನಿಕ ಪಟ್ಟಣವಾಸಗಳಲ್ಲಿ? ಅಲ್ಪ ಸ್ವಲ್ಪ **ಲೌಕೀಕ** ಅಲ್ಲಿ ಇಲ್ಲಿ ಸಂಕಲನ ಆಗಲೇ ಆಗುತ್ತಲ್ವೆ? ತಮ್ಮ ಅಭಿಪ್ರಾಯವೇನು?

[ಎಂದು ನರಸಿಂಹಯ್ಯನನ್ನು ಬಿಟ್ಟು ಶಾಸ್ತ್ರಿಗಳನ್ನು ಸಮೀಪಿಸಿ ಆತನೊಂದಿಗೆ ಕೈ ಮುಖಗಳನ್ನು ಅಧಿಕವಾಗಿ ಹಾವಭಾವಗಳಿಗೆ ಗುರಿಮಾಡಿ ಸಣ್ಣಧ್ವನಿಯಲ್ಲಿ ಸಂಭಾಷಣೆ ಬೆಳೆಸುತ್ತಿರುವನು. ನರಸಿಂಹಯ್ಯನು ಯಾವ ಒಂದು ಯೋಚನೆಯೂ ತೋಚದೆಯೂ...ರಾಮಣ್ಣನ ನಡತೆಯು ಮನದಟ್ಟಾಗದೆಯೂ...ಗಡಿಯಾರವನ್ನು ನೋಡಿ...ಕೈ ಕೈ ಹಿಸುಕುತ್ತಾ ಪೇಚಾಡುತ್ತಿರುವನು]

[ನವಗ್ರಹ ಪೂಜೆಯು ಆಗಿ ವೈದೀಕರು ಎದ್ದು ನಿಲ್ಲುತ್ತಲೂ, ಪುರೋಹಿತನು ರಾಮಣ್ಣನಿಗೆ ತಲೆಬಾಗಿ "ಕ್ಷಮಿಸಿ" ಎಂದು ಹೇಳಿ ನರಸಿಂಹಯ್ಯನನ್ನು ಸಮೀಪಿಸುವನು.]

ಪುರೋಹಿತ : ಸ್ವಾಮಿ...ಇನ್ನು ಹೊರಡಲೇಬೇಕು! ಸ್ವಲ್ಪ ಚಟುವಟಿಕೆ ಇದ್ರೇನೆ... ಮುಹೂರ್ತಕ್ಕೆ ಸರಿಯಾಗಿ...ನೆರವೇರೋ...

ನರಸಿಂಹಯ್ಯ : ಹೌದು!...ಗೊತ್ತು! ಮತ್ತೆ ಈತನೇನೋ!?...ತಾವು ದಯವಿಟ್ಟು ಆ ವೈದೀಕರನ್ನ ಮುಂದಿನ ಹಜಾರಕ್ಕೆ ಕಳಿಸಿಬಿಟ್ಟು ನಮ್ಮಾಕೆ ಹತ್ತರ ಆ ಹೆಂಗಸರ ಗಲಾಟೆ ಇಲ್ಲದಹಾಗೆ ನೋಡಿಕೋ ಅಂತ ಹೇಳಿ........

(ಪುರೋಹಿತನು ಹೋಗಿ, ಪಡಸಾಲೆಯ ಹಿಂಭಾಗವು ನಿರ್ಜನವಾಗುತ್ತಲೆ ರಾಮಣ್ಣನ ಹತ್ತಿರ ಬಂದು)............ಕ್ಷಮಿಸಿ! ಒಂದು ನಿಮಿಷ!

(ರಾಮಣ್ಣನನ್ನು ಪಡಸಾಲೆಯ ಮುಂಭಾಗಕ್ಕೆ ಕರೆತಂದು)

ಈಗ...ನಾವು...ಹೊ...ರ...ಡ...ಬ...ಹು...ದ...ಲ್ವೇ!

ರಾಮಣ್ಣ : Why??! (ನರಸಿಂಹಯ್ಯನ ಬೆನ್ನನ್ನು ತಟ್ಟುತ್ತಾ)............Most certainly!...ಆದರೆ...dear boy ....ಹ್ಯಾಗೆ ಹೇಳಲೀ!...ಒಂದು small...hitchಉ ...hitch ಏನೂ...a sort of trivial...(ಭೃಕುಟಿ ರಚನೆಯನ್ನು ಮಾಡಿ) ಅದೂ...ಏನೂ ಇಲ್ಲ...ಆದರೆ...after all...ನಿನಗ್ಗೊತ್ತಿಲ್ವೆ .... (ಮುಗುಳು ನಗೆಯಿಂದ)............ **Boys will be boysಉ !!!**

ನರಸಿಂಹಯ್ಯ : ಕೋಪಿಸ್ಕೋಬೇಡಿ!...ಮುಹೂರ್ತ ಹತ್ತುಹತ್ತರ ಬಂತು...ಶಾಸ್ತ್ರಿಗಳು ಅವಸರಪಡಸ್ತಿದಾರೆ. ನೀವು ಹೀಗೆ ಥಟ್ಟಂತ ಮುಂದೇ ಬಂದುಬಿಟ್ಟಿದ್ದಲ್ದೆ...ನಾನು "ಹೊರಡಬಹುದೆ" ಅಂತ ಹೇಳಿದ್ದಕ್ಕೆ ಉತ್ತರ...? !

ರಾಮಣ್ಣ : (ಹತ್ತಿರ ಬಂದು ಬೆನ್ನನ್ನುಸವರುತ್ತಾ) I can understand, dear boy! ಅರ್ಥವಾಗುತ್ತೆ....... ನಿನ್ನ impatienceಉ, of course......naturalಉ ಮುಹೂರ್ತ approachingಉ, guests assembledಉ...ಎಲ್ಲ ನನಗೂ ತಿಳೀತು... But...ನೀನೇನೂ otherwise ತಿಳ್ಕೋಬಾರದು........But I must confess,........ ನನ್ನ positionಉ ಬಹಳ delicateಉ...

ನರಸಿಂಹಯ್ಯ : ಅದೇನು delicateಉ ಸರ್? ಹೇಳಿಬಿಡಿ!............ಎಲ್ಲ all right ಅಂತೀರಾ!...ತಿರುಗೂ hitch ಅಂತೀರಾ!........ಇನ್ನು boys will be boys ಅಂದ್ರೇನೂ...? ಈ last momentನಲ್ಲಿ delicate position ಏನ್ ನಿಮಗೆ........? (ನಿಟ್ಟುಸಿರು ಬಿಡುತ್ತಾ) ನನಗೊಂದೂ ಅರ್ಥವಾಗಲಿಲ್ಲ... **ಏನಿದ್ರೂನೂವೆ ದಯವಿಟ್ಟು ಹೇಳಿಬಿಡಿ...!**

ರಾಮಣ್ಣ : Certainly, dear boy!... ನಿನ್ನನ್ನ suspenseನಲ್ಲಿ ... ಹೀಗೆ ಇಡೋದು...far be it from my mind...ಅದೂನೂ for a well-wisher of yours like me!....... ....ಆದರೆ (ತಲೆಯನ್ನು ತಿರುಗಿಸಿ ಕಣ್ಣುಗಳಿಂದ ಅತಿಥಿ ಸಮೂಹ ವನ್ನು ಸೂಚಿಸಿ, ಸಣ್ಣ ಧ್ವನಿಯಿಂದ)

ಸ್ವಲ್ಪ crowded ಆಗಿಧೆಯಲ್ವೆ, ...ಸ್ಥಳ? of course...serious ಏನೂ ಇಲ್ಲ... But delicate and personal topicಉ after all...merely ನಮ್ಮ ನಮ್ಮಗಳ ಮಾತು!

ನರಸಿಂಹಯ್ಯ : (ಮುಂದಕ್ಕೆ ಬಂದು ಘಟ್ಟಿಯಾಗಿ "ಶಂಕರಾ" ಎಂದು ಕೂಗಿ...ಅತಿಥಿ ಗಳಿಗೆ) ಕ್ಷಮಿಸಬೇಕು...ಎಲ್ಲರೂ!...ಇನ್ನೂ ಗಂಡುಗಿಂಡು ಬಂದು...ಕಾರ್ಯಕ್ರಮಗಳೆಲ್ಲಾ ಪ್ರಾರಂಭ ವಾಗೋ ಅಷ್ಟರಲ್ಲಿ...ತಾವುಗಳೆಲ್ಲರೂ ದಯವಿಟ್ಟು ಸ್ವಲ್ಪ ಕಾಫಿ ಫಲಾಹಾರ ಸೇವಿಸಬೇಕು. (ಬಲಗೈಯನ್ನು ಚಾಚಿ ಪಕ್ಕದ ಒಳಬಾಗಿಲೊಂದನ್ನು ಸೂಚಿಸಿ...ಆಗತಾನೆ ಬಂದ ಶಂಕರನಿಗೆ) ಕರಕೊಂಡು ಹೋಗಿ ಅಲ್ಲೆ ಇದ್ದು ಎಲ್ಲರಿಗೂ ಫಲಾಹಾರ ಮಾಡಿಸು.

[ಅತಿಥಿಗಳೆಲ್ಲರೂ ಎದ್ದು ಒಬ್ಬೊಬ್ಬರಾಗಿ ಶಂಕರನನ್ನು ಹಿಂಬಾಲಿಸಿ ನಿಷ್ಕ್ರಮಿಸುವರು]

ನರಸಿಂಹಯ್ಯ : [ಎಲ್ಲರೂ ಹೋದಮೇಲೆ...ಒಂದು ನಿಮಿಷ ಕಾದಿದ್ದು...ನೆಲವನ್ನು ನೋಡುತ್ತಾ ....ಮುಖ ತಗ್ಗಿಸಿ ನಿಂತಿರುವ ರಾಮಣ್ಣನು ಮಾತನಾಡದಿರಲು] **ಈಗ ಸರ್! ...ದಯವಿಟ್ಟು!**

ರಾಮಣ್ಣ : (ಒಂದು ಅರ್ಧ ನಿಮಿಷ ಇದ್ದಹಾಗೆಯೇ ಇದ್ದು) ವಿಶೇಷವೇನೂ ಇಲ್ಲ... ಚಿಲ್ಲರೆ ವಿಷಯ...ಆದರೆ ಹುಡುಗ...ಅದೂನೂ ಯಾವಾಗ್ಲೂ...ಮಾತಾಪಿತೃಗಳು...ಅಂದ್ರೆ... ಶ್ರೀರಾಮ...ಇನ್ಯಾರು?!...you know the rest...ಯಯಾತಿ...I should say ಪುರು ...ಭಗೀರಥ, ಈ ಬಾಬ್ತುಗಳ ಹಾಗೆ ಭಕ್ತಿ ಶ್ರದ್ಧೆಯಾಗಿದ್ದ ಹುಡುಗ...**ಥಟಕ್ಕನೆ** ಈಗ ಹಟ ಹಿಡಿದಿರೋದು ನೋಡಿದ್ರೆ, ...congenitally...ನಾನ್ ಯಾವಾಗ್ಲೂ suspect ಮಾಡಿದ ಹಾಗೆ...ನಮ್ಮ Grandfatherನ...temperಉ...traitsಉ...ಇವನಿಗೆ ಇಧೆ...ಅಂತ... complete ಆಗಿ ಈ ಹೊತ್ತು confirm ಆಗ್ಹೋಯಿತು...to my entire conviction if not satisfaction. ನಮ್ಮ grand fatherಗೆ **ಕೆಂಡದ** ಭೀಮಣ್ಣ ಅಂತ ಹೆಸರು...!!!

ನರಸಿಂಹಯ್ಯ : ಕ್ಷಮಿಸಿ ಮಿಸ್ಟರ್ ರಾಮಣ್ಣ........ನಿಮ್ಮ family history ನೀವು ಹೇಳೋಕೆ ನನಗೇನೂ ಅಭ್ಯಂತರವಿಲ್ಲ...ಆದರೆ ನೀವು ಬಳಸ್ಕೊಂಡು ಬಳಸ್ಕೊಂಡು ಹೇಳೋದ್ ನೋಡಿದ್ರೆ ನನಗೇನೋ...!

ರಾಮಣ್ಣ : ಛೇ ಛೇ...ಈ circumlocutingಉ...ಅನ್ಯಾಯ ಅಭ್ಯಾಸ ಆಗಿ ಹೋಗಿಬಿಟ್ಟಿದೆ...ಹಗಲೂ ರಾತ್ರಿ ಈ official routineಉ, this notorius red-tapism ಬಾಬತ್ತಿಗೆ ನೋಡಿ...!

(ನರಸಿಂಹಯ್ಯನ ಆತುರವನ್ನು ಗಮನಿಸಿ ಆತನ ಭುಜದಮೇಲೆ ಒಂದು ಕೈಯನ್ನಿಟ್ಟು)

ಇದೋ ಬಂದ್‌ಬಿಟ್ಟೆ pointಗೇ...ನಾನು...ಈ ಮಾತಿಗೆ ನಮ್ಮ ತಾತನ್ನ ಎಳೆದ್ದಾಕೆ ಅಂದ್ರೆ...ಆತನ ಹಾಗೆ ಸ್ವಲ್ಪ ಮುಷ್ಕರ...ಮೂರ್ಖತನ...ಅಲ್ಲ at least ಒಂದು hard-headedness! ಒಂದು ವಿಧದಲ್ಲಿ ನೋಡಿದ್ರೆ ಅವನ್ನೂ entirely ತಪ್ಪು ಅಂತ ಹೇಳೋ ಹಾಗಿಲ್ಲ......ಅವನು ಕೇಳೋದೇನೊ......ಒಂದು sensible plan ಮುಂದಿಟ್ಕೊಂಡೇ ಕೇಳ್ತಾನೆ.......ಆದ್ರೆ, ಕೇಳೋದನ್ನ ಹ್ಯಾಗೆ ಕೇಳಬೇಕು...ಯಾವಾಗ ಕೇಳಬೇಕೂ...ಅಂತ ಕಾಲ ದೇಶ ವರ್ತಮಾನ ಇತ್ಯಾದಿಗಳನ್ನ ಮನಸ್ಸಿಗೆ ಇಂಗಿತಮಾಡಿಕೊಳ್‌ದೆ ಹುಚ್ಚು ಹುಚ್ಚಾಗಿ!...Of

course ನಾನೂ and my wife ಉ, ಅಲ್ದೆ his own grand-motherಉ. ಇಷ್ಟು ಜನ advise ಮಾಡಿದ್ರೂ ! ?...ಆದ್ರೆ ಒಂದು ಮಾತು. (ಬಿರುಸಾಗಿ) **ಈಗ ಇರೋ critical juncture ಅಲ್ದೆ ಜೇರೆ ಯಾವಾಗ್ಲಾದ್ರೂ ಹೀಗೆ behave ಮಾಡಿದ್ದ ಅಂದ್ರೆ ಯಮುಕೆಗಳನ್ನ ಮುರಿದುಹಾಕಿಬಿಡ್‌ತಿದ್ದೆ !** (ಅತಿ ವಿನಯದಿಂದ)...But ನೀನು ಇಷ್ಟು preparations ಮಾಡಿ...ಇಷ್ಟು ದೊಡ್ಡೋರ್‌ನೆಲ್ಲಾ ಕೂಡಿಸಿ ತಯಾರಾಗಿರೋ moment ನಲ್ಲಿ,...ನಾಪಿಬ್ರೂ, ಒಂದು sort of ಕವೆಗೋಲಿನಲ್ಲಿ...You know what I mean... a sort of cleft stickಉ...ಇಕ್ಕಳ...ಇದರಲ್ಲಿ ಸಿಕ್ಕೊಂಡ್ ಬಿಟ್ಟಿಧೇವೇಂತ ತಿಳಕೊಂಡು **ನನಗೆ,** ...ಹೆತ್ತ ತಂದೆ ತಾಯಿಗಳಿಗೆ... **ನಮಗೆ !** ultimatum ಕೊಟ್ಟಿಧಾನೆ ! ! ! !

ನರಸಿಂಹಯ್ಯ : (ಮನಸ್ಸಿನ ಕಳವಳವೂ, ದುಗುಡವೂ, ಪ್ರತಿ ಕ್ಷಣವೂ ಹೆಚ್ಚುತ್ತಾ ಇದ್ದರೂ ಅತಿ ಸಾಹಸದಿಂದ ಅಡಗಿಸಿಕೊಂಡು) Ultimatumಉ ? ? ! ! ಏನ್‌ಸಾರ್ ಅದು...?

ರಾಮಣ್ಣ : Ultimatum...strong word of course...but...ಅವನಿಗೇನೋ—ಸ್ವಲ್ಪ far-sighted boyಇ—ambitionsಉ ಇವೆ, for a career ! But ಅವನ mentalityಗೂ...ನಮ್ಮ local schoolsಉ, university ಈ ಬಾಬತ್ತುಗಳಿಗೂ ಲಾಗಾಯ್ತಿನಿಂದ ಸರಿಹೋಗಲಿಲ್ಲ ; therefore ಇಲ್ಲಿ ಅರ್ಧಂಬರ್ಧ ಕಲಿಯೋಕ್ ಬದಲಾಗಿ... knowledgeನ...fountain-headನಲ್ಲೆ,—I mean foreignಗೆ—ಹೋಗಿ...I mean westಉ......Englandಉ...barrister at law...ಹೀಗೆಲ್ಲಾ ಯೋಚನೆ......

ನರಸಿಂಹಯ್ಯ : ಹೋಗಲೀ ಸಾರ್, Englandಗೆ ! ಈಗ ಯಾರು ಬೇಡ ಅಂದದ್ದು...? ಅದೂ ಒಂದು ಒಳ್ಳೆ ಯೋಚನೇನೆ ! ಅತ ಹೋಗಿಬಿಟ್ಟು ಬರುವಷ್ಟರಲ್ಲಿ ನಮ್ಮ ಹುಡುಗೀನೂ ಸ್ಕೂಲು...ಕಾಲೇಜು ಅಂತಾ ;...ಹೌದೂ ? ಇದಕ್ಕೋಸ್ಕರ ಈಗ ಇಷ್ಟು ಅನಾನುಕೂಲ ಪಡಿಸೋದೇ...? !

ರಾಮಣ್ಣ : I **told** him...ನಿನಗೇನೂ objection ಇರೋದಿಲ್ಲ ಅಂತ, I **told** him. ಆದ್ರೆ ಅವನು. ಆ ವಿಷಯದಲ್ಲಲ್ಲಾ...ಶಂಕೆಪಟ್ಟುಕೊಂಡದ್ದು...to come to his point....ಅವನಿಗೆ figure ಸಿಕ್ಕಿದ್ದು...ನನಗೇ ಆಶ್ಚರ್ಯ !......—ಕನಿಷ್ಟಪಕ್ಷ ವರ್ಷಕ್ಕೆ £ ೨೦೦ expensesಉ three yearsಉ barristerಗೆ...ಮೂರೆರಡಲ ಆರು...೬೦೦ poundsಉ, ಹದಿನೈದಾರಲ್ ೯೦—೯೦೦೦ ರುಪೀಸು......ಹೋಗ್‌ತಾ ಬರ್ತಾ...ಒಂದು ಸಾವಿರ. plus feesಉ 'geeseಉ...ಒಟ್ಟಿನಲ್ಲಿ ೧೧,೦೦೦...ಇದೂ ನನ್ನ ಕೈಗೆ ಬಂದರೇನೆ ನಾನು ನನ್ನ wifeಗೆ ತಕ್ಕ husband ಆಗೋಕೆ ಯೋಗ್ಯತೆ ಬರುತ್ತೆ ಅಂತ ಕೂತಿಧಾನೆ ! ! !

ನರಸಿಂಹಯ್ಯ : ಇದೇನ್ ಅನ್ಯಾಯ ಸಾರ್?...ಧರ್ಮವೆ ?...ನಾನೂ ನನ್ನ ಹೆಂಡತೀನೂ ನಿಮ್ಮ ಮನೇಗೆ ಬಂದು ಮದುವೆ ಖರ್ಚಿನ ವಿಷಯ ಎತ್ತಿದಾಗ...ಮನೆ mortgage ವಿಷಯ ೨೬೦೦ ರೂಪಾಯಿ ನನ್ನ ಹತ್ತರ ಹೇಳದೇನೂ...ನಿಮಗಿರೋ ೩೬೦೦ ರೂಪಾಯಿ ಸಾಲ ನನ್ನ ಪತ್ನೀಗೆ ನಿಮ್ಮಾಕೆ ಹೇಳದೇನೂ ಇದ್ರೂನೂವೆ...ಏನೋ ದೊಡ್ಡ ಸ್ಥಳ ದೊಡ್ಡ ಕುಟುಂಬ ಅಂತ......ನಾನು ಸತ್ಯವಾಗಿ ಹೇಳ್ತೀನೆ......ವರದಕ್ಷಿಣೆ ಬಾಬ್‌ತು ೨೦೦೦ ಖರ್ಚು ೧೦೦೦ ಅಂತ ೩೦೦೦ ರೂಪಾಯಿ ಒಟ್ಟಾಗಿ...ಮನೇಲಿ ಅಕ್ಕಿ ಇಲ್ಲದೆ ಅನ್ನ...ರವೆ ಇಲ್ಲದೆ ಗಂಜಿ. ಹೀಗೆ ಸಂಸಾರಮಾಡಿ, ಸ್ಕೂಲಿಗೆ ಹೋಗೋ ನಮ್ಮ ಹುಡುಗನಿಗೂ ಅರ್ಧ ಹೊಟ್ಟೇಗೆ ಹಾಕಿ ಜೆಳೆಸಿ...ಕಾಸಿಗ್ ಕಾಸೂ ಅಂತ ಕೂಡಿಟ್ಟ ೩೦೦೦ ರೂಪಾಯಿನ, ನೀವು ಕೇಳೋ ೬೦೦೦ಕ್ಕೆ ನನ್ನ Insurance policyನೂ mortgage ಮಾಡಿ. ತಂದದ್ದಾಯಿತೂ. ಇನ್ನು ಈಗ ೧೧೦೦೦ ರೂಪಾಯಿ ಕೈಲಿಡೂ ಅಂದ್ರೆ ಎಲ್ಲಿಂದ ತರೋದು ? (ಮೂಲೆಯಲ್ಲೊಂದು ಚಿಕ್ಕ

ಮೇಜಿನ ಮೇಲಿರುವ ಕೈಪೆಟ್ಟಿಗೆಯೊಂದನ್ನು ಸೂಚಿಸಿ) ನಿಮ್ಮ ಮನೆ title deedsಉ. ನೀವು ಈ ವೂರಲ್ಲಿ ಕೊಟ್ಟಿರೋ promissory ನೋಟುಗಳು, ಒಂದು ಬಾಕಿ ಇಲ್ಲದೆ ಬಿಡಿಸ್ಕೊಂಡು, ಮುಹೂರ್ತವಾಗುತ್ಲೂನೂವೆ ನಿಮ್ಮ ಕೈಲೆ ಕೊಡಬೇಕೂ ಅಂತಿದ್ದೆ ! ಈಗ ನಾನ್ ಸತ್ರೆ ನನ್ನ insurance ದುಡ್ಡು ಸಂದೇಹ ನನ್ನ ಹೆಂಡತಿ ಮಗನಿಗೆ ! ! !...ಇನ್ನೀ ೧೧,೦೦೦ ರೂಪಾಯಿ ಎಲ್ಲಿಂದ ತರೋದು ?

ರಾಮಣ್ಣ : ಹೌದು dear boy...ಒಂದು ಹೇಳೋದ್ ಮರ್ತ್ಬಿಟ್ಟೆ : ನನ್ನ wifeಉ...ನಿನಗ್ಗೊತ್ತಿಲ್ವೇನೊ...ಬಲು determined characterಉ ! ಅವಳೂ ಅವನ್ ಕಡೆ ಸೇರ್ಕೊಂಬಿಟ್ಳು............"ಈ ದುಡ್ಡನ್ನ ಪಾಪ ಎಲ್ಲಿಂದ ಸಂಪಾದ್ಸೀಯಾ" ಅಂದದ್ದಕ್ಕೆ... ಅವಳು..."ಸಂಪಾದಿಸೋದೇನಿಧೆ" ?...ಕೋಪಿಸ್ಕೋಬೇಡ, ಅವಳು ಹೇಳಿದ್ದು ! "ಅವರು ವಾಸ ಮಾಡೋ ಮನೆ ಹನ್ನೊಂದಕ್ಕಿಂತ ಜಾಸ್ತಿ ಬಾಳತ್ತೆ ; ಅದು ಬರಕೊಡಲಿ ; ಅದನ್ನ ದುಡ್ಡಾಗಿ ಮಾಡೋ ಯೋಚನೆ ಆಮೇಲೆ ಮಾಡೋಣ" ಅಂತ...;

[ಇದನ್ನೆಲ್ಲ ಕೇಳುತ್ತ ತನ್ನ ಮನಸ್ಸನ್ನು ಆವರಿಸುತ್ತಿರುವ ಶೋಕಾಗ್ನಿಯನ್ನು ಅಡಗಿಸಲಾರದೆ, ನರಸಿಂಹಯ್ಯನು, ಕಣ್ಣುಗಳು ಕೆಂಪಾಗಿ ಕಣ್ಣೀರು ಸುರಿಸಲಾರಂಭಿಸುವನು]

ರಾಮಣ್ಣ : ಅಳಬೇಡ dear boy !...ಇದೂ ಕೂಡ ಹೇಳ್ದೆ. ನೀನು ಬಹಳ ದುಃಖ ಪಡ್ತೀಯಾ ಅಂತ......ಅದಕ್ಕೂ ಅವಳು ಹೇಳಿದ್ಲು "ದುಃಖ ಇರುತ್ತೆ ! ಆದ್ರೆ ಸಮಯ ಅಂದ್ರೆ...ಸುಖ ದುಃಖ ನೋಡೋಕಾಗುತ್ತೆಯೇ...ದುಃಖಾನ ಅಡಗಿಸ್ಕೊಂಡು ಹತ್ತು ಜನ ಹಿರಿಯರು ಕಾದಿರೋವಾಗ...ಹ್ಯಾಗೆ ನಡೀಬೇಕೋ ಹಾಗೆ"..

[ಇದನ್ನು ಕೇಳುತ್ತಲೆ ಕ್ರಮೇಣ ನರಸಿಂಹಯ್ಯನು ಕೆಳದುಟಿಯನ್ನು ಕಚ್ಚಿಕೊಂಡು ಎರಡು ಮುಷ್ಟಿಯನ್ನೂ ಬಿಗಿಹಿಡಿದು ಅಶ್ರುಧಾರೆಯನ್ನು ನಿಲ್ಲಿಸುವನು. ಶೋಕವು ತೊಲಗಿ, ಕ್ರಮೇಣ ಕಣ್ಣುಗಳಲ್ಲಿ ಹುಚ್ಚು ಹಿಡಿದವನ ರೌದ್ರವು ಹೊಳೆಯುವುದು]

ನರಸಿಂಹಯ್ಯ : (ದಪ್ಪನಾದ ಧ್ವನಿಯಿಂದ) **ಹಾಗಾದ್ರೆ ಈಗ ಹನ್ನೊಂದು ಸಾವಿರ ರೂಪಾಯಿ ಇಟ್ಟುಬಿಡಬೇಕು?...ಇಲ್ಲಿ ನಾನೂ ನನ್ನ ಹೆಂಡತೀನೂ ನನ್ನ ಮಕ್ಕಳೂ ಕಾಡ ಪಾಲಾದರೂ ಸರಿಯೆ....ಈ ಮನೇನ ನಿಮ್ಮ ಮಗನಿಗೆ ಬರಕೊಟ್ಬಿಡಬೇಕು ; ಇದೆ ಅಲ್ಲವೇ....ನೀವು ಕೇಳೋದು....??**

ರಾಮಣ್ಣ : (ನರಸಿಂಹಯ್ಯನ ಮುಖದಲ್ಲಿಯೂ ಧ್ವನಿಯಲ್ಲಿಯೂ ದೃಷ್ಟಿಯಲ್ಲಿಯೂ ಥಟ್ಟನೆ ಆದ ಬದಲಾವಣೆಯನ್ನು ಗಮನಿಸಿ ಅಲ್ಪಸ್ವಲ್ಪ ಅಂಜಿ)...ಅ......ಅ......ಅಷ್ಟು serious ಆಗಿ ತಕ್ಕೋಬೇಡ, dear boy ! ಅದು ನನ್ನ wifeಉ, ಅಲ್ಲ ನಮ್ಮ ಹುಡುಗ... ಹೇಳಿದ್ದು !.........

ನರಸಿಂಹಯ್ಯ : (ಒಂದು ಹೆಜ್ಜೆ ಮುಂದೆ ಬಂದು ಬಿರುಸಾಗಿ) ನಿಮ್ಮ ಹುಡುಗಾ ಇರ್ಲಿ ; ನಿಮ್ಮ ಹೆಂಡತಿ ಹೀಗ್ ನೀವು ಕೇಳುತ್ಲೂ ಅಳತೇನೇಂತ ಆಕೇಗೆ ಗೊತ್ತೂ ಅಂತ ಅಂದ್ಲೂ, ಅಂದ್ರಿ ಅಲ್ವೆ ?

ರಾಮಣ್ಣ : (ಮತ್ತಷ್ಟು ಅಂಜಿ) ಹೌದು......but...!

ನರಸಿಂಹಯ್ಯ : ಅಲ್ಲದೆ,......ಇಷ್ಟು ಜನ ಸೇರಿರೋವಾಗ ಮಾನ ಕಳಕೋಳ್ಳೋಕಿಂತ... ಮನೆ ಹೋದರೂ ಚಿಂತೆ ಇಲ್ಲ ಅಂತ...ಮನೇನ ಬರದೇ ಕೊಟ್‌ಬಿಡ್ತೇನೆ ಅಂಬೋದೂ ಆಕೇಗೆ ಗೊತ್ತೂ......ಅಂದ್ರಿ ಅಲ್ಲವೆ.?

ರಾಮಣ್ಣ :......ಹೌದು !......but ! ಅವ್ಳ......

ನರಸಿಂಹಯ್ಯ : **ಸುಳ್ಳು! ! !....ನಂಬಬೇಡಿ**...ಅವಳು ಗಟ್ಟಿಗಳೂ ಅಂತ ಒಪ್ಕೊಂಡೆ... ಆದ್ರೆ ಅವಳ ಗಟ್ಟಿಗತನಕ್ಕೊಂದು ಮಿತಿಉಂಟು. ...ಮುಹೂರ್ತಕ್ಕೆ ಅರ್ಧ ಘಂಟೆ ಮುಂಚೆ ಮನೇಲಿ ನೆರೆದಿರೋ ನೂರಾರು ಜನರೆದುರಿಗೆ ಅವಮಾನ ಆಗತ್ತೇಂತ ಬೆದರಿ, ನೀವು ಹೇಳಿದ ಹಾಗೆ ನಡೀಲೇಬೇಕಾಗಿ ಬಂದು ನನ್ನ ಜುಟ್ಟು ನಿಮ್ಮ ಕೈಲಿ ಸಿಕ್ಕಿದ ಹಾಗೇನೇ ಅಂತ ಹೇಳಿದ್ದೇ... ನೋಡಿ, ಗಟ್ಟಿಗತನ! (ಬಿರುಸಾಗಿ) **ಆದ್ರೆ ಇನ್ನೊಂದೂ ದಿಟ! ಅದೂ, ನಿನ್ನ ಬುದ್ಧೀಗೂ ನಿನ್ನ ಹೆಂಡತೀ ಬುದ್ಧೀಗೂ ಹೊಳೀಲಿಲ್ಲ. ಈ ಊರಿನಲ್ಲಿ, ಒಬ್ಬ ಮಾರನಾಡಿ...ಒಬ್ಬ ಸಾವ್ಕಾರ ಬಾಕಿ ಇಲ್ದೆ... ಸರ್ವಿಸ್‌ನಲ್ಲಿ ಇರೋ ನೀನು ಬಟ್ವಾಡೆ ಮಾಡಿದ ನಿನ್ನ promissory notesನೂ, ನಿನ್ನ ಬಂಗಲೇ** partial **mortgage ಮಾಡಿದ್‌ನೂ ಬಿಡಿಸಿಕೊಂಡು, ನಿನ್ನ ಮನೇ title deedsಉ ನನ್ನ ಕೈಲಿ ಇರೋದ್ನೂ, ನಾನು ಲಾಯರಿ ಅಂಬೋದ್ನೂ ನೀವಿಬ್ರೂನೂ ಮರೆತುಬಿಟ್ಟರಿ!** ಈ ಹೊತ್ತು, ಈಗ, ಹತ್ತು-ನಲವತ್ತು ಜನರೆದುರಿಗೆ ನೀನು ಅವಮಾನ ಮಾಡಿದರೂಸೂವೆ ನುಂಗ್‌ಕೊಂಡು, ನಿನ್‌ಕೈಲಿ ಆರುಸಾವಿರ ರೂಪಾಯಿ ಉದುರಿಸ್ಕೊ...ಇಲ್ಲಾ, ನಿನ್ನ ಬಂಗಲೆ ಹರಾಜ್ ಮಾಡ್ಸ್ಯೋ...ಇಲ್ಲಿ ನೆರೆದಿರೋ ಒಬ್ಬೊಬ್ರಿಗೆ ಬದಲಾಗಿ publicಆಗಿ ಸಾವಿರ ಸಾವಿರ ಜನದ ಎದುರ್ಗೆ, ನಿನ್‌ಎಳೆದು ಕೋರ್ಟಿಗೆ, ...ನಿನ್ನ employ ಮಾಡಿರೋ authoritiesಗೂ ನಿನ್ ನಡತೆ ತಿಳಿಯೋಹಾಗೆ ಮಾಡೋ ಶಕ್ತಿನೂ ಧೈರ್ಯಾನೂ ನನಗಿದೆ...ಅಂಬೋದು ನಿಮ್ಮಿಬ್ಬರಿಗೂ ಗೊತ್ತಿಲ್ಲ. ನಿನ್ನ ಅಪಾಥಭೂತಿತನ ನನಗೇನೂ ಗೊತ್ತಿಲ್ಲಾ ಅಂತ ತಿಳುಕೊಂಡ್ಯಾ? **S c o u n d r e L ?!**

ರಾಮಣ್ಣ : Don't be silly! Think of my position !! (ಬಿಮ್ಮೆಟ್ಟುವನು)

ನರಸಿಂಹಯ್ಯ : (ಬುದ್ಧಿಯೆಲ್ಲವೂ ಗಾಳಿಯ ಪಾಲಾಗಿ ಘರ್ಜಿಸುತ್ತಾ) **ನಿನ್ನ position**ಉ (ಕೈಯನ್ನು ಬೀಸಿ "**ಫಟಾರ್**" ಎಂದು ರಾಮಣ್ಣನ ಕೆನ್ನೆಗೆ ಬಡಿದು) ಕಿಲ್ರ್ಸ್! ನಿನ್ನ **position** ಗೊತ್ತಾಗುತ್ತೆ........ಅಲ್ಲಿ ನೆರೆದಿರೋರು ಬರಲಿ, ನೋಡ್ಲಿ ನಿನ್ನ ಅವಸ್ಥೆ...ನಿನ್ನ **position**ಉ**!!** (ದವಡೆಗೆ ಇನ್ನೊಂದು ಬಾರಿಸಿ ರಾಮಣ್ಣನು ಸಹಾಯಕ್ಕೆ ಜನರನ್ನು ಕರೆಯಲು ನಾಚಿಕೊಂಡು ಬೀದಿಬಾಗಿಲ ಕಡೆ ಓಡತೊಡಗಲು, ನರಸಿಂಹಯ್ಯನು ಅವನನ್ನು ಕಾಲಿಂದ ಒದ್ದು ಕೆಡಹಿ ಬಾಗಿಲ ಹತ್ತಿರಿದ್ದ ರಾಮಣ್ಣನ ಪಾಪಾಸಿನಲ್ಲಿಯೇ ಒಂದನ್ನು ಹಿಡಿದುಕೊಂಡು "ಪಟಪಟ"ನೆ ರಾಮಣ್ಣನ ತಲೆಯ ಮೇಲೆ ಬಡಿಯುತ್ತಾ...) **ಇದು ಗೊತ್ತಿಲ್ಲ ನಿಮ್ಮ್ ಮನೇಲಿ, ಹೀಗಾಗುತ್ತೆ ಅಂತ...!** ನಿಮ್ಮನೇಲಿ ಹೋಗಿ, ಹೇಳು ನಿನ್ನ ಹೆಂಡತೀಗೆ! ನೀನ್ ಹೇಳಿದ್ಹಾಗೇ ಮನುಷ್ಯ ಹೆದರಿ, ಕುಗ್ಗಿ ಕಣ್ಣಲ್ಲಿ ಧಾರೆ ಧಾರೆ ನೀರು ಸುರಿಸ್‌ತಾ ಗಂಡಸ್‌ತನಾನ್ನ ಮರೆತೂ ಗೋಳಾಡ್‌ದಾ; ಆದರೆ ಹೆದರಿಕೇಗೂ ಮಿತಿ ಇಧೇ; **ಆ ಮಿತಿ ಮೀರಿ,** ನನ್ನ ಜೋಡು ತಕ್ಕೊಂಡು ಬಾರಿಸಿ ಓಡಿಸಿದಾ ಅಂತಾ ಹೇಳೋ... **ಈಗ ನಗೊ...ಈಗ ಮಾಡೊ ನಿನ್ನ ಜೋಕುಗಳೂ...** (ಒಂದೊಂದು ಮಾತನ್ನೂ ಪಾಪಾಸಿನಿಂದ ಹೊಡೆದು ಹೊಡೆದು ತಿದ್ದುತ್ತಾ) ದೊಡ್ಡ ಮನುಷ್ಯನೋ ನೀನು? **Position** ಇದೆಯೋ ನಿನಗೇ...?

ರಾಮಣ್ಣ : (ಪೆಟ್ಟು ತಡೆಯಲಾರದೆ)...ದಮ್ಮಯ್ಯಾ for pity's sake...! (ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸುವನು)

ನರಸಿಂಹಯ್ಯ : (ಮತ್ತೆ ತಿರುಗಿ ಬಡಿಯುತ್ತಾ) Pity ! ಪಾಪೀ! ನಾನು ಗೋಳಾಡ್ತಿದ್ದಾಗ ನಿನಗೆ pity ಇತ್ತೇ? ನಿನಗೆ ಇಲ್ಲದ pity ನನಗೆಲ್ಲಿ ಬರಬೇಕೋ? (ಇನ್ನೊಂದು ಪೆಟ್ಟನ್ನು ಹಾಕುತ್ತಾ) ತೋರಿಸು! ಬ್ರಾಹ್ಮಣನಂತೆ!...ದೊಡ್ಡ ಮನುಷ್ಯ!... (ದೊಡ್ಡ ಧ್ವನಿಯಿಂದ) **ಕಡು ಪಾಪಿಗಳು! ಕಟುಕರಿಗೂ ಕೂಡ ಇಷ್ಟು ಅನ್ಯಾಯ ತೋಚೋದಿಲ್ಲ!** ....ಇನ್ನು ಎದ್ದು ನನ್ನ ತಿರುಗಿ ಹೊಡೆಯೋ ಗಂಡಸ್‌ತನಾ ಕೂಡ ನಿನಗಿಲ್ಲ! ಅಸಹ್ಯ ಆಗುತ್ತೆ ನಿನ್ನ ನೋಡೋದು! (ಕಾಲಿಂದ ಒದ್ದು) ಎದ್ದೇಳೋ! ಎದ್ದೂ, ಗಂಡಸಾದ್ರೆ, police stationಗೆ ನೆಟ್ಟಗೆ ಹೋಗಿ ನನ್ನ ಮೇಲೆ assaultಗೆ ಒಂದು complaint ಕೊಡು! Public Courtನಲ್ಲಿ, ನೀನು ಮಾಡಿದ

black-mailingಗೆ ನಿನ್ನ ನಾನು ಜೂತೀಲಿ ಹೊಡೆದದ್ದಕ್ಕೆ. ಇಲ್ಲಿ provocationಉ ಇತ್ತೋ ಅಲ್ಲವೋ, ಅಲ್ಲಿ ತೀರ್ಮಾನವಾಗಲಿ!

[ರಾಮಣ್ಣನು ಥಟ್ಟನೆ ಬಾಗಿಲ ಹೊಸಿಲನ್ನು ಹಿಡಿದುಕೊಂಡು ನಿಂತು ಹೊರಟು ಹೋಗಲು ತಿರುಗುವಷ್ಟರಲ್ಲಿ] ಹೋಗಬೇಡ ...... ಇನ್ನಿದಲ್ಲ್‌ದೆ ನಿನ್ನ ೩,೩೦೦ ರೂಪಾಯಿಗೆ ನಾಳೇನೆ, ಈ ತಿಂಗಳ ಕೊನೇಲಿ, ನಿನ್ನ ಮನೇನ ಹರಾಜ್‌ಮಾಡ್ಸಿ ನಿನ್ನೂ ನಿನ್ನ ಹಾಳು ಕುಟುಂಬಾನೂ ಈ ಊರಿಂದ ಬಿಡ್ಸೋಕೆ ಬೇಕಾದ ಕ್ರಮ ಈಗಿಂದ ಷುರು ಮಾಡ್‌ತೇನೆ, ತಿಳಿದಿರ್ಲಿ! (ಕಾಲಿಂದ ಒಂದು ಒದೆ ಒದ್ದು) ತಗೊಂಡು ಹೋಗು ನಿನ್ನ ಹಾಳು ಪಾಪಾಸ್ನ!!!

(ಕೈಯಲ್ಲಿದ್ದ ಜೋಡನ್ನು ನಿಷ್ಕ್ರಮಿಸಿದ ರಾಮಣ್ಣನ ಕಡೆ ಬೀಸುವನು.)

[ರಾಮಣ್ಣನು ಕಣ್ಮರೆಯಾಗುತ್ತಲೆ, ನರಸಿಂಹಯ್ಯನು ರೋಷಾವೇಶದಲ್ಲಿ ತನ್ನನ್ನೇ ತಾನರಿಯದೆ ಮಾಡಿದುದೆಲ್ಲವೂ ಥಟ್ಟನೆ ಹೊಳೆದು...ಕೈ ಮೈ ನಡುಗುತ್ತಾ ದಿಗ್ಭ್ರಮಿತನಾಗಿ ಮಿಟ್ಟನಂತೆ ನಿಲ್ಲುವನು. ಕ್ರಮೇಣ ತನ್ನ ನಡತೆಯು ಚೆನ್ನಾಗಿ ಮನಸ್ಸಿಗೆ ಬಂದು, ಕೊನೆಯಲ್ಲಿ ಅತಿಥಿಗಳೆಲ್ಲರೂ ಸಂಭಾಷಿಸುತ್ತಿರುವ ಶಬ್ದವನ್ನು ಕೇಳಿ, ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳುವನು. ಕ್ರಮೇಣ ದುಃಖವನ್ನು ಅಡಗಿಸಿಕೊಂಡು...ತನ್ನ ಕಣ್ಣುಗಳನ್ನು ಒರೆಸಿಕೊಂಡು "ಯಾರೋ ಅಲ್ಲಿ? ಶಂಕರಾ"! ಎನ್ನುವನು.]

ಪುರೋಹಿತರು : (ಒಳಗಿನಿಂದ ಪ್ರವೇಶಿಸಿ) ಶಂಕರಪ್ಪನೋರು ಒಳಗೆ ಫಲಾರದ ಗಲಾಟೇಲಿಧಾರೆ, ಸ್ವಾಮಿ!........... ಇದೇನು ಹೀಗೆ ನಿಂತಿಧೀರಾ?...ಏನು ಅಲೌಕೀಕ ಅಂದ್ರೂ... ಮುಹೂರ್ತ...?

ನರಸಿಂಹಯ್ಯ : ಮುಹೂರ್ತ ಕಾಡುಪಾಲು ಶಾಸ್ತ್ರಿಗಳೆ?...ಕೇಳೀ! ಈತ. ನೋಡಿ! ಮನುಷ್ಯ...ಬ್ರಾಹ್ಮಣ...ಅಲ್ದೆ ಒಂದು ತಾಲ್ಲೂಕ್ ಜನಗಳ್ನೆಲ್ಲಾ...ನಮ್ಮನ್ನಾಳೋ ಮಹಾಸ್ವಾಮಿಗಳು ಧ್ವಜಪಟದ ಮೇಲೆ ಬರ್‌ಕೊಂಡಿರೋ "ಸತ್ಯಮೇವೋದ್ಧರಾಮ್ಯಹಂ" ಅಂಬೋ ಬಿರುದನ್ನು ಕಾಪಾಡಿ ರಕ್ಷಿಸೋಕೆ ಅಂತ ಇರೋ ಹುದ್ದೇದಾರ! ಇವರ ಮನೆ ಸಂಬಂಧ ಬೆಳೆಸೋ ಹುಚ್ಚು ಆಶೇಲಿ, ಸದ್ಬ್ರಾಹ್ಮಣ, ಸಭ್ಯನಾದ ಒಬ್ಬ ಗೃಹಸ್ಥ, ಚಿಕ್ಕ ಪದವೀಲಿಧಾನೆ ಅಂತ......ರಂಗಣ್ಣೋರ ಮನೇಲಿ...ಸಿಕ್ಕಿದವರನ್ನ ಬಿಟ್ಟುಬಿಟ್ಟೆ...

"ಯೋಧ್ರುವಾಣಿ ಪರಿತ್ಯಜ್ಯ ಅಧೃವಂ ಪರಿಷೇವತೇ ।
ಧೃವಾಣಿ ತಸ್ಯ ನಶ್ಯಂತಿ ಅಧೃವಂ ನಷ್ಟಮೇವಚ ॥"

ಅಂಬೋ ನೀತೀನ ನನ್ನ ಎದೇನ ಬಿರಿದು ನಾಟಿದ, ದೇವರು, ಈ ಹೊತ್ತು!

ಪುರೋಹಿತ : ಹೌದು!......ರಂಗಣ್ಣೋರು ಮಹನೀಯರು. ಮಗ ಬುದ್ಧಿಶಾಲಿ... ಅಲ್ಲದೆ ಸಾಧು...

ನರಸಿಂಹಯ್ಯ : (ಕಣ್ಣುಗಳು ಹೊಳೆಯುತ್ತಾ) ಶಾಸ್ತ್ರಿಗಳೇ! ಈ ಮುಹೂರ್ತ ತಪ್ಪಿತೂ... ಆದರೂ ನನಗೊಂದು ಯೋಚನೆ ಹತ್ತಿದೆ...ನನ್ನ ಮೂಢ ಬುದ್ಧಿಗೆ ಆಗ್ರಹಪಟ್ಟು ಇಷ್ಟು ಕಾಡಿಸಿದ. ಪರಮಾತ್ಮ!...ಆದ್ರೂ ನಾನು ಪಟ್ಟ ಅವಸ್ಥೇನ ಕನಿಕರಿಸದೆ ಇರಲಾರ!......ಈ ಲಗ್ನ ತಪ್ಪಿನ್ರೂ ತಕ್ಕಮಟ್ಟಿಗೆ ಅಶುಭವಾಗಿಲ್ಲದ ಇನ್ನೊಂದು ಲಗ್ನ ಇವತ್ತೇ...ಸಾಧ್ಯವೆ...?

ಪುರೋಹಿತ : (ಮೂಲೆಯಲ್ಲಿ ಬಿಚ್ಚಿಬಿದ್ದಿರುವ ರಾಮಣ್ಣನ ಜರೀರುಮಾಲನ್ನು ಗಮನಿಸಿ. ಆದ ವಿಚಾರಗಳನ್ನು ಸ್ವಲ್ಪ ಹೆಚ್ಚು ಕಮ್ಮಿ ಸರಿಯಾಗಿ ಊಹಿಸಿ)...ದೈವವಶಾತ್. ಸ್ವಾಮಿ! ಎರಡೂವರೆ ಘಂಟೆಗೆ ಇನ್ನೊಂದು ಲಗ್ನ ಇಧೆ...!

ನರಸಿಂಹಯ್ಯ : ಬುದ್ಧಿ ಭ್ರಮಿತನಾಗಿರುವ ನನಗೆ ಈ ಯೋಚನೆ ದೇವರೇ ಕೊಟ್ಟಿದ್ದು!! ...ಆ ಕೋಣೇಗೆ ಹೋಗಿ ಅಲ್ಲೇ ಇದ್ಕೊಂಡು ಶಂಕರನ ಕಳ್ಸಿ. (ಪುರೋಹಿತನ ನಿಷ್ಕ್ರಮಣ)... (ಹಿಂದಿನ ಬಾಗಿಲನ್ನು ಸಮೀಪಿಸಿ) ಇ ಧೀ ಯಾ...?

ಪಾರ್ವತಮ್ಮ : (ಪ್ರವೇಶಿಸಿ) ಇದೇನ್ ಅನ್ಯಾಯ ಅಂದ್ರೆ!...ಬಂದಿರೋ ಹೆಂಗಸ್ರೆಲ್ಲ ಗುಸುಗುಟ್ಕೊಳ್ತಿಧಾರೆ...ಯಾಕೆ ತಡ...?

ನರಸಿಂಹಯ್ಯ : (ಹಲ್ಲು ಕಚ್ಚಿ) ಇಲ್ಲಿ ಬಾ... ಇನ್ನಾ **ರಾಮಣ್ಣನ ಮನೆ ಮಾತೆತ್ತಿದ್ಕೋ...** .. **ಕೊಂದು ಬಿಡತೇನೆ** ನಿನ್ನ... ಆ ಪಾಪೀ ಬಂದು, "ಈ ೬೦೦೦ ರೂಪಾಯೂ ಅಲ್ದೆ ...ಅವನ ಮಗ ವಿಲಾಯಿತೀಗೆ ಹೋಗೋಕೆ ೧೧೦೦೦ ರೂಪಾಯಿ ಎಣಿಸಿಬಿಡಬೇಕು!... **ಈಗ ... ಇಲ್ಲಿ** ಅದು ಬರೋಕೆ ದಾರಿ ಈ ಮನೇನ ಈಕ್ಷಣ ಬರಕೊಟ್ರೇನೆ ಬರೋದು ಮದ್ವೇಗೆ," ಅಂತಂದ!! (ರೌದ್ರದಿಂದ) ಅರ್ಥವಾಯಿತೇನೆ ನಿನ್ನ ದೊಡ್ಡ ಮನುಷ್ಯತೆ!.........ನೀನು ಬೊಗುಳ್ತಿದ್ದ ದೊಪ್ಪ ರಕ್ತದ ಯೋಗ್ಯತೆ! ನೀನು ಕಿರ್ಲ್ತಿದ್ದೆ ನೋಡು, ಒಡವೆಗಳು ಅಂತ?...ನೆನ್ನೆ ಹೊರ ಬಿತ್ತು ಅದರ ಗುಟ್ಟು ಕೋರ್ಟಿನಲ್ಲಿ...ಕಳವು ಸಿಕ್ಕಿದ ಮಾಲು ಬಂದ ದಿನ, ಖಜಾನೆ ಮುಚ್ಚಿತ್ತು ಅಂತ ಒಂದು ರಾತ್ರಿ ಅವರ ಮನೇಲಿತ್ತು. ಅದನ್ನೇ ನಿನಿಗೆ ತೋರ್ಸಿದ್ದು, ಅವರ ಅಜ್ಜಿ ಆಸ್ತಿ ಅಂತ... **ಇಲ್ಲಿ ಬಾ!** (ಬೀದಿ ಬಾಗಿಲ ಕಡೆ ಹೊರಡುವನು)

ಪಾರ್ವತಮ್ಮ : ಏನಿದೂ ಅಂದ್ರೆ...ನೀವು ಹುಚ್ಚರ ಹಾಗೆ...?...

ನರಸಿಂಹಯ್ಯ : (ಘರ್ಜಿಸುತ್ತಾ) **ಮುಚ್ಚು ಬಾಯಿ** ...ನಿನ್ನ ಮಾತು ನಿನ್ನ ಜಾಣತನ ನಿನ್ನ ಧೋರಣೆ ನಿನ್ನ ಬಿಂಕ ನಿನ್ನ ಬಡಾಯಿ ಒಂದು ಮೂಲೇಗೆ ಎಸ್ದು...ಆ ಕೋಣೇಲಿ ನೆರೆದಿರೋ ನಮ್ಮ ನೆಂಟರೂ, ಈ ಊರಿನ ದೊಡ್ಡವರೂ, ಇವರೆದುರಿಗೆ ನನ್ನ ಮಾನ ಹೋಗಬಾರದೂ ಅಂತಾ ನಿನಗೇನಾದ್ರೂ ಮನಸ್ಸಿನಲ್ಲಿತ್ತೊ...ನಾನ್ ಹೇಳೋದನ್ನ ಚಾಚೂ ಬಿಡದೆ ಕೇಳಿ ನಡಕೊಳ್ತೀಯಾ,...ಇಲ್ಲಾ...??

(ಎಂದು ಮುಷ್ಟಿಗಳನ್ನು ಬಿಗಿದು ಹತ್ತಿರ ಬರುವನು).

ಪಾರ್ವತಮ್ಮ : (ಗಾಬರಿಯಾಗಿ) ಏನದೂ, ಅಂದ್ರೆ...?

ನರಸಿಂಹಯ್ಯ : ಶಂಕರ ಬರ್ತ್ತಾನೆ! **ಕಾರಿನಲ್ಲಿ** ಹತ್ಕೊಂಡು ಹೋಗಿ ರಂಗಣ್ಣೋರ ಮನೇಗೆ, ಅವರ ಮನೆಯಾಕೆ ಕಾಲಿಗೆ ಬಿದ್ದೂ,......"ನನ್ನ ಗಂಡನಿಗೆ ಮಾನದಾನ ಪ್ರಾಣದಾನ ಎರಡೂನೂ ನಿಮ್ಮಿಂದಲೇ ಆಗಬೇಕೂ" ಅಂತ ಹೇಳಿ ಅವರನ್ನ ಹ್ಯಾಗಾದ್ರೂ ಒಡಂಬಡಿಸಿ ಕರಕೊಂಬರ್ತೀಯಾ......ಇಲ್ಲಾ,...ನಿನ್ನ, ಹಾಳು ಬೆಂಕೀಗೆ ಹಾಕೋ ದೊಡ್ಡ ಮನುಷ್ಯರ ಧೋರಣೇಲಿ ಅವರ ಮನೆ ತಂಗಳುವಾಸ್ನೇಗೆ ಅಸಹ್ಯಪಟ್ಟು, ಹಾಗೇ ನಿನ್ನ ಹಾಳು ತೌರ್ಮನೇಗೆ ಹೋಗಿ ಸೇರ್ಕೋತೀಯಾ? ಈಗ್ಲೇ ಹೇಳಿಬಿಡು!!

ಪಾರ್ವತಮ್ಮ : (ನಡುಗುತ್ತ) ಆಗ್ಲೀ ಅಂದ್ರೆ!

ನರಸಿಂಹಯ್ಯ : (ಹಲ್ಲು ಕಚ್ಚಿ) ನಿನ್ನ ವಿದ್ಯೆಗಳೇನಾದ್ರೂ...?

ಪಾರ್ವತಮ್ಮ : (ನಡುಗುತ್ತಾ ಓಮ್ಮೆಟ್ಟಿ) ಇಲ್ಲಾ...ಆಗ್ಲಿ...ಅಂದ್ರೆ!

ಶಂಕರ : (ಪ್ರವೇಶಿಸಿ) ಏನಪ್ಪ?

ನರಸಿಂಹಯ್ಯ : ಕಾರುಗಳಿವೆ ಹೊರಗೆ. ಒಂದರಲ್ಲಿ ನೀನೂ ನಿಮ್ಮ ಅಮ್ಮನೂ ಹತ್ತಿಕೊಂಡು, ಇನ್ನೊಂದು ಜೊತೇಲೇ ಬರ್ಲಿ. ರಂಗಣ್ಣೋರ ಮನೇಗೆ ಹೋಗು. ನಿಮ್ಮಮ್ಮ

ಇಳಿದು ಒಳಗ್ಹೋಗ್ತಾಳೆ; ಜಗಲಿಯಿಂದ ರಂಗಣ್ಣೋರ್ನ 'ನಾನು ಬಹಳ ಬೇಡ್ಕೊಂಡು ಕೇಳಿ ಕೊಂಡೆ' ಅಂತ ಹೇಳಿ ಒಂದು ಕಾರು ಅಲ್ಲೇ ಬಿಟ್ಟು ಇನ್ನೊಂದು ಕಾರಿನಲ್ಲಿ, ಇನ್ನೈದು ನಿಮಿಷ ದಲ್ಲಿ, ಅವರನ್ನ ಕರಕೊಂಡು ಬಂದು ಸೇರಬೇಕು. ಅರ್ಥವೇ ?

ಶಂಕರ : ಹೂಂ ಅಪ್ಪ !

[ಪಾರ್ವತಮ್ಮನೂ ಶಂಕರನೂ ಹೊರಬಾಗಿಲಿನಿಂದ ನಿಷ್ಕ್ರಮಣ]

ನರಸಿಂಹಯ್ಯ : (ಪಡಸಾಲೆಯ ಸುತ್ತಲೂ ದೃಷ್ಟಿಯನ್ನು ಬೀರಿ ಕೊನೆಗೆ ಬಿಚ್ಚಿಬಿದ್ದಿರುವ ರಾಮಣ್ಣನ ಜರತಾರಿ ರುಮಾಲನ್ನು ನೋಡಿ ಬೀದಿ ಬಾಗಿಲನ್ನು ಸಮೀಪಿಸಿ) ಯಾರೋ ಅಲ್ಲಿ ?

ಸೇವಕ : (ಪ್ರವೇಶಿಸಿ)...ಬುದ್ಧೀ ! ?

ನರಸಿಂಹಯ್ಯ : ತಾಲ್ಲೂಕ್ ಕಚೇರಿ ಗೊತ್ತಿಲ್ವೇ...?

ಸೇವಕ : ಇಲ್ದೇ ಏನು ಬುದ್ಧೀ...!

ನರಸಿಂಹಯ್ಯ : ಎಲ್ಲರಿಗೂ ಊಟ ಆಗಿ ಎಲೆ ಅಡಿಕೆ ಹಾಕ್ಕೊಂಡ್ ಮೇಲೆ...ಅಲ್ಲಿ ಬಿದ್ದಿರೋ ರುಮಾಲು ಇದೆ ನೋಡು. ಅದನ್ನ ಅಮಲ್ದಾರ್ ಕೋರ್ಟಿಗೆ ತಗೊಂಡ್ಹೋಗಿ, ಹೆಡ್‌ಮುನ್ಷಿ ಕೃಷ್ಣರಾಯರ ಹತ್ತಿರ, 'ಮದುವೇಗೆ ಬಂದಿದ್ರು ಅಮಲ್ದಾರ್‌ರ್‍ರೂ....ಹೋಗೋ ಅವಸರದಲ್ಲಿ ರುಮಾಲು ಬಿಟ್ಟುಬಿಟ್ಟು ಹೋದ್ರು' ಅಂತ ಕೊಟ್ಟುಬಿಟ್ಟು ಬಾ......ಅದುವರಿಗೂ ಈಗ್ಲೇ ಇಲ್ಲಿಂದ ಎತ್ತಿಕೊಂಡು ಹೋಗಿ ಸುತ್ತಿ ಅಲ್ಲೆಲ್ಲಾದ್ರೂ ಇಡು.

[ಸೇವಕನು ರುಮಾಲನ್ನು ಎತ್ತಿ ಸುತ್ತಿ ತೆಗೆದುಕೊಂಡು ಬೀದಿ ಬಾಗಿಲಿನಿಂದ ನಿಷ್ಕ್ರಮಿಸು ವನು; ನರಸಿಂಹಯ್ಯನು ಬೀದಿ ಬಾಗಿಲಿಗೆ ಕಿವಿ ಕೊಟ್ಟು ಒಂದೆರಡು ನಿಮಿಷ ನಿಂತು...... ಚಕಿತನಾಗಿ] ಅಕೋ !...ಕಾರು !...?

[ಪಡಸಾಲೆಯ ಮಧ್ಯಭಾಗವನ್ನು ಸೇರಿ ಬೀದಿ ಬಾಗಿಲಕಡೆ ಆತುರದಿಂದ ನೋಡುತ್ತಾ ನಿಲ್ಲುವನು.]

ರಂಗಣ್ಣ : (ಪ್ರವೇಶಿಸಿ)......ಏನು......ಹೇಳಿಕಳಿಸಿದ್ದು......?

ನರಸಿಂಹಯ್ಯ : (ನಮಸ್ಕಾರಸೂಚಕವಾಗಿ ಕೈಜೋಡಿಸಿಕೊಂಡು) ಮೊದಲು, ಮದುವೇಗೆ ತಮ್ಮನ್ನ ಕರೀದೆ ಇದ್ದದ್ದಕ್ಕೆ ಕಾರಣ ಹೇಳೋಕೆ !...ನನಗೂ ನನ್ನ ಗೃಹಣೀಗೂ.........ನಾವು ಈಗಿರೋ ಅಂತಸ್ತು ಸಾಲದೇ ಇನ್ನೂ ದೊಡ್ಡಮನುಷ್ಯರ ಕುಟುಂಬದ ಸಂಬಂಧಮಾಡಿ ಮೆರೀಬೇಕೂ ಅಂಬೋ ಸಂಭ್ರಮದಲ್ಲಿ......ನಮಗೆ ಗುರ್ತಾದ ಬಹಳ ಜನಾನ ಮದುವೇಗೆ ಕರೀದೇ ಇದ್ವು. ಆದಕ್ಕೆ ಪ್ರತಿಫಲ ಅನುಭವಿಸಿದ್ದೂ ಆಯಿತು......

ರಂಗಣ್ಣ : (ಮೆಲ್ಲನೆ) ಅದೆಲ್ಲ ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳೋದಿಲ್ಲ.......ಈಗ ನಿಮ್ಮ ಹುಡುಗ ಬರ್ತಾ ಹೇಳಿದ್ರಲ್ಲಾ......ಏನೋ ಅಸಂಭವ ಒದಗಿ...ನಿಮ್ಮ ಬೀಗರು... ಮನಸ್ತಾಪಪಟ್ಟುಕೊಂಡು...

ನರಸಿಂಹಯ್ಯ : **ಮನಸ್ತಾಪ** ! ಕ್ಷಮಿಸಿ ! ನನ್ನ ಕಾಲ್ನಲ್ಲಿ ಒದಸ್ಕೊಂಡು ನನ್ನ ಕೈಯಿಂದ ಎಕ್ಕಡದೇಟು ತಿಂದ......**ತನುಸ್ತಾಪ**ದಿಂದ ಹೋದದ್ದು !!...ನೋಡೀ, ಸ್ವಾಮೀ......

ರಂಗಣ್ಣ : (ಮುಂದೆ ಹೇಳುವಷ್ಟರಲ್ಲಿ, ನರಸಿಂಹಯ್ಯನ ಕುಗ್ಗಿದ ಮುಖವನ್ನೂ ದನಿಯನ್ನೂ ಗಮನಿಸಿ ಮೃದು ವಚನಗಳಿಂದ)

ಏನೋ ಆದದ್ದಾಗಿಹೋಯಿತು.........ವ್ಯವಹಾರದಲ್ಲಿ ಹೀಗೆ ಅಸಂಭವಗಳು ಇದ್ದೇ ಇರುತ್ತವೆ.........ಮನಸ್ಸಿಗೆ ಸಮಾಧಾನ ತಂದುಕೊಳ್ಳೋದು ಉಚಿತವೇ ಹೊರ್ತು ಅದನ್ನ ಶಿರುಗೂ ಜ್ಞಾಪಿಸ್ಕೊಂಡು ನೊಂದುಕೊಳ್ಳೋದು ಸರಿಯಲ್ಲ.........

ನರಸಿಂಹಯ್ಯ : ನಿಮಗೆ ಈ ತೊಂದರೆ ನಾನು ಕೊಡ್‌ತಾನೇ ಇರಲಿಲ್ಲ. ಆದರೆ ನೀವು, ನಿಮ್ಮ ಮನೇಗೆ ಬಂದಿದ್ದಾಗ. 'ನನ್ನ ಮಗಳನ್ನ ತಂದುಕೊಳ್ಳೋದರಲ್ಲಿ ಅಭ್ಯಂತರವೇನೂ ಇಲ್ಲ; ಆದ್ರೆ ಹುಡುಗಿ ನಿಮ್ಮ ಮನೇಲಿ ಸಂತೋಷವಾಗಿ ಇರೋ ವಿಷಯದಲ್ಲಿ **ಹುಡುಗಿ** ಮನಸ್ಸು ಒಪ್ಪ ಬೇಕೂ' ಅಂತ ಹೇಳಿದ್ರುಮೇಲೆ.........ನನಗೆ ಈಗಿರೋ ಅವಸ್ಥೇನ ತಪ್ಪಿಸೋ ಔದಾರ್ಯ ನಿಮಗಿರುತ್ತೆ, ಅಂಬೋ ಭರವಸೆ ಮೇಲೆ ನಾನು ಹೇಳಿಕಳಿಸಿದ್ದು ನಿಮಗೆ;......ನಮ್ಮ ಮನೇಲಿ ನನ್ನ ಲಾಯರಿ ಕೆಲಸದ ಮೇಲೆ ನನ್ನ ಗಮನ........... ಗೃಹಕೃತ್ಯದ ಮೇಲೆ ನನ್ನ ಹೆಂಡತಿ ಗಮನ...ಈತನ್ಮಧ್ಯೆ ನನ್ನ ಮಗಳಿಗೆ ಒಂದು ಒಳ್ಳೇ ಮಾತಾಡಿ ಸಂತೋಷಪಡಿಸಿ ಇಟ್ಕೊಳ್ಳೋಕೆ ನನಗಾಗ್ಲೀ ನನ್ನ ಹೆಂಡತಿಗಾಗ್ಲೀ ಬಿಡುವಿರಲಿಲ್ಲ. ಒಂದು ಸಂತೋಷ ಮತ್ತೆ ಸ್ನೇಹ, ಅನ್ಯೋನ್ಯ, ಇವೆಲ್ಲಾ ನಿಮ್ಮ ಮನೇಗೇ ಬಂದು ನಿಮ್ಮ ಮಕ್ಕಳ ದೆಸೆಯಿಂದ ಅವಳು ಇನ್ನು ಮುಂದೆ ಅನು ಭವಿಸಬೇಕೇ ಹೊರತು ನನ್ನ ಮನೇಲಿ ಅವುಗಳ ಪರಿಚಯ ತಹಲ್‌ವರಿಗೂ ಇಲ್ಲ. ಇಲ್ಲೇ, ಹೀಗಾಗಿ ಹೋಯಿತು! ದಿಕ್ಕು ದೆಸೆ ತೋಚದೆ ಬೆಪ್ಪಾಗಿ ನಿಂತಿದ್ದೆ. ಆ ಕೋಣೆ ನೋಡಿ! ತುಂಬ ಅತಿಥಿಗಳು, ನೆಂಟರು, ಅದರಲ್ಲೂ ನನ್ನ ದಾಯಾದಿಗಳು.........ಮದುವೆ, ನಮ್ಮ ನಮ್ಮ ನೆಂಟರಲ್ಲೇ ಆಗೋ ಪದ್ಧತಿ ಅನಾರೋಗ್ಯ, ಅಂತ ತಪ್ಪಿಸಿ, ಹೊಸ ಸಂಬಂಧ ಆಗಬೇಕೂ ಅಂತಾ ಹಿಡಿದ ನನ್ನ ಹಟಕ್ಕೆ, ರೇಗಿದ ದಾಯಾದಿಗಳಿಗೆ, ಈಗ ನನ್ನ ಅವಸ್ಥೆ ಗೊತ್ತಾಯಿತೋ ಅವರ ಆನಂದಕ್ಕೆ ಎಣೆಯೇ ಇಲ್ಲ...........ಶಾಸ್ತ್ರಿಗಳು ಎರಡೂವರೆ ಘಂಟೆಗೆ ಇನ್ನೊಂದು ಲಗ್ನ ಇದೆ ......ಅಂತ...

ರಂಗಣ್ಣ : (ಮುಂದಕ್ಕೆ ಬಂದು ನರಸಿಂಹಯ್ಯನ ಜೋಡಿಸಿದ ಕೈಯ್ಯನ್ನು ತನ್ನ ಎರಡು ಕೈಗಳಿಂದಲೂ ಹಿಡಿದು) ನೀವೇನೂ ಯೋಚನೆ ಮಾಡಬೇಡಿ; ಹುಡುಗನ್ನ ಸ್ನಾನ ಮಾಡಿಸ್ಕೊಂಡು ಎಲ್ಲರನ್ನೂ ಕರಕೊಂಡು ಬರ್‌ತೇನೆ...

(ಬೀದಿ ಬಾಗಿಲಿನಿಂದ ನಿಷ್ಕ್ರಮಣ)

ನರಸಿಂಹಯ್ಯ : (ಚೇತರಿಸಿಕೊಂಡು ಅತಿಥಿಗಳಿರುವ ಕೋಣೆಯ ಬಾಗಿಲಿನಿಂದ ನಿಷ್ಕ್ರಮಿಸಿ, ಒಳಗಿನಿಂದ) ಕ್ಷಮಿಸಬೇಕು ತಾವೆಲ್ಲರೂ! ನಾನ್ಹೇಳಿದ್ಹಾಗೆ ನಮ್ಮ ಬೀಗರ ಮನೇಲಿ ಏನೋ ಅಪ ಶಕುನ ಪೂರ್ವಕ ಅನಿವಾರ್ಯ ಸಂಭವಿಸಿರೋ ಹಾಗೆ ತಿಳಿದು ಬಂದು ಅಲ್ಲೊಂದು ಶಾಂತೀಗೆ ಪೂಜೆ ಆಗ್‌ತಿದೆ. ಅದ್ದರಿಂದ ಲಗ್ನಾನ ಇನ್ನೊಂದು ಎರಡು ಘಂಟೇಲಿ ಬರೋ ಇನ್ನೊಂದು ಮುಹೂರ್ತ ದಲ್ಲಿ, ಅಂತ ನಿಶ್ಚಯವಾಗಿದೆ. ಆದ್ದರಿಂದ...ಅಷ್ಟರಲ್ಲಿ ನೀವುಗಳು ನನ್ನ ಕೈಬಿಡದೆ...ತಯಾರಾಗಿ ಸಿದ್ಧವಾಗ್‌ತಿರೋ ಭೋಜನಾನೂ ಮಾಡಿಬಿಟ್ಟು ವಧೂವರರನ್ನ ಆಶೀರ್ವಾದ ಮಾಡಿ ಬಿಟ್ಟೇ ಹೋಗಬೇಕೂ ಅಂತಾ ನನ್ನ ಹರವತ್ತಾದ ಕೋರಿಕೆ.

(ಒಳಗೆ ಸಂಭಾಷಣೆಗಳ ಧ್ವನಿಯು ಎದ್ದು ಕೇಳುವುದು...ನರಸಿಂಹಯ್ಯನು ಪುನಃ ಪ್ರವೇಶಿಸುವನು; ಹಿಂದೆ ಪುರೋಹಿತನೂ ಬರುವನು.)

ಪುರೋಹಿತ : ನನ್ನ ಮನಸ್ಸಿಗೆ ಬಹಳ ಸಂತೋಷ ಸ್ವಾಮಿ.........“ಮನಸಾ ಚಿಂತಿತಂ ಕಾರ್ಯಂ ದೈವಮನ್ಯತ್ರ ಚಿಂತಯೇತ್”, ಅಂತಾ, ಹಿರಿಯರು ಹೇಳೋಹಾಗೆ, ನಮ್ಮ ಮಗೂಗೆ ವಿದ್ಯಾವಂತನಾದ ವರ ಸಿಕ್ಕಬೇಕೂ ಅಂತ ಬ್ರಹ್ಮ ನಿಶ್ಚಯಿಸಿರೋವಾಗ್ಗೆ......ನಾವು ಏನು ಏರ್ಪಾಟುಮಾಡಿದರೆ ತಾನೇ ಏನು.........?

ನರಸಿಂಹಯ್ಯ : ಏನಾಶ್ಚರ್ಯ! ಶಾಸ್ತ್ರಿಗಳೇ! (ಗಡಿಯಾರವನ್ನು ನೋಡುತ್ತಾ) ಒಂದು ಘಂಟೇ ಹೊತ್ತಿನ ಒಳಗೆ ದೇವರು ಏನು ಅದ್ಭುತಗಳನ್ನೆಲ್ಲಾ ತೋರಿಸಿಬಿಟ್ಟ!!! ಕಲಿಯುಗ, ಪಾಪಯುಗ, ಅಂತ ಎಷ್ಟು ತಿಳಿದಿದ್ರೂನೂವೆ, ಒಬ್ಬ ಬ್ರಾಹ್ಮಣ, ದುಡ್ಡಿನಾಶೇಗೆ, ಇಷ್ಟರಮಟ್ಟಿಗೆ ಮಾನ ಮರ್ಯಾದೆ—ಮತ—ಕರುಣೆ ಇವನ್ನೆಲ್ಲಾ ಮಿತಿಮೀರಿ, ಈ ರಾಮಣ್ಣನಷ್ಟು ತುಚ್ಛನಾಗಿ ಇರ್‌ತಾನೆ ಅಂತ ನಾನು ನಂಬೇ ಇರಲಿಲ್ಲ. ಅಂಥಾ ನರಮೃಗಾನ್ನೂ ತೋರ್ಸಿ, ಅದೇ ಘಂಟೇಲಿ,

ಕೇವಲ ಸಾಮಾನ್ಯಸ್ಥಿತಿಯವನೇ ಆದರೂ, ಒಂದು ಮಾತಾಡದೆ, ನನ್ನ ಸ್ಥಿತೀನ ಕಂಡರೆ, ಇಷ್ಟು ಗಂಭೀರವಾಗಿ ನಡಿಯೋ ರಂಗಣ್ಣೋರಂಥ ಸಾಧೂನೂ ತೋರಿಸಿದ !.. ...... ಆಶ್ಚರ್ಯ !!......ಆಶ್ಚರ್ಯ !!

ಶಾಸ್ತ್ರೀ : ಸ್ವಾಮೀ ! ಈ ನವೀನ ಕಾಲದಲ್ಲಿ ವೈದೀಕರ ಮಾತಿಗೆ ಬೆಲೆಯೇ ಇಲ್ಲ !...... ಆದರೂ ಹೇಳ್ತೇನೆ ;......ಬ್ರಾಹ್ಮಣ, ತನ್ನ ವ್ಯಾಸಂಗದಿಂದಲೋ, ತನ್ನ ತಂದೆ ತಾಯಿಗಳಿಂದಲೋ, ಇಲ್ಲ...ವಂಶಪರಂಪರೆಯಾಗಿ ಮಾಡ್ತಾಬಂದ ವೇದಾಧ್ಯಯನದಿಂದಲೋ, ಇಲ್ಲ ತನ್ನ ಸಂಸ್ಕಾರ ಪ್ರಭಾವದಿಂದಲೋ, ತನಗೆ ಇರುವ ಬುದ್ಧೀನ...ಕೋರ್ಟು...ಕಚೇರಿ...ಕಾಲೇಜು...ಇಸ್ಕೂಲು ಅಂಬೋ ಬುದ್ಧೀ ಕೊಂಡುಕೊಳ್ಳೋ ಮಾರ್ಕಟ್ಟಿನಲ್ಲಿ, ಸಂಬಳಕ್ಕೆ ಮಾರಿ. ಆಯಾ ಸಂಬಳದ ಪ್ರಕಾರ ತಾರತಮ್ಯತೇನ ಅನುಭವಿಸ್ತಿದ್ದರೂ, ಕೇವಲ ಬ್ರಾಹ್ಮಣರ ಗೋಷ್ಠೀಲಿ...ಒಂದು ಜನನ...ಒಂದು ಮರಣ......ಒಂದು ಉಪನಯನ......ಒಂದು ವಿವಾಹ......ಇತ್ಯಾದಿ ಧರ್ಮ ಕರ್ಮಾದಿಗಳಿಗೆ ಬ್ರಾಹ್ಮಣರು ಸಂಗ್ರಹಿಸಿರುವಾಗ, ಇವರು ಬುದ್ಧೀನ ಮಾರೋ ಮಾರ್ಕಟ್ಟುಗಳಲ್ಲಿಯ ಅಂತಸ್ತು ವ್ಯತ್ಯಾಸಗಳನ್ನ ಇಲ್ಲಿಯೂ ಸಾಧಿಸೋಕೆ ಆದೀತೆ...? **ರಾಮಣ್ಣೋರು ಮಾಮಲೆ ಹುದ್ದೆ ಮಾಡಿದರೆ ತಾನೆ ಏನೂ ......ರಂಗಣ್ಣೋರು ಕೇವಲ ಮುತ್ಸದ್ದಿಯಾಗಿದ್ದರೇ ತಾನೇ ಏನೂ....ಒಟ್ಟಿನಲ್ಲಿ ಬ್ರಾಹ್ಮಣರ ಕಣ್ಣಿಗೆ.......... ಟೊಳ್ಳು–ಟೊಳ್ಳೇ..........ಗಟ್ಟಿ–ಗಟ್ಟಿಯೇ !**

[ಪರದೆಯು ಮೆಲ್ಲನೆ ಬೀಳುವುದು]

ಹುತ್ತದಲ್ಲಿ ಹುತ್ತ

AN UNROMANTIC COMEDY

WAELS WITHIN WEALS

ಪಾತ್ರಗಳು

ಸುಬ್ಬಮ್ಮ—ದಿವಂಗತ ರಾಮಪುರದ ಮುನಿಸಿಪಲ್ ಪ್ರೆಸಿಡೆಂಟ್, ಜೋಡಿದಾರ್ ರಾವ್ ಸಾಹೇಬ್ ರಾಮರಾಯರ ವೃದ್ಧ ವಿತಂತು. ವಯಸ್ಸು ೬೧

ಹಿರಿಯಣ್ಣಯ್ಯ—ವಾರ್ಧಿಕ್ಯವನ್ನು ಸಮೀಪಿಸುತ್ತಿರುವ ಪುತ್ರ. ವಯಸ್ಸು ೪೫

ರಾಮರಾವ್—ಬಾಲ್ಯವನ್ನು ಹಿಂದೆ ಬಿಡುತ್ತಲಿರುವ ಪೌತ್ರ. ವಯಸ್ಸು ೧೮

ಕಪ್ಪಣ್ಣ—ಹಿರಿಯಣ್ಣಯ್ಯನ ಸೆಕ್ರೆಟರಿ. ವಯಸ್ಸು ೪೦

ಶ್ರೀಮತಿ ಸರೋಜಾದೇವಿ—ರಾಮರಾಯರ Stenographer. ವಯಸ್ಸು ೩೫

ಬೋರ—ಸೇವಕ. ವಯಸ್ಸು ೨೦

ನಾರಣಪ್ಪ—ಅಡಿಗೆಯವ. ವಯಸ್ಸು ೬೫

The barque of humour often veers
From shoals of smiles to seas of tears!
—**K**.

ಕಿರಿಅಳದ ನಗೆನೀರಿನ ಮೇಲೆ
ತಿರುಗುತ ಬಹುವೇಳೆ
ಕಣ್ಣೀರಿನ ಕಡಲಿನ ಪಾಲು
ಹಾಸ್ಯದ ಹರಿಗೋಲು
—ರಾ.

SCENE I

(Found entered Hiriyannayya in chair at desk and Kappanna standing near. Time : 8 in the evening).

ಹಿರಿಯಣ್ಣಯ್ಯ : (Drawling)
...Excuse me...ಕ್ಷಮ್ಸಿ...ಅಲ್ಲ...ಕ್ಷಮ್ಸಿ...
(ಕಾಲ್ಮೇಲೆ ಕಾಲನ್ನು ಹಾಕಿ ಮೀಸೆಯನ್ನು ತಿರುವುತ್ತಾ)
"Mr......ಮಿಸ್ಟರೇ ? " ಏನ್ನಿಮ್ಹೆಸರು ?

ಕಪ್ಪಣ್ಣ : ಮಿಸ್ಟರ್ ಗಿಸ್ಟರ್ ಏನಿಲ್ಲಾ ಸಾರ್ ನನ್ಹೆಸರ್ನಲ್ಲಿ...ಮರ್ಯಾದೆ ತಿಳಿದ gentle-menoo ನನ್ನ ಮಾತಾಡ್ಸೋವಾಗ ಅವರ್ಯೋಗ್ಯತೆ ತಿಳಿಸ್ಕೊಳ್ಳೋಕೆ "ಮಿಸ್ಟರೂ"ಂತ ಮೊದಲು ಸೇರ್ಸೊ ಸಂಪ್ರದಾಯ್ವೆ ಹೊರ್ತು...ನನ್ನ ಹೆಸರು ಬರೀ "ಕಪ್ಪಣ್ಣ"; but then Sir, ನಿಮಗೆ ನಾನು quote ಮಾಡ್ಬೇಕೆ...'what is in a nameoo ? a Roseoo smells as sweetoo by any other nameoo...Shakespeare... Play, Romeo and Juliet, Act II, Sc. II, lines **44–45**...Shakespeare's date of birth 1564, death 1616.'

ಹಿರಿಯಣ್ಣಯ್ಯ : (ಬೆಚ್ಚಿಬಿದ್ದು ಮೇಲಿನಕಾಲ ಕೆಳಗಿನ ಕಾಲನ್ನು ಬಿಟ್ಟು ಅಲ್ಪಜಾರುತ್ತಾ) ...ನಿಜ...I mean, of course ನಿಜ...but then foodoo ಎಲ್ಲಾನೂ supply ಮಾಡಿ seventy five rupees a monthನ್ನೂ ನೀವ್ಕೇಳಿದ್ರೆ...ನಾನೇನ್ ಹೇಳೋದು...ನೀವೇ ಹೇಳಿ...Say it yourself.

ಕಪ್ಪಣ್ಣ : ನನ್ನ self ಏ ಹೇಗ್ಹೇಳೋದು ಸಾರ್ ! ನಿಮ್ಮ circumstances ನನಗೆ ಗೊತ್ತಿಲ್ಲ ; Hinduಲಿ ನೋಡ್ದೆ advertisementoo : "rich gentlemanoo... culturedoo...affluent circumstancesoo...wants secretary...very very strong both in writing and speaking English, apply in personoo" ನ್ತ ; ಬಂದೇ ಸಾರ್ at my own expensoo and at my own riskoo ; un-knownoo ನೀವು ನನಗೆ; but then platform ಮೆಟ್ಟುತ್ತೂವೆ...ನಿಮ್ಹೆಸ್ರುಹೇಳತ್ಲೂನೂವೆ, ನೋಡೀ !...porterಗ್ಳು ನನ್ನ ಸಾಮಾನ್ನ free of charge. ನಿಮ್ಹೆಸರಿಗೋಸ್ಕರ ಜಟ್ಕಾಲಿ ಪೇರ್ಸಿದ್ದಲ್ದೆ ಜಟ್ಕಾದೋರು ನಿಮ್ಹೆಸರು ಹೇಳತ್ಲೂನೂವೆ also free of chargeoo...ಮನೇ ತಲ್ಪಿಸಿದ್ನ realise ಮಾಡ್ಕೊಂಡು ನಾನೂನು ನಿಮ್ಮಂಥಾವ್ರ ಸೇವೇನ like the porters and Jutkawala...also free of chargoo ಆಚಂದ್ರಾರ್ಕ ಮಾಡಿಬಿಡ್ಬೇಕೂಂತ determine ಮಾಡ್ಕೊಂಡ್ರೂನೂವೆ...willಓ willingoo but fleshಓ prote-stedoo. ನನ್ನ circumstancesso ಸಾರ್! ನಾನೇನ್ ಹೇಳೋದು, a poor pro-letariateoo. ಈಗ ನಮ್ಮ societyಯು unsettled conditionನಲ್ಲಿ. ತಾವೋ generations after generations of aristocratsನಿಂದ ಜನಿಸಿದ aristocratoo, ನಾನೋ a plebianoo..."particians and plebians," Roman Historyಲಿ ಬರುತ್ತೆ...

ಹಿರಿಯಣ್ಣಯ್ಯ : (ಮೇಲಿದ್ದ ಕಾಲು ಸಂಪೂರ್ಣವಾಗಿ ಜಾರಿ ಬಿದ್ದು)
Excuse me...I mean...take a seat...

ಕಪ್ಪಣ್ಣ : ಕ್ಷಮಿಸಿ ಸಾರ್. ನನ್ನ brass bound principleoo......never sit before my future master if so,...if not so...ಇದ್ದೇ ಇಧೆ common courtesy. Kingoo ಒಂದೇ ಕೂಲೀನೂ ಒಂದೇ for the moment.

(ಪಕ್ಕದಲ್ಲಿದ್ದ ಕುರ್ಚಿಯನ್ನು ಜರ್‍ರನೆ ಎಳೆದು ಕುಳಿತುಕೊಂಡು)

Sir, I pause for a reply—Shakespeare, birth and death ಮೊದಲೇ ಹೇಳಿದ್ದೇನೆ... Drama, Julius Ceasaroo...Brutus ಹೇಳಿದ್ದು mobಗೆ... this time reversedoo...mobman to noblemanoo.

ಹಿರಿಯಣ್ಣಯ್ಯ : ಕ್ಷಮಿಸಿಸಾರ್...ನಾನು...what I wanted to......ex...

ಕಪ್ಪಣ್ಣ : Express...explain...exclaim... expostulate...expectorate...exonerate...ex...

ಹಿರಿಯಣ್ಣಯ್ಯ : ಹೌದ್ಹೌದು...quite so ... quite so. But then ... ನೋಡೀ...ನನಗ್ಬೇಕಾದದ್ದು ಒಬ್ಬ secretary...ಚಿಕ್ಕ small secretary...ನನ್ನ election ...municipal election...of course...can manage myself...but English strong ಆಗಿದ್ದೆ myself ಮೊದ್ಲು...but want of practice, nothing else. Therofore speeches ಗೀಚಸ್...ಈ ಬಾಬತ್ನಲ್ಲಿ ಅಲ್ಪಸ್ವಲ್ಪ help...help ಏನೂ ...co...

ಕಪ್ಪಣ್ಣ : Co-operation...co-ordination...coherence...or perhaps quorum...no, cannot be !

ಹಿರಿಯಣ್ಣಯ್ಯ : ಹೌದು...ಆದ್ರೂ ಅದೆಲ್ಲಾ ಅಲ್ಲ !...ನೋಡೀ, ಈ ಕಾಲ್ದಲ್ಲಿ B.A. B.L., pass ಮಾಡಿದ್ದೋರೂ ಕೂಡಾ fifty rupees a month ಸಿಕ್ದೆ ನರಳ್ತಿಧಾರೆ. ಹೀಗಿರೋವಾಗ ನೀವು ಊಟ etc. ನೂ ಕೊಟ್ಟು...75 rupees ನೂ expect ಮಾಡೋದು ...ಒಂದು mis...

ಕಪ್ಪಣ್ಣ : Mistake ಏ ?...miscalculation ಏ ? misunderstanding ಏ ? mis...

ಹಿರಿಯಣ್ಣಯ್ಯ : ನೋಡೀ...you see...

ಕಪ್ಪಣ್ಣ : Don't trouble. I see everything...not only so, I heard everything...ಜಟ್ಕಾ ಕಾಫಿಹೋಟಲ್ ಎದುರಿಗೆ ನಿಲ್ಲಿಸ್ದ. ಹೋಟ್ಲೋನು ನಿಮ್ಮೆಸ್ರು ಕೇಳುತ್ಲೂನೂವೆ ಕಾಫಿ and ಇಡ್ಲಿ supply free of chargesoo ಅಲ್ದೆ full information about...ತಮ್ಮ family...also free of chargoo. ತಮ್ಮ ಮನೆತನ... ತಮ್ಮ fatheroo Viceroy ಕೈಯಿಂದ ಖುದ್ದಾಗಿ ದೆಹಲೀಲಿ ರಾವ್‌ಸಾಹೇಬ್ ಆದದ್ದು. Highness himselfoo once upon a time ತಮ್ಮ ತೋಟದ ಗಂಗಾಪಾನೀಲಿ ಮೂರು ಬಾರಿಮಾಡಿದ್ದು...ಅಲ್ದೆ ತಮ್ಮ ಜನಕ ತಮ್ಮನ್ನ future Rao Saheb and Municipal President of Local Corporation ಅಂತ ಹರಸ್ತಾ ಕಣ್ಮುಚ್ಚಿದ್ದೂ. ಅತ ಹರಸಿದ title and position...both heriditary ಅಲ್ಲದ...small defectನ... ತಮ್ಮ capabilities ಇಂದ make up ಮಾಡ್ತಿರೋ ಯತ್ನ ಕೇಳಿಯೇ...ನಾನು ಈ ವಿಷಯದಲ್ಲಿ...ಯತ್ ನನ್‌ಶಕ್ತಿ ಯತ್‌ನನ್‌ಬುದ್ಧಿ...ಯತ್ ನನ್...ಬಟ್ನಲ್ಲಿ ಯತ್‌ನನ್ನ್ಕೈಲಿ ಏನೇನಾಗುತ್ತೊ...ತತ್‌ವರಿಗೂ ತಮಗೆ ಕುಮ್ಮಕ್ ಕೊಡ್ತೇ ಬೇಕೂಂತಂಬೋ ಹುಮ್ಮಸ್ಸಿನಲ್ಲಿ...

ಪೋಟ್ಲಿಂದ ತಮ್ಮನೇವರಿಗೂ ಕಂಡುಬಂದ Local Municipal conditionsನ...with a view to embody...in ತಮ್ಮ future election speeches...ಗಮನಿಸ್ತಾ ಬಂದೆ... salubrious climatoo, but Sanitationಓ! ಏನ್ಹೇಳ್ಲಿ!! ನಿಮ್ಮ future regimeನಲ್ಲಿ...ಈಗ fulginous ಆಗಿರೋ conditions ಎಲ್ಲಾ fulgent ಆಗೋ ಹಾಗೆ ಮಾಡೋ poweroo...ನಿಮ್ಮ future speeches ನಲ್ಲಿ...Local residentsಗೆ ನೀವು...inteligible ಆಗಿ...ಇವೆಲ್ಲಾ good wordsoo ಸಾರ್! ಬರೀ B.A.,LL.B. ಗಳ... ಅಪ್ಪರ್ಮೆಂಟ್ feesನಲ್ಲಿ ಹೊಟ್ಟೇ ಹೊರ್ಕೋಳ್ಳೊ ಬರೀ B.A.,B.L. ಗಳ ಬಾಯಿಂದ ಹೊರಡೋ words ಅಲ್ಲಾಸಾರ್ ಇವು. And yet...ಬರೀ samplesoo...ನನ್ನ main stock ಬೇರೆ ಇದೆ, ಮಂಡೇಲಿ...ಇವಲ್ದೆ Local Self Government, civic responsibilities...Municipal body corporates ಈ ಬಾಬ್ತುಗಳು ಬೇಕಾದಷ್ಟಿವೆ. Vote ಗಿಟ್ಟಿದುರ್ಕೋ wordsoo. ಇವೆಲ್ಲಾ... ಯೋಚಿಸಿ ನೋಡೀ ಸಾರ್ ತಮ್ಮ ಜನಕ... dying moments ನಲ್ಲಿ ಹರಸಿದ ಮಾತು ಸುಳ್ಳು ಮಾಡದ ಹಾಗೆ, the old case of Dasaratha cum Rama episode...author Valmiki...Birth and Death, can find out, if necessary...ಒಟ್ನಲ್ಲಿ...in your opinion... ನಿಮ್ಮ future campaignಗೂ ಅಲ್ದೆ, this important matter of Rao Saheb titleನ ಸಂಪಾದಿಸ್ಬೇಕಾದ ವಿಷಯದಲ್ಲಿ big big personagesನ ಭೇಟಿ ಮಾಡ್ಬೇಕಾದ ವಿಷಯದಲ್ಲೂ ನನ್ನ ಅಲ್ಪ ಸ್ವಲ್ಪ ಸಹಾಯ ನಿಮಗೆ useful ಆಗೋ ಹಾಗೆ ತೋಚಿದ ಪಕ್ಷದಲ್ಲಿ...

(ಕುರ್ಚಿಯಿಂದೆದ್ದು ಮೂಲೆಯಲ್ಲಿಟ್ಟಿದ್ದ Gladstone bagಅನ್ನು ಎತ್ತಿಕೊಂಡು ಹೊರಬಾಗಿಲನ್ನು ಸಮೀಪಿಸುತ್ತಾ)

A meagre sum of solitary rupees a 75 month, plus board and lodging...ತಮ್ಮಂಥ patriciansನ...ಓಮ್ಮೆಟ್ಟೋ ಹಾಗೆ ಮಾಡಿದ ಪಕ್ಷಕ್ಕೆ ಇದ್ದೇ ಇದೆ my already arranged programme...

(ಆತ್ಮಗತಂ)

...as per contingency; back to the Station to catch Bangalore passengeroo. foodless, free of charge ಜಟ್ಕಾನೂ ತುಂಡು......, but then 'at a risk' ಬಂದದ್ದು, therefore 'at a risk' must go back also;

(ನಿಟ್ಟುಸಿರು ಬಿಡುತ್ತಾ)

Life is a walking shadow...Shakespeare...Macbeth...Act, Sc. 'Line...ಈಗ್ಯಾಕೆ' !

ಹಿರಿಯಣ್ಣಯ್ಯ : ಸ್ವಲ್ಪಿರೀ ಸಾರ್...I am trying to re...

ಕಪ್ಪಣ್ಣ : To reconsider...to recalculate...to remember...to repeat...to repent...to refuse...

ಹಿರಿಯಣ್ಣಯ್ಯ : To ನಿಮ್ಮ terms ಪ್ರಕಾರ್ವೇ...agree ಮಾಡೋಕೆ;... ಕೂತ್ಕೊಳ್ಳಿ.

ಕಪ್ಪಣ್ಣ : (Bag ಅನ್ನು ಮೂಲೆಯಲ್ಲಿಟ್ಟು ಬಂದು)

ಕ್ಷಮಿಸ್ಸಿ ಸಾರ್...told you before...if engaged...master, masteroo ; servant, servantoo...therefore if engaged...if not of course ಇದ್ದೇ ಇದೆ, common courtesy.

(ಕೂಡಲುಪಕ್ರಮಿಸುವನು)

ಹಿರಿಯಣ್ಣಯ್ಯ : ಕೂಡ್ಬೇಡಿ...don't sit down...ದಯವಿಟ್ಟು...ಹೊರ್ಟ್ಹೋಗಿರಿ ...but ನಮ್ಮ motherಗೆ ಒಂದ್ wordoo...you know.

ಕಪ್ಪಣ್ಣ : Yes sir, Dowager Mrs. Late Rao Saheb...naturally ...must ask permission ! After all Elders eldersay ! Domestic discipline...can understand...ಜಟ್ಕಾದೋನ್ನ ಕಿರಿಕ್ಕಳಿಸಿ ಬರ್ರೇನೆ...in the mean-while ತಾವು...ತಮ್ಮ conference...conversation...consultation...ಪರ್ವಾ ಇಲ್ವಾ Sir, I can understand...

(exit by door L)

ಹಿರಿಯಣ್ಣಯ್ಯ : (Approaching C)

'ಮ್ಮಾ' !

ಸುಬ್ಬಮ್ಮ : (ಒಳಗಿನಿಂದ)

(ಯಾರದು ?...ಮಗೂನೇ ?

ಹಿರಿಯಣ್ಣಯ್ಯ : ಹೂಂಮ್ಮಾ...ಸ್ವಲ್ಪ ಹೀಗ್ಬರ್ತೀಯಾ ?

ಸುಬ್ಬಮ್ಮ : (ಪ್ರವೇಶಿಸಿ)

ಇಧೇನಿನ್ನೂ ಇಲ್ಲೇ ಇಧೀಯಾ? ಎಲೆಕ್ಷನ್ನು ಇನ್ನೊಂತಿಗ್ಹೂ ಇಲ್ಲಾ ಡೆಪ್ಟಿಕಮೀಷನ್ರು ಮೀಟಿಂಗ್ ಮಾಡೋಕೆ ಟೌನ್‌ಹಾಲಿನಲ್ಲಿ ಕಾದಿಧಾರೆ. ನಿಂಬೇಹಣ್ಣು. ಹಾರ. ಕಾಫಿ ತಿಂಡೀಂತೆಲ್ಲಾ ಹೇಳಿ ಐದ್ರೂಪಾಯಿ ಸುಲ್ಕೊಂಡ್ಬಿಟ್ಟು ಇನ್ನೂ ಇಲ್ಲೇ ಕೂತಿಧೀಯಾ? ಚೆನ್ನಾ...ಯ್ತು ! ನೋಡೋ...ಮಗು...ಒಂದೇ ಮಾತ್ನಲ್ಲಿ ಹೆಳ್ಬಿಡ್ತೀನೆ. ಊರ್ಗೆಲ್ಲಾ ಮುಂದಾಗಿ. ಮುನ್ಸಿಪಾಲ್ಟಿಗೆ 20 ವರ್ಷ ಪೆಸ್ಡೆಂಟಾಗಿ...ಇದ್ದದ್ದಲ್ದೆ, ಹುಡ್ಗೀರಿಸ್ಕೂಲು. ಆಸ್ಪತ್ರೆ. ದನಕರುಗಳ್ಗೆ ನೀರಿನ್ ತೊಟ್ಟಿ ಇವುಗಳ್ನೆಲ್ಲಾ ಊರ್ಗೆ ತನ್ನ ಖರ್ಚಿನಲ್ಲೇ ಧರ್ಮಕ್ಕೆ ಕಟ್ಟಿಕೊಟ್ಟು...ಮಹಾರಾಜರ ಕೈಲಿ ನವರಾತ್ರಿ ದರ್ಬಾರಿನಲ್ಲಿ ಖಾಸಾ ಹಾರ...ತಹಲ್‌ವರ್ಗೂ ನೀನೂ ನಾನೂ ಹೊದ್ಕೊಳ್ಳೋ ಶಾಲ್ಜೋಡೀನೂ ಸಂಪಾದ್ಸಿದ್ದಲ್ದೆ ಮಹಾಭಾರತಕಾಲ್ದಿಂದ ಬೇಡ್ಬಂದ "ಡಿಲ್ಲೀ"ಗೆ ಹೋಗಿ ವೈಸ್ರಾಯ್ರು ಕೈಯಿಂದ ರಾವ್ ಸಾಹೆಬ್ ಪಟ್ಟಾನ ಸಂಪಾದಿಸ್ದ ನಿಮ್ಮಪ್ಪನ ಹೊಟ್ಟೇಲೂ ನನ್ಹೊಟ್ಟೇಲೂ ಹುಟ್ಟಿದ್ರೂನೂವೆ ನೀನು ಸಿಂಹಗ್ಳ ಹೊಟ್ಟೇಲ್ಹುಟ್ಟಿದ್ದ ಸಿವಂಗಿ ಹಾಗೆ ಹೇಗೆ ಹುಟ್ಟಿದ್ಯೋ ! ಆಶ್ಚರ್ಯ !...ರೇಗ್ತೀಡಾ... ಪ್ರಯೋಜನವೇನೂ ಇಲ್ಲಾ. ಮಗ ಎದುರ್ಗೆ ಇದ್ರೂನೂವೆ ತನ್ನ ಲಕ್ಷಾಂತ್ರರೂಪಾಯಿ ಆಸ್ತಿ : ಬ್ಯಾಂಕ್‌ನಲ್ಲಿ ಬಡ್ಡೀಗಿದ್ದ ಎರಡು ಲಕ್ಷ ರೂಪಾಯಿ ನಗದು ಅಲ್ದೆ ಜೋಡಿ ಗ್ರಾಮ. ಗದ್ದೆ. ಹೊಲ. ತೋಟ, ಮನೆಗ್ಳು ಇದೆಲ್ಲಾನ್ನೂ ಓದ್ದಾರ್ಕೆ ಅರೀದ ನನ್ಹೆಸರ್ಗೇನೆ ಬರೆದಿಟ್ಟಿಟ್ರು...ಕಣ್ಮುಚ್ಚಿ ನಿಮ್ಮ ತಂದೆ...ಧಡ್ಡ್ರಲ್ಲಾ ಮಗೂ...ಧಡ್ಡ್ರಲ್ಲಾ...ನಿನ್ನ ದುಂದ್ಗಾರ್ಕೆ ನನಗೀಗ ಹೇಗ್ಗೊತ್ತೋ ಹಾಗ್ಯೇ ಆ ಪ್ರಾಣೀಗೆ ಆಗ್ಲೇ ಗೊತ್ತಿತ್ತು...ಆದ್ರೆ ಹೇಳ್ತೀನೆ. ಆತನ್ಗೆ ಅಂತ್ಯಕಾಲ್ದಲ್ಲೂ. ನನಗೀಗ್ಲೂ ಒಂದೇ ಚಪಲ ! ಆತ್ನ ರಾವ್ ಸಾಹೆಬ್ ಪಟ್ಟಾ, ಈ ವೂರಿನ ಪೆಸಿಡೆಂಟ್ ಪದ್ವಿ ಬರಬೇಕೂಂಬೋ ಒಂದ್ ಚಪ್ಲ ನನ್ಗೂ ತೀರ್ಬೇಕು. ಇದರಿಂದ್ಲೇ ಆಮೇಲೆ ನನಗೇಂತ ಕಾದಿರೋ ಆ ಆತ್ಮಕ್ಕೂ ಶಾಂತಿ ಬರ್ಬೇಕು. ಇದಕ್ಕೇನ್ಖರ್ಚಾದ್ರೂ ಪರ್ವಾ ಇಲ್ಲ. ಇದಕ್ಕಲ್ದೆ ಒಂದ್ಬಿಡಿಕಾಸು ನಿನ್ನ, ಅಲ್ದೆ ನಿನ್ನ ಕೆಲಸಕ್ಕೆ ಬಾರದ ನಿನ್ನ ಮಗನ, ದುಂದುಗಾರಿಕೇಗೆ ಕೇಳಿದ್ರೋ...

ಹಿರಿಯಣ್ಣಯ್ಯ : ಕ್ಷಮಿಸ್ಬೇಕಮ್ಮಾ ನಿನ್ನ...ಕರದದ್ದು ನಾನು ಈಗ...

(ಮೂಲೆಯಲ್ಲಿರುವ bagನ್ನು ಸೂಚಿಸಿ)

ಅಧೇನಮ್ಮಾ ?

ಸುಬ್ಬಮ್ಮ : ಇದೇನು ದೃಷ್ಟಿ ಪರೀಕ್ಷೇನೋ ನಿಂದು......ತೊಗಲಿನ ಚೀಲ......ವಿಲಾಯ್ತಿ ತೊಗಲು.

ಹಿರಿಯಣ್ಣಯ್ಯ : ತೊಗಲ್ಬಿಡು...ಚೀಲಬಿಡು...ಆದ್ರೆ ವಿಲಾಯ್ತಿದ್ದ್ಯಂಲ್ಲಾ ಅದು ಬಿಡ ಬೇಡ...ಅದೇನಪ್ಪಾ ಗೊಂತೀಯಾ ಅದು ! ಮೇಲ್ಕಾದಿರೋ ಅಪ್ಪೇ...electionನು ಒಂದು ತಿಂಗ್ಳಲ್ಲೇ ಬರೋದ್ದೂ, ಒಂದು speech ಕೂಡಾ ತಯಾರಾಗಿಲ್ದೆ ಕಣ್ಣು ಕಣ್ಣು ಬಿಡ್ತಿರೋ ನನ್ನೂ ಗಮನಿಸಿ, ಕನಿಕರ್ಪಿ ಬದ್ಕಿರೋ ನಿನ್ನ, ಸತ್ತಿರೋ ತನ್ನ ಚಪಲ ತೀರಿಸ್ಕೊಳ್ಳೋಕೇಂತ ಕಳ್ಸಿರೋ ವಸ್ತೂದು ಆ ಚೀಲ !...ಏನಪ್ಪಾ ಗೊಂತೀಯಮ್ಮಾ !... ರೈಲ್ವೆ ಚಾರ್ಜು ತಾನೇ ಕೊಟ್ಟುಕೊಂಡು ಬಂದಿಳಿ ದಿದ್ದಾನೆ...ಒಂದೊಂದು ಇಂಗ್ಲಿಷ್ ಮಾತು ಮೊಳುದ್ದ...ನಿಘಂಟೂನ ನುಂಗಿಬಿಟ್ಟಿದ್ದಾನೆ. ಅಲ್ದೆ ಮುನ್ಸಿಪಾಲಿಟಿ ಬಾಬತ್ನೆಲ್ಲಾ ಲೇಹ್ಯಮಾಡಿಟ್ಕೊಂಡಿಧಾನೆ ಮಂಡೇಲಿ; ಇವನ ಸಹಾಯದಿಂದ ಅಪ್ಪ ಹರಸಿ ನೀನು ಬಯಸೋ President ಪದವಿ ಖಾತ್ರಿ ಆಗೋದಲ್ದೆ...Rao Bahadur ಪಟ್ಟ ದೊರ್ಕೋಕೆ ಏನ್ಮಾಡಬೇಕು...ಯಾರ್ಯಾರ್ನ ನೋಡ್ಬೇಕು ಈ ಬಾಬ್ತೆಲ್ಲಾ ಪೊಗದಸ್ತಾಗಿ plan ಮಾಡ್ಕೊಂಡು ಇಟ್ಕೊಂಡಿಧಾನೆ ಮನುಷ್ಯ. ಇಂಥ ಅದ್ಭುತ ಪ್ರಾಣೀನ ಹಿಡಿದ್ಹಾಕ್ಬಿಟ್ಟಿಧೇನೆ! ಏನ್ಹೇಳ್ತೀಯಾ ! ಇನ್ನೇನ್ಹೇಳ್ತೀಯಾ ! ನಿನ್ನ ಚಿಂತೇನೂ ತಪ್ಪಿತು, ಅಪ್ಪನ ಆತ್ಮಕ್ಕೂ ಶಾಂತಿ. ಆದ್ರೆ ಈ ನಿಮ್ಮಿಬ್ರ ಸಂತೋಷ್ದಲ್ಲಿ ಒಂದ್‌ಚಿಕ್ಕಾತು. ಮನುಷ್ಯ ನನ್ಗೆ ಪಟ್ಟಾನೂ ಪದ್ವೀನೂ ಸಿಗೋವರ್ಗೆ ತನ್ನ ತನುಮನದ ತಾಬೇದಾರಿ ಧಾರೆ ಎರದ್ಬಿಟ್ಟಿಧಾನೆ ನಮ್ಕುಟುಂಬಕ್ಕೆ. ಅವನು ಕೇಳೋದು ಹೊಟ್ಟೇ ಗೊಂದಿಷ್ಟು ಕೂಳು...ಬಿದ್ಕೋಳೋಕ್ ಒಂದಿಷ್ಟು ಜಾಗ...ಅಲ್ದೆ ತಿಂಗಳಿಗೆ ಒಂದೆಪ್ಪತ್ತೈದು ರೂಪಾಯಿ...

ಸುಬ್ಬಮ್ಮ : ಎಪ್ಪತ್ತೈದ್ರೂಪಾಯಿ !...ಮಾಮ್ಲೆದಾರ್ರ ಸಂಬಳವಾಯ್ತಲ್ಲೊ ?

ಹಿರಿಯಣ್ಣಯ್ಯ : ಮಾಮ್ಲೆದಾರ್ರೇ !...ಮಾಮ್ಲೆದಾರ್ರ ಮುತ್ತಾತನ್ನ ಬಿಟ್ಟು... Commissionerಗೂ ತಿಳಿಯದ ಇಂಗ್ಲಿಷು ಡಜನ್ನಿಗೆ ಇಪ್ಪತ್ತರ ಹಾಗೆ ಮಾತುಗಳ್ನ ಬಿತ್ತಿಧಾಳೆ ಅವನ್ನಾಲ್ಗೇಲಿ...ಇಂಗ್ಲಿಷ್ ಸರಸ್ವತಿ.

ಸುಬ್ಬಮ್ಮ : ಆದ್ರೂಪ್ಪ...ತಿಂಗಳಿ ಪ್ಪತ್ತೈದೂಂದ್ರೆ...

ಹಿರಿಯಣ್ಣಯ್ಯ : ಅಮ್ಮಾ, ಇದು ತರ್ಕಮಾಡೋ ಮಾತಲ್ಲ...ವ್ಯಾಪಾರವಲ್ಲ... ಅವನಿದ್ರೋ ನಿನ್ನಾಸೆ ಫಟಿಸಿದ ಹಾಗೆ...ಇಲ್ಲೋ...

(ಜೇಬಿನಿಂದ 5 ರೂ. ನೋಟನ್ನು ತೆಗೆದು ನೀಡುತ್ತಾ)

ಕಮೀಷನರಿಗೆ ಕೊಡೋ ಹಣ್ಣು, ಹೂವೂ, ಹಂಪ್ಲು ಖರ್ಚು ವ್ಯರ್ಥ. ತಿರಿಗೂ ಸೇರಿಸ್ಕೋ ಈ ಐದು ರೂಪಾಯ್ನ ನೀನೇ ಅನುಭವಿಸಿಕೊಳ್ಳೋ ಪುಟ್ಟ ಗಂಟಿಗೆ.

(ಬಿರುಸಾಗಿ)

ಬಿಡ್ಮರೀಬೇಡಾ...ಅಲ್ಮೇಲೆ ಕಾದಿಧೆ ಅಪ್ಪನ ಆತ್ಮ ತನ್ಮಾತು ಸುಳ್ಳಾಗಬಾರದೂಂತ !

(ತಲೆಬಾಗಿಸಿ ಗದ್ಗದ ಸ್ವರದಿಂದ)

ಆ ಆತ್ಮದ ಶಾಂತೀನೂ... ಈ ಪ್ರಾಣಿ ಕೇಳೋ ಶನಿ ಕಾಸ್ನೂ ಎದ್ರು ಬದ್ರು ತೂಗೋದಾದ್ರೆ ನೀನು...ಹುಂ ! ಇನ್ಮಾತೇನಿದೆ...ತಗೋಮ್ಮಾ...ನಿನ್ಸೈದ್ರೂಪಾಯಿ ನೋಟ್ನಾ !

(ಮೇಜಿನಂಚಿನಲ್ಲಿ ನೋಟನ್ನು ನಾಜೋಕಾಗಿ ಮಡಿಸಿಟ್ಟು ರುಮಾಲನ್ನು ತೆಗೆದು ಗೂಟಕ್ಕೆ ತಗುಲಿಸಿ ಜೇಬಿನಲ್ಲಿರುವ ಬಂಗಾರದ ಸರಪಣಿಗೆ ತಗುಲಿಸಿದ ಬಂಗಾರದ ಗಡಿಯಾರಕ್ಕೂ ಗೋಡೆಗೆ ಅರೆದಿರುವ ಗಡಿಯಾರಕ್ಕೂ ಇರುವ ಕಾಲ ತಾರತಮ್ಯವನ್ನು ಗಮನಿಸುತ್ತಾ in loud whisper)

ಪ್ಹಂ...ಉಸ್...ಅಪ್ಪನ ವಾಚು...girls' school building Foundation ಮಹಾರಾಜ್ರು ಹಾಕ್ದಾಗ...ಊರೆಲ್ಲಾ subscription ಹಾಕಿ presentation ಮಾಡಿದ್ದು !

(ನಿಟ್ಟುಸಿರು ಬಿಡುವನು)

Poor old Appa !

ಸುಬ್ಬಮ್ಮ : (ಸಮೀಪಿಸಿ ಪುತ್ರನ ಬೆನ್ನನ್ನು ಸವರುತ್ತಾ)

ಹಯ್ಯೋ ಮಗೂ, ಇದೇನು. ಐವತ್ತೇನು ರೂಪಾಯಾಗ್ಲೀ...ಸಾವಿರವಾಗ್ಲೀ...ಈ ಹೊತ್ತೇನೇನೋ...ನಾಳೇನೇನೊ...ನಿಮ್ಮ ತಂದೇಸ ಸೇರೋ ನನ್ಗೆ ದುಡ್ಡಿನ ಚಿಂತೆ ಏನೂ ಇಲ್ಲ. ಆದ್ರೆ ಒಂದ್ಸಂತೋಷ ! ಜೋಲ್ಬಾಯಿ ಬಿಟ್ಕೊಂಡು ಜಡಭರತನ ಹಾಗೆ ಸರ್ವದಾ ತೂಗಾಡ್ತಿದ್ದ ನೀನು ಈ ಎಪ್ಪತ್ತೈದ್ರೂಪಾಯಿ ಮನುಷ್ಯ ಬರತ್ಲೂನೂವೆ...ಈ ಮುನ್ಸಿಪಾಲ್ಟಿ ರಾವ್‌ಸಾಹೆಬ್ ವಿಷಯದಲ್ಲಿ ಹಲ್ಲು ಕಚ್ಚಿಕೊಂಡು ನೀನು ಈಗ ಹಿಡಿದಿರೋ ಮುಷ್ಕರಾನ ಸಾಧಿಸೋದಾದ್ರೆ ಮುಂದೆ ನಮ್ಮೆಲ್ರ ಹಾರೈಕೆಗೂ ಹಿತಕ್ಕೂ ದಾರೀಂತ ನನಗಿಲ್ಲೆಲ್ಲೋ ಹೇಳುತ್ತೆ...ಆದ್ರೆ ಮರೀಬೇಡ... ತಿಂಗಳ್ಗೆ ಎಪ್ಪತ್ತೈದೂಂದ್ರೆ...ದಿನಕ್ಕೆರಡೂವರೆ ರೂಪಾಯಿ...ಅನ್ನ ಅಲ್ವೆ!...ನೀನೇನು ಕೆಲ್ಸ ನೇಮಿಸ್ತೀಯೋ ಅವೆಲ್ಲಾನೂ ಅಲ್ದೆ ಮನೇ ಲೆಖ್ಖಗ್ಳು ಬರೆಯೋದು...ಒಟ್ನಲ್ಲಿ ಸೌದೆ ಒಡಿಯೋದೂ ಅಲ್ಲದೆ ದನಕರು...ಕುಟುಂಬದ ಒಟ್ಟು ಉಸ್ತುವಾರಿ ಎಲ್ಲಾ ವಹಿಸೋದಾದ್ರೆ...ಅವನು...

ಹಿರಿಯಣ್ಣಯ್ಯ : ಈ ಕುಟುಂಬದ ಉಸ್ತುವಾರಿ ! ಅವನ್ನ ಗೊತ್ತಿಲ್ಲಾಮ್ಮ ನಿನಗೆ ಮುಂದಕ್ಕೆ ಗೊತ್ತಾಗುತ್ತೆ ಚಂಡ ಪ್ರಚಂಡ...ಅವನ್ಮಾತೂ...ಜಬರ್ದಸ್ತು ನೋಡ್ತೀರೀ...congress ಕೆಲ್ಸಾನೇ...ಒಬ್ನೆ contract ತಗೊಳ್ಳೋ ಗೈರತ್ತು...

ಸುಬ್ಬಮ್ಮ : (ನಿಷ್ಕ್ರಮಿಸುತ್ತಾ by C.)

ಅದೇನೋಪ್ಪಾ. "ಮೈಮುರಿಯೋ ಹಾಗೆ ಕೆಲ್ಸ ತೊಗೊಂಡ್ರೇನೆ ಮಾತುಕೊಟ್ಟಹಾಗೆ ಕೂಲಿ ಕೊಡೋದು ಜಾಣತನಾ"ಂತ ನಿಮ್ತಂದೆ ಹೇಳ್ತಿದ್ದದ್ದೂ ಇದೇ...ನಾನೀಗ್ಹೇಳೋದೂ ಅದೇ... ಮುಖ್ಯ ಎಂತವ್ನಾದ್ರೂ ಹತೋಟೀಲಿಟ್ಕೊಂಡು ಕೆಲಸ ತಗೋ...

(ನಿಷ್ಕ್ರಮಿಸುವಳು by C.)

ಕಪ್ಪಣ್ಣ : (ಪ್ರವೇಶಿಸಿ, by L)

Forgive me sir, ಮನೇಗೊಂದು ಹೆಸರಿಡಬೇಕು.

ಹಿರಿಯಣ್ಣಯ್ಯ : ಮನೇಗ್ಹೆಸರು ! ?

ಕಪ್ಪಣ್ಣ : Just imagine sir,...hypothetical ಆಗ್ಲೀನೇ... address... letter. On His Imperial Majesty George Rex's— Latinನಲ್ಲಿ Kingoo.........of Englandoo.........Imperator — also Doನಲ್ಲಿ Emperoroo O. H. M. apostrophe S. Serviceoo—to Hiriyannayya, four upon sixty four, Doddabrahmin Street–old Sunkadakatte Road.. ಹ್ಯಾಗಿದೆ ಕಿವೀಗೆ ? Horrible ಅಲ್ವೇ? ತಿದ್ದ್ಬಿಡ್ತೀನಿ...Rao Saheb Hiriyannaya, The Eagles' Nest, Rampur. ಚೆನ್ನಾಗಿದ್ಯೆ?

ಹಿರಿಯಣ್ಣಯ್ಯ : ಚೆನ್ನಾಗಿದೆ...you see. ಇನ್ಮೇಲೆ ಈ ನನ್ನ...

ಕಪ್ಪಣ್ಣ : Official affairsನೆಲ್ಲಾ ನಾನೇ incharge ತಗೋಳ್ಳೋ...

ಹಿರಿಯಣ್ಣಯ್ಯ : Quite so...ಅದೇ ನಾನು think...mean...ಮಾಡಿದ್ದು.

ಕಪ್ಪಣ್ಣ : Don't take the trouble, sir. From this moment ನಾನು ನಿಮ್ಮ paid serventoo...ನಿಮ್ಮ affairs ನಲ್ಲಿ think ಮಾಡೋದೂ...mean ಮಾಡೋದೂ......ಈ ಭಾರಾನೆಲ್ಲಾ ನನಗ್ಬಿಟ್ಬಿಡಿ. ಸದ್ಯ before I dispose myself with regard...ಅಥೇ... ರೂಮು etc., ಹೇಳ್ತೀನಿ.

ಹಿರಿಯಣ್ಣಯ್ಯ : ಬೋರಾ !

ಬೋರಾ : (ಬಂದು)

ಬುದ್ದೀ.

ಹಿರಿಯಣ್ಣಯ್ಯ : ರಾಯರ...

(ಸೂಚಿಸಿ)

ಪೆಟ್ಗೇನಾ...

ಕಪ್ಪಣ್ಣ : (ಅಡ್ಡಮಾತಾಡಿ)

Plus my ಸರ್ವಧಾರಿ—hold all. ಹಾಸ್ಗೇನೂ...ಹೊರಗಿದೆ.

ಹಿರಿಯಣ್ಣಯ್ಯ : ಇದನ್ನೆಲ್ಲಾ, ಬೋರಾ, ಮಹಡಿಮೇಲ್ಗಡೆ ಕೋಣೇಲಿಟ್ಟು...ಕೋಣೇನ್ಗುಡ್ಸಿ ಒಂದು ಲಾಂದ್ರಾನೂ ಹಚ್ಚಿಡು.

(ಕಪ್ಪಣ್ಣನಿಗೆ)

Now that you are engaged...one more detail...my old mother you know...old fashioned also too old to manage...but still......

ಕಪ್ಪಣ್ಣ : (ಅಡ್ಡಮಾತಾಡಿ)

Ponderous responsibilities of the house, property, wealth, servants, cattles, dogs, cats ಅಲ್ದೆ ಉಗ್ರಾಣದ ಸರ್ಕುಗಳ್ನ ಸೂರೆಹೊಡೀತಿರೋ mice also ! ಅರ್ಥ್ವಾಯ್ತು ಸಾರ್...ನಿಮ್ಮ municipality ಮೆಂಬರ್ಸ್ ಅಲ್ದೆ...ಮನೆ managementoo ಜವಾಬ್ದಾರೀನೂ ವಹಿಸ್ಬೇಕಾದ...ಒಟ್ನಲ್ಲಿ ನಾನು sleep ಮಾಡೋ twelve to six ಜಾತಾಬಾಕಿ ಹದಿನೆಂಟು ಘಂಟೇನ...ಯತ್ ನನ್ನ ದೇಹ ಬುದ್ಧಿ etc......

ಹಿರಿಯಣ್ಣಯ್ಯ : You understand me perfectly...ಇನ್ಮೇಲೆ ಮನೆ management......

ಕಪ್ಪಣ್ಣ : Plus......

ಹಿರಿಯಣ್ಣಯ್ಯ : My future......

ಕಪ್ಪಣ್ಣ : Prospects of Planning and the road to...realisation of...ತಮ್ಮ ದಿವಂಗತ ಜಾತಕ prophecy...prognosticate ಮಾಡಿದ fathership or Mayoralty of the Local Corporation ಅಲ್ದೆ Rao Saheb certainly ...Rao Bahadur probably...Dewan Bahadur possibly...ಹೇಳೀಬಿಡ್ತೀನೆ

ಸಾರ್…carefulಆಗಿ deplomaticಆಗಿ move ಮಾಡಿದ್ರೆ Sir titleoo…why not? …K.C.S.I…K.C.I.E. ಇಲ್ದಿದ್ರೂನೂವೆ…ಬರೀ ಒಂದು brggarly Kt. hoodoo… impossible ಏ ಸಾರ್…ನಿಮ್ಮ power self and position plus my humble brainoo ಸೇರಿರೋವಾಗ ?……ನೀವೇನ್ನಾನೇ ಹೇಳಿ ಸಾರ್……ಸಾಹೇಬ್ರೋ, ಬಹದ್ದೂರ್ರೋ, ನಿಮ್ಮ fatheroo ಏನಿದ್ರೂನೂವೆ Sir Hiriyannayya, the Eagles' nest, Rampur, South India. ಹ್ಯಾಗಿದೆ ಸಾರ್ addressoo…

ಹಿರಿಯಣ್ಣಯ್ಯ: (Suddenly waking up from the beautiful dream that Kappanna has dropped him into)

Thank you very much but in the meanwhile motheroo…… ನಿಮ್ಮನ್ನ……

ಕಪ್ಪಣ್ಣ: "ನಿನ್ನ"……ನನ್ನ ಮೇಲೆ ನಿಮಗಿರೋ personal affection ಗಲಾಟೇಲಿ ತಾವು masteroo ನಾನು servantoo ಅಂಬೋದ್ನ ಮರೀಬೇಡಿ…but…ನೀವ್ಹೇಳ್ತಿದ್ರಿ… something…

ಹಿರಿಯಣ್ಣಯ್ಯ: ಅದೇ…ಮನೆ management ವಿಷ್ಯದಲ್ಲಿ…mother ಪತ್ರ… detailoo…

ಕಪ್ಪಣ್ಣ: Certainly sir,…report ಮಾಡ್ಕೋತೇನೆ…Dowager Mrs. late Rao Sahebಗೆ…

(approaching C)
ನೀವೇನ್ಹೇಳಿದ್ರೂ still Sir,…'Sir' titleoo 'Sir title' ಏ!

ಹಿರಿಯಣ್ಣಯ್ಯ: ಅದೆಲ್ಲಾ impossibleoo.

ಕಪ್ಪಣ್ಣ: "Nothing is impossible" is the first word in my dictionary. Authority: Napolean Bonyparte. birth Corsica, death St. Helena, dates can supply if necessary……ಮೊದಲು small sepoy, ಕೊನೇಗೆ Emperoroo……ಯಾವುದು ತಾನೇ impossible, sir?

[ಹಿರಿಯಣ್ಣಯ್ಯ ಇದನ್ನು ಕೇಳಿ ಕಣ್ಣುಗಳು ಹೊಳೆಯುತ್ತಾ ದಿಗ್ಭ್ರಮಿತನಾಗಿ 'Sir titleoo'……"beggarly KT. hoodoo……Napoleonoo……ಸಿಪಾಯಿ… Emperoroo! possible always in my dictionary" ಎಂದು ಸ್ವಗತಃ ಗೊಣಗುಟ್ಟುತ್ತಾ exit by R]

ಕಪ್ಪಣ್ಣ: (At C)

ಅಮ್ಮಾ…ಅಮ್ಮಾವ್ರೇ…ಯಜಮಾನಮ್ಮನೋರೆ…

ಸುಬ್ಬಮ್ಮ: (From within)

ಯಾರದು?

ಕಪ್ಪಣ್ಣ: ನಾನೂಮ್ಮಾ…ಈಗತಾನೆ ತಮ್ಮ…

(ಸುತ್ತುಮುತ್ತಲೂ ನೋಡಿ)

...ತಮ್ಮ ತಮ್ಮಾವ್ರು ತಮ್ಮ ಕುಟುಂಬದ ವಿಶಿಷ್ಟ ಕೆಲ್ಸನೂ ಜರುಗ್ಸೋಕೆ ಈಗತಾನೆ ನೇಮಿಸ್ದ ಜವಾನಾವಮ್ಮಾ...ಸೇವ್ಕ...ದಾಸ... ಕಪ್ಪಣ್ಣ ನನ್ನ ಹೆಸರು...ಬ್ರಾಹ್ಮಣ...ಕರ್ಣಾಟಕ... ಸ್ಮಾರ್ತ...ಕಮ್ಮೆ...ಆದ್ರೆ, ಅಮ್ಮ, ಹೆಮ್ಮೆ ಇಲ್ಲದ ಕಮ್ಮೆ...

ಸುಬ್ಬಮ್ಮ : (ಪ್ರವೇಶಿಸಿ)

ನೋಡೂ...ಮನೇ ಎಲ್ಲಾ ತಾರುಮಾರಾಗಿ ಹೋಗಿದೆ.

ಕಪ್ಪಣ್ಣ : (ಧ್ವನಿಯನ್ನು ಅಲ್ಪ ತಗ್ಗಿಸಿ)

ಗೊತ್ತೂವಮ್ಮಾ...ತಮ್ಮ ತಮ್ಮಾವ್ರು ತಪ್ಸೀಲಾಗಿ ವಿವರಿಸ್ದ್ರು.

ಸುಬ್ಬಮ್ಮ : ತಮ್ಮ ? ಯಾರದು?...ನನ್ನಮ್ಮ ?

ಕಪ್ಪಣ್ಣ : ರಾಯ್ರೂವಮ್ಮಾ...Rao Saheb ಮುಂದಾಗೋ ಒರಿಯಣ್ಣಯ್ಯನೋರು... ಈಗತಾನೇ...

(indicating R)
ಮಹಡಿ ಹತ್ತಿತ್ಹೋದ್ರು.

ಸುಬ್ಬಮ್ಮ : (ಮುಗುಳುನಗೆಯಿಂದ)

ತಮ್ಮಲ್ವೋ ಅದು...ನನ್ಮಗ.

ಕಪ್ಪಣ್ಣ : (ಚಮಕಿತನಾಗಿ)

ಮಗ ?...ಹೇಗಮ್ಮಾ ಅದು ?...
(smiling)
ಅರ್ಥವಾಯ್ತು.

ಸುಬ್ಬಮ್ಮ : ಏನರ್ಥ್ವಾಯ್ತು

ಕಪ್ಪಣ್ಣ : ಸುಮಿತ್ರಾದೇವೀಗೆ ಶ್ರೀರಾಮ ಹೇಗೆ ಮಗನೋ ಹಾಗೆ......ಅಲ್ವೇಮ್ಮಾ ?

ಸುಬ್ಬಮ್ಮ : ಎಲ್ಲಿಂದೆಲ್ಲಿಗೋ...ಕೌಸಲ್ಯಾ ಅಲ್ವೆ...?

ಕಪ್ಪಣ್ಣ : ಅಧೇಮ್ಮಾ ದಶರಥರಾಜನಿಗೆ......ಇರ್ಲಿ........ದಿವಂಗತರಾದ ದೊಡ್ಡ ಯಜಮಾನ್ರು Rao Saheb...ಊರೆಲ್ಲಾ ಈಗ್ಲೂ ಹೊಗಳ್ತಿರೋ ಯಜಮಾನ್ರ ದಿವಂಗತ ದೊಡ್ಡ ಹೆಂಡ್ತಿಯ ಮಗ...ನನ್ನ ಯಜಮಾನ್ರು...ತಾವು ಸುಮಿತ್ರೆ...ಕ್ಷಮ್ಸಿಮ್ಮಾ. ಒಟ್ನಲ್ಲಿ ಅಕ್ಕ ತಮ್ಮಂದಿರ ಹಾಗೆ ಇತ್ತು...ಇಧೆ...ಮುಖನೋಡಿದ್ರೆ ಹೇಳ್ತೇನೆ !

ಸುಬ್ಬಮ್ಮ : (ನಗುತ್ತಾ)

ಹ್ಹ : ಹ್ಹ : ಹ್ಹ : ...ಇದೇನಾಶ್ಚರ್ಯ. ಆ ಪೂಜಾರಿ ಆಗ ಹೇಳಿದ್ದೇನೂ !...ನೀನು ಈಗ ಹೇಳ್ತಿರೋಧೇನು !...ಹ್ಹ : ಹ್ಹ : ಹ್ಹ : ಹ್ಹ : ...ಆಶ್ಚರ್ಯ.

ಕಪ್ಪಣ್ಣ : ಪೂಜಾರಿ...ಯಾವ...

ಸುಬ್ಬಮ್ಮ : ನೋಡೋ ಮಗು. ಲಾಗಾಯ್ತಿನಿಂದ ನಮ್ಮ ಮನೆತನದ ತೌರ್ಮನೆ ತನದ ಮಂಗಳಾರ್ತಿ...ಮೈಸೂರು ಚಾಮುಂಡೀಗೆ. ಬೆಟ್ಟ ಹತ್ತಿ ಮನೆಯೋರೆಲ್ಲಾ ಮಾರ್ನವಮಿ ರಾತ್ರಿ ನೂರೆಂಟ್ರೂವಾಯಿ ಮಂಗಳಾರ್ತಿ ಅಮ್ಮನಿಗೆ...ನನ್ನ ಚಿಕ್ಕಂದಿನಲ್ಲಿ ನಮ್ಮಕ್ಕ ವೆಂಕಟಲಕ್ಷ್ಮಿ...

(snivelling)

—ತಾಳೀ ಕಟ್ಟಿಕೊಂಡು ಕಣ್ಮುಚ್ಚಿದಳು ಪುಣ್ಯಾತಗಿತ್ತಿ—ಅವಳೂ ನಾನೂ ಹಿಂತಿದ್ದೇವೆ... ಗರ್ಭಗೃಹದಲ್ಲಿ...ಗಲಾಟೆ ಜಾಸ್ತಿ...ಆಗ ಅಷ್ಟೋತ್ತರ ಹೇಳಿ ಮುಗ್ಸಿ ಮಂಗಳಾರ್ತೀಗೆ ಕರ್ಪೂರ ಹಚ್ತಾ...ಸುತ್ತ ಮುತ್ತಲಿರೋರು ನಮ್ಮೇಲ್ಬೀಳ್ತಿರೋದ್ನ ಗಮನ್ಸಿ ಆ ಪೂಜಾರಿ...ಅಕ್ಕನ್ನ "ಅಮ್ಮಾ, ನಿಮ್ಮಗಳ್ನ ಕರ್ಕೊಂಡು ಹೀಗೆ ಬನ್ನೀಮ್ಮಾ"ಂತಂದ. ಅನ್ಯಾಯ. ರೇಗಿದ್ಳು ನಮ್ಮಕ್ಕ! ಪ್ಪ: ಪ್ಪ: ಪ್ಪ: ಪ್ಪ: ಆಶ್ಚರ್ಯ......ಆಶ್ಚರ್ಯ! ಮಗು ನನ್ನಮ್ಮೇ?...ಬಲ್ಲೇ ಬೆಪ್ಪು ನೀನು!

ಕಪ್ಪಣ್ಣ : (ತಲೆಬಾಗಿ)

ಬೆಪ್ಪೇನೋ ಹೌದೂಮ್ಮಾ...ಆದ್ರೂನೂವೆ...ಒಬ್ಬರ್ಗೊಬ್ಬರ್ನ ಹೋಲ್ಸಿದ್ರೆ...ಹಾಗ್ತೋಚ್ತು ...ಕಂಡುಬಂತು...ನನ್ನಣ್ಣಗೆ...ನಾನು ಬೆಪ್ಪಾದ್ರೂನೂವೇಮ್ಮಾ ತಮ್ಮನೇ ಅನ್ನಾ ತಿನ್ನೋ ಲಭ್ಯಾಸ ನನಿಗೆ ಪರಮಾತ್ಮ ನನ್ನಣೇಲಿ ಬರೆದಿರೋವರ್ಗೂ ಮನೇಗೆ ಸರ್ವವಿಷಯದಲ್ಲೂ ಉಪಯೋಗವಾಗೋ ವಿಧಾನಗಳ್ನ ತಪ್ಪಿಲ್ಲಾಗಿ ತಮ್ಮಾತ್ರಿಂದ ತಿಳ್ಕೋಂತ ಯಜಮಾನ್ರು...ತಮ್ಮಕ್ಕವಾರ್ರು ಅಜ್ಞಾ ಪಿಸಿದ್ದಾರೆ.

(Getting fountain-pen and book out of pocket and preparing to take down instructions)

ಪ್ರಥಮತಃ ... ಒಂದ್ಪಟ್ಟೀ of propertyನು...ಹೇಳ್ತೀನೇಮ್ಮಾ...ದೊಟ್ಟಿ ಮೊದಲು ಮನೆತನಕ್ಸೇರಿದ ಮನೆಗಳೆಷ್ಟು...ಬಾಕ್ಲೆಷ್ಟು...ಮಕ್ಕಳೆಷ್ಟು ... ಮರಿಯೆಷ್ಟು ... ದನಯೆಷ್ಟು ... ...ಕರುಯೆಷ್ಟು......ಜೋಡಿಗ್ರಾಮಗಳೆಷ್ಟು, ಅವುಗಳ ವರಮಾನ ಎಷ್ಟು, ಅವುಗಳಿಗೆ ಸೇರಿದ ತೋಟತಿಟ್ಟುಗಳೆಷ್ಟು...ಹೊಲಗದ್ದೆಗಳೆಷ್ಟು...ಇವುಗಳಿಂದೆಲ್ಲಾ ಜಮಾ ಎಷ್ಟು...ಖರ್ಚು ಎಷ್ಟು... ಜಮಾದಿಂದ ಖರ್ಚು ಜಾತಾ ಬ್ಯಾಂಕಿಗೆ ಬಡ್ಡಿಸಹಿತ ಬೆಳೆಯೋಕೆ ಹೋಗೋಬಂದ್ದಾಳ ಎಷ್ಟು... ಅಲ್ದೆ pass bookooಗ್ಳು...cheque bookooಗ್ಳು ... ರಸೀದಿಗ್ಳು ... ಅಲ್ದೆ ಹಳೀ ಪತ್ರಗಳು...ಒಟ್ನಲ್ಲಿ...

ಸುಬ್ಬಮ್ಮ : (With admiring eyes)

ನೀನ್ಕೇಳೋದ್ನೆಲ್ಲಾ ಈಗ ಹ್ಯಾಗೆ ಒಪ್ಸೋದು ನಾನು...

ಕಪ್ಪಣ್ಣ : ಒಪ್ಸೋದಲ್ಲಾಮ್ಮಾ...ದೊಡ್ಯಜಮಾನ್ರು ಕಣ್ಮುಚ್ಚಿದ ಕ್ಷಣದಿಂದ ಈ ಕ್ಷಣದ ವರ್ಗೂ ಬರೆದಿಟ್ಟಿರೋ ಲೆಕ್ಕದ ಪುಸ್ತಕಗಳ್ನ ನನ್ಕೈಲಿ ಈಗ ಇಟ್ಟಿಟ್ರೆ...ರಾತ್ರಿ ಎಲ್ಲಾ ಓದಿ ಬೆಳಕು ಹರಿಯೋಷ್ಟುಹೊತ್ಗೆ...ಮನಸ್ಸಿಗೆ ಎಲ್ಲಾ ತಂದ್ಕೊಂಡು...ಮುಂದಿನ ಕ್ರಮಾನ...

ಸುಬ್ಬಮ್ಮ : (ಗದ್ಗದ ಸ್ವರದಿಂದ)

ಹಯ್ಯೋ ಮಗು...ಏನ್ಹೇಳ್ಲೀ...ಈ ಕುಟುಂಬದ ವಿಚಿತ್ರಾನ...

ಕಪ್ಪಣ್ಣ : (ಥಟ್ಟನೆ ಕುರ್ಚಿಯನ್ನೆತ್ತಿ ಸುಬ್ಬಮ್ಮನ ಹಿಂದಿಟ್ಟು)

ಹೀಗೆಲ್ಲಾ ಅಧೈರ್ಯಪಟ್ಟು ಪ್ರಯೋಜನವಿಲ್ಲಾಮ್ಮಾ!...ಸ್ಥೈರ್ಯ ತಂದ್ಕೊಳ್ಳೋ ಸಮಯಾ ಇದು. ಕೂತ್ಕೊಳ್ಳಿ.

(ಸುಬ್ಬಮ್ಮನು ಕುಳಿತುಕೊಳ್ಳುವಳು. ಕಪ್ಪಣ್ಣನು ಆಕೆಯ ಮುಂದೆ ನೆಲದಲ್ಲಿ ಕುಳಿತು ಕೊಳ್ಳುವನು.)

ಸುಬ್ಬಮ್ಮ : ಹಯ್ಯೋ...ಬರೀ ನೆಲ.

ಕಪ್ಪಣ್ಣ : ಪರ್‍ವಾ ಇಲ್ಲಾಮ್ಮಾ...ಮಾಸಿದ್ದಂಚೆ...ರೈಲ್ನಲ್ಲಿ ಬಂದದ್ದು...ಸಂಸಾರದ ವಿಷ್ಯಾ ನಮ್ಮಾ ಸಾಂಗೋಪಾಂಗವಾಗಿ ವಿವರಿಸಿ ನನಗೆ ; ನನ್ನಿಂದ ಕುಟುಂಬಕ್ಕಾಗೋ ಸಹಾಯಾನ ನಾನ್ಮಾಡ್ತೇನೆ. ಮುಖ್ಯಾಮ್ಮ ಸ್ನೇಹಾಂಬೋದು ಮಾಡ್ಲೇಬಾರ್‍ದು ಮನುಷ್ಯ ! ಇಲ್ಲ ಒಂದುವೇಳೆ ಮಾಡಿಬಿಟ್ರೋ...ಪಂಚಪ್ರಾಣಗಳು ಹೋಗೋವರಿಗೂ ಆ ಸ್ನೇಹಾನ ಸಾಧಿಸ್ಬೇಕು...ನಿಭಾಯಿಸ ಬೇಕು...ಬಿಟ್ಟಲ್ಲೀಮ್ಮಾ...ರಟ್ಟೆ ಮುರ್‍ಕ್ಕೋಹಾಗೆ ದುಡ್ದು ಸಂಪಾದಿಸ್ದ ರೊಟ್ಟೀ ರುಚಿ ದೇವಲೋಕದ ಅಮೃತಕ್ಕೂ ಇಲ್ಲಾಮ್ಮಾ...ನಾನೇಕ್ಹೇಳ್ಲಿ, ಪರಮಾತ್ಮನೇ ಹೇಳ್ತಾನೆ ಭಗವದ್ಗೀತೇಲಿ..."ನಯನಂ ಛಿಂದಂತಿ...ಶಾಸ್ತ್ರಾಣಿ."

ಸುಬ್ಬಮ್ಮ : (Aghast)

ಸಂಸ್ಕೃತಾನೂ ಗೊತ್ತೇ ನಿನಗೆ ! ?

ಕಪ್ಪಣ್ಣ : (Laughing sardonically)

ಪ್ಚೆ ! ಸಂಸ್ಕೃತ ಗೊತ್ತೇ...ನಮ್ಮುಟುಂಬದ ಏಳ್ತಲೆಮಾರೇಮ್ಮಾ...ಶೃಂಗೇರೀಲಿ ಠಿಕಾಣೇ... ಏನೋ ಕಾಲಪರಿಸ್ಥಿತಿವಶಾತ್...ಭರ್ತೃಹರಿ ಹೇಳ್ದ್ಹಾಗೆ "ಕಾಲೋಹ್ಯಯಂ ನಿರವಧಿ"...ವಿಧೀಮ್ಮಾ ಮುಖ್ಯ ಕಾರಣ.

ಸುಬ್ಬಮ್ಮ : (Controlling her mixed complex of admiration relief, sadness etc.)

ಏನೋಪ್ಪಾ, ನನ್ಮಗ್ನೋ ಅವನ ಮುನ್ಸಿಪಲ್ ವಿಷ್ಯದಲ್ಲಿ ನಿನ್ನಿಂದ ಉಪಯೋಗಾಂತ ಹೇಳಿದ್ಮೇಲೆ ಒಪ್ಕೊಂಡೆ...ನೀನು ಮನೇ ಒಳ್ಗೆ...ಆದ್ರೆ ನಮ್ಮುಟುಂಬ ಮುಂದಕ್ಬರೋ ವಿಷ್ಯದಲ್ಲಿ ನಿನಗಿಷ್ಟು...

ಕಪ್ಪಣ್ಣ : ಹುಮ್ಮಸ್ಸು...ಉತ್ಸಾಹ...ವಿಧೇಯತೆ...ವಿವೇಕ...ವಿ...

ಸುಬ್ಬಮ್ಮ : ಹೌದು. ನೀನೀಗ್ಹೇಳಿದ್ದೆಲ್ಲಾ ನಿನಗಿಧೇಂತಾ ನನಗೊತ್ತಿರಲಿಲ್ಲಾ...ನಮ್ಮೆಲ ಸಂರಕ್ಷಣೇಗೆ ದೇವ್ರೇ ನಿನ್ನ ಕಳಿಸಿದ್ದಿರಬೇಕು.

(ಗೋಡೆಗೆ ತಗುಲಿಸಿರುವ oil paintingಅನ್ನು ತೋರಿಸುತ್ತಾ)

ನನ್ನ ಮೊಮ್ಮಗನಾಗ್ಲೀ...

ಕಪ್ಪಣ್ಣ : ಕ್ಷಮಿಸೀಮ್ಮಾ. ನಿಮಗೆ ಯಜಮಾನ್ರು ಮಗಾಂಬೋದಿರ್‍ಲಿ...ಇನ್ನು ಮೊಮ್ಮಗ... ಆಶ್ಚರ್ಯಾಮ್ಮಾ...ಭಗವದ್ಗೀತೇಲಿ ಬರೋಹಾಗೆ "ಆಶ್ಚರ್ಯವತ್ಪಶ್ಯತಿಕಶ್ಚಿದೇಣಂ..."

ಸುಬ್ಬಮ್ಮ : ಹಯ್ಯೋ ! ಹೇಳ್ತೇನೆ ಕೇಳೂ.

(ನಿಟ್ಟುಸಿರುಬಿಡುತ್ತಾ)

ನಾನ್ಹೇಳೋದೇನು...ನಿನಗೇ ಗೊತ್ತಾಗುತ್ತೆ...ಕ್ರಮೇಣ...ಆದ್ರೂ ಕಾಲಹರಣ ಆಗದ ಹಾಗೆ... ರೈಲಿನಲ್ಲಿ ಬಂದಿಧೀಯಾ...ಕೈಕಾಲ್ ತೊಳಕೊಂಡು ಊಟ ಮಾಡಿ ಮಲಕ್ಕೋ...ಬೆಳಗ್ಗೆ ನನ್ಮಗ್ನೂ ಮೊಮ್ಮಗ್ನೂ ತಂತಂಮ ದುಂದ್ಗಾರ್‍ಕ್ಯೇಲಿ ಮುಳುಗ್ತಿರೋ ಅವಸ್ಥೇಲಿ ಕುಟುಂಬದ ಭಾರಾನೆಲ್ಲಾ ಹೊಸ್ಕೊಂಡು ಗೋಳಾಡ್ತಿರೋ ನನ್ನ ಅವಸ್ಥೇನ ಬೆಳಗ್ಗೆ ಹೇಳ್ತೇನೆ. ಮಗೂ, ಎದ್ದು ಕೈಕಾಲು ತೊಳ್ಕೊಂಡು...ಸಂಧ್ಯಾವಂದನೆ...

ಕಪ್ಪಣ್ಣ : ಈಗ್ಲೇ .... ಇಧೇನಮ್ಮಾ........ಸಂಧ್ಯೆ ಹೊತ್ಗೇ ಆಗ್ಹೋಯ್ತು. ದೇವ್ರದಯದಿಂದ ಆರೂವರೆಘಂಟೆಗೆ, ಇಂಜಿನ್ನು ನೀರ್‍ಕುಡ್ಯೋಕೆ ಅಂತ ನಿಂತ ಸ್ಟೇಷನ್ನಲ್ಲೇ ನನ್ನ ಸಂಧ್ಯೆ ತೀರಿಸ್ಕೊಂಡೆ...ಸಮುದ್ರವಲ್ಲ...ನದಿಯಲ್ಲ...ನಲ್ಲಿ ನೀರು !...ಆದ್ರೇನ್ಮಾಡೋದೂಮ್ಮಾ...

ಕಲಿಯುಗ...ಲೌಕೀಕ ಆಪದ್ಧರ್ಮ...ಸಂಧ್ಯೆ ಆಯ್ತೂವ್ಮಾ...ಗುರುವಾರ ರಾತ್ರಿ ಉಪವಾಸ...ನಮ್ಮ ಸಂಪ್ರದಾಯ, ಒಂದಿಷ್ಟು ನೀರ್ಮಜ್ಜಿಗೆ ಕೊಟ್ರೆ ಸಾಕೂಮ್ಮಾ...

ಸುಬ್ಬಮ್ಮ : ಬೋರಾ !

(ಬರುವನು by L)

ಈ ರಾಯರ್ಗೆ...

ಕಪ್ಪಣ್ಣ : ನಾ ನೋಡ್ಕೋತೇನೇವ್ಮಾ........ಬೋರಣ್ಣೋರು ಇಧಾರೆ ಸಹಾಯಕ್ಕೆ...

(ಮುಂದೆ ಬರುವನು)

ಏನೂ ಇಲ್ಲ ಬೋರಣ್ಣೋರೆ...ಹೊಸಬ ಈಗ ಮನೇಗೆ...ನಿಮ್ಗಾಗೆ ಹಳಬನಲ್ಲ...ಏನೂ ಇಲ್ಲ...ಭಾವಿ...ನೀರು...

(C ಯನ್ನು ಸಮೀಪಿಸಿದ ಸುಬ್ಬಮ್ಮನಿಗೆ)

ತಾವು ದಯವಿಟ್ಟು ಒಂದಿಷ್ಟು ಮಜ್ಜಿಗೇನಾ ಹೊರಗಿಟ್ಟು ಮಲಕ್ಕೊಳ್ಳೀವ್ಮಾ...ಬಾಗಿಲು ಹಾಕಿ ದೀಪಾನಾರ್ಸಿ...ಎಲ್ಲಾ ನಾ ನೋಡ್ಕೋತೇನೇವ್ಮಾ...ಬೋರಣ್ಣೋರು ಇಧಾರೆ ಸಹಾಯಕ್ಕೆ.

ಸುಬ್ಬಮ್ಮ : ಹಾಗಾರ್ಸರಿ.

(exit Subbamma)

ಕಪ್ಪಣ್ಣ : ಬನ್ನಿ ಬೋರಣ್ಣೋರೆ...ಹಗ್ಗ ಬಿಂದಿಗೆ ಇಧೇತಾನೇ...ಭಾವೀಗೆ ?

ಬೋರಣ್ಣ : ಊಂ ಬುದ್ಧಿ.

ಕಪ್ಪಣ್ಣ : ಹಾಗಾರ್ದ್ರೀಪ ಚಿಕ್ಕದ್ಮಾಡ್ಬೊರಡಿ. ಪಂಚೆ, ಟವಲ್ ಎತ್ಕೊಂಡು ಬಂದೆ. ಈಗ.

(As Bora after lowering the lamp exits by L and Kappanna by R. curtain drops)

SCENE II

(Time : next morning. Found entered Hiriyannayya and Kappanna. Same place but brighter light and same position as previous night.)

ಹಿರಿಯಣ್ಣಯ್ಯ : Just a letter to my son···you know ! Of course you don't know···

ಕಪ್ಪಣ್ಣ : But **I do** know, Sir, ಅಮ್ಮಾವ್ರು ಹೇಳಿದ್ರು...ನಿಮಗೆ...ನಿಮ್ಮ letter purport ಹೇಳ್ಬಿಡಿ ಸಾರ್ ಸಾಕು...brief long hand ನಲ್ಲಿ ಬರ್ಕೊಂಡು before your very eyes draft ಒಪ್ಪಿಸ್ತೇನೆ...ಕೂತ್ಕೊಳ್ಳೀ ಸಾರ್.

(ಹಿರಿಯಣ್ಣಯ್ಯನು ಕೂತುಕೊಳ್ಳುತ್ತಲೇ ತನ್ನ ಜೇಬಿನಿಂದ Fountain-pen. note-book ಇವುಗಳನ್ನು ಹೊರತೆಗೆದು ಲಿಖಿಸಲುದ್ಯುಕ್ತನಾಗಿ)

···my dear···my own···my affectionate···my dearest···my beloved ···my dutiful···which is it, sir···ನಿಮ್ಮ son ಗೆ ಕಾಗದ ಬರ್ಕೋವಾಗ...

ಹಿರಿಯಣ್ಣಯ್ಯ : (ಸುಲೋಚನವನ್ನು ತಗುಲಿಸಿಕೊಂಡು, ಮೇಜಿನ ಡ್ರಾಯರಿನಿಂದ ಸೆಳೆದ Hindu Paperನ ಪ್ರಥಮ ಪುಟವನ್ನು ಜುಗುಪ್ಸೆಯಿಂದ ಸೂಚಿಸುತ್ತಾ...ಆತ್ಮಗತಂ) ಹುಂ...! S.S.L.C. ಎರಡ್ಸಾರ್ತಿ failoo. ನನ್ನ ಹಳೇ volumes of Sexton Blakeoo, Sarojini's poemsoo byrote ಮಾಡ್ಬಿಟ್ಟು ಇವನ್ಯಾರಿಯೋ ಇಂಗ್ಲೀಷಿಗೆ poet ಆಗ್ಬೇಕಂತೆ, ಇನ್ನವನ poem ಗೆ stenographer ಬೇರೇನೇ ಇವನ್ಗೇ ?...only because...mother ಗೆ pet grandsonoo ಅಂಬೋ ಜೋರ್ನಲ್ಲಿ ಮನೇಲಿ ಕಾಸಿನ ಗಿಡ ಹಾಕಿದ್ದೇವೆ ಅಂತ ತಿಳ್ಕೊಂಡಿದ್ದಾನೆ...ಇವನ ಪಟಾಟೋಪಾನ must...must...

ಕಪ್ಪಣ್ಣ : "Nip it in the bud" suitable ಏ ಸಾರ್ ? Good phraseoo...idiomaticoo, congenial under the circumstances. ಒಟ್ನಲ್ಲಿ ಅಭಿಪ್ರಾಯ ದಯಪಾಲ್ಸಿದ್ರೆ ತಾವು, ಒಂದು draft ತಮ್ಮೆದುರ್ಗೆ ಬರೆದು submit ಮಾಡ್ತೇನೆ. (Strong–in short—gunpowder letter...as well as trusting . ತಾವು...now that I am your trusted secretary...ಮುಂದಕ್ಕೆ ನನಗೆ must be known ಆದ family affairsನ ನೀವೇ ಹೇಳ್ಬಿಡೋದು best thingoo ಸಾರ್...in the long runoo.)

ಹಿರಿಯಣ್ಣಯ್ಯ : Family affairs ಏನೂ... usual...financial...

ಕಪ್ಪಣ್ಣ : Crisis. I understand Sir, world trade depression... ಒಟ್ನಲ್ಲಿ money market tightoo...ಅಲ್ವೆ ?

ಹಿರಿಯಣ್ಣಯ್ಯ : Quite so. Therefore ನಮ್ಮ familyಲಿ...so to speak of...ಗೊತ್ತಿಲ್ವೆ...we have to...

ಕಪ್ಪಣ್ಣ : Retrench...economise...cut out luxuries...simple life ...share market rise ಆಗೋವರೆಗೂ,...therefore ಈಗ perhaps...ನನ್ನ sudden appointmentoo precludes ತಮ್ಮ ಮಗನ...intending...

ಹಿರಿಯಣ್ಣಯ್ಯ : Yes, appointment of an unnecessary typewriting assistant...you see, ಹೇಗಿದ್ರೂ you are a trusted...

ಕಪ್ಪಣ್ಣ : Receptical of the family affairs...ಹೇಳೀ ಸಾರ್...ಹೆದರ್ಬೇಡಿ.

ಹಿರಿಯಣ್ಣಯ್ಯ : ಹೇಳೋಧೇನೂ...

(Showing a particular item on the Ist page of the Hindu) Read yourself.

ಕಪ್ಪಣ್ಣ : (ಓದುತ್ತಾ)

Wanted Typewriter...quick typing... money does not matter...see personally, Jodidar Rama Rao, grandson of Late Rao Saheb Jodidar Rama Rao of Rampura, now camp, care of post master, Balepet P. O. Bangalore City...ಏನನ್ಯಾಯ ಸಾರ್...ನನಗ್ಗೊತ್ತೇನೆ. Pitman school special certificate ಕಳ್ಸದೆ shorthandಗೆ. ಇನ್ನು typewriterನೋ...ಬುಲ್ ಬುಲ್ ತರಂಗದ್ಹಾಗೆ ಬಾರ್ಸಿಬಿಡ್ತೇನೆ...ಹೌದು. ನೀವೇಳೋಹಾಗೆ (ಈ extra amenuencies...terrible wordoo Sir ! but congenial...) ಈ advertisementoo unnecessary...extravagant...exhorbitant...ನಾನೇ ಇದ್ದೇರೋವಾಗ quite ex...

ಹಿರಿಯಣ್ಣಯ್ಯ : Quote so! ಅಧ್ದೇ ನಾನು ಬರೀಬೇಕೂಂತಿರೋದು, ಅಷ್ಟೆ...you see...ನಿಮ್ಮ...

ಕಪ್ಪಣ್ಣ : 'ನಿನ್ನ'—discipline ಮರೀಬೇಡಿ, ದಯವಿಟ್ಟು ನಿಮ್ಮ ಶ್ರ kindness ನಲ್ಲಿ...ನನ್ನ positinoo, paid servant of the family ಅಂಬೋನ್ನ ಮರೀಬಾರದು helpoo...ನೀವು...ನನ್ದಣೀ...my master...must...give...ಕೊಡಬೇಕು ... ಕ್ಷಮಿಸ್ಸಿ interrupt ಮಾಡ್ದೆ...ನೀವ್ಹೇಳ್ತಿದ್ರಿ...'ನನ್ನ'

ಹಿರಿಯಣ್ಣಯ್ಯ : ನಿನ್ನ appointment...salary...necessary, of course... ಜೊತೇಲಿ...ಈಗ ಅಮ್ಮ...my mother, you already know. .ಖರ್ಚಿನ ವಿಷಯ್ದಲ್ಲಿ... ಇದು...extra...

ಕಪ್ಪಣ್ಣ : Grasp ಮಾಡ್ಕೊಂಡೇ ಸಾರ್...postion...ಸ್ವಲ್ಪಿರಿ...

(Opening the Hindu Paper)

ಈ articleನ enjoy ಮಾಡ್ತಿರಿ. ನನ್ನ draftನ first shorthandನಲ್ಲಿ ಬರ್ದು submit ಮಾಡ್ತೇನೆ.

(As Hiriyannayya is reading newspaper Kappanna scribbles on pocket book with fountain-pen for fully two minutes...later)

ಕೇಳಿ ಸಾರ್ :

My beloved but erring...ಇಲ್ಲಾ indiscreet ಅಥ್ವಾ ill-advised... son ಅಥ್ವಾ child,

You know how difficult it is to get any money from mother except fo purposes of your Grand-father's peace of soul viz., my Rao Saheb and Municipal Presidentships. I have just appointed a secretary on proper salary. He also knows type-writer work, therefore, he can be your type-writer, also of your poetries, therefore. The one stone of my secretary can kill both the birds of your advertisement and my advertisement. Therefore, take away back again your advertisement in Hindu paper and waste no more money. Come back at once and do your poetry works here.

Your well-wishing but obedience expecting father.

ನಿಮ್ಮ sign ಒಂದೇ ಸಾರ್ wantingoo...transform ಮಾಡ್ಬಿಟ್ಟೇನೆ letter paper ಮೇಲೆ...of course, if you approve...ಈ draftನ...

ಹಿರಿಯಣ್ಣಯ್ಯ: Approve ಏನು...of course, I approve.

(Opening a drawer, puts out a card board letter paper-envelope box)

ಜೋರಣ್ಣ: (Entering with a cover in hand as Kappanna starts writing)

ಬುದ್ದೀ: ಈ ಕಾಗ್ದ ತಮ್ಕೈಲಿ ಕೊಡೂಂತಂದ್ರು.
(Hands letter to Hiriyannayya)

ಹಿರಿಯಣ್ಣಯ್ಯ: (Tearing letter open)
ಯಾರೋ ಕೊಟ್ಟಿದ್ದು ?

ಬೋರಣ್ಣ: (ತಲೆಯನ್ನು ಬಾಗುತ್ತಾ)

ಬಂದವ್ರೆ ಬುದ್ದಿ......ಆಸ್ಗೆ ಪೆಟ್ಗೆ ಸಮೇತ......ಜಟ್ಕಾಲಿ ನಿಮ್ ಕೈಯಾಗೆ ಇಡೂಂದ್ರು ...ಕಾಗ್ದಾನ...ನಿಂತವ್ರೆ ಗೇಟ್‌ಬಾಗ್ಲತ್ರ !

ಹಿರಿಯಣ್ಣಯ್ಯ: (Reads the letter and as he is reading, his eye-brows start up and eye-balls start out...in stentorian tones)

ಏನನ್ಯಾಯ ಇದು Mr......ಅಲ್ಲಾ ಕಪ್ಪಣ್ಣ......ಅಲ್ಲಾ ಕಪ್ಪೂ, Look at this, I say, ನನ್ಮಗ...ನನ್ನೊಟ್ಟೇಲ್ಹುಟ್ಟಿದ್ದೋನು......ನನಗೇ ತಿರ್ಗ್ಗ ತಿನ್ನಿಸ್ತಾನೆ ನನ್ಮಂತ್ರಾನ...read it, I say.

(throwing letter across to Kappanna)...
It is......

ಕಪ್ಪಣ್ಣ: Stupendous...ಇಲ್ಲ್.

(ಓದುತ್ತಾ)
My dear father,

You forget in these hard-up days our rich family even cannot chuck away paternal property on dreams like your thinking of titles and presidentships. This is an age ruled by poetry people and Nobel prize men like Galsworthy, Bernard Shah and Tagore. Therefore, any money in the family must be spent to bring to the front grandfather—beloved my name-sake Rao Saheb's name in the shape of Nobel prize because of my poetry......Eight thousand pounds into fifteen equals say...a lakh of Rs. money prize solid cash down plus also 'Sir' title bigger than grandfather's Rao Saheb even which you will never forget. What I mean is, because my poetry must go to the big-wigs in England to get the Nobel prize, it must be type-written on one side of the paper. Therefore, a type-writer is necessary for the family future, whom I have already employed. Take away your advertisement which I saw in the Hindu paper.

Your Son,
Ramu.
P.S.P.T.O.

ಹಿರಿಯಣ್ಣಯ್ಯ : ಅದೇನದೂ P.S.P.T.O. ನಾನೋಡ್ಲಿಲ್ಲ!?

ಕಪ್ಪಣ್ಣ : [Turning overleaf]

P. S. ಅಂದ್ರೆ ಪೂರ್ತಿ ಶೇಷ, Please See. P. T. O. equales ಪೇಜು ತಿರಿವಿ ಓದು, ಅತ್ಕಡೇನೂ ಬರೆದಿದೇನೆ...This letter bearing type-writer already employed will arrive there just now with this letter whose convenience you must arrange properly. That is all that you have to do in this matter. I will be coming by evening train and explain everything to beloved Ajji for final arrangements.

Again your Son,
Ramu.

ಹಿರಿಯಣ್ಣಯ್ಯ : ಹೀಗ್ಬುಟ್ಟಿದ್ರೆ ಮುಕ್ತು...ಇಷ್ಟೇಗೆ? ಈಗ ನನಗೇ ಗೊತ್ತಿಲ್ಲ ನನ್ನ ಮುಂದಿನ...

ಕಪ್ಪಣ್ಣ : Proceedings ಅಲ್ವೇ...?

ಹಿರಿಯಣ್ಣಯ್ಯ : ಹೌದು...ಈಗ್ನೋಡೂ. ಆ Type writerco ಗೇಟ್ ಪತ್ರ ಕಾದಿದ್ದಾನೆ! ನನ್ನ after all my sonoo...but...

ಕಪ್ಪಣ್ಣ : Before all his beloved Ajji's grandson...ಏನೂ ಇಲ್ಲ ಸಾರ್. Late lamented ತಮ್ಮ ತಂದೆ Rao Saheb's ಹೆಸರು ಇಟ್ಟಿದ್ದು ತಲೇನ 'ಬಿರ್‍ರ್' ಅಂತ ತಿರುಗಿಸ್ತಿದೆ!...cool ಆಗಾನ ಇದ್ಬಿಟ್ರೆ...ಸಾವಿಟ್ಟರೂ...ಹತ್ತೋಟಿಗೆ ತಂದ್ಕೊಂಡು ಕೈಯಿಂದ ತಿನ್ನಿಸ್ಬಹುದು ಸಾರ್...ಗಿಳೀಮರೀಗೆ ಗೋಡಂಬಿ ತಿನ್ನಿಸ್ದ್ಹಾಗೆ! but coolness ಬೇಕೀಗ! therefore...position...problem...predicament...hopeless...ನಿಮಗಲ್ಲಾ—ನನಗೆ...ಆ type writeroo already engaged ಕಾದಿರೋವಾಗ...for me perilous...ಇಂಗ್ಲೀಷಿನಲ್ಲಿ ಬರೋಹಾಗೆ...ಅಜ್ಜಿ ಕಣ್ಣ್ ಚಿಕ್ಕಾಯುದ್ರ ಸೇಬ್ಹಣ್ಣು...the apple of her eyesoo...ನೀವೇನ್ಮನಸ್ಸಿಗೆ ತಂದ್ಕೋಬೇಡಿ ಸಾರ್...after all Six thousand pounds ಏನು...guineas ಏನು? Pound equals twenty shillings, but guines equals twenty one shillings: but money ಏನು ಬೇಕಾದಷ್ಟು ಬಿದ್ಬಿಟ್ಟಿದೆ ಮನೇಲಿ! ಅದಲ್ಲಾ pointoo. Nobel prizeoo ನೂ ಅಲ್ಲ! 'Sir' titleoo ಮುಖ್ಯ familyಗೆ!...ಯಾರಿಗೆ ಬಂದ್ರೆ ಏನು? ...my master that was for 12 hours and is no moreಗಾಗ್ಲೀ... or his sonಗಾಗ್ಲೀ...ಮುಖ್ಯ ದೇಹಾತೀತರಾದ Late lamented father ಸಂಪಾದಿಸ್ದ Rao Saheb titleನ ನೀವೂನೂವೆ as befits ಒಬ್ಬ worthy son again ಸಂಪಾದ್ಸೋ quite certaintyನ ಬಿಟ್ಬಿಟ್ಟು his Ajji's ಮುದ್ದು ಮೊಮ್ಮಗ ಬಳೀಹೇಟಿ type-writer ಬೆಂಬಲ್ದಲ್ಲಿ...'Sir' title ಹಿಂದ್ಗಡೆ ಸವಾರಿ ಬರುತ್ತಿರೋದು...

[laughing sardonically]

ಇಂಗ್ಲೀಷ್ proverb ಜ್ಞಾಪಕ ಬರುತ್ತೆ ಸಾರ್: "A stone in a good hand is worth two birds in a bush"......ಅಂದ್ಹಾಗೆ ಕಲ್ಲಿದ್ದಂಗಾಗೆ ಕೈಲಿರೋ Rao Saheb ಬಿಟ್ಟು...Nobel prize, Sir title...ಹಕ್ಕಿಗಳಲ್ವೆ?

(loudly to himself)

ಆದರೆ ನನಗ್ಯಾಕೆ ಈ ದೊಡ್ಡ ಮನೆತನದ ಗಲಾಟೆಗ್ಳು?

[loudly]

ನಿಮ್ಮನ್ನಂಬ್ಕೊಂಡು ಬಂದೆ...ನನ್ನನ್ನೇ ನಂಬ್ಕೊಂಡು ಹೋಗ್ತೇನೆ.

(ಬೋರನಿಗೆ)

ಬೋರಣ್ಣಾ, ನನ್ನ ಮೇಲಿರೋ ಹಾಸ್ಗೇನೂ, ಚೀಲಾನೂ, ಈಗ್ಬಂದ ಜಟ್ಕಾಲೇ ಸೇರಿಸ್ಬಿಡು!...

(ಬೋರನು exit R)

Good bye Sir. Mother ಗೆ ಹೇಳ್ಕೊಳ್ಳೊಕೆ, too much over-come...

(Hanging his head down...walking towards L)

God bless you Sir, good-bye...ಏನೋ ! ರುಣ ಇತ್ತು...ತೀರ್‍ತು. ಭಗವದ್ಗೀತೇಲಿ ಬರೋಹಾಗೆ ಯಥಾ ಯಥಾ...ತಥಾ ತಥಾ...

(ಮುಖದಲ್ಲಿ ವಿಷಾದವನ್ನು ಸೂಚಿಸುತ್ತಿರುವ ಹಿರಿಯಣ್ಣಯ್ಯನ ಭುಜವನ್ನು ಸವರುತ್ತಾ)

...ಮನಸ್ಸಿಗೆ ತಂದ್ಕೋಬೇಡಿ ಸಾರ್...ಪ್ರಕೃತಿ ಎಂಬೋದು ಸಾಗರ ! ಮನುಷ್ಯ...ತಮ್ಮ ಹಾಗೆ Partician...Roman History ಮೊದ್ಲೇ ಹೇಳಿದ್ದೇನೆ. ತಮ್ಮನ್ನ ಪರಮಾತ್ಮ ಪ್ರಪಂಚದ profit ಗೇಂತಾ ಹುಟ್ಸಿದ್ಮೇಲೆ ತಮ್ಮ ಸಂಸಾರನೌಕಕ್ಕೆ...Captain...Commander...ಯಾಕ್ಸಾರ್ Admiral Jelico himself ಆಗಿರೋ ನೀವು ನಿಮ್ಮೊಟ್ಟೇಲ್ಹುಟ್ಟಿದ ಪಸುಳೆ ನಿಮಗೆ ಕರಗತವಾಗಿರೋ Rao Saheb title ನ, 'Sir' title ನ, ಆತ-ತಾನೇ ನಿಮಗ್ಹೇಂಚಿ, may perhaps ಸಂಪಾದ್ಸೋ...impertinency...ಇದೆಲ್ಲಾ ಯಾಕೆ ಸಾರ್, ಇವೆಲ್ಲಾ ಬರೀ languageoo ! languageoo ! languageoo ! Hamlet's Drama in Shakespeare's works, Birth and Death, Date and Place ಸಮೇತ ಮೊದಲೇ ಹೇಳಿದ್ದೇನೆ.

(Hold-all ಅನ್ನೂ bag ಅನ್ನೂ ತಂದ ಬೋರನಿಗೆ ಬಾಕಿಲು ತೆಗೆದು)

ಹೊರಡಣ್ಣಾ...Dowager Mrs. Rao Saheb ತಮ್ಮ ತಾಯೀಗೆ ನನ್ನ respects ನ...

(hanging his head down, closing his face with his right palm is exitting sobbing heavily)

...but Sir, ನನ್ನ ಕಿವೀಗೇನೋ Sir Hiriyannayya Sir Rama Rao ಗಿಂತ sonorous ಆಗಿದೆ !

ಹಿರಿಯಣ್ಣಯ್ಯ : (Catching hold of Kappanna frenziedly, in hysterical tone)

No, no, Kappoo...don't desert me. ನಡ್ನೀರ್‍ನಲ್ಲಿ ಈಗ ಬಿಟ್ಬೇಡ... ದಮ್ಮಯ್ಯಾ...

(ಬೋರನಿಗೆ)

ತಿರಗ್ತಕ್ಕೊಂಡ್ಹೋಗಿಡೋ ಕಪ್ಪಣ್ಣೋರ ಕೋಣೇಲಿ...

(Bora exits with luggage R)...
(Collapsing into chair and burying face in hands)
I don't know what to do..
(Sobbing)
ನನಗೊಂದೂ ತೋಚೋಲ್ಲ.

ಕಪ್ಪಣ್ಣ : ಇದೇನ್ಸುಚ್ಚು ಸಾರ್. ಹೀಗೆ ನೀವು ಇಂಥಾ simple matter ಗೆ give way ಮಾಡ್ಕೊಂಡ್ಬಿಟ್ರೆ, ಮುಂದೆ Delhi ವರೆಗೂ ನೀವು reach ಮಾಡೋ ದಾರಿ ಎಲ್ಲಿ ಸಾರ್? ಶ್ರೀ ಕೃಷ್ಣಪರಮಾತ್ಮ ಭಗವದ್ಗೀತೆಯ 'ಅರ್ಜುನ ಸಿಪಾದಯೋಗೋ ನಾಮ ಪ್ರಥಮೋಧ್ಯಾಯಃ' ಅದರಲ್ಲಿ ಅರ್ಜುನನಿಗೆ ಅಂದ್ಹಾಗೆ...ಪ್ರಪಂಚ ಒಂದು ಕುರುಕ್ಷೇತ್ರ ಸಾರ್...ನೀವು ಒಬ್ಬ 'ನರ'...ಈಗ್ಲೇ! ನಿಮ್ಮ ನರ ಕುಗ್ಗೋದು? Ditto authority ಹೇಳ್ದ್ಹಾಗೆ 'ತ್ಯಕ್ತ್ವೋತ್ತಿಷ್ಠ ಪರಂತಪ' ಎದ್ದೇಳು ಪಾರ್ಥ. ಎದೆಗುಂದಬೇಡ... ನಮ್ಮ grandfather ಕಾಲ್ದಲ್ಲಿ late lamented ಸ್ವಾಮಿಗಳಿಗಿಂತ ಮುಂಚೇನೇ later lamented ಸ್ವಾಮಿಗಳ ನರಸಿಂಹ ಭಾರತಿಗಳ e...x...ex...ಏನೂ translationoo ! Now coming to your position...ಧೈರ್ಯಾನೂ ಸ್ಥೈರ್ಯಾನೂ ತಂದ್ಕೊಳ್ಳಿ ಸಾರ್, ಮನಸ್ಸಿಗೆ...ನಿಮ್ಮ positionoo perilous!..precarious...predicamental...after...all ಏನೂ ...small question of big father versus small son...problem ನ sensible ಆಗಿ ನೀವ್ನೀವೇ solve ಮಾಡ್ಬೇಕು...

ಹಿರಿಯಣ್ಣಯ್ಯ : (Who all this while has gradually passed from helpless tearful to incited almost belicose condition)

Solve ಏನು ?...solution ಇದ್ದೇ ಇದೆ...
(ಸಾಮಾನುಗಳನ್ನು ಮಹಡಿಯಮೇಲೆ ಸ್ವಸ್ಥಾನಂ ಇಟ್ಟು ಪುನಃ ಬಂದ ಬೋರನಿಗೆ)
ಆತನ್ನ ಬಂದ ಜಟ್ಕಾನೇ ಹತ್ತಿ ತಿರ್ಗಿ ಬಂದ ದಾರೀನೇ ಹಿಡೀಂತ ಹೇಳು !
ಕಪ್ಪಣ್ಣ : (to Bora approaching L)

ಸ್ವಲ್ಪ ತಡೀ ಬೋರಾ !...ಕ್ಷಮ್ಸಿ ಸಾರ್. an insult to that type-writer man is an insult to my master...therefore...to...ನಿಮ್ಮ self ಗೇ ! ಆತನ್ನರ್ರು ಗಂಭೀರವಾಗಿ ತಿರುಗಿ ಕಳ್ಸೋದು ಲಾಯಕ್ಕು ! Noblesse and oblige = noble gentlemanoo oblige ಮಾಡ್ಬೇಕೂ...quotation..position...patrician means polite ಆಗಿರ್ಬೇಕು...after all Sir. ಆತ್ನೂ ಬಂದಿದಾನೆ...ತನ್ಹೊಟ್ಟೆ ಪಾಡ್ಗೆ...he also at his expense perhaps, ನನ್ಹಾಗೆ...ನೀವೇ...

(to Bora)
ಆತನ್ನ ಕರ್ಕೊಂಬಾ, ಬೋರಣ್ಣಾ...ರಾಯರ ಭೇಟೀಗೆ...

(Recedes to back wall and stands in respectful attitude as Bora exits)

ಹಿರಿಯಣ್ಣಯ್ಯ : Quite-right ಕಪ್ಪಾ ! ಬಂದಿರೋ type-writer ಗೆ return fareoo ಕೊಟ್ಟು night train ನಲ್ಲಿ ಮರ್ಯಾದೆಯಾಗಿ ಅವ್ನ್ನ ಕಳಿಸ್ಬಿಡೋದು...best thingoo.

ಕಪ್ಪಣ್ಣ : ಅದು style 'Sir' ಗಳಿಗೆ...ಮರ್ರ್ಯಾದೆ ಕೊಟ್ಟು ಮರ್ಯಾದೆ ತಗೊಳ್ಳೋದೆ ಮರ್ಮ ಸಾರ್ ಮಹನೀಯರು...ಬಂದಾಂತ ಕಾಣುತ್ತೆ ಆತ...mild ಆಗಿ get rid ಮಾಡ್ಬಿಡಿ... return fareoo I can advance...ನಾಳೆ ಅವೂವ್ರು ಹತ್ರ ನನ್ನ amount ನ adjust ಮಾಡ್ಕೊತೇನೆ.

[Sounds rupees in his pocket and places two rupees on the table]

...must be third class...still ಬಂದ trouble ಗೆ intermediate, Plus tiffin, Plus also Porter, and cooly...ಎಲ್ಲಾ cover ಆಗುತ್ತೆ.

ಹಿರಿಯಣ್ಣಯ್ಯ : (ಬೋರನ್ನ ನೋಡಿ)

ಬಾನ್ನೋ ಆತನ್ನ—ಒಳಕ್ಕಳಿಸ್ಬಿಟ್ಟು, ತಿರ್‍ಗ ಆತನ್ನ station ಗೆ ಬಿಡೋಕೆ ಮಾತಾಡಿ ನಿಲ್ಸು ಜಟ್ಕಾದವನ್ನ.

(Exit Bora memorising in astonishment..."ಆತ" !!!)

ಸರೋಜ : (**Sails** into the room and looking askance at Kappanna and Hiriyannayya).

Which of you two is the late lamented Rao Saheb Rama Rao's son, Mr. Hiriyannayya ? ನಾನು understand ಮಾಡಿದ್ದು gentlemen family ಲಿ employmentooo ತ. At least 14 minutes by my watch gateway ಲಿ ಬಿಸಿಲ್ನಲ್ಲಿ ನನ್ನ ನಿಲ್ಸಿ...wait ಮಾಡ್ಸಿ...ಬರೀ...at least politeness...

[**broods about with** eyes flashing indignation]

ಕಪ್ಪಣ್ಣ : (in loud whisper to Hiriyannayya)

Quite right Sir, politeness ತೋರಿಸ್ಬೇಕು...ಕೂತ್ಕೋನ್ನೀ ಸಾರ್...ಯಾರೋ ! ಏನೋ !

ಹಿರಿಯಣ್ಣಯ್ಯ : ಕ್ಷಮಿಸಿ...Miss...Mrs

ಕಪ್ಪಣ್ಣ : (Whispering)

ಮದ್ವೆ ಗೊತ್ತಿಲ್ಲದ ವರೆಗೂ...'ಶ್ರೀಮತಿ' bestoo

ಹಿರಿಯಣ್ಣಯ್ಯ : (Aloud)

ಕ್ಷಮ್ಸೀ...ಶ್ರೀಮತಿ...

ಸರೋಜ : Thank you for noticing me...Saroja is my name.

ಕಪ್ಪಣ್ಣ : (Creeping along the wall to Hiriyannayya)

Sit ಮಾಡ್ಸಿ Sir ಮೊದಲೂ...politeness...policy...oblige. nobles... ಮರೀಬೇಡಿ.

ಹಿರಿಯಣ್ಣಯ್ಯ : Quite so, Kappoo...

(aloud)

Will you please be seated, Sreemathi Saroja···

ಕಪ್ಪಣ್ಣಿ : (prompting)

ದೇವೀನೂ ಸೆಕ್ಸೀ ಕೊನೇಗೆ...up-to-date fashionoo···

ಹಿರಿಯಣ್ಣಯ್ಯ : Yes ··· yes ··· um···um...um···Devi···please be seated.

ಸರೋಜ : Thank you,······at least ಈ village ಕೊಂಪೇಲೂ civilised people ಇರೋದ್ನೋಡಿ...great satisfaction ನನಗೆ...a sort of waking up from a night-mareoo.

ಕಪ್ಪಣ್ಣಿ : (to Hiriyannayya)

"Night-Mayor" !! Must be England returned···Godಏ ಗತಿ...

(Pulling Hiriyannayya by the sleeve)···(Pulls out book and fountain-pen, whispering to himself **"NIGHT MAYOR"**···aloud)

She must be terrible in English, Sir······r. ನಿಮ್ಮಗ employ ಮಾಡಿ ಕಾದ್ಕೊಂಡು ಬಿದ್ದಿರೋ typewriter ಎಲ್ಲಿ...ನಾನ್ಯಾನೇ ಎಲ್ಲಿ...in our Englishes before this Indianವೇಷಾ ಹಾಕ್ಕೊಂಡಿರೋ ಇಂಗ್ಲಿಷ್ ಸರಸ್ವತಿ...

ಸರೋಜ : (To Bora who has entered)

ಇಲ್ಲಿ ಬಾ. ಈ ರೂಪಾಯ್ನ ಆ ಗಾಡಿಯೋನ್ಗೆ ಕೊಟ್ಟು. twelve annas. English ಗೊತ್ತಿಲ್ಲ ನಿನ್ಗೆ....Oh! my poor motherland with 92% illiterate brethren and sisters ! ಮುಕ್ಕಾಲು ರೂಪಾಯಿ ಮಾತಾಡಿದ್ದು...ಹದ್ಮೂರು ಸಾಮಾನುಗ್ಳು...parasol ...ಅಂದ್ರೆ ಕೊಡೆ. tiffin-carrier ಸಹಿತ. ಹಾರ್ಮೋನಿಯುಮ್ಮು. ವೀಣೆ. ಪಿಟೀಲು. ಮುಯೀವ್ಹಾಗೆ ಭದ್ರ. ಇವನ್ನೆಲ್ಲಾ ಅವನೆದುರ್ಗೇ ಎಣ್ಸಿ. ಒಳಗ್ತಂದಿಟ್ಟು...ಕಾಲ್ರೂಪಾಯಿ ಬಾಕೀನ ನೀನೇ ಇಟ್ಕೋ ...tipಉ...ಇನಾಮು.

ಬೋರಣ್ಣ : (Receiving the rupee from her bejewelled hands, bowing to the ground)

ಅಪ್ಣೆ ! ನಮ್ಮವ್ವ !

[Exits]

ಕಪ್ಪಣ್ಣಿ : (In whisper to Hiriyannayya)

ಮುಂದಕ್ಮಾತಾಡೀ ಸಾರ್...ಹೆಂಗ್ಸಿಗೆ ಬೆದರೋದೇ...ನಿಮ್ಮ ನೆಂಟ್ರೇ...? perhaps ನಿಮ್ಮ patrician ಕುಟುಂಬದ ಯಾವದಾದ್ರೂ up-to-date branchಏ...ನೋಡಿದ್ರೆ England returned ಹಾಗಿದೆ..."Night Mayor" ನನ್ಗೇನೇ new word—plus Harmonium...can understand foreign instrument ! but...ವೀಣೆ and ಪಿಟೀಲು...English educated, also ಸಮ್ಸಂಗೀತ ! ಬೆಚ್ಚಿ ಬೀಳ್ಬೇಡಿ...ಮುಂದ್ಮೋಗ್ಮಾತಾಡಿ ಸಾರ್ ! what is this pusillanimousness···I wonder. ಆಕೆಗ್ಗೊತ್ತಿದೆಯೋ ಈ wordoo···

(to himself)

"Night Mayor" ಉ Night Mayor ಏನು...Day Mayor ಏನು... must refer to Nattal...ಎಷ್ಟು ತಿಳ್ದಿದ್ರೇನು ? 'must be live to learn'... old proverb...ಮುಂದ್ಹೋಗ್ಮಾತಾಡೀ ಸಾರ್!

ಹಿರಿಯಣ್ಣಯ್ಯ : Miss...Madam...ಅಲ್ಲಾ ಶ್ರೀಮತಿ ದೇವೀ... I ... I ...do not...

ಸರೋಜ : ನಿಮ್ಮ embarassment ನನಗರ್ಥ್ವಾಯ್ತು...but I shall explain in a moment.

(ಸಾಮಾನುಗಳನ್ನೆಲ್ಲಾ ತಂದು ಒಂದು ಭುವನೇಶ್ವರಿ ಹಾಗೆ ಪೇರಿಸಿದ ಬೋರನಿಗೆ)
Good boy...ಅವನಿಗೆ ಕೊಟ್ಟು ಕಳುಹಿಸಿದ್ಯಾ ?

ಬೋರಣ್ಣ : ಊಂ ! ನಿಂಪಾದ...ಔದ್ರವ್ವಾ...ಮಾತಾಯಿ.

(bows to the ground)

ಸರೋಜ : ಸರಿ ಹೋಗು.

(exit Bora)...(turning to Hiriyannayya)
ಹಾಗಾದ್ರೆ ನೀವೇ Mr...?

(ಜೇಬಿನಿಂದ Silver-mounted leather card-case ನಿಂದ taking out a card and giving it to Hiriyannayya)

Hiri Annayya the revered father of my employer Jodidar Mr. Rama Rao, ಅಲ್ವೆ ನೀವು ? Though I cannot see any resemblance... ನಿಮ್ಮ face long and pale! though not quite ಕೆಂಪು. My employer ಹಾಗೆ ಕಪ್ಪಾಂತ ತಿಳ್ಕೊಂಡಿದ್ದೆ. ನನ್ಕಾರ್ಡು...ನಿಮ್ಮ son the poet ಅವರ poetry ನ print ಮಾಡಿ publish ಆಗೋಕ್ಮುಂಚೆ Western Worldಗೆ type-written shape ನಲ್ಲಿ submit ಮಾಡೋಕೇಂತ ನನ್ನ employ ಮಾಡಿದ್ದಾರೆ......stenographer ಆಗಿ...I have come to report myself. In the meanwhile, you, his father, Local Municipality Election speeches ವಿಷ್ಯದಲ್ಲಿ ನನಿಗೆ...perhaps I should say ನನ್ನ type-writerಗೆ ಸ್ವಲ್ಪ ಕೆಲ್ಸ include ಆದ್ರೂ...that also is included in my contract..of hundred rupees a month with living found as becomes my as well as your position. ನನಗೆ Shorthandoo ಗೊತ್ತು...speed test pass ಮಾಡಿದ್ದೇನೆ......therefore hesitate ಮಾಡ್ಡೇನೂ... after all ನೀವು gentlemen ಆಗಿಯೂ...ನಾನು lady ಆಗಿದ್ರೂನೂವೆ, ನಾನು a servant on monthly subsistence.

(Kappanna whispering to himself aloud...'existence' ಕೇಳಿದ್ದೇನೆ ...'resistance' have also heard, but 'subsistence'...! ಅನ್ಯಾಯ...terrible "wordoo ಸಾರ್ ! ತ್ಸು ! ತ್ಸು !! ತ್ಸು !!!"...pulling out note book & noting it down : 'S.U.B.C. or S'....dictionaryಲಿ ನೋಡ್ಕೋಬಹುದು ನಾಳೆ...I S or C as per ಮೊದಲೇ ಹೇಳಿದ್ಹಾಗೆ...T E N S or C as per aforesaid!!!)

ಹಿರಿಯಣ್ಣಯ್ಯ : (ಆತ್ಮಗತಂ to Kappanna)

ಕಪ್ಪು...This...she...ಇವ್ಳೇ...I mean ಈ ಸೀನ್ಸ್ಟೋಳ್ದ ದೇವಿ...also ಆ ಹುಚ್ಚು ಮುದುಗ ಬರೆದಿರೋ type writer ಏ! ಈಗೇನ್ಮಾಡೋದು...please advise me...ಬುದ್ಧಿ ಹೇಳು ಕಪ್ಪು!

ಕಪ್ಪಣ್ಣ : ಸಾರ್!...ನಾನ್ಬುದ್ಧಿ ಹೇಳ್ಬೇಕಾದ್ದು ನಿಮಗಲ್ಲ ....ನನ್ಮಾಳ್ಗೆ...ಏನ್ಸಾರ್ after all a ಹೆಂಗ್ಸು ...ಹೆಣ್ಣು ಪ್ರಾಣಿ ... 'Night Mayor'...'Subeis'...dairyಲಿ ಬರ್ಕೊಂಡಿಧೇನೆ...but still sir...ನ್ನಿಂದಾಗಬಹುದಾದ ಕೆಲ್ಸ...so for as English...type writing...speech writing...ನಮ್ಮಪ್ಪ ಹಾಗೆ ಈ ಹೆಂಗ್ಸು better than myself can manage ಅಂಬೋದ್ನ ನಾಚ್ಕೆ ಇಲ್ದೆ honest ಆಗಿ ಒಪ್ಕೊಂಡ್ರೂನೂವೆ...ಗಂಡ್ಸಿನ ಕೆಲ್ಸ ಇಧೆ ಸಾರ್ ಮುಂದಕ್ಕೆ...first Bangalore Cantt. Resident. British Resident ಹತ್ರಿಂದ recommendation letter to Governor of Madras. ಅಲ್ಲಿಂದ Private Secretary ಇರ್ತಾನೆ to the Viceroy...Major ಓ... ಕರ್ನಲ್ಲೋ... Simlaಲೋ. ಡೆಲ್ಲಿಲೋ... according to season. From him...Governor Generalಗೆ!... but you will see ಸಾರ್. ನೂರ್ರೂಪಾಯಿ ಆಕೆ ಸಂಬ್ಳ...meagre ಐಪ್ಪತ್ತೈದು ನಂದು...ಈ...

ಸರೋಜ : (imperiously)

ನೋಡೀ. ನೀವು Mr. Hiriannayya ತಾನೇ...?

ಹಿರಿಯಣ್ಣಯ್ಯ : ಹೌದು...ಹೌದೂಮ್ಮಾ...ಅಲ್ಲ ಹೌದು ಮಹಾತಾಯಿ... I mean ...Miss...Madam...I mean Sreemathi Devee...

ಸರೋಜ : But then, impolite ಆಗಿ ನಿಮ್ಮಿವೀಲಿ whisper ಮಾಡ್ತಿರೋ ಈ cannot be a gentleman—ಯಾರೀತ? Whispering in company bad manners, you know...

(to Kappanna)

Be honest. ಹೇಳೋದೇನಾದ್ರೂ ಇದ್ರೆ ಘಟ್ಟಿಯಾಗಿ ಹೇಳಿ. Secrets ಏನಾದ್ರೂ ಇದ್ರೆ ಹೊರಗ್ಹೋಗ್ಮಾತಾಡ್ಕೊಳ್ಳಿ. This is...ಹ್ಯಾಗ್ಹೇಳ್ಳಿ...preposterous.

ಕಪ್ಪಣ್ಣ : (aghast, writing in his note book...in undertone)

P. R. E. yes pree...ಪಾಸ್ P. O. S. or C...ಟರಸ್ T. E. R. U. S. or C. S. or ESS...dictionaryಲಿ ಗೊತ್ತಾಗುತ್ತೆ ನಾಳೆ. ."Whispering in company bad manners"...ಎಲ್ಲಿಂದಲೋ ಹಾರಿಸ್ಬಿಟ್ಟಿದ್ದಾಳೆ good quotationoo...

(to Hiriyannayya)

Terrible sentenceoo ಸಾರ್...but then ತಿಂಗ್ಳಿಗೆ ನೂರ್ರೂಪಾಯಿ!...speed test pass ಮಾಡಿದ್ದಾಳೆ...ಮುಂದ್ಹೋಗ್ಮಾತಾಡಿ ಸಾರ್...'ಗುಣಾಕ್ಕೆ ಮತ್ಸರವಿಲ್ಲಾ'ಂತಾರಲ್ಲ...old Kannada proverboo...ಹಾಗೆಯೇ even my big English ಕೂಡಾ...ಸಾರ್...can appreciate ಆಕೆ bigger Englishಉ...ಮಸ್ಲ ಈಕೇನೇ Local hallನಲ್ಲಿ ಒಂದು municipality speech ಉ on your behalf ಕೊಟ್ಬಿಟ್ಟಳೋ......ಗೋಣಿಚೀಲಗಟ್ಳೆ ತುಂಬ್ಕೊ ತುಂಬ್ಕೊ ಸಾಗಿಸ್ಕೊಂಡು ಬರಬಹುದಲ್ವೇ—voteಗಳ್ನ! ಹೇಳ್ತೀನಿ voteಗಳ್ನ! After all a ಹೆಂಗ್ಸು! but then hundred rupees a month plus food and suffering of her ಸಂಗೀತ! ಏನ್ಸಾರ್ Harmonium ಅಲ್ದೆ ವೀಣೆ plus ಪಿಟೀಲು

plus also perhaps ಕಂಠ ಹೇಗಿದ್ಯೋ ಕಾಣೆ. Singing even…ಇನ್ನು ಇದಲ್ದೆ plus, preposterous, Night Mayor…new wordsoo ಸಾರ್…ನನಗ್ ನನಗೇ …ನನಗೊಂದೂ ತೋಚೋಲ್ಲಾ ಸಾರ್.

(diaryಯನ್ನು ತೆಗೆದು)

"Night Mayor!" "susceptibility!!" "preposterous!!!" "whispering…"!!!!

(ಇತ್ಯಾದಿಗಳನ್ನು ಜಪಿಸುತ್ತಿರುವನು)

ಹಿರಿಯಣ್ಣಯ್ಯ : Motherನ ಕರೀಲೆ? Advice ಮಾಡೋ ಕಪ್ಪ್ಣ.

ಕಪ್ಪಣ್ಣ : Quite right Sir, after all ladyಗೆ ಲೇಡಿ. ಕೂಗಿ…at first ಸ್ವಲ್ಪ…ಈಕೆ ಹೇಳ್ದಾಗೆ…thank God ನನಗೂ ಗೊತ್ತಿದೆ ಆ wordoo! "embarassingoo." Verb formoo, but must go through it. ಬೆದರ್ದೆ ಅಮ್ಮಾವರ್ನ ಕೂಗಿ…ಹ್ಯಾಗ್ಮಾಡ್ತೀರೋ ನಾನೊಂದೂ ಹೇಳ್ಲಾರೆ…but Sir,…think ಮಾಡಿ…it is… ನಾನೇ ಒಪ್ಕೋತೇನೆ. better English…better type writing than myself… but 100 Rupees! ನಾನೋ good English…ತಕ್ಕಟ್ಟಿಗೆ type writing…but ಮರೀಬೇಡಿ…ಗಂಡ್ಸು and only 75 rupees including house-hold work, accounts & estate management plus also ಮುಂದಿನ ನಿಮ್ಮ knight–hood ಶ್ರಮ and no sangeetha torture to the family. But ಆದ್ರೂಯೋಚ್ಸಿ ಸಾರ್…ಈ up-to-date timesನಲ್ಲಿ…ಒಬ್ಬೆಂಗ್ಸು…election compaignನಲ್ಲಿ …on your behalf…ಅವಳ "Night Mayor", "susceptible", "preposterous"… ಈ terrible words use ಮಾಡ್ಕೊಂಡು…Town-hallನಲ್ಲಿ on your behalf speech ಮಾಡಿದ್ರೆ…

(ಥಟ್ಟನೆ ತಲೆಯನ್ನು ಜೋಲುಬಿಟ್ಟು)

……. ನನಗೊಂದೂ ತೋಚೋಲ್ಲಾ ಸಾರ್! ………. ನೀವೂ, ಮಾತೋಶ್ರೀ ನಿಮ್ಮ motheroo ಆ extra–ordinary lady ವಸ್ತೂನೂ ನಿಮ್ನಿಮ್ಮಲ್ಲೇ ತೀರ್ಮಾನಿಸ್ಕೋಬೇಕು ……ನಾನು "Meagre seventyfive rupees" ಅಂದ್ಬಾಗೆ…a meagre hundred rupees" ಎಲ್ಲಿ? ……ಒಬ್ಬ ಹೆಂಗಸು ನಮ್ಮಿಬ್ಬರ ಮುಂದೆ "Night Mayor", 'susceptiblity'ನೋ ಏನೋ! preposterous, ಅಲ್ದೆ Harmonium, ವೀಣೆ… ಪಿಟೀಲು……ಆಶ್ಚರ್ಯ……ದೇವೀಂದ್ನಲ್ಲಾ……ಯಾವಕಲಿ ಯುಗ್ದ ದೇವೀನೋ…ಗುಡೀ ಬಿಟ್ಟು ಈ ಕೊಂಪೇಗೆ…! ಆಶ್ಚರ್ಯ ಸಾರ್!

(ಎಂದು ಗೊಣಗುಟ್ಟುತ್ತಾ exit L)

ಸರೋಜ : Recover ಮಾಡ್ಕೊಳ್ಳಿ, Mr. Jodidar Rama Rao's father!

(opening chatelaine and extracting card)

Mr. Hiri Annayya, I am glad that that person…your friend perhaps but with manners that want mending…ಹೊರಟ್ಹೋದ್ದು! ನೋಡೀ ನಿಮ್ಮ sonoo will be here before tea time. ಆತ of course …… ನನ್ಗೆ ಈ jobನೂ guarantee by written contract before a lawyer ಮಾಡಿರೋದಲ್ದೆ,

his grand mother Rani Sahibಗೆ explain ಮಾಡ್ಕೋತಾರೆ ಅವ್ರು. Therefore you have nothing to do with the matter. ನೀವು worry ಮಾಡ್ಕೋ ಬೇಕಾದ್ದು ಏನೂ ಇಲ್ಲ. Of course, ಅವ್ರು ಹೇಳಿದ್ರು, before engaging me, ಅವರ poetry ವಿಷ್ಯದಲ್ಲಲ್ದೆ his father. ನಿಮ್ಗೆ municipal activitiesನಲ್ಲಿ ಇರೋ interestಗೆ helpful ಆಗಿ ...speeches ನಾನೇ compose ಮಾಡಿ, because, he said ನೀವು weak in English, ನಿಮಗೆ ನನ್ನ speechesನ coach ಮಾಡೋದೂ ಅಲ್ದೆ election campaignನಲ್ಲಿ local meetingsನಲ್ಲಿ ನಾನೇ speech ಮಾಡೋ contingency ಸಂಭವಗಳ್ನ undertake ಮಾಡ್ಕೊಳ್ಳಬೇಕಾಗುತ್ತೇಂತ—ದೊಡ್ಡೇ ದೇಳಿದ್ದಾರೆ, ನಿಮ್ಮ son my employer. In the meanwhile...... ನನ್ರೂಮೆಲ್ಲಿ ?

ಹಿರಿಯಣ್ಣಯ್ಯ : ಮಹಡೀಲಿ ! .. ... shall arrange to...

ಸರೋಜ : (Hiriyannayya ತೋರಿಸ್ದ R ಅನ್ನು ಅನುಸರಿಸಿ ನಿಷ್ಕ್ರಮಿಸುತ್ತಾ)

Send up my luggage carefully. Thank you very much... but ಮುರೀಬೇಡಿ ನನ್ನ musical instrumentsoo...fragileoo...why ಹೀಗೆ. Voilinನ ನಾನೇ—

(steps back apace)

ಹಿರಿಯಣ್ಣಯ್ಯ : (In a deep voice)

ತೊಂದ್ರೆ ತಗೋಬೇಡಿ. ನಿಮ್ಮ musical ಬಾಬ್ತುಗಳೆಲ್ಲಾ...ಮುರೀದ್ದಾಗೆ ಸೇರಿಸ್ತೇವೆ.

(exit Saroja sniffing the roof)
(ಘಟ್ಟಿಯಾಗಿ)
ಬೋರಾ !
(ಬಂದ ಬೋರನಿಗೆ)

ಅಮ್ಮಾವ್ರು ಹಿಂದೆ ಹೋಗಿ ದೊಡ್ಡ್ಯಜಮಾನ್ರು ಕೋಣೇನ ತೋರ್ಸಿ. ಈ ಸಾಮಾನುಗ್ಳೆಲ್ಲಾ ಮುರೀದ್ದಾಗೆ ಮೇಲೆ ಸಾಗಿಸ್ಬಿಟ್ಟು. ಮಧ್ಯಾನ್ನ ಕಾಫೀಗೆ ಚಿಕ್ಕರಾಯ್ರೂ ಇನ್ನೊಬ್ರೂ ಬರ್ತಾರೇಂತ ಅಮ್ಮಾವ್ರಿಗೆ ತಿಳ್ಸು.

[exit Bora]
(ಆತ್ಮಗತಂ)

"You have nothing to do in this matter" ಓ ! " don't worry yourself ! ! " "ಜೋಡಿದಾರ್ ರಾಮರಾವ್‌ಓ!!!"...ಹಾಗಾದ್ರೆ ನಾನ್ಯಾರೋ...ಇವನಷ್ಟು ! ? ...ಹಾಗಾದ್ರೆ ಈ future Sir Rama Rao ಆಯ್ತು...ನಮ್ಮಮ್ಮ ರಾಣೀಸಾಹೇಬ್ ಆಯ್ತು. ನಾನು nobody ನೇ after all ! ? ನನ್ನ old Sexton Blakesoo. ಗಾಜಿನ ಬೀರೂ Poetry Booksoo byrote ಮಾಡ್ಬಿಟ್ಟು C/o Post office camp ಮಾಡ್ಕೊಂಡಿರೋ ಇವ್ನ employ ಮಾಡಿದ ಒಬ್ಬ ಹೆಂಗಸು type writerಗೆ "weak in English"..ನಾನು !...ಅವಳು compose ಮಾಡೋದು speechesoo ನನಗೆ...! ಒಟ್ನಲ್ಲಿ I am nobody in this house ಅಂತ ತಿಳ್ಕೊಂಡಿದ್ದಾನ್ಯೆ?...ಈ ನನ್ನ ಹೊಟ್ಟೇಲಿ ಹುಟ್ಟಿದ ಕ್ರಿಮಿ ? ತೋರಿಸ್ತೇನೆ ನನ್ಮಯ್ನ...ಭಗವದ್ಗೀತೆ ಕೃಷ್ಣ..ಅಲ್ಲ. later ಶೃಂಗೇರಿ ಸ್ವಾಮಿಗ್ಳು. ಅಲ್ಲ ಕಪ್ಪೂ ಹೇಳ್ದಾಗೆ...'ಎದೆಗುಂದಬೇಡ ಪರಂತಪ' !!! must be my

motto. ಹೌದೂ...ಈ ಕ್ರಿಮಿ ಏನೋ ನಾಲ್ಕು ಘಂಟೆಗೆ ಬಂದಿಳಿದ್ಬಿಡ್ತಾನೆ...Tea Timeಊ ಅಂದಳು......ಅವಳು......but in the meanwhile..."you have nothing to do in the matter"!! ಅಂದ ಅವಳ್ಗೂ...ಅವಳ್ಬಾಯಿಂದ ಅನ್ನಿಸಿದ ಅವನ್ಗೂ ಒಂದು lesson teach ಮಾಡೇಬಿಡ್ಬೇಕು...to show **who** I am, **what** I am...and **why** I am !!! but then ಏನ್ಮಾಡೋದು. ನಾನು aloneಉ... father deadoo, mother and son againstoo..therefore worse than deadoo...ಏನೋ ಒಬ್ಬನೇ ಒಬ್ಬ honest servant...ಕಪ್ಪೂ...

(eyes gleaming, stands up stiffening all his muscles and doubling his fists)

Good idea. ಈ ಜೋಡಿದಾರ್...ಶ್ರೀಮತಿ...ರಾಣಿಸಾಹೇಬಾ gangಗೆ ಕಪ್ಪೂ ಬೆದರಿ ಬಿದ್ರೂನೂವೆ ಅವನಿಗ್ಬೇಕಾದ courageನ ನಾನು supply ಮಾಡಿ, must make use of him. ಬಿಡಬಾರ್ದು ಅವನ್ನ ಈಗ, at any cost "Drowning manoo must catch at a straw even." Weak in English ಏ **ನಾನು** ! With this English ತೋರಿಸ್ತೇನೆ. through my secretary Kappanna.

(ಘಟ್ಟಿಯಾಗಿ)
ಕಪ್ಪೂ, come back !

ಕಪ್ಪಣ್ಣ : (Entering cautiously like a burglar...in a loud whisper.) [All this while Bora is carrying out of and going into R with one at a time of the **13** articles of Saroja........and not taking any notice of Kappanna's or Hiriyannayya's talk or activities.]

ಏಲ್ಲಾರ್, ಆ ಹೆಂಗಸು ಭೂತ?...beautiful but a ಭೂತಾ, like ಮಾಯಾ ಶಕ್ತಿ ದೇವಿ. ನಮ್ಮ Puranas ಏನು written for nothing ಅಂತ ತಿಳ್ಕೊಳ್ಬೇಡಿ ಸಾರ್; ತ್ಸು ! ತ್ಸು !! ತ್ಸು !!! Up-to-date examples of out-of-date ಪುರಾಣ people. ಮಾಯಾ ತಾಟಕೀs, ಲಂಕಿಣೀs etc. ಗ್ಳು ಎಷ್ಟು ಹೊರಗೆ ಬೀಳುತ್ತವೆ ನೋಡಿದ್ರಾ?...mother ಹತ್ರ, reverend mother ಹತ್ರ ಮಾತಾಡೋಕ್ಹೋಗಿಧಾಳೋ........in the meanwhile......ನನ್ಗೇಲಿರೋ ಸಾಮಾನುಗ್ಳು ತಾನೇ......Bangalore Passengeroo 17-55ಗೆ arrivaloo. 17-57 departureoo, per Railway Guide latest. ಅದೊಂದು two annas wastedoo because of big size and beautiful cover. ಈಗಿನ್ನೂ ten ಆಗ್ಲಿಲ್ಲ. ಬೋರನಿಗೆ ಹೇಳಿದ್ದೇನೆ: ಈಕೆ ಸಾಮಾನುಗ್ಳೆಲ್ಲಾ ಮೋಲ್ಸೇರ್ಲಿ ಬಿಡುವಾದಾಗ stationಗೆ ಸಾಗಿಸ್ಕೊಂಡು ಬಾ ಅಂತ. In the meanwhile Hotelನಲ್ಲಿ at my own expense, because sir, at my own risk ಬಂದದ್ದು ಈ jobಗೆ ...at my own risk ಹೋಗ್ತಿರೋದು...but ಪರ್ವಾಇಲ್ಲ.

ಹಿರಿಯಣ್ಣಯ್ಯ : (clutching at ಕಪ್ಪಣ್ಣ)

Don't be a fool, Kappoo! Don't bother about luggage or job or expense or silly nonsense like that...**Kappoo**...do you think I am weak in English I say?

ಕಪ್ಪಣ್ಣ : (Cautiously)

ಈ question ಯಾಕ್ಬಂತೂ ಸಾರ್... **ಈಗ** ?

ಹಿರಿಯಣ್ಣಯ್ಯ : She **says I** Say !!...ಇವಳ್ಗೆ...ನನ್ಗೆ...ಹೇಳ್ಕೊಟ್ಟಿದ್ದಾನೆ...my son...

ಕಪ್ಪಣ್ಣ : (Aghast)

You mean, exposing family secrets to a strange woman .... ?

ಹಿರಿಯಣ್ಣಯ್ಯ : Yes I say, I mean...ಅಲ್ಲ...ಇಲ್ನೋಡೂ ಕಪ್ಣ : ಇವನ arrangementoo...ಇವನ horrible poetry ಬಾಪ್ತಿರಲಿ...ಒಂದ್ಸಾರೆ ನನ್ನ future English speeches...ಈ English or no English, up–to–date or no–up–to–date but after all a ಹೆಂಗ್ಸು...ಅವಳು compose ಮಾಡೋದಂತೆ, ನನ್ನ speechesನ ...... ಅದನ್ನ ಹೇಳೋ ಬಗೆ ನನಿಗೆ ಇಷ್ಟ...ಅದೇನೋ ಹೇಳಿದ್ಲು...like a... **carriage**...ಆಗ್ಮಾಡೋದಂತೆ ನನ್ಗೆ...

ಕಪ್ಪಣ್ಣ : Speechesನ carriageಮಾಡೋದು ! ? 'carriage'...ಜಟ್ಕ... Victoria...motor car...Bullock coach...

(grinning)

" coach " ಮಾಡೋದು ಅವಳು ಹೇಳಿರ್ಬೇಕು !—— terrible Englishoo ಸಾರ್...terrible ಹೆಂಗ್ಸು. But still ನನ್ನ Englishoo ಪಸ್ಟಾರ್. Two thousand familiar quotations ಅಲ್ದೆ Natal dictionary byrote plus Latin and foreign quotations also. like ' Entent cordiate,' " I out ensemble" 'Arcedes Ambo' etc., etc...but ಆದ್ರೂನೂವೆ ಗುಣಕ್ಕೆ ಮತ್ಸರವಿಲ್ಲ....old Kannada proverboo...still...ಹೆಂಗ್ಸೇನೂ, ಗಂಡ್ಸೇನೂ... Saraswathi herself ಹೆಂಗ್ಸು. ನನಗ್ಸಾರ್...

(filling his chest soundfully)

ಒಂದು ಕೈ...ನಿಮ್ಮನ್ನೂ ' ಇಂಗ್ಲಿಷ್‌ನಲ್ಲಿ weakoo', ನನ್ನೂ 'manners that want mending'–ಬಾಕಲ್ನಲ್ಲೇ ಹೊಂಚಿಕೇಳ್ದೇ ಸಾರ್ with your presumed permission—ಅಂದ ಇವಳ್ಗೆ, ಸಾರ್, ಒಂದು never forgetting lessonoo. that though after all ಹೆಂಗಸ್ರು ಹೆಂಗಸ್ರಾದ್ರೂನೂವೆ before all ಗಂಡಸ್ರು are ಗಂಡಸ್ರೂಂತ ಒಂದು **ever** ......**ever**lasting lesson ನೀವೂ ನಾನೂ . teach ಮಾಡಿಯೇ ಬಿಡ್ಬೇಕೂಂತ ಅನ್ನಿಸುತ್ತೆ ನನ್ನ mindu ! but then, Sir, once again a question of will challengingoo but flesh feebleoo. " ಅದುರನ ಹೊಟ್ಟೇಗೂ ಅಮೃತ ಬೇಕು ! " New Kannada proverbu yet to be published...my own...ನಿಮ್ಮಗ, ನಿಮ್ಮ ತಾಯೀ ಗಲಾಟೇಲಿ poor ನೀವೋ cannot afford my salary...poorer ನಾನೋ !...can understand—as per Kannada proverb as aforesaid...ಸಾರ್. I am going away happily. One man to another man ಹೇಳ್ತೀನಿ. ವ್ಯಥೆಪಡಬೇಡಿ. But...

(approaching L)

...ಒಂದು matter ಮಟ್ಟಿಗೂ ನನ್ನ bloodನ ..

(clenching his fists and talking between grit teeth)

BOIL ಮಾಡುತ್ತೆ..........ಮೈಮುಖಾನೆಲ್ಲಾ ಪರಚಿಕೊಳ್ಳೋಣಾ ಅನ್ನಿಸುತ್ತೆ...ಈ ಹೆಂಗಸು **ನಿಮ್ಮನ್ನ** weak in English ಅಂದದ್ದು! ಹ್ಞ! ಹ್ಞ!! ಹ್ಞ!!!

(striking a melodramatic attitude)...

Helplessಉ ಸಾರ್ ಸಾರ್ ನಾನು, as your secretary dismissed and resigned before proper appointment even...ದೇವ್ರಿಗೇ ಗೊತ್ತು... ನಿಮ್ಮೂರ್ ಹೋಟೇಲ್ ಹೇಗಿರುತ್ತೋ ಏನೋ...cooking I mean...... ಪ್ರಪಂಚವೆಲ್ಲಾ ಲೀಲೆ ಆಗಿರ್ಬಹುದು ಪರಮಾತ್ಮನಿಗೆ, but then sir, all the world, Shakespeare ಹೇಳ್ದ್ಹಾಗೆ, stage ಅಲ್ಲಾ ಸಾರ್, ಸಮಾಜ!...ಸುಸ್ತಾದಾಗ ಸುಧಾರಿಸ್ಕೊಳ್ಳೋಕೆ stage ಗಿರೋ side wings ಇಲ್ಲಾ ಸಾರ್...ಸಮಾಜದಲ್ಲಿ! that is why we all must suffer, you and your patrician family and I and my own plebian self—hopelesso sir, hotel foodoo...always dangerous in foreign places, but then must be a man. At my own risk ಬಂದದ್ದು...... ಬರ್ತೇನೆ sir.......friendನ desert ಮಾಡೋದು ನನ್ನ principle ಅಲ್ಲ, but again circumstantial evidence alters strongest cases...English Proverb ಉ...

(ನಿಟ್ಟುಸಿರುಬಿಡುತ್ತಾ)

ಇಲ್ಲ, ಈ ಹೆಂಗಸಿನ ಇಂಗ್ಲಿಷ್...ದೇವರುಗಾನ ದಯವಿಟ್ರೆ ಒಂದು ದಿನ open platform ನಲ್ಲೇ man to man...ಇಲ್ಲ man to woman, but never woman to man...ನೋಡ್ತೇ ಬಿಡಬೇಕು! ಇವಳ್ಕೈನ... but that of course in hopeless... ನಿಮ್ಮ ಈ helplessness ನಲ್ಲಿ...ಬರ್ತೇನೆ ಸಾರ್...Goodbye, ಬರ್ತೇನೆ...but then...

(thumping his heart with clenched fist standing on doorstep of L)

(ಆಗ್ತಾನೆ ಹದಿಮೂರನೆಯ ಸಾಮಾನಾದ ಪಿಟೀಲನ್ನು ಮೇಲೆತ್ತಿಕೊಂಡು ಹೋಗಲು ಹೊರಟಿರುವ ಬೋರನಿಗೆ)

ಬೋರಣ್ಣಾ...ಅದ್ನೂ ಮೇಲ್ಹಾಗ್ಸಿ...ಸನ್ಹಾಸ್ಗೆ bag ನ ಒಂದು...ಜಟ್ಕಾಲಿ ಸಾಗಿಸಿಕೊಂಡು station ನಲ್ಲಿರು...ನಾನು ಬರ್ತೇನೆ...ಹೋಟಲಿಂದ...ಆದ್ರೂನೂವೆ ಸಾರ್ ಇಲ್ಲಿ...ಇಲ್ಲಿ...

(as he thumps his heart as aforesaid)

ಇಲ್ಲಿ...ನನ್ನ unappointed master, ಧಣಿ ನೀವು...I mean ತಾವೂನೂವೆ... ಅಲ್ಪಪ್ರಾಣಿ ನಾನೂನೂವೆ.......somehow...somewhere...somewhich...somewhat...somewhen...somewhy...somewhynot?...meet ಏ ಮಾಡ್ತೇವೇಂತ... ಇಲ್ಲಿ ಹೇಳುತ್ತೆ ಸಾರ್...though not in this ಲೋಕ perhaps...in Paramathma's Presence!...ಬರ್ತೇನೆ.

(Bows to the ground as he pulls out his forelock and turns his back to exit)

ಹಿರಿಯಣ್ಣಯ್ಯ : (in despair)

ಹಯ್ಯಯ್ಯೋ ಕಪ್ಪೂ...ನೀನೇನೋ man ಏ ?.. ಮೃಗವೇ ?...friend ನ ಅವಸ್ಥೆಗೆ blind ಮಾಡ್ಕೊಂಡು money ನೇ chief thingoo ತ ತಿಳ್ಕೊಂಡಿದೆಯೋ...ಹಯ್ಯೋ ಕಪ್ಪೂ...even you after all are a...

ಕಪ್ಪಣ್ಣ : (ತಿರುಗಿ)

'monitary friend' ಅಲ್ವೇ ಸಾರ್. ನೀವು ಹುಡುಕ್ತಿರೋ wordoo?...ಅದಿಲ್ಲಾ ನಾನೂಂತ ನಿಮ್ಮ ಬುದ್ಧೀಗೆ ಹೊಳೆಯದಿದ್ರೂ ನಿಮ್ಮ ಹೃದಯಕ್ಕೆ ಹೊಳೆದೇ ಇರಬೇಕು ! I am poor ಉ ಸಾರ್...ನನ್ weak pointoo...but sir, I am proudoo... ನನ್ನ strong pointoo ;...ನಿಮಗೇನ್ಬೇಕೋ ಹೇಳಿ. But first sit down...self ನ collect...ಮಾಡ್ಕೊಂಡು...mother· son ಅಲ್ದೆ with the help of ಈ ಒಬ್ಬ ಹೆಂಗ್ಸಿನ ಒಂದೆ ಔತ್ಕೊಂಡು ನಿಮ್ಮನ್ನ down ಮಾಡೋಕೆ try ಮಾಡ್ತಿರೋ trivarmite... another Shakespeare, drama Julius Caesar...terrible drama ಸಾರ್. ಮೂರ್ಜನ trivarmite ಸೇರ್ಕೊಂಡು ಒಬ್ಬನ್ನ Julius Caesar ನ. ಮೂವತ್ಮೂರು ಕಡೆ ಚುಚ್ಚೊಂದುಬಿಟ್ರು ; but then like Mahabharata it was ಗಂಡಸ್ರು against ಗಂಡಸ್ರು ! but then ಇದು ಅನ್ಯಾಯ ಸಾರ್. Two ಹೆಂಗಸ್ರೂಸ್ plus one Sexton Blake ಓದಿದ boy against the future 'Sir Hiriyannayya'...a lonely knightoo with a lonely well-wisher—viz., your humble servant jobless Kappanna.ಆದ್ರೂನೂವೆ ಸಾರ್. ಧರ್ಮ ಇನ್ನೂ ಇಥೆ ಕಲಿಯುಗದಲ್ಲೂನೂವೆ! ಧ್ರುವ ಇಲ್ಲಿಲ್ವೆ ! ಪ್ರಹ್ಲಾದ ಇಲ್ಲಿಲ್ವೆ !...ನೆನ್ನೆ ಮೊನ್ನೆ ಕೂಡ ನಚಿಕೇತನ್ನಿರಲಿಲ್ವೆ...ಅಪ್ಪನ್ನ ರೇಗ್ಸಿದ್ರ ಫಲ ನರಕದಲ್ಲಿ ಅನುಭವಿಸೋಕೆ. ಒಟ್ನಲ್ಲಿ ಸಾರ್...ನಿಮ್ಮ seventy-five rupeesoo ಬೇಡ ! ನನಗೆ cooking ಗೊತ್ತು...shall be always in local hotel self-supporting. ದೋಸೆ ಹುಯ್ಯಾಲೋ..customers ಗೆ attend ಮಾಡ್ತಾಲೋ for your friendship's sake...ಈ gang ನಿಮ್ಮನ್ನ down ಆಗೋಕೆ ಮಾಡ್ತಿರೋ plot ನ counterplot ಮಾಡೋಕೆ only command ಮಾಡೀ ಸಾರ್ ನನ್ನ. I am from this moment your self-appointed though salaryless secretary.

ಹಿರಿಯಣ್ಣಯ್ಯ : ಕಪ್ಪೂ !

(Placing left arm round Kappanna and rising K's chin with his right hand)

ನನ್ನ ಸಂರಕ್ಷಣೇಗೆ. ಕಪ್ಪೂ ! ದೇವ್ರೇ ಕಳ್ಸಿರಬೇಕು. ನಿನ್ನ ! ಆತನ ಲೀಲೆ. ಅದ್ಸರ್ಲಿ—ನನ್ಮಗ ಇವಳಿಗೆ guarantee ಮಾಡಿದ ಹಾಗೆ ನಿನಗೆ seventy five ಅಲ್ಲ...the same hundred rupees...

ಕಪ್ಪಣ್ಣ : 'Per mensum' ಅಲ್ವೇ ನೀವು ಹುಡುಕ್ತಿರೋ wordoo?

ಹಿರಿಯಣ್ಣಯ್ಯ : ಹೌದು....yes. ಆ hundred rupees written contract ಅವಳು ಹೇಳಿದಹಾಗೆ before a lawyer ನಾನೂ ಮಾಡ್ತೇನೆ ಕಪ್ಪು. Only ಈಗ desert ಮಾಡ್ಬೇಡ ನನ್ನ.

ಕಪ್ಪಣ್ಣ : Never let it be said, sir. ನಾನೋ your friend...but unfortunately in needu, but I shall try to be your friend in

deedu ಕೂಡ. ನನ್ನ English plus your English also—versus ಈ Sreemathi's Englishoo, minus ನಿಮ್ಮಗನ Sexton Blake Englishoo... ಒಂದು matchu, ಒಂದು English Waroo...I mean one war in English. At least ಒಂದು test matchoo with reverend ತಾಯೀ ರಾಣೀಸಾಹೀಬಾ, ಮಹಾ ಮಾತೋಶ್ರೀ as umpire, this side or that side according to our...our diplomacies!

(Strokes Hiriyannayya's back)

ಹೇಗಿದೆ ಸಾರ್! thoughtoo !...cold ಆಗಿ ಕೂತ್ಕೊಂಡು....Con...

ಹಿರಿಯಣ್ಣಯ್ಯ : Contemplate...ಅಲ್ವೇ? what you mean?

ಕಪ್ಪಣ್ಣ : (Aghast)

ಏನ್ಸಾರ್!! ಇದು. ನಿಮ್ಮ ಇಂಗ್ಲೀಷೂನೂವೆ!?...ನಾವಿಬ್ರೂ ಸೇರಿದ್ರೆ terrible English Couple ಆಗ್ಬೋಗ್ತೇವೆ...Then sir! no time to waste...must get busy...waroo ಅಂತ ಹೇಳ್ಬಿಟ್ಟೆ eveningಗೆ. Time ಕೊಡ್ಬಾರ್ದು...it is a question ...a question or Brutus or Cassius versus Cleopatra. Boil ಮಾಡ್ತಿದೇ ಸಾರ್ bloodoo ನನಗೆ!...ನಿಮಗೆ ಹ್ಯಾಗಿದೆ ಸಾರ್ blood systemoo? Equal to the battle ಏ?....reverend mother ಯೋಚ್ನೆ ಬಿಟ್ಬಿಡಿ, though 'pet grandsonoo'! ಮುಂದಕ್ಕೆ ಇವನಿಂದ್ಲೇ ಪಿಂಡ ಮೇಲ್ಲೋಕದಲ್ಲಿ? In spite of "pet grandson!" influenceoo...reverend umpireನ ನಮ್ಕಡೆ ತಿರಿಗ್ಸೋದು ನನ್ಭಾರ...ನನಗೆ women ಗೊತ್ತೂ...as a rule, but "every rule has exception;" old proverb but author cannot quote...ಈ ರೂಲಿಗೆ exceptionoo this English-knowing Kannada Cleopatra...

(ಹಿರಿಯಣ್ಣಯ್ಯನನ್ನು ಪರಟು ಹಿಡಿದು ಜಗ್ಗಿಸುತ್ತಾ)

ಚೇತರಿಸಿಕೊಳ್ಳೀ ಸಾರ್...after all Cleopatraನೂ ಹೆಂಗ್ಸು...Chloroform ಅಲ್ಲಾ!...ಮುಂದಿನ ಕ್ರಮ...but at once—ನಮ್ಮ motto.

ಹಿರಿಯಣ್ಣಯ್ಯ : ಕಪ್ಪ್ಯಾ, everything...at once ನೀನೇ ತಗೊಂಡ್ಬಿಡು chargoo...ರಾಮೂ ಬರೋದು 4 o'clock, tea timeoo ಅಂತ ಬರೆದಿದ್ದಾನೆ! Before he comes family lawyer ವೆಂಕಟೇಶಯ್ಯನ ಹತ್ರ ಹೋಗಿ stamp paper ನಲ್ಲಿ ನಿನ್ನೂ...

(ಕೈಯನ್ನು ಮಾಡಿ ತೋರಿಸುತ್ತಾ)

...ಅವಳ ಹಾಗೇನೇ by contract before a lawyer on same salaryಗೆ appoint ಮಾಡ್ಬಿಟ್ಟು...ನಾನು appoint ಮಾಡಿದ ನೀನಾಯ್ತು...ನನ್ಹೊಟ್ಟೇಲಿ ಹುಟ್ಟಿದ್ರೂನೂವೆ ಇವನು ನನಗೆ against ಆಗಿ appoint ಮಾಡಿದ ಈ ಹೆಂಗ್ಸಾಯ್ತು... ಅವಳ್ನ fight ಮಾಡೋಕೆ ನೀನು. ನನ್ನ Sexton Blake and ಗಾಜಿನ ಬೀರು poetry ನೂ ನುಂಗ್ಬಿಟ್ಟು ನನ್ನೇ ಬೆದರಿಸ್ತಿರೋ ಈ ಪಿಳ್ಳೇನ smash ಮಾಡ್ಕೋತೇನೆ ನಾನು.

ಕಪ್ಪಣ್ಣ : ಏನ್ಸಾರ್, Regular battle of action...ಅಲ್ವೇ ಸಾರ್! Author Shakespeare; characters Cleopatra, Antony ಕುಸಿದದ್ದು...battle field Riveroo...Longest river in Africa...Date of battle and length of

river, can supply from Geography and History...but details ಯಾಕೆ before battle...? victory ಆದ್ಮೇಲೆ discuss ಮಾಡ್ಕೊಳ್ಳೋಣ. Therefore I think everything is...

ಹಿರಿಯಣ್ಣಯ್ಯ : Understood.

ಕಪ್ಪಣ್ಣ : (ಹಿರಿಯಣ್ಣಯ್ಯನನ್ನು ತಬ್ಬಿಕೊಳ್ಳುತ್ತಾ)

ಏನ್ಸಾರ್ ಇದು ! ನೀವು ! ನಿಮಗೂ ನನಗೂ as Geometry says supplementary as also complementary...ಇಸ್ಟ್ಮಂದಿನ battleoo ಪರಮಾತ್ಮ plus ಪಾಂಡವಾಸ್ against ಕೌರವಾಸ್...though dismissed from Hastinapur without salary, ಅರ್ಜುನ Hastinapur Crown prince...plus though dissmissed from Muttra to Dwaraki...then of course no railways ...terrible walking...poor Krishna...ಪುಟ್ಟುಟ್ಟ ಕಾಲು...ಗೋಪೀ beloved ಬಾಬ್ಬು. But even then, though author of ಭಗವದ್ಗೀತ and head of family only Kavadigas ಆದ್ರೂನೂವೆ, nobody noticing... because of Balarama and other people. ನಿಮ್ಮ positionoo ಸಾರ್, if I may say so, ಹಾಗೇ ಇದೆ. Though present Zamindar...Balarama I mean Mr. Rama Rao Junior c/o. Post office address ನಲ್ಲಿ family position of ...ನಿಮ್ಮ position ಹೇಳ್ತೀನೆ, usurp ಮಾಡಿಕೊಂಡುಬಿಟ್ಟಿದ್ದಾರೆ. ಅಲ್ದೆ blood relations recognise...example reverend mother ಮಾತೋಶ್ರೀಯವರು ಕೂಡ partiality ತೋರಿಸ್ತಾ, ನಿಮ್ಮ positionನ ಕರ್ಣನ ಹಾಗೆ...mother, yet no mother...ನೆಂಟ್ರು also ditto. ಹೀಗೆ lone ಆಗಿ...but still ನಾನೊಬ್ಬ ಸಪೋರ್ಟ್ರು ಇಧೇನೇ ಸಾರ್...but what is the use...? there at least it was ಗಂಡಸ್ versus ಗಂಡಸ್...with God umpire of course. ಈಗ ನಾವ್ತೋ...ಚೀಲಬಿಟ್ಕೊಳ್ಳಿ ಸಾರ್, ಬಾಯಿಬಿಡಿ...first thingoo ನನ್ನ positionನ ನಿಮ್ಮಗ ಬರೋಕ್ಮುಂಚೆ establish ಮಾಡ್ಬಿಟ್ರೆ...before that leader of local barು? ಆ ವೆಂಕಟೇಶಯ್ಯನೋರು ... battleಗೆ ಮುಂಚೆ ಸಾರ್, Field Marshall ಕೈಲಿ official sword...after all 'weak in English' ಊಂತ ಈಕೆ ಮುಸ್ಸ್ಕ ನಿಮ್ಮನ್ನ the future may perhaps "Sir Rama Rao..."

ಹಿರಿಯಣ್ಣಯ್ಯ : (ಕನಲಿ)

SHUT UP ! ಸರ್ ರಾಮರಾವ್ ಅಂತೆ !!!

(Loudly)

ಬೋರಾ !

ಬೋರಣ್ಣ : (ಹದಿಮೂರು ಸಾಮಾನುಗಳಲ್ಲಿ ಕೊನೆಯದಾದ ಪಿಟೀಲನ್ನು ಕೈಲಿ ಹಿಡಿದುಕೊಂಡು ಆಗ ತಾನೆ ನಿಷ್ಕ್ರಮಿಸಿದ R ನಿಂದ ಪ್ರವೇಶಿಸಿ)

ಬುದ್ಧೀ...

ಹಿರಿಯಣ್ಣಯ್ಯ : ಜಟ್ಕಾ ನಿಲ್ಲಿಸಿದ್ದೀಯಾ ? ಪೇಟೇಗೆ ಹೋಗಬೇಕು.

ಬೋರಣ್ಣ : ಊಂ ಬುದ್ಧಿ......... ಈ ರಾಯುದ್ರು ರೈಲಿಗೆ ಸಾಮಾನ್ನಾಗ್ನಾಕೆ ನಿಲ್ಸೂಂದ್ರು.

ಹಿರಿಯಣ್ಣಯ್ಯ : Good ! ಈ ರಾಯ್ರು ಸಾಮಾನು ಕೋಣೇಲಿ ಇರ್ಲಿ ! ಇಲ್ಲೇ ಇರ್ತಾರೆ. ಇವರ ಮಂಚಕ್ಕೆ ಸೊಳ್ಳೇಪರದೆ ಕಟ್ಟಿರು....... ನಾನು ಸಾಯಂಕಾಲ...ಕ್ಲಬ್...ರಾತ್ರಿ ಊಟ ಆದ್ಮೇಲೆ ಮನೇಗೆ ಬರ್ತೇನೆ...ಅಮ್ಮಾವ್ರಿಗೆ ಹೇಳು...ದೊಡ್ಡಮ್ಮಾವ್ರಿಗೆ, ನಾಲಕ್‌ಘಂಟೆ ರೈಲ್ನಲ್ಲಿ ಚಿಕ್ಕಾಯ್ರು ಬರ್ತಾರೆ...ರೈಲಿಗೆ ಹೋಗು. ನನ್ಕೋಟು, ರುಮಾಲು, ಕೋಲು...ಜಟ್ಕಾಲಿ ಇರ್ತೇನೆ...ಇದ್ನ...

(Indicating violin)
ಆ ಹೆಂಗಸಿನ ಕೋಣೇಲಿ ಕುಕ್ಬಿಟ್ಬು...ತಗೊಂಬಾ ಜಟ್ಕಾಗೆ.
[Exit Bora R with ಪಿಟೀಲ್]

Come on, dear boy...ನೋಡೇಬಿಡೋಣ ಈ battleನ...ಈಗ half-past tenoo timeoo...

(After referring to gold watch)

...mother ಬರ್ತಾಳೆ...after pooja in ಕಾಲ್ಪಂಟೇ...ಇವ್ಳು, ನನ್ಮಗ್ನ Lady Field Marshall...ತಾನ್ಯಾರು...ಯತ್ತಾ ?...

ಕಪ್ಪಣ್ಣ : (Drawing him to door with interlocked arm)...

Come on Sir! can understand easily...commander...dash... Born commander ನೀವು...first thing in battle opposite Captainಗೂ Umpireಗೂ ಜಗ್ಳ ತಂದಿಡೋದು !...But ಸಾರ್...ಈ ಹೊತ್ತು ಮಧ್ಯಾನ್ಹ?... ಸಾಯಂಕಾಲ ? ನಿಮ್ಮಗ ಬಂದ್ಮೇಲೆ...? -

ಹಿರಿಯಣ್ಣಯ್ಯ : [Dragging Kappanna to L]

ನಾವು ಬರೋದು night timeoo...to sleep, ನಾಳೆ ಬೆಳಗ್ಗೆ battleoo. Plenty of time...ಬೆದರ್ಬೇಡ...as you say...I am Commander! I can manage my position. Am I weak in English I say! ?

ಕಪ್ಪಣ್ಣ : ಏನ್ಸಾರ್ ! ಗಂಡಸ್ರು ನೀವು...

ಹಿರಿಯಣ್ಣಯ್ಯ : But then, Kappu...ಆ ಹೆಂಗ್ಸ್ಹೇಳ್ತಾಳೆ...ನಾನು weak in English ಊ...'Also nothing to do in this matter,' "You are Nobody"!...quiet ಆಗಿ ನನ್‌ಜೊತೇಲ್ಬಾ........ನಾಳೆ ತೋರ್ಸ್ತೀಣ. ಇವರ್ಗೆಲ್ಲಾ... **who** I am...**why** I am...and **where** I am...last...

ಕಪ್ಪಣ್ಣ : But not least...ನಾನು ಇಧೇನೆ ಸಾರ್, ಪಕ್ಕದಲ್ಲಿ !

ಹಿರಿಯಣ್ಣಯ್ಯ : Yes! yes !...as I was saying...WHAT I NOT ONLY AM BUT I SHALL ALSO BE...ನಿನ್ನ kind help ಸಮೇತ !... after all, Kappu...

ಕಪ್ಪಣ್ಣ : Can supply words, sir...after all, future son and mother are only father, son and mother ! but **Love** and **Friendship** are **LOVE** and **FRIENDSHIP !** But before all, Sir, ...war is war...ನಾಳೆ ಬೆಳಗ್ಗೆಯಿಂದ ಇಧೆ ಸಾರ್, Battleoo, but small Kurukshetra, also bigger Mahabharata...ಬನ್ನೀ ಸಾರ್, ಜಟ್ಕಾ ಕಾದಿದೆ.

(Exit Hiriyannayya & Kappanna···L)

[Curtain drops as Bora exits with Black long coat, ಜರ್‍ತಾರಿ ರುಮಾಲ್, ಸರಿಗೆ ವಲ್ಲಿ & silver mounted black-wood-stick and blood-red Poona slippers in his hand through L]

SCENE III

(Time: next morning. Place: same. The appointment of the room considerably altered. A big square table with coloured obvious ಮಗ್ಗಲ್ಲಾಪಿಸಿಗೆ over it, supports a number of ಪಿಂಗಾಣಿ crockery as hectic coloured ಬಟ್ಲೂಸ್, ಬಸೀಸ್ and huge sized cups with soup plates for saucers and no spoon smaller than a dessert spoon. Also brightly painted water-carafes of porcelain doing service for coffee pots. There is milk in a glass tumbler and a conically shaped newspaper ಪೊಟ್ಟಣ of ಬೂರಾ ಸಕ್ಕರೆ standing with the Apex heaven-ward and burst coarsely at top offering its contents to the coffee party. Found seated Saroja, rainbow colour patched on a cream ground saree with feet enclosed in blood-red velet-topped ಚಪ್ಲೀಸ್ also in shrill green bodice, a muticoloured parasol resting on the chair. Her hair done up and ornamented with one ದಾಸವಾಳದ ಹೂವು the best she could get in the ಹಳ್ಳಿ ಕೊಂಪೆ, facing R and ರಾಮುರಾವ್ with back to C, facing t e footlights, a bundle of straight hair parted mathematically in the middle but infinity-strength lenses in Harold Lloyd spectacles, crimson butterfly bow, scarlet socks, lawn tennis shoes and gold wristlet watch, eight bright jewelled rings on all his fingers—in short, a hotch-potch of rich man's son, artist, gentleman, turned out by tailor, jeweller, cobbler and hair cutting saloon)

ಸರೋಜ : Milkooನೂ Decoctionooವೆ kitchenನಲ್ಲೇ mix ಮಾಡಿ ತರೋದು fashion ಅಲ್ಲ...Various tastes of various consumersಗೆ. blind ಆಗಿ sugarನೂ ಸುರ್‍ದು dissolve ಮಾಡಿ...ಎಲ್ರಿಗೂ forcible feeding ಮಾಡೋದು... inane...Frenchನಲ್ಲಿ ಬಂದಹಾಗೆ—ಚ್ಯಾಕರ್ ಔಸರ್ ಗೌಟ್ (Chacon-aw-son-gout).

ರಾಮುರಾವ್ : (Holding half way betwixt cup and lip the dessert spoon full of coffee)

ಚಾಕನ್ನೂ...English ಏ!! ??

ಸರೋಜ : Certainly not...ಫ್ರೆಂಚು...most up-to-date language! English ಹಿಂದ್ಬಿದ್ದು lots of time. ಬರೀ ಇಂಗ್ಲೀಷಿನಲ್ಲಿ ಇದರರ್ಥ—"different tastesoo, different peopleಗೆ differentooಅಂತ." ನಿನ್ನೋಟ್ಸ್ note book ತೆಗೆದು, take it down, at once...

[To Rama Rao who has placed spoon in cup and wiped his face with a big blue silk kerchief and is preparing to take down in aforesaid book]

ಸಿ ಹೆಚ್ ಯೆ ಸಿ ವೊ ಎನ್ ಔ ಸನ್

ಚಾ...see...hetch...yay...ಕನ್, see...woe...yen...ಔ...ow...son,
ಗೌಟ್

ಗೌಟ್...Gout...ಆಯ್ತೇ ?

ರಾಮರಾವ್ : ಹುಂ. ಇದೆಲ್ಲಾ ನೆನ್ನೆ ಕೊಂಡುಕೊಂಡ Three Volumes of Higgin Botham's dictionaryಲಿ ಎಲ್ಲಾದ್ರೂ...

ಸರೋಜ : Of course ಇಧೆ ! ಇಲ್ದಿದ್ರೆ ನಿಮ್ಕೈಲಿ...Seventy Rupeesoo ಕೊಡಿಸ್ತಿದ್ನೆ ?...but then, Goods-trainನಲ್ಲಿ ಬರ್‍ತಿವೆ with Encyclopedias, Etiquette books also. Manners for Gentleman in Drawing rooms in London and foreign, etc.,...in the meanwhileಗೇಂತ ಬರಿಸ್ತಿದ್ದಿದ್ದು...but never mind. Book and pencil pocket ನಲ್ಲಿ ಹಾಕಿ. And continue your coffee.

ರಾಮರಾವ್ : [Lifting up spoon, holding cup of coffee and emptying it sonorously...restores it to soup-plate]

Thank you... ಈಗ ನೀವ್ಹೇಳ್ತಿದ್ದಿದ್ದು...

ಸರೋಜ : What I was saying was...tableನಲ್ಲಿ company ಇರೋವಾಗ milkಓ, ಡಿಕಾಕ್ಷನ್ಓ, sugarಓ, ಅವರವರ್ಗೆ ಬೇಕಾದದ್ದು...ಅವ್ರವ್ರು...you see what I mean...chance ಕೊಡಬೇಕು ಎಲ್ರಿಗೂ good companyಲಿ, ಹಾಗೇ society which...of course, birth qualification ನಿಮಗಿದೆ...death qualification ನಿಮ್ಮ grandfatherಗೂ ಇತ್ತು...ಆದ್ರೆ family mattersನಲ್ಲಿ interfere ಮಾಡೋದು ನನ್ನ business ಅಲ್ಲ, therefore...type-writer work...

ರಾಮರಾವ್ : Good God ! ಸ್ವಲ್ಪಿರಿ. ಶ್ರೀಮತಿ ಸರೋಜಾದೇವಿ ! Only because I am rich and good family, plus also a poet...ನೀವು ಬರಿ type-writingಗೇನೇವೇಯೆ ಈ jobನ...accept ಮಾಡ್ಕೊಂಡಿದ್ದು ? ಕ್ಷಮ್ಸಿ ದೇವಿ... ಬರೀ type-writing ಅಲ್ದೆ ... ಈ ಕ್ಷಣದಿಂದ...through my poetry talents... Nobel prize, cash down money, ಅಲ್ದೆ 'Sir' title ಸಹಿತ ಸಂಪಾದ್ಸಿ...ನನ್ನ namesake grandfather ರಕ್ತ ನನ್ನ bloodನಲ್ಲಿರೋದ್ನ ನನ್ನ fatherಗೆ ತೋರ್ಸೋ ವರ್ಗೂ...ನೀವು ನನ್ನ desert ಮಾಡೋದಿಲ್ಲಾಂತ...promise ಮಾಡ್ಲಿಲ್ವೆ...in Bangalore?

ಸರೋಜ : Yes, Yes. That is why...though ನನ್ನ ಹೆರಳಿಗೆ ಈ rotten flower ಒಂದೇ ನಿಮ್ಹಳ್ಳೀಲಿ available ಆಗಿದ್ರೂನೂವೆ...complain ಮಾಡ್ದೆ ...suffer ಮಾಡ್ತಾ...ಅದಿರ್ಲಿ, must warn you once again...

[In a serious loud whisper]

That unnecessary advertise ಮಾಡ್ದ...Secretary ಇನ್ನೂ ಓಡ್ಬಿಟ್ಟು ಹೋಗಿಲ್ಲ ! Bora tells me this morning...ನಿನ್ನೆ ನಾನು ಬರುತ್ಲೂ ಹೊರಗ್ಹೋದ your father and that mannerless man ರಾತ್ರಿ ತಿರುಗ್ಬಂದು ಇಲ್ಲೇ ಮಲಕ್ಕೊಂಡು ...before everybody's getting up went out againಂತ ಜೋರ ಹೇಳ್ತಾನೆ... Therefore not yet dismissed. Bora too poor to tell a lie, because tip ಕೊಟ್ಟಿದ್ದೇನೆ. Therefore, before they come in...if...ಒಟ್ಟಿಲ್ಲಿ ನಿಮ್ಮ grand mother ಹತ್ರ positionನ ಈಗ್ಲೇ explain ಮಾಡೋದು best thingoo...my opinion ! but then ನಾನು...

(ನಿಟ್ಟುಸಿರು ಬಿಡುತ್ತಾ)

only a servantoo !

[Exitting by R.]

ರಾಮರಾವ್ : [Helplessly following her]

Servantoo...Paid servantoo...good God ! ಶ್ರೀಮತೀ ದೇವೀ, you must advise, like you faithfully promised in Bangalore...

[Exit Ramarao after Saroja muttering to himself.]

Father againstoo. Grand motheroo ಬಂದಾಗ್ನಿಂದ ಮಾತೇ ಇಲ್ಲ... horrible position ! This educated ladyನೇ...must advise me.

[Fully a minute after-enter by C Subbamma. Notices table and appertainances.]

ಸುಬ್ಬಮ್ಮ : [Aghast]

ಏನಿದನ್ಯಾಯ !...ಶೂದ್ರರ ಮನೇ ಹಾಗೆ...ಬೋರಾ...!

ಬೋರಣ್ಣ : [Entering L]

ಅವ್ವಾ !

ಸುಬ್ಬಮ್ಮ : ಈ ಅಧ್ವಾನಗ್ಳೆಲ್ಲಾ ಎಲ್ಲಿಂದ್ಲೋ ಬಂದದ್ದು ?

ಬೋರಣ್ಣ : ಲಬ್ಬೆ ಮಾಮ್ಮದ್ ಸಾಬಿ ಅಂಗ್ಡಿ ಇಂದಾಮ್ಮಾ...ಪಿಂಗಾಣಿ. ಗಾಜು. ಚಂಚಾಗ್ಳು ...ಕಾಪಿ ಕಷಾಯ ಉಡುಪಿ ಅಯ್ಯನ ಓಟ್ಲು...ಆಲೂ ಮನೇದು...ಬೂರಾಸಕ್ರೆ ಅಂಗ್ಡೀದು...ಬಟ್ಟೆ ದೊಡ್ರಾಯರ ಮಗ್ಳಾಸ್ಗೆ...ಮೇಜು ಮಾಡೀಯಿಂತಂದದ್ದು.

ಸುಬ್ಬಮ್ಮ : ಚೆನ್ನಾಯ್ತು...ತುರುಕರಂಗ್ಡೀ ಪಾತ್ರೆ...ಹೋಟಲ್ ಕಾಪಿ...ಹಾಗಾದ್ರೆ, ಬೋರಾ. ನಾನ್ಗುಡೀಗ್ಹೋಗಿ ಬರೋಷ್ಟೊತ್ಗೆ. ಊಟ ಆಗಿತ್ತೊಂದ್ರಲ್ಲಾ...ಎಲ್ಲಿ ?...ಹ್ಯಾಗೇ?

ಬೋರಣ್ಣ : ಇಂಗೇನ್ರವ್ವಾ!...ಇದೇ ಮೇಜು...ಇದೇ ಪಿಂಗಾಣಿ...ಓಟ್ಲಿನ್ನ...ತಾವು ಕಥೆ ಕೇಳಿ ಬರೋಷ್ಟೊತ್ಗೆ...ಸಾಮಾನುಗ್ಳು ಅಲ್ಮಾರ ಸೇರ್ಲಿ. ಮೇಜು ಮೂಲೇಲಿ.

ಸುಬ್ಬಮ್ಮ : ದೊಡ್ರಾಯ್ರು ?

ಬೋರಣ್ಣ : ಏಳಿದ್ನಲ್ಲವ್ವಾ...ಬೈಸಾರೇನೆ ಹೇಳಿದ್ನಲ್ಲವ್ವಾ...; ಎಲ್ಲೋ ಉಂಡಿದ್ದಿರ ಬೇಕು. ಬನ್ನೋರೂ. ಆ ಬಸ್ಸಪ್ನಾವೆ...ರಾತ್ರಿ ದೀಪ ಆರಿಸ್ದಮ್ಯಾಕೆ ಬಂದು ಬಿದ್ಗೊಂಡೋರು ಬೆಳಕರಿಯೋಕ್ಮುಂಚೇನೆ "ಯಾರ್ಗೂ ಯೇಳ್ಬೇಡಾ "ಂತೇಳಿ ಓದ್ರೂರ್ರಪ್ಪ...ದೊಷ್ಟ ಜಮಾನ್ರು...

(frightenedly approaching Subbamma & talking in panic-striken whisper)

ಅವ್ವಾ...ಇಧೇನವ್ವಾ ?...ಎಲ್ಲಾನೂವೆ...ಇಂಗಾಗೋಗೈತೆ ನಾನೇನೋ...

(ಬೆಚ್ಚಿಬಿದ್ದ ಹಾಗೆ)

ಇಧೇನ್ರವ್ವಾ...ದೊಡ್ಯಜಮಾನ್ರು ಇದ್ದದ್ದೇನು ? ಆ ಕಾಲ್ವೇನು... ಇವ್ರು ಈ ಪಿಂಗಾಣಿ ಸಾಮಾನುಗ್ಳು...ಚಿಕ್ಯಜಮಾನ್ರಿದ್ರೆ ಚಿಕ್ಕೋವಿಲ್ಲ ! ಚಿಕ್ಕೋವಿದ್ರೆ ಚಿಕ್ಯಜಮಾನ್ರಿಲ್ಲ...! ಅಲ್ದೆ ಅಪ್ಪಯ್ಯ, ಅಪ್ಪಯ್ಯ ನನ್ಗೇನೋ ನೆಟ್ಗವನೇಂತ್ಲೋಚೈತೆ...ಅವ್ನ ಬಾಯೆಲ್ಲಾ ಮಾತು ! ದೊಡ್ಡಯ್ಯ ನೊಂದ್ಗೆ...ಅಲ್ಲೆ ಇವ್ರೊಮ್ಮ...ರೂಪಾಯಿ ಬಿಸಾಕಿ ಪಾವಲಿ ಇನಾಂ ಕೊಡತಾಳವ್ವ ನಂಗೇ, ಇವ್ರವ್ವಾ—ಚಿಕ್ಕಯ್ಯನೊಂದ್ಗೆ...ಯಾಕವ್ವಾ ?...ಏನವ್ವಾ, ಇದೆಲ್ಲಾ ? ನನ್ಗೇನೋ..."ಪುಕಾ" "ಪುಕಾ !" ಅಂತೈತೆ ಗುಂಡ್ಗೇಲಿ ! ಏನ್ನವ್ವಾ, ಇದೆಲ್ಲಾ ! ?

ಸುಬ್ಬಮ್ಮ : (coming into the middle of the room, extending her arms wild)

ಇದೆಲ್ಲಾ ಒಳ್ಳೇದಕ್ಕಲ್ಲಾ ಬೋರಾ...ನೋಡು ಬೋರಾ, ನಾನು ಸೊಸೆಯಾಗಿ ಬರೋಕ್ಮುಂಚೇನೆ ಇಲ್ಲಿದ್ದೋನು...ನೀನು. ಹಳಬ ! ನಾನು ಬರೋಕ್ಮುಂಚೇನೆ...

ಬೋರಣ್ಣ : (with eyes gleaming)

ಅದೂನೂವೆ ಯೆಂಗ್‌ಬಂದ್ರೀವ್ವಾ ಟೇಸನ್ನಿಂದ ! ಆಗತಾನೇ ರೈಲ್ಬಂದಿದ್ದು ನಮ್ಮೂರ್ಗೆ. ಟೇಸನ್ನಿಂದ ಮನೇಬಾಕಲ್ವರ್ಗ್ಗೂ ದೀಪ್ಗಳು !...ಈಗ್ಲೂ ಮಾತಾಡ್ಕೋತಾರ್ರವ್ವಾ, ಊರೆಲ್ಲಾ. ಸಾವಕಾರ್ ದೊಡ್ಡವೀರಪ್ಪನ ಮದ್ವೆ ಮೆರವಣ್ಗೆ ಎಲ್ಲಿ...! ನಾನ್ಯೈದ್ನಾಗಿದ್ದಾಗ ದೊಡ್ಡದೊಡ್ಡೈ ನೋರು ಸೊಸೇನ ಮನೆ ತುಂಬಿಸ್ಕೊಂಡ ಮೆರವಣಿಗೆ ಎಲ್ಲಿ ! ನಾಲ್ಕುದುರೆ ಸಾರೋಟು... ಮುಂದೆಲ್ಲಾ ಬ್ಯಾಂಬ್ರು ಮಂತ್ರಯೇಳ್ತಾ...ಅವ್ರು ಮುಂದೆ ಬೆಳ್ಳಿ ವಾಲ್ಗ...ಸೂಳೇರು...ನೀವೋ ಸಾರೋಟ್ನಲ್ಲಿ ಚಿನ್ನದ್ಗೊಂಬೆ ಅಂಗೆ...

ಸುಬ್ಬಮ್ಮ : (sobbing into her hands)

ನಿಲ್ಸೋ, ಹಾಳಾದೋನೆ...ಮುಚ್ಚು ನಿನ್ಬಾಳ್ಬಾಯಿ. ಏನ್ ಜ್ಞಾಪಕಶಕ್ತೀನೋ ನಿನ್ಗೆ... ಪಾಪಿ...ನಾನು ಸೊಸೆಗಾರ್ಕೆ ಮಾಡೋಕೆ ಈ ಊರಿಗ್ಬಂದ ವಿಜೃಂಭಣೇನ ಕೇಳೋಕಲ್ಲ ನಾನಿಲ್ಲಿ ನಟ್ಕೊಂಡಿರೋದು...

ಬೋರಣ್ಣ : (ತಲೆಬಾಗಿ)

ಮರ್ರೇರ್ರವ್ವಾ—

(Totters through C and re-enters through C with a tiger-skin spreads it at mid-ground between C and L)

ಮರ್ರೇರ್ರವ್ವಾ!...ಕುಂತ್ಕೊಳ್ಳಿ.

(to Subbamma after she has settled herself on the skin and seating himself after her "ನೀನೂ ಕುಕ್ಕರಿಸೋ...ಹಣ್ಣಣ್ಣ ಮುದ್ಕ")

ಈಗೇಳ್ರವ್ವಾ !...ಈ ಪಾವಲಿಗ್ಳೂ, ಈ ಪಿಂಗಾಣಿ ಸಾಮಾನುಗ್ಳೂ, ಇವ್ರುಗಳ್ದೆಲ್ಲಾಟ...

(quoting to L)

ಈ ವಸ್ಸಯ್ಯಾ...

(pointing to R)
ಈ ವ್ವಸಮ್ಮಾ...

ಇವ್ರುಗಳೆಲ್ಲಾ ದುಡ್ಡುದುಗ್ಗಾಣಿ ಇಲ್ದೆ ಆರಾಡೋ ಅಂಗಿಲ್ಲ! ಮನೆ ದುಡ್ಡು ಎಲ್ಲಾ ಒಂದು ಬಿಡ್ಗಾಸು ಒರಕ್ಕೆ ಬರ್ಬೇಕಾದ್ರೆ ನಿಮ್ಮ ಕೈಯಿಂದ!...ಮತ್ತ್ಯಂಗವ್ವ. ಇದೆಲ್ಲಾನೂವೆ...?

ಸುಬ್ಬಮ್ಮ : ಬೋರಾ!...ಪಳಬ ನೀನು ಮನೇಗೆ! ನಿನಗ್ಹೇಳ್ದೆ ಇನ್ನಾರಿಗೆ ಹೇಳ್ತೀನು... ಆ ವಸ್ತು...

(pointing upwards)
ಅಲ್ಹೋಗಿ ನನಗೇಂತ ಕಾದಿರೋವಾಗ...ಆತನ್ಮೂಲಕ್ಕ ಪಡಿಸ್ಕೊಂಡ ದುಡ್ನ...
(moving her right hand to R and L)

ಈ ಅನ್ಯಾಯ ಮಕ್ಕಳ್ಗೆ ಸೇರಿಸ್ಬಿಟ್ಟು...ಆ ವಸ್ತೂನ ಸೇರ್ಬೇಕು ಅಂತ ಕಾದಿರೋ ನನಗೆ ಈ ಎರಡ್ಮೂರು ದಿನ್ದಿಂದ ಮನೇಲಿ ಆಗ್ತಿರೋ ಅನ್ಯಾಯಗ್ಳು ನಿನಗ್ಯಾಗೋ ನನಗೂ ಹಾಗ್ಯೇ ಹೊಟ್ಟೆ ಉರಿಸ್ತಿಧೆ!...ಬೋರಾ...ಹೇಳ್ತೀನೆ, ಕೇಳೂ...... ಇದೆಲ್ಲಾ ಒಳ್ಳೇದಕ್ಕಲ್ಲಾ...ಇದೇನೋ ಶೋಧ್ನೆ... ...ಪರಮಾತ್ಮಂದು!...ಮಗು ಮಂಕಾಗಿರ್ಲಿ...,ಇಲ್ದೆ ಇರ್ಲಿ...ಒಟ್ಟಿಲ್ಲಿ, ಸಾಧೂ! ಆದ್ರೆ...

(pointing to L, pointing to R)

ಇವರ ಹೆಸ್ರಿಟ್ಕೊಂಡು, ಇವರ್ಗೂ ನನ್ಗೂ ಮುಂದಕ್ಕೆ ಶ್ರಾದ್ಧ ಮಾಡಿ ಪಿಂಡದ್ಮೇಲೆ ಎಳ್ಳೂ ನೀರನ್ನೆರಚಬೇಕಾದ ಚಿಕ್ಕೊವ್ನೂವೆ...ನೆನ್ನೆತಾನೆ ಜುಟ್ಟುಮೇತ ಧೋತ್ರ ಕಟ್ಕೊಂಡು ಹಣೇಗೆ ವಿಭೂತಿ ಇಟ್ಕೊಂಡು ನನಗ್ನಮಸ್ಕಾರಮಾಡಿ ಶುಭ್ರವಾಗಿ ಹೋದ ಬ್ರಹ್ಮಚಾರಿ... ಈಗ...ಈ ವೇಷ ಹಾಕ್ಕೊಂಡು...ಹೆಂಗಸ್ತನಾನೇ ಮರ್ತ ಆ ಜಂತೂನ್ನೂ ಜೊತೇಲ್ಕರ್ಕೊಂಡ್ಬಂದು ಹೀಗೆಲ್ಲಾ... ಏನೋ ಬೋರಾ ಇದೆಲ್ಲಾ ಮಾಯೆ...ಒಂದು ಶೋಧನೆ...ಅದೇನು ಹಾಳ್ಕರ್ಮಾನ ಮಾಡಿದ್ದೆನೋ ಪೂರ್ವಜನ್ಮದಲ್ಲಿ........ಅನುಭವಿಸ್ತಿಧೇನೆ, ಈಗ ಅರ್ಥ ತಿಳೀದೆ. ಆ ಹೊಸ್ಬಾಗ್ನೆ ಬಂದಿಧಾನ್ನೋಡು, ಮಗು ಕರಸ್ದೋನು...ಅವನಿಗೆ ಸಂಸ್ಕೃತ ಗೊತ್ತು. ಆ ಪ್ರಾಣಿ ಬಂದ್ವೇಳೆ ಈ ಒಗಟೇನ ಬಿಡಿಸಿ ಹೇಳಿದ್ರೇನೇಯೇ ಉಂಟು ಶಾಂತಿ. ನನ್ನ ಮನಸ್ಸಿಗೆ...ಮೋಚ್ನೆ ಸಮ್ಯಾಟುಂಟಕ್ಕೆ.

ಬೋರಣ್ಣ : ಊರವ್ವಾ...ಬಾಯೆಲ್ಲಾ ಮಾತ್ತುಂಬಿದ್ರೂನೂವೆ...ಘಾಟಿ...ಮನ್ನ ಬಲ್ಘಾಟಿ. ನಂಗೇನೋ ಈವ್ವಸಮ್ಮನ್ಗಿಂತ...ನೆಟ್ಗಾನೇಂತ.

ಸುಬ್ಬಮ್ಮ : ಏನೋ ಬೋರಾ! ನನ್ಗೇನೋ ಹೆದರ್ಕೆ ಆಗುತ್ತೆ...ಇವೆಲ್ಲಾ ಒಳ್ಳೇದಕ್ಕಲ್ಲಾಂತ!

(rising up)

ಭಾನ್ವಾರಾ...ಸೂರ್ಯ ನಮಸ್ಕಾರ...ನಾನು ಹೊರ್ಟು ಗುಡೀಯಿಂದ ತಿರ್ಗ್ಗಿ ಬರೋಹೊತ್ಗೆ, ನೀನೂ ನಾರಾಯಣ್ನೂವೆ ನೋಡ್ಕೋಬೇಕು, ಬಂದಿರೋರ ಊಟ ಉಪಚಾರಾನ.

(pointing to L)
ಪಿಂಗಾಣಿ ಪಾತ್ರೆ...ಹೋಟ್ಲನ್ನಾ,...ಜಾತಿ, ಹೆಂಗಸ್ತನಾನ ಮರ್ತ (indicating R)

ಅವರ್ಗೂ...ಮಂಕಾದ್ರೂನೂವೆ...ಮನೆತನ್ದ ಮಾನಾನ ಮರೀದ ಮಗನೂ. ಸಂಸ್ಕೃತ ತಿಳಿದಿರೋ ಆ ಹೊಸಯ್ನೂ, ಇವರ್ಗೆಲ್ಲಾ...ನಾರಾಯಣನಿಗೆ ಹೇಳಿ...ಊಟಕ್ಕೆ...ಬೆಳ್ಳಿ ಪಾತ್ರೆ... ತಕೋ, ಅಲ್ಮಾರೆ ಬೀಗದ ಕೈ.

(putting a key in Bora's hand)

........ತೋಟ್ದಿಂದ ಬಾಳೆಎಲೆ ಕೊಯ್ಕೊಂಡು, ನಾರಾಯಣನ ಕೈಲಿ...ತರ್ಕಾರಿ... ನಿನ್ನಗಳು...

ಬೋರಣ್ಣ : ಊರವ್ವಾ. ತಂದಾಕೌಳೆ ತರ್ಕಾರಿ ಬೈಸಾರೀನೆ.

ಸುಬ್ಬಮ್ಮ : (exitting C followed by Bora with rolled up tiger-skin in his hand)

ಏನೋ ಬೋರ, ಇದೆಲ್ಲಾ ಹ್ಯಾಗಮ್ಮಾಗಿಯುತ್ತೋ ಏನೋ ದೇವ್ರಿಗೇ ಬೆಳಕ್ಕು.

[Exit]

ಕಪ್ಪಣ್ಣ : (Entering cautiously reconnoitering........sighing unnecessarily loudly in relief)

ಬನ್ನೀ ಸಾರ್!...ಯಾರೂ ಇಲ್ಲ.

(ಪ್ರವೇಶಿಸಿದ ಹಿರಿಯಣ್ಣಯ್ಯನಿಗೆ)

Notice ಮಾಡೀ ಸಾರ್...enemy retreat ಮಾಡ್ಬಿಟ್ಟದೆ. But...

(ಮೇಜೂ ಪಿಂಗಾಣಿ ಬಾಬತ್ತನ್ನು ಸೂಚಿಸಿ)

Battle field completely occupied by foreign foe...but local made...

(indicating to Bora)

But here is ancient authority...ಬೋರಣ್ಣಾ! ಎಲ್ಲಿಂದ್ಬಂದಿದ್ದು ಈ ...ಬಾಬ್ತುಗಳೆಲ್ಲಾ...?

ಬೋರಣ್ಣ : ನಮ್ಮನೇವಲ್ಲ ನನ್ನೊಡ್ಯಾ! ಇವೆಲ್ಲಾ ಚಿಕ್ರಾಯ್ರು ನೆನ್ನೆ ಟೇಸನ್ನಿಂದ ಪಾವಲಿ ಕೊಟ್ಟ ಆವಮ್ಮೊಂದ್ಗೆ ಬುಡನ್ ಸಾಬಿ ಜಟ್ಕಾಲಿ ಟೇಸನ್ನಿಂದ ಬರೋ ದಾರೀಲಿ ಲಬ್ಬೇ ಮುಮ್ಮುದ್ ಸಾಬಿ ಅಂಗ್ಡೀಲಿ ಕೊಂಡ್ಕೊಂಡು ಜಾಕಾಯಿ ಪೆಟ್ಗೇಲಿ ತಂದೋವು........ನಮ್ಮನೇ ವ್ಯಾಕಾದಾವು...ಇವು! ನೂರ್ಮಂದಿಗೆ ತಟ್ಟೆ, ಬಟ್ಲು, ಟಂಬ್ರಲ್ಲು ಎಲ್ಲಾ ಬೆಳ್ಳೀಲೆ ಇಡೋ ಪಾತ್ರೆ .... ಅಲ್ಮಾರೇ ಬೀಕ್ಕೈ ನನ್ಕೈಲಿಟ್ಟು........ನಿಮೂಟಾ ಬ್ಯಾಂಬ್ರಂಗೆ ಒಳ್ಗೇ...

(indicating R)

ಅವ್ರೂಟ ನೆನ್ನೆ ರಾತ್ರಿ ತಿಂದಂಗೆ ಓಟ್ಲನ್ನ...'ಲಬ್ಬೆಸಾಬಿ ಪಿಂಗಾಣಿ ಪಾತ್ರೇ'ಲಿ...

(to Hiriyannayya)

ಗುಡೀಗೊಂಟ್ರು ಬುದ್ದೀ ದೊಡ್ಡವ್ಮಾವ್ರು...ತಾಣಕ್ಕೆ ನೀರ್ರೋಡಿ ಕಾದವ್ಷೆ ನಾಣಪ್ಪಾ... ಒಂಡೀ ಬುದ್ದೀ!

(to Kappanna)

ನೀವೂನೂವೆ ಅಂಗೆ........ಬೆಳಗ್ಬಿಟ್ಟೋದ ಪಂಚೇನೂ, ತುಂಡೂನೂವೆ...ನಾನೊಗ್ದು... ನಾಣಪ್ನೋರು ಒಣಗಾಕೌರೆ....ಒಳಗೆ.

[Exitting]

ಬಂದಿರೋದ ತಿಳಿಸ್ತೇನೆ ಅವಯ್ಯನ್ಗೆ.

[Exit C]

ಕಪ್ಪಣ್ಣ : [Helping Hiriyannayya with the Coat, Turban and Valli]

Quickly, sir....
[Taking off his own coat and turban]

quickly sir. reverend umpire, our side !!! ಆಶ್ಚರ್ಯ !!! ನೆನ್ನೆ ಯುದ್ಧೀಚ್ಗ ! Not because our share-market climbed...but I think because ಆ gang...I mean...ನೋಡೀ ಸಾರ್ : ನೆನ್ನೆ ನೀವು ಮನೆ ಬಿಟ್ಟಿದ್ದು......I mean battleಗೆ ಬೆದರಿ ಓಡಿಹೋದದ್ದು Ten O'clockoo. ಈಗ ಕೂಡಾ very nearly ditto......you must admit ಇಷ್ಟೆಲ್ಲ ಈ, ಲಬ್ಬೇ ಅಂಗ್ಡಿ ಪಿಂಗಾಣಿ ಪಾತ್ರೆ ...that up-to-date ಪೆಂಗ್ಯೂಸ್ influence of course...ಬಂದ್ಬಿಟ್ಟಿದ್ದು reverend umpire, ನಾವೇನೂ ಮಾಡ್ದನೇವೆ, ನಮ್ಕಡೆ ವಾಲ್ಕೊಂಡಿರೋದು...not so much to our soldier credit, but because some mistake or other of Kauravas...I mean opposite side...therefore position ತಿಕ್ಕ್ಯೋಬೇಕು. Reverend umpire at ಗುಡಿ...Silver vessels according to umpire's orders, ನಮ್ಮೂಟಕ್ಕೆ...ಲಬ್ಬೇ ಸಾಬಿ ಪಿಂಗಾಣಿ ಪಾತ್ರೆ unworthy opposite sideಗೆ. Therefore must quickly take advantage of strong position now alone before both foreign foe and reverend umpire ಬರೋಷ್ಟ್ರಲ್ಲಿ...food first, fighting next. ಬಂದ್ಬಿಡಿ ನೀವೂ ಬೇಗ...

ಹಿರಿಯಣ್ಣಯ್ಯ : Quite right, Kappu.

[joins Kappanna]

But ಇವ್ರು...with my son...ರಾಮೂನ ಎಲ್ಲಿಕ್ಕೂ explanation ಕೇಳೋದು ಈಗ್ಲೇ...

ಕಪ್ಪಣ್ಣ : [Dragging Hiriyannayya through C]

ಎಲ್ಲಿಧೀರಾ ಸಾರ್......whistle ಆಗ್ಹೋಯ್ತು. ಎಲ್ಲಿಧೀರಾ ಸಾರ್. the battle has started,...too late for discussions...ಭಗವದ್ಗೀತಾ discussion **before battle**ಉ...ಈಗ too lateಉ.Quick action...equals victory...victory equals ಬರಿ "Rao Saheb" ಅಲ್ಲ, "Sir hood !" ಈಗ್ಗಾನ.. ಅಂಜಿದ್ರೋ!...meagre ಹೆಂಗಸಿನ...ಶ್ರೀಮತಿ or Devi......but pure ಹೆಂಗ್ಸನ್ನ ಮುಂದಿಟ್ಕೊಂಡು ಗಾಜಿನ ಬೀರೂ ಓಬೇರಾಯನ್'s poetry plus Sexton: Blake...ಇದೆಲ್ಲಾ ಯಾಕ್ಸಾರ್ ನಿಮಗೆ...? ಅರ್ಜುನ ನೀವು ! Legally by contract. Lawyer ಎದ್ರುಗೆ appointed ಆದ ಗಾಂಡೀವ ನಾನು. Therefore ಬಾಣ ಬಿಡೋದ್ನ ನನಗ್ಬಿಟ್ಬಿಟ್ಟು. ಶ್ರೀಕೃಷ್ಣ ಪರಮಾತ್ಮನ ಹಾಗೆ ತೆಪ್ಪನೆ ತಮಾಷೆ ನೋಡ್ತಿರಿ. I shall take care of the battle. and bulletin after bulletin ಕೊಡ್ತಿರ್ತೇನೆ ನಿಮಗೆ. war news. ಸ್ನಾನ ಮಾಡಿ. ಮಾಧ್ಯಾಹ್ನಿಕ ತೀರಿಸ್ಕೊಂಡು let us see what your Bheemasena has provided for dinnerಗೆ...ಬಂದ್ಬಿಡಿ.

[Exeunt]

ಬೋರಣ್ಣ : (ನಿಟ್ಟುಸಿರು ಬಿಡುತ್ತಾ)

ಹುಸ್—ಸ್—ಸ್. ಇವ್ರೂ ಟಾನೇನೋ ಇಂಗಾಯ್ತು. ಇನ್ನು ಚಿಕ್ಕೊಪ್ರಟಾನೂ. ಅಪ್ಪನಮ್ನಾಟ ಎಂಗೋ......ಓಟ್ಲಲ್ಲೋ. ಇಲ್ಲ ಓಟ್ಲಿಂದ ತರಿಸ್ಕೊಂಡಿಲ್ಲೋ...

[Enter through R. Ramarao & Saroja]

ಸರೋಜ : ನೋಡೀ. Before lunchoo one long walk ತೊಗೊಳ್ಳೋದು upto-to-dateಉ. Up-to-date ಅಂದ್ರೆ ಜ್ಞಾಪ್ಕ ಬರುತ್ತೆ...ನಿಮ್ಮ fatherನ introduction ಇಲ್ದೆ meet ಆಗಿದ್ರೂನೂವೆ......etiquette ಪ್ರಕಾರ ನೀವೇ introduce ಮಾಡ್ಬೇಕು. ಮುಂದೆ according to the conditions I have laid...ಈಗಿಂದ till you get your Nobel prize...nearly two or three years ಆಗುತ್ತೆ ...my relations ನಿಮ್ಮ family ಜೊತೇಲಿ must be amicable. Therefore first opportunity ತೊಗೊಂಡು formality ಪ್ರಕಾರ introduce ಮಾಡಿ.

[In a hard tone]

But one thing. ಆತನ್ಜೊತೇಲಿ there is a mannerless person... that is of course...ನಿಮ್ಮಂದೆ business. I have selected this room because we shall be always under your grand mother's eye ; ನಿಮ್ಮ Poetry work ಎಲ್ಲಾ ಈ ರೂಮ್ನಲ್ಲೇ ನಾನು type ಮಾಡೋದು. But ನಿಮ್ಮ fatherನ municipal speeches etcರಾಗೆ, ಬೇರೆ ನಿಮ್ಮ father's assistant. I have no malice...ಒಟ್ನಲ್ಲಿ, what I mean is, ನಮ್ಮ work ಆಗ್ತಿರೋವಾಗ...ಇದೇ ರೂಂ ನಿಮ್ಮ father's office room ಆಗಿರೋವಾಗ, as you told you must arrange...ಈಗೊಂದ್ಗೋಡೆ ಕಟ್ಬೋದು impossible...but at least a temporary partition...

ರಾಮುರಾವ್ : Yes! yes! "Partition" ? some ಪರ್ದೆ !

[Aloud]
ಬೋರಾ !

ಬೋರಣ್ಣ : ಬುದ್ಧೀ.

ರಾಮುರಾವ್ : [Pointing to wall over C]

ಆ ಗೋಡೇಗೆ ಇಲ್ಲೊಂದ್ಮಳೆ ಹೊಡ್ದು...
[pointing to corresponding place over foot-light]

ಆ ಗೋಡೇಗೂ ಒಂದ್ಮಳೇ ಬಡ್ದು ಮಾಡೀ ವರಾಂಡಾದಲ್ಲಿ ಮಳೇ ಬಂದಾಗ ಕಟ್ಬೋ ಪರ್ದೇನ. ಕಟ್ಬಿಡು. ಇಲ್ಲಿ.

ಬೋರಣ್ಣ : ಊಂ ಬುದ್ಧೀ.

ರಾಮುರಾವ್ : ಈಗ್ಲೆ ಅಲ್ಲ. ನಮ್ಮೂಟ ಆದ್ಮೇಲೆ. ನಾವು ಹೊರಗೆ ಹೋಗ್ತೇವೆ. ಬರೋಷ್ಟ್ರಲ್ಲಿ ಈ ಸಾಮಾನುಗ್ಳೆಲ್ಲಾ ತೊಳೆದಿಟ್ಟರು. ಅನ್ನ ತಂದಿಡ್ತಾರೆ, ಹೋಟ್ಲಿಂದ. ನಾವ್ ಬಂದೂಟಾಮಾಡಿ ಆದ್ಮೇಲೆ ಪಾತ್ರೇನೆಲ್ಲಾ ತೊಳ್ದು ಅಲ್ಮಾರಾಗ್ಸೇರ್ಸಿ...ಈ ಮೇಜ್ನ...

[pointing to corner L.C.]
ಅಲ್ಲಿಟ್‌ಬಿಟ್ಟು...ಪರ್ದೇನ ಕಟ್ಟು.
[to Saroja]

ಬನ್ನಿ Srimathi. Everything is alright…half of father's office room is mine…grand motherಗೆ explain ಮಾಡ್ಕೊ'ತೀನಿ. Leave it to me. Other half…father…his municipality and assistant—manners, or no manners—ನಮಗ್ಯಾಕೆ? His affairs fatherಗೆ… ನಮ್ಮ poetry affairs ನಮಗೆ…grand mother ಮಟ್ಟೂ ಇದ್ನೆಲ್ಲಾ ಸರ್ಯಾಗಿ ತಿಳ್ಕೊಂಡ್ಬಿಟ್ರೆ…ಎಲ್ಲಾ smooth…will explain to her ಬನ್ನಿ. "Walkoo" ಅಂದ್ರಲ್ಲಾ, I shall take you…ನಮ್ತೋಟಕ್ಕೆ. Fruits and cocoanut gardensoo ಅಲ್ಲೆ…many many cattles, calfs, ಎಲ್ಲಾ ಕಟ್ಟಾಕಿರ್ತಾರೆ. ತೋಟದಲ್ಲೇ; because running off to mothers and drinking milk…small hill within a mile…ಅಲ್ಲಿ all the big cows and buffaloes, beautiful grassನ ಮೇಯ್ತಿರುತ್ವೆ…very poetical sceneoo…green green grass below, blue blue sky above…ಬೇಗ್ಬನ್ನೀ…for God's sake ಬೇಗ್ಬನ್ನೀ…"green green grass below. blue, blue sky above"…may be beginning of my Nobel prize poetry…ಬನ್ನಿ…

[tears out of L. with Saroja following after, opening her multicoloured parasol]

ಬೋರಣ್ಣ : ಇಧೇನ್ಲೆ ಕ್ಯಾಕಶಾರಾ, ಪಿಸೀಪಿಸೀ ಇಂಗ್ಲೀಷ್ ಯೋಳ್ತಾ ಚಿಕ್ಕೋರು ಓಡೋದೇನೂ…ಮಳೇನೆ ಇಲ್ದಾಗ, ಕಾಮನ ಬಿಲ್ಕೊಡೇನ ಇಲ್ಲಿಂದ್ಲೇ ಬಿಚ್ಕೊಂಡು ಇವ್ಳಮ್ಮಾ ಇಂದೋ ಗೋದೇನು…ಗಂಡಸ್ರಂಗೆ ಎಕ್ಕಡ ಮೆಟ್ತಾ! ಇನ್ನವ್ವಾವ್ರು ಗುಡೀಲಿ ಎದ್ನಂತೆ ಸೂರ್‍ನಮಸ್ಕಾರ ಆಕ್ತಾ ಸಾವ್ರಗಟ್ಲೇ…ಇನ್ನಯ್ಯಾ, ಆವಸಯ್ನೊಂದ್ಗೆ ಊಟ ಒಳ್ಗೇನೇವೆ…ಇನ್ನಿಲ್ಲಿ ಈ 'ಪಿಂಗಾಣಿ ಊಟ' ಆಗೊತಪ್ಲನೂವೆ…ಮಾಡಿಪರ್ದೆ ಇಲ್ಕಟ್ಟಿ ವಂದ್ಕೋಣೇನ ಎಂಡ್ಕೋಣೆ…ಯಾಕೋಕಾಣೆ… ಈ…ಗಲಾಟೇಲಿ…

[goes up to corner R. C. and picking up broom-stick]
ಅಯ್ನ ಆಪೀಸ್ ಕೋಣೆ ಗುಡಿಸೋದೇ ಮರ್ತೇಬಿಟ್ಟೆ…


[After a few strokes of sweeping with broom-stick…stopping and gesturing with broom-stick]

ಇದೆಲ್ಲಾ…ಅವ್ವಾ ಯೋಳ್ದಂಗೆ…"ಒಳ್ಳೇದಕ್ಕಲ್ಲಾ"!

[curtain drops slowly with Bora sweeping]

SCENE IV

[Place same as before but now arranged as below]



Foot–Lights

(Found entered Saroja on stool at type-writer and Rama Rao in chair ..... Hiriyannayya at table with Kappanna, fountain-pen in hand held against a sheaf of papers.)

ಕಪ್ಪಣ್ಣ : [In a loud voice]

No good listening, Sir !...must get on with municipality work...ನೋಡೀ...your first speech must be........for poor people. ಯಾಕೇಂತೀರಾ : Voteಗ್ಳೆಲ್ಲಾ...ಪೇಟೇಲಿ ; extensionನಲ್ಲಲ್ಲಾ. But ನಿಮ್ಮ ಪೇಟೆಯೆಲ್ಲಾ ನೋಡಿದ್ದೇನೆ. by my nose. ಗಲ್ಲಿಗ್ಳೂ...ಓಣಿಗ್ಳೂ...ಒಟ್ನಲ್ಲಿ hopeless condition. Therefore your first lecture must be sanitary. ಬೊಮ್ಮನಪೇಟೇಲೇ ತಗೊಳ್ಳಿ ಸಾರ್. Municipal office figures...ನೆನ್ನೆ ಎಲ್ಲಾ ಕೂತ್ಕೊಂಡು ಆ ಕ್ಲಾರ್ಕನ without introduction........ತಾರೀಫ್ ಮಾಡಿ ಸಂಪಾದಿಸ್ದೆ...figuresನ...death figures...ವರ್ಷಕ್ಕೆ ಸಾರ್ ನಿಮ್ಮ ...now of course ನಮ್ಮ...ಈ ಊರಿನಲ್ಲಿ...let me refer...

(buries himself into pocket-book)

ರಾಮರಾವ್ : "Silver moonlight beams

that dance upon the streams..." type ಮಾಡಿ...

(Saroja types it sounding the words)

ಹಿರಿಯಣ್ಣಯ್ಯ : (In loud whisper)

ಕೇಳ್ತಾ ಕಪ್ಪಾ! ಕದ್ದದ್ದು...ಆ coupling linesoo...from Sarojini's poetry book in my glass ಬೀರು...the lines are...

ಕಪ್ಪಣ್ಣ : ಇದ್ದೊಳ್ಗೇ ಸಾರ್! ನಮಗ್ಯಾಕೆ? Come back to sanitary figures! ನೋಡಿ. Death figures not only in cholera alone but diarrohea and plus dysentry also...ನಿಮ್ಗೇ shock ಆಗುತ್ತೆ ಸಾರ್.

ಸರೋಜ : ನೋಡೀ...I can type of course but that "Dance upon" ಆದ್ಮೇಲೆ Dysentry ಬಂದ್ಬಿಡ್ತು. Only because ನಿಮ್ಮ moon beams ಆ ಮುನಿಸಿಪಾಲಿಟಿ death figures...not to speak of streams and cholera. ಈ confused ಗಲಾಟೇಲಿ...cool ಆಗಿ consider ಮಾಡಿ ಹೇಳಿ...I am afraid that...

ಕಪ್ಪಣ್ಣ : (To Hiriyannayya whispering)

Afraidoo !...ಗಮ್ನಿಸಿದ್ರಾ...? ನಮ್ಮ diarrohea ಎದುರ್ಗೇ where is their poetry ಸಾರ್ !...now must get on:

(In a loud voice)

"after having dealt with death figures through cholera, dysentry and diarrohea, let me now proceed to prove to your satisfaction, Ladies & Gentlemen" ...ನಿಮ್ಮ speechoo ಸಾರ್...."that through the neglect of hitherto municipal management because I was not there as president, death figures for plague, influenza and malaria for grown-ups but also small-pox for not-yet-grown-ups have added to annual death figures in municipality"...shall write down.

ರಾಮರಾವ್ : Can-not-help, Devi. Must concentrate. ಪಲ್ಯಚ್ಚೊಂದು ಸಧ್ಯ type ಮಾಡ್ಬಿಡಿ...ಇದ್ನ...Inspired linesoo.

(Loudly)

Father liar! ಗಾಜಿನ ಬೀರೂ! My inspiration ಕೊಟ್ಟದ್ದು. ಲೈಬ್ರರಿ ಒಪ್ಪಿಸ್ತೇನ್ನಿಮಗೆ...ಈ two lines.

"Beams of silver moonlight
That on brooks alight"

ನಾನ್ಹೇಳಿದ್ನಲ್ಲಾ...ಅದ್ಗಾನ ಗಾಜಿನ ಬಿರೂನಲ್ಲಿದ್ರು..

ಹಿರಿಯಣ್ಣಯ್ಯ : ಕೇಳ್ದ್ಯಾ ಕಪ್ಪಾ? Scoundrel change ಮಾಡ್ಬಿಟ್ಟ linesನ! Again ಕದ್ದಿದ್ದು and Sillyly. ಮೊಸ್ಮೊಸ್ನೆ ಅವನೇ ರೈಲ್ವೆ ಸ್ಟೇಷನ್ನಲ್ಲಿ ಕೊಂಡುಕೊಂಡು

ಬಂದ magazinesನಲ್ಲಿ ಬಂದ lines ಓದಿದ ಜ್ಞಾಪ್ಕ ಬರುತ್ತೆ. Thiefoo…Nobel prize ಅಂತೆ. ಈ…ಈ…

ಕಪ್ಪಣ್ಣ: Ignoble…ಅಲ್ವೆ ಸಾರ್ wordoo? ನಮಗ್ಯಾಕ್ಸಾರ್ ಅವ್ರ ಕದ್ದ Poetry? Let us come back to cholera.

ಸರೋಜ : ನೋಡೀ…I can concentrate upon my work, but I am afraid…that you…

ರಾಮರಾವ್ : am a thief of poetryಂತಾ ತಿಳ್ಕೊಂಡಿದ್ದೀರಾ? ನನ್ನ…but to show you…ಈಗ್ಹೇಳಿದ್ದ lines ಎಲ್ಲಾ by some accident ಗಾಜಿನ ಜೀರೂ and magazineನಲ್ಲಿ ಬಂದಿದ್ರೂನೂವೆ…

(defiantly, to the screen)

mind you…I don't admit it…still I shall show my own unquestionable poetry originally…ದಯವಿಟ್ಟು ಆ cholera, diarrohea ಕಿವೀಗೆ ಹಾಕ್ಕೊಳ್ದೇ concentrate ಮಾಡಿ…get on with the type-writing…

(tugging fiercely at his fore-lock……)

Silver moon-light ಯಾಕೆ. ಬೇರೆ ಏನೂ ಇಲ್ವೆ natureನಲ್ಲಿ? …ಅಂ… ಬರೀರಿ. Golden sunlight down the hill—Lightens waters of the river ಸರ್ರ್ಯಾಗಿಲ್ಲಾ……running water ಆಗ್ಬ್ಯೆ ಇರ್ಬೇಕು, hillಗೆ rhymeoo ಆಗ್ಬೇಕು ……can you not suggest for God's sake?

ಕಪ್ಪಣ್ಣ : (Coming close to the partition screen)

Can supply necessary information, but only if permission coming from my salary–paying–master appointed yesterday properly before lawyer. ಇದಕ್ಕೇ ಏನು? for all the balance of your Poetries up to nobel prize itself….that lady ಬರೀ typewriteroo…. ನೀವು ಹುಡುಕ್ತಿರೋ—but for me never–ಈ ಯುಗವೆಲ್ಲಾ ನಿಮಗೆ ಸಿಕ್ಕಲಾರ್ದ wordoo…shall give you gratis–free. Question:—running water of similar rhyme h–i–l–l; answer equals r–i–double l. Natal dictionaryನಲ್ಲಿಧೆ. Therefore your poetry with proper coupling lines equals:

Gold coloured sunlight washing hills
Therefore must join the hill-bottom rills.

(resuming his seat, to Hiriyannayya)

ಸಾರ್, **if this is Nobel prize poetry,** ಛಿರ್ಬಟಕ್ಕೆ twine ಬಿಟ್ಟಾಗೆ ಗಜ ಗಜ ಎಳ್ದುಬಿಟ್ಟೇನು, ಸಾರ್. ಆ ಹೆಂಗಸ್ಗೆ hundred rupees ಕೊಟ್ರೂ ಅವ್ರೇನು ಬರ್ತಾರು?…ನಾವಿಬ್ರೂ ಈ Nobel prizeಗೆ…plus of course municipality work and Rao Saheb of course, per contract before lawyer ಇಲ್ದಿದ್ರೂನೂವೆ, per man to man contract included…ಈ Nobel prizeಗೆ

ಒಂದ್ಕೈ ನೋಡ್ಬಿಡೋಣ್ವೆ ? Not now of course···never mind this small poetry and this gratis information viz., rills· Viz=namely. But ಇದು ಹೋಗ್ಲೀ ಸಾರ್...ನಮ್ಮ workoo get on ಆಗೋಣ ! ಒಂದು. ಅತ್ಕಡೇ workಉ ನನ್ನ Natal ಇಲ್ಲಿದ್ರೆ...ಐಬು...!...but supplies cut off from enemy because dictionary trunk ನಲ್ಲಿದೆ. ಗಾಜಿನ ಬೀರೂಲಿಲ್ಲ. Locked up.Key ಜನಿವಾರದಲ್ಲಿ ! But ನಮಗ್ಯಾಕೆ ಅವ್ರೊದ್ದಾಟ—Let us come back to cholera···

ರಾಮರಾವ್ : (raging)

Sunlightನೂ ಬಿಟ್ಬಿಡಿ...starlight ತೊಗೊಳ್ಳಿ...

ಸರೋಜ : (sweetly, in a whisper)

ಹೀಗೆ ರೇಗಿದ್ರೆ poetry ಬರೋಲ್ಲ. That man, mannerless he might be, but "hillsಗೆ" "rills"oo readyಆಗಿ ಇಟ್ಕೊಂಡಿಧಾನೆ ಮುಂಡೇಲಿ. Englishನಲ್ಲಿ quite useful ಅಂತ ಕಾಣುತ್ತೆ...

ಕಪ್ಪಣ್ಣ : ಕೇಳಿದ್ರಾ ಸಾರ್...admission of enemy !!!! ನೆನ್ನೆ ನಿಮ್ಮ "Hindu"ಲಿ ಬಂದ್ವಾಗೆ—Defeatism··· ಸುಸ್ತು ಸಾರ್ ಅವ್ರು. I tell you they are Kauravas and we···we ಏನು......! You···everything depends upon you···

(whispering into Hiriyannayya's ear)

therefore Ist thing···ಈ poetry ಗಿಯಾಟ್ರಿಗ್ಗೆದರ್ಬೇಡಿ...ಈ poetry ನಾಲ್ಕು ಗಾಜಿನ ಬೀರೂ ತುಂಬಿ...with or without Natal···my favourite author······perhaps after all this is God's Leela···but soonest possible ಕುಂತೀಕರ್ಣ scene ಒಂದು ಮಾಡೇ ಬಿಡ್ಬೇಕು ನೀವು before God's Leela· ಯಾಕೇಂತೀರೊ...and···

(pointing to himself)

but reverend mother umpire ಏನ್ಬೇಡಿಕೊಂಡ್ರೂನೂವೆ don't ತ್ಯಾಗ your servant—ಸರ್ವಾಸ್ತ್ರ. ಏನೋ ಸಾರ್...ಹೀಗೆ 'Rao Saheb' ಸಂಪಾದಿಸೋ ಗಜ್ಬಿಜೀಲಿ...ಈ moon-light, sun-light beams and rays of hills and rills...ಈ Nobel prize ಬಾಬ್ತುನೂ. of say lakh of Rs. ಅಲ್ದೆ ಒಂದು 'Sir' titleಊ ಅತ್ಕಡೆಯಿಂದ ಕೊಟ್ಕೊಂಡು ನಮ್ಮನಮ್ಗೇ ಬಂದ್ಬಿಡುತ್ತ್ಯೋ ಏನೋ ಕಾಣೆ...All depends upon Almightie's ಲೀಲೆ ! But thank God ! Natal sleeping in my trunk.

ರಾಮರಾವ್ : (Loudly)

I can understand, Srimathi···Devi···ಈ ಗಲಾಟೇಲಿ you cannot type. ನನ್ನ fatheroo paid servantಗೆ ಹೀಗೆ ಜಾಗಾ ಕೊಟ್ರೆ ಎಷ್ಟು advantage ತಗೊಳ್ತಿಧಾನೆ ನೋಡಿದ್ರಾ...ಆ wormಊ ! Can I not with help of your B.A. English get on with poetry ?

ಸರೋಜ: ನಾವ್ಹೇಗ್ಹೇಳ್ಲೀ? I am B.A. of course, but now only a type-writer. That is all. You are asking my help. Though I hate that mannerless man···his Natal dictionary we can order from Higginbotham's by V.P. to-morrow.

ರಾಮುರಾವ್: (excited)

···order···? wire ನಲ್ಲರ್ರೋಣ...!

ಸರೋಜ: ಅದಲ್ಲಾ ನನ್ನ worry···though I hate that man ...ಹೇಗ್ಹೇಳ್ಲೀ...

ಕಪ್ಪಣ್ಣ: (in a whisper)

ಸಾರ್. Enemy admits Hate. But Hatred equals Fear. Therefore, though ಹೊಂಚಿಕೇಳೋದು is bad manners···but then, I am...ಅವಳೇ ಹೇಳಿದ್ದು mannerlessಊಂತಾ. Therefore, with or without your permission···I must···

(comes to screen & listens)

ಸರೋಜ: ನಿಮ್ಮ father ಮೇಲೆ ಬಹಳ influence ಇಧೇಂತ ಕಾಣುತ್ತೆ, that creatureಗೆ. ನೀವೇ explain ಮಾಡಿದ್ದಾಗೆ, everything depends upon your grand-mother······from my salary to the price of this typewriter. ಆಕೇ ಮೇಲ್ಯೇ dependingoo.

[in a whisper]

ಮೆಲ್ಲಗ್ಮಾತಾಡಿ. ಆ mannerless wily brute ಇದೆ ಅತ್ಕಡೆ. ಬರೀ cotton curtain in the middle···ಹೊಂಚಿ ಕೇಳ್ತಿರಬಹುದು. ನೀವ್ಹಾನ ಬೇಗ ನಿಮ್ಮ Grandmotherಗೆ...ಇಷ್ಟು orthodoxooಂತ ಗೊತ್ತಿರಲಿಲ್ಲ ನನಗೆ...ನೆನ್ನೆ ಹೋಟಲ್ ಮೀಲ್ಸು... porcelain ಪಾತ್ರೆಗಳು ಇವೆಲ್ಲಾ ಆಕೇಗೆ might-have-shocked ಆಗಿರೋ prejudiceನಲ್ಲಿ...ನಿಮ್ಮ and ನನಗೆ prejudice ಆಗಿರೋವಾಗ first hearing by your grand mother...ಆ cunning manಗೆ ಸಿಕ್ಬಿಡ್ರೂ ಅಂದ್ರೆ ...ಬೇಗಾ you must forth-with talk to your grand mother.

[leans her left ear to R]

ರಾಮುರಾವ್: You see...ಕೇಳ್ಸತ್ಯೇ?

ಸರೋಜ: [still lower]

Yes yes. Go on, but be careful and remember: every-thing depends, as that bad mannered man said, upon your Grand mother···I understand it when he called her Kunthi! you must not waste...ಕೇಳಿಸ್ತೇ?

[on Rama Rao nodding assent]

After all everything question of money. But we are honestly working for...

ರಾಮುರಾವ್ : Yes yes. I know. "Nobel prize." Grand motheroo too old for education......up-to-date ತರೋದ್ರೊಳ್ಗೆ her ಆಯುಸ್ will be finished. But in the meanwhile....ಇಷ್ಟು ದಿನ್ದಿಂದ though I was ಹೆದರಿಂಗ್ to talk to her...must meet her somehow and have a...a...

ಸರೋಜ : Heart to heart talk but before **they** talk to her! because ಹೇಳ್ತೀನೆ...ನಾನು ಆ creature ಹಾಗೆ ಹೊಂಚಿಕೇಳ್ಳಿ ಇದ್ರೂನೂದೆ......could not help overhearing—soon as possible ನಿಮ್ಮ father with ಆ creature's brain ಹಿಂದಿಟ್ಕೊಂಡು ನಿಮ್ಮ mother ನ meet ಮಾಡೋಕ್ಮುಂಚೆ ನೀವೇ ಆಕೇನ meet ಮಾಡಿ...after all pet grandson ನಿಮ್ಮ position...and my position also ಆಕೇಗೆ explain ಮಾಡ್ಬಿಟ್ಟು......ಈ creature ನ get rid of ಮಾಡೋದು necessary for our programme...ಅಲ್ವೆ?

ಕಪ್ಪಣ್ಣ : [to Hiriyannayya, whom he has brought to the screen to overhear all of the latest speeches of Rama Rao and Saroja and after leading him back to L]

ಕೇಳಿದ್ರಾ, ಸಾರ್. Get rid of me ಅಂತೆ. ತಿಳೀತೇ. B. City ಲಿ ಹೋಗ್ತಿದ್ದ ಮಾರಿ ನಮ್ಮನೇ ನುಗ್ಗಿ ಈಗ್ಬೆದರ್ಸ್ತಿಧಾಳೆ......I told you. Fear!......ಈ ಕುಂತಿ interview with Karna ಗೇನೇ arrange ಮಾಡ್ತಿಧಾಳೆ. Meeting of Kunti, of Abhimanyu with Mayahidimbi. Terrible ಹೆಂಗ್ಸು ಸಾರ್. ಅವ್ಳೂನೂವೆ. As before us ಆಗೋ ಹಾಗೆ yet still ಆಗೋ ಕೆಲ್ಸವಲ್ಲಾಸಾರ್. Must admit. ನಗು ಬರುತ್ತೆ...ಧರ್ಮ ನಮ್ಕಡೆ. ಪರಮಾತ್ಮ our side. What can anybody do?...ಅದೂ Test match is test match. Reverend Umpire's mind ನಲ್ಲಿ...ಮೊದಲೇ reserve seat Book ಮಾಡ್ಕೊಳ್ಳೋದು best thing. Too much rushoo ಅಲ್ವೇ? But one thing: ಇದ್ರಲ್ಲಿಲ್ಲಾ "Understand yourself and act properly and that is your honourable self." Authority Reverend Pope. Sometime poet. Present address: Vacuam c/o Italy. Head Quarters: Rome. Never mind. ಸದ್ಯ ಸಾರ್. ನೀವ್ಹೋಗೋ ಕ್ಮುಂಚೆ ಅಮ್ಮಾವ್ರನ್ನ ಅವರ್ಕಣ್ಗೆ ಸೋಕಿಸ್ಬಾರ್ದು.

ಸರೋಜ: [Whispering to Rama Rao from curtain edge to which she has drawn him]

Cannot hear a word...

ರಾಮುರಾವ್ : Black cloth...cannot see also...ಬಾಕಲ್ಗಾಚೆ ಅಪ್ಪನ್ನ ಕರ್ಕೊಂಡು ಹೋಗಿ ಮಾತ್ನಾಡಿಸ್ತಿರಬೇಕು! What do you think...ಇದೆಲ್ಲಾ...

ಸರೋಜ: Must be deep plot.

ರಾಮುರಾವ್ : But what do you advise me? Srimati Devi... as you say...ಅಜ್ಜೀನ ಹೇಗಾದ್ರೂ ನೋಡಿ ಸರ್ಮಾಡ್ಕೋಬೇಕೇ...ಅಲ್ವೇ?

ಸರೋಜ : Yes—but…before they do…

(Heard through C…ಬೋರಣ್ಣ and ಸುಬ್ಬಮ್ಮ)

ಬೋರಣ್ಣ : ಊಂರ‍್ರವ್ವಾ. ಯಜಮಾನ್ರೂವೆ, ಅವ್ವಯ್ಯನೂವೆ ಬೀದಿಬಾಕಲ್ಕಡೆ ಕುಂತೂ, ಬರೀತ್ಲೂ, ಚಿಕ್ಕೋವ್ರೂ, ಆವಮ್ಮೂವೆ ಮಾಡಿ ಬಾಕಲ್ಕಡೆ ಕುಂತು ಇಂಗ್ಲೀಸೂ ಕಣ್ಣಾ "ಪಿಸಿಪಿಸೀ"ಂತಾ ಗುಸುಗುಟ್ಕೊಂತಾ…ಮಧ್ಯದಾಗೆ ಪರ್ದೆ ಬಿಟ್ಕೊಂಡು ಕುಂತವ್ರೆ…ನೀವೇ ಬತ್ತಿರಾ…ಅಂಗಾರೆ ಬನ್ನೀ…ಉಲೀ ಚರ್ಮ ಆಸ್ತೀನಿ ಮೊದ್ಲೆತ್ಕೊಂಡೋಗಿ.

ಸುಬ್ಬಮ್ಮ : ಹೌದು. ಹೀಗೆ ಹೇಸ್ಗೇಪಟ್ಟು ಉಪಯೋಗ್ವಿಲ್ಲ. ಹೀಗೆ ಮುಂದಿನ್ಕೋಣೇಲಿ ಪರ್ದೆ ಬಿಟ್ಕೊಂಡು ಮಗು ಒಂದ್ಕಡೆ, ಹುಡ್ಗ ಒಂದ್ಕಡೆ…ಇಷ್ಟು ದಿನ ಆಡ್ತಿದ್ದ ನಾಟ್ಕಾನ ಈಕ್ಷಣ್ವೇ ಇತ್ಯರ್ಥ ಮಾಡ್ಬಿಡೋದು ಉತ್ಮ ಅಲ್ವೇ?…

ಬೋರಣ್ಣ : ಅಲ್ದೆ ಏನ್ರವ್ವಾ……ಆವಸಯ್ಯೂ, ಅವಮ್ಮೂ ಬಂದ್ದಿನಾನೇ ಕಾದ್ಬಿಟ್ಟಿರ್ಬೇ ಕಾದ ಜಗ್ಗಾನಾ……ಇದ್ವರ‍್ಗೂ ಬುಟ್ಟದ್ದೇ ತಪ್ಪೂರವ್ವಾ…ಈಗ್ಲಾದ್ರೂವೆ "ಇಂಗೋ !" ಅಲ್ಲ "ಅಂಗೋ." ನೀವೇ ಕುಂತು ತನ್ಕೇಮಾಡಿ ತೀರಿಸ್ಬಿಡಿ.

ಸುಬ್ಬಮ್ಮ : ನಡ್ಯೋ.

ಕಪ್ಪಣ್ಣ : Good God ! Reverend Kunti coming…ಈಗ್ಸಾರ್ ಇಥೆ everything. ಹೆದರ‍್ಬೇಡಿ. Have already managed ಮಾತೋಶ್ರೀ umpire with humble Sanskrit. Bold face ಇಟ್ಕೊಳ್ಳಿ…behind ನಿಂತಿರ‍್ತೇನೆ. To manage everything. But you must speak to reverend lady… before opposite camp…

ಸರೋಜ : ಅಕ್ಕೋ ನೋಡೀ. ನಿಮ್ಮ grandmother ಬರ‍್ತಾರೇಂತ್ಕಾಣುತ್ತೆ. ಏನ್ಹೇಳ್ತೀರೋ…ಹ್ಯಾಗ್ಹೇಳ್ತೀರೋ depends upon ಬೆಂಗಳೂರಿನಲ್ಲಿ ನೀವು ಹೇಳ್ಕೊಂಡ influence ಮೇಲೆ. But whatever you can do you must do quickly. I can of course do nothing but encourage. One thing: ನಿಮ್ಮ fatherಒ quite harmless. But ಆ paid servant—what a clever scoundrel to take advantage from harmless gentleman like your father !—ಅವ್ನು ಈ ಮನೇಲಿರೋವರೆಗೆ ಈ mother and son, Grandmother and Grandson father and son ಜಗ್ಳಗ್ಳು ಆಗ್ತಾನೇ ಇರುತ್ವೆ. Therefore your first idea is to get rid of him…of course you can get many type-writers like myself….therefore ನೀವೊಂದ್ಮಾತ್ಹೇಳ್ಬಿಡಿ…ನನ್ನಿಂದ ಏನಾದ್ರೂ impediments ಇರೋದಾದ್ರೆ shall go away now alone.

ರಾಮರಾವ್ : [Helplessly]

ಹಯ್ಯಯ್ಯೋ ಶ್ರೀಮತಿ ದೇವಿ ! ನೀವೆ ! **ನೀವೇ** ಹೊರಟ್ಹೋಗೋದೇ !!… **ಈಗ** !!! ಆ rotten scoundrel ಹೇಳ್ದಾಗೆ…battle time ಇದು. ಸುಮ್ಮನೇ ಇರಿ…ಅಜ್ಜೀಗೆ ನನ್ಮೇಲಿರೋ ಮಮತೆ ನಿಮಗ್ಗೊತ್ತಿಲ್ಲಾ…shall get rid of the fellow at once …ಅಜ್ಜೀ! ಬಾ ! ಕೂತ್ಕೋ ಕುರ್ಚಿಮೇಲೆ.

[rushing up to C]

ಕಪ್ಪಣ್ಣ : [Swinging the rings of the curtain to clear at least two yards of common space between the hither-to fully-curtain-divided room: to Rama Rao]

ದೊಡ್ಡಮ್ಮಾವ್ರು ಮಡಿ; ಸೋಮವಾರ; ಉಪವಾಸ...ಕುರ್ಚಿ ಗಿರ್ಚೀಲಿ ಕೂತ್ಕೊಂಡು ವೈಲ್ಗೆ......ಬೋರಣ್ಣಾ......ಏನ್ಮಾಡ್ತಿದೀಯಾ. ಅವ್ರಾವ್ರು ನಿಂತ್ಕೊಂಡಿಧಾರೆ. ಹುಲಿಚರ್ಮ ತಂದ್ಹಾಸು.

ಬೋರಣ್ಣ : ಊಂ ಬುದ್ದೀ...ಇಕೋ.

(enter with rolled up tiger-skin)

ಕಪ್ಪಣ್ಣ : (Pulling the screen-rings right up to F, twisting it and putting it in a knot and pointing to mid-centre of the stage)

ಇಲ್ಹಾಸು.

ಸುಬ್ಬಮ್ಮ : [To Rama Rao]

ನೋಡು ! ಹುಡ್ಗಾ ನೆನ್ನೆಮೊನ್ನೆ ಶುಭ್ರವಾಗಿ ಬ್ರಾಹ್ಮಣ...ಬ್ರಹ್ಮಚಾರಿಯಾಗಿ ಬೆಂಗ್ಳೂರ್ಗೆ ಹೋದೋನು ಇಷ್ಟು ಬೇಗನೆ ಈ ಅವತಾರ...ನಾನು ಮಡಿ...ಪೂಜೆ.

ಕಪ್ಪಣ್ಣ : [Standing in humble submission]

ಪುನಸ್ಕಾರ...ಪುಣ್ಯದಿವಸ...ವ್ರತ...ನಿಯಮ...ಒಟ್ನಲ್ಲಮ್ಮಾ. ತಾವು ಅಷ್ಟೇಕೊಡಿಸ್ಧ ಬ್ರಾಹ್ಮಣಿಕೆ ಈ ಕಾಲ್ದಲ್ಲಿ ವಿರಳ...ಅತಿ ವಿರಳ...

ಸುಬ್ಬಮ್ಮ : ಹೂಂಪಾ, ಅಧೇ ನಾನೀಗ ಹೇಳ್ತಿದ್ದದ್ದು. ಹುಡುಗನ್ಗೆ...

ಕಪ್ಪಣ್ಣ : ಕೂಡೀಮ್ಮಾ !......ನಾವೇನು ಗಂಡಸ್ರು. ತಾವು ನಿಂತ್ಕೊಂಡಿರೋದು ನಮುಗಪಮಾನ. ಇಲ್ಲಿ...ಕೂಡೀಮ್ಮಾ.

ರಾಮರಾವ್ : [As old lady is sitting down-in an excited tone]

ಅಜ್ಜೀ, ಈ black-guardನ...ಗೋಲನ್ಗೆಲ್ಲಾ ಬೆಚ್ಚಿಬೀಳ್ಬೇಡ...ಹೇಳ್ತೀನಿ ಕೇಳೂ... [comes nearer]

ಸುಬ್ಬಮ್ಮ : (ರೇಗಿ) ದೂರಾ ನಿಂತ್ಕೊಳ್ಳೋ, ಅಧ್ವಾನ್ನ ! ಮಡೀ ನಾನು !...ಇಂಗ್ಲೀಷಿನಲ್ಲಿ ನನ್ನ ಮಾತಾಡಿಸ್ಬೇಡ......ನೀನು ಮನೇಲ್ಹುಟ್ಟಿದ್ದೂ, ಮನೇಲ್ಬೆಳದಿದ್ದೂ...ಮನೆತನದ ಮತ...

ಕಪ್ಪಣ್ಣ : [Humble submitting]

ಆಚಾರ ವಿಚಾರಗ್ಳುನ್ನೂ, ಸಂತತಿಯ ಮರ್ಯಾದೆ ಮುಂತಾದುವುಗಳ್ನೂ. ಅಲ್ಲದೆ ಗೋತ್ರ ಪ್ರವರಗಳ ಪ್ರಭಾವ ಇತ್ಯಾದಿಗಳ್ನೂ ಮರೆತುಬಿಟ್ಟು...ಅಲ್ವೇಮ್ಮಾ ?

ರಾಮರಾವ್ : [Doubling his fists]

I shall kill you...who are you I say...a peon...making a fool of my father...I shall kill you...

ಸುಬ್ಬಮ್ಮ : [excited]

ಹುಡ್ಗಾ, ದುಡುಕಬೇಡಾ.

ಕಪ್ಪಣ್ಣ : [Calmly]

ಪರವಾ ಇಲ್ಲಮ್ಮಾ. ಹೆದರ್ಬೇಡಿ. ಆ ಮಗು ನನ್ನ ಬೈದ ಬೈಗ್ಳೆಲ್ಲಾ, ಇಂಗ್ಲೀಷಿನಲ್ಲೇ ಬೈಯ್ಯೋವರೆಗೂ ಬಾಧಕವಿಲ್ಲ. ಕನ್ನಡದಲ್ಲಿ ಬೈದರೆ ತಾನೇ ತಮಗೆ ಮನೋವ್ಯವಸ್ಥೆ...ತಮ್ಮ ಮನಸ್ಸ ಔದಾರ್ಯ ನೋಯಿಸ್ದಾಂಗೆ......ಇಂಗ್ಲೀಷಿನಲ್ಲೇ......ಇದುವರೆಗೂ ಈ ಶಾಪಿ ನನ್ನ ಮೇಲೆ ಮಾಡ್ದ ಆರೋಪ್ಣೆಗ್ಳೆಲ್ಲಾ ಮರ್ತುಬಿಡೀಮ್ಮಾ...ಸೋಮವಾರ...ಪುಣ್ಯದಿನ...ವ್ರತ. ಶಾಂತಿ ತಗೊಳ್ಳಿ ಮನಸ್ಸಿಗೆ, ಚಿಕ್ಕಾಯ್ರು ರೇಗೋದ್ರಲ್ಲಿ ಆಶ್ಚರ್ಯವೇನೂ ಇಲ್ಲ. ಚಿಕ್ವಯಸ್ಸು...ದೊಡ್ಡ ಕುಟುಂಬ...ದೊಡ್ಡ ರಕ್ತ...ದೊಡ್ಡಮನ್ಸನ. ಆದ್ರೂನೂವೆ...ಬಾಲ್ಯ...ಶೈಶವ್ಯ...ಮಕ್ಳು ರೇಗಿದ್ರೆ ಮನಸ್ಸಿಗೆ ತಂದ್ಕೋಬಾರ್ದು ದೊಡ್ಡವ್ರೂಂತ **ನಾನು ತಮಗೆ** ಹೇಳ್ಬೇಕೇನಮ್ಮಾ...ಪರಮಾತ್ಮಾ ಕೊಟ್ಟ ಅಲ್ಪ ಸ್ವಲ್ಪ ಬುದ್ಧೀನ...ರಾಯರ ಸಹಾಯಕ್ಕೇಂತ ತಮ್ಮ ಪಾದಾರವಿಂದಗಳ್ಗೆ ಧಾರೆ ಎರ್ದು...ತಮ್ಮ ಇಷ್ಟದ ಪ್ರಕಾರ...ಸಿಕ್ದ ಅಲ್ಪಸ್ವಲ್ಪ ಕೂಲಿಯಿಂದ ನನ್ನ ಅಲ್ದೆ ನನ್ನ ನಂಬಿರೋವ್ರು ...ನಮ್ಮೊಟ್ಟೆಗ್ಳು ಹೊರ್ದ್ಕೊಳ್ಳೋಕೇಂತ...ಹುಟ್ಟಿದೂರ್ಬಿಟ್ಟು ಇಲ್ಲಿಗೆ ಬಂದ ಬಡಪಾಯಿ ಬ್ರಾಹ್ಮಣ ...ನಾನೆಲ್ಲಿ? ರಾಜ ಸಂತತೀಲಿ ಹುಟ್ಟಿ ಬೆಳೆದಿರೋ ಈ ಉತ್ತರ......ಅಲ್ಲ ಅಭಿಮನ್ಯು ಆದ ತಮ್ಮ ಈ ಕೌಮಾರ ಕಂಠೀರವರೆಲ್ಲಿ?...ನಾನ್ಸಂದದ್ದೂ ಯಜಮಾನ್ರು...

ಸುಬ್ಬಮ್ಮ : [To Hiriyannayya]

ಮಗೂ, ಇದ್ಯಾಕೆ ಹುಡುಗ ಓಗೆಲ್ರಮೇಲೂ ಹುಚ್ಚುಹುಚ್ಚಾಗಿ ರೇಗ್ತೀಳ್ತಿಧಾನೆ? ಯಾವಾಗ್ಲೂ ಇದ್ದಿದ್ದಿಲ್ಲ ಹೀಗೆ...

ಕಪ್ಪಣ್ಣ : [Taking Hiriyannayya to corner C and F]

ಹೇಳೀಬಿಡೀ ಸಾರ್! best chance. "Boy splendidoo...but misguided and mislead by that terrible ಹೆಂಗ್ಸೂ, therefore ಈಕ್ಷಣ್ವೇ ಅವ್ಳು with her 13 ಸಾಮಾನ್ಸ್, including two terrible coloured umbrellas, boots, shoes, harmonium, veena plus ಪಿಟೀಲೂ also...ಹೊರಗ್ಹಾಕ್ದೇ ಇದ್ರೆ ...Grandson ಹೋದಹಾಗೇನೆ...... in practicality .... like a ghatasraddha ಮೊಮ್ಮಗನಿಗೆ ಮಾಡ್ಬಿಟ್ಟಹಾಗೇನೆ...." ಅಂತ at once ಹೇಳ್ಬಿಡಿ ಸಾರ್...Don't forget Sringeri advice: "ಎದೆಗುಂದಬೇಡ" etc. ಹಿಂದೇನೇ ಇರ್ತೇನೆ for contingency...ಆ firm ಈಗ ಐಬ್ ಅಂಡ್ ಕೋ. Very limited.

ಸುಬ್ಬಮ್ಮ : ಇಲ್ಬಾರೋ ಮಗು, ಏನಿಧೆಲ್ಲಾ ಗಲಾಟೆ?

ಹಿರಿಯಣ್ಣಯ್ಯ : ನಾನೇನ್ಹೇಳ್ಲೀಮ್ಮಾ! ನಾನೇನೋ ಯಾವಾಗಿನ ಹಾಗೆಯೇ. ಅದಕ್ಮೇಲೆ ಇನ್ನೇನು ಹೇಳೇನು? ನಿನಗ್ತಿಳಿಯದ್ದು ನಾನೇನೂ ಹೇಳ್ಲಾರೆ.

ರಾಮರಾವ್ : ಆದರೆ ನಾನ್ಹೇಳ್ತೇನೆ....... ಅಜ್ಜೀಗೆ ತಿಳಿಯದ್ದು ನಾನ್ಹೇಳ್ತೇನೆ. ಅಜ್ಜಿ ನನ್ನಂಬು.........ಅಪ್ಪನ್ನಂಬ್ಬೇಡ......ಅಪ್ಪ ಈ ಪೋಕರೀನ ನಿನ್ನ ಕೇಳದಹಾಗೆ ಸಂಬ್ಳಕ್ಕಿಟ್ಕೊಂಡು ನಮ್ಕುಟುಂಬದ ಮೇಲೆ ಫಿತೂರಿ ಮಾಡ್ತಿಧಾನೆ...

ಸುಬ್ಬಮ್ಮ : ಸಾಕು. ನಿಲ್ಸೊ!...ಮತಕಳ್ಕೊಂಡ ಪಾಪದ ಜತೇಲಿ...

ಕಪ್ಪಣ್ಣ : (To himself but very much aloud and beating on his fore-head)

ಪಿತನ್ನ ನಿಂದಿಸೋ ರೌರವಾದಿ ನರಕಾನ್ನೂ? ಇದೆಲ್ಲಾ ವಿಧಿ. ಕಲಿಯುಗದ ಮಾಯೆ... ರಾಕ್ಷಸಿಯರ ಸಹವಾಸ! ತ್ಸು! ತ್ಸು!! ತ್ಸು!!! ತ್ಸು!!!!

(ಪಕ್ಕದಲ್ಲಿ ನಿಂತ ಬೋರನಿಗೆ)

ನೆನ್ನೆ ಬಂದ ನಸಿಗೇ ಓಗಿದೆಯಲ್ಲಾ ಬೋರಣ್ಣಾ! ಆಯುಸ್ಸೆಲ್ಲಾ ಈ ಉತ್ಕೃಷ್ಟವಾದ ಕುಟುಂಬದಲ್ಲಿ ಸೇವೆಮಾಡೋ ಪುಣ್ಯದಲ್ಲೇ....ಕಳೆದು. ಇನ್ಕಣ್ಮುಚ್ಚಿದಮೇಲೂ ಅಷ್ಟೆ. ಮೇಲೆ ಗಗನದಲ್ಲಿ ಕಾದಿರೋ ನಿನ್ನ ದೊಡ್ಡ ಧಣಿ ಸೇವೇಗೆ ಈಗ್ಲೋ ಆಗ್ಲೋ ಹೊರಡ್ತಾ ಇರೋ ನಿನ್ನೊಟ್ಟೆ ಹ್ಯಾಗುರೀತಾ ಇರಬೇಕು...ಕೇಳಿದ್ಯಾ, ಚಿಕ್ಕಜಮಾನ್ರು ಹೇಳಿದ್ನ : ಹೆತ್ತ ತಂದೆ...ಪಿತೂರಿ ಮಾಡ್ತಾನೆ ಅಂತ, ಒಂದೇ ಮಾತ್ನಲ್ಲಿ ಅಂದ್ಬಿಟ್ಟರಲ್ಲಾ ಚಿಕ್ಕೋರು...ಇನ್ನ ತೀಯೇನು ಕುಟುಂಬಕ್ಕೆ ? ತಂದೆ, ಮಗ, ಚಿಕ್ಕೋರು, ದೊಡ್ಡೋರು, ಧರ್ಮ, ಸ್ವರ್ಗ, ನರಕ ಈ ವ್ಯತ್ಯಾಸಾನೇ...ಈ ಇನ್ನೂ ಕಣ್ಬಿಡ್ದ ಹುಡುಗರ ಕಣ್ಗೆ ಮುಚ್ಚಿಸ್ಬಿಟ್ಟ ಈ ಕಲ್ಯುಗದ ಮಾಯೆ...ಕಂಡ್ಯಾ ಬೋರಣ್ಣಾ! ?

ಬೋರಣ್ಣ : (Who at every grate of Kappanna's last speech has been mounting to a terrible pitch of a crescendo...now)

ದಿಟಾ—ನನ್ನೊಡ್ಯಾ...ಅದ್ಯಾವ್ದೇವ್ರೋ...ಅದ್ಯಾವ್ದಿಂಡ್ರೋ...ಇಲ್ಲ. ನೀವೇ ಯೋಳ್ದಂಗೆ ನನ್ನೇವೇಗೆ ಮೇಲ್ಯಾದಿರೋ ನನ್ದಣಿನೋ...ತಿರುಗ್ಸಿರ್ಬೇಕು ನಿಮ್ಮಾಲುಗಳ್ನ — ನಮ್ಮೊಕ್ಕಡೆ. ಚಿಕ್ಕಜಮಾನ್ರೊಗ್ಗೆ ಒಂದೂ ತಿಳೀದು. ಇನ್ನು ಚಿಕ್ಕೋರೋ ಅವ್ವಸಮ್ನ ಬಲೇಗೆ ಬುದ್ಕೊಂಡು ಒದ್ದಾಡ್ತಿರೋ ಮೀನ್ಪಿಳ್ಳೆ...ದೊಡ್ಡವ್ನೋರ್ಗೆ ನಿಮ್ಮಂತೋವ್ರು ಇದ್ರೇನೇವೇ...ಸೆಟ್ಟಾಗೋದು ಎಲ್ಲಾನೂವೆ...

ಕಪ್ಪಣ್ಣ : ಬೋರಣ್ಣಾ, ಚಿಕ್ಕೋರೇ ನನ್ಮೇಲೆ ಬಿದ್ಮೇಲೆ ನಾನೇ ಮುಂದಾಗೋದು ತರ ವಲ್ಲ ಬೋರಣ್ಣಾ! ಸತ್ಯವಾಗಿ ಕುಟುಂಬಕ್ಕೆ ಒಳ್ಳೇದ್ನ ಬಯ್ಸೋ ನಂಬ್ಕೆಮನುಷ್ಯ ಯಾರಾದ್ರೂ ಈ ನೀನ್ಹೇಳ್ದ ಮಾತ್ನ ಆಕೆ ಕಿವೀಗೆ ಹಾಕಿದ್ರೆ...

ಬೋರಣ್ಣ : ಯಾರೇನ್ಬುದ್ದೀ...ನಾನೇ ಯೋಳ್ತೀನಿ.

(rushes sobbing to Subbamma)

ಒಳಕ್ಬರ್ರವ್ವಾ...ಎಲ್ಲಾನೂ ನಾನ್ಯೇಳ್ತಿವ್ನಿ! ಇವ್ರಿವ್ರೇ ಸರ್ಮಾಡೋ ಅಂಗಿಲ್ಲ ಈ ಜಗ್ಗಾಸೆಲ್ಲಾ... ಎದ್ಬರ್ರವ್ವಾ...

ಸುಬ್ಬಮ್ಮ : ಇಧೇನ್ನಾಟ್ಕಾನೋ ? ! ಬೋರ.

ಕಪ್ಪಣ್ಣ : ನಾಟಕವೇನಮ್ಮಾ...ಕುಟುಂಬಕ್ಕೆ ನಿವ್ಬೇಕು. ನಿಮಗೆ ಕುಟುಂಬ ಮುಂದಕ್ಬರ ಬೇಕು...ಈ ವಿಷ್ಯದಲ್ಲಿ········ಹೀನ್ಜಾತೀಲಿ ಹುಟ್ಟಿದ್ರೂನೂವೆ ಕುಟುಂಬ ಹಿತ್ಯೆಷಿಯಾದ ಈ ಪ್ರಾಣೀಗೆ ಇರೋ ಹೃದಯ ಇತ್ಯಾದಿಗಳೆಲ್ಲಾ ನಮ್ಮಗಳಿಗೆಲ್ಲಾ...ಎಲ್ಲಾ ಯಾಕೆ ?...

(...Thumping his left pectoral resounding with his open palm...)

ಕಡುಪಾಪಿಯಾದ ನನಗಾನಾ ಇದ್ದಿದ್ರೆ...ಮಗ...ಪುತ್ರ...ಜನಕ ಪಿತನ್ನ. ಧಿಕ್ಕರಿಸೋ... ಪರುಷವಾಕ್ಯಗ್ಳು ಕೇಳಿ ನರಳೋ ಹಿಂಸೆ ನನಗಿರ್ತಿರ್ಲಿಲ್ಲ........ಇವೆಲ್ಲಾನ್ನೂ ಬೋರಣ್ಣ ತಮ್ಮ ಪಾದ ಗಳಿಗೆ ಸಮರ್ಪಿಸ್ತಾನಮ್ಮಾ...ಒಳಗೆ.

ಸುಬ್ಬಮ್ಮ : (who has already stood up and moved away towards C)

ಏನೋ ಬೋರಾ...ಇವೆಲ್ಲಾ...?

ಬೋರಣ್ಣ : (bending, rolling up tiger-skin, approaching C irritatedly)

ಒಳಕ್ಕೊಂಡ್ರವ್ವಾ. ಯೋಳ್ತೀನಿ. ಅವಮ್ಮಸ್ತಂತ್ರಾನೂ. ಎಲ್ಲಾನೂವೆ...

(exits C with tiger-skin)

ರಾಮರಾವ್ : (In his excitement approaching Subbamma)

ಅಜ್ಜೀ!...ನಂಬ್ಬೇಡಾ...ಇದೆಲ್ಲಾ terrible conspiracy...ಬೋರ್ಡ್ನ ಕೂಡಾ... bribedoo...

ಸುಬ್ಬಮ್ಮ : (exitting C)

ಈ ಹಾಳು ಚಟ್ಟೇಗಾರ್ರು ಮಾತ್ನೂ, ಉಹುಪ್ನೂ ಬಿಟ್ಟು...

ಕಪ್ಪಣ್ಣ : ಪ್ರಾಯಶ್ಚಿತ್ತಾನೂ ಮಾಡಿ...ಶುಭ್ರವಾಗಿ ವಿಭೂತಿ ಸಹ...

ಸುಬ್ಬಮ್ಮ : ಅಧೇ! ಇದೆಲ್ಲಾ ಮಾಡಿದ್ಮೇಲೆ ಒಂದ್ವೇಳೆ...

ಕಪ್ಪಣ್ಣ : ಕಿವಿ ಕೊಟ್ಟೇನು...ಅಲ್ಲ...ಕೊಟ್ಟೇರಾ ಚಿಕ್ಕಜಮಾನ್ರು ಮಾತ್ಗೆ...

ಸುಬ್ಬಮ್ಮ : ಹುಂ...ಅಧೇ

(exit)

ಕಪ್ಪಣ್ಣ : (Unknotting screen and elaborately restoring partition of the room)

ಸಾರ್...ನಿಮ್ಮ speech ಓ, nothingoo yet everything. Just what was wanted. ಹಾಗಿರ್ಬೇಕು speechoo; ಮಾತೂ ಆಡ್ಬೇಕು...meaningಗೂ ಇರ್ಬಾರ್ದು. Regular **political** speechoo! ಅದೊಂದು department ಇಧೆ ಸಾರ್ ನಮಗೆ... representative, legislative, plus Congress also. ನಾವು attend ಮಾಡೋದು only if in big big places like Bombay, Calcutta, Delhi and London, Perhaps Geneva and Ottava also...ಅದಕ್ಕೇಗೇನ್ ಅವಸರವಿಲ್ಲಾ... but all these things after 'Sir Title' of course! ಈಗ್ಲೇ politics ಮುಟ್ಟಿದ್ರೋ 'title' ಗೇ ಐಬು!

(as partition is completed)

Battle field restored but with what results...ವಿದುರ advising Kunti...on our behalfoo...all ಅಭಿಮನ್ಯೂಸ್...ಉತ್ತರಾಸ್...ಮಾಯಾ ಹಿಡಂಬೀಸ್ ...ಕಣ್‌ಕಣ್ಣ್ಣಪ್ಪಾ, ಕೈ ಕೈ ಹಿಸಕ್ತಿಧಾರೆ...opposite side. ಇನ್ನು ಇಲ್ಲಿ ನಮ್ಮ municipal work continue ಆಗೋಹಾಗಿಲ್ಲ.

[gathering up papers on the table]

ಬನ್ನೀ. ತಾಲ್ಲೂಕು ಕಛೇರೀಲಿ...must meet those old councillors.

ಹಿರಿಯಣ್ಣಯ್ಯ : Quite right, Kappu...but still...

ಕಪ್ಪಣ್ಣ : [Leading Hiriyannayya to Left]

S tillಏನೂ...hillಏನೂ...

[with a grin significantly indicating with his eyes the "R" side of the battle-field]

...ಇನ್ನು Rill ತಾನೇ ಏನೂ ಒಂದ್ಕೆ ನೋಡೇಬಿಡೋಣ...ಬದರ್ಬೇಡಿ...ಬನ್ನೀ ಸಾರ್ and await developments from opposite battle camp.

[Exeunt L...Kappanna and Hiriyannayya]

ರಾಮರಾವ್ : [Tearing his hair and ಕೈ ಕೈ ಹಿಸುಕ್ತಾ...approaching Saroja who is gazing]

ಸರೋಜ : [At L., murmering]

'ಮಾಯಾ ಹಿಡಂಬಿ'...he said...'ರಾಕ್ಷಸಿಯರ ಸಹವಾಸ'...did you hear? .. that poor old saintly lady's sweet mindನ ಏಷ್ಟು subtle ಆಗಿ poison ಮಾಡ್ಬಿಟ್ಟ...ನಮ್ಮ position helpless ಮಾಡ್ಬಿಟ್ಟಿದ್ದಾನೆ ನೋಡಿ. ಆ wily worm... with his cheap ಅಮರಾನೋ...ಸಂಧ್ಯಾವಂದ್ನೆ ಮಂತ್ರಾನೋ...

ರಾಮರಾವ್ : ಶ್ರೀಮತೀ ದೇವೀ...ಈಗ್ನೋಡಿ...ಅಜ್ಜಿ againstoo ನನಗೆ... don't know what to do...besides insults for you...ಹ್ಯಾಗಾದ್ರೂ avenge ಮಾಡ್ಬಿಡ್ತೇನೆ.

ಸರೋಜ : (Indignantly)

Shut up!...you are only a baby...ಈ western garb ನಲ್ಲಿ half and half ಇಂಗ್ಲೀಷ್ನ ಹೇಳ್ತಾ ಆ orthodox ladyನ excited ಆಗಿ approach ನೀವು ಮಾಡಿದ್ನೇ.... ಆ subtle villian advantage ತೆಗೊಂಡಿದ್ದು! ಇದೂ a sort of battle of wits...brain against brain...ನೀವ್ರೋ. ಕೋಪಿಸ್ಕೋಬೇಡಿ. a ಬರೀ baby in this thing....by cool thinking alone...ನಿಮ್ಮ grandmother favourನಲ್ಲಿ ನಿಮ್ಮನ್ನೂ as before restore ಮಾಡ್ಬಿಟ್ಟು. ನನ್ನ... fancy!..."ರಾಕ್ಷಸಿ" "ಮಾಯಾ ಹಿಡಿಂಬಿ" ಅಂದ ಆ verminಗೆ ಬುದ್ಧಿ ಕಲಿಸಿಬಿಟ್ಟೇನೇವೆ will I stir from this....battle field....this house. For all this, first thing: your grandmother's anger must be cooled. Therefore ಈ clothes ಎಲ್ಲಾ ಬಿಟ್ಬಿಟ್ಟು....let me think.

(seats herself in chair and resting chin on palms)

ಖದ್ದರ್ ಪಂಚೆ...ಖದ್ದರ್ cuffless shirt and also ಗಾಂಧಿcap if available... ?

ರಾಮರಾವ್ : Certainly. Khaddar shop ಇದೆ ಪೇಟೇಲಿ.

ಸರೋಜ : ಇವುಗಳ್ನ wear ಮಾಡ್ಕೊಂಡು. with three bright parallel ವಿಭೂತಿ lines drawn on forehead....grandmotherಗೆ ಕಾಣಿಸ್ಕೊಳ್ಳೋದು. the very next time she sees you. ಆಗ ನನ್ನ influence over you not quite bad ಅಂತ old ladyಗೆ ತೋಚಿದ momentಏ. I shall be able to play through her...my B.A., passed brain game against ಆ un-passed candidate of perhaps not even S.S.L.C....but Dictionaryನ ನುಂಗ್ಬಿಟ್ಟು...ಸಾಧುಗಳ್ನ ಜಪರಿಸ್ತಿರೋ...do you see what I mean ?

ರಾಮುರಾವ್: Helplessly

Yes. ಶ್ರೀಮತೀ ದೇವಿ. ನೀವೇ ನನ್ನ ಬದುಕಿಸ್ಬೇಕು. from this....position. ನೀವ್ಹೇಳ್ದಾಗೆ I will at once rush off.

ಸರೋಜ: The local Khaddar shop and purchase your disguise...ಯಾರ್ಗೂ ತಿಳಿಯ್ದಹಾಗೆ! In the mean-while I shall be thinking out future plans...ಬೇಗ್ಹೋಗಿ...ಹೋಗ್ತರೋದು ವಿದುರನಿಗೂ...

(ನಗುತ್ತಾ)

....I mean....ಬೋರನಿಗೂ ತಿಳೀಬಾರ್ದು.

(Exit Saroja R)

ರಾಮುರಾವ್: (Gazing at floor)

She is right. Poor noble Devi, ಮಾತುಮಾತಿಗೂ "I know better; I am **your** big big sisteroo"! ಈಕೇನ 'ರಾಕ್ಷಸಿ' 'ಒಡಿಂಬಿ' etc! ಇಷ್ಟು insultಗ್ಳು ತಡ್ಕೊಂಡು...in Ajji's love back again ನಿನ್ನ ಸೇರಿಸ್ಬಿಟ್ಟೇನೇ...I shall go away ಅಂದ್ಲಲ್ಲಾ! Noble woman! Poor father...ಮೊದಲೇ Dufferoo....ಇನ್ನು ಇವನ್ನ Double duffer ಮಾಡ್ತಿರೋ ಈ scoundrelನ ಮನೆಯಿಂದ ಒದ್ದೋಡ್ಸೋದು not possible except with ಶ್ರೀಮತೀ ದೇವೀಸ್ instructions. 'My Noble prize' must really go to her. Meanwhile...I must obey orders... ನೋಡ್ದೋರೆಲ್ಲಾ ಪೇಟೇಲಿ ಏನನ್ಕೊಂಡಾರೋ ಕಾಣೆ, but ಹಲ್ಕಚ್ಕೊಂಡು must buy and wear Khaddar disguise...from Jatka alone....this up-to-date clothes....

[Approaching L]

but what to do....according to my motto, must sacrifice for art's sake.

[Exit L]

[Curtain drops slowly]

SCENE V

—Three hours later—

[Same day, place same as scene 4. Find entered Subbamma]

ಸುಬ್ಬಮ್ಮ : ಬೋರಾ!

ಬೋರಣ್ಣ : ಅವ್ವಾ!

ಸುಬ್ಬಮ್ಮ : ಈ ಪರ್ದೆ ಯಾಕೋ ಕಟ್ಟಿದ್ದು?....ಮಾಡಿ ಪರಾಂಪಾದ್ದಲ್ವೆ?

ಬೋರಣ್ಣ : ಅವ್ವಾ. ಚಿಕ್ಕಜಮಾನ್ರು....ಅವ್ವಸಯ್ನು....ಚಿನ್ನದಂಥಾ ಮನುಷ್ಯಾ ಅವ್ರ ಆತ! ಅವ್ವಯ್ಯನಗಾನ ಮನೇಲೇ ಇದ್ರೆ...ಚಿಕ್ಕಯಜಮಾನ್ರ ಕೈಲಿ...ದೊಡ್ಡಜಮಾನ್ರಿಗೆ...

ಈ ಊರಲ್ಲಿ...ತಾಲ್ಲೂಕಾನೂ ಅಲ್ದೆ ಡಿಸ್ಟ್ರಿಕಟ್ನೂ ನಮ್ಮನೇಗೆ ತರೋ ಅಂಗೆ ಮಾಡ್ಬೈದ್ರುವ್ವ!... ದೊಡ್ಡ ಜವಾನ್ರು....ದುಪಟೀ ಕಮೀಷನ್ರನೇ...ಮನೇಕ್ಕರ್ದಿಂಡು...ಅವ್ವಾ!...ಅವ್ರು ಗುಮಾಸ್ತೆಗ್ಳು ಅಲ್ದೆ, ಪೋಲೀಸ್ನೋರೂ, ಬಡವ್ರೂ...ಬಗ್ಗರೂ ಏಟ್ಟಸ...ಕೈತೊಳದವ್ರವ್ವಾ ನಮ್ಮಟ್ಟೀಲಿ... ಅಂಗೇನೇ ನಾನ್ಕಣ್ಮುಚ್ಚೋಕ್ಮುಂಚೆ.......ಚಿಕ್ಕದಣಿಕಾಲ್ಪಲ್ಲಿ......ನಮ್ಮಣ್ಣೆದುರೀಗೆ.......ಸಾವ್ರ ಜನ ನಿಮ್ಮಟ್ಟೀಲಿ ಕೈತೊಳೆಯೋದ್ನ...ಅವ್ವಸಯ್ಯ...ಅವ್ವಾ...ಇದ್ನೆಲ್ಲಾ...ಮಾಡ್ಪಾನು...ಅದ್ರೆ ಈ ವ್ವಸವ್ನು ಬಲೇಗೆ ಸಿಕ್ಕೊಂಡು ಚಿಕ್ಕೋರು...ರೈಲ್ಬೇಸನ್ ಚಟ್ಟೇಗಾರ್ರುಂಗೆ ಚಣೆ...ಕುಡ್ತ... ಇಂಗೆಲ್ಲಾ...

ಸುಬ್ಬಮ್ಮ : ಗೊತ್ತೋ ಮಂಕು!........ಆ ಹೊಸಾತನ್ಬಿಡಬಾರ್ದು. ಆತ ಬಂದಾಗಿನಿಂದ್ಲೇ .... ಲಾಗಾಯಿತಿನಿಂದ ಮಂಕ್ಮುಚ್ಚಿದ್ದ ಮಗು ಈಗೇನೋ ಬೆಚ್ಚಿಬಿದ್ದೋನ್ಹಾಗೆ ಕಣ್ಣುಳು ಬಿಡ್ತಿದ್ದಾನೆ ....ನಾನ್ಕೇಳಿದ್ದು ಈ ಪರದೆಮಾತು.

ಬೋರಣ್ಣ : ನೋಡ್ರವ್ವಾ! ಚಿಕ್ಕಯ್ಯ...ಈವಮ್ಮ..."ಟಿಕಾ! ಟಿಕಾ!"ಂತಾ ಆ ಮಿಸೀನ ನ್ಮೇಲೆ ಕೈಓಡಾಡಿಸ್ತಿರೋವಾಗ—ಯೆಂಗವ್ವಾ ರಾಯ್ರು ಮೂನ್ನಿಪಾಲ್ಟಿ ಕೆಲ್ಸ ಅವಯ್ನನ ಕೈಲಿ ಕಲ್ಯೋದು ...... ಅದ್ಕೇನೇವೆ.......ಒಂದ್ಕೋಣೇನ ಎಂಡ್ಕೋಣೆಮಾಡಾಕೆ...

(Ramu entering by R walks precipitately to Subbamma and in Gandhi dress and buries his head at her feet....murmuring "ನಮಸ್ಕಾರ ! ಅಜ್ಜೀ" and rising up recedes and stands at attention)

ಸುಬ್ಬಮ್ಮ : ದೇವ್ರೇ ಗತಿ. ಇದ್ಯಾರಿದು!....

(stares fully a minute and bursts into tearful laughter)

ಚಿಕ್ಕೋನು...ಇದೇನದ್ಬುತಾ !

(holds out her arms. Ramu rushes forward and buries himself in his Grandmother's lap....both sobbing...Bora too affected to bear the sight....hanging on to the curtain... also sobs)

ಸುಬ್ಬಮ್ಮ : (Nursing the boy, drying his tears with her ಸೆರಗು)

ಇದೇನ್ಕಂದ. ಯಾವ್ದೇವ್ರು ನಿನಗೀಬುದ್ಧೀನ, ಇಷ್ಟು ಬೇಗನೇವೆ...ಕೊಟ್ಟದ್ದೂ ?

ರಾಮರಾವ್ : (Sinking to the floor)

ದೇವ್ರಲ್ಲ...ಅಜ್ಜೀ...ದೇವಿ!

[Nursing his grandmothers feet while seated there]

ಈ....ಶ್ರೀಮತಿದೇವಿ....ನೋಡಜ್ಜಿ. ಬೆಂಗ್ಳೂರ್ನಲ್ಲಿ ಅವಳ್ನ ಕಂಡಾಗ........ಇನ್ನಾರು .... ಯೇನೂ, ಎಲ್ಲಾನೂ ಕೇಳ್ಕೊಂಡು...ನನ್ಕೈಯಿಂದ ಒಂದ್ಕಾಸೂ ಖರ್ಚಿಲ್ಲಾ ಅಜ್ಜೀ....... ನನ್ನಿಂಗ್ಲೀಷ್ಗೆ ಆಶ್ಚರ್ಯಪಟ್ಟು. ಇಷ್ಟಕ್ಕೂ ಕಾಲೇಜ್ B.A., B.L.. ಪ್ಯಾಸಿಲ್ದೇನೇ ನನ್ನಿರೋ ಇಂಗ್ಲೀಷ್ಗೆ ಬೆಚ್ಚಿಬಿದ್ದು...ನನ್ನ ಇಂಗ್ಲಿಷ್ ಕಾವ್ಯಗಳುಗಾನ ಇಂಗ್ಲೆಂಡಿಗೆ ತಿಳೀತೋ...ಅವ್ರು ಮ್ಯಾ ಇಂಗ್ಲೀಷ್ ಪ್ಯಾಸ್‌ಮಾಡ್ದೋಳು....ಸರಿಯಾಗೀಮ್ಮಾ ನನ್ನಿಂಗ್ಲೀಷು.

(pointing to type-writer at R. F)

ಅಜ್ಜಾಗಿ—ಇಂಗ್ಲೆಂಡ್—ವಿಲಾಯ್ತೀಗೆ—ಮುಟ್ಟಿದ್ರೆ ... 'Nobel prize' ಅಂದ್ರೆ ಸನ್ಮಾನಾಮ್ಮಾ...ಲಕ್ಷರೂಪಾಯಿ ದುಡ್ಡೂ ಅಲ್ದೆ 'Sir' title...ದೊಡ್ಡ ವೀರಪ್ಪನ ಕೂನಿಯಾ

ದಾಗ...ಊರಿಗೆ ಬಂದಿದ್ರೂ ನೋಡು ದಿವಾನ್ರು...ಅವ್ರು ಹಾಗೇ 'ಸರ್' ಪಟ್ಟ...ಇನ್ನೂರ್ನಾಲ್ಕು ವರ್ಷದಲ್ಲಿ ನನ್ಗೆ ಸಿಕ್ಕುತ್ತೆ...ಅಜ್ಜೀ. ಇದೆಲ್ಲ ಈಗ್ಹೇಳಿ...ಇಧೇನ್ಹೇಳಿದ್ರೂ ನಂಬೋ ಹಾಗಿಲ್ಲ ನೀನು. ಆಕೇನೇ ಹೇಳಿದ್ದು ಬೆಂಗ್ಳೂರ್ನಲ್ಲಿ ಹೇಗಿದ್ರೂ ಸರಿಹೋಗುತ್ತೆ...ಮನೇಗೆ ಬರೋತಲ್ಲೂವೆ... ಮನೇಗೆ ದೊಡ್ಡೋರು ಹ್ಯಾಗ್ಹೇಳ್ತಾರೋ ಹಾಗೇ ನಡಕೊಳ್ಳೋದು ಧರ್ಮ...ನಿಮ್ಮಜ್ಜೀ ಸಂತೋಷ ಕ್ಕೋಸ್ಕರ ಹುಟ್ಟಿರೋ ನೀನು...ಆಕೆ ಕಣ್ಣಿಗೆ ಸರಿಯಾಗಿ ನಡ್ಕೊಳ್ಳೋದಂತ...ಹಯ್ಯೋ ಅಜ್ಜಿ... ಅಪ್ಪಾ ಸಾಧು...ಆ ಹೊಸ್ಬ...ಅವನ್ಯಾಕೆ ಬಯ್ಲಿ...ಈಕೆ...

(Pointing to R)

ಮದುವೆಯಾಗಿ...ಬಡತನ ತಡೀಲಾರ್ದೆ...ಹೆತ್ತ ಮಗನ್ನೂ ಸಾಕಲಾರ್ದೆ...ನಾನೇನ್ಹೇಳೋದಜ್ಜೀ ...ಆಕೇನ ಒಂದ್ಮಾತಾಡ್ಸಿ...ಆ ಮೇಲ್ಬೇಕಾದ್ರೆ...ಕಳಿಸ್ಬಿಡು.

ಸರೋಜ: (Suddenly entering by R dressed in orthodox Karnatak style in a sweet voice)

ಬೋರಣ್ಣಾ...ದಯವಿಟ್ಟು ಒಂದ್ಸಟ್ಟ ರೈಲ್ವೆಸ್ಟೇಷನ್ಗೆ...

(Noticing Ramu, Subbamma and Bora)

ಕ್ಷಮಿಸೀಮ್ಮಾ...ನೀವು ಇಲ್ಲಿರೋದು ಗೊತ್ತಿರ್ಲಿಲ್ಲ.

(approaching Subbamma)

ನಿಂತಿಧೀರಾ...ಬೋರಣ್ಣಾ...ಜಟ್ಕಾ ಇರ್ಲಿ. ಅಮ್ಮಾವ್ರು ಇಷ್ಟೊತ್ತು ನಿಂತಿದ್ದಿರೋದು ನಿನ್ತಪ್ಪೋ...ಚಿಕ್ಕಜಮಾನ್ರು ತಪ್ಪೋ! ಸದ್ಯ ಆ ಹುಲಿ ಚರ್ಮಾನ ಹಾಸು...ಯಜಮಾನಮ್ನೋರು ಕೂತ್ಕೊಳ್ಳಿ...ಕ್ಷಮಿಸೀಮ್ಮಾ. ನಿಮ್ಮ ಔದಾರ್ಯದಲ್ಲಿ ಮಗ್ನಾಗ್ಲೀ, ಮೊಮ್ಮಗ್ನಾಗ್ಲೀ, ಆಳಾಗ್ಲೀ, ಅಡಿ ಯಾಳಾಗ್ಲೀ...ಅವ್ರವ್ರ ಧರ್ಮ ಕರ್ಮ ಮರ್‍ತಿರೋ ತಪ್ಪು ನಿಮ್ಮಧೇಮ್ಮಾ...ಆದ್ರೆ ದೊಡ್ಡವರಾದ ನಿಮಗೆ ನಾನೇನು ಹೇಳೇನು? ಆದ್ರೆ ನನ್ನ ಹೊಟ್ಟೇಪಾಡ್ಗೂ...ನನ್ನ ಗಂಡನಿಗೆ ಹೆತ್ತು...ಈಗ್ಲೂ ನೂವೆ ಬೆಂಗ್ಳೂರ್ನಲ್ಲಿ ನಾನಿಲ್ದೆ "ಅಮ್ಮಾ!...ಅಮ್ಮಾ!ಂತ" ಅರಚಿಕೊಳ್ತಿರೋ ಒಂದ್ಮಗು ಹೊಟ್ಟೆ ಪಾಡ್ಗೂ...ಸಂಪಾದಿಸೋಕೆ ಬಂದ ಹೆಂಗ್ಸಾದ ನನ್ನ—ಏನ್ಹೇಳ್ದ ಚಿಕ್ಕರಾಯರೇ—ಆತ...? "ರಾಕ್ಷಸೀನೇ"? ಹೀಗೆ...ನಿಮ್ಕಣ್ಣೆದುರ್ಗೇ ನನ್ನ ಹೀಯಾಳಿಸಿ...

(sobs)

ಸುಬ್ಬಮ್ಮ: ಹಯ್ಯೋ...ನನಿಗ್ಮಾತು ಬರೋಲ್ಲ!...ಹಳೆಕಾಲ್ದ ಮುದುಕಿ ನಾನೂ... ಈಗ್ಲಾನೇ ತಿಳೀತು ನನ್ಮಂದನ ಬಾಯಿಂದ...ನೀವು ಮುತ್ತೈದೆ, ನಮ್ಮವರೂಂತ...

ಸರೋಜ: ಮಾತಿರ್ಲೀಮ್ಮಾ.

(to Bora who has returned with rolled up tiger-skin)

ಹಾಸು ಬೋರಣ್ಣಾ.

[Bora does accordingly...after Subbamma seats herself, with Ramu still at her feet, Saroja flops down but gracefully on the bare floor]

ಸುಬ್ಬಮ್ಮ: ಹಯ್ಯೋ ಬರೀನೆಲ!...ಬೋರಾ...ರತ್ನಕಂಬಳಿ...

ಸರೋಜ: ಬೇಡಾ ಬೋರಣ್ಣ.

ಸುಬ್ಬಮ್ಮ: ಅಲ್ಲ...ಬರೀನೆಲ...

ಸರೋಜ : ಅಮ್ಮಾ, ನಿಮ್ಮನೇ ಆತಿಥ್ಯಾನ ಎರಡುದಿನಕ್ಕೇಲೆ ಅನುಭವಿಸೋ ಲಭ್ಯ ನನಗಿಲ್ಲದ್ದು...ನನ್ನ ಪುರಾಕೃತ ಪಾಪ...ಆದ್ರೂ ಅನುಭವಿಸ್ದಷ್ಟು ಅನುಭವಾನ ಒಂದೇ ಮಾತನ್ಲೇ ಹೇಳ್ತೀನೆ...ಬೋರಣ್ಣಾವ್ಮಾ...ಈ ಕೋಣೇನ ಎಷ್ಟು ಚೊಕ್ಕವಾಗಿ ಗುಡಿಸ್ತಾನೇಂತೀರಾ...ಒಂದು ಕಶ್ಮಲ. ಒಂದು ಕಾಷ್ಠ ಇಲ್ದೆ ಶುಭ್ರವಾಗಿ ಭೂದೇವೀನೇ ನೆಲ ಈ ಮನೇಲಿ. ಜರ್ತಾರಿ ಸೀರೆ ಆಗ್ಲೀ, ನೀರಾಜ್ನೇ ಆಗ್ಲೀ...ಮಾಸೋದಿಲ್ಲಾವ್ಮಾ...ಸೀರೆ...ಹಣ್ಣು ಹಣ್ಣು ಮುದುಕನಾದ್ರೂದೆ... ಆಶ್ಚರ್ಯವೇನು .. ಹಳೇ ಸೇವಕ ಮನೇಗೆ...ಭಕ್ತ. ಕುಟುಂಬಕ್ಕೆ...ಮೈಬಗ್ಗಿ ಕೆಲ್ಸಮಾಡ್ತಾನೆ.... ಚೊಕ್ಕಟವಾಗಿ...ನನಗೆ ತಿಳಿದಷ್ಟುಮಟ್ಗೂವ್ಮಾ ನಿಮ್ಮ ಪುತ್ರ, ನಿಮ್ಮ ಪೌತ್ರ ಇವರಲ್ದೆ ಬೇರೆ ಯಾರೂ ಬಂಧುಗಳು ಇಲ್ದಿರೋ ನಿಮಗೆ ಬೋರಣ್ಣ ಇರೋವರೆಗೂ...ಯಾವ ವಾಟನೂ ಸಂಭವಿಸೋ ಹಾಗಿಲ್ಲಾವ್ಮಾ ಇಲ್ಲಿ. ನಾನು B.A., ಮಾಡ್ಬಾಗ ಭಗವದ್ಗೀತೆ ಭಾಗ ಒಂದ್ರಲ್ಲಿ... "ನಹಿ ಕಲ್ಯಾಣಕೃತ್ಕಶ್ಚಿತ್,...ದುರ್ಗತಿಂ ತಾತ ಗಚ್ಛತಿ"...ಅಂದ್ಬಾಗೆ. ಸತ್ಕೃತಿ ಮಾಡೋರ್‍ಗೆ ಹಾನಿ ಯಿಲ್ಲಾಂತ ಪರಮಾತ್ಮಾ ಹೇಳಿದ್ದಾನೆ ! ನಾನ್ಯಾನೆ ಆಗ್ಲೀವ್ಮಾ...ತಮ್ಮ ಮೊಮ್ಮಗನಿಗೆ ಬೇಕಾದ ಸಹಾಯಾನ ಒದಗ್ಸೋಕೆ....ಕಾಲವಶಾತ್ ಬಂದು ಸಿಕ್ಕೊಂಡಿರೋ ನಾನು ತಾನೇ ಆಗ್ಲೀ ತಮ್ಮ ಕುಮಾರನಿಗೆ ಮುನಿಸಿಪಾಲ್ಟಿ ರಾವ್ ಸಾಹೇಬ್ ಪಟ್ಟ ಇವುಗಳ್ನ ಅರ್ಥಟಿಸ್ತಾ ಬಂದಿರೋ ಅತ್ನೇ ಆಗ್ಲಿ...ನಾವುಗಳು ನಮ್ಮ ನಮ್ಮ ಹೊಟ್ಟೇಪಾಡ್ಗೆ ನಮಗ್ಸೇರದ ಕುಟುಂಬಕ್ಕೆ ಎಷ್ಟು ಕೃತ್ರಿಮ... ಕುಯುಕ್ತಿಗಳು ಕುಚೋದ್ಯಗಳು ನಾವು ನಾವು ಮಾಡ್ಕೊಂಡ್ರೂನೂವೆ...ಸಾಧುಗಳಾದ ಹಣ್ಣು ಹಣ್ಣು ಮುದುಕ ಬೋರಣ್ಣನನ್ನೂ....ಮನೇ ಮಕ್ಳು ಸಂತೋಷ್ವಾಗಿರೋದ್ನ ಕಣ್ತುಂಬ ನೋಡ್ಬಿಟ್ಟು. ಕಣ್ಮುಚ್ಚಬೇಕೂಂತಿರೋ ತಮ್ಮನ್ನೂ...ಕಾಯೋಕೆ...ದೇವ್ರೂಬ್ಬರಿಧಾನವ್ಮಾ ! ಏನೋವ್ಮಾ— ನಿಮ್ಗಾಗಿಲ್ದಿದ್ರೂ ನಿಮ್ಗಾಗೆಯೇ ಹೆಂಗ್ಸು—ಒಬ್ಬೆಂಗ್ಸು—ನಿಮ್ಮ ಕೌಮಾರನ್ನ—ಅವನ್ಯಾತ್ನ ತ್ಯಾಗೇ ಅವನ್ಬುದ್ಧೀ—ನೋಡಿ ಮೆಚ್ಚೆ ! ಇನ್ಮುಂದಕ್ಕೆ ಅವನು ಪ್ರಪಂಚದೆದುರಿಗೆ ಮುಂದಕ್ಬರೋ ಸಹಾಯಾನ ಒದಗ್ಸೋಕೆ ಬಂದೆ. ಆ ಸಹಾಯಾನ ಈ ದೊಡ್ಕುಟುಂಬಕ್ಕೆ ಕೊಡೋ ಭಾಗ್ಯ ನನ್ಹಣೇಲಿ ಬರೀದೇ ಇರೋದು ನಿಮ್ತಪ್ಪಲ್ಲ !...

(Sobbing into her ಸೆರಗು)

...ಬೋರಣ್ಣಂದೂ ಅಲ್ಲ...ನನ್ನ ಪಾಪಕರ್ಮ. ಬರ್‍ತೀನಮ್ಮ.

[to Subbamma who is 'ಸವರು'ಇಂಗ್ Ramu's Gandhi cap out of shape in her emotion]

...ಬೋರಣ್ಣಾ...ನಡ್ಕೊಂಡೇ ಹೋಗ್ತೇನೆ. ಬಿಸಿಲು ಆದ್ರೂ ಪರ್ವಾಇಲ್ಲ...ಸಾಮಾನಿಗೆ ...ಜಟ್ಕಾ...ಕಳಿಸ್ತೀನೆ...ಸ್ಟೇಷನ್ನಿಂದ. ಅವನಿಗೆ ಸಾಮಾನುಗಳ್ನ...ಗಾಡೀ...ತುಂಬಿಸ್ಕೊಳ್ಳೋಕೆ... ಅವಕಾಶಾನ ಕೊಟ್ರೆ, ನಿಮ್ಮುಪ್ಕಾರ...ಎಷ್ಟೋ ಆದ್ಹಾಗಾಯಿತು ರೈಲ್ಗಿನ್ನೂ ೩ ಘಂಟೇ ಹೊತ್ತಿದೆ.

[raises herself]

ಸುಬ್ಬಮ್ಮ : [Helplessly opening her arms out]

ಹಯ್ಯೋವ್ಮಾ....ನೀವು ಹೀಗ್ಹೋಗೋದು ಉಚಿತವಲ್ಲ. ಮುತ್ತೈದೇವ್ಮಾ ನೀವು.

[Sobbing into her ಮುಸುಕು and to herself]

ಮನೇಗ್ಬಂದ ಮುತ್ತೈದೇನ. ಕುಂಕ್ಮ ಹಚ್ಚೋ ಯೋಗ್ಯತೇನೂ ಇಲ್ಲ ನನ್ಗೆ. ಹೀಗೆ ನೀವ್ಹೋಗೋದು ಶುಭವಲ್ಲಾವ್ಮಾ ! ನೀವೂ ನೀವೂಂತ ಬಡ್ಕೋತಿಧಾನೆ ಚಿಕ್ಕೋನು...ಇವನ್ನೂ. ಇವನ್ಮುಖಾನೂ. ಇವನ ಹಣೆ ವಿಭೂತೀನ್ನೂ ನೋಡಿದ್ರೆ ನನಗೇನೋ...ಜ್ಞಾಪ್ಕಾಬುತು...

[collapses sobbing]

ಬೋರಣ್ಣ : (approaching Saroja)

ನೀವಿಂಗೆಲ್ಲಾ ಒಂಟೋಗೋದು ನೆಟ್ಟಗಿಲ್ಲಾವ್ವಾ...ಚಿಕ್ಕೋರ್‍ಗೆ ಬುದ್ದಿ ಕಲ್ಸಿದ್ದೂ ನೀವೆ... ನೀವಿಂಗೋ, ಇಲ್ಲ ಅಂಗೋಂತ ಗುಮಾನಿಯಾಗಿದ್ದ ನಂಗೆ ಬುದ್ದಿಕಲ್ಸಿದ್ದೂ ನೀವೆ! ಇಂಗೇನೇವೇವ್ವಾ ಚಿಕ್ಕ ಯಜಮಾನ್ರಿಗೂವೆ, ಇಂಗೇನೇವೇ ಬುದ್ದಿಕಲ್ಸಿ...ದೊಡ್ಡವ್ವನಿಗೆ...ಆವ್ವಸಾಳು ಬಾಯ್ತುಂಬ ಮಾತ್ತುಂಬ್ಕೊಂಡು, ಬಂದು ಚಿಕ್ಯಜಮಾನ್ರನ ಗುಮಾಯ್ಸಿ, ಇಲ್ಲಿಂದಲ್ಗೆ ಓಡಾಡಿಸ್ತಾ, ನಮ್ಮೆಲ್ರನ್ನ ದಬಾಯ್ಸ್ತಿರೋ ಆವಯ್ಯನ್ನಾ. ನಮ್ಮೂರು ಊರಿಂದ್ಲೇನೆ ಓಡ್ಸೋ ಬುದ್ದೀನ...ಅವ್ನೋರ್‍ಗೆ ಕಲ್ಸಾಕ್ಮುಂಚೆ ನೀವು ಒಂಟೋಗೋದು ನೆಟ್ಗಲ್ಲ...ಮಾತಾಯೀ...ದೇವ್ರು ಬಂದಂಗೆ ಬಂದ್ರಿ. ದೇವ್ರಂಗೇ ಓಗ್ಬೇಕ್ನೀವು...

(to Subbamma)

ಅಲ್ವೇವ್ವಾ ! ?

ಸುಬ್ಬಮ್ಮ : (to Bora...snivelling)

ಹೂಂನೋ. ಬೋರಾ, ಹೂಂ. ಮನೇಹಿತಕ್ಕೆ ನಿನ್ಗೆ ತಿಳ್ಯದ್ಯಾವ್ದಿದೇಪ್ಪಾ.

(to Saroja with pleading eyes)

ನೀವು ಈಗ ಹೀಗೆ ಹೋಗೋದು...ಹಿತ್ವಲ್ಲಾಮ್ಮಾ. ಏಳೋ ಕಂದ...ಕಾಫೀ ಹೊತ್ತು...

(noticing Saroja rising)

ಹಯ್ಯೋ. ಏಳ್ಬೇಡಿ ! ನಿಮ್ಗೆ ಕಾಫೀನೆ...ಟೀನೆ...ಇಲ್ಲ...ಅದೆಂಥಾದ್ದೋ ಬೋರಾ? ಆ ಹೊಸ ಬಾಬ್ತು...

ಬೋರಣ್ಣ : (ಪಕಪಕನೆ ನಗುತ್ತಾ)

ಕೋಕೋರ್‍ರವ್ವಾ...ಕೋಕೋ...ಚಿಕ್ಕೋರು ಕುಸಿಮೇಲೆ ಬೆಂಗ್ಳೂರಿಂದ ತಂದದ್ದು...ಎಂಡ್ ಚವ್ಚು ಖರ್ಚಾದ್ದು...ಬಾಕಿ ಇಲಾಯ್ತಿ ಡಬ್ಬಾಡಬ್ಬಾನೆ ಕುಂತ್ಕೈತೆ ನಾಣಪ್ಪನ ಪೆಟ್ಗೇಲಿ.... ಕುಂಡ್ರುವ್ವಾ...

ಸರೋಜ : ಬರೀ ಹಾಲೂಮ್ಮಾ.

(sitting herself)

ಪಸುವಿನ ಹಾಲು. ಕಾಸಿದ್ದು. ನನ್ಬಿಟ್ಟು ಸಾಯೋಕ್ಮುಂಚೆ ನಮ್ಮಮ್ಮ ಹೇಳಿದ್ರು: "ಟೀಯೇಸು ಕಾಫಿಯೇನು—ಏನಾದ್ರೆಯೇನು—ಮಕ್ಕಳಿಗೆ ತಾಯಿಹಾಲು, ಬೆಳೆದೋರ್‍ಗೆ ಹಸುವಿನ ಹಾಲೂ"ಂತ. ಆಗ್ನಿಂದ ಈಗ್ವರಿಗೂ ಬರೀ ಹಾಲೂಮ್ಮಾ. ಹಸುವಿನ ಹಾಲು. ಕಾಸಿದ್ದು.

ಬೋರಣ್ಣ : ಆಲಿಗೇನ್ರವ್ವಾ ಬರ ನಮ್ಮನೇಲಿ...ಅಂಗ್‌ನೋಡಿದ್ರೆ ಯಾವುದಕ್ಕೆ ತಾನೇ ಏನು ಬರ...ನಾಣಪ್ಪಾ...

ಸುಬ್ಬಮ್ಮ : ನಾ–ರಾ–ಯ–ಣಾ !

ಬೋರಣ್ಣ : (In a highly pitched voice)

ನಾಣಪ್ಪಾ ! ನಾಣಪ್ಪಾ...!

ನಾರಾಯಣ : (entering C)

ಬೋರಣ್ಣ...ಅಲ್ಲ...ಅಮ್ಮಾ...

ಸುಬ್ಬಮ್ಮ : ಚಿಕ್ಕೋರಿಗೆ ಕಾಫಿ. ಈಕೇಗೆ...ಹಾಲು. ನನಿಗೊಂದ್ಪಂಚಪಾತ್ರೆ ಅಭಿಷೇಕ ಮಾಡಿದ್ನೀರು.

ಬೋರಣ್ಣ : ಯಾತ್ರಲ್ರವ್ವಾ...? ಛೀಕೈ ನಿಮ್ಮತ್ರಲೇನೇವೆ!

(At this stage Kappanna enters)

ಸುಬ್ಬಮ್ಮ : ಹೌದೋ...

[bringing out key and handing it to Narayana]

ಬೆಳ್ಳೀ ಪಾತ್ರೆ ಅಲ್ಮಾರೇ ಬೀಗದಕೈ. ದೊಡ್ಡ ತಟ್ಟೇಲಿ ಹೊಸ ಟಂಬ್ಲರುಗಳು ಬೇಗ.

ನಾರಾಯಣ : ಹೂಂವಮ್ಮಾ.

[Exit C]

ಸುಬ್ಬಮ್ಮ : [as Narayana is exitting]

ಮರೀಬೇಡ್ವೋ...ಸಕ್ಕರೆ...ಜಾಸ್ತಿ...

[mischievously patting Ramu's Gandhi-capped head]

[crooningly]

ಚಿಕ್‌ರಾಯ್ರು ಕಾಫೀಗೆ.

[at once Narayana from within) ['ಹೂಂವಮ್ಮಾ' ಗೊತ್ತಿಧೆ.]

...ನೋಡೀವಮ್ಮಾ. ಸಕ್ರೇಂದ್ರೆ ಪ್ರಾಣ ಚಿಕ್ಕೋನ್ಗೆ...ಇವ್ರಜ್ಜನಿಗಂತೂ...ಕಾಪೀಗೆ ಸಕ್ರೆ ಅಲ್ಲ...ಸಕ್ರೇಗೇನೇವೇಯೆ ಕಾಪಿ....ಏನೋ ಬೋರ ?...ಜ್ಞಾಪಕ್ವಿದ್ಯೇ....ಕೂತ್ಕೋ....

ಬೋರಣ್ಣ : (After seating himself respectfully away)

ನಾನೇನೇಳ್ಳವ್ವಾ........ನನ್ಕಣ್ಮುಂದೇನೇವೆ........ನಿಂತಂಗವ್ರೆ ದೊಡ್ಡೋರು. ಈಗ. ಸಕ್ರೇನೆ...ಕೇಳ್ರವ್ವಾ...ಪಾಪಣ್ಣನ ಆಲೇ ಅವ್ವಾ...ಸೆನ್ಮೊನ್ನೆತಾನೇ...ಮಕ್ಕಳ್ನೂ. ಪುನೇನೂ ನೆಮ್ಮದಿಯಾಗಿ ಬುಟ್ಟುಬುಟ್ಟು ತೀರೋದ, ಅಯ್ನೋರ ಎಸರೇಳ್ತಾ! ಚಿಕ್ಕೋಟ್ಟಲ್ಲಿ ಕಬ್ಬಿನ ಕಂತ್ರಾಟು ಕೊಟ್ಟಿದ್ದ್ರವನ್ಗೆ. ಆಡಸ್ತಾ ಔನೆ ಆಲೇನ. ಎತ್ತುಗಳ್ನವ್ಮೋವು....ಬಾಡ್ಗೇಗೆ ಬಿಟ್ಕೋವು ... ಇದ್ದಕ್ಕಿದ್ದಂಗೆ 'ಪಕ್ಕ'ನ್ನುಗ್ಗಬುಟ್ರು ದೊಡ್ಡೋರು...ಬೇಲಿ ಬೇಲೀನ್ನೇ....

[indicating with arms]

ಇಂಗ್ಬಿರ್ಕ್ಕೊಂಡು. "ಏನೋ...ಪಾಪಾ...ಕಯ್ಲಿಲ್ಲೀನೋ? ಸಿಯೀನೋ?ನಿನ್ಕಬ್ಬು!" ಕೇಳ್ತಾನ್ನಸ್ನೊಪ್ಪಾ ...ಪಾಪಣ್ಣನೇನೇಳಾನು ...ಆದ್ರೂನೂವೆ ದೊಡ್ಡುಂಡ್ಗೆ. ಗಲ್ಟೀಲಿ ಕಲಿಪ್ರೂವಮ್ಮಾ!...."ಕಬ್ಬಿನಾಲು ಕುಡ್ದು ತಾವೇ ಯೋಳೀ ಬುದ್ದೀ—ಕಬ್ಬು ತವ್ಮೋತಟದ್ದು" ಅಂದ. ಸುತ್ಮುತ್ತಿದ್ದ ಮುಡ್ಕೇನಾ. ಕುಡ್ಕೇನಾ ದೊಡ್ಡವ್ರಿಗೆ?...ಬೆಳ್ಳಿಪಾತ್ರೆ ಅಲ್ಮಾರೇ ತುಂಬ ತಟ್ಟೇ ಟಂಬ್ರಲ್ಲಾ...ಅಲ್ಲಿ! ಏನೇಳ್ಲವ್ವಾ ಎಂಗೇಳ್ಳವ್ವಾ ...ದಣಿ ದಣೀನೆ. ಪಕ್ದಲ್ಲಿ ತೆಂಗಿನ್ಸಟ್ಟೆ ಬಿದ್ದಿತ್ತವ್ವಾ—ಗರ್ಬೊಳ್ಕಸ್ಕೊಂಡು, ಅದೆಂಗೋ ದೊಡ್ಡೋನ್ನೆ ಎತ್ಕೊಂಡು...ಎಂಟು ದೊನ್ನೇರ್ರವ್ವಾ...ಒಂದಲ್ಲ...ಎಂಡಲ್ಲ...ಎಂಟ್ದೊನ್ನೆ ಕಬ್ನಾಲು ಕುಡ್ದುಬುಟ್ಟು...ತೇಗ್ತಾ ತೇಗ್ತಾ ಯೋಳ್ತಾನೆ ಭೂಪ: "ಪಾಪಾ ಲೋ. ನಿಜ ಕಾಣ್ಲೋ. ಕೈಯ್ಲಿಲ್ಲ. ಸೀಯೇನೊ ನನ್ಕಬ್ಬೂ"ಂದ್ರು...ನೋಡಿದ್ರಾವ್ವ ಜೀವಾಳಾನ...ಸಿಯಿ ನನ್ಕಬ್ಬೂಂದ ನನ್ನ ಧಣಿ. ...ಧಣೇಂದ್ರೆ ಧಣಿ, ಔನು....ಒಂಟೋದ....ನನ್ನುಬಟ್ಟುಬುಟ್ಟು...

[collapses sobbing]

ಸುಬ್ಬಮ್ಮ : [Sobbing]

ಸಾಕೋ. ನಿಲ್ಸೋ ಹಾಳಾದೋನೆ. ಏನ್ತಾಕ್‌ಜ್ಞಾಪಕಶಕ್ತೀನೋ ನಿನ್ಗೆ...ಪಾಪೀ...

(collapses into her ಮುಸುಕು)

[As Ramu and Saroja are all this–while looking askance at each other and are at consternation at sobbing Subbamma and Bora. Narayana enters with three huge brand-new-polished silver tumblers and a panchapatre of copper resting on a gigantic carved silver salver]

[Kappanna's pantomime culminates with his gulping four Poona tumblers of kooja water, two forcibly feeding of Hiriyannayya likewise…and frenzied explanations of "All ಪುರಾಣ against poor Kappanna plus of course worthy master…etc.," finishing with the curtain dropping on…]

ಕಪ್ಪಣ್ಣ : ಒಟ್ಟಲ್ಲೇನ್ಸಾರ್ ? ತಗೊಳ್ಳಿ ಇನ್ನೊಂದು ಟಂಬ್ಲರು…

[sonorously from within the tumbler he is drinkin out of]

ಒಟ್ಟಲ್ಲೀ ನೀರ್ಕುಡಿಸ್ತಿಧಾಳೆ…ನಮ್ಮಿಬ್ಬರಿಗೂ…ಆ type-writer ಹೆಂಗ್ಸು…silver vessels ಎಲ್ಲಾ ಅತ್ಕಡೆ…but for the present situation…ಕೂಜಾ ನೀರು ಕುಡಿಸ್ತಿಧಾಳೆ !

(Curtain drops)

SCENE VI

(Place : Same. Time : The next morning)

[Found entered Saroja draped in a diaphanous snow-white silk saree patched with embroidered flowers, with bodice also white to match, drinking out of Silver tumbler, with Narayana respectfully standing bowed, Silver Salver in hands]

ಸರೋಜ : ಬೋರಪ್ಪಾ !

(drinks delicately)

ಬೋರಪ್ಪಾ !

ಬೋರಣ್ಣ : (Entering)

ತಾಯೀ.

(bows to the ground)

ಸರೋಜ : (sweetly)

ಈ ……..ಪರ್ದೆ ಅವ್ರಾವು ಹೇಳಿದ್ರು……ಮಾಡಿ ವರಾಂಡಾಲಿದ್ದದ್ದೂಂತ……ಮೊಳೆ ಸಮೇತ ಈಗ್ಲೇ ಕಿತ್ತು ಮುಂದಿನ ಹಾಗೆಯೇ ಕಟ್ಟಿಡು…ಮಾಡೀಲಿ.

ಬೋರಣ್ಣ : ತಾವೇಳ್ದಂಗೇ ತಾಯೀ...

(mustering unbelievable activity jerks out on top of C and F and rolling up curtain, exits R)

ಸರೋಜ : (Placing tumbler on Silver Salver which Narayana respectfully holds out)

ನಾರಣಪ್ಪನೋರೆ......ಸಕ್ಕರೆ ಹಾಕಿದ್ರ ? ಅನ್ಯಾಯ......ಸಿಹಿ ಸಿಮ್ಮನೇ ಹಾಲು.

ನಾರಾಯಣ : (An old man of 70 bowed down with greyed age and culinary Service)

ನಮ್ಮನೇಗೆ ಬಂದು ಹಾಲ್ಕುಡ್ದೋಪ್ರೆಲ್ಲಾ...ಹೀಗೇನೇವೆ ಹೇಳಿದ್ದೂವಮ್ಮಾ...ಸಂಪ್ರದಾಯ ...ಕರೋದ್ದೇನು ಕರದ ಹಾಗ್ಯೇ ತರ್ರಾನೆ...ನಾನೂ ಸಕ್ಕರೆ ಬೆರ್ಸೋದಿಲ್ಲ. ಒಂದ್ವೇಳೆ ಆಕ್ಳು ಮೇಯೋ ಹುಲ್ಲು...ಸಕ್ರೆ ಸುರ್ದು ಬೆಳದಿದ್ದೋ ಏನೋ...ಕಾಣೆ.

(smiles)

ಸರೋಜ : ಹೌದು ! ನಿಮ್ಮಾಕ್ಳುಗ್ಳು ಮೇಯೋ ಗುಡ್ಡಕ್ಕೆ ಹೋಗಿದ್ದೆ...ಪಚ್ಚಗಿತ್ತು ಹುಲ್ಲೆಲ್ಲಾ...ಹಾಗೆ ನೋಡಿದ್ರೆ ನಿಮ್ಮೂರ್ನಲ್ಲಿ...

(airily)

ಕಬ್ಬೂನೂ ಹುಲ್ಲೂನೂ ಹತ್ರ ತ್ರಲೇ ಬಳೀತಿರೋವಾಗ ಕಬ್ಬಿನ ಸಿಹಿ ಹತ್ತಿದ ಹುಲ್ಲು ಮೇದ ನಿಮ್ಮಾಕಳಿನ ಹಾಲು···ಸಿಹಿಯಾಗಿರೋದು ಆಶ್ಚರ್ಯವಲ್ಲ...ನಾರಣಪ್ಪನೋರೆ.

(It is at this moment that she puts the tumbler on the salver···smiling gratefully on the servant)

(Exit Narayana)

(as Saroja noticing Hiriyannayya at C···apparently to herself but deliberately loud enough for Hiriyannayya to hear)

ಅ...ಬ್ಬ ! ತೊಲಗಿತು...ಈ battle–field ! B.A. ಲಿ ಇಂಗ್ಲೀಷ್ನಲ್ಲಿ record marks ನನಗೆ...University prizeoo at the Governor's hands and introduction to the Lady Governor at the Government House Garden Party. 'Hindu' ಲಿ ಬಂದಿತ್ತು Photo...Governor ಇತ್ಕಡೇ. Lady Governor ಅತ್ಕಡೇ...myself in the middle. S.S.L.C. Certificate ಕೂಡಾ ಇಲ್ಲ...ಇವನು speeches ಹೇಳ್ಕೊಡ್ತಾನಂತೆ...to the .noble head of this aristocratic family !...

(ನಗುತ್ತಾ)

That villain ಒಂದು ಮರುಬಿಟ್ಟ !...God ಒಬ್ಬ ಇಧಾನೆ ಅಂಬೋದ್ನ. Sweet minds like Mr. Hiriyannayya's conceal unknown depths of integrity, intellectuality, responsibility and mental and moral rectitude ! ಬರೀ dictionary ನ್ನೂ some cheap book of quotations from Literature ನೂ ಅವಸರವಸರವಾಗಿ byrote ಮಾಡ್ಬಿಟ್ಟು ಸಿಕ್ಕಾಪಟ್ಟೆ ಬಿಚ್ಚಿ ಬೆದರಿಸ್ತಾ a simple but sweet soulನ hypnotise ಮಾಡಿ...victimise

ಮಾಡ್ತಿರೋ...ಆ negligible villain ಹಾಗಿಲ್ಲೀ...ಇಷ್ಟು hospitality ತೋರಿಸಿದ ಈ family ಗೆ big son of the familyನ್ನೂ ಆತನ big father ಹಾಗ್ಯೇ Rao Saheb Hiriyannayya, President of the Corporation of Rampur ಆಗೋಗ್ತೇಕಾದ speeches...ಆತನ ಬಾಯಲ್ಲೇ perorate ಮಾಡ್ಸಿ, besides all this my ಪ್ರಾಣಸ್ನೇಹಿತೆ Lady Bullappa now in Delhi...ಆಕೆ ಮೂಲ್ಕ the Lady Governorಗೂ and through her Governor of Madrasಗೂ introduce ಮಾಡಿ...very long before Employer Mr. Rama Rao 'Sir Ramarao' ಆಗೋಕ್ಬುಟಿನೇ...ನನ್ಗೆ ಆ horrible creature Secretary...ಎಷ್ಟು clever ಆಗಿ ನನ್ನ drive out of this house ಮಾಡೋಕೆ try ಮಾಡಿದ್ರೂನೂವೆ still ನನಗೆ kind ಆಗಿರೋ Lady of the family ನ Delhiಗೆ ಕರ್ಕೊಂಡ್ಹೋಗಿ ಆಕೆ ಕಣ್ತುಂಬ...ತನ್ಮಗ Viceroy...sword in hand ಇಂದ...son of the familyನ....Knight Commander of the Star of India...Sir Hiriyannayya of Rampur, in South India! ಅಂತ Dub ಮಾಡೋದ್ನ...Viceroy's ಪಕ್ದಲ್ಲಿ ಕೂತು ನೋಡಿ feel ಆಗೋ pleasureನ ಆ sweet lady ಗೆ ಒದಗ್ಸೋಗೆ poweroo...powerfull influencers also powerful friendsoo ನನಗೆ ಇಧೇಂತ ಹ್ಯಾಗ್ಹೇಳ್ಕೊಳ್ಳೋದು ನಾನು...ಈ orthodox family ಲಿ! Master of the Home ನ approach ಮಾಡೋ ಹಾಗಿಲ್ಲ ನಾನು...a weak horrible designing woman ಊಂತ ತಿಳ್ಕೊಂಡಿಧಾರೆ ನನ್ನ, that innocen Gentleman. Young Mr. Rama Rao ಓ...too orthodox to see me talking to un-introduced gentleman, however good-mindedly, to the master of the House...but until he drives out this unnecessary loquacious parasite feeding upon this good gentleman in the disguise of a secretary...ನಾನೇನ್ಮಾಡೋ ಹಾಗೂ ಇಲ್ಲ.

(sighing helplessly)

ಶ್...ಶ್...ಶ್...

(holding her hands aloft)

ಪರ್ಮ್ಯೋ ದೇವ್ರೆ! ಎಷ್ಟು helplesoo womanoo! ಬರೀ womanoo... and all the while wanting to help a noble man who is made a fool of...why! a duffer by clever, designing Scoundrel... ಪರ್ಮ್ಯ ಯ್ಸ್ಯೋ...ನಾನ್ಯಾಕ್ಸಯ್ಬೇಕು...ದೇವ್ರಿಧಾನೆ! Even if I cannot advice the master of the house personally...God will...spiritually...through some saintly old soul...

(Exits like a tragedy Queen–R)

[From within...Subbamma's voice :...ಮಗೂ (in louder voice) ಪರ್ಮ್ಯೋ! ಇಲ್ಲೇ ಇಧೀಯಾ ?...ಇದೇನು (at C...) ಹೊಸಲ್ನಲ್ಲಿ ?...ನಡಿ ಮುಂದಿನ ಕೋಣೇಗೆ]

[Enter C Hiriyannayya with Subbamma following.]

ಬೋರಣ್ಣ : ಸೈ ಬುದ್ದಿ ಅಪ್ಪಯ್ಯ...ಅಂಗೇನೂ ಕೆಟ್ಕೋನಲ್ಲ...ಎಂಗಿದ್ರೂನೂವೆ... ಇಬ್ರುರೂವೇ ಇದ್ರೆ...ಆದಮ್ಯಾ, ಈವಯ್ಯಾ...ಬಂಕೀನೂ. ನೀರ್ನಂಗೆ...ಪಾಚೀನೂ. ನೀರ್ನೂ ಎಂಗೋ ಅಂಗೆ. ಅಂಟೋ ಅಂಗೂ ಇಲ್ಲ ಒಂಟೋ ಅಂಗೂ ಇಲ್ಲ! ......ಎಂಗಾದ್ರೂ ಗಂಡ್ಸು ....ಅಲ್ದೆ ಗಾಟಿ! ಎಲ್ಲಾದ್ರೂ ಜೀವ್ನ ಮಾಡ್ಕೊಂತಾನೆ. ಅದುಕ್ಕೆ ಎಂಗಿದ್ರೂ ಗಂಡ್ಸು!... ನೊಂದ್ಕೋಬೇಡಿ ಬುದ್ದೀ! ಅವಯ್ಯ ಓಗೋದೇ ಮೇಲು. ಆದ್ರೆ ನೀವೇಳ್ದಂಗೆ ನೋಯುಸ್ಬಾರ್ದು ಆತ್ನ ಜೀವಾನ,

ಅವ್ವಾ !

(to Subbamma)

"ನಸ್‌ನಗ್ತಾ ನಮ್ಮನೇಗ್ಬಂದೋರು...ನಸ್‌ನಗ್ತಾನೆ ನಮ್ಮನೇಯಿಂದ ಓಗ್ಬೇಕೋ. ಬೋರಾ!" ಅಂತಿದ್ದಾ ನನ್ಬುಟ್ಟುಟ್ಟೋದ ನನ್ದಣೀ...

(sobs heavily)

ಸುಬ್ಬಮ್ಮ : ಸಾಕೋ! ಪಾಪಿ!!!

(Exits C sobbing ಏನ್ಬಾಳ್ ಜ್ಞಾಪಕಶಕ್ತೀನೋ ಪಾಪೀ)

ಏನೋಪ್ಪ ಇನ್ನು ಒಂದ್ಸತ್ತಿಪತ್ರೂಪಾಯಿ ಅಪ್ನು ಕೇಳಿದ್ರೂನೂವೆ ಕೊಟ್ಬು ರವಾನಿಸೋದು ಮೇಲು! ಬ್ರಾಹ್ಮಣ! ಸಂಸ್ಕೃತ ತಿಳ್ದೋನು! ಪ್ರಾಜ್ಞ! ಆದ್ರೆ ಬೋರ ಹೇಳ್ದಾಗೆ ಗಂಡ್ಸು ಎಲ್ಲಾದ್ರೂ ಜೀವನಮಾಡ್ಕೊತಾನೆ........ಈ ಗಲಾಟೆಗ್ಳೆಲ್ಲಾ........ತೀರಿದಮೇಲೆ ತಿರುಗೊಂದ್ಸೇಳೆ ಬಂದಾಗ...ನೋಡ್ಕೋಬಹುದು!

(Exits sobbing)

ಬೋರಣ್ಣ : (Ditto murmuring)

ಊರವ್ವಾ. ಚಿನ್ನದಂಥಾ ನಾಲ್ಗೆ. ಆದ್ರೂ ಆತ ಒಂದೋದೇ ಮೇಲು. ನನ್ಗಣೆ ದಣೀನೆ ಓದ್ನಂತೆ.

(Exits sobbing)

ಹಿರಿಯಣ್ಣಯ್ಯ : Poor old Kappu!...ಅನ್ಯಾಯ ಅವನು ಹೋಗೋದು!...... but then ಅವನಿರಲಿ, ಅವನ Natal's dictionary ಇರಲಿ! real B.A..ನೇ ಇವ್ನು... ...also friend of Lady......ಯಾರೊ Indian Lady Governor's wife's ಪ್ರಾಣಸ್ನೇಹಿತೆ! She of course has Lady Governor Viceroy's wifeನ ಪ್ರಾಣಸ್ನೇಹಿತೆ! ಏನ್ಹೇಳಿದ್ಳು? "Sir Hiriyannayya" long before 'Sir Rama Rao'

[Noticing S and R entering big R (side) exits C and is eaves-dropping]

(Saroja now in a pink creation of Saree and bodice occupying chair...whilst R at stool)

ರಾಮುರಾವ್ : Thank God! Srimati Devi! ನಿಮ್ಮ Brain ಇತ್ತೊ ಬದಕ್ಕೆ both in Nobel prize and also ನನ್ನ Grand-mother regardನಲ್ಲಿ ಆ scoundrelನ ಸಾಗಿಸ್ದ ಹಾಗೇನೆ. Now before we start...on our daily

work, you must teach me…proper ಆಗಿ…like a man…ಹ್ಯಾಗೆ behaving…ಹೇಳ್ತೀನೇ…

ಸರೋಜ : First of all…ಕೋಪಿಸ್ಕೋಬೇಡಿ…cultured ಆಗಿರೋವ್ರು… ಮೊದಲು ತಮ್ಮ culture of birthನ್ನಾಗ್ಲೀ breedingನ್ನಾಗ್ಲೀ languageನ್ನಾಗ್ಲೀ ನೋಡ್ದೋರು ತಿಳ್ಕೊಳ್ಳೋಕ್ಮುಂಚೆ……..ಅವರ appearance ಇಂದ್ಲೇ judge ಮಾಡ್ತಾರೆ people ! ನೀವ್ನೋಡೀ…ನಿಮ್ಮ dress ಓ English ಆಗ್ಲೀ…Indian ಆಗ್ಲೀ… ಕೋಪಿಸ್ಕೋಬೇಡಿ. ನಿಮ್ಮ familyಲಿ ದುಡ್ಡು ಜಾಸ್ತಿಯಾಗಿದೇಂಬೋ ಜಂಬಾನ ನೀವು ಕೊಚ್ಕೊಳ್ತಿಧೀರಾಂಬೋ impression ಮೊಟ್ಮೊದಲೇ ಬಂದ್ಬಿಡುತ್ತೆ, ನಿಮ್ಮನ್ನೋಡಿದಾಕ್ಷಣ್ವೆ ! ಇದ್ರಿಂದ pick-pocketsoo parasitesoo ನಿಮ್ಮ ಹತ್ತಿರ ಬಂದಾರೇ ಹೊರ್ತು people of real blood and breeding ಸುಳ್ಯೋದಿಲ್ಲ ….. ನೀವು ಹೀಗೆ ನಿಮ್ಮ ದುಡ್ಡಿನ ಹೆಮ್ಮೇನ ಕುದುವಗಾರನಹಾಗೆ…flount ಮಾಡ್ತಿದ್ರೆ…public ಆಗಿ–

ರಾಮುರಾವ್ : ನನಿಗ್ದುಡ್ಡಿನ ಹೆಮ್ಮೆ ಏನೂ ಇಲ್ಲ ಶ್ರೀಮತಿ ದೇವಿ…ನಾನು…want to become a poet……..''ದುಡ್ಡಿನ ಹೆಮ್ಮೇ''ಂತ ಹ್ಯಾಗೆ peopleoo?…

(sees Saroja drop her head)
…plain ಆಗಿ ಹೇಳ್ಬಿಡಿ !
(Irritatedly and commandingly)

plain ಆಗಿ ಹೇಳ್ಬಿಡಿ ದೇವಿ !

ಸರೋಜ : Plain ಆಗ್ಹೇಳ್ತೇನೆ…after all ಗಂಡ್ಸು ನೀವು, ನಿಮ್ಮ eight masculine fingers ಒಂದೊಂದಕ್ಕೂ ಒಂದು precious stone ಇರೋ ringoo!… ಯಾಕಿದು? Being in the family circle I can understand ! Pure grand mother's love ! but ನೀವು ಹೊರಗ್ಹೊರಟಾಗ people's interpretation: pawn broker or proprietor P. Orr and Sonsoತ ಊಹಿಸ್ತಾರೆ ; ಜನಗಳ ಬಾಯಿ ಮುಚ್ಚೋಕಾಗುತ್ಯೆ ?

(sweetly smiling plays upon the type-writer as though really typing something…)

…ರೇಗ್ಬೇಡಿ. ನೀವ್ಕೇಳಿದ್ರಿ plain ಆಗಿ ಹೇಳೂಂತ !…ಹೇಳ್ದೆ… plain ಆಗಿ…I have only done my duty and no more.

(continues playing upon Keyboard)

ರಾಮುರಾವ್ : (After a minute's anguish…mustering up a smile)

ನಿಜ ದೇವಿ. ನನ್ನ horrible black fingers ಒಂದೊಂದಕ್ಕೂ ವಜ್ರ, ಕೆಂಪು, ಪಚ್ಚೆ,…ಹೀಗೆ ನನ್ನ ಇಲ್ಲದ ಬೆಳಕ್ನ, ನಮ್ಮ ತಾತನ ಮನೆಗಂಟ್ನ, ಬೀರ್ತಾಹೋದ್ರೇ ಬೀದೀಲಿ… quite right Devi……..ನೀವೇಳ್ದ್ಹಾಗೆ ಇದೆಲ್ಲಾ ನಮ್ಮಜ್ಜಿ ಚಪಲ ; ಈಗ್ಲೇ family ringsನ restore ಮಾಡಿಬಿಡ್ತೇನೆ.

(Noticing Saroja's lithe, lilly-sprout slender fingers dancing on the keys)

ಒಂದು, ಶ್ರೀಮತಿ...ಇಷ್ಟು Love ನಮ್ಮಜ್ಜೀಗೆ ನನ್ಮೇಲಿದ್ರೂ, ಅದ್ನೆಲ್ಲಾನೂ ಹೋಗ ಲಾಡಿಸ್ಕೊಂಡಿದ್ದ ನನ್ನ ನಮ್ಮಜ್ಜಿ love ನಲ್ಲಿ restore ಮಾಡಿದ್ದಕ್ಕೆ rewardoo–God ಕೊಡಬೇಕು ನಿಮಗೆ.

(Taking all the rings off his eight fingers)

ಈ seven rings back again to Ajji! ನನ್ನ finger ಓ blackoo ನೀವು ನನಗೆ ಈಗ 'ಮನೆದುಡ್ನ ಮುಂದೀ ಎದುರಿಗೆ...ಮೆರಸಬಾರದೂಂ'ತ ನೀವು ಹೇಳ್ಕೊಟ್ಟ ಪಾಠ ...ನೀವು type ಮಾಡ್ತಿರೋವಾಗೆಲ್ಲಾ...ನಮ್ಮ ತಾತನ ಈ ಪಚ್ಚೆ ಉಂಗುರ ನಿಮ್ಮ ಬೆರಳಲ್ಲೀ ಇದ್ರೆ...ನನ್ಗೆ ಆಗಾಗ್ಗೆ... poetಗೆ ದುಡ್ಡಿನ ಯೋಚ್ನೆ ಇರ್ಬಾರ್ದೂಂತ again and again ಜ್ಞಾಪಿಸುತ್ತೆ.

[Impulsively snatching off all the rings and before Saroja realises what he is doing slips a huge emerald ring on her finger and shouting]

"ಅಜ್ಜೀಗೆ shall restore The family rings"

(exits through C not noticing **Hiriyannayya** who stands aside)

ಸರೋಜ : (**Aware** of but not noticing **H's** presence at C)

ಇದೇನ್ಹುಚ್ಚು ಈ ಮಗೂಗೆ ! treating family property that belongs to his father and not to that old–fashioned old Lady !

(examining ring)

Beautiful old–fashioned setting but···pure water. At least 5 carats !...ಈ greenನ ನೋಡ್ತೀದ್ರೆ hill ಯಾಕೆ......dale ಯಾಕೆ !......greenest grassನ ಇದಕ್ಕೆ refer ಮಾಡಿ check ಮಾಡ್ಬೇಕು !

(In a serious tone)

But then...ನನ್ನ ಹೆಂಗಸಿನ ಚಪಲಾನ ಒವರಿ "ನನ್ಕೈಲಿಟ್ಟದ್ದು ಒಂದ್ಸಾಗು ...ಈ ಉಂಗ್ರಕ್ಕೆ ಹಕ್ಕಿಲ್ದ ಒಂದು ಶಿಶೂ"ಂಬೋದು ಮರೀದೆ...ಇದಕ್ಕೆ ಮಾಲೀಕರು... ಈ ತಿಳೀದ ಹುಡ್ಗ... "ಅಜ್ಜೀ, ಅಜ್ಜೀ"ಂತ ಎಷ್ಟು ಬಡ್ಕೊಂಡ್ರೂ ಸೂಪೆ...Law ತಿಳಿದ ನಾನು......this property belongs to the man to whom...ಈ ring ಏನು? ಆ ಮಗು ತೊಗೊಂಡ್ಹೋದ seven ringsಊ ಅಲ್ದೆ... all this property of House, Villages and also Coffee estates...... ಇದೆಲ್ಲಾನೂವೆ ತನಗ್ಸೇರಿದ್ರೂನೂವೆ...ಮಾತೃಪುತ್ರವಾತ್ಸಲ್ಯದಲ್ಲಿ ತನ್ನ ಹಕ್ಕೂ...ಮರ್ತು ಕಂಗೆಟ್ಟಿರೋ that...**sweet looking man**...if only ನನಗೆ ಒಂದು chance to show my powers ಕೊಟ್ರೇ...easily 'Sir Hiriyannayya' ಆಗಬಹುದಾದ...... but I am only wasting words !...first to restore to the real master of all this princely estate...this ring...ಈ ಪಚ್ಚೆಕಲ್ಲು...

[admiring it]

ಆ ಹುಡ್ಗ ಹೇಳ್ದಾಗೆ splendid ಆಗಿ suit ಆಗುತ್ತೆ ನನ್ನ handಗೆ, But then...

[recovering herself with a shake of her head as though from a dream]

but "duty is duty"......before even woman's eternal beauty !......

ಬೋರನ್ನ ಕರೀಲೇಬೇಕು. ಅವನ್ಕೈಲಿ ಕೊಟ್ಟು...ಮನೆ ಯಜಮಾನ್ರಿಗೆ ಕೊಟ್ಬಿಡೂಂತ...

(In a soft deliberately low voice)

ಬೋರಣ್ಣಾ—ಬೋರಣ್ಣಾ.

ಹಿರಿಯಣ್ಣಯ್ಯ : (In an equally hushed voice)

ಬೋರಾ ! ಬೋರಾ ! ಯಾರೋ ಕೂಗ್ತಾರೆ.

(entering through C)

ಕ್ಷಮ್ಸಿ. Miss—Madam—as the case may be...letter writer ಹೇಳೋಹಾಗೆ, I am very sorry. ಬೋರಾ ಇಲ್ಲಾಂತ ಕಾಣುತ್ತೆ...you see—ನಮ್ಮ father ಕಾಲ್ದಲ್ಲಿ ನಮ್ಮ ತಾಲ್ಲೂಕಿಗೆ Highnessಗ್ಳು ಬಂದಿರೋದೂ ಅಲ್ದೆ once or twice tiger-shootingಗೆ colonels and Journals...I mean generals... ಒಟ್ನಲ್ಲಿ also Governor knowing people...with of course English Ladies ಬಂದು camp ಮಾಡಿ...ನನಿಗೆ High Society movement—ಹೊಸ್ದಲ್ಲ ! therefore proper ಆಗಿ introduce ಮಾಡೋಕೆ....ಯಾರೂ ಇಲ್ದಿದ್ರೂನೂವೆ........ as real master of this house ಆದ್ರೂನೂವೆ ...... ಬೋರ, ತಾವು ಕೂಗಿದಾಗ ಇಲ್ಲಿ ಇಲ್ದೇ ಇದ್ದದ್ದು....apolo....ನಾನು sorryಂತ

(approaches Saroja and stands like a crass-ass)

ಸರೋಜ : ದಯವಿಟ್ಟು don't apologise ! ನೀವೇ master of the houseಅನ್ನೋದ್ನ ಮರ್ತದ್ದಲ್ದೆ you have also forgotten, ನಾನೂ ಬೋರನ ಹಾಗೆ paid servnatoo ಅಂಬೋದ್ನ. Societyಲಿ, high societyಲಿ ನಾನು refer ಮಾಡೋದು. high, high, very very high, which means 'Sir'ಗ್ಳು....'Sir'ಗ್ಳ Ladiesoo Lordsoo, Lady Lords as Governorsoo and ಲೇಡಿ ಗೌರ್ನರ್ರುಸ್ಗಳು and so onಗ್ಳು meetಮಾಡೋ Societyಲಿ proper introduction ಇಲ್ದೆ Ladies and Gentlemen ಮಾತಾಡೋದು bad mannersoo. But circumstances alter cases. ಇದೂ peculiar ಕಾಲ. Though I am a lady....which I know and you are a Lord which you don't know....ಹೀಗೆ ಯಾರೂ ಇಲ್ಲಿ introduce ಮಾಡೋಕೆ ಇಲ್ದೆ....let me come to the point.......

(with apparent difficulty trying to extract ring from finger with effort....with screwed up face)

ಹಿರಿಯಣ್ಣಯ್ಯ : (affected by her hitherto speech)

No ! No ! No ! No ! No !....Don't take trouble. ಹ್ಯಾಗಿದ್ರೂ, permanentoo your employment....

ಸರೋಜ : (Sweetly)

ಹಾಗಂದ್ರೇನು ! ಈಗಿಲ್ಲಿದ್ರೂ........ನಿಮ್ಮನೇಲಿ permanent servant ಆಗಿ ನಾನು employ ಆಗಿರೋವಾಗ....ಯಾವತ್ತಾದರೂ ಒಂದು ದಿನ ಈ ringoo ನಿಮ್ಮ wonderful hand ಗೆ ತಿರುಗಿ ಬಂದೇ ಬರುತ್ತೇಂಬೋ........con........

ಹಿರಿಯಣ್ಣಯ್ಯ : No ! No ! Srimati Devi! ನನ್ನ ugly hand ಗೇಕೆ! ಆ ರಿಂಗು ? ನಿಮ್ಮ beautiful handಗೆ suit ಆಗುತ್ತೆ ಅದು. ಆ ಕೈಲೇ ಇಟ್ಕೊ as a present for your great services to the family.

ಸರೋಜ : ಇದು costly emeraldoo....

ಹಿರಿಯಣ್ಣಯ್ಯ : (In an impulse)

Do you think I care for money ?
(nearing Saroja)

ಹಯ್ಯೋ Miss or Madam Srimati Devi........Money is nothing to me ! Honour....ಹೇಳ್ತೇನೆ. ....ಕೊಟ್ಟ ಮಾತು....ತಪ್ಪುಬಾರ್ದು....all these things....everything to me ! ಆ ಉಂಗ್ರ ಏನು ?....ಆ ಶಿಶು ಕೊಟ್ಟಿದ್ದು. ಇಟ್ಕೊ.

(bowing to the ground)

ನಾನು master of the house ಆಗಿ, in reward for your future help for my municipality and title ಬಾಬ್ತು....to show money is nothing to me....

(In an impulse draws a diamond ring off his finger and throws it gently at Saroja which she catches muttering)

ಸರೋಜ : ಕ್ಷಮಿಸಿ, Mr. Hiriyannayya. This is **madness** !

ಹಿರಿಯಣ್ಣಯ್ಯ : No—No....Madam Devi ! ಇಂಥಾ ring ಗಳು ಎಷ್ಟೋ ಇವೆ familyಲಿ. Costly ಗಿಫ್ಟಿಲ್ಲ ಅಂದ್ರಲ್ಲಾ....question of money never in our family....Honour....Honesty....

ಕಪ್ಪಣ್ಣ : [Entering L with Bora]

ನೋಡ್ದ್ಯಾ ಬೋರಣ್ಣಾ. ನಾ ಹೇಳ್ಳಿಲ್ವೆ !
(confronting Saroja and Hiriyannayya)

ಈ ಹೆಂಗ್ಸು ಈ ಮನೇಗ್ಬಂದದ್ದು. ಮನೇದುಡ್ಡ ದೋಚ್ಕೊಂಡ್ಹೋಗೋಕೇ ಹೊರ್ತು.... ಮನೇ ಶುಭಕ್ಕಲ್ಲಾಂತ ! ನೋಡವಳ್ಕೈಲಿ...ಯಾರ್ದಾ ಪಚ್ಚೆ ಉಂಗ್ರ ?

ಬೋರಣ್ಣ : ಅಯ್ಯಯ್ಯೋ...ನಮ್ದಣೇದು!

ಕಪ್ಪಣ್ಣ : ಪಕ್ಕದಲ್ಲಿರೋದ್ನೋಡು. ನಾನೀ ಹೊಸ್ಲು ಮೆಟ್ಟಾಗ್ನಿಂದ ಚಿಕ್ಕ ಯಜಮಾನ್ರ ಕೈಲೇನೇವೆ ನೋಡ್ತಿದ್ದ ವಜ್ರದುಂಗ್ರ !

ಬೋರಣ್ಣ : ಅಯ್ಯಯ್ಯೋ...ಅಯ್ಯಯ್ಯೋ ! ಅದೂನೂವೆ. ನನ್ನಟ್ಟಿಟ್ಕೊಂಡ ನನ್ನ ದಣೀ ಕೈಲಿದ್ದದ್ದೇವೆ !

ಕಪ್ಪಣ್ಣ : (sternly)

ಬೋರಾ—ನನಿಗೇನೂ ಚಿಂತೆಯಿಲ್ಲ. ಹ್ಯಾಗಾದ್ರೂ ಗಂಡ್ಸು—ಎಲ್ಲಾದ್ರೂ ನನ್ನ ಹೊಟ್ಟೆ ಪಾಡು ನಿಭಾಯ್ಸಿಕೋತೇನೆ. ಆದ್ರೆ ಬಂದೆ....ಈ ಮನೆ ಉಪ್ಪು ತಿಂದೆ! ಹಾಲ್ಕುಡಿದೆ! ಇದ್ದ ಮಟ್ಟಿಗೂ ಈ ಮನೇಗೆ ನನ್ನ ಕೃತಜ್ಞತೆ ತೋರ್ಸೇ ಹೋಗ್ತೇನೆ. ದೊಡ್ಡಮ್ಮಾವ್ರನ್ನ ಕರಕೊಂಡ್ಬಾ. ಆಕೇಗೆ ತಿಳೀಬೇಕು ಈ ಅನಾಹುತ!

(Bora exits C and shouts)

ಬೋರಣ್ಣ : ನಾಣಪ್ಪಾ! ಅವ್ವಾ! ದೊಡ್ಡವ್ವಾ! ಬರ್ರೀ! ಬ್ಯಾಗ್ನ ಮುಂದಿನ ಕೋಣೆಗೆ! ಚಿಕ್ಕೋರೆ...ನಾಣಪ್ಪಾ...ದೊಡ್ಡವ್ವಾ...

(shreiks and the three rush to C)

ಕಪ್ಪಣ್ಣ : ಸಾರ್....ಅಲ್ಲ....madam as the case may be....authority letter-writer........One-ten ಕೊಟ್ಟಿದ್ದೇನೆ, V. P.........Therefore etiquette cannot be wrong...even if wrong...ನೀವೇನೂ ಸೀಮೆದೊರಸಾನಿಗಳಲ್ಲ........ ಇಷ್ಟು ಜನರೆದ್ರೂಗೆ ಕೇಳ್ತೇನೆ ...... ಧನವಂತರ ಕುಟುಂಬದಲ್ಲಿ ಹುಟ್ಟಿದ್ರೂನೂವೆ....ತನ್ನ ಮನೆ ತನಾನ ಮರೆತು....ತಾಯಿ ಇಲ್ದೀ ಕೂಸ್ನ........

(approaching Rama Rao and rolling his Gandhi Cap)

ಈ ಕೂಸ್ನ ಅದರ ಅಜ್ಜಿ ಮಡಿಯಿಂದ ಸೆಳ್ದು....ಅದನ್ನ ಪುಸಲಾಯ್ಸಿ...ಪಿಂಗಾಣಿ ಪಾತ್ರೇಲಿ ಬೋಜನ ಮಾಡ್ಸಿ....ಜಾತಿ ಕೆಡ್ಸಿ....ಅದರ ವಸ್ತ್ರಗಳನ್ನೆಲ್ಲಾ ವಿದೇಶೀ ಮಾಡಿದಲ್ದೆ....

(Dragging out Rama Rao)

ಈ ಮುಂದಕ್ಬರೋ ಈ ಶಿಶೂನ ಮೋಸಗೊಳ್ಸಿ...ಆತನ ತಾತಾವ್ರು ಬೆಟ್ನಲ್ಲಿ ಹಾಕ್ಕೊಂಡಿದ್ದ ಪಚ್ಚೆ ಉಂಗ್ರಾನೂ ಸುಲ್ಕೊಂಡು.......

ರಾಮರಾವ್ : Don't say it...ನಾನೇ ಕೊಟ್ಟಿದ್ದು.

ಕಪ್ಪಣ್ಣ : ಶಾಂತಿ ತೊಗೊಳ್ಳಿ ಸಾರ್...ನಿಮ್ದಲ್ಲ ಬೆಲೆಯುಳ್ಳ ಉಂಗ್ರ...ನಿಮ್ಮ ಕುಟುಂಬದ್ದು! ಅಂತಾವು ಸಾವಿರ ಉಂಗುರಗಳು ಕುಟುಂಬದಲ್ಲಿ ಎಷ್ಟಿದ್ರೂನೂವೆ...ಒಂದನ್ನಾದರೂ ಕೊಡೋ ಹಕ್ಕು ದೊಡ್ಡಮ್ಮಾವ್ರದು! ನಿಮ್ದಲ್ಲ!...ಮಾತ್ಗಾಡ್ಬೇಡಿ........

(to Subbamma)

ಇದೊಂದೇ ಅಲ್ಲ ಅಮ್ಮಾವ್ರೇ!....ಕೇಳ್ತಿಧೀರಾ, ನಾರಾಣಪ್ಪನೋರೇ! ನಾನ್ಹೊಸ್ಬ. ನನ್ನಂಬ್ದಿದ್ರೂನೂವೆ...ಬೋರ ಹಳಬ ಮನೇಗೆ...ಅವನ್ನಂಬ್ತೀರಾ?...ಬೋರಣ್ಣಾ...ನೋಡ್ಲಿಲ್ವೆ ನೀನು? ಚಿಕ್ಕ ಯಜಮಾನ್ರುನೂವೆ...ಲಾಗಾಯ್ತಿನಿಂದ...ಕಿರುಬೆಟ್ಟಿನಲ್ಹಾಕ್ಕೊಂಡಿದ್ದ ದೊಡ್ಡೆ ಜಮಾನ್ರ ವಜ್ರದುಂಗ್ರಾನಾ...ಈಕೆ ಕೈಗೆ ಹಾಕಿದ್ದೂ...

(to Subbamma in a Bull-dog tone)

ಒಟ್ನಲ್ಲಿ ಹೇಳ್ತೇನಮ್ಮ...ನಾನು ಮನೇ ಬಿಟ್ಟು ಹೋಗೋನು. ಬ್ರಾಹ್ಮಣ...ಬಡವನಾಗಿ ಬಂದೆ...ನಿಮ್ಮ ಅನ್ನಾನೂ ತಿಂದೆ. ಅಲ್ಪಕಾಲ....ಈಗ ಹಿಂತಿರುಗಿ ಹೋಗ್ತೇನೆ. ಆದರೆ ಒಂದು ಪ್ರತ್ಯುಪಕಾರ ನಿಮ್ಕುಟುಂಬಕ್ಕೆ. ಕೇಳೀಮ್ಮಾ...ಬಂದ ಒಂದೆರಡು ದಿನ್ದಲ್ಲಿ ದೊಡ್ಯಜಮಾನ್ರ ಪಚ್ಚೆಕಲ್ಲುಂಗ್ರಾನಚಿಕ್ಕೋರ್ನ ಮೋಸಮಾಡ್ಕ್ಯೊ...ವಜ್ರದುಂಗ್ರಾನ ಯಜಮಾನ್ರಿಗೆ ಬೆಪ್ಪು ಹಿಡಿಸ್ಕ್ಯೊ... ದೋಚ್ಕೊಂಡಾ ಈ ಮೋಹಿನಿ...

ಹಿರಿಯಣ್ಣಯ್ಯ : [Desperately]

Not at all........ಆಕೆ ಏನೂ ದೋಚ್ಕೊಳ್ಳಿಲ್ಲಾಮ್ಮಾ...ನಾನೇ ಕೊಟ್ಟಿದ್ದು...

ಕಪ್ಪಣ್ಣ : ಹುಷ್ಯೋ! ಬಾಯ್ಮುಚ್ಚಿ ಸಾರ್. Commit ಮಾಡ್ಕೋಬೇಡಿ! ನೋಡಿದ್ರಾ. ಚಿಕ್ಕ ಯಜಮಾನ್ರನೂ "ನಾನೇ ಕೊಟ್ಟೆ" ಅಂಬೋ ಹುಚ್ಚು ಹಿಡ್ಯೋ ಹೆಂಗ್ಸು ...ಇನ್ನಗಾನಾ ಕುಟುಂಬದಲ್ಲಿ ಇದ್ರೋ....ಒಂದೊಂದು ದಿನಕ್ಕೆ ಎರಡೆರಡು ಉಂಗ್ರ ಅಲ್ವೇ.... ಚಿಕ್ಕೋರನ್ನ ಯಜಮಾನ್ರಿಗೂ ಹಿಡಿಸಿದ್ದ ಚಪ್ಪ...ನಿಮಗೂ ಅಲ್ದೆ ಸಮಸ್ತ್ರ ತಿಳ್ದ ಬೋರಣ್ಣೋರಿಗೂ, ನಾರಣಪ್ಪನೋರಿಗೂ ಹಿಡ್ಸಿ ಇನ್ನೆಂದು ತಿಂಗ್ಳೊಳ್ಗೆ ಕುಟುಂಬಾನೆಲ್ಲಾ ನುಂಗೋಕೆ ಬಂದಿರೋ 'ಮಾರಿ' ಅವಳು. ಜೋಕೆ! ಜೋಕೆ!! ಜೋಕೆ!!! ನಾನು ಪಟ್ನವಾಸ್ದಲ್ಲಿ ಹುಟ್ದೋನು....ಈಕೆ ಹಾಗೆ. ಇಂಥಾವ್ರ ತಕ್ಕಗಳ್ನ ಅರಿತೋನು. ನಿರ್ಮಲಮನಸ್ಕರಾದ ನಿಮ್ಮವ್ರ ಚಪ್ಪತನಾನ ತಿಳ್ಕೊಂಡು ನಿಮಗೆ ಈಕೆ ಇದ್ವಗರ್ಜ ಮಾಡಿದ. ಇನ್ಮುಂದಕ್ಕೊ ಮಾಡುಹುದಾದ ಅನ್ಯಾಯಾನ ಹೇಳಿದ್ದೇನೆ. ಜೋಕೆ! ಜೋಕೆ!! ಜೋಕೆ!!! ಬರ್ತೇನೆ ಬೋರಣ್ಣ,

(squeezing Bora's hands)

ನನ್ನ ಟ್ರಂಕು ಹಾಸ್ಗೇನ ನನ್ನ ಕೈಯಿಂದ ಒಂದ್ಸಾಸೂ ತಗೊಳ್ದೆ ಸ್ಟೇಷನ್ಗೆ ಸಾಗಿಸಿದಕ್ಕೆ ಚಿರರುಣಿಯಾಗಿದ್ದೇನೆ! ಇಲ್ಯಾರೂ ನನ್ನಂಬೋ ಹಾಗಿಲ್ಲ. ನಿಮ್ಮನ್ನಾದರೂ ನಂಬ್ತಾರು.... ಒಬ್ಬೆಂಗಸು ಮನೇವ್ರ ಕಣ್ಣೆದುರಿಗೆ ಮನೇ ಒಡವೆಗಳ್ನ ದೋಚ್ತಿದ್ರೂ....ಅವಳ್ನ ನಂಬ್ತಾರೇ ಹೊರ್ತು....ನನ್ನಾಗ್ಲೀ....ಬೋರಣ್ಣೋರೆ, ನಿಮ್ಮನ್ನಾಗ್ಲೀ....ಕುಟುಂಬದ ಕೆಲ್ಸದಲ್ಲಿ ಕುಗ್ಗಿ ತಲೇ 'ನರ್ತ ನಾರಣಪ್ಪನೋರ್ನೇ ಆಗ್ಲಿ ನಂಬೋ ಹಾಗಿಲ್ಲ. ಈ ದೊಡ್ಡ ಕುಟುಂಬ....ಸರ್ವರಿಗೂ ನಮಸ್ಕಾರ....ಬರ್ತೇನೆ.

[Exit]

ನಾರಾಯಣ : [to Subbamma]

ಅಮ್ಮಾ....ಹೋಗ್ತಿಧಾನಮ್ಮಾ ಆತ....

ಬೋರಣ್ಣ : ಅವ್ವಾ!

[Points out to door that K is exitting and exits]

ಸುಬ್ಬಮ್ಮ : [to herself]

"ಪಚ್ಚೆ ಉಂಗ್ರ"...."ವಜ್ರದುಂಗ್ರ"....ಮಗೂನೆ ತಾನೆ ಕೊಟ್ಬಿಟ್ಟ!

[to Saroja]

ಇದು ನಿಜ್ವೇನಮ್ಮಾ ?

ಸರೋಜ : [suiting superciliously]

ಇಷ್ಟೊತ್ತಿಗೆ ಕೇಳ್ತೀರಾ? ನಿಮ್ಮಗ. ನಿಮ್ಮೊಮ್ಮಗ ಇಬ್ರೂ ಎದುರ್ಗಿರೋವಾಗ ನನ್ನೇಕ್ ಕೇಳ್ತೀರಾ? ಅವರ್ನೆ ಕೇಳಿ.

ಸುಬ್ಬಮ್ಮ : ಯೋಸ್ಸೇಳಿದ್ರೂನೂವೇನಮ್ಮಾ....ಅವರಿಬ್ರೂ ವಯಸ್ಕರಾದ್ರೂನೂವೆ ತಿಳಿದೋರಲ್ಲ. ಹಳ್ಳೀಲೇ ಬೆಳದೋರು!...ನಿಮ್ಮ ಹಾಗೆ B.A. ಗ್ಳಲ್ಲಾ ಪ್ಯಾಸ್ ಮಾಡಿ ಪ್ರಪಂಚದ ಅನುಭವ ತಿಳಿದೋರಲ್ಲ!........ನೀವು ಹೀಗೆ ಕುಟುಂಬದ ಒಡವೆಗಳ್ನ...

ಸರೋಜ : ಚೆನ್ನಾಗಿ ಕುಟುಂಬದ ಒಡವೆಗಳಮ್ಮಾ!

[Sardonically]

ಹ್ಹ! ಹ್ಹ! ಹ್ಹ! ಹ್ಹ! ಮಕ್ಕಳಂತೆ! ಒಬ್ಬರಿಗೆ ೫೦ ವಯಸ್ಸು. ಅವರ ಮಗನಿಗೆ ಇಪ್ಪತ್ತು ...ಒಂದೂ ತಿಳೀದಂತೆ! ಹ್ಹ! ಹ್ಹ! ಹ್ಹ! ಹ್ಹ!

ಕಪ್ಪಣ್ಣ : [rushing into the room]

ಬೋರಣ್ನೋರೆ!....ಸಾರ್. ನಾನು ರಾಕ್ಷಸೀಂತ ಕೂಗಿದ್ದು ತಪ್ಪೇ ಸಾರ್....Look at her face....

[to Rama Rao]

ಚಿಕ್ಕೋಪ್ರೆ ನೋಡೀ ಸಾರ್....ಅಮ್ಮಾ, ಇನ್ನೂ ಅಪ್ನಂಬಿಕೇನೇ ನನ್ನ ಮೇಲೆ ?

[appealingly]

ನಾರಾಪ್ಪನೋರೇ, ತಾವಾದ್ರೂ ಹೇಳಿ ಅಮ್ಮಾವ್ರಿಗೆ....ಬೋರಣ್ನೋರೆ, ಅಮ್ಮಾವರಿಗೆ ಹೇಳಿ ನೀವಾದರೂ....ಈಕೆ ಈ ಕ್ಷಣವೇ ಹೊರಟ್ಹೋಗೋದು ಮೇಲು ಅಂತ.

ಸರೋಜ : ಹಾಗೆಲ್ಲಾ ಹೇಳ್ಬೆಯೋಜ್ನ ಇಲ್ಲ! Mr. Jodidar Rama Rao.... minor ಅಲ್ಲ, majoroo. Bangaloreನಲ್ಲಿ one month's notice each way contract ಬರ್ಸ್ಕೊಂಡಿದ್ದೇನೆ, ಲಾಯ್ರು ಎದುರೀಗೆ. Therefore salary ಪ್ರಕಾರ 100 Rs. for this month plus 100 Rs. in lieu of notice. Total Rs. 200 ಇಟ್ಬಿಡಬೇಕು.

ಸುಬ್ಬಮ್ಮ : [Pathetically clutching at Kappanna's arm]

ಕಪ್ಪೂ! ಏನ್ಹೇಳ್ತಿಧಾಳೆ ಈ ಕಿರಾತೀ ?

ಕಪ್ಪಣ್ಣ : ಬಲು ಸೂಕ್ಷ್ಮಾಮ್ಮಾ ಹೆಂಗ್ಸು. ನಮ್ಮ ಚಿಕ್ಕೋರು ತನ್ನ signಗೆ ತಾನೇ ಜವಾಬ್ದಾರಿ ಆಗಿರೋ ವಯಸ್ಸು ಅವರ ಬಾಯಿಂದಾನೇ ಅರಿತ್ಕೊಂಡು...ಈ ಉಂಗುರ, ಎರಡು ಉಂಗ್ರುಗಳನ್ನೂ ಅವ್ರ ಕೈಯಿಂದಾನೇ ಸುಲ್ಕೊಂಡದ್ದಲ್ದೆ....ಈ ತಿಂಗ್ಳ ಸಂಬ್ಳ ೧೦೦ ರೂಪಾಯಿ, ಅಲ್ದೆ ಡಿಸ್‌ಮಿಸ್ ಆದದ್ದಕ್ಕೆ ಇನ್ನೊಂದ್ನೂರ್ರೂಪಾಯಿ ಲಾಯ್ರುಮೂಲ್ಕ ಕೋರ್ಟಿನಲ್ಲಿ ಸುಲಕೊಳ್ಳೋಕೆ ಅವಳ್ಗಿರೋ ಶಕ್ತೀನ ತೋರ್ಪಡಿಸ್ಕೊಳ್ತಿದ್ಧಾಳೆ....

[sternly to Saroja]

Devi or **Devva**, whatever you call yourself.

ಸರೋಜ : [airily]

You are right. That is my plot. ನನ್ನ things ಎಲ್ಲಾ ಮೇಲಿವೆ. ಹದಿಮೂರು in number. ಎಲ್ಲಾ packed.

(ನಗುತ್ತಾ)

ಹ್ಹ! ಹ್ಹ! ಹ್ಹ! ಹ್ಹ! ನನಗ್ಗೊತ್ತು ಹೀಗೊಂದ್ವೇಳೆ ಆಗುತ್ತೇಂತ! ಅವುಗಳಲ್ಲೆಲ್ಲಾ ನನ್ನ Harmonium, ವೀಣೆ and ಪಿಟೀಲು ಮುರೀದ್ದಾಗೆ stationಗೆ ಸಾಗ್ಸಿ ನನಗ್ಬರಬೇಕಾದ ಇನ್ನೂರು ರೂಪಾಯ್ನ ಕೊಟ್ಬುಬಿಟ್ರೆ ನನ್ನ ಲಾಯರ್ಗೂ ಈ ಕುಟುಂಬಕ್ಕೂ ತಕರಾರು ಏನೂ ಇರೋದಿಲ್ಲ.

ಸುಬ್ಬಮ್ಮ : (ರೇಗಿ ಸರೋಜಳ ಮೇಲೆ ಬೀಳಲುದ್ಯುಕ್ತಿಸುತ್ತಿರುವ ಕಪ್ಪಣ್ಣನನ್ನು ಹಿಡಿದು ನಿಲ್ಲಿಸಿ)

ಶಾಂತಿ ತಗೋ ಕಪ್ಪು, ಮನಸ್ಸಿಗೆ! ನಾನ್ನೋಡ್ಕೋತೇನೆ! ನಾರಾಯಣಾ, ಆ ತಾವರೆಕೆರೆ ಯಿಂದ ತೆಂಗಿನ ತೋಟ್ದ ಬಾಬ್ತು ಬಂದ ದುಡ್ನಲ್ಲಿ ಎರಡ್ನೂರು ರೂಪಾಯಿ ನೋಟುಗ್ಳು ಎತ್ಕೊಂಡ್ಬಾ! ಜೋರಾ. ಈ ಪಿಶಾಚಿ ಸಾಮಾನುಗ್ಳು ಒಂದೂ ಬಾಕೀ ಇಲ್ದೆ ಸ್ಟೇಷನ್ನಿಗೆ ಸಾಗ್ಸಿ ಅಲ್ಲೆ ಇರು.

[exit Bora R, exit Narayana interior of C]

ಕಪ್ಪಣ್ಣ : [to Saroja]

ನಿಮ್ಮ ಸಂಬಳಾನೂ ಆಯ್ತು. ನಿಮ್ಮ ಸಾಮಾನು...

[Indicating Bora who with unbelievable energy is shifting her things R to L]

ಭದ್ರವಾಗಿ ಹೊರಪಡ್ತಿವೆ....ದಯವಿಟ್ಟು....

[snatching the two hundred Rupee notes from Subbamma who has just received them from Narayana]

ಇಲ್ಕೊಡೀಮ್ಮಾ........ನಿಮ್ಕೈಯಿಂದ ಯಾಕ್ಕೊಡ್ಬೇಕು ಈ ಹಾಳ್ದುಡ್ಡು!

[to Saroja]

ತಾವೂನೂವೆ ದಯವಿಟ್ಟು ತಮ್ಮ ಸಾಮಾನುಗಳ ಜೊತೇಗೆ ತಾವ್ಕೇಳ್ದ ಕಾಸಿದ್ದೂ ಎತ್ಕೊಂಡು ಹೊರಟ್ಹೋದ್ರೆ ಸರ್ವರಿಗೂ ಶುಭ....

[Whipping out his fountain-pen and tearing out a blank leaf from his diary and laying it on table L.F.]

But ಬಂದ ದುಡ್ಗೆ ಒಂದು ರಸೀತಿ ಬರೆದ್ಬಿಟ್ಟೇ ನೀವಿಲ್ಲಿಂದ್ಹೊರಡೋದು ...... ಮುಂದಕ್ಕೆ ನೀವ್ಹೇಳಿದ ನಿಮ್ಮ ಲಾಯರೀನ ತೊಂದ್ರೆ ನಮ್ಕುಟುಂಬಕ್ಕೆ ಇಲ್ದ ಹಾಗೆ...

[Saroja approaches table, seats herself and writes out a receipt with a sweet smile]

(in a very very stern voice)

ಅಲ್ದೆ ಆ ಎರಡು ಉಂಗುರಗಳ್ನ ಇಲ್ಲೇ ಇಟ್ಬಿಟ್ಟು ಹೋಗ್ಬೇಕು. ಯಾರನ್ನ ಪಟಾಯಿಸಿದ್ರೂ ಈ ಕುಟುಂಬದಲ್ಲಿ ನನ್ನ ಬೆದಸೋ಼ೀ ಹಾಗಿಲ್ಲ! ಒಂದು ನಿಮಿಷದಲ್ಲಿ ಆ ಉಂಗುರಗಳು ನೀವು ಕೆಳಗೆ ಇಡದ ಪಕ್ಷದಲ್ಲಿ Police Inspector ಗೆ ಹೇಳಿ ಕಳಿಸ್ತೇನೆ, ಅತನ್ನ ಕರ್ದು... "ಇವು ಕದ್ದ ಉಂಗುರಗಳೂಂ"ತ case ಮಾಡಿ........ನೀವು court ನಲ್ಲಿ ನಿಮಗೆ ಸಜಾ ಆಗೋ ಆಪತ್ತು ತಪ್ಪಿಸಿಕೊಳ್ಳೋಕೆ ಇದೊಂದೇ ಅವಕಾಶ? ತೆಪ್ಪನೆ ಆ ಉಂಗುರಗಳಿಟ್ಬಿಟ್ಟು ಹೊರಟು ಹೋಗಿ!

ಸರೋಜ : (dropping the currency notes into her hodica from her neck)

ಸಾಮಾನೆಲ್ಲಾ ಹೊರಗ್ಹೋಯ್ತೇ, ಬೋರಾ...ಸ್ಟೇಷನ್ನಿಗೆ ಹೋಗು. ಬಂದ್ಬಿಟ್ಟೆ ನಾನು. ಇನ್ನೊಂದು ಜಟ್ಕಾನೂ ಕಳ್ಸು ಅಲ್ಲಿಂದ.

ಕಪ್ಪಣ್ಣ : ಹೌದು, ಬೋರಪ್ನೋರೆ, ಎಷ್ಟಕ್ಕೆಷ್ಟು ಬೇಗ ಈ ಪಿಶಾಚಿ ಸಾಮಾನುಗಳ್ನ ಸ್ಟೇಷನ್ನಿಗೆ ಸಾಗ್ಸಿ ಅಲ್ಲಿಂದ double charge ಆದ್ರೂ ಕೆಡ್ತು......ಒಂದ್ಜಟ್ಕಾನ ಕಳ್ಸಿ...ಈಕೆ ಮನೆಯಿಂದ ಹೊರಡೋವರೆಗೂ...ನಿಮ್ಮನ್ನ ಬಿಟ್ಹೋದ ದೊಡ್ಡ ಧಣಿ ಕುಟುಂಬಕ್ಕೆ ಹಾನಿ!

(Bora with extra-ordinary agility shifts the last of the luggage and exits L)

ಸರೋಜ : (to Kappanna)

ಇದೇನಿದು! Police ಗೀಲಿಸ್ ಅಂದ್ರಲ್ಲಾ...ಆ ವಿಚಾರ ನಿಮಗೇನಾದ್ರೂ ಗೊತ್ತೇ?

ಕಪ್ಪಣ್ಣ : ನನಗ್ಗೊತ್ತಿಲ್ದಿದ್ರೂನೂವೆ ಆ ಎರಡು ಉಂಗುರಗಳ್ನ ಈ ಕ್ಷಣ ಇಲ್ಲಿ ಇಟ್ಬಿಡದಿದ್ರೆ ನಿಮಗ್ಗೊತ್ತಾಗುತ್ತೆ.

ಸರೋಜ : (laughing)

ಹ್ಹ ! ಹ್ಹ !! ಹ್ಹ !!! ಹ್ಹ !!!! ಈ ಕುಟುಂಬವೆಲ್ಲಾ ಹಳ್ಳೀ ಗಮಾರ್ರಾದ್ರೂನೂವೆ ನಿಮಗಾದ್ರೂ ಸ್ವಲ್ಪ ಬುದ್ಧಿ ಇದೆ ಅಂತ ತಿಳ್ಕೊಂಡಿದ್ದೆ !...ಹದಿಮೂರ್ರಾವಾನ್ಸವೋತ ಮನೇಗ್ಬಂದು, ಮನೆ Jodidar Rama ರಾಯರ ಕೈಯಿಂದ appointment salary certificate ಕೈಲೂ ಇಟ್ಕೊಂಡು, ಬಂದ ಮೂರ್ದಿನದಲ್ಲಿ ಇನ್ನೂರ್ರೂಪಾಯ್ನೂ ಸಂಪಾದಿಸ್ಕೊಂಡು ಹೋಗ್ತಿರೋ ನಾನು ಹೆಂಗ್ಸು ಮಟ ಮಟ ಮದ್ಯಾಹ್ನ...ಈ ಎರಡೂ ದಾಂಡಿಗರ ಕೈಯಿಂದ ಉಂಗುರಗಳ್ನ ಕದ್ದುಕೊಂಡು ಹೋದೇಂಬೋ ಕೇಸ್ನ...magistrate ಎದುರಿಗೆ ನೀವು prove ಮಾಡೋದಿರ್ಲ್ಲೀ...ಕೋರ್ಟಿನಲ್ಲಿ ಇದೇ ಹಿರಿಯಣ್ಣಯ್ಯನೋರ ಕೈಲಿ "ದೇವರು ಸಾಕ್ಷಿಯಾಗಿ ಈ ಉಂಗ್ರಾನ ನಾನೇ ಈಕೆಗೆ ಕೊಟ್ಟಿದ್ದೂ"ಂತ ಕೈಫಿಯತ್...Best lawyer in Bangalore ಕೈಲಿ ಮೊರಡ್ನೋದಲ್ದೆ...ಈ ಕೇಸೇನು ? "ಕೆಣಕಿದ ಹೆಂಗ್ಸು ಕೆಂಡಕ್ಕಿಂತ ಕೇಡೂ"ಂಬೋ ಸಾಮತೀನ ತೋರಿಸ್ತೇನೆ ! ಐವತ್ತು ವರ್ಷದ ಮನುಷ್ಯ...ಇಂಗ್ಲಿಷ್ ರೂಢಿ ತಿಳ್ದೋನು...ಮಗನಿಗೆ type-writer ಮಾಡೋಕೆ ಬಂದ ಹೆಂಗಸಿನ ಬೆರಳ್ಗೆ ಸಾವಿರಾರು ರೂಪಾಯಿ ಬೆಲೆ ಬಾಳೋ ವಜ್ರದುಂಗ್ರ ತೊಡಿಸ್ದ ಇಂಗ್ಲಿಷ್ ಅರ್ಥಾನ...ಆ ಇಂಗ್ಲಿಷ್ ಜಡ್ಜಿ...ನಾನು ಇಪ್ಪತ್ತುಸಾವಿರ ರೂಪಾಯಿ damages, breach of promise from marriage ಕೇಸ್ ಹಾಕ್ದಾಗ ಗೊತ್ತಾಗುತ್ತೆ...ನನ್ಬುದ್ಧೀನೂ...ಈ ಕುಟುಂಬದ ಯೋಗ್ಯತೇನೂ ಪ್ರಪಂಚಕ್ಕೆಲ್ಲಾ ಗೊತ್ತಾಗುತ್ತೆ.... ಈ ಮನೇವರ್ನೆಲ್ಲಾ ಕೋರ್ಟಿಗೆಳ್ಯೋವಾಗ ಈ ಊರೋರೆಲ್ಲಾ ಈ ಕುಟುಂಬಾನ ನೋಡಿ ಪಕ್ಕೆ ಪಕ್ಕೆಗಳ್ನ ಹಿಡ್ಕೊಂಡು "ಪಕಪಕಾ"ಂತಾ ನಗ್ತಾರಲ್ಲಾ...ಆಗ ಗೊತ್ತಾಗುತ್ತೆ...ನನ್ಬುದ್ಧೀಗೂ ನಿಮ್ಬುದ್ಧೀಗೂ ವ್ಯತ್ಯಾಸ.

(sails to L)

ಕಪ್ಪಣ್ಣ : (ಹಣೆಯನ್ನು ಚಚ್ಚಿಕೊಳ್ಳುತ್ತಾ)

(aside...to Saroja)

ಹಯ್ಯಯ್ಯೋ, ಅಮ್ಮಾ, ಆ ಹಾಳುಂಗರಗಳ್ನ...ದೇವ್ರು ಕೊಟ್ಟಿದ್ದು ಎಷ್ಟೋ ಇದೆ ಈ ಕುಟುಂಬಕ್ಕೆ...ನೀವೂ ತಿಂದಿಧೀರಾ ಈ ಮನೆ ಅನ್ನ...ನಾನು ನಿಮ್ಮ ಹಾಗೇ ತಿಂದು ನಾಳೆ ಬಿಟ್ಟು ಹೋಗೋನು...ತಿಂದುಪ್ಪಿಗೆ ಎರಡು ಬಗೀಬಾರ್ದು ! ಬೇಕಾದ್ರೆ ಆ ಹಾಳು ಎರಡುಂಗ್ರಾನೂ ನುಂಗ್ಕೊಂಡು ಹೋಗೀಮ್ಮಾ. ಕುಟುಂಬಾನ್ಮಟ್ಟಿಗೆ...

(drops to his knees at Saroj's feet and with arms aloft)

ಹೆಂಗ್ಸಿನ ಕಾಲ್ಗೆ ಬೀಗ್ಬೀಳೋನಲ್ಲಾಮ್ಮಾ ನಾನೂ........ಆದ್ರೂ ಕೇಳ್ಕೋತೇನೆ... ಮುಂದಕ್ಕೆ ನಿಮ್ಮನ್ನೂ ಕೆಲವು ಕಾಲ ನಂಬಿ ಈಗ ನನ್ನಂಬ್ತಿರೋ ಈ ಕುಟುಂಬಾನ...ನೀವು ಹೇಳ್ದ damages for breach of promise ಗೆ ಮನೇಗೆ ಹಿರಿಯರಾದ ಹಿರಿಯಣ್ಣಯ್ನೋರ್ನ ಕೋರ್ಟಿಗೆಳೀಬೇಡೀಮ್ಮಾ...ಏನೋ ಬಂದ್ರಿ. ನಿಮ್ಮನ್ಯಾರೂ ಬಯ್ಯೋದಿಲ್ಲ...ಬಂದದ್ದಕ್ಕೆ ರೂಪಾಯಿಲ್ದೆ ಉಂಗ್ರಗಳೂ ಲಾಭ ಆಯ್ತು...ದಮ್ಮಯ್ಯಾ. ಹೋಗ್ಬೇರಿ ! ದೊಡ್ಡ ಕುಟುಂಬಾಮ್ಮಾ ಇದು. ಊರೆಲ್ಲಾ ಕಣ್ಣೆತ್ತಿ ನೋಡ್ತಿರೋ ಕುಟುಂಬ, ಇದ್ನ ಕೋರ್ಟಿಗೆಳೀಬೇಡೀ... ನಿಮ್ಕಾಲಿಗ್ಬೀಳ್ತೇನೆ.

ಸುಬ್ಬಮ್ಮ : (Coming forward...in a strong voice)

ಕಪ್ಪೂ !...ಇಲ್ಲಾ...ಗಂಡ್ಸು ! ನೀನ್ಯಾಕ್ಬೀಳೋದು ಅವಳ ಕಾಲ್ಗೆ. ಕೊಟ್ಬಾಬಿಟ್ರೆ ಅವಳು ಕೇಳಿದ್ದುಂಡ್ನ...ಇನ್ನೇನು...ಆ ಹಾಳು ಉಂಗ್ರಗಳ್ಗೇಂತ ಬೇಡ್ಕೊಳ್ತಿಧೀಯಾ ? ಆ ಶನಿ ಕೈ ಮುಟ್ಟಿದುಂಗ್ರ ಗಳು ನಮಗಿನ್ಬೇಡ...ತಕ್ಕೊಂಡ್ಹೋಗ್ಲಿ ಅದ್ನೂವೆ.

ಕಪ್ಪಣ್ಣ : (Throwing himself abjectly at Subbamma's feet)

ಹಯ್ಯೋವ್ಮಾ, ನಾನ್ಯಾವದ್ಲಾನೆ ಏನ್ಹೇಳ್ಲೀ !...ಇಲ್ಲ, ಆ ಹೆಂಗ್ಸಿನ ಘಟ್ಟಿಗತನ ನಾನೇನ್ಹೇಳ್ಲಿ ? ಇಲ್ಲ. ನಮ್ಮ ಚಿಕ್ಕಜವಮಾನ್ರ ಮಂಕುತನಾನ್ಹೇಳ್ಲೇ ? ಹಯ್ಯೋವ್ಮಾ. ಕೋರ್ಟ ಗೆಳದ್ಬಿಡ್ತಾಳೆ. ನಮ್ಮನ್ನೆಲ್ಲಾ...High Court ಜಡ್ಜಿ...ಇಂಗ್ಲಿಷ್‌ನೋನೂವಾ ! ಏನ್ಲಾ... ಆ...ಆ...ಕೆ ಹೇಳ್ದಾಗೆ...ಇಂಗ್ಲಿಷ್ ಪದ್ಧತೀಲೇ ನೋಡೋನು...

(to Hiriyannayya)

ಕೋಪಿಸ್ಕೋಬೇಡೀ ಸಾರ್ ! ಅನ್ಯಾಯ ! ಮಂಕು ಅವ್ಮಾ ನಮ್ಮ ಚಿಕ್ಕಜವಮಾನ್ರ !... (bows his head down)

ಹಿರಿಯಣ್ಣಯ್ಯ : What do you mean...ಮಂಕು ?

ಸುಬ್ಬಮ್ಮ : ಸುಮ್ನೆ ಇರ್ಮಗೂ ! ನೀನು ಮಂಕೂಂತ ಊರ್ಗೆಲ್ಲಾ ಗೊತ್ತು ! ತಪ್ಪಿರು.

(stroking Kappu's head)

ಕಪ್ಪೂ ! ಮಗು ಎಷ್ಟು ಮಂಕ್ಯಾನೇ ಆಗ್ಲಿ...ಅವಳ ಸಾಮಾನಾಯ್ತು. ಅವಳು ಕೇಳ್ದ ರೂಪಾಯಾಯ್ತು...ಆ ಉಂಗ್ರಗಳಾಯ್ತು ; ಇನ್ನೇನು ? ನಿನ್ನ ಅವಳ ಕಾಲ್ಗೆ ಬೀಳೋಹಾಗೆ ಬೆದರಿಸ್ತಾಳೇ ?........ಅದ್ಹ್ಯಾಗೆ ಕೋರ್ಟಿಗೆಳದಾಳು ನಮ್ಮನ್ನ ?

ಕಪ್ಪಣ್ಣ : (standing up)

ಅಧೇವ್ಮಾ ಅವಳ ಸೂಕ್ಷ್ಮ. ಅವಳು B.A. ಪ್ಯಾಸ್ ಮಾಡಿದ ಸೂಕ್ಷ್ಮ ! ಮನೇ ಬಿಟ್ಹೋಗ್ತಿದ್ದೋಳ್ನ ಬೋರಣ್ಣೋರು ಮನೇವ್ರಿಗೆಲ್ಲಾ ಬುದ್ಧಿ ಕಲ್ಸ್ಕೋಗ್ಬೇಕು ಅಂತ ಬೇಡ್ಕೊಂಡ ಹಾಗೇನೇವೆ ಬುದ್ಧಿ ಕಲಿಸ್ತಿಧಾಳೇವ್ಮಾ, ಮನೆಯುವರ್ಗೂ ಅಲ್ದೆ ಸರ್ವವೂ ಶ್ರೀದ್ಧಹಂಕಾರದಲ್ಲಿ ಮುಳುಗಿದ್ದ ನನಗೂನೂವೆ ! ಕೇಳೀವ್ಮಾ, ನಾವೇನೋ ಪೋಲೀಸ್ನಿಂದ ಇವಳ್ನ ಮುಚ್ಕೋವಾಗಿಲ್ಲ. ಇವಳ್ಹತ್ರ ಇರೋ ಸರ್ವಸ್ವವೂ ಇವಳ್ಗೆ ನಾವ್ನಾವೇ ಕೊಟ್ಟದ್ದು. ಹಾಗೆ ಕೊಡದಿದ್ರೂನೂವೆ ಪೋಲಿಸ್ ಕೋರ್ಟಿಗೆ ನಮ್ಮ ಕುಟುಂಬ ಏನೂ ಹೋಗೋಹಾಗಿಲ್ಲ. ಹೋಗ್ಲಿ ಹಾಳಾಗಿ ! ಅಲ್ದೇವ್ಮಾ ಅವಳ್ಕೋಪದಲ್ಲಿ ಈಗೊಂದ್ನಮೂನೆ ತಿರುಗೊಂಡಿಧಾಳೆ ಚಿಕ್ಕಜವಮಾನ್ರ ಮೇಲೆ ಮಧ್ವೆ ಕೇಸ್ಹಾಕ್ತೇನೇಂತ...ಇಪ್ಪತ್ತು ಸಾವಿರ ರೂಪಾಯ್ಗೆ...

ಸುಬ್ಬಮ್ಮ : ಮಧ್ವೆ ಕೇಸು !...ಅದೆಂಥ ಕೇಸು ?.

ಕಪ್ಪಣ್ಣ : ಹಯ್ಯೋ, ನಾನೇನ್ಹೇಳ್ಲಿ ಅವ್ಮಾ. ನೀವು ಸಾಧು. ಯಜಮಾನ್ರು ಮಂಕು. ಈಕೇನೋ ಘಾಟಿ ! ಲಾಯರ ಕುಟುಂಬಾನೋ ಅದೇನ್ ಅನಾಹುತ್ವೋ ಕಾಣೆ...ಅವ್ಮಾ ಕೇಳಿ. ವಯಸ್ಸಾದ ಮನುಷ್ಯ...ಒಪ್ಕೋತೇನೇವ್ಮಾ. ನಾನು ಲಾಯ್ರಲ್ಲ...ಪೇಪರ್‌ನಲ್ಲೋದಿಧೇನೆ...ಹೆಂಡ್ತಿ ಇಲ್ಲದ ಗಂಡ್ಸೇನಾದ್ರೂ ಒಬ್ಬ ಹೆಂಗ್ಸಿನ ಬೆರಳ್ಗೆ ಉಂಗ್ರ ಇಟ್ರೆ..."ನಿನ್ಮದ್ವೇಮಾಡ್ಕೋತೇನೇಂಬೋ ಶಪಥಕ್ಕೆ ಗುರ್ತೂ"ಂತ ಅರ್ಥ ಇಟ್ಕೊಳ್ಳೋ ಹಾಗೆ ವಾದಿಸೋಕಾಗುತ್ತೆ ಅವ್ಮ ಕೋರ್ಟಿನಲ್ಲಿ ! ಅವ್ರು ಇಷ್ಟು ದೊಡ್ಡ ಕುಟುಂಬಕ್ಕೆ ಯಜಮಾನಿಯಾಗೋ ಆಸ್ಪದ ಹೋದದ್ಕಕ್ಕೆ ೨೦ ಸಾವಿರ ರೂಪಾಯ್ನ ನಷ್ಟಕ್ಕೆ ಕೇಸ್ ಹಾಕಿ ಚಿಕ್ಕಜವಮಾನ್ರನ್ನ ಕೋರ್ಟಿಗೆಳೀತೇನೇಂತ ಹೇಳಿದ್ದಕ್ಕೆ ಯಾರ್ಗೂ ಬೆದರದ ನಾನು...

(to Hiriyannayya)

By your foolishness ಸಾರ್...ನಾನು...

ಸುಬ್ಬಮ್ಮ : ಹಯ್ಯೋ ! ಈ ಉಂಗ್ರಾನ ಸುಮ್ನೆ ಕೊಟ್ಟೆ ಹೊರ್ತು...

ಕಪ್ಪಣ್ಣ : ಅಮ್ಮಾ ! ನಿಮ್ಮ ಮನಸ್ಸು ನಿರ್ಮಲ !...

ಸರೋಜ : ಸಂಬ್ಳಕ್ಕೇಂತ ಬಂದ ಹೆಂಗ್ಸಿನ ಬೆರಳಿಗ ಮನೆ ಯಜಮಾನ, ಲಕ್ಷಾಧಿಕಾರಿ, ಸಾವಿರಾರು ರೂಪಾಯಿ ಬೆಲೆ ಬಾಳೋ ತಂದೆ ಹಾಕ್ಕೊಂಡಿದ್ದ ವಜ್ರದುಂಗ್ರಾನ ತಾನಾಗಿಯೇ ತೊಡ್ಸಿದ್ರೆ......ಏನರ್ಥಾಮಾಡ್ಕೊಂಡಾರೂಮ್ಮಾ ಜನಗ್ಳು ?...ಜಡ್ಜಿಗ್ಳು ?...ಇನ್ನಲ್ದೆ...

(showing collapsing Hiriyannayya)

ಈ ಪ್ರಾಣ, ಇಲ್ಲೇ ತಲೇ ತೂಗ್ತಿರೋವಾಗ, ಹಗಲ್ನಲ್ಲಿ...public court ನಲ್ಲಿ, ಲಾಯರಿ ಇದೇ question ಕೇಳ್ದಾಗ ತಲೆಯೆತ್ತಿ...

ಕಪ್ಪಣ್ಣ : (To Subbamma)

...ಇದೆಲ್ಲಾ ಆಗೋ ಕೆಲ್ಸವಲ್ಲಾಮ್ಮಾ...ಮೆಲ್ಲಗೆ ನಾನು ಆಗ ಬಿದ್ದ ಹಾಗೆ ಇನ್ತಿರುಗ್ಬಿದ್ದು ಅವಳ ಕಾಲ್ಗೆ......ಹೇಗಿದ್ರೂ ದುಡ್ಡಿನಾಸೆಗೆ ಬಂದೋಳೂ...

(to Hiriyannayya)
ಏನ್ಸಾರ್...ಇದ್ದೀಗೆ collapse ಆಗಿಧೀರಾ...
(Hiriyannayya ನನ್ನು ಹಿಡಿದು ಜಗ್ಗಿಸಿ)

ಚೇತರ್ಸ್ಕೊಳ್ಳಿ ಸಾರ್ !...The dangerous woman can do everything she says ! Explain ಮಾಡೀ ಸಾರ್ mother ಗೆ...

ಹಿರಿಯಣ್ಣಯ್ಯ : ಅಮ್ಮ ! ತಪ್ಪಾಡ್ಬಿಟ್ಟೆ...ಕ್ಷಮ್ಸೂಮ್ಮಾ.

ಕಪ್ಪಣ್ಣ : (Desperately)

ಹಯ್ಯಯ್ಯೋ ! ನಿಮ್ಮನ್ನ ಕ್ಷಮ್ಸೋದಲ್ಲಾ ಸಾರ್ pointoo ! ಅಮ್ಮಾವರೇ ! ಹೇಳ್ತೀನ್ಕೇಳಿ. ಇದೆಲ್ಲಾ ತೀರ್ಮಾನಿಸೋಕ್ಮುಂಚೆ...ಆ ಹೆಂಗ್ಸನ್ನ ಹೊರಗ್ಬಿಟ್ಟ್ವೋ...... ಅಪಾಯಾಮ್ಮಾ ನಿಮ್ಕುಟುಂಬಕ್ಕೆ......ಇನ್ನಾಬ್ಯಗ್ಹೇಳ್ಲೀಮ್ಮಾ...

(tears his hair)

ಸರೋಜ : (coming forward)

ಯಾರೂ ಹೇಳ್ಬೇಕಾದ್ದಿಲ್ಲ. ನಾನೇ ಹೇಳ್ತೇನೆ. **ದುಡ್ನಾಸ್ಗೇ** ಬಂದಿರೋದು ನಾನು. ನನಗ್ತಿಳಿದ್ಮಟ್ಟೊ **ಈತ್ನೇನೂ** ಧರ್ಮಕ್ಕಲ್ಲ ಬಂದಿರೋದು. ಈಗೇನೋ ನಿಮ್ಮ ಪರವಾಗಿದ್ದಾನೆ, ಆದ್ರೆ ಮುಂದಕ್ಕೆ ಈತ್ನಾಯ್ತು ನೀವಾಯ್ತು ! ಸದ್ಯ ಈಗೊಂದು ಕೋರ್ಟಿಗೆ ಹೋದ್ರೋ ನನಗೆ ಆ ದೊಡ್ಡ ಮನುಷ್ಯ ನನ್ಕೈಲಿ ಉಂಗ್ರ ತೊಡಿಸಿದ್ದಕ್ಕೆ ೨೦ ಸಾವಿರ ರೂಪಾಯಿ ನನಿಗೆ ನಷ್ಟ ಜಡ್ಜಿ ಕೋರ್ಟಿನಲ್ಲಿ ಕೊಟ್ರೂನೂವೆ ಆಗ್ಲಿ, ಕೊಡ್ದಿದ್ರೂನೂವೆ ಆಗ್ಲಿ...ನಿಮ್ಮೆಲ್ರನ್ನೂವೆ ಕೋರ್ಟಿಗೆಳೆದು ನಿಲ್ಸಿ ನನ್ನ ಲಾಯರ ಮುಖಾಂತ್ರ ದೇವ್ರ ಸಾಕ್ಷಿಯಾಗಿ ಪ್ರಶ್ನೆಗ್ಳು...ನಿಮ್ಮನ್ನೂ ಕೂಡಾಮ್ಮಾ... ಕೋರ್ಟಿನಲ್ಲಿ ಪ್ರಶ್ನೆಗಳು ಕೇಳ್ಸೋ ಅಧಿಕಾರ ಯಾರೂ ತಪ್ಸೋಹಾಗಿಲ್ಲ ನನಗೆ. ಆದರೆ ನಿಮ್ಮನ್ನೆಲ್ಲಾ ಹೀಗೆ ಹೀಯಾಳಿಸಬೇಕೂಂತ ನನಿಗೇನೂ ಸೇಡಿಲ್ಲ. ನೀವು ನೀವೇ ಯೋಚಿಸ್ಕೊಂಡು...ಕೋರ್ಟಿನಲ್ಲಿ ಸಿಕ್ಬಹುದಾದ ದುಡ್ನ...ಇಲ್ಲೇ...ಈಗ್ಲೇ...

ಸುಬ್ಬಮ್ಮ : (Penitently)

ಒಪ್ದೇವ್ಮ್ಮಾ. ತಾವು ದಯವಿಟ್ಟು...

ಸರೋಜ : ಅರ್ಥ್ವಾಯ್ತು...ನಿಮ್ಮಗನಹಾಗೆ ನಾನೇನೂ ಮಂಕಲ್ಲ...ನಿಮ್ಮೇವೇ ಮಾತಾಡ್ಕೋಬೇಕಂತೀರೇನೋ...ಮಾತಾಡ್ಕೊಳ್ಳಿ...ಆದ್ರೊಂದ್ಮಾತು. ನಿಮ್ಮಂತ್ರಾಲೋಚನಾಸಭೆ... ಬೇಗ...ತೀರ್ಬೇಕು. ರೈಲ್ಬಿಡ್ಬ ಬೆಂಗಳೂರಿಗೆ ಸೇರಿ ನಾಳೆ ಇಷ್ಟೊತ್ತ್ಗೆ ಲಾಯ್ರು ಮುಖಾಂತ್ರ ನೋಟೀಸ್...ನಾನೇನ್ಹೇಳೋದು...ನಿಮ್ಕುಟುಂಬಾನ ಮುಂದಕ್ಕೆ ನುಂಗೋಕೋ ಇಲ್ಲ ಬದುಕ್ಸೋಕೋ ಬಂದಿರೋ ಆ ಬೃಹಸ್ಪತೀಗೆ ಗೊತ್ತು...ನನ್ಮುಂದಿನ ಕ್ರಮ !...

(sails to table L and dragging a chair along the floor ...seats herself at L)

ಸುಬ್ಬಮ್ಮ : ಕಪ್ಪೂ...ಈಗೇನ್ಗತಿ ?

ಕಪ್ಪಣ್ಣ : ಗತಿಯೇನಮ್ಮಾ. ಈಗ ಒಬ್ಬರಿಗೊಬ್ರು ನಿನ್ನಷ್ಟು ನನ್ನಷ್ಟು ಅಂತ ಬೈಯ್ಕೊಂಡ್ರ್ರೆ ಪ್ರಯೋಜನ್ವಿಲ್ಲ. ನೀವೊಂದ್ಮಾತ್ಹೇಳಿ. ಒದ್ದೋಡಿಸ್ಬಿಡ್ತೇನೆ ಆ ಹೆಂಗಸ್ನ ! ಅವಳ ಕೇಸು ಸತ್ರೂ ಜಯವಾಗೋ ಹಾಗಿಲ್ಲ. ಆದ್ರೂನೂವೇಮ್ಮಾ ಕೇಸು ಸೋತದ್ರಿಂದ ಅವಳಿಗೇನೂ ನಷ್ಟವಿಲ್ಲ.......ಕೇಸ್ ಗೆದ್ರೇನೋ ನಮಗೇನೂ ಲಾಭವಿಲ್ಬಿದ್ರೂನೂವೆ...ಚಿಕ್ಕಜಮಾನ್ರನ್ನೂ, ಚಿಕ್ಕವರ್ನ್ನೂ, ನನ್ನೂ, ಬೋರಣ್ಣೋರ್ನೂ, ನಾರಣಪ್ಪನೋರ್ನೂ, ಕೊನೇಗೆ ನಿಮ್ಮನ್ನೂ ಜಪದೆ ಕೋರ್ಟಿಗೆ ಕೈಫಿಯತ್ ಕೊಡೋಕೆ, ಈಕೆಗೆ ಇರೋ ಹಕ್ಕನ್ನ ಯಾರೂ ತಪ್ಸೋಹಾಗಿಲ್ಲ ಆದ್ರೂನೂವೇಮ್ಮಾ ನಮಗೂ ಲಾಯರಿದ್ದಾರೆ...ಇದೇ ಕೋರ್ಟೇಲಿ ಪರ್ದೆಕಟ್ಟಿ ಈಕೇನೂ ನಾನೂ ಹೂಡಿದ ಕಾಳಗಾನ ಕೋರ್ಟಿನಲ್ಲಾದ್ರೂ ತೀರ್ಮಾನ ಮಾಡ್ಕೊಳ್ಳಬೇಕು.

(in blazing anger to Saroja)

ನಿಮ್ಕೈಲಾದ್ದು ನೀವ್ಮಾಡಿಕೊಳ್ಳಿ. ನಮ್ಕೈಲಾದ್ದು ನಾವು...

ಸುಬ್ಬಮ್ಮ : (ಕಪ್ಪುವಿನ ಕೈಯನ್ನು ಹಿಡಿದು)

ಹಯ್ಯೋ ದುಡುಕ್ಬೇಡ ಕಪ್ಪೂ ! ರೇಗಿಧಾಳೌಳು. ನೀನೇನ್ರೇಗಿ ಸಾಧಿಸಿದ್ರೂನೂವೆ ಮನೆ ಹೆಸರಿಗೆ ಕುಂದಕ ತಪ್ಪೋದಿಲ್ಲ. ಹೋಗಿ ನೀನೇ ನ್ಯಾಯವಾಗಿ ಮಾತಾಡಿ ಅವಳ ಕೈಲಿ ಅಲ್ಪಸ್ವಲ್ಪ ಕೊಟ್ಟು ಶಾಂತವಾಗಿ ಕಳ್ಸೋದು ಮೇಲು, ಕಪ್ಪೂ !

ಕಪ್ಪಣ್ಣ : ಏನೈದೂ ಹತ್ತೂಮ್ಮಾ ! ಐದ್ರೂಪಾಯಿ ಹತ್ರುಪಾಯ್ಗೆ ಜೀಳೋ ಜಿಪ್ಪಲ್ಲಾ ಅವ್ಳು.

ಸುಬ್ಬಮ್ಮ : ನಾನ್ಹೇಳಿದ್ದಾಗಲ್ಲಾ. ಮಗೂ ಮಂಕತನಕ್ಕೆ...ಅವಳ್ಕೇಳ್ದ ೨೦ ಸಾವಿರ. ವೇಸು...೨೦ ಸಾವಿರ ಕೊಟ್ರೂ ಸಾಲ್ದು ಮಗೂಗೆ ಬುದ್ಧಿಬರೋಕೆ ! ಅವಳು ಕೋರ್ಟಿಗೆ ಹೋಗಿ ಕೇಸ್ ಹಾಕಿ ಗೆದ್ದು, ದೇಶದಲ್ಲಿ ಧರ್ಮ ಇಲ್ದೆ, ಆ ಜಡ್ಜಿಗೂ ಸತ್ಕಾರ್ತೀವೆ. ಇವಳಿಗೆ ಒಂದ್ವೇಳೆ ಸಿಕ್ಕಬಹುದಾದ ಇಪ್ಪತ್ತು ಸಾವಿರಕ್ಕೆ ಬದಲಾಗಿ...ಸದ್ಯ...ನಾರಾಯಣಾ !

ನಾರಾಯಣ : ಅಮ್ಮಾ !

ಸುಬ್ಬಮ್ಮ : ತಾವರೇಕೆರೆಯಿಂದ ಶಾನುಭೋಗರು ತಂದದ್ದೆಷ್ಟು ?

ನಾರಾಯಣ : ಮೂರುಸಾವಿರದ್ಮೈನೂರಮ್ಮ.

ಸುಬ್ಬಮ್ಮ : ಪಾಪಣ್ಣಯ್ಯನ ಮಗ........ಈಚ್ನೂ. ಕಟ್ಟೊ ಬಾಕ್ಸಿ ?

ನಾರಾಯಣ : ಅದೊಂದು ಮೂರುಸಾವಿರಾಮ್ಮಾ.

ಸುಬ್ಬಮ್ಮ : ಚಿಕ್ರಿ........ಕೈಲಿ?

ನಾರಾಯಣ : ಐನೂರೂ ಚಿಲ್ರೆ.

ಸುಬ್ಬಮ್ಮ : ಆ ಏಳು ಸಾವಿರ ರೂಪಾಯ್ನೂ ತಂದಿಲ್ಲಿಡು.

(Exit Narayana)

ಕಪ್ಪಣ್ಣ : ಅಮ್ಮಾ! ಇದೇನ್ಹುಚ್ಚು. ಹೀಗ್ದುಡ್ಸುರ್ಯೋದು ?

ಸುಬ್ಬಮ್ಮ : ನಿನಗ್ಗೊತ್ತಿಲ್ಲಾ........ಕಪ್ಪೂ!........ಏಳು ಸಾವಿರವೇನು ? ಎಪ್ಪತ್ತು ಸಾವಿರವೇನು ? ಅದೆಲ್ಲ ಲೆಖ್ಖವಲ್ಲ. ಓದ್ಗಾರ್ಕೆ ಬರದ ನನ್ಕೈಯಲ್ಲೇ ತಾನೇ ಸಂಪಾದಿಸಿದ್ದ ಲಕ್ಷಾಂತರ ರೂಪಾಯಿ ಆಸ್ತೀನ...ಮಗ ಮಮ್ಮಗ ಇದ್ರೂನೂವೆ...ನನ್ನ ಹತೋಟೀಲೆ ಬಿಟ್ಬಿಟ್ಹೋದ ನಮ್ಮೆಜಮಾನ್ರ ಬುದ್ಧಿ...ಈಗ್ಗೊತ್ತಾಯ್ತು. ಈ ದುಡ್ಡು ಹೋದ್ರೂನೂವೆ ನಷ್ಟವೇನೂ ಇಲ್ಲ, ಕಪ್ಪೂ, ಈಕೆ ಮುಬಾಂತ್ರ ಮಗೂಗೂ, ಚಿಕ್ಕೋನ್ಗೂ ಬುದ್ಧಿ ಬಂದ್ರೆ ಮುಂದಕ್ಕೆ ಎಷ್ಟೋ ಲಕ್ಷಗಳ ಲಾಭ ಬಂದ್ಹಾಗಾಯ್ತು, ಕುಟುಂಬಕ್ಕೆ.

(patting Kappanna on the shoulders)

ಹೋಗಿ ಹೇಗಾದ್ರೂ ಒಡಂಬಡ್ಸಿ....ಬಂದ್ಯಾ ನಾರಾಯಣಾ!......

(putting the bundle of notes Narayana has given into Kappanna's hands, which Kappanna puts into his pockets unnoticed by Saroja)

ಮನೆಯಿಂದ ಸಾಗಿಸ್ಬಿಡೂ ಕಪ್ಪೂ......

ಕಪ್ಪಣ್ಣ : (ತಲೆ ಬಾಗಿ)

ಅನ್ಯಾಯ ಹುಚ್ಚೂಮ್ಮಾ ನಿಮ್ಮದು! ಆದ್ರೆ ಒಂದು. ದೇವ್ರು ಲಕ್ಷಾಂತರ ರೂಪಾಯಿ ವರ್ಷ ವರ್ಷವ್ರೂ ಉತ್ಪತ್ತಿಯಾಗೋ ಆಸ್ತಿ ನಿಮಗೂ, ನಿಮ್ಮ ಮಗ, ನಿಮ್ಮ ಮೊಮ್ಮಗನಿಗೂ ದೇವ್ರು ಕೊಟ್ಟಿರೋ ಹೊತ್ಗೆ ಒಪ್ತೇನೇ ಹೊರ್ರು........ಅಲ್ಲದೆ...ಏನಮ್ಮ ಇದು........ಮನೇಗೂ ಬಂದು ತಿಂದಪ್ರೂ ಅಲ್ದೆ ಎರಡು ಉಂಗುರಗಳು, ಇನ್ನೂರು ರೂಪಾಯಿ, ಅಲ್ದೆ ಏಳುಸಾವಿರ.... ಹೆಂಗಸಿಗೆ...ಹೊಟ್ಟೆ ಉರಿಯುತ್ತೇಮ್ಮಾ. ಇಷ್ಟು ಸತ್ಯವಾಗಿ ದುಡ್ಡು ಸಂಪಾದಿಸಬೇಕಾದ್ರೆ... ಏಳ್ವರ್ಷ ಸಾಲ್ದ್ಹಮ್ಮಾ...ಇಷ್ಟನ್ನೂ ಒಂದೇ ತುತ್ತು...ಆ ಮಾರಿ ಬಾಯ್ಗೆ...

ಸುಬ್ಬಮ್ಮ : ಹಯ್ಯೋ ಕಪ್ಪು! ಎದ್ದು ನಿಂತುಬಿಟ್ಲ್ಲ...ಹೋಗು...

(Kappanna approaches Saroja)

ಕಪ್ಪಣ್ಣ : ನೀವ್ಹೇಳಿದ್ದೆಲ್ಲಾ ಸರಿ...But ಅಮ್ಮಾವ್ರು ಹೆಂಗ್ಸು. ಹೆಂಗ್ಸಿನ್ಮೇಲೆ ಪ್ರೋಲೀಸ್ನ ಛೂಬಿಡೋದು ಅಧರ್ಮ......ಹೇಗಿದ್ರೂ ಹೆಂಗ್ಸು...ಏನೋ ಒಂದ್ವೇಳೆ ಅನಾನ್ಕೂಲಗ್ಳು ಜರುಗಿದ್ರೂನೂವೆ, ಇದನ್ನೆಲ್ಲಾ ಮನಸ್ಸಿಗೆ ತಂದ್ಕೊಳ್ಳದ್ಹಾಗೆ ನೀವು ಹೋಗೋದು...

ಸರೋಜ : ನೋಡೀ! ನಿಮುಗ್ಬುದ್ಧಿ ಇದೆ...ನನಗ್ಬುದ್ಧಿ ಇಧೇಂತ ತಿಳಿಯೋಷ್ಟಾದರೂ ಬುದ್ಧಿ ನಿಮುಗಿದೆ. ಎರಡನೇದು ನನಗೆ ಕಿವಿನೂ ಇದೆ. ನೀವು ಈ case ಹಾಕೋಕೆ ನನಗಿರೋ ಅನಾನುಕೂಲಗಳ್ನ ಅಮ್ಮಾವ್ರಿಗೆ ಹೇಳಿದ್ದೂ ಕೇಳ್ದೆ. ನಾನು ಗೆಲ್‌ಲಿ ಸೋಲ್‌ಲಿ......ಕೋರ್ಟಿಗೆ ಬರ್ಲೇಬೇಕಾದ ಕುಟುಂಬಕ್ಕೆ ಬರೋ ಅಪಖ್ಯಾತೀನ ಮರೀದೆ ಅಮ್ಮಾವ್ರು ನಾರಾಯಣನ ಬಾಯಿಂದ ೩.೫೦೦ ರೂಪಾಯಿ plus ಮೂರುಸಾವಿರ plus also ೫೦೦...ಏಳ್ಸಾವಿರ್ರೂಪಾಯ್ಗೆ ನೋಟು ಗಳ್ನ ನಿಮ್ಗ್ಕೊಟ್ಟು ನೀವು pocket ನಲ್ಲಿಟ್ಕೊಂಡು ಅದ್ನ ಕುಟುಂಬಕ್ಕೆ ಲಾಭಮಾಡೋ ಬಗ್ಗೆ ನನ್ನ ನಾಜೋಕಾಗಿ ಕಳ್ಸೋಕೆ ಪಡೋ ಪ್ರಯತ್ನ uselessoo...

ಕಪ್ಪಣ್ಣ : ಅಮ್ಮಾ...ಏನೋ try ಮಾಡ್ದೆ. ಈ ದುಡ್ಡೇನೂ ನಷ್ಟಾಂತಲ್ಲ ಈ ದೊಡ್ಡ ಕುಟುಂಬಕ್ಕೆ. ಹಿರಿಯಣ್ಣಯ್ಯನೋರಿಗೂ. ರಾಮರಾಯರಿಗೂ. ಅಮ್ಮಾವರಿಗೂ. ನಾರಣಪ್ಪನೋರ್ಗೂ ಅಲ್ದೆ ಬಲು ಘಾಟೀಂತ ತಿಳ್ಕೊಂಡಿದ್ದ ನನಗೂನೂವೆ ಯಾವಾಗ಼್ೂ ಮರೀಬಾರದ ಬುದ್ಧಿ ನೀವು ಕಲ್ಸಿದ್ದಕ್ಕೆ ಇದು ದಕ್ಷಿಣೆ, ತಮಗೆ.

(takes out the notes and puts them on a table C.L.)
ತಕ್ಕೊಂಡು ಹೋಗಿ ಬನ್ನೀಮ್ಮಾ.

ಸರೋಜ : (ನಗುತ್ತಾ)

ಹ್ಹ! ಹ್ಹ!! ಹ್ಹ!!! ಹ್ಹ!!!! ನನಗ್ಗೊತ್ತು ನಿಮ್ಬುದ್ಧಿ. ನೋಟುಗ್ಳೂ......ನಾನ್ತಕ್ಕೊಂಡು ಹೋಗೋದೂ ಈಗ.......ನಾನು ಬೆಂಗಳೂರು ಸೇರೋಕ್ಮುಂಚೆ...ನೋಟುಗ್ಳ ನಂಬರ್ಸ್ಲೆಲ್ಲಾ Policeಗೆ ಕೊಟ್ಬು theft case...ಹಯ್ಯೋ ನಾನೇನ್ಮಂಕಲ್ಲ.......ನನ್ನ fountain-pen ಇಲ್ಲಿದೆ. ಅಲ್ದೆ ನಿಮ್ಮ Cholera, Diarrhoea. Dysentery ಪೇಪರುಗಳಲ್ಲಿವೆ. Mr. Hiriyannayya ನೋರ್ನ ಕರದೂ ....

ಕಪ್ಪಣ್ಣ : (ರೇಗಿ)

I see what you mean...
(to Hiriyannayya)
ಬನ್ನೀ ಸಾರ್...
(Hiriyannayya comes forward)

ಸರೋಜ : Sorry to disturb the Head of the family. ಕೂತ಼್ೊಂಡು ಬರೀರಿ.

(Hiriyannayya sits to write...pen in hand)

ಕಪ್ಪಣ್ಣ : ಏನ್ಮಾಡೋದು ಸಾರ್. But ನೋಡೋಣ. ಏನ್ಬರಿಸ್ತಾಳೆ.

ಸರೋಜ : ನಾನು dictate ಮಾಡೋ ಹಾಗೆ ಬರೀರಿ. ಇಷ್ಟವಿದ್ರೆ. ಇಲ್ದಿದ್ರೆ...of course...

ಕಪ್ಪಣ್ಣ : ನಿಮ್ಮ trainಗೆ time ಆದೀತು. Dictate ಮಾಡಿ. ಬರೀತಾರೆ.

ಸರೋಜ : (Sweetly)

I, Jodidar Hiriyannayya of Rampur, son of...

(opening out a note-book and reading out of it)

Late Rao Saheb Jodidar Rama Rao of Rampur, do hereby in my own writing declare that I have presented to Smt. Sarojamma of Bangalore the sum of Rs. 7000 and two hundred Rupees cash and also an emerald and a diamond ring in grateful thanks for services rendered to my family. Witnessed by my son and my servant...ಹಾಕೀ ನಿಮ್ಹೆಸ್ರು.

[Hiriyannayya affixes his signature]

Please call your witnesses...ಬನ್ನಿ. Mr. Rama Rao.

ರಾಮರಾವ್ : (Coming forward)

Devi, ಶ್ರೀಮತೀದೇವಿ, little brotheroಂತ ಕೂಗ್ತ್ಯಾನು ನನ್ನ...You have broken my heart...

(Collapses)

ಸರೋಜ : No no...Baby brother...you are a born poet...poetsಗೇ real poetಗೇ...heart ಏ ಇಲ್ಲ ....break ಆಗೋಕೆ........except in poetry...sign ಮಾಡಿ...with a steady hand.

(Ramu does accordingly)

Where is the servant Mr. Narayanappa...

ಕಪ್ಪಣ್ಣ : ಬನ್ನೀ ನಾರಣಪ್ಪನೋರೇ...ಹೆಸರು ಬರ್ಯ್ರೋಕೆ ಗೊತ್ತೇ ?

(to Saroja snappishly)

Suppose he cannot sign........?

ಸರೋಜ : (Sweetly)

One of the 92% of illiterate Indiaಂತ ತಿಳ್ಕೊಂಡಿದ್ಧೀರಾ...ನಾರಣಪ್ಪ ನೋರ್ನ ... ಮನೇ accountನ ಬರ್ಕ್ಯೋದ್ನ ನೋಡಿಧೇನೆ. He can sign. Thumb impressionoo ಕೂಡಾ ಇರ್ಲಿ. See to it.

ಕಪ್ಪಣ್ಣ : [ಕೈ ಕೈ ಹಿಸಿಕಿಕೊಳ್ಳುತ್ತಾ ನಾರಾಯಣಪ್ಪನನ್ನು ಕರೆದುಕೊಂಡು ಹೋಗಿ ರುಜುವನ್ನು ಮಾಡಿಸಿ ಎಡಗೈ ಹೆಬ್ಬೆಟ್ಟಿಗೆ ಮಸಿಯನ್ನು ಹಚ್ಚಿ ಪತ್ರದ ಮೇಲೆ ಒತ್ತಿಸುವನು.]

ಸರೋಜ : Blot ಮಾಡಿ—pad ಪಕ್ಕದಲ್ಲೇ ಇಧೆ. ಇಲ್ಕೊಡಿ.

(Receiving the receipt and folding it, takes up the 7000 Rupee note bundle and unobserved of all but the audience, includes in her booty the 75 Rupees-Kappanna's pay money also.)

(Filling her chatelaine with the lot and deliberately folding and putting the receipt in her chatelaine...proceeding towards L...loudly but sweetly)

ಈ ಮನೇಲಿ ಇಷ್ಟು ಜನ ಒಬ್ಬ ಹೆಂಗ್ಸಿನ ಮೇಲೆ ಸೇಡು...ಈಗ...speech ಯಾಕೆ—ನಾನ್ಹೇಳಿದ್ದಾಗೆ "ಕೆಣಕಿದ ಹೆಣ್ಣು ಕೆಂಡಕ್ಕಿಂತ ಕೇಡೂ"ಂಬೋದು ಈ ಮನೆ ಗಂಡಸರಿಗೆಲ್ಲಾ... ಗೊತ್ತಾದ್ರೆ ಸಾಕು!

ಸುಬ್ಬಮ್ಮ : ಕಪ್ಪೂ, ನನಗಿನ್ನೂ ನಂಬಿಕೆ ಇಲ್ಲ...

ಕಪ್ಪಣ್ಣ : (Hearing with his eyes and pointing to L)

ಅಕೋ. ಜಟ್ಕಾನೂ ಬಂತು. ಇನ್ನೇನಮ್ಮಾ ಹೆದರ್ಕೆ ?

ಸುಬ್ಬಮ್ಮ : ನನಗೇನೋಪ್ಪಾ ಈಕೆ ರೈಲು ಹತ್ತೋವರೀಗೂನೂ ಹೆದರ್ಕೆನೆ.

ಕಪ್ಪಣ್ಣ : ಅದೆಂಥಾ ಹೆದರ್ಕೇಮ್ಮಾ ?

ಸುಬ್ಬಮ್ಮ : ಇಲ್ಲಿಂದ ಸ್ಟೇಷನ್ ಸೇರೋ ಅಷ್ಟರಲ್ಲಿ...ಯಾರ್‍ದ್ರುತ್ರ ಪಸ್ಟೇಳ್ತಾರೋ... ಒಟ್ನಲ್ಲಿ........ಅವಳ್ಗತ್ತಿದ ರೈಲು ಊರ್‍ಬಿಟ್ಟು ಹೊರಡೋವರೀಗೆ ಅವಳ ಮೇಲೆ ಕಣ್ಣಿಟ್ಟಿರೋದು ಮೇಲು ....ಅಲ್ದೆ ನಿನ್ನ ಸಾಮಾನುಗ್ಳುನ್ನೂ ಇಟ್ಕೊಂಡು, ಜೋರ ಕಾದಿರ್‍ತಾನೆ ಸ್ಟೇಷ್ನಲ್ಲಿ. ನೀನೇ ಹೋಗಿ ಈಗ ಜೊತೇಲಿ...ರೈಲು ಹೊರಡೋವರೀಗೂ ಅಲ್ಲೇ ಇದ್ದು ಆಮೇಲೆ ನಿನ್ನ ಸಾಮಾನುಗಳ್ನ ಸಾಗಿಸ್ಕೊಂಡು ಬೋರನ್ಜತೇಲಿ ಬಂದ್ಬಿಡು.

(Kappanna bows)

ರಾಮರಾವ್ : (Sobbing)

(In a hysterical voice to Subbamma)

ಅಜ್ಜೀ...ಈಗ್ಲೂನೂವೆ ಹೇಳ್ತೀನೆ...ಶ್ರೀಮತೀ ದೇವಿ...ಸನ್ಗೇನೋ ಅಜ್ಜಿ...ಈಕೆ ಸುಳ್ಳಲ್ಲ...

ಸರೋಜ : (Sweetly over her shoulders)

ಈ ಕಾಲ್ದಲ್ಲೂ...young boysಗೆ womanನಲ್ಲಿ trustoo beliefoo...ನಾನು disgraced ಆಗಿ ಹೋಗ್ಬಿದ್ರೂನೂವೆ...ನನ್ನಲ್ಲಿ ಇನ್ನೂ faith ಇಟ್ಕೊಂಡಿರೋ chivalry ನಮ್ಮ Indian-manhoodನಲ್ಲಿ ಇರೋದು ಆಶ್ಚರ್ಯ.

[Ramu rushes out shouting out hysterically...]

"Srimathi Devi ! I believe you..."
(rushes towards Saroja)

ಕಪ್ಪಣ್ಣ : (By force retaining Ramu)

ಹುಚ್ಚೇ ನೀವು ? ನಿಮಗೆ ಹೆಂಗಸ್ರೂಂದ್ರೆ ಗೊತ್ತಿಲ್ಲ !...
(to Naranappa)

ನಾರಣಪ್ಪನೋರೆ........ಚಿಕ್ಕೋರ್‍ನ ಒಳಗೆ ಎಳ್ಕೊಂಡೋ........ಸೆಳಕೊಂಡೋ........ ಎತ್ಕೊಂಡೋ........

(Ramu exits C sobbing lead by Naranappa...at this stage Subbamma is at C, Hiriyannayya at table corner C.L.)

ಕಪ್ಪಣ್ಣ : (assuming coat and turban...to Saroja)

ಇನ್ನೇನೆ ?

ಸರೋಜ : ಏನೇನು ? ಯಥಾಪ್ರಕಾರ horrible memory ನಿಮ್ದು. ಅಲ್ನೋಡಿ ...ಆ ಮೂಲೇಲಿ ಇರೋ ನನ್ನ pink parasol ನೂ ಮರ್‍ತ್ಬಿಟ್ರಿ ಅಲ್ದೆ...

(pointing with her lily fingered hand at table C—L)

ಆ ಮೇಜಿನ್ಮೇಲೆ ಈ ಹಿರಿಯಣ್ಣಯ್ಯ ಪ್ರಾಣ ಎಸ್ದ ನಿಮ್ಮ monthly salary——— 75 ರೂಪಾಯಿ ನೋಟುಗಳ್ನೂ........ನೋಟಿಸ್ ಮಾಡ್ದೆ ಬಿಟ್ಬಾಗಿ........

ಕಪ್ಪಣ್ಣ : (In a trice recovering pink parasol from wall R and rejoining Saroja)

ಕ್ಷಮ್ಸು dear...ನನಿಗೆ...feelingsoo

ಸರೋಜ : ಹಯ್ಯೋ ! ನೀವು sentimental. ಬರೀ Heart ಉ ನಿಮ್ಗೆ ! Brain ಏ ಇಲ್ಲ ನಿಮ್ಗೆ. ನಾನ್ಹೇಳ್ಳಿಲ್ವೆ ..... ಈ schemeoo "ಬೇಡಾ ! ಬೇಡಾ !! ಬೇಡಾ !!!"ಂತಂದ್ರೂನೂವೆ...ನೀವು "talkies" ಬಂದಿದ್ರೂನೂವೆ "mookies"ನಲ್ಲಿ ದುಡ್ಡು ಇನ್ನೂ ಇಧೇಂತ...ಹೇಳ್ಳಿಲ್ವೇ ನಾನು...

ಕಪ್ಪಣ್ಣ : ಅಲ್ಕಣೇ, ಬಂದ business ಏನೋ ಆಯ್ತು ! But still ಇವರ್ನೆಲ್ಲಾ ಇಷ್ಟು lacrimose ಆಗಿ ಬಿಟ್ಬಿಟ್ಟು ಹೋಗೋದು...

ಸರೋಜ : ಹಯ್ಯೋ ನಿಲ್ಸೀಂದ್ರೆ ! Lacrimose ಅಲ್ಲ wordoo, ನಿಮ್ಹಾಳು Nattal dictionaryಗೆ ಬೆಂಕಿ ಹಾಕ್ತು. "Lugubrious" is the right word... ನೋಡಿ ಎಷ್ಟು ಸಾರ್ತಿ ಹೇಳಿಧೇನೆ...ನಿಮ್ಮಿಂಗ್ಲೀಷು horill nebulous...brush up ಮಾಡ್ಕೊಬೇಕು.

ಕಪ್ಪಣ್ಣ : (In despair)

ಒಪ್ದೇ ! ಒಪ್ದೇ !! ಒಪ್ದೇ !!! ದಮ್ಮಯ್ಯ...ಟ್ರೆಯ್ನ್ miss ಮಾಡಬಾರ್ದು. ಜಟ್ಕಾ ಕಾಧಿದೆ.

(opening pink parasol and holding it over Saroja's head) ನಡಿ.

(As Subbamma despairingly collapses against doorpost C screaming "ಹಯ್ಯಯ್ಯೋ ೯ ೯"...Hiriyannayya reaches for cool kooja at his right and empties tumbler after tumbler of the contents until and after Ramu and Narayana hearing the old Lady's cry rush in through C. peep over Subbamma's head into the stage in silent consternation as the curtain drops slowly)

ಹೀಗೂ ಉಂಟೆ?

ಅಥ್ವಾ

ಬಂಡ್ವಾಳ್ವಿಲ್ಲದ ಬಡಾಯಿ

ಒಂದು ಸಾಮಾಜಿಕ ಪ್ರಹಸನ

ಪಾತ್ರಗಳು

ಅಹೋಬ್ಳು	...	...	ಬುಳ್ಳಾಪುರದ ಲಾಯ್ರು
ಜೀವು	...	...	ಈತನ ಪತ್ನಿ
ಮುದ್ಮಣಿ	...	...	ಈತನ ಕುಮಾರ
ಬಾಳು	...	ಈತನ	ಕೋರ್ಟ್ನಲ್ಲಿ ಜೂನಿಯರ್, ಆಫೀಸ್‌ನಲ್ಲಿ ಕ್ಲಾರ್ಕ್, ಮನೇಲಿ ಪರಿಚಾರಕ
ಬೋರ	...	ಈತನ	ಎಪ್ಪತ್ತೈರ್ಡುರ್ಸ್ ವಯಸ್ಸಿನ, ಅಲ್ದೆ ಹನ್ನೆರಡಾರ್ಲ ಎಪ್ಪತ್ತೈರ್ಡುರ್ಸ್ ರೂಪಾಯಿ ಸಂಬ್ಳ ಬಾಕಿ ಇರೊ, ಜವಾನ
ಪರಶುರಾಮು ಪಟ್ಟರ್ ಕೆಂಪೇಗೌಡ	...	...	ಕಕ್ಷಿಗಾರರು
ಕೃಷ್ಣ್ರಾವ್ ರಂಗ್ರಾವ್	...	...	ಸ್ನೇಹಿತರು
ಕಾಲ ಭಾಷೆ	...	...	ಆಧುನಿಕ
ಸ್ಥಾನ	...	...	ಅಹೋಬಲ್ರಾಯ್ರು " ಛೇಂಬರ್ಸ್ "

[**ಸ್ಥಾನ :** ಲಾಯರ್ರು ಅಹೋಬಲ್‌ರಾಯರ ಛೇಂಬರ್ಸು. ಮೇಜಿನ ಮೇಲೆ ಲಾ ಪುಸ್ತಕಗಳ ಕಟ್ಟುಗಳು, ಶಾಯಿ ಕುಡಿಕೆ, ಪೇನ ಇತ್ಯಾದಿ. ಮೇಜಿನ ಸುತ್ತಲೂ ನಾಲ್ಕೈದು ಮುರುಕಲು ಕುರ್ಚಿಗಳು, ಸ್ವಲ್ಪ ದೂರ ಪಕ್ಕದಲ್ಲಿ ಒಂದು 'ಗುಮಾಸ್ತೆ ಮೇಜು'.

ಛೇಂಬರ್ಸು : ಎಡ ಮುಂಭಾಗ, ಬಲ ಮುಂಭಾಗ, ಮಧ್ಯೆ ಹಿಂಭಾಗ ಬಾಗಿಲುಗಳು.]

(ಬೋರ ಎಪ್ಪತ್ತೈದು ವರುಷಗಳ ತಾಬೆಯಿಂದ ಬಗ್ಗಿದ ಮೈಯಿಂದಲೂ ನೆಲವನ್ನು ಸೋಕಿ ಗುಡಿಸುವ ಬಿಳಿ ಗಡ್ಡದಿಂದಲೂ ಅದನ್ನು ಬಿಂಬಿಸುತ್ತ ಕೈಯಲ್ಲಿರುವ ಪರಕೆಯಿಂದ ನೆಲವನ್ನು ಗುಡಿಸಿ ನೆಲದ ಮೇಲೆ ಹಾಸಿರುವ ಹರಕಲು ಚಾಪೆಯೊಂದನ್ನು ನಿರೀಕ್ಷಿಸುತ್ತಲೇ ಪರಕೆಯನ್ನು ನೆಲದ ಮೇಲಿಟ್ಟು ನಿಟ್ಟುಸಿರುಬಿಡುವನು.)

ಬೋರ : ನಮ್ಮುಲಾನೆಲ್ಲಾ ಈ ಕಸ ಗುಡ್ಸೋ ಕಸಬ್ನಲ್ಲೇ ಕಳ್ದೋಯ್ತು! ನಮ್ತಾತ ಮುತ್ತಾತನ್‌ಕಾಲದಿಂದ ನಮ್ಮನೇವ್ರೆಲ್ಲಾ ಕಸ ಗುಡ್ಸೀ ಗುಡ್ಸೀ ಗುಡ್ಸೀ........ಈಗ್ನಮ್ಮಟ್ಟೀಲಿ ಉಟ್ಗೊ ಐಕ್ಳೆಲ್ಲಾ ಸೊಂಟ ಮುರ್ಕೊಂಡೇ ಉಟ್ತಾರೆ. ನನ್ಮೊಮ್ಮಕ್ಳ ಪಾಡಂತೂ ಏಳಾಕ್ಕಾಗಾಕಿಲ್ಲ! ಜಿನಾ ಬೆಳಿಗ್ಗೆದ್ದು ಕಾಲುಗುರುಗುಳ್ಳ ಕತ್ರಿಸ್ಕಳ್ದೇ ಇದ್ರೇ......ಕಣ್ಣು ಚ್ಯೋತಾರೆ ನಡ್ಯೋವಾಗೆಲ್ಲಾ!......

(ಮನೆಯಾಕೆಯು ಹಿಂಬಾಗಿಲಿನಿಂದ ಪ್ರವೇಶಿಸುವುದನ್ನು ಥಟ್ಟನೆ ಗಮನಿಸಿ ಪರಕೆಯನ್ನೆತ್ತಿ ಕೊಂಡು ಚಾಪೆಯನ್ನೇ ಬಿರುಸಾಗಿ ಗುಡಿಸಲುದ್ಯುಕ್ತಿಸುವನು)

ಜೀವು : (ಪ್ರವೇಶಿಸಿ, ಚಾಪೆಯ ಮಧ್ಯಭಾಗವನ್ನು ಪರಕೆಪಾಣಿಯಾಗಿ ಅಲಂಕರಿಸಿರುವ ಬೋರನನ್ನು ಸಮೀಪಿಸಿ)

ಏನೋ ಇದೂ ? ಮನೇನ ಗುಡಿಸ್ತಿಧೀಯಾ, ಇಲ್ಲಾ ಮನೇಲಿರೊ ಒಂದ್ಹರಕ್ಲು ಚಾಪೇನ ಮೇಯ್ತಿಧೀಯಾ ? ಮೇಕೆ ? ನೀನು ಗುಡಿಸಿದ್ ಲಕ್ಷಣ ಸಾಕು. ಪರಕೇನಿಟ್ಟಿಟ್ಟು ರಾಮ್ಮೈಟ್ರಂಗ್ಡೀಗೆ ಹೋಗಿ, ಪಂಚೇರು ಸಕ್ರೆ ಇಸ್ಕೊಂಬಾ.

ಬೋರ : ದುಡ್ರವ್ವಾ ?

ಜೀವು : ಛೀ! ದುಡ್ಡಿನ್ ಯೋಚ್ನೆ ನಿನಗ್ಯಾಕೊ ? ಶೆಟ್ರೇನಾದ್ರು ದುಡ್ಡಿನ್ ಮಾತು ಎತ್ತಿದ್ರೆ, ಅವರ ಕೇಸ್ ಹೀರಿಂಗು ನಾಳೆ ಅಂತನ್ನು.

(ಎಡಬಾಗಿಲನ್ನು ಸಮೀಪಿಸುತ್ತಿರುವ ಬೋರನಿಗೆ)
ಸ್ವಲ್ಪಿರೋ!
(ಆತ್ಮಗತಂ)

ಇನ್ನೇನ್ಬೇಕ್ ಮನೇಗೆ ?........ಸರಿ. ಜ್ಞಾಪ್ಕ ಬಂದ್ಹಾಗೆ adjourn ಮಾಡ್ಕೊಂಡ್ರಾಯ್ತು ನಾಡಿದ್ಗೊ ಆಚೆನಾಡಿದ್ಗೊ ಸಾಮಾನುಗ್ಳು ಬೇಕಾದ್ಹಾಗೆಲ್ಲಾ!

(ಪ್ರಕಾಶಂ)
ಹೋಗೊ ಶನಿ!

[ಬೋರ ನಿಷ್ಕ್ರಮಣ]

(ಸಿಡುಕು ಮುಖದಿಂದ)

ಏನ್ ಹಾಳು ಸಂಸಾರವ್ರೊ ಇದು! ಲಾಯರ್ರುಗ್ಳ ಹೆಂಡ್ತಿಗ್ಳ ಹಣೇಬರೆಹವೆಲ್ಲಾ ಹೀಗ್ಯೆ! ಅವ್ರೆ ಪ್ರಪಂಚದಲ್ಲಿರೊ ಲಾಯರ್ರುಗ್ಳೆಲ್ಲಾ ಇವ್ರ ಹಾಗ್ಯೇ ? ನಮ್ಮಪ್ಪ ಲಾಯರ್ರು ಕೆಲ್ಸ ಮಾಡ್ತಾಗ ನಮ್ಮನೆ ಹಜಾರದ ಕಂಬಕ್ಕೆ 'Law' ಗೊತ್ತಿತ್ತು! ಆ ಕಂಬಕ್ಕೆ ಗೊತ್ತಿದ್ದ 'Law'ಲಿ ಎಳ್ಳಷ್ಟಾದ್ರೂ ಇವಕ್ಕೆ ಗೊತ್ತಿದ್ದಿದ್ರೆ ಇಷ್ಟೊತ್ಗೆ, ಮಲ್ಲೇಶ್ವರದಲ್ಲಿ ಮೂರ್ಮಾಡಿಮನೆ ಕಟ್ಟಹುದಾಗಿತ್ತು! ಯಾಕ್ಹೀಗಿದ್ಯೊ ಕಾಣೆ ? ಇಷ್ಟಕ್ಕೂ ಲಾಯರ್ರಿಗೆ ಬೇಕಾದದ್ದೆಲ್ಲಾ ಇದೆ ಇವ್ರಿಗೆ. ಮಾತಿಗೂ ಸುಳ್ಳುಗಳಿಗೂ ಕಮ್ಮಿ

ಏನೂ ಇಲ್ಲ. ಇಲ್ಲಾ, ಕೋರ್ಟ್ನಲ್ಲಿ ಬೆಚ್ಚಿದ್ದು ಬಾಯ್ಬಿಡೋಕೆ ಬೆದ್ರಿ ನಾಲ್ಕೇನ್ ನುಂಗ್ಕೊಂಡು ನಡಗ್ತ ನಿಂತಿರುತ್ತೋ ? ಇಲ್ಲ, ಜಡ್ಜಿಗ್ಳು ಇವ್ರ ಪೂರ್ವ ಜನ್ಮದಲ್ಲಿ ಜ್ಞಾತಿಗ್ಳೊ ಏನೊ ಕಾಣೆ! ಮುಖ್ಯ, ಕೇಸುಗ್ಳು ಗೆಲ್ಲದ ಕೆಂಬೂತ!

(ಬೋರನು ಮೇಜಿಗೆ ಒರಗಿಸಿ ಹೋದ ಪರಕೆಯನ್ನು ಹಿಡಿದುಕೊಂಡು ನಿಲ್ಲುವಳು)

ಅಹೋಬ್ಲ : (ನೇಪಥ್ಯದಲ್ಲಿ) ಇಷ್ಟೊತ್ನಲ್ಲೇನ್ ಗಲಾಟೆ ನನ್ನ ಛೇಂಬರ್ಸ್‌ನಲ್ಲಿ ?

[ಹಿಂಭಾಗದ ಮಧ್ಯಬಾಗಿಲಲ್ಲಿ ಕಾಣಿಸಿಕೊಂಡು]

ಏನ್ನೀನೇ ಜೀವು! ನೀನೇ ಗುಡಿಸ್ತಿದ್ದೀಯಾ! ? Poor **girl** ! ಯಾಕೆ. ಬೋರ ಎಲ್ಹೋದ ? ಹನ್ನೆರಡಾರ್ಲ ಎಪ್ಪತ್ತೆರ್ಡುರ್ ರೂಪಾಯಿ ಬಿಟ್ಬಿಟ್ಟು ಎಲ್ಹೋದಾನು ?

ಜೀವು : ಎಪ್ಪತ್ತೆರ್ಡುರ್ ರೂಪಾಯಿ! ಯಾರ್ದೆಪ್ಪತ್ತೆರ್ಡುರ್ ರೂಪಾಯಿ!

ಅಹೋಬ್ಲ : ಸಧ್ಯ ಯಾರ್ದೂ ಅಲ್ಲ. ಒಂದ್ವೇಳೆ ನಮ್ದಾಗಿದ್ರೂ ಅವನಿಗ್ಕೊಟ್ರೆ. ಬೋರಂದು...ಸಂಬಳ, ಒಂದ್‌ಸಂವತ್ಸರದ್ದು.

ಜೀವು : ಇದೇನ್ಹೊಸಲ್ಮೇಲೇ ನಿಂತ್ಕೊಂಡು ಮಾತಾಡ್ತಿದ್ದೀರಿ ? ಒಳ್ಗೇದಲ್ಲ. ಒಳಕ್ಬನ್ನೀಂದ್ರೆ.

ಅಹೋಬ್ಲ : Not at all! ನಿನ್ಕೈಲಿ ಪರಕೆ ಇರೋವರ್ಗು ಪ್ರವೇಶಿಸೋದು ಅನುಚಿತ, ಅಪಾಯ! "ಚಾಮರಂ ಪತಿಭೀಕರಂ" ಇತಿ ನನ್ನ್ ಅಮರ! ಆ ಪರ್ಕೆ ಆ ಮೂಲೇಲಿಡು.

[ಪ್ರವೇಶಿಸಿ ಜೀವುವನ್ನು ಸಮೀಪಿಸಿ]

ಹೂಂ ...... ಕಾಫಿ ತಗೊಂಡ್ಬಂದ್ಬಿಡು ಬೇಗ! Friends ಗಿಂಡ್ಸ್ ಬಂದ್ಬಿಟ್ಟಾರು.

ಜೀವು : ಕಾಫಿ ಆಗಿದೆ ... ಸಕ್ರೇಗೆ ಕಳಿಸಿದೇನೆ ಅಂಗ್ಡೀಗೆ, ಬೋರನ್ನ.

ಅಹೋಬ್ಲ : ಅಂಗ್ಡೀಗೆ! ದುಡ್ಡೆಲ್ಲೀದು ?

ಜೀವು : (ತಾತ್ಸಾರದಿಂದ) ಹಯ್ಯೋ! ಬುದ್ಧೀಂಬೋದು ನಿಮ್ಗೊಬ್ರಿಗೇನೇ ವೇಯೀ ಲಾಯ್ರು ಹೊಟ್ಟೇಲ್ಹುಟ್ಟಿ...ಲಾಯ್ರು ಕೈ ಹಿಡ್ದು...ಕಾಸಿಲ್ದೆ ಒಂದಿಷ್ಟು ಸಕ್ರೆ ತರಿಸೋಕ್ಹೂಡ ಗೊತ್ತಿಲ್ದೆ ಹೋಯ್ತೆ ನನಗೆ! ?

(ಭ್ರುಕುಟಿರಚನೆಯಿಂದ ಪ್ರಶ್ನಿಸುತ್ತಿರುವ ಪತಿಗೆ)

ಅದೇ ರಾಮ್‌ಶೆಟ್ಟಿ ಕೇಸು. ರಾಮ್‌ಶೆಟ್ಟಿ ಕೇಸೂಂತ ಬಡುಕೊಳ್ತಿದ್ರಲ್ಲ ಮೂರ್ತಿಂಗ್ಳು ಹಿಂದೆ, ಅದ್ರ "ಹೀರಿಂಗ್ನ" ನಾಳೇಗ್ ಹಾಕ್ಕೊಂಡೆ.

(ಕೋಣೆಯ ಉಸುರನ್ನೆಲ್ಲಾ ಹೀರುತ್ತಾ ಮೂಗನ್ನು ಸೂರಿಗೆತ್ತುವಳು)

ಅಹೋಬ್ಲ : Wonderful womanಉ ಜೀವು!. ನೀನೂ ನಿನ್ನಂಥ wifeಊ ಇದ್ದು ಸ್ವಲ್ಪ luckಊಗಾನ ಬಂತೋ. Lord ಸಿಂಹನ್ನ ಎತ್ಕುಕ್ಕಿಬಿಡ್ತೇನೆ ಒಂದ್ದಿನ! ಎತ್ತೇ ಕುಕ್ಕಿಬಿಡ್ತೇನೆ one of these ದಿನಾಸ್!

ಜೀವು : ಹಯ್ಯೋ ಸಾಕ್ನಿಲ್ಸೀಂದ್ರೆ! ನಿಮ್ಮೋರೆ ಮಯ್ಯು ಮತಿ ಇರೊ ಯೋಗ್ಯತೇಗೆ ಇನ್ನೊಬ್ಬನ್ನ ಎತ್ಕುಕ್ಬೇಕೆ ? ಅದ್ರಲ್ಲೂ "ಸಿಂಹ"ನಂತೆ ಅವನ ಹೆಸ್ರು! ಯಾರದು ?

ಅಹೋಬ್ಲ : ಬಂಗಾಳದ ಲಾಯ್ರು ಜೀವು! Practiceಗೆ ಪ್ರಾರಂಭಿಸ್ದ ಪ್ರಾಣಿ. ನಾವೀಗಿದ್ದೇವಲ್ಲಾ...ವಿಜೃಂಭಣೆಯಾಗಿ...ಇದಕ್ಕೂ ಅವನಾಗಿದ್ದವ್ಕಕ್ಕೂ ಅಗಳಷ್ಟೂ ಸಂಬಂಧವಿಲ್ಲ. ಒಂದೇ ಮಾತ್ನಲ್ಲಿ ಹೇಳ್ತೇನೆ : ಅವನ ಮನೇಲಿ ಗುಡಿಸೋಕೆ ಕಸಕ್ಕೂಡ ಯೋಗ್ಯತೆಯಿಲ್ಲ. ಇನ್ನು ಊಟ ಉಪಚಾರಗ್ಳೋ : ನೆನ್ನೆ ಅನ್ನ, ಮೊನ್ನೆ ಸಾರು. ಈವತ್ತಿನೆಲೆ. ನಾಳೆ ನೀರು. ನಾಡಿದ್ದು

ಊಟ! ಹೀಗಿದ್ದ ನೋಡು ಜೀವು! ಆ ಚಂಚಲಕಟಾಕ್ಷಿ ವರಲಕ್ಷ್ಮಿ ಕಣ್ಣು ಸ್ವಲ್ಪ ಮಿಟಿಕ್ಸಿದ್ರೂ,...... ನೆಗೆವ ನೋಡು ಭೂಪ್ತಿ Lord ಪಟ್ಟಕ್ಕೆ! ಜೀವೂ! ಪಾತಾಳದಿಂದ ಈ ಪಾಮರ Lord ಪಟ್ಟಕ್ಕೆ ಏಗರಿರೋವಾಗ ಭೂತಾಳದಲ್ಲಿರೊ ನಾವಿಬ್ರೂ ಇದಕ್ಕಂತ ಎತ್ತರವಾಗಿ ಎಗರ್ಬ್ಬಾರ್ದ್ದಾ ಜೀವು! ?

[ಎಂದು ಹುಮ್ಮಸ್ಸಿನ ಆವೇಶದಲ್ಲಿ ಜೀವುವನ್ನು ಸಮೀಪಿಸುವನು]

ಜೀವು : (ಜುಗುಪ್ಸೆಯಿಂದ) ಹಯ್ಯೋ ನಿಲ್ಸೀಂದ್ರೆ! ನಿಮ್ಮಾತೆಲ್ಲಾ ಹೀಗ್ಯೇ. ಲಾಗಾಯಿತ್ನಿಂದ ಮರಳ್ಮೇಲೆ ನೀವ್ಕಟ್ಟಿರೊ ಮುನ್ನೂರು ಅರಮನೆಗ್ಳ ಜೋತೇಲಿ ಇದೊಂದು ಹೊಸ ಮಹಲ್ಲು. ಈ ಮಟ್ಟಿಲ್ಲಾ ಬಿಟ್ಬಿಟ್ಟು ಕೇಸುಗಳ್ನ ಓದ್ಕೊಂಡು, ಕೋರ್ಟ್ಗೆ ಹೋಗಿ, ಗೆದ್ದು, ಸಂಪಾದ್ನೆ ಮಾಡಿ, ಹೆಪ್ಪಿಟ್ನಿಂದ ತಲೆ ತುದಿವರ್ಗೂ ಇರೋ ಸಾಲಾನೆಲ್ಲಾ ತೀರ್ಸಿ, ಸಧ್ಯ ನೆರೆಹೊರ್ಕೆವ್ರು ಕಟ್ಟಿಧಾರಲ್ಲಾ ಪಟ್ಟ............"ಬಂಡ್ವಾಳ್ವಿಲ್ಲದ ಬಡಾಯೀ"ಂತ....... ಅದ್ನ ಹೋಗ್ಲಾಡಿಸ್ಕೊಂಡು ಮಾನ ಮಿಗಿಸ್ಕೊಂಡು ಬದುಕಿದ್ರೆ, ಆ ಮೇಲೆ........ಈ "Lord" ಪಟ್ಟ ಅಂಬೋ ಬಿಸಿಲ್ಕುದ್ರೇನ ನಾವಿಬ್ರೂ ಸವಾರಿ ಮಾಡ್ಬೋದು!

ಅಹೋಬ್ಲು : (ಮೇಜಿನ ಮೇಲೆ ಲಾ ಪುಸ್ತಕದ bind ಹಾಕಿರುವ ಒಂದು ಪುಸ್ತಕವನ್ನು ತೆಗೆದು ಒಳಗಿರುವ Film Magazine ಹಾಳೆಗಳನ್ನು ತಿರುವುತ್ತ) ಹೆಂಗಸ್ರೆಲ್ಲಾ ಹೀಗೆ........ ಹುಮ್ಮಸ್ಸಿಲ್ಲ! **No enthusiasm at all!**

ಜೀವು : ಹಯ್ಯೋ! ಗೊಂಬೆಗ್ಳು ಹಾಕಿದ Law ಪುಸ್ತಕ ಓದೋದ್ರಿಂದ್ಲೇ ಗೋಳು ಮನೇಗೆಲ್ಲ!

(ಎಡ ಬಾಗಿಲನ್ನು ಈಕ್ಷಿಸಿ)

ಅದೋ ಬೋರನೂ ಬಂದ, ಸಕ್ರೇನೂ ಬಂತು.

[ಹಿಂಬಾಗಿಲಿನ ಹೊಸಲನ್ನು ಸಮೀಪಿಸುತ್ತ]

Lord ಸಿಂಹನ್ನ ಬಾಯ್ಮಾತ್ನಿಂದ್ಲಾದ್ರು ಎತ್ಕುಕ್ಕಿ ಬರ್‍ತಿರೊ ನಾಲ್ಗೆ ಪ್ರಯಾಸಕ್ಕೆ ಒಂದ್ಲೊಂಬು ಕಾಫೀನಾದ್ರು ಬಸ್ಕೊಳ್ಳಿ!

[ನಿಷ್ಕ್ರಮಣ]

ಅಹೋಬ್ಲು : (ಉತ್ಸಾಹದಿಂದ) Golden girlಉ ಜೀವು! ಪುಟಕ್ಕೆ ಹಾಕಿದ partnerಉ! ಎಷ್ಟು anger ಇದ್ರೂನೂವೆ........ಏನು! Loveಉ Love ಏನೇವೇ!

[ಎಡಬಾಗಿಲಿಂದ ಪ್ರವೇಶಿಸಿ ಕೋಣೆಯನ್ನು ಹಾಯುತ್ತಿರುವ ಬೋರನಿಗೆ]

ಜೀಮೀಲೇನಾದ್ರು ಬಿಡಿಗಾಸು ಬಿದ್ದಿಧೇಂತ ಬಗ್ನೋಡ್ತ ಬರ್‍ತಿಧೀಯೇನೋ ಬಕ್ವೇ! ?........
(ಸ್ವಗತಂ)
ಚೆನ್ನಾಗ್ ಚುನಾಯಿಸ್ದೆ ಚಾಕರೀಗೆ ಈ ಚತುಷ್ಪಾದಾನ! ....
(ಹಿಂಬಾಗಿಲಿನಿಂದ ನಿಷ್ಕ್ರಮಿಸುವ ಬೋರನನ್ನು ನೋಡುತ್ತ)

ಅದೊಂದ್ಮಟ್ಟೂ ಒಪ್ಕೊಳ್ಳೀಬೇಕು!........ಯಾವ ಕೆಲ್ಸ ಹೇಳಿದ್ರೂ ಮೈಬಗ್ಗಿ ಮಾಡ್ತಾನೆ .... ಮೈಬಗ್ಗಿ ಮಾಡ್ತಾನೆ!

[ಬಲಬಾಗಿಲಿಂದ ನಿಷ್ಕ್ರಮಣ]

ಅಹೋಬ್ಲು : (ಪುನಃ ಪ್ರವೇಶಿಸಿ, ಸ್ವಗತಂ) ಬಾಳು ಯಾಕ್ ಇಷ್ಟು lateಉ ಈ ಹೊತ್ತು ? ಈ ಹೊತ್ತೇನೂ ಯಾವ ಹೊತ್ತೇನೂ! ? ಇವನ ಹಣೇಬರೆಹವೆಲ್ಲಾ lateಏ! ಹತ್ನೇ

ತಿಂಗ್ಳಲ್ಲಂತೆ ಹುಟ್ಟಿದ್ದು ಇವ್ನು. ಹುಟ್ಟಿದ್ದೇ lateಉ! ಇರ್ಲಿ!, ಹೇಳಿದ್ದೆಲ್ಲ ಮಾಡ್ತ ಬರ್ತಾ ಇತ್ತು ಎತ್ತದೆ ತೆಪ್ಪನೆ ಡುಡೀತ ಬೆಕ್ಕಿನ್ಹಾಗೆ ಬಿದ್ಗೊಂಡಿದ್ದ ಈ ಕುರಿ ಕಿವೀಗೆ ಯಾರೊ juniorಗೂ clerkಗೂ ಕೆಲಸ್ಗಾರ್ನಿಗೂ ಇರೊ ವ್ಯತ್ಯಾಸಾನ ಯಾವ ಪಾಪಿನೋ ಊದ್ಬಿಟ್ಟಿದ್ದಾನೆ! ಈಗಿಂದೀಚೆಗೆ ದುಡ್ಡು ದುಗಾಣಿ ಅಂತ ಗೊಣಗುಟ್ಟೋಕೆ ಪ್ರಾರಂಭಿಸ್ಬಿಟ್ಟಿದೆ ಈ ಗುಗ್ಗು. ಏತನ್ಮಧ್ಯೆ ಇವರಪ್ಪನ ಪತ್ರ ಒಪ್ಕೊಂಡ ತಿಂಗಳಿಗೆ ಹದ್ನೈದ್ರ ಪ್ರಕಾರ ಇಪ್ಪತ್ತಿಂಗ್ಳ ಸಂಬ್ಳ ಮುನ್ನೂರ್ರೂಪಾಯ್ನ ಮಾತ್ಗೀತು ಏನಾದ್ರು ಎತ್ತಿಗಿತ್ತಿದ್ನೊ,ವ್ಸ್ತ್ನ...ಆದ್ರೇನು...ನಾನ್ಮಟ್ಟಿಗೆ ನನ್ನ usual tactics...... diplomacy......ಇರೋವರಿಗೂ ಹೇಗಾದ್ರೂ .. manage ಮಾಡ್ಕೋಬಹುದು!

[ಎಡ ಬಾಗಿಲನ್ನು ದುರುಗುಟ್ಟಿನೋಡಿ, ಕೂತ ಕುರ್ಚಿಯನ್ನು ಕೂತಹಾಗೆಯೇ ಸೇರುತ್ತ ಬಾಗಿಲನ್ನು ಸಮೀಪಿಸಿ]

ಇಕೋ ಬಂದ! ಈಗ stiff ಆಗಿರೋದೇ best thingoo!
(ಪ್ರವೇಶಿಸಿ ಹೊಸಲ ಮೇಲೆ ನಿಂತ ಬಾಳುವಿಗೆ ಬಿರುಸಾಗಿ ಅರ್ಭಟಿಸುತ್ತ)

What is this, I say! What is the meaning of this, I say? What is the time, I say! What are you, where are you, when are you, why are you, what is it I say!? ಇದೇನು Chambersಓ ಛತ್ರಾನೊ? ಕಾಲ ದೇಶ ವರ್ತಮಾನ ಗೊತ್ತಿಲ್ವೆ ನಿನಗೆ? ಏನರ್ಥ? ನೀನೇನು ಮನುಷ್ಯನೇ, ಮೃಗವೇ? What is it? Duty, Docility, Disciplineನ Dictionaryಲಾದ್ರು ನೋಡಿ ಧೀಯಾ? What is the meaning of this? ಏನಿದು ಹುಚ್ಚು, ಬೊಗಳೂ ಬಾಳು!

ಬಾಳು : (ಮುಂದಕ್ಕೆ ಬಂದು ಸೊಟ್ಟಮೋರೆಯನ್ನು ಧರಿಸಿ) ಏನ್ ಸಾರ್ ಇದು? ಯಾರ್ನ ಹೆದ್ರುಸ್ತೀರಿ ಸಾರ್! ಓಹೋಃ! ಏನ್ಸಾರ್ ಇದು? ನಮ್ಮಪ್ಪ ಹೇಳ್ದ ಸಾರ್, ನಮ್ಮ Fatherಉ: ನೀನು ಅಹೋಬಲ್ರಾಯ್ರು ರೂಮಿಗೆ ಹೋದಾರಭ್ಯ........

ಅಹೋಬ್ಲು : (ಅಡ್ಡಮಾತಾಗಿ) Roomoo ಅನ್ಬೇಡ! Chambersಉ ಅನ್ನು.

ಬಾಳು : ಆಗ್ಲಿಸಾರ್. ನಮ್ಮಪ್ಪ ಹೇಳಿದ್ದಿಷ್ಟು: "ನೀನು ಅಹೋಬಲ್ರಾಯ್ರು Chambersಗೆ ಹೋದಾಗ್ನಿಂದ Chambersನ ಮನೆ ಸಮೇತ ಗುಡ್ಸೋದು: ಬಾವಿಯಿಂದ ನೀರು ಸೇದಿ ಹಂಡೆ ತುಂಬೋದು; ಮಾರ್ಕಟ್ಟಿಗೆ ಹೋಗಿ ತರ್ಕಾರಿ ತಂದ್ಹಾಕೋದು; ನಿಮ್ಮಕ್ಕಳನ್ನ ಸ್ಕೂಲಿಗೆ ತಲಪ್ಸೋದು; ಇನ್ನು ಕೋರ್ಟ್ಗೆ ಟಿಫನ್ ತಕ್ಕೊಂಡ್ಹೋಗೋದೂ ಅಲ್ದೆ ತಿಂಗ್ಳು ತಿಂಗ್ಳೂ ಐದ್ದಿನವಾದ್ರೂ ಅಡಿಗೆ ಮಾಡೋದು; ಹೀಗೆಲ್ಲಾ ನಿನ್ರಾಯ್ರು ಮನೇಲಿ ಕಲಿಯೊ "Law"ನ ಇಲ್ಲೇ ಮನೇಲೇ ಕಲಿ! ಸಧ್ಯ ಈ ಇಪ್ಪತ್ತಿಂಗ್ಳು ಹದ್ನೈದು ರೂಪಾಯಿ ಪ್ರಕಾರ ನಿನಗೆ ಬರಬೇಕಾದ ಮುನ್ನೂರು ರೂಪಾಯ್ನ ನಿನ್‌ರಾಯ್ರು ಕೈಯಿಂದ ಇಸ್ಕೊಂಡು ಮನೇಗ್ಬಂದು ಸೇರು" ಅಂತಂದ್ರು ಸಾರ್........ನಮ್ಮ Fatherಉ!

ಅಹೋಬ್ಲು : (ನಾಲಿಗೆಯನ್ನು ಕಚ್ಚಿಕೊಳ್ಳುತ್ತ, ಸ್ವಗತಂ) ಹೌದು!........too far ಹೋಗ್ಬಿಟ್ಟೆ! Wormಊ ಕೂಡ turn ಮಾಡುತ್ತೇಂಬೋದ್ನ ಮರ್ತ್ಬಿಟ್ಟಿದ್ರ್ಯಾಗಿ... ...... ನನ್ನಿಂದ ಜೀವ ಬಂದ ಈ ಜಂತು ನನ್ನಮೇಲೇ ಹೆಡೆ ಎತ್ತಿ ಮುನ್ನೂರು ರೂಪಾಯಿ arrearsನೂ ಕೇಳುತ್ತಲ್ಲಾ! ಆ!?

(ಕ್ಷಣ ಮಾತ್ರ ಮುಖವನ್ನು ಗಂಟುಹಾಕಿಕೊಂಡು ಯೋಚಿಸಿ. ತತ್‌ಕ್ಷಣವೇ ಮುಖದ ಗಂಟನ್ನು ಬಿಚ್ಚಿ ಸ್ಮಿತವಕ್ತ್ರನಾಗಿ, ಸ್ವಗತಂ)

But......tactics change ಮಾಡ್ಬೇಕು. Stiff method ಬಿಟ್ಬಿಟ್ಟು soft ಆಗಿ ಪುಂಗಿ ಬಾರಿಸ್ಬೇಕು, ಈ hood ಎತ್ತಿದ ಕ್ರಿಮೀಗೆ!

(ಪ್ರಕಾಶಂ)
ಬಾಳು, ಹೀಗ್ಬಾ!

(ಎದ್ದು ಬಾಳುವನ್ನು ಕೈಹಿಡಿದು ಕರೆದುಕೊಂಡು ಹೋಗಿ ಬೆಂಚಿನ ಪಕ್ಕದ ಒಂದು ಕುರ್ಚಿಯಲ್ಲಿ ಕೂಡಿಸಿ, ತಾನೂ ಕುಳಿತುಕೊಂಡು ಗಂಭೀರ ವಿನಯ ಮಮತೆಗಳು ಮಿಶ್ರಿತವಾದ ಮಧುರ ಭಾವವನ್ನು ತಾಳಿ)

ಮಗು, ನೀನೋ youngಉ! ನಾನೋ oldಉ! ನಿನ್ನ bloodಓ ಬಿಸಿ! ನನ್ನ ರಕ್ತವೋ coldಉ. ಎಳೆ ನಾಗರಹಾವು ಹೆಡೆ ಎತ್ಕೊಂಡು ಬುಸುಗುಟ್ಕೋದು ಅಡಕ್ಕೊಂದುತ್ತೆ. ಯಾಕೆ? ತಜ್ಜನ್ಮ, ತದ್ವಯಸ್ಸು, ತದ್ರಕ್ತ, ತದ್ಬಿಸಿರಕ್ತ, ಸಹಜ. ನಾನು oldಉ. ನನ್ನ bloodಉ coldಉ. ನಿನ್ನ young ವಯಸ್ಸಿನ ರೇಗೋದ್ನ ಗಮನಿಸ್ದೆ, ನಿನ್ಕಿರ್ಲ್ಲಾಟಾನ ಕಪಿಗ್ಬಾಕ್ಕೊಳ್ದೆ ಮನಸ್ಸಿಗೆ ಶಾಂತಿ ತಂದ್ಕೊಂಡು ನಿನ್ನ ಮುಂದಕ್ಕೆ ತರೋದು ಅಂಬೊ ಯಾವ ನಿಮಿತ್ತಾನ ಮುಂದಿಟ್ಕೊಂಡು, ನಿನ್ನ, ನನ್ನ Chambersನ ಹೊಸಲು ದಾಟ್ಸಿ ಇಪ್ಪತ್ತಿಂಗ್ಳು ಓಂದೆ ವಹಿಸ್ಕೊಂಡ್ನೊ........ಅದೇ ನಿಮಿತ್ತಾನ ಮರೀದೆ, cold ಕಬ್ಬಿಣದ್ಹಾಗೆ rigidಆಗಿ stiffಆಗಿ ಈಗ್ಲೂ ಹೇಳ್ತಿರೋದ್ನ calm ಆಗಿ ಕೇಳು, ಮಗು. ಕೇಳು: ನಿನ್ನ, ಬಾಳು! ನಿಮ್ಮಪ್ಪ, ನಿಮ್ತಂದೆ, ಪಿತ, ಜನಕ ನಿನ್ನಕರ್ಕೊಂಡ್ ಬಂದು ಈ Chambersಗೆ, ನಿನ್ನ ಪುಟ್ಕೈನ ನನ್ನ ದೊಡ್ಕೈಲಿಟ್ಟು... ಗದ್ಗದ ಸ್ವರದಿಂದ "ಸ್ವಾಮಿ, ಈ ಕೂಸ್ನ ನಿಮ್ಕೈಲಿಟ್ಟಿಧೇನೆ. ಇದ್ನ ಮುಂದಕ್ತರೋ ಭಾರ ತಮ್ದು. ಈ ಕ್ಷಣದಿಂದ ಈ ಮಗೂಗೆ ತಂದೆ, ತಾಯಿ, ತಮ್ಮ, ತಂಗಿ, ಬಂಧು, ಬಳಗ, ವಿಶಿಷ್ಟವೂ...ಒಟ್ನಲ್ಲಿ ದೇವ್ರೂ, ಅಷ್ಟದಿಕ್ಪಾಲಕ್ರೂ, ಪಂಚಭೂತಗ್ಳೂ ತಾವೇ ಈ ಮಗೂಗೆ. ಇದ್ರ ಮುಂದಿನ್ ಯೋಚ್ನೆ ತಮ್ಮ ಭಾರಾ"ಂತ ನನ್ನ ಮೇಲೆ........ನನ್ನ ಹೆಗಲ್ಮೇಲೆ ಹೇರಿಸ್ದಾಗ ನಿನ್ನ ಜವಾಬ್ದಾರೀನ....... ವಿಶ್ವಾಮಿತ್ರ ದಶರಥನ ಕೈಯಿಂದ .... ಶಸ್ತ್ರಾಭ್ಯಾಸಕ್ಕೆ ರಾಮಲಕ್ಷ್ಮಣರನ್ನ ವಹಿಸ್ಕೊಂಡು ಅರಣ್ಯಕ್ಕೆ ಕರ್ಕೊಂಡ್ಹೋದದ್ದು ಜ್ಞಾಪಕ ಬಂತು. ದಶರಥನ ಅರಮನೆ ಅನುಕೂಲಗಳೆಲ್ಲಿ? ವಿಶ್ವಾಮಿತ್ರ ರಾಜಪುತ್ರರ್ನ ಕರ್ಕೊಂಡ್ಹೋದ ಅರಣ್ಯದ ಅನಾನುಕೂಲಗಳೆಲ್ಲಿ? ನಿಮ್ತಂದೆ ಮನೇಲಿ ನೀನು ಅನುಭವಿಸ್ದ ಸುಖಸೌಕರ್ಯಗಳ್ನ ಜ್ಞಾಪಿಸ್ಕೊಂಡು ನನ್ನ Law trainingನಲ್ಲಿ ಇರೋ rigid disciplineನ ಸಹಿಸ್ಲಾರ್ದೆ ಹೀಗೆ ಅವಸ್ಥೆಪಡ್ತೀಯೇ ಹೊರ್ತು .... ನಾನು ನಿನ್ನ ನೇಮಿಸೋ ಕೆಲಸಗಳಿಗೆ ಇರೊ ಅರ್ಥ ನಿನಗೆ ಗೋಚರವಾಗೋದಿಲ್ಲಾಂತ ಕಾಣುತ್ತೆ ಮಗು! ನೀನು, ನಾನು ನಿನ್ನ ಕೈಯಿಂದ ಮಾಡ್ಸೊ ಕೆಲಸಗಳ್ನೆಲ್ಲ ಜ್ಞಾಪ್ಕಹಾಕ್ಕೊಂಡು ಜ್ಞಾಪಿಸ್ಕೊಳ್ತ ಅಳ್ತಿಧೀಯೇ ಹೊರ್ತು ಆಯಾ ಕೆಲಸಗಳ ಅರ್ಥ ಅಲ್ದೆ ಅವುಗಳಿಗೂ ನೀನು ಮುಂದಕ್ಕೆ ಬರೋಕೂ ಇರೋ ಸಂಬಂಧದ ಸೂಚನೆ ನಿನಗೆ ಸ್ವಲ್ಪವಾದ್ರು ಸೋಕುತ್ಯೆ? ನೋಡು, ಬಾಳು, ನನ್ಕೈಲಿ ಕೆಲ್ಸ ತೊಗೊಳ್ತೇನಲ್ಲಾ ಅಂಬೋದ್ನ ಮಟ್ಟಿಗೂ ಗಮನಿಸಿ ರೇಗ್ತೀಯೇ ಹೊರ್ತು, ಯಾಕೀ ಕೆಲ್ಸ ನಿನ್ ಕೈಯಿಂದ ಮಾಡೆಸ್ತೇನೆ ಅಂಬೋದ್ನ ಯೋಚ್ಸಿಧೀಯಾ ನೀನು? ನೋಡು, ಬಾಳು: ನಾಳೆಯಿಂದ ಜೋರ ಬೇಡ. ನೀನೇ ಗುಡ್ಸು ಅಂತ ಅಂದೇ ಅಂತಿಟ್ಕೊ, ಮಸ್ಲ! ಆಗ ನೀನು "ಎಲ! ನಮ್ರಾಯ್ರು ಬೋರ್ನ ಹಾಗೆ ಕಸಗುಡಿಸಿಸ್ತಾರಲ್ಲಾ!" ಅಂತ ರೇಗ್ತೀಯೇ ಹೊರ್ತು........ "ಎಲಾ! ನಮ್ರಾಯ್ರು! ನಮ್ಮ Family friendಉ! ನಮ್ಮಪ್ಪನಿಗೆ ಪ್ರಾಣಸ್ನೇಹಿತ್ರು! ನನಗೋ. well wisherಉ! ಇಂಥ ನಮ್ರಾಯ್ರು ನನ್ಕೈಲಿ ಪರ್ಕೆ ಕೊಟ್ಟು ಗುಡ್ಸಿಸ್ತಾರಲ್ಲಾ! ಇದರಲ್ಲಿ ಏನೋ ಸೂಕ್ಷ್ಮ ಇಧೆ! ಏನೋ ಗುಟ್ಟಿಧೇ"ಂತ ನನ್ಮೇಲೆ ನಂಬ್ಕೆ ಇದ್ಯೇ? ಊಂ ಹುಂ! ಇಲ್ಲ! ಯಾಕೆ? Because you are youngಉ! But young ಆದ್ರೂನೂವೆ, brains ಇರೋ boy ನೀನು. "ಹೌದು, ಕಸ ಗುಡ್ಸೋ ಕೆಲ್ಸಕ್ಕೂ, ನಾನು ಮುಂದೆ ಆಗೋ ಲಾಯ್ರು ಕಸಬಿಗೂ, ಸಂಬಂಧವೇನೂ"ಂತ ನಿನಗೆ ತೋಚ್ಯೇ ತೋಚುತ್ತೆ, Explanation ಹೇಳ್ತೀನೆ ಕೇಳು ಮಗು. ಕೇಳು. ನಾಳೆ, ನೀನು ಲಾಯ್ರುಗ್ಳ ಜೊತೇಲಿ ಲಾಯ್ರುಯಾಗಿ ಕೋರ್ಟ್ನಲ್ಲಿ ಕೂತಿರೋವಾಗ, ನಿನ್ನ ಜಿಬ್ಬಿ, ಎಲ್ಲಾ ಲಾಯ್ರುಗ್ಳ ಮೂತಿಗಳನ್ನೂ ನೋಡ್ತಾ ಬಂದು, ನಿನ್ಮಖಾನ

ನೋಡುತ್ತೀವೆ 'ಡಂಗ್' ಆಗಿ. "ಏಲಾ ಈ ಲಾಯ್ರು intelligenceಊ ಅಂಬೋದು ತಲೆಯೊಳ್ಗಾ ತುಂಬೀ ತುಂಬೀ ತುಳಕೀ ತುಳಕೀ ಕಣ್ಣುಗಳಿಂದ ಹೊರಗೆ ಹೊರಟು ಬಂದು ಮೋರೆಯೊಳ್ಗಾ ಸುರೀತಿರೋ ಬುದ್ಧಿಯೇ ಇಷ್ಟು ಇರುವಾಗ……ಇವನ್ಮಂಡೇಲಿ ಇರೋ main stock of ಮಿದುಳು ಎಷ್ಟ್ಯಾನೇ ಇರಬೇಕೂ"ಂತ ಆಶ್ಚರ್ಯ ಪಟ್ಟದ್ದಲ್ದೆ ಯಾವ್ದಾದ್ರೂ ಒಂದು ಕೇಸಿನ complicated knotty point ತಿಳುಕೊಳ್ಳೋಕೆ ನಿನ್ನ consult ಮಾಡೋಕೆ ತನ್ನ Chambersಗೆ ನಿನ್ನ ಕರಸಿಕೊಂಡಾಂತಿಟ್ಕೊ, ಮಸ್ಲ. ಆಗ ನೀನು ಆ ಜಡ್ಜಿ Chambers ಪ್ರವೇಶಿಸುತ್ತೀವೆ ಅತ. "ಏನು! ಇಂಥ ಘಟ್ಟಿಗ ಲಾಯ್ರು ನಮ್ಮ Chambersಗೆ ಬರೋವಾಗ ಯಾಕೀ ಕೋಣೆ ಇಷ್ಟು dirty ಆಗಿದ್ಧೇ"ಂತ ಗೊಣಗುಟ್ಕೊಂಡಾಂತಿಟ್ಕೊ. ಆಗ ಬಾಳೂ, ನೀನು ಬೆಪ್ಪುಕ್ಕಿ ಹಾಗೆ ನಿಲ್ಲದೆ …… ಸುತ್ಮುತ್ತ್ನೋಡಿ ಕೊನೆ ಮೂಲೇಲಿ ಗೋಡೇಗೆ ಒರಗ್ಕೊಂಡಿರೊ ಪರಕೇನ ಕಸ್ಕೊಂಡು. ಜಡ್ಜಿ Chambersನ ಜಾಡ್ಸಿ ಗುಡ್ಸಿ, ಕಸದ್ ಗುಡ್ಡೇನ ಕದದ ಹಿಂದೆ ಪೇರ್ಸಿ. ಕಸ್ಬರಿಕೇನ ಇದ್ಕಡೆ ಇಟ್ಬಿಟ್ಟು. ಜಡ್ಜಿ ಪಕ್ಕಕ್ಕೆ ಬಂದು ತುಟಿ ಕದಲಸ್ದೆ ತೆಪ್ಗೆ ನಿಂತೇಂತಿಟ್ಕೊ. ಮಸ್ಲ! ಆಗ ಜಡ್ಜಿ ಮೂಗಿನ್ ಮೇಲೆ ಬೆರಳಿಟ್ಕೊಂಡು. "ಎಲಾ ನಾನು ಗೊಣಗುಟ್ಟಿದ ಮಾತ್ರಕ್ಕೇನೇವೇ ಈತ ಇಷ್ಟೆಕ್ಲ್ಸ ಇಷ್ಟು ಚಟುವಟಿಕೆಯಿಂದ ಮಾಡಿರೋದ್ನ ನೋಡಿದ್ರೆ ಇಂಥಾವ್ನೊಬ್ಬ ನನ್ನ ಪಕ್ಕದಲ್ಲೇ ಇದ್ರೆ ನಾನೇ ಎಷ್ಟೆಕ್ಲ್ಸ ಮಾಡ್ತಾ ಇದ್ದೆ! ಅದೂ ಎಷ್ಟ್ಚೆನ್ನಾಗಿ ಗುಡ್ಸಿಧಾನೆ! ಕಸ ಗೂಡ್ಸೋದ್ರಲ್ಲೆ neat ಆಗಿರೋನು ತನ್ನ ಕಸಬ್ನಲ್ಲೂ neat ಆಗಿರ್ತಾನೆ. ಇವನ Chambersಊ neatಉ. tableಊ neatಉ, recordಊ papersಊ neat. Therefore ಇವನ Lawನೂ must be neatಉ!" ಅಂತ ನಿನ್ಮೇಲೆ ಖುಷಿ ಬಿದ್ದು, next ಯಾವ್ದಾದ್ರೂ vacancyಲಿ ಹಾಕ್ತಾನೆ! ನಿಸ್ಸಂದೇಹ! So much for ಗುಡ್ಸೋದು……… ಅಡಿಗೇಂತೀಯಾ! ಹನ್ನೊಂದು ಘಂಟೇಗೆ ಕೋರ್ಟಿಗೆ ಬಂದ ಜಡ್ಜಿ, "I do not understand you." "you are wasting my time" ……ಹೀಗೆಲ್ಲಾ ಒಂದು ಘಂಟೆವರಿಗೂ ರೇಗಿದ ಜಡ್ಜೀಗೆ ಒಂದು ತಟ್ಟೆ ಬೋಂಡ ಒಂದು ಕಪ್ ಕಾಫೀ tiffin timeಗೆ ಸೇರಿಸ್ಬಿಡು!. ಇನ್ಮೇಥ್ಯಾಪ್ಪವೆಲ್ಲಾ reverse gearಉ! …………"Yes, Mr. Balu!" "Quite so, Mr. Balu!" ಹೀಗೆಲ್ಲಾ **ನೀನ್** ಬಾಯ್ಬಿಟ್ಟಿದ್ದೆಲ್ಲಾ ಬಂಗಾರ! ಅಡಿಗೆ ಆಯ್ತೋ……… ಇನ್ನು ನಿನಗೆ ಕೊಡಬೇಕಾದ ಬಾಕಿ ಹದಿನೈದಿಪ್ಪತ್ಲ ಮುನ್ನೂರು ರೂಪಾಯೀಂತೀಯಾ. ಈ ಮುನ್ನೂರು ರೂಪಾಯಿನ್‌ಗತಿ ನಿಮ್ಮನೇಲೇನಾಗುತ್ತೆ ಗೊತ್ತೆ? ಮೂಗ್ಬಟ್ಕೊ. ಮೂಗುತಿಯೋ, ಕತ್ತಿ ಬಾಸ್ಟ್ನೋ. ಕಂಠೀ ಸರಾನೋ ಮಾಡ್ಕೊಂಡು ನಿಮ್ಮನೆ ಹೆಂಗಸ್ರು ನಲಿದಾಡೋಕೆ ನೆಪ್ಪಾಗುತ್ತೇ ಹೊರ್ತು ನಿನಗುಪ್ಯೋಗವೇನೂ ಆಗೋದಿಲ್ಲ. ನೀನು ಕಷ್ಟಪಟ್ಟು ಸಂಪಾದ್ಸಿ ನನ್ ಕೈಪೆಟ್ಟಿಗೇಲಿ ತಯಾರಾಗಿರೊ ನಿನ್ನ ಮುನ್ನೂರು ರೂಪಾಯಿಗ್ಳು!, …………ನನ್ನ ಅಭಿಪ್ರಾಯ ಏನು ಅಂತೀಯ ಬಾಳು ……………ನಿನ್ನ ಸಂಬ್ಳಾನೆಲ್ಲಾ carefulಆಗಿ ಕೂಡಿ ಹಾಕಿ ಕೈಪೆಟ್ಗೇಲಿಟ್ಕೊಂಡು…… ಲೇಪ್ಯ ಮಾಡಿಟ್ಕೊಂಡಿಧೇನಲ್ಲಾ Law ಅಂಬೋದ್ನ. ನನ್ನ ಮಂಡೆ ಅಂಬೋ ಜಾಡೀಲಿ……ಆ ಲೇಹ್ಯಾನ ಗುಳಿಗೆ ಗುಳಿಗೆಯಾಗಿ ನಿನ್ನ mental digestion…… ಬುದ್ಧಿಯ ಜೀರ್ಣ ಶಕ್ತಿಗೆ ಅನುವಾಗಿ ತಿನ್ನಿಸಿ……ನಿನ್ನ called to the bar ಅಂತ ಲಾಯ್ರಿಯಾಗಿ ಮಾಡಿ……ನಿನ್ನ ದುಡ್ನಲ್ಲೆ Chambers ತೊಗೊಂಡು……ಒಂದು set of Law Books purchase ಮಾಡಿ ನಿನ್ನ proper ಆಗಿ install ಮಾಡಿ ನಿನ್ನ ಕಕ್ಷಿಗಾರರ ಕೇಸ್ನ ನೀನೇ ಕೋರ್ಟ್ನಲ್ಲಿ conduct ಮಾಡೋದ್ನ ಕಣ್ತುಂಬ ನೋಡಬೇಕೂಂಬೋ ಕೋರಿಕೇಗೆ ಅಸ್ತಿಭಾರವಾದ ಕೆಲಸಗಳ್ನ ಮಾಡಿಸ್ತ ನಿನಗೆ training ಕೊಡ್ತಿರೊ ನನ್ಮೇಲೆ ಅಪನಂಬಿಕೆಯೇ ಬಾಳು?

(ಬಾಳು ಇದನ್ನೆಲ್ಲಾ ಕೇಳಿ ಆಶ್ಚರ್ಯಪಟ್ಟು, ಪಶ್ಚಾತ್ತಾಪದಿಂದ ಉಕ್ಕಿಬರುವ ದುಃಖವನ್ನು ತಡೆಯಲಾರದೆ ಅಹೋಬ್ಳುವಿನ ಅಂಗೈಮೇಲೆ ಮುಖವನ್ನು ಘರ್ಷಿಸಿಕೊಳ್ಳುತ್ತ ರೋದಿಸುವನು)

ಬಾಳು ! ಹೀಗೆ ಶೋಕಪಡೋದು ಅನುಚಿತ, ಅನಾರ್ಯ, ಅಸ್ವರ್ಗ್ಯ, ಅಕೀರ್ತಿಕರ, ಅರ್ಜುನ......ಅಲ್ಲ ಬಾಳು ! ನ್ಯಾಯಾಸ್ಥಾನಾಂಬೋ ದೇವಸ್ಥಾನದಲ್ಲಿ, Court room ಅಂಬೋ ಗರ್ಭಗೃಹದಲ್ಲಿ, Judicial bench ಅಂಬೊ ಮಂದಾಸನದ ಪೀಠದ ಮೇಲೆ ನಿನ್ನ ಕೂಡ್ಸಿ, ಚೀಫ್ ಜಡ್ಜಿಯಾಗಿ ಪಟ್ಟಾಭಿಷೇಕ ಮಾಡ್ಸಿ, ನಿನ್ನ ಮುಖಕ್ಕೆ ಮಂಗಳಾರ್ತಿ ಎತ್ತಿ, ನಿನ್ನ ದರ್ಶನ ಮಾಡಿ ಸಂತೋಷಪಡಬೇಕೂಂಬೋ ಅಭಿಪ್ರಾಯಾನ ಮುಂದಿಟ್ಕೊಂಡು ಈಗ ತಾನೇ ನಿನ್ನ ಕೈ ಹಿಡ್ಕೊಂಡು...ಆ ದೇವಸ್ಥಾನದ ಬಾಗಿಲು ತೆಗೆದು ಪ್ರಾಕಾರಾನ ಪ್ರದಕ್ಷಣೆ ಮಾಡಿಸ್ತಿರೊ **ನನ್ಮೇಲೆ** ಅಪನಂಬಿಕೆಯೇ ಬಾಳು ! ? ಮಗೂ......?

(ಬಾಳು ಹಿಡಿದುಕೊಂಡಿರುವ ಕೈ ಅಲ್ಲದ ಮತ್ತೊಂದು ಕೈಯಿಂದ ಬಾಳುವಿನ ತಲೆಯನ್ನು ವಾತ್ಸಲ್ಯದಿಂದ ಸವರುತ್ತ)

ಇನ್ನೂ ನನ್ಮೇಲೆ ಅಪನಂಬಿಕೆಯೇ ಬಾಳು ?....... ಹೀಗೆ ನನ್ನ ನಂಬಿ leader of local bar ಆಗಿ ಮುಂದಕ್ಕೆ ಬರ್ತೀಯಾ ? ಇಲ್ಲ, ನಿನ್ನ ಹಾಳು ಮುನ್ನೂರ್ರೂಪಾಯ್ಗು ನಿಮ್ಮನೆ ಹೆಂಗಸ್ರು ಪಾಲುಮಾಡಿ ಸಾಯೋವರಿಗೂ ನಿಮ್ಮನೆ ಪರಿಚಾರಕ್ನಾಗಿ ನರಳ್ತೀಯಾ ?......ಇದನ್ನ ಈಗ್ಲೆ ಇತ್ಯರ್ಥ ಮಾಡ್ಕೊ, ಕಂದ !

ಬಾಳು : (ದುಃಖವನ್ನು ತಡೆಯಲಾರದೆ ಬಿಕ್ಕಿ ಬಿಕ್ಕಿ ಅಳುತ್ತ) ಕ್ಷಮ್ಸಿ ಸಾರ್ ! ನಾನು ಮುಂದಕ್ಕೆ ಬರ್ಬೇಕನ್ನ ನಿಮ್ಮನಸ್ನಲ್ಲಿ ಮುಂದಿಟ್ಕೊಂಡು ನನಗೆ training ಕೊಡ್ತಿರೊ ಮರ್ಮ ತಿಳಿಯದ ನನ್ಮಂಕುತನಾನ ಕ್ಷಮ್ಸಿ, ಸಾರ್ ! ಕಂಡೋರು ಕಾಣ್ದೋರು ನನಗೆ ಹೇಳ್ಕೊಟ್ಟದ್ನೆಲ್ಲಾ ನಂಬಿ ಹುಚ್ಚುಹುಚ್ಚಾಗಿ ನಾನು ಹರಟ್ತಿದ್ದದ್ದೆಲ್ಲಾ ಮರತ್ಬಿಡಿ, ಸಾರ್ ! ನಿಮ್ಮೇಲೆ ನನಗಿರೋ ನಂಬ್ಕೆ ಒಂದೆರಡು ಕ್ಷಣ ಜಾರಿದ್ದ ಮನಸ್ಸಿಗೆ ತಂದ್ಕೋಬೇಡಿ, Sir !......ಕ್ಷಮ್ಸಿ Sir !......ತಪ್ಪಾಯಿತು, ಕ್ಷಮ್ಸಿ Sir !

(ಬಲವಾಗಿ ರೋದಿಸುತ್ತ ಅಹೋಬ್ಳುವಿನ ಕೈಯನ್ನು ಎದೆಗೆ ಉಜ್ಜಿಗೊಳ್ಳುತ್ತ ಪೇಚಾಡುವನು)

ಅಹೋಬ್ಳು : (ಬಾಳುವಿನ ಗಲ್ಲವನ್ನು ಹಿಡಿದು ಮುಖವನ್ನು ಮೇಲಕ್ಕೆತ್ತಿ ಮಧುರ ವಚನಗಳಿಂದ) ಬಾಳು, ನನ್ಮೇಲಿನ ನಂಬ್ಕೆ ನಿಮಿಷ ಮಾತ್ರ ಮರೆತ ನಿನ್ನ ತಪ್ಪು ಕ್ಷಮ್ಸೋಕೆ ನಾನು ಯಾರು ? ಮಗು, ಹಸುಳೆ, ಪಶುಕಂದ ಅಂತಾರಲ್ಲ ಅಂಥ ಶಿಶುವಾದ ನಿನ್ನ ಹೀಗೆ ಬಿಕ್ಕಿಬಿಕ್ಕಿ ಅಳೋ ಸ್ಥಿತೀಗೆ ತಂದ ನನ್ನ ತಪ್ಪು ಕ್ಷಮ್ಸೋಕೆ ನೀನು ಯಾರು ? ಯಾರು ಯಾರಿಗೆ ಹೊಣೆ ? ಇದು ಎರವಿನ್‌ಸಂಸಾರ ! ನಿನ್ನ ತಪ್ಪಾಗ್ಲೀ ನನ್ನ ತಪ್ಪಾಗ್ಲೀ ಎಲ್ಲರ್ ತಪ್ಪನ್ನೂ ಕ್ಷಮ್ಸಿ ಕಾಪಾಡೋಕೆ ಪರಮಾತ್ಮನೊಬ್ಬನಿರ್ತಾನೆ ಅಂಬೋದ್ನ ಮರೀದೆ ಆತನ ಮೇಲೆ ಭಾರಹಾಕಿ ನಾವಿಬ್ರೂ...... ಮುಂದಿನ್ಕಾರ್ಯ ಮಾಡೋದಲ್ವೇ......ಉಚಿತ !

ಬಾಳು : ಹುಂ, Sir. ನೀವು ಹ್ಯಾಗೆ ಹೇಳ್ತೀರೋ ಹಾಗೇ ಸಾರ್.

ಅಹೋಬ್ಳು : ಹಾಗಾದ್ರೆ......ಇರ್ಲಿ. ಈಗ ಹೇಗಿದೆ ಮೈ......ಮನಸ್ಸು...ಇತ್ಯಾದಿ ? ......ಬೇಕಾದ್ರೆ ಸ್ವಲ್ಪ ಕೂತ್ಕೊಂಡು ಸುಧಾರ್ಸ್ಕೊ ಮಗು......ಸುಧಾರ್ಸ್ಕೊ !

ಬಾಳು : ಪರವಾಯಿಲ್ಲ, ಸಾರ್. ತಕ್ಕಮಟ್ಟಿಗಿದೆ···ಮೈಯಿ...ಮನಸ್ಸು......

ಅಹೋಬ್ಳು : ಒಟ್ನಲ್ಲಿ fairly strongಊ......ಅನ್ನು......ಊಂ ?

ಬಾಳು : ಊಂ, ಸಾರ್.

ಅಹೋಬ್ಳು : ಹಾಗಾದ್ರೆ............ಎರಡೂವರೆ ತೊಲ ಎತ್ತಿದ್ರೆ ಆಯಾಸ್ವಿಲ್ವಲ್ಲಾ ನಿನಗೆ?

ಬಾಳು : ಎಳ್ಬಂತೂ ಸಾರ್ !

ಅಹೋಬ್ಲು : Goodಉ. ರಾಮ್ಮೆಟ್ರಂಗ್ಸ್ನೀಗೆ ಹೋಗಿ ಎರಡೂವರೆ ತೊಲ ನೆಶ್ಯ ತಂದ್ಬಿಡು, ಮಗು. ಯಾವಾಗಿನ ಹಾಗೆ ನೀನೇ ದುಡ್ಕೊಡಬೇಡ ...... ಅವನ ಕೇಸ್ ಹೀರಿಂಗು ನಾಳೆ ಅಂತ ....ಬೇಗ ಬಾ, ಮಗು. ಬೀದೀಲಿ ಹುಷಾರು ...... ಬಸ್ಸುಗ್ಳು — ಬಟ್ಕಾಗ್ಳು ....ಭದ್ರವಾಗಿ ಬಂದು ಸೇರು.

[ಬಾಲು ನಿಷ್ಕ್ರಮಣ ಎಡಬಾಗಿಲಿಂದ]

(ಸ್ವಗತಂ)

ಬದುಕಿದೆ !....... As I have always maintained ....ಎಂಥ ತಕ್ರಾರುಗ್ಳು ಬಂದ್ರೂ lifeನಲ್ಲಿ............ಸ್ವಲ್ಪ tactics............diplomacy ಗೀಗಿ use ಮಾಡಿದ್ರೆ ಸರ್ವವೂ ಸರಿಹೋಗುತ್ತೆ......ಹೌದು......ಕಾಫಿಗೇನ್ ತಡ ?

ಜೀವು : (ಹಿಂದಿನ ಬಾಗಿಲಿನಿಂದ ಒಂದು ಚೊಂಬಿನಲ್ಲಿ ಕಾಫಿಯನ್ನೂ ಲೋಟಾವನ್ನೂ ತಂದು ಮೇಜಿನ ಮೇಲಿಟ್ಟು) ಕಾಫಿ ಆರ್ಹೋದದ್ ನನ್‌ತಪ್ಪಲ್ಲ !

ಅಹೋಬ್ಲು : ಇದೇನ್ ಜೀವು, ಹೀಗ್ಹೇಳ್ತೀಯ ? ಹೀಗ್ಬಾ. (ಜೀವು ಸಮೀಪಿಸುತ್ತಲೂ ತಾನು ಕೂತಿದ್ದ ನೆಲವನ್ನು ತಾನು ಹೇಳುವ ವಚನಗಳಿಗೆ ಉದಾಹರಣೆಯಾಗಿ ಉಪಯೋಗಿಸುತ್ತ) ಕ್ಷೀರಸಾಗರ, ಜೀವು ! ಇತ್ಕಡೆ ಸುರರು, ಅತ್ಕಡೆ ಅಸುರರು......ಮಂದರಪರ್ವತಕ್ಕೆ ಆದಿಶೇಷನ್ನ ಸುತ್ತಿ ಕಡೀತಿದ್ದಾರೆ ....ಎತ್ಕೋತ ಎದ್ಬಂತು ಕಾಲಕೂಟ ವಿಷ ! ಅದನ್ನ ಆ ಕೈಲಾಸಪತಿ ನುಂಗಿ .... ಶ್ರೀಕಂಠ......ಸಿತಕಂಠ......ನೀಲಕಂಠನಾಗತ್ಲೂವೆ......ಕಡೆಯೋದ್ನ continue ಮಾಡ್ತಾ ......ಅಮೃತ ಉಕ್ತಿಧೆ......ಅದ್ನೆಲ್ಲಾ ಸುರರು ಈ ಪಡಕ್ಕೆ ಎಳ್ಕೊಂಡು......ಇಂದ್ರ ಮೇಘನಾದ ......ಎಲೆ ಹಾಕ್ರೋ ಅಂತ ಕಿರಲ್ದ......, ಇನ್ನು ಹಾಕಿದ ಒಂದೊಂದೆಲೇ ಮುಂದೆ ಒಬ್ಬೊಬ್ಬ ಮರ. **ಅಸುರ**ನೇನು......ಆಗ ಇನ್ನೂ **ಮರ**. ಅಮೃತಾನ ಗದುಕಿದ್ಮೇಲೇನೇವೇಯೋ **ಅಸುರ** ಆದದ್ದು. ಇನ್ನಡಿಸೋಕೆ ವಿಷ್ಣು, ಮೋಹಿನಿ ಅವತಾರ, ಜೀವು ! ಮೋಹಿನಿ ವಿಷ್ಣು ! ಹೀಗೆ ಜೀವೂ, ಬಡಿಸಿದ ಪದಾರ್ಥ ಅಮೃತ ! ಬಡಿಸೋದ್ ಮೋಹಿನಿ ! ಇದ್ನ ಬಕಾಸುರನ ಹಾಗೆ ಭಕ್ಷಿಸೋದ್ ಬಿಟ್ಟಿಟ್ಟು "ಅಮೃತ ಆರಿಹೋಗಿದೇ !"ಂತ ಬಡುಕೊಂಡ್ರೆ. ದೇವತೆಗ್ಳು ? ಕಾಫಿ ಆರಿದ್ರೇನು ! ಹೇಗಿದ್ರೇನು ! (ಜೀವುವಿನ ಹಸ್ತವನ್ನು ಹಿಸುಕುತ್ತ) ನಮ್ಮ ಜೀವು ಮುಟ್ಟಿದ್ದೆಲ್ಲಾ ಜೀವಾಮೃತ ನನಗೆ !

ಜೀವು : (ತನ್ನ ಕೈಯನ್ನು ಹಿಡಿದ ಅಹೋಬ್ಲುವಿನ ಕೈಯನ್ನು ಒದರಿ) ಸಾಕ್ನಿಲ್ಲೀ ಅಂದ್ರೆ ನಿಮ್ಗಿಲೀಟ್ ಮಾತುಗ್ಳು ! ಆರಿದ್ ಕಾಪಿ ಇರ್ಲಿ..........

ಅಹೋಬ್ಲು : (ಬೆಚ್ಚಿಬಿದ್ದು) **ಹಾಗೇ ಇರು ಜೀವು ! ಕದಲಿಸ್ಬೇಡ ಮುಖಾನ !**......ರಾಧಾ ! ?......ಅಲ್ಲ. ಇಷ್ಟು ದೊಡ್ಡ ಕಣ್ಣಿಲ್ಲ. ಊರ್ವಶೀ ? Not at all ! ಇಷ್ಟು ಚಿಕ್ಕ ಬಾಯಿಲ್ಲ ! ಮೋಹಿನೀ ?............Never ! ಕೂದ್ಲು ಉಯ್ಯಾಲೆ ಆಡ್ತ ಎಷ್ಟು ಬೀಸಿದ್ರೂನೂವೆ.........ತಿಲೋತ್ತಮಾ ?.........perhaps.........(ಕೈಬೆರಳುಗಳಿಂದ ಥಟ್ಟನೆ ಜೀವುವಿನ ಕೆನ್ನೆಯನ್ನು ಸವರುತ್ತಾ) ದಮ್ಮಯ್ಯ ಜೀವು, ದಯವಿಟ್ಟು ಕಾಫೀನ ಬಿಸಿ ಮಾಡ್ಕೊಂಬಂದ್ಕೋ ಬದಕ್ದೆ. ಒಲೇ ಉರೀತಿದೆ ತಾನೇ ?

ಜೀವು : ಕಾಫಿ ಮಾಡಿದ್ದು ಒಲೇಲಲ್ಲ, stoveನಲ್ಲಿ.

ಅಹೋಬ್ಲು : ಯಾಕೆ ?

ಜೀವು : ಯಾಕೇನು ? ಒಲೇಗ್ ಸೌದೆಯಿಲ್ಲ.

ಅಹೋಬ್ಲು : ಮೊನ್ನೆ ಮೊನ್ನೆ ಅಲ್ವೇ ಒಂದು ಗಾಡಿ ಕಟ್ಗೆ......?

ಜೀವು : ಕಟ್ಗೆ ಕಟ್ಗೇನೇ. ಏನು ಉಪಯೋಗ ? ಅದನ್ ಒಡೆದರೆ ತಾನೇ ಒಲೇಗೆ ಉಪ ಯೋಗ. ನೀವ್ಪೋ ನಿಸ್ರಾಣಿ. ಇನ್ನು ನಿಮ್ ಗುಮಾಸ್ತೇನೊ ಗೋಂದ್ನಲ್ಲಿ ಜೋಡಿಸ್ಟ ಹಂಚಿ ಕಡ್ಡಿ. ಇನ್ಯಾರು ಮನೇಲಿ ? ನಾನೊಬ್ಳು. ಆ ಸೊಂಟ ಮುರ್ದ ಸಿವಂಗಿ......ಚೋರ! (ತನ್ನ ಹೆಸ್ರು ಕೇಳಿಬರುತ್ತೂವೆ ಚೋರನು ಹಿಂಬಾಗಿಲಿನಿಂದ ಪ್ರವೇಶಿಸುವನು) ನನಗೋ ನೆನ್ನೆಯೆಲ್ಲಾ ಲಾಲ್ಬಾಗಿಗೆ ನಡ್ದೂ ನಡ್ದೂ ಮೈಯೆಲ್ಲಾ ನೋವು. ಏನ್ಲಾಯ್ರಿ ಕೆಲ್ಸನೊ ನೀವು ಮಾಡೋದು ! ಒಂದು ಕುದುರೆ ಗಾಡೀಗೆ ಯೋಗ್ಯತೆಯಿಲ್ಲ !

ಅಹೋಬ್ಳು : ನಾನೇನ್ಮಾಡೋದು, ಜೀವು ! ಗಾಡಿಗ್‌ದುಡ್ಡಿತ್ತೋ ಕುದುರೇಗಿಲ್ಲ. ಕುದುರೇಗ್‌ದುಡ್ಡಿತ್ತೋ ಗಾಡೀಗಿಲ್ಲ. ಎರಡ್ನೂ ಕೊಂಡ್ಕೋಳ್ಳೋಕೆ ಕೂಡ್ಬಾಕಿದ್ರೋ ದುಡ್ನ .... ಸಾಮಾನುಗಳಿಗೆ ದುಡ್ಡಿಲ್ಲ. (ಚೋರನನ್ನು ಕ್ಷಣಮಾತ್ರ ದುರುಗುಟ್ಟಿ ದರ್ಶಿಸಿ......... ಮುಖದಲ್ಲಿ ಜ್ಞಾನೋದಯುವನ್ನು ವ್ಯಕ್ತಿಸುತ್ತಾ) ಒಂದ್ಯೋಚ್ನೆ ಜೀವು !......ಪುಟ್ಟದೊಂದು ಗಾಡೀನೂ ಸಾಮಾನೂ ಸಂಪಾದಿಸ್ಕೊಡ್ತೇನೆ......ನಿನಗೆ ಬೇಕಾದಾಗಲ್ಲಾ ಈ......(ಚೋರನನ್ನು ಸೂಚಿಸುತ್ತ) ಚತುಷ್ಪಾದಾನ harness ಮಾಡ್ಕೊಂಡು drive ಮಾಡು.

ಚೋರ : (ಸ್ವಗತಂ) ಸಿಕ್ತು ! ನಮ್ಮ ಒಂಸಕ್ಕೆ ಒಸ್ಕಸ್ಬು ! ನಾನೊಬ್ನೇ ಯಾಕೆ, ನಮ್ಮ ಅಣ್ಣನ್ನೂ ಕರ್ತರ್ತೀನಿ......ಇಬ್ಬರ್ನೂ ಕಟ್ಕೊಂಡು ಒಡೀರಿ ಜೋಡಿ ಕುದ್ರೇ ಸಾರಾಟ್ನ.........

[ಬಲಬಾಗಿಲಿನಿಂದ ನಿಷ್ಕ್ರಮಣ]

ಅಹೋಬ್ಳು : Joking ಇರ್ಲಿ ಜೀವು. ಕಡ್ಲೆಹಿಟ್ಟಿದೆ, ಬಾಳೆ ಕಾಯೋ ಬದ್ನೆಕಾಯೋ ಇದೆ. ಒಂದ್ರಟ್ಟೆ ಬೋಂಡ ಮಾಡಿ ತಂದ್ಬಿಡು stoveನಲ್ಲೆ. ಬಿಸಿಬಿಸಿ ಕಾಫಿ plus ಬೋಂಡ ......ಇನ್ನು ಆರು ತಿಂಗಳ್ಗೆ ಬೇಕಾದಷ್ಟು ಸೌದೆ ಒಡೆದ್ಹಾಕ್ತೇನೆ.

[ನಿಟ್ಟುಸಿರು ಬಿಡುತ್ತಾ ಜೀವೂ ಹಿಂಬಾಗಿಲಿನಿಂದ ನಿಷ್ಕ್ರಮಿಸುವಳು]

ಏನಿದು ! ನಾನೇ ಮನೇಗೆ ಸೌದೆ ಒಡ್ಕೋ ಸ್ಥಿತೀಗೆ ಬಂದ್ಬಿಟ್ಟಿದೆಯಲ್ಲ ನನ್ನ ಸಂಸಾರ ! Still ಆಪತ್ಕಾಲೆ ನಾಸ್ತಿ ಮರ್ಯಾದೆ ! Man ಆಗ್ಹುಟ್ಟಿದ್ಮೇಲೆ ಮಿಕ್ಕವರಿಲ್ದಾಗ Myself ಏ ರಾಜ, Moustach ಏ ಮಂತ್ರಿ ! ಕೈಯಿ ಕಾಲೇ Infantry, Cavalry! But........ ಬೋಂಡಾನೂ ಕಾಫೀನೂ ಬರ್ಲಿ ! ಏನೋ ಇದುವರ್ಗೂ ನನ್ಕೈಬಿಡ್ದೆ ನನ್ನ ಜೀವ ನನ್ನ ಜೀವು ಸಮೇತ ಜರುಗಿಸ್ತಿರೋ ಜಗದೀಶ ಈಗ ಹಿಂಜರಿದ್ನೋ ಅವನಿಗೇ ಅಪಯಶಸ್ಸು............ ಅಪಮಾನ ! (ಬೀದಿ ಬಾಗಿಲು ತಟ್ಟುವ ಸದ್ದನ್ನು ಕೇಳಿ) ಯಾರದು ? ಬನ್ನಿ ಒಳಗೆ !

ಕೆಂಪೇಗೌಡ : (ಪ್ರವೇಶಿಸಿ ....ಬಾಗಿ) ಕೈ ಮುಗ್ದೆ ಬುದ್ಧಿ. ತಕೊಳ್ರಿ, ಕಟ್ನಾವ (ಕಟ್ಟನ್ನು ಮೇಜಿನ ಮೇಲಿಡುವನು)

ಅಹೋಬ್ಳು : ಏನು, Case ಏ ?

ಕೆಂಪೇಗೌಡ : ಊಂ ನಿಂಪಾದ. Case ಅಲ್ದೆ ಲಾಯ್ರಿ ಮನೇಗೆ ನಾನ್ಯಾಕೆ ಬರ್ಲಿ ನಿಮ್ಮನೇಗೆ ಸನ್ನೊಡೆಯಾ ! ದೊಡ್ಡಟ್ಟಿ ನಿಂಗಪ್ಪಣ್ಣ ಯೆಂಗಾದ್ರೂ ಕೋರ್ಟ್ಗೆಳ್ದು ನಮ್ಮಯ್ಯಾನ್ಕಲ್ದಲ್ಲಿ ಅವರಯ್ಯ ಕಸ್ಕೊಂಡ ಒಲ ತಿರುಗಿ ನನ್ಕೈಗೆ ಬರೋಗಂಟ........ಏನ್ದುಡ್ಡಾನೆ ಕರ್ಚಾಗ್ಲಿ......

ಅಹೋಬ್ಳು : ಇದೆಲ್ಲಾ ಇರ್ಲಿ......ಏನ್ Caseಉ ?............ಕೇಳೋದೇನು, ಕಟ್ನಲ್ಲೇ ಕಂಡುಬರುತ್ತೆ............(ಕಟ್ಟನ್ನು ಬಿಚ್ಚಲು ಉಪಕ್ರಮಿಸುವನು)

ಕೆಂಪೇಗೌಡ : ಅಲ್ಲೇನು ನೋಡೋದು ಬುದ್ಧಿ ! ಎದ್ರು ಮನೆ ಲಾಯ್ರಿ ಕಟ್ನೆಲ್ಲಾ ಒಂದ್ಸಾಗ್ಗ ಬುಡ್ತೆ ಮೊದ್ಲಿಂದ ಕೊನೇತಂಕ ಸುಲೋಚ್ನ ಸಿಕ್ಕಿಸ್ಕೊಂಡು......ಓದಿ......(ಮೇಜಿನ ಮೇಲಿರುವ Law ಪುಸ್ತಕಗಳನ್ನು ಸೂಚಿಸಿ) ಇದ್ಯಾವ್ದೂ ಮೇಲೆ——! ಇವುಗ್ಳೆಪ್ಪಂದ್ರಂಗೆ......

ದೊಡ್ಣ ದೊಡ್ಣ ಪುಸ್ತಕಗಳ್ನ ನೋಡಿ ಓದ್ಕೊಂಡು, "ಈ Caseಉ ಎಂಥ ಚೆಪ್ಪು ಲಾಯ್ರು ಕೈಲಿ ಸಿಕ್ಕಿದ್ರೂ ಸೋಲೋ ಅಂಗಿಲ್ಲಾ !" ಅಂದ ಬುದ್ಧಿ ..... ಎದ್ರು ಮನೆ ಅವಯ್ನ .... ಲಾಯ್ರು.........ನಿಮ್ಮಂಗೆ 'ಬೋಲ್ಡ್' ಆಕ್ಕೊಂಡೌನೆ ಮನೆಮುಂದೆ.

ಅಹೋಬ್ಳು : ಅಲ್ಲಯ್ಯಾ, ಎದ್ರುಮನೆ ಲಾಯ್ರು ಕಟ್ನೆಲ್ಲಾ ಓದಿ ಚೆಪ್ತಕ್ಕೇನೂ ಸೋಲೋ ಹಾಗಿಲ್ಲ ಅಂದದ್ನ ಪರೀಕ್ಷಿಸೋಕೆ ಅವನ್ಬಿಟ್ಟು ನನ್ನ ಹತ್ರ ತಂದಿದ್ದೀಯಾ ?

ಕೆಂಪೇಗೌಡ : ಅಲ್ಲ ಬುದ್ಧಿ ; ಅತ್ನಿಮಿಪ್ಪ್ಲಿ ಗೆಲ್ಲೊ ಮೊಕದ್ದಮೇಗೆ ಐನೂರು ರೂಪಾಯಿ ಕೇಳ್ತಾನಲ್ಲಾ...! ಇನ್ನಡವ್ರ ಪಾಡಂಗೆ ? ಅಲ್ದೆ ಅವಯ್ನ ಜೇಪ್ನ ತಾನೆ ಎಂಗೆ ?

ಅಹೋಬ್ಳು : ಹಾಗಾದ್ರೆ ಆತ ದುಡ್ಕೇಳಿದ್ನಪ್ಪ, ನಾನು ದುಡ್ಡಿಲ್ದೆ ದುಡ್ಕೋ ಚೆಪ್ತಾಂತ ತೀರ್ಮಾನಿಸ್ಕೊಂಡೇ ಬಂದದ್ದು ನೀನು ?

ಕೆಂಪೇಗೌಡ : ಅಂಗಲ್ಲ ನನ್ನೊಡ್ಯಾ. ಲೆಕ್ಕ ಲೆಕ್ಕಾನೇವೇ ! ನಾಯ ನಾಯಾನೇವೇಯೋ ! ನಾಯವಾಗಿ........... ಲೆಕ್ಕಾಚಾರದ್ಮೇಲೆ ದುಡ್ತಕ್ಕೊಳ್ಳೋದ್ನ ಬುಟ್ಬುಟ್ಟು ಬಡವರ್ನ ಸಾವ್ರಾಂತ ಬೆದಸೋದು ನಾಯಾನಾ ನಿಂಪಾದ ?

ಅಹೋಬ್ಳು : ಅಲ್ಲ, ನ್ಯಾಯವಲ್ಲ. ಬಡಬಗ್ಗರಿಗೆ ಸಹಾಯ ಮಾಡೋಕೇಂತ ಇರೋ ಲಾಯ್ರು............ಇದೆಲ್ಲಾ ಯಾಕೆ ?........ಇಲ್ಬಾ......(ವಕಾಲತ್ ಕಾಗದದ ಮೇಲೆ ಮಸಿಯಲ್ಲಿ ಅದ್ದಿದ ಪೇನಾವನ್ನು ಓಡಿಸುತ್ತ........) ಹೆಸ್ರೇನಯ್ಯಾ ?

ಕೆಂಪೇಗೌಡ : ಕೆಂಪೇಗೌಡ ನನ್ನೊಡ್ಯಾ. ತಾವ್ರೆಕೆರೆ ದೊಡ್ಡಟ್ಟಿ ಜೋರೆಗೌಡ್ನ ದೊಡ್ಮಗ ಕೆಂಪೇಗೌಡ.

ಅಹೋಬ್ಳು : (ಬರೆದು) ಇಲ್ಬಾ............ಬರಿಯೋಕ್ ಬರುತ್ತೇ........ಹೆಸ್ರು ?

ಕೆಂಪೇಗೌಡ : ಯೆಬ್ಬೆಟ್ಟ್ ಇರೋಗಂಟ ಬರವಣಿಗೆ ಯಾಕ್ಬುದ್ಧಿ ? (ಮಸಿಕುಡಿಕೆಯ ಬಾಯಿಗೆ ಎಡಗೈ ಹೆಬ್ಬೆಟ್ಟನ್ನು ಇಟ್ಟು ಕುಡಿಕೆಯನ್ನು ಕುಲುಕಿ ಹೆಬ್ಬೆಟ್ಟನ್ನು ಲಾಯ್ರು ತೋರಿಸಿದ ಕಡೆ ಒತ್ತುವನು)

ಅಹೋಬ್ಳು : ಹೌದೂ ....ಎಷ್ಟೂ ಪಾಯಿನ್ಬಾಬ್ತು .... ? ಕೇಳೋದೇನು ....(ಎನ್ನುತ್ತಾ ಕಟ್ಟನ್ನು ಬಿಚ್ಚಲುಪಕ್ರಮಿಸುವನು)

ಕೆಂಪೇಗೌಡ : ಅಲ್ನೋಡೋದೇನ್ಬುದ್ಧಿ ? ನಾನೇ ಯೆಳ್ತೀವ್ನಿ...ಐನೂರ್ ರೂಪಾಯಿ ನ್ತಕ್ರಾರು........ಅಲ್ನೋಡೋದೇನು ?

ಅಹೋಬ್ಳು : ಹಾಗಾದ್ರೆ........ಸಧ್ಯ ...... ಒಂದರವತ್ತು ರೂಪಾಯಿ ಇಲ್ಲಿಟ್ಟಿಟ್ಟು......

ಕೆಂಪೇಗೌಡ : (ಕೈಮುಗಿದು) ದಮ್ಮಯ್ಯ ಬುದ್ಧಿ. ದೇವ್ರೂ ನೀವೇ ... ದಿಂಡ್ರೂ ನೀವೇ......ನಮ್ಮಟ್ಟೀಗೆ ದೇವ್ರೇ ನನ್ನೆಜ್ಜೇನ ತಿರುಗ್ನಿರ್ಬೇಕು, ನಿಮ್ಮನೆ ಕಡೆ. ಒಂದೇ ಮಾತು ನಂದು. "ಟಾಂಪ್" ದುಡ್ನ ನಾಳೆ ತಂದ್ಬುಡ್ತೀವ್ನಿ. ಮಿಕ್ಕಚ್ಚೆಲ್ಲಾ ಎಂಗಾದ್ರೂ ನೀವೇ ಸರ್ಮಾಡ್ಕೊಂಡು ಮೊಕದ್ದಮೇನ ಗೆದ್ದು ಬಂದ ಮುಸ್ಗೆ........ನಿಮ್ಮ ಕುಸಿ ಎಂಗೊ ಅಂಗೆ........

ಅಹೋಬ್ಳು : (ಸ್ವಗತಂ) ದೇವ್ರೇ ಗತಿ ! ಯಥಾಪ್ರಕಾರ ನನ್ನ ಹಣೇಬರಹ ! ನನಗ್ಬರೋ ಫೀಸೆಲ್ಲಾ conditional upon my successಉ, which again is always problematicಉ ! ಈಗ........

ಕೆಂಪೇಗೌಡ : ಬುದ್ಧಿ. ಊರು ಸುತ್ಕೊಂಬರ್ತೀನಿ. ನೆಂಟ್ರಾರೆ. ಆದ್ರೆ ಬುದ್ಧಿ. ರಾತ್ರಿ ಮನಿಕ್ಕೊಳ್ಳಾಕೆ ಒಸಿ ಜಾಗ ಕೊಡಬೇಕ್ರ ಜಗ್ಲಿ ಮೇಲೆ. ಇಳ್ಕಿ ಬಿದ್ಕೊಂಡು ಬೈಸಾರಿ ಅಳ್ಕಿಕಡೆ ಕಾಲಾಕ್ತೀನ್ರ.

ಅಹೋಬ್ಳ್ಲ : (ಕಟ್ಟನ್ನು ಮೇಜಿನ drawer ಗೆ ಸೇರಿಸಿ, ಆತ್ಮಗತಂ) ಈಗೇನ್ಮಾಡೋದು ? ಮುನ್ಸಿಫ್ ಕೋರ್ಟ್ಗೆ at least ನಾಲ್ಕು adjournment ಉ, ಒಂದು ಹೀರಿಂಗು........ ಇಪ್ಪತ್ತೈದು. Sub Court ಉ District Court ಉ......ditto......ಇಪ್ಪತ್ತೈದ್ನಾಕ್ಲ ನೂರು...ಮನುಷ್ಯ ತಕ್ಕಮಟ್ಗೆ ಗಟ್ಟಿಮುಟ್ಟಿ. ದಿನಕ್ಕೆ ಎಂಟಾಣೆ...ತಿಂಗಳಿಗೆ ಹದಿನೈದು, ಹದಿನೈದಾರ್ಲ ತೊಂಬತ್ತು.......... ಹತ್ರೂಪಾಯಿ ಹೋಗ್ಲಿ......ಇವನ ಹಳ್ಳಿಯಿಂದ ತರಕಾರಿ ಬಾಳೆಎಲೇಲಿ make-up ಆಗುತ್ತೆ......Case ಗೆದ್ದು ಬರಬಹುದಾದ ದುಡ್ನ ಕೆಲಸ್ದಲ್ಲಿ ಈಗ್ಲೇ ಕೀಳೋದು diplomacy. (ಪ್ರಕಾಶಂ) ಅಪ್ಪಾ ಗೌಡ, ಒಂದು ಮಾತು. ಈ Case ಉ ಗೆದ್ದು ಕೊಡೋಕೆ ಇನ್ನು ಎರಡು ತಿಂಗಳಾದ್ರು ಆಗುತ್ತೆ......ಸರಾಸರಿ ಹೀರಿಂಗ್ಮೇಲೆ ಹೀರಿಂಗು......ಸಾಕ್ಷಿಗ್ಳು......

ಕೆಂಪೇಗೌಡ : ಅಲ್ಲವ್ರಾ !

ಅಹೋಬ್ಳ್ಲ : ಅಷ್ಟುವರ್ಗ್ಗೂ ನಾನು ಬದುಕಿರ್ಬೇಡ್ವೇ ?

ಕೆಂಪೇಗೌಡ : ಇದೇನುಚ್ಚು ಬುದ್ದಿ ? ಬದಕ್ದೆ ಯೇನು.........ನಿಮ್ಮಂತಾವ್ರು ?

ಅಹೋಬ್ಳ್ಲ : ದಿನಾ ಬದುಕಿರೋಕೆ ಅನ್ನ ಬೇಕು. ಅಕ್ಕಿ ಇದೆ ಮನೇಲಿ. ತರ್ಕಾರಿ ಇದೆ. ದಿನಸುಗಳು ಇವೆ. ಆದ್ರೆ ಕೆಂಪಣ್ಣ......ಈ ಮನೆ ಕಟ್ಟೋದ್ನು......ಅಡಿಗೆ ಮನೇಲಿ ಒಲೆ ಹಾಕ್ದಾಗ......ಒಲೆ ಬಾಯಿ ಚಿಕ್ಕದಾಗಿದೆ. ನಾನು ಕೊಂಡ್ಕೊಂಡ ಗಾಡಿ ಸೌದೇನೋ ದೊಡ್ಡ ಕಟ್ಟಿಗೆಗ್ಳು. ಇದಕ್ಕೇನ್ ಉಪಾಯ ?

ಕೆಂಪೇಗೌಡ : ಉಪಾಯವೇನು ಬುದ್ದಿ ? ಕಟ್ಗೇನ ಚಿಕ್ಕಚಿಕ್ಕದಾಗಿ ಸೀಳೋದೇ ಉಪಾಯ !

ಅಹೋಬ್ಳ್ಲ : ಉಪಾಯ ಒಂದೇ ಅಲ್ಲ......ಉಪಕಾರ. ನಿನ್ನಿಂದ ಆಗಬೇಕಾದ ಉಪಕಾರ.

ಕೆಂಪೇಗೌಡ : (ರೇಗಿ) ಇದೇನ್ನಾಯಾ ಬುದ್ದಿ ! Case ಗೆ ಕಟ್ಟಂದೋನ್ಕೈಲಿ ಕಟ್ಗೆ ಒಡಿಸ್ಕೊಂಡು ಕೂಲಿ ಕೆಲ್ಸ ಮಾಡಿಸ್ಕೊಳ್ಳಾದಾ ನಿಮ್ಲೆಕ್ಕಾಚಾರಾ ! ಕೊಡಿ ಬುದ್ದಿ ಕಟ್ನ ! ನೀವಿಲ್ದೆ ಇದ್ರೆ ಏಟೋ ಲಾಯ್ರು !

ಅಹೋಬ್ಳ್ಲ : ಹಾಗಾದ್ರೆ ಈ ಕಟ್ಟಿಡಿಸ್ಕೊಳ್ಳೋಕೆ ಒಬ್ಬ ಲಾಯರ್ನಿಟ್ಟು ಬಿಡಿಸ್ಕೊ. ಯಾರ್ಹತ್ರ ? ಲಾಯ್ರು ಹತ್ತಲ್ರ್ಲೇ ನಿನ್ನ ಹಳ್ಳಿ ಗಮಾರನ್ ಚಾಲಕ್ಕು ?

ಕೆಂಪೇಗೌಡ : (ಸ್ವಗತಂ) ಒಳ್ಳೆ ಕಾಟಕ್ಕಗಲ್ಕೊಂಡ್ನಲ್ಲಾ ! ಆದ್ರೇನ್ ಮಾಡೋದು ! ಶಿವ ಕೊಟ್ಟಪ್ಲೆಲ್ಲಾ ಪರ್ಸಾದ ! (ಪ್ರಕಾಶಂ) ಸರಿ ಬುದ್ದಿ. ನೀವೆಂಗೇಳಿದ್ರೆ ಅಂಗೆ. ಆದ್ರೇನು........... ಬರೀ ಕೈಲಾ ಸೀಳೋದು ಸೌದೇನ ?

ಅಹೋಬ್ಳ್ಲ : ಛೇ ! ಕೊಡ್ಲಿಯಿಧೆ ! (ಘಟ್ಟಿಯಾಗಿ) ಬೋರಾ !

[ಬೋರನು ಬರುವನು]

ಈತನ್ನ ಕರ್ಕೊಂಡ್ಹೋಗಿ ಕೊಡ್ಲಿಕೊಟ್ಟು ಸೌದೇನ ಒಡ್ಸು. ಪಕ್ಕದಲ್ ನಿಲ್ಬೇಡ. ನಿನ್ನಾಕಾರಾನ ನೋಡಿ ಮೈಮರೆತು ಕುರೀ ಅಂಬೋ ಭ್ರಮೇಲಿ ಕಾಳಮ್ಮನ್ಗೆ ಬಲಿಗಿಲಿ ಕೊಟ್ಬಿಟ್ಟಾನೂ !

[ಕೆಂಪೇಗೌಡನೂ ಬೋರನೂ ಬಲಬಾಗಿಲಿನಿಂದ ನಿಷ್ಕ್ರಮಣ]

(ಹಿಗ್ಗುತ್ತಾ) Diplomacy plus ದೇವರ ಮೇಲೆ ನಂಬ್ಕೆ ಇರೋವರ್ಗೂ ಭಯವಿಲ್ಲ. After all honestyಂಬೋದು best policyಗೆ ಹೆಸ್ರು.......

[ಬೀದಿಯ ಬಾಗಿಲನ್ನು ತೆಗೆದುಕೊಂಡು ಪ್ರವೇಶಿಸಿ ಸತ್ತದ ಪೊಟ್ಟಣವನ್ನು ಮೇಜಿನ ಮೇಲಿಟ್ಟು ತಲೆಬಾಗಿ ನಿಂತಿರುವ ಬಾಳುವಿಗೆ]

Thank you, Balu. Desk ಮುಂದೆ ಕೂತ್ಕೊಂಡು ಈ...(ಕಾಗದ ಒಂದನ್ನು ಬಾಳುವಿನ ಕೈಗೆ ಕೊಟ್ಟು) Statementನ copy ಮಾಡು Neat ಆಗಿ......ಮಾಡು copy.

ಬಾಳು : ಆಗ್ಲಿ ಸಾರ್.

[ಕಾಗದವನ್ನು ತೆಗೆದುಕೊಂಡು ರಂಗಸ್ಥಳದ ಬಲಮುಂಭಾಗದಲ್ಲಿನ deskನ ಮುಂದೆ ಕುಳಿತು ನಾಲಿಗೆಯನ್ನು ಬಾಯಿಂದ ಹೊರಗೆ ನೀಡಿಕೊಂಡು ಬರೆಯುತ್ತಿರುವನು. ಅಹೋಬ್ಲು ಮೇಜಿನ ಮುಂದೆ ಕುಳಿತು ಓದುವನು.]

[ಹಿಂಬಾಗಿಲಿನ ವಾಸ್ಕಾಲಿಗೆ ಸರಿಯಾಗಿ ಕೆಂಪು ribbon ಕಟ್ಟಿದ ಜಡೆಯಿಂದ ಅಲಂಕರಿಸಲ್ಪಟ್ಟು ಕಸ್ತೂರಿಯನ್ನು ಸೋಲಿಸುವ ಪ್ರಭೆಯನ್ನು ಬೀರುವ ಪುತ್ರಕನ ತಲೆಗೆ ಕರೀ ಟೋಪಿಯನ್ನು ಇಟ್ಟು ಜೀವು ಹಣೆಗೆ ಸಾದನ್ನಿಡುತ್ತಿರುವಳು.]

ಅಹೋಬ್ಲು : (ಬೆಚ್ಚಿಬಿದ್ದು ಎದ್ದು ಸುತ್ತುಮುತ್ತೂ ನೋಡಿ) ಇದೇನಿದು .... ಸೂರ್ಯಗ್ರಹಣವೇ ? ಬಾಳು ! ಈ ಹೊತ್ತು Eclipse ಏ?

ಬಾಳು : ಎಲ್ಬಂತು ಸಾರ್ ?

ಅಹೋಬ್ಲು : Eclipse ಅಂದ್ರೆ ನಿನಗೇನಾದ್ರು ಗೊತ್ತೆ ?

ಬಾಳು : ಗೊತ್ತು ಸಾರ್. ಗೊತ್ತೂಂದ್ರೇನು......ನಾನು Geography ಓದ್ತಿದ್ದಾಗ ಮೇಸ್ಟ್ರು......

ಅಹೋಬ್ಲು : Let me see ! 'Eclipse of the Moon ಉ' ಅಂದ್ರೇನು ?

ಬಾಳು : Shadow of the...Earthoo...

ಅಹೋಬ್ಲು : On the whatoo ?

ಬಾಳು : On the Moonoo.

ಅಹೋಬ್ಲು : Good ಉ. 'Eclipse of the Sun ಉ' ಅಂದ್ರೆ ಏನು ?

ಬಾಳು : Shadow of the...Moonoo...

ಅಹೋಬ್ಲು : On the whatoo ?

ಬಾಳು : On the Sun ಉ.

ಅಹೋಬ್ಲು : Good ಉ. Very good ಉ ! ಇದ್ಹೇಳು ನೋಡೋಣ ! 'Eclipse of the Earthoo' ಅಂದ್ರೇನು ?

ಬಾಳು : (ಭ್ರುಕುಟಿಗಳನ್ನು ಗಂಟುಹಾಕಿ) Eclipse of the Earthoo........? ಎಲ್ಲಾದ್ರು ಉಂಟೆ ಸಾರ್ ?

ಅಹೋಬ್ಲು : ಉಂಟು ಬಾಳು. ಉಂಟು. Shadow of the Sun ಉ......

ಬಾಳು : Sun ಗೆ shadow ಉಂಟೆ ಸಾರ್ ?

ಅಹೋಬ್ಲು : ಉಂಟು ಬಾಳು. ಉಂಟು. Shadow of my son ಉ on this Earthoo ! (ಹಿಂದೆ ನೋಡಿ ಜೀವೂಗೆ) ಅಲ್ಕಣೆ ! ಈ ಕರೀ ನಾಗ್ರ ಮತ್ತೆ ಬಿಟ್ಟು ಹೊರಗ್ಹೊರ್ಡೋರೀ ಅಷ್ಟೊತ್ತಿಗೆ school ಮುಚ್ಚಿಟ್ಟಿರ್ತಾರೆ. (ಕುಮಾರನಿಗೆ) ಇಲ್ಲಾರೊ ಉದ್ದಿನ

ಮಣಿ ! ಯಾಕೋ ಇಷ್ಟು late ಉ......? (ಕುಮಾರನು ಮುಂದೆ ಬರುತ್ತಲೂ) ನೀನೋ ! ನಿನ್ನ ಪಂಚಿಮುಖಶೀನೋ !......ಜೀವು ಕೆಂಪು...ನಾನೋ ತಕ್ಕಮಟ್ಟಿಗೆ......ಜನಕನೇನು...... ಅವನ್ಲಜನಕ ! ಈ ಇಂಗಾಲ ಎಲ್ಬಂದು ಸೇರ್ಕೊಂಡ್ತು......?

ಜೀವು : ಮುದ್ಮಣಿ ವರ್ಣ...ಅಲ್ಪ ಸ್ವಲ್ಪ ನಿಧಾನ ಆದಪಕ್ಷಕ್ಕೆ...ಹೀಗೆ ಹಿಯ್ಯಾಳಿಸೋದೇ?

ಅಹೋಬ್ಲ : ನಿಧಾನ ? ಬಣ್ಣ ನಿಧಾನವಲ್ಲ...ನಿಸ್ತ್ರಾಣಿಯಾಗಿ ನಿಂತೇ ಬಿಟ್ಟಿದೆ ! Stationery ಆಗಿ ! All ink and no paper ! (ಮಗನ ಮುಖವನ್ನು ಗಮನಿಸಿ) ಇದೇನೇ ಇದು ! ಮಾಧ್ವರ ಮಗೂಗೆ ಗಂಧದ ಬೊಟ್ಟಿಟ್ಟಿಧೀಯಾ ಹಣೇಗೆ !

ಜೀವು : ಗಂಧಾಲ್ಲಾಂದ್ರೆ, ಸಾದು.

ಅಹೋಬ್ಲ : (ಬೊಟ್ಟನ್ನು ಬೆರಳಿಂದ ಮುಟ್ಟಿ ಪರೀಕ್ಷಿಸಿ) ಹಯ್ಯೋ ಹೌದೇ !...... ಮತ್ತ್ಯಾಕೇ ಗಂಧದ ಹಾಗಿತ್ತು ? (ಅಲ್ಪ ಯೋಚಿಸಿ) Yes, yes ! ಇವನ್ಮೂತಿ colour ಗೆ ಸಾದು ಗಂಧದ ಹಾಗೆ ಕಂಡು ಬರುತ್ತೆ ! Question of comparative colorology !

ಜೀವು : ಹೌದೂ...ಮುದ್ಮಣಿ ಫೋಟೋ ಯಾವಾಗ ತೆಗಿಯೋದು ?

ಅಹೋಬ್ಲ : Be sensible, ಜೀವು ! ಇದೇನ್ಹುಚ್ಚು ! ಇವನಿಗೆ ಫೋಟೋ ತೆಗೆದು ಗೋಡೇಗೆ ತಗಲಿಹಾಕಿದ್ರೆ ತಸ್ಬೀರ್ನಾ, ಕತ್ಲೇ ಕೋಣೇಗೆ ಕಿಟಿಕಿ ಇಟ್ಟಿದಾರೆ ಅನ್ಕೊಂಡಾರು ಕಂಡೋವ್ರುಲ್ಲಾ !

ಜೀವು : ಯಾಕೆ ! ಕಪ್ಪಗಿದ್ರೂನೂವೆ ಕೆಂಪಗೆ ಕಾಣೋಹಾಗೆ ಫೋಟೋ ತೆಗಿಯೋಕೆ ಆಗೋದಿಲ್ವೇ ?

ಅಹೋಬ್ಲ : Yes, yes. The answer is in the **"Negative !"** ...Negativeಲಿ ಕೆಂಪಗೇ ಇರ್ತಾನೆ. (ಮುದ್ಮಣಿಗೆ) ಇನ್ನೇನೋ ! ಹೊರಡು ಸ್ಕೂಲಿಗೆ.

ಮುದ್ಮಣಿ : ಅತ್ಪಾ ! ಧ್ಬಂಮ್ರೋಟು ?

ಅಹೋಬ್ಲ : ಏನೋ ಅದು ! ?

ಜೀವು : ಧರ್ಮ್ರೋಟು...ಮಗು ಕೇಳುತ್ತೆ.

ಅಹೋಬ್ಲ : ಅದ್ರ ಭಾಷೇಲಿ ಕೇಳುತ್ತೆ ! ಭಾಷಾಂತರಕ್ಕೆ ಹೆತ್ತ ತಾಯಿ ತಯಾರಾಗಿ ರ್ಬೇಕು...ಈ ಗೊಗ್ಗಯ್ಯ ಬಾಯ್ಬಿಟ್ಟಾಗ್ಲೆಲ್ಲಾ.

ಮುದ್ಮಣಿ : (ಗೊಳೋ ಎಂದು ಅಳುತ್ತ) ಅನ್ಮಾ ! ಅತ್ಪಾ ಗೊಗ್ಗಯ್ಯ ಅಂಮ್ತಾನೇ !!!

ಜೀವು : (ಸುತನ ಕಪೋಲವನ್ನು ಚುಂಬಿಸಿ) ಅಳ್ಬೇಡ ಕಂದ ! (ಪತಿಗೆ, ಬಿರುಸಾಗಿ) ಏನನ್ಯಾಯ ಅಂದ್ರೆ ! ಕೂಸಿನ್ಮೇಲ್ಯೇ ತೋರ್ಸೋದು ನಿಮ್ಮ ಘಟ್ಟಿಗತನಾನ !

ಅಹೋಬ್ಲ : ಕ್ಷಮ್ಸು ಜೀವು...ಏನೋ ಅದು...ನೀನ್ಕೇಳಿದ್ದೂ...ಮುದ್ಮಣಿ ?

ಮುದ್ಮಣಿ : ಧ್ಬಂನ್ಮ್ರೋಟುತ್ಪಾ !

ಅಹೋಬ್ಲ : ಸಾಕು ನೀನ್ಕೇಳಿದ್ದು. ಹೊರ್ಡು School ಗೆ.

ಮುದ್ಮಣಿ : (ಎರಡು ಹಸ್ತಗಳ ಹಿಂಭಾಗದಿಂದ ಕಣ್ಣುಗಳನ್ನು ಉಜ್ಜಿಕೊಳ್ಳುತ್ತ) ಅನ್ಮಾ ! ಅತ್ಪಾ ! ಧ್ಬಂಮ್ರೋಟು...

ಜೀವು : ಮಗು ಕೇಳೋದ್ನ ಕೊಂಡ್ಕೊಡೊ ಯೋಗ್ಯತೆ ನಿಮಗಿಲ್ದಿದ್ರೂನೂವೆ, ಅದೇನ್ಕೇಳುತ್ತೆ? ಅದಕ್ಕೇನ್ಬೇಕು ? ಇದ್ದಾದ್ರೂ ಕಿವೀಗ್ಹಾಕ್ಕೋಬಾರ್ದೆ !

ಅಹೋಬ್ಳ : ಬಾರ್ದೇನೂ..........ಬಹುದು ! ಕವೀಗ್ಳಾಕ್ಕ್ಯೋಬಹುದು ! ಬಾಳು ! ದೊಡ್ಡ Foolscap sheet ತೆಗೊ. ಚಿಕ್ರಾಯುಂ ಬೇಕಾದ್ದನ್ನೆಲ್ಲಾ ಹೇಳ್ತಾರೆ. ತಕ್ಷೀಲಾಗಿ ಪಟ್ಟಿ ಬರ್ಕೊ. (ಕುಮಾರನಿಗೆ) ನಿನಗೆ ಇಹಲೋಕದಲ್ಲಿ ಇರೊ ಆಸೇನೆಲ್ಲಾ ಬಾಳು ಬರ್ದೊಳ್ ಪಟ್ಟೀಲಿ ತೀರ್ಸ್ಕೊಳ್ಳೋ ! ನಿನಗೇನು ಬೇಕೂಂಬೋದ್ನ ಭಯವಿಲ್ದೆ ಹೇಳು. ಹೇಳೋ ಭಯ ನಿನಗೂ ಬೇಡ ಅದನ್ಕೊಂಡ್ಕೊಡೋ ಭಯ ನನಗೂ ಇಲ್ಲ. ಹೇಳು.

ಮುದ್ಮಣಿ : ಸ್ಪಕ್ಕ್ರೆ !

ಬಾಳು : (ಪಟ್ಟಿಯಲ್ಲಿ ಬರೆದುಕೊಳ್ಳುತ್ತ) ಸಕ್ರೆ.

ಮುದ್ಮಣಿ : ದ್ಬೆಲ್ಲಾ !

ಬಾಳು : ಬೆಲ್ಲ.

ಮುದ್ಮಣಿ : ಥ್ಯಾಟೀ ದ್ಬೆಲ್ಲ.

ಬಾಳು : ತಾಟಿ ditto.

ಮುದ್ಮಣಿ : ನ್ಮಿಠಾಯಿ !

ಬಾಳು : (ಬರೆದುಕೊಳ್ಳುತ್ತ) ಮಿಠಾಯಿ.

ಮುದ್ಮಣಿ : ತ್ಕೊಬ್ರಿ ನ್ಮಿಠಾಯಿ !

ಬಾಳು : ಕೊಬ್ರಿ ditto.

ಮುದ್ಮಣಿ : ತ್ಪಾಕಂಟ್ಪೊಪ್ಪು !

ಬಾಳು : (ಬರೆಯುತ್ತ) ಪಾಕಂಪೊಪ್ಪು.

ಅಹೋಬ್ಳ : (ಕೈ ಕೈ ಹಿಸುಕುತ್ತ.......... ಜುಗುಪ್ಸೆಯಿಂದ) ಹಾಳಾಯ್ತು ! ಒಬ್ಬ ರಾಜಪುತ್ರನ್ನ "ನಿನಗೇನ್ಬೇಕು?" ಅಂತ ಕೇಳಿದ್ರೆ, "ನನಗೆ ಕತ್ತಿಬೇಕು ! ಗುರಾಣಿಬೇಕು ! ಬಿಲ್ಲು ಬೇಕು ! ಬತ್ತಳಿಕೆ ತುಂಬ ಬಾಣಗಳು ಬೇಕು !"........ಇಲ್ಲ ಬ್ರಾಹ್ಮಣವಟೂನ ಕೇಳಿದ್ರೆ ರಾಮಾಯಣ ಮಹಾಭಾರತ ವೇದ ಪುರಾಣ ಇತ್ಯಾದಿಗಳ ಮೇಲೆ ಆಶೆ ಪಡೋದುಂಟು ! ಅದ್ರೆ........ ಧರ್ಮ್ರೋಟು, ತಾಟಿಬೆಲ್ಲ, ಪಾಕಂಪೊಪ್ಪು ಇದಕ್ಮೇಲೆ ಓಡೋದೇ ಇಲ್ಲ ಈ Double Distilled Dufferನ ಬುದ್ಧಿ !!!

ಮುದ್ಮಣಿ : (ತಾಯಿಯನ್ನು ಅಪ್ಪಿಕೊಂಡು ಗೊಳೋ ಎಂದು ಅಳುತ್ತ) ಅಮ್ಮಾ ! ಅಪ್ಪಾ ನನ್ನ 'ಡ್ಡಫರ್' ಅಂತ್ಯಾನೆ !

ಜೀವು : (ಪುತ್ರಕನ ಫಣೆಯನ್ನು ಚುಂಬಿಸಿ ತಲೆಯನ್ನು ಸವರುತ್ತ) ಅಳ್ಬೇಡ ನನ್ನ ಅರಗಿಣಿ !........ಈ ತಿಂಡಿ ಪದಾರ್ಥ ಅಲ್ದೆ ಬೇರೆ ಏನೂ ಬೇಡ್ವೇ ನಿನ್ಗೆ ?

ಮುದ್ಮಣಿ : (ಹಸನ್ಮುಖನಾಗಿ, ಕಣ್ಣುಗಳು ಬೆಳಕನ್ನು ಬೀರುತ್ತಾ) ದ್ಬೇಕೂ ನ್ಮಾ !

ಜೀವು : ಹಾಗಾದ್ರೆ......(ಗಲ್ಲವನ್ನು ಹಿಡಿದು ಕುಮಾರನ ಮುಖವನ್ನೆತ್ತಿ) ಕೇಳು ಕಂದ...... ಕೇಳು !

ಮುದ್ಮಣಿ : (ಬಾಳುವಿಗೆ) ಬ್ಭೂಗೋಳ !

ಅಹೋಬ್ಳ : "ಭೂಗೋಳ?" I see ! ಹುಡುಗ interested in Geography ! Map of the worldಏ ಇಲ್ಲ Globeಏ ಕೇಳ್ತಿದ್ದಾನೆ ! Wonderful !......I must get......

ಬಾಳು : (ಅಡ್ಡಮಾತಾಗಿ) Map ಅಲ್ಲ ಸಾರ್ ! ಚಿಕ್ರಾಯ್ರು ಕೇಳೋದು ಭೂಗೋಳದ mark ಹಾಕಿದ ಪಟಾಕಿ ಕಟ್ಟು. (ಮುದ್ಮಣಿಗೆ) ಅಲ್ವೆ ಸಾರ್ ?

ಮುದ್ಮಣಿ : ಹೂಂ.

ಅಹೋಬ್ಳು : ನೆಗದ್ಬಿತ್ತು, ನನ್ನ hopeಉ !

ಮುದ್ಮಣಿ : Double ಜಿಂಕೆ !

ಅಹೋಬ್ಳು : "Double ಜಿಂಕೆ ?"......I see ! He means a double barreled ಬಂದೂಕು to shoot a ಜಿಂಕೆ with ! ಅದೇ...ಆ ರಾಜ ಪುತ್ರ...ಬಾಣ... ಬತ್ತಳಿಕೆ...ಗಾಂಡೀವ...ಪಾಶುಪತ...ಪದ್ಮವ್ಯೂಹ...ಇದೆಲ್ಲಾ ಕಿವೀಗ್ಬಿದ್ದು ಯಾವ್ದೋ ಪೂರ್ವಜನ್ಮದ ಸ್ಮರ್ಣೆ!...ಅಭಿಮನ್ಯುವ್ದೋ !...ಇಂದ್ರಜಿತ್ನೋ !...ಬಬ್ರುವಾಹನನೋ !...ಸದ್ಯ ಬಂದೂಕು ಕೇಳ್ತಿ ಧಾನೆ...But then...licence for a child...?

ಬಾಳು : (ಅಡ್ಡಮಾತಾಗಿ) ಬಂದೂಕಲ್ಲ ಸಾರ್? ಚಿಕ್ರಾಯ್ರು ಕೇಳೋದು...ಎರಡು ಜಿಂಕೆ mark ಹಾಕಿದ ಸೂಜಿ ಪಟಾಕಿ ಕಟ್ಟು. (ಇದನ್ನು ಕೇಳುತ್ತಲೇ ಅಹೋಬ್ಳು ಬರುವ ಕೋಪವನ್ನು ನುಂಗಿಕೊಳ್ಳುತ್ತ ಎರಡೂ ಕೈಗಳಮೇಲೆ ಮುಖವನ್ನು ಇಳಿಸಿಕೊಂಡು ಪೇಚಾಡುವನು)

ಮುದ್ಮಣಿ : (ಹಸನ್ಮುಖನಾಗಿ ಬಾಳುವಿಗೆ) ದ್ಬರ್ರೀರ್ರಿ!....... ಫುರ್ ಫುರ್ ಬಾಣ!

ಬಾಳು : "ಸುರ್ ಸುರ್ ಬಾಣ" ?

ಮುದ್ಮಣಿ : ಅಲ್ಲ "ಫುರ್ ಫುರ್ ಬಾಣ!"

ಬಾಳು : ಸುರ್ ಸುರು ?

ಮುದ್ಮಣಿ : (ಮುಖದಲ್ಲಿ ಕೋಪವನ್ನೂ ಜುಗುಪ್ಸೆಯನ್ನೂ ಸೂಚಿಸಿ) **ಫುರ್ ಫುರ್ ಬಾಣ !**

ಬಾಳು : (ಮುದ್ಮಣಿಯ ಭಾಷಣದಿಂದ ಮುಖಕ್ಕೆ ಸಂಭವಿಸಿದ ಪ್ರಕ್ಷಾಳನವನ್ನು ಒರಸಿ ಕೊಳ್ಳುತ್ತಾ........ಅಹೋಬ್ಳುವಿಗೆ) ಸಾರ್! ಕನ್ನಡದಲ್ಲಿ ' yeff ' ಹೇಗೆ ಬರಿಯೋದು ಸಾರ್ ?

ಅಹೋಬ್ಳು : (ಚೇತರಿಸಿಕೊಂಡು) " yeff " ಎಲ್ಬಂತು ಇಲ್ಲಿ ?

ಬಾಳು ; ಚಿಕ್ರಾಯ್ರು ಸುರ್ ಸುರ್ ಬಾಣಾನ 'ಫುರ್ ಫುರ್ ಬಾಣ' ಅಂತಾರೆ! ಕನ್ನಡ "ಸ"ನ...English " yeff " ಆಗಿ ಬರೀಬೇಕೂಂತಾರೆ......

ಅಹೋಬ್ಳು : (ಎದ್ದು ಕುಮಾರನ ಕುತ್ತಿಗೆಯನ್ನು ಬಿಗಿಹಿಡಿದು ಬೀದಿಯ ಬಾಗಿಲಿಗೆ ಸಾಗಿ ಸುತ್ತ) ಸಾಕೋ ನಿನ್ನ ambitionsಉ! ಸಧ್ಯ...ಸದ್ದಿಲ್ಲದೆ Schoolಗೆ ತೊಲಗು! ನನ್ನ School daysನಲ್ಲಿ ನಿನ್ನಂಥಾವ್ನು ಸಹಪಾಠಿಯಾಗಿದ್ದಿದ್ರೆ...ನಿತ್ಯ Morning Classಉ... Because of artificial ಅಮಾವಾಸ್ಯೆ! ಹೊರಡು! ಬಾಳು, ಜೊತೇಲಿ ಹೋಗಿ ಸೇರಿಸ್ಬಿಟ್ಟು ಬಾ.

[ರೋದಿಸುವ ಮುದ್ಮಣಿಯೊಂದಿಗೆ ಬಾಳು ನಿಷ್ಕ್ರಮಣ]

ಅಹೋಬ್ಳು : ರೇಗ್ಬೇಡ ಜೀವು......ಗಂಡು ಮಕ್ಕಳ್ನ ಸಾಕೋ ದಾರಿ ಗಂಡಸರಿಗೆ ಗೊತ್ತೇ ಹೊರ್ತು........... ಹೆಂಗಸರಿಗೆ ಗೊತ್ತಿಲ್ಲ. ತಬ್ಕೊಂಡು ಮುದ್ದಿಟ್ಟು ಮನೇಲಿ ಸಾಕಿದ ಗಂಡ್ಮಕ್ಳು ಮುಂದಕ್ ಬೆಳೆದು ಮನೆ ಹೊಸ್ಲು ದಾಟಿ......meetಆಗೊ ಪ್ರಪಂಚ......ಕಠಿಣ ಪ್ರಪಂಚ...... ಬಾಚಾಂತ ತಬ್ಕೊಂಡು ಮುದ್ದಿಡೋ ಪ್ರಪಂಚವಲ್ಲ! ಮನೇಲೇ ಗಂಡುಮಕ್ಕಳ್ನ ತಕ್ಕಮಟ್ಗೆ ಜಬರ್ ದಸ್ತ್‌ನಲ್ಲಿ ಬೆಳ್ಸಿದ್ರೇನೇಮೇ......ಮೈಯು ಮನಸ್ಸು ಗುಂಡಿಗೆ ಗಟ್ಟಿಯಾಗಿ, ಸಮಾಜ್ದಲ್ಲಿ ಒದಗೊ

ಅನಿವಾರ್ಯಗಳ್ನ......ನಾನು ಈಗ ಹೇಗೆ ಎದ್ದುಸ್ತೇನೋ ಹಾಗ್ಯೇ ಎದ್ದುಸೋಕೆ ಚೈತನ್ಯ ಬರುತ್ತೆ. "ಕಂದಾ .... ಅರಗಿಣಿ .... ರಾಜಾ ಮಗೂಂ"ತ—...ಹೆತ್ತ ಮಮತೇಲಿ ಹತ್ತಿ ಸುತ್ತಿಟ್ಟು ಬೆಳಸಿದ ಮಕ್ಳು...ಮುಂದಕ್ಕೆ......

ಜೀವು : ನೀವೇನು ಹೇಳಿದ್ರೂನವೆ............"ಹೆತ್ತವರಿಗೆ ಹೆಗ್ಣ ಮುದ್ದು!"

ಅಹೋಬ್ಲು : ಹೌದು. ಆದ್ರೆ .... ಆ ಹೆಗ್ಣಕ್ಕೆ ಹೆತ್ತವ್ರು ಮುದ್ದೇ? ಅದನ್ ಯೋಚಿಸ್ದ್ರಾ? ಆ ಹೆಗ್ಣ "ನನ್ನ ಹೀಗೆ ಹೆತ್ಬಿಟ್ರಲ್ಲಾಂತ ಎಷ್ಟು ಪೈವೇಕು......!"

ಜೀವು : (ಸಿಡುಕು ಮುಖದಿಂದ) ಸಾಕ್ನಿಲ್ಸೀಂದ್ರೆ ನಿಮ್ಮ ಜಾಣತನದ ಮಾತುಗ್ಳು...

[ನಿಷ್ಕ್ರಮಣ]

ಅಹೋಬ್ಲು : ಇದೇ .... "woman the eternal motherಉ" ಅಂಬೋದು ಹೊಟ್ಟೇಲಿ ಹೊತ್ತು ಹೆತ್ತ sonನ husbandಪ ಓಯ್ಯಾಳಿಸಿದ್ರೂ......ರೇಗೋ ಅಷ್ಟು loveನ......nature ಇಟ್ಟಿದಾಳೆ ಹೆಂಗ್ಸಿನ heart ನಲ್ಲಿ, being a woman herself of course! But ಯಾವುದೋ poet ಹೇಳಿದ್ಹಾಗೆ :

"Woman may eat and weep and sleep
But man must work and work and work."

Therefore......(ಮೇಜಿನಿಂದ law ಪುಸ್ತಕದ bind ಹಾಕಿದ ಒಂದು Film Magazine ಅನ್ನು ತೆಗದು ಓದತೊಡಗುವನು.)

ಜೀವು : (ಲೋಟ ಮುಚ್ಚಿದ ಕಾಫಿಯುನ್ನೂ ತಟ್ಟೆಯಲ್ಲಿ ಬೋಂಡಾವನ್ನೂ ಎತ್ತಿಕೊಂಡು ಪ್ರವೇಶಿಸಿ, ಮೇಜಿನ ಮೇಲಿಟ್ಟು) ಇಕೋ......ಬಿಸಿ ಕಾಫಿ! ಅಲ್ದೆ ಬೋಂಡ!

ಅಹೋಬ್ಲು : Thank you, ಜೀವು. ಎಷ್ಟು ವ್ಯತ್ಯಾಸ ನೋಡು ನಿನ್ಗೂ ನನ್ಗೂ! ನಾನು ರೇಗೋದು ...... ಕಿರ್ಲೋದು......ನಗೋದು......ಅಳೋದು ...... ಹೀಗೆಲ್ಲಾ ನಿಮಿಷ ನಿಮಿಷವೂ ಬದಲಾಯಿಸುತ್ತೆ ನನ್ನ ಸ್ವಭಾವ. ನೀನು.........ಸ್ತ್ರೀಯರು "ಚಂಚಲ ಮನಸ್ನೋ"ಂತ ಸಾಂತಿಗ್ಳು ಎಷ್ಟು ಸಾರಿದ್ರೂನೂವೆ......ನನ್ನ ಹುಚ್ಚಾಟಾನೆಲ್ಲಾ ಸೈರಿಸ್ತ......ಕ್ಷಮೆ......ಕ್ಷಮೆ...... ಜೀವು......ನಿನ್ನ......ನಿನ್ನ ಏನು! ನಿಮ್ಮ ಹೆಂಗಸ್ರು ಗುಣಾನೇ ಕ್ಷಮೆ......ನಿಮ್ಮ Rock-bottom characterಉ........... ಸಂಸ್ಕೃತದಲ್ಲಿ......ನನ್ನ Matriculation Textನಲ್ಲಿ ಎಲ್ಲೋ......ಬಂದ ಜ್ಞಾಪಕದ ಹಾಗೆ......"ಕ್ಷಮಯಾಧರಿತ್ರೀ"......(ಚೊಂಬಿನ ಕಾಫಿಯನ್ನು ಲೋಟಾಗೂ ಲೋಟಾವಿನ ಕಾಫಿಯನ್ನು ಚೊಂಬಿಗೂ ಬಿಸಿಯನ್ನು ಆರಿಸಲೋಸುಗ ವರ್ಗ ಪ್ರತಿ ವರ್ಗಾಯಿಸುತ್ತ) Wonderfulಉ!...........(ಬಾಗಿಲನ್ನು ಯಾರೋ ತಟ್ಟುವ ಶಬ್ದ ಕೇಳಿ, ಲೋಟಾವನ್ನು ಚೊಂಬಿನ ಮೇಲೆ ಕುಕ್ಕಿ......ಬಾಗಿಲನ್ನು ಸಮೀಪಿಸಿ......ರೇಗಿ) ಎತ್ಕೊಂಡ್ಹೋಗು ನಿನ್ನ ಹಾಳು ಬೋಂಡ ಕಾಫೀನ! ಎಂದೂ ಬರದ ಹಾಳು Friendsಉ ಇಂದು ಬಂದಿದ್ದಾರೆ ಮಂದೆಮಂದೆಯಾಗಿ! Tiffenಉ ಎಲ್ಲಾನೆ ಇಡು! Tiffen hours ಎಷ್ಟೆಷ್ಟಾನೆ change ಮಾಡು! Wirelessನಲ್ಯಾದ್ರೂ ತಿಳ್ಕೋತಾರೆ Friendsಉ! ಎತ್ಕೊಂಡ್ಹೋಗೆ ಒಳಗೆ... ನಿನ್ನಟ್ಟೇನೂ......ಚೊಂಬ್ನೂ!

ಜೀವು : (ಆತುರದಿಂದ) ಕಾಫಿ ಆರ್ಹೋ.............! ?

ಅಹೋಬ್ಲು : ಹಿಂದ್ಗಡೆ ಸುಳಿದಾಡ್ತಿರೇ! ಸಮಯ ನೋಡಿ ಸುಕೊರ್ತೇನೆ!

[ಜೀವು ತಟ್ಟೆಯನ್ನೂ ಚೊಂಬನ್ನೂ ಲೋಟಾವನ್ನೂ ಎತ್ತಿಕೊಂಡು ಮನೆಯೊಳಕ್ಕೆ ನಿಷ್ಕ್ರಮಿಸುವಳು.]

(ಅಹೋಬ್ಲು ಬೀದಿ ಬಾಗಿಲನು ತೆಗೆದು Krishna Rao, Ranga Rao ಇವರನ್ನು ಒಳಕ್ಕೆ ಬಿಡುವುದಕ್ಕೆ ಮುಂಚೆ, ಮೇಜಿನ ಸುತ್ತಾ ಇರುವ ಕುರ್ಚಿಗಳನ್ನೆಲ್ಲಾ ಜೀವು ನಿಷ್ಕ್ರಮಿಸಿದ ಬಾಗಿಲಿಗೆ ಬೆನ್ನಿಟ್ಟು ಏರ್ಪಡಿಸುವನು.)

ಸ್ನೇಹಿತರು : [ಪ್ರವೇಶಿಸುತ್ತ] ಇದೇನು, ಅಹೋಬ್ಲು? ಇಷ್ಟು ತಡ ಬಾಗಿಲು ತೆಗಿಯೋದು? ಅರ್ಧ ಘಂಟೆಯಿಂದ......

ಅಹೋಬ್ಲು : Don't be silly boys! ಬನ್ನಿ, ಕೂತ್ಕೊಳ್ಳಿ. (ಸ್ನೇಹಿತರು ಕೂಡುತ್ತಲೂ) ನೀವ್ರೋ ಬಂದು......ಎರಡು ಮೂರು ತಿಂಗಳಾದ್ವು. ನನ್ನ್ Practiceಓ rising terribly. ಬರೀ feesಗೋಸ್ಕರ ಬಂದ Clientsನೆಲ್ಲಾ welcome ಮಾಡ್ತಿದ್ದೆ, in my old days. ವಕಾಲತ್ fees‌ನಲ್ಲೇ ಸಂಸಾರಾನಾ ಜರುಗಿಸ್ತಿದ್ದೆ, in my old days. Later on ಸಾವಿರಗಟ್ಲೆ fees ಸುರ್ಯೋ ಒಬ್ಬ Client ಇರುವಾಗ ಒಂದೊಂದು ರೂಪಾಯಿ ಕೊಡೊ ಸಾವಿರ Clientsನ ದಶ್ನಕ್ಕೆ ಸಲಾಂ ಅಂತ ... Valuable Clientsಉ...... ಜಮೀನ್ದಾರ್......lakhs of rupees involved......Therefore ಬೇರೆ ಯಾವ Clientsಊ ಬರ್ಬಾರ್ದು ಗೆ ಬೀದಿ ಬಾಗಿಲು ಬಿಗಿದು Caseನ study ಮಾಡ್ತಿದ್ದೆ. ಈ ಬೀದಿಯೆಲ್ಲಾ ಲಾಯ್ರುಗ್ಳು! ಒಬ್ಬೊಬ್ಬ ಲಾಯ್ರೀನೂ ಬೀದಿಬಾಗಿಲು ಬಿಚ್ಕೊಂಡು, ಜಗಲೀಲಿ ನಿಂತ್ಕೊಂಡು, ಹಲ್‌ಪಲ್ ಕಿರೀತ ಎರಡು ಕೈಯ್ನಿಗ್ಳೂ ಬೀಸ್ತ, "ಬನ್ನಿ! ಬನ್ನಿ! ದಮ್ಮಯ್ಯ ಬನ್ನೀ!"ಂತ ಪೇಚಾಡ್ತಿರೋವಾಗ ನಾನ್ಮಾತ್ರ ಬಾಗಿಲು ಹಾಕ್ಕೊಂಡು......ಬಡಾಯಿಯಿಂದೇನು ಪ್ರಯೋಜ್ನ! ......ಏಟ್ನಲ್ಲಿ to apologetically explain my belated ಬಾಗಿಲು ತೆಗೆದದ್ನ...... recordsಉ ತಿರುವ್ಹಾಕ್ತಿದ್ದೆ.

ಕೃಷ್ಣ್ರಾವ್ : ಹಾಗಾದ್ರೆ......busyನೋ ?

ಅಹೋಬ್ಲು : Busy ಏನು! Brain strainಉ ಕಿಟ್ಟಿ. ಅಲ್ದೆ......ಸೆಗಡಿ.

ರಂಗ್ರಾವ್ : ಸೆಗಡಿ ?......ಬೇಸಿಗೇಲಿ ?

ಅಹೋಬ್ಲು : ಒಳ್ಳೇ ಬೇಸಿಗೆ, ರಂಗು! ನೀನೆಲ್ಲಾನೆ ಬಿದ್ಕೊಂಡಿರು, ಎಂಥ wool ತಾನೆ ಹೊದ್ಕೊಂಡಿರು, ಆ half past two in the morning ಬೀಸುತ್ತಲ್ಲಾ ಒಂದು breezeಉ ......ಅದ್ರ ಛಳೀಲಿ....

(ಮೂಗನ್ನು ಹಿಡಿದುಕೊಂಡು, ಸೀನು ಬರುವಂತೆ ನಟಿಸಿ)

ಕ್ಷಮ್ಸಿ boys......ಬಂದ್ಬಿಟ್ಟೆ.

[ಒಳಹೊಕ್ಕು ಜೀವುವಿಗೆ ಸೌಂಜ್ಞೆಮಾಡಿ, ಆಕೆ ತಂದ ಕಾಫಿಯನ್ನು ಬಕಬಕನೆ ಬಾಯಿಗೆ ಬಸಿದುಕೊಂಡು, 'ಅಹ್ಂಂ ಛೀಂ!' ಎಂದು ಸೀನಿ, ಮೂಗಿನಿಂದ ಸೆಳೆದ ಸಿಂಬಳವನ್ನು ಧೋತ್ರದಲ್ಲಿ ಒರಸಿದಂತೆ ನಟಿಸುತ್ತ, ಪುನಃ ಪ್ರವೇಶಿಸಿ ಹೊಸಲಿನ ಮೇಲೆ ಕ್ಷಣ ನಿಲ್ಲುವನು.]

ಕಿಟ್ಟಿ : (ಥಟ್ಟನೆ ಮೂಸಿ ಮುಖದಲ್ಲಿ ಆಶ್ಚರ್ಯವನ್ನೂ ಸಂತೋಷವನ್ನೂ ಸೂಚಿಸಿ) ರಂಗೂ! ಮೂಸ್ನೋಡೊ......ಘಾಳಿ ವರ್ತಮಾನ...ಬೋಂಡ!......ಬರುತ್ತೆ!

ರಂಗು : (ತಾನೂ ಮೂಸಿನೋಡಿ ಹಿಗ್ಗಿ......ಕಣ್ಣುಗಳು ಹೊಳೆಯುತ್ತ) ಹೌದು ಕಿಟ್ಟೀ! ......ಬೋಂಡಾಸೇವೇಯೇ! ಬರೋವರಿಗೂ ಇಲ್ಲೇ ಠಿಕಾಣಿ ನಾವಿಬ್ರು.

ಅಹೋಬ್ಲು : (ಆತ್ಮಗತಂ) ಘಟಿಂಗ್ರು! ಕಂಡ್ಹಿಡ್ಕೊಂಡ್ರು......ಬೋಂಡಾ ವಾಸ್ನೇನ! ಆದ್ರೇನ್ಮಾಡೋದು!......ವಾಸ್ನೆ ಬಿಡೊ ಬೋಂಡ! ಹೋದ ಬೋಂಡ, ಬರೋ ಬೋಂಡ ಅಲ್ಲ! ......ಕಾದಿರಿ. ನನಗೇನೂ ನಷ್ಟವಿಲ್ಲ. ಕಾಡಿಗೆ ಹೋದ್ರೂ Company ಇರಬೇಕು...as Lakshmana said to Rama and Seetha.

[ಒಳಗೆ ಪ್ರವೇಶಿಸಿ]

ಆ De la Law caseನಲ್ಲಿ......*prima facie* evidenceಉ..........

ರಂಗು : ಹೌದು......ಆ ಜಮೀನ್ದಾರ್ Case ಅಂದ್ಕಲ್ಲಾ....ವಿಷಯ ?

ಅಹೋಬ್ಳ : Political secret, my boy! ನಮ್ಮ clients ನಮಗೆ ಹೇಳಿದ secrets ಎಲ್ಲಾ...doctorsಗೆ patients ಹೇಳಿದ symptoms ಹಾಗೆ...sacredಉ... until they are brought out in the Public Court!... (ಬಾಗಿಲನ್ನು ಯಾರೋ ತಟ್ಟುವುದು ಕೇಳುತ್ತಲೂ) Good God! who is it? This must be He! (ಬಾಗಿಲಿಗೆ ಹೋಗಿ, ತೆಗೆದು, ಪರಶುವಿನ ಪ್ರವೇಶಕ್ಕೆ ಅವಕಾಶ ಕೊಟ್ಟು...ದಿಮ್ಮೆಟ್ಟಿ... ಮೆಲ್ಲಗೆ) ಯಾರು ನೀವು?

ಪರಶು : [ಪ್ರವೇಶಿಸಿ] ನಾನ್...ಒಂದ್...ಕಕ್ಷಿಕಾರನ್. ಇತು ಲಾಯರ್ ವೀಡ್ ತಾನೆ?

ಅಹೋಬ್ಳ : ಹೌದು...ಲಾಯ್ರು ಮನೆ. ಏನು caseಉ......?

ಪರಶು : ಔತು......ತೊಟ್ಟ Caseಉ. ತೊನ್ನೂರು ರೂಬಾಯಿ caseಉ.

ಅಹೋಬ್ಳ : ತೊನ್ನೂರು ? ತೊಂಬತ್ತುನೂರು ರೂಪಾಯೀ...? ಒಂಬತ್ತು ಸಾವ್ರ ರೂಪಾಯಿ caseಏ ?

ಪರಶು : ಇಲ್ಲ. ತೊನ್ನೂರ್......ಅಂದರೆ ನೂರ್‌ಕು......ಪತ್ ರೂಪಾಯಿ ಕಡಮೆ. ಒಂಬತ್.......ಹತ್ ರೂಪಾಯಿ.

ಅಹೋಬ್ಳ : ತೊಂಬತ್ತು ರೂಪಾಯಿ caseಏ?........at five percent........ ನಾಲ್ಕೂವರೆ ರೂಪಾಯಿ not too little...... ಬನ್ನಿ ಒಳಗೆ.. .... ಹೌದು : ನಾನೂ ನಶ್ಯ ಹಾಕೋವ್ನೇ........ನೀವೂ ಹಾಗ್ಯೇಂತ ಕಾಣುತ್ತೆ, ಆದ್ರೆ ಕಂಡ್ಟರೋಹಾಗೆ ನಶ್ಯ ಬಾಕಿ ಇರೋದ್ನ ಒಸ್ಕೊಂಬಿಡಿ.

ಪರಶು : (ಮೂಗಿನ ತಳಭಾಗವನ್ನು ಸವರುತ್ತ) ಇತು ಮೂಕ್ಕುನಲ್ಲಿ ನಸ್ಯತ ಬಾಕಿ ಅಲ್ಲ! ಇತು ನನ್ನ ಮೀಸೆ.

ಅಹೋಬ್ಳ : ಮೀಸೇನೊ ? ಕ್ಷಮಿಸಬೇಕು. ತಮ್ಮ ಹೆಸ್ರೇನು ?

ಪರಶು : ಪರಶುರಾಮನ್.

ಅಹೋಬ್ಳ : ಚೆನ್ನಾಗಿದೆ ಹೆಸ್ರು. ಹೆಸ್ರುಪ್ರಕಾರ ಆಯುಧಪಾಣಿಯಾಗಿ ಬಂದಿದ್ದಿದ್ರೆ ನನ್ನ Client ಕೆಂಪೆಗೌಡನಿಗೆ ಕುಮ್ಮಕ್ಕ್ ಕೊಡಬಹುದಾಗಿತ್ತು! ಇರ್ಲಿ, ತಾವು ಯಾಪ್ಲು! ಯಾವ ಪಂಗ್ಡ ? ಯಾವ್ಜಾತಿ ? ಜಾತಿಯೇನು......ಜನಿವಾರ ಇದೆ.......ಆದ್ರೂ......

ಪರಶು : ನಾನ್ ಅಯ್ಯರ್ ಜಾತಿ.

ಅಹೋಬ್ಳ : ಅಯ್ಯರಿ ?...ಹಾಗಾದ್ರೆ ಮೀಸೆ ಎಲ್ಲೀದು ನಿಮಗೆ!

ಪರಶು : ನಮ್ಮ ಜಾದಿಕಿ ಮೀಸೆ ಇಲ್ಲ. ಆತರೆ ನಾನೇನು ಮಾಡುವದ್ ? ನಮ್ಮ ತೇಶತಲ್ಲಿ ನಮಕ್ ಮೀಸೆ ಇಲ್ಲ. ನಿಮ್ಮ ತೇಶತಲ್ಲಿ ನಿಮಕ್ ಮೀಸೆ ಇದೆ. ಇಂದ ಮೈಸೂರು ತೇಶತ್ತೆ ......ಮೈಸೂರಿಕಳ್‌ಕ್ತಾಂ ಕೆಲಸ ಕುಡುಕ್‌ತಾರೆ! ಮತರಾಸಿಕಳ್‌ಕ್ ಕೆಲಸಂ ಕುಡುಕುವತಿಲ್ಲ! ನನಕ್........ಎನಗೆ......ಮೈಸೂರು ಪಾಷೆ...ಕನಡಂ ಪಾಷೆ ಚೆನ್ನಾಕಿ ಕೊತ್ತ್! ಇಪ್ ಮೀಸೆ ಯುಂ ವೆಚ್ಚಿಕೊಂಡ್‌ಪಿಟ್ಟೆ......ನನ್ನ ಮೈಸೂರೀಂತ ತಿಳಿತ್ ಕಂಡ್ ಎಲ್ಲಿ ಪೋನಾಲುಂ......ಎಂಗೆ ಒತರೂ......ಕೆಲಸಂ......ಕುಡ್ತ್ ಬಿತ್ತಾರೆ. (ಎಂದು ಹಲ್ಲು ಹಲ್ಲು ಕಿರಿಯುವನು)

ಅಹೋಬ್ಳ್ಳ : (ಬೆಚ್ಚಬಿದ್ದು......ಸುಧಾರಿಸಿಕೊಳ್ಳಲು ಒಂದೆರಡು ನಿಮಿಷಗಳಾದ ಮೇಲೆ) ಹಾಗಾದ್ರೆ ಕನ್ನಡಂ ಪಾಷೆ ನಿಮಗೆ ಚೆನ್ನಾಗಿ ಕೊತ್ತೋ? ಮೈಸೂರಿಗ್ಳು ಕೆಲ್ಸ ಕೊಡೋಕ್ಮುಂಚೆ, ನೀವೇ ಮೈಸೂರಿಗ್ಳಿಗೆ ಕೆಲ್ಸ ಕೊಡೋಹಾಗಿದೆ! ಅದೇನ್ಕೆಲ್ಸ ಅದೇನ್ಕಸ್ಬು ನಿಮ್ದು?

ಪರಶು : ಕಸಪ್ ಏನೂ! ಅಯ್ಯರಿ ಕಸಪ್.

ಅಹೋಬ್ಳ್ಳ : ಅಯ್ಯರಿ ಕಸಬು ಅಂದ್ರೆ ಎಷ್ಟೋ! ಈಗ ನಮ್ದೇಶ್ದಲ್ಲಿ ಯಾವ ಯಾವ್ಕಸಬ್ಲೂ ಯಾವ್ಯಾವಿಲಾಖೇಲೂ ಅಯ್ಯರೀದರ್ಶ್ನಾನೆ! ಸರ್ವತ್ರ P.C. ಆಗಿ ಕೂತಿದ್ದಾನೆ. Perfect Cookಊ ಅಯ್ರೀನೆ, Police Constableಊ ಅಯ್ರೀನೆ! ಪಕ್ಕ ಚೋರರೂ ಅಯ್ರೀನೆ, Police Commissionerಊ ಅಯ್ರೀನೆ! Physical Culturistಊ ಅಯ್ರೀನೆ, Privi Councillorಊ ಅಯ್ರೀನೆ! ಈ ಸಹಸ್ರ ಅಯ್ಯರ್ ಕಸಬುಗಳಲ್ಲಿ ನಿಮ್ದು ಯಾವ P.C.?

ಪರಶು : ಅಡಿಕೆ ಕೆಲ್ಸಜ಼್.

ಅಹೋಬ್ಳ್ಳ : ಅಡಿಕೆ?

ಪರಶು : ಅಡಿಕೆ......ಅನ್ನ ರಸಂ ಉಳಿ......ಊಟ ತಯಾರ್ ಮಾಟುವದ್......

ಅಹೋಬ್ಳ್ಳ : ಅಡಿಗೇನೆ!......ಹೌದೂ......ನೀವು ಕಣಿವೆ ಕೆಳಗಿನ Cookಉಗ್ಳು...... ನಮ್ದೇಶಕ್ಕೆ ಬರೋದು......ಕನ್ನಡಗರಿಗೆ ಅಡಿಗೆ ಗೊತ್ತಿಲ್ಲಾಂತ್ಲೇ?

ಪರಶು : ಮೈಸೂರಿಕಳ್‌ಕ್ ಅಟಿಕೆ ಕೊತ್ತ್......ಆತರೆ ತಿಳ್‌ವ್ ಸಾರ್......ತಿಳಿಯ ರಸಂ ಮಾಟುವ್‌ತಕ್ಕೆ ಪರವುದಿಲ್ಲ......ನಿಮಗೆ ತಿಳಿಯ ರಸಂ ಕೊತ್ತಿಲ್ಲ ಮಾಟುವದ್...

ಅಹೋಬ್ಳ್ಳ : ಓಹೋ! ತಿಳಿಯ ಸಾರುಮಾಡೋಕೆಂತ ಬಂದಿರೋದು ನೀವು! ಮತ್ತ್ಯಾಕೆ ನಾವು ಮೈಸೂರಿಗ್ಳು ಮೀಸೆ ಇಟ್ಕೊಂಡಿರೋದು? ಗಟ್ಸಾರು ಮಾಡಿಬಿಡ್ತೇವೆ; ಮೀಸೆ ಆಚೆಯಿಂದ ಬಾಯಿಗೆ ಬಿಟ್ಕೋತೇವೆ ಗಟ್ಸಾರ್ನ. ಮೀಸೆ ಒಂದು Jewel Filter ಆಗಿ......ತಿಳಿಯ ಸಾರು ಒಳಕ್ಕೆ ಹೋಗಿರುತ್ತೆ, ಅಲ್ದೆ Jewel filter ಹೊರಗಡೆ......ಹೆಸ್ರು ಕಟ್ಟೆ ಕಟ್ಕೊಂಡು...... ತಯಾರು......**ತೊನ್ಸೆ**! (ಆತ್ಮಗತಂ) ಹೌದು...ನನಗೀಗ ಬಂದಿರೊ clientಉ cookಊ ಅಂತ ನನ್ನ friendsಗೆ ತಿಳೀತೋ......ಖದರ್ ಕಮ್ಮಿ ಆಗುತ್ತೆ ನನಗೆ! (ಕಿಟ್ಟು ರಂಗುವನ್ನು ಸಮೀಪಿಸಿ, ಮೆಲ್ಲಗೆ) As I told you......ನಾನು ಹೇಳಿದ್ನಲ್ಲಾ...ಜಮೀನ್‌ದಾರ್ case ಅಂತ......This is the Rajah of......ಹೆಸ್ರು ಹೇಳ್ಬಾರ್ದು......disguise ನಲ್ಲಿ ಬಂದಿದಾರೆ. Diplomatic ಆಗಿ......situationನ negotiate ಮಾಡ್ಬಿಟ್ಟು......shall join you......(ಪುನಃ ಪರಶುವನ್ನು ಸೇರಿ) ಹೌದೂ, ಅದೇನು...ತೊಂಬತ್ತು ಸಾವ್ರಾನೊ ಇಲ್ಲ ತೊಂಬತ್ತು ರೂಪಾಯಿಗ್ಳ caseಉ ಅಂದ್ರಲ್ಲ......ಅದ್ರ ತಪ್ಶೀಲು ಏನು?

ಪರಶು : ನೋಟಿ: ನಾನು ಒಂದು ತೊಟ್ಟ ಮನುಷ್ಯರ ಮನೇಲಿ ಕೆಲ್ಸ ಮಾಡಿಕೊಂಡ್ ಇತ್ತೆ. ಅಡಿಕೆ ಕೆಲ್ಸಂ. ತಿಂಗಳ್‌ಕ್ ಪತಿನಂಜಿ...ಅತಿನೈತು ರೂಪಾಯಿ ಪೇಶಿಕೊಂಡಿದ್ದು. ಕೆಲ್ಸಂ ಮಾಡ್ತಾ ಮಾಡ್ತಾ "ಶಂಬಳಂ ಪರುವ ಮಾಸಂ ಕುಡುತ್ತೇನೆ......ಪರುವ ಮಾಸಂ ಕುಡುತ್ತೇನೆ"— ಈಕೆ ಪಳಿಕೊಂಡ್ ಪಿಳಿಕೊಂಡ್ ಆರು ತಿಂಗಳ್ ಕೆಲಸಂ ತಕೊಂಡ್‌ಪಿಟ್ಟ್ ಅಮ್ಮಾವ್ರು ಕೆಲಸತಿಂದ ವೆರಟಿಬಿಟ್ರು.

ಅಹೋಬ್ಳ್ಳ : ಕೆಲಸದಿಂದ ಒದ್ದೋಡ್ಸಿದ್ರೇ!? ಕಾರಣ?

ಪರಶು : ಅಮ್ಮಾವ್ರು "ನೀನು ಪಂದಾಕಿನಿಂದ ಮನೇಲಿ ಅರಶಿ ಪರ್‌ಪ್ ನೆಯ್ಯಿ ಪಾಲ್ ಲೆಕ್ಕಂ ಟಪಲ್ ಆಕಿ ಓಯ್ತ್! ಒರಟ್ ಓಗ್!" ಅನ್ಸ್ ವೆರಟಿಬಿಟ್ರು!

ಅಹೋಬ್ಳ್ಳ : ಅಮ್ಮಾವ್ರು ಹೇಳಿದ್ರೇನು ? ಯಜಮಾನ್ರಿಗೆ appeal ಮಾಡ್ಕೊಳ್ಳಿಲ್ವೇ ನೀವು ?

ಪರಶು : ಯಶಮಾನರನ್ನ್ ಕೇಳಿತೆ. ಅತಕ್ಕೆ ಅವರ್ "ಅಪ್ಪಾ, ನಾನು ಏನು ಮಾಟಲಿ ! ನಿನಕುಂ ಯಜಮಾನಿ ಅಮ್ಮಾವ್ರು ; ನನಕುಂ ಯಜಮಾನಿ ಅಮ್ಮಾವ್ರು ! ಕಲಾಟೆ ಮಾಡತೆ...... ಅಮ್ಮಾವ್ರು ಮಾತ್ ನಾನು ಕೇಳುವ ಆಕೆ......ನೀನೂ ಕೇಳ್ಕೊಂಡ್ ಓರಟ್ಟುಗಿ ಪಾ" ಅನ್ ಏಳಿತ್ರು.

ಅಹೋಬ್ಳ್ಳ : ಅಯ್ಯೋ ಪರಿಶೋಚನೀಯ ಪ್ರಾಣಿ ! ನಿಮ್ಮ ಯಜಮಾನ್ರು ಹೇಳ್ತೀನಿ ! ಹೌದೂ......ಮನೇಲಿ Home-rule ಉ ಇಲ್ದಿದ್ರೂನೂವೆ ಆತನಿಗೆ, ಮನೇಗೆ ಸಂಪಾದ್ನೋವ್ನು ಆತ್ನೇ ಅಲ್ವೇ ? ಸಂಬ್ಳಬ್ಬಾಬ್ತು ಹದ್ನೈದಾರ್ಲ್ಲ ತೊಂಬತ್ತು......ಆತನ್ನ ಕೇಳಿದ್ರಾ ?

ಪರಶು : ಔತು. ಕೇಳಿತೆ. ಆದರೆ ಅವ್ರು "ಅಪ್ಪಾ, ನಾನೇನು ಮಾಟಲಿ ! ನಿನ್ನ ನೋಟಿ ತರೆ ನನ್ನ ವಯರ್ ಎರಿಯಿತದೆ ! ಆತ್ರೆ ನಾನೇನು ಮಾಟುವತ್ ! ಅಮ್ಮಾವ್ರು ಯಜಮಾನಿ. ಅಮ್ಮಾವ್ರ್ ನನ್ನ ಶಂಬಳತಲ್ಲಿ ಒಂದು ತಮ್ಮಡಿ ಕೂಟ ನನಕೇ ಕೊಟುವುತಿಲ್ಲ......ಇನ್ನ್ ನಿನ್ನ ಶಂಬಳಂ ನನ್ನ ಕೈಕೆ ಕುಡುಕ್‌ತಾರಾ ? ನಿನ್ನ ಆತ್ರ ಕೊಂಜಂ ಪೂಡಿ ಇತ್ತರೆ ಕುಡ್ತ್‌ಬಿಟ್ಟ್ ಒರ್ಟ್ ಓಕ್ ಅಪ್ಪಾ !" ಅಂತ ಎನ್ನನ್ ಕಟ್ಟಿಕೊಂಡ್ ಕಣ್‌ಜಲಂ ವಿಡುತ್ತಾ ಕಳಿಸಿಬಿಟ್ರು !

ಅಹೋಬ್ಳ್ಳ : ಹಯ್ಯೋ ಪ್ರಾಣಿ ! ದನದ್ವಾಗೆ ದುಡ್ದು ಸಂಪಾದ್ಸಿದ ಸಂಬ್ಳಾನ ಧರ್ಮ ಪತ್ನಿ ಧರೋಡೆಗೆ ದಾನ ಇಟ್ಟು ನಶ್ಯಕ್ಕೆ ದಮ್ಮಿ ಕೂಡ ಇಲ್ದೆಹೋಯ್ತೇ......ಆ ದೊಡ್ಡ ಮನುಷ್ಯನ್ಗೆ !

ಪರಶು : ಔತ್. ನನ್ನ ನೋಡಿ ಅವರ ವಯರ್ ಎರಿಂಜ ಆಗೆ ಅವರ ಪುಡಿಕ್ ಕೂಡ ಒಂದು ತಮ್ಮಡಿ ಇಲ್ಲದ ಅವಸ್ತೆ ನೋಟಿ ನನ್ನ ಒಟ್ಟೆಯುಂ ಪಂಕಿ ಪಂಕಿ ಆಗಿ......ಓತರೆ ಓಕಲೀನ್ನ್ ನನ್ನ ಮದರಾಸ್‌ಪುಡಿ ಮಟ್ಟೆ ಅವರಿಕೆ ಕೊಟ್ಟೆ.

ಅಹೋಬ್ಳ್ಳ : ಅದಾಡ್ರು ಮಾಡಿದ್ರಲ್ಲಾ ಉಪಕಾರ !

ಪರಶು : ಅಂದ ಉಪಕಾರತಲ್ಲಿ ನನಕೆ ಅಪಕಾರ ಆಕಿ ಓಯ್ತ್.

ಅಹೋಬ್ಳ್ಳ : ಅದೇನು ?

ಪರಶು : ಎಂಟು ದಿವಸತ್‌ಕನ್ ವೆಚ್ಚಿಕೊಂಡಿದ್ದ ಮಟ್ಟೆ ನಶ್ಯತೆ ಒಂತೇ ಉರಿಂಚಿ ಉರಿಂಚಿ ಬಿಟ್..... ಕಾಲಿ ಮಟ್ಟೆ ನನ್ನ ಕೈಗೆ ಕೊಟ್ಟು, 'ಒರಟ್‌ಓಗ್' ಅಂವ್‌ಬಿಟ್ರ್.

ಅಹೋಬ್ಳ್ಳ : ಎಲಾ ಕುಂಬಕರ್ಣ ! ಎಂಟು ದಿನದ ನಶ್ಯ ಇಡ್ಪಟ್ಟೇನ ಒಂದೇ ಹೀರ್ನಲ್ಲಿ ಹೀಕ್ಕೊಂಬಿಟ್ನೇ ? !

ಪರಶು : ಔತ್ ! ರಾಯರಕ್ ತೊಟ್ಟ ಮೂಕ್ ! ತೊಟ್ಟ ಮೂಕ್ !

ಅಹೋಬ್ಳ್ಳ : ಹೆದ್ರಬೇಡಿ. ಆತನ್ನ ಕೋರ್ಟಿಗೆ ಎಳೆದು, ಸಹಧರ್ಮಿಣಿ ಸಮೇತ. ಆಕೆ ಬಾಯಿಂದ ನಿಮ್ಮ ಹದಿನೈದಾರ್ಲ್ಲ ತೊಂಬತ್ತು ರೂಪಾಯ್ನ ಕೆಮ್ಮಿಸೋದೇ ಅಲ್ದೆ......ಆತನ್ಮೂಗಿನಿಂದ ನಿಮ್ಮೆನಶ್ಯಾನೆಲ್ಲಾ ಸೀನಿಸ್ಬಿಡ್ತೇನೆ ! ಬನ್ನಿ ! (ಮೇಜಿನ ಬಳಿ ಕರೆದುಕೊಂಡು ಹೋಗಿ ವಕಾಲತ್ತನ್ನು ರುಜು ಹಾಕಿಸಿಕೊಂಡು) ಸಧ್ಯ ಖರ್ಚಿಗೆ ಒಂದು ಹದಿನೈದ್ರೂಪಾಯಾದ್ರೂ ಇಟ್ಟೋದ್ರೆ......ಮುಂದಕ್ಕೆ ......

ಪರಶು : ಅತಿನೈತ್ ರೂಪಾಯಿ ಎಂಗಿರಂದ್ ತರುವವ್ ಸ್ವಾಮಿ ? ಕೈಯಲ್ಲಿ ಒಂದ್ ಕಾಶಿ ಕೂಡ ಇಲ್ಲ !

ಅಹೋಬ್ಳ್ಲ : ಮತ್ತೇನು, ಬಿಟ್ಟಿ ಕೆಲ್ಸ ಮಾಡೋಕೇಂತ Board ಹಾಕ್ಕೊಂಡಿದ್ದೀನೇಂತ ತಿಳ್ಕೊಂಡಿದ್ಧೀರಾ ?

ಪರಶು : ಇಲ್ಲ ಸ್ವಾಮಿ. Case ಚಯುವಾಗಿ ಪಂದ ರೂಪಾಯಿಲಿ ಇರವದ್ ರೂಪಾಯಿ ಇಡಿತ್‌ಕೊಂಡ್ ಪಾಕಿ ಕೊಟ್ಟ್ರೆ ನನಕೆ ಪೋರುಂ.

ಅಹೋಬ್ಳ್ಲ : (ಆತ್ಮಗತಂ) ಒಳ್ಳೇ ಹಣೇಬರಹ ನಂದು ! ನನಗೆ ಬರೋ ಒಂದೊಂದು Caseನ feesಊ always conditional on my successಉ......which again equally always is problematicಉ......and in this instance...particularly so. Therefore......per precedent provided by ಶಾದೇ ಬಡೀ ತೀರೋ ಕೆಂಪೇಗೌಡ......ಈತ್ನಿಂದ......in the shape of coin ಇಲ್ದಿದ್ರೂನೂವೆ in kind ಆದ್ರೂ ವಸೂಲ್ ಮಾಡ್ಬೇಕು.........Remunerationನ ! (ಪ್ರಕಾಶಂ) ಹೌದು. ನೀವ್ಹೇಳೋದೆಲ್ಲಾ ಅರ್ಥವಾಯಿತು. ಆದ್ರೆ ನೋಡಿ, ಸರ್ಕಾರ ಒಂದ್ಹೊಸ ಕಾನೂನು ಮಾಡ್ಬಿಟ್ಟಿದೆ. ಸುಳ್ಳು caseಉ ಯಾರಾದ್ರು ತಂದ್ರೆ ಲಾಯ್ರುಹತ್ರ, ತಕ್ಷಣವೇ Policeಗೆ ಹೇಳ್ಕಳ್ಸಿ ಅವರ ಕೈಗೆ ಕಕ್ಷಿಗಾರನ್ನ ಒಪ್ಪಿಸ್ಬೇಕೂಂತ ವಿಧಿಸಿದೆ ಸರ್ಕಾರ.

ಪರಶು: ಶುಳ್ಳ್ case ? ನಾನ್ ಬ್ರಾಹ್ಮಣ ! ಪೊಯ್ಯಿ ಪೇಶುವುದಿಲ್ಲ ಸ್ವಾಮಿ ! ನಿಶ ಕೇಸ್ ಇದ್ !

ಅಹೋಬ್ಳ್ಲ : ನೋಡಿ ! ಬ್ರಾಹ್ಮಣರ ಮೇಲೆ Policeನವರ್ನ 'ಛೂ !' ಬಿಡೋಕೆ ನನಗೇನೋ ಇಷ್ಟವಿಲ್ಲ. ಆದ್ರೂ ನೋಡಿ, ನೀವು ಪರಿಚಾರಕಾಂತ ಬಾಯಿಂದ ಎಷ್ಟು ಹೇಳ್ಕೊಂಡ್ರೂವೆ......ನಿಮ್ಮೊಖದಲ್ಲಿ ಬೆಳಗುವ ಲಕ್ಷ್ಮೀಕಳೆ ನೋಡಿದ್ರೆ......ಯಾವ್ದೊ ಒಂದು ಪ್ರಭುಹಾಗೆ ಕಂಡುಬರುತ್ತೆ ನನ್ನ ಕಣ್ಣಿಗೆ. ನೀವು Cookಊಂತ ಹೇಳೋದ್ನ ಹೇಗ್ನಂಬೋದು ನಾನು ? ಇದ್ನ prove ಮಾಡ್ಬಿಡಿ.........ನಿಮ್ಮ Caseನ ತೊಕೊಂಡು ಮುಂದಿನ ಕಾರ್ಯ ಮಾಡ್ತೇನೆ. ಇಲ್ಲವೋ...ನೀವಾಯ್ತು Policeನವರಾಯ್ತು.

ಪರಶು : (ಬೆಚ್ಚಿಬಿದ್ದು ಕೈಹಿಸುಕುತ್ತಾ) ನಾನು Cookಊ ಅಂತ ಇಲ್ಲಿ ಯಾಗೆ prove ಮಾಟುವದ್ ಸ್ವಾಮಿ ?

ಅಹೋಬ್ಳ್ಲ : ಹೌದು. ನೀವ್ಹೇಳೋದು ಸರಿ. ಈ Chambersನಲ್ಲಿ ಆಗೋ ಕೆಲ್ಸ ವಲ್ಲ ಇದು. ನೋಡಿ ! ಮನೇಲಿ ಅಕ್ಕಿ ಬೇಳೆ ತರ್ಕಾರಿ ಇವೆ. ಒಲೇನೂ ಕಟ್ಗೇನೂ ತಥಾ. ಮನೇಲಿ ಇರೋವ್ರು ನಾನು, ನನ್ನ ಗೃಹಿಣಿ, ನನ್ಪುತ್ರ. ನನಗೆ ಅಡಿಗೆ ಮಾಡೋದು ಗೊತ್ತಿಲ್ದಿದ್ರೂ ನೂವೆ ಮಾಡಿದ ಹುಳಿ ಸಾರು ಪಲ್ಯ ಇತ್ಯಾದಿಗಳಿಗೆ ಒಂದುಪ್ಪು ಹಿಂದೊ ಮುಂದೊ ಹೆಚ್ಚೊ ಕಮ್ಮೀನೊ ಹೇಳಬಲ್ಲೆ. ನೀವು ಮೂರು ಜನಕ್ಕೆ ಅಡಿಗೆ ಮಾಡಿ ಬಡಿಸಿ. ಅಷ್ಟ್ರಲ್ಲೇ ತಿಳ್ಕೊಂಡ್ಬಿಡ್ತೇನೆ : ನೀವು ನಿಜವಾದ ಪರಿಚಾರಕರೋ, ಇಲ್ಲ ಸುಳ್ಳು Case ತಂದ ಪ್ರಭುಗೊಳೊ ಅಂಬೋದ್ನ !

ಪರಶು : ಶರಿ ಓಯ್ತ್ ! ವಕೀಲ್ಮನೆಗೆ ಪಂದ್ರೆ ಶಮ್ಮೇಲೆ ಮಾಟುವ ಶಸಿ ನನ್ನ ಪಿಟುವುತಿಲ್ಲ. ಆರು ತಿಂಗ್ಳ್ ಶಂಬಳಮಿಲ್ಲಾತೆ ಕೆಲಸಂ ಮಾಡಿತವನ್‌ಕ್ ಇನ್ನೊಂದ್ ತಿಸ ಬಿಟ್ಟಿ ಪರಿಚಾರಕದಲ್ಲಿ ನಷ್ಟಂ ಏನೂ ಇಲ್ಲ. (ಕಟ್ಟಿದ ದಟ್ಟಿಯನ್ನು ಅರ್ಧ ಮಡಿಸಿ ಗಂಟು ಹಾಕುತ್ತ) ನೀರು ಮನೆ ತೋರಿಸಿ.

[ಅಹೋಬ್ಳ್ಲ ಪರಶುವನ್ನು ಕರೆದುಕೊಂಡು, ಸ್ನೇಹಿತರಿಗೆ "Shall join you in a minute" ಎಂದೆಂದು ನಿಷ್ಕ್ರಮಣ, ಹಿಂದಿನ ಬಾಕಿಲಿಂದ]

ರಂಗು : ಬೋಂಡ ಯಾಕೆ ತಡವಾನೋ ಕಾಣೆ. ನನಗೆ ಹಸಿವು !

ಕಿಟ್ಟಿ : ನನಗೂ ditto. ನಾನ್ಹಾಟಿ. ನೀನು ಫಾಟೀಯುರ್‌ಲು. But ಅಹೋಬ್ಳು double ಫಾಟೀಯುಸ್ಟ್‌ಲು ! Courtಗೆ ಹೋಗ್ಬೇನೇದೇಂತೆ ಕಾಲಾ ತಳ್ಳೋ ಲಾಯ್ರುದ್ರುಗೆ ನಮ್ಮ cleverness ಎಲ್ಲಿ ! ನನಗೇನೋ, ಆಗಾಗ್ಗೆ ನೆಗಡಿ. ಜಮೀನ್ದಾರ್ರೂಂಜೊ ನಮಗಳಿಟ್ಕೊಂಡು ಒಳಗೆ ಹೋಗ್ಬರೊ ಗಲಾಟೆಗಳ ಮಧ್ಯೆ......ಕಾಫಿ ಜೋಂಡಗಳ್ನ ಸ್ವಾಹಾ ಮಾಡ್ಬಿಟ್ಟಿದ್ದಾನೊ ಏನೋ ಕಾಣೆ !

ರಂಗು : "ಏನೊ ಕಾಣೆ" ಏನೂ ! ಹಾಗೆ ಏನಾದ್ರು ಆಗಿರ್ಬೇಕು. ಆದ್ರೆ ಇನ್ನೊಂದ್ಕಡೆ ಹೋಗೋಕೆ too lateಉ. ಇಲ್ಲೇ ಇದ್ಕೊಂಡು ಇನ್ನಷ್ಟು ಹೊತ್ತು try ಮಾಡೋದು ಒಂದೇ hopeಉ......unless......ಇಷ್ಟೊತ್ತಲ್ಲಿ tiffin ಮಾಡೋ friendsಉ ಸಿಗ್ತಾರಾದ್ರೂ...

ಕಿಟ್ಟಿ : ಇಧಾರೆ. But ಬರ್‍ತಾ ಬರ್‍ತಾ tiffin–hunter tricks ಎಲ್ಲಾ ತಿಳ್ಕೊಂಡು ತಿಂಡಿ time ಎಲ್ಲಾ change ಮಾಡ್ಬಿಡ್ತಾರೆ ! ಹೀಗೆ ಒಂದೆರಡು ದಿನ ಆಗ್ತಾ ಬಂತು dis-appointmentsಉ.........ನಮ್ಮ ನಮ್ಮ tiffinಗಳ್ನ ನಾವ್ನಾವೇ ಒದಗಿಸ್ಕೊಳ್ಳೋಕೆ ಯಾವ್ದಾದ್ರು hotelಲಿ accountಉ open ಮಾಡ್ಬೇಕಾಗುತ್ತೇಂತ ಕಾಣುತ್ತೆ.

ರಂಗು : ಯಾವ್ದಾದ್ರು hotelಏನು ! ಒಂದೊಂದು hotelನಲ್ಲೂ ಇದೆ......ನಮ್ಮಿಬ್ರ accountಗ್ಳು !

ಕಿಟ್ಟಿ : ನಾನ್ಹೇಳಿದ್ದು......Some New Hotel. Blazer Coatಉ. ಬಿಳಿ ಷರಾಯಿ, Tennis shoesಉ ಇರೋವರಿಗೂ......new hotelsನಲ್ಲಿ accounts open ಮಾಡೋದು......

ಅಹೋಬ್ಳು : [ಪ್ರವೇಶಿಸಿ] Hullo boys ! Congratulate ಮಾಡಿ ನನ್ನ ! My client......the Zamindar of......ಹೆಸ್ರು ಈಗ ಹೇಳದಿದ್ರೂನೂವೆ......... in a few days.........*Hindu, Times, Mail*ಗಳೆಲ್ಲಾ ಸಾರ್‍ತಿರ್‍ತವೆ: "The great Zamindar's Succession Case involving an intricate point of Hindu Law......successfully expounded to the Court by the learned Counsel Mr. Ahoble Rao "......ಇಷ್ಟರಲ್ಲೇ ತಿಳ್ಕೊಂಬಿಡಿ ಈಗ ನನ್ನ situation ಎಷ್ಟು ಸೂಕ್ಷ್ಮ ಅಂಬೋದ್ನ. The Rajah Sab is having a bathಉ ......ಕನ್ನಡ ಬಾತಲ್ಲ ! English bathಉ ! And afterwards through my humble hospitality ಮರಾಟ ಬಾತು plus some ಸಾರು and ಮಜ್ಜಿಗೆ. ಈ homely fare ಎಲ್ಲಿ ?......ಆತನ Palaceನಲ್ಲಿ ಕಾದಿರೊ festive board ಎಲ್ಲಿ ? But ಏನ್‌ಮಾಡೋದು !... Princesಊ ಕೂಡ ತಲೆಬಾಗಬೇಕು to a lawyer under circumstancesಉ. (ಕುಳಿತುಕೊಳ್ಳುವನು)

ರಂಗು : ಇರ್‍ಲಿ. ಅಹೋಬ್ಳು. Lawಲಿ ಇಷ್ಟು ಘಟ್ಟಿಗ ನೀನು !...Prince Princeಗ್ಳೇ ನಿನ್ನ Clientsಉ ! ಆದ್ರೂ ಈ ಹರಕಲು Coatಉ. ಮಾಸಿದ ರುಮಾಲು...?...

ಅಹೋಬ್ಳು : ಅದೇ ! The secret of my tradeಉ ! ನನ್ನ ಕಸುಬಿನ ಗುಟ್ಟು ಹೇಳಿಬಿಡ್ತೇನೆ in a nut-shell...perhaps a Coco-nut shell ನೋಡಿ : "ಹರಕಲು Coatಉ ಹರಕಲು ರುಮಾಲು ಹಾಕ್ಕೊಂಡ ಈ ಲಾಯರ್ರಿನ ಇಟ್ರೆ ಖರ್ಚು ಜಾಸ್ತಿ ಆಗೋದಿಲ್ಲಾ"ಂತ ಬರುತ್ತೆ್ವ ಕಕ್ಷಿಗಾರ್‍ರು. ಕಕ್ಷಿಗಾರ್‍ರಲ್ಲಿ ಒಂದು peculiarity. Courtಗೆ ಹೋಗಬೇಕೂಂಬೋ plague ಹುಳು ಹೊಕ್ಕಿತೋ ರಕ್ತದಲ್ಲಿ..."ನನ್ನದೇನೇ ನ್ಯಾಯಾ"ಂಬೋ Ideaನ Brainಗೆ ಊದುತ್ತೆ ಈ ಹೊಕ್ಕ germಉ. "ಇಂಥ Clear caseಗೆ ಎಂಥ ಮಂಕು ಲಾಯರ್ರಿನ ಇಟ್ರೂನೂವೆ ಗೆದ್ದೇಬಿಡುತ್ತೆ ನನ್ನ Caseಊ !"ಂಬೊ ಜೋರ್‍ನಲ್ಲಿ Cheapest Lawyerನ

ಒಡೀತಾನೆ Party. ನಾವ್ರೋ ವಕಾಲತ್ತು sign ಮಾಡ್ಕೊಂಡು ಕಟ್ಟು ಕೈಗೆ ಸಿಗುತ್ಲೂವೆ clientನ ಜುಟ್ಟು ಕೈಗೆಸಿಕ್ಕಿದ ಹಾಗೇ: court feesಊ, Stamp feesಊ, Type writing feesಊ. ಜಟ್ಕ feesಊ ಅಲ್ದೆ ಇವನ Caseನ ಗೆಲ್ಲೊ ಬಗ್ಗೆ ನಾನೇ ಬದುಕಿರೋಕೆ ಅಕ್ಕ feesಊ ಬೇಳೆ feesಊ etc. ಗಳ ಗಲಾಟೇಲಿ coatಉ bootಉ ಅಲ್ದೆ Parker Fountain Pen ಕೂಡ feeಜೊತೇಲಿ ಕೊಚ್ಕೊಂಬುದ್ಬಿಡುತ್ತೆ. ಈ ದುಡ್ಡಿನ್ಕೊಬ್ಬೆಲ್ಲಾ Courtಗೆ ಬಂದ ಕಕ್ಷಿಗಾರನ ತಲೆ ಮೇಲೆ. ಇಲ್ಲ Carಉ, compoundಉ, suitಉ, hatಉ, bootಉ, Bar-at-law ಬರೆದ Boardಉ ಹೀಗಿರೋವರ್ನ ನೋಡ್ದ್ರೆ......ಇವನ Carಉ Fordಉ. That's all he can offordಉ! ಪೆಟ್ರೋಲಿಗೆ ಕ್ಷವರಲೆಟ್ಟು. Courtಉ, ಕಚೇರಿ and fees ಕೊಟ್ಟು clientsಉ... Dodgeಉ. ಈ Standard of Perfectionಗೆ Over-land qualificationsಉ! ಇಷ್ಟೆಲ್ಲಕ್ಕೂ ಇವನ್ಗೊಟ್ಟೇಗೆ Rolls O' Ragi ಸಿಕ್ಕೋದೇ ಕಷ್ಟ. ಈ ಕಾಲದಲ್ಲಿ ಬಂಡ್ವಾಳವಿಲ್ಲದ ಬಡಾಯ್ಗೂ ಬಡಾಯಿ ಇಲ್ಲದ ಬಂಡ್ವಾಳಾನೂ ವಿಂಗಡ್ಸಿ ತಿಳ್ಕೊಳ್ಳೊ brainsಉ ವಿರಳ......in the world in general and litigants in particular. ಅದಕ್ಕೇ Homo Homini Lupusಊಂತ Dictionaryಲ್ಲಿ ಅಂದಿರೋದು. (ಬೀದಿಯ ಬಾಗಿಲನ್ನು ತೆರೆಯಲು ತಾಪಾಳು ಜಗ್ಗಿಸುವ ಸದ್ದನ್ನು ಕೇಳಿ) ಯಾರದು? (ಮುದ್ದ್ರಣಿಯನ್ನು ಮುಂದಿಟ್ಟುಕೊಂಡು ಹಿಂದೆ ಬರುವ ಬಾಳುವಿಗೆ) ಇದೇನ್ಬಾಳು?

ಬಾಳು: ಕ್ಷಮ್ಸಿ ಸಾರ್! ಒಳಗೆ ಹೋದ್ರು ಚಿಕ್ಕಾಯ್ರು; ಹೋಗಿ ಸ್ವಲ್ಪ ಹೊತ್ನಲ್ಲೆ ಹೊರಗ್ಬಂದ್ರು, Head Masteroo ತಮಗೆ ಬರೆದ ಒಂದ್ಕಾಗ್ದದ್ ಸಮೇತ; Head Masterಉ "ಮಗು ಕೈಲಿ ಕೊಟ್ಟಿರೊ ಕಾಗದದಲ್ಲಿ ಎಲ್ಲಾ ಮುಂದಿಟ್ಬಾಗುತ್ತೆ; ಮನೇಗೆ ಕರ್ಕೊಂಡ್ಹೋಗು" ಅಂದ್ರು......Head Masterಉ.

ಅಹೋಬಲ್ಲ: (ಪುತ್ರನಿಗೆ) ಏನೋ......ಈ ಹೊತ್ತು Schoolನಲ್ಲಿ ವಿಶೇಷ?

ಮುದ್ದ್ಮಣಿ: ರೆಸಿಟೇಷನ್ (Recitation) ಕಾಂಪ್ಟೀಷನ್ (Competition) ಅತ್ತಾಪ್ಪ!

ಅಹೋಬಲ್ಲ: (ಸ್ನೇಹಿತರಿಗೆ) **My** son, you know! I mean, my son you **don't know**! For the last ಎರಡು ವರ್ಷದಿಂದ Recitation Prizeಉ ......he is knocking off. ಈ ವರ್ಷಾನೂ ಯಥಾಪ್ರಕಾರ, I Think. Just like his father, you know! ಇವನ ವಯಸ್ಸಿನಲ್ಲಿ ಒಂದುಸಾರ್ತಿ......ಒಂದೇ ವರ್ಷ ......three First Prizesಉ ಬಂದ್ವು! ಯಾವ್ದಕ್ಕೇಂತ ನನಗೆ ಜ್ಞಾಪಕವಿಲ್ಲ. But I remember......only ಮೂರೂನೂ First Prizeಗ್ಳು. ಅದರಲ್ಲಿ ಒಂದು was for memory! ಆದ್ರೆ......this little feller......Recitation ಬಾಬತ್ನಲ್ಲಿ terribleಉ ......ಈವತ್ತಿನ Competitionಗೆ ಏನು ಹೇಳಿದ್ರೋ?

ಮುದ್ದ್ಮಣಿ: ಒನ್ಸ್ ಐ ಘಾ ಎ ಲಿಟ್ಬ್ಲ ದ್ಬರ್ಡ್
(Once) (I) (saw) (a) (little) (bird)
ಕಮ್ ಹಾಪ್ ಹಾಪ್ ಹಾಪ್
(come) (hop) (hop) (hop)
ಫೊ ಐ ಕ್ರೈದ್ ಲಿಟ್ಬ್ಲ ದ್ಬರ್ಡ
(So) (I) (cried) (little) (bird)
ವಿಲ್ಯು. ಫ್ಟಾಪ್ ಫ್ಟಾಪ್ ಫ್ಟಾಪ್
(will you) (stop) (stop) (stop)

ಅಹೋಬ್ಳ : Will you stop !……you see……

ರಂಗು : ಹೌದು, ಮೂರು ವರ್ಷ prizeನ ಇವನು ಈ recitationನ knock off ಮಾಡ್ತಾ ಬಂದರೆ……ಚಿಕ್ಕ ಹುಡುಗರ ಉಚ್ಚಾರಣೆ must be……

ಅಹೋಬ್ಳ : Hopelessಊ ಅಂತೀರು ? Worse than that. Because ಇವನ್ನ ನಾನು ಕಳಿಸ್ತಿರೋದು……Deaf and Dumb Schoolಗೆ. So that. future lifeನಲ್ಲಿ ಇವನಿಗೆ speechನಲ್ಲಿ ಇರೋ impediments and resultant predicamentsನ Deaf and Dumb signs, gesturesನಲ್ಲಿ over come ಮಾಡಬೇಕೂಂತ. Of course familyಗೆ, in general……ನಮ್ಮ motherಉ……ಇವನ ಅಜ್ಜಿಗೆ…… terrible disappointmentಉ ! (ಕತ್ತನ್ನು ಬಗ್ಸಿ, ಮನಸ್ತಾಪವನ್ನು ಸೂಚಿಸುವನು)

ಕಿಟ್ಟಿ : ಅದೇನು disappointment ಉ, ಅಹೋಬ್ಳ ?

ಅಹೋಬ್ಳ : (ಗದ್ಗದ ಸ್ವರದಿಂದ, You see. dear boys. ಇವನು ಹುಟ್ಟಿದ್ದು ಸರಸ್ವತಿ ಪೂಜೆ ದಿನ. "ಮುಂದಕ್ಕೆ ಮೇಧಾವಿ ಆಗಿ ಮನೆತನಕ್ಕೆ ಮೊದ್ಮೊಗ ಯಶಸ್ಸೂ ಸಂಪತ್ತೂ ಸಂಪಾದ್ಸೋದ್ರಲ್ಲಿ ಸಂಶಯವೇನೂ ಇಲ್ಲಾ"ಂತ ನಮ್ಮಮ್ಮ "ಶಾರದಾ ಪ್ರಸಾದ್" ಅಂಬೊ ಹೆಸರಿಟ್ಳು ಇವನ್ಗೆ. But then, ನಾನು ಇವನು 'ಅಪ್ಪ', 'ಅಮ್ಮ'. 'ಮಾಮ'. 'ತಾತ'. ಅನ್ನೋದಕ್ಕೆ ಅವಸ್ಥೆಪಡೋವಾಗ್ಲೇನೇ ಒಬ್ಬ ನವಿಲುವಾಹನನ್ನ ಕರೆದು surgical operation ಮಾಡ್ಸೋದು ಬಿಟ್ಬಿಟ್ಟು, "Men supposes, Good disposes ; so proposes and reposes" ಅಂಬೋ Hindu law ಪ್ರಕಾರ ತಪ್ಪನಿದ್ಬಿಟ್ಟೆ. ಶಾರದಾಪ್ರಸಾದನಾದ್ರು…… ಆ ಸರಸ್ವತಿ ಇವನ ನಾಲಿಗೇಲಿ ಪಾತಿ ಮಾಡಿ ಗೊಬ್ರ ಹಾಕಿ……..ಬೀಜಾಕ್ಷರ ಬಿತ್ತೋದ್ನ ಮರೆತುಬಿಟ್ಳೋ ಏನೋ ಕಾಣೆ ! But……ಬಾಯ್ಬಿಡೋದ್ರಲ್ಲಿ ಸ್ವಲ್ಪ ಹಿಂದುಮುಂದಾಗಿದ್ರೂನೂವೆ brain and body, limbs, looks and senses ಬಲು ಚುರುಕು. ಇವನು School Hockey teemಗೆ Centre forwardಉ. First halfನಲ್ಲೆ twenty goals score ಮಾಡಿಧಾನೆ ! Dyan Chand ಯಾವ ಮೂಲೆ !

ರಂಗಣ್ಣ : Twenty goals in the first half ! ಯಾವ team ಮೇಲೆ ?

ಅಹೋಬ್ಳ : Against Bullanna's Blind School.…… Schoolಉ ಯಾವ್ದಾದ್ರೇನು ? ಹುಡುಗ terrible ! Again, as an old graduate. Convocation attend ಮಾಡ್ದೆ. And would you believe it ! ? His Highness the Chancellor's Diamond Medal for the cleverest student …· do you know !……at the last Convocation………my boy knocked it off !……ಆದ್ರೆ unfortunately…—Police Superintendent…notice ಮಾಡ್ಬಿಟ್ಟ……and my poor little boy had to put it back on the table ಉ! And now, fresh from the victory of his leaest Recitation Competition……Head Master ಉ ಕೊಟ್ಟ ಕಾಗದದ ಸಮೇತ ಬಂದಿದಾನೆ…… "ಕಾಗದದಲ್ಲಿ ಎಲ್ಲ ಮುಂದಟ್ಟಾಗುತ್ತೇ"ಂತ Head Master ಉ ಹೇಳಿ ಕಳ್ಸಿದ್ದಾರೆ…… ಮುಂದಟ್ಟಾಗೋದೇನು ! ಹುಡುಗ ಗೆದ್ದ as per usual. Prize ನ ದುಡ್ಡಾಗ್ಲೇ ಕೊಡೋದೋ, ಇಲ್ಲ books ಆಗಿ ತೆಗೆದ್ಕೊಳ್ತೀರೋ ? or some such silly question I suppose !……ಬಾಳು. ಆ ಕಾಗದಾನ ಓದು.

ಬಾಳು : (ಲಕ್ಕೋಟೆಯನ್ನು ಒಡೆದು ಕಾಗದವನ್ನು ಓದುತ್ತ) ಶಾರದಾಪ್ರಸಾದ್ ಬಿನ್ ಅಥ್ವ ಉರುಫ್ ಮುದ್ಮಣಿಯ ತೀರ್ಥರೂಪರವರಿಗೆ—

ಅದುನ್ಹಾ, ತಮ್ಮ ಕುಮಾರ ಕಂಠೀರವರಾದ ಶಾರದಾಪ್ರಸಾದರು ಶಾಲೆಗೆ ಗಮನಮಾಡು ವಾಗಲ್ಲ ಅವರ ವಪ್ರಸ್ಸು ವಸನಗಳಲ್ಲಿ ಅಡಗಿಕೊಂಡಿರುವ ಕೊಳಕಿನ ದುಷ್ಪರಿಮಳವು ಪೊರಮಟ್ಟು ಶಾಲೆಯೆಲ್ಲಾ ಸಂಚರಿಸಿ...ಶಾಲೆಯ ಕೆಲಸಕ್ಕೆ ಒದಗುವ ಅನಾನುಕೂಲವೇ ಅಲ್ಲದೆ......ಸಹಪಾಠಿ ಗಳಾದ ಅರ್ಭಕಾನೀಕಕ್ಕೆ ಸಂಭವಿಸಬಹುದಾದ ಚರ್ಮಜಾಡ್ಯಗಳನ್ನೂ......ಶಾಲೆಯ ಸೂರು ಕಂಬಗಳು ಕುಸಿದು ಬೀಳಬಹುದಾದ ಅನಿವಾರ್ಯವನ್ನೂ ಅರಿತು......ಶಾರದಾಪ್ರಸಾದರಿಗೆ ಸ್ನಾನ ವನ್ನು ಮಾಡಿಸಿ ಶುಚಿಯಾದ ವಸನಗಳನ್ನು ತೊಡಿಸಿ, ಶಾಲೆಗೆ ಕಳುಹಿಸದ ಪಕ್ಷಕ್ಕೆ, ಮುಂದೊದಗಲೇ ಒದಗುವ building damages case ಗೂ......ಅಲ್ಲದೆ ಸರ್ಕಾರಿ Sanitary ಮೊಬಿದ್ದವೇಗೂ ಜವಾಬ್ದಾರನಲ್ಲ ಎಂದು ಈಗಲೇ ತಿಳಿಯಪಡಿಸುವ ತಮ್ಮ ಸೇವಕ,

S. P. Rao,
Head Master,
Bullappa's D & D Sahool.

(ಈ ಕಾಗದವನ್ನು ಬಾಳು ಓದುತ್ತಾ ಓದುತ್ತಾ...ತಾವತ್ಕ್ರಮೇಣ ಅಹೋಬ್ಳು ಸುಸ್ತು ಆಗುತ್ತಾ ಆಗುತ್ತಾ...ಸಂದೇಶದ ಅಂತ್ಯವು ಮುಟ್ಟುತ್ತಲೇ ಕೂತುಕೂತಿದ್ದ ಹಾಗೆಯೇ ಮೂರ್ಛಿತ ನಾಗುವನು. ಕಿಟ್ಟ, ರಂಗು, ಬಾಳು ಮೂವರೂ ಬೆಚ್ಚಿಬಿದ್ದು ಮೂರ್ಛಿತನನ್ನು ಸಮೀಪಿಸಿ ಶೈತ್ಯೋಪಚಾರ ನಿಮಿತ್ತ Paper ನಿಂದ ಘಾಳಿಯನ್ನು ಬೀಸುತ್ತಲೂ Coat, shirt ನ ಗುಂಡಿಗಳನ್ನು ಬಿಚ್ಚಿ ಕೈಪ್ಯವನ್ನು ಅಲ್ಲಾಡಿಸುತ್ತ ಮೂರ್ಛಿತನು ಚೇತರಿಸಿಕೊಳ್ಳಲೋಸುಗ ಪ್ರಯತ್ನಪಡುವರು)

ಕಿಟ್ಟಿ : Mr. Balu, ಒಳಗೆ ಹೋಗಿ ಒಂದು ಟಂಬ್ಲರ್ ತಣ್ಣೀರು.

ರಂಗು : (ಅಡ್ಡಮಾತಾಗಿ, ಕಿಟ್ಟಿಗೆ ಮೆಲ್ಲಗೆ) ಬೇಡ್ವೋ ! ಮಂಕು ! ಇದೊಂದೇ chance ಉ ನಾವಿಷ್ಟೊತ್ತು ಕಾದಿದ್ದೂ ಸಾರ್ಥವಾಗೋಕೆ ! (ಘಟ್ಟಿಯಾಗಿ ಬಾಳುವಿಗೆ) Mr. Balu, ನಿಮ್ಮ ಸೀನೀರು swoon ಮಾಡ್ಬಿಟ್ಟಿದಾರೆ ! ಒಳಗ್ಹೋಗಿ ಅಮ್ಮಾವ್ರಿಗೆ........... "ಯಜಮಾನ್ರು ಮೂರ್ಛೆ. ಆದ್ರೆ ಭಯಪಡಬೇಕಾದ್ದೇನೂ ಇಲ್ಲ ! ಒಂದು ದೊಡ್ಡಚೊಂಬು ತುಂಬ ಕಾಫಿ, ಒಂದು ತಟ್ಟೆ ಬೋಂಡ ಕಳಿಸಿಬಿಟ್ರೆ......ಯಜಮಾನ್ರು ಚೇತರ್ಸ್ಕೊಂಡು ಎಲ್ಲಾ ಸರಿಹೋಗುತ್ತೇ''ಂತ ತಿಳಿಸಿ ಭೇಗ !

ಅಹೋಬ್ಳು : (ಬಾಳುವಿನ ಕೈಯನ್ನು ಭದ್ರವಾಗಿ ಹಿಡಿದು......ನಿದ್ರೆಯಲ್ಲಿ ತೊದಲುವವ ನಂತೆ) ಎಲ್ಲಿದ್ದೇನೆ ! ಹಾಂ !.. ...ಯಾರಂದದ್ದು ?......ಬೋಂಡ !! ಕಾಫೀಂತ !!......(ಎದ್ದು ಕೂತು ಕಣ್ಣುಗಳನ್ನು ಉಜ್ಜುತ್ತ) Where · am I ?...ಕನಸು ! (ಸುತ್ತುಮುತ್ತು ನೋಡಿ) ಕ್ಷಮಿಸಿ, dear boys! Pure question of shock ಉ ! I am alright now. Take your seats. (ಗರ್ಜಿಸಿ) ಬಾಳು ! ಕಾಗದವನ್ನೂ Steel pen ನ್ನೂ ತೆಗೆದು ಕೊಂಡು ಬರಿ. (ಕಿಟ್ಟಿಯೂ ರಂಗುವೂ ಆಶಾಭಗ್ನರಾಗಿ ಪೀಠಗಳನ್ನು ಅಲಂಕರಿಸುವರು, ಬಾಳುವು ಶಾಯಿ ಕುಡಿಕೆಯಲ್ಲಿ ಅದ್ದಿದ ಪೇನಾಪಾಣಿಯಾಗಿ ತನ್ನ ಚಿಕ್ಕ ಮೇಜಿನ ಮೇಲೆ ಹರಡಿರುವ ಕಾಗದದ ಮೇಲೆ ದಣಿಯು ಚೀತ್ಕರಿಸುವ ಸಂದೇಶವನ್ನು ಲಿಖಿಸಲು ಉದ್ಯುಕ್ತನಾಗುವನು)

ಅಹೋಬ್ಳು : "ತನಗೆ ತಿಳಿದ ಅಲ್ಪ ಸ್ವಲ್ಪ ವಿದ್ಯೆಯನ್ನು, ತನ್ನ ಬಳಿ ತಂದೆ ತಾಯಿಗಳು ಕಳುಹಿಸಿದ ಶಿಶುಗಳ ಮಿದುಳಿಗೆ ಸೋಕಿಸುವ ನೆಪದಿಂದ ಸದರಿ ತಂದೆ ತಾಯಿಗಳಿಂದ school fees ಮುಖಾಂತರವಾಗಿ ಸುಲಿದುಕೊಳ್ಳುವ ಹಣದಿಂದ ಬಸಿರನ್ನು ಬೆಳಸುವ........... S. P. Rao ?......**ಶಿಶುಪೋತರಾಯನಿಗೆ**

"ಮುನಿಸೂರ್ ಅಹೋಬಲ್ ರಾಯರು ಹೇಳುವುದೇನೆಂದರೆ...ತಂದೆ ತಾಯಿಗಳು ತನುಜ ರನ್ನು ಪಾಠಶಾಲೆಗೆ ಕಳುಹಿಸುವ ನಿಮಿತ್ತವು, ಉಪಾಧ್ಯಾಯರುಗಳು ಮಕ್ಕಳಿಗೆ ಪಾಠವನ್ನು ಹೇಳುವುದಕ್ಕಲ್ಲದೆ ಮೇಲ್ಬೀಳದ ಮಕ್ಕಳ ಮೈ ಬಟ್ಟೆಗಳನ್ನು ಮೂಸಿ ನೋಡುವುದಕ್ಕಲ್ಲ !..."

ತೆಗೊಂಬಾ ಇಲ್ಲಿ ! I shall sign it ! (ಬಾಳುವು ತಂದ ಕಾಗದಕ್ಕೆ ರುಜು ಹಾಕಿ) ಮುದ್ಮಣಿ ಸಮೇತ ಈ ಕಾಗದಾನ School ಗೆ ಸೇರಿಸಿ......ಹೆಚ್ಚು ಮಾತಾಡಿದ ಅಂದ್ರೆ......"Lawyer ನಾನು ! Libel Case ಹಾಕಿ ಆ ಶಿಶುಪ್ರೋತ ಸಮಯ ಕುಲ ಗೋತ್ರ ಕುಟುಂಬ ಕೊಂಪೆ ಕೊಂಪೇನ್ನೇ Court ಗೆ ಎಳೆದು ಹರಾಜು ಹಾಕಿಸ್ಬಿಟ್ಟೇನು ! ಹುಷಾರ್ !" ಅಂತ್ಹೇಳ್ಬಿಟ್ಟು ಬಾ. ಬಾಳು ! (ಬಾಳುವು ಬೀದಿಬಾಗಿಲನ್ನು ಸಮೀಪಿಸುತ್ತ ಮುದ್ಮಣಿಯನ್ನು ಅಭಿನಯ ಪೂರ್ವಕ ಆಹ್ವೈಸುವನು)

ಮುದ್ಮಣಿ : ಅತ್ಪಾ ! ದ್ಭಣ್ಯೋಟು !

ಅಹೋಬ್ಳು : [ರೇಗಿದ ಹಿರಣ್ಯನು ಪ್ರಹ್ಲಾದನನ್ನು ತೊಲಗಿಸುವಂತೆ ಚೀತ್ಕರಿಸಿ] ತೊಲಗೋ ! ...... ಪನ್ನೀರುದಾನಿ ! (ಪುತ್ರನೂ Junior ಊ ನಿಷ್ಕ್ರಮಿಸುತ್ತಲೂ) Forgive me, dear boys ! ಹೀಗೆ Position and pelf, ಕುಟುಂಬ ಕಾಸು ಇಲ್ದೆ ಕಂಗೆಡ್ತಿರೊ ಕ್ರಿಮಿಗಳು ಮೇಸ್ಟ್ರುಗ್ಳಾಗಿ ಸೇಕೊಂಡು ಹುಡುಗರ್ನ ಹಿಯ್ಯಾಳಿಸಿ, ಇಂಥ Impudent Letters Parents ಗೆ ಬರಿಯೋಕೆ ಪ್ರಾರಂಭಿಸ್ದ್ರೇಲೆ, Society ಎಲ್ಲಿ ? Civic responsibility ಯಾರ್ದು ? Police and Government ಯಾಕಿರೋದು ? Cheap pay ಗೆ ಕೆಲ್ಸ ಮಾಡೊ School Masterಉ Parentsಗೆ ಇಂಥ Letters ಬರಿಯೋವಾಗ public hangman ಬಿಟ್ಟಿ ಸಂಬ್ಳ ಯಾಕೆ ಭಕ್ಷಿಸ್ತಿಧಾನೇಂತ ನಾನು ಕೇಳಬಹುದೆ ? ಇಲ್ಲ, ಕೇಳ್ಬಾರ್ದ ?......As a lawyer and also a loyal citizen......house holder......municipal tax payer......I ask you ? ಮಗನ್ನ School ಗೆ ಕಳಿಸಿದ್ರೆ...ಪನ್ನೀರ್ಲಿ ಮಂಗಳಸ್ನಾನ ಮಾಡ್ಸಿ, "ಪುನಗು ಜವ್ವಾಜಿ ಕುಂಕುಮ ಕೇಸ್ರಿ ಗಂಧ ಕಸ್ತೂರಿ" ಲೇಪಿಸಿ......ವಜ್ರದ ಉಡಿದಾರಕ್ಕೆ ನೀರಾಜಿ ಲಂಗೋಟಿ ಕಟ್ಟಿ, ಜರ್ತಾರಿ ಪಂಚೆ ಸುತ್ತಿ, ಮಕಮಲ್ ಅಂಗಿ ತೊಡ್ಸಿ, ರತ್ನಖಚಿತವಾದ ಕಿರೀಟಾನಿಟ್ಟು ಅಂಬಾರೀ ಮೇಲೆ ಹುಡುಗನ್ನ ಸ್ಕೂಲಿಗೆ ಕಳಿಸಿದ್ರೇನೇವೇ......"ಆಟ ! ಆ ಆಟ ! ಊಟ ! ಓಟ ! ಆಗ ಆಟ ! ಈಗ ಊಟ !" ಈ ಸೂಕ್ಷ್ಮವಿದ್ಯೇನ ನಿಮ್ಮ ಹುಡುಗನಿಗೆ ಉಪದೇಶಿಸ್ತೇನೇಂತ ಮೇಸ್ಟ್ರುಗ್ಳು ಹೊರ್ಟಮೇಲೆ ......Parents ಗತಿ ಏನು ? May I ask you ? ಕೇಳ್ಬಹುದೇ ?

ಕಿಟ್ಟಿ, ರಂಗು : (ಏಕಗ್ರೀವದಿಂದ) Of course...ಕೇಳಬಹುದು.

ಅಹೋಬ್ಳು : But what is the use ? ಕೇಳೋವ್ನು ಕಿರುಚ್ತಿದ್ರೂನು ——ಅದ್ನ ಕಿವೀಗ್ಹಾಕ್ಕೊಳ್ಳೊ ಒಬ್ಬನೂ ಬೇಡ್ವೇ ಈ ನಮ್ಮ Society ಲಿ ?

ರಂಗು : ಬೇಕೇ ಬೇಕು ಅಹೋಬ್ಳು. But........ಕೋಪಿಸ್ಕೊಬೇಡ ...... School ಗೆ ಬರೋ ಹುಡುಗ್ರು........ವಾಸ್ನೆ......? !

ಅಹೋಬ್ಳು : ವಾಸ್ನೇಗೇನು ! ಇದ್ದೇ ಇರುತ್ತೆ. Various boys various ವಾಸ್ನೇಸ್ ! ಬೆಳ್ಳುಳ್ಳಿ biting boys ಬೆಳ್ಳುಳ್ಳಿ ವಾಸ್ನೆ ! ಈರುಳ್ಳಿ eating boys ಈರುಳ್ಳಿ ವಾಸ್ನೆ ! ಕಳ್ಳೆಕಾಯ್ eating boys...ಒಟ್ನಲ್ಲಿ all sorts eatablesನ eating boys will now and then expire, exude or even explode all sorts of ವಾಸ್ನೇಸ್ ! Each boy his own individual ವಾಸ್ನೆ ! Question of personal equation ! ಇದ್ನೆಲ್ಲಾ ಮೇಸ್ಟ್ರು ಗಮನಿಸ್ತಾಬಂದ್ರೆ detailedಆಗಿ......?......?

ಕಿಟ್ಟಿ : But be charitable ಅಹೋಬ್ಳು ! ಹೀಗೆಲ್ಲ ಹುಡುಗರ ವಾಸ್ನೆಗ್ಳ ಗಲಾಟೇಲಿ teacher ಗತಿ ಏನು ? !

ಅಹೋಬ್ಳು : ಏನೇನು ? ! Fair play for all ! Teacher ಊ ಅವನ favourite smell ನ........ಅವನಿಗೆ ಬೇಕಾದ Attar of Roses ಓ, ಆಟೊ ದಿಲ್ಬಹಾರೋ

……for protection……ಇಲ್ಲ Gun Powder ಓ……for destruction…… ತನ್ಮೂಗಿಗೆ ತುರುಕ್ಕೊಂಡು…………ತಾನ್ಸುಲ್ಕೊಳ್ಳೋ ಸಂಬ್ಳಕ್ಕೆ ಸರ್ಯಾಗಿ ಪಾಠ ಹೇಳೋದೋ …ತನ್ನ Duty ನ ತಾನು discharge ಮಾಡೋದೋ…ಇಲ್ಲಾ……ಹೀಗೆ ಹುಡುಗರ ಕೈಲಿ ಕಾಗ್ದಕೊಟ್ಟು ಮಕ್ಕಳ್ನ schoolನಿಂದ ಮನೇಗೂ ಮನೆಯಿಂದ school ಗೂ ಓದಾಡ್ಸೋದೊ ? ಒಟ್ನಲ್ಲಿ teachers ಎಲ್ಲಾ hopelessly bad for their Profession and must all be dismissed !

ಕಿಟ್ಟಿ : ಹೌದು……dismiss ಆದ್ರೆ ಅವ್ರ ಗತಿ ಏನು ?

ಅಹೋಬ್ಲ : Let them take to business ! Businessನಲ್ಲಿ ಎಂಥಾ dufferಗೂ ದುಡ್ಡಿದೆ, But start ಮಾಡೋವಾಗ ಮಟ್ಟಿಗೆ ಹುಷಾರಾಗಿರ್ಬೇಕು. I shall give you an example. ಪುಳ್ಳಯ್ಯ ಅಂತಿದ್ದ ನಮ್ಮ friend ಉ. Friend ಏನು ……same street ಉ ಚಿಕ್ಕಂದ್ನಲ್ಲಿ ಹೊರ್ಳ್ಯಾಡಿದ್ದು,……same school ಸೇರಿ dismiss ಆದದ್ದು……same class ಉ ಓದದೆ fail ಆಗಿ ಒದೆ ತಿಂದದ್ದು……ಆಮೇಲೆ ನನ್ನ LL.B. ಆದಾಗ್ಗೆ ಅವನ್ನ meet ಮಾಡಿದ್ದು. ಅಷ್ಟ್ರಲ್ಲಿ S.S.L.C. ವರಿಗು ಮುಟ್ಟಿದ್ರೂನೂವೆ ಎಷ್ಟೋ kinds of businessಗಳಿಗೆ ಕೈಹಾಕೀ ಹಾಕೀ ಕೈ ಸುಟ್ಕೊಂಡೋ ಕೈ ಕಚ್ಚಿಯೋ ……ಒಂದು ಕಾಸು ಸಿಕ್ದಿದ್ರೇನೂ business world ನ experience ಮಟ್ಗೂ collect ಆಗಿ ತುಂಬಿ ತುಳುಕುತ್ತಿದ್ದ ಅವನ್ಮಂಡೇಗೆ ಒಂದು brilliant brain wave ಉ ಹೊಳೀತು ……Idea ಏನೋ simple ಉ……but yet promising. ಅವನ Idea : ಒಂದು ಕೋಳಿ ಕೊಂಡ್ಕೊಳ್ಳೋದು. ವಾರಕ್ಕೆ at least ಎರಡು ಮೊಟ್ಟೆಗಳು. ತಿಂಗಳಿಗೆ ಎಂಟು. Breakages ಗೆ allow ಮಾಡಿ ತಿಂಗಳು ತಿಂಗಳಿಗೂ four to eight, eight to sixteen, sixteen to thirty two…ಹೀಗೆ progression ಲೆಖ್ಖ mathematical ಆಗಿ Budget ಹಾಕಿ, ಐದು ವರ್ಷದಲ್ಲಿ ಒಂದು ಲಕ್ಷವಾದ್ರು ಗಿಟ್ಸೋ plan ಊ ಹಾಕ್ದ, Proceed ಊ ಮಾಡ್ದ plan ಪ್ರಕಾರ. But ನಾನು ಹೇಳಿದ್ಹಾಗೆ……start ಮಾಡೋವಾಗ ಹುಷಾರಾಗಿಲ್ಲಿಲ್ಲ. Therefore ಇಂಥ promising plan ಊ ಕೂಡ went 'Phutt !'

ರಂಗು : ಅದೇನ್ಹೇಹುಷಾರಿ ?

ಅಹೋಬ್ಲ : Terrible mistake ಉ. Because……ಅವನು ಮೊದಲು ಕೊಂಡ್ಕೊಂಡ ಕೋಳಿ……ಬೇರೆ ವಿಧವಾಗಿ turn out ಆಗ್ಹೋಯ್ತು,

ರಂಗು : What do you mean. ಬೇರೆ ವಿಧವಾಗಿ turned out ಉ ?

ಅಹೋಬ್ಲ : You see……The first ಕೋಳಿ he bought ಉ turned out to be ………a Cockಊ! ಹ್ಹ ಹ್ಹ ಹ್ಹ ಹ್ಹ ಹ್ಹ ! (ಎಂದು ನಗುವನು. ಕಿಟ್ಟುವೂ ರಂಗುವೂ ಜೊತೆಯಲ್ಲಿ ಘೊಳ್ಳೆಂದು ನಗುವರು)

[ಈ ಮೂವರು ನಗುತ್ತ ಮೈ ಮರೆತಿರುವಾಗ ಕೆಂಪೇಗೌಡನು ನಿಶ್ಶಬ್ದವಾಗಿ ಒಳಗಿನಿಂದ ಪ್ರವೇಶಿಸಿ, ಮನೆಗೆ ಬರುವಾಗ ಇಲ್ಲದಿದ್ದ ಗಂಟೊಂದನ್ನು ಕಂಬಳಿಯಲ್ಲಿ ಸುತ್ತಿ ಬೆನ್ನಿಗೆ ಬಿಗಿದು ಕೊಂಡು, ಜನ್ನ ಮೂವರಿಗೆ ಕಾಣದಂತೆ ಒಂದೆ ಒಂದೆ ಹೆಜ್ಜೆಯನ್ನಿಟ್ಟು ಬೀದಿ ಬಾಕಿಲನ್ನು ಸಮೀಪಿಸುವನು]

ಕಿಟ್ಟಿ : (ಗೌಡನನ್ನು ಗಮನಿಸಿ) ಯಾರದು ?

ಅಹೋಬ್ಲ : (ತಿರುಗಿ, ಗೌಡನನ್ನು ನೋಡಿ, ಆತ್ಮಗತಂ) Good God ! Client ಕೈಲಿ ಸಾದೆ ಬಡಿಸ್ಕೊಂಡೇಂತ ಇವರಿಗೆ ತಿಳೀತೋ……ನನಗೆ ಖದರ್ ಕಮ್ಮಿ……Therefore

ಕೂಲಿ ಅಂತ......(ಪ್ರಕಾಶಂ) That is alright, boys. That is only a hired worker. (ಗೌಡನಿಗೆ) ಏನೋ ? ಸೌದೆ ಎಲ್ಲಾ ಒಡೆದಾಯಿತೆ ?

ಗೌಡ : ಊಂ ಬುದ್ದಿ. ಬತ್ತೀನಿ ಬುದ್ದಿ, ನನ್ನ ಕಟ್ನ......

[ಬೆನ್ನನ್ನು ಕೋಣೆಯಲ್ಲಿರುವವರ ಕಡೆ ತಿರುಗಿಸದೆ ಬಾಕಿಲನ್ನು ಹಿಂದೆ ಹಾಕಿದ ಕೈಗಳಿಂದ ತೆರೆದು, ನಿಷ್ಕ್ರಮಿಸಲು ಉಪಕ್ರಮಿಸುವನು]

ಅಹೋಬ್ಲು : ಆ ಮಾತು ನೀನು ಹೇಳ್ಬೇಕಾದ್ದಿಲ್ಲ. ಹೋಗು ! ನಾನೆಲ್ಲ ನೋಡ್ಕೋತೇನೆ.

[ಗೌಡನು ನಿಷ್ಕ್ರಮಿಸುವನು]

ಕಿಟ್ಟಿ : But......ಅವನ ರುಮಾಲ್ನೂ ಕಂಬ್ಳೀನೂ ಕೋಲ್ನೂ ಚಕ್ಕೆ ಕಮಾನ್ನೂ ನೋಡಿದ್ರೆ ಬರೀ ಸೌದೆ ಒಡಿಯೋನ್ಹಾಗಿಲ್ವಲ್ಲ ?

ಅಹೋಬ್ಲು : ಈ ಕಾಲ್ದಲ್ಲಿ..........ನಮ್ದೇಶ್ದಲ್ಲಿ dignity of labour ಇಲ್ಲದೆ ಗರೀಬ್ರೂ ಗುಲಾಮ್ರೂ ತಮ್ಮ ತಮ್ಮ ಕಸಬ್ನಲ್ಲಿ ನಾಚ್ಕೆಪಟ್ಕೊಂಡು ನವಾಬ್ರ ಹಾಗೆ ವೇಷ ಹಾಕ್ಕೊಂಡು ಮೆರಿಯೋಕಾಲ ಇದು. ದುಡ್ಡಿರೋದು ದುಡ್ಡು ಹೋಗುತ್ತೆ ಅಂತೊ ಜಿಪ್ರಕೇಲಿ ದರಿದ್ರರ ಹಾಗೂ ಬಡವರು ದವಡೆ ಊನಕ್ಕೆ ಬೆದರ್ಕೊಂಡು ಧನಿಕರ ವೇಷಾನ್ನೂ ಹಾಕ್ಕೊಂಡು ಸಮಾಜ್ದಲ್ಲಿ ಒಬ್ಬರ್ನೊಬ್ರು ಮೋಸ ಮಾಡೊ ಕಾಲ ಇದು ! Take for instance : ನಮ್ಮನೇಲಿ ಇವತ್ತು ಅಡಿಗೆ ಮಾಡ್ತಿರೋ ಜಮೀನ್ದಾರ್......(ಆತ್ಮಗತಂ) Good God : wrong example ಉ......(ಪ್ರಕಾಶಂ) I mean, ಅಡಿಗೆ ಆಯ್ದೀಕ್ಷಿತ ಸ್ನಾನಮಾಡಿ ಕಾದಿರೋ ಜಮೀನ್‌ದಾರ್...ಇದೆಲ್ಲಾ ಯಾಕೆ ? ಒಟ್ನಲ್ಲಿ ನಿನ್ನ life...ಸಮಾಜ್ದಲ್ಲಿ ಹೇಳ್ತೀನೆ ......ನೀನು People ಕಣ್ಣಿಗೆ ದೊಡ್ಡವನಾಗಬೇಕೂಂದ್ರೆ money **spend** ಮಾಡಬೇಕಾದ್ದೇನು ಇಲ್ಲ.........but **show** ಮಾಡ್ಬೇಕು ! Hotel ಗೆ ಹೋಗಿ, ಎಂಟಾಣೇಗೆ ತಿಂದು ಲಕ್ಷ ರೂಪಾಯಿ ನೋಟ್ನಿಟ್ಟು, "ಬೇಗಕೊಡಿ ಚಿಲ್ರೇನ" ಅಂತ ಕೇಳು ; Building ತೆಗೊಂಡು ತಿಂಗಳು ಗಟ್ಲೆ ಬಾಡ್ಗೆ ಬಾಕಿ......ಇನ್ನು ತಿಂದು ಹೋದ Patron's ದುಡ್ಡೆಲ್ಲಾ proble-matic......account book ನಲ್ಲಿ ಇನ್ನೂ ಅಕ್ಕಿ, ಹಿಟ್ಟು, ಉರುಳುಗಡ್ಡೆ. ದಿನಸು ಬಾಕಿ...... ಎಲ್ಲ ಸಾಲ .... ಹೀಗೆ ಒದ್ದಾಡೋ hotelನವನ್ಮೇಜಿನ್ಮೇಲೆ ಎಂಟಾಣೆಗೆ ತಿಂದ ಮನುಷ್ಯ ಲಕ್ಷ ರೂಪಾಯಿ ನೋಟ್ನ ಕುಕ್ಕಿ. "ಚಿಲ್ರೆಕೊಡಿ" ಅಂದ್ರೆ ಏನ್ಹೇಳ್ತಾನು ? ಮೊದಲು sensible ಆಗಿ ಮೂರ್ಛೆಹೋಗಿ, ice cream ನೋ fruit salad ನೋ ಯಾರಾದ್ರು ಮುಂದೇಗೂ ಮುಖಕ್ಕೂ ಉಜ್ಜಿ. ಜ್ಞಾನ ಬಂದು, ನೋಟು ಕುಕ್ಕೊಂಡ್ನೇನ್ ಕಾಲಿಗ್ಬಿದ್ದು. "ಕ್ಷಮ್ಸಿ ಪ್ರಭುಗಳೆ ! ಲಕ್ಷ್ಮೀಪುತ್ರರೇ ! ಚಿಕ್ಕ ಹುಡುಗ್ರು ಪಠ ಓದಾದ್ನೊಹಾಗೆ ಲಕ್ಷರೂಪಾಯಿ ನೋಟುಗಳ್ನ ಹೀಗೆ ಎಸ್ದಾಡೊ ತಾವು ನನ್ನ hotelನ ಅಲಂಕರಿಸಿದ್ದು ನನ್ನ ಹಿರಿಯರ ಪುಣ್ಯ. ತಾವು ದಮ್ಮೋಟು. ಮಸಾಲ್ದೋಸೆ, ಮಸಾಲ್ವಡ್ನ ನನ್ನ hotel ನಲ್ಲಿ ಅಂಗೀಕರಿಸಿದ್ದು ನನ್ನ ಪುರಾಕೃತ ಲಭ್ಯ" ಅಂತ ಕಣ್ಣೀರು ಸುರಿಸ್ತ ಹೊರಳಾಡ್ತಾನೆ. ಗತಿಗೆಟ್ಟು ಹೊಟ್ಟೆ ಕಾಯ್ತ ಒಬ್ಬ ಅದೇ hotel ಗೆ ಹೋಗಿ ...."ದಮ್ಮಯ್ಯ ! ಪ್ರಾಣಹೋಗ್ತಿದೆ ! ಸ್ವಲ್ಪ ಹೀನೀರು ಕೊಡೀ !"ಅಂತಗಾನ ಕೇಳಿದ್ನೋ ಗರೀಬ...ದವಡೇಗೇನು ? ಬೆನ್ನೆಲುಬು plus ಸೊಂಟಕ್ಕೂ ಊನ ! Therefore "ಪೂಜ್ಯ ನಿಮಿತ್ತಂ ವಿಧವಿಧ ವೇಷಃ !" ಇನ್ನೊಂದು example ಹೇಳ್ತೀನೆ, ಕೇಳೀ......

ಜೀವು : (ಒಳಗಿನಿಂದ) ಇಧೀರಾ !

ಅಹೋಬ್ಲು : Forgive me. Domestic call from my better-halfಉ ! (ಹಿಂದಿನ ಬಾಗಿಲನ್ನು ಸಮೀಪಿಸಿ) ಏನದು, ಜೀವು?

ಜೀವು : (ಒದ್ದೆ ಸೀರೆಯನ್ನು ಸುತ್ತಿಕೊಂಡು ಬಾಗಿಲಿನ ಹೊಸಲಿನಿಂದಾಚೆ ನಿಂತು ಸಿಡುಕು ಮುದ್ರೆಯಿಂದ) ಇದೇನು ಚೇಷ್ಟೆಗ್ಳು ಅಂದ್ರೆ ನಿಮ್ದು?

ಅಹೋಬ್ಳು : What do you mean? I mean………

ಜೀವು : ನಿಮ್ಮ ವಿಶಾನು ಮೊಸ್ಳೆ ತಿವಿಂಗ್ಲ ಈ ಬಾಚ್ನ್ಲೆಲ್ಲಾ ಕಟ್ಟಿಟ್ಬಿಟ್ಟು,……ನಾನು ನೀರ್ಮನೇಲಿ ಸ್ನಾನ ಮಾಡ್ತಿದ್ದಾಗ ಮುಚ್ಚಿದ್ದ ಬಾಗಿಲು ಮೇಲೆ ಮಡಿಸಿ ಹಾಕಿದ್ದ ಸೀರೇನ ಎಲ್ಬಚ್ಚಿಟ್ಟಿಧೀರ ?

ಅಹೋಬ್ಳು : ನಾನ್ಯಾಕ್ಬಚ್ಚಿಡ್ಲೆ ? ಆಗಿಂದೀಗಿನ್ವಗರ್ೂ ಮುಂದಿನ್ಕೋಣೇಲೆ ಇದ್ದೆ. ಆ ಅಡಿಗೇಪ್ನ……?

ಜೀವು : ಅಡಿಗೆ ಮಾಡ್ತಿಧಾನೆ…………(ತಟ್ಟನೆ ಒಳಕೋಣೆಯ ಸೂರನ್ನು ಗಮನಿಸಿ) ಹಯ್ಯೋ ! (ಚೀತ್ಕರಿಸಿ) ಹಯ್ಯೋ ! ಆ ಮಡಿ ಕೋಲ್ಮೇಲೆ ಹಾಕಿದ್ದ ಜರ್ತಾರಿ ಸೀರೆ…… ಆನಂದ……ಅಂಜೂರ……ಕರಾಚಿ ……… ಬಡುಕೊಂಡೇ ನಿಮ್ಮಪ್ಪುತ್ರ…………ಒಂದು trunkಉ ಕೊಂಡ್ಕೊಡೀಂತ ! ಎಲ್ಲಿ ಹೋದ್ವು? ಈ ಗಲಾಟೇಲಿ ಯಾರೋ ಕಳ್ರು…ಸೀರೇನೆಲ್ಲ…

ಅಹೋಬ್ಳು : (ಒಳಗೆ ನುಗ್ಗಿ ಓಡಾಡಿ) ಸೀರೆ ಹಾಳಾಗ್ಹೋಗ್ಲೇ…ಅಲ್ಮಾರಾಲಿಟ್ಟಿದ್ದ Cash boxಎಲ್ಲಿ? ಈಗ ಇದ್ದಾಗಿತ್ತು !……(ಹೊರಗೆ ಬಂದು) My God! Boys! Terrible robbery! My wife's seriesಉ ಅಲ್ದೆ my cash box……ಅದ್ರಲ್ಲಿ ನನ್ನ ಸ್ವತ್ತೆಲ್ಲಾ ಇತ್ತು……(ಅಂಬೆಗಾಲು ಇಡುವ ಶಿಶುವಂತೆ ಬರುತ್ತಿರುವ ಬೋರನಿಗೆ) ಬೋರಾ ! ನಿನ್ನ ಹನ್ನೆರಡಾರ್ಲ ಎಪ್ಪತ್ತೆರ್ಡು ರೂಪಾಯಿ ಇಟ್ಟಿದ್ದ ಪೆಟ್ಟಿಗೇನ……ಕೈಪೆಟ್ಟಿಗೇನ ಯಾರೋ ಲಪ್ಟಾಯಿಸ್ಬಿಟ್ಟಿದ್ದಾರೆ ! ಹುಡುಕೋ! (ಬೋರನು ಮೇಜಿನ ಕೆಳಗೂ ಕುರ್ಜಿಗಳ ಕೆಳಗೂ ಓಡಾಡುವನು)

ರಂಗು : Perhaps…………I may…………

ಅಹೋಬ್ಳು : (ರೇಗಿ) ನಿನ್ನ perhaps ಮುಂಡಮೋಚ್ತು……! ನಿನ್ನ I mayಗೆ ಬೆಂಕಿಯಿಡ್ತು…! ನನಗೆ cash box ಹೋಗಿರೊ ಅವಸ್ಥೇಲಿ…………(ಆಗತಾನೆ ಪ್ರವೇಶಿಸುತ್ತಿರುವ ಬಾಳುವಿಗೆ) ಬಾಳೂ, ಹೋಯ್ತು ! ಕೈಪೆಟ್ಗೆ ಹೋಯ್ತು ! ನಮ್ಮ ಕಣ್ಣೆದ್ರುಗೆ ಕದ್ಕೊಂಡ್ಹೋಗಿದಾನೆ ಯಾರೋ ಕಳ್ಳ ! ನಿನ್ನ ಆರು ತಿಂಗಳು ಸಂಬ್ಳ ಅದರಲ್ಲಿತ್ತು. ಒಳಗೆ ಹೋಗಿ ಹುಡ್ಕು, ಬಾಳು !

(ಬಾಳುವು ಒಳಕ್ಕೆ ನುಗ್ಗುವನು)

…ಯಾರಿರಬಹುದು ? ನಾನಲ್ಲ…………ನಂದು cash boxಉ. ಜೀವು ಅಲ್ಲ…… ಸೀರೇs ಅವಳ್ದು……also a victim. ನೀವಿಬ್ರಲ್ಲ. ಕಣ್ಣೆದ್ರುಗಿದ್ರಿ. Bora and Balu …also partners in the lossಊ. Therefore……by elimination…… it must be the cook……I mean Jahagirdar…(ಸಹಸ್ರ ರಾಕ್ಷಸರ ಧ್ವನಿಯನ್ನು ಅವಲಂಬಿಸಿ) **ಅಯ್ಯರ್ ! P. C. !**……ಅದೇ ! Perfect Cookಓ…ಪಕ್ಕ ಚೋರೋ ……ಇಲ್ಲ bothಓ……ಈಗ ಗೊತ್ತಾಗುತ್ತೆ ! **ಅಯ್ಯರ್ !!**

ಅಯ್ಯರ್ : (ಮೊಣಕಾಲಿನ ಮೇಲೆ ಕಟ್ಟಿದ ತುಂಡಲ್ಲದೆ ವಸನರಹಿತನಾಗಿಯೂ ದೊಡ್ಡದೊಂದು ಸೌಟುಪಾಣಿಯಾಗಿಯೂ ಪ್ರವೇಶಿಸಿ) ಏನು ಸ್ವಾಮಿ !…………(ಸಿಡುಕು ಮುಖದಿಂದ) ನೀಂಗ್ ವ್ಯೆಸೂರಿಕ್ಕ್…ನಿಮುಕೆ ಅವಿಯಲ್ ಪಾಟಿ……ತಿಳ್‌ವ್ ರಸಂ ಸ್ವಾರಸ್ಯಂ ತೋರಿಸಪೇಕು ಅನ್ ನಾನ್ ಕಷ್ಟಪಟ್ಟ್ ಕೆಲಸಂ ಮಾಟತಿರುವಾಗ……ನಾನ್ ಪ್ರೊರಿಚಿ ಕೊಟ್ಟ ವಕ್ಕರ್ಣೆ ಆಕುವ ಸಮಯಕ್ಕೆ ಸರಿಯಾಕಿ……ಈಕೆ ಕೂಕಿತರೆ……ಶಮ್ಮೈಲ್……ಅಟಿಕೆ ಕೆಟ್ಟು ಓಕಿ……ನೀವು ನಾನ್ ಅಟಿಕೆಯುವಸು ಅಲ್ಲ ಅನ್ ನೆನಚಿಕೊಂಡ್ ಪೋಲೀಸಿಕೆ ವಿಳಿಕಳಿಸಿತ್ರೆ……ನನ್ನಕತಿ ಏನು ?

ಅಹೋಬ್ಳು : ಅಡಿಕೆ or no ಅಡಿಕೆ......ಅಲ್ರೀ ! ನೀವು ಒಳಗೆ ಹೊಕ್ಕ ಮೇಲೆ ನೂರಾರು, ಅಲ್ಲ ಸಾವಿರಾರು ರೂಪಾಯಿ ನಗದು ಅಲ್ದೆ....ಲಕ್ಷಾಂತರ ಅಲ್ಲ ಪತ್ತಾಪಿರಾಂತ್ರ ಬಾಳುವ ಒಡವೆ ಇದ್ದ ಕೈ ಪೆಟ್ಟಿಗೇನೂ...ಅಲ್ದೆ ನನ್ನ ಹೆಂಡ್ತಿ...I mean ಅಮ್ಮಾವ್ರ ಪತ್ತಿಪ್ಪತ್ತು ಸೀರೆಗ್ಳೂ...ನೀವು ಈ ಮನೇಲಿ ಹೆಜ್ಜೆ ಇಟ್ಟಮೇಲೆ ಹೊಟ್ಹೋಗಿವೆ ! ನಿಮ್ಮನ್ನ ಜಪ್ತಿ ಮಾಡ್ಲೇಬೇಕು.

ಅಯ್ಯರ್ : (ಭ್ರುಕುಟಿಗಳನ್ನು ಊರ್ಧ್ವಗತಿಗೆ ಎತ್ತುತ್ತ) ಶಪ್ತಿ ?

ರಂಗು : Let me help.........ಅಂದ್ರೆ ನೀವು ಬರೋವಾಗ, Mr......or Sir ......or His Highness......or Rajah Sahib.........ಕೋಪಿಸಿಕೋಬೇಡಿ, Mr. Jahagirdar.........ನನಗೆಲ್ಲಾ ಗೊತ್ತುಸಾರ್......ಅಹೋಬ್ಳು ನನ್ನ friendಉ ! but positionಉ delicateಉ. Therefore ಎಲ್ರ situationಗೆ ನೀವು ಬಂದಾಗ ತಂದ trunkಉ luggageಉ ಇವುಗ್ಳಲ್ಲಿ......

ಅಯ್ಯರ್ : (ಅಡ್ಡಮಾತಾಗಿ) ನೀವು ಏಳುವತ್ ನನಕ್ ಅರ್ತಮಾಕಲಿಲ್ಲ. "ಶಪತಿ" ಅಂತರೆ ಏನ್?

ಕಿಟ್ಟಿ : ಜಫ್ತೀಂದ್ರೆ......ನಿಮ್ಮನ್ನು ಹುಡುಕೋದು...ಈ ಕಳವು ಹೋದ ಸಾಮಾನುಗ್ಳು ......ಅಂದ್ರೆ ಏನು, ಕೈ ಪೆಟ್ಗೇನೂ ಸೀರೆಗ್ಳೂ ನಿಮ್ಹತ್ರ......

ಅಯ್ಯರ್ : ಸಾಮಿ ; ನಾನ್ ಪಂದಾಗ ಒಂದು ಬಂಚೆ ಒತ್ತೆಯಾಗಿ ಒಣಕತ ಇತೆ ಪೇಕ ಡೇಲಿ. ಈಕ ನಾನ್ ಕಟ್ಟಿಕೊಂಡಿರುವ ತೋರತು ಮುಂಟು. ಉಟುಕಿಕೊಳ್ಳಿ ! ಇತರಲ್ಲಿ ಏನು ಪೆಟಿಕೆ ! ಏನು ಪೊಡವೆ !...ಏನು ಸಾಮಿ, ಲಾಯರ್ ಮನೆಕ್ caseತಂದ್ರೆ......!

ರಂಗು : ಅಹೋಬ್ಳು, ನನಗೇನೋ.........real suspicion ಆ ಗೌಡನ್ಮೇಲೆ ! ಬೆನ್ನು ತೋರಿಸ್ದೇನೇವೇಯೇ ಈ ಬಾಕ್ಲಿಂದ ಆ ಬಾಕ್ಲವರ್ಗೆ ಹಿಂದ್ಹಿಂದೆ ಹೆಜ್ಜೆ ಹಾಕ್ತ ನಡೆದದ್ದು ಒಂದೇ ಅಲ್ದೆ, ಒಂದ್ಕಂಬ್ಳೀಲಿ ದೊಡ್ಡದೊಂದು ಗಂಟಿದ್ದಾಗೆ ಕಂಡು ಬಂತು......ಒಂದು ಜರ್ತಾರಿ ......ಅಲ್ಲ ಸರಿಗೆ ಅಂಚಿನ ಹಸುರು ಬಟ್ಟೆ ಜೋಲಾಡ್ತಿದ್ದ ಹಾಗೆ......

ಜೀವು : (ಉಚ್ಚಧ್ವನಿಯಿಂದ) ಹಯ್ಯೋ, ಅದೇ ನನ್ನ ಆನಂದಾ ಸೀರೆ !...ಹಿಡೀರೀಂದ್ರೆ ಆ ಗೌಡನ್ನ ! ಗಂಟಿತ್ತೆ ಅವನು ಬರೋವಾಗ...?

ಅಹೋಬ್ಳು : ಗಂಟೂ ಇಲ್ಲ, ಮಣ್ಣೂ ಇಲ್ಲ. But then...ವಕಾಲತ್ sign ಮಾಡಿ...at least ಹೆಬ್ಬೆಟ್ಟು ಒತ್ತಿ...recordsಉ...ಕಟ್ಟು ಕೊಟ್ಬಿಟ್ಟು ಹೋಗಿದಾನೆ. (ಕಟ್ಟನ್ನು ತೆಗೆದು ಮೇಜಿನ ಮೇಲೆ ಕುಕ್ಕಿ) ಹೀಗೆ ತನ್ನ ಊರು ಕೇರಿ ಕುಟುಂಬ ಕೊಂಪೆ ಗೊತ್ಮಾಡೊ ಕಟ್ನ ಇಟ್ಬಿಟ್ಟು ಕಳ್ತನ ಮಾಡೋ ಮಂಕಾದಾನೆ ! Besides ನನ್ನ. the cleverest man in the townನ್ನ, ಒಬ್ಬ ಹಳ್ಳಿ ಗಮಾರ ಹೀಗೆ ಗುಮಾಯ್ಸೋಕೆ try ಮಾಡ್ತಾನೇ ? try ಮಾಡಿದ್ರೂನೂ succeed ಮಾಡ್ತಾನೆ ? ಅವನ ಹಟ್ಟಿ ಹೊಲ ಕಳ್ಕೊಂಡು. ಅದನ್ನೆಲ್ಲಾ ತಿರುಗಿ ಬರೊ information ಆ ಕಟ್ನಲ್ಲಿ......

ರಂಗು : (ಕಟ್ಟನ್ನು ಬಿಚ್ಚಿ ಕಾಗದಗಳನ್ನು ತಿರುವುಹಾಕುತ್ತ) ದೇವ್ರೇಗತಿ. ಅಹೋಬ್ಳು ! ಈ ಕಟ್ಟೆಲ್ಲಾ ಬರಿ Blank paperಉ ! ಇನ್ನು ಹೇಗೆ ಹಿಡಿಯೋದು ಅವನ್ನ ! ಈ paper ಎಲ್ಲಾ ಬರೀ Fools Cap.

ಜೀವು : (ಅಹೋಬ್ಳುವಿಗೆ)—Fools Cap ಅಂದ್ರೆ ಏನು ?...ಅರ್ಥವೇನು ?......

ಅಹೋಬ್ಲು : (ರೇಗಿ) ಅಲ್ಕಾಣೆ ! ಒಬ್ಬ ಗಮಾರ...ಹಳ್ಳಿ ಗಮಾರ ಹುಲಿಯೂರ್ ಅಹೋಬಲ್ರಾಯನ ಮನೇಗೆ ಬಂದು, day lightನಲ್ಲಿ cash boxವಗೈರೆ ಲಪ್ಪಾಯಿಸ್ಬಿಟ್ಟು, ಘಾಟ ಆದ ನನ್ನ ಗುಮಾಯಿಸಿ ಹೋದ ಅವಸ್ಥೇಲಿ ಇರೋವಾಗ......Fools Capಅಂದ್ರೆ ಅರ್ಥವೇನೂಂತ ಕೇಳ್ತೀಯಲ್ಲಾ ? !

ಜೀವು : ಹಾಗಂದ್ರೇನರ್ಥ ?

ಅಹೋಬ್ಲು : Fools Cap ಅಂದ್ರೆ......ಪೆದ್ದುಗಳಿಗೆ ಹಾಕೊ ಟೋಪಿ.

ಜೀವು : ಕಾಗದ......ಟೋಪಿ ಹೇಗಾಗುತ್ತೆ ? !

ಅಹೋಬ್ಲು : (ದಂತಾವಳಿಯನ್ನು ಕಟಕಟನೆ ಕಡಿದು ಕನಲಿ) ಕಾಗದಾನ ಸಕ್ಕರೆ ಪಟ್ಣದ ಹಾಗೆ ಸುತ್ತಿ ಮಂಕನ ತಲೇ ಮೇಲಿಡೋದು...Fool's Cap......

ಜೀವು : (ಅಹೋಬ್ಲುವು ಹೇಳುತ್ತಿರುವಾಗಲೇ ಕಟ್ಟಿನ ಕಾಗದವೊಂದನ್ನು ಕಸಿದುಕೊಂಡು, ಸಕ್ಕರೆಪಟ್ಣದಂತೆ ಸುತ್ತಿ ಅಹೋಬ್ಲುವಿನ ತಲೆಯ ಮೇಲಿಡುತ್ತಾ) ಇನ್ಮೇಲಾದ್ರು ಈ ಬಂಡ್ವಾಳ್ವಿಲ್ಲದ ಬಡಾಯೀನ ಬಿಟ್ಬು......

ಅಹೋಬ್ಲು : (ಮುದ್ರೆ, ಧ್ವನಿ, ಭಾಷೆ, ಅಭಿನಯಗಳಿಂದ ಲಜ್ಜೆ, ರೋಷ, ಜುಗುಪ್ಸೆ ಇತ್ಯಾದಿಗಳನ್ನು ತೋರ್ಪಡಿಸುತ್ತ) ದಮ್ಮಯ್ಯ ಜೀವು ! ನಿನ್ನ Curtain Lectureಉ ಯಥಾ ಪ್ರಕಾರ ಆಗ್ಲಿ !...ನೋಡ್ತಿಧಾರೆ ಎಲ್ರು !......ನಾಚಿಕೆ ಆಗುತ್ತೆ ! Clientsನೂ friendsನೂ ....ನನ್ನ creditನೂ......considerಮಾಡು !

ಜೀವು : ನೀವ್ಮೆಡೋದೆಲ್ಲಾ **ನಿಮ್ಮ ಬಡಾಯಿ.................ನಿಮ್ಮ ಇಂಗ್ಲಿಷ್ ಬೆರಸಿದ ಕನ್ನಡ................**

[ಎಂದು ಜೀವು ಮಾತಾಡುತ್ತಿರುವಾಗಲೇ ಫರದೆಯು ಬೀಳುವುದು]

—

ಅಮ್ಮಾವ್ರ ಗಂಡ

ಅಥ್ವಾ

ಯಜಮಾನ್ರ ಹೆಂಡತಿ

ಪಾತ್ರಗಳು

ಅಮ್ಮಾವ್ರು	...	ಸೌ. Saroja, B.A. (Cauv.)
ಗಂಡ	...	Subbanna, B.A., B.L., Advocate
ಯಜಮಾನ್ರು	...	Narasimhayya, M.A., (Cauv.) M.C.S. (Mys) Senior Asst. Comr.
ಹೆಂಡ್ತಿ	...	ಸೌ. Kamalamma, M.A. (Cauv.)
ಆಯಾ	...	
ದೇವೇರಿ		
Gentleman		

SCENE I

[Sitting room– **ಅಮ್ಮಾವ್ರು** : —in a rocking chair, R. fore-ground—ಗಂಡ :—L. middle-ground, rocking a cradle—appointment of room a la Rs. 300 per mensem householder ಅಮ್ಮಾವ್ರು up-to-date,—president of the Ladies Club Etc.—ಗಂಡ: ಪಂಚೆ and torn bunian.]

ಗಂಡ : (Rocking the cradle and meekly)

ಏನದ್ ನೀನು ಓದ್‌ತಿರೋದು ? interesting ಏ ?

ಅಮ್ಮಾವ್ರು : (Rocking the chair and smugly)

ಅಲ್ದೆ ಏನು—at least ನನಗೆ interestingಉ.......ನನಗೇಂದ್ರೆ........**ನಮಗೆ**, for us **women**ಉ! ....ಈ horrible institutionಉ ...... marriageಉ ಅಂದ್ರೆ manಏ superiorಉ ಅಂತ......ಇದು ಹೋಗೋವರ್ಗೂ ನಿಮಗೆಲ್ಲಿ interestಉ **ಈ** book ನಲ್ಲಿ ?.........

ಗಂಡ : (very meekly) ಒಂದ್ವೇಳೆ...of course....ನಿನ್ judgementನಲ್ಲಿ, literary mattersನಲ್ಲಿ ಹೇಳ್ತೀನೆ......ನನಗೆ......personally speaking of course ......complete confidence ಇರೋದ್ರಿಂದ, ನನಗೆ ಆ bookನಲ್ಲಿ interest ಇಲ್‌ದಿದ್ರೂ ನೂವೆ, ಆ bookನಲ್ಲಿ interested ಆಗಿರೋ ನಿನ್ನಲ್ಲಿ ನನಗೆ interest ಇದೇ ಅಂತ......

ಅಮ್ಮಾವ್ರು : ಸಾಕು......ನಿಮ್ಮ subtle attempts at flattery! ಇಲ್ಲೇನೂ ಬೇಯೋಹಾಗಿಲ್ಲ...ಅದಕ್ಕೆ brutesಉ ಅನ್ನೋದು ನಿಮ್ಮನ್ನೆಲ್ಲ...ನಮ್ಮ weakness ಗೊತ್ತು ನಿಮಗೆ...Vanity ಅಂಬೋದು......ಈ ತಂತೀ ಮೇಲೆ ಮೀಟಿ, ಮೀಟಿ, ಮೀಟಿ—at our most impressionable ageಉ—"You are the queen of my lifeಉ" ......"You will be the guiding star of my lifeಉ"......"if you marry me, I shall be a slave to you" ಅಂತ young girlನ head ಎಲ್ಲ giddy ಮಾಡಿ daze ಮಾಡೋದು!!

ಗಂಡ : (Loud sottovoce)......What a memory!...

ಅಮ್ಮಾವ್ರು : ನಿಲ್ಲ್‌ಸಿ ನಿಮ್ಮ interruptionsoo!...(resuming) ಇಸ್ ಮದ್ವೆ ಆಯ್ತೋ......ಆ poor vanity eaten foolಉ ನಿಮ್ಮ ಕುಟುಂಬದಲ್ಲಿ ಒಂದು simple factoroo...ನಿಮ್ಮ brutal man's career ನಲ್ಲಿ ಒಂದು simple phaseoo... ನಿಮಗೆ ಮಕ್ಕಳ್ಹೆರೋಕೆ....ನಿಮ್ಮ ಮನೆ ನೋಡ್ಕೊಳ್ಳೋಕೆ...a cheap unpaid ayah, cookoo, house-keeperoo, sweeping womanoo, all combinedoo... ಅಬ್ಬ!! What a terrible price to pay for one moment's yielding to one's vanity! Generations ನಿಂದ ಹೀಗೆ ನಮ್ಮನ್ನ brutalise ಮಾಡಿ, ಮಾಡಿ, ನಿಮ್ಮ thumb ಕೆಳಗೆ ಇಟ್ಕೊಂಡಿದ್ರಿ! **But thank God, we women have woke up** (flourishing her book aloft) and thanks to the angelsoo like the writer of this bookoo......;

ಗಂಡ : (interrupting) ಯಾರವ್ನು ? Authoroo ?......

ಅಮ್ಮಾವ್ರು : (with an indignant look) ಅವನು? He! Man ಗೆ ಅಷ್ಟು sense of honesty and justice ಇರ್ತದೇನು? ಅವನಲ್ಲ......ಅವಳು...... she! ಬರೆದೋಳು, womanಉ ... ನಮ್ಮಲ್ಲೊಬ್ಳು......horrible ಹೆಂಗ್ಸು ಅಂತೀರಲ್ಲಾ ಅವ್ಳು ಬರೆದದ್ದು. Titleಉ "The World's Redeemer or woman's place in God's creation"oo ಅಂತ.

ಗಂಡ : (sottovoce) World's Redeemer!...ಹಾಗಾದ್ರೆ. worldoo ಮೊದಲು manನ monopoly ಆಗಿದ್ದಾಗೂ ಅದ್ನ devil ಗೋ ಏನೋ......ಕುಯಿಬಿಟ್ಟು ಹಾಗೂ......ಮಾತ್ರೆ......ಈಚಿಗೆ......ಅಂದ್ರೇನು......ಈಕೆ ಈ ಪುಸ್ತಕ ಬರೆಯೋದೀಚೆಗೆ...... perhaps womanಉ ತನ್ನ rightನ ತಾನು assert ಮಾಡ್ಕೊಂಡು. ತಾನು redeem ಮಾಡ್ಕೊಂಡ್ ಹಾಗೂ...ಈ ಪುಸ್ತಕ......

ಅಮ್ಮಾವ್ರು : (interrupting) ಹಾಗೇನೂ!...ಹೀಗೇನೂ! ಈಚ್ಗೇನೂ...... ಆಚ್ಗೇನೂ? woman's rights ಯಾವಾಗ್ಲೂ ಅವಳ ಕೈಲೇ ಇದ್ದು......The hand that rocks the cradleಉ rules the worldoo......!!

ಗಂಡ : (after a deep sigh) ಹಾಗಾದ್ರೆ ಕ್ಷಮ್ಸು......if you don't mind, I shall go out and stand outsideoo for a breath of fresh airoo;...being a bruteoo...like our dog Tigerಉ...ಅವ್ನೇನು dog-cartನ ಹಿಂದೆ ಓಡ್ಸ್ಕೊಂಡು ಹೋಗೋ ಹಾಗೆ ನನಗೂನು...brutish avidity for fresh air and exerciseoo......ಅದ್ದರಿಂದ......will you......in the mean-while, without disturbing yourself of course......rule the worldoo (ಒಂದು ಹಗ್ಗವನ್ನು ತೊಟ್ಟಿಲಿಗೂ rocking chairಗೂ ಕಟ್ಟಿ ಮುಗಿಸುತ್ತ) for a few minutesoo......?

ಅಮ್ಮಾವ್ರು : (looking him in the eye with a subconscious soft look...crossing over and taking charge of the cradle) ಸ್ವರಿ : ಹೋಗ್ಬನ್ನಿ! Tigerಉ. ಹೊರಗೆ ಬಿಟ್ರು. ಅರ್ಧ ಗಂಟೇಲಿ ಮನೇಗೆ ಬಂದ್ ಸೇರುತ್ತೆ...... (ಗಂಡ reaches clothes rack and puts on coat and turban)...ಮರೀಬೇಡಿ ...and does not disgrace the house by going out without a collaroo......!

[ಗಂಡ goes back again to rack to wear collar]

ಗಂಡ : Quite so! Quite so! ಮರೆತಿದ್ದೆ............Brutal instinct again to ignore the curb of conventions of civilisationoo...ಕ್ಷಮ್ಸು...!

ಅಮ್ಮಾವ್ರು : (gently letting go off the cradle and walking towards door C) ನೀವು ಬರೋಷ್ಟುಲ್ಲಿ...ಅಡಿಗೆ...

ಗಂಡ : (wearing the collar elaborately)

Don't be silly dear!......ನಾನು brute ಆದ್ರೂನೂವೆ...ಅಷ್ಟು...brute ಅಲ್ಲ...culinary arrangements ಎಲ್ಲ completeಉ...ಬೇಳೆ ಸ್ವಲ್ಪ rebelliousoo; but...soda will melt its heartoo within half an houroo...ಅಷ್ಟರಲ್ಲಿ ನಾನೂ ಬಂದ್‌ಬಿಡ್ತೇನೆ...

ಅಮ್ಮಾವ್ರು : ಆದ್ರೂನೂ...

[Disappears through door C]

ಗಂಡ : [Looks fixedly at the door C…sighs deeply, kisses the sleeping baby in the cradle] If this little scoundrel with her beautiful eyes doesn't develop her fine spirit too, **I will smother him!** (sighs deeply and moves towards door to exit; confronting a flashly-dressed, hat-and-stick in-hand gentleman) ಯಾರದು ? Who are you ? What do you want? ಎಲ್ಲಿಗಯ್ಯ ನುಗ್ತಿದ್ದೀಯಾ?...

Gentleman : ನೀನು ಯಾರೋ ? I want to see the president of the women's associationoo. I am a delegate from……

ಗಂಡ : (ಥಟ್ಟನೆ) Forgive me sir : please come in: kindly sit down…make yourself comfortable. (motioning him to a chair and putting a magazine before him) The president will be here in a minute.

Gentleman: ನೀನು ಯಾರಯ್ಯಾ ? Who are you I say ?

ಗಂಡ : ನಾನೇ ? (hard up for a reply……with a merry twinkle in his eye)…ನಾನು…I am the man who says "please come in…… kindly sit down…make yours lf comfortable…the president will be here in a minute" etc….

[Exits briskly]
[Enter ಅಮ್ಮಾವ್ರು]

ಅಮ್ಮಾವ್ರು : ಏನದು ? ಇಲ್ಲಿಗೆ ಬಂದದ್ದು ?

Gentleman: I have come on behalf of…

ಅಮ್ಮಾವ್ರು : ಅರ್ಥವಾಯ್ತು……ನನ್ನ decision finaloo……**I will have no woman on the association rolls…so long as I am president**…… who **deserts** her hearth and home. ಈಗ ನಾವು fight ಮಾಡ್ತಿರೋದು… ಮನೇಲಿ ಇದ್ಕೊಂಡು …equal rights with husbandsಗೆ!…ನಿಮ್ಮ sisterನ attitudeಉ………**woman's responsibilities of mother-hood**ನ ತಪ್ಪಿಸ್ಕೊಂಡು ಕುಣ್ದಾಡೋಕೆ ……ಅದು **un-woman-likeoo!** ನೀವು ಬಂದದ್ದು ತಪ್ಪು!!

Gentleman : ನನ್ನ sister ಏ ಬರಬೇಕೂಂತಿದ್ಲು……

ಅಮ್ಮಾವ್ರು : ಹೌದು!…ಆ old mental slavishness ಅವಳಿಗೆ ಇನ್ನೂ ಇದೇ ಹೊತ್ತಿಗೇನೇ ತಾನು ಬರೋಕೆ ಹೆದರಿಕೊಂಡು brotherನ ಕಳಿಸಿದ್ಲು! please go away!

Gentleman: You must forgive me!…ನಾನು……I was only thinking of my sister……

ಅಮ್ಮಾವ್ರು : ನಿಮ್ಮ sisterಗೆ think ಮಾಡೋದನ್ನ ಮರ್ತ್ಬಿಟ್ಟು...for a change...think for yourself....... **ಅಬ್ಬ!!** ನೀವೂ ಒಂದು man ಆ? **That** is the door you came by!

[The gentleman exits crest-fallen....the lady closes the door with a bang...........rushing back precipitately to the cradle]

ಅಯ್ಯಯ್ಯೋ! ಮಗು ಎದ್ದುಬಿಡ್ತೋ!...ಸದ್ಯ ?

[sighing at the sight of the sleeping baby......resumes rocking the cradle]

—ತೆ ರೆ ನಿ ಧಾ ನ ವಾ ಗಿ—

SCENE II

(Street)

[Discovered ಗಂಡ and ಯಜಮಾನ್ರು]

ಯಜಮಾನ್ರು : Good God !......Dear boy !......Fancy meeting you here and like this !

ಗಂಡ : ಯಾಕ್ ನರಸಿಂಹ್ ! ಏನು excitement ಇದು ? ಮನಸ್ಸಿಗೆ ಶಾಂತಿ ತಂದ್ಕೋಮಗು ...... ನನ್ನ ಹೀಗೆ ನೋಡೋದರಲ್ಲಿ ಏನಿದೆ wonderoo...right as clock workoo dear boy. I pass this way at this time and "like this" as you put it......everyday...... ! ನೀನು ಬೇಕಾದ್ರೆ, ನಿನ್ನ lifeoo . ...ನಿನ್ನ positionoo, ಈ ಬಾಬ್ತುಗಳನೆಲ್ಲ, ನಮ್ಮ school days ನಿಂದಲೇ fix ಮಾಡ್ಕೊಂಡು. ಈಗ faithful ಆಗಿ ಜಾರೀಗೆ ತರ್ತಿರೋನು. ಈ rotten ಗಲ್ಲೀಲಿ ನಡೀತಿರೋದು ಆಶ್ಚರ್ಯ ...**Borrun Centre forwardoo** ....but...but—ಒಂದು.............. ten yards ಯಾವಾಗಲಾದ್ರೂ ಓಡಿದ್ದೀಯಾ ? ..... in your life ಊ............ಆ .... ? ಹೌದೂ ! ಇದೇನು new mania ನಿನ್ದು ? ನಮ್ಮ good old days ನಲ್ಲಿ........ಕಾಲು ಚಾಚೋಕೆ ಹೇಸಿಗೆ ! ಈಗ actually ನಡಿಯೋಕೆ ಶುರು ಮಾಡಿದ್ದೀಯಾ !? If you are not very careful and if you keep up this habit of walking, you run the risk of suffering from an attack of......... good digestionಉ ! !

ಯಜಮಾನ್ರು : What do you mean ?

ಗಂಡ : I mean......nothing more or less, my dear boy. then ...ಇಷ್ಟೆ...that you have always had, before you. (poking at ಯಜಮಾನ್ರ's stomach)—a large future ! ! ನಿನಗಿರೋದು ಒಂದೇ excuseoo ....on your way home from the club ಏ...lodge meeting ಏ...... ?

ಯಜಮಾನ್ರು : (laughing) ಏನ್ peculiar ನೀನು. ಸುಬ್ಬು ?...! ನೀನು ಈ ಸ್ಥಿತೀಗೆ ಬಂದಿದ್ರೂನೂವೆ......ನಿನಗೆ good old college days ನಲ್ಲಿ ಇದ್ದ humour

ಹೋಗಲಿಲ್ಲವಲ್ಲ !......you needn't be frightened, dear boy !...ನನಗೆ walking ಮೇಲಿದ್ದ abhoranceoo ಈಗ ಏನು ಹೋಗಲಿಲ್ಲ......my car, you know has broken down, you know !...but...joking apart...... Subbu !!...ಎಷ್ಟು ದಿನ ನೀನು ಈ absurd position ನ stick ಮಾಡೋದು ?......

ಗಂಡ : (With controlled temper)

ಯಾವ positinoo ?

ಯಜಮಾನ್ರು : Excuse me, dear boy, the whole town is laughing at you !!

ಗಂಡ : Yes...in the old days......it was laughing...with me ! ...ಈಗ...at me !...It's only fair !...point ಏನು ?

ಯಜಮಾನ್ರು : ಏನೇನೂ...I shall be plain......!

ಗಂಡ : **'Shall'** ಯಾಕ್‌ಮಗೂ ?...future timesoo ?...pastoo... presentoo...ಯಾವಾಗಲೂ plain ಏ ನೀನು.

ಯಜಮಾನ್ರು : Shuttupp ! ಮಾತ್ಹಾಡ್ಬೇಡ ! point ಏನೇ ?......ಹೇಳೇಬಿಡ್ತೇನೆ ಕೇಳು...the whole town is laughing at your being hen-peckedoo!! ......ನಿನ್ನ friends ಎಲ್ಲಾ......ಇಷ್ಟು manly chapoo......old foot-ball championoo......leader of the local baroo...gayest spirit of the townoo ! ಹೀಗಿದ್ದೋನೂ...ಈಗ ಹೀಗೆ guts all goneoo ! foot ball and friendsoo......gone also !—'ಮನೆ ಆಯ್ತು ಮಿಸೆಸ್ ಆಯ್ತೂಂ'ತ ಹೀಗೆ henpecked ಆಗಿ ಬಿದ್ದಿರೋ ನಿನ್ನೂ, ನಿಮ್ಮಮನೆ ಈ dirty surroundings ನಲ್ಲಿ ಇರೋದ್ನೂ... ನೋಡೀ ನಗ್‌ತ್ತಿಧಾರೆ !......Hyenas—ಸುಬ್ಬೂ !—ಹೈನಾಸ್ ಹಾಗೆ...laugh ಮಾಡ್ತಿಧಾರೆ ...ಹ್ಹ ಹ್ಹ ಹ್ಹ ಹ್ಹ ಹ್ಹ......! ! ಕ್ಷಮ್ಸು dear boy ! !

ಗಂಡ : "Hyenas" ! ? ಕತ್ತೆ–ಕಿರುಬ-composition ಉ ! ಕತ್ತೆ ಎಷ್ಟು...... ಕಿರುಬ ಎಷ್ಟು proportionಉ...... ? Dont be a hyena minus the ಕಿರುಬ Narasim ! ಕ್ಷಮ್ಸೋದೇನು ! ನಿಜವೇ......"ಮನೆ cocks townoo...ಮನುಷ್ಯ henpeckedoo.!!......ನಗದೇ ಇದ್ದಾರೇ—ಕತ್ತೆಕಿರುಬಗಳೂ......?

ಯಜಮಾನ್ರು : My dear boy ! you are going to pieces ! I will tell you what. Come to the club, have a drink, have a smoke and damn every thing else !

ಗಂಡ : Impossible, ನರಸಿಂಪ್ ! my wife, you know, ಮನೇಗೆ ಹೋಗುತ್ಲೂ ಮುದ್ದಿಟ್‌ಬಿಡ್ತಾಳೆ.........mouth ಮೇಲೆ ! ಮೊದೂಲು !

ಯಜಮಾನ್ರು : (ಗಂಡನ ಹೊಟ್ಟೆಯನ್ನು with his fore-finger ಚುಚ್ಚುತ್ತ)

Oh ! ho ! after all, affectionoo ? !

ಗಂಡ : (ಯಜಮಾನರ ಹೊಟ್ಟೆಯನ್ನು double ಚುಚ್ಚುತ್ತ)

No! No! Before all, inspectinoo !

ಯಜಮಾನ್ರು : Seriously ಸುಬ್ಬ ! **I am going to put a stop to this.**

ಗಂಡ : ಅರ್ಥವಾಗಲಿಲ್ಲ...ಹ್ಯಾಗೆ......

ಯಜಮಾನ್ರು : By speaking to your wifeoo ! By convincing her that her place is one of a help-mate, a **subordinate**, to the man of the houseoo.

ಗಂಡ : ಕ್ಷಮ್ಸಿ ! dear boy ! you would be a marvel if you did !...ನನಗೆ ಅವಳ್ನ ತಿಳಿದ ಮಟ್ಟೂ ಹೇಳ್ತೀನಿ ಕೇಳು..."ಮೊದಲು ನಿನ್ನ jobನ resign ಮಾಡಿ ಒಂದು six months ಕೂಲಿಕೆಲ್ಸಮಾಡಿ, ಈ ನಿನ್ನ large futureನ reduce ಮಾಡ್ಕೊಂಡು...average human being ಆಗಿ ನನ್ನೆದುರಿಗೆ ಬಂದು ನಿಂತು...ಆ ಮೇಲೆ ಮಾತಾಡು" ಅಂದ್‌ಬಿಡ್ತಾಳೆ. It is best my boy, that you do not face her like this !!

ಯಜಮಾನ್ರು : (mad as a bull) What do you mean ?... I will tell you what I will do......I shall show her an ideal woman !......you know the old method...teachhing by example. My wife you know, sweet creature ; you know the type : perfect lily... : ಸೀತಾದೇವಿ typeoo......ಹಗ್ಲೂ ರಾತ್ರಿ ಗಂಡ. ಗಂಡ. ಗಂಡ...perfect obedience......no protesting......ಗಂಡ ಹೇಳಿದ್ದಾಗ ಕೇಳ್ತಿರೋ ಹೆಂಡ್ತಿ ! Do you know ?...ನನಗೆ ಬರೋದು five hundred rupees ಉ ; ಅದರಲ್ಲಿ seventy five rupees ನಲ್ಲಿ house-hold manage ಮಾಡ್ತಾಳೆ......ಮಿಕ್ಕದುದ್ದೆಲ್ಲ ನಂದೇ ! no worrying me for jewelsoo...sariesoo etc., !...ಆಯ್ತೋ !? ನನ್ನ carನ ಮಾತು ಎತ್ತಿದ್ದಿಲ್ಲ...ನನ್ನ victoria ನ ಹತ್ತಿದ್ದಿಲ್ಲ. ಹಗಲೂ ರಾತ್ರಿ her only careoo, is to take care of the seven beautiful children she has presented me with. (*thumping* **ಗಂಡ** *on the back*) **there**...is a record, my boy, of a perfect wifeoo, and remember, she is hardly thirty !......And to think, that, peopleoo, ನನ್ನ well-wishersಉ ಸುಬ್ಬೂ !...advised me **against** a second marriageoo !!......ಅವಳನ್ನ ಕರಕೊಂಡು ಬರ್ತೀನಿ. ನಿಮ್ಮನೇಗೆ. I will make her **advise** your wifeoo...ಕ್ಷಮ್ಸಿ ಸುಬ್ಬ...and make her realise.........**her** positionoo in **your** house-holdoo !!

ಗಂಡ : (sottovoce) ಮೂವತ್ತು ಕೂಡ ಇಲ್ಲ ವಯಸ್ಸು... ! ಏಳು ಮಕ್ಳು...... ಎರಡನೇ ಹೆಂಡ್ತಿ ! ಇವನ್ ಸಂಬ್ಳ 500 ರೂಪಾಯಿ !...ಇವನ...car ಮಾತು ಎತ್ತಿದ್ದಿಲ್ಲ... ವಿಕ್ಟೋರಿಯ ಹತ್ತಿದ್ದಿಲ್ಲ......ಇವನ house-hold ನೂ ಜರಿಗ್ಸಿ......ಈ ಮಕ್ಕಳ್ನೂ... ಇಟ್ಕೊಂಡಿದಾರೆ 75 ರೂಪಾಯ್ನಲ್ಲಿ...ಅಬ್ಬಬ್ಬಬ್ಬ ! ಈ selfish pig ಗೆ ಬುದ್ಧಿ ಕಲಿಸೋಕೆ **ಸರೋಜ is the very person !** (aloud) ನನಗೇನೋಪ್ಪ. ನಿನ್ನ wifeoo ನನ್ನ wife !ಗೆ teach ಮಾಡೋಕ್ಕಿಂತ, ನನ್ನ wifeoo ನಿನಗೆ teach ಮಾಡಿಬಿಟ್ಟಾಳು ಅಂತೋ ಹೆದರಿಕೆ......but still please yourself......please yourself... ..ಯಾವಾಗ ಬರ್ತೀರಿಯಾ ?

ಯಜಮಾನ್ರು ಬರ್ತೀಯಾ ? ನಾನೆ ? not at all...not now ! ಈಗ... ನೀನ್ನೂ ಬರ್ತೀಯಾ...ನನ್ ಜೊತೇಲೀ...to see and learnoo how......ಹ್ಯಾಗೆ...... I mean ;...but do...dear boy !...I shall show you...not only... ಹ್ಯಾಗೆ wife ಇರ್ಬೇಕು...but also...ಇಧಾಳೆ.......ಬಾ !!

[Exeunt Right]

SCENE III

[The office room of ಯಜಮಾನ್ರು used usually with pertinent appointments of a hotch-potch of Pseudo-European,—morning visiting-parlour, with furniture including a cheval glass set, and an uncomfortable lounge which itself, with a glass, would have been comfortable along of a bed-room suite. The white-wash of the walls is almost all covered up with Group Photoes of ಯಜಮಾನ್ರು, which recording his nomination—probationary—assitant Commisioner ship—subaltern days to the present Secretariat job, is a chronological demonstration of his inflation from nine-stone to his present fourteen-stone.]

[Found discovered two boys, six and four of age.]

ದೊಡ್ಡೋನು : ಅಪ್ಪನ ಹೆಜ್ಜೆ !

(Runs away—Exit L running)

[Enter ಯಜಮಾನ್ರು & ಗಂಡ]

ಯಜಮಾನ್ರು : [Comes up to ಚಿಕ್ಕ ಹುಡುಗ and coolly adjusting his instep to the boy's nether part as a full back kicking off a goal kick, lifts him aloft and wafts him into the sidewings L]

T h e **r i s i n g** g e n e r a t i o n !
Office roomನಲ್ಲಿ ಏನ್ ಕೆಲಸ ಈ bratsಗೇ ?

ಗಂಡ : Damit Narsim-don't be a brute ! ಯಾಕ್ ಒದ್ದದ್ದು ಆ ಮಗೂನ ?

ಯಜಮಾನ್ರು : ಮಗು ! ಅವನು ! ನಿನ್ನೂ ನನ್ನೂ ನುಂಗೋ ಯಮಘಾತ್ಕ ! He will live to ruin me ! : ನನ್ನ red inkನೂ black inkನೂ ಕಲಸಿಬಿಟ್ಟ್ರೂ ಈಗ ಯಾವ ಬಣ್ಣಾಪ್ಪಾ ಅಂತ questionoo ನನಗೇ ! That is the sort of scoundrel he is ! Never mind ನನ್ನ ಮಕ್ಕಳ ಕಥೆ ! ಬಂದ purpose ಮರೀಬಾರದು... I shall show you !......But......ತೆಪ್ಪಿಬೇಕೂ ನೀನೂ !......none of your gutless interferences ? !

ಲೆೀ ! ! ! ! ! ! ! !

(Thumping his chest)

Tiger of the Houseoo ! !

ಕಮಲು : ಏನು

ಯಜಮಾನ್ರು : **ಏನೇನು ?—ಬಡಕೋ ಬೇಕೇ ನಿತ್ಯ ?**

(Sitting in a chair & stretching both his legs)

(ಕಮಲು ನರಸಿಂಹಯ್ಯನ ಬೂಟ್ಸು ಬಿಚ್ಚುವಳು)

[ಈ........ತನಗೆ ಅನ್ಯಾಯವಾಗಿ ತೋಚುವ, "ಗಂಡನು" ಏನೂ ಮಾಡಲಾರದೆಯೂ. ಏನಾದರೂ ಮಾಡಬೇಕೆಂದು ಹೇಳುವ ಹೃದಯಕ್ಕೆ ಏನನ್ನೂ ಮಾಡಲಶಕ್ತನಾಗಿ ಕೈ ಕೈ ಹಿಸುಕುತ್ತಿರುವುದನ್ನೂ, ಗಮನಿಸಿದ]

ಯಜಮಾನ್ರು: Stopit! I know what you are thinking, but discipline. dear boy !, disciplineoo !! ನಿನ್ನ Homeoo ನೀನು ruin ಮಾಡ್ಕೊಂಡೇ—but ನನ್ನ ಹೋಮೂ......(ಹೆಂಡತಿಗೆ) **ಬೂಟ್ಸೂ ಸಾಕ್ಸೂ ಇಟ್ಟುಬಿಟ್ಟೂ....ಇಬ್ಬರಿಗೂ ಎರಡು cup coffee..........ಭೇಗ........ .. ಎರಡು ನಿಮಿಷದಲ್ಲಿ........ಆಗುತ್ತ್ಯೇ?**

ಕಮಲ : ಹೂಂ.

ಯಜಮಾನ್ರು : Liar! ಯಾರಹತ್ರ ಈ ಸುಳ್ಳು ! ಎರಡು ನಿಮಿಷ ! ನೀರೂ ಕಾಯಿಸಿ ಪುಡಿಹಾಕಿ ಸೋದಿಸಿ ಹಾಲೂ mix ಮಾಡ್ಕೊಂಡು............ಇನ್ನು ಸಕ್ಕರೆ ಬೇರೆ ....In two minutes—ಸುಳ್ಳೂ !—ಸುಳ್ಳು ಹೇಳೋ ಹೆಂಗಸನ್ನ ಇಟ್ಟುಕೊಂಡು ಏನು ಮಾಡೋದು ನಾನು? My God! ?

ಕಮಲು : ಕಷಾಯ ಇದೆ......ತಣ್ಣಗಿದ್ರೂನೂವೆ ಮಕ್ಕಳಿಗೆ ಕಾಸಿದ ಹಾಲು ಇದೆ ಬಿಸಿಯಾಗಿ,......ಭೇಗ ತರ್‍ತೇನೆ.

[Exit Centre]

ಗಂಡ : Do you call yourself a **man** Narsim ?

ಯಜಮಾನ್ರು : ಲ್ಲೋ ! I am not a man in my house and you. are not a man in your house ! Are you satisfied ?.........you **will** not be ! Because, in my house I am not a manoo but a Godoo ! In your house you are not a manoo but a wormoo ! ಆಃ ! ಬಂದ್ಲು ! ....I shall **show** you ! !

[ಕಮಲುವು ಎರಡು ಬೆಳ್ಳಿಯ saucer ಮೇಲೆ spoon ಸಮೇತ ಬೆಳ್ಳಿಯ cupಗಳನ್ನು ಮೇಜಿನ ಮೇಲಿಟ್ಟು ತಲೆಬಾಗಿ ನಿಲ್ಲುವಳು. ನರಸಿಂಹಯ್ಯನು ಒಂದು saucer-cupನ್ನು ಸುಬ್ಬಣ್ಣನ ಕೈಗೆ ಕೊಟ್ಟು. ಮತ್ತೊಂದು ಸಾಸರ್ ಕಪ್ಪನ್ನು ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯಿಂದ spoon ಹಿಡಿದು ಕಾಫಿಯ ಅಲ್ಪಾಂಶವನ್ನು ಅದರಿಂದ ತೆಗೆದು ನಾಲಿಗೆಗೆ ತಾಕಿಸಿ ಮುಸಾಂಬ್ರವನ್ನು ಬೇವಿನ ಎಣ್ಣೆಯಲ್ಲಿ ಅರೆದ ಲೇಹ್ಯವನ್ನು ಜಿಹ್ವಾಗ್ರದಲ್ಲಿ ತಾಕಿಸಿದವರ ಮುಖದಂತೆ ತನ್ನ ಮುಖವನ್ನು ಮಾಡಿಕೊಂಡು]

ಏನೇ ಇದೂ....ಅಂ? ಕೈಯೆಣ್ಣೇ–ಅದೂನೂ guest ಇರೋವಾಗ! *you horror!* ಏನರ್ಥ? *This—poisoning your husband?* (*to subbu*) *Dear boy!* ಕುಡೀಬೇಡ! stop it!......God knows! ನಿನಗೇನಾಗುತ್ತೋ? !......

ಕಮಲು: ಇನ್ನು ಮೇಲೆ ಸರಿಯಾಗಿ ಮಾಡ್ತೇನೇಂದ್ರೆ.

ಯಜಮಾನ್ರು: **'ಇನ್ನು ಮೇಲೆ'? ನನ್ನ ಮಾನಾ ಎಲ್ಲಾ ಪ್ರಪಂಚದ ಎದುರಿಗೆ ಕೆಟ್ಟ ಮೇಲೆ—ಇನ್ನೇನು ಮಾಡಿದ್ರೇನು?**

Get out of my sight—ನೀನೋ ನಿನ್ನ ಹಾಳು ಮೂತೀನೋ .... **Get out (ಕಮಲು ನಿಷ್ಕ್ರಮಿಸುತ್ತಲಿರಲು....)ಸ್ವಲ್ಪಿರು! ನೀನು ಹೋದ್ರೇನು? ನಿನ್ನ ಈ ಹಾಳು ಸ್ವರೂಪ ಎತ್ಕೊಂಡ್ಹೋಗು!**

[Snatches a beautiful silver—mounted photograph of ಕಮಲು and throws it at her. She catches it deftly and exits]

ಯಜಮಾನ್ರು: (Sipping his coffee slowly and appreciatingly)

ಹ್ಯಾಗಿದೆ ಕಾಫಿ...ಸುಬ್ಬೂ?

ಗಂಡ: ಚೆನ್ನಾಗಿ ಧೆ......?

ಯಜಮಾನ್ರು: (Rising up in a fury)

"ಚೆನ್ನಾಗಿದೆ" be damned, you fool! **It is the best coffee in the state!** She is the best coffee maker in the worldoo!

ಗಂಡ: ಮತ್ತೆ......? ಈ ಕೈಯೆಣ್ಣೆ......ಗಿಯ್ಯೆಣ್ಣೆ......?

ಯಜಮಾನ್ರು: (ಭೃಕುಟಿರಚನೆ ಮಾಡುತ್ತಾ Approaching ಗಂಡ)

That is the secretoo! Domestic happinessಗೇ...dead secretoo. ಮನೆಯಲ್ಲಿ ಒಂದು ಸಾರ್ತಿ ನಾಲ್ಗೇತಪ್ಪಿ "Satisfactory" ಅಂದು ಬಿಟ್ಟೆಯೋ, nothing will come up to the markoo, afterwards! In my house, I am always happy because I am always miserable, or I take care to be miserable!!

ಈಗ ಅರ್ಥವಾಯ್ತೋ...ನಿನ್ನ dull brainಗೆ...**how** to **rule** a house!—ruleroo! (ಗೆರೆಹಾಕುತ್ತಾ demonstrating) ಹೀಗಲ್ಲಾ ಹೀಗೆ!......(ಮುಷ್ಟಿಯಿಂದ ಹೊಡೆಯುವ ಹಾಗೆ ತೋರಿಸುತ್ತಾ) home...ruleroo!!! ಓಡಿಯೋದು horizontaloo but works verticaloo! **That**...**is the secret**! resultoo, night and morning ಒಂದೇ ಜಪ!! "ಗಂಡ......ಗಂಡ......ಗಂಡ"......ಗಂಡನ ಬೂಟ್ಸೂ......ಗಂಡನ shoesoo......ಗಂಡನ ಕಾಫಿ......ಗಂಡನ socksoo! Now, **that**, my dear boy, is the one creature in the world......ನಿನ್ನ horrible wifeಗೆ ...ಕ್ಷಮ್ಸು dear boy...you know I love you though I hate your gutlessness......like Seetha ಉಪದೇಶಾಡ್ ಶೂರ್ಪನಖಿ...or ತಾಟಕೀ......never mind......whatever ರಾಕ್ಷಸೀ it was.......... ...**You see what I mean!** ಅ! ? [ಪಿಸ್ನಾತ್ತ ಕಾಫಿ ತಂದ ಪಾತ್ರೆಗಳನ್ನು ಎತ್ತಿಕೊಂಡು ಒಳಗೆ ಹೋಗುತ್ತಿರುವಪ್ಪರಲ್ಲಿ

ಬಾಗಿಲ ಹಿಂದೆ ಅಲ್ಲಿಯೇ ಕಾದು ನಿಂತಿದ್ದ ಕಮಲುವು ಮುಂದೆ ಬಂದು ಪಾತ್ರೆಗಳನ್ನು ಅವನ ಕೈ ಯಿಂದ ತೆಗೆದುಕೊಂಡು ಹೋಗುವಳು]

ಗಂಡ : (ಸ್ವಗತ) She was **in here** all the time ! ಛೆ ! ?

[with a glint in his eyes—aloud]

ಒಪ್ದೆ ! ನರಸಿಂಪ್ ! You are quite right. It is imperative that our better halfs should meet to better their their own worse-halfsoo. " When shall we foregather on the morrow ?", all together ?, two-gether ಏನೂ ! ? four-getheroo ? ! ಯಾವಾಗ ಬತ್ತೀರಿ......tomorrow?

ಯಜಮಾನ್ರು : ಯಾವಾಗಲೇನೂ...? Shall consult (Cಗೆ ಹೋಗಿ ವಾಪಸು ಬಂದು)......consult be damned. ಅವಳ formula as per usual : "ನೀವು ಹೇಳಿದ ಹಾಗೆ" ! Therefore Teatimeಗೆ ಬಂದು ಸೇರ್ತೇವೆ dear boy !... tomorrow...ತೇವೆ ಏನೂ..."ತ್ತೇನೆ !" with my wifeಉ...a distinctionoo... with a differenceoo...ಅರ್ಥವೇ?

ಗಂಡ : ಟೀ ಟೈಮೂ, ಅಂದ್ರೆ ?...and at the same timeoo ನನಗೆ ಕಾಫೀ ಕುಡಿಸಿಬಿಟ್ಟು ? ! ನೋಡು dear boy ! ಈವತ್ತಿನ Tea-timeಗೆ ಕಾಫೀ ಕುಡಿಸ್ತೀಯಾ. ನಂಗೆ, ನಿಮ್ಮನೇಲಿ ; ! ನಾಳೆ ನಮ್ಮ ಮನೇಲಿ ನನ್ನ ಕಾಫಿ ಟೈಮ್ನ Tea-time ಅಂತೀಯ ! Therefore let us compromise !

ಯಜಮಾನ್ರು : Compromise be damned ! Tea timeoo ಬೇಡ. ಕಾಫೀನೂ ಬೇಡ......what do you say for Cocoa time...?...I mean 4'o clock...?

ಗಂಡ : 4'o-clock ಏ ?...coffee time ನನಗೆ **Cocoa time** really, for my wife and guestsoo—milk timeoo for my baby and Tigeroo ! So, 4'o'clockಗೆ ಬಂದ್ ಬಿಡಿ......sorry ! for the goodisoo !– I mean......ಬಂದ್ ಬಿಡು–with your appurtenance......or is it affianced ? .... ಎರಡೂ ಒಂದೇನೇ...?

ಯಜಮಾನ್ರು : ಒಂದೇನೇ be damned ! ಈ tigeroo ಅಂದ್ರೆಲ್ಲಾ...... what is it ?

ಗಂಡ : Come tomorrow and see......and find out... ...Good Night Narsim.

[Exeunt Right briskly]

ಯಜಮಾನ್ರು : ನಾನೂ, ನನ್ನ wifeoo, gutless Subboo, ಅವನ terrible wifeoo : ಮಧ್ಯದಲ್ಲಿ ಅವನು poor baby......ಅರ್ಥವಾಯ್ತು : but ಈ ನಮ್ಮ ನಮ್ಮ ಸಂಧೀಲಿ ಸಮಾರಾಧನೇಗೆ ಕಾದಿರೋ "tiger" ಯಾವ್ದು .... ಅ ? [illegible] ಸುಬ್ಬು ಹೇಳಿದ ಹಾಗೆ "Can find out tomorrow", and must remember that tiger or no tiger, my name *is* ನರಸಿಂಹಯ್ಯ, ನರ ಇರೋ ಸಿಂಹಕ್ಕೆ ಅಯ್ಯ ! ಅದರ ಅಪ್ಪ !

ಲೆ ೯ ! ! ! ! ! ! ! ! ! ! ಎಲ್ಲಿಧೀಯಾ !

ಕಮಲು : ಆಗಸಿಂದ ಇಲ್ಲೇ ಇದೇನೆ. ನೀವು ಮುಂದೆ ಕೇಳೋದು ಗೊತ್ತು. ಕಿರ್ಲ್ಬೇಡಿ. ಮುಂದೆ ಗಾನ ಕಿರ್ಲಿದರೋ........ಈಗತಾನೇ ಪಿದ್ದ ಹೋಗ್ರಿರೋ baby ಎದ್ದು ಬಿದ್ರೋ......ರಾತ್ರೆಯೆಲ್ಲಾ ಕಿರ್ಲಾಟ: ನಿಮಗೆ ನಿದ್ರೇನೇ ಇಲ್ಲ!......ಭದ್ರ!......ಗಲಾಟೆ ಮಾಡದೆ ತಪ್ಪನೆ ಅದಿಗೆ ಮನೆಗೆ ಬಂದು ತಿಂದುಬಿಟ್ಟು ಹೋಗೋದು ಮೇಲು! ಇಲ್ಲಾ! ಯಥಾ ಪ್ರಕಾರ ಇಷ್ಟೊತ್ತಿನಲ್ಲಿ ಎಲ್ಲರನ್ನೂ ಬೆದರಿಸಿ ಗದರಿಸಿದ್ರೋ......ನಿಮ್ಮ baby ಎದ್ದ ಕಿರ್ಲಾಟದಲ್ಲಿ......ನಿದ್ದೆಗೆಟ್ಟು......ಬೆಳಿಗ್ಗೆ......Inspection......ಅಂತಿದ್ರಿ...... ?

ಯಜಮಾನ್ರು : (In whispering husky notes)

ಎಲ್ಲಾ ಗೊತ್ತೇ! That is alright. ದಮ್ಮಯ್ಯ ! ಆ ಹಾಳು ಬೇಬೀನ ತೂಗ್ತ್ತಿರು.

[Exit Kamalu]

[ನರಸಿಂಹಯ್ಯನು ತನ್ನ ಬಟ್ಟೆಗಳನ್ನು ಒಂದೊಂದಾಗಿ ಕಿತ್ತೆಸೆದು ಧೋತ್ರವನ್ನುಟ್ಟುಕೊಳ್ಳುತ್ತ]

Baby be damned! ನನಗೇನೊ ; ! ಮನೆಗಳಲ್ಲಿ ಕೂಸುಗಳು ಹುಟ್ಟಿದ್ರೆ cradles ಅಲ್ಲ ಕೊಂಡ್ಕೊಳ್ಳಬೇಕಾದ್ದು...C h l o r o f o r m o o. ಲೇ! **[Exit slowly C]**

[ಘರದೆಯು ಬೀಳುವುದು]

SCENE IV

[ಗಂಡ, at the stove shaking a feeding bottle **ಅಮ್ಮಾವ್ರು** about to go out.]

ಗಂಡ : ಸ್ವಲ್ಪಿರು dear! ಎಲ್ಹೋಗ್ತೀಯಾ ?

ಅಮ್ಮಾವ್ರು : ಇದೇನಿದು ಹೊರಡೋವಾಗ ?

ಗಂಡ : (with a smile) ನನಗ್ಗೊತ್ತು ...... ನಿಮ್ಮ father, motherಗೆ ಇದ್ದ ಹಾಗೆ ಈ brahmin orthodoxy ಎಲ್ಲಾದ್ರೂ ನಿನ್ನ blood ನಲ್ಲೋ ಇಲ್ಲಾ bones marrowನಲ್ಲಾದ್ರೂನೋ ಅವಿತುಕೊಂಡಿರುತ್ತೇಂತ—ಗೊತ್ತೂ ನನಗೆ......!

ಅಮ್ಮಾವ್ರು : (indignantly) Ortho!......ಹೌದು......ನಾನು and I think you also. But this adventitious "doxoo"!, ನಾನಲ್ಲ perhaps ......ನೀವು!

ಗಂಡ : ಅಲ್ಲಾ......ಹೊರಡೋವಾಗ ಎಲ್ಲೀಗೇಂತ ಕೇಳಿದ್ರೆ ಅಪಶಕುನಾಂತ........ ಒಂದ್ವೇಳೆ......ನಿನಗೆ ತೋಚಿದ ಹಾಗೂ......ಅದರ ಮೇಲೆ ನೀನು ಕೇಳಿದ್ದಾಗೆ ಅರ್ಥ ಇಟ್ಕೊಂಡು ...ನಾನೂ......ಹೇಳಿದ್ದೂ.......but ನೀನು ಹೇಳಿದ್ದು correctoo dear! Ortho!—but ಈ doxಊ ಬಾಬತ್ತು ನನಗೇನೋ para-doxಊ!! But yet, ನಾನು ಬದ್ಕಿರೋದೂ for just one pair of dear "ducksoo"! ಮಗೂಗೆ dinner houroo; therefore ನಿನ್ನ ಹೋಗ್‌ಬೇಡಾ ಅಂದೆನೋ. ಶಾಸ್ತ್ರಕ್ಕೆ ವಿರುದ್ಧ : ಮಾಗಾ "ಇತಿ ಅಮಂಗಳಂ"! But yet "ಅಮ್ಮಾ ಇತಿ catastrophicoo" ನೀನಿಲ್ಲದಿದ್ದರೆ; ನೀನು ಹೊರಟ್ಹೋಗೋದು. Society calls you—ಇಲ್ಲಿ brutish ನಾನು and bruteletish

ಇವನು………… both hungry…………one cardiacally and the other gastrically! ಇದಕ್ಕೆ……anti……ven……ಅಲ್ಲ……anti……nectaroo……

ಅಮ್ಮಾವ್ರು : ಈ antiಗೆಲ್ಲಾ ಒಂದೇ ಔಷಧಿ! Atkinson's nippleoo……feeding bottleoo………ದೇವೇರೀಗೆ ಗೊತ್ತು………bottleಗೆ contentsoo ಕಾಸ್ಟ milkoo ದೇವೇರೀ ತೋರಿಸ್ತಾಳೇ……so the brutelet's hungeroo ತೀರುತ್ತೆ ……but considering you are a partner also in brutelet……ವಯುಪಿಟ್ಟು diarrhoea etcನ eliminate ಮಾಡೋಕೆ, cleanliness pauperises physicians ಅಂಬೋದ್ನ……

ಗಂಡ : ಹೌದೂ! ? ಈಗ ನೀನು ಹೋಗ್ತಿರೋದು…Lectureoo……what I mean is……what a great loss you are to……

ಅಮ್ಮಾವ್ರು : Cut out your compliments!!

ಗಂಡ : Quite so !

ಅಮ್ಮಾವ್ರು : I know what you mean !

ಗಂಡ : (ಮೂಲೆಯಲ್ಲಿದ್ದ parasolನ್ನು ಬಿಚ್ಚಿ ಅಮ್ಮಾವ್ರು ಕೈಗೆ ಕೊಡುತ್ತ) I know that you know what I mean which means also that you also know what we both meanoo; but in this meanwhileಊ. in short ……ಈ little brute ಇರೋವರೀಗೂ we are both supplementary from my angle of view……not complimentary to you of course…… but then two brutes!……I mean one decimal something……I mean everything……to me, meaning……us……which reminds ……me; ದಮ್ಮಯ್ಯಾ dear!……audience waitingoo! Disappear dear!; but ನಿನಗೋ brain terribleoo! ನನಗೋ memory……forgive me for reminding you!……

[Fixing up the leather attachments of a parasol and a chateline about ಅಮ್ಮಾವ್ರು's lily fingered hand and wrist]…… audience firstoo……the rest nextoo. Dog-cart harnessedoo; Tigeroo ಪಕ್ಕದಲ್ಲೇ ಕೂತಿಥೆ. ತಿರುಗಿ ಬರೋದು late ಆದ್ರೆ ಲಾಂಪ್ರಾs all right…… Match-boxoo ಕಂಚಿ-case ಪಕ್ಕದಲ್ಲಿ…………]

[The two disappear—Exit L—Curtain]

SCENE V

[Setting, as before, but the following afternoon Discovered: ಅಮ್ಮಾವ್ರು and ಗಂಡ at a table]

ಅಮ್ಮಾವ್ರು : ಇದೇನು ? revolutionoo ? tea-timeಲಿ ಕೂಡ I must have coffee ಅಂತಿದ್ದ ನೀವೂ……ಯಾಕೀ sudden switching off to ಕೋ ಕೋ ?

ಗಂಡ : ಕ್ಷಮ್ಸು dear! ನಿನಗೆ ಕೋಕೋ...ನನಗ್ ಕಾಫಿ...cow's milkಗಿಂತ condensed milkoo...ನಮ್ಮ bruteletಗೆ......ಹೀಗೇ ನಮ್ಮ ನಮ್ಮ tasteಗಳೂ. But then, dear, ನಾವು ಮೂವರೂ, we three including Tiger, are subservient slavesoo to our **self-invited** guestoo......I should say guestsoo...I really should say...my guestoo...to whom I am a hostoo...as well as your guestessೂ......to whom you are a hostessೂ...ಅದೇನೋ ಕಾಣೆ!.........ನಿನ್ನ guestess ಅಲ್ಲ.........but her husband......could have understood......if he were a woman and Enciente......ಅವನಿಗೇನೋ...ಒಂದು ಕೇಸರಿಕೆ......for ಕೋ ಕೋ!! He is hopelessoo; successful in everything except being a husbandoo...wifeಓ cock-peckedoo...

ಅಮ್ಮಾವ್ರು : (ಬಿರುಸಾಗಿ, ದುರುಗುಟ್ಟುತ್ತ)

Go on! ನಿಮ್ಮ ನಿಮ್ಮಲ್ಲಿ............ನೀವು MEN ಉಗ್ರು behind each other's backs......ಎಷ್ಟು ಬೇಕಾದರೂ bite ಮಾಡಿಕೊಳ್ಳೀ......but......your guest's wifeಉ......my guestessoo ಅಂದ್ರಲ್ಲಾ......horrible englishoo—but go on......and take care to go on carefully!! ಯಾರು ? ಇವರು ?

ಗಂಡ : ನಮ್ಮ Narasimoo! my old crony......

ಅಮ್ಮಾವ್ರು : ಆ pig ಏ....? ಯಾಕೆ ಕರೆದ್ರಿ ಅವನ್ನ ನನ್ನ ಕೇಳದೇನೇ...? Equal rights ಅಲ್ಲವೇ ಇಲ್ಲೀ ? !

ಗಂಡ : ಹೇಳಿದ್ನಲ್ಲಾ ಮೊದಲೇ...self invitedoo ಅಂತ!...ಅಲ್ದೆ ಅವನೊಬ್ಬನೇ ಅಲ್ಲ...

ಅಮ್ಮಾವ್ರು : ಏನು, ನಿಮ್ಮ ಸ್ನೇಹಿತರ ಕೊಂಪೇನೇ ಬಂದು ಸೇರುತ್ತೆಯೋ ಇಲ್ಲೀ?...

ಗಂಡ : ಇಲ್ಲವಲ್ಲಾ!...ಹೇಳ್ತಿದೇನಲ್ಲ...ಅವನೂ ಅವನ sweet wifeoo...ಅಷ್ಟೆ.

ಅಮ್ಮಾವ್ರು : ಓ! I see! ಅವಳನ್ನ ಕರ್‌ಕೊಂಬರ್ತಾನೆಯೋ! ಬರ್‌ಲಿ! ಅವಳನ್ನ ಕರ್ಕೊಂಡ್ ಬರೋದೂ Godsendoo! ಅಬ್ಬಬ್ಬಬ್ಬಬ್ಬ! ಏನು brutalise ಮಾಡ್‌ತ್ತಾನೇಂತೀರಾ ಅವಳ್ನ ? ಬರಲಿ! I will kick ಕಮಲು and **kill** that pigoo...widow or no widow...!...ಇಲ್ಲೀ ? ? ಕೋ ಕೋ ಏನ್ ಬಂತೂ...to that fat hogoo?

ಗಂಡ : ಹಾಗೂ......ಹೀಗೂ two guestsoo. Up to us bothoo...... ಬಂದೋವರ್ನ kickingoo, killingoo widowing or widowering, ಈ ನಿನ್ನ—righteous of course—indignationನ curb ಮಾಡ್ಕೊಂಡು......"ಏನೋ, ಪಾಪ! ಬಂದಿದ್ಧಾರೆ......ಕೋ ಕೋ ಕುಡೀತಾರೆ......ಬಂದ್ಹಾಗೇ ಹೊರಟ್ಹೋಗ್ತಾರೆ" ಅಂಬೋ idea betterಏ, ಇಲ್ಲಾ ಈ killing and kicking......? I shall help of course... ನನ್ನ football bootsೂ!......killing ಬಾಬ್ತೂ......Tiger's departmentೂ! ...... ನನಗೆ ಒಂದೇ objectionoo ...... ಕಿಲ್ದರ್ carpet dark colour bestoo ಅಂತ ...... but you of course ....

ಅಮ್ಮಾವ್ರು : **Point** ಗೆ ಬನ್ನಿ !

ಗಂಡ : ಏನೂ ಇಲ್ಲ! Proposed bloodshedoo.... ruined carpetoo ...corpses to explainoo. ಕ್ಷಮ್ಸು dear! ನಿನ್ನ friend ಕಮಲೂನ ಕಿಲ್ ಮಾಡದೇನೂ........ನನ್ನ friendನ ಕಿಲ್ ಮಾಡದೇಯೂ just like ನಿನ್ನ greatnessನ ನಾನು appreciate ಮಾಡೋ ಹಾಗೆ ನಿನ್ನ classmate greatnessನ...ಆ pigoo ....hogoo......appreciate ಮಾಡೋಹಾಗೆ...ನೀನು..!: after all. he is my friendoo!

ಅಮ್ಮಾವ್ರು : But she is also my friendoo! ನಿಮ್ಮ friendಗೆ humane feelingsನ teach ಮಾಡೋಕೆ ನಿಮಗೆ ಶಕ್ತಿ ಇಲ್ಲದಿದ್ರೂವೆ. ನನ್ನ friendಗೆ human rightsನ realise ಮಾಡ್ಕೊಳ್ಳೋದ್ನ ಹೇಳ್ಕೊಡೋ ಶಕ್ತಿ ನನಗಿದೆ! ಬಿಲ್ಲಿ! ಆ bruteoo! The Lord hath delivered him into mine hands!!

ಗಂಡ : ಹೌದೂ dear! but......only to construe and construct ......perhaps......reconstruct...their homeoo......without of course ......ನಿನ್ನ kicking...killing...ಅವೇನಿಲ್ದೆ......destructoo our little home......

ಅಮ್ಮಾವ್ರು : ssssಸ್ಟ್! Rest assured! ಬಾಕ್ಲಿ ಬಂದರು!! ಕಮಲೂ ಗಿಲ್ಲದ gutsoo ನಾನು inject ಮಾಡ್ತೀನಿ. ಆ pigಗೆ ಇರೋ fatನ ನೀವು ಕರಗಿಸಿಬಿಡಿ.... ಹ್ಯಾಗೇ?

ಗಂಡ : ನೀನು ಹೇಳಿದ ಹಾಗೆ!

[Bang; –at the door –]

(ದೇವೇರಿ–ಪ್ರವೇಶಿಸಿ)

ಯಾರೋ ಬಂದವ್ರೆ........ಬರ್ತವ್ರೆ. ಬಿಂದ್ಮೈತೆ. ಕುದುರೇ ಉಳ್ಳಿ : ಕಟ್ಟಿದ್ದ್‌ವೋಗೇ... ಉಳ್ಳಿ ಸಾರು ನಮ್ಮನೀಗೊಯ್ಬೌದೇನ್ರವ್ವಾ........?

ಅಮ್ಮಾವ್ರು : ನೀನ್ ಹೇಳಿದಹಾಗೇ ಹಾಳಾಗಿ ಹೋಗು... ಹುರುಳಿ ಸಾರು ಸಮೇತ. ಟೈಗರ್‌ನ ಸರಪಣೀ ಹಾಕೀ ಕಟ್ಟಿಬಿಟ್ ಹೋಗೂ...

ಗಂಡ : Quite right, dear! That will stop any killingsoo!

[ದೇವೇರಿ ಹೋಗುವಳು—ನರಸಿಂಹಯ್ಯನ ಪ್ರವೇಶ]

ನರಸಿಂಹಯ್ಯ : (ಗಟ್ಟಿಯಾಗಿ) Hallo! Dear boy!

ಅಮ್ಮಾವ್ರು : [Rocking chairನಲ್ಲಿದ್ದು ಅವನ ಕಡೆಯೇ ತಿರುಗದೆ ಸುಬ್ಬುವಿನ ಕಡೆ ತಿರುಗಿ—freezingly]

Roomನಲ್ಲಿ ಒಬ್ಬ lady ಇದ್ದಾಳೆ ಅಂಬೋದ್ನ ಅವ್ರು forget ಮಾಡಿದ್ರೂ. ನೀವು remind ಮಾಡಿ!........

ಗಂಡ : Quite so!;........you see dear boy, there is a lady......

ನರಸಿಂಹಯ್ಯ : Yes! Yes! I know all about it.......ಕ್ಷಮಿಸ್ಬೇ ಸುಬ್ಬು. ಈ ಇಂಗ್ಲೀಷ್‌ಗೆಲ್ಲ ಬೆದ್ರೋನಲ್ಲ ನಾನು...... leave it to me ...... (turns to the lady) ಕ್ಷಮಿಸ್ಸಿ sister ನೀನು remember ಮಾಡ್ಕೋಬೇಕು that there is a gentleman and a real man in this room ; ಅಲ್ದೆ a real woman

…… a sweet consoler, confident and companion will be here in a minute **with** or **without** your permission (turning to door, aloud, to Kamalu) ಬಾರೇವ್ರೊಳಗೇ ………. ಎಷ್ಟೊತ್ತೇ ಅಲ್ಲಿ ನಿಂತಿರೋದು?

[Enter Narasimhayya's wife – Kamalu]

ಕಮಲು : ಅಲ್ಲ…ನೀವು…ಹೇಳಿದ್ರೀಂತ …… ?

ಅಮ್ಮಾವ್ರು : ನೋಡಿದ್ಯಾ ಕಮಲಾ? just like a brute! ನಿನ್ನ ಅಲ್ಲೇ ನಿಂತಿರೂಂತ ಹೇಳ್ಬಿಟ್ಟು ಯಾಕ್ನಿಂತೇ ಅಂತ ನಿನ್ನೇ ಬಯ್ಯುತ್ತೆ just like a manಉ …bruteoo …… puts the blame on the womanoo!!

ಗಂಡ : ನೋಡಿದ್ಯಾ dear boy!……..I told you……..!

ನರಸಿಂಹಯ್ಯ : **Shutt up!** If you have not the right spirit, I have! (to ಅಮ್ಮಾವ್ರು) ಏನ್ ನೀವು ಹೇಳಿದ್ದು ?

ಅಮ್ಮಾವ್ರು : ಇದೊಂದು peculiarity ಕಮಲಾ ………. ಗಂಡಸ್ರ brainಉ ……..ಕಿವೀಲಿ ಬಿದ್ದದ್ದು brainಗೆ ಸೇರೋ ಅಷ್ಟರಲ್ಲಿ ಮೂರ್ನಸರ್ತಿಯಾದ್ರೂ ಕಿರಲ್ಬೇಕು ಇದೇ man's wonderful brainಉ ಅನ್ನೋದು …….manಉ! the Lord of Creationಉ!!

ಗಂಡ : ನೋಡಿದ್ಯಾ dear boy! ……in cross-talkಉ ….. ! she is terribleಉ …….!

ನರಸಿಂಹಯ್ಯ : (With a wry face and hushed tone)

All right! All right ! I shall see that everything is alright!……

ಅಮ್ಮಾವ್ರು : Everything **is** alright!, everything ಅಲ್ಲ … almost everythingಉ there is one thing in this room that is not alright …… and that is yourself !

ನರಸಿಂಹಯ್ಯ : ಹ್ಯಾಗೆ ನಾನು alright ಅಲ್ಲ ? at least …. I don't want to speak to you …… ಸುಬ್ಬು …….I appeal to you …… I …… what is wrong with me …….?

ಗಂಡ : Wrong with you! .. ಏನೋಪ್ಪ. I mean . you see what I mean…!

ನರಸಿಂಹಯ್ಯ : I **don't** see what you meanಉ …. !

ಅಮ್ಮಾವ್ರು : Mean! I shall explain! ಇಲ್ನೋಡಿ ! ಆ ದೀಪ ತಗೊಂಬ್ಬನ್ನೀಂದ್ರೆ……

ಗಂಡ : Certainly dear!……

(ಹಾಗೆಯೇ ನಟಿಸುವನು)

ಅಮ್ಮಾವ್ರು : (ಕಮಲು ಮುಖವನ್ನು ಎತ್ತಿ ಹಿಡಿದು) ಈ ಪ್ರೇತದ ಮುಖ ನೋಡಿದ್ರಾ? ……ನನಗಿಂತ ಮೂರು ವರ್ಷ ಚಿಕ್ಕೋಳು……two classes higherಉ ……. ಓದಿದ್ದ ರತೀನ ಈ ಸ್ಥಿತೀಗೆ ತಂದಿಟ್ಟೀದೀರಲ್ಲ .. ……. !? 30 ವಯಸ್ಸು ಕೂಡ ಇಲ್ಲ……

ಆಗ್ಲೆ ಏಳು ಮಕ್ಳ ತಾಯಿ......ನಿಮ್ಮ ayah...ಕಸಾಗುಡ್ಸೋಳು...cookಉ......ಮೂರು ವರ್ಷದಿಂದ ಇದೇ ಸೀರೆ ಹರಕ್ಲು......ಸಂಬ್ಳ ನೆಲ್ಲ ನುಂಗೋದು ನೀವು......ದುಡಿಯೋಕೆ ಅವ್ಳು...?

ನರಸಿಂಹಯ್ಯ : My God!...... This is too much!

ಗಂಡ : I told you my dear boy......!

ಕಮಲು : ಛೆ! ಸುಮ್ನಿರು ಸರೋಜ ....ಏನ್ಹೇಳಿದ್ರೂ ಗಂಡಸ್ರು ಗಂಡಸ್ರೇ......

ಅಮ್ಮಾವ್ರು : **Shutt up!** ನಿನ್ನ ಗಂಡ ಹೇಳಿದ್ಹಾಗೇ......If you have not the right spirit, I have ....ಎಷ್ಟು ದಿನಾಂತ ತಡ್ಕೊಂಡಿರೋದು ನೀನು ಈ tyrannyನ......?

ಕಮಲು : ಏನೋ ಸರೋಜ! ಕೈ ಹಿಡಿದ್ಮೇಲೆ ತಪ್ಪಿಸ್ಕೊಳ್ಳೋದೆಲ್ಲಿ...?

ಅಮ್ಮಾವ್ರು : ಚೆನ್ನಾಗಿದೆ! ಕಸಾಬಾ ಕುರೀನ ಕೊಲ್ಲೋಕೆಳ್ಕೊಂಡ್ಹೋಗ್ತಿದ್ದಾಗ, ಅದ್ರ ಕೈಲಿ ಕತ್ತೀನ ಕೊಟ್ಟು, ಕುತ್ಗೆಗೆ ಕಟ್ಟಿರೋ ಹಗ್ಗಾನ ಕತ್ತರ್ಸ್ಕೊಂಡು free ಆಗಿ ಹೋಗು ಅಂದ್ರೆ ...."ಕಸಾಬನ ಕೈ ಹಿಡ್ದಿದ್ದೇನೆ"ಅಂತಂತೆ. ಆ ಕುರೀಗೂ ನಿನ್ಗೂ ಏನು ವ್ಯತ್ಯಾಸ ?

ಕಮಲು : ಈಗೇನು ಅಂಥಾ ಕತ್ತಿ ಕೊಟ್ಟಿರೋದು ನೀನು ನನ್ಕೈಲಿ ?

ಅಮ್ಮಾವ್ರು : ಕೊಡ್ತೇನೆ! ನಾಳೆ ಮೀಟಿಂಗ್ attend ಮಾಡು...ಇದೇ questionಉ ನಮ್ಮ association ನಲ್ಲಿ ನನ್ನ lectureಉ; "How to convert husband tyrants into home companions" subjectಉ ಬರ್ತೀಯಾ ? (ಕಮಲು hesitates) ಇಲ್ಲ ಹೆದರ್ಕೊಂಡು ಹಾಳಾಗ್ಹೋಗ್ತಿಯಾ? Remember for the sake of your childrenಉ, ಆ bruteನ ಒಂದು human being ಆಗಿ ಮಾಡಿ. ನಿನ್ನ ಮಕ್ಕಳಿಗೆ ಒಬ್ಬ fatherನ ಕೊಡೋದು ನಿನ್ನ duty ...... duty........ಬರ್ತೀಯಾ?

ನರಸಿಂಹಯ್ಯ : ನಿನ್ meeting........I mean ನಿಮ್ meetingಉ ....I mean hang it......**your** meetingಉ! **She shall not attend any of your meetingsಉ** ಸತ್ರೂ ಬರೋದಿಲ್ಲಾ. ನಿಮ್ meetingಗೇ! (to Kamalu) **ಏನೇ ?**

ಕಮಲು : ನೀವು ಹೇಳಿದ ಹಾಗೆ !

ನರಸಿಂಹಯ್ಯ : There is your answer for you...what do you say Subbu ?

ಗಂಡ : I won't say anything just yet, dear boy......

ಅಮ್ಮಾವ್ರು : But it is not **her** answerಉ......ಅವ್ಳ brutalise ಮಾಡಿದ horror ನ answer ನ voice ಮಾಡೋ gramaphone ನೇ ಹೊರ್ತು ಅವ್ಳು. ಅವಳೊಂದು free being ಆಗಿ ಹೇಳಿದ answer ಅಲ್ಲ ಅದು......you horrible husbands ಎಲ್ಲಾ ಹೀಗೇ......wifeಉ ಅಂದ್ರೆ...ನಿಮ್ಮ wifeಉ...ನಿಮ್ಮ wifeಉ ಅಂತ ಬಡ್ಕೋತೀರೇ ಹೊರ್ತು. ನೀವು ಮದ್ವೆ ಮಾಡ್ಕೊಂಡ body ಅಲ್ದೆ. ನೀವು ಮದ್ವೆ ಮಾಡ್ಕೊಳ್ಳದ ಒಂದು ......free beautiful independent soaring soul ......ನಿಮಗೆ ಹ್ಯಾಗೊಂದು soul ಇದೆಯೋ ಹಾಗೇ ಅವಳಿಗೂ ಇದೇ ಅಂತ ನಿಮಗೆಲ್ಲಿ ತೋಚುತ್ತೆ !?

ಕಮಲು : (Caressing and stroking Saroja's hand)

ಅಯ್ಯೋ ! ಸುಮ್ನಿರು ಸರೋಜ......

ಅಮ್ಮಾವ್ರು : (Excited, pushing K a m a l u away)

ಸುಮ್ನಿರು !? I won't ಸುಮ್ನಿರು...ಆ brute ನ...I mean...ನಿನ್ನ husband ನ...continued brutal treatment ನಿಂದ mind slavish ಆದಾಕ್ಷಣವೇ, ನನ್ನ mind ಊನೂ ಹಾಗೇಂತ ತಿಳ್ಕೊಂಡ್ಯಾ ?......I shall speak out my mind to this......this......what shall I call it......this THING ಉ !...

ನರಸಿಂಹಯ್ಯ : Thing ಊ ?......ನಾನು thing ಉ ?...ಸುಬ್ಬೂ.......what thing ಉ does she mean ಉ......?

ಗಂಡ : I can't say dear boy, what thing ಉ......but after all something ಉ ...—why ? Any thing ಉ is......is better ಉ...than ....**Nothing ಉ !**

ಅಮ್ಮಾವ್ರು : Nothing ಉ ? He is **less** than nothing ಉ.

ನರಸಿಂಹಯ್ಯ : Less than nothing ಉ ! Subbu !?

[Waves his hands and arms helplessly towards Subbu.]

ಗಂಡ : (Dispassionately and stroking)

I admit it dear boy............less than nothing ಉ is really too bad ಉ.

ನರಸಿಂಹಯ್ಯ : What does she mean ಉ ?

ಅಮ್ಮಾವ್ರು : ಅವರನ್ನೇನ್ಕೇಳ್ತೀರಾ......ನನ್ನ ಕೇಳಿ......I shall tell you what I mean ಉ......you......you...**ಮೊಸಳೆ**

ನರಸಿಂಹಯ್ಯ : **ಮೊಸಳೆ**...... I......Subbu !

[Subbu drops his hands helplessly and turns away]

ಅಮ್ಮಾವ್ರು : Brains ನಲ್ಲಿ, looks ನಲ್ಲಿ, heart ನಲ್ಲಿ ನನಗಿಂತ worlds ahead ಆಗಿರೋ ಇವಳ್ನ "ನೀವ್ ಹೇಳಿದ ಹಾಗೇ" ಅಂತ ಅನ್ನೋ ಸ್ಥಿತೀಗೆ ತಂದಿಟ್ಟೀಧೀರಲ್ಲಾ ! ನೀವು human being ಏ ?...Pig...pig...you are a pig...pig...ಪ್ಗಿಗೂ......

ನರಸಿಂಹಯ್ಯ : **Pig** ಉ...ನಾನು !......dear boy...this is to much ! ......Did you invite me and my honoured wife ಉ, to this house ಉ, to be insulted like this ಉ ?

ಅಮ್ಮಾವ್ರು : Invite you !......ಇನ್ನು ಸುಳ್ಳು ಬೇರೆ......self-invited ಉ ಅಂತ ಮೊದಲೇ ಹೇಳಿಧಾರೆ ನಿಮ್ಮನ್ನ !......

ಗಂಡ : ಅವಳು quite right ಉ...dear boy......ನೀನೇ ಹೇಳ್ಲಿಲ್ವೇ. "I will drop in at tea time" ಅಂತ......ಆ ಮೇಲೆ cocoa time ಅಂತ amend ಮಾಡ್ಲಿಲ್ವೆ ?......of course......between you and me, to remind you of that is uncharitable ಉ...

ನರಸಿಂಹಯ್ಯ : Granted......granted......granted :...... ...but is it charitable ಉ to call me a pig ಉ ? I understand **you** dear boy ! Women have no brainsಉ......no senseಉ......ಬರೀ bundle of nerves ಉ :......for instanceಉ......she calls me ! ..me !..a gentleman !......a pigಉ......the idea !!!! Subbu, do I look like a pigಉ ?

ಗುಂಡ : (Running his eyes over Narasimhayya ..cap-a-pie) ನಾನೇ think ಮಾಡಿ ಏನ್ ಪ್ರಯೋಜ್ನ ?......dear boy......opinions always differಊ ಆದ್ರೂ pig ಆದ್ರೆ ತಾನೇ ಏನು......ಮಹಾವಿಷ್ಣು ಕೂಡ...ಹಂದಿ......but I think......

ನರಸಿಂಹಯ್ಯ : It is nothing to me what you thinkಉ...but, I shall not have my wife...my sweet wife...contaminating herself in your house ! ಉ...ಇನ್ನೊಂದು ಕ್ಷಣ ನನ್ನ wifeಉ ಈ ಮನೇಲಿದ್ರೆ, ಅವಳ್ಗೂ ಈ horrible independent spiritಉ ಅಂಟ್ಕೊಂಡ್ ಬಿಟ್ಟೀತು !!...

ಅಮ್ಮಾವ್ರು : ಹುಂ ! **ಅದೇ** ಹೆದರ್ಕೆ ನಿಮ್ಗೆಲ್ಲಾ—ಈ independent spirit ಯಾವಾಗ, ನಿಮ್ಮ enslaved wivesಗೆ ಬರುತ್ತೋ ಆವಾಗ, ನಿಮ್ಮ tyrannyಗೆ ತುಂಡು ಬೀಳುತ್ತೇಂತ ಗೊತ್ತು ನಿಮ್ಗೆ...ಎಳಕೊಂಡ್ಹೋಗಿ !...I have done my best...ಅವ್ರ will hopelessly weak ಆದ್ಮೇಲೆ ನಾನೇನ್ಮಾಡೋಕಾಗುತ್ತೆ......ಆದ್ರೆ ವೊಂದ್ಮಾತ್ ಹೇಳ್ತೀನೆ...

ನರಸಿಂಹಯ್ಯ : ವೊಂದ್ಮಾತು !...dozenಗೆ ಇಪ್ಪತ್ತೆರಡು ಮಾತಾಡೋ ನಿಮ್ ಕೈಲಿ ವೊಂದು ಮಾತಾಡೋಕಾಗೋದಿಲ್ಲ......ಇದೆಲ್ಲ ಕೇಳ್ಕೊಂಡಿರೋಕೆ, ನಂಗೆ ಬಿಡ್ವು ಇಲ್ಲ...... ಕೇಳ್ಕೊಂಡಿರಬೇಕೂಂತ ನನ್ಹಣೇಲಿ ಬರೀಲೂ ಇಲ್ಲ.......ಆದ್ರೆ ನೀವಾಡೋ ಮಾತುಗಳನ್ನೆಲ್ಲ... ಹಗ್ಲೂ ರಾತ್ರಿ ಕೇಳ್ತಾ......manlinessನ ಮರೀತಾ, ನಿಮ್ ಕೈಲಿ ಸಿಕ್ಕಿದ, drivelling fool ಒಬ್ಬನಿದ್ದಾನಲ್ಲಾ......my poor witless...g u t l e s s friendಉ...though God knows I love him...ಅವನ್ಹತ್ರ finish ಮಾಡ್ಕೊಳ್ಳಿ...ನಿಮ್ಮ lectureನ...

ಅಮ್ಮಾವ್ರು : Shut up ! Beast ! ನೀವಿರೋ ಯೋಗ್ತೇಗೆ ಇವರ್ನ ಬೈಬೇಕೆ ?... He at least, is human !...whatever ; he is or is not, he doesn't spend all his honest earnings in his own luxuries...all his time in his club......leaving me...like you do your wifeಉ...hopeless and helpless to play ayah to your seven children and food-supplierಉ to that horrible ಬೊಜ್ಜೆ of yours !!

ನರಸಿಂಹಯ್ಯ : (Puts his hands over his stomach)

ಬೊ ಜ್ಜೆ !

ಅಮ್ಮಾವ್ರು : ನನಗೇನು ಗೊತ್ತಿಲ್ಲಾಂತ ತಿಳ್ಕೊಂಡ್ರಾ ನಿಮ್ ಚರಿತ್ರೆ ? ನಿಮ್ ಹಾಳು 500 ರೂಪಾಯಿ ಸಂಬ್ಳದಲ್ಲಿ ಒಂದ್ಕಾಸೂ ಕೂಡ ಮನೆ ಖರ್ಚಿಗೆ ಕೊಡ್ದೆ...clubನಲ್ಲಿ ಕುಡ್ದು ಬಿಟ್ಟು...wifeನ brutalise ಮಾಡೋ ನಿಮ್ಮನ್ನೋಡಿ...ಕೇರಿ ಕೇರೀನೂ ಕಿರೀತಿದೆ......ಹಲ್ಲು ಕಿರೀತಿದೆ......ಈ ನಿಮ್ಮ ಹಾಳು ಬೊಜ್ಜೇನ ಸಾಗ್ಸೋಕೆ carಉ !........Victoria !........ ಇನ್ನಿಷ್ಟು ಒಂದ್ಹೆಜ್ಜೆ ಹೊರಗ್ಹೋಗ್ಬೇಕೂಂದ್ರೆ........ಒಂದ್ಹೆಜ್ಜೆ ಕೂಡ ಇಲ್ಲ...ಛೂ !....

ಏಟ್ಕೊಂಡ್ಹೋಗಿ.......ಅವ್ರು road ಉದ್ದಕ್ಕೂ ಈ ಪರಕ್ಲು ಸೀರೇನೂ ಸುತ್ಕೊಂಡು. ಬರೀ ಕಾಲ್ನಲ್ಲಿ ನಡಕೊಂಡ್ಹೋಗೋದ್ನ ಊರೆಲ್ಲ ನೋಡಿ, ಪಶ್ಚಾತ್ತಾಪ ಪಟ್ಟು.......ನಿಮ್ಮನ್ ನೋಡಿ ......bruteಉ bruteಉ.......pigಉ pigಉ ಅಂತ ಉಗೀಲಿ !!....

ನರಸಿಂಹಯ್ಯ : (Swallowing a host of s e n t e n c e s, chokingly)

Look at my positionಉ dear boy !!....

ಅಮ್ಮಾವ್ರು : Your position...ಹೂ!...your position is outside this houseಉ......ನಿಮ್ಮ wifeಉ ಚೆಣಚಕಲ್ ರೋಡ್ ಮೇಲೆ ಬರೀ ಕಾಲಲ್ಲಿ walk ಮಾಡಿ bleed ಆಗೋ sole ನ ನೋಡಿ ಊರೆಲ್ಲ pity ಮಾಡೋವಾಗ ನಿಮಗ್ಗೊತ್ತಾಗತ್ತೆ ನಿಮ್ಮ possitionಉ !

ನರಸಿಂಹಯ್ಯ : ನನ್ wife ನಡ್ಯೋದಿಲ್ಲ.......my car ! my Victoria ! If I only had them here,...ಒಂದೊಂದ್ರ ಮೇಲೆ ಒಂದೊಂದ್ಕಾಲಿಡ್ಸಿ ಕರ್ಕೊಂಡ್ಹೋಗ್ತಿದ್ದೆ ......ನನ್ನ dear wife ನ. ನಿಂ ಕಣ್ಣೆದುರ್ಗೆ......If I only had them here !...... thank God ! ನನ್ನ brainsಉ ನನ್ನ desert ಮಾಡಿಲ್ಲ......a jutka !......Madam! ...ನನ್ನ ಈ situation ನಲ್ಲಿ. ನನ್ನ wife ಮೇಲೆ ನನಗಿರೋ...respectಉ, loveಉ, ನಿಮ್ಮ ಕಣ್ಣೆದುರ್ಗೆ ತೋರ್ಸೋ........conveniences ಈಗ ಇಲ್ದಿದ್ರೂನೂವೆ......ರಾಣಿ ......like a queen......queen ಏನು ?...Empress ಹಾಗೆ...ಅವಳ್ನ ಕರ್ಕೊಂಡ್ಹೋಗೋಕೆ ರಥ......I mean car......ಇಲ್ದಿದ್ರೂನೂವೆ........ಅವ್ರ sweet ಕಾಲು ....her beautiful ಪಾದ ನಮದ್ಹೋಗ್ದಾಂಗೆ ಒಂದು cheap......common or garden ಜಟ್ಕಾದಲ್ಲಾದ್ರೂ ಕೂಡಸ್ಕೊಂಡ್ಹೋಗ್ತೇನೆ......I shall **fly** for a jutka forthwith !......

ಅಮ್ಮಾವ್ರು : Fly ! ಹು !......ಆ ಮುಂಭಾರಾನಿಟ್ಕೊಂಡು walk ಮಾಡೋದ್ಕೂಡ impossible ಆಗಿರೋ ಆ impediment ಇರೋವಗ್ರೂ fly !...ಅಂತೆ...fly !... ಇಲ್ಲಿಂದ ಮಂದೂವರೆ ಮೈಲಿ ಜಟ್ಕಾ stand ಗೆ......ಅಲ್ಲೀಗೋಡ್ಹೋಗೋದ್ರಲ್ಲಿ ಕರಗ್ಹೋಗ್ಬಿಟ್ಟೀತು ......ಈ arrangementಉ......

ನರಸಿಂಹಯ್ಯ : Arrangement !...I...an arrangement !... Subbu !!......

ಗಂಡ : Arrangement is a good wordಉ dear boy !

ಅಮ್ಮಾವ್ರು : Brain-wave ಅಂದ್ರಲ್ಲಾ. : ನನ್ನ brain—wave ಸ್ವಲ್ಪ ಕೇಳಿ ......ನಮ್ಮನೆ ಮುಂದೆ road ಮೇಲೆ ಮಲಕ್ಕೊಂಡು roll ಮಾಡಿ......one and a half revolutionsಉ ನಿಮ್ಮನ್ನ ಉರುಳಿಸ್ಕೊಂಡ್ಹೋಗಿ ಬಿಟ್‌ಬಿಡುತ್ತೆ......jutka stand ಗೆ......circumference ಏನಾಯ್ತು ?......mathematics ನಿನ್ನ speciality ಅಲ್ವೆ ಕಮಲೂ ?...Nothing is useless in this world ಅಂತಾರಲ್ಲ. ಹಾಗೆ ನಿಮ್ಮ fattened battened ಬೊಜ್ಜೇನೂ justify ಮಾಡ್ಕೊಂಡು **ಅದಕ್ಕೂ** ಸ್ವಲ್ಪ ಉಪಯೋಗ ವಿಧೆ ಅಂಬೋದ್ನ ತೋರ್ಸಿ... !

[ಕಮಲುವಿನ ಕೈ ಹಿಡಿದು ಒಳಗೆ ಹೋಗುವಳು]

ನರಸಿಂಹಯ್ಯ : Good God! man! Is she personal do you think?... ಬೊಜ್ಜೆ or no ಬೊಜ್ಜೆ...I shall **run** for a jutka.

ಗಂಡ : Quite so ! dear boy ! ಆದ್ರೆ Tigerಉ ?

ನರಸಿಂಹಯ್ಯ : What do you mean tigerಉ ?...you mean **tigress**ಉ...ಕ್ಷಮ್ಸಿ...dear boy, ನಾನು ಈ tigressನ...I mean ಈಕೇನ... ತಪ್ಪಿಸ್ಕೊಂಡ್ಹೋಗೋ ದಾರೀನ ಹುಡುಕ್ತಿರೋವಾಗ, what do you mean **tiger**ಉ ?

ಗಂಡ : Just what I said dear boy !

ನರಸಿಂಹಯ್ಯ : (ಬೆದರಿ) What do you mean "what I said" ? ಏನು tiger ಅದು ? ನಿಮ್ಮ ಮನೇಲಿ ? !

ಗಂಡ : ಬೆದರಬೇಡ ! Dear boy ! Tigeroo is just the name of a dogoo ! ; but, a bulldogoo, which can easily kill a tigeroo !

ನರಸಿಂಹಯ್ಯ : Why is mere dogoo called...tigeroo ? !

ಗಂಡ : Obviously because this dogoo **behaves** like a tigeroo ! Seven feet jump ಮಾಡತ್ತೆ...at any body's throat ! Logic ನಲ್ಲಿ ನೀನು failoo—ನಿನ್ನ F.A., ಜ್ಞಾಪಕವೇ... ? ಇಲ್ಲ್ವೆ ! But coming back to tiger...!

ನರಸಿಂಹಯ್ಯ : (alarmed again) Good God ! ತಿರಿಗಿ tigeroo !?

ಗಂಡ : ಛೆ ! ಛೆ ! **I told** you...ಹೇಳಿದ್ನೆಲ್ಲಾ...ನಮ್ ನಾಯಿ...Bull–dog—double "B"—both capitals ಉ—ಅದರ್ಹೆಸ್ರು "Terror of cocks town" ಅಂತ—"cocks–town" is only a misnomer you know...ಆದ್ರೆ ಒಂದು ಕೋಳೀನೂ ಬಾಕೀ ಇಲ್ಲ ಈ ಕೇರೀಲಿ—It is free in the compound !

ನರಸಿಂಹಯ್ಯ : Why ? Is he dangerous ?...oh ! dogs and cats don't frighten me you know...I am not afraid of him.

ಗಂಡ : Perhaps not you of him, dear boy,...ಆದ್ರೆ ನನಗಿರೋ frightoo, **for** you...

ನರಸಿಂಹಯ್ಯ : ಯಾಕೇ ? Is he dangerous to man ?

ಗಂಡ : No ! No ! He is warmly attached to humanity...!

ನರಸಿಂಹಯ್ಯ : Good ! Good !

ಗಂಡ : Good of course...but unfortunately on the instalment planoo !

ನರಸಿಂಹಯ್ಯ : What do you mean "Instalment plan"?

ಗಂಡ : ಕ್ಷಮ್ಸಿ ? dear boy ! You see he has got a warm regard for humanity in generalಉ...in particularಉ...only to that piece of humanity which is nearest to his jawsಉ...Terrible jaws dear boy...double "T" !...both capitalsಉ !...

ನರಸಿಂಹಯ್ಯ : What am I to do between tigers and tigressesoo?

ಗಂಡ : ಕ್ಷಮ್ಸಿ ! dear boy ! of course there is my dog-cart...

ನರಸಿಂಹಯ್ಯ : Good God ! ತಿರ್ಗ್ಗ dogಉ... !

ಗಂಡ : Dog ಅಲ್ಲ...dog-cartoo...horse and carriage....you know ...what you sircar-walas, I mean, **c a r-w a l a s**, would call a two-seaterಉ...on single horse-powerಉ...not a developing but a tiring engine as you go along...Two seater ಅಂದ್ರೆ, ನೀನಾಯ್ತು, ನನ್ನ worthysister ಆಯ್ತು...can you manage to negotiate ribbons ?

ನರಸಿಂಹಯ್ಯ : Who is ribbons ? ಇನ್ನೊಂದು ನಾಯೀ ?

ಗಂಡ : No ! No ! reins ! ಲಗಾಮು you know...I mean, can you drive ?

ನರಸಿಂಹಯ್ಯ : Of course, I can...ಅನ್ನು !

ಗಂಡ : ಹಾಗಾದ್ರೆ, ಒಂದ್ ನಿಮಿಷ್ದಲ್ಲಿ harness ಮಾಡ್ಕೊಂಡು ತಂದ್‌ಬಿಡ್ತೇನೆ... but what about Tigerಉ ?

ನರಸಿಂಹಯ್ಯ : What do you mean tiger again ?

(running behind Subbu)

ಆ ಬಾಕ್ಲ ಹಾಕಿಧೀಯಾ, ಸುಬ್ಬು ?

(ಧೈರ್ಯವಾಗಿ ಮೊದಲಿದ್ದ ಜಾಗಕ್ಕೆ ಬರುತ್ತ)

Yes, I know...ನಾನೇ ಬರೋವಾಗ ಹಾಕ್ದೆ...What do you mean tiger, again !?

ಗಂಡ : ಕ್ಷಮ್ಸು ! dear boy ! to make a short story longಉ, ಈ brutesಗ್ಳಲ್ಲಿ ಕೂಡ...there is a sort of freemasonry..free ಏನು...brutesಗೆ ...bound-masonry...ನಮ್ಮನೇಲಿ four brutes ಇಧಾರೆ...four ಏ ?...three and a half or three and a quarter...I can't tell the proportion because, the littlest...bad grammar...dear boy, ಆದ್ರೆ best wordಉ occasionಗೆ (approaching the cradle) littlest of the four brutes, is getting bigger everyday...ನಾನು. Tigerಉ, horseಉ...ಈ bruteletಉ ...let ಏ ? Though I beat you in our B.A...Narasim...you went on your M.A...naturally of course...ಕ್ಷಮ್ಸು dear boy ! you know I love you ..ನಿನ್ನ English ಏ ಎಷ್ಟೇ ಆಗ್ಲಿ betterಉ...ನನಗೇನೋಪ್ಪ ! Adolfuss taught us better English than Denham did or Weir tried to do!... but coming back...brute dimunitive ಏನು ? brute-let ಏ...ಅಥವ brute-kin ಏ ? what is it ?

ನರಸಿಂಹಯ್ಯ : ಹುಶ್ಶೋ ! Hang the brutekin...talk about Tigeroo !...

ಅಮ್ಮಾವ್ರು : (ಒಳಗಿನಿಂದಲೇ ಥಟ್ಟನೆ)

Hang ! what do you mean **hang** the brute-kin ? ಯಾರನ್ನಂದದ್ದು? Brute-kin ಅಂತೆ ನನ್ನ baby ! ಈ ಮಾತ್ಗಾನ Tiger ಕಿವೀಲಿ ಬೀಳ್ಬೇಕಂತೆ ಕಿತ್ ಹಾಕ್ಬಿಡತ್ತೆ ನಿಮ್ಮನ್ನ !...ಛೂ ಬಿಡೀಂದ್ರೆ...ಮೈ ಉರ್ಕೊತ್ತೆ !!

ನರಸಿಂಹಯ್ಯ : My God ! ಕ್ಷಮ್ಸಿ ! I meant that beautiful sweet scion of your wonderful family ! ಕ್ಷಮ್ಸಿ ! ಸುಮ್ನೆ ! But come back to Tigeroo…!

ಗಂಡ : ನೋಡು ನರಸಿಂಹ್ ! Between us brutesoo…meaning. ನಾನು. Tigerಉ, ನಮ್ಮ horseಉ and this bruteletಉ ;…ನಾನು horseನ ನೋಡ್ಕೊಂಡ್ರೆ…tiger bruteletನ ;…ಇಲ್ಲ ನನ್ನ wifeಉ, dog-cartನ drive ಮಾಡ್ಕೊಂಡ್ಹೋದ್ರೆ…tigerಉ horseನ…ನಾನು bruteletನ :…ಹೀಗೆ ..a sort of brutal understanding between us ;…

ನರಸಿಂಹಯ್ಯ : ಈಗ…I want to go home…take my wife home…!

ಗಂಡ : Certainly, dear boy ! that is the pointಉ ನಾನು horseನ cartಗೆ hitch ಮಾಡೋವಾಗ. Tigerಉ bruteletನ ನೋಡ್ಕೊಳ್ಳೋಕೆ. ವಳಕ್ ಬಂದ್ಬಿಡುತ್ತೆ…and you not being also a bruteವೂ…ಈ…hate at first sight ಅಂತ ಕೇಳಿಧೀಯಾ ?…it is stranger then love at first sight… ಆ holocaustoo ವೊದಗೀತು ನಿನಗೇಂತ…!

ನರಸಿಂಹಯ್ಯ : Is this the way you show your hospitality ?

ಗಂಡ : No ! No ! hospitalily ಗೆ ?…cocoa is ready ! : but in showing you my hospitality…I don't want to convert my house into a hospitaloo !…you see my fear…ಇನ್ನು Ido-formoo .. C a r b o l i c o o…sticking-plasterಉ…lintಉ…nuisance you know .. ಮುಂದಕ್ಕೆ trip to cool and salubrious coonoorಉ etc…

ನರಸಿಂಹಯ್ಯ : Good God !

ಗಂಡ : ಹೆದರಬೇಡ dear boy ! ಇದಕ್ಕೆಲ್ಲ ಒಂದೇ ದಾರಿ…Now ! Where shall I put you away ?…ಎಲ್ಲಿ ಬಚ್ಚಿಡೋದು ನಿನ್ನ….ಆಂ !? Narasim. in your college days you were a good bat in cricket ಅಲ್ವೇ ? !

ನರಸಿಂಹಯ್ಯ : Yes! yes! I know I **was** a good bat ..why. even **now** I am a good bat…but what has **that** got to do with **this**?

ಗಂಡ: ಏನೂ ಇಲ್ಲ…ಹ್ಯಾಗಿದ್ರೂ good bat ನೀನು ..if you can only manage to hang by that roof like a good bat…ಅದಕ್ಕೆ ಏನೂ ತೊಂದ್ರೆ ತರ್ತೀನೆ…you see my pointಉ…ನಮ್ಮ Tiger ಕೂಡ ಅಷ್ಟೆತ್ರ ಹಾರ್ಲಾರ್ದು…

ನರಸಿಂಹಯ್ಯ : **Me! Hang!! By that roof !!! Are you mad?**

ಅಮ್ಮಾವ್ರು : (ಅಲ್ಲಿಗೆ ಒಳಗಿನಿಂದ ಬಂದು) What not? ನೀವೇ ಹೇಳ್ತಿದ್ರಲ್ಲ…'**I shall fly**' ಅಂತ……ಯಾಕಾಕ್ಕೊಡ್ದು ?…Fly up to the roof ! : only don't bring the roof down on my baby's cradle……

ನರಸಿಂಹಯ್ಯ : (ಕಿರಿಚುತ್ತ) **Woman!! you will drive me mad!!!**

ಅಮ್ಮಾವ್ರು : ಅಯ್ಯೋ! ನಾಯಿ ಟೇಪಾನಾಂದ್ರೆ... ಇವನ್ನ ಕಚ್‌ಬಿಟ್ಟು ಅದಕ್ಕ್ಯಾ ಹುಚ್ ಹಿಡಿದ್ಬಿಟ್ಟೀತು!...

ಕಮಲು : I Think you are all mad! Let me speak! Brain wavesoo ಅಂತ್ರಲ್ಲ! ನಿಮ್ಮ ಮನೇಲಿ collaroo chainoo ಇಲ್ದೆ ಸರೋಜ ನಿಮ್ಮ್ ನಾಯೀಗೇ ?

ಗಂಡ : Good Heavens! The very thing!...Fancy forgetting! (as he is rushing out) Narasim! dear boy! Now that you are on the throneಊ will you...**rule the worldoo** for a few minutesoo!! ?

ನರಸಿಂಹಯ್ಯ : ಸುಬ್ಬೂ ! close the door after you......dont forget... Tiger!...Before any thing else, chain ಮಾಡು ಅದ್ನ...(sottovoce) **ಈ cursed dogsನ ಯಾಕೆ create** ಮಾಡಿದ್ನೋ **ದೇವ್ರು**...!?

ಅಮ್ಮಾವ್ರು : ಯಾತಕ್ಕೆ ಹೇಳ್ಲಿ ?...**to protect people**ಉ...ನಿಮ್ಗೂ Tigerಗೂ ಇರೋ difference ಇಷ್ಟೆ!...Tigeroo ನಮ್ಮನೆ **out-siders** ಗೆಲ್ಲ **terroroo**...ನೀವು ನಿಮ್ಮನೆ **insiders**ಗೆಲ್ಲ **terroroo**...that's all the difference ಊ ..! ?

ನರಸಿಂಹಯ್ಯ : (Hysterically)

Go on! Go on!! what with you and your horrible husbandoo and Tigeroo...ಕಮಗೋಲಿನ್ಮಧ್ಯೆ ಸಿಕ್ಕೊಂಡು ಕಣ್ ಕಣ್ ಬಿಡ್ತಿರೋ ನನ್ನ... **go on ! go on !!**...ಲೇ ! ನೀನೂ **go on** ಏ ! ಲೇ ನೀನೂ **go on** ಏ ! !...ಊಂ ! ಆಕೆ ಕಮಲೆ ಸೇರ್ಕೊಂಡು, ನೀನೂ go on ಏ !...Subboo ! Have you chained that demon yet ? !

ಗಂಡ : (ನೇಪಥ್ಯ) Certainly dear boy !

ನರಸಿಂಹಯ್ಯ : *I shall not stop in this room for a minute*... **ನೀನ್ ಬೇಕಾದ್ರೆ ಇದ್ಕೋ**....

ಕಮಲು : ಹಯ್ಯೋ. ನಾನೇನೂ ಹೇಳ್ಲಿಲ್ಲಾಂದ್ರೇ !...

ನರಸಿಂಹಯ್ಯ : ಗೊತ್ತೆ ! ಉತ್ತೇ !! *Worst of educating womenoo*... *No respect for men at all* ! This is no place, for *me...a man*....

(Rushes out)

ಏನೋ ! *Man* ! ಕೇಳಿದ್ರಾ ಕಮಲೂ ! worst of education ಅಂತೆ for womenoo...proverb ಜ್ಞಾಪ್ಕವಿಲ್ವೇ ? "Ignorance is bliss where it is folly to be wise" ಅಂತ ? ನಾವು ignoranceನಲ್ಲಿ ಮುಳ್ಗಿರೋದು ಆ brutesಗೆ blissoo :...ನಾವು wise ಆಗೋ ಹಾಗೆ ನಮ್ಮನ್ನ educate ಮಾಡೋಕೆ chance ಕೊಡೋದು, ಅವರ folly ಅಂತೇ...ಕೇಳಿದ್ರಾ ?

ಕಮಲು : ಕೇಳಿದೆ...

ಅಮ್ಮಾವ್ರು : Serious ಆಗಿ ಕೇಳ್ತೀನಿ. ಕಮಲಾ ಇಷ್ಟೆಲ್ಲ ವಿಶ್ರಾಂತ ನೀನು ಹೀಗೆ suffer ಮಾಡ್ತಿರೋದು ?

ಕಮಲು : ಹ್ಯಾಗೆ suffer ಮಾಡ್ತಿರೋದು ?

ಅಮ್ಮಾವ್ರು : ನಿನ್ good looksಊ goneಊ ! ನಿನ್ನ hairಊ unkemptoo! ಇದೇನು ಈ ಹರಕ್ಲು ಸೀರೆ ? !

ಕಮಲು : ಹಯ್ಯೋ ! ಸರೋಜ ! ಇದೆಲ್ಲ ಗಮನಿಸೋಕೆ ಬಿಡ್ವಲ್ಲಿದೆ ನನ್ಗೆ ? ನನ್ಗೆ ತಾನೇ ಆಗ್ಲೀ...ಯಾವ motherಗೆ ತಾನೇ ಆಗ್ಲೀ, ಗಮನಿಸೋಕೆ, ಮನೇಲಿ ಮಕ್ಕಳಿರೋವಾಗ. ಸೀರೇನೂ ಜಡೇನೂ ಗಮನಿಸೋಕೆ ಬಿಡ್ವಲ್ಲಿದೇಮ್ಮಾ ?

ಅಮ್ಮಾವ್ರು : ಹಾಗಾದ್ರೆ ನಿನ್ನ ಏಳು ಮಕ್ಕಳ್ನ ಗಮನಿಸೋದೇನೇ ನಿನ್ನ life's workoo ...enjoymentoo ?...ಇದೇನೇ ನಿನ್ನ ambitionoo ! ?

ಕಮಲು : ಹೌದು ಸರೋಜ !...ನನ್ನ ಏಳುಮಕ್ಕಳೂ. ಮುಂದಕ್ಕೆ three of them fathersoo, four of them mothersoo worldನಲ್ಲಿ ಆಗ್ಬೇಕೂಂತೋದನ್ನ ಮರೀದೆ. ಹಗ್ಲೂ ರಾತ್ರಿ ಅದಕ್ಕವರನ್ನ ತಯಾರ್ಮಾಡೋದೇ ನನ್ನ life's ambitionoo ! ಈ ಗಲಾಟೇಲಿ. ...ಈ ನನ್ನ ವಯಸ್ನಲ್ಲಿ, ನನ್ ಸೀರೆ ಹರಕ್ಲೋ ಹೊಸ್ದೋ, ನನ್ನ ಬೈತಲೆ ನೆಟ್ಟಗೋ ಸೊಟ್ಗೋ ಇದೆಲ್ಲ ಗಮನಿಸೋಕೆ ಬಿಡ್ವಲ್ಲಿಧೆಯೇಮ್ಮಾ ? ಯಾಕೇ ? ನಿನ್ನ ambition ಏನೂ ? ನಿನ್ನ life's workoo ನಿನ್ನ enjoymentoo ಏನೂ ? ?

ಅಮ್ಮಾವ್ರು : ಏನು ? ನನ್ನ life's workಊ ! ನನ್ನ enjoymentಊ ! ನನ್ನ ambitionಊ ! ! ಹೀಗೆ ಕೇಳಿದ್ರೆ ಏನು ಹೇಳೋದು ಕಮಲಾ ? !

ಕಮಲು : ಏನೂ ಹೇಳೋದಕ್ಕಾಗೋದಿಲ್ಲ ನಿನ್ಕೈಲಿ ಗೊತ್ತು........ನಾನ್ಹೇಳ್ಲೆ ?

ಅಮ್ಮಾವ್ರು : ಹೇಳು ! ಹೇಳು !

ಕಮಲು : ಈಗ್ನೋಡು ಸರೋಜ ! ನಾವಿಬ್ರೂ collegeನಲ್ಲಿ friends ಆಗಿದ್ವಿ. ಇಬ್ರೂ ಮದ್ವೆ ಮಾಡ್ಕೊಂಡು ಬೇರ್ಬೇರೆ ಆಗ್ಹೋದಾಕ್ಷಣ್ವೇ......ನಿನ್ನಲ್ಲಿ ನನಗಿರೋ loveಊ... ...interestoo ಕಮ್ಮೀ ಆಗ್ತಾ ಬಂತೂಂತ ತಿಳ್ಕೊಂಡ್ಯಾ...ನಿನ್ನ careerನೆಲ್ಲ college daysನಲ್ಲಿ ನನ್ನ little baby sister ನ್ಹಾಗೆ, ಹ್ಯಾಗೆ ಗಮನಿಸ್ಕೊಳ್ತಿದ್ನೋ, ಹಾಗೇ ಈಗ್ಲೂನೂ ಗಮನಿಸ್ತಾಲೇ ಇದೇನೆ...ನಿನ್ನ meetingsoo....ನಿನ್ನ lecturesoo...ನಿನ್ನ articlesoo papersನಲ್ಲಿ ಬಂದ್ಬಿಟ್ರೆ ಓದ್ತಾಲೂ ಇಧೇನೆ...ಈಗ್ನೋಡು !...ಆಕೆ ಯಾರು ?

ಅಮ್ಮಾವ್ರು : ಯಾವಾಕೆ ?

ಕಮಲು : ನಿಮ್ಮ associationನಿಂದ resign ಮಾಡಿದ್ಳಲ್ಲ ಆಕೆ...ಆಕೆ brother ಕೂಡ ಎಲ್ಲೋ ಕೆಲಸ್ದಲ್ಲೂ ಇಧಾನೆ...small peculiar manಊ...

ಅಮ್ಮಾವ್ರು : Peculiarಊ ? ಹ್ಯಾಗೆ peculiarಊ ?

ಕಮಲು : ಹ್ಯಾಗೇ ? ನಮ್ಮ ರಾಮು ಇಧಾನೆ ನೋಡು......ನನ್ನ first boyನೇ... ಅವ್ನು ಓದೋದು fourth formಊ...ಓದೋದೇನು–strictly ಓದ್ತೇ ಇರೋದು–fourth formಊ...ಅವ್ನಿಗೆ booksoo ಅಂದ್ರೆ ಆಗೋದಿಲ್ಲ...ಅವ್ನ life's ambitionoo ಊರ್ನಲ್ಲಿರೋ Cinemaನ ಒಂದು filmoo ಬಿಡ್ದೇ ನೋಡೋದು...ಅವ್ನಿಗೆ ಯಾವ್ದಾದ್ರೂ ಅವನ್ಗಿಷ್ಟಗೊತ್ತೋ. ನನ್ನ ಎಳಕೊಂಡ್ಹೋಗಿ ಅದನ್ನ ತೋರ್ಸೋವರ್ಗೂ ಅವನ್ಗಿಷ್ಟಗೆ ಶಾಂತಿ ಇಲ್ಲ...ಅವನ film divinity...ದೊಡ್ಡ specks ಹಾಕ್ಕೊಂಡಿರೋ comedian ಒಬ್ಬ... ಹೆಸ್ರೇನೂ ? ! Harold Lloyd !!

ಅಮ್ಮಾವ್ರು : Harold Lloydoo ! ಅವನಲ್ಲಿ ಬಂದ ಇಷ್ಟೇ ?

ಕಮಲು : ಎಲ್ಲಿ ಬಂದ್ನೇನೂ ?—ಈ peculiar man ಇಧಾನಲ್ಲಾ **ಅವನ್ನೋಡಿದ್ರೆ** **....ಅವನ** ಜ್ಞಾಪ್ಕ ಬರುತ್ತೆ—ಆತನ sisterನೇ ನೀವೆಲ್ಲ ವದ್ದು ಓಡ್ಸಿದ್ದು ನಿಮ್ಮ association‌ನಿಂದ... ಯಾಕೇಂತ ಕೇಳೋದು ನಾನು...ಅವಳ್ನ resign ಮಾಡ್ಸಿದ್ದು ?

ಅಮ್ಮಾವ್ರು : Harold Lloyd ! ದೊಡ್ಡ spectacles ! ಓ ! I know the creature now ! **ಅದೇ ?** ಇಲ್ಬಂದಿತ್ತು ನಿನ್ನೆ on behalf of his sisteroo; ಅಬ್ಬ ! ಅದೂ **ಒಂದು ಗಂಡ್ಸೇ !**...spineless wormಉ...ಬೆನ್ಮೂಳೆ ಇಲ್ದ ಬಸವನ್ಹುಳು...ಆತನ sisterನೇ ? ಹೂಂ ! ಅವ್ಳ attitredeಊ Home ಬಿಟ್ಟು ಓಡ್ಹೋಗೀ...woman's responsibilities of wife-hood and mother-hoodನ **ತಪ್ಪಿಸ್ಕೊಂಡು ಕುಣಿ ದಾಡೋಕೆ !** ಅದೆಲ್ಲಿ ಸರಿಹೋಗುತ್ತೆ ನಮ್ಮ associationನಲ್ಲಿ ?...ನಾವು **ಈಗ** fight ಮಾಡ್ತಿರೋದು **ಮನೇಲಿದ್ಕೊಂಡು equal rights with h u s b a n d sನೂ a s s e r t ಮಾಡ್ಕೊಂಡು**, woman's responsibilities of wife-hood and mother-hoodನ shirk ಮಾಡ್ದೆ **ವಹಿಸ್ಕೊಳೋಕೆ !...**

ಕಮಲು : ವಹಿಸ್ಕೊಳ್ಳೋಕೋ, ನಡ್ಸೋಕೋ ? ಕೋಪಸ್ಕೋಬೇಡ...ನೀನು ನಿನ್ನ homeನಲ್ಲಿ ಇದ್ಕೊಂಡಿರೋದೇನೋ ಒಪ್ಕೊಂಡೆ equal rightsನ assert ಮಾಡ್ತಿರೋದ್ನ, more than ಒಪ್ಕೊಂಡೆ;...ಆದ್ರೆ wifehood and motherhood responsibilities ಅಂದ್ಯಲ್ಲಾ,...ಆ motherhoodನ ಜವಾಬ್ದಾರಿ ಏನೀಗ ವಹಿಸ್ತಿರೋದು ನೀನು... practical ಆಗಿ...?

ಅಮ್ಮಾವ್ರು : ವಹಿಸ್ದೆ ಏನಿರೋದು ಈಗ ? ಅಡಿಗೆ ನಾನೊಂದ್ಸರ್ತಿ ಇವ್ರೊಂದ್ಸರ್ತಿ... household workಉ. ನಾನೊಂದು workoo ಇವ್ರೊಂದು workoo...ಮಿಕ್ಕದ್ದೆಲ್ಲ ಹೀಗೇ !

ಕಮಲು : (interrupting) ನಾನ್ಹೇಳಿದ್ದು *motherhood* ಅಂದ್ಯಲ್ಲಾ, ಆ ಜವಾಬ್ದಾರಿ**....ಅದಕ್ಕೆ equal rights** ಎಲ್ಲಿಂದ ಬಂತು ?...rightsoo, qualificationsoo ನಿನಗಿರೋ ಹಾಗೆ ನಿನ್ನ husbandಗೆ ಎಲ್ಲಿದೇ ?

ಅಮ್ಮಾವ್ರು : (perplexed) motherhood! ಅಯ್ಯೋ ! ಇದೇನು quibbling-ಕಮಲೂ ?...after all motherhoodನ responsibility ಏನು ?...ಮಗು healthy ಆಗಿರೋದ್ನ ನೋಡ್ಕೋಬೇಕು...ಅದರ feedingಉ ಅದರ restoo...ಅದರ growthoo! fourಓ, fiveಓ, six yearsಓ, ನೋಡ್ಕೊಳ್ಳೋದು......ಆ ಮೇಲಿದ್ದೇ ಇದೆ ...... ಗಂಡ್ಸಾದ್ರೆ ಅಪ್ಪಾಯ್ತು ಅಪ್ನ master ಆಯ್ತು...ಅವನ ಸ್ಕೂಲು, ಅವನ collegeಉ, ಅವನ careerಉ, ಒಂದು suitable marriageಉ, suitable appointmentಉ ...ತೀರ್ತು !...ಹೆಣ್ಣಾದ್ರೆ. two more years at home...ಆ ಮೇಲೆ ಅವಳ ಸ್ಕೂಲು; ...ಮದ್ವೆ ; ಗಂಡ sensible ಆಗಿದ್ರೇ ಮುಂದಿನ education 2–3 ವರ್ಷ ...ಇಲ್ಲಾ. ಅವನು orthodox fool ಆಗಿದ್ರೆ, ಅದೂ ಇಲ್ಲ...ಇದ್ರ ಮೇಲೆ ಏನು respon-sibility motherhoodಗೇ ? Practical ಆಗಿ ಏನ್ಮಡಸ್ತೀಯಾಂತ ಸನ್ಹೇಳ್ತೀಯಲ್ಲಾ; ನನಗಿರೋದು ಒಂದು baby ..ಇನ್ನೂ "ಅಮ್ಮಾ, ಅಮ್ಮಾ" ಅಂತಾನೆ...ಅದಕ್ಮೇಲೆ ಒಂದ್ಮಾತೂ ಇಲ್ಲ...ಇನ್ನವನು ಕಿರ್ಚಿದಾಗ ಹಾಲು ಕೊಡೋಕೆ...ಅವ್ನು ಅತ್ತಾಗ ಬೊಂಬೆ ಆಡ್ಸೋಕೆ. ತೊಟ್ಲು ತೂಗೋಕೆ. ಆಯಾ ಇಟ್ಟಿದ್ದಾಳೆ. ಹಗ್ಲೂ ರಾತ್ರಿ...ಇನ್ನವನ amusementsಗೆ ಇವ್ರು, Tigerಉ...ಇದ್ದೇಇದಾರೆ ಕಮಲೂ ! ಬಂದೋರ್ಗ್ಳಾಲು ಕಚ್ಚೋಕೇಂತ ಬಾಯ್ಬಿಡೋ Tigerನ ಬಾಯಲ್ಲಿ ಕೈಯಿಡೋದೇ ಅವನಿಗಾನಂದ...ಅದಕ್ಸರ್ಯಾಗಿ ಆ brute ಓ ಮೊಣಕೈನವರ್ಗೂ baby

ಕೈನ ಬಾಯ್ಲಿಟ್ಕೊಂಡು ಕಣ್ ಕಣ್ ಬಿಡ್ತಾ ಸಿಂತಿರೋದೇ ಇವತ್ನಾನೂದ . ಈ ವಯಸ್ಸಿನಲ್ಲಿ ನಿನ್ನ public activitiesನಲ್ಲೇ ನಾನು absorb ಆಗಿರೋವಾಗ. ಅದಕ್ಕೆ ಹಾಲ್ಕೊಡೋದು. ಅದ್ರ ತೊಟ್ಲಾಡ್ಸೋದು. ಅದನ್ನ ಆಡಸ್ಕೊಳ್ಳೋದು.... ಇವನ್ನ ನಾನು ಮಾಡಿದ್ರೇನು . [illegible] ದ್ರೇನು...ಯಾರು ಮಾಡಿದ್ರೇನು ? ಈಗ ತಾನೇ ಏನು ಇನ್ನು six yearsಗೆ ತಾನೆ ಬಂದ ?... ಆಮೇಲೆ ಅವನಾಯ್ತು...ಅವನ teacherಉ...schoolಉ...etc....ಆಗ್ಹೋಯ್ತು ನನ್ನ motherhoodoo ? ; ಸದ್ಯಕ್ಕೆ at least...?

ಕಮಲು : ನೀನು ಏನು woman ಆಗಿ ಬೆಳದ್ರೂನು ಅಪ್ಪ ! how big and beautiful you are !! ಆದ್ರೂನೂ you are the same old baby ನಾನು nurse ಮಾಡೀ kiss ಮಾಡೀ...ನಿನ್ನ home workನಲ್ಲಿ ನಿನ್ನ್ಗೆ ಸಹಾಯ್ಮಾಡ್ತ same old baby !...ನಿನ್ನ public activitiesoo !! ಇಷ್ಟು lecture ಕೊಡ್ತೋ ನೀನು ಹೇಳೋ ಹಾಗೆ...motherhoodನ responsibilitiesoo ಅಂದ್ರೆ... ಮಗೂನ್ ಹೆರೋದು...ಅದು ಕಿರ್ಲೋವಾಗ ಹಾಲು ಕೊಡೋದು...ಅದನ್ನಾಮ್ಲೇಕೊಟ್ಟು ಆಯಾ ಹತ್ಗೋ ಕೊಂಡು ನಾಯಿ...ಬೆಳೆದ್ಮೇಲೆ...ಚಿತ್ರಪಂದ್ಮೇಲೆ book ಇಸ್ಕೊಂಡ್ಮೇಲೆ ಇಟ್ಕೊಂಡು ..ನಿನ್ನ ಕ್ಕೇಂತ ಪಾಠ ಹೇಳ್ಕೊಡೋ ಮೇಷ್ಟ್ರ ಬಿಟ್ಟು...ಮುಂದಕ್ಕಾ ಮಗೂನ ಹಣೇ ಬರಹ ಅದ್ರ ಕೈಲೇ !. ...ಅವನು thief ಆಗ್ತಾನೋ saint ಆಗ್ತಾನೋ. ಇದೆಲ್ಲ ನಿನ್ನ ಜವಾಬ್ದಾರಿ ಅಲ್ಲ ಅಲ್ವೆ! Brute ಆಗ್ತಾನೋ...ಇಲ್ಲ beautiful husbandoo...patient parentoo... decent citizenoo ಆಗ್ತಾನೋ. ಇದೆಲ್ಲ ನಿನ್ನ ಜವಾಬ್ದಾರಿ ಅಲ್ಲ ಅಲ್ವೇ ! ? ಮಗು ! ಸರೋಜಾ ! "ಅವ್ಮಾ, ಅವ್ಮಾ ಅನ್ನತ್ತೆ ನನ್ನ baby" ಅನ್ತೀಯಾ...ದಿವಸದ ಇಪ್ಪತ್ನಾಲ್ಕು ಘಂಟೇಲಿ ಹತ್ತು ಗಂಟೆ ಹೊತ್ತು ನಿದ್ದೆ ಮಾಡುತ್ತೋ ಏನೋ : ಮಿಕ್ಕ ಹದ್ನಾಲ್ಕು ಗಂಟೆ ಕಾಲ್ದಲ್ಲಿ, ನಿನ್ನ ಮುಖಾನ ಅರ್ಧ ಗಂಟೆ ಹೊತ್ತು ಕೂಡ ನೋಡೋದಿಲ್ಲ ಅದು ! ..ಅದಕ್ಕೆ "ಅನ್ಮಾ, ಅನ್ಮಾ" ಅಂತ ಹೇಳ್ಕೊಡೋಳು ನಿನ್ನ ಆಯಾ ..ಅದಕ್ಕೆ ಹಸಿವಾದಾಗ Bengers food ಓ...Mellin's foodಓ...Glaxoನೋ ಕೊಟ್ಟು ಹಸಿವೆ ತೀರಿಸ್ತಾಳೆ ನಿನ್ನ ಆಯಾ ! ಅದಕ್ಕೆ ಗೊಂಬೆ ತೋರ್ಸಿ ತೊಟ್ಲು ತೂಗಿ. ಮಲಗ್ಸೋಳು ನಿನ್ನ ಆಯ ! ..ಆಗಿರೋ ವಾಗ ಆ ಮಗು "ಅಮ್ಮಾ ಅಮ್ಮಾ" ಅನ್ನೋವಾಗೆಲ್ಲಾ ಆ ಆಯಾನ ಮುಖವ್ರೋ ಇಲ್ಲ ನಿಮ್ಮ ಮುಖವ್ರೋ ಅವನ ಚಿಕ್ಕ mindನಲ್ಲಿ ಹೊಳೆಯೋದು ? ಆದ baby mindನಲ್ಲಿ ನೀನು mother ಓ...ಇಲ್ಲಾ...ಆ ಸಂಬ್ಳಕ್ಕಿರೋ ಆ servant womanoo mother ಓ ಅಂತ ಕೇಳಿದ್ರೆ. ಆ little man in the making ವಿನ್ನೇಳೀತು.. ಇದಾದ ಮೇಲಾದ್ರೂ, ಹೀಗೆ ಆಯಾ ಕೈಲೀ ಅಂದ್ಮೇಲೆ ಆ ಮಗೂನ : ?...ನೀನು whole of Indiaನೇ ಮಹಾತ್ಮ Gandhi's non-violence policyನ ಹೊಗಳಿದ್ರೂನೂವೆ. ಯಾವ ಮಹಾ ತಾಯಿಯೋ ... ಆತ ಮಗು ಆಗಿದ್ದಾಗ "ಚೀಮೆಗಳನ್ನ ಕೊಲ್ಲಬಾರ್ದು"..."ನೊಣಗಳ್ನ ಹೊಡೀ ಬಾರ್ದು"..."ನಾಯಿ ಬೆಕ್ಕುಗಳನ್ನ ಒದೀಬಾರ್ದು"..."ಜನಾನ್ನ ಬೈಬಾರ್ದು" ಅಂಬೋದ್ನೆಲ್ಲ, ಪೊದ್ದೋ—ಮುದ್ದಿಟ್ಟೊ ಹೊಡ್ದೋ—ಬಡ್ಡೊ... ಬೈದೋ ಇಲ್ಲ ಬಾಚಿ ತಬ್ಕೊಂಡೋ...ಹ್ಯಾಗೋ, ಆ ಮಗೂ ಮನಸ್ನಲ್ಲಿ ಇಟ್ಟಿಟ್ಟೋ.. ಈ Mother India ಗೆ freedom ಬರೋಕೆ ದಾರಿ ಒಂದೇನ್ವೊಂದು "ಅಹಿಂಸಾ ಪರಮೋ ಧರ್ಮ" . ಅಂತ ಆತ proclaim ಮಾಡ್ತಿದ್ದಾನೆ ಪ್ರಪಂಚಕ್ಕೆಲ್ಲಾ . ಆತನ policy ಆತನ ತಾಯಿಂದ ಅಂತ ಎಲ್ಲೂ ಹೇಳಿದ್ರೂನೂ... ನಮಗೊತ್ತು ...womenಗೆ........early childhoodನಲ್ಲಿದ್ದ mother's influenceನಿ later manhoodನಲ್ಲಿ man's characteroo destiny ಅಂತ... ಇಲ್ಲೋದು ಸರೋಜ ! God gave you that child ! ಮುಂದೆ ಅವನು ಏನಾ ಗ್ತಾನೋ.. good manಓ bruteಓ...scoundrelಓ saintಓ...self-centered

pigಓ ಇ. self-sacrificing patriotಓ .... ಯಾವುದಾಗ್ತಾನೋ ಅದೆಲ್ಲ ನಿನ್ನ ಕೈಲೇ ಇಥೆ.. ಅಮ್ಮಾ ಅಮ್ಮಾ ಅನ್ನೋ ಈಗ್ನಿಂದ ಆ master ಕೈಲಿ educate ಮಾಡೋಕೆ ಕಳ್ಸೋ ಈ ಆರೇಳು ವರ್ಷದಲ್ಲಿ, ಇದಾಗ್ಲಿ ಇಲ್ಲಾ ಅದಾಗ್ಲಿ decide ಮಾಡೋ ಜವಾಬ್ದಾರಿ ಎಲ್ಲಾ ನಿನ್ನ ಕೈಲೇ ಇಥೆ...!!

ಅಮ್ಮಾವ್ರು: (suddenly looking up) ಎಲ್ಲ ನನ್ನ ಕೈಲೇ? ಹಾಗಾದ್ರೆ, Schoolsoo, collegesoo "ನಾವು ಮಾಡ್ತೇವೆ ಮಾಡ್ತೇವೆ" ಅಂಬೋ educationನ ಅರ್ಥವೇನು? What are schools and colleges for, but to educate children?...ಬೇರೇ ಏನು function ಅವುಗಳ್ಗೆ?

ಕಮಲು: To educate **pupils** of course...!

ಅಮ್ಮಾವ್ರು: (interrupting) ಮತ್ತಿಗ್ಗೆ ನೋಡು ನಿನ್ನ quibblingoo!?

ಕಮಲು: ಸ್ವಲ್ಪಿರು...quibblingಊ ಇಲ್ಲ. ಏನೂ ಇಲ್ಲ...... educate ಅಂದ್ರೇನು?—dictionary ಇಥೆಯೇ? derivation ನೋಡೋಣ—ಹುಂ...ಇಲ್ನೋಡು... '*E*' out.. '*Duco*'...to lead **to lead out**!... ಪೂರ್ವಜನ್ಮದ ಪ್ರಭಾವದಿಂದ್ಲೋ, ಗೋತ್ರದಿಂದ್ಲೋ...ರಕ್ತದಿಂದ್ಲೋ...ಇಲ್ಲಾ... ಅಮ್ಮಾ ಅಮ್ಮಾ ಅಂತ ಬಾಯ್ಬಿಟ್ಟಾಗ್ನಿಂದ ಸ್ಕೂಲಿಗ್ಬಂದ್ಸೇರೋವರ್ಗೂ, ನಾವ್ಹೇಳಿದ್ದಾಗ "ಸುಳ್ಳು ಹೇಳಬಾರ್ದು"..."ಸುತ್ತುಮುತ್ತ್ಲೂ ಇರೋರ್ನ ಓಂಪಿಸಬಾರದು"..."ಎಲ್ಲರಿಗೂ ಉಪಯೋಗವಾಗಿರಬೇಕು" ಅಂತ, **ಹೀಗೆಲ್ಲ ತಾಯಿ ಆದವಳು ವಳಗಿಳಿಸಿರೋ ಗುಣಗಳ್ನ, ಸ್ಕೂಲುಗ್ಳು ಕಾಲೇಜುಗ್ಳು, ಹೊರಕ್ಕೆಳ್ದು...ಸ್ಕೂಲಿಗೆ ಬಂದ್ಮೇಕ್ಳು college** ಬಿಟ್ಟು ಹೊರಗ್ಹೊರ್ಡೋವಾಗ, **ಮನೇಗೂ, ಸಮಾಜಕ್ಕೂ, ದೇಶಕ್ಕೂ** ಉಪಯೋಗಿಗ್ಳಾಗಿರೋ **ಹಾಗೆ ಮಾಡೋದೇ education**ಉ!...childhoodನಲ್ಲಿ neglect ಮಾಡಿ spoil ಮಾಡಿ...bundles of selfishness ಆದ ಮಕ್ಕಳ್ನ, ಸ್ಕೂಲ್ಗಿಗೆ ಕಳ್ಸಿದ್ರೆ, ...ಆ schoolsoo ಎಂಥಾ perfect system of educationನ adopt ಮಾಡಿದ್ರೆ ತಾನೇ ಏನು?: ಒಂದು ಚೊಂಬೂನೂ, ಒಂದು ಬಿಂದ್ಗೇನೂ ಬೀಳದ ಭಾವೀಲಿ ಎಂಥಾ ಪಾತಾಳ ಗರ್ಡೀನ ಹಾಕಿ ಎಳದ್ರೂನೂ ಹ್ಯಾಗೆ ಒಂದ್ಪಾತ್ರೇನೂ ಹೊರಬೀಳೋದಿಲ್ವೋ ಹಾಗೆ **ಮನೇಲಿ spoilt** ಆದ **ಈ ಮಕ್ಕಳ selfishness ಹೊರಬಿದ್ದೀತೇ ಹೊತ್ತುರ್ಕ...ಇಲ್ಲದ ಗುಣಾನ ಎಲ್ಲಿಂದ** ತಂದು **ಹೊರಗ್ಹಾಕ್ತಾರು,... mastersoo .... professors**ಉ?! ಪ್ರೊಟ್ಗಲ್ಲಿ ಹೇಳ್ತೀನ್ಕೇಳು. ಸರೋಜ!...**ನಮ್ಮ women**ನ **function** ಏನು... **ಹೆಂಗ್ಸಾಗ್ಹುಟ್ಟಿದ್ದಕ್ಕೆ?** ನಮ್ಮ instinct ಹೇಳತ್ತೆ ಇಲ್ಲಿ (touching her heart).. **mothers** ಆಗೋಕೆ ಅಂತ **therefore essentially wivesoo!**...ನಿನ್ನ people ಎಲ್ಲಾ intellectualoo.. richoo.. aristo-craticoo...ನಿನ್ನ motheroo ನಿನ್ನ schoolಗೆ ಕಳ್ಸಿದ್ದು brilliant careerಗೆ ......accomplishmentsಗೆ ಅಲ್ವೇ?........ನನ್ನ mother ನನ್ನ schoolಗೆ ಕಳ್ಸೋವಾಗ ಕೇಳ್ದೆ..."ನೀನು ಕಲಿಯದ ವಿದ್ಯೆ ನಾನು schoolನಲ್ಲಿ ಕಲ್ತು ನಿನಗಿಂತ ನಾನೇನು ಹೆಚ್ಚಾಗ್ತೀನಮ್ಮಾ"ಂತ ಕೇಳಿದ್ದಕ್ಕೆ. ನಮ್ಮಮ್ಮ..."ಕಮಲೂ. ನನಗಿಂತ ನೀನು ಹೆಚ್ಚಾಗಾಗ್ಲೇ ಆಗ್ತೀಯ. ನಾನೋ ಹೆಡ್ಡು...ನನಗಿಂತ್ಲೂ ಹೆಡ್ಡಾಗಿದ್ದ ನಮ್ಮಮ್ಮ. ನಿನ್ನ ಇಷ್ಟರವರೆಟ್ಟಿಗೆ ಬೆಳ್ಸೋ ಹಾಗೆ ನನ್ನ ಮಾಡಿದ್ಳಲ್ಲಿ. ನೀನು ವಿದ್ಯಾವಂತಳಾದ್ರೆ. ನಾನು ನಿನ್ನ ಬೆಳಸಿದ್ದಕ್ಕಿಂತ ಚನ್ನಾಗಿ ನೀನು ನಿನ್ಮಕ್ಕಳ್ನ ಬೆಳ್ಸೋ ಜ್ಞಾನ ನಿನ್ಗೆ ಬರುತ್ತೆ: ಇಷ್ಟುಂದಕ್ಕೆ ನೀನು ನಿನ್ಮಕ್ಕಳ್ನ ವಿದ್ಯೆಗೆ ಹಾಕಿದ್ರೆ ಅವ್ರು ಅವ್ರ ಮಕ್ಕಳ್ನ ನಿನಗಿಂತ್ಲೂ ಚನ್ನಾಗಿ ಸಾಕಿ ಬೆಳಸ್ತಾರೆ. ಅನ್ನೋ ಧೈರ್ಯದ ಮೇಲೆ, ನೀನು ಸ್ಕೂಲಿಗೆ ಹೋಗ್ಬೇಕೂಂತ ಕಳಿಸ್ತಿರೋದು ನಿನ್ನ" ಅಂತ ನಮ್ಮಮ್ಮ ನನ್ನ schoolಗೆ ಕಳ್ಸಿದ್ದು. ಅದ್ರಿಂದ್ಲೇ ಸರೋಜ! ನಾನು schoolನಲ್ಲಿ ಹೆಜ್ಜೆ ಇಟ್ಟಾಗಿನಿಂದ, "**I shall be a better**

mother to my children than my mother, who never went to school, was to me" ಅಂಬೋ idea ಮೊದ್ಲೇ ನನಗಿತ್ತೋ. **woman's education**ನ **purpose home**ಗೆ **supplement** ಮಾಡೋಕೇ ಹೊರ್ತು, **home**ನಿಂದ **alienate** ಮಾಡೋಕಲ್ಲ, ಅಂಬೋ ಅಭಿಪ್ರಾಯದ ಮೇಲೇ ನಾನು ನನ್ನ educationನ ಅಷ್ಟು ಆಸೆ ಯಿಂದ complete ಮಾಡಿದ್ದು.

ಅಮ್ಮಾವ್ರು: ಹಾಗಾದ್ರೆ...out-side the home, function ಇಲ್ವೆ womanಗೆ? ...educated womanಗೆ?...service to the world ಏನೂ ಇಲ್ವೆ?

ಕಮಲು : ಇದೆ! ಇಲ್ದೆಏನು !...ಆದ್ರೆ brutal fathers ಆಗಿಯೂ careless and frivolous mother ಆಗಿಯೂ ಆಗಿ, ಮುಂದೆ ಬರೋ ಅಪಾಯಕ್ಕೆ ಮನೆ ಮಕ್ಕಳನ್ನು ಗುರಿಮಾಡ್ಬಿಟ್ಟು, worldಗೆ ಮಾಡೋ serviceoo service ಅಲ್ಲಾ, **disservice**ಉ! **ಹೊರಗೆ** ನೀನು ನಿನ್ನ **meetings**ನಲ್ಲಿ "**ನಾನು educated Womanoo** ನನ್ಮಾತುಕೇಳಿ ...ನೀವೆಲ್ಲ ನನ್ನಹಾಗೆ **educated** ಆಗ್ಬೇಕು—ಮನೇಲಿ ಇದ್ಕೊಂಡು—**wifehood and motherhood responsibilities**ನ **shirk** ಮಾಡ್ದೆ ವಹಿಸ್ಕೊಂಡು···**dutiful wife** ಆಗಿಯೂ, **kind and wise mother** ಆಗ್ಯೂ ಇರ್ಬೇಕು... ಇದ್ನೆಲ್ಲ ತಪ್ಪಿಸ್ಕೊಂಡು— ಈಗ್ನೀನು **dismiss** ಮಾಡಿದ್ಯಲ್ಲ ಆ ಮೆಂಬರಿನ್ಹಾಗೆ—ಕುಣಿದಾಡ್ಬಾರ್ದು" ಅಂತ ಸಾರ್ತ್ತಿ ರೋದು, ಊರಲ್ಲೆಲ್ಲಾ ನೀನು ನಿನ್ನ **meeting**ನಲ್ಲಿ ..ಇಲ್ಲಿ ಮಕ್ಕಳು ಅಮ್ಮಾ ಅಮ್ಮಾಂದ್ರೆ ...ಆಯಾ...ಅಡ್ಸೋದು...**tigeroo**....ಅಣ್ಣಾ ಅಣ್ಣಾಂದ್ರೆ...ನಿನ್ನಾಯೀನ ನೋಡ್ಕೊಳ್ಳೋ ಹುಡ್ಗ...ಹೀಗೆ ಬೆಳ್ದು petted, selfish, spoilt child ಆಗಿ...schoolನಲ್ಲಿ snoboo prigಆಗಿ, brutal husbandoo, careless fatheroo,···dishonest citizenooಆಗಿ ಬೆಳೀತಿರೋದು ಇವನು! ಇನ್ನು ಮುಂದಕ್ಕೆ ನಿನ್ನ ಮುಪ್ಪಿನಲ್ಲಿ. ನೀನು ಈಗ ನಿಮ್ಮಗೂಗೆ ತೋರಿಸ್ತಿರೋ **criminal neglect**ನ ನಿನಗೆ **ಅವ್ನು** ತೋರ್ಸ್ಸಿ ನಿನ್ನ ಒಂದ್ಮೂಲೇಲಿ ಕುಕ್ಕರಿಸಿದಾಗ ನೀನು ಈಗ ಕುಣಿದಾಡ್ತಿರೊ **meetings**ನ **memory** ಒಂದೇ **consolation**ಊ ನಿಂಗೆ... ಸರೋಜ ! ನಾನ್ಹೇಳೋದ್ಕೇಳು···ಆ horrible ಆಯಾನ ಪದ್ದೋಡ್ಸು ಮೊದ್ಲು...ಅವ್ನು 'ಅಮ್ಮಾ ಅಮ್ಮಾ'ಂತ ಕಿರ್ಚೊವಾಗ್ಲೆಲ್ಲ ನಿನ್ನ ಮುಖಾನ್ತೋರ್ಸು...ಅವನು ಅತ್ತಾಗ ನೀನು ಹಾಲ್ಕೊಡು...ಹೊರಗ್ಹೋಗೋವಾಗ ಅವನ baby eyesನ daze ಮಾಡೋ blue sky··· golden sun···green trees ಇವುಗಳ್ನೆಲ್ಲಾ ನೀನು ತೋರ್ಸು !!

ಅಮ್ಮಾವ್ರು : ಸಾಕು ಕಮಲೂ ! ಸಾಕು !

ಕಮಲು : (putting her arm round Saroja)

ನಮ್ಮನೇಗ್ಬಾ ನಾಳೆ...babyನೂ ಕರ್ಕೊಂಡ್ಬಾ...ಬಿಸಿಲ್ನಲ್ಲಿ ಬೇಡ.. ಸಾಯಂಕಾಲನ್ಮೊತ್ತು ...Tigerನೂ ಕರ್ಕೊಂಡ್ಬಾ...ನಮ್ಮ ರಘೂಗೆ animals ಅಂದ್ರೆ ಅಂಜಿಕೆ...ನಿನ್ನ baby ಆ terror ಜೊತೇಲಿ ಆಡೋದನ್ನೋಡಿದ್ರೆ ಅವ್ನ fearoo ಹೋದೀತು.. ಬರ್ತೀಯಾ ?

ಅಮ್ಮಾವ್ರು : (Without looking up)

ಬರ್ತೇನೆ ಕಮಲೂ.

ಕಮಲು : ಹೌದು !? ನಾಳೇನೇ ಅಲ್ವೆ ಸಾಯಂಕಾಲ ನಿನ್ನ meetingoo ?

ಅಮ್ಮಾವ್ರು : ಅಯ್ಯೋ! ನನ್ನ meeting ಹಾಳಾಗ್ಹೋಗ್ಲಿ...... ಬರ್ತೇನೆ !: babyನೂ ಕರ್ಕೊಂಡು !...

ಕಮಲು : (draws Saroja's face to her breast and kissing her on the fore-head) ಅಂ ! ! ಈಗ ನೀನು woman ಉ...!

ನರಸಿಂಹಯ್ಯ : (Entering precipitately)

ಲೇ ! !

(ಕಮಲು stands up)

ಅಮ್ಮಾವ್ರು : ಲೇ ! ! ಯಾರನ್ನಂದದ್ದು...? I shall have no woman ...no lady who is my friend and guest, spoken to as...ಲೇ ! ನಾವೇನು **hens** ಅಂತ ತಿಳ್ಕೊಂಡ್ರಾ ?...Ladiesನ ಹ್ಯಾಗೆ address ಮಾಡ್ಬೇಕೂಂಬೋದನ್ನ, ಮೊದ್ಲು ಹೊರಗ್ಹೋಗಿ ಕಲ್ತ್ಕೊಂಡು ಆ ಮೇಲೆ ವಳಕ್ಬಂದು ಮಾತಾಡಿ...Till then...lay your bad manners else-where..."ಲೇ"ಂತೆ..."ಲೇ" !

ನರಸಿಂಹಯ್ಯ : ಅದಕ್ಕೆಲ್ಲ time ಇಲ್ಲ...Madam ! (sottovoce) never in my mortal life...ನನ್ನ mortal lifeನಲ್ಲಿ ಒಂದು ಕ್ಷಣಕೂಡ ಒಬ್ಬ ಹೆಂಗ್ಸಿಗೆ ಹೆದರ್ಕೊಂಡಿರ್ತೇನೇಂತ ನನ್ನ ಸ್ವಪ್ನದಲ್ಲಿಯೂ expect ಮಾಡಿಲ್ಲ...ಆದ್ರೆ ! necessityಗೆ ನೀತೀನೂ ಇಲ್ಲ ನ್ಯಾಯಾನೂ ಇಲ್ಲ ! It is only fear for my lifeಉ...ನನ್ನ ಪ್ರಾಣಕ್ಬಂದಿರೋ ಹಾನೀ ಈಗ ಒಬ್ಬ ಹೆಂಗ್ಸಿನ ಕಾಲಿಗೆ ಬೀಳೋ ಸ್ಥಿತೀಗೆ ತಂದಿಟ್ಟಿಧೆ...ಆದ್ರಿಂದ ಪ್ರಾರ್ಥಿಸ್ಕೋತೇನೆ,...in the meanwhile...God bless you madam ! ; but you know what I mean ! ! ನಿಮ್ಮ tigeroo...

ಕಮಲು : ಅಯ್ಯಯ್ಯೋ ! ನಾಯಿ ಕಿತ್ಕೊಂಡ್‌ಬಿಡ್ತೇ ? !

ನರಸಿಂಹಯ್ಯ : ಇನ್ನೂ ಇಲ್ಲಾ !...ಆದ್ರೆ....ಆ Hamletನ ಹಾಗೆ "To ಕಿತ್ಕೊಳ್ಳ್ಳಿ **or not to** ಕಿತ್ಕೊಳ್ಳ್ಳಿ" ಅಂತ ಎಗರಾಡ್ತಿಧೆ...ಆ horrible ನಾಯಿ...!

ಅಮ್ಮಾವ್ರು : ಆಗಬೇಕು .. ನನ್ನ babyನ b r u t e l e t ಅಂತ ಅಂದೋರ್ಗೆ... ಆಗ್ಬೇಕು...ಚನ್ನಾಗಾಗ್ಬೇಕು.. ನಿಮ್ಮ tiger questionಗೆ ಇಲ್ಲ್ಯಾರೂ answer ಕೊಡೋ ಹಾಗಿಲ್ಲ.

ನರಸಿಂಹಯ್ಯ : Madam !..ಅದಕ್ಕೆ answer ಕೇಳೋಕೆ ಬರ್ಲಿಲ್ಲ ನಾನು ;.... ಇನ್ನೊಂದು question ಕೇಳೋಕೆ ಬಂದೆ...ಆ ನಾಯಿ ಕುತ್ಗೇಗೆ ಕಟ್ಟಿರೋ ಆ ಸರಪಣಿ strengthoo ಅದರ ಕತ್ತಿನ ಶಕ್ತೀಗೆ commensurate ಆಗಿಧೆಯೋ ಅಂತ ಕೇಳೋಕ್ಬಂದೆ ...... ಲೇ...ಕ್ಷಮಿಸಿ...ಡಿ...ಲೇಡಿ !......you. another madam ! !.. ನೀನಾದ್ರೂ ಕೇಳೇ...ಆ ಸರಪಣಿ ಭದ್ರವಾಗಿದೆಯೋಂತ ?..ಅವನೋ...!

ಅಮ್ಮಾವ್ರು : Whom do you mean ಅವನೊ ?

ನರಸಿಂಹಯ್ಯ : I mean my beloved friendoo !—your unfortunate husbandಉ—poor Subbu the gutless, though God knows I love him!

ಅಮ್ಮಾವ್ರು : How dare your address my husband like that ? ...**He is a man...you are a worm...a bloated worm**...! !

ನರಸಿಂಹಯ್ಯ : ಪೊಪ್ಕೊಂಡೆ madam! ...apologiesಉ ! ನನಗೋ, ಈ roomನಲ್ಲಿ ನಮ್ಮ ಸನ್ನಿಧಾನ ಇರೋವರ್ಗೂ ಕಾಲಿಡೋಕೆ ಇಷ್ಟವಿಲ್ಲಾ...ತವ್ರ್ಯುಜ್ಯಾನ್ರೋ ಆ

ಕುದ್ರೇನ dog–cartಗೆ hitch ಮಾಡ್ತಿದ್ದಾರೆ......ಆ Tigerನ ನೋಡ್ಬೇಕ್ದೆ! ..... ಸರಪ್ಣೀಯೋ ಈಗ್ಲೋ ಆಗ್ಲೋ ಕಿತ್ಕೊಳ್ಳೋಹಾಗಿದೇ....!

ಕಮಲು : ಆ ನಾಯಿ ಹೆದರ್ಕೆ ಏನೂ ಇಲ್ವಂತ ಹೇಳೇ! ...ಇದು ನಿನ್ನ ಹೊಸ joke ಊ! ?

ಅಮ್ಮಾವ್ರು : ಆ ನಾಯಿ. ಕಿತ್ಕೊಳ್ಳೋದಿಲ್ಲ...ಒಂದ್ವೇಳೆ ಕಿತ್ಕೊಂಡ್ರೂನೂವೆ it does not like pork...ಅದಕ್ಕೆ ಹಂದೀ ಮಾಂಸ ಅಂದ್ರೆ ಹೇಸ್ಗೆ...ನೀವೇನು ಹೆದರ್ಬೇಡಿ... **you, a man, frightened of a dog!**

[Exit C]

ನರಸಿಂಹಯ್ಯ : ನಗೇ! ನಗೇ!! ಮುಚ್ಚಿಟ್ಕೋ ಅದ್ನ! ...ನಗು ನನ್ನ ಸ್ತ್ರೀಯನ್ನೋಡಿ! ...ಕಲಿತ್ಕೋ ಅವ್ಳ ವಿದ್ಯೆಗಳ್ನೆಲ್ಲ!.. ruin ಮಾಡು ನನ್ನ happy little homeನ!.. ಲೇ!...

ಅಮ್ಮಾವ್ರು : (Entering) What did you say ..ಲೇ! to a lady! ...say that again!...

ನರಸಿಂಹಯ್ಯ : ಕ್ಷಮಿಸಿ! Madam: 'ಲೇ'ಂತ ಹೇಳೇ'ದಿ'ಂತ ಹೇಳೋ ಅಷ್ಟ್ರಲ್ಲಿ ತಾವು ಧುಮುಕ್ಬಿಟ್ರಿ....ಕ್ಷಮಿಸಿ....ಲೇಡಿ!...ನಿಮ್ಮ dog safe ಅಂತಾ ಹೇಳಿದ್ರಲ್ಲಾ....ಅಷ್ಟು ಸಾಕು ನನಗೆ...I shall **efface** myself....ನಾನೂ ನನ್ನ wifeಊ ಮುಂದಿನ ಏಷ್ಟಗಳ್ನ ನಾವಿಬ್ರು **alone** ಆಗಿರೋವಾಗ ವಿಚಾರ ಮಾಡ್ಕೋತೇವೆ...

[Exit L]

ಅಮ್ಮಾವ್ರು : ಏನೋ ಕಮಲೂ! ನೀನೇನ್ಹೇಳಿದ್ರೂ. he is a horrible brute to you!

ಕಮಲು : ಇವರೇ! ಪಾಪ! ಇವರು baby, ಸರೋಜಾ!

ಅಮ್ಮಾವ್ರು : Baby! ನಿನ್ husband!! baby!!!

ಕಮಲು : ಹೌದು : ನಮ್ಮ ನಮ್ಮ **husband**ನ ನಾವು **understand** ಮಾಡ್ಕೊಂಡ್ರೋ, ಅವರು ನಮಗೆ **babies** ಅಲ್ದೆ ಬೇರೇನೂ ಅಲ್ಲ. ....understand ಮಾಡ್ಕೊಳ್ದೆ ಹೋದ್ರೋ ನಮ್ಮನ್ನ babies ಅಂತ ಬೆದರಸ್ತಾರೆ...ಇವರ್ನ brute ಅಂತೀಯಲ್ಲ ನೀನು...ನಮ್ಮನೇಲಿರೋ real bruteಉ ನನ್ನ ಕೊನೇವಾಗ... ಹುಟ್ಟಿ ಮಂಥತ್ತೀಂಗ್ಳು ಕೂಡ ಇಲ್ಲ... ಆ bruteletಓ brutekinಓ ಇಲ್ಲ ಆ little bruteಓ...."ಏನಾ! ಇಷ್ಟು ದೊಡ್ಡೋರು ದಿನವೆಲ್ಲ ದುಡ್ದು, ರಾತ್ರಿ ವಿಶ್ರಾಂತಿಗೇ ಅಂತ ಮಲಕ್ಕೊಂಡು ನಿದ್ದೆಮಾಡ್ತಿದ್ದಾರಲ್ಲ... ಮತ್ತಿರಿಗಿ ಬೆಳಕ್ಹರಿಯುತ್ಲೂನೂವೆ ದುಡ್ಯೋದಕ್ಕೆ ಏಳ್ಬೇಕಲ್ಲ...ಇವರ್ನ disturb ಮಾಡಬ್ಯಾರ್ದು" ಅಂತ ತೋಚತ್ತ್ಯೇ ಅವನಿಗೆ? ಮೂರು ಘಂಟೆ ರಾತ್ರಿಗೆ ಸರ್ಯಾಗಿ "ಕಿಟಾರ್" ಅಂತ ಒಂದೇ ಕಿರುಚ್ ಕಿರಚ್ತಾನೆ...ಥಟ್ಟನೆ ಅವನ್ಬಾಯ್ಗೆ ಹಾಲು ಹುಯ್ದು....ಅಷ್ಟಗೊಂಬೇನ ಅವನಮುಗ್ಗ್ ಅದಿಸ್ತಾ ತೂಗದ್ರೇನೇ ಪುನಃ ನಿದ್ದೆ ಹೋಗೋದು ಅವ್ನು....ನಮ್ಮ ಯಜಮಾನ್ರು ಅವನ **larger editionoo.** ಅವ್ರೇ! ...ಅವರಿಗೆ ಬೇಕಾದ ಉಪಚಾರಾನ ಪಡಗ್ನೋಪರೂ ಕಿರಚ್ತಾರೆ....ಪಡಗ್ಬಿಟ್ರೂ.. ಶಾಂತಿ!.. ಹೌದ್ಕೋ! ಸರೋಜ! married life ಏ ಹೀಗೆ... ಗಂಡ ಹೆಂಡ್ತೀಲಿ...ಇಬ್ಬರ್ಲಿ ಯಾರಾಗ್ಲಿ, ಒಬ್ಬರಿಗೆ ಮತ್ತೊಬ್ರು babyನೆ......! ನಮ್ಮನೇಲಿ ನಮ್ಮ ಯಜಮಾನ್ರು ನನಗೊಂದು **baby**....! ನಿಮ್ಮನೇಲಿ ನಿಮ್ಮ ಯಜಮಾನ್ರಿಗೆ ನೀನೊಂದು **baby!!**...

ಅಮ್ಮಾವ್ರು : ನಾನು ! baby !! ನಮ್ಮ ಯಜಮಾನ್ರಿಗೆ !!! baby !!!! The idea ! ನಮ್ಮ ಮನೇಲಿ equal rightsoo........ನನಗೂ ಇವರಿಗೂ !

ಕಮಲು : ಏನು equal rightsoo ?. ನಿಂಗೂ ನಿಮ್ಮ ಯಜಮಾನ್ರಿಗೂ ?...ನನ್ನ little baby ಅತ್ತಾಗ ಅದಕ್ಕೆ ಹಾಲು ...ನಮ್ಮನೆ ದೊಡ್ಡ baby ಕಿರ್ಲಿದಾಗ್ಲೆಲ್ಲಾ ಅದಕ್ಕೆ ಕಾಫಿ. ತಿಂಡಿ. ಊಟ...ಹೀಗೆ ಈ babies ಕಿರ್ಲೋದಕ್ಕೆಲ್ಲ ಸಮಾಧಾನ ಮಾಡ್ತಾ ಈ ಹರಕಲ್ ಸೀರೆ, ಕೆದರಿದ ಕೂದ್ಲು ಇಟ್ಕೊಂಡು ನನ್ನ ಸಂಸಾರಾನ ನಾನು ಹೇಗೆ ಜರುಗಿಸ್ತಿದ್ದೇನೆಯೋ, ಹಾಗೇ ನಿಮ್ಮನೇ ಚಿಕ್ಕ baby ಕಿರ್ಲಿದಾಗ್ಲೆಲ್ಲಾ ತೊಟ್ಲು ತೂಗ್ತಾ. Tiger ನ ಆಡಿಸ್ತಾ, ನಿಮ್ಮನೆ ದೊಡ್ಡ baby ಕಿರ್ಲಿದಾಗಲ್ಲ ಅದಕ್ಕೆ cocoa ಕಾಸ್ತಾ,....ಅದರ meeting ಗೂ, ಗಾಳಿ ಸವಾರೀಗೂ dog-cart ನ ಬಿಡಿಸ್ತಾ....ಅದರ dress ಗೆ ಬೇಕಾದ silk sarees, brooches, wrist-watch ಇವೆಲ್ಲ ಕೊಳ್ಳೋದಕ್ಕೆ ಬೇಕಾದ ದುಡ್ಡ ದಿನಾ ದುಡ್ದೂ ದುಡ್ದೂ ಒದಗಿಸ್ತಾ, ಹರಕಲಂಗಿ, ಕೆದರಿದ ಕೂದ್ಲು ಇಟ್ಕೊಂಡು ಆತನ ಸಂಸಾರ ಆತ ಜರುಗಿಸ್ತಿದ್ದಾರೆ....

ಅಮ್ಮಾವ್ರು : (bowed down......sinks on Kamalu's shoulder)

ಈ ಕಥೆ ಎಲ್ಲ answer ಅಲ್ಲ ನನ್ನ questionಗೆ ;....ನಾನು ಹೇಳಿದ್ದು, ನಿನ್ನ brute of a husbandoo...ನಿನ್ನ beautiful loving nature ನ appreciate ಮಾಡೋದಿಲ್ವಲ್ಲಾಂತ....!

ಕಮಲು : ಅದಕ್ಕೇನು ಮಾಡೋದು........ನಿಮ್ಮ ಯಜಮಾನ್ರು........beautiful loving nature ನ his wonder of a wifeಉ appreciate ಮಾಡ್ತಿದ್ದಾಳೆಯೇ ?... ಕೋಪಿಸ್ಕೋಬೇಡ baby ! ಇನ್ಮೇಲೆ appreciate ಮಾಡ್ತಾಳೆ ಅಲ್ವೆ ? (lifting up Saroja's face by the chin) ನಿಮ್ಮ ಯಜಮಾನ್ರು, strong, snow-clad mountain of patienceಉ....ಆದ್ರೆ ಎಂದೂ್ಗ ಮರೀಬೇಡ....ಆ mountain ಒಳ್ಗೆ **burning Volcano of love** ವೊಂದಿದೇ ಅಂತ.... ಈ ಹಾಳು **meetings** ಬಿಡು........ಆ **horrible ayah**ನ ಒದ್ದೋಡ್ಸು ....ದಿನಾ **baby**ನೂ **tiger**ನೂ ಕರ್ಕೊಂಡು ನಮ್ಮನೇಗ್ಬಾ........ನಿಮ್ಮೋರ್ನೂ ಕರ್ಕೊಂಡ್ಬಾ...ಹುಂ ?......ಹುಂ !....

ಅಮ್ಮಾವ್ರು : ಆಗ್ಲಿ ಕಮಲು........ಆದ್ರೆ ನಾನು ನಿಮ್ಮ ಯಜಮಾನ್ರನ್ನ ಏನೇನೋ ಅಂದದ್ದನ್ನೆಲ್ಲಾ....?

ಕಮಲು : ಅನ್ನು **Good for him**....ಇನ್ನೂ ಚನ್ನಾಗಿ ಅನ್ನು....ಒಳ್ಳೇದು : ಅರ್ಧ reason ನಿನ್ನ ನಮ್ಮನೇಗೆ ಕರದದ್ದು ಅದಕ್ಕೆ...ಇವ್ರು ಬರ್ತಾಬರ್ತಾ ಮಿತಿಮೀರ್ತಿದ್ದಾರೆ... **somebody must stop him for me**....ಮನೆ ಹುಡುಗ್ರು ಮಿತಿಮೀರಿದ್ರೆ ಬೆತ್ತ ತಗೊಂಡು ಚಾರ್ಸಿ ಅಡಗಿಸ್ಬೇಕು **ಅವರ್ನ**....ಹೆತ್ತೋರ್ಗೆ ಮನಸ್ಬಾರ್ದು....ಬಾಯಿ ಬರ್ದು ... ಕೈಬರ್ದು....ಅದಕ್ಕೆ ಹ್ಯಾಗೊಬ್ಬ teacher ನ ಇಟ್ಟು ನಮ್ಮಿಂದಾಗದ ಕೆಲ್ಸಾನ ಅವನ ಬಾಯಿಂದ್ಲೂ ಕೈಯಿಂದ್ಲೂ ಹ್ಯಾಗೆ ಮಾಡಿಸ್ತೇವೋ......ಹಾಗೇ. ನಮ್ಮನೇಲಿ ಇವರ್ನ ನಿನ್ನ ಬಾಯಿಂದ ಪರೋಕ್ಷ ಆಗದ ದಾರಿಗೆ ನಿನ್ನ ಬಾಯಿಂದ್ಲಾದ್ರೂ ತರಿಸಿದ್ರೇನೇ ನಮ್ಮನೇಗೆ peaceಉ !...ಅದಕ್ಕೇ, ನೀನೇನು spare ಮಾಡ್ಬೇಡ ಇವರ್ನ...

ಅಮ್ಮಾವ್ರು : (after a long pause) ಅಬ್ಬ ! ಏನು fool ಏ ನಾನು...ಕಮಲು ?

ಕಮಲು : Fool ಏ ? Not at all ! ಜ್ಞಾನ ಬರೋವರ್ಗೂ babiesoo fools ಏ ! ...ಬೆಳದ್ಮೇಲೆ wise mothers and fathersoo !.. ಈಗ ತಾನೆ ಆಗಿ ಯಾವಾಗತಾನೇ ಆಗ್ಲಿ...ನೀನು ನನಗಿಂತ ಎರಡ್ರಷ್ಟು ಬೆಳೆದ್ರೆ ತಾನೇ ಆಗ್ಲಿ ನನ್ನ baby...ನನಗಿಂತ ಎರಡು

class ಕೆಳಗೆ ಸೇರಿದಾಗ ನಿನ್ನ ತಪ್ಪನ್ನೆಲ್ಲ ತಿದ್ದಿ ನಿನ್ನ ಆ home-workನ ಹೇಗೆ ಮಾಡಿಸ್ತಿದ್ನೋ, ಹಾಗೇ. ಈಗ್ಲೂ ನಿನ್ನ ತಪ್ಪನ್ನೆಲ್ಲ ತಿದ್ದಿ (sweeping her arm gracefully round the room) ಈ home-workನ ಮಾಡ್ಸೋ. ನನಗೆ. babyನೇ! ಅದ್ರೆ ಬೆಳೆದ big baby !

[Kamalu puts her arm round Saroja]

ನರಸಿಂಹಯ್ಯ : (Entering)

Go on! Go on!!! ಮುದ್ದಾಡಿ!!!

[Kamalu and Saroja separate]

ಅಮ್ಮಾವ್ರು : **Hateful**...ನೀವಿರೋ roomನ airನ breathe ಮಾಡೋದು ಕೂಡ hateful...!

(Walking towards kitchen door C...sweeping her arm)

ಆ beautiful angelನ appreciate ಮಾಡೋಕೆ brain ಎಲ್ಲಿಥೆ?...heart ಎಲ್ಲಿಥೆ, ನಿಮ್ಗೆ?....**ಮಂಗನ್ಹಾಗಿರೋ ನಿಮ್ಮ ಕೈಲಿ, ದೇವ್ರು ಜ್ಞಾನತಪ್ಪಿದ್ದಾಗ ಕೊಟ್ಟ ಆ ಮಾಣಿಕ್ಯಾನ**... **appreciate** ಮಾಡೋಕೆ ಯೋಗ್ಯತೆ ಇಲ್ದಿದ್ರೂನೂವೆ...**brutalise ಮಾಡಿ...Beast!!!!**

[Exit]

ನರಸಿಂಹಯ್ಯ : ಕೇಳ್ದೀನೇ ?....

ಕಮುಲು ; ಕೇಳ್ದೆ.

ನರಸಿಂಹಯ್ಯ : ಮತ್ತಿನ್ನೂ ಬದ್ಕಿಥೀಯಲ್ಲೇ?....ಲೇ ನಿನ್ನ appreciate ಮಾಡೋದಿಲ್ವೇನೇ ನಾನೂ?....

ಕಮುಲು : ಮಾಡ್ದೆ ಏನು ?

ನರಸಿಂಹಯ್ಯ : (Strutting up to her and gesticulating wildly)

ಲೇ! ನಾನು ಮಂಗ್ನೇನೇ?....

ಕಮುಲು : ಅಯ್ಯೋ! ಅಲ್ಲವಲ್ಲಾಂದ್ರೆ !?

ನರಸಿಂಹಯ್ಯ : ಮಂಗನ್ಹಾಗಿದೆಯೇನೇ ನನ್ನ ಮೂತಿ!?

ಕಮುಲು : ಇಲ್ಲವಲ್ಲಾ !!

ನರಸಿಂಹಯ್ಯ : ಮತ್ತೆ ಹೇಳ್ತಾಳಲ್ಲೇ ಅವ್ಳು ! ನೀನೂ ಕೇಳ್ತಾ ನಿಂತಿಥೀಯಲ್ಲೇ! ..! ಲೇ!

(Putting his hands over her shoulders and shaking her well)

ನಿನ್ನ brutalise ಮಾಡ್ತೇನೇನೆ ನಾನು ?

ಕಮುಲು : ಅಯ್ಯೋ! ಇಲ್ಲವಲ್ಲಾ !

ನರಸಿಂಹಯ್ಯ : ಇನ್ನು ಕೇರಿಕೇರಿಯೆಲ್ಲ ಕಿರಲ್ತಿಥೀಯಂತನ್ನೇ? ಯಾಕೆ ಈ ಸ್ಥಿತಿಗೆ ತಂದಿಟ್ಟಿದ್ದು ನನ್ನ?....ಈ ಹರಕಲ್ ಸೀರೆ ಯಾಕೆ ಉಟ್ಕೊಂಡೀಯಾ ?

ಕಮುಲು : ಬೇರೆ ಸೀರೆ ಸದ್ಯ ಇಲ್ಲ ಅಂದರೆ!

ನರಸಿಂಹಯ್ಯ : ಯಾಕಿಲ್ಲ? ತಿಂಗ್ಳಿಗೆ 75 ರೂಪಾಯಿ ಕೊಟ್ಟಿದ್ದರಲ್ಲೆ ತಿಂಗ್ಳಿಗೆ ಒಂದೊಂದು ರೂಪಾಯಿಯಂತೆ ಎರಡೂವರೆ ವರ್ಷದಲ್ಲಿ ಮುವ್ವತ್ತು ರೂಪಾಯಿ ಮಿಗ್ಸಿದ್ದೇನೇ ಅಂತ ಹೇಳಿದ್ಯಲ್ಲ... ಏನ್ಮಾಡ್ದೆ ಅದನ್ನ ?

ಕಮಲು : ಕೆಂಚೂಗೊಂದು ಕಿರಿಗೆ ಕೊಂಡ್ಕೊಟ್ಟೆ...

ನರಸಿಂಹಯ್ಯ : ಅದನ್ನಿಕ್ಲೆ ಜೂಗಳಿ ಏನೇ ಪ್ರಯೋಜ್ನಾ?....ಈ ಹರಕಲ್ ಸೀರೆ ಕಟ್ಕೊಂಡು ಇಲ್ಲಿ ಬಂದು ಈ ಪಿಶಾಚಿ ಬಾಯಲ್ಲಿ ಬಿದ್ದು ಪೇಚಾಡೋ ಸ್ಥಿತೀಲಿ ನನ್ನ ಇಟ್ಬಿಟ್ಟು, **ಮುದ್ದಾಡ್ತಿದ್ದೀಯಲ್ಲೇ?!**...ಗಂಡನ್ನ ಬೈತಾಳಲ್ಲಾ ಅಂಬೋ ರೋಷ ಕೂಡ ಇಲ್ದೆ ಮುದ್ದಾಡ್ತಿದ್ದೀಯಲ್ಲೇ!...ಅದಿರ್ಲೀ! ನನ್ನ ಸಂಬ್ಳಾನೆಲ್ಲ ನಾನು clubಗೆ ತಗೊಂಡ್ಹೋಗಿ...ಏನ್ಹೇಳಿದ್ಲು ಅವ್ಳು?.... ಹೇಳು...ಹೇಳು....ನಿಜಾನ....ಹೇಳ್ತೀಯೋ ಇಲ್ವೋ?

ಕಮಲು : ನಿಜಾನೇ? ಕುಡಿದು ಕುಣಿದಾಡ್ತೀರಾಂತೇನೋ ಹೇಳಿದ್ಲು.

ನರಸಿಂಹಯ್ಯ : ಕುದ್ದು ಕುಣ್ದಾಡೋದು!...ಅಲ್ವೆ! ಅಷ್ಟಂತೂ ನಾಚ್ಕೆ-ಹೇಸ್ಗೆ ಇಲ್ದೆ ಬೊಗ್ಳಿದ್ರೆ...ಮರ್ಯಾದೆ ಇಲ್ದೆ ಅದನ್ನೇ ತಿರ್ಗಿ ಬೊಗುಳ್ತೀಯಲ್ಲೆ ನನ್ಹತ್ರ?...ಇನ್ನು ನನ್ನ wifeಏ ಹೀಗೆ start ಮಾಡ್ಬಿಟ್ರೇ horridಓ... h o r r i d o o ನನ್ನ positionoo!... ಅದಿರ್ಲಿ! ಈ ಬಾಬತ್ನ ಯಾರೇ ಅವ್ಳಿಗೆ ಹೇಳಿದ್ದು ? ನೀನ್ತಾನೇ ?

ಕಮಲು : ಅಯ್ಯೋ! ನೀವೇ ಹೇಳಿದ್ರಲ್ಲಿ! ನಿಮಗೆ ಬರೋ ಸಂಬ್ಳದಲ್ಲಿ 425 ರೂಪಾಯಿ ನೀವೇ ಇಟ್ಕೊಂಡು ಮಿಕ್ಕ 75 ರೂಪಾಯಿನಲ್ಲಿ ನನ್ನ ಸಂಸಾರಾನ ನಾನು ಜಾಣ್ತನವಾಗಿ ನಡಗಿಸ್ಕೋತೇನೆ ಅಂತ, ಅವಳ ಯಜ್ಮಾನ್ರ ಹತ್ರ... ನೀವೇ ಹೇಳ್ದೆ ಅಂತ, ಹೇಳಿದ್ರಲ್ಲಾಂದ್ರೆ!?

ನರಸಿಂಹಯ್ಯ : ಗೊತ್ತೂ! ಗೊತ್ತೂ! That gutless wormoo,—though God knows I love himoo—**ಅವನು** ಬೊಗ್ಳಿರ್ಬೇಕು! ಈಗ್ನೋಡು!....ನನ್ನ! ಈ ಪಿಶಾಚಿ ಆಗ್ಲಿ! ಈ ಊರ್ನಲ್ಲಿರೋ ಯಾವ ಪಿಶಾಚಿ ಆಗ್ಲಿ....ಊರು ಬಾಯಿಂದೆಲ್ಲ ಉಗಿಸ್ಕೊಳ್ಳೋ ಸ್ಥಿತೀನೇ ನೋಡ್ತಾ ಆನಂದ ಪಡ್ತಿರ್ತೀಯಾ? ಇಲ್ಲಾ...ಈ ಪ್ರಾಣಿ ನಿನ್ನ ಗಂಡ ಅಂಬೋದ್ನ ಜ್ಞಾಪಿಸ್ಕೊಂಡು, ಈ ಅವಸ್ಥೆಯಿಂದ relieve ಮಾಡೋಕೆ ಸಹಾಯಾನೇನಾದ್ರೂ ಮಾಡ್ತೀಯಾ... ಇಲ್ಲಾ. ನೋಡ್ತಾ ಕೊಂಡೋ, ಆ Tigerನ ಬಾಯ್ಲಿ ನನ್ನ ಕುತ್ಗೆ ಕೊಟ್ಬಿಟ್ಟೋ... ನಿನ್ನ ಕಣ್ಣೆದುರ್ಗೇ ನನ್ನ ಪ್ರಾಣಗ್ಳು ಬಿಡ್ಲಾ ?

(striking an attitude)

Think of your ತಾಳೀಯೇ! you horror! think of your ತಿರುಮಾಂಗಲ್ಯ! ನಿನ್ನ ನಂಬೀ. ಮದ್ವೇಲಿ ನಿನ್ನ ಕುತ್ಗೇಗೆ ಕಟ್ಟಿದ್ನಲ್ಲಾ, ಅದನ್ನ ಮರೀದೇ...ಕೊಡು answerನ...!

ಕಮಲು : ಹಯ್ಯಯ್ಯೋ! ಇದೇನಿದು ?...ಏನಾಗ್ಬೇಕೂಂದ್ರೆ ?...ನೀವು ಏನು ಹೇಳಿದ್ರೂ ಮಾಡ್ತೇನೆ!... ಏನಾಗ್ಬೇಕು....?

ನರಸಿಂಹಯ್ಯ : ಏನೂ ಇಲ್ಲ....**ಮೆರೀಬೇಕು**...ಈ ಪಿಶಾಚಿಗಳೆದುರ್ಗೆ ನಾನ್ಯಾರೇ ಮಹಾರಾಣೀ ಹಾಗೆ...**ಮೆರೀಬೇಕು**!...ನನ್ನ car ಇನ್ಮೇಲೆ ನಿಂದೆ ... ನನ್ನ victoriaನೂ ನಿಂದೆ ....500 ರೂಪಾಯಿನ ಪೀತಾಂಬ್ರ ಕಟ್ಕೊಂಡೂ...ಸ್ನಾನಮಾಡು...carನಲ್ಲೊಂದು ಕಾಲು Victoria ನಲ್ಲೊಂದು ಕಾಲು ಇಟ್ಕೊಂಡು. ನಿನ್ನ horrible battalion of babiesನ ಎರಡ್ಕಡೇಲೂ ತುಂಬ್ಕೊಂಡು ಬೀದಿ ಬೀದಿ ಉದ್ದಕ್ಕೂ ಪೀತಾಂಬ್ರ ಹಾಕ್ಬಿಟ್ಟು... ಅದರ್ಮೇಲೆ ಮೆರೀಬೇಕು ನೀನು!...ಹಗ್ಲೂ ರಾತ್ರಿ...ನನ್ನ ಸಂಬ್ಳಾನೆಲ್ಲ ನೀನೇ ಇಟ್ಕೋ...ಇಟ್ಕೊಂಡು ಒಂದ್ಕಾಸಿಲ್ದೆ ಖರ್ಚುಮಾಡಿ......ರತಿಹಾಗಿದ್ದ ಮುಖಾನ ಪ್ರೇತದ್ಹಾಗೆ ನಾನು ಮಾಡಿದ್ದೇನೇ ಅಂತ ಬೊಗಳ್ತಾಳಲ್ಲೆ ಈ ಪಿಶಾಚೀ...ತಿಂದೂ ತಿಂದೂ....ಕೊಬ್ಬೀ ಕೊಬ್ಬೀ...double ರತೀ

ಹಾಗಾಗ್ಬಿಟ್ಕೊಂಡು ನಿಮ್ಮಹಾಗ ಅಪ್ಪಿಗೆ ತೋರ್ಲಿ. ನಿಮ್ಗೆಗಿಷ್ಟ ಅವ್ರಮುಂಗೆ ತಾಕ್ಲಿ... 'ಈಗೇನು ಹೇಳ್ತೀಯಪ್ಪಾ'ಂತ ಅವಳ್ನ ನಾನು ಕೇಳೋಕ್ಕೂ ತೀಗೆ ತಂದಿಟ್ಟೇನು ನನ್ನ... ಇದು ನನ್ನ departmentoo! ನಂದೋ (ticking off with his fingers) thingoo! brute ಉ ಮೊಸ! pigoo! ಮೊಜ್ಜೆ!...ಮೊಜ್ಜೆ...ಪಸು personalು ಆ ...!...ಅದಕ್ಕೋ ಷೇಂದು ಗಾಡೀನೂ ಪತ್ತದೇ. ನನ್ನ carನ ಮುಂದಾನೂ ನೋಡ್ದೆ...Officeನೂ ಮನೆಗೂ ಓಡ್ಯಾಡಾದ್ರೂನೂ, ನನ್ನ ಜೊತ್ತೇನ ಕರಗಿಸ್ಕೊಂಡು. ಕೈಲಾಸ್ ಹಾಗೆ ಅವಳೀನಾಗ್ಲಿ ಒಪ್ಪಿದ್ರೆ ನನ್ಗೆ ಕಟ್ರ "ಹುಲಿಯೂರು ನರಸಿಂಹಯ್ಯ್ನೇ" ಅಲ್ಲ!...ಇದಕ್ಕೆ ಏನಂತೀಯೋ?...

ಕಮಲು : ನಿಮ್ಮಿಷ್ಟ ಹ್ಯಾಗೋ ಹಾಗೆ...ಅಂದ್ರೆ!

ನರಸಿಂಹಯ್ಯ : God bless you...ನಿನ್ನ co-operationಗೆ God bless you !

ಗಂಡ : (E n t e r i n g)

Narasim ! dear boy!

(D r a w i n g b a c k)

ಕ್ಷಮ್ಸು ! intrude ಮಾಡ್ತೇನೇಂತ ಗೊತ್ತಿರ್ಲಿಲ್ಲ!...

ನರಸಿಂಹಯ್ಯ : Come in!...Is everything for our escape from this house of ಪಿಶಾಚೀಸ್, ready...?

ಗಂಡ : ಕ್ಷಮ್ಸು. Dear boy! ನಮ್ಮನೆ ಹೆಸ್ರು, home of ಪಿಶಾಚೀಸ್ ಅಲ್ಲ... "Home of peaceಉ"..."ಶಾಂತಿ ನಿವಾಸ"...!

ನರಸಿಂಹಯ್ಯ : You mean, home of piecesoo?...you, a man gone to pieces...your child, a piece of a bruteಉ......and your worst-halfoo a piece of a....a...ಉಂ ! ಛ್ಯಾ! **dash** your "ಶಾಂತಿ ನಿವಾಸ" ...we want to go home...!

ಗಂಡ : Certainly dear boy! ಮನೆಗ್ಹೋಗು ..but don't dash my "ಶಾಂತಿ ನಿವಾಸ" before my worthy sisteroo...!

ನರಸಿಂಹಯ್ಯ : Oh! **dash it all**...**I mean** ..**Bless you** ..the whole lot of you...**but you know what I mean!** ..ಈ ಮನೇಲಿ ನೀವೆಲ್ರೂ ಸಂತೋಷ ವಾಗಿ ಹಾಳಾಗ್ಹೋಗಿ.......I mean. ಸಂತೋಷವಾಗಿರಿ ಯಾವ ಶನಿ ಮುಟ್ಕೊಂಡಿತ್ತೋ ...ನಿನ್ನ ನಿನ್ನ meet ಮಾಡ್ದೆ...ಪಾದೀಲಿ ಹಾಯಾಗಿ ಹೋಗ್ತಿದ್ದೋನು ಮತಿಗೆಟ್ಟು ನಾರೀಮನೆಗೆ ಹೊಕ್ಕಾಗ್ಲೆ....ಇಲ್ಬಂದು...ನನ್ನ sweet wifeನೂ ಕರ್ಕೊಂಡು ಬಂದು... ನಿಮ್ಮನೇ presiding ಪಿಶಾಚಿ ಬಾಯ್ಲಿ ಹೈಕ್ಕೊಂಡು ..ನಿಮ್ಮ Tigerಗೆ ಚಪರ್ಕೊಂಡು.. ಯಾಕೆ ಬಂದ್ನೋ ಕಾಣೆ...ಕ್ಷಮ್ಸು dear boy! you know I love you!....ನಿನ್ನೋ ...ನಿಮ್ಮನೇ brutesಓ...ನಿನ್ನ bruteletಓ....ಇನ್ನು ಮಹಾತಾಯಿ. ಆ ಮಾರಮ್ಮ—to describe her at her mildest—ಅಕ್ಕನೋ...ನಿನ್ನ cocoa timeಓ...ನೀವೆಲ್ರೂ ಹಾಳಾಗ್ಹೋಗಿ...(to Kamalu) ಬಾರೇ!.. ನಡ್ರೀ!.. ಬಾ!... (suddenly cooling) ಹೌದು. dear boy! what about the dog-cart ?...and the Tiger **chained up, I suppose ?...**

ಗಂಡ : Certainly Narasim! one m o m e n t! (walking up to back door C) ನಮ್ಮ worthy visitorsoo depart ಮಾಡ್ತಿದ್ದಾರೆ!...dear..!

ಅಮ್ಮಾವ್ರು : (From within) ಇದೋ ಬಂದೆ...(entering) ಇದೇನು ?

ನರಸಿಂಹಯ್ಯ : ಏನೇನು ?

ಅಮ್ಮಾವ್ರು : ಅಲ್ಲಾ!, ಕೈ ಹಿಡಿದ ಕಾಲೀನ, ಕುತ್ಗೇಗೆ ಹಗ್ಗ ಹಾಕಿ ಎಳ್ಕೊಂಡ್ಹೋಗೋದು ಬಿಟ್ಬಿಟ್ಟು...... ಭುಜದ್ಮೇಲೆ arm ಹಾಕ್ಕೊಂಡು lead ಮಾಡ್ತಾ ಹೋಗ್ತಿದ್ದೀರಾ?. ಇದೇನ್ಪಂತು **sudden spasm of affectionoo ?!**

ನರಸಿಂಹಯ್ಯ : Sudden spasm of affection ಅಲ್ಲಾ, madam! Long-standing, deep, deep, sincere, fervent, soul-stirring **ocean** of abysmal loveಉ...sudden spasm of affection ಅಂತೆ ? ಏನೇ ?

ಕಮಲು : ನೀವು ಹೇಳಿದ್ದೇ !!...

ನರಸಿಂಹಯ್ಯ ಕೇಳಿಪ್ರಾ Madam! ನಾನು ಹೇಳ್ತೀನಿ!. ..ಏನೋ ನನ್ನ lifeಉ ..ನನ್ನ studiesoo...ನನ್ನ public activitiesoo...ನನ್ನ service to **my** country... ಇನ್ನು ಅವ್ಳ household worriesoo ..the care of **her** childrenoo...I should say **our** childrenoo...our little angels,–brutelets ಅಲ್ಲ– Madam! angeletsoo...ಇವುಗ್ಳ ಗಲಭೇಲಿ ನಮ್ಮ ಪರಸ್ಪರ ಪ್ರೇಮದ ಮಧ್ಯೆ ಮಂಜು ಬಿದ್ಹಾಗೆ ಇದ್ರೂನೂವೆ...ಇವತ್ತು ಗ್ರಹಚಾರವಶಾತ್.. ನಿಮ್ಮಾ ಶನಿ ಕೊಂಪೇಗೆ accidental ಆಗಿ ಬಂದು....ನಿಮ್ಮ heartless treatment of your husbandನೂ. ಅವನ gutless submisson to your ಪಿಶಾಚಿ selfನೂ,—though God knows I love him—, ಬಂದೋರ ಬಾಯಿ ಮುಚ್ಸೋ ಹಾಲಾಹಲದ್ಹಾಗಿರೋ ನಿಮ್ಮ ಈ ಮಹಿಮೇನೂ ಗಮನಿಸಿದ್ವರ ಮೇಲೆ...ಆ ಮಂಜು ಎದ್ಹೋಗಿ....ನನಗೆ ನನ್ನೀ ರಾಣಿ ಮೇಲೆ....ಅಲ್ಲ!....ನನ್ನ ರಾಣೀಗೆ ನನ್ನ ಮೇಲೆ...(drawing Kamalu to himself)....I am not ashamed to admit it!

ಕಮಲು : ಅಯ್ಯೋ! ಇದೇನೊಂದ್ರೆ ಆಭಾಸಾ...?

ನರಸಿಂಹಯ್ಯ : **Your** ಆಭಾಸಾ **be dashed**! ಪ್ರಪಂಚ ಎಲ್ಲಾ ನೋಡ್ಲಿ.... ಕೇಳ್ಲೀ....ನನಗೆ ನನ್ನೀ ರಾಣಿ...ರಾಣಿ **be dashed** ...ಈ ಚಕ್ರವರ್ತಿನಿ.... ಚಕ್ರವರ್ತಿನಿ be dashed... goddess....no! ದೇವಿ ...that is right...ದೇವಿ ಮೇಲೆ. ಮದುವೆ ಆದಾಗ್ಲೆ ಇದ್ದ ಮಮತೆ...loveಉ madam....real loveಉ,....ಮೇಲೆ ಹೇಳಿದ afore-said ಮಂಜು ಎದ್ಹೋಗಿ ಆಕಾಶ್ದಲ್ಲಿ ಪ್ರಕಾಶಿಸ್ತಿರೋ ಸೂರ್ಯನ್ಹಾಗೆ ಧಗ ಧಗ ಧಗಾಂತ ಉರೀತಿದೆ madam! ನಮ್ಮಿಬ್ರ ಹೃದಯಗ್ಳಲ್ಲೂ....ಉರೀತಿಧೆ!....ಏನೇ ?....

ಕಮಲು: ನೀವು ಹೇಳಿದ್ದೇ....!

ನರಸಿಂಹಯ್ಯ : ನಮ್ಮಿಬ್ರ ಸಂತೋಷ್ದಲ್ಲಿ bad blood ಯಾಕೆ, ನಮ್ಮಲ್ಲಿ ನಿಮ್ಮಲ್ಲಿ ಜಗ್ಳ ಯಾಕೆ....ನೀವು ನಮ್ಮಿಬ್ರಿಗೂ ಮಾಡಿದ ಅಪಮಾನಾನ ನಾವು ಮನ್ನಿಸಿದ್ದೇವೆ ಅಂತೋದಕ್ಕೆ ಸೂಚಕವಾಗಿ....ಮತ್ತೂ, ನಮ್ಮಿಬ್ರ loving partner–shipನ study ಮಾಡ್ಬಿಟ್ಟು, ನನ್ನ dear friendoo ತಾವೂ.....ನಿಮ್ಮ connubial relationsನ improve ಮಾಡ್ಕೊಳ್ಳೋಕೂ.....ನಾನು, on behalf of my wifeಉ....ದೇವಿ ....ನಾಳೆ tea-timeಗೆ invite ಮಾಡ್ತೇನೆ....ಅಲ್ಲ....ಮಾಡ್ತೇವೆ....ತಮ್ಮನ್ನೂ ನನ್ನ poor beloved

but gutless brotherನೂ! ನಮಸ್ಕಾರ. ಆಶೀರ್ವಾದ... ಪೇಸ್ಟ್ರೀಕಾರ್ಡೂ, ಇಟ್ಕೊಳ್ಳಿ....ನಾವು ಬರ್ತೀವೆ....!

ಕಮಲು : (Over Narasimhayya's shoulders whispering)

ನಾನ್ಹೇಳ್ಲಿಲ್ವೇ! Baby! Big baby! (aloud) ನಾಳೆ ಬಾ ನಿನ್ನ babyನ ಎತ್ಕೊಂಡು ....ನಿನ್ನ big babyನೂ Tigerನೂ ಕರ್ಕೊಂಡು,....ಬಾ...

ಅಮ್ಮಾವ್ರು : (Nods)

ಗಂಡ : ಕ್ಷಮ್ಸು! Dear boy! Cocoa!

ನರಸಿಂಹಯ್ಯ : Oh! dash your Cocoa! We want to go home! ಅಲ್ವೇನೇ?

ಕಮಲು : ನೀವು ಹೇಳಿದ್ಹಾಗೇ!

ಗಂಡ : Certainly dear boy! Do go home! ; but after drinking this Cocoa!

[ನರಸಿಂಹಯ್ಯನ ಕೈಗೆ ಕೋ ಕೋ ಕಪ್ಪನ್ನು ಕೊಡುವನು. ಅವನು ಅದನ್ನು ಕುಡಿದು. ತಕ್ಷಣ "ಬಾರೇ! ನನ್ನರಾಣೀ! ಬಾ!" ಎಂದು ಕಮಲುವಿನ ಕೈ ಹಿಡಿದು ಎಳೆದುಕೊಂಡು ಹೋಗುವನು]

ಗಂಡ : (ಅಮ್ಮಾವ್ರಿಗೆ) Visitorsನ ಕಳಿಸಿಬಿಟ್ಟು ಬರ್ತೀನಿ, dear!

ಅಮ್ಮಾವ್ರು : Certainly ; ಬೇಗ ಬನ್ನಿ! ಅಷ್ಟರಲ್ಲಿ ಮಗು ಎದ್ದರೆ ನಾನು ನೋಡಿಕೋತೇನೆ.

[ಗಂಡನ ಕಣ್ಣುಗಳಲ್ಲಿ ಅಲ್ಪವಿಸ್ಮಯದ ಹೊಳಪು ಕಾಣುವುದು]

[ಗಂಡ Exit]

[ಅಮ್ಮಾವ್ರು. Rocking chairನಲ್ಲಿ ಸುಮ್ಮನೆ ಕುಳಿತು ಮೊದಲನೆಯ ದೃಶ್ಯದಲ್ಲಿ ಓದುತ್ತಿದ್ದ ಪುಸ್ತಕವನ್ನೇ ಮತ್ತೆ—ಆದರೆ ಅರೆಮನಸ್ಸಿನಿಂದ—ಓದುತ್ತ. ಸ್ವಲ್ಪ ಶಬ್ದವು ಕೇಳಿ ಬಂದಾಗೆಲ್ಲ, ಮಗು ಮಲಗಿರುವ ತೊಟ್ಟಿಲ ಕಡೆ ನೋಡುತ್ತಾ. ಪುನಃ ಓದುತ್ತಾ ಇರುವಳು.

ಎರಡು ನಿಮಿಷಗಳಾದ ಅನಂತರ ಮಗು ಅಳುವುದು. ಅಮ್ಮಾವ್ರು. ಥಟ್ಟನೆ ಪುಸ್ತಕವನ್ನು ತೆಗೆದಿಟ್ಟು, ತೊಟ್ಟಿಲನ್ನು ಸಮೀಪಿಸಿ. "ಮಲಕ್ಕೊ–ಮಗು". "ಮಲಕ್ಕೊ". ಎಂದು ಮೆಲ್ಲನೆ ಹೇಳುತ್ತ. ಮಗುವನ್ನು ತಟ್ಟಿ ನಿಧಾನವಾಗಿ ತೂಗುವಳು. ಅಷ್ಟೊತ್ತಿಗೆ ಸರಿಯಾಗಿ ಗಂಡನ ಪ್ರವೇಶ—ಮರೆಯಲ್ಲಿ—ಇದನ್ನು ನೋಡಿ ವಿಸ್ಮಯಗೊಂಡು ನಿಲ್ಲುವನು.

"ಅಮ್ಮಾವ್ರು". ತೊಟ್ಟಿಲಿಗೂ Rocking chairಗೂ ಮೊದಲು "ಗಂಡನು" ಕಟ್ಟಿದ್ದ ಹಗ್ಗವನ್ನು. ಪುನಃ ತಾನೇ Rocking chairಗೆ ಕಟ್ಟಿ. ಮೊದಲಿನಂತೆ ಪುಸ್ತಕವನ್ನು ಹಿಡಿದು Rocking Chairನಲ್ಲಿ ಕುಳಿತು. ಎಚ್ಚರಿಕೆಯಿಂದ. rock ಮಾಡುವುದರ ಮೂಲಕ ತೊಟ್ಟಿಲನ್ನೂ ತೂಗುತ್ತ, ಓದಲಾರಂಭಿಸುವಳು.

ಗಂಡನು ಒಳಗೆ door Cಗೆ ಹೋಗುವ ಮೊದಲು ತೊಟ್ಟಿಲಿನ ಹತ್ತಿರ ಮೆಲ್ಲನೆ ಬಂದು 'ಅಮ್ಮಾವ್ರ'ಲ್ಲಿ ಆಗಿರುವ ಬದಲಾವಣೆಯನ್ನು ಗ್ರಹಿಸಿ. ನಿಟ್ಟುಸಿರಿಟ್ಟು. ಮುಗುಳುನಗೆಯ ಮೊಗದಿಂದ—ತೊಟ್ಟಿಲು—ಅಮ್ಮಾವ್ರು—ಕಡೆಗೆ ನೋಡುತ್ತ ನಿಲ್ಲುವನು]

[ಪರದೆಯು ಮೆಲ್ಲನೆ ಜಾರುವುದು]

ಸೀಕರ್ಣೆ ಸಾವಿತ್ರಿ

ಏಕಾಂಕ ಏಕರಂಗ

ಏಕಪಾತ್ರ ರೂಪಕ

(ಒಂದು ಸಣ್ಣ ಪ್ರಹಸನ)

ಪಾತ್ರಗಳು

ಪಾತ್ರ —ಶ್ರೀಕರ್ಣಾಯು ಸಾವಿತ್ರಿ (ವೃದ್ಧವಿತಂತು) : ನಾಯಕಿ.

ದೇಶ —ಬುಳ್ಳಾಪುರದ ನಾಟ್ಯಸಭೆ.

ಸ್ಥಾನ —ಮುಂಪೇಳುವ ಪ್ರೋಲ್.

ಭಾಷಾ—ಆಧುನಿಕ.

[—ಬುಕ್ಕಾಪುರದಲ್ಲಿ ಬುಳ್ಳಪ್ಪನ ಚಪ್ಪರದಲ್ಲಿ ಬುಳ್ಳಪ್ಪನ ಕಂಪೆನಿಯು ಆಡುತ್ತಿರುವ "ಸತೀ ಸಾವಿತ್ರಿ" ನಾಟಕದ ನಾಲ್ಕನೆ ಅಂಕದ ಅಂತ್ಯದಲ್ಲಿ ನಾಯಕಿಯ ಪಾತ್ರವನ್ನು ವಹಿಸಿದ "ಬಜ್ಜಿ ಕಪ್ಪಣ್ಣ"ನು ದಿನಕರನ ದೇದೀಪ್ಯ ಪ್ರಭೆಯಲ್ಲಿ ದಿನವೆಲ್ಲಾ ಬುಕ್ಕಾಪುರದ ಬೀದಿಗಳಲ್ಲಿ ಸ್ನಾನಪಾನಂಕ ತಪ್ಪ ಸಂಪ್ರದಾಯವಾಗಿ ಅನ್ವಯಿಸುವಂತೆ ಕಾಣಿಸಿಕೊಳ್ಳುತ್ತಿದ್ದರೂ ಅದ್ಭುತಃ 'ಪೌಡರ್' 'ಟೋಫನ್' 'ಸೀರಾಜಕೀರೆ' 'ಪ್ಯಾರಿಸ್ ಡೈಮಂಡ್ಸ್' ಇತ್ಯಾದಿಗಳೇ ಅಲ್ಲದೆ ಕೋಟಿ ದೀಪಗಳ ಬೆಳಕನ್ನು ಬೀರುವ 'ಫುಟ್‌ಲೈಟ್ಸ್'ಗಳ ಸಹಾಯದಿಂದ ರಂಭಾಪ್ಸರೆಯೋ ಎಂಬಂತೆ ಕಾಣಿಸಿಕೊಳ್ಳುತಾ.. ಕಾಲನನ್ನು ಅಟ್ಟಿಕೊಂಡು ಬಂದ ಆತುರದಲ್ಲಿ ಮುಳ್ಳು ಕಲ್ಲು ತಗುಲಿಯೂ ಜೀರ್ಣವಾಗದ ವಸನದಿಂದಲೂ, ಗಂಟು ಬಿಚ್ಚಿ 'ಸ್ಟೇಜ್'ನ ಜಮಖಾನೆಯನ್ನು ಗುಡಿಸುತ್ತೆ ಜೋಲಾಡುವ ಕೇಶ ಭಾರದಿಂದಲೂ, ಗದ್ಗದ ಸ್ವರದಲ್ಲಿ ಹಾರ್ಮೋನಿಯಂ ಐದನೆ ಮನೆ ಶೃತಿಯಲ್ಲಿ ಸಂಚು ಸ್ವರದಲ್ಲಿ ಸೂಸುವ ನೀಲಾಂಬರಿ. ಅಸಾವೇರಿ, ಮುಖಾರಿ ಇತ್ಯಾದಿ ಶೋಕಗೀತೆಗಳಿಂದ, ಸಭಿಕರನ್ನೂ. ಪಾಷಾಣ ಹೃದಯಿಯಾದ ಕಾಲನವೇಷವನ್ನು ಧರಿಸಿದ ನೆಯಿಗೆ ನಂಜಪ್ಪನನ್ನೂ. ಶೋಕಾಬ್ಧಿಯಲ್ಲಿ ತೋಯಿಸಿ, ತೇಲಿಸಿ, ಈಜಿಸಿ, ಕೊನೆಗೆ ಮುಳುಗಿಸಿ, ಎತ್ತಿ...ಅತಃಪರಂ ಸಾರಂಗಪವಾದ ವಾಕ್ಕುಶಲತೆಯಿಂದ ನಂಜಪ್ಪನನ್ನು ತೋಷಿಸಿ 'ಫಾರೆಸ್ಟು' ಫರದೆಯ ಹಿಂದೆ ಸತ್ತ ಸತ್ಯವಾನನ ವೇಷಧಾರಿಯಾದ ಅರ್ಧ ನಿದ್ರೆಯಲ್ಲಿರುವ ಗೋಣಿಗರ ಸುಬ್ಬುವಿನ ಪಂಚಪ್ರಾಣಗಳನ್ನು ಪಡೆದ ಸಂತೋಷದಲ್ಲಿ...ಸಮವರ್ತಿಯು ಅದೃಶ್ಯವಾಗಲು,

ರಾಗ–ಕೇದಾರ ತಾಳ–ರೂಪಕ ದೃತಗತಿ
ಸಾಂಥಸಾವ ನೈಧೇವಿ ನಾನೀ ಈಫುಳ್ ॥ ಪ ॥
(ಕೃ) ಥಾಂಥಾ ಖೃಪೆಯಿಂ ॥ ಉಪ ಪಲ್ಲವಿ ॥
ಅಂಘು ಮ್ನಥಿಧ ಖಾಂಥಾನಸುಫಳಾ ।
ಅಂಥಯೀ । ಇಂಥುನಾ । ಅಂಥಖಾ । ನ
ಸ್ಥಂ ಥೈಯೀಸ್ಥಿಹೀ ॥ ಅ ॥

ಎಂದು ಪ್ರಾರಂಭಿಸಿ ಮೂರು ಚರಣಗಳು ಉಳ್ಳ ಪಾಡನ್ನು ಸಭಿಕರ ಮೂರು "ಒನ್ಸ್ ಮೋರು"ಗಳಿಗೆ ಮೂರು ಸಾರ್ತಿ ಪಾಡಿ ನಾಲ್ಕನೆಯ ಸಲ ಪಾಡಲು ಕರತಾಡನ ಮೂಲಕ ಅಪ್ಪಯಿಸುವ ಸಭಿಕರನ್ನು ಗಮನಿಸದೆ "ಸೈಡ್ ವಿಂಗ್ಸ್" ಹಾದು ಅದೃಶ್ಯಳಾಗುತ್ತಲೆ, ರಘಾಂಗೈಯು ನೇಪಥ್ಯದಲ್ಲಿ ಬಡಿಯುವ ರವಕ್ಕೆ ಸರಿಯಾಗಿ "ಆಕ್ಟ್" ಫರದೆಯು ಬೀಳಲು—ಸಹಸಭಿಕೆಯಾದ ಸಹ ವಿತಂತು ಸೀತಮ್ಮನು, "ನೋಡಿದ್ರಾ ಸಾವಿತ್ರಮ್ನೋರೆ! ಈ ನಾಟಕದ ಸಾವಿತ್ರಿಯ ಪ್ರಭಾವ! ಗಂಡ ಸತ್ತಿದ್ದು ಹೆಣವಾಗುತ್ಲೂ ಗುಂಡ್ಗೆಗಟ್ಟಿ ಮಾಡ್ಕೊಂಡು ಯಮನ್ನ ಅಟ್ಕೊಂಡ್ಹೋಗಿ ಗಂಡನ್ಪ್ರಾಣಾನ ಗಿಟ್ಟಿಸ್ಕೊಂಡ್ಲಲ್ಲಾ! ಏನ್ಪ್ರಭಾವ. ಹೇಳ್ತೀನೆ!?" ಎಂದುದಕ್ಕೆ. ನಮ್ಮ ನಾಟಕದ **ನಾಯಕಿಯು** ರೇಗಿ. ರೇಗನ್ನು ಹತೋಟಿಗೆ ತಂದು. ಕುಗ್ಗಿ, ಮತ್ತಿರಿಗಿ ಹಿಗ್ಗಿ, ಕೊನೆಗೆ ಮನೋಗಾಂಭೀರ್ಯವನ್ನು ಸೂರಿಗೆತ್ತಿದ ಮೂಗಿನಿಂದ ಸೂಚಿಸುತ್ತಾ ನಿಟ್ಟುಸಿರೆಳೆಯುತ್ತಾ]

ನಾಯಕಿ

ಎದ್ಬಿಟ್ರಾ ಸೀತಮ್ನೋರೆ! ಯಾರ್ನ ಮಾತಾಡಿಸ್ತಿದ್ದೀರಾ!? ಚೇತರಿಸ್ಕೊಳ್ಳಿ! ಸಾಧಾರಣ ಹೆಂಗಸ್ರಾಗೆ ಹುಟ್ಟಿ ನಿಮ್ಗೂ. ಅಗ್ನಿಪ್ರವೇಶ ಮಾಡಿದ. ಶ್ರೀರಾಮ್ನ ಹೆಂಡ್ತೀಗೂ ಎಲ್ಲಪ್ಪೂ ಸಂಬಂಧ್ವಿಲ್ದೂಹೋದೆ......... ಹೊಬಾ ಛೆಲ್ಗಿ ಬಣ್ಣ ಹಾಕ್ಕೊಂಡು. ಕೈನೂ ಕಾಲೂ ಕಟ್ಟ್ಬಿಟ್ಕೊಂಡು ಸುಂದನ ಹಾಗೆ ಆಡ್ತಾ ಹಾಡ್ತಾ ನಿಮ್ಮನಸ್ಸಿಗೆ ರಂಡ ಸಾವಿತ್ರಿ ದೇವಿ ಹೆಸರ್ನ ನನಗೆ ಇಟ್ಟ ನಮ್ಮಪ್ಪ ಬಿಪ್ಲಲ್ಲಾ! ಆ ಸಾವಿತ್ರಿಗೂ ನನಗೂ ಸಂಬಂಧ್ವಿದೆ. ನೀವಾತ್ಸರ್ಯಪಟ್ಟದ್ದು, ಸತ್ತಿದ್ದ

ಗಂಡಸ್ರಾಣಾನ ಯಮನ್ಕೈಯಿಂದ ಸುಲ್ಕೊಂಡದ್ದು ಇವಳ ಪ್ರಭಾವಾ ಅಂದ್ರಲ್ಲಾ ! ಇವಳೇನ್ ಪ್ರಭಾವ! ಒಂದೆ ಕಲಾಬತ್ತು ಅಂಗಿ ಪಗಡಿ ತೊಟ್ಕೊಂಡು ಸರ್ಕ ಮಾಡಿಟ್ಕೊಂಡ ಸತ್ಯವಾನ ದೇಹಾನ ಹುಷಾರಾಗಿ ನೋಡ್ಕೊಳ್ತಿದ್ರಲ್ಲಾ, ಇನ್ನ ನೆಂಟ್ರು, ಇವಳ ಅಪ್ಪ ಅಮ್ಮ ಅತ್ತೆ ಮಾವಂದ್ರು... ಅವ್ರದ್ದು ಏನಾದ್ರು ಹೇಳಿ ಪ್ರಭಾವ ! ನಿಜ್ವಾದ ಪ್ರಭಾವ ! !...ನಾಟ್ಕಗಾರ್ನೇ ಮೋಸ ಮಾಡಿದ್ದು! ನನ್ತಾಳಿ ಕಳ್ಕೊಂಡು ತಲೇ ಮುಸ್ಕಾಕೊಂಡು ಇಲ್ಲಿ ಒದಗ್ಬುತೀರೋದು ಯಾರ್ತಪ್ಪು ಅಲ್ಲ ! ಯಮನ ತಪ್ಪು ಅಲ್ಲ !! ನೆಂಟ್ರನ್ನ ನಂಬಿ ನಮ್ಮ ಯಜಮಾನ್ರ ದೇಹಾನ ಅತ್ತೆ ಮಾವಂದ್ರ ಸುಪರ್ದ್ನಲ್ಲಿ ಅರ್ಧಿನ್ವಲ್ಲ ಬಿಟ್ಟು ಕಣ್ಮುಚ್ಚಿದ್ದು. ನನ್ನಪ್ಪ ! ಕೇಳೀ !: ನಮ್ಮಪ್ಪ ಜೋಯಿಸ. ಇನ್ನೇನು ಅಪ್ಪನ್ನೇ ಜೋಯಿಸ್ನಾಗಿರೋವಾಗ್ಲ ಹುಟ್ಟಿದ ಕ್ಷಣವೇ ಜಾತ್ಕ ಬರ್ದ. ಸ್ಫೀವಾತ್ಕದಲ್ಲಿ. —ಅರುಂಧತಿ ಅಂತ್ಕೇಳೀಥೀರ ನಿತ್ಯ ಸುಮಂಗಲಿ ?—ಅವ್ಳ ಸಂಸ್ಕಾರ ವಾಸ್ನೆ ನಮ್ಗೂಗೆ ಇಧೆ ಅಂದ್ನಂತೆ ನಮ್ಮಪ್ಪ ! ಸಾವಿತ್ರಿಯೋ. ಯಮನ್ನ ಓಂಬಾಲಿಸಿದ್ಲು ! ಯಮನ್ನ ಒದ್ಕೋಡ್ಸೋ ಯೋಗ್ಯತೆ ಇರೊ ಅರುಂಧತಿಯ "ವಾಸ್ನೆ" ನನ್ನ ಜಾತ್ಕದಲ್ಲಿ ಇಧೇಂತ ನಮ್ಮಪ್ಪ ನಿರ್ಧರಿಸಿದ್ಮೇಲೆ ನನಗೆ ವಯಸ್ಸಾಗಿ ವರಗ್ಳ ಮಾತು ಮನೇಲಿ ನಮ್ಮಮ್ಮ ಎತ್ತಿದಾಗ. ಅರವತ್ತು. ಎಪ್ಪತ್ತು. ಎಂಭತ್ತು ಒಗೆ ಆಯುಸ್ಸಿರೊ ಜಾತಕಗ್ಳು ಬಂದು ತುಂಬಿದಾಗ. "ನಾಹೇಳಿದ ಯಮನ್ನ ಒದ್ಕೋ ಶಕ್ತಿ ಇಲ್ಲದ ಕನ್ಯೆಗಳು ಇವ್ರನ್ನೆಲ್ಲ ಮದ್ವೆಮಾಡ್ಕೊಳ್ಲಿ: ಇಪ್ಪತ್ತು. ಇಪ್ಪತ್ತೈದೂಂತ ಆಯುಸ್ಸು ಯಾರಾದ್ರು ಮಿಕ್ಕಿದ್ವಷ್ಯದಲ್ಲಿ ತಕ್ಕಷ್ಟಿಗೆ ಇದ್ರೆ. ನನಗ್ಕಟ್ಟಿ: ಯಮ ಬಂದಾಗ ನನ್ನ ಅಪ್ಪ ಹೇಳ್ದ 'ವಾಸನೆ' ಶಕ್ತಿಯಿಂದ ಗಂಡನ್ನ ಉಳಿಸ್ಕೋತ್ತೀನೇಂದೆ. ನಂಬ್ತೀರೋ ಇಲ್ವೋ ಹಾಗೇ ಆಯ್ತು !: ಸಂಸಾರನೂ ಕುದುರ್ತು. ಕ್ರಮೇಣ ಇಪ್ಪತ್ತಾಲ್ಕೂವರೆ ವಯಸ್ ಆಗ್ತಾ ನಮ್ಮಪ್ಪ ಗಡುಹಾಕ್ದ ಇಪ್ಪತ್ತೈದ್ನೇ ವಯಸ್ಸು ಹತ್ರ ಬರ್ತಾ ಹತ್ರಾ ಬರ್ತಾ...... ಮಟ್ಟಮಧ್ಯಾಹ್ನ ಊಟ ಮಾಡಿ ಅಡ್ಕೆ ಎಲೆ ಮೆಲ್ಲ್ತಿದ್ದವ್ರು ಥಟ್ನೆ "ನನಗೇನೋ ಸಂಕ್ಟವಾಗುತ್ತೆ !" ಅಂತಂದ್ರು. ಮೊದಲ್ನೆ ಫರ್ದೆ ಬೀಳೋಕ್ಮುಂಚೆ ಈ ನಾಟ್ಕದ ಸತ್ಯವಾನ ತೋರ್ಸಿದ ಚೇಷ್ಟೆಗಳೆಲ್ಲಾ ಕಣ್ಮುಂದೆ ! ನಾನು ಪಕ್ಕದಲ್ಲಿ ಕೂತು ಸೆರಗಿನಿಂದ ಬೀಸ್ತಾ "ಏನೂ ಹೆದರ್ಬೇಡಿ. ನಾನು ಹತ್ರ ಇರೋವರ್ಗೂ ಯಾವ ಹಾನೀನೂ ಬರೋಹಾಗಿಲ್ಲ ನಿಮ್ಗೆ !" ಅಂತಂದ್ರೆ. ನಂಬ್ತೆ ಆ ಪ್ರಾಣ? ಊಹುಂ ! 'ಅಪ್ಪ ! ಅಮ್ಮ' ಅಂತ ಅದ್ರ ರೋದನೆ ಸಹಿಸ್ಲಾರ್ದೆ ತಂತಿ ಕೊಟ್ಟು ಕರಸ್ದೆ ಅತ್ತೆ ಮಾವಂದಿರ್ನ. "ಅಯ್ಯೊ ಅಂದ್ರೆ ಆರ್ತಿಂಗ್ಳು ನರ್ಕ" ಅಂಬೋದಕ್ಕೆ ದೃಷ್ಟಾಂತ ಕೇಳಿ ! ಬಂದ್ವಾಗಳು ನೋಡಿಯ ಪಾತಿವ್ರತ್ಯದ ಮಹಿಮೇನ ನೋಡ್ಕೊಳ್ತಾ ಮುದಿರ್ಕೊಂಡಿದ್ವಾರ್ದಾಗಿತ್ತೆ ಮನೆ ಮೂಲೇಲಿ ! "ಮಗ...ಯಾಕೋ.........ಭಯ್ವಾಗುತ್ತೆ ! ಮೃತ್ಯುಂಜಯ ಜಪ ಮಾಡೋದು ಮೇಲೂಂತಾ ನಮ್ಮತ್ತೆ ಒಡಿದ್ಬುಟಕ್ಕೆ ನನ್ನ "ಅರುಂಧತಿ ವಾಸ್ನೇ"ನೂ ಮರ್ತು ಒಡಂಬಟ್ಟು ಭಟ್ಟ್ರಿಗೆ ಹೇಳ್ಕಳಿ ಪೂಜೇನೂ ಆಯ್ತು. ಮಾವಾವ್ರು ಅತ್ತೆವ್ರು ಪೂಜೆ ನಂತ್ರ ಬಂದು ಇವ್ರ ಹತ್ರ ಕೂತಿದ್ದ ನನ್ನ. 'ಪೂಜೆ ಆಯ್ತು !...ಕುಂಕುಮ ನೆತ್ತಿಗೂ ತಾಳೀಗೂ ಮಟ್ಕೊಂಡು ಪ್ರಸಾದಾನ ಸೇವಿಸ್ಬಿಟ್ಟು ಬಾ !' ಅನ್ನನ್ದ್ರು. ದೊಡ್ಡೋರು ಹೇಳ್ತಾರಲ್ಲ ! ಹಾಗ್ಮಾಡೋಣ ಅಂತ ಕೈಹಿಡ್ಕೊಂಡಿದ್ದ ಬಿಟ್ಟು ದೇವರ್ಮನೆಯ ಕಡೆ ಯಾವಾಗ ಹೆಜ್ಜೆ ಇಟ್ಟೆನೋ. ಆಗ ತಪ್ಪಿತು ಅರುಂಧತಿ ವಾಸ್ನೆ !! ನರಳ್ತಿರೊ ಇವ್ರ. ಅತ್ತೆ ಮಾವಂದ್ರ ಸುಪರ್ದಿಗೆ ಒಪ್ಪಿಸಿ ದೇವ್ರ್ಮನೆಗೆ ಬಂದು ಸಡಗ್ರದಿಂದ ಆ ಕುಂಕುಮಾನ ಹಣೇಗೂ ತಾಳಿಗೂ ಇಟ್ಕೊಂಡು ಪ್ರಸಾದದ ಕಡೆ ಕಣ್ಣುದ್ದಗಳ ತಿರುಗಿಸ್ತೇನೆ ! ಕೋಸುಂಬ್ರಿ ಆಗಬಾರ್ದೆ ! ಕಡ್ಬು ಆಗಬಾರ್ದೆ ! ಪಾಯ್ಸ ಆಗಬಾರದೆ ! ಫಲಹೋರೆ ಆಗಬಾರದೆ ! ನನ್ನ ಕಷ್ಟಕಾಲ ನೋಡಿ...........ಈ ನೈವೇದ್ಯಗಳೆಲ್ಲಾ ಬಿಟ್ಟು ಸೀಕರ್ಣೆ .... ಪಂಚಾಮೃತ ಸೀಕರ್ಣೆ ಮಾಡಿಟ್ಟಿದಾಳೆ ನನ್ಮಾಂಗಲ್ಯಕ್ಕೆ ಮಾರಿ ಹಾಗೆ ಬಂದ ನಮ್ಮತ್ತೆ ! ನಗುತೀರೋ ಏನೊ ಕಾಣೆ ಸೀತಮ್ಮನೋರೆ ! ನಾನು ಹುಟ್ದಾರಭ್ಯ ನಮ್ಮಜ್ಜಿ. ನಮ್ಮಮ್ಮ. ನಮ್ಮನೇಲಿ ಎಲ್ಲಾನೂ. ಮದ್ವೆ ಆಗೋಕ್ಮುಂಚೆ ನಾನು ಹೋಗ್ತಿದ್ದ ಕನ್ನಡ ಇಸ್ಕೂಲು ಹುಡ್ಗೀರೂ ಕೂಡ ನನ್ನ 'ಸೀಕರ್ಣೆ ಸಾವಿತ್ರಿ !' ಅಂತ ಕೂಗೋದು ರೂಢಿ. ನಗಬೇಡಿ ! ರಸಾಳೆ ಜೇನುತುಪ್ಪ ಹಾಲ್ಸಕ್ರೆ ಸರಿ ಯಾಗಿ ಸೇರಿದ ಬಾಯ್ತು ಅಂದ್ರೆ ಪ್ರಾಣ. ನನ್ಗೆ. ಮೃತ್ಯುಂಜಯ ಜಪಕ್ಕೆ ನಮ್ಮತ್ತೆ ಜೋಡ್ಸಿದ್ದ್ರ

ತುಂಬ ಸೀಕರ್ಣೆ ಮಾಡಿಟ್ಟಿಳಲ್ಲಾ, ಒಂದು ಚಮ್ಚ, ಒಂದು ಮಿಳ್ಳೆ, ಒಂದು ಸೌಟು, ಇಡಬಾರ್ದೆ?, ಆ ಹಾಳು, ಸೀಕರ್ಣೆ ತುಂಬಿದ ಜೋಡ್ತಪ್ಲೇಲಿ ! "ಎಲ್ಲಾ ಎಜಮಾನ್ರನ್ನ ಬಿಟ್ಟ್ಬಿಟ್ಟು ಬಂಧಿದೇನೆ ! ಈಗ್ಲೋ ಆಗ್ಲೋ ಯಮ, ಅಪ್ಪ ಜಾತಕದಲ್ಲಿ ನಿರ್ಧರಿಸಿದ ಹಾಗೆ, ಬಂದ್ಬಿಟ್ಟಾನು!? ಈಗ ಇರಬೇಕಾದ್ದು ನಿನ್ನ ಗಂಡನ ಹತ್ತಿರ; ಇಲ್ಲಲ್ಲಾ ! ಆದ್ರೂ ಅತ್ತೆ ಮಾವಂದ್ರ ಮಾತು ಎತ್ತಾಕ್ಬಾರ್ದು ! ಸೌಟು ಮಿಳ್ಳೆ ಹುಡ್ಕೋಕೆ ಬಿಡ್ವಿಲ್ಲ ! ಬೇಗ್ಬೇಗ್ನೆ ನೇವೇದ್ಯ ಬಾಯ್ಗಾಕ್ಕೊಂಡು ಪತಿಪಾದಾನ ಸೇರು !" ಅನ್ತನ್ಕೊಂಡು ಆ ಜೋಡ್ತಪ್ಲೇನ ಎರಡು ಕೈಯಿಂದ್ಲೂ ಎತ್ತಿ ಬಾಯ್ಬಿಟ್ಟುಕೊಂಡು ಬಗ್ಗಿಸಿಕೊಂಡರೆ, ಒಂದು ತುಂಡು ಬಾಳೆಹಣ್ಣು ಒಂದು ತೊಟ್ಟು ಜೇನುತುಪ್ಪ ಮಟ್ಟಿಗೂ ಸೋಕಬಾರದಾಗಿತ್ತೆ ನನ್ನಾಲ್ಗೇಗೆ ! ನನ್ನ ಕಷ್ಟಕಾಲ; ನನ್ನ ತಾಳೀನ ಹಿಡಿದ ಹಾನಿ ! ನೋಡಿ, ಸೀತಮ್ಮನೋರೆ ! ಬಾಳೆಹಣ್ಣು, ಕಲ್ಲುಸಕ್ರೆ, ದ್ರಾಕ್ಷಿ, ಯಾಲಕ್ಕಿ ಬಾಬ್ತುಗಳೆಲ್ಲಾ ಮೇಲ್ಮೇಲ್ತಾ ತೇಲ್ತಾ ಕೆಳಗೆ ಪರಿಯೋ ತುಪ್ಪ ಜೇನುತುಪ್ಪದ ಸಮೇತ ಅಷ್ಟೂನೂವೆ, ಜೋಡ್ತಪ್ಲೇಲಿ ಇದ್ದ ಸೀಕರ್ಣೆ ಅಷ್ಟೂನೂವೆ, ಅನಾಮತ್ತಾಗಿ ನನ್ನ ಹಾಳು ಬಿರಿದ ಬಾಯ್ಗೆ ಜಾರಬೇಕೆ? ಇದು ಬಿದ್ದ ಜ್ಞಾಪಕ! ಖಾಲಿ ಜೋಡ್ತಪ್ಲೆ "ಟಂಗ್ !"ಂತ ನೆಲಕ್ಕೆ ಬಿದ್ದದ್ದು ಕೇಳಿದ ಜ್ಞಾಪಕ ! ಸೀಕರ್ಣೆ. "ಲೋಪ್ಪ್ !"ಂತ ಹೊಟ್ಟೇಗೆ ಬಿದ್ದದ್ದು ಜ್ಞಾಪಕ! ತುಂಬಿದ ಹೊಟ್ಟೆ. ಕೂತಿದ್ದ ಹಾಗೆ ಗೋಡೆಗೆ ಒರಗಿದೆ ! ಕಣ್ಮುಚ್ಚಿದೆ. ಒಂದೆ ಇಲ್ಲಾ ಒಂದೂವ್ವರೇನೊ ನಿಮಿಷ ಆಗಿದ್ದಿರಬಹುದ್ದಾಗಿತ್ತು ನಾನು ಕಣ್ಣು ಬಿಟ್ಟಾಗ. ಜ್ಞಾಪಿಸಿಕೊಂಡೆ ಎಜಮಾನ್ರನ್ನ ! ಥಟ್ನೆದ್ದು ದೂರ ದೂರ ಕಾಲುಹಾಕ್ತಿಧೇನೆ; ಇವರನ್ನ ಬಿಟ್ಟುಬಂದ ಕೋಣೆಯ ಕಡೆ! ಕಾಲು ತೊಳೀತಾ ನಿಂತಿಧಾರೆ ತೊಟ್ಟಿ ಕೊಳಾಯ್ಲಿ ಮಾವಾವ್ರೂ ಅತ್ತೇನೂ! ಇವ್ರನ್ನಿಬಿಟ್ಟಿಬಿಟ್ಟು ಇಲ್ಲಿ ಇವ್ರು ಇರುವುದನ್ನು ನೋಡಿ ರೇಗಿ "ಇದೇನಿದು ! ಕಾಲ್ತೊಳೆಯೋದು ಯಾಕೆ ? ಈಗ ?" ಅಂದೆ. ಅವ್ರಿಬ್ರೂ ಒಂದೇ ಗಂಟ್ಳಲ್ಲಿ 'ಬೀದಿ ಉದ್ದಕ್ಕೂ ನಡಕೊಂಡು ಹೋಗ್ಬಂದದ್ದಕ್ಕೆ ತುಂಬಿರೋ ಧೂಳ್ ತೊಲಗಿಸೋಕೆ ತೊಳಕೊಳ್ಳೋದು' ಅಂದ್ರು. 'ಬೀದೀಲೇನ್ಕೆಲ್ಸಾ ಈಗ ನಮ್ಮಗಳ ಈ ಸ್ಥಿತೀಲಿ' ಅಂದೆ. ಅದಕ್ಕವ್ರುತ್ತ್ರ 'ಕೆಲ್ಸವಿಲ್ದೇ ಏನೂ ! ? ಸತ್ತ ಮಗನ ಹೆಣಾನ ಸ್ಮಶಾನಕ್ಕೆ ಸಾಗ್ಸಿ ಸುಟ್ಟು ಬೀದಿ ಉದ್ದಕ್ಕೂ ನಡ್ಕೊಂಡು ಬಂದ್ಮೇಲೆ ಧೂಳು ಮುಚ್ಕೊಳ್ದೆ ಇರುತ್ತ್ವೇ ಪಾದಗಳು ?' ಅಂದ್ರು ! ಮೈಕೂದ್ಲು ನಡುಗ್ತಾ, ಮೈಯೆಲ್ಲಾ ಬೆವರ್ತಾ, ದುಡುಕ್ತಾ ಹಿತ್ತ್ಲ ಕಡೆ ಕಾಲ್ಹಾಕಿ ನೋಡ್ತೇನೆ ! ಅಕೋ ! ಹೋಗ್ತಿಧಾನೆ ಯಮಧರ್ಮ. ಆಕಾಶಾನೂ ಭೂಮೀನೂ ಸೇರೋ ದಿಗನ್ತ ಅನ್ತಾರಲ್ಲಾ. ಅಲ್ಲಿಲ್ಲೋ !; ಬಲಗೈ ಒಂದೊಂದ್ಬೆಟ್ಟಿಗೂ ಒಂದೊಂದ್ಪ್ರಾಣಾನ ಸುತ್ಕೊಂಡು ಏನ್ಮಾಡೋದು ನಾನು ! ? ನಮ್ಮಪ್ಪ ಹೇಳ್ದ ಅರುಂಧತಿ "ವಾಸ್ನೆ" ಪ್ರಭಾವ್ದಿಂದ......ನನ್ನ ಘರ್ಜನೆಗೆ ಬೆದರ್ಬಿದ್ದು ಯಮರಾಯ ಯಜಮಾನ್ರ ಪಂಚಪ್ರಾಣಾನ ನನ್ಕೈಲಿಟ್ಟು ಪಾದಕ್ಬಿದ್ದು "ತಪ್ಪಾಯ್ತು. ಕ್ಷಮ್ಸಿ"ಂತ ಮಾಡೋ ಮಹಿಮೆ ನನಗಿದ್ರೂನೂವೇ ಏತನ್ಮಧ್ಯೆ ಈ ಬೆಪ್ಪ್ರಕ್ಕಿಗ್ಳು ನನ್ನ ಭರ್ತನ ದೇಹಾನ ಭಸ್ಮ ಮಾಡಿ ಭೂಮೀಗೆರಚಿದ್ಮೇಲೆ...ಪತಿಯ ಪ್ರಾಣಗಳ್ನ ಇವರ ರುಮಾಲ್ಗೆ ಕಟ್ಟ್ಬೋದೆ ? ಅಂಗಿಗೆ ತಗಲಿಸ್ಕೊಳ್ಳೋದೆ ? ಹೀಗೇ ! : ನೆಂಟ್ರನ್ನ ನಂಬಿ ನಾನ್ಕೆಟ್ಟದ್ದು ! ! ನನ್ನ ಪ್ರಭಾವ ಎಷ್ಟಾದ್ರೂನೂವೆ, ಇವರ ದೇಹದ ಪಕ್ಕದಲ್ಲಿದ್ದ ನೆಂಟರ ಅಜಾಗರೂಕತೆಯಿಂದ ಅನ್ಯಾಯವಾದದ್ದು ನಾನು. ಈ ಸಾವಿತ್ರಿಯ ಪ್ರಭಾವವೇನು ! ? **ನಿಜ್ವಾದ ಪ್ರಭಾವ ಆ ಘಟಾಸ ನೋಡ್ಕೊಂಡಿದ್ರಲ್ಲ, ಅವರ್ದು ಪ್ರಭಾವ ! !**

[ನಾಟಕದ ಪರದೆಯು ಏಳುತ್ತ ಸಾವಿತ್ರಿಯು ಪ್ರವೇಶಿಸುತ್ತಾ ಸತ್ಯವಾನನ ಹೆಣದ ಸುತ್ತ ನಿಂತ ಚಮಕಿ ಕೋಟು ಜರಾಯಿ ರುಮಾಲು ತೊಟ್ಟ ಎರಡು ವೃದ್ಧ ರಾಜಾ ಪಾರ್ಟುಗಳು, ಅದಕ್ಕೆ ಸರಿಯಾಗಿ ನೀರಾಜಿ ಸೀರೆ ಬಿಳೀಕೂದಲು "ಟೋಫನ್" ತೊಟ್ಟ ಎರಡು ವೃದ್ಧ ರಾಣೀ ಪಾರ್ಟುಗಳು, ಹೆಣವನ್ನು ಬಿಟ್ಟು ಏಕಗ್ರೀವದಿಂದ......

(ದಿವಂಗತ ವರದಾಚಾರ್ಯರ ಶಾಕುಂತಳ ನಾಟಕದಲ್ಲಿ ಕಣ್ವರು 'ಎಂತು ಕಳುಹಲಿ... ಸುತೆಯಾ' ಎಂದಂತೆ)

ಇಂತು ಭಂಧೆಯ್ಯಾ...ಸ್ವತಕ್ಕೆ ॥
ಇಂತು ಭಂಧೆಯಾ ॥

ಎಂದು ಪಾಡುತ್ತಾ ಮುಂದೆ ಬಂದು 'ಸತೀ ಸಾವಿತ್ರಿ'ಯನ್ನು ಅಪ್ಪಿಕೊಳ್ಳುವ ಸೀಂಗೆ ಪರದೆ ಏಳುವ ಸಮಯಕ್ಕೆ ಸರಿಯಾಗಿ 'ಸೀಕರ್ಣೆ ಸಾವಿತ್ರಿಯ']

ಪರದೆ ಬೀಳುವುದು.

ಸತ್ತವನ ಸಂತಾಪ

ಅಥವಾ

ತ್ರಿಶಂಕುನರಕ

ಪಾತ್ರಗಳು

ನರಸಿಂಹಯ್ಯ	...	ನಾಯಕ
ಶ್ಯಾನುಭೋಗ	...	ಉಪನಾಯಕ
ಲಕ್ಷ್ಮಮ್ಮ	...	ನಾಯಕಿ (ನರಸಿಂಹಯ್ಯನ ಪತ್ನಿ)
ಕೆಂಚಮ್ಮ	...	ಉಪನಾಯಕಿ (ಶ್ಯಾನುಭೋಗನ ಪತ್ನಿ)
ಧರಣಯ್ಯ ಸದಾಶಿವಯ್ಯ ವೆಂಕಟರಮಣ ಶೆಟ್ಟರು ಬುಡನ್ ಸಾಹೇಬ್	}	ಊರಿನ ಧನಿಕರು
ಪೋಲೀಸ್ ಆಫೀಸರ್	...	ಇನ್ಸ್‌ಪೆಕ್ಟರು
ಇಬ್ಬರು ಪಥಿಕರು	...	ದಾರಿಹೋಕರು
ದನ ಕಾಯುವವರು	...	ಇತರರು

ದೃಶ್ಯ ೧

[ನರಸಿಂಹಯ್ಯನ ಮನೆ ಹಜಾರ]

[Found entered: husband walking up and down the room, helped poorly by unsteady feet……wife alternately cowed and, defiant at writing desk.]

ನಾಯಕಿ : ಇದೇನ್ ಗೇಜ್‌ಗಾರಿಕೇ ಅಂದ್ರೆ!...ಹೀಗೆ ಐದು-ಹತ್ತು-ಹದಿನೈದೂ ಅಂತ, ನನ್ ಕೈಯಿಂದ ದಿನಬಿಟ್ ದಿನ ನಮ್ಮಪ್ಪನಿಗೆ ತಿರುಪಕ್ಕೆ ಬರಸೋಕ್ ಬದಲಾಗೀ "ನಿಮ್ಮ ಅಳಿಯನೂ, ನಿಮ್ಮ ಮೊಮ್ಮಕ್ಕಳೂ, ಅವರನ್ನೋಡ್ಕೊಳ್ಳೋ ದೇವೇರಿ, ದುಡಿದೂ ದುಡಿದೂ ಹೆಣದ ಹಾಗೆ ಬಿದ್ದುಕೊಂಡಿರೋ ನಿಮ್ಮ ಮಗಳೂನೂವೆ ನಿಮ್ಮ ಮನೆಗೆ ಮನೆ ಸಾಮಾನ್ನಹಿತ ಬಂದು ಸೇರಿ, ಸಾಯೋವಗರ್ೂ ಅಲ್ಲೇ ನಾವೆಲ್ಲರೂ ಇರೋಕೆ ರೈಲ್‌ಛಾರ್ಜ್ನ ಕಳ್ಸೀ"ಂತ ನೀವೇ ಬರಿಯೋದು ಉತ್ತಮಾ ಅಲ್ವೇ ?

ನಾಯಕ : ಲೇ!...ಯಾರಹತ್ತಿರಲೇ ನಿನ್ನ ತೌರ್ಮನೆಧೋರಣೇ ? ನೀನ್ ಬರಿಯೋದೇನೂ....ನಾನು ಬರಿಯೋದೇನೂ ?...ನಿನ್ನ ಈಗಲೇ ವದ್ದು ಹೊರಗೆ ಹಾಕಿದ್ರೇ ಪತ್ತ್‌ಜನ ನೋಡಿ, ಹಲ್‌ಹಲ್ ಕಿರಿದೂ...ಪಟ್ಣ ಪಟ್ಣವೇ ಪಕ್ಕೆಗಳು ಹಿಡ್ಕೊಂಡು, ಪಕಪಕ ಪಕಾಂತ ನಕ್ಕು ಪೇಪರುಗಳಿಗೆ ಬೇರೆ ಬರ್ದು, ಅದನ್ನೋದ್ಕೋವ್ರು ಉಗದ ಉಗಳ್ನಲ್ಲಿ ಮುಳ್ಗಿ ಮೈ ಮುಖಾ ವ್ರೊರಸ್ಕೊಳ್ತಾ ಮಾನದಾನಕ್ಕೆ ನನ್ನ ಕಾಲಿಗೆ ಬಿದ್ದು, ನನ್ನ ಹೆಬ್ಬೆಟ್ಟುಗಳ್ನ ಕಣ್ಗೆ ಒತ್ಕೊಳ್ಬೇಕಾದ ನಿಮ್ಮಪ್ಪನಿಗೆ, ನಾನೇ...ಕಡ್ಡೀ ಮಸೀಲದ್ಕೊಂಡು ಕಾಗದದ್ಮೇಲಿಟ್ಟೋಡ್ಸೋದು ? ...ನಾನು? ನರ... ಸಿಂಹ್ಯಯ್ಯ! ... never !... (ಆರ್ಭಟಿಸುತ್ತಾ) ಬರಿ... **ಇಪ್ಪತ್ತೈದು ರೂಪಾಯಿ !...** (ಲೇಖಣಿಯನ್ನು ಹಿಡಿದ ಅರ್ಧಾಂಗಿಯ ಚಾರುಹಸ್ತವು ಚಲಿಸದಿರಲು, ಥಟ್ಟನೆ ಧ್ವನಿಯನ್ನು ಸಂಚಿಸಿ, ವಿನಯಮುದ್ರೆಯನ್ನು ಅವಲಂಬಿಸಿ) at least 15...ನಿನಗ್ಗೊತ್ತಿಲ್ಲಾ...Circumstancesಊ...ದಮ್ಮಯ್ಯ......ಕಣೇ...

ನಾಯಕಿ : (ಮೇಜಿನಿಂದೆದ್ದು) ಹಾಗಾದ್ರೆ, ನಾನೇನು ಬರ್ಯೋದಿಲ್ಲಾ! ನೀವ್ರೋ post-postಗೂ ಚಾಕರೀಗೆ ಅರ್ಜಿ ಬರೀತಾಲೂ......delivery··· deliveryಗೂ ಬರ್ತರ್‌ಫ್ ಆರ್ಡರ್ನ ಸ್ವೀಕರಿಸ್ತಾಲೂ ಇರೋ ಸಂತೋಷ್ದಲ್ಲಿ ಮುಳುಗ್ತಾಲೂ ತೇಲ್ತಾಲೂ ಇಧೀರಿ... ನಾನಿದುವರಿವಿಗೂ ಮಕ್ಕಳ ಮೈಗ್‌ಬಂದು...ಡಾಕ್ಟರ್ ಬರಕೊಟ್ಟ ಔಷಧಕ್ಕೆ ಅಂತಲ್ದೆ ಬೇರೆ ಯಾವ್ದಕ್ಕೂ ಬರೀಲಿಲ್ಲ ... ನಮ್ಮಪ್ಪನಿಗೆ .. ದುಡ್ಡುಕಳ್ಸೋಕೆ! ಈಗ ಕೂಸಿನ ಮೈಗೇನೂ ಭಯವಿಲ್ಲ. (Pointing to R. Cradle) ....ಮಗುವ್ರೂ ಓಡಿಯಾಡ್ತಿಧಾನೆ... ಅವರ ಕ್ಷೇಮಾನ್ನೂ, ನಮ್ಮಪ್ಪ ಇದುವಗರ್ೂ ಕಳಿಸಿದ್‌ದುಡ್ಡೆ ನಾವು. ಅಂದ್ರೆ ನಾನು. ಕೃತಜ್ಞರಾಗಿರೋದ್ನೂ ತಿಳ್ಸೋಕೆ ಬರಿಯೋಕೆ ಪ್ರಾರಂಭಿಸಿದ್ದು...ಕಾಗದಾನ...(with set teeth)··· ಇನ್ನು ಅಪ್ಪನಿಗೆ ಬರೀಯೋದಿಲ್ಲ......(ಲೇಖಣಿಯನ್ನು ಮೇಜಿನಲ್ಲಿ ನಾಟಿಕೊಳ್ಳುವಂತೆ ಕುಕ್ಕಿ... ಥಟ್ಟನೆ ಎದ್ದು ನಿಂತು) ಇನ್ನು ಮುಂದಿನ ಕ್ರಮ ನೀವು ನಿರ್ಧರಿಸಿದ್ದು! ಇನ್ನುಮುಂದೆ ನೀವು, ನೀವಾಯ್ತು...ನನ್ನ ಮಕ್ಕಳು ನಾನು...ನಾವಾಯ್ತು!

[ಮೂಗನ್ನು ಸೂರಿಗೆ ಎತ್ತಿ ವಿಮುಖಳಾಗುವಳು]

ನಾಯಕ : ಅಯ್ಯೋ ಇಲ್ಲವ್ರೋ! ?...ಆಗ್ಹೋಯ್ತೋ ಇಲ್ವೋ?! ಆಗೇ... ..ಹೋಯ್ತೋ ಇಲ್ವೋ ?...ಖಾತ್ರಿ ತಾನೇ.......ನೀನೂ ನಿನ್ನ ಮಕ್ಳೂ ನೀವಾಯ್ತೋ ಇಲ್ವೋ ?...ಇನ್ನೇನೂ (ತೋಳುಗಳನ್ನು ಜೋಲಾಡಿಸುತ್ತಾ) ನಿಸ್ಸೂರಾಯ್ತು!...ವ್ಯಕ್ತೀಗೆ.. ವಿವಾಹಿತನಾದ ವ್ಯಕ್ತೀಗೇ. ತನ್ನ ಕೈಹಿಡಿದ ಕಾಂತೇನೂ. ತನಗೆ ಹುಟ್ಟ ಕುವರರೂ ತಾವ್ತಾವೇ ಆದ್ಮೇಲೆ ತನಗಿನ್ಯಧೇ ಬಾಕೀ......?

ತಾನು ಬ್ರಹ್ಮಚಾರಿಯಾಗಿ ಹುಟ್ಟಿ, ತನಗೆ ಸಂಸಾರದ ಜವಾಬ್ದಾರೀ ಬೇಡಾ...ಬೇಡಾಂತ, ತಾನ್ ಕಾಶೀಯಾತ್ರೇಗೆ...ಜ್ಞಾಪಕ ಇದ್ಯೇ ?...ನಮ್ಮ ಮದ್ವೇದಿನಾ....ಕಾಶೀಯಾತ್ರೇಗೇಂತ ಹೊರಟಾಗ, ತನ್ನ ಕೈಕಾಲು ಹಿಡಿದ್ನಿಲ್ಸಿ, "ಕನ್ಯಾದಾನ ಕೊಡ್ತೀನೇ"ಂತ...ಸಂಸಾರಸಾಗರದಲ್ಲಿ ಮುಳುಗ್ಸೋಕೆ....ನನ್ನ ಕುತ್ಗೆಗ್ ನಿಮ್ಮಪ್ಪ ಕಟ್ಟಿದ ಕಲ್ಲು. ತಾನ್ ತಾನಾಗ್ಯೇ ಸಡಲಿಸ್ಕೊಂಡು ತನ್ನ ಕುತ್ಗೆಭಾರಾ ತಪ್ಪಿದ್ಮೇಲೇ . ತನಗಿನ್ನೇನ್ ಭೀ ? .. ನಡಿಯೋದೇ ಮಾರ್ಗಾನ್ಗೆ...... ನಿನಗೆ ತಾಳಿಕಟ್ಟಿದ ದಿನ ಹೊರಟಿದ್ದ ಕಾಶೀಗೆ ಈಗ. ಈವತ್ತು. ಈದಿನ. ಈಗ್ಲೆ. ಈಕ್ಷಣ-ದೊಪ್ಪೆ. (ಹೊಸಲನ್ನು ಸಮೀಪಿಸಿ. ಈಟಿಗೆ ಊರಿದ ವಾಮಪಾದ. ಆಟಿಗೆ ಏರಿಸಿದ ದಕ್ಷಿಣ ಪಾದ ದೊಂದಿಗೆ ತಾಂಡವಮೂರ್ತಿಯನ್ನು ಅನುಕರಿಸಿ. ಅರ್ಧಾಂಗಿಯನ್ನು ದುರುಗುಟ್ಟಿ ದೃಷ್ಟಿಸಿ. ಆರ್ಭಟಿಸಿ) ಇಕೋ ನೋಡು...ಕಾಲು ಹಾಕ್ದೆ . ಕಾಶೀಕಡೇ.. (makes a vigorous hop-step to-wards the door) ನೀನು ಏಡುಕೊಳ್ಳೋದೇನಾದ್ರೂ ಇದ್ರೇ, ಬೇಗ್ನೇ ಬೇಗ!

ನಾಯಕಿ : (ಗೋಡೆಯನ್ನು ಕುರಿತು ಗದ್ಗದ ಸ್ವರದಿಂದ) ನುಡೊಂದ್ ಕೋರಿಕೆ ಇದೆ.... ಇಷ್ಟುದೂರ ಯಾತ್ರೇಗೇ...ಂತ ಹೊರಟೋ ಬಿಟ್ಟಮೇಲೆ ..ತ್ವಾ ಯಾವಾಗ ಕಾಣ್ತೀದೋ ಏನೋ ಕಾಣೆ...ಕೊನೇ ಕೋರಿಕೇನೋ ಏನೋ...ಭಯವಾಗುತ್ತೆ...!

ನಾಯಕ : (ಈಕೆಯ ಸ್ವರವು ಗದ್ಗದ. ಅತಿ ಗದ್ಗದವಾಗುವ ಕ್ರಮೇಣ. ಹೊಸಲಿನಿಂದ ಹೊರಚಾಚಿದ ಅವಯವದ ಜಾನುವನ್ನು ಮಡಿಸಿ ಅವಯವವನ್ನು ಒಳತಂದು ಪಾದವನ್ನು ನೆಲಕ್ಕೆ ಘಟ್ಟಿಸಿ. ಬಾಹುಯುಗ್ಮವನ್ನು ವಕ್ಷಸ್ಥಳದ ಮೇಲೆ ಬಿಗಿದು. ಕಟ್ಟಿ. ಸಹಧರ್ಮಿಣಿಯನ್ನು ರೌದ್ರ ದಿಂದೀಕ್ಷಿಸುತ್ತಾ. ಕೆಣಕಿದ ಕೇಸರಿಯ ಅಡಗು ಗರ್ಜನೆಯಂತೆ ಹೂಂಕರಿಸುತ್ತಾ) ಗೊತ್ತು ! ಕೊನೇಗೆ ಕುಗ್ಗ್ತೀಯಾ ಅಂತ!! ಗೊತ್ತು...(ವದನವನ್ನು ಸೂರಿಗೆತ್ತಿ.. ನಿಮೀಲಿತ ನಯನನಾಗಿ. ತಾತ್ಸಾರ ದಿಂದ) ಏನದ್ಕೋರ್ಕೆ? ಕಿಲ್ರ್ಟ!...ಕಿಲ್ರ್ಟ!...

ನಾಯಕಿ : (ಶೋಕಸ್ನಿಗ್ಧಸ್ವರವನ್ನು ತಾಳಿ) ಎಲ್ಲಾರವಾಗೂ...ಇದ್ದಿದ್ದರೆ ನೀವು...ಹೋಗ್ ಬಹುದಾಗಿತ್ತು...ಕಾಶೀಗೂ.... ...ರಾಮೇಶ್ವರಕ್ಕೂ...ಅದ್ರೇ...

ನಾಯಕ : ಓಹೋ!...ಎಲ್ಲಾರಹಾಗೂ ಅಲ್ವೋ...ನಾನು ? ಹೂಂ...! !

ನಾಯಕಿ : ಅದಕ್ಕೆ...ಕಾಶೀಗ್ಹೋಗೋಕಿಂತ...ಅದೇನೋ...ಗೌ.. ರೀ....ಶಂ.. ಕ...ರ... ವಂತೆ...ಹಿಮವತ್‌ಪರ್ವತದಲ್ಲಿ...

ನಾಯಕ : (ವದನದಲ್ಲಿ ಕಾಳಸರ್ಪವನ್ನು ಕಂಡ ಗುಬ್ಬಿಯಂತೆ. ಗುಡ್ಡೆಗಳನ್ನು ಹೊರಳಿ ಸುತ್ತಾ. ನೆಲಸಮಕ್ಕೆ ಕುಗ್ಗಿ) ಹಯ್ಯಯ್ಯೋ!....ನೀನೇನು ಹೆಂಗ್ಸೇನೇ...ಹೆಬ್ಬುಲೀನೇ!...ನನ್ನೇ! ನಿನ್ನ ಸ್ವಾಮೀನೇ! ನಿನ್ನ ಪ್ರಭೂನೇ!..."ಪತಿಃಪರಮೇಶ್ವರಪ್ರಭುಃ"ನ!.. ಕೃಮಿಗಾಗಿ ಉಜ್ಜೆದ್ದಾಗೆ ಕಾಲ್ನಿಂದ ಒದ್ದು ಉಜ್ಜೀಯಲ್ಲಾ...ಇನ್ನು ನಿನ್ನ ಶಾರ್ದೂಲ ಜಠರಕ್ಕೆ...(Suddenly snatching his kiddies) ನನ್ನ ಈ ಶಿಶುಗಳ್ನ ಗ್ರಾಸವಾಗಿ ಬಿಟ್ಕೊಡ್ತೀನೇಂತ್ಕೊಂಡಿದ್ದೀಯಾ ? ......ವ್ಯಾಘ್ರಿ!......never!! ಊಹು ! ನಾನಾಯ್ತು ನನ್ನ ಮಕ್ಕಳಾಯ್ತು...ಗಂಗಾಯ್ತು ಹರ್ದ್ವಾರಾಯ್ತು...ನಿನ್ನ ಹಾಳು ಅಪ್ಪನಾಯ್ತು......ಹೊರ್ಡ್ತು ಹೊರ್ಡ್ತೆ! (ಕೈಯನ್ನು ಬೀದಿ ಬಾಗಿಲಕಡೆ ಚಾಚುವನು. ಈಕೆಯು ಬಿರುಸಾಗಿ ಹೊಸಲುದಾಟಲುಪಕ್ರಮಿಸುವಳು) ಇನ್ನಾರೇ... ಎಲ್ಹೋಗ್ತೀಯೇ...ನನ್ನ ಮಾನಾಕಳಿಯೋಕೆ ? ..ಹೊಗ್ಲೊರ್ಗೆ ಏನ್ಮಾಡ್ತೀಯೇ ?...ನಿನ್ನ ಹೊಟ್ಟೇ ಪಾಡ್ಗೇ ?...

ನಾಯಕಿ : ಮಾಡೋದೇನು ?......ನಿಮ್ಮ ಜವಾಬ್ದಾರಿ ಇಲ್ಲ. ಮಕ್ಕಳ ಜವಾಬ್ದಾರೀನೂ ಇಲ್ಲ...ಕಸೂತೀ ಕೆಲ್ಸದಲ್ಲೋ...ಇಲ್ಲ. ದೇವರ್ನಾಮ ಹೇಳ್ಕೊಡುತ್ಲೋ... ಇಲ್ಲಾ ಕಾಲನಪ್ಪುದಿ ಕುಟ್ಟಿಯಾದ್ರೂನೋ...ನನ್ನ ಬದುಕು ನಾನು ಗಿಟ್ಟಿಸ್ಕೋತೇನೆ...

ನಾಯಕ : ಬಾರದಷ್ಟುದಿ ಕುಟ್ಟೀಯಾ?......ಹಾಗಾದ್ರೇ ಅದಕ್ಕೆ ಬೇಕಾದ್ರೆ first class certificateನ ನಾನ್ supply ಮಾಡ್ತೀನಿ......charge ಇಲ್ದೆ. ಕರೇಲಿಬಿಡ್ತು... ಬಾರೀ ಮೊಟ್ಟೇಲಿ ಸತ್ತು......ಬಾರದಷ್ಟುದಿ ಕುಟ್ಕೊಳ್ದ್ಯಾಕೇ......ರಾತ್ರಿ ರಾತ್ರಿ ತಪ್ದೆ ಅವಲಕ್ಕಿ ಮೊಸರು ಮೊಂದೂಮೊಂದೂ ಮೋದ್ನಿ ಮಸ್ಕೋ certificateನೂ ನಾನೇ ಒದಗಸ್ತೀನಿ... ಇದೋ ನೋ.....ನಿನ ಕಣ್ಣಿಂದ ಈಗ ಸುರಿಬೇಕಾದ ನೀರು, ನೆರೆಹೊರೆಯೋರು ಕರೇಸಿಬಿಟ್ಟಿಂದ ನನ್ನಕಣ್ಣಿನ ಎತ್ತಿ ತಂದ್ ಏಸೀತಾರಲ್ಲಾ, ಆಗ್ಲುರಿಯುತ್ತೆ...ನಿನ್ಕಣ್ಣಿಂದ!...ಹೊರ್ಟೆ...ನಿಜವಾಗಿ ಹೊರ್ಟೆ!

[Exit ರಭಸದಿಂದ]

ನಾಯಕಿ : (ದಿನವೂ ಈ ರೀತಿ ನಡೆಯಲಿದೆಯೆಂಬ ಭಾವನೆಯನ್ನು ತೋರ್ಪಡಿಸುತ್ತ, ಅಡಿಗೆಮನೆಯ ಕಡೆ ಘಟ್ಟನೆ ಹೋಗಿ ಅಟ್ಟದ ಮೇಲಿಟ್ಟಿದ್ದ ಅಡಕನ್ನು ಹೊರತೆಗೆದು ನೋಡಿ, ಬರಿದಾಗಿರುವುದನ್ನು ಕಾಣುವ ಮೊದಲು "ಎಲ್ಲೀಗೆ ಹೋಗ್ತಾರೆ?....ಕಂಡೇಇಧೆ! ಹಸಿವಾಗೋ ಹೊತ್ತಿಗೆ ಮಾಲಿನಲ್ಲಿ ಮಾಡು!" ಅನ್ನುತ್ತಿದ್ದವಳು, ಧ್ವನಿ ಬದಲಾಯಿಸಿ) ಸರಿಹೋಯ್ತು! ಬರೀ ಹೊಟ್ಟೆಯಾಗೆ! ರಾತ್ರೀಗೆ ಮಕ್ಕಳಿಗೇಂತ ಮಾಡಿಟ್ಟಿದ್ದ ಉಪ್ಪಿಟ್ಟಿನ ಪಾತ್ರೆ ಬರೀದು ಮಾಡಿಟ್ಟಿರೋರಿಗೆ ಏನೀಹೊಟ್ಟೇನೋ? ಸರಿ! ಅದು ಜೀರ್ಣಸೋಪರಿಗೆ ಇವರ ಆರ್ಭಟ! ಇನ್ನು ಸಾಯಂಕಾಲಕ್ಕೆ ತಿರ್ಗೀ ಬಂದ್ನೇರ್ತಾರೆ ಊಟದ್ಹೊತ್ತಿಗೆ! ಒಳ್ಳೇ ಹಣೇಬರಹ ನನ್‌ದು!

[ಘರದೆ]

ದೃಶ್ಯ ೨

[ಸ್ಥಾನ : ರಾಮಪುರದ ದೊಡ್ಡಕೆರೆಯ ಕಟ್ಟೆ]

ನಾಯಕ : (ಗಗನವನ್ನು ಆಗತಾನೇ ಆರೋಹಿಸುತ್ತಿರುವ ಸ್ವರ್ಣಕಿರಣನಾದ ರವಿಯ ಪ್ರಭಾವದಿಂದ ಪ್ರಕಾಶಿಸುವ ಪ್ರಕೃತಿ ಭಾಗ್ಯವನ್ನು ಕೆರೆಯ ಸೋಪಾನದ ಕೊನೇ ಮೆಟ್ಟಲಿನಮೇಲೆ ನಿಂತು ಗಮನಿಸುತ್ತಾ ಚಾಚಿದ ಕೈಗಳಿಂದ ವಿಹಮೇದಿನೀ ಸಂಸರ್ಗ ಚಕ್ರವನ್ನು ಅನುಕರಿಸಿ ಬೀಸುತ್ತಾ) ಕೊನೇ look ಉ! ಕೊನೇದೇನೂ....ತುದೀದೇನೂ...ಯಾವತ್ತು ಸೃಷ್ಟಿ ಆಯ್ತೊ, ಯಾವತ್ತು ಪ್ರಳಯಾ ಬರುತ್ತೋ ತಾಪತ್ರೂ...ಇದೇ sunಊ. ಈಗಿಲ್ಲಿರೋ ಇದೇ moonಊ. ಇದೇ treesಊ ಇದೇ wifeಊ. ಲೊಟ್ಟುಲೊಸ್ಕು.... .... (ಭ್ರುಕುಟಿಗಳನ್ನು ರಚಿಸುತ್ತಾ) ಅದಾ ಕೊ? ಆಯುಸ್ಸೆಲ್ಲಾ ಗಮನಿಸದ ಐಹಿಕ ಬಾಬತ್ತುಗಳ್ನಾ ಅಂತ್ಯಕಾಲದಲ್ಲಿ ಗಮನಿಸ್ತಾನೆ........ ವ್ಯಕ್ತಿ! ಯಾಕೇನೂ .. ಬಿಟ್ಹೋಗ್ತಾನ್ಲ್ಯೋರು. ಮೂರ್ಖಸಿಯಂ. ಲಾಲ್ಬಾಗ್ಗೊಳ್ಗಾಯ್ರೋ ಹೊತಲ್. ಬೆಂಗಳೂರಿನೋರು "ಬದ್ಧೀರ್ ನಮ್ಮೂರಿನ ಕಡ್ಗಾ"ಂತ ತಾತ್ಸಾರಿಸೋ ಹಾಗೆ (ತಾತ್ಸಾರ ನಟನೆ ನಟಿಸುತ್ತಾ) ನಮ್ಮ ಸೂರ್ಯ.........ನಮ್ಮ ನಕ್ಷತ್ರ.........ನಮ್ಮ ಲಾಲ್ಬಾಗಲ್ಲೇಲ್ಲುಟ್ಟಿ. ನಾನೋಡಗಾಯ್ತೋವಾಗ, ನಮ್ಮ ಬಿಸಲು ಮಚ್ಚಿನಮೇಲೆ ಹಾಸ್ಕೋಗೋ ನಮ್ಮ ಚಂದ್ರಾಂತ. "possession is nine points of ಪಾಲ್ಮಾರ್ಕ್!!" ಅಂಬೋಸ್ಗೆ ಅಂತ್ಯಕಾಲಬಂತೋ!. ......"ನನ್ನ ಮೇಲೆ ತಪ್ಪು ಇವುಗಳ್ನ ನೋಡ್ತೇನೋ ಇಲ್ವೋಯೋ ಸಂದೇಹದಲ್ಲಿ ನೆಂದು ನಡಗ್ತಾ ದಯಾಯಿಲ್ಲದ ಮನಸ್ಸು cast ಮಾಡ್ತಿರೋದು. ಈ longing......lingering...... last look ನ!....

ಕಾರಣ ಏನು ನನ್ನೊ...ಸತ್ತೇ ಸತ್ತೆ...ಮುಂದೇನಾದ್ರೂ ಇತ್ತೋ......ಉಂಟು... ಇಲ್ವೆನ್ನೊ...ಇಲ್ಲ!.. ಇಲ್ಲಾ!!...ಪೆದರ್ಕೊಂಡು ಓಜಂಡೆದ್ರೋ. ಇದ್ರೇ ಇಧೆ....ಹಳೇ life ಉ;

'jobs hunt ಮಾಡೋದು......ಜಾಬು ಸಿಕ್ಕೋ sack ಆ dodge ಮಾಡೋದಂಗೂ dodge ಮಾಡೋದು ; ಬಿತ್ತೋ ಬುರುಡೇಗೇ...ಸುದಾರಿಸ್ಕೊಂಡು...ತಿಪ್ಪೆ ಹಾಕಿ ಮಣ್ಣಿ : "Respected Sir, Being given to understand a Vacancy"...ಅಪ್ಪಾ ! ಇನ್ನು ಊರ್ನೋರೋ......ಕುರಿ ತೋಳ ಸಮಾಜ ! ಇತ್ಕಡೆ ಇಲ್ಲ ಅತ್ಕಡೆ : ಸೇರಬೇಕು. Compromise ಏ ಇಲ್ಲ. ಇನ್ನು ಮನೇಲೋ ನನ್ನ ಮಕ್ಳನ್ನ ಕಿತ್ಕೊಂಡು ಮಾಂಗೋರೆ ಗಳನ್ನು ಬಿಟ್ಕೊಂಡಿರೋ ಮಾರಿ ನನ್ನಮನೆ ಆಕೆ...ಮತ್ತಿನ್ನೇನು option ಇಧೆ ಮನುಷ್ಯನಿಗೆ ?... ಮೃತ್ಯು...ಲಾಗಾಯತ್ನಿಂದ lay down ಆದ Law of life and...ಮೃತ್ಯುವೇ !!... (ಅತಿನೀಳವಾದ ನಿಟ್ಟುಸಿರನ್ನು ಉಸುರಿ, ಹಸ್ತಗಳನ್ನು ವ್ಯೋಮಕ್ಕೆತ್ತಿ ಜೋಡಿಸಿ, ಬಂಧಿಸುವ ಕ್ಷಣಾಂತ್ಯದಲ್ಲಿ ಥಟ್ಟನೆ ಸ್ತಬ್ಧನಾಗಿ). ಹೌದೂ !!...ಅಳ ?...(Smiling)...ಒಳ್ಳೇ ಹುಚ್ಚು ನಾನು ! ಅಸುಗಳ್ನ ವದ್ರೋನಿಗೆ ಆಳಬೇಕೇ !...ಮೂಗ್ಮೇಲ್ಗೋಪ್ಟು ನೀರಿಗಿಂತ ಬೇಕೇ...ಮೃತ್ಯುವಿನ ಘಟನೆಗೆ ? (ಪೂರ್ವೋಕ್ತ ಲಂಘಿಸಲುಪಕ್ರಮಿಸಿ ಸ್ತಂಭಿತನಾಗಿ)...ಭಂಡೆಗ್ನ !!...ಭಂಡೆ ಇದ್ಕಡೆ ಮುಳ್ಳು ಮುಂದೆಗೆ ತಾಕಿ ಬುರ್ಡೆ ಬಿರ್ದು, ರಕ್ತಕಕ್ಕಿ, ಮೂರ್ಛೆ ಆದ ನನ್ನ ಮೊಣಕಾಲಾಳ್ದಿಂದ ದಾಕ್ಕೆಳದ್ದಾಕಿದ ಊರ್ನೋರು, ಹಲ್ಲುಕಿರ್ದು ಹಂಗ್ನೋಕೆ ಹೊಣೆಯಾಗೋದೇನ್ನಾನು ! ನರಸಿಂಹಯ್ನ ! **ನರಸಿಂಹಯ್ಯ !**...ಎದ್ದೂ ಇಲ್ಲ...ನಗ್ತಿರ್ಬೇಕ್ನನ್ನೀ...."ನಮ್ಮ ನ್ಹೆಂಸಿ. ನಮ್ಕೊಂಪೆ ತಪ್ಪಿಸ್ಕೊಂಡು, ಸಗ್ತಾಹೋದ್ನಲ್ಲಾ ಭೂಪ್ಪೀ"ಂತ ನಾಚಿಗ್ಗೆಟ್ಕೊಂಡು. ಅಲ್ಲ, ಜೋಪಾನ ವಾಗೆತ್ಕೊಂಡ್ಹೋಗಿ ನನ್ನ ಶವಾನ, "ತಾಳೀಕಳಕೊಳ್ಳೋ ನಿನ್ನಾ ಸೀಲಿ ನಿನ್ನ ಗಂಡನ್ನ ಸಾಗಿಟ್ಟಿದ್ದೂ ನೂವೆ ನೀನು, ನಮಗೆ ಬೇಕಾಗಿದ್ದೋನ್ನ ಕೊಂದ ನಿನ್ನ, ಮೂರಿ ಕೇಸ್ಗೆ ದಸ್ತಗಿರಿ ಮಾಡ್ತೀವೇ"ಂತ. ನನ್ನ ಹೆಣಾನ ಮೆಲ್ಲಗಿಳ್ಸಿ ಈ ಚಂಡೀನ C h a r g e ಮಾಡೋಷ್ಟು ರೌದ್ರಕ್ಕೆ ರಾಮರಾಮ್ಮುರಾನ್ನೇ ರೇಗ್ನೋ ಹಾಗೆ, ನಗ್ತಿರ್ಬೇಕು ನನ್ನ ಶವ !! ನಗ್ತಿರ್ಬೇಕು !...ಸರಿ. (resignedly) ಪಾದುಕ ಹಾಕಿದಹಾಗೆ ಹಾಕೋದು, ಹೆಜ್ಜೆಮುಂದ್ಹೆಜ್ಜೆ, ಹುಷಾರಾಗಿ ; ಕುತ್ತಿಗೇಗೆ ಕಿರುಂತಾಕಿದ್ದಾವೆ ಹಾಕೋದು, ಹಸನ್ಮುಖಿನಾಗಿ ಆಸನ ಯೋಗಾಸನ...ಪ್ರಾಣತ್ಯಾಗಾಸನ...(ತನ್ನ ಆ ಜಠರೋದ್ಭವ ಉಸಿರನ್ನು ಉಸಿರುತ್ತಾ ಬಗ್ಗಿ, ಕೈಯಿಂದ ನೀರನ್ನು ಮುಟ್ಟಿ ತೃಪ್ತನಾಗಿ...ಪಾದ ವನ್ನು ನೀಡಿ ನೀರು ಸೋಕುತ್ತಲೂ, ಅಗ್ನಿತಪ್ತನಂತೆ ಅವಯವವನ್ನೇ ಹಿಂದೆಳೆದು ದಾರುಣ್ಯದಿಂದ ದಂತಘರ್ಷಣವನ್ನು' ಗೈಯ್ಯುತ್ತಾ) ಇದ್ಯಾಕೋ ? ಒಂದೇ ದೇಹವು...ಒಂದೇ ನರಗಳು ಒಂದೇ ರಕ್ತ, ಆ ಪಾದಮಸ್ತಕಾನೂ : ಆದ್ರೂನೂವೆ ಅಂಗೈಗೆ ಅಗ್ನಿಯಾಗಿರೋ ನೀರು ಅಂಗಾಲಿಗಾನೇಕಲ್ಲು ! ಯಾಕೋ ಕಾಣೆ ! Science ನೋರ್ಗೆ ಒಂದು problem ಉ!... problem ಬಿಡ್ನೋಕಲ್ಲಾ ಬಂದಿದ್ದಾನು, ಪ್ರಾಣಬಿಡೋಕೆ (ಹಕ್ಕಿಂ ಪಾದವನ್ನು ನೀರಿನ ಜಾಚಿ ಸ್ಪರ್ಶ ಮಾತ್ರ ಹಿಂದೆ ಸೆಳೆದು) .... ಆದ್ರೂ **ಅನ್ಯಾಯಾಂದ್ರೆ** ! ಕೊರೀತಾಇದ್ದೆ ಹಾ... ಕೊಂಡೆವರ್ಗೆ !...ಯಮನಿಗಿಲ್ಲದ ಅವಸರ ನನಗೇನೂ ಇಲ್ಲ ಇನ್ನೊಂದು ಅರ್ಧ ಘಂಟೆ ಆಚೆಗೆ attendance ಹಾಕ್ಕೊಂಡ್ರೂನೂವೆ. ನನ್ನ latest and last boss ಊ ಶೀಕರ ರಾಯನ ಹಾಗಲ್ಲ. ಈ ಯಮ, ಎಷ್ಟಾದ್ರೂನೂವೆ. ಆ ಯಮ—ಧರ್ಮರಾಯ .... (ಅಪದೋದ್ಭವವೋ ಎಂಬಂತಹ ಉಸಿರನ್ನು ಉಚ್ಛ್ವಾಸಿಸುತ್ತಾ)...ಛಿಕಲು ಬ್ಲರ್ ಭಿಸ್ಲ್ಲ (ಯಥಾ ಸೌಕರ್ಯಂ ಮೆಟ್ಟಲನ್ನು ಅಲಂಕರಿಸುವನು).. . ... ದ್ರಾಣಭಯಾ ಬೋದು ಮನುಷ್ಯನಿಗೆ ತಜ್ಜನ್ಯ : ಇದು ಪರಿಹಾರವಾಗೋದು ಪ್ರಾಣಘಾತಿಗಿಂತ ಜೀವನ ಭೀತಿ ಜಾಸ್ತಿಯಾದ್ರೇನೇ ..... ನನಗಾಗಿರೋ ಹಾಗೆ ..... (ನಿಟ್ಟುಸಿರು ಬಿಡುತ್ತಾ) ಪಾಪೋ ! ನಮ್ಮಮ್ಮ...ಹಸುಳೆಯಾದ ನನ್ನ......ತೊಟ್ಲಲ್ಲಿಟ್ಟು ತೂಗ್ತಿದ್ದಾಗ. ಅವ್ಳ ಶ್ರೀಮಂತ ಸಂಸಾರ ಅವಳ ಹಾಗಿನ ಒಬ್ಬ ಸ್ತ್ರೀಯಿಂದಲೇ ಹೀಗೆ ಪರಿಣಮಿಸತ್ತೇ ಅಂತ ತಿಳಿದಿದ್ಲೇ ?...ಸ್ತ್ರೀ... ಅದೂನೂ ಎಂಥಾ ಸ್ತ್ರೀ ? ಅವಳ ಮಗನ ಕೈ ಹಿಡ್ದು ಅವಳ ಮೊಮ್ಮಕ್ಕಳ್ನ ಹೆತ್ತ ಸ್ತ್ರೀ !...... ಇಲ್ಲಾ ! ನಾನ್ನಾನೇ ಅಗ್ನಿ. ನಾನುಟ್ಟಿದ್ದೇನು ?...ನನ್ನ ಕುಲವೇನು ?...ನನ್ನ ವಿದ್ಯೆ ನೇನು ?... ನನ್ನ ಗೋತ್ರವೇನು ?...ವಿಶ್ವಾಮಿತ್ರ ಗೋತ್ರ !......ಚಂಪೂಕವಿ ಹೇಳಿದಹಾಗೆ. "ನಾಥಸ್ತ್ರ

ಪರಾಕ್ರಮಃ"...ಮಮ್ಮಿಯೋ !...ಪರಾಕ್ರಮವಿಲ್ದ, ಆತ್ಮ weakness ಮಟ್ಟಿಗೂ ವ್ಯಕ್ತವಾಗುತ್ತಿದೇನಲ್ಲ !...ಕೈಹಿಡಿದ ಹೆಂಗಸ್ನ command ಮಾಡೋಕ್ಕಾಗ್ದೆ ಕೆರೆ ಬೆಚ್ಚಗಾಗಲೀಂತ ಕಾದಿದೇನಲ್ಲ ...ಇದು Cowardice ಉ ! (ಪ್ರಕೃತಿಯನ್ನು ಸೂಚಿಸುತ್ತಾ) ಇದೇನ್ನಮ್ಮನೇ ನೀರುಮನೇನೇ ! ಸೂರ್ಯನೇನು ಒಲೇ ಉರಿಸೋ ಕಟ್ಟಿಗೇನೇ ! ಈ ಕೆರೆಯೇನು...ಹಂಡೇನೇ ? (ಎದೆಯನ್ನು ಉಬ್ಬಿಸುತ್ತಾ) ಇದು ಹುಚ್ಚು !...ಹೇಡಿತನ ! ನಾನು ಗಂಡ್ಸು ! (ಮೀಸೆಯನ್ನು ತಿರುವುತ್ತಾ) ಪರಮಾತ್ಮ ಹೇಳಿದ್ದಾಗೆ 'ಮಮಪ್ರಾಣಾಹಿ ಪಾಂಡವಾಃ'ಂತ, ಪಂಚ ಪಾಂಡವರ ಹಾಗಿರೋ ನನ್ನ ಪ್ರಾಣಗಳ್ನ ಕೆರೆ ಕೆಸರು ಮುಕ್ಕಿಯೇ ಕಳಕೊಳ್ಳೋದು......**never** (ಕೂತಹಾಗೆಯೇ ಸೋಪಾನದ ಒಂದು ಮೆಟ್ಟಿಲನ್ನು ಹತ್ತುವನು)...ಆದ್ರೊಂದು ಅನರ್ಥರ ! ಗಂಡನ್ನ ಕಳಕೊಂಡ ಗೋಳಾಟದಲ್ಲಿ ಮುಳಗಸ್ಲೇಬೇಕು ಇವಳ್ನ ! ಹ್ಯಾಗೆ ಹೊಂದಿಸೋದು...?...ಈಗ್ನಾನೂ ಸಾಯ್ದೆ ಇವಳನ್ನೂ ನಾನಿಲ್ಲದ್ದಾಗೆ ಮಾಡೋಕೆ, ಒಂದೇದಾರಿ....ಬಟ್ಟೆಗಳನ್ನು ನೀರಿನಲ್ಲೆಸ್ದು, ಯಾರಾದರೂ ಪತ್ರಗಿತ್ರ ಓತ್ತಾಡ್ತಿರೋವಾಗ "ಕಿಟಾರ್" ಅಂತ ಕಿರಲ್ಬಿಟ್ಟು ಜನಗ್ಳು ಬರೋಷ್ಟರೊಳ್ಗೆ ಎಲ್ಲಾದರೂ ಅವ್ತುಕೊಳ್ಳೋದೇ best thingoo (ಹಾಕಿಕೊಂಡಿರುವ ಬನಿಯನನ್ನು ಎತ್ತಲುಪಕ್ರಮಿಸಿ ಶೀತವಾತವು ಉತರ ಪ್ರದೇಶಗಳಿಗೆ ಸೋಕಲು, ಅಂಗಿಯನ್ನಿಳಿಸಿ ಅಧರೋಷ್ಠ ದಂತಗಳು ಕಂಪಿಸುತ್ತಾ) ಭ್ಛ್......ಭ್ಳ್ಹಿಳ್ಹಿ ! ಮತ್ತಿನ್ನೇನು ! ಇರೋ ಎರಡು ಬಟ್ಟೇನ ಭಿಕ್ಷಾರ್ಯಿಸಿಬಿಟ್ಟು. ಶೀಥ್ನಲ್ಲಿ ಸಾವು ತಪ್ಪಿಸಿಕೊಂಡು, ಗಾಳಿ ಬಾಯಿಗೆ ತುತ್ತಾಗೋದೆ ?—ಇನ್ನಾಮೇಲೆ ಬಿಸಿಲು ಬೇರೆ—ಅಲ್ದೆ ಜನಗಳ ಓಡ್ಯಾಟದ ಧೃಷ್ಟೀಗೆ ಬೆತ್ತಲೆಯಾಗಿ ಬೀಳದ್ದಾಗೆ ಭಾವೀಲಿ ಬೇರೆ ಅವ್ತುಕೋಬೇಕೋ ಏನೋ ಕತ್ತಲೇ. ಕವಿಯೋವರ್ಗೆ ! ?....ಪಂಚಭೂತಗ್ಳಲ್ಲಿ ಒಂದು ತಪ್ಪಿದರೆ ಒಂದು. ಪ್ರಾಣೀಮೇಲೆ ನಿಗ ಇಟ್ಟು ಛಲ ಕಟ್ಟಿರೋವಾಗ ನನ್ನ ಪಾಡೇನೂ ?....ವಿಶ್ವಾಮಿತ್ರನೇ ಗತಿ. (ಜನಿವಾರ ಹಿಡಿದು ಆಕಾಶಕ್ಕೆ ತೋರಿಸುವನು)...........ಊ ಹೂ ! ಬಟ್ಟೆಗಳು ಬಿಡಬಾರ್ದು ! (ತನ್ನ ಬಟ್ಟೆಗಳನ್ನು ಮೇಲಿನಿಂದ ಕೆಳಗಿನವರೆಗೆ ಈಕ್ಷಿಸಿ) Glasgow ಕುಡ್ತ, Manchester ಮಲ್ಲು, Northampton slipper ಉ...ಅಲ್ಲಾ! ? ಹಳ್ಳಿಗಾಡಿನಲ್ಲಿ ಹುಟ್ಟಿಬೆಳ್ದ ಒಬ್ಬ ಹೆಂಗಸಿಗೆ ಹೆದರ್ಕೊಂಡು,...map of England ಏ ಆಗಿ ನನ್ನ ಮೈಮೇಲೆ ಕೂತಿರೋ ಬಟ್ಟೆಗಳನ್ನೇ, ಈ ಬಕಾಸುರೇ ಬಾಯಿಗೆ ಬಲೀ ಇಡೋದು.......ಊ ಹೂ ! **Never let it be said !** (ಥಟ್ಟನೆ ಕೆರೆಯಾಚೆಸ ತೋಟದ ಕಡೆ ಗಮನಿಸಿ) ಯಾರದೂ ? ಓಹೋ ! ದನಕಾಯೋ ಹುಡುಗ್ರು ! (ತಲೆಯನ್ನು ಕೆದರಿಕೊಳ್ಳುತ್ತಾ) ಏನ್ಮಾಡ್ಲೀ !....ಹಾ !....ಒಂದ್ಸಾಗ್ಸ ಬರದು ಬಿಡೋದು....ಊರೋರ್ಗೆಲ್ಲಾ....ಎಂಥಾ ಕಾಗ್ದ !..... ಓದೂತ್ಲೂನೂವೆ, ಎದೆಗಳು ಬಡಕೊಳ್ತಾ ರಕ್ತ ಕಣ್ಣೀರು ಕಾರ್ತಾರೆ...... ನನ್ನೀಸ್ಥಿತೀಗೆ ದಬ್ಬಿದ ಇವಳ್ನೂ......ಇವಳಪ್ಪನ್ನೂ ಇದೇ ಮೆಟ್ಟಿಲಿ ಗೆಳಕೊಂಡ್ತಾರೆಂದು.—ಬಂದೇತಾಕ್ಲ, ತಾಕ್ದಲ್ಲಿ, ಮಂಡೆಗಳಿಗೆ —ದಬ್ಬೇ ಬಿಡೋಷ್ಟರಮಟ್ಟಿಗೆ ರೇಗ್ಸೋ ಕಾಗದ ಒಂದು ಬರ್ದಿಟ್ಟ್ಬಿಟ್ಟು. ದೊಡ್ಡದೊಂದು ಕಲ್ನ, ಕಿಟಾರಂತ್ಕಿಲ್ಚ್ತಾರೆ. ನೀರ್ನಲ್ಲಾ ಕೋದು : ಅದು. "ಧೊಬ್ಬಕ್ಕಟ್ಟೇರ್" ಅಂತ ಜೀಳೋಶಬ್ದಾನೂ. ನನ್ನ ಕಿರ್ಲಾಟಾನೂ. ಕೇಳ್ತಾರೆ. ದನಕಾಯೋ ಹುಡುಗ್ರು ಓಡಿಬಂದು ಮುಂದೆ ನನ್ನ programme ಪ್ರಕಾರ ಜರ್ಗೋದ ಎಲ್ಲಿಟ್ರಾನೆಲ್ಲಾ ಆ ಮರದ ಹಿಂದೆ ಅವ್ತುಕೊಂಡು ನೋಡುತಿರಬಹುದು.

[ಮೇಲೆ ಹೇಳಿದಂತೆ ಜಾಗರೂಕತೆಯಿಂದ, ಒಂದೊಂದು ಅಭಿಪ್ರಾಯವನ್ನೂ ವ್ಯವಸ್ಥೆಗೆ ತರುತ್ತಲು, ದನಪಾಲಕರು ಕಿರಲಿಕೊಂಡು ಬರುವಷ್ಟರಲ್ಲಿ, ದೊಡ್ಡ ಮರದ ಹಿಂದೆ ಅವಿತುಕೊಳ್ಳುವನು.]

[ಕಲ್ಲುಬಿದ್ದ ಶಬ್ದವನ್ನು ಕೇಳುತ್ತಲೇ 'ಅದ್ಯಾರೋ ಕೆರೇಲಿ ಬಿದ್ದವ್ರೆ ಕಾಣ್ರೋ.......... ಬರ್ರೊ...ಈಜೋರ್ನ ಇದ್ದರ್ರೋ...ಅಗ್ಗಾ ತತ್ತರ್ರೋ ! ದೊಡ್ಡೋರ್ನ ಕರತರ್ರೊ'...... ಎನ್ನುತ್ತಾ ದನಪಾಲಕರು, ಕೃಷಿಗಾರರು ಕ್ರಮೇಣ ದಾರಿಹೋಕರು, ಕೊನೆಗೆ ದೊಡ್ಡ ವರ್ತಕರು, ಪೋಲೀಸಿನವರು ಲಾಯರ್ರುಗಳು ಮತ್ತು ಪುರದ ಶ್ಯಾನುಭೋಗರು ಕೆರೆಯ ಕಟ್ಟೆಯಲ್ಲಿ ನೆರೆಯು

ಪರಾ...ರಾಗ್ಗೆ, ಕೂಟವ್ನ ಹಚ್ಚುತ್ತ ಪಾರಪ ಮರೆಯನ್ನು ಹೊಂದಿರುವ ನಾಯಕನು "good ಉ !.. good ಉ ! Very good ಉ !. ....Very very good ಉ!!" ಎನ್ನುತ್ತ ಹಿಗ್ಗುವನು.]

ಶ್ಯಾನುಭೋಗ : ಇದೇನನಾಹುತ ?

ಗೋವಿಂದರಲ್ಲೊಬ್ಬ : ಅ ದಿಕ್ಕೀಮೇಲೆ ಕೂತಿದ್ದೇ ಬುದ್ಧೀ...ಪದಾ ಅಪ್ಪಾ......

ಇನ್ನೊಬ್ಬ : ಏ. ನೇಟ್ಗೇಳ್ಲಾ...ಪದಾ ಅಲ್ಲಾ ಬುದ್ಧೀ...ಲಾವ್ಣೀ...ಪಿರ್‍ಯಾಪಟ್ಣದ ಲಾವ್ಣಿ.

ಶ್ಯಾನುಭೋಗ : (ಮಯೂರಧ್ವಜನ ಮಸ್ತಕದ ಮೇಲೆ ಉಜ್ಜಿದ ಗರಗಸದಂತೆ ಗೋಪಾಲನ ತಲೆಯಮೇಲೆ. ಕೈಯಲ್ಲಿ ಹಿಡಿದ ಕೋಲನ್ನು ಬಂದು ಸಾರಿಪಾಗಿ ಉಜ್ಜುತ್ತಾ)

ನಿನ್ನ ಲಾವಣಿ ಹಾಗಿರಲಿ ! ಇಲ್ಲಾದದ್ದೇನೂ, ಬೊಗ್ಳು ಮುಂಚೆ.

ಗೋವಿಂದ : ನ್ನಾಗೇನ್‌ಗೊತ್ತು ಬುದ್ಧೀ ? ಯಾರೋ ಕಿರ್ಲಿದಾಗೆ ಆಯ್ತು ! ಕೆರೇಲಿ ದೊಡ್ಡಂತ ದುಮ್ಮ್ಕದಂಗಿತ್ತು ! ಕಿರಲ್ತಾ ಕಟ್ಟೇಗ್ಬಂದೆ...ಈ ಕಾಜ್ದಾ ಕಂಡ್ಬಂತು ನನ್ಕಗ್ಗ ಬುದ್ಧೀ. ಈಟೆ.

[ನಾಯಕನು ಉಬ್ಬುತ್ತಾ. "good ಉ boy ಈ...clever ಉ cow boy ಈ ! ಏನ್ observation ಉ ! nature ನ ನೋಡೀ ನೋಡೀ per programme ಮುಂದುವರಿಸ್ತಿಧಾನೆ, ನಾನು ಹಾಕಿದ plan ನ" ಎಂದು ಉಬ್ಬಿ ಕೂಟಕ್ಕೆ ಕಿವಿಗೊಡುವನು.]

ಉಪನಾಯಕ : ಇಲ್ಕೊಡೋ ಇಲ್ಲಿ ! ....(ಗೋವಿಂದನ ಕೈಯಿಂದ ಕಾಗದ ವನ್ನು ಕಸಿದುಕೊಂಡು, ಓದಲುದ್ಯುಕ್ತಿಸಿ. ಓದುತ್ತಾ. ಓದುತ್ತಾ ಮುಖದ ಕೋಪದಗುಟು. ಕ್ರಮೇಣಬಿಚ್ಚಿ. ಬೆಚ್ಚಿ, ಶಾಂತಿಯನ್ನು ಹೊಂದಿ ಮತ್ತೆ. ಆಶ್ಚರ್ಯ. ಭೀತಿ. ಕನಿಕರ. ಕೊನೆಗೆ ಕಣ್ಣೀರನ್ನು ಕಾಗದದ ಮೇಲೆ ಸುರಿಸುತ್ತಾ ತನ್ನಷ್ಟಿಗೆ ತಾನೇ ಗಟ್ಟಿಯಾಗಿ ಗೋಳಾಡುತ್ತಾ)

ಕಡು ಪಾಪಿಗ್ಳು ! ನಾಮೀಪುರವಾಸಿಗ್ಳು, ಕಡು ಪಾಪಿಗ್ಳು !

[ಬಿಕ್ಕಿ–ಬಿಕ್ಕಿ ಅಳುವನು]

ಪ್ರೋಲೀಸು ಆಫೀಸರು : (ಮುಂದಕ್ಕೆ ಬಂದು) ಏನ್ ಸ್ವಾಮೀ ಅದು !

ಉಪನಾಯಕ : **ಏನೂ ಇಲ್ಲ-ಖೂನಿ ಖೂನಿ !**.......ದಸ್ತಗಿರಿ ಮಾಡಿ ಬೇಗ !

ಪೋಲೀಸು ಆಫೀಸರು : ಯಾರನ್ನ ?

ಉಪನಾಯಕ : ಇಲ್ಲಿರೋರೆಲ್ರನ್ನೂ. ಊರಲ್ಲಿರೋರೆಲ್ರನ್ನೂ. ಕೊನೆಗೆ ನಿಮ್ಮನ್ನೂ ದಸ್ತಗಿರಿ ಮಾಡಿ. ಖೂನಿ ಛಾರ್ಜಿಗೆ !. ....ನಂಜಾಪ್ಪರದ ಸರಸಿಂಹಯ್ಯನ ಸಾವು ಗಾನ ಖೂನಿ ಅಲ್ದಿದ್ರೆ......ಖೂನಿಯೇ ಆಗಲಿಲ್ಲ. ನಮ್ಮ ದೇಶ್ದಲ್ಲಿ .....(ಕಾಗದವನ್ನು ನೋಡುತ್ತಾ ಪಣೆ ಯನ್ನು ಹೊಡೆದುಕೊಳ್ಳುತ್ತಾ) ಹಯ್ಯೋ ಪ್ರಾಣೀ !!.........ಪರಿಶೋಧನೀಯ ಪ್ರಾಣೀ !! ನೀನು ಬದುಕಿದ್ದಾಗ ನಿನ್ನ ಯೋಗ್ಯತೆ ಗೊತ್ತಿಲ್ಲದಿದ್ರೂನೂವೆ. ನೀನು ಈ ಕೆರೇಲಿ ಸತ್ತಿರೋ ವಾಗ್ಲಾದ್ರೂ ನಿನ್ನ ಮಹದ್ ಯೋಗ್ಯತೆ ಹೊರೀಬಾರ್ದೇ ಇಲ್ಲಿ ನೆರ್ದಿರೋ ಜನಾಪರ್‍ತ್ರಿಗೆ......... ಇನ್ಸ್‌ಪೆಕ್ಟ್ರೇ ! ನಿಮ್ಮಿಂದ ಆಗಬೇಕಾದ ಕೆಲಸಕ್ಕೆ ನೀವು ಬಾರದಿದ್ದ್ರೂನೂವೆ..... I.G. ಸಾಹೇಬ್ರು ನಾಳಿನಾ ಕ್ಯಾಂಪ್ಗ ಇಲ್ಲಿ. ಈ ಊರಲ್ಲಿ : ಜ್ಯಾಕ್ರಿಬೀನೆ .....ರಂಗಸ್ವಾಮೀರೇ. ಸುನಾಶಿವಯ್ಯ ನೋರೇ. ವೆಂಕಟರಮಣ ಶಟ್ರೀ. ಧರಣಯ್ಯನೋರೇ. ರಾಮಾಚಾರ್ರೀ. ಕಪ್ಪಸ್ವಾಮೀರೇ. ಬುದ್ಧಿ ಸಾಹೇಬ್ರೇ ! Election ಬರ್‍ತಾ ಇದೆ. ಹತ್ರ ಹತ್ರ : ದೊಡ್ಡ ಎಲೆಕ್ಷನ್ನೂ ಅಲ್ದೆ. ದೊಡ್ಡ

ಸಾಹೇಬ್ರು ಜಮಾಬಂದಿ ಬರೋ ವಾರ......ಆ ಗಲಾಟೆಗ್ಳ ಮಧ್ಯೆ. ಆ ಸನ್ನಿಧಾನಗಳ್ ಮಧ್ಯೆ. ಸತ್ತು ಹೆಣವಾಗಿ ಇದೇ ಕೆರೆ ನೀರಿನಲ್ಲಿ ದೇಹಾನ ಬಿಟ್ಟು ಹೋದ ಪ್ರಾಣಿಯು (ಕಾಗದವನ್ನೆತ್ತಿ ತೋರಿಸುತ್ತಾ) ಈ ಊರೋರ್ಗೇನೇ ಬರೆದಿಟ್ಟ ಅರ್ಜಿ, ವಂದ್ವೇಳೆ ಸನ್ನಿಧಾನದ್ದ ಕಂಡು ಬಂತೋ...ನಿಮ್ಮೂರ್ನಾಲಿ ! ಅಲ್ದೆ, ಐ.ಜಿ.ಗಳ ಮೂಲ್ಕ ಇದ್ರ ವಿಪ್ರ, ತಪ್ಪೀಲಾಗಿ ಚೀಫ್ ಕೋರ್ಟಿಗೆ ಮುಟ್ಟ್ರೋ.........(ಮುಂಚೆಟ್ಟನ್ನು ಮಂಡೆಯ ಮೇಲೆ ಮುಸೆದು ಗ್ರೀವ ಪ್ರೂರ್ವ್ಕಟ್ಟ ಎಡಬಲ, ಬಲಎಡಕ್ಕೆ ಚಲಿಸುತ್ತಾ) ಗಲ್ಲು !.. ನಮ್ಮೂರ್ನಲ್ಲಿರೋ ಹೆಂಗಸ್ರು ಮಕ್ಕಳ ಸಹಿತ, ಮನುಷ್ರು. ಮೃಗಗಳ್ಗೂ ಅಲ್ದೆ, ಜಲಚರಗಳ್ಗೂ. ವೃಕ್ಷಗಳ್ಗೂ, ಹುಲ್ಲು, ಸಸ್ಯಾದಿಗಳ್ಗೂ...(ಥಟ್ಟನೆ ಕೈಯಲ್ಲಿ ಹಿಡಿದ ಕಾಗದದಿಂದ ಮುಖವನ್ನು ಮುಚ್ಚಿಕೊಂಡು ಗೋಳಾಡುತ್ತಾ) ಹಯ್ಯೋ ಪ್ರಾಣೀ ! ಹೀಗೆ ನೀನು ನಮ್ಮನ್ನ ಬಿಟ್ಟಿಟ್ಟು ಹೋಗೋಕ್ಮುಂಚೆ, ನನಗೆ...ಈ ಹಾಳೂರಲ್ಲಿ ಯಾರಿಲ್ಲದಿದ್ರೂ—ನನಗೆ. ನಿನ್ನ ಯೋಗ್ಯತೆ ತಿಳಿದ ನನಗೆ, ವಂದ್ಮಾತು ತಿಳಿಸಿಬಿಟ್ಟು ಹೋಗಬಾರದಾಗಿತ್ತೇ ?...ಹಯ್ಯೋ ! ಪ್ರಾಣೀ ! ಅದ್ಭುತಪ್ರಾಣೀ !

[ಎಂದು ಮಂಡೆಯನ್ನು ಕೆರೆಯ ಮೆಟ್ಟಲಿನ ಮೇಲೆ ಚಚ್ಚಿಕೊಳ್ಳುವನು]

[ನೆರೆದಿರುವ ಪೌರಾನೀಕವು. ದಿಗ್ಭ್ರೇಶಭ್ರಮಿತರಾಗಿ, ಕೆರೆವಾರಿ ಮಗ್ನ ಶವಾನ್ವೇಷಣ ಮಾಡುವುದೋ, ಶೋಕಸ್ನಿಗ್ಧ ಶ್ಯಾನುಭೋಗರನ್ನು ಸಂತೈಸುವುದೋ, ಇಲ್ಲ...ಶ್ಯಾನುಭೋಗರು ಹೇಳಿದ ಕ್ಷಿಪ್ರದಲ್ಲಿ ಮುಂದೊದಗುವ ದೊಡ್ಡ Election, ದೊಡ್ಡ ಸಾಹೇಬರ ಜಮಾಬಂದಿ, I.G. ಸಾಹೇಬರ Inspection ಉ, ಇವುಗಳಲ್ಲಿ ಈಗ ಜರುಗಿ ಇನ್ನೂ ಮಂದಟ್ಟಾಗದ ಅನಾಹುತದಿಂದ ಒದಗಬಹುದಾದ ಅನಿವಾರ್ಯಗಳಿಗೆ ಪ್ರತೀಕಾರಗಳನ್ನು ಪರ್ಯಾಲೋಚಿಸುವುದೋ...ಎಂಬುದೊಂದೂ ತೋಚದೆ ಕಂಠಗತ ಪ್ರಾಣರಾಗಿ ನಿಂತಿರಲು, ಪುರವರ್ತಕರಲ್ಲಿ ಪ್ರಾಮುಖ್ಯರಾದ ಧರಣಯ್ಯನವರು ಮುಂದೆ ಬಂದು, ಶೋಕಿಸುವಾತನನ್ನು ತಟ್ಟಿ ಎಬ್ಬಿಸುತ್ತಾ, 'ಏಳಿ ಸ್ವಾಮಿ. ಏಳಿ ! ಅದೇನು ಕಾಗ್ದ ? ಓದಿ. ಹೋದವನಂತೂ ಹೋದ...ನಮ್ಮ ಜವಾಬ್ದಾರಿ ಏನು ? ಆ ಕಾಗದಾನ ಓದಿ !...ಏಳಿ !' ಎಂದು ಎಬ್ಬಿಸಲು ಯತ್ನಿಸುವರು.]

[ಏತನ್ಮಧ್ಯೆ, ನಾಯಕನಾದರೋ, ಕಿರೀಟಿಯು ಕುರುಕುಳದಲ್ಲಿ, ಕುರುಸೂನುಗಳನ್ನು ಕೆಡಹುತ್ತಿರುವುದನ್ನು ಕಂಡುಕಂಡು ಕುಣಿದ ಧನಂಜಯ ಧ್ವಜಸ್ಥನಂತೆ ನರ್ತಿಸುತ್ತಾ, "ಅನ್ಯಾಯ Successoo ಅಂದ್ರೆ, ನನ್ನ planoo ! ಆ ದನ ಕಾಯೋ ಹುಡ್ಗ goodoo, very goodoo ಅಂದೇ...ಆದ್ರೆ ಶ್ಯಾನುಭೋಗ splendidoo ! ಏನು effective ನನ್ನ letteroo ! terribleoo ! ತ್ಸು ! ತ್ಸು ! ತ್ಸು ! regular ಲಿಪಿ ! ಬ್ರಹ್ಮಲಿಪಿ, ಬ್ರಹ್ಮನ್ಯಾಕೇ......ಮೃತ್ಯುಲಿಪಿ......ಯಮಲಿಪಿ !......ಇದಕ್ಕೇ ಹೇಳೋದು "Pen is mightier than the swordooಅಂತ !, proverb ನಲ್ಲಿ !" ಎಂದು ಹಿಗ್ಗುತ್ತಾ ಮತ್ತೆ ಕೂಟಕ್ಕೆ ಕಿವಿಗೊಡುವನು.]

ಪೋಲೀಸು ಅಫೀಸರು : (ಶ್ಯಾನುಭೋಗನನ್ನು ತಟ್ಟಿ, ತಡವಿ, ಎಬ್ಬಿಸಿ ನಿಲ್ಲಿಸಿ, ಸೊಟ್ಟನಾಗಿದ್ದರೂ ರುಮಾಲನ್ನು ನೆಟ್ಟಗೆಮಾಡಿ, ಆತನ ಕಿಸೆಗೆ ಕೈಹಾಕಿ ಸುಲೋಚನವನ್ನು ತೆಗೆದು, ಕಣ್ ಮೂಗು ಕಿವಿಗಳಿಗೆ ಸರಿಯಾಗಿ ಸಿಕ್ಕಿಸಿ, ವಿನಯದಿಂದ)

ದಮ್ಮಯ್ಯ ! ಶ್ಯಾನುಭೋಗರೇ !...ಊರೂರೇ ಕಿವಿಗೊಟ್ಟು ನಿಮಗ್ತಾ ನಿಂತಿದೆ...... ದಯವಿಟ್ಟು ಈಗ್ಲಾದ್ರೂ ಓದಿ......ಆ ಸತ್ತ ಮನುಷ್ಯನ statement ನ !

ಉಪನಾಯಕ : ...(ಊರೆಲ್ಲವರೂ ಉಸಿರುಹಿಡಿದು ನಿಂತಿರಲು. ಸುಲೋಚನವನ್ನು ತೆಗೆದು ಉಟ್ಟ ಧೋತ್ರದಿಂದ ಸುಲೋಚನದ ಸ್ಫಟಿಕಗಳನ್ನು ರಜೋರಹಿತಗಳನ್ನಾಡಿ ಮಾಡಿ ಪುನಃ ಯಥಾಸ್ಥಾನಂ ಪ್ರತಿಷ್ಠಿಸಿ, ಕಾಗದವನ್ನು ಓದುವನು)

"ನಂಜಾಪುರದ ನಿವಾಸಿಗಳಿಗೆ ! ಈ ಪುರದ ಪುಣ್ಯಜನರಿಗೆ ..ರಾಕ್ಷಸರಿಗೆಂದಲ್ಲ !: ಪುಣ್ಯ ಮಾಡಿದ ಪೌರಕರಿಗೆ !...ಮಹಾಜನರೇ !...ಪ್ರಥಮತಃ ಪ್ರಾರ್ಥನೆ.

ನಿಮ್ಮ ಪುಣ್ಯಪುರದಲ್ಲಿ, ನಿಮ್ಮಂತೆಯೇ ಮನುಷ್ಯನಾಗಿ ಹುಟ್ಟಿಬೆಳೆದ ನನ್ನ ಹೆಮ್ಮೆಯು. ವಿಧಿಯ ವಿನೋದವೇ ಅಲ್ಲದೇ ನನ್ನ ಜ್ಞಾತ ಕೃತ ತಪ್ಪಿಲ್ಲವೆಂಬುದನ್ನು ಅಂಗೀಕರಿಸಿ ಕ್ಷಮಿಸ ಬೇಕೆಂಬುದು, ಯಮನನ್ನು ಎದುರು ನೋಡುತ್ತಿರುವ. ಈ ಸತ್ತ ನಿಮ್ಮ ಸೇವಕನ ಪ್ರಾರ್ಥನೆ :

ದ್ವಿತೀಯತಃ ಇತ್ಯರ್ಥನೆ...'ಕ್ರಿಮಿಯೆಂದು ನೀನಾಗಿಯೇ ಒಪ್ಪಿಕೊಂಡು. ಮಹಾಮಹೋತ್ತಮ ರಾದ ನಮ್ಮ ಮಧ್ಯೆ ಜನಿಸಿ. ವರ್ಧಿಸಿ. ಸುಖಿಸುವ ಲಭ್ಯವನ್ನು ನಿನ್ನ ಕೈಯಿಂದಲೇ ತಿರಸ್ಕರಿಸಿ. ನಮ್ಮನ್ನವಮಾನಿಸಿ. ಏತಕ್ಕೆ ಆತ್ಮಹತ್ಯ ಪಾತಕವನ್ನು ಹುಡುಕಿ ಹೊಂದಿದೆ?' ಎಂದು ಕೇಳುವಿರಾ ? ಆ ಪ್ರಶ್ನೆಗೆ ಈ ವಿಧವಾಗಿ ಉತ್ತರವನ್ನು ಒದಗಿಸಲು ಯತ್ನಿಸುವೆನು.

ನನ್ನ ಜ್ಞಾನೋದಯಾರಭ್ಯ ನಮ್ಮೂರಿನಲ್ಲಿ. ಹೊಟ್ಟೆಗೆ ಹಿಟ್ಟಿಲ್ಲದೆಯೂ. ದೇಹಾವಯವ ರಕ್ಷಾಚ್ಛಾದನಕ್ಕೆ ವಸನವಿಲ್ಲದೆಯೂ, ಇವುಗಳನ್ನು ಒದಗಿಸಿ ಪೋಷಿಸುವ ಪಿತಾ ಪತಿರಹಿತರಾಗಿಯೂ. ಕೊರಗುವ ನನ್ನ ಈ ಪುರಿನ ಸಹಸ್ರ ಭಗಿನಿಯರ ಸಂತಾಪವನ್ನು...ಮಾತಾ. ಪಿತೃ. ಬಂಧು ಬಳಗವನ್ನು ಜನ್ಮಾರಭ್ಯವೂ ಅರಿಯದೇ. ಅಹರ್ನಿಶಿಯೂ ನೋಡಿ ನೋಡಿ. ಇವರೆಲ್ಲರ ಅವಸ್ಥೆಯನ್ನೂ ನಿವಾರಿಸುವ ಧನ ಚೈತನ್ಯವನ್ನು ನನಗೆ ಕೊಡದ ಧಾತನು...ಕುದುರೆ ಬಂಡಿ. ಮೋಟಾರ್‌ಗಳನ್ನು ಹತ್ತಿ, ತಮ್ಮ ತಮ್ಮ ಧನ ಸಂಚಯನ ಯಾತ್ರೆಗೆ ದಿನವೂ ದಾರಿಗಳಲ್ಲಿ ಹೋಗುತ್ತಾ. ಈ ಅನಾಥ ರಾದ ಅಬಲಾರ್ಭಕಾನೀಕವನ್ನು ಅವಲೋಕಿಸಿಯೂ ಅಪ್ಪಾಲಿಸುತ್ತಾ ಹೋಗುವ ಕಲಿಕುಬೇರರಾದ ಈ ಪುರದ ಧನವಂತರಿಗೆ ಇರುವ ಕಲ್ಲುಗುಂಡಿಗೆಯನ್ನಾದರೂ ಕೊಡಬಾರದಾಗಿತ್ತೇ ?"...ಎಂಬ ಮನೋವ್ಯಥೆಯಿಂದ ಮೃತ್ಯುವನ್ನು ಮೈಗಪ್ಪಿಕೊಳ್ಳುವೆನು.

ತೃತೀಯತಃ ನನ್ನೀಜನ್ಮದಲ್ಲಿ ತಮ್ಮ ಮಹಾಪುರಕ್ಕೂ ತಮ್ಮಗಳಿಗೂ, ಅನೇಕ ಕೋಟಿ ವಿಧಾನಗಳಲ್ಲಿ ಋಣಬದ್ಧನಾಗಿರುವುದನ್ನು ಲೆಕ್ಕವಿಟ್ಟು ತೂಗಿಸಿ ನಿಶ್ಚಯಿಸಿರುವ ವಿಧಿಯು. ನನಗೀ ಋಣಾಧಿಕ್ಯದಿಂದ ವಿಮೋಚನೆಗೆ ಅಸ್ಪದವನ್ನು ಒದಗಿಸಲು. ನಿಮ್ಮ ಪುರದಲ್ಲೇ ನನ್ನ ಪುನರ್ಜನ್ಮ ವನ್ನು ಕರುಣಿಸಿ ತೀರ್ಮಾನಿಸುವ ಪಕ್ಷಕ್ಕೆ...ಆ ಮುಂದಿನ ಜನ್ಮದಲ್ಲಾದರೂ ತಮ್ಮ ಪುರದ ಪಾಮರ ಪ್ರಯಾಸವನ್ನು ಪರಿಹರಿಸಲು. ಧನಚೈತನ್ಯವನ್ನು ವಿಧಿಯು ಈಯದಿದ್ದರೂ. ಅನಾಥರ ಅಶ್ರುಗಳ ಅಬ್ಧಿಯಲ್ಲಿ ಈಜಿ, ತೇಲಿ, ಆಹ್ಲಾದದಿಂದ ಆನಂದಪಡುತ್ತಿರುವ ತಮ್ಮ ಪುರದ ಧನಲಕ್ಷ್ಮಿಪತ್ನರಿಗೆ ಇರುವ ಪಾಷಾಣ ಹೃದಯವನ್ನಾದರೂ ವಿಧಿಯು ದಯಪಾಲಿಸಲೆಂಬುದಾಗಿ ತಾವುಗಳು ನಿಮ್ಮ ಕೆರೆಯ ಕಟ್ಟೆಯಲ್ಲಿಯೇ ಹಾರಾಡುತ್ತಿರುವ ನನ್ನ ಜೀವಾತ್ಮನನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸುವ...

ಜೀವಿಸಿದ್ದಾಗ ತಮ್ಮ ಸೇವಕ...ಈಗ ಸತ್ತ ಸಪೌರಸೇವಕ...

ನಂಜಾಪುರ ನಾರಾಯಣ ನರಸಿಂಹಯ್ಯ.

[ಶ್ಯಾನುಭೋಗನು ಪತ್ರವನ್ನು ಓದುತ್ತಾ ಓದುತ್ತಾ ಪರಿಸ್ಥರಾದ ಪೌರವರು ಭ್ರೀಭರಿತ ಹೃದಯರಾಗಿ ಪರಸ್ಪರ ಮುಖಾವಲೋಕನವನ್ನು ಮಾಡಲಾಗದೆ ತಲೆತೂಗಿ ತಗ್ಗಿಸಿ ನಿಂತಿರಲು]

ಉಪನಾಯಕ : (ಸುಲೋಚನವನ್ನು ತೆಗೆದು ಜುಷಾರಾಗಿ ಜೇಬಿನಲ್ಲಿ ನ್ಯಸ್ತಾಡಿಸಿ ಯಥಾಪತ್ರಪಠನಪೂರ್ವಂ ಸೋಪಾನಕ್ಕೆ ಫಾಲಪಟ್ಟವನ್ನು 'ಘಟ್ ಘಟ್'ಟನೆ ಚಚ್ಚುತ್ತಾ)—ಪುಣ್ಯಾತ್ಮ ಪ್ರಾಣೀ...ನಮ್ಮೂರು ಬಿಟ್ಟು ಬಿಟ್ಟು ಹೋದವ್ನು...ನಿನ್ನಾಗ್ಯ...ಇನ್ನಾರೋ. ನೀನು ನೀರಲ್ಲಿ ಬಿದ್ದಲ್ಲೇ ಬಂದರೋ ನಿರ್ಭಾಗ್ಯ...ಪತ್ನಿ ಅರುಂಧತಿ...ಪುತ್ರರಲ್ಲಿನಿಗ್ನ. ಈ ಲಜ್ಜಾನ್ನಾ ಮಲೆತು ...(ಕೆರೆಯ ನೀರನ್ನು ಕೈಯಿಂದ ಸೂಚಿಸುತ್ತಾ) ಈ ನಿನ್ನ ಕೃತ್ಯದಿಂದ ನಿನ್ನ ಕಳತ್ರ ಕೂಸುಗಳ್ಗೆ... (ಪರಿಸ್ಥರನ್ನು ಬೀಸಿದ ಬಲಭಾಗದಿಂದ ಸೂಚಿಸಿ) ಈ ಕನಕರಿಂದ ಕೊಬ್ಬಿದ ಈ ಕಿರಾತರಿಂದ ಸಲ್ಲದೇ ಪಡೋ ಅವಸ್ಥೆಯನ್ನೂ ಮರ್ತು. ಊರಲ್ಲಿರೋ. ನಾಥವಿಲ್ಲದ ಅಬಲಾ ಸಹಸ್ರಗಳು. ಪೋಷಕರಿಲ್ಲದ

ಶಿಕುಲಕ್ಷ್ಣಗ್ನ. ಇವ್ವಗ್ಗ ಅವಸ್ಥೇನಪಲೋಕಿಸಲಾರ್ದೆ, ಅಸುಗಳ್ನ ಅಪ್ಪಿನಪ್ಪಿಬ್ಟಾಡಿದ್ಯಾ...ಅಪ್ಪೂರ್ವ ಪ್ರಾಣೀ...(ಫಾಲಪಟ್ಟವನ್ನು ಸೋಪಾನದ ಶಿಲೆಯಮೇಲೆ, ಪುನಃ ಪುನಃ ಬಡಿದುಕೊಂಡು ಕ್ರಮೇಣ ಚೇತರಿಸಿಕೊಂಡು, ಎದ್ದುನಿಂತು, ರೌದ್ರಾಸ್ಯನಾಗಿ ಕಣ್ಣುಗಳಿಂದ ಕಿಡಿಗಳನ್ನು ಕಾರುತ್ತಾ, ಸುತ್ತಿರುವವರನ್ನು...ಪದ್ಮವ್ಯೂಹವನ್ನು ಹೊಕ್ಕ ಸೌಭದ್ರೇಯನು ಪಾರ್ಥಪ್ರತಿಕಕ್ಷಗಳನ್ನು ತಾತ್ಸರಿಸಿ ನೋಡಿದಂತೆ ನೋಡಿ, ಸದಾಶಿವಯ್ಯನವರಿಗೆ) ಸದಾಶಿವಯ್ಯನವರೇ, ನೀವು ಬ್ರಾಹ್ಮಣ್ರು, ಹೆಂಡ್ತಿ ಮಕ್ಕಳೋರು. ನಾನೂ ಹಾಗೇ. ಈಗ ಹೋಗಿರೋ ಪ್ರಾಣೀನೂ ಹಾಗೇ ಇತ್ತು. ಆದ್ರೆ, ಈ ಊರಿನ ಗೋಳಾಟಾನ ನೋಡಲಾರದೆ. ಮನೆಯೋರ್ನೂ ಮರೆತು, ಮರೆಹೊಕ್ಕಿಧಾನೆ ಮಧುಸೂದನನ್ನ... ...ಆ ಬಡ ಬ್ರಾಹ್ಮಣ....ಈ ಕೆರೆ ಬುಡದಲ್ಲಿ! ನನ್ಗೋ...ಆತನಷ್ಟು ಧೈರ್ಯವಿಲ್ದೆ ನುಗ್ಗಿಧೀನಿ...ಬದ್ಕಿದ್ರೂನೂವೆ (sardonically)...ತೋಳ ಕಂಟ್ರಾಕ್ಟಿನಲ್ಲಿ ಸಾವಿರದ ಮೇಲೆ ಸಾವಿರಾಂತ ಬ್ಯಾಂಕ್ನಲ್ಲಿ ಭರ್ತಿಮಾಡ್ತಿರೋ ತಮಗೇ...ಇಲ್ಲಿ ಯಾಕೆ ಈ ಅವಸ್ಥೇ ?...ಕಾರಿಲ್ವೇ?...ಬಂಗ್ಲೇ ಇಲ್ವೇ...(ಶೋಕೋನ್ಮಾದನಾಗಿ ನಗುತ್ತಾ) ಈವೂರಿಗೊಂದಲ್ಲಂದು, ಮುಸಾಫರಖಾನೇ ಕಟ್ಟಿಸ್ದ್ರಂತೆ, ಮೂರು ದಿನಕ್ಕೆ ಮೇಲೆ ವಾಸಮಾಡೋಕೆ ನನ್ಹತ್ರ...ಶ್ಯಾನುಭೋಗನ್ಹತ್ರ—ಬೇಡ್ಕೊಂಡು, ತಮ್ಮ, ಈ ಹತ್ತು ವರ್ಷದ ಹೀನ ಸ್ಥಿತೀನ. ದಿಕ್ಕೋರ್ಗತೀನ, ಮರೆತು, ತನ್ನ ಮುಂದಕ್ತಂದ್ಕೊಂಡ ತಮಿಗೆ—ಇಲ್ಲೇನು ಕೆಲಸಾ ?

(ವೆಂಕಟರಮಣ ಶೆಟ್ಟರಿಗೆ) ಶೆಟ್ಟರೇ, ನಿಮ್ಮನ್ನೇನೂ ಹೇಳೋ ಹಾಗಿಲ್ಲ ನಾನು; ತಮ್ಮ ವರ್ಣಧರ್ಮದ, ಧನಸಂಚಯನ ಎಂಬೋ ಧರ್ಮಾರ್ಥವನ್ನಾದರೂ ಜರುಗಿಸ್ತಿರೋ ಹೊತ್ಗೆ !............ಆದ್ರೂನೂವೆ, ನನ್ನ ಹಾಗ್ಯೇ ದ್ವಿಜರಾದ ತಾವು, ಗೃಹರಹಿತರಿಗೆ ಛತ್ರ......ಅನ್ನಾಹಾರ ರಹಿತ ಅನಾಥರಿಗೆ ಅನ್ನಸತ್ರ, ದೈವಭಕ್ತರಿಗೆ ದೇವಾಲಯ ಇತ್ಯಾದಿಗಳನ್ನು ಒದಗಿಸುವ ದಾರಿಯಲ್ಲಿ, ತಮ್ಮ ಧರ್ಮೇತರಾರ್ಥವಾದ ಧನವ್ಯಯವನ್ನು ವ್ಯವಸ್ಥೆಗೆ ತರದಿರೋ ವಿಷಯದಲ್ಲಿ, ನೀವಾಯ್ತು, ಪರಮಾತ್ಮನಾಯ್ತು !

(ಧರಣಯ್ಯನವರಿಗೆ) ....ಧರಣಯ್ಯನವರೇ !....... "ಅಹಿಂಸಾ ಪರಮೋಧರ್ಮಃ" ಎಂಬ ಆರ್ಯೋಕ್ತಿಗೆ ಅನುವಾದ, ಭೂತದಯೆ, ಎಂಬ ತಮ್ಮ ಮತವನ್ನು ಅಹರ್ನಿಶಿಯೂ ಆಚರಿಸುತ್ತಾ, ಈ ಊರ್ನಲ್ಲಿ ಹುಟ್ಟಿ ಬೆಳ್ದ ತಮ್ಮಿಂದ ಅಲ್ದೇ ಮತ್ಯಾರಿಂದ್ಲೂ ನಮ್ಮ ಪುರದ ಅನಾಥರ ಆರ್ತನವು ಅಡಗಲಾರದು........(ಬುರ್ಡ ಸಾಹೇಬರಿಗೆ)......ಸಾಹೇಬ್ರೇ ! ಮತದಲ್ಲಿ ಅನ್ಯರಾದರೂ, ಕ್ರೂರರಲ್ಲಿಯೂ ಕರುಣೆ ಇಡುವವನು......ಅಲ್ಲಾಹ್ಮಾನ್ ಇರ್ರಹೀಂ ಎಂಬ ದೇವೋಕ್ತಿಯನ್ನು ಪಂಚವಾಪ್ರತ್ಯಹಸ್ಲೂ ಹೇಳುತ್ತಾ, ಸಪೌರವರೊಂದಿಗೆ ಭ್ರಾತೃಭಾವನೆಯಿಂದ ನಡೆಯುತ್ತಿರುವ ತಾವೂ... ...ಧರಣಯ್ಯನವರೂ......ಶೆಟ್ರೂ ಇರುವಾಗ್ಗ್ಯೆ......ನಮ್ಮೂರಿನ ಗೋಳು ಮುಂದಾದರೂ ಅಡಗುವುದೆಂಬ ಭರವಸೆಯ ಮೇಲೆ......ನನ್ನ ಪ್ರಿಯತಮವಾದ ಪ್ರಾಣವನ್ನು ಸೇತರ್ಲೇನೆ !!!

(ಕಣ್ಣೀರು ನೀರು ಕಾಣಿಸದಂತೆ ಜನರು ನಿಂತಿದ್ದರೂ ಗಮನಿಸದೆ ಬಾಹುಗಳನ್ನೆತ್ತಿ ಹಸ್ತಗಳನ್ನು ಜೋಡಿಸಿ ಧುಮುಕಲು ಪಾದಗಳ ಮುನ್ನಂಶಗಳ ಮೇಲೆ ಸ್ವಭಾರವನ್ನು ಘಟ್ಟಿಸಿ. ಧುಮುಕಲುದ್ಯುಕ್ತಿಸಿ ಘಟ್ಟಿಯಾಗಿ ಸ್ವಗತಂ) ನಂಜಾಪುರದ ನಾರಾಯಣ ನರಸಿಂಹಯ್ಯನ ಜೀವಾತ್ಮನೇ ತಡೆ ! ಸ್ವಲ್ಪ ತಡೆ !! ......ನಿನ್ನ ಜೀವಾತ್ಮಕ್ಕೆ ಈ ಪಸಿ ಊರಿನಲ್ಲಿ ತಿರುಗಿ ಹುಟ್ಟದ ಹಾಗೆ ಮಾಡೋ ಶಾಂತೀನ ತರೋಕೆ. ಇಲ್ಲಿ ನೆರೆದಿರೋ ಕುಬೇರ್ರು. ಈ ಅನಾಹುತ ಆದ್ರೂ ಕಾಸು ಖರ್ಚು ಮಾಡೋಕೆ ಹೇಸ್ಗೆಯಿಂದ ಹಿಂಜರೀತಿದ್ರೂನೂವೆ.......ನಿನ್ನ ಹೆಣಾನ್ನೂ......ನೀರ್ನಲ್ಲಿ ಸತ್ತ ನಿನ್ನ ಸೇಕೋರ್ನ ತೇಲಿಸಿಂತ ನೋಡೋಕೆ ನಿಂತಿರೋ ನನ್ನ ಹೆಣಾನ್ನೂ. ನಾಳೆ ಅಮಲ್ದಾರ್ರೂ. ಡಿ. ಎಸ್. ಪಿ. ಗ್ಳೂ. ...ನಾಡಿದ್ದು ಚಿಕ್ಕಸಾಹೇಬ್ರೂ. I. G.ಗ್ಳೂ. ಅಲ್ದೇ. ಬರೋ ವಾರ ದೊಡ್ಡ ಸಾಹೇಬ್ರೂ. ಇನ್ನು ಮುಂದೆ ಬರೋ ದೊಡ್ಡ Election ನೋರೂ. ನಮ್ಮಿಬ್ರ ಎರಡು ಹೆಣಗಳ್ನೂ ನೋಡಿ. ನನ್ನ ಈ ಮಾತುಗಳ್ನ ಕೇಳಿದೋರ್ನೂ ಸಾಕ್ಷಿಗಳಾಗಿ ಕೋರ್ಟಿಗೇರಿದು ಸಮುಸ್ತಾನ್ನೂ ತಿಳ್ಕೊಂಡ ಸರ್ಕಾರೀ

......ಹಾಕೋಂಡ್ರಿಗೆ ಹಾಕೋದು, ಹುಡುಗಾಟಿಗ್ಳೋ! ಹಾಸ್ಯೋಕ್ತ್ಯೋ!.. ಗಾದೇನಾ... ಸನ್ಯಾಸಾನೋ!......ಸಜಾನೋ!......ತಾನೇ......ನಿರ್ಧರಿಸಿ...... ರಾಮ್ಪುರದ ಬಡಜನರ ಮಹಾಸ್ವಾಮಿ ಸರ್ಕಾರಾನೇ ಮೊದಲು. ದುಷ್ಟದಕ್ಷಣ, ಶಿಷ್ಟಬಲಾ ಬಿಸಸಂರಕ್ಷಣ ರೀತ್ಯಾ ನಮ್ಮನ್ನು ಜೀವಾತ್ಮಗಳಿಗೆ ಶಾಂತೀನ ಪಡಗಿಸೋ ವಿಷಯದಲ್ಲಿ ಶಂಕೆ ಇಡಬೇಡ ...ಇಕೋ ಬಂದೆ ... ಇಕೋ ಬಂದೆ! (ಒಂದು ಜನ ಮುಟ್ಟದ ಕೆರೆವಾರಿಯಲ್ಲಿ ಲಂಘಿಸಲುದ್ಯುಕ್ತನಾಗಿ) ಇಕೋ ಬಂದೆ ...ಈ ಕಟುಕರು ತುಂಬಿದ ಪುರಿಯು ಕೆರೆಯಲ್ಲಿ ನನ್ನ ಈ ಹಾಳು ದೇಹಾನ ಪದರ್ಪಣ ಇಕೋ ಬಂದೆ! ..... ಸ್ವಲ್ಪ ತಡೆ!! ಸ್ವಲ್ಪ ತಡೆ!!......

[ಶ್ರೀರಾಮನ ಸಂದೇಶವನ್ನು ಸೀತೆಗೆ ಸಲ್ಲಿಸುವ ಸಾಧನವನ್ನು ಕೈಗೊಂಡ ಪ್ರಭಂಜನಸುತನು ಲವಣಾಬ್ಧಿಯ ಊರ್ಮಿಗಿರಿಗಳನ್ನು ಗಮನಿಸದೆ. ಲಂಕೆಯ ಪರಿಧಿಯಲ್ಲಿ ಬದ್ಧೇಕ್ಷಣನಾಗಿ ಲಂಘಿಸಿ ದಂತೆ. ತಾನು ನಿಂತಿರುವ ಸೋಪಾನದ ಎಂಟನೇ ಮೆಟ್ಟಿಲಿನಿಂದ ನೀರಿನವರೆಗಿನ ಮುಳುಗಿರುವ ಮೆಟ್ಟಿಲುಗಳಲ್ಲಿ ನಾಲ್ಕನೆಯದರ ಮಧ್ಯಸ್ಥನಾಗಿಯೂ ಸ್ಥೂಲಕಾಯನಾಗಿಯೂ ಇದ್ದ ವ್ಯಕ್ತಿಯ ಅತಿವರ್ಧಿತ ಜಠರಕ್ಕೆ ಗುರಿಯಿಟ್ಟು, ಲಂಘಿಸುವನು.]

ಪೋಲೀಸ್ ಆಫೀಸರು : (ಥಟ್ಟನೆಹಾರಿ. ಶ್ಯಾನುಭೋಗನನ್ನು ಬಿಗಿದಪ್ಪಿ.) ಅಯ್ಯೋ ಹುಚ್ಚು!...ಹೋದೋನಂತೂ ಹೋದ...ಹೀಗೆ ನಮ್ಮನ್ನೆಲ್ಲ ಹೆದರಿಸಿಬಿಟ್ಟು ನಿಮಗೇನೋ ಹೆಂಡತಿ ಮಕ್ಕಳ ಮುಂದಿನ ಗತೀನ ಮರೆತು ಹೀಗೆ ಕೆರೇಲಿ ಧುಮುಕೋದು ಧರ್ಮವೇ?......ಇಲ್ಲ... ನಾವಿರೋವಾಗ............ಸಾಧ್ಯವೇ? ಆದದ್ದನ್ನ ಮರೆತು. ನಿಮ್ಮ ಶ್ಯಾನುಭೋಕೀನ ಮಾಡಿದೆ. ಲಾಗಾಯ್ತಿನಿಂದ ಈ ಊರ್ನಲ್ಲಿ ಆದ ಅಸಂದರ್ಭಗಳಲ್ಲೆಲ್ಲಾ ಜ್ಞಾನ ಬೋಧಿಸಿದ ಹಾಗೆ. ಈಗ್ಲೂ ಬೋಧಿಸ್ತೀರಾ!? ಇಲ್ಲಾ!......(ಶ್ಯಾನುಭೋಗನ ಕುಡುತದ ಕತ್ತನ್ನು ಬಿಗಿಹಿಡಿದು ಜಗ್ಗಿ ಸಿಂಹನಾದದಿಂದ) ಇಲ್ಲಾ!! ಇಷ್ಟು ಜನಗ್ಳೆದ್ರಿಗೆ attempt ಮಾಡ್ದ ಆತ್ಮಹತ್ಯೆಕ್ಕೆ arrest ಮಾಡಿ. ಎತ್ಕೊಂಡ್ಹೋಗ್ಲೇ ನಿಮ್ಮನ್ನ. ನಮ್ಮ ಸ್ಟೇಷನ್‌ಗೆ? (ಜಗ್ಗುಟವನ್ನು ಸಡಿಲಿಸಿ) ಅಯ್ಯೋ! ಇದೇನು ಹುಡುಗಾಟ ಶ್ಯಾನಭೋಗ್ರೇ!......(ಧರಣಯ್ಯನವರನ್ನು ಕುರಿತು) ಯಜಮಾನ್ರೇ... ತಾವು. ಯಾವಾಗಿನಹಾಗೆ ಮುಂದಕ್ಕೆ ಬಂದು. ಮುಂದಿನ ಕ್ರಮಾನ ಮಾತಾಡಿ ತೀರ್ಮಾನ್ಸಿ ..... ಏನ್ಮಾಡ್ಬೇಕೋ ಆದ್ರೂಸೂವೆ...ಎಷ್ಟು ಖರ್ಚಾದ್ರೂಸೂವೆ......ನಾಳೆಯಿಂದಾಚ್ಗೆ. ಮುಂದೆ ಯಾರೋರ ಗಮ್ನಕ್ಕೆ ಇವತ್ತಿನ ಬಾಬ್ತು ಬರದ್ಹಾಗೂ, ರಾಮ್ಪುರದ ಮಾನಾನೂ ಮಿಗೋ ಹಾಗೂ. ತಮ್ಮನ್ನ ಜವಾಬ್ದಾರೀನೂ ತಪ್ಪಿಸ್ಕೊಳ್ಳೊ ಹಾಗೂ. (ಶೆಟ್ಟರಿಗೂ. ಸಾಹೇಬರಿಗೂ.) ಶೆಟ್ರೇ! ಸಾಹುಕಾರ್ರೇ! ...ಜವಾಬ್ದಾರೀನ ತಪ್ಪಿಸ್ಕೊಳ್ಳೊ ಹಾಗೂ,......ದಾರೀನ. ಶ್ಯಾನುಭೋಗ್ರು ಮಾಡ್ಲಿ ಬಿಟ್ರಿಯು ...ತಾವುಗ್ಳೇ ತೀರ್ಮಾನಿಸಬೇಕು...ಈಕ್ಷಣ! (ಹಿಡಿತವನ್ನು ಬಿಟ್ಟು. ನಾಲ್ಕು ಹೆಜ್ಜೆ ಹಿಂದೆ ಹಾಕಿ ನಿಲ್ಲುವನು.)

ಧರಣಯ್ಯ : (Rushing up. followed by Sadasiviyya. Venkatramana Setty & Budan Saheb) ಶ್ಯಾನುಭೋಗ್ರೇ!......ನಿಮ್ಮ ಮನೋವ್ಯವಸ್ಥೆ ಮಂದಟ್ಟಾಯ್ತು!........ನನ್ನ ಕಾರ್ಖಾನೆ ಕೆಲಸ್ದಲ್ಲಿ ನೂರಾರು ಜನಕ್ಕೆ ಜೀವ್ನಾನೂ ದವಗಾನ್ನ ಹಗ್ಲೂರಾತ್ರೆ ವ್ಯಾಪಾರದಲ್ಲೇ ಮುಳುಗಿ ಆಗಾಗ್ಗೆ ನಿಮ್ಮಂಥಾ ನಮ್ಮೂರಿನ ಧರ್ಮಕರ್ತರುಗಳಿಗೆ ಸಹಾಯಮಾಡ್ತಾ ಇದ್ದಿದ್ದೇವೆ ಹೊರ್ತು. ತಪಸ್ವಿಗಳ್ಳ. ನಮ್ಮೂರ್ನಲ್ಲಿ. ಸದಾಶಿವಯ್ಯನವರು ಕಟ್ಟಿದ ಹೊಸ ಮುಸಾಫರ್‌ಖಾನೆ. ಶೆಟ್ರು ಕಟ್ಟಿಸಿದ ಧರ್ಮಸತ್ರ. ಸಾಹೇಬ್ರು ಜಾತಿ ಮತಭೇದವಿಲ್ದೆ ಪಡಗಿಸ್ದ ಹುಡುಗರ ಹಾಸ್ಟಲು.......ಇನ್ನೂ ಸ್ನಾನದ ಘಟ್ಟಗಳು ಅನುಕೂಲಗಳು ಸಾಲದೆ. ನಮ್ಮೂರಿನಲ್ಲಿ ಅಬಲೆಯರೂ. ಅನಾಥ ಶಿಶುಗಳೂ. ಈ ಕಾಲದಲ್ಲಿ ತಿಳಿಯಬಂದ ಹಾಗೆ. ಪಡೋ ಅವಸ್ಥೆ ಅರಿತೇ ಇರ್ಲಿಲ್ಲ ನಾವು......"ಹುಟ್ಟಿದ ಕೂಸು ಕೈಯಲ್ಲಿ ತರದ ಹಣಾನ. ಬಿಟ್ಟು ಸತ್ತ ಹೆಣ ಕೈಯಲ್ಲಿ ತಗೊಂಡ್ಹೋಗೋದಿಲ್ಲ." ಅನ್ನೋದು. ನಿಜವಾ

ನಾವೆಲ್ಲೂ ಹುಟ್ಟಿದೀರ್ಊರ್ಗೆ, ಕುಂದಕ ಬರದಹಾಗೆ, ಮುಂದೇನಾಗಬೇಕೂಂಬೋದ್ನ ಹೇಳೋದು ನಿಮಭಾರ ... ಶ್ಯಾನುಭೋಗ್ರೇ !........ಮುಂದಿನ ಕ್ರಮವೇನು ?

ಉಪನಾಯಕ : (ಎರಡು ಕೈಗಳಿಂದಲೂ ಎದೆಯನ್ನು ಪಟಪಟನೆ ಬಡಿದುಕೊಳ್ಳುತ್ತಾ) ಮುಂದಿನ ಕ್ರಮಾನೇ !...ಶಾಂತಿ, ಧರಣಯ್ಯನೋರೇ! ಸದಾಶಿವಯ್ಯನೋರೇ ! ಶೆಟ್ರೇ ! ಸಾಹೇಬ್ರೇ ! **ಶಾಂತಿ !!**

ನಾಲ್ವರೂ : (ಏಕಗ್ರೀವರಾಗಿ) ಶಾಂತಿ ?...ಯಾರಿಗೇ ? ಹ್ಯಾಗೆ ?

ಉಪನಾಯಕ : ಶಾಂತಿ, ಯಾರಿಗೇನೂ !! ....ಕಾಯಾನ ಈ ಕೆರೇಲಿವದ್ರಿ ಕಂಗೆಡ್ತಾ ನಿಮ್ಮ ನಮ್ಮ ಮಧ್ಯೆ ಹಾರಾಡ್ತಿರೋ ನರಸಿಂಹಯ್ಯನಜೀವಾತ್ಮಕ್ಕೆ ಶಾಂತಿ !...ಹ್ಯಾಗೇಂತ್ಕೇಳಿದ್ರಲ್ಲಾ (ನಾಯಕನ ಪತ್ರವನ್ನು ಬಿಚ್ಚಿ ತೋರಿಸುತ್ತಾ) ಈ ಸತ್ತ ಪ್ರಾಣೀ, ನಮ್ಮ ಊರಿನಲ್ಲಿ ತಿರುಗ್ಬುಟ್ಟಿ, ಅಡಗ್ಸೋಕೆ ಬೇಕಾದ ಧನಚೈತನ್ಯ ಇರೋ ನೀವುಗ್ಳೇ......ಆ ಅವಸ್ಥೇನ ಅಡಗ್ಸೋದಾದ್ರೆ...... ಅಡಗಿಸಿದ ಹಾಗಾಗುತ್ತೆ......ಶಾಂತೀನ !......ಈ ಸತ್ತ ಜೀವಕ್ಕೇ......ಶಾಂತೀನ !

ಧರಣಯ್ಯ : (ದೃಢ ಧ್ವನಿಯಿಂದ) ಅರ್ಥವಾಯ್ತು !, ಶ್ಯಾನುಭೋಗರೇ......(ಕಿಸೆಯಿಂದ ನೋಟ್ ಬುಕ್ಕನ್ನೂ ಶಾಯಿ ಪೇನಾವನ್ನೂ ಹೊರತಂದು ಬರೆಯಲುದ್ಯುಕ್ತಿಸಿ) ಹೇಳಿ......ಹ್ಯಾಗೆ ? ......ಖರ್ಚು ಏನು ?......ಎಷ್ಟು...ಹೇಳಿ.

ಉಪನಾಯಕ : ಖರ್ಚೆಷ್ಟೋ ಅಷ್ಟೂ ನಿಮ್ಮ ಕೈಲೇ......ಏನೂ ಅಂತೀರೋ, ಈ ಪ್ರಾಣ ನೋಡಿ ಸಹಿಸ್ಲಾರ್ದೇ ಸತ್ತ್ಸಿಲ್ಲಾ, ಆ ಅಬಲಾಾ ಅನಾಥ ಸ್ತ್ರೀ ಶಿಶುಗಳಿಗೆ ಒಂದು ಆಲಯ ; ಈತ ಬಿಟ್ಟುಬಿಟ್ಟು ಹೋಗಿರೋ ಹೆಂಡ್ತಿ ಮಕ್ಕಳು, ಆ ಆಲಯಾನ ಸೇರಿದ ಅಪಮಾನಾನ ಹೊಂದದ ಹಾಗೆ ಒಂದು ಫಂಡು !!!

ಧರಣಯ್ಯ : (ನೋಟು ಬುಕ್ಕನ್ನು ಕಿಸೆಯಲ್ಲಿಟ್ಟು, ಚಕ್ಕುಬುಕ್ಕೊಂದನ್ನು ಹೊರತಂದು, ಬರೆಯಲುದ್ಯುಕ್ತಿಸಿ) ಶೆಟ್ರೇ ನಂದು ಹತ್ಸಾವ್ರ........ನಿಮ್ದೂ ಹಾಗೇ ಇರ್ಲಿ ! ಸಾಹೇಬ್ರೇ, ಅಯ್ಯನೋರೇ. ನಿಮ್ದೂನೂ ಡಿಟೋ......ಗೋವಿಂದಪ್ನೋರೇ, ನಾಯ್ಡುಗ್ಳೇ, ನಿಮ್ಮಿಬ್ರದ್ದೂ ಸಾವ್ರ ಸಾವ್ರ........

ಇವರೆಲ್ಲರೂ : (ಏಕಗ್ರೀವರಾಗಿ) ನಿಮ್ಮ ಚಿತ್ತ..........ಯಜಮಾನ್ರೇ !

ಧರಣಯ್ಯ : (ಚಕ್ಕು ಬುಕ್ಕಿನಲ್ಲಿ ಬರೆದು, ಬರೆದ ಚಕ್ಕನ್ನು ಹರಿದು ಶ್ಯಾನುಭೋಗನ ಕೈಲಿಟ್ಟು) ಶ್ಯಾನುಭೋಗ್ರೇ. ಮೂವತ್ಸಾವ್ರ ರೂಪಾಯ್ಗೆ. ನೀವು ಹೇಳಿದ ಅನಾಥಾಲಯ...... ಸತ್ತು ಹನ್ನೆರಡು ಸಾವಿರ ರೂಪಾಯಿ, ಹೋದಾತ್ನ ಪತ್ನಿ ಶಿಶುಗಳ್ಗೆ. ಮುಂದಿನ್ಕ್ರಮ, ನಾಳೆ ಊರ್ಕಮಿಟೀಲಿ. ಚರ್ಚಿಸ್ಕೊಳ್ಳೋಣ. ಸದ್ಯ Treasurerಉ ತಾವು. (ಚಕ್ಕನ್ನು ಶ್ಯಾನುಭೋಗನ ಕೈಯಲ್ಲಿ ಸೆಕ್ಕಿಸಿ, ಇನ್ಸ್ಪೆಕ್ಟರಿಗೆ) ಇನ್ಸ್ಪೆಕ್ಟ್ರೇ, ಇನ್ನೀ ಸೋಪಾನದಲ್ಲಿ ಒಬ್ರೂ ಇಲ್ದೆ ಖಾಲಿಮಾಡಿ ಊರಿಂದ. ದೇಹಾನ ಹೊರತರೋವರ್ನ್ಗ ಕಳ್ಸೋದು ನಿಮುಗ್ಗೊತ್ತು !......[ಸೋಪಾನವನ್ನು ಹತ್ತಿ ಗಂಭೀರವಾಗಿ ಹೊರಡುವನು.........ಈತನ ಹಿಂದೆ "ಧರಣಯ್ಯಾಕಿ ಜೈ ! ಶ್ಯಾನುಭೋಗಾಕಿ ಜೈ!" ಎನ್ನುತ್ತಾ ಸಂಭ್ರಮದಿಂದ ಕೆಲವರೂ, ಪೋಲೀಸಿನವರ ಬಂದುಬಸ್ತಿಗೆ ವಳಪಟ್ಟು ಮಿಕ್ಕವರೂ, ಹೊರಡುವರು......ಹಿಟ್ಟಿನಲ್ಲಿ ಶ್ಯಾನುಭೋಗನು. ತರುಮರೆ ಆಶ್ರಿತನಾದ ನಾಯಕನೂ ಅಲ್ಲಿದೆ. ರಂಗವು ವಿಜನವಾಗುವುದು.]

[ಒಂದೆರಡು ಕ್ಷಣಗಳಲ್ಲಿಯೇ ಸ್ತ್ರೀಯೊಬ್ಬಳ..... ..."ಹಯ್ಯೋ ! ಹೀಗಾಗಬಹುದೇ ! .... ಹೀಗಾಗ್ಬಹುದೇ ! ಈ ದುರ್ಬುದ್ಧಿ ಹುಟ್ಟಬಹುದೆ ! ......" ಎಂಬ ಆರ್ತರವವು ಕೇಳಿಬಂದು ಕ್ರಮೇಣ ಸಮಾಪಿಸಿ, ಅಂತ್ಯತಃ ಸೋಪಾನಾಗ್ರದಲ್ಲಿಯೇ ಕೇಳಿ ಬರುವುದು.]

ಉಪನಾಯಕ : (ನೇಪಥ್ಯವನ್ನು ಈಕ್ಷಿಸಿ) ಇದೇನಿದು......ಮೊರವಣಿಗೆ ಮುಂಗಿನ ಮೇಲೆ ಮತಾಪಿನೋನು ಬಂದಹಾಗೆ...ಇಷ್ಟುಹೊತ್ತು ನಡೆದ ಗೋಳಾಟಕ್ಕೆಲ್ಲದ್ದ ಹೆಂಗಸು......ಈಗ ಬರ್ತಿದ್ದಾಳೆ!......ಗೋಳಾಡೋಕೆ!......ಯಾರೂ ? (ದುರುಗುಟ್ಟಿ ನೋಡಿ ಥಟ್ಟನೆ ಚಮಕಿತನಾಗಿ) ದೇವ್ರೇಗತಿ......ಇವ್ಳು!......ಇದೇನು ಹುಚ್ಚು!......ಇವ್ಳು ಬಂದ್ಳೀಗ.....ಜೀವಿಯುದ್ದ್ರಕ್ಕೆ ಬಡುಕೊಳ್ತಾ! ?.........(ಅಂಜಿದವನು ಓಡಿ ತಪ್ಪಿಸಿಕೊಳ್ಳಲು ನಾಲ್ಕು ದಿಕ್ಕುಗಳನ್ನೂ ನೋಡುವವನಂತೆ ನೋಡಿ ನಡುಗುತ್ತಾ ನಾಲ್ಕಾರು ಮೆಟ್ಟಿಲುಗಳನ್ನು ಇಳಿದು) ನಾನು ನೀರಲ್ಲೇ ಹಾಳೋ ವರ್ತಮಾನ ಕವೀಗೆ ಜಿದ್ದಾಕ್ಲಣ್ಣ.........ನನ್ನ ಬುದ್ಧಿಶಕ್ತಿ ಗೊತ್ತಾಗ್ದೇ....?......

ಸ್ತ್ರೀ : (ಕಟ್ಟು ಬಿಚ್ಚಿಕೊಂಡು ಕೆದರಿ ಗಾಳಿಗೆ ಹಾರಾಡುವ ಕೇಶರಾಶಿಯಿಂದಲೂ, ವಾಸುಕಿಯ ಚಂಡಮಾರುತ ಉಚ್ಛ್ವಾಸದಿಂದಲೂ, ಕಣ್ಣುಗಳಿಂದ ಕಾರುವ ಕಿಡಿ ಮಳೆಯಿಂದಲೂ, ಅಸ್ಯದ ರೌದ್ರ ಮುದ್ರೆಯಿಂದಲೂ, ಇವಲ್ಲದೇ ಅತಿ ಕೃಷ್ಣವರ್ಣ ತನುವಿನ ಗೌರವಾಕಾರದಿಂದಲೂ, ಕಾಳ ರಾತ್ರಿಯನ್ನು ಬಿಂಬಿಸುತ್ತಾ ಪ್ರವೇಶಿಸಿ, ಮೆಟ್ಟಿಲುಗಳನ್ನು ಹೆಜ್ಜೆಗೆ ಹತ್ತುಹತ್ತಾಗಿ ಧುಮುಕಿ ಉಪನಾಯಕನನ್ನು ಸೇರಿ. ಆತನ ಭುಜಗಳನ್ನು ದೃಢವಾಗಿ ಹಿಡಿದು ಬೇಟೆ ನಾಯಿಯು ಇಲಿಯ ಮರಿಯನ್ನು ಕಚ್ಚಿಕೊಂಡು ಭೂಮಿಗೆ ಬಡಿಯುವಂತೆ. ಪ್ರಾಣವಲ್ಲಭನನ್ನು ಜಗ್ಗಿಸಿ ಕುಲುಕುತ್ತಾ, ದಂತಾವಳಿಯನ್ನು ಕಟಕಟನೆ ಘರ್ಷಿಸುತ್ತಾ ಘನ ಕಂಠದಿಂದ) ಇದೇನ್ಹುಚ್ಚು ನಿಮಗೆ? ಯಾವ್ನೋನೋ ಪಾಪಿ ಕೆರೇಲಿಬಿದ್ದು ಪ್ರಾಣಕಳಕೊಂಡ್ರೆ. ನನ್ನ ತಾಳೀನ ಕೀಳೋಕೆ. ಇದೇನು ಹುಚ್ಚು ಬಂತು ನಿಮಗೆ !?...ಮನೇಗೆ ಬನ್ನಿ ! ಮಾಡ್ತೇನೆ, ಮರ್ಯಾದೆ! [ಪದಪದಕ್ಕೂ ಅಲ್ಲಾಡುವನಾದ ಅರ್ಧಾಂಗನನ್ನು ಕುಕ್ಕಿ ಕುಕ್ಕಿ, ಮಹಾಸರ್ಪವು ಮಂಡೂಕವನ್ನು ಎಳೆದುಕೊಂಡು ಹೋಗುವಂತೆ. ಸ್ವಾಮಿಯನ್ನೂ ಸೆಳೆದುಕೊಂಡು ಸೋಪಾನಾರೋಹಣಕ್ಕೆ ಉತ್ಕ್ರಮಿಸುವಳು.]

ಉಪನಾಯಕ : ಸ್ವಲ್ಪಿರೇ–ಶನಿ. ಅಲ್ಲಾ, ನೀನು...ಕೂತ್ಕೊಂಡು ಶಾಂತಿತಕೋ! ಮಾಧ್ಯಾಹ್ನೀಕದಹೊತ್ತು! [ಕಾಂತೆಯ ಹಿಡಿತವನ್ನು ನುಣುಚಿ ತಪ್ಪಿಸಿಕೊಂಡು ನೀರಿಗಿಳಿದು ಮಾಧ್ಯಾಹ್ನೀಕವನ್ನು ಆಚರಿಸುವನು. ಉಪನಾಯಕಿಯು. ನಿಂತೆಡೆಯಲ್ಲೆ ಕುಳಿತುಕೊಂಡು. ಅಧರೋಷ್ಠಗಳನ್ನು ಭದ್ರಿಸಿ ಆಗಾಗ್ಗೆ "ಬರ್ಲಿ! ಶನೀನೆ?......ಮೆಟ್ಲು ಹತ್ತಿಬರ್ಲಿ! ಪ್ರಾಪ್ತಕ್ಕೆ ತೀರಿಸ್ಕೊಂಡು" ಎನ್ನುತ್ತಾ, ನಾಥನನ್ನು ರೆಪ್ಪೆಮುಚ್ಚದೇ ದುರುಗುಟ್ಟಿ ದೃಷ್ಟಿಸುತ್ತಿರುವಳು.]

[**ನಾಯಕ** : (ಆತ್ಮಗತಂ) ದೇವ್ರೇಗತಿ......ನನ್ನ ಹೆಂಡತೀನೇ ಹೆಬ್ಬುಲೀ ಅಂತಂದೆನಲ್ಲಾ! ...ಹಾಗಾದರೆ ಇವಳೋ!...ಗಜಸಿಂಹ!......ಆದೇ ನೋಡಿದೆ!!...ಏನಪ್ಪಾಂತ!!! ನಾನು ಸತ್ತಾ ಕ್ಷಣ್ವೆ. ಈ ಪ್ರಾಣೀನೂ ನೀರಿನಲ್ಲಿ ನೆಗೆಯೋಕೆ ಆತುರಪಡುತ್ತಾನೆ ಯಾಕೇಂತ!.........ಓ ಹೋ ಹೊ! ಈಗಲೀಗ ಇತ್ಯರ್ಥವಾಯ್ತು. ನಂದರ ಹಾಗೇನೇ ಇವಂದೂನೂ ಕೇಸೂ!......hopelessoo...homeನಲ್ಲಿ ಇವ್ನ positionooನೂ helplessooನೂ! ಅಬ್ಬಬ್ಬಬ್ಬ ಬ್ಬ ಬ್ಬಾ!...ಏನ್ ಹೆಂಗಸೂಂತೇನೆ!........ಒಳ್ಳೇ ದಂಪತಿಗಳು !—ಇವರ್ನ ಗಂಟುಹಾಕಿದ ಕಡು ಪುರೋಹಿತರಿಗೆ special ನರಕ! ಯಮಪುರೀಲಿ!....ಲಂಕಿಣೀನ ವಾಲಿಪ್ಪಿದ್ರಲ್ಲೊಬ್ಬ ಮದಿಸಿದ್ರೂನೂವೆ ಅನ್ಯಾಯ ವಲ್ಲಾಂದ್ರೆ......ತನ್ನ ತಪಸ್ಸಿನಿಂದಲಾದರೂ ತಪ್ಪಿಸಿಕೊಳ್ತಿದ್ದ...ಪತ್ನೀಕಾಟಾನ...ಆ ಋಷಿ!...ಈ ಶ್ಯಾನುಭೋಗನಿಗೆ ಆಶಕ್ತೀನೂ ಇಲ್ಲ...ಒಳ್ಳೇ ಸ್ವರ್ಗ ಇವನ ಸಂಸಾರ...ಪಾಪ...ಛು ಛು! (ತಾತ್ಸಾರದಿಂದ ನಗುತ್ತಾ) ಅಲ್ಲಾ!.........ಈ ಉದ್ದಂಡಿ ಕೈಲಿ ಸಿಕ್ಕಿಕೊಂಡು ವದ್ದಾಡ್ತಿರೋ ಈ ಮಿಡ್ಡೆ. "ಪರಿಶೋಧಿಸುಂಧು ಪ್ರಾಣೀ!"ಅಂತಾ...ನನ್ನ ಕನಿಕರ್ಸ್ತಲ್ಲಾ!...ನನ್ನ sweet wife ಏ ಎಷ್ಟೋ ವಾಸೀಂದ್ರೆ!...ದುಃಖಿ ಮುರಿಯೋಹಾಗೆ ಆ ನಾಗರಹಾವು ನಾಲಿಗೇನ ಉದಮೋಗಿ ನ್ಮಾಳೆ ಹೊತರ್ನು. ಗಂಡಾಂಚೋದನ್ಮರ್ತು ಹೀಗೆ ಜುಟ್ಟು ಹಿಡಿದು ಜಗ್ಗೋಲ್ಲ ಚಂದಿ ಅಲ್ಲಾ! ಅವಳ methodsಎಲ್ಲ Gentleಉ....personal assault ಅವಳ ಪಟ್ಟೀಲೇ ಇಲ್ಲ......lady ಅವಳು, ಹೆಂಗ್ಸು...ನಾಲ್ಗೆ ಹೊಡೀ ಅನ್ರೂನೂವೆ ನಡತೇಲಿ ಸೀತೆ....ನಮ್ಮೋಳು!]

ಉಪನಾಯಕಿ : (ಮೆಟ್ಲು ಹತ್ತಿಬಂದ ರಮಣನನ್ನು ಬಿಗಿ ಹಿಡಿದು) ಶನೀನೆ ನಾನು, ಇರ್ಲಿ, ನನ್ನ ಶನೀತನಾನ (ಪ್ರಾಣೇಶ್ವರನನ್ನು ಪುನರ್ಜಗ್ಗಿಸುತ್ತಾ) ಮನೇಲಿ ತೋರಿಸ್ತೇನೆ,...... ಇಲ್ಲಲ್ಲ......ಪತಿ ಪೂಜೆ, ಯಾವಾಗಿನಹಾಗೆ ಮನೇಲಿ ತೋರಿಸ್ತೇನೆ......ಇಲ್ಲಿ ಇನ್ನು ಬಾಯಿಬಿಟ್ಟು ರೇಗ್ಸಿದ್ರೋ. ನನಗೆ ಈಗಿರೋ ಕೋಪದಲ್ಲಿ ನನ್ನ ತಾಳೀ ಹರಿಯೋ ಅಪಾಯಕ್ಕೂ ಅಂಜದೆ (ಮುದಿವಾಳನು ನೀರಿನಲ್ಲಿ ನೆನೆಸಿದ ಮಾಸಿದ ಬಟ್ಟೆಯನ್ನು ಒಗೆಯಲು ಉದ್ಯುಕ್ತಿಸುವಂತೆ ಒಡೆಯನನ್ನು ಅನಾಮತ್ತಾಗಿ ಎತ್ತಿ ಕುಲುಕುತ್ತಾ) **ಒಗದ್ಬಿಟ್ಟೇನು** ......ಬಟ್ಟೆ ಒಗದಹಾಗೇ, ಒಗದುಬಿಟ್ಟೇನು ....**ಮಾತಾಡದೆ ಬನ್ನಿ** ....ಅಲ್ಲಾ! ಅಗಳ್ನ ಜೀರ್ಣಸಿಕೊಳ್ಳೋಕೆ ನಾಡಿಯಿಲ್ಲ, ಆತ್ಮ ಹತ್ಯಾನ್ನೇ ಮಾಡೋದು ನೀವು ?...ಊರೇ ನೋಡುತಿರೋವಾಗ ಆನಂದವಾಗಿ ನೀವು ಸತ್ತರೇ ನನ್ನ ಕಾಟ ತಪ್ಪಿಸಿಕೊಳ್ಳೋಕೆ ನೀರಿನಲ್ಲಿ ಧುಮುಕಿದ್ರೀಂತ ಅಂದ್ಕೊಳ್ಳೋದಿಲ್ವೇ ಜನಗ್ಳು!

ಉಪನಾಯಕ : ಅಲ್ಕಣೇ ಹುಚ್ಚು!...ಊರುದ್ದಕ್ಕೂ ಪೀಗೆಳಕೊಂಡು ಹೋಗ್ತೀಯಾ, ನನ್ನ ಬಿಡೇ....ಯಾರ್‍ಯಾದ್ರೂ ನೋಡಿಯಾರು ಬಿಡೇ...ಛಳ್ಳಂಬೆಳ್ಳು ಕಣೇ...ಮಮ್ಮಟ ಮಧ್ಯಾಹ್ನ ...ಮಾನಹೋಯಿತು ಬಿಡೇ ? (ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾ) ಬರ್ತೇನೆ ಬಿಡೇ...ಹಯ್ಯೋ ಬೆಪ್ಪು...ನಾನು ನಿಜವಾಗಿ ನೀರಿನಲ್ಲಿ ಧುಮುಕ್ಕಿದ್ದೇಂತ ತಿಳ್ಕೊಂಡ್ಯಾ ?....ಮಂಕೂ...ಅಲ್ಲ...ಸಾಧು ಪ್ರಾಣೀ...ನಮ್ಮ ಸೀತೂ ಮದ್ವೆಗೂ, ಅಶ್ವತ್ಥನ ಕಾಲೇಜಿನ ಖರ್ಚು ತೀರೋಕೂ ರಸ್ತೆ ಹಾಕ್ಕೊ ಬಿಟ್ಟೆ...ಸಲೀಸ್ ರೋಡ್ನ. ಇಲ್ನೋಡೆ ! (ವಳಜೇಬಿನಿಂದ ಏನನ್ನೋ ಹೊರತರಲು ಯತ್ನಿಸುವನು.)

ಉಪನಾಯಕಿ : (ಪ್ರಾಣ ಪ್ರಭುವಿನ ಮೇಲಿನ ಹಿಡಿತವನ್ನು ಸಡಲಿಸಿ) ಎಲ್ಲೀಗೆಲ್ಲೀಗೆ ಸಂಬಂಧಾಂದ್ರೇ! ಅರ್ಥ್ವಾಗ್ಲಿಲ್ಲ...ನೀರಿನಲ್ಲಿ ಧುಮುಕೋಕೆ ನೆಗೆದ ನೀವೆಲ್ಲಿ ?..."ಹೆಂಡ್ತೀಕಾಟ ತಡೀಲಾರ್ದೆ ಶ್ಯಾನುಭೋಗ ಕೆರೇಲಿ ಧುಮ್ಕೀ ಸತ್ತಾಂ"ತ ಹಲ್ಬಾಲ್ಕಿರೀತ ಹಂಗ್ನೋ ಊರಹೆಂಗಸರ ಕೇಕೇನ ಸಹಿಸಲಾರದೆ ಓಡಿಬಂದ ನನ್ನ, ಮರೆಸಬೇಕೂಂತ ನೀವು ಎತ್ತತಾ ಇರೋದುಡ್ಡೆಲ್ಲೀ ? ಎಲ್ಲಿಂದೆಲ್ಲೀಗೆ ಸಂಬಂಧ...?

ಉಪನಾಯಕ : (ನಿಶ್ಶೇಷವಾಗಿ ನೀಡಿ ನಟ್ಟುಕೊಂಡು ಚಕ್ಕನ್ನು ತೋರಿಸುತ್ತಾ) ಇಲ್ನೋಡೆ ! ಮಂಕು! ಚೆಕ್ಕು ಕಣೇ!!! ಧರಣಯ್ಯನೋದ್ರು!!! ನಲವತ್ತೆರಡು ಸಾವಿರ ರೂಪಾಯ್ಗಿ!!!! ನನ್ನಕೈಲಿ!!!...ಅದೇ ನಿನಗೂ ನನಗೂ ಇರೋ ವ್ಯತ್ಯಾಸ. (ಚೆಕ್ಕನ್ನು ನೋಡಿದ ಭಾರ್ಯೆಯು ಬೆಚ್ಚಿಬಿದ್ದು ಸಭಕ್ತಿಯಿಂದ ಹಿಮ್ಮೆಟ್ಟುವಳು) ಎಷ್ಟಾವರ್ತಿ ಹೇಳಿದೇನೆ!.......ನಿನ್ನ ಬುದ್ಧಿಯೆಲ್ಲಾ ನಿನ್ನ ಬಾಯಿಯಲ್ಲೂ, ನಿನ್ನ ಮೈಯಲ್ಲೂ, ನಿನ್ನ ಕೈಯಲ್ಲೂ!!! ನನ್ನದೆಲ್ಲಾ...ಇರ ಬೇಕಾದ ಕಡೇಲಿ...ಮಂಡೇಲಿ...ಅರ್ಥ್ವೇ?...ಸುಧಾರಿಸಿಕೊಂಡು ವಿವರಿಸ್ತೇನೆ...ವೃತ್ತಾಂತಾನ...ಓಡಿ ಬಂದಿದ್ದೀಯಾ...ಕೂತ್ಕೊಂಡು ಚೇತರಿಸ್ಕೋ......[ದಂಪತಿಗಳು ಕೂಡಲು ಉಪನಾಯಕಿಯು ಬಿಸಿಲಿನಲ್ಲಿ ಬಳಲಿದ ಭರ್ತೃವನ್ನು ಉಟ್ಟ ವಸನದ ಸೆರಗಿನಿಂದ ಬೀಸುತ್ತಾ ಶುಶ್ರೂಷಿಸುವಳು.]

[**ನಾಯಕ :** (ವಿಸ್ಮಯ ಭರಿತನಾಗಿ ಆತ್ಮಗತಂ) ದೇವ್ರೇಗತಿ! ದೊಡ್ಡದೊಡ್ಡ motorಗಳ್ನ ಚಕ್ಕಕ್ಕ brakeಗ್ಳೇ ನಿಲ್ಸೋ ಹಾಗೆ....... ಊರೂರ್‍ನೇ ಗದರ್ಸಿ ನಲವತ್ತೆರಡು ಸಾವಿರ ರೂಪಾಯಿ ಕಸ್ಕೊಂಡು ನನಗ್ಗಿಟ್ಟಿಸಿದ ಈ ವಿಪರೀತ ಬುದ್ಧಿ ಎದುರಿಗೆ ಎಷ್ಟು ಗುರುಗುಟ್ಟಿದ್ರೂನೂವೆ. ಈ ವಾರಾಹಿ – ಯಾವ ಮೂಲೆ?...........after all ಗಂಡ್ಸು ಗಂಡ್ಸೆ! ಹೆಂಗ್ಸು ಹೆಂಗ್ಸೆ! ಹೋದ್ಸಾರ ನಮ್ಮ ಊರಿಗೆ ಬಂದಿದ್ದ ಸರ್ಕಸ್ಸಿನಲ್ಲಿ ಸಿಂಹದ ಕೈಲಿ ಕೆಲಸಾ ತಕ್ಕೊಂಡ ಕುಳ್ಳ, ವಾಮನಕರ್ ಮಾಸ್ಟರ್‌ರ ಹಾಗೆ ಭೀಕರ ಪತ್ನೀ ಕೈಲಿ ಬೀಸಿಸ್ಕೊಳ್ತಿರೋ ಇವನಲ್ವೇ ಭೂಪ!...... ಗಂಡಂತೇಬರ ಗಂಡ ಇವ್ನ!!....... ಅರ್ಧಾಂಗೀ ಐರಾವತವಾದ್ರೂನೂವೆ, ಅರ್ಧ ಆಳಿನೆತ್ತರವೂ ಇಲ್ಲದ ಈ ಫೋಟಾ ಮಾವುತ.......ಬುದ್ಧೀಂಬೋ ಅಂಕುಶದಿಂದೆ ಅಡಗಿಸ್ತಿದ್ದಾನೆ, ಅವ್ಳ ಮದ ರೌದ್ರಾನ!....... (ಅಸೂಯೆ ಮುದ್ರೆಯನ್ನವಲಂಬಿಸಿ) ನನ್ನ ಹಾಳ್ department ಬೇರೆ ....ಬುದ್ಧಿ ಜಾಬತ್ನಲ್ಲಿ ಬಿಟ್ಟೆ, ನನ್ನ wifeಊ! ಇನ್ನು ಅವಳ ನಾಲಿಗೇನೋ ಕೆಂಜೇಳಿನ ಕೊಂಡಿ!......Therefore widow ಆದ್ರೇನೇ. ಗಂಡನ್ಮೇಲೆ ಮರ್‍ಯಾದೇ ಇಡೋದವಳು......

Again therefore, widow ಆಗ್ಲೇಬೇಕು ಅವಳು ......ಒಂದೆರಡು ನಿಮ್ಷಾನೂ widow-shipನ ಹತ್ತಿ ವಾಯೇಜು ಮಾಡಿದ್ಲೋ ತನ್ನಷ್ಟಕ್ಕೆ ತಾನೇ ಬುದ್ಧಿ ಬಂದು. ನಲವತ್ತೆರಡು ಸಾವ್ರ ರೂಪಾಯ್ನ ಒಂದು secondನಲ್ಲಿ ಸಲೀಸಾಗಿ ಸಂಪಾದಿಸಿದ ನನ್ನ ಯೋಗ್ಯತೇನ ತಿಳುಕೊಂಡು, ಸತ್ತ ನಾನೂ, ಬದ್ಕಿರೋ ಅವಳೂ ನಮ್ಮ ಮಕ್ಕಳೂ. ಇನ್ನು ಯಾವ ಉಪದ್ರವಾನೂ. ನಮ್ಮಾಯುಸ್ಸು ಶೇಷಾನ ಅನ್ಯೋನ್ಯವಾಗಿ ಕಳೀಬಹುದು! .... ಸುಖವಾಗಿ .... ನನ್ನ ಹಾಳು ಮಾವನ ಮನಿಯಾರ್ಡರಿಲ್ಲದೆ! ಹೌದೂ ನಲವತ್ತೆರಡುಸಾವಿರ ರೂಪಾಯ್ನಿ ಮೂವತ್ತಾವ್ರ minus ಆಗತ್ತೆ!,......ಗಂಡನಿಲ್ದೇನೂ, ಅಪ್ಪ ಅಮ್ಮ ಇಲ್ದೇನೂ ಬಾಯ್‌ಬಾಯ್ ಬಿಡೋ ಭಿಕಾರಿಗಳ ಹಸಿವಿಗೆ ಹುಯ್ದು, ಅವ್ರ ವಾಸಕ್ಕೇಂತ ಕಟ್ಟೋ ಹಾಳು ಅಲಯಕ್ಕೆ!! .... ಧರಣಯ್ಯನೋರು ಹೇಳಿದಹಾಗೆ,......... ಬಾಕಿ ಹನ್ನೆರಡುಸಾವಿರ ರೂಪಾಯಿ ಸಾಕು ! ನನ್ನ ಸಂಸಾರಕ್ಕೆ!!...(ಭೃಕುಟಿ ರಚನೆಯನ್ನು ಮಾಡುತ್ತಾ) ಹೌದೂ! ದುಡ್ಡು ಕೊಟ್ಟಿದ್ದು ಯಾರ ವರ್ತಕ್ರು! ಚಕ್ಕು ಶ್ಯಾನುಭೋಗನ ಕೈಲಿ......ಏತನ್ಮಧ್ಯೆ.....ಎತ್ತಿಧಾನೆ......topicಉ...... ತನ್ನ ಮಗಳು ಸೀತೂವಿನ ಮದುವೇಗೆ—ಈ ಭದ್ರಕಾಳಿ ಹಾಕಿರೋ ಬಜ್ಜೆಟ್ ಒಂದು ಸಾವಿರ...... ಕುಮಾರ ಕಂಠೀರವ್ನ ಕಾಲೇಜು ಖರ್ಚು ಇನ್ನೊಂದ್ಸಾವ್ರ......ಈ ಕಪ್ಪು amazon ಅಂದ್ಹಾಗೆ ......totalಉ .. ....two thousandಉ......ನನ್ನ ಹನ್ನೆರಡುಸಾವಿರ ರೂಪಾಯ್ನೂ. ಇವ್ರಿಗೆ ಬೇಕಾದ one one ಎರಡುಸಾವಿರ ರೂಪಾಯ್ನೂ ಒಂದೇ ಬಾಯಿಂದ ಉಸರ್ತಿಧಾನೆ ಯಾಕೆ? !!......connection ಗೊತ್ತಾಗ್ಲಿಲ್ಲ......ಈ ಕಲಿ ಪಿಡಿಂಪಿ ಹೇಳಿದ ಹಾಗೆ....ಏರ್ಪೀಗೆರ್ಲ್ಲೀ ಸಂಬಂಧ?......ಒಟ್ನಲ್ಲಿ dangerousಉ ಶ್ಯಾನುಭೋಗ! "ವಿಪರೀತ ಬುದ್ಧೀ! ವಿನಾಶ ಕಾಲೇ! "....... ಆದ್ರೆ ? ಯಾರ ವಿನಾಶಕಾಲ ಅಂಬೋದ್ನ ತಿಳಿಕೋಬೇಕು ತಪಶೀಲಾಗಿ! ... . (ದಂಪತಿಗಳ ಕಡೆ ಕಿವಿಯನ್ನೊಡ್ಡುವನು.)] .

ಉಪನಾಯಕಿ : (ವಾರಾಹಿಯ ರೂಪವನ್ನು ತಾಳಿದ ದೇವಿಯು. ಶೋಣಿತ ಪಿಪಾಸ ಪೀಡಾಶಮನಳಾಗುತ್ತಲೂ, ಲೀಲಾ ಭೂಮಿಕೆಯನ್ನು ಪುನರವಲಂಬಿಸಿದ ಮಾಹೇಶ್ವರಿಯಂತೆ ರೌದ್ರವನ್ನೊದರಿ ಪತ್ನೀತ್ವವನ್ನು ಕೈಗೊಂಡು, ಸ್ಮಿತ ವಕ್ತ್ರ ವಿರಾಜಿತಳಾಗಿ. ತನ್ನ ಜಮೇಶ್ವರನನ್ನು. ಮೃದು ವಚನಗಳಿಂದ ಪ್ರಶ್ನಿಸುತ್ತಾ) ಏನದೂ ಚಕ್ಕೂ?.......ನಲವತ್ತೆರಡು ಸಾವಿರ ಅಂತೀರಾ! ....ಹೆಚ್ಚೂಕಮ್ಮಿ ಅರ್ಧ ಲಕ್ಷ!!!......ಸೀತೂಗೋ ವಯಸ್ಸಾಗ್ತಾ ಬಂತು. ಮದ್ವೇ ಆಗ್ಲೇ ಬೇಕು ಈ ವರ್ಷ...ಮಾಘ......ಇದು ಮಾಸ.......ಮೆಟ್ರಿಕ್ಯುಲೇಷನ್ ಆದ ಅಶ್ವತ್ಥ ಕಾಲೇಜೂಂತ ಕೂತಿಧಾನೆ. ಇದಕ್ಕೆಲ್ಲಾ ಬೇಕಾದ್ದುಡ್ನ ಒದಗಿಸೋವಗ್ಟೇನ ಬಿಡಿಸಬಾರ್ದ ಮಾಡ್ತಿದ್ವಲ್ಲಾ! ನೀವೂ ನಾನೂ!.........ನೀವು ನೀವೆ ಬಿಡಿಸಿಬಿಟ್ರಾ ಇವತ್ತು? (ವಾಮ ಪಾರ್ಶ್ವದಲ್ಲಿ ತನ್ನ ವಿಸ್ತಾರ ತನುವು ಹಾಸಿದ ಅತ್ಮ ಘನ ಛಾಯೆಯನ್ನು ಸೂಚಿಸಿ) **ಅಲ್ಲಿ ಬಿಸಿಲು!........ ಇಲ್ಬನ್ನಿ ಅಂದ್ರೆ! ನನ್ನ ನೆರಳಿಗೆ!**..........ಪರ್ವಾ ಇಲ್ಲ!........**ನಾನೇ ಎದ್ದು ಬಂದು ನೆರಳು ಹಾಕ್ತೇನೆ**...ನಿಮಗೆ!......[ವಲ್ಲಭನ ದಕ್ಷಿಣ ಪಾರ್ಶ್ವ ನಿಷಣ್ಣೆಸಿ ನಾಥನಿಗೆ ನಿಜ ಛಾಯಾತಪತ್ರವನ್ನು ಅರ್ಪಿಸುವಳು.]

ಉಪನಾಯಕ : ನೆರಳಿರ್ಲಿ! ಹಸಿವುಕಣೇ! ಹೊಟ್ಟೆಗಿಲ್ದೇನೆ...ನಿನಗೂ ನನಗೂ ಊಟ ಇಲ್ಲ......!

ಉಪನಾಯಕಿ : (ಅಡ್ಡಮಾತಾಗಿ) ಚನ್ನಾಗಿಯ್ತು!...ಇಷ್ಟು ದೂರ ನಿಮ್ಮ ಹೊಟ್ಟೆ-ಹೇಳಬಾರದಾಗಿತ್ತು! ಹೇಳಿಬಿಟ್ಟೆ!!...ಬಿಡ್ತು ಅನ್ನಿ ! ಮರೆತುಬಿಡಿ__......ಹುಡುಕ್ಕೊಂಡು ಬಿಡಬೋಕೆ ಚೈತನ್ಯವಿರ್ತಿತ್ತೇ?...ನನ್ನ ದೇಹದಲ್ಲೀ? ಊಟಾ ಆಗ್ದಿದ್ದರೆ?......ಮನೇಲಿ ಎಲ್ರಿಗೂ ಊಟಾ ಆಯ್ತು! ಕಾದೂ ಕಾದೂ ನೋಡಿದ್ದಾಯ್ತು!

ಉಪನಾಯಕ : (ಎದ್ದು) ಸರಿ. ಯಥಾಪ್ರಕಾರ! ಏಳು. ಹೊರಡೋಣ ಮನೆಗೆ...... ಧರಣಯ್ಯನೋರ ಚಿಕ್ಕು ನಲವತ್ತೆರಡು ಸಾವಿರಕ್ಕೆ....ಅನಾಥರಾದ ಅಬಲೆಯರು. ಮಾತಾಪಿತೃರಹಿತ

ಮಕ್ಕಳು, ಇವರಿಗೆ, ನರಕ ಪ್ರಾಪ್ತನಾದ, ...ಸತ್ತ ಸೋಮಾರೀಗೆ ಸ್ವರ್ಗವೆಲ್ಲೀದೂ!—ನರಸಿಂಹಯ್ಯನ ಹೆಸರಿಟ್ಟು. ಒಂದು ಆಲಿಯಕ್ಕೆ ಮುವತ್ತಾನ್ನವು: ಬಾಕಿ ಹನ್ನೆರಡುಸಾವಿರ; ಆಯ್ತು! ಧರ್ಮಿಷ್ಠರಾದ ಧರಣಯ್ಯನೋರ ಯಾವ ಹೊತ್ತೂ ತೊದಲದ ನಾಲಗೇ, ಸತ್ತೋನ ಸಂಸಾರಕ್ಕೆ ವದಗಿಸೋ ಸಹಾಯದ ವಿಷಯದಲ್ಲಿ..."ಹತ್ತು, ಹನ್ನೆರಡುಸಾವಿರಾ"ಂತ ಈ ಹೊತ್ತು ತೊದಲ್ತು......ಆಕೇಗೆ ಸಿಗೋ ಹತ್ತುಸಾವಿರ ಕೈಗಂಟೋಕೆ ದಾರೀ, ಹನ್ನೆರಡುಸಾವಿರ ರೂಪಾಯ್ನ ರಸೀದಿಗೆ ಸೈನು ಹಾಕೋದೇ ಅಂಬೋದ್ನ ಒಪ್ಪಿಸಿಬಿಟ್ಟರೆ......ಶ್ರಮವೇನೂ ಇಲ್ಲ......ಜಾಣೆ ಆಕೆ......ದಕ್ಕಿದ ಹಾಗಾಯ್ತು ನಮ್ಮ ದುಸ್ಸನ್ನಿವೇಶದ ಅಂತ್ಯಾನ್ನ ಮುಟ್ಟಿಸೋ ಎರಡುಸಾವಿರ ರೂಪಾಯಿ...... ನದೀ......ಮನೇ ಕಡೇ......ಇನ್ನೇನು ಬಂದುಬಿಡ್ತಾರೇ............ಇನ್ಸ್ಪೆಕ್ಟ್ರು, ಈಜೋರ್ರೂ ಮುಳುಗೋರ್ರೂ ಇತ್ಯಾದಿಗಳ್ನೆಳಕೊಂಡು......ಆತ್ಮಹತ್ಯ ಮಾಡಿಕೊಂಡು ಪ್ರಾಣಗಳು ಬಿಟ್ಟ, ಆ ಪಾತ್ರಿಷೆನಾನ ಈಚೆಗೆತ್ತಿ ಹಾಕೋಕೆ...ಬಂಧ್ಬಿಡ್ತಾರೆ ಜನಗ್ಳೂನೂ,!......**ಅವನು ಸತ್ತದ್ದು ಶುಭಾ ನಮ್ಮ ಊರಿಗೆ, ಒಂದು ಸೋಮಾರಿಯಾದ್ರೂ ಕಮ್ಮಿ ನಮ್ಮೂರ್ಗೆ!........ಹೀಗೇ ನೋಡು, ಬರ್ತಾಬರ್ತಾ, ಹಗೂರವಾಗೋದು ನಮ್ಮ ಭೂದೇವಿ ಭಾರಾ!**

[ದಂಪತಿಗಳು ಸೋಪಾನವನ್ನೇರಿ ನಿಷ್ಕ್ರಮಿಸುವರು]

ನಾಯಕ : [ದಂಪತಿಗಳ ಈ ಕಠಿಣಾರೋಪಗಳು ಕರ್ಣಾಂತವನ್ನು ಸೇರುತ್ತಲೂ ಕೆಣಕಿದ ಕಾಳೀಯನಂತೆ ಕನಲಿ, ರೌದ್ರಮುದ್ರೆಯನ್ನು ತಾಳಿ, ಪುನಃ ಬಿಗಿದ ಮುಷ್ಟಿಗಳಿಂದ, ನಿಷ್ಕ್ರಮಿಸುತ್ತಿರುವ ನರಯುಗ್ಮವನ್ನು ಸೂಚಿಸಿ ನಿರಾಕರಿಸುತ್ತಾ]........**ಭೂಭಾರ! ------ ಯಾರು!....... ನಾನೇ ?**....... ಅಲ್ಲಾ!....... ಪೂತನಿಹಾಗಿರೋ ಪತ್ನೀನ ಪಕ್ಕದಲ್ಲಿ ನಡೆಸಿಕೊಂಡು ಹೋಗ್ತಿರೋ, ತಲೆಯಾವ್ದು ಬಾಲಯಾವ್ದು ತಿಳಿಯದ, ಅಂಗುಷ್ಠದಷ್ಟೂ ಇಲ್ಲದ ಈ ಜಂತೂಗೆ ...... ನಾನೇ ? ಭೂಭಾರ!! ಛೆ! ಊರ್ಗೆಲ್ಲಾ warning ಕೊಟ್ಟೇಬಿಡಬೇಕು!!!! ಇವನು bombಊ ಅಂಯೋದ್ನ !!........ತಿಳಿಸೇಬಿಡಬೇಕು, ಸರ್ವರಿಗೂ!!........... ಹನ್ನೆರಡು ಸಾವಿರ ರೂಪಾಯ್ನೂ ಊರ್ನೋರು ಒಬ್ಬ ವಿಧವೇಗೆ ಕೊಟ್ರೇ, ಅದರಲ್ಲಿ...ಎರಡಾರ್ಲ ಹನ್ನೆರಡುನೂರು......ಹದ್ನಾರಾರ್ಲ ತೊಂಬತ್ತಾರು,......ಅರ್ಧಆರ್ಲ ಮೂರು. ತೊಂಭತ್ತಾರು ಮೂರು ತೊಂಬತ್ತೊಂಭತ್ತು...... ಇನ್ನೊಂದಿರ್ಲಿ. at least ಹದಿನಾರು percentಉ, ಗಂಡನ್ನ ಕಳಕೊಂಡ ವಿಧ್ವೆ ದುಡ್ಡ್ನಲ್ಲಿ,... ಕಮಿಷನ್ ಕಳಕಳ್ಳೋ ಈ ಕಡುಪಾಪಿ ಅಯೋಗ್ಯತೇನ ತಿಳಿಸಲೇಬೇಕು ಊರಿಗೆಲ್ಲಾ ?........ ಸೋಮಾರೀನೇ ನಾನು ?......ಈಗ ಹೀಗೇ ಓಡಿಹೋಗಿ......ಧರಣಯ್ಯನೋರ್ನ ನೋಡಿಬಿಟ್ಟು ......ನಾನು ಸತ್ತದ್ದು ಸುಳ್ಳೂಂತ ತಿಳಿಸಿಬಿಟ್ಟು......ಚಕ್ರ್ನೂ ಹರಿಸಿಬಿಟ್ಟು, ಈ ತಾಟ್ಕಿ ಮಗಳ ಮದುವೇನೂ ನಿಲ್ಲಿಸಿಬಿಟ್ಟು......ಇವನ ರಾಕ್ಷಸ ಕುಟುಂಬ ಕಂಗೆಡ್ತಿರೋದ್ನ, ಕಣ್ಣುತುಂಬಾ ನೋಡ್ತಾ, ಆನಂದಪಡ್ತಾ, ಈ Sham Rogueಉ ಪಡೋ ಸಂಕಟ ಸಾಗರದಲ್ಲಿ ಸಂತೋಷವಾಗಿ ಈಜ್ತಾ ಶಾಂತಿ ತಂದುಕ್ಕೊಂಡು.......ನನ್ನ ಸೇಡು ತೀರಿಸಿಕೊಳ್ಳೋದೇ, ಗಂಡಸ್ತನ......best thingoo......ಭೂಭಾರಾನೇ ?.........ನಾನು! ತೋರಿಸ್ತೇನೆ ಈಗ......! Therefore, ಈ ಪಾಪೀ ಹಾಗೆ ಹಸಿವಿನಿಂದ ಬಳಲ್ತಿರೋ ನಾನೂವೆ ಮನೇಗೆ ಹೋಗಿ ಊಟ ಮಾಡೋದೆ first thingoo......(ಯೋಚಿಸುತ್ತಾ, ಬಿಗಿದ ಮುಷ್ಟಿಗಳು ಕ್ರಮೇಣ ಮೃದುವಾಗಿ ಸಡಿಲ ಬಿದ್ದು ಬಾಹುಗಳು ನಿಸ್ತ್ರಾಣಗಳಾಗಿ ಜೋಲಾಡುತ್ತಾ)......

ಹೌದೂ ಊ ! ? ಈ "ಮುಯ್ಯಿಗೆ ಮುಯ್ಯಿ"ನ ಗಲಾಟೇಲಿ, ನನ್ನ wifeನ ನನ್ನ ದಾರೀಗೆ ತರೋ widow shipನ ಮೇಲೆ ಹತ್ತಿಸೋದು ಹ್ಯಾಗೇ ?....... ಆ Voyageನ ಒಂದೆರಡು ದಿನವಾದ್ರೂ ಅನುಭವಿಸಲ್ಲೇೀ ಬೇಕು........ಇವ್ಳು !

(ಭ್ರುಕುಟಿರಚಿತನಾಗಿ, ಕಪಾಲವನ್ನು ಕೆದರಿ ಕೆದರಿ ಯೋಚಿಸುತ್ತಾ)

…………ಶ್ಯಾನುಭೋಗನಿಗೆ ಬುದ್ಧಿ ಕಲಿಸೋ ದಾರಿ ಒಡದ್ರೋ. ನನ್ನ ಹೆಂಡ್ತೀಗೆ ಬುದ್ಧಿ ಕಲಿಸೋ line ತುಂಡಾಗುತ್ತೆ……hopelessoo !! ಎರಡು linesoo ಒಂದೊಂದು hopelessoo ;…ಅದು ಹಿಡಿದರೆ ಇದಿಲ್ಲ……ಇದು ಹಿಡದ್ರೆ ಅದಿಲ್ಲ ! …… Geometryಲಿ ಬಂದ್ಹಾಗೆ, two lines enclose a spaceಊ, which is impossibleಊ. (ತೀರ್ಮಾನಿಸಿ ತಲೆದೂಗುತ್ತಾ) Therefore, ಇವೆರಡ್ನೂ ಬಿಟ್ಟು ಮೂರನೇ line ಒಂದನ್ನ ಹಿಡೀಲೇಬೇಕು…… ……ಆ line ಗೋ ಯಾವಾಗಲೂ breadth ಏ ಇಲ್ಲ ! ಈಗ ನಾನಿರೋಸ್ಥಿತೀಲಿ, ಷುರೂನೂ. endಊ ಇಲ್ದೆ ತೋಚೋಹಾಗೇ ಇಲ್ಲ ! ಹೆನ್ನ ಹೊಟ್ಟೇನ ಕೊರೀತಿರೋವಾಗ ಹೊಳಿಯೋದೆಲ್ಲೀ ?. ನನ್ನ ಮೆದುಳಿಗೆ ? (ಸುತ್ತಿಗೆಯನ್ನೆತ್ತಿ) ಈ ಪಾಳು ಬಿಸಿಲೊಂದು ಶನಿ ! ಬೆಳಿಗ್ಗೆ ಛಳೀಗೆ ಹೆದ್ರಿ ಬಿಸಿಲಿಗೆ ಕಾದಿದ್ದೆ ! ಈಗ ಈ ಬಿಸಿಲಿಗೆ ಬಂದು ಈ ಬೂರುಗದ ಬುಡಾನ ಸೇರಬೇಕಾಗಿದೆ ! (ದ್ರುಮಚ್ಛಾಯೆಯಲ್ಲಿ ನಿಷಣ್ಣನಾಗಲು ಉಪಕ್ರಮಿಸಿ ಥಟ್ಟನೆ ನಟ್ಟುಕೊಂಡು) ಕೂತುಕೊಳ್ಳೋಕೆ ಎಲ್ಲೀ time ಈಗ ! ……ಸತ್ತೋನ Soul ನ ಯಮದೂತರು ಸೆಳಕೊಂಡ್ಹೋಗೋಕೆ ಮುಂಚೆ. ಶವಾನ ಸೆಳಕೊಂಡು ಹೋಗೋಕೆ sham rogue ಹೇಳಿದಹಾಗೆ ಬಂದೇಬಿಡ್ತಾರೆ ; ಈ ಪಾಳು ಹೆಣಾನ ಹುಡುಕೋಕೆ — ಬಂದೇಬಿಡ್ತಾರೆ ……..(ಉನ್ಮಾದನಾಗಿ ನಗುತ್ತಾ) ಹಃ ! ಹಃ !! ಹಃ !!! ಹಾಃ !!!! ಒಳ್ಳೇ ಕಷ್ಟಗೋಳಿನಲ್ಲಿ ಸಿಕ್ಕೊಂಡಿದ್ದೇನಲ್ಲ……ಸತ್ತ ಹೆಣವಾದ ಹಾಗೂ ಇಲ್ಲ ! ಬದಿಕಿ ಮನೇಗೆ ಹೋಗಿ ಕಟುಕಾನ ಗದಿಕಿದಹಾಗೂ ಇಲ್ಲ……ನನಗೆ ಈಗಿರೋ ಹಸಿವಿನಲ್ಲಿ ಹೆಂಡತೀನ ಬಿಟ್ಟು, ಅವಳಿಗೆ ಬರೋ ಹತ್ತು ಸಾವಿರ ಶ್ವೇತಗಳಿಗೆ ಹೇಸಿ ಓಡಿಹೋಗೋ ಹಾಗೂ ಇಲ್ಲ !…ನಮ್ಮ ಊರ ಕೆರೆಪಟ್ಟಿನಲ್ಲಿ. ನನ್ನ ಗುರ್ತು ಕಂಡುಬಂತೋ, ನಾನುಸಾಯದ್ದು ಹೊರಬಿದ್ದು, ತುಂಡಾಗುತ್ತೆ…ಹೆಂಡ್ತಿ ಪ್ಲಸ್ ಮಕ್ಕಳು Plus ಹತ್ತುಸಹಸ್ರ King George ಪ್ರತಿಮೆಗ್ಳು…ಇದಕ್ಕೆ ಬೆದರಿ ಓಡಿಹೋದೆನೋ. ಅವಳಾಯ್ತು ಅವಳ ಕೈಗೆ ಸಿಗೋ ಹತ್ತುಸಾವಿರವಾಯ್ತು……ಅವಳು ಅವಳ ಮಕ್ಕಳು ಅವಳ ಅಪ್ಪನ ಮನೇಗೆ ಯಾತ್ರೆಯಾಯ್ತು……..ನನ್ನ ಶ್ರಾದ್ಧವಾಯ್ತು……ಬಿಡಿಗಾಸೂ ನನಗೆ ದಕ್ಕೋ ಹಾಗಿಲ್ಲ !…ಸದ್ಯ, ಈ ಸೋಪಾನ ಬಿಟ್ಟು, ಕತ್ತಲೆ ಕವಿಯೋವರಿಗೂ ಮೂತಿ ಮುಚ್ಚಿಕೊಳ್ಳೋದೇ first and best thingಊ……!!

[ಸುತ್ತಮುತ್ತ ಅಂಜಿ ನೋಡುತ್ತಾ ನಿಷ್ಕ್ರಮಿಸುವನು.]

[ನೇಪಥ್ಯದಲ್ಲಿ "ಹಗ್ಗಾ ತಂದಿಧೀರಾ ?—ಕೆಸರಲ್ಲಿ ಸಿಕ್ಕೊಂಡಿದ್ರೂನೂವೆ. ಮಹಜರು ಮಾಡಿ, ಆ ಹೆಣಾನ ಹೊರಗೆಹಾಕಿದೋನಿಗೆ. ಹತ್ತುರೂಪಾಯಿ ರೂಬರೂಬು ಬಕ್ಷೀಸು ! ಬನ್ನಿ !" ಎನ್ನುವ ಇನ್ಸ್ಪೆಕ್ಟರ ಧ್ವನಿಯು,….ಏಕಗ್ರೀವರಾಗಿ ಹತ್ತು–ಇಪ್ಪತ್ತು ಜನರು, "ಆಗೇ ಅಣ್ಣೀ ಬುದ್ಧೀ…ಪಟಾಳುದ್ದಾ, ಎಂತಾ ಕೆಸರ್ನಾಗೆ ಸಿಕ್ಕೊಂಡಿದ್ರೂನೂವೆ…ಮುಣಗಿ ಎಳಕೊಂಬಿಡ್ತೀವಿ. ಎಣಾನ……ನಿಮ್ಮ ಪಾದಕ್ಕೆ !……ನಡೀರಿ ಬುದ್ದೀ" ಎಂಬ ಕೋಲಾಹಲವೂ ಕೇಳಿಸುತ್ತಾ. ಥರದೆಯು ಬೀಳುವುದು.]

ದೃಶ್ಯ ೩

ಸ್ಥಾನ : ರಾಮಪುರದ ಪರಿಪ್ರಾಂತ್ಯ ಇನಾಮತಿ ಕಾಡುಹಾದಿ.

ಕಾಲ : ನಾಯಕನ ಆತ್ಮಹತ್ಯದ ಅನಂತರ ಆರನೆಯ ನಿಶಿ.

[ಪೌರವರಿಬ್ಬರು ರಾಮಪುರತಃ ನಡೆಯುತ್ತಿರುವರು. ಮುಂದಾತನು ತಾನು ಹೆಗಲಮೇಲೆ ಹೊತ್ತಿರುವ ದೊಡ್ಡ ಗಂಟಿನ ಘನತೆಯನ್ನೂ ಗಮನಿಸದೆ. ಅದರ್ಶನೀಯವಾದ ಅಪಾಯಗಳಿಗೆ

ಅಂಜಿ, ಅತ್ತಿತ್ತ ದೃಷ್ಟಿಯನ್ನಿಟ್ಟು, ಬೆದರುತ್ತಾ, ಅವಸರದಿಂದ ಮುಂದುವರಿಯುವನು. ಹಿಂದಾತನು, ಪ್ರಭಾಕರನನ್ನು ಹೊಗಳುತ್ತಾ ಪೂರ್ಣಚಂದ್ರನಿಂದ ಹೊಳೆಯುವ ಪ್ರಕೃತಿ ಭಾಗ್ಯವನ್ನು ಮೆಚ್ಚಿ ಯಥಾಸೌಕರ್ಯಂ ಅನುಭವಿಸುತ್ತಾ ಬಸವನ ಹುಳುವಿನಂತೆ ಹರಿಯುವನು.]

ಹಿಂದಾತ : ಕೆರೇನ್ ನ್ನೋಡ್ರೀ...... ಇಷ್ಟಕ್ಕೂ, ನಮ್ಮ ಕೆರೆ ಈಗ ಹ್ಯಾಗಿಧೆ ! ? ಬೆಳ್ಳಂಬೆಳಕಿನಲ್ಲಿ ನೋಡಿದಾಗಲೆಲ್ಲಾ....ನಮ್ಮೂರ ಕೆರೆ......ನಮ್ಮೂರಕೆರೆ, ಬರೀ ಕೆರೆ...ಈಗ ನೋಡ್ರೀ...ಕ್ಷೀರಸಾಗರರೀ...ಉಕ್ತಧೆ...ಕಾಣ್ರೀ !.........ಒಂದೇ ಹಾಲು ! ಚಂದ್ರನ ಜೋರೇ ಜೋರು ಅಂದ್ರೆ !

(ಹಾಡುತ್ತಾ ; ರಾಗ ;–ತೋಡಿ)

"ಅಮಾಯ........ಮ...ವೃತ......ನಿ...ಧಾ...ನಂ"......ಅಮೃತ ವೃಷ್ಟೀರೀ........ ಅಲ್ಲಿ ನೋಡಿ ! (ಕೆರೆಯ ಕೊನೆಯಲ್ಲಿನ ಚಿಕ್ಕ ಗುಡಿಯ ಮುಂದಿನ ತೋಟವನ್ನು ಸೂಚಿಸಿ)...... ಆ ಬಳ್ಳಿಗಳನ್ನೋಡ್ರೀ......ಗಾಳಿಗಾಡ್ತಾ......ಆಡ್ತಾ ಇರೋದು.........ಎಲ್ಲೋ ಕೇಳಿದ್ದಾಗೆ... (ಚಿಟಿಕೆ ಹಾಕುತ್ತಾ).........(ಹಾಡುತ್ತಾ) "ಪಳೀಪರೀ"...... .. ಹ್ಯಾಗ್ರೀ ಅದೂ...ಹೂಂ !! ಊಂ, "ರಾರಾಜಪಳೀ...ಪರಿ ಸ್ತ್ರೀಈೀ", ಮುಂದಕ್ಕೆ ಮಲ್ಲಿಗೇನೋ ಏನೋ......ಅಂತೂ ಬಳ್ಳಿ!... ತದ್ರೂಪ್ಪ !......ನೋಡ್ರೀ !...ನಿಲ್ಲ್ರೀ !!

ಮುಂದಾತ : ಯಾರ್ರೀ ?...ಯಾವ ಹೆಂಗಸ್ರೀ ?. ಎಲ್ಲ್ರೀ ! ?

ಹಿಂದಾತ : ಅಲ್ಲಿ ನೋಡ್ರೀ ಗುಡೀ ಮುಂದೇ...ಮಲ್ಲಿಗೆ ಗುಲಾಬಿ ಬಳ್ಳಿಗ್ಳೂ ಗಾಳೀಗೆ ಹಾರಾಡ್ತಾ ಸೀರ್ಕಸೆ ತಲೆ ಚಾಚ್ತಿರೋದೂ...ಇಬ್ಬರು ಹೆಂಗಸ್ರು ಹಾಗೇ...........(ಚಿಟಿಕೆ ಹಾಕಿಕೊಂಡು ಹಾಡ್ತಾ) "ಸ್ತ್ರೀ ರೂಪದೀ...ಈ"...ಓ ! ಓ !! ಓ !!! ಓ !!!! (ಎಂದು ನಕ್ಕು) ನನ್ನ ಏನೋಪ್ಪಾ......ಹುಚ್ಚೂಂತ ಬೇಕಾದ್ರೂ ಅಂದುಕೊಳ್ಳೀ ! ನನ್ನ ಕಣ್ಣಿಗೇನೋ, ಮಲ್ಲಿಗೆ ಗುಲಾಬಿ ಬಳ್ಳಿಗಳ ವೇಷಾ ಧರಿಸ್ಕೊಂಡು ಯಾರೋ ಇಬ್ಬರು ಸ್ತ್ರೀಯರು ಹೊರಟ್ಹಾಗಿದೆ... ಯಾರಿಬ್ಬರೇನೂ...ಸ್ವರ್ಗದಲ್ಲಿ ಇದ್ದೂ ಇದ್ದೂ, ಪಾಲ್ಮಾರ್ಕೆಪಟ್ಟು, ಇಹಲೋಕದ ಇಂಥಾ ಚಂದ್ರಿಕೆ ಪ್ರಭಾವದಲ್ಲಿ...ನಮ್ಮ ಕೆರೆ ಈರಾತ್ರಿ......ಕಾವ್ಯದಲ್ಲಿ ಬರುತ್ತಲ್ಲಾ......"ಪಾಲ್ಗಡಲೋಳ್ ಪೊಂಗಿಪೊಂಗಿ ಪೊಳೆಯುವ"ದ್ನ ನೋಡಿ, ಭೂಮಿಗಿಳ್ದು ಬಂದು, ಮನುಷ್ಯರ ಮೈಮೇಲೆ ದೇವರು ಬರೋಹಾಗೆ...ಮಲ್ಲಿಗೆ ಗುಲಾಬಿ, ಬಳ್ಳಿಗಳ ಮೇಲೆ ಬಂದು, ಕ್ಷೀರಾಭಿಷೇಕಕ್ಕೆ ಳೀತಿರೋ......... (ಅಮರ ರಾಗದಲ್ಲಿ ಹಾಡುತ್ತಾ) "ಮೇನಕೇ ಮಲ್ಲಿಗೇನ ಹ್ಯಾಗೋ ಘೃತಾಚೀ ಗುಲಾಬೀ ತಥಾ", ಇತಿ ನನ್ನಮತಃ !...ಇರಲಿ ! ನಂದೂ ಒಂದು ವರಸೆ ! ...ಇವತ್ರಾತ್ರೆ ! ಬನ್ನ್ರೀ ! ಅನುಭವಿಸ್ರೀ !...ಪ್ರಕೃತೀನಾ ! ಚಂದ್ರಿಕೇಂದ್ರೆ ಇದು ! ... .(ನಿಷಣ್ಣಿಸಿ ಹಾಡುತ್ತಾ ರಾಗ—ಕೇದಾರಗೌಳ)..."ಮಲ್ಲಿಕಾಸುಮಲತೆಯ ಜಾಲವ ಚೆಲ್ಲಿಸೆಳೆವಳು ಪ್ರಕೃತಿಯೂ !" ॥... ಬಳ್ಳೀ ಬಲೀನ ಬೀಸಿ ಸೆಳೀತಿಧಾಳ್ರೀ ! ಪ್ರಕೃತಿ ! ಬನ್ನ್ರೀ !......ಇಹದಲ್ಲಿ ಇದಕ್ಕಿಂತ ಇನ್ನೇನ್ರೀ ? ದಮ್ಮಯ್ಯಾ ಬನ್ನ್ರೀ ! ನೋಡ್ರೀ !.........ತ್ಸು ! ತ್ಸು !! ತ್ಸು !!!.........ಏನು ಹೇಳಿದ್ರೂ ನೂವೇ......ಪ್ರಕೃತಿ......ಪ್ರಕೃತಿ ನೇರೀ ! ಪ್ರಾಣೀ........ .. ಅನುಭವಿಸಿ ಆನಂದಪಡೋಕೆ ಪ್ರಾಪ್ತಿಇರಬೇಕ್ರೀ ! ಆ ಮಲ್ಲಿಗೆ ಗುಲಾಬೀ ಬಳ್ಳಿಗ್ಳೂ ಪ್ರಾಣಬಿಡ್ತಿವೇರಿ........ಪಾಪ ! ನೀರ್ನ ಮುಟ್ಟೋಕೆ...ಗಾಳೀ ಸಹಾಯಾನ ಕೋರ್ತಾ.... !

ಮುಂದಾತ : (ಏಕಾಂಗಿಯಾಗಿ ಮುಂದುವರಿಯಲು ಬೆದರುತ್ತಲೂ,................ ನಡುಪಥದಲ್ಲಿ ನಿಷಣ್ಣಿಸಿ, ನಾಲ್ಕು ದಿಕ್ಕಿಗೂ ಕೈಬೀಸುತ್ತಾ, ನಗುತ್ತಾ, ಮಿಠಾಯಿ ಅಂಗಡಿಯನ್ನು ಹೊಕ್ಕ ಹುಡುಗನಂತೆ ಹಲ್ಲು ಕಿರಿಯುತ್ತಾ, ಪರಿಸ್ಥಿತಿ ಮಗ್ನನಾದ, ಸಹಪಥಿಕನೆಡೆಗೆ ಬಂದು)........ ಬನ್ನ್ರೀ ಇದು ! ಹುಚ್ಚು !....... ಹಂಚಿ ಮಾತೋದ್ರೂ ಮತ್ತೇ. ಮಣ್ಣು ಹಾದೀಮೇಲೆ ಕೂತು, ಕೆರೇ ಏರಿಯ ಕಟ್ಟೇಮೇಲೆ ಗುಡೀ ಮುಂದೆ ನೇತಾಡ್ತಿರೋ ಬಳ್ಳಿಗ್ಳಾಯ್ತು ಇದು

ಮಲ್ಲಿಗೆ. ಇದು ಗುಲಾಬಿ ಅಂಬೋದ್ನ ಇಲ್ಲಿಂದಲೇ ನಿಷ್ಕರ್ಷಿಸೋ ನಿಮ್ಮ ಪೂರಣ್ಯಕ್ಕೆ ಇಲ್ಲಿರೀ...

ಹಿಂದಾತ : ದೃಷ್ಟಿ ಅಲ್ಲಾ ಕಾಣ್ರೀ ! (ಮುಂದಾತನ ಬಗ್ಗಿದ ತಲೆಯನ್ನು ಬಿಗಿಯಿದು ಸೂಚಿಸಿದ ಕೆರೆಯ ಕೊನೆಗೆ ತಿರುಗಿಸಿ, ಅತ್ತಿತ್ತ ಡೋಲಾಯಿಸುತ್ತಾ) ಘ್ರಾಣ ! ಘ್ರಾಣ ! ಘ್ರಾಣಿಸಿ ಗಮನಿಸ್ರೀ ! ಘಾಟ್ನ...ಅದು ಮಲ್ಲಿಗೇ. ಇದು ಗುಲಾಬೀ ! .... (ಅಮರರಾಗದಲ್ಲಿ) "ಮಲ್ಲಿಕಾಗುಲಾಬೀ ಜೈವ" ನಿಜವೇ ?...... ದೃಷ್ಟಿ ಅಲ್ಲಾ ಕಾಣ್ರೀ......ಘ್ರಾಣ !...ಕವಿ ಹೇಳಿದ ಗಂಧವಹ !...ಘ್ರಾಣ ! ಕೂತುಕೊಂಡು ಕೇಳ್ರೀ ! (ಹಾಡುತ್ತಾ : ರಾಗ : ತೋಡಿ) ಅದೆಂಥಾ "ಲ...ತಾ...ಗಂಧ...ವ...ಹೇ......ನ......ಚುಂ......ಬಿ......ತಾ !"ಂತ ಕವಿ ಹೇಳಿದ್ದಾಗೆ. ಗಂಧವಹ ಕಾಣ್ಣ್ರೀ !......ಕಣ್ಣಿಗೆ ಕಾಣದ್ದನ್ನ ಎತ್ಕೊಂಬಂದು ಮೂಗಿಗೆ ತೂರಿಸಿ...ತುಂಬಿ ಚುಂಬಿಸ್ತಿಧೆ ಕಾಣ್ರೀ ! ಗಂಧವಹ ! (ತಪ್ಪಿಸಿಕೊಳ್ಳಲು ಮುಂದಾತನು ಜಗ್ಗುತ್ತಿರಲು) ಇಪ್ರೀ ! ಮೂರು ಫರ್ಲಾಂಗೂ ಇಲ್ಲ ಊರು...ಇದ್ಯಾಕ್ರೀ ಅವಸ್ರ ?

ಮುಂದಾತ : ಅವಸರವಲ್ಲ !...ಭೀತಿ !...ಇಷ್ಟು ಹೊತ್ತಿನಲ್ಲಿ ಇಲ್ಲಿ ಹಾಸ್ಕೋಗೋದ್ರ ಭೀತಿ......ಪ್ರಾಣಭೀತಿ......ಚೋರಭೀತಿ......ಅಲ್ಲ. (ಕಣ್ಣುಗಳಿಂದ ಕನಿಕರವನ್ನು ಕಾರಿಸಿ ಪಥಿಕನನ್ನು ಮನ್ನಿಸಿ)—ಓಹೋ ! ಮರ್ತೆ ; ನೀವು ಈ ವಾರವೆಲ್ಲ ಊರಲ್ಲೇ ಇರ್ಲಿಲ್ಲಾ...ಅಯ್ಯೋ ಪಾಪ !...ನಿಮಿಗೆಲ್ಲಿ ಗೊತ್ತು ?—ಪ್ರೇತಭೀತಿ ! ಸ್ವಾಮಿ. ಪ್ರೇತಭೀತಿ !!

ಹಿಂದಾತ : ("ಪ್ರೇತ ಭೀತಿ" ಎಂಬ ಪದವನ್ನು ಕೇಳುತ್ತಲೇ, ಕಿರುಚುತ್ತಾ) ಏನೂ ! ? ಪ್ರೇತ !!! ಇಲ್ಲಿ ! ಯಾರ್ದು ? !!!

ಮುಂದಾತ : ನಮ್ಮ ಊರಿನ ನರಸಿಂಹಯ್ಯನ್ದು.......ಸತ್ತಮೇಲೆ ಹಗ್ಲೂ ರಾತ್ರಿ ಇಲ್ಲೇ ಹಾರಾಡ್ತಿರೋ ಅವ್ನ ಪ್ರೇತದ ಭೀತಿ.......ಅದರ ಜೊತೇಲಿ ಲಾಗಾಯ್ತಿನಿಂದ ಇಲ್ಲಿದ್ದ ಚೋರಭೀತಿ ....(ಹಿಂದಾತನು, ಮೂರ್ಧನಿಯಲ್ಲಿನ ಮೂಟೆಯು ಜಾರಿ, ಅದರೊಂದಿಗೆ ಮಟ್ಟಸವಾಗಲು, ಮುಂದಾತನು ಸಪ್ರಯಾಣೀಕನನ್ನು ಸಂತೈಸುತ್ತಾ) ಹೆದರ್ಬೇಡ್ರಿ. ಛಟ್ರಿ. ನಾನಿಧೀನಿ !

ಹಿಂದಾತ : ಇಧೀರಾ ! ? (ಎರಡು ಕೈಗಳಿಂದಲೂ ಇಕ್ಕಳದಂತೆ ಮುಂದಾತನ ಗ್ರೀವವನ್ನು ಬಿಗಿದು ತಗ್ಗಿಸಿ, ಕುಕ್ಕರಿಸಿಸಿ, ಹಿಡಿತವನ್ನು ಬಿಡದೆ ಫಾಲಪಟ್ಟವನ್ನು ಆತನ ವಿಶಾಲ ವಕ್ಷಸ್ಥಳದ ಮೇಲೆ ಪ್ರತಿಷ್ಠಿಸಿ......ಹೊರಳಿಸುತ್ತಾ......ಗದ್ಗದ ಚೀತ್ಕಾರದಿಂದ) ಏನು ! ?......ನಾನೂ ಇಧೇನೆಯೇ ! ?

ಮುಂದಾತ : (ಹಿಸುಕಿ ಹಿಡಿದ ಶ್ವಾಸನಾಳದಿಂದ ಶ್ರಮಿಸಿ ಉಸಿರುತ್ತಾ) ಇಲ್ಲ ಏನ್ರೀ ? ...ಬಿಡ್ರೀ......ಬೆದರಬೇಡ್ರೀ !...ನಾನು ಇಧೇನೇ !

ಹಿಂದಾತ : ನರಸಿಂಹಯ್ಯ ಸತ್ತನೇ ? ನಿಜವಾಗಿ ಸತ್ತನೇ ! ಆಶ್ಚರ್ಯ !! ಕಲಿಯುಗದಲ್ಲೇ. ಕಡುಪಾಪಿಗ್ಳು ದೀರ್ಘಾಯುಗಳೂ ಅಂತಿದ್ದೆ...ಹಾಗಾದ್ರೆ ಧರ್ಮ ಈಗ್ಲೂ ಇಧೇ ! ಇಹಲೋಕದಲ್ಲೀ ! ? "ಬದುಕಿರೋಕೆ ಯೋಗ್ಯತೆ ಇಲ್ಲಾ ಭೂತಳದಲ್ಲಿ"ಂತ ಯಮ. ದೂತನ್ನ ಕಳ್ಸಿ. ಇವ್ನ ಪಾತಾಳಕ್ಕೆ ಎಳ್ದು. ಅಲ್ಲಿ ಅಜಮಾಯಿಷೀಮಾಡಿ. ಅಲ್ಲಿಗೂ "ಲಾಯಕ್ಕಲ್ಲಾಂತ"ವಾಪಸ್ ಅಟ್ಟಿತ್ತನೂವೆ. ಮೂರು ಲೋಕಕ್ಕೂ ಟಿಕೆಟ್ ಇಲ್ಲದ ಇವನಾತ್ಮ. ರೇಗಿ. ಹಳೇ ಸೇಡುಗ್ಳೂ ಜ್ಞಾಪಕಕ್ಕೆ ಬಂದು, ಇಲ್ಲಿಲ್ಲೇ ಹಾರಾಡಾ ಹೆದರಸ್ತಿಧಾನೋ ? ಪಾಪಿ !!......ಹೆದರಿಸಲೀ ! (ಮುಂದಾತನ ಮೆಡೆಯ ಮೇಲಿನ ಭದ್ರ ಹಿಡಿತವನ್ನು ಮತ್ತೆ ಬಿಗಿದು) ಆದ್ರೆ ಯಾರನ್ನ ಹೆದರ್ಸಿದ್ರೂ......ನನ್ನ ಹೆದರ್ಸೋಹಾಗಿಲ್ಲಾ....ಅವನ ಹಳೇ ಸಾಲಗಾರ ನಾನು......ನನ್ನಾ......ಹೆದರ್ಸೋಹಾಗಿಲ್ಲ......... ಈಗ ನಿಲ್ಲಲಿ ನನ್ನ ಎದ್ರಿಗೆ ಅವನ ಪ್ರೇತ.........ಕೇಳಿಬಿಡ್ತೇನೆ ....ನನ್ನ ಹತ್ರ ಎರವಲು ತಗೊಂಡ ಮೊಳಕಾಲ್ಮೂರು ವಸ್ತ್ರ—ಸರಿಗೆ ಅಂಚೂಂದ್ರೆ....ಮೂವತ್ತಾರು ತೊಲಾ !........ ಖುದ್ದಾಗಿ ನಿಂತು ನೇಯಿಸ್ದ, ನಮ್ಮ ಮಾವ !...ಅವನೇ ಪಕ್ಕದಲ್ಲಿ ನಿಂತು ಬಣ್ಣ ಹಾಕಿಸಿದ್ದೂ !

ದೀಪಾವಳೀಗೆ !!.........ನನ್ನ ಎಂಟನೇ ದೀಪಾವಳೀಗೆ !!!! ಎಲ್ಲಾದ್ರೂ ಕೇಳಿದ್ಧೀರಾ!!!!! ...ಇವನು ಒಂದು ದಿನಕ್ಕೇಂತ ಗೆಂಜಿ ಇಸ್ಕೊಂಡ......"ಇವನೇ"ನೂ ? (ಕೈಬೀಸುತ್ತಾ)... ಇದು........ಈ ಪ್ರೇತ ! "ಇವನಾ"ಗಿದ್ದಾಗ !...ಅಲ್ಲೇ ಆಗ ಎರಡೂವರೆ ರೂಪಾಯಿ ನಗ್ದು, ಸಾಲ..... ಅವರಪ್ಪನ ಶ್ರಾದ್ಧಕ್ಕೇಂತ ಸುಲ್ಕೊಂಡದ್ದು......ಸುಳ್ಳು ಹೇಳಿ......ಅವರಪ್ಪ ಸತ್ತದ್ದು ಸುಳ್ಳಲ್ಲ !......ಶ್ರಾದ್ಧ ಸುಳ್ಳಲ್ಲಾ !..."ಮಾಡ್ತೇನೇ" ಅಂದದ್ದು ಸುಳ್ಳು !..."ಪ್ರೇತಾ" ಅಂದ್ರೆ .....ಪಿತೃದ್ರೂನೂವೆ ನಾವೂ..."ಸಾಲಗಾರರೂ" ಅಂದ್ರೆ......ಕನ್ನಿಪಾತ..... ಆತನಿಗೆ ! ......ಇದ್ರೂ ಶುಭಾ ಅನ್ನಿ !...ವಟ್ಟಲ್ಲಿ ಸಮಾಜಕ್ಕೂ ಸರ್ವರಿಗೂ ಶುಭಾ ಅನ್ನಿ !!....ಅಲ್ದೆ. ಇವನ ಕಾಟಾವಯೋಲಾರ್ದೆ, ಎರಡು ಮಕ್ಕಳನ್ನು ಕಟ್ಕೊಂಡು ಕಣ್ಣುಕಣ್ಣು ಬಿಡ್ತಿದ್ದ ಈತ್ನ ಕುಟುಂಬಕ್ಕೂ. ಶುಭಾ.. ...ಅನ್ನಿ !!......ಏಳ್ರೀ...ಬೆದರ್ಬೇಡ್ರೀ......ನಾನಿದ್ಧೇನೆ...(ಮುಂದಾತನನ್ನು ಓಡಿದು ಎದ್ದುಸುತ್ತಾ) ನಾನು ನಿಮ್ಮನ್ನು ಭದ್ರವಾಗಿ ಓಡಿದುಕೊಂಡಿರೋವರ್ಗೂ ನಿಮಗೇನೂ ಹಾನಿ ಇಲ್ಲ ! ..... ನಿಮ್ಮ ಗಂಟು ನಿಮ್ಮ ತಲೇಲಿ......ಬರೀ ಕೈಯಿ ನಿಮ್ಮ ಕೈಯಿ...ಎತ್ತಿಕೊಳ್ರೀ ನನ್ನ ಗಂಟನ್ನೂ......ಭದ್ರವಾಗಿ ನಿಮ್ಮನ್ನ ಓಡಕೊಂಡು ಮನೇಸೇರ್ತೀನೆ......ನಡೀರಿ......ನೆಟ್ಟಗಿದೆ ಹಾದಿ......ಅತ್ತಿತ್ತ ನೋಡಬೇಡಿ......ನಾನೂ ನೋಡ್ತೋದಿಲ್ಲ—ಕಾಲುಹಾಕಿ ನೆಟ್ಟಗೆ—ಬರ್ಲಿ ! .... ಬದುಕಿದ್ದಾಗ ನನ್ನ ಬಟ್ಟೇನೂ ರೂಪಾಯನ್ನೂ ಸುಲ್ಕೊಂಡ ಈ......ಭೂತ...... ಬರ್ಲಿ ನೋಡಿಯೇ ಬಿಡ್ತೇನೆ............ನಡೀರಿ !! [ಪಥಿಕರು ವಾಮತಃ ನಿಷ್ಕ್ರಮಿಸುವರು.]

[ವನಪಥದ ದಕ್ಷಿಣಾಂತ ವೃಕ್ಷದ ಕೊಂಡೆಯಲ್ಲಿ ಕುಳಿತು, ಇದೆಲ್ಲವನ್ನೂ ಆಕರ್ಷಿಸಿ ಕ್ರುದ್ಧನಾದ ನಾಯಕನು, ಪಥಿಕರು ಅದೃಶ್ಯರಾಗುತ್ತಲೇ ಅವತರಿಸುವನು.]

ನಾಯಕ : (ಮುಷ್ಟಿಗಳನ್ನು ಬಿಗಿದು ಪಥಿಕರು ಪೋದ ದಿಕ್ಕಿಗೆ ತಿರುಗಿಸಿ ಚಲಿಸುತ್ತಾ) ಶುಭಾನೇ ? ನಿಮ್ಮ ಹಾಳೂರ್ಗೆ ?!.........ನನ್ನ ಸಾವು ?! .... ಸುಖಿಸಿ .... ಶುಭವಾಗಿ ಸುಖಿಸಿ (ಹಲ್ಲುಗಳನ್ನು ಬಿಗಿದು ಕಣ್ಣುಗುಡ್ಡೆಗಳನ್ನು ಹೊರತಳ್ಳಿ) ನನ್ನ ಸೇಡು ತೀರಿಸಿಕೊಳ್ಳೋಕೆ......ನಾನ್ಯಾಕೆ?......ನನ್ನ ಪ್ರೇತವ್ಯಾಕೇ ? (ಮುಷ್ಟಿಗಳನ್ನು ಸಡಲಿಸಿ ಬಾಹುಗಳನ್ನು ನೀಡಿ) ನಿಮ್ಮ ಮಧ್ಯದಲ್ಲೇ ಇಧಾನೆ, ನನ್ನ Agentಉ! death assurance agentಊ... ನಮ್ಮ ಊರ್ನೇ ನುಂಗಿ ಜೀರ್ಣಿಸಿಕೊಂಡು ಕೊಬ್ಬೋ ಗುಂಡೋದರ......ಗುಂಡ್ಗೆ ಕರಗಿದ ಊರನೋರು. ಗಂಡನಿಲ್ಲದ ಹೆಂಗಸಿಗೆ ಕೊಟ್ಟ ದುಡ್ಡಲ್ಲಿ at least ಹದಿನಾರು per cent ಸೇಕ್ಡಾ ಸುಲ್ಕೊಳ್ಳೋ....Dam Rogue of the villageಊ, ಅಲ್ದೆ plus ಪಟ್ಟಣಾ ಪಟ್ಟಣಾನ್ನೇ ಫಲಾಹಾರಮಾಡೋ ಅವನ ಪುತ್ರೀನೂ......ಅಲ್ಲ, ಪತ್ನೀ......same thingoo, ಇಧಾರೆ! (ಉನ್ಮಾದನಾಗಿ ನಸುನಗುತ್ತಾ) ನನ್ನ ಸೇಡು ತೀರಿಸೋಕೆ. ನಾನಿಲ್ಲಿ ಹಾರಾಡ್ತಿರೋದು ಬಂದ ದಾರಿಹೋಕರ್ನ ಬೆದರಿಸೋಕಲ್ಲಾ....ನಾನು ಸತ್ತ ಈ ಆರು ದಿನಾನೂ. ಬಂದೋರ್ನ... ಬೆದರಿಸಿ ಬಿಟ್ಟೆ. ಅವರು ಬಿಟ್ಟು ಬಿಟ್ಟು ಹೋದ ಕುಕ್ಕೇನೋ ಗಂಟೋ ಬಂಡಿಗಳೋ ಇವುಗಳಲ್ಲಿನ ಹಣ್ಣು ಹಂಪಲು ಹಾರ್ಸಿ ಹುಟ್ಟಿಸಿದ 'ಚೋರ ಭೀತೀ' ಪಾಪಕ್ಕೆ ನನ್ನ ಹಸಿವು ಹೋಗೀಯೇ... ಹೊತ್ತು. ಜಾರಿಸಿಕ್ಕೋನಿಗೆ ಕಳ್ಳತನ ಯಾಕೇಂತ. ಬದುಕಿದ್ದಾಗ ಜೀವಿಸ್ತಿದ್ದ ನಾನಲ್ಲ ಚೋರ! (ನಡುಪಥದಲ್ಲಿ ನಿಷಣ್ಣನಾಗಿ) ನನಗೇನು ಕಟ್ಟಿಕೊಂಡು ? ಇವ್ರ ಭೀತಿಗಳ್ನ!........ಇವ್ರ ಸಾಲಗ್ಳ್ನ! ...ಸಾಲ! ?...(ಭ್ರುಕುಟಿ ರಚಿತನಾಗಿ) ಹೌದೇ!........ಏನಾಯ್ತೂ! ?....ಪ್ರಕೃತೀಗೆ ಬೆಟ್ಟೆ ಬಿದ್ದು ಬದುಕೊಂಡ ಆ ಪ್ರಾಣೀ ವೊಳಕಾಲ್ಮುರೂ ?....... ಭಟ್ಟನ ತಾರೀಫ್ಮಾಡಿ ತಂದದ್ದು ಜ್ಞಾಪ್ಕ ......ಮಗಾ ಹುಟ್ಟಿದ ಹಬ್ಬಕ್ಕೆ: ಆಯುಷ್ಯ ಹೋಮಕ್ಕೆ ನಾನು ಸುತ್ಕೊಂಡಿದ್ದು ಜ್ಞಾಪ್ಕ. ಆಮೇಲೆ ಅದು ಅಕ್ಷತೇಗೆ ಮಗೂಗೆ ಹೊದ್ದಿಸಿದ್ದು. ಮರುವರ್ಷ ಕೂಸ್ಗೆ ಎರಡು ಮಗ್ಗಲು ಹಾಸಿಗೆ ಮಾಡ್ಸಿತ್ತು. next yearಉ ಇವುಗಳಲ್ಲೊಂದು ಮಗ್ಗಲು ಹಾಸ್ಗೇಲಿ ಇವಳಿಗೊಂದ್ರವ್ಕೆ,......ನನಗೆ ನಾಲಕ್ಕು ಕರ್ಚೀಫ್ಗ......ಜ್ಞಾಪ್ಕ ಬರುತ್ತೆ, ನಶ್ಯದ್ದು!....ಸತ್ತಾಗಿನಿಂದ ನಶ್ಯವಿಲ್ದೆ ಮೂಗೆಲ್ಲ ಒಂದೇ ಒಲೆ!...ಎಲ್ಲಿಹೋಯ್ತೋ, ಇನ್ನೊಂದು ಮಗ್ಗಲು ಹಾಸ್ಗೆ? ! (ಕೂದಲನ್ನು ಕೆದರಿ ಯೋಚಿಸಿ

ತಲೆದೂಗಿ) ಒಳ್ಳೇ ಸರಕು! ಅವನು ಹೇಳಿದ್ದು ದಿಟ...ಸರಿಗೆ ಅಂಚು, ಅದ್ರೆ "ಬಟ್ಟೆ [illegible] ಬಣ್ಣ ಹೋಗೋದಿಲ್ಲಾ"ಂತ; ಸ್ಕೂಲು ರೀಡರಿನಲ್ಲಿ ಬರೋ [illegible] "faithful until death" ಆಗಿತ್ತು ಕೊನೇ kerchiefoo! ......ನನ್ನ [illegible] decoction proofಉ ರಂಗೂ.. ಪಾಪ! can understand....[illegible]...can understand!...... ಊ! ಆದ್ರೆ ಯಾರು ಏನುಮಾಡೋಹಾಗಿದೆ. ಮನುಷ್ಯರೇ mortaloo ......ನರಸಿಂಹಯ್ಯನೇ ನಾಸ್ತಿ ಅಂತೆ......ಇನ್ನು ಮೊಳಕಾಲುಮುರುಗ್ನು ?!!!... ...ನಾನೇ ಹೋದ್ನಂತೆ!......ಇನ್ನು ಯಾರು ಹೋದರೆ ತಾನೇ ಏನು ?........ನಾನು ಹೋದದ್ದು ನನಗಲ್ದೆ ಏಕ್ಕೊರಿಗ್ಯಾರಿಗೂ ನಷ್ಟವಿಲ್ಲಾಂತ ಕಾಣುತ್ತೆ!......[illegible]!...ಮಾವ [illegible]? ಪಾಪ!......ಎಂಟನೇ ದೀಪಾವಳೀ ಅಂತೆ! ಮಾವಾ ಅಂದ್ರೆ. ಅವ್ನು ಮಾವ!.... [illegible] ಯೋಗ್ಯತೆ ಅರಿತೋನು ಅವು ! ಖುದ್ದಾಗಿ ನಿಂತು ನೇಯಿಸಿ. ಮಗನ್ನ ನಿಲ್ಲಿ [illegible] ಮೊಳಕಾಲುಮುರುರೂನ, ಮಗಳ ಗಂಡನಿಗೆ ಎಂಟನೇ ದೀಪಾವಳೀಲಿ ಸರಿಗೇ [illegible] ಹೊದ್ಸಿದ ಮಹನೀಯ ಮಾವನಲ್ಲದೇ......ನನ್ನ ಹಾಳುಮಾವ ಮಾವನಲ್ಲ!......ನಾನು ಪತ್ರ ಕಿರಾತಕೀನ ಕುತ್ತಿಗೇಗೆ ಕಟ್ಟಿ. ಸಂಸಾರಾಂಬೋ ಈ ಕೆರೆ ನೀರಿನಲ್ಲಿ ಮುಳುಗ್ಸಿ......[illegible] ಸಾವಿರಾನ safeನಲ್ಲಿ ಇಟ್ಟುಕೊಂಡು son-in-lawಗೆ ಸೊನ್ನೇಸುತ್ತಿ. ....[illegible] ಈ ಸ್ಥಿತೀಗೆ ತಂದಿಟ್ಟಿಧಾನಲ್ಲಾ!.... ಆಳಿಯನ್ನ!......ನಾನೇನ್ ನಗೋದೋ [illegible] ...... ಒಂದೂ ತೋಚೋದಿಲ್ಲಾ......ಈ ನನ್ನ ಸ್ಥಿತೀಲಿ!...ನನಗೆ ಬರೋ ಕೋಪದಲ್ಲಿ (ಮುಷ್ಟಿಗಳನ್ನು ಬಿಗಿದು ಹಲ್ಲನ್ನು ಕಚ್ಚಿಕೊಂಡು ತಕ್ಷಣವೇ ಮುಷ್ಟಿಗಳನ್ನು ಸಡಿಲಿಸಿ ದವಡೆಯನ್ನು [illegible]) "ತೀರ್ದೋನ ಹೊಟ್ಟೇ ಉರಿ, ತಿರುಗೂ ಹುಟ್ಟಿದಾಗ ಜಾರಿ!" ಅನ್ನಬೇಕಾದ ಹಾಗೆ [illegible] ಜಮದಗ್ನಿ...ಜಠರದಲ್ಲಿ......ಏನು ಹಣೇಬರ್ಹಾನೋ ನಂದು ? (ಹಣೆ ಬಡಿದುಕೊಂಡು) [illegible] ಜಾತಕ ಬರೆದ ಜೋಯಿಸ "ಜನ್ಮಾಂತವೂ ಹೊಟ್ಟೇಪಾಡಿಗೆ ಹೆದರಿಕೆ ಇಲ್ಲಾ"ಂದ......ಅಲ್ಲದೆ. ಆತನೆ ಕೈನೂ ನೋಡಿ "ಧನರೇಖೆ ಧಂಡಿಯಾಗಿಧೇ"ಂದ......(ದಕ್ಷಿಣ ಹಸ್ತವನ್ನು [illegible] ಈಕ್ಷಿಸಿ) ಇದೇನ್ಕಪ್ಪಾ ?!......ಮರತೆ!......ದಾರಿಹೋಕರು ಮುಖತೀನ [illegible] ಹಾಗೆ. ಹಾಸ್ಹೋದ ಬಂಡಿಗ್ಳ ಕೀಲೆಣ್ಣೆನೆಲ್ಲಾ. ಮುಖಕ್ಕೆ ಬಳಕೊಂಡದ್ದು......ಮರತೇ[illegible]!...... ಹೌದೂ. ಹೀಗೆ ನಾನು ಹಾರಾಡ್ತಾ......ಹಸಿವಿನ ಗಲಾಟೇಲಿ [illegible]. [illegible] ಪ್ರೇತ–ಭೂತ ಭೀತೀನ ಪ್ರೇರೇಪಿಸಿ. ಬೆದರಿದೋರು ಬಿಟ್ಟುಹೋದ [illegible] ಗಳಿಂದ ಹೊಟ್ಟೆ ತುಂಬಿಕೊಳ್ಳೋ ಸಂಭ್ರಮದಲ್ಲೀ. ನನ್ನ [illegible]ಸಾವಿರವೂ. [illegible] Commission ಎರಡುಸಾವಿರವೂ ವಟ್ಟು ಮೂವತ್ತೆರಡುಸಾವಿರವೂ. ಜಾತಾ [illegible] ಹತ್ತುಸಾವಿರ. ಇವಳ ಕೈ ಸೇರಿಧೆಯೋ ? ಇಲ್ಲವೋ ?......ಇಲ್ಲಾ ! ಸೇರಿ. ನನ್ನ [illegible]. ನನ್ನ ಮಕ್ಕಳನ್ನೂ ಅನಾಥರನ್ನಾಗಿ ಎತ್ಕೊಂಡು ಹೋಗಿ. ಅಪ್ಪನ ಮನೇಲಿ ಅವ್ವತುಕೊಂಡು [illegible] ಇಲ್ಲವೋ ಇಲ್ಲೀ!? ಇದನ್ನು ತನಿಖೆಮಾಡಿ ಇತ್ಯರ್ಥಮಾಡ್ಕೊಳ್ಳೋದಲ್ವೆ ಕರ್ತವ್ಯ ? [illegible]!!!! ಮಕ್ಕಳೂ ಅಂದ್ರೆ ಪ್ರಾಣಬಿಡ್ತಿದ್ಲು ಅವಳು...ಅದೇ ಮಕ್ಕಳ ತಂದೆ ನಾನೂ ಅಂಯೋ [illegible] ದಲ್ಲಿ. ನನ್ನ ಹೆಣಾನ ನೋಡೋವರೀಗೂ ಇದೇ ಊರಿನಲ್ಲಿ ಇರೋಪಕ್ಷಕ್ಕೆ. [illegible] ಮಾಮೂಲಾಗಿ ಇಷ್ಟು ಹೊತ್ತಿಗೆ ನಮ್ಮ ಮನೇಲಿ, ಅನ್ನ ಹುಳಿಸೋ. ಇಲ್ಲ. [illegible] ಮಜ್ಜಿಗೇನೋ. ವ್ಯರ್ಥಪಡಿಸ್ತೆಯೂ. ನನ್ನಿಂದ ಬಂದ ಹತ್ತುಸಾವಿರಾನ [illegible] ವಿಧಾನಾನ ಅರಿಯದ ಹೆಂಗಸಿಗೆ ಬುದ್ಧಿ ಕಲಿಸಿ ಬೋಧಿಸೋ ಭಾರಾನ್ನೂ [illegible] ಹೊರಿಸಿರೋವಾಗ. ಗಂಡುಸಾದ ನನ್ನ duty......ಇಲ್ಲಲ್ಲ......! [illegible]! ಮಕ್ಕಳೊಂದು ಕಡೆ! ತಾಳೀಕಟ್ಟಿದ ಗಂಡನ ಹೆಣಾ ಕೆರೇ ನೀರಿನಲ್ಲೀ. [illegible] ನನ್ನ ಕೈಹಿಡಿದ ಆ ಪ್ರಾಣಿ ಇಧಾಳಲ್ಲಾ... ಅಲ್ಲಿ ನನ್ನ duty......ಇಲ್ಲಲ್ಲ!...... [illegible] ಸೇರಿಕೊಬೇಕು...ಮುನ್ಸಂಜೆಯೊಳು ಬರೋಕೆ ಮುಂಚೆ! [ವಾ ಮ [illegible]]

ದೃಶ್ಯ ೪

ಕಾಲ : ರಂಗತೃತೀಯದ ನಿಶಿಯ ಅಂತ್ಯಪಾದ.

ಸ್ಥಾನ : ನರಸಿಂಹಯ್ಯನ ಮನೆಯ ಮುಂಭಾಗ.

[ಬೀದಿಯ ಬಾಗಿಲು ಮುಚ್ಚಿರುವುದು. ಕಿಟಕಿಯ ಗಾಜಿನ ಮೂಲಕ ಮನೆಯ ಒಳಭಾಗದಲ್ಲೆಲ್ಲೋ ಉರಿಯುವ ಹಣತೆಯ ಮಿಣುಕು ಕಂಡುಬರುವುದು. ಮನೆಯ ನಾಮಪಕ್ಕದ ಮೈದಾನದ ಮುಂಭಾಗದಲ್ಲಿ ರಸ್ತೆಯ ಅಂಚಿನಲ್ಲಿ ನೆಟ್ಟ ಮರಗಾಲೆರಡಕ್ಕೆ ಬಿಗಿದಿರುವ ಹಲಗೆಗೆ ಬಿಳಿಯ ಬಣ್ಣದ ಮೇಲೆ, "Site for the Narasimhayya memorial widows and orphans home" ಎಂದು ಇಂಗ್ಲಿಷಿನಲ್ಲಿಯೂ, "ದಿವಂಗತ ನರಸಿಂಹಯ್ಯಶರ್ಮ ಸ್ಮಾರಕ ವಿತಂತು ಶಿಶು ಸಂರಕ್ಷಣ ಸದನವನ್ನು ಸ್ಥಾಪಿಸುವ ಜಮೀನು" ಎಂದು ಕನ್ನಡದಲ್ಲಿಯೂ. ಬರೆದ ಕರಿಯ ಶಾಯಿಯ ಬರೆಹದ ಮೇಲೆ ಹಿಮಾಂಶುವು ಬೆಳಗುತ್ತಿರುವನು.]

[ನಾಯಕನು ಮಂದಗತಿಯಿಂದ, ಮರಗಳ ಮರೆಯಿಂದ ಮರೆಗೆ ಲಂಘಿಸುತ್ತಾ. ಶ್ರೀರಾಮನನ್ನು ಸೀತಾ ಉಟಜದಿಂದ ಆಕರ್ಷಿಸಿದ ಸ್ವರ್ಣ ಮೃಗದಂತೆ, ಬೆನ್ನು ಬಗ್ಗಿ, ತಲೆಯ ತಗ್ಗಿ, ಪಾದ ಹಸ್ತಗಳೆರಡನ್ನೂ ಉಪಯೋಗಿಸುತ್ತಾ ಊರುದ್ದಕ್ಕೂ ಮನೆಯ ಛಾಯೆಯಿಂದ ಮನೆಯ ಛಾಯೆಗೆ ಲಂಘಿಸಿ ನೋಟೀಸ್ ಬೋರ್ಡನ್ನು ಗಮನಿಸಿ ಸವಿಸ್ತಾರಿಸಿ ಓದುವನು.]

ನಾಯಕ : (ಓದಿ ಮುಗಿಸಿ) ಓಹ್ಹೋ ! ಹೊ ! completeಊ, arrangementಉಗ್ಳೂ !!!...ಭರತಖಂಡದಲ್ಲೆಲ್ಲಾ best business man ಯಾರೂಂದ್ರೆ........... ನಮ್ಮೂರು ಶ್ಯಾನುಭೋಗ .... ಬೃಹಸ್ಪತಿ! ಹಾಗಾದ್ರೆ Cashedಊ......Chequeಊ!! ಅಲ್ಲ್ದೆ ಏನು ಮತ್ತೆ !...ಮಾಘಮಾಸ.........ಪುಗಳ ಮದ್ವೆ..........ಅಶ್ವತ್ಥ ಬೇರೇ ಕೂತಿಧಾನೆ ಕಾಲೇಜ್ಗೆ ! ? ..... ಆದ್ರೂ ...... ಅನ್ಯಾಯ ಅಂದ್ರೆ ! ..... ಕವಿತಾಪನ್ನೂ ಹೋಗಲಿ........ ಆ ಕಡುಪಾಪೀಗೆ......ಹ್ಯಾಗೂ, ನನ್ನ ಹಾಗೇ ಮಕ್ಕಳೂ ಮರಿಯೋನು !!...ನನ್ನ ಮೂವತ್ತು ಸಾವಿರಾನೂ ಹೋಗಲಿ ಹಾಳಾಗಿ...ಹ್ಯಾಗಿದ್ರೂ......ಮನೆ ತಪ್ಪಿದೋರಿಗೂ, ಮಕ್ಕಳಿಗೂ ಹೋಗೋದು......(ದಕ್ಷಿಣ ಬಾಹುವನ್ನು ಬೋರ್ಡಿನ ಕಡೆ ಚಾಚುತ್ತಾ)...ಅದಲ್ಲ !...ಗಂಡ್ಸು, ಹೆಂಡ್ತೀ ಮಕ್ಕಳ್ನ ಕಟ್ಟಿಕೊಂಡು, ಅವಳಿಂದ ಒದಗೋ ಸುಖಾನ ಮಟ್ಟಿಗೆ ಅನುಭವಿಸೋ ಆವೇಶ ಪಟ್ಟಿ..."ತಾನು ಸತ್ತರೇ ಅವ್ಳ ಗತೀ ಏನೂ...ತಾನು ಹುಟ್ಟಿಸೋ ಮಕ್ಕಳ ಗತೀ ಏನು ?" ಅಂಬೋ ಜವಾಬ್ದಾರೀನೂ ಮರ್ತು ಮದ್ವೇನೂ ಮಾಡಿಕೊಂಡು. ತಾನು ಬಿಟ್ಟು ಹೋಗೋ ಹೆಂಡತೀಗೂ, ತಾನು ಅವಳಲ್ಲಿ ಅನುಭವಿಸಿದ ಭೋಗದ ಉಪಭೋಗ ಪದಾರ್ಥಗಳಾದ ಮುಂದೆ ಮುಂದೆ ಮಕ್ಕಳಿಗೂ—ನಾನಿಟ್ಟು ಹೋದ......ಅಲ್ಲ......ನಾನು ಹೋದ ಮೇಲೆ ಇಪ್ಪತ್ತು–ಹತ್ತು ಸಾವಿರದ ಹಾಗೆ–ದುಡ್ಡನ್ನೇನೂ ಇಡದೆ......ಅವನು ಬಿಟ್ಟು ಹೋದ......ಈ ಬೋರ್ಡಿನ ಮೇಲೆ ಬರೆದಿರೋ ವಿತಂತು ಶಿಶುಗಳ ಸಂರಕ್ಷಣೇ ಖರ್ಚನ್ನು ಸಮಾಜದ ಮೇಲೆ—ಸಮಾಜಾಂದರೆ ಏನೂ— ದೇವ್ರು ಧನಾನೂ ಕೊಟ್ಟು, ಧರ್ಮ ಮಾಡೋಕೆ ಹೃದ್ಯಾನೂ ಕೊಟ್ಟು ಇರೋ. ನಮ್ಮ ಧರ್ಮಾಂಧ್ಯೋರೂ, ಶೆಟ್ರು, ಸಾಹೇಬ್ರು, ಇಂಥಾ ಮೂರಾರು ಧನಿಕರ ಹೆಗಲಮೇಲೆ ಹೇರಿಸಿ ಹೊರಟುಬಿಟ್ಟು, ಸಾಯೋದು. ಅನ್ಯಾಯಾಂದ್ರೆ ! ಗಂಡಸ್ತನವಲ್ಲಾಂದ್ರೆ ಅದು ! (ಬೋರ್ಡನ್ನು ಬಿಟ್ಟು ನಡುರಸ್ತೆಗೆ ಬಂದು ನಾಲ್ಕು ದಿಕ್ಕಿಗೂ, ಪಂಚಭೂತಗಳಲ್ಲದೆ, ಗಗನವಾಸಿಗಳಾದ ದೇವತೇತ್ಯಾದಿಗಳನ್ನು ಸಾಕ್ಷಿಯಾಗಿ ಕರೆಯುವಂತೆ, ಬಾಹುಗಳನ್ನು ಬಿರುಸಾಗಿ ಬೀಸುತ್ತಾ) Orphans ಅಂತೆ !......ಅರ್ಥ ಬಿಡಿಗಾಸೂ ಇಲ್ದೆ ಅಪ್ಪ ಬಿಟ್ಹೋದಶನೀ ಮಕ್ಕಳಿಗೆ. ನನ್ನ ಮೂವತ್ತು ಸಾವಿರ ಖರ್ಚುಮಾಡಿ, ಕಟ್ಟಿದ ಕಟ್ಟೆ ಅವರ ಹೊಟ್ಟೇಗೆ ಕೂಳು ಹೊಯ್ಯೋದಂತೆ !....ನನ್ನ ಕಾಸಲ್ಲಿ !... ಯಾಕೋ ಕಾಣೆ !...(ರೌದ್ರದಿಂದ)...ಕಿಲ್ಲಿನಾಲ್ಲೀ!.........ಕೇರೀಕೇರಿ ಕೊನೇಕೊನೆಯೂ ಕಾಣ್ದರೆ

ಕೊಂಡು ......ಕೈಗಳನ್ನ ಚಾಚ್ತಾಗಗನಕ್ಕೆ, ಕರ್ಲ್ಲೀ !......ರಾಚಪ್ಪನ್ನೋರು ಗ್ರಾಮಾಫೋನಿನಲ್ಲಿ ......ಮಾರುತೀ !...ಮಾರುತೀ !! ಅಂತ ಹಾಡಿದ ಹಾಡ್ನ...Complete ಆಗಿ ಕರ್ಲ್ಲೀ ! ಈಗ ನನ್ನ ಮಕ್ಕಳ ಸತ್ತ ತಂದೆ ನಾನೇ ಬಂದಿರೋ ಹಾಗೆ, ಈ ತಬ್ಲಿ ಮಕ್ಕಳ ತಂದೆಗ್ಳಿಗೆ...ಕೃಪೆಯು ಏದ್ದರೆ. ಎಲ್ಲಾರ್ರೂನೂ ಬಂದೇಬರ್ತಾರೆ !...ತಾವು ಹುಟ್ಟಿಸ್ದ ಮಕ್ಕಳ ಮುಂದಿನ ಗತೀನ ನೋಡಿ ಕೊಳ್ಳದ ತಂದೆಗಳು...ತಾವೇ ಯಾಕೆ ಹುಟ್ಟಿದರೋ...?. ಅಂಬೋ...ಪ್ರಶ್ನೆ ಬಿಡಿಸೋಕೆ. ಹಸಿವೋ ಹೊಟ್ಟೇನೂ ಮರೆತು, ಕೈಬಿಟ್ಟು ಹೊರಟೇಹೋದ ದುಡ್ಡ್ನ ಹಾಕಿಕೊಂಡು ಹೋದೋರು ಮಾಡೋ ಅನ್ಯಾಯ ಬಿರ್ಚಿಗೆ ಕೋಪಿಸ್ಕೊಂಡು ಕರ್ಲ್ಲಿಫೇನಲ್ಲಾ !......ಈ ಹುಚ್ಚು !?...ಏನು ಚಂದ್ರಿಕೆ ಪ್ರಭಾವವ್ರೋ ?...(ಉನ್ಮಾದನಾಗಿ ನಗುತ್ತಾ) ಹ !...ಹ...!!... ಹ !!!......ಮೋನಕೇ ಮಲ್ಲಿಗೆ ಹಾಗೂ...ಫ್ರತಾಚೀ ಗುಲಾಬೀ ಹಾಗೂ ಮೇಪಾ ಹಾಕ್ಕೊಂಡು ......ಮಲೇರಿಯಾ, ಕಾಲರಾ ತುಂಬಿದ. ರಾಮಪುರದ ಕೆರೇ ನೀರಿನಲ್ಲಿ. ಮುಳುಗಿ ಮೈ ತೊಳ್ಕೊಳ್ಳೋಕೆ, ಮಹೇಂದ್ರ ಪುರದಿಂದ. absurd ಸ್ಮೈಲ್ ಬಂದಿಧಾರೇಂಬೋ ಹುಚ್ಚು ನನ್ನ ಮೊಳಕಾಲ್ಮುರು ಸಾಲಗಾರನಿಗೆ ಹಿಡಿಸಿದ ಇದೇ ಚಂದ್ರ. ನನಗೆ ದಕ್ಕಿರೋ ಹತ್ತು ಸಾವಿರ ರೂಪಾಯಿಗ್ಳೂ, ನನ್ನ ಕಷ್ಟ ಸುಖಿಗಳಿಗೆ ಸಭಾಗಿಯಾದ ನನ್ನ ಅರ್ಧಾಂಗಿಯೂ......ನನ್ನ ಹೆಸರ್ನೂ...ನನ್ನ ಗೋತ್ರಾನ್ನೂ ಮುಂದಕ್ಕೆ ತರೋ ನನ್ನ ಔರಸ ರತ್ನಗ್ಳೂ. ನಾನು ಸತ್ತ ಮೇಲೆ ದಲ್ಲಿ (ಮನೆಯ ಕಡೆ ಕೈಚಾಚಿ) ನನ್ನ ರೂಬುರೂಬೇ ಮುಳುಗಿರೋದು ಮರ್ತು......ಮಿಕ್ಕ ಪಾಪಿಗಳ ಕಷ್ಟಕ್ಕೆ ಗೋಳಾಡೋ ಹುಚ್ಚನ್ನ ಓಡ್ಸೋಕೆ try ಮಾಡೋ ಹಾಗಿಧೆ. But moonಉ ಮರ್ತಿಧಾನೆ one thingoo ; Important thingoo, that is ; ಥಟ್ಟ ಥಟ್ಟನೆ ! ನಾನು......ನರಸಿಂಹಯ್ಯ !! (ತಾತ್ಸಾರದಿಂದ ನಗುತ್ತಾ)............after all ಯಾರು ಈ ಚಂದ್ರ ? !! ಈಗ ತೇಲಿ. ಇನ್ನೊಂದು ಕ್ಷಣದಲ್ಲಿ. ನನ್ಕಣ್ಣುಂದ್ಲೇ ಮುಳ್ಗ್ಗೋ ಮುಣ್ಣ !...earthನ ಹಾಗೆ, 1st form geography ಲಿ ಬರೋ ಬರೀ planetಉ !......ಗ್ರಹ !! that is all !......ನನ್ನ duty ಏನು ?......ನನ್ನ ಗೃಹ ! ನನ್ನ ಗೃಹಿಣಿ !!......ಅಬ್ಬಾ !...ಬಂದ್ಬೇರೇ ಬಿಟ್ಟೆ !...ದೇವೀರೀಗುಮ್ಮಂಜಿ...ತಂಗ್ಳೂ. ಹುಳೀನೂ. ಖಾತ್ರಿ !! luck ಇದ್ರೆ ಮೊಸ್ರು......at least ಮಜ್ಜಿಗ್ಗೆ ! . (ಹೊಟ್ಟೆಯನ್ನು ಹಿಸಿಕಿಕೊಳ್ಳುತ್ತಾ) ಇಷ್ಟೆಲ್ಲಾ ಕೊಟ್ಟ ದೇವ್ರು ಹಾಳ್ಹಸಿವ್ನ ಕೊಡ್ಡಿದ್ರೇನೋ !!..........ಹಿಂದ್ಹೋದದ್ದ ಬಡ್ಕೊಂಡೇನ್ಪ್ರಯೋಜನ್ನ ? ! ಸದ್ಯ ಈ ಜಠರಾಗ್ನೀನ ಅಡಗ್ಸೋದು first thingಉ ...... (ಸ್ವಗೃಹದ ಕಿಟಕಿಯ ಗಾಜಿನ ಮೂಲಕ ಮಿಣುಮಿಣುಕಿಸುವ ಬೆಳಕನ್ನು ಗಮನಿಸಿ) ಇದೇನ್ದೀಪ ! ?...ಇಷ್ಟೊತ್ನಲ್ಲಿ ?...(ನಿಟ್ಟುಸಿರು ಬಿಟ್ಟು) ತಿಗ್ರರ್ಲ ಮೈಗೇನಾದ್ರೂ ! ?...ಪಾಪ !! ನಾನೂ ಇಲ್ಲ...ನಾನ್ಹೇಳಿದ್ರೂ ಬರೆಯದ ದುಡ್ಡ್ನ. ತಾನ್ತಾನೇ ಬರೆಯೋಳಲ್ಲ. ಇವ್ಳ !......ಅಷ್ಟಗ್ಗೆ !......ಮನೇಲೊಂದ್ಯಾಸಿಟ್ಟೇನೂ. ಮಕ್ಕಳ್ನ ಸುಧಾರಿಸ್ಕೊಂಡು. ನೆನ್ನನ್ನೆ ಬಂದೇ ಇರೋ. ಹತ್ತ್ಸಾವ್ರಾನ್ನಾಚ್ಕೊಂಡು. ಅಪ್ಪನ್ಮನೇ ಸೇರ್ದೆ. ಇಲ್ಲೇ ಇರೋ ಇವ್ಳು...ಈನನ್ನ wifeಉ ವೀರಪತ್ನಿ !...no less !! ನನ್ನ ಕೈಹಿಡಿ ದಾಗ್ನಿಂದ. "ಸೋಮಾರಿ" ನರಸಿಂಹಯ್ಯ್ನ ಕೈಹಿಡಿದಾಗ್ನಿಂದ ದುಡ್ದೂ ದುಡ್ದೂ......ಅವಸಿಗ್ಮಕ್ಕಳ್ನೂ ಹೆತ್ತು. ಅವನ್ನತ್ತು ಹತ್ಸಾವರೂಪಾಯಿ ಕೈಗ್ಸಿಕ್ಕಿದ್ರೂನೂವೆ...ಹೆತ್ಮಕ್ಕಳ್ನೂ. ದಕ್ಕಿದ್ದುಡ್ನೂ. ದೋಚ್ಕೊಂಡು. ತೌರ್ಮನೇಗೋಡ್ದೆ. ನಾನ್ಸತ್ತು. ಊರೆಲ್ಲಾ ನನ್ನೈಣಾನ ಹುಡುಕುತ್ತಾ. ನನ್ನೈತಕ್ಕೆ ಜಪಕೊಂಡು ಓಡಾಡ್ತಿರೋ. ಈ ಆರುದಿನಾನೂ ಊರ್ನೋರು ಹಂಗ್ನೋ ಹಂಗ್ನ ನುಂಗ್ತಾಲೂ. ನಾನ್ಬಿಟ್ಹೋದಲ್ಲೇ ಕೊರಗ್ತಾಇರೋ ಇವ್ಳು, ವೀರಪತ್ನಿ ! ನಾನ್ಸತ್ಮೇಲೆ ನನ್ಯೋಗ್ತೆ ಇವ್ಳಿಗೆ ಹ್ಯಾಗ್ಗೊತ್ತಾಗಿಧ್ಯೋ ಹಾಗ್ಯೇ ಅವ್ಳಯೋಗ್ತೇ ನನಗೆ ಈಗ್ಗೊತ್ತಾಯ್ತು !!...ಓಗೇ. ಗಂಡ್ಹೆಂಡ್ರಿಗೆ ಒಬ್ಬೊಬ್ರ ಯೋಗ್ತೆ ಯಾವಾಗ ಗೊತ್ತಾಗುತ್ತೋ. ಆ ಕ್ಷಣಾನೇ...ಜ್ಞಾನೋದಯ ! ವಿಜ್ಞಾನ !!...ಪುಸ್ಕ್ತಬರೆದ್ದಾಗೆ..."ದಾಂಪತ್ಯ ವಿಜ್ಞಾನೋದಯ " ! permanent ಸಂಸಾರ ಸುಖ............ಪಟ್ಟಲ್ಲಿ......ಹೇಳಿದ್ದಾಗೆ...ವೀರಪತ್ನಿ. ನನ್ನ wifeಉ ! ಆದ್ರೆ ನಾನೋ ! ? ಅವ್ಳ ತಿಳ್ಕೊಂಡಿರೋ ವೀರ husband ಅಲ್ಲ !.........ಅವ್ಳ ನನ್ನ............"ವೀರ

husband "ಊಂತ ತಿಳ್ಕೊಂಡಿದ್ರೂನೂವೆ ನನ್ಮನಸ್ಸನಲ್ಲೊತ್ತು ಪನ್ಗೆ : ನಾನು, ನನ್ನ ವೀರ wifeನ ವೀರ husband ಅಲ್ಲಾಂತ...But shall try...future ನಲ್ಲಾದ್ರೂ try ಮಾಡ್ತೇನೆ ! ವೀರ husbandನ positionಗೇನೆ !!...ನಮ್ಮ ಕೂಸಿಗೇನಾಗಿದೆಯೋ ? ಅಲ್ಲಿ, ನಗದು ಪತ್ತುಸಾವ್ರಾನ ಪಕ್ಕ್ದಲ್ಲೇನೆ ಇಟ್ಟುಕೊಂಡು, ಏಕಾಂಗಿಯಾಗಿದ್ದಾಳಲ್ಲಾ ! ತಪ್ಪು !! ಶುದ್ಧ ತಪ್ಪು !!!......must advise (ಹೆಜ್ಜೆ ಮೇಲೆ ಹೆಜ್ಜೆ ಹಾಕುತ್ತಾ......ಶಬ್ದ ಮಾಡದೇ ಕಿಟಿಕಿಯನ್ನು ಸಮೀಪಿಸಿ ಇಣಿಕಿನೋಡಿ) ತೂಗ್ತಿಧಾಳೆ ತೊಟ್ಲನ್ನ !......ಹೂವ್ವು, ಹ್ಯಾಗ್ಗುಂತು ! ? ...ಕೂದ್ಲಿಗೆ?...ಶುಕ್ರವಾರ...ಹೌದು...ಅವ್ಳ ಪದ್ಧತಿ!! ದೇವೀಪೂಜೆ !!! "ಮಹಾತಾಯಿ ಪ್ರಸಾದಾನ ತಿರಸ್ಕರಿಸ್ಬಾರ್ದೂರ್"ಂತ ಮುಡ್ಕೊಂಡಿಧಾಳೆ...can understand !...but ! Butt !!... Butt !!! ನಾನ್ಸತ್ಮೇಲೆ ಕೂದ್ಲ್ಯಾಕೆ? ಇವ್ಳಿಗೆ ! ನಾನಿಲ್ದ ಇವಳ್ನೂ, ಮಕ್ಕಳ್ನೂ ಪತ್ತಾವ್ರಾನ್ನೂ ರಾತೋರಾತ್ ಸಾಗ್ಸಿ, ಎಲ್ಲಾದ್ರೂ......ನಮ್ಮನ್ನ ಗುರ್ತಿಸ್ದ್ಕಡೆ, ಕೂದ್ಲು ತಿಗೂರ್ ಪೆಟ್ಟೋವಗರ್ ಇದ್ದು.........ಮುಂದಿನ ಪ್ರೋಗ್ರಾಂನ arrange ಮಾಡೋಣಾಂತ ನಾನಿದ್ದ್ರೆ !...ನಾನೂ ಸತ್ತು. ಸೀರ್ನಲ್ಲಿ ನನ್ನೆಣಾನೂ ಸಿಕ್ದ್, ಊರೆಲ್ಲಾ ವದ್ದಾಡ್ತಿರೋವಾಗ, ಕಳ್ಳ್ರಗೂ ಪರ್ದೆ, ಪತ್ತುಸಾವ್ರರೂಪಾಯ್ನೂ ಪಕ್ಕ್ದಲ್ಲಿಟ್ಕೊಂಡು...ಹೂವ್ಮುಡ್ಕೊಂಡು...ತೊಟ್ಲು ತೂಗ್ತಿಧಾಳಲ್ಲಾ ! ...ದೀಪಾ ಇಟ್ಕೊಂಡು ! !...ಇದು "ವೀರಪತ್ನಿ"...yes ! ಹೌದು ! ಆದ್ರೆ wiseತನ ಅಲ್ಲ !! must take charge...affairsನ ! (ಬಾಗಿಲನ್ನೂ ಸಮೀಪಿಸಿ ತಟ್ಟಲುದ್ಯುಕ್ತನಾಗಿ) ಆದ್ರೆ ......ಭಟ್ರು ಕಣ್ಣಿಗೆ ಹೂಬಳ್ಳೀನ್ನೇ ಹೆಂಗ್ಸಾಗಿ ತೋರ್ಸಿದ ಚಂದ್ರಿಕೆ, ನನ್ನೇ ಸ್ಪಿರೀನ, ಹ್ಯಾಗ್ಮೋರಿಸುತ್ತ್ಯೋ ಕಾಣೆ ? ಇವ್ಳ ಕಣ್ಣಿಗೆ......therefore ಹೆದ್ರುಸ್ಬಾರ್ದೂರ್...must be careful....bestಉ ಕಿಟಕಿ (ಕಿಟಿಕಿಯನ್ನು ಸಮೀಪಿಸಿ) ಆದ್ರೂನೂವೆ, ಮುಖಕ್ಕೆ ಕೀಲೆಣ್ಣೆ ಬಳ್ಕೊಂಡು, ರಾತ್ರೆ ನಾಲ್ಕ್ರ ಜಾವ್ದಲ್ಲಿ, ಮನೆಬಾಗ್ಲು ತಟ್ಟಿ ತೆಗ್ಸಿ "ಸಾನ್ನಿನ್ನಸತ್ಗಂಡ" ಅಂತಂದ್ರೆ ಎಂಥಾ double ವೀರಪತ್ನಿ ಆದ್ರೂನೂವೆ, shockನಲ್ಲಿ ಕಿರ್ಲಿಬಿಟ್ಟಾಳು !....must be gentle.......... programmeಊ ಜರಗ್ಬೇಕು !!.........ನನ್ನೀಸ್ಥಿತೀನ್ನೋಡಿ ಬೆದ್ರಿ "ಕಿಟಾರ್"ಂತ ಕಿರ್ಲಿ ನೆರ್ಹೊರ್ರ್ಯೋರ್ನ ಎಬ್ಬ್ಸಿ, ಅವ್ರೂ ಬಂದು, ನನ್ನುಗ್ರ್ತಿಸಿದ್ರೋ. ಸತ್ತಾನು ಸಾಯದ್ದು ಹೊರ್ಬಿದ್ದು, ಈ ಊರಿನ ಆ ಶನಿ ಬೋರ್ಡ್ರ್ ಹೇಳೋ ಅನಾಥ ವಿತಂತು ತಬ್ಬಿಲಗಳ ಹೊಟ್ಟೇಪಾಡೂ ಹೋಗಿ. ನನ್ನಾಳು "ಸ್ಮಾರಕ"ವೂ ಬೂದಿಯಾಗಿ, ಶ್ಯಾನ್ಭೋಗ್ನಿಗೆ son-in-law ಮನೇಗ್ಬಂದು sonಊ ಕಾಲೇಜಿಗ್ಹೋಗೋ, ಭಾಗ್ಯಾನೂ ತಪ್ಪಿ, ನನಗಿಟ್ಟಿರೋ ಹತ್ತಾವ್ರವೂ ತುಂಡು !........therefore ಅವ್ಳ......ನನ್ನೋಡೋಕ್ಮುಂಚೆ. ನಾನ್ನಾನೇಂತ ನನ್ನ ಧ್ವನೀಲಿ ತಿಳಿಸಿ, ಅವ್ಳ ಧ್ವನಿ ತಗ್ಗೊಸೋದು best thingಉ. (ಗಾಜನ್ನು ಘರ್ಷಿಸುತ್ತಾ) ಲೇ ! **ಲೇ !! ಲೇ !!! ಲೇ !!!!** ನಾನೇ !

ನಾಯಕಿ : [ತೊಟ್ಟಿಲನ್ನು ತೂಗುತ್ತಿದ್ದು ಕಿಟಿಕಿ ಗಾಜಿನ ಘರ್ಷಣವನ್ನು ಆಕರ್ಷಿಸಿ. ಆದ್ಯ ಬೆಚ್ಚಿಬಿದ್ದು. ಅನಂತರ "ಲೇ !" ಅದರ ನಂತರ '**ಲೇ !!** "**ಲೇ !!!**" ಎಂದು ಕ್ರಮೇಣ ವರ್ಧಿಸುತ್ತಿರುವ ಧ್ವನಿಯನ್ನು ಗುರ್ತಿಸಿ, ನಸುನಕ್ಕು ಎದ್ದು ಯೋಚಿಸುತ್ತಾ, ಕ್ರಮೇಣ ಭೃಕುಟಿ ರಚನೆ ಮಾಡಿಕೊಂಡ ವದನದಲ್ಲಿ ದೀರ್ಘಾಲೋಚನೆಯನ್ನು ಸೂಚಿಸಿ. ನಯನಗಳಿಂದ ಪುಕ್ಕಳನ್ನೂ ತಲೆದಿಂಬಿನೆಡೆ ಇರುವ ಕೈ ಪೆಟ್ಟಿಗೆಯನ್ನೂ ದುರುಗುಟ್ಟಿ ನೋಡಿ, ಕ್ಷಣ ಮಾತ್ರ ಕೈಕೈ ಹಿಸುಕಿ ಅವಸ್ತೆ ಪಟ್ಟು, ಒಂದೆರಡು ನಿಮಿಷದಲ್ಲಿಯೇ, ಪ್ರಕೃತ ಸನ್ನಿವೇಶದ ಅಪಾಯವು ಪರಿಹಾರವಾಗುವ ವಿಧಾನವು ಹೊಳೆದು......ತನ್ನ ಮುಂದಿನ ಕ್ರಮವನ್ನೂ ನಿರ್ಧರಿಸಿ, ಹಾಸ್ಯ ಮುದ್ರೆಯನ್ನೂ ನಮಿಸಿ, ಅಧರೋಷ್ಠಗಳನ್ನು ಬಿಗಿಹಿಡಿದು. ಬೆಳಗುವ ಹಣತೆಯೊಂದಿಗೆ ಕಿಟಿಕಿಗೆ ಬಂದು ಹಾತೆಯನ್ನೂ ಇಳಿಸಿ, ಗಾಜಿನ ಕದವನ್ನೂ ತೆಗೆದು]

ಇದ್ಯಾರ್ರಿಪ್ಹೊತ್ನಲ್ಲಿ ?.........ತಿಗೂರ್ ಪ್ರೋಲೀಸ್ನೋರೆ ?.........ಹೀಗ್ಗಂಟೆ ಗಂಟೇ ಗೂನೂ ಪಹ್ರೆ ಕೊಡೋ ಉಪ್ಕಾರ ಪಪ್ಪ್ದ....ಆದ್ರೆ ನಿದ್ದೆ ಮಾಡೋದ್ಯಾಗೆ ? ನಾವ್ಗ ?...."

[ಎಂದು ಹೊರಗೆ ನೋಡುವಳು]

ನಾಯಕ : ಪೋಲೀಸಲ್ಲಕಣೇ. ನಾನೇ !......ಏನು ? ಗಂಟೆ ಗಂಟೇಗೂ ಏಟೇ ? ..... ಹಾಗಾದ್ರೆ. ಬಂದ್ಬಿಡ್ಬಿಟ್ಟಾರು !......ದೇವ್ರೇಗತಿ ! ಬಾಗಲ್ತೆಗ್ಯೇ ಬೇಗ !. ...ಷ್ಹೂ ! ಮೆಲ್ಲಗ್ಮಾತಾಡೇ !

ನಾಯಕಿ : ಬಾಕ್ಲೊಂದ್ರೇನು ! ?... ....ತೆಗ್ಯೋದೂಂದ್ರೇನು ! ? ....ನೀವ್‌ನೀವಾ ! ಅದ್ಯಾಗ್ಬಿಟ್ರಿ ನೀವು ? !....ಈವಾರ್ತೆಲ್ಲ ನೀವ್ ನೀವಲ್ಲ. ನೀವ್ ನಿಮ್ದೆವ್ವ !...(ನಡುಕವನ್ನು ಕಿಟಿಕಿಯಿಂದ ಹಳಬರುವ ಶೀತವಾತದ ಸಹಾಯದಿಂದ ಸುಲಭವಾಗಿ ನಟಿಸುತ್ತಾ) ಚೆ..ಚೆ..ಚಳ್ರ ..ಕೆ ಯಾಗತ್ತೆ !...ಧ್ವನಿಯೇನೋ ನಿಮ್ದೇ......ಆದ್ರೂ ಮುಖ ನಿಮ್ದಲ್ಲ ...... ಕಪ್ಪು...... ಕಪ್ಪವ್ ಕಪ್ಪು .... ಕೆಂಪ್ಗಿದ್ರಿ–ಕೆಂಪೇನೂ...ಕಪ್ಪಲ್ಲದ್ದಣ್ಣ ! ... ಹೋಗೋಕ್ಮುಂಚೆ ...(ಕೈಗಳನ್ನು ಉನ್ಮತ್ತಳಂತೆ ಬೀಸುತ್ತಾ ಧ್ವನಿಯನ್ನು ತಗ್ಗಿಸಿ) ಹಯ್ಯೋ !...ಹಯ್ಯೋ !!...ದೆವ್ವ !...ದೆವ್ವಾ !!... ಪೋಲೀಸು !...ದೆವ್ವ !...ಪೋಲೀಸು !...ದೆವ್ವ !!

ನಾಯಕ : ದೆವ್ವಾನೇ ನಾನು ? !......ದೆವ್ವ !......ದೆವ್ವ !!......ಪೋಲೀಸು ! ಪೋಲೀಸು !... ಹಯ್ಯೋ !...ದೇವ್ರೇ ಗತಿ !...ಅಲ್ಲ್ಕಣೇ !...ದೇಹಾಲಿಸ್ತಾನೂ ಮಾತ್ರ. ನನ್ನೊಟ್ಟೇಲ್ಪ್ವೇಯೊಜ್ವಾಲೇನ ಆರ್ಸೋಕವ್ಹಾ ದೇವೇರಿ ಬಾಯಿಗ್ಬೀಳೋಕ್ಮುಂಚೆ ಓಡ್ಬಂದ್ದಾನು ನಾನೇ...ಯಥಾ ಪ್ರಕಾರ ನಾನೇ...ದೆವ್ವವಲ್ಲಾ ಕಣೇ...ದೆವ್ವಕ್ಕೆಲ್ಲೀದ ಎಲ್ಲೀದೇ ?...ಹೊಟ್ಟೆ ಎಲ್ಲೀದೇ ? ಇನ್ನೂ, ಹಸ್ದು ತಂಗ್ಯಾಸೆ ಎಲ್ಲೀದೇ ?...ಒಳ್ಳೆ ಹುಚ್ಚೀ ನಿನ್ಗೆ...ದೆವ್ವವಲ್ಲ ! ನೀನ್ನಲ್ಲತ್ತೂರನೂವೆ—ಪುನಹ ನಿನ್ನೆದ್ರಿಗ್ನಿಂತು. ಹಸಿವ್ನಿಂದ ಸಾಯ್ತಿರೋ husbandಊ ಕಣೇ !... ಗಂಡ್ನೇ—ನಿನ್ಗೆ ತಾಳಿ ಕಟ್ಟಿದ...ಶ್ಯಾನ್ಭೋಗ ಹೇಳಿದ್ದಾಗೆ..."ಪರಿಶೋಚನೀಯ ಪ್ರಾಣೀ" ಕಣೇ.... ಪತಿ ! ಬೇಗ್ಬಾಕ್ಲು ತೆಗ್ದು, ನೀವೆಲ್ಲ ಭಕ್ಷಿಸಿ ಬಿಟ್ಟಿರೋ ಬಾಕೀನ ಬಡ್ಸು...ನಾನ್ದೆವ್ವವಲ್ಲ...... ಬೆದರ್ದೆ ಬಾಕಲ್ತೆಗಿ ! . ... ಹೌದೂ ! ಆ ಹತ್ತ್ರೂಪಾಯಿ ಹುಷಾರ್ಹಾನೆ ?...

ನಾಯಕಿ : ನೀವು ದೆವ್ವವಲ್ದಿದ್ರೆ. ಹತ್ತ್ರೂಪಾಯಿ ಎಲ್ಲೀದು ?

ನಾಯಕ : ಎಲ್ಲೀದೇ ?...ಇದ್ಯಾಕ್ಹೀಗೆ ?...ಊರಿನೋರು...ಅಲ್ಲ. ಧರಮಯ್ಯನೋರು ಕೊಟ್ಟ ಚೆಕ್ನ cash ಮಾಡಿದ ನಲವತ್ತೆರಡ್ನಾರು ರೂಪಾಯ್ನಲ್ಲಿ ಅನ್ಯಾಯವಾಗಿ ಹೋದದ್ದಾತಾಬಾಕೀ, ಶ್ಯಾನ್ಭೋಗ ನಿನ್ಕೈಲಿ ಕೊಟ್ಟೇ ಇರ್ಬೇಕಾದ ಹತ್ತ್ರೂಪಾಯ್ರ ಎಲ್ಲಿ ?.... ಇಲ್ಲ್ವೋ ! ? (ರೋಷವನ್ನು ನಟಿಸಿ) ಈಗೀಗ್ಹೋಗಿ ಎಬ್ಬ್ಸಿ ಕೇಳೀಬಿಡ್ತೇನೆ ಧರಮಯ್ಯನೋರ್ನ... "ನನ್ನೆದರ್ಗೆ ಕಣ್ಣು ಹೋದ್ರೂ ಶ್ಯಾನ್ಭೋಗನ್ದೊಂದಾದ್ರೂ ಹೋಗ್ಲಿ !" ಅಂಬೋ principle ನಂದು !....ಭೇಗ್ಬೊಗ್ಳು...ಕೈ ಮುಟ್ಟೇ ಮುಟ್ಟಿಲ್ವೇ ? ಕಾಸು ?...

ನಾಯಕಿ : ಒಳ್ಳೇ ಹುಚ್ಚೊಂದ್ರೆ ನಿಮ್ಗೆ....ಅಲ್ಲ ನಿಮ್ದೆವ್ವಕ್ಕೆ !....ಈಗೊಂದಿ.... ಒಂದೂ ನಿಮ್ದೇವು !...ಇಲ್ಲಾ ! ನೀವ್‌ನಿಮ್ದೆವ್ವ !...ಬೇಗ್ಹೇಳಿ......ಬೀಟ್ ಪೋಲೀಸ್ನೋರು ಬರೋ ಹೊತ್ತಾಯ್ತು......(ನಾಯಕನು ನಡುಗುತ್ತಾ ಸುತ್ತಮುತ್ತಲೂ ನೋಡುವನು) ಈಗ್ಹೋಡಿ. ನೀವ್ ನೀವೇ ಆದ್ರೋ. ನೀವ್ಹೋದ್ಮೇಲಿಂತ ತಿಳ್ಕೊಳ್ಳು ಮೋಸ್ಕೊಂಡ ಊರ್ನೋರು ನನ್ನೂ. ನಮ್ಮಕ್ಕಳ್ನೂ. ನೀವ್ಬಿಟ್ಹೋದ್ಮೇಲಿಂತ ಕನಿಕರ್ಸಿ ಕೊಟ್ಟ ಹತ್ತ್ರೂಪ್ರ. ನಮ್ಮಕ್ಕೆ ಮುಟ್ಟೋ ಹಾಗಿಲ್ಲ...ಇಲ್ಲಾ ! ನೀವು ನಿಮ್ದೆವ್ವವಾದ್ರೋ ಶ್ಯಾನ್ಭೋಗ್ರು ನನ್ಕೈಲಿ ನನ್ನ ಇಟ್ಕೊಳ್ಳಿಗಿರೋ ನಮ್ಮತ್ತಾಪದ ಮೊದಲು ಕಂತು...ಅಲ್ಪಸ್ವಲ್ಪ ಕಂತು. ಖಾತಾ ಬಾಕೀ ರೂಪಾಯಿಗಳ್ಗೆ. ನನ್ನೊಳ್ಳೆ ಇನ್ನೂ ಮೂರ್ತಿಂಗ್ಳಲ್ಲಿ, ನಮ್ಮಪ್ಪಗೂ ಲ...ಫ....ಸ....ಬ...ಹು...ಮಾ....ನ ಸಂಭವಾನ ನೀವ್ನೀವೇ...ನಾನ್ದೆವ್ವವಲ್ಲಾಂತ. ನಡಾತ್ರೇಲಿ ಊರೂರ್ಗೆ ಸಾರಿ ಕೆಡಿಸ್ಕೊಂಡ್ರೇ. ನಮ್ಮೆಲ್ಲ್ಗಿರೋ ಸಾವಿರ್ರೂಪಾಯಿ ಜಾರಿಹೋಗೋ ಜವಾಬ್ದಾರಿ...ನಂದೇ ?...ಇಲ್ಲಾ...ನಿಮ್ದೇ ?.... ಅಲ್ಲಾ......ನಿಮ್ಮೇದೆವ್ವದ್ದೇ ?.......ಭೇಗ್ನಿಷ್ಕರ್ಷಿಸಿ....ಬಂದ್ಬಿಟ್ಟಾರು.......ಬೀಟ್ನೋರು...ಆದ್ರೆ

(ಉಕ್ಕುವ ನಿಟ್ಟುಸಿರನ್ನೂ ಅಡಗಿಸುತ್ತಾ) ನೀವ್ಹೀಗ್ಹುಚ್ಚುಚ್ಚಾಗಿ ದೇವ್ರಿಗ್ಗಿಲ್ಲದ ಹಸ್ವಿಗೆ ಸೋತು... "ನಾಸ್ಟೈಪ್ಪದಪ್ಪಾಂತ ಈ ಊರ್ನಲ್ಲೇ ಕೂತು, ಕುಣದಾಡ್ತಾ ಇದ್ರೋ !...ಹತ್ತಲ್ಲೇದೂ !.... ಸಾವ್ರವೆಲ್ಲೇನೂ ! ?...ರೂಪಾಯೆಲ್ಲೇದು ! ?...ಒಳ್ಳೇ ಹುಚ್ಚ್ಹಾಂದ್ರೆ ನಿಮ್ಗೆ !...ಅಲ್ಲ... ನಿಮ್ಮಿಷ್ಟಕ್ಕೆ !...ನೀವು " ಇದೋ ? " ...ಅಲ್ಲ " ಅದೋ " ? ಅಂಬೋದ್ನ ಇತ್ಯರ್ಥ ಮಾಡ್ಬಿಡಿ ಈಗ್ಲೇ......ದೇವೇರಿ ಯಾಕ್ಬರ್ಲಿಲ್ಲಾ ಇನ್ನೂವೇ ?...ಚಂದ್ರ ಮುಳುಗ್ತಾ...

[ಕಿಟಿಕಿಯನ್ನು ಮುಚ್ಚಲುಪಕ್ರಮಿಸುವಳು]

ನಾಯಕ : ಸ್ವಲ್ಪಿರೇ ! ಹಾಗಾದ್ರೇನು........instalment plan ಓ ಶಾನ್ಹೋಗಂದು ? ಪಿಷ್ಟಿನಾಂದ ?...ಮೂರ್ತಿಂಗ್ಳೆ ?...ಮೂರು long ತಿಂಗ್ಳಗ್ಳೆ ? ! "scoundrellು"…. ಹಾಗಾದ್ರೆ ಬಿಟ್ಬರೋದ್ಯಾಗೆ ? ಅಷ್ಟುವರ್ಗೂ...ನಾನು...ಅಲ್ಲಾ......ನೀನ್ಹೇಳಿದ್ಹಾಗೆ...ನನ್ನದ್ದವ್ವ ......ಹ್ಯಾಗ್ಲಿದ್ದಾನ್ರೂ ಇಟ್ಕೋಬ್ಬೇಕೇ !......ಇಲ್ನೋಡು ! ನಾನ್ಹಾಕ್ಕೊಂಡ್ಬಂದ programmeವಿ ಬೇರೆ ! ಕರೀ...l...o...n...g ಕೂದ್ಲು...curly ಕೂದಲ್ನೆಲ್ಲಾ ಕಳ್ಕೊಂಡು, ಕೆಂಪ್ರ ಬಟ್ಟೇನೂ ಸುತ್ಕೊಂಡು. ತನ್ನಗ್ಗಂಡ ಬಿಟ್ಹೋಗಿದ ಕೂಸುಗಳ್ನ ಲಾಲಿಸ್ತಾ, ಅವುಗಳ ಮುಂದಿನ್ನಗತೀಗೆ ಆ ಹತ್ತಾಸ್ವರರೂಪಾಯಿ...

ನಾಯಕಿ : (ಅನ್ಯಮಾತಾಗಿ) ಸಾಕ್ನಿಲ್ಸೀಂದ್ರೇ !...ಇದೇನಧ್ವಾನ......ಊರೂರೇ ಹುಡುಕ್ತಿರೋ ನಿಮ್ಮೆಣ ಮನೆಗ್ಬಂದ್ಸೇರಿ, ಮುಂದಿನ ಕ್ರಮಾ ಆದ್ಮೇಲೆ, ನೀವ್ಹೇಳೋ ವೇಷ ನನಗ್ಬಂದಾಗ ನೋಡ್ಕೊಳ್ಳೋಣ....ನೀವ್ಹಾಕ್ಕೊಂಡ್ಬಂದಿರೋ ಪ್ರೋ–ಅದೆಂಥಾದ್ದೊ–ಅಂದ್ರುಲ್ಲಾ ಅದ್ನ....ಸಧ್ಯ ನಿಲ್ಲಿಸಿ....ನನ್ನ ಪ್ರೋ.........

ನಾಯಕ : (ಆತುರದಿಂದ) Programmeಊ ಕಣೇ !! ಭೇಗ್ಹೇಳೇ......

ನಾಯಕಿ : ಅದೆಂಥಾದ್ದೋ.–ಅದ್ನಕೇಳ್ತೀರೋ ?......ಇಲ್ಲಾ !...ಕೂಸಿಗ್ಮೈ ಬೆಚ್ಚಗಿದೆ.... ಚಳಿಘಾಳಿ.. ತಂಪು ತಗುಲ್ತೋ ! ?......ಒಳ್ಳೇ ಹುಚ್ಚು ನಾನು !....ದೇವ್ರೊಬ್ಬಂದಿಗೆ ನನಗೇನ್ಮಾತು !...

[ಕಿಟಿಕಿಯನ್ನು ಮುಚ್ಚಲು ಉಪಕ್ರಮಿಸುವಳು]

ನಾಯಕ : ದಮ್ಮಯ್ಯ !......ಸ್ವಲ್ಪಿರೇ, ಕೂಸಿಗೆ ಜ್ವರಾ ಬಂದ್ರೆ ನಿಲ್ಸೋಕೆ ಡಾಕ್ಟರಿಧಾನೇ !...ಸರ್ಕಾರಿ ಸಂಬ್ಳ ತಿನ್ನೋ ಡಾಕ್ಟರಿಧಾನೇ ! ಈಗ ನನ್ ಗತಿ ಹೇಳೇ ! ನೀರ್ನಲ್ ಬಿದ್ ಸತ್ತು, ಆರ್ದಿನ್‌ದಿಂದ್ಲೂ ಇರೋದೊಂದ್ ಚಿಕ್ಕರೇಲಿ ಬಲೆ ಬೀಸ್ತಾ ಹುಡುಕ್ತಿರೋ ಊನ್ನೋರ್ಗೆ. ಸಿಕ್ಕದ ನನ್‌ಹೆಣ. ಮೈಮೇಲೂ. ಹೊಟ್ಟೇಲೂ ಒಂದ್ತೊಟ್ಟು ನೀರೂ ಇಲ್ದೆ ಒಣಗಿ ಬೇಯ್ತಾ ಈ ಕಿಟಿಕಿ ಕೆಳಗೆ ನಾಳೆ ಸಿಕ್‌ಬೇಕೂಂಬೋದೇನೇ...ನಿನ್ ಪಾಳ್ programme ಉ ! ? ಹೇಳೇ ! ಅದ್ನೂ ಕೇಳ್‌ಬಿಟ್ಟು ಮುದುರ್ಕೋತೀನೇ ಮರಣಾವಸ್ಥೇಲಿ ! (ಕಿಟಿಕಿಯ ಅಂಚನ್ನು ಹಿಡಿದುಕೊಂಡು ಗೋಡೆಯ ಮೇಲೆ ಒರಗಿ) ನಿಸ್ಸಾಣಿ ಕಣೇ ! ಹೇಳ್ಬಿಡೇ ನಿನ್ plan ......ಹೇಳಾದ್ಮೇಲೆ. ಕೂಸ್ತನದಲ್ಲಿ ನಿನ್ನ ಕೈಲಿ ಘಾಳಿಜ್ವರಾನೂ ತಪ್ಪಿಸ್ಕೊಂಡು, ದೊಡ್ಡೋನಾಗಿ. ನಿನಗೆ ನಾನೀಗ ಸತ್ತದ್ರಿಂದ ಮುಂದ್ಬರೊ ೧೦.೦೦೦ ರೂಪಾಯ್ನೂ ಬಡ್ಡೀಸಮೇತ ಧ್ವಂಸಮಾಡಿ, ತಿಂಗ್ಳು ತಿಂಗ್ಳೂ ಹೊತ್ತು ಹೆತ್ತೂ, ಎದೆಹಾಲ್ಕೊಟ್ಟು, ಗಂಡನ್ನೂ ಘಾಳಿಪಾಲ್ಮಾಡಿ, ಪ್ರೋಷಿಸಿದ ನಿನ್‌ಮಕ್ಳು. "ಪುತ್ರಪ್ಪೆ ಶತ್ರುನಾಮಾಸಿ" ಅಂಬೋದಕ್ ಸರ್ಯಾಗಿ ನಿನ್ ಮುಖ್ದಿನಲ್ಲಿ.... ನಾನೀಗ ಹಾಕಿ ಹಾಕ್ದ್ನಿ. ಕುಟುಂಬ ಕಬ್ಳಿ ಇಲ್ದೆ ಕಂಗೆಡೋ ಹಾಗೆ ನಿನ್ನೂ ಕಂಗೆಡಿಸ್ಸೇ ಕಂಗೆಡ್ಸೋ, ನನಗೇಂತ್ಲೆತ್ತ ನನ್ ಹಾಳ್ಕೂಸುಗಳ್ನ...ಗಮನ್ಸೋಕೆ. ನಿನ್ನ plan ಏನಾದ್ರೂ ಇದ್ರೆ....ನೀನು ಬೊಗ್ಳಿದ ಆಗ್ ಪೋಲೀಸ್ನೋರು ಬರೋಕ್ಮುಂಚೆ ಬೊಗ್ಳು....... !! ಇಲ್ಲಾ ! ನಾನಾಯ್ತು ! ಪೋಲೀಸಾಯ್ತು !..............ನನ್ನ dead statement ಆಯ್ತು....ಆರ್ದಿನಕ್ ಮುಂಚೆ

ಕೆರೆಕಟ್ಟೆ ಮೇಲೆ ಶಾನ್ಭೋಗ ಊರಿನ್ಮುಖ್ಯಸ್ಥರ್ಗೆ ಬೆದರಿಸ್ದ ದೊಡ್ಡೊಡ್ಡ ಆಸಾಮಿಗ್ಳು ಮಕ್ಳ್ಮಾವೂ ತೀರಿ. ಬೆದರ್ಕೇನೂ ಹೋಗಿ...ಊರು !...ಯಥಾಪ್ರಕಾರ ಊರಾಯ್ತು ನಾನೋ ನನ್ಮಾವ ಕಟಕಿ ಮುಂದೆ. ನನ್ಹೆಂಡ್ತಿ ಪಾಕ್ದಿದ್ದ ಅನ್ನಾ ಸೀರೂ ಇಲ್ದೆ ಸತ್ತು ಶವವಾಯ್ತು...ಶಾನ್ಭೋಗ ನಿನ್ಕೈಲಿ ನೀನ್ಹೇಳಿದ ಮೊದಲು ಕಂತು ಜಾತಾಪಾಕ ಮುಗ್ದುದಾಗ್ಲೂ ತುಂಡು ಆಯ್ತು...ನಾನೂ ಸತ್ತು. ನಿನ್ಕೈಲಿರೋ ಕಂತಿನ್ರೂಪಾಯಿ. ನನ್ಸುಡೋ ಖರ್ಚಾಗ್ಹೋಯ್ತು ! ಧರ್ಮದ ಖರ್ಚು ಇನ್ ನೀನೂ ನಿನ್ ಕೂಸುಗ್ಳುನೂವೆ. ಕಾಸಿಲ್ದೆ ಕಂಗಾಲ್...ಆರು ಸೋಮಾರಿ sons ನೂ ಅಲ್ದೆ. ಅವ್ನ ಹೆಂಡ್ತಿ ಮಕ್ಕಳ್ನ support ಮಾಡ್ತಾ insolvent ಆಗ್ತಿರೋ ನಿಮ್ಮಪ್ಪನ್ಮನೇ ಬಾಕ್ಲಲ್ಲಿ ಭಿಕ್ಷಬೇಡೋ ಭಿಕಾರಿಗ್ಳೂ ಆಯ್ತು !!...ಮಾತಾಡೆ ! ಪೇಕೇ ! ಹಸಿವೇ !!!

[ಕ್ಷುಧಾಗ್ನಿಗೆ ತುತ್ತಾಗಿ ಗೋಡೆಯ ಹಿಡಿತ ಜಾರಿ ಕುಸಿದುಬೀಳುವನು]

ನಾಯಕಿ : (ಕಿಟಕಿಯ ಅಂಚನ್ನು ಅತಿಕ್ರಮಿಸಿ ಬಗ್ಗಿ) ಪಪ್ಪೋ ! ಏಳೀಂದ್ರೇ !... ..... ನೀವು ಊರಿಗೆಲ್ಲಾ ದೆವ್ವವಾಗಿದ್ರೂನೂವೆ........ನನಗ್ನೀಪ್ನೀವೆ....(ನಾಯಕನು ಮುಖವನ್ನು ಎತ್ತುವನು) ಈಗ್ನೋಡಿ, ಐವತ್ತು ಹೋಗ್ತಾ ದಿಕ್ಕಿದ್ದು ಕೈಮುಟ್ಟೋಕೆ...ಶ್ಯಾನ್ಭೋಗ್ರು ಹೇಳಿಧಾರೆ ...ಮೂರ್ತಿಂಗ್ಳಾಗುತ್ತೆ. ಅದುವರ್ಗೂ ನೀವು ನಿಮ್ದೆವ್ವವಾಗಿರೋದೇ ಮೇಲು...ಅದಕ್ಕೆ ನನ್ನ ಪ್ರೋ...ಅದೇನ್ಹೇಳಿದ್ರಿ ?...

ನಾಯಕ : ಪ್ರೋಗ್ರಾಮು ! ಪ್ಲಾನು ! ಕ್ರಮ !..........ನಾನ್ ಬದ್ಮಾಷಿ ! ಲೊಟ್ಟು !...ಲೊಸ್ಕು ! ಬೊಗ್ಳೇ ! ಈಚಿತ್ರಹಿಂಸೆ ಯಾಕೇ ?

ನಾಯಕಿ : ಕೋಪಿಸ್ಕೋಬೇಡಿ......ರಸ್ತೇಲಿ ಕೇಳ್ಬರತ್ತೆ......ಕಿವೀಗೆ......ಬೀಟ್ನೋರೋ ಏನೋ !........ಬೇಗ್ಹೇಳ್ತೇನೆ ಕೇಳಿ !......ನನ್ "ಪ್ಲಾನ್" ಅಂದ್ರಲ್ಲಾ ಅದನ್ನ :......ಈಗ್ಲೀಕ್ ಬಂದ್ರೋ......ನಿಮ್ಮುಸೀ ಮುಖಾನ ನಿಮ್ಮಕ್ಳು ನೋಡಿ ಕಿರ್ಲಿ....ಇನ್ನು ದೇವೇರಿನೂ ಬಂದು......ಗಲಾಟೆ !!......ಹೊರ್ಗೇ ಹೀಗ್ಬಿದ್ಕೊಂಡಿದ್ರೋ...ಇನ್ನೀವು ದೆವ್ವವಲ್ದೆ ..... ನೀವಾಗ್ಯೇ ಇನ್ನೂ ಇರೋದು ಹೊರ್ಬೀಳೋ ಗಲಾಟೆ !......ಇವ್ರ ಜೊತೇಲಿ......ಇನ್ನು ಮೂರೇ ಮೂರು ತಿಂಗ್ಳಲ್ಲಿ ಕೈಗ್ಬರೋ ದುಡ್ಡು ಜಾರೊ ಅಪಾಯ ಬೇರೆ !.......ಪಪ್ಪಾ ?

ನಾಯಕ : (ಪೃಥ್ವೀಪುತ್ರಿಯ ಮೇಲಿನ ಪಕ್ಷಪಾತದಿಂದ. ಪಕ್ಷಪಾತವೇ ಅಲ್ಲದೆ ಪ್ರಾಣ ಪ್ರವಾಸವನ್ನೂ ಅನುವಿಸುತ್ತಿದ್ದ ಗೃಧ್ರೋತ್ತಮನು ಇನಕುಲೋತ್ತಮನಿಗೆ ದಶರಥ ಸ್ಥಿತಿಯ ಗತಿಯನ್ನು ವಿವರಿಸಿದ ಗದ್ಗದ ಧ್ವನಿಯಿಂದ) ಅಲ್ಕಣೇ......ನನ್ನೀಸ್ಥಿತೀಲಿ...ಪ್ರೋಗ್ರಾಮ್ಯೇನು ! ......ಹೇಳೇ !......ಹಸಿವೇ !!

ನಾಯಕಿ : ಈಗ್ಕೇಳಿ......ಈ ಅಪಾಯಗ್ಳೊಂದೂ......ನಮ್ಮಿಬ್ರಿಗೂ ಸೋಕ್ದೇನೂ ......ಮುಂದಕ್ಕೆ ನಾವೆಲ್ಲ ಕೊರ್ತೆಇಲ್ದೆ ಬೇರೆ ಎಲ್ಲಾದ್ರೂ ಬದಿಕ್ಕೊಳ್ಳೋಕೇನೂ......ಇರೋದು ......ವಂದೇಪ್ಲಾನು ! ನನ್ಬುದ್ಧೀಗೆ ತೋಚೋದು......ಆದ್ರೆ ನಾನು......ಹೇಗ್ಲ......

ನಾಯಕ : ಹೆಂಗ್ಸೋ !?......ನೀನು!! ಪ್ರಾಣಬಿಡ್ತಿರೋ ಪತೀನ ಹೀಗೆ ಚಿತ್ರಹಿಂಸೆ ? ! ...ಕ್ಷಮ್ಸು......ನನ್ನ......ಕ್ಷುತ್ತಾಪ !......ಕ್ಷಮ್ಸು !! ನನ್ನ ಕಸವರ್ಕೆ......ಮುಂದಿನ್ನನ್ನ ಗತೀನ......ಬುಗ್ರೀಪಾಗೆ......"ಭಿರ್ರ್ರ್ರ್"ನ್ ತಿರಗ್ತಿರೋ ನನ್ನ ಮುಂದೇಗೆ...ನೀನ್ಹೇಳಿದ ಬೀಟ್ನೋರು ಬರೋಷ್ಟ್ರಲ್ಲಿ ಮುಂದಟ್ಮಾಡ್ಸಿ ಕಳ್ಸು !...ಏನದ್ನಿನ್ನ Planಉ ?

ನಾಯಕಿ : ಪ್ಲಾನೇನು !...ಬಂದುಡ್ಲೂ...ಇನ್ಮುಂದೆ ಮೂರ್ತಿಂಗ್ಳು ಮೇಲೆ ಬರೋ ದುಡ್ಡೂ...ಎಲ್ಲಾ ನಿಮ್ಮದೇ...ಬಂದಿರೋ ಐವತ್ರೂಪಾಯ್ನಲ್ಲಿ ಅರ್ಧಾನ ನೀವೇ ಇಟ್ಕೊಂಡು. ಇನ್ಮೂರ್ತಿಂಗ್ಳಲ್ಲಿ ಬರೋ ನಿಮ್ಮ ದುಡ್ಡು...ನಿಮ್ಮ ಕೈಸೇರೋವರ್ಗೆ...ನನಗೆ ...... ನೀವು....

ಸೀಪಾಪ್ತು... ಮೂರೇ ತಿಂಗ್ಳು . ಈ ಊರ್ನೋರಿಗೆ ಮಾತ್ರ ನೀವ್ ನಿಮ್ಮ ದೆವ್ವವಾಗಿರಲೇ ಬೇಕು !

ನಾಯಕ : ಅರ್ಥವಾಯ್ತು ಲೇ !....ಅರ್ಥವಾಯ್ತು. 'ಹಚಾ'ನ್ನ .... Husbandಗೆ ...... ಗಡೀಪಾರೂನ್ನ ಗಂಡನ್ಗೆ !! ಗುಂಡ್ಗೆ ಬೇಯ್ತಾ ಬಿದ್ದಿರೋ ನಿನ್ನ ಗಂಡನ್ಗೆ ಗಡೀಪಾರೂನ್ನ !! .... ಎಲ್ಲೀಗೆ ? ಹ್ಯಾಗೆ ? ...... ಅದ್ನೂ arrange ಮಾಡೀದೀಯಾ ? ... ಮಾಡೇ ಇರ್ತೀಯಾ ನೀನು !........

ನಾಯಕಿ : ಹೂಂ ! .... ಮಾಡಿದೇನೆ ...... ಕೋಪಿಸ್ಕೋಬೇಡಿ ! ....ಕಾಲ ಹಾಗಿಧೆ !!...... ಇಲ್ಲೇ ಇರಿ ಮರ್ತೆ ಹೇಳೋಕೆ ಮೂರೇಸರ್ತಿ ಬರೋದು........ ....ಬೀಟ್ ಪೋಲೀಸು, ಮೂರುಸರ್ತೀನೂ ಬಂದಾಯ್ತು........ಇನ್ಮೇಂದ್ ಬರೋಹಾಗಿಲ್ಲ ... ಬಿಡಬೇಕು ಇದೋ ಬಂದೆ........ಒಂದೇ ನಿಮ್ಷ ! ಅಷ್ಟೆ....... [ನಿಟ್ಟುಸಿರು ಬಿಡುತ್ತಾ ನಿಷ್ಕ್ರಮಿಸುವಳು.]

[ನಿಷಣ್ಣಸಿದ್ಧ ಪ್ರಹಸನ ನಾಯಕನು, ಅಗ್ನಿಸಾಕ್ಷಿಯಾಗಿ ವರಿಸಿದ ಸಹಧರ್ಮಿಣಿಯು ಸ್ವಗೃಹ ಪ್ರವೇಶವನ್ನು ತಡೆದ ಕೋಪಾಗ್ನಿಯಿಂದ ರೇಕಿತನಾಗಿ ತನುತಾಪವನ್ನು ಮರೆತು, ಕುಳಿತಲ್ಲಿಯೇ ಶಯಿಸಿ, ಕೈಕಾಲುಗಳನ್ನೂ, ಪಿಂಡಹಸ್ತನಾದ ಸ್ವಾಮಿಯನ್ನು ಕಂಡು ಸಂತೋಷಿಸುವ ಶ್ವಾನವು ಅಂಗಾಂಗ ಗಳನ್ನೂ ಪಸರಿಸಿ ಪಿಂಡದಾತನಿಗೆ ಪ್ರದರ್ಶಿಸಿ ಒದರುವಂತೆ ಒದರುತ್ತಾ ಉನ್ಮತ್ತನಾಗಿ ನಗುವನು.]

ನಾಯಕಿ : ಹ್ಹ ! ಹ್ಹ !!........ಹ್ಹಾ !!! ಭಟ್ಟ, ಕೆರೇ ಕಟ್ಟೇಲಿ ಹೊಗಳ್ತಿದ್ದ ಪ್ರಕೃತೀ ಪ್ರಭಾವ, ಆಗ ಮುಂದಟ್ಟಾಗದಿದ್ರೂನೂವೆ........ **ಈಗರ್ಥವಾಯ್ತು !**...ಹಃ ! .... ಹಃ !!............ಹಃ!!! ಇದೇನೋ ? ! ಪ್ರಪಂಚಾಂಬೋದು ? ಹ ! ..... ಹ !! .... ಹ !!! (ಹಾಸ್ಯವು ಥಟ್ಟನೆ ಬೀಭತ್ಸಕ್ಕೆ ನೆಲೆಗೊಡಲು ಈತನೆದ್ದು ನಿಂತು, ಮುಷ್ಟಿಗಳನ್ನೂ ಬಿಗಿದು ರೌದ್ರಮುದ್ರೆಯನ್ನು ತಾಳಿ) ಗಂಡ್ಸಿಗೆ........ತನ್ ಹೆಂಡ್ತಿ....... ತಾನ್‌ತಾನೇ ತನ್ ಜವಾಬ್ದಾರೀ ಮೇಲೆ ಬಾಡ್ಗೇಗ್ತಗೊಂಡ ಮನೇಬಾಕಲ್ನ, ತನ್ ಹೆಂಡ್ತೀನೇ ಬಿಗಿದ್ಕೊಂಡು ಕಿಟಕಿಯಿಂದ, ಕೈ ಹಿಡ್ಯೋಕೆ ಕಲ್ಯಾಣದಲ್ಲಿ ಕೈಕೊಟ್ಟ ಕಾಂತನ್ನ ಆತ್ಮಹತ್ಯಕ್ಕೆ ಅಟ್ಟಿ ಅವ್ಳಿಗೆ ತಾನು ಕಟ್ಟಿದ ತಾಳೀ ಪ್ರಭಾವದಿಂದ ಅವ್ನ ಮುತ್ತೈದೇತನ ದಕ್ಕಿ, ಹೊಟ್ಟೇಗೆ ಹಿಟ್ಟಿಲ್ದೆ ಹಸ್ದ ಭರ್ತನೇ ಭಿಕ್ಷ ಬೇಡ್ತಿರೋ ವಾಗ..."ನಾನ್ಬರೋವರ್ಗೂ ಬಿದ್ದಿರೂ !"ಂತ ಹುಕುಂ ಕೊಟ್ಬ್ಯೋಗೋ ನನ್ನೀ wifeನ ನಾನು (ಪಕ್ಕದ ಜಮೀನಿನ ಮುಂದಿನ ನೋಟೀಸ್ ಬೋರ್ಡನ್ನು ದಕ್ಷಿಣ ಹಸ್ತದಿಂದ ಸೂಚಿಸುತ್ತಾ) ಈ ನನ್ನ ವಿತಂತು orphans ಸ್ಮಾರಕ. ಅಲ್ಲ, ನನ್ನ ಸ್ಮಾರಕ widow ತಬ್ಬಲಿಗ್ಳ ಬೋರ್ಡಿನ ಮುಂದೆ ನಿಂತು........"ವೀರಪತ್ನೀ" ಅಂದ್ನೆಲ್ಲಾ !............ಈ ನನ್ನ wifeನ ! ? .... godವೆ ಗತಿ !! ಇವ್ಳು ನಿಜ್ವಾಗಿ "ವೀರಪತ್ನೀ"ನೇ ?........ ...... (ಭ್ರುಕುಟಿ ವಿರಚಿತನಾಗಿ, ಕ್ಷಣಮಾತ್ರ ಯೋಚಿಸಿ, ರಚನೆಯನ್ನು ಸಡಲಿಸಿ) yes ! .... and ...... no!! "**ವೀರ**"! ....yes !!..."ಪತ್ನೀ" ?....**No!!!**....Not at all !!........ನನ್ನ ! ?....ಗಂಡನ್ನ !! ....ಮನೆಯಿಂದ್ಹೊರಗ್ಹಾಕಿ, ಬಾಕಲ್ಬಿಗ್ದು ...ಕಿಟಕಿಯಿಂದ ಮಾತಾಡ್ನೋ ಈ womanಉ ! ಪತ್ನಿ? ....Not at all ...... ಈಗ ನಾನೇನೂ, am Iವೆ or am I notವೆ ?........ that is the two questions !....I amಊಂತ ನನಗ್ಗೊತ್ತು ! ನನ್ನ ಹೊಟ್ಟೆ ಹಸಿವು ಜ್ಞಾಪಿಸುತ್ತೆ that I am ! wifeಊ ಒಪ್ಪಿದ್ದಾಳೆ ! But !! ಅವ್ಳು ಹೇಳಿದ್ಹಾಗೆ ಹತ್ ಸಾವಿರ್ರೂಪಾಯಿ ಕೈಗೆ ಬರ್ಬೇಕಾದ್ರೋ : ಇನ್‌ಮೂರ್ತಿಂಗ್ಳು—ಊರ್ಗೆಲ್ಲಾ...of course... **I**...**am not !!**........**I must not be !** ..... ಮೂರು monthsಗೆ ನನಗ್ಮಟ್ಟೆ **I am** ....ನಿಕ್ಕೋರ್ಗೆ...... I am not !....... That is the two answers ...But ....ನನ್ನ ಜುಟ್ಟೆಲ್ಲಾ ಇವ್ಳ ಕೈಲೇ ಇರೋದ್ರಿಂದ, must trust her -- stomach's sake! (ನಾಯಕಿಯು ನಿಷ್ಕ್ರಮಿಸಿದಾಗ ಕತ್ತಲೆಯಾದ ಕಿಟಕಿಯು ಮತ್ತೆ ಬೆಳಗುತ್ತಲೂ) ಅಕ್ಕೋ!

....is coming! ....ಬಂದ್ಲು !....ಕೇಳೇಬಿಡೋಣ ! ಅಷ್ಟ last programmeಟ್ನ ನಿಜ್ವಾಗಿ, ಸಾಯೋದಕ್ಕಿಂಚಿ !.......

[ನಾಯಕಿಯು ಹಣತೆಯನ್ನು ಕಿಟಕಿಯ ವಳ ಅಂಚಿನಲ್ಲಿಟ್ಟು, ಬೀದಿ ಬಾಕಿಲನ್ನು ತೆಗೆದು, ತಾನು ದಬ್ಬಿದ ಗಂಟು ಮೆಟ್ಟಿಲಮೇಲೆ ಉರುಳುತ್ತಿರಲು ಬಾಕಿಲನ್ನು ಪುನಃ ಬಿಗಿದು ಕಿಟಕಿಯಿಂದ ಗಂಡನನ್ನು ಗಮನಿಸುತ್ತಿರುವಳು.]

ನಾಯಕ : ಇದೇನಿದು ?...ನನ್ನಾ್ಗೆ ಇನ್ನೊಂದು ದೆವ್ವಾನೇ ?

ನಾಯಕಿ : ದೆವ್ವ ಅಲ್ಲಾಂದ್ರೆ........ಬರೀ ಬಟ್ಟೆ ಗಂಟು.........ನಿಮ್ಮ ಟ್ಟೇ ಗಂಟು ......ನಿಮ್ಮುಂದಿನ ಪ್ರೊ–........ಅಲ್ಲ planಉ.

ನಾಯಕ : ಅಲ್ಕಾಣೇ.......ನನ್ನ immediate planಉ ಹೊಟ್ಟೇ ಹಸಿವ್ನ ತೀರ್ಸೋ ಬಗೆ !......ಬಟ್ಟೇ ಗಂಟ್ನಲ್ಲೆಲ್ಲೇ ಇಧೇ ?

ನಾಯಕಿ : ಹಯ್ಯೋ......ಇದೇಂದ್ರೆ...........tiffin setಉ ! ಒಳಗೆ......ಭರ್ತಿಯಾಗಿ ! ಅನ್ನ, ಹುಳಿ, ತುಪ್ಪ ಅನ್‌ದಲ್ಲೇ ಕಲ್ಸಿದೆ, ಪಲ್ಯ, ಸಂಡಿಗೆ, ಉಪ್ಪಿನ್ಕಾಯಿ, ಮೊಸರು.

ನಾಯಕ : (ಯುವ್ವರಾಜ್ಯ ಪಟ್ಟವನ್ನು ತ್ಯಜಿಸಿ ಅರಣ್ಯಾನೀಕಗಳನ್ನು ಅತಿಕ್ರಮಿಸಿ ಆಹಾರ ನಿದ್ರಾಭಯಾದಿ ಚಿತ್ತವೃತ್ತಿಗಳನ್ನು ನಿರೋಧಿಸಿ ತಪಿಸಿ, ಪ್ರತ್ಯಕ್ಷನಾದ ಪರಮಾತ್ಮನನ್ನು ಪ್ರಜ್ಞಾನದಿಂದ ಈಕ್ಷಿಸಿ ಪರಮಾನಂದವನ್ನು ಹೊಂದಿ, ಸ್ವಾಗತವನ್ನು ಸಾರಲು ಬಾಹುಯುಗ್ಮವನ್ನು ಚಾಚಿದ ಧೃವನಂತೆ, ತಾನೂ ಕಿಟಕಿಯ ಕದಗಳಿಗೆ ಕೈಗಳನ್ನು ಚಾಚುತ್ತಾ) "ಅನ್ನದಾತಾರ್ ಸುಖೀಭವ"!... ...'ಭವತೀಭಿಕ್ಷಾಂ' ಕೊಟ್ಮೆಲ್ಲ ಅಷ್ಟೆಸಾಕು ! [ಗಂಟಿನ ಕಡೆ ಹೊರಡುವನು...]

ನಾಯಕಿ : ದಮ್ಮಯ್ಯಾಂದ್ರೆ, ಇಲ್ಲೇ ಗಂಟ್‌ಬಿಚ್ಕೊಂಡು ಬೆಳ್ಬಿಂಗ್ಳೂಟಕ್ಕೆ ಕೂತ್ಬಿಟ್ರೆ ನೀವು ......ಇನ್ ಮುಂದಿನ ಗತೀ ?......ಇಷ್ಟೊತ್ತೂ ತಡ್ದ ಹಸಿವ್ನ ಇನ್‌ಸ್ವಲ್‌ಪ್ಹೊತ್ತು ತಡ್ಕೊಂಡು ನಾನ್ಹೇಳೋದ್ನ ಕೇಳಿ, ಗಂಟ್ತಗೊಂಡು ಹೋಗಿ, ಊರಿಂದಾಚ್ಗೆ, ಊಟ ಮಾಡ್ತಾ, ಮುಂದಿನ್ಕಾರ್ಯಮಾನ......ನಾನ್ಹೇಳೋ ಮುಂದಿನ್ಕಾರ್ಯಮಾನ ಆಲೋಚಿಸೋದು ಉತ್ತಮ್ವೋ...... ಇಲ್ಲಾ......ಇಲ್ಲೆ ಊರ್ನೋರ್ಮುಂದೆ, 'ನೀವೂ'ಂತ ತಿಳಿದ ಊರ್ನೋರು "ನಿಮ್‌ದೆವ್ವ" ಊಟಮಾಡೋದ್ ನೋಡಿ !,......ನೀವೇ ಹೇಳಿ......

ನಾಯಕ : (sulkily) ಅರ್ಥ್ವಾಯ್ತೇ !...ವನಭೋಜ್ನ ನನ್ಗೆ !...best spotಊ ಗೊತ್ತು ನನ್ಗೆ......ನನ್ನ ಪ್ರಾಣಪ್ರವಾಸವಾಗಿ ಪ್ರೇತ ಪ್ರವೇಶವಾದ ಪ್ರದೇಶ...ಭಟ್ಟ ಬಿದರ್ಬಿದ್ದ ಕೆರೆಕಟ್ಟೆ ! waterಊ ಇದೆ ಪಕ್‌ದಲ್ಲೆ...ಆಮೇಲೆ ?

ನಾಯಕಿ : ಆಮೇಲೇನೂಂದ್ರೆ...ಮೂರೇ ತಿಂಗ್ಳು.

ನಾಯಕ : ಎಲ್ಲಿ ? ಕೆರೆ ಕಟ್ಟೇಲೇ ?

ನಾಯಕಿ : ಅಲ್ಲಾ, ನಮ್ಮ ಚಿಕ್ಕಪ್ಪನ ಮನೇಲಿ....ನಾನೂಂದ್ರೆ ಪ್ರಾಣ ನಮ್ ಚಿಕ್ಕಪ್ಪನ್ಗೆ.

ನಾಯಕ : ಓಹೋ ! ನಿನ್ನ ನನ್ಕುತ್ಗೆಗ್ಕಟ್ಟಿ ಈ ಸ್ಥಿತೀಗ್ತಂದಿಟ್ಟಿರೋ ಕಡ್ವಾಪಿ ನನ್ ಮಾವನ್ಗೆ ತಮ್ಮ ಒಬ್ನಿಧಾನ್ಯೋ ?......ಅವ್ನಿಗೆ ನೀನ್ ಪ್ರಾಣ್ವೋ ?...ಇನ್ನವನ್ಮನೇಲಿ ನಾನಿರೊದೋ ?...ಎಲ್ಲಿ ?

ನಾಯಕಿ : ಕೋಪಿಸ್ಕೋಬೇಡಿ, ನಮ್ ಚಿಕಪ್ಪ ಔರಂಗಾಬಾದ್ ಹತ್ರ...ಗಿರಣಿ ಮಾಲೀಕ ....ನಮ್ಮಪ್ಪನೀಗೂ ಆತನ್ಗೂ ಆಗ್ದು.

ನಾಯಕ : Good ! very good ! ನಿಮ್ಮಪ್ಪಾಂದ್ರೆ ಆಗ್ದೆ ! good !, must be very good man !!

ನಾಯಕಿ : ಹ್ಪ್ಹ್ಯ ! ಹೇಳೋದ್ಕೇಳೀಂದ್ರೆ..........ಅವು......ನೀವ್ಹೇಳಿದ್ಹಾಗೆ very good ಆಗಿರೋಹೊತ್ಗೆ ಹೇಳ್ತೀರೋದು.

ನಾಯಕ : ಹೇಳು ! ಹೇಳು !!....ಹಾಫ್ moonಉ ಮುಳುಗ್ತಿಥೆ...ಭೇಗ್ಹೇಳು.

ನಾಯಕಿ : ಹೇಳ್ತೀನೆ...ನೀವು...ಕೀ..ಳ್ತೀ...ರೋ....ಏನೋ...

ನಾಯಕ : (ರಭಸದಿಂದ) ಕೇಳ್ಬೇ ಏನೇ........ನಿನ್ನೆದಸರ್ೊೀ ಸ್ಥಿತೀನೇನೆ ನಂದು ? ಇದೇ ಹೋದ್ಶುಕ್ರವಾರ ನಿನ್ನ ಈ ನನ್ಮನೆಯಿಂದ ಹೊರಗ್ಹಾಕೋ ಹಕ್ಕಿದ್ದ ನಾನು ಇದೇ ಮನೆ ಮುಂದೆ ಹೊರಬಿದ್ದಿರೋವಾಗ ನಿನ್ಹೇಳಿದ್ದೇ ವೇದ ಕಣೇ—ನಾಲಕ್ವೇದ, ಹದ್ನೆಂಟ್ ಪುರಾಣ, ತೊಂಭತ್ತಾರ್ ತತ್........ಒಟ್ನಲ್ಲಿ ನಾನು ಸತ್ತ ಸತ್ಯವಾನ........ನನ್ ಪ್ರಾಣ ಯಮನ್ ಕೈಲಲ್ಲ...But... ಆ ಬಟ್ಟೇ ಗಂಟ್ನಲ್ಲಿರೋ tiffin carrierನಲ್ಲಿದೆ....ನಿಮ್ ಚಿಕ್ಕಪ್ಪ ! ? ಅವನ್ಮನೆ ?....ಹ್ಯಾಗ್ಹೋಗೋದು....ಸೇರೋದು......ನಾನು...? ಅಲ್ದೆ ನೀನು, ಮಕ್ಳು+೧೦,೦೦೦ ರೂಪಾಯಿ ? ಇದೆಲ್ಲ......ಬೇಗ್ಹೇಳು ಒಂದೇಮಾತ್ನಲ್ಲಿ....at least ಒಂದೇ speechನಲ್ಲಿ.

ನಾಯಕಿ : ಹೇಳೇಬಿಡ್ತೇನೆ ! ಬೆಳಕ್ಹರೀತಾ ಬಂತು ! ನಮ್ ಚಿಕ್ಕಪ್ನ ಅಡ್ರಸ್ ಗಂಟ್ನಲ್ಲಿರೋ ನಿಮ್ ಕೋಟ್ ಪಾಕೆಟ್ನಲ್ಲಿದೆ......ಇರೋದು ಔರಂಗಾಬಾದು........ಕಾಗ್ದಾನೂ ಬರ್ದಿದೇನೆ.... ಅವ್ರಿಗ್ತಿಳ್ಯೋಹಾಗೆ !....ಮಿಲ್‌ನಲ್ಲಿ ನಿಮಗ್ಕೆಲ್ಸ ಕೊಟ್ಟು, ನೀವು ಮೂರ್ತಿಂಗ್ಳು ಸರ್‍ಯಾಗಿ—ಕೋಪಿಸ್ಕೋಬೇಡಿ—ಸರ್‍ಯಾಗಿ—ಕೆಲ್ಸ ಮಾಡ್ತಿದೀರಾಂತ ವಾರ್‍ವಾರಕ್ಕೂ ನನ್ಗೆ ಅವ್ರಿಂದ ತಲ್ಪೋ ಹನ್ನೆರ್ಡು ಕಾಗ್ದಗಳನ್ನೂ ನೋಡಿದಾಕ್ಷಣ್ವೇ, ನಾನು, ನನ್ಮಕ್ಳು....ದುಡ್ಸಮೇತ ಬಂದ್ಸೇರ್‍ತೇವೆ... ಇನ್ನೇನ್ಹೇಳ್ಲಿ....?

ನಾಯಕ : ಅಲ್‌ಕಣೇ...ನಾನೆಲ್ಲೀ....ಔರಂಗಾಬಾದೆಲ್ಲೀ ?......ಹ್ಯಾಗೋಗೋದೇ ?

ನಾಯಕಿ : ಹ್ಯಾಗೇನೂ ?...ರೈಲು...ಸ್ಟೇಷನ್ ರಾಮ್ಪುರವಲ್ಲ...ಬೇಗ್ಹೋದ್ರೆ ಕಟ್ಟೇ ಲೂಟ ಮಾಡ್ಬಿಟ್ಟು ಪಕ್ಕದ ಸ್ಟೇಷನ್...ಗಂಗಾಪುರ...ಐದುವರ್ಗಂಟೆ...ಬೆಂಗ್ಳೂರು ರೈಲು.

ನಾಯಕ : (ಅಡ್ಡಮಾತಾಗಿ) ಛಾರ್ಜು ?...

ನಾಯಕಿ : ಅಲ್ಲಿಂದ ಔರಂಗಾಬಾದ್ಗೆ, ಅಲ್ದೆ...ಚಿಕ್ಕಪ್ಪ ಕೊಡೋ ಸಂಬ್ಳಾನೂ ಗಮನಿಸ್ದೆ —ಐದೈದು ರೂಪಾಯಿ ನೋಟುಗ್ಳು ಕೂಡ ಅಡ್ರಸ್ ಜೊತೇಗೆ, ನಿಮ್ಕೋಟ್ ಜೇಬ್ನಲ್ಲಿದೆ...ಆ ಗಂಟ್ನಲ್ಲಿ...ನಂಬ್ಕೆ ಇಲ್ದಿದ್ರೆ...ಚಂದ್ರನೂ ಮುಳುಗ್ದ...ಆದ್ರೆ ಬೆಳಕ್ಹರೀತಿದೆ........ ಊರೋರ್ಕಣ್ಣೆದುರ್ಗೆ ಗಂಟ್ನೂ ಬಿಚ್ಚಿ, ನಾನ್ಹೇಳೋದು ಸುಳ್ಳೋ ನಿಜ್ವೋ ಪರೀಕ್ಷಿಸಿ !!... ಆದ್ರೊಂದ್ಮಾತು ಖಂಡಿತಾ ...... ನಮ್ ಚಿಕ್ಕಪ್ಪ, ನೀವು ಅವ್ನ ಮಿಲ್‌ನಲ್ಲಿ ಕೆಲ್ಸ ಮಾಡ್ದೆ........ ಕೋಪಿಸ್ಕೋಬೇಡಿ...ಯಾಕೇಂದ್ರೆ...ಆ ಪಕ್ಷ್ದದಲ್ಲಿ ನಾನೂ ನನ್ಮಕ್ಳು ನಮ್ಮಪ್ನೂ ನೀವಿಲ್ಲದ ಕನಿಕರ ದಿಂದ...ನಮ್ಮಪ್ಪನ್ಮನೆ !! ಸಧ್ಯ ಕೋಪಿಸ್ಕೊಳ್ದೆ ಔರಂಗಾಬಾದ್ಗೆ ಹೋಗ್ಸೇರಿ ಬೇಗ...ಬೆಳಕ್ಹರೀತಿದೆ ....ದುಡ್ಡಿದೇ ಗಂಟಿನಲ್ಲಿ....... ಮೂರ್ತಿಂಗ್ಳು........ಚಿಕ್ಕಪ್ಪನ ಮಿಲ್ಲು......ಬಂದೇ ಬಿಡ್ತೇವೆ ...ಬೇಗ್ಹೊರ್ಡಿ...ಇಲ್ಲಾ ನನ್‌ಮೇಲ್ನಂಬ್ಕೆ ಇಲ್‌ದಿದ್ರೆ, ನಿಮ್ಮನೆ ಬಾಕ್ಲು ತೆಗ್ದೇಬಿಡ್ತೇನೆ...ನೀವು ಬಾಡ್ಗೆ ಕೊಟ್ಟು ನನ್ನೂ ನಮ್ಮಕ್ಕಳ್ನೂ ಇಟ್ಟಿರೋ ಮನೆಬಾಕಲ್ತೆಗ್ದು...

ನಾಯಕ : ಅರ್ಥ್ವೇ ! ಅರ್ಥ್ವೆ !...ಒಟ್‌ನಲ್ಲಿ ಇದು ನಿನ್ನರ್ಥ...ನನ್ ಜುಟ್ಟು ನಿನ್ ಕೈಲ್ಸಿಕ್ಕೊಂಡಿಥೆ. ಜಗ್ಗು ! ಜಗ್ಗು !............ಇಲ್ಲಿ ಬರೋವಾಗ ಹೋಗಿರಬೇಕಾಗಿದ್ದ ನಿನ್ನ ಕೂದ್ಲಿಗ್ಬದ್ಲಾಗಿ...ನನ್ದು ಹೋಗೋ ಸ್ಥಿತೀಗೆ ಬಂದುಬಿಟ್ಟಿದೆ. ಈಗಿರೋ ಸನ್ನಿವೇಶ ಒಂದೇ sentenceನಲ್ಲಿ sum up ಮಾಡ್ತೇನೆ ! ಕೇಳ್ಬಿಡು !! ಮೊಟ್ಮೊದ್ಲು ನರಸಿಂಹಯ್ಯನ ವ್ಯಕ್ತಿತ್ವ minussoo ! ಮೈಯು........mindoo souloo ಮೂರೂ ಮೈನಸ್ಸೂ........ನಿನ್ನ

ಪಾತಿವ್ರತ್ಯದ ಪ್ರಭಾವ ! ನಿನ್ನ instructions ಇಷ್ಟು : ... ವಟಿಸ್ತೇನೆ !!..........

ಮುಖ್ಯ ಔರಂಗಾಬಾದು...ನನ್ ರಾಶಿ...... ಒಂದೇ ಸಂತೋಷ. ... twenty five rail charge ಉ...9950 ಆಯ್ತು ನಿನ್ಗೆ ಲಿ... ..goodoo ... ನಾನೂ ನಮ್ಮಕ್ಕ ಆಯ್ತು ; betteroo.....ನಿಮ್ಮಾವನಿಗೆ ವೈರಿಯಾದ ... ನಿಮ್ಮ ಚಿಕ್ಕಪ್ಪನೂ ಆಯ್ತು...bestoo...ಹೊರ್ಟೆ...ಹೇಳ್ಬೇಕಾದ್ದೆಷ್ಟೋ ಇದೆ...But ... timeಲ್ಲ ಅಲ್ಲ......ಅಲ್ಲೆ ಹಸಿವು !......ಮರೀಬೇಡ......ದುಃಖಪಡಬೇಡ ಹೋಗ್ತೇನೇನ .....ಮೂರೇ ತಿಂಗ್ಳು...after all...ನಿಮ್ಮ ಚಿಕ್ಕಪ್ಪನ ಮನೆ ನಾನು ಹೋಗೋದು..........

[ಗಂಟನ್ನು ಎತ್ತಿಕೊಂಡು ರಭಸವಾಗಿ ಕಾಲು ಹಾಕುತ್ತಿದ್ದರೂ ಆಗಾಗ್ಗೆ ತಲೆಯನ್ನು ತಿರುಗಿಸುತ್ತಾ ಹಣತೆಯದೀಪದ ಬೆಳಕಿನಿಂದ ಜ್ವಲಿಸುತ್ತಿರುವ ನಾಯಕಿಯ ಅಂಗವನ್ನು ನೋಡಿ ನಿಟ್ಟುಸಿರುಬಿಡುತ್ತಾ ನಿಷ್ಕ್ರಮಿಸುವನು.]

ನಾಯಕಿ : (ನಿಟ್ಟುಸಿರುಬಿಡುತ್ತಾ) ಪಾಪ !..........ಇವರನ್ನ ಪಾಪ ಅಂತೀನಲ್ಲ !... ನಾನಲ್ವೆ ಪಾಪಿ !.......ನಮ್ಮಮ್ಮನ್ನು...ಕಳ್ಕೊಂಡು. ನಮ್ಮಪ್ಪನ್ನೂ ಬಿಟ್ಟು...ನನ್ನ ಮುಂದಿನ ಗತೀಗೆ ನಮ್ಮಪ್ಪನೇ ನಿಷ್ಕರ್ಷಿಸಿದ ಇವರ್ನ ಕೈಹಿಡ್ದು...ಈಗ ಹೀಗಾಗಿ...ನಾನು ಇವ್ರನ್ನೆತ್ತ ಮಗೂನೂ...ಕೂಸ್ನೂ...ನನ್ನ ಕಂದಗ್ಳ ಮುಂದಿನಗತೀ ಏನೂಂತನೋಡೋದೇ ?! ಇಲ್ಲ ಏನೋ ...ವಂದ್ಮಾತಿನಮೇಲೆ ಕೋಪಿಸ್ಕೊಂಡೋಡಿ...ವಂದು ವಾರ್ವೆಲ್ಲ ಅನ್ನ ನೀರು ಇಲ್ದೆ... ಬಿಟ್ಟಾತ್ತಿತ್ತು ...ಕಂಗೆಟ್ಟು...ಮುಸ್ರೆತಿಕ್ಕೋಳು ಬರೋಕ್ಮುಂಚೆ. "ತಂಗ್ಳು, ಹಳೇ"ಂತ ಕೇಳಿದವರ್ನ. ಕಳಿಸ್ಬಿಟ್ಟೆ ನಲ್ಲಾ !...ಕಳ್ಸೋಪಾಪಿ...ಇನ್ನೊಬ್ಬರ್ನ..."ಪಾಪ" ಅಂತೇನಲ್ಲಾ !!! (ಕಿಟಕಿಯ ಹೊಸಲಿನಮೇಲೆ ತಲೆಯನ್ನೂ ಚಚ್ಚಿಕೊಳ್ಳುವಳು) ನಾನೇನ್ಮಾಡೇನು ?! ಮಕ್ಕಳ್ನೂ ಕಟ್ಕೊಂಡು ಇವ್ರೊಂದ್ಗೆ ಹೋಗಿ...? ಇವರ ತಂದೆ ಬಿಟ್‌ಹೋದ ಮುವತ್ಸಾವ್ರ ರೂಪಾಯಿ. ಮೂರ್ವರ್ಷದಲ್ಲಿ. ಇವರ್ಗೂ, ನನ್ಗೂ, ನಮ್ಮಕ್ಳಿಗೂ...ವಂದ್ಬಿಡಿಗಾಸು ಕೂಡ ಸೇರ್ದೆ. ಮಣ್ಣಾಗಿಹೋಗಿದ್ದಾಗೆ...ಈ ವೂರಿನ...ಗಂಡನಿಲ್ದೆ ವದ್ದಾಡೋ ಹೆಂಗಸ್ರು...ತಂದೇಇಲ್ದೆ ಕಂಗೆಡೋ ಕೂಸುಗ್ಳು. ಗೋಪಾಲಕೊಡ್ಲಿ ಅಂತ, ಮುವತ್ಸಾವರರೂಪಾಯಿ ಕೊಟ್ಟ ಈ ವೂರಿನ ಮಹಾತ್ಮರು. ನಾನೂ ನನ್ನ ಮಕ್ಳು ಹ್ಯಾಗೇಂತ ಕನಿಕರ್ಸಿಕೊಟ್ಟ ಹತ್ ಸಾವರರೂಪಾಯ್ನ ಇವರ ಕೈಗೆ ಹ್ಯಾಗೆ ಕೊಡೋದು ?... ನನಗೊಂದೂ ತೋಚೋದಿಲ್ಲ !......(ಕಿಟಕಿಯ ಹೊಸಲಿಗೆ ಮತ್ತೆ ತಲೆಯನ್ನು ಚಚ್ಚುತ್ತಾ) ಈಗಾಗ್ಲೆ.......... ಮನೇಗೆ ಮುಟ್ಬಾರದ ಐವತ್ ರೂಪಾಯ್ನ ಕದ್ದ ನಾನು ?...ಇಲ್ಲ ! (ಮುದುರಿದ ಮಹಾಸರ್ಪವು ಥಟ್ಟನೆ ಲಾಂಗೂಲಾಂತವೂ ಎದ್ದು ನಿಂತಂತೆ ಎದ್ದು ಮುಷ್ಟಿಗಳನ್ನು ಬಿಗಿದು) ಇಲ್ಲಾ !...ಎಂದ್ಗೂ ಇಲ್ಲಾ !...ಮನೆ ಬಿಸ್ಸೀರಿನಲ್ಲಿ ಮೈತೊಳ್ಕೋಳ್ಳೋಕೆ ಹಿಂಜರಿಯೋರು ಕೆರೇಲಿ ಬಿದ್ದು ಹೋಗೋದಿಲ್ಲಾಂತ ಗೊತ್ತಿದ್ದಿದ್ದರೂನೂವೆ...ಇವರಿಲ್ಲದ ಆರು ದಿನಾನು ಮನೆಯೆಲ್ಲ ಇವರ ಕಿಲ್ಲಾಟವಿಲ್ದೆ...ಬಡ್ಡ ಗೋಳು !...ನನ್ನ ಕಂದಗ್ಳು "ಅಪ್ಪೆಲ್ಲೀ ?" ಅಂತ ಕೇಳ್ಳು ಕೇಳೋ ಹಾಗೆ ಕೇಳ್ತಿದ್ದವ್ರೂ...ಈಗ್ಕೂಡ ಬಂದು ಬಾಕಲ್ಮುಂದೆ ಹೊರಳ್ತಾ ಬಾಯ್ಬಿಟ್ಟು ಹೋಗ್ತಿದ್ದನೂವೆ. ಬಿಕೋ ಅನ್‌ಸುತ್ತಲ್ಲಾ !...ನನ್ಗೆ !?......ಮುಳುಗ್ತಿರೋ ಚಂದ್ರ ತಿರ್ಗಿ ನಾಳೆ ಹ್ಯಾಗೆ ತೇಲ್ತಾನೋ...ಹಾಗೇ ನಾನೂ ನನ್ಕಂದಗ್ಳೂ...ತಿರ್ಗಿ ಇವರನ್ನ ನೋಡ್ತ್ತೇವೇ ಅಂತ ತಿಳಿದಿದ್ದ ರೂನೂವೆ... ......ಮನಸ್ಸು ನೊಂದುಕೊಂಡು, ಹೀಗಿವ್ರು ಹೋಗ್ತಾ ಇದ್ದಾಂತ...ಇಷ್ಟು ಚಚ್ಚಿಕೊಳ್ತೀನಲ್ಲಾ !...ನಾನು !?...ಇನ್ನು...ತಿರ್ಗಿಬರದೇನೂ. ಗಂಡ ಹೋಗಿ..."ಅಮ್ಮಾ. ಅಪ್ಪಾ ಎಲ್ಲಿ ಹೋಗೀದಾನೇ ? ...... ಯಾವಾಗ ಬರ್ತಾನೆ ?" ಅಂತ ಕೇಳೋ ಕಂದ್ಗಳಿಗೆ..... "ನಾಳೆ. ನಾಳೇಂತ" ಹೆತ್ತ ಮಕ್ಕಳಿಗೆ ಸುಳ್ಳು ಹೇಳ್ತಿರೋ ತಾಯಿಗ್ಳ ಗತಿಯೇನೋ ?...ದೇವ್ರೇ ಬಲ್ಲ...ನನಗೇನೂತೋಚೋದಿಲ್ಲ...ಇದರಲ್ಲೆಲ್ಲಾ ವಂದ್ಸಂತೋಷ ಇವರ ಹುಚ್ಚುತನದಲ್ಲಿ ..... ನಾನು ಈ ಆರುದಿನ ಕಂಗೆಟ್ಟಹಾಗೆ. ಸಾಯೋವಗರ್ಗೂ ಕಂಗೆಡೋ ಹೆಂಗಸ್ರಿಗೂ... ನನ್ನ ಕಂದಗ್ಳಿಗೆ

ಇರೋ ಅಪ್ಪ...ಇಲ್ಲದ ಅವರ ಕಂದಗ್ಳಿಗೂ, ಹೋದೋರನ್ನ ಹಿಂದೆ ಸೆಳ್ಕೋಕಾಗ್ದಿದ್ರೂ, ಅವರು ಬಿಟ್‌ಹೋದ ಅನಾಥರಿಗೆ ಸಹಾಯಮಾಡಿದ್ದೊಂದು ಸಂತೋಷ............ಇನ್ನೀ ಹಾಳುಪೆಟ್ಟಿಗೇ ಬರೋ. ಪತ್‌ಸಾವರ್ರೂಪಾಯಿ, ಗಂಡನ್ನ ಕಳ್ಕೊಂಡ ಹೆಂಗ್ಸು, ಮತ್ತವನು ಬಿಟ್‌ಹೋದ ಮಕ್ಕಳೂ ಮುಂದೆ ಬದಕ್ಲೀ ಅಂತ ಪುಣ್ಯಾತ್ಮರು ಕೊಟ್‌ಹೋದ (ಪೆಟ್ಟಿಗೆಯನ್ನು ಸೂಚಿಸಿ) ಹತ್ ಸಾವಿರ್ರೂಪಾಯಿನ...ನಾನೂ ಕಂದಗ್ಳೂ...ಹೊಟ್ಟೆಗಿಲ್ದೆ ಹೋಗ್ತಿರೋ ಇವ್ರು, ಹ್ಯಾಗೆ ತಿಂದು ಬದ್ಕ್ಯೋದು ? ಸರಿ !...ಸದ್ಯದ ಖರ್ಚಿಗೆ ಐವತ್ತಿಟ್ಟುಕೊಳ್ಳೋದು...ಬಾಕಿ ೯೯೫೦ನ ಆ ಧರ್ಮಿಷ್ಠ ಧಣಿಯಪ್ಪನ ಕೈಲೀಇಟ್ಟು ಇದೇ ಸ್ಮಾರಕಸದನಕ್ಕೆ ಇವರ ಹೆಸರಿಗೇಂತ ಹೇಳ್ಬಿಟ್ಟು ನಮ್ಮ ಚಿಕ್ಕಪ್ಪನ ಮನೇಗೇ ...... ನಾನೂ ಹೋಗಿ ಸೇರೋದು...ಒಂದೇ ದಾರಿ !

[[illegible] ಹೊರಗಡೆ, ನಾಯಕನು ಹೋದ ಕಡೆಯೇ ನೋಡುತ್ತ, ಕಣ್ಣೀರುಸುರಿಸುತ್ತ ನಿಂತಿರುವಳು]

[ಪರದೆಯು ನಿಧಾನವಾಗಿ ಬೀಳುವುದು]

ಅನುಕೂಲಕ್ಕೊಬ್ಬಣ್ಣ

" A Sister
to 'ssist 'er"

ಎಂಬ

Le Bretal

ಇವರ

ರೂಪಕವನ್ನು ಅತಿಕ್ರಮಿಸಿ

ಪಾತ್ರಗಳು

ಧೋಂಡೂ

ಗೆದ್ದಲು ಹಿಡಿದ ಹುತ್ತದಂತಿರುವ ಬಿಲವೊಂದನ್ನು "ರೂಮು" ಎಂಬ ಅಭಿದಾನವಿಟ್ಟು ಬಾಡಿಗೆಗೆ ಕೊಟ್ಟಿರುವ ಮನೆ ಮಾಲೀಕ.

ಖಯಾಲೀ ಕಪ್ಪಣ್ಣ

ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಒದೆದು ಮೇಲ್ಕಂಡ ಬಿಲವನ್ನು ಬಾಡಿಗೆಗೆ ತೆಗೆದುಕೊಂಡ ಭೂಪ.

ರವ್ಡೋಲ್ ರಂಗಣ್ಣ

(ಕಪ್ಪಣ್ಣನ ಅಣ್ಣ)

ಜಟಕಾ : ಯಾಕೂಬ್ ಚಾಕರ : [illegible]

ದೃಶ್ಯ ೧

ಸ್ಥಾನ : ಧೋಂಡೂರಾಯನ ಮನೆ ಮುಂಭಾಗದಲ್ಲೊಂದು ಮುರುಕಲು ಕೋಣೆ

[Found Kappanna, and Dhondoo Rao with a rope in his hand]

ಕಪ್ಪಣ್ಣ : ಬಾಡಿಗೇ ಇಲ್ದೇ, ಧರ್ಮಕ್ಕೇ, ಬಂದಿಳಿದಿದ್ದು, ಇದ್ದಿದ್ದು ಇನ್ನ್ ಮುಂದಕ್ಕಿರೋದು, ಈ ಹಾಳ್ಕೋಣೇಲಿ ?

ಧೋಂಡೂ : ಬಿಡಿಗಾಸಾದ್ರೂ ನೀವ್ ಬಿಚ್ಚಿದಾಗ ಬಾಡಿಗೇಗಂತೆ ಹೊರ್ತು, ಬಂದಿಳ್ದ ಸಂದರ್ಭ ಆಗ್ಲಾ ಬಂತು ; ಬಂದ್ ದಿನದಿಂದ ನಮ್ಮನೇನೆಲ್ಲಾ ನಿಮ್ ಕಿಲ್ಲಾಟದಲ್ಲೇ ಖರ್ಚು ಮಾಡಿದ್ರೇ ಹೊರ್ತು, ಒಂದ್ ಕಾಸೂ ಬದ್ಲಾಯಿಸ್ಲಿಲ್ಲ, ಕೈಯಿಂದ ಕೈಗೆ. ಈ ರೂಮ್ಗೆ ಬೇರೆ ಒಬ್ಬಾತ apply ಮಾಡ್ತಿದಾನೆ. ಆತ್ನಿಗಾದ್ರೂ, ಬಿಡುವು ಮಾಡ್ಕೊಟ್ಟು ನನಿಗುಪ್ಕಾರ ಮಾಡ್ತೀರೋ ...ಇಲ್ಲಾ "ತಾನೂ ತಿಂದ, ಪರರ್ನೂ ಕೊಂದ" ಅಂತ ಈ ರೂಂನಲ್ಲೇ ಠಿಕಾಣಿ ಹಾಕ್ಕೊಂಡು, ಕಲಿಯುಗ ತೀರಿ ಮುಂದ್‌ಬರೋ ಕೃತಯುಗಾನ ಎದುರ್ನೋಡ್ತಿರ್ತೀರೋ...ಆ ಕೈಲಾಸಪತೀನೇ ಬಲ್ಲ! ಸದ್ಯ. ಈ ರೂಮಿನ ಬಾಬ್ತು. ಹನ್ನೆರಡ್ತಿಂಗ್ಳ ಅರವತ್ತ್ ರೂಪಾಯ್ನ ನನ್ಕೈ ಮುಟ್ಸೋವರ್ಗೂ, ಈ ನಿಂಗ್ನೋನ ಕಾದು ಕಾಪಾಡೋ ಭಾರಾನ ನಾನಾಗೇ ವಹಿಸ್ಕೊಳ್ಳೋ ಪರಾನ ಮಟ್ಗೆ ದಯ ಪಾಲ್ಸಿದ್ರೆ. ತೃಪ್ತೋಸ್ಮಿ!!

[ಕೈಯಲ್ಲಿರುವ ಹಗ್ಗದಿಂದ ಟ್ರಂಕನ್ನು ಕಟ್ಟಿ ಬಿಗಿದು ಗಂಟುಹಾಕಿ ಭದ್ರಿಸುವನು]

ಕಪ್ಪಣ್ಣ : ಏನು ಅಭಿಮಾನ! ಈ ಬಿಲಕ್ಕೆ!...ಈ ತೂತ್ಗೇ...ರೂಮೇ ? ವಿಶ್ವಕರ್ಮ! ಮಯಾ! ತಕ್ಷಣಾಚಾರೀ! ಎಲ್ಲಿದ್ಧೀರ್ರೋ!!! ಪಂಚಭೂತಗ್ಳಲ್ಲೊಂದ್ನೂ ಬಿಡ್ದೆ...ಗಾಜಿಲ್ದ ಕಿಟ್ಕಿಯಿಂದ ತೂರೋ ಮಣ್ಣೂನು, ಮಳೆ ಬಂದ್ರೆ ಸೋರೋ ಸೂರಿಂದ ಸುರಿಯುತ್ತೋ...ಇಲ್ಲ,...... ನೆಲಕ್ಕೂಗೆ ನೀರ್ಮನೆಯಿಂದ ಬಿರದ ಗೋಡೆಯಿಂದ ಬೀಳುತ್ತೋ. ಅಂಗಾಂಗಗಳಿಗೂ ರ್ಹ್ಯುಮೆಟಿಸ್ಮ್, ಟೈಫಾಯ್ಡ್ ಇತ್ಯಾದಿ ಜಾಡ್ಯಗಳ್ನ ಜಿಸಮ್ಗೆ ಜೋಮಾಲೆ ಹಾಕೋ ಜಲಾನ್ನೂ, ಹೆಂಚಿಲ್ದ ಆಕಾಶದ್ ತೇಜಸ್ನೂ ಬಾಕಲ್‌ಜೀವ ಕಿಡಿಯಿಂದ ತೂರೋ ವಾಯೂನ್ನೂ ಒಳಗೆ ತಸ್ಕೊಂಡಾದ್ರೋ ಗೊಗ್ಗರಿನ್ನ ಗುಹೇಗೆ. ರೂಮೂ ಅಂತ ನಾಮ್ಕರಣ ಮಾಡಿದ್ಧೀರಲ್ಲಾ ಅದಕ್ಕೇ ಒಂದು special ನರಕ ಕೊಡ್ತೀಗೆ!! ಇನ್ನೇ ನಿಮ್ಮನೇಗೆ ಕನ್ನಾಹಾಕಿದ ಕಳ್ನನ್ನಾ. ಜಾತಿಭ್ರಷ್ಟನ್ಮಾಡ್ಬಿಟ್ಟಾರು. ಅವನ್ನ್ ಕಟ್ಟೆಬ್ಬರು!—. ಅಯ್ಯೋ ? ? ಇನ್ನಿವಕ್ಕೆ ಬಾಡ್ಗೆ ಕೇಳೋನೋ. ಕೊಡೋನೋ. ಇಲ್ಲಿ ಇವರಲ್ಲಾರು ಮಹಾಪಾಪ್ಯ ಅಂಬೋಸ್ನ. ಯಮ—ಮುಂಡಕ್ಕೆ ನಾವೂ. ನೀವೂ. ಸಂದಿಸ್ಲೇಬೇಕಾದ, ಆ ಯಮ ಧರ್ಮ—ಅವನೇ ನಿರ್ಧರಿಸ್ಬೇಕು! ....ಸದ್ಯ, ಈ ಜೊತ್ಕೇನ್ನ್ ನಾನು ಬಾಡಿಗ್ಗೆ ತಕ್ಕೊಳ್ಳೋವಾಗ. ಆಗ ಚಿಕ್ಕಂದ್ನಲ್ಲಿ. ನಾನ್ ಹಾಕಿದ್ ಶಿಡುಬಿನ್ಪತ್ತ ಬೆಕ್ಕಿನಪಿಚ್ಕೇ ವದನಾನ ಜ್ಞಾಪ್ಸೋ ನಿಮ್ ಮುಖಾರವಿಂದ್ಕ ನವಪಲ್ಲೇ ಇದ್ದೇಹೋಂತೇನೂ ಇಲ್ಲ ನಿಮ್ ನಮ್ ಒಪ್ಪಂದ್ದಲ್ಲಿ!...ಈ ದೊಗ್ರಿನ್ ದ್ವಾರ ದಾಟ್ಕೋಗಿ ಮಿತ್ರ್ಯ ಪಾಟೀಗಾದ್ರೂ ನಿಮ್ ಮೂತೀನ ತೋರ್ಸ ಹುಚ್ಚಿಲ್ಲ!........ ಇಷ್ಟಕ್ಕೆ ನಿಲ್ಲಿ. ನಿಲ್ಲಿ. ನಿಮ್ಮೆಲ್‌ಮಾಡ್ಲೋ ಬ್ರಹ್ಮಹತ್ಯೆದ್ ಪಾಪ ನನ್ನ ಸೇರೋದಿಲ್ಲ!... ನಿಮ್ಮನ್ನೇ ಸೇರತ್ತೆ!

[ದಂತಾವಳಿಯನ್ನು ಕಟಕಟನೆ ಕಡಿದು. ಕನಲಿ. ಮುಷ್ಟಿಗಳನ್ನು ಬಿಗಿದು. ರಾಯನ ಅಂಜಿದ ಆಸ್ಯವನ್ನು ದಿಟ್ಟಿಸುತ್ತಿರಲು. ಹೆದರಿದಾತನು ಹಿಮ್ಮೆಟ್ಟುತ್ತಾ ತಿರುಗಿ ತಿರುಗಿ ಹಿಂನೋಡುತ್ತಾ, ದ್ವಾರವನ್ನು ಸೇರಿ ನಿಷ್ಕ್ರಮಿಸುವನು.]

ಕಪ್ಪಣ್ಣ : (ಆತ್ಮಗತಂ) ಏನ್ wretched fateoo ನಂದೂ!?...ಏನ್ ಬಂದ್ ಸುರಿಯೋ ಕಾಲಕ್ಕರಿಯಾಗಿ ...... ಕನ್ಸ್ಪಪ್ಪಗಳ್ನ ಛಿದ್ರವಾಗಿ ಬೀಳೋದಾಲ್ಲಾ ಈ ಕಿಮಿನಾಟ!.. ಒಳ್ಳೇ ಕರಿಯುರೂ open ಆಗೋ ಮಿಸ್ಟರಾಜಿಕಲ್ moment ನಲ್ಲೇ happen ಆಗೋದು. ಇಂಥಾ catastrophy ನು!........Hundred rupees offeroo! ನನಗೇನ offerನೂ. offerಗೇಂತ ನನ್ನೂ ಜುಟೀಮಾಡ್ದ ಆ ಜಗತ್ಸ್ರಷ್ಟ. ಇಲ್ಲಿಂದ ತಪ್ಪಿಸ್ಕೊಳ್ಳೋ ಮಾತ್ರಾನೂ ಕೊಡಬಾರ್ದೇ! ?...(ಜೋಬಿನಿಂದ newspaper cutting ತೆಗೆದು ಓದುತ್ತಾ)—"Wanted a first class comedian for the film!!...facial contortions essential. No good lookers need apply. **Handsome** remuneration to **ugly** applicants. Starting with Rs. 100/- per mensem. Future prospects in the candidate's own face. Apply in person. to :— The Shooting Syndicate, Fade-out Buildings, mandyar pet. Madras, Call in the morning." —ಈಗೇನ್ಮಾಡೋದು ? ವೆಚ್ಚ ದುಡ್ಡೋಕ್ಕೊಟ್ಟಿಗೋ. ಅವನು ಹಗ್ದಿಂದ್ ಕಟ್ಟಿರೋ ಟ್ರಂಕ್ನಲ್ಲಿ! ಇನ್. ರೈಲ್ವೆ fare ಓ ಒಪ್ಪಾಯಿಸಿದ್ರೇನೆ possibleoo!...ಈಗೇನ್ಮಾಡೋದೂ ?

[Enter ಧೋಂಡೂರಾವ್, who collects all the pictures from the walls and takes them away muttering to himself, "ಮನೆ ಬಾಕ್ಲಲ್ಲಿ. ಬಿಡ್ಲಾಸಾದ್ರೂ ಬಾಳೋ ಒಬ್ಬ ಬಂಧೂನೂ ಇಲ್ದೆ. ಬಿಟ್ಟೀವಾಸ. ಬಿಟ್ಟೀ ಗ್ರಾಸದಿಂದ ಬದುಕು ನೀಗಿಸ್ಕೊಳ್ಳೋ ಬದ್ಮಾಷುಗ್ಳು buildingನಿರೋವಾಗ್ಲೆ ಭದ್ರ ಎಲ್ಲಿದೆ ?. ಭದ್ರ ?"]

ಕಪ್ಪಣ್ಣ : (muttering) ಏನೂ ? ! "ಮನೆ ಬಾಕ್ಲು ಬಿಡ್ಲಾಸೂ ಬಾಳ್ದ ಬಂಧುಗ್ಳು !" (His eyes flashing—"ಜ್ಞಾನೋದಯ") (ಪ್ರಕಾಶ)... ಏನ್ಹೇಳ್ದ್ರೀ ? !!. ಬಿಡ್ಲಾಸೂ ಬಾಳ್ದ ಬಂಧುಗ್ಳಿಲ್ದ ಬದ್ಮಾಷ್ನೇ ನಾನು! ಹ್ಹು! ನಗ್ಗು ಬರತ್ತೆ!...ನಾಲಕ್ಕೋಟಿ ರೂಪಾಯಿ ಬಾಳೋ ಜಹಗೀರ್ನೂ, ವರ್ಷಕ್ಕೆ ನಲವತ್ತಲಕ್ಷರೂಪಾಯ್ನು ಸಾಗುವಳೀನೂ. ಇನ್ನ್ ಅವನ ಬಿಡ್ಲೀಲೇ ತಿಂಗ್ಳಿಗೇಳೋ ನಾಲಕ್ಲಕ್ಷರೂಪಾಯ್ನೂ ಇಟ್ಕೊಂಡು, ಖರ್ಚು ಮಾಡ್ಲಾಗ್ದೇ ಕಣ್ಣೀರ್ ಬಿಡ್ತಿರೋ, ಸಕ್ಲೇಶ್ಪುರದ, **ರಂಥೋಲ್ ರಂಗಣ್ಣ**, ನನಗೊಬ್ಬ ಅಣ್ಣ. ಇರೋವಾಗ್ಲೂ...ಬಿಡ್ಲಾಸೂ ಬಾಳ್ದ ಬಂಧುಗ್ಳಿಲ್ದ ಬದ್ಮಾಷೂಂತ ನೀವ್ ನನ್ನನ್ನೋದ್ ಕೇಳಿ ನಗು ಬರತ್ತೆ! ಅಲ್ದೇ. ಇನ್ನ್ ನಮ್ಮಣ್ಣಂಗೇ, ನಾನು—ಅವನ್ತಮ್ಮ—ಕಪ್ಪಣ್ಣ. ಈ ಕಾಲರಾ ಸಿಪಾಸ್ನಲ್ಲಿ. ಕಾಸಿಲ್ದ ಕರುಣ್ಯಿಲ್ದ ಕಟುಕ್ರ ಬಾಯಿಂದ—ಬದ್ಮಾಷು ಅಂತ ಅನ್ನಿಸ್ಕೊಳ್ಳೋದು. ಅವನ ಕಿವೀಗೇನಾದ್ರೂ ಬಿದ್ರೆ. ತತ್ಕ್ಷಣಾನೇ ತಲೇತೂಗಿ. ತನುವೋಲ್ನಾಶೇನೇ ಬಿಟ್ಟಿಟ್ಟಾನೂ ಅಂಬೋ ದುಃಖದಿಂದ. ನಗೂನೂ ಬರುತ್ತೆ! ಧೋಂಡೂರಾಯ್ರೇ! ಅಳೂನೂ ಬರುತ್ತೆ !

ಧೋಂಡೂ : ಏನೂ ? ! ನಿಮಗೊಬ್ಬಣ್ಣಾ ಬೇರೆ ಇದಾನೆಯೋ ಇದ್ದೋನಲ್ಲಿ... ಐಶ್ವರ್ಯವಂತಾ ? ಹಾಗಿದ್ದಿದ್ರೆ, ಒಡಹುಟ್ಟೋನ್ನ. ಈ ಅವಸ್ಥೇಗೆ ಬಿಡ್ತಿದ್ನೇ ? ಅಲ್ದೇ. ನೀವ್ತಾ ಕೂಡ ಆತ್ನ ಸಹಾಯ ಕೋರ್ದೇ ಹೀಗೆ ಕಂಗೆಡ್ತಿದ್ದಾ್ರ ? ? ....

ಕಪ್ಪಣ್ಣ : (Sarcastically) ಅದೇ, ವ್ಯತ್ಯಾಸ! ದೊಡ್ಡಕ್ತದೋರು cheap ರಕ್ತದೋರ್ನೂ ! ಸ್ವಾತಂತ್ರ್ಯ—**Independence** ಎಂಬ ಅಂಬೋದು ನಮ್ಮ್ ರಕ್ತದಲ್ಲಿಣ ! ಹೆದರ್ಕೊಳ್ಳೇ. ಬೆದರ್ಕೊಳ್ಳೇ. ಗದರ್ಕೊಳ್ಳೇ. ಸಾಗ್ದಿದ್ರೆ ಕೈಕಟ್ಕೊಂಡು ಕಾಲ್ಬಿಡೀತಾ. ಕಿರ್ಕೊಂಡ್ ತಿನ್ನೋ **thin bloodoo,** ತಿಳೀರಕ್ತಾ ನಿಮ್ಮದು ; ಕೆಲವರ್ದು ! ಅನ್ನಿಂದಾಗ್ಲೇ. ಅನ್ನಿಂದಾಗ್ಲೀ ಅನುಭವ್ನೋ ಅಮರತ್ವಕ್ಕಿಂತ್ಲೂ, ಸ್ವಾತಂತ್ರ್ಯ ಯಿಗಿಸ್ಕೋಳೋ ಸನ್ಯಾಸಾನೇ ದೊಡ್ಡ ಅನ್ನಾ ಸೂಚಿಸ್ಸೋದೇ ದೊಡ್ಡರಕ್ತದ ಗುರುತೂ! ನೈನೂ—ಎಸ್. ಓ. ಜೆ. ಎನ್ನೂ!! ಮತ್ತಿನ್ನಾಕೆ, ಏಯಾಲೀ ಕಪ್ಪಣ್ಣಾಂತಿಟ್ಟಿರೋದು ನನ್ಹೆಸ್ರು. ನನ್ ಕುಟುಂಬದಲ್ಲಿ?......ನಮ್ಮಪ್ಪ. ಮಗ್ನೂ

ಇರ್ರೂ ನನ್ನಣ್ಣ ಚಾಚ್ತಿರೋ ಅರ್ಧಸ್ವಾನ ಬಿಟ್ಟು, ಹೀಗೆ ಅಜ್ಞಾತವಾಸ ಮಾಡ್ತಿರೋದು? ಈ ಐಹಿಕ ಸೌಖ್ಯಗಳ್ಲಿ ಅಸಹ್ಯಪಟ್ಕೊಂಡು ನನ್ ಪರಲೋಕ್ದಾನ್ನಾನ್ ಹುಡುಕ್ತಿದೇನೆ ಅಂಬೋದ್ನ. ಹಣ ದಿಂದ್ ಕೊಬ್ಬಿದ್ದನ್ ಬಂಧುಗ್ಳಿಗಾಗ್ಲೀ ಹೆಗ್ಗಣದ್ಬಿಲಗಳ್ನ ಬಾಡಿಗ್ಗೊಟ್ಟು. ಹೊಟ್ಟೆ ಹೊರ್ರ್ಕೊಳ್ಳೋ ಹುಳಗಳ್ಗಾಗ್ಲೀ ಮಂಪಟ್ಟೆಲ್ಲಾಗತ್ತೆ? ಮುಖ್ಯ ಬಡುವ್ರು, ಬೊಂಬ್ದಾ ಹೊಡೀತಾ, ಹಾರಾಡ್ತಿರ್ರೂ, ಬಡ್ಕೋತಿರ್ತಾರೇ ಹೊರ್ತರ್ಗ........"ಭಾಗ್ಯಾ, ಭಾಗ್ಯಾ"ಂತ........ಐಶ್ವರ್ಯ, ಅಂತಸ್ತು, ರಕ್ತ, ಸಂತತೀ ಇರೋರ್ಗೆ ಅದ್ರ ಯೋಚ್ನೇನೇ ಇರೋದಿಲ್ಲ!!

ಧೋಂಡೂ : ಹಾಗಾದ್ರೆ ಅಷ್ಟು ಐಶ್ವರ್ಯವಂತ್ರಾದ್ರೆ, ಬಾಡ್ಗೆ, ಅರುವತ್ರೂಪಾಯ್ಗೆ ಗತಿ ಯಿಲ್ದೆ, ಕಣ್ಕಣ್ ಬಿಡ್ತಿರೋದು ನೀವೋ, ನಾನೋ?

ಕಪ್ಪಣ್ಣ : ನನಗರವತ್ರೂಪಾಯ್ ಬೇಕೂಂತ್ನಾನೇನ್ ಬಿಡ್ತಿರೋದ್ಕಣ್ಣ? . ... ನೀವ್ತಾನೇ, ಗತಿಯಿಲ್ದೆ ಗಲಭೆ ಎಬ್ಬಿಸ್ತಿರೋದಿವತ್ತು?! ಹಾಗ್ನಿಮಗ್ಗತಿ ಇರೋ ಪಕ್ಷಕ್ಕೆ ಹಗ್ಗಾ ಹಾಕ್ಬಿಗದ್ ಬಿಮ್ಮನ್ನ್ ತಚ್ಕೋಬೇಕ್ಯಾಕೆ ಆ bit of ಬೊಂಬಾಯಿತಗಡ್ನ?...ನಮ್ಮಣ್ಣ, ರಂಡೋಲ್ ರಂಗಣ್ಣ, ಎಮ್ಮೆಗ್ಳ ಕೊಟ್ಗೇಗೆ ಸಾಂಬ್ರಾಣಿ ಧೂಪಾ ಹಾಕೋದ್ನೂ. ನಿಮ್ಮನೇ ತಲೇತಲೇನೇ ಎತ್ಕೊಂಡ್ಹೋಗೋ ಚರಂಡೀ ಘನಸುಗಂಧದ ಆಮೋದಾನೂ, ಹೋಲ್ಸಿದ್ರೆ ಕನಿಕರ ಬರುತ್ತೆ! ಧೋಂಡೂರಾಯರೇ! ಕನಿಕರ ಬರುತ್ತೆ! ನಮ್ಮಣ್ಣ ರಂಡೋಲ್ ರಂಗಣ್ಣೀ, ನನ್ನೀ ಅವಸ್ಥೇನೋಡಿ, ಅವನ್ ಹೃದ್ಯದಲ್ಹುಟ್ಟೋ ಕನಿಕರಕ್ಕಿಂತಾ, ಕುಂಬಾರ್ಗುಂಡೀಲಿ ಕುಕ್ಕರಸ್ಕೊಂಡು, ಕುಬೇರ್ನ್ಹಾಗೆ ಮುಖ ಗಂಟ್ ಹಾಕ್ಕೊಂಡು, ನನ್ನ ಹೀಯಾಳಿಸ್ತೀರಲ್ಲಾ! ಇದ್ರಿಂದ ಕನಿಕರ ಹುಟ್ಟುತ್ತೆ! ನಿಂ ಪೈಸಾ ಇಲ್ಲದ ಪಟಾಟೋಪ ನೋಡಿ ಕನಿಕರ ಬರತ್ತೆ!

ಧೋಂಡೂ : ಯಾರ್ಹತ್ರಲ್ರೀ, ಈ ಬಿಡಿಗಾಸ್ ಚಾಳದ್ಬಿಂಕ? ರಂಡೋಲಂತೆ. ರಂಗಣ್ಣಂತೆ, ಕೋಟೀಶ್ವರನಂತೆ. ತಮ್ಮ, ಹೊಟ್ಟೇಗಿಲ್ದೇ ಬಾಯ್ಬಾಯ್ ಬಿಡ್ತಾ ಇದಾನಂತೆ!............ ಯಾರ್ಹತ್ರಾರೀ, ಕೊಚ್ಕೊಳ್ಳೋದು, ಈ ನಿಮ್ಮ, ಇಲ್ಲದಣ್ಣನ ಐಶ್ವರ್ಯದ ಪ್ರತಾಪಾನ .. .. ಅಣ್ಣನೂ ಇಲ್ಲಾ ರಂಗಣ್ನೂ ಇಲ್ಲ ಇನ್ ರಂಡೋಲ್ ರಂಗಣ್ನೆಲ್ಲಿಂದ ಬಂತು...ಹೊರಗ್ಹೋಗಿ ಕೂಲೀನೋ ನಾಲೀನೋ ಮಾಡೀ. ನನಗ್ಕೊಡ್ಬೇಕಾದ್ರಲ್ಲಿ. ಅರ್ಧಾನಾದ್ರೂ ತೆತ್ಬಿಟ್ಟು. ಈ ನಿಂ ಸೊಟ್ಟೆದ್ದ್ ಸುದೂಕಾನ್ ಸಾಗಸ್ಕೊಂಡು ಹೋಗೋ ಯೋಚನೇನ್ ಬಿಟ್ಬಿಟ್ಟು, ಇಲ್ಲದ್ ಬಂಧುಗಳ ಹೆಗಲ್ಮೇಲೆ ಬಯ್ಸಿದ್ ಭಾಗ್ಯಾನ ಹೇರಸ್ತಾ, ಹೇರಸ್ತಾ, ಕನ್ಸುಗಳ್ನಾ ಕಲ್ಪ್ನ ಮಾಡ್ತಿದ್ರೆ ಹೊಟ್ಟೆ ತುಂಬುತ್ತೇ?.......ಹೊರಗ್ಹಾಕಸ್ಟ, ಎಂಜ್ಲಲೆ ಶೇಷಾನ ತಿಂದ್ಕಾಯಿಗ್ಳು ಬಿಟ್ಬೆಂಜ್ಲಿಂದ... ಹೊಟ್ಟೆ ತುಂಬುತ್ತೆ? ...... ಅಲ್ಲ ಮತ್ತೆ! ಮಾತ್ಬೆಳಸ್ತಾನೆ ಮನುಷ್ಯ! ಗಂಡ್ಸು!...ಕೆಲ್ಸ ಮಾಡೋಕೆ ಕೈಲ್ಹರೀದೇ!!........

(ನಿಷ್ಕ್ರಮಣ)

ಕಪ್ಪಣ್ಣ : (indignantly) (ಆತ್ಮಗತಂ) "ಕೈಲ್ಹರೀದೇ!" ಕಪ್ಪಣ್ಣನ್ಕೈಲ್ಹರೀದೇ... ದೇವ್ರು ಗಾನಾ ಲಾಗಾಯ್ತಿನಿಂದ ಬಿಟ್ಟ ಈ ಕೈನಾ ಇವತ್ಗಾನಾ ಬಿಗ್ದಿಡ್ತೆರ್ರು...ತಿನ್ನಸ್ತೀನೇ, ತಿನ್ನ ಸ್ತೀನೇ. ಒಂಧ್ಹೋಕಾ, ಈ ಧೋಂಡೂರಾಯನ್ಗೆ...ಇವನ್ಗಾಗೋ ಸುಸ್ತ್ನ ಸುಧಾರ್ಸೋಕೆ ಸಂವತ್ಸಾರಾನೂ ಸಾಲ್ದಾಹ್ಗೇ...ಸತಾಯಿಸ್ಬಿದ್ರೆ, ಸತ್ರೇನೋ. ಸಾಯ್ದಿದ್ರೇನೋಂತ...ರಂಡೋಲ್ ರಂಗಣ್ಣ ತಕ್ಕಷ್ಟೆ effectiveoo ಅಂತ್ಬಿಟ್ಟಿದ್ ಬಾಣಾನ; ಇನ್ನದ್ನೇ ಸುಳ್ಳೂಂತ ಇವನಿಗ್ಮೇಲೇ, ಇವ್ನೀಕ್ನ್ಹಾಗೆ ಕನಸ್ಸಲ್ಲಾದ್ರೂನೂವೇ ರಂಗಣ್ಣೊಬ್ಬನ್ನ ಕಲ್ಪ್ಸಿ. ಇವನ್ಕಣ್ಣದ್ರೂಗೆ ಕಟ್ಟಂದೊಪ್ಸಿ. ಇವನ್ಕೈಲಿರೋ, ರೊಕ್ಕಾನೂ, ಬಟ್ಟೇ ಬರೇನೂ. ಈ ನನ್ heirloom of twisted tinಉಂನೂ. ಈ ಕೂರೇ ತುಂಬಿದ್ ಕುಟೀರ್ದಿಂದ ಹೊರಗ್ಹಾಕ್ಬಿಟ್ಟಮೇಲೆ...film actor ಕಪ್ಪಣ್ಣಲ್ಲಿ, ನನ್ಗೇನು prospectsoo?......... ರಂಗಣ್ಣಾ...ಅಣ್ಣಾ........ಬಾಸಾ ಅಣ್ಣ! good!... therefore ಮೂಗು ಮುಖಾ ಎಕ್ಸ್ಟ್ರಾ ಹತ್ತಿರೋದು naturaloo! ಮಿಾಸೆ. spectac-

lesoo ....ಕ್ರೀಪ್ಪೇರೂ. Spirit gumoo ತಯಾರು......ಇನ್ನು voice ೬! ದ್ವೈತ್ "ಮಿಯಾನ್ಸ್ಟ್"ದ ಹಿಂದಿನ "ಊಫ್" ವರ್‍ಗ. ಅವರೋಟಣ, ಅದೋಹಣ ಸಾಧ್ಸೇ ಬಾದೆ. ಇನ್ನೇನು ?...ಕೋಟು, ರುಮಾಲು, ಧಗ್ಧಗಾಯ್ಸೋದೊಂದ್ ದೋತ್ರ. ವಾಚ್ and chainoo ...... ಅಪಕ್ಸ್ಸಬಿಟ್ಟ. ಸೊಗಸ್ಗಾರ್ ಸುಬ್ಬಿಸ್ ಸ saviouroo.....ಸೋದ್ಯ್ಪ್ರಾ ......luckily ಕೋಟ್ಇದೆ...ಎರಡ್ಪ್ನ refuse ಮಾಡೋದು impossibleoo.. ರೂಪಾಯ್ದಿರೋದಿಲ್ಲ ಇಷ್ಟು ಹೊತ್ನಲ್ಲಿ ....ಮುಂದಿನ್ವಾಕ್ಕು ಬೇಗ ಹಾಕ್ಕೊಂಡ್ಹೋಗದ್ದೂ ನೂವೆ...mean fellow!—Luckily ಅಂದತ್ತೆ ಕಿಟ್ಕಿಯಿಂದ. ಅಗ್ಲಿ......ಬಿಂದಾವ್ಬಿಲ್ಗ್ಲ ......ಈ delay ಮಾಡೋದು dangerousoo......(ಪಟ್ಟಾಯಿಂತು ಗಟ್ಟಿಯಾಗಿ) ಇನ್ನೇ ಬರೋಬಿದ್ದ ಬಿಕ್ಷಾಸಿಗಳ್ಗೆ ಕೊಡ್ಬೇಕಾದ್ನ ಕೊಟ್ಟು ಈ ಭಿಕಾರಿಗ್ಳ ಸಹವಾಸಾನ ಬಿಡೋದೇ best thingoo ....ದೊಡ್ಡ ಕುಲ್ವಲ್ಬುಟ್ಡೋನ್ಗೆ best thingoo!

ಘೊಂಡೂ : (suddenly entering) ಯಾರ್ರೀ ಭಿಕಾರಿ ? ಯಾರ್ರೀ ಬಿಕ್ಷಾಸಿ ?......

ಕಪ್ಪಣ್ಣ : ಯಾರೇನು ? ನಾಚ್ಕೆ ಹೇಚ್ಕೆ ಇಲ್ದೆ, ಕದ್ಕಿದ್ಬು ಬಾಗ್ಲುದ್ದ್ ಬಂತು. ಕಿವಿಗೊಟ್ಟು ಹೊಂಚ್ಕೋತೋ ಹಲ್ಕಾಗ್ನೇ ! ... ಬಿಕ್ಷಾಸಿಗ್ಳು, ಭಿಕಾರಿಗ್ಳು, ಇನ್ಯಾರು !? ನಾನ್ ಕಲೆಯೋದು ದೊಡ್ಮನುಷ್ಯ್ರಂದ್ಗೆ !!

ಘೋಂಡೂ : ಅದೆಲ್ಲ್‌ಸ್ವಾಮಿಾ, ತಾವ್ ಕಲೆಯೋದು, ದೊಡ್ಡ ಮನುಷ್ಯ್ರಂದ್ಗೆ ?

ಕಪ್ಪಣ್ಣ : ಇಲ್ಲಲ್ಲ! ಈ ನಿಮ್ಮ ಗೆಡ್ಡಿ‌ಪ್ಡ್ ಹುತ್ಕಲ್ಲಲ್ಲ !! ದಾರೀ ಬಿಡಿ !

[exit precipitately]

ಘೋಂಡೂ : ಏನಂದ ? "ಗಡ್ಡಿಪ್ಡ್ ಹುತ್ತ" ಅಂದ ಅಲ್ವೇ ! ಇಲ್ಲಿ. ಆದ್ರೂನೂ, ಇದ್ರುರ್ಲ್ ಇಷ್ಟ್‌ದಿವ ಸೇರ್ಕ್ಕೊಂಡಿದ್ದ ಕಪ್ಪ ನಾಗರ್ಹಾವು ಹೊರಗ್ಹೊರಡ್ತಲ್ಲ. ಇನ್ನೇ ಕಾದಿರ್ಬ್ ನಾನೂನು. ಇನ್ನು ಮನೇ ಸಾಮಾನುಗಳ್ನೆಲ್ಲಾ ಈ ಕೋಣೇಲೇ ತುಂಬಿಟ್ಟ್ ಬಿಟ್ಟ. ಬೆರೆಯವ್ರಿಗೆ ಬಾಡಿಗ್ಗೆ ಕೊಟಾಯ್ತೂಂತ ಹೇಳಿದ್ಮೇಲೆ, ಬಾಕೀ ಬಾಡ್ಗೇನ ತಂದ್ ಕೈಲಿಟ್ಟು, ಅವನ ಹಾಳ್‌ಪಟ್ಟೀನ ಬಿಡಸ್ಕೊಂಡ್ ಹೋಗೋವರ್ಗೂ ಅವನೀ ಮನೇ ಹೊಸ್ಲು ಮಾಟೋ ಛಡ್ಬಿಲ್ಲ.

[Brings back all the pictures he took away and deliberately and slowly hangs them up. ಅಲ್ಲದೇ ಮನೆಯ ಸಾಮಾನುಗಳನ್ನೂ, ಜೋಡಣೆಗಳನ್ನೂ, ಒಂದೊಂದಾಗಿ ತಂದಿಟ್ಟು, ಕೋಣೆಯನ್ನು ತುಂಬುವನು .... (ನೇಪಥ್ಯೇ) .... "ಸ್ವಾಮೀ, ಸಕ್ಲೇಶ್ಪುರ್ದ ಕಪ್ಪಣ್ಣೋರು, ಇಲ್ಲೇ ಅಲ್ವೇ ಇರೋದು ?"]

ಘೋಂಡೂ : ಇವ್ಯಾರಿದೂ ?.........ಈ ಪಾಪದ್ನ ಅಪ್ರು, ಇಪ್ರು, ಅಂತಾನೆ !...... ಇಷ್ಟಾಗಿನ್ಲೂ double ಪಾಪರ್‍ಗೇ, ಅದ್ಹೇಗೆ ?......(ನಿಶ್ಯಬ್ದಿಸುತ್ತಾ) ಇಲ್ಲ. ಸದ್ಯ ಮನೆಲಿಲ್ಲ —ಯಾರಯ್ಯಾ ನೀನು ?

[ನಿಶ್ಶಬ್ದಿಸಿ .... (ನೇಪಥ್ಯೇ) ಕ್ಷಮಿಸಿ ಸ್ವಾಮಿ. ... ಯಾರು ನೀವು ?... ಅಲ್ಲ ತಾವು ? ಯಾವ ಕಪ್ಪಣ್ಣೋರು ?]

ಆಗಂತುಕ : (ಒಳಗಿನಿಂದ) ನೀವೇನೂ. ತಾವೇನೂ ? ನನ್ನ ನೋಡೋದಕ್ಕೇನ ಬಂದೇ, ಕಪ್ಪಣ್ಣೋರು......ಸಕ್ಲೇಶ್ಪುರ್ದ ಕಪ್ಪಣ್ಣೋರು. ಇಲ್ಲಿವಾರೇನಾಡ ಕಿಟ್ಕಿಟ್ಕೀಲ್ ಬಂದದ್ದ್ ಸ್ವಾಮಿ. ಕ್ಷಮಿಸ್ಸಿ.

ಘೋಂಡೂ : ಪಳಕ್ಕ ಬನ್ನೀ ಸ್ವಾಮಿ.... .ಪಳಕ್ಕ ಬನ್ನಿ. [Ushers in a gentleman, be-mustached, be-turbaned, be-coated, be-spectacled and

bearing in spite of his distinguished personality and dignified manners, a not too distant a resemblance in point of nose eyes, height and build to the erstwhile, behind-in-rent tenant of Dhondu]

ಬಂದಾತ : ಕ್ಷಮಿಸ್ಸಿ ! ನನ್ ಸಾರೋಟು. ಈ ಓಣಿ ಮೂಲೇಲಿ ಕಾದಿದೆ. ಈ [illegible] ತಳ ಸಂಕ್ರಪಾದ ಹವ್ವಲ್ಲಿ ಕುದ್ರೆಗಳ್ಗೆ ಗಂಟ್ಲು ಕಟ್ಕೊಂಡ್ ಬಿಡುತ್ತ್ವೇ ಏನೋಂತ ಹೆದ್ರ್ಕೆ... ಕುದ್ರೆಗ್ಳು, ಪೆದ್ದ್ಯಡ್ ಕುದ್ರೆಗ್ಳು...ನಾಜೋಕು...ಅಷ್ಟೆ ಅಭ್ಯಂತ್ರ ವಳಗ್ಗೆ ಬರೋಕೆ ! ಹಾಂ. ಇದೇನ್ ಕೋಣ್ಕೇ, ಉಗ್ರಾಣ್ವೇ...ಕ್ಷಮಿಸ್ಸಿ...ಕೇಳ್ಬಹುದೇ ?

ಧೋಂಡೂ : ನಾಚ್ಕೆ, ಹೇಳ್ಕೊಳ್ಳೋಕೆ. ಇದು ಕಪ್ಪಣ್ಣೋರ ರೂಮು. ಬೆಡ್ರೂಮು ! ನನ್ ತಪ್ಪಲ್ಲಾ, ಅವರ್ದ್ದು.

ಬಂದಾತ : ಅಲ್ದೇ ಏನು ? ಅವನ್ನ, ನನ್ನತಮ್ಮನ್ನ ! ನನಗೊತ್ತಿಲ್ಲವೇ ! ಉಗ್ರಾಣದ ಸಾಮಾನು ತುಂಬಿದ್ರೇನೇ ಬೆಡ್ರೂಮು ಅವನ್ಗೆ ! ವಲೆ ಇತ್ಯಾದಿಗಳು ಇದ್ರೇನೇವೇಯೇ. ಆಫೀಸು ಅವನ್ಗೆ ; ಮೇಜು, ಡೆಸ್ಕು, ಕುರ್ಚಿಗ್ಳಿದ್ರೇನೇ ಅಡ್ಗೇಮನೇ ಅವನ್ಗೆ ! ನಂ ಕಪ್ಪು, ನನಗ್ ಗೊತ್ತಿಲ್ದೇ ! (ರೂಮನ್ನು ಸುತ್ತಮುತ್ತಲೂ ನೋಡುತ್ತಾ) ಇದೆಲ್ಲಾ ನೋಡ್ದೇ ಹೆಸ್ರಿಟ್ಟದ್ದು ನನ್ತಮ್ಮನ್ಗೆ "ಖಯಾಲಿ ಕಪ್ಪಣ್ಣಾಂ"ತ. ಒಳ್ಳೇ ಚೆನ್ನಾಗಿ ಹೊಂದುತ್ತೆ, ಬಿರ್ದ್ದು, ನನ್ನಮ್ಮಂಗೆ...(ಅನ್ನುತ್ತಾ, ಚಿನ್ನದ ಗಡಿಯಾರವನ್ನು ತೆಗೆದು ಗಂಟೆಯನ್ನು ನೋಡುವನು.)

ಧೋಂಡೂ : ಏನು ! ? ಅಲ್ಲಯ್ಯ........ಅಲ್ರಿ !........ಅಲ್ಲ ಸ್ವಾಮಿ...ಅಲ್ಲ, ಮಹಾಸ್ವಾಮಿ ! ಕಪ್ಪಣ್ಣೋರು ತಮ್ಮ ತಮ್ಮೋ ? ಅದ್ಹೇಗೇ, ತಮ್ಗೂ ತಪ್ಪಣ್ಣೋರ್ಗೂ ತಾರತಮ್ಯ...! ?

ಬಂದಾತ : ಅದಕ್ಕೇ "ಖಯಾಲೀ"ಂತ ಅನ್ನೋದು ನಮ್ ಕಪ್ಪೂನ. ಹುಟ್ಟಿದಾರಭ್ಯ !... ನನ್ನ ಸ್ವಭಾವ ನೋಡಿ, ನನ್ನ ತಂದೆತಾಯಿಗಳ ಹಾಗೆ ! ನಂ ಕಪ್ಪೂ, ಸ್ವಭಾವ್ದಲ್ಲಿ, ಸಮ್ಮಾತ ಬೆಂಕೀ ಭೀಮಣ್ಣೋರ ರಕ್ತ ಉಕ್ಕೀ, ಉಕ್ಕೀ, "ರಂಡೋಲ್ ರಂಗಣ್ಣ"—ನನ್ಹೆಸ್ರು—ಸಕ್ಲೇಶ್ಪುರದ್‌ಕಡೆ ನನ್ಹೆಸ್ರು—ರಂಡೋಲ್ ರಂಗಣ್ಣ, ತನ್ನ ಪಿತರಾರ್ಜಿತ ಸ್ವತ್ನ ಇಟ್ಕೊಂಡು ಅನುಭವ್ಸೋ ಪ್ರಭುತ್ವಕ್ಕಿಂತಾ, ಅವನ್ನಮ್ಮ ಸ್ವತ್ನ ಅರ್ಧಸ್ವದ್ ಹಕ್ಕೂ ವದರ್ಬಿಟ್ಟು, ಹರಕಲ್ ಧೋತ್ರ ಸುತ್ಕೊಂಡು, ಮುರುಕಲ್ ಮನೇಲಿದ್ಕೊಂಡಿದ್ರೂನೂವೆ, ಆವನು ಬೀರೋ ಬಿಂಕಾನೂ, ಬಡಾಯೂ ಧೋರಣ್ನೂ, ಸಮ್ಮಾತ ಬೆಂಕಿ ಭೀಮಣ್ಣೋರ ಸ್ವಭಾವ ಅವ್ನಲ್ಲೇ ಕಂಡ್ಬರತ್ತೇಂತ, ನಮ್ಕಡೆ...ನಂ ಸೀಮೇ. ಕಡೆ... ಸಕ್ಲೇಶ್ಪುರದ್ಕಡೇ, ಖಯಾಲೀಂತಾ ಬಿರುದಂಟ್ಸಿದ್ದು. ನನ್ನಮ್ಮ ಕಪ್ಪಣ್ಣನ್ಹೆಸರಿನ್ಮುಂದೆ...

ಧೋಂಡೂ : ಕ್ಷಮಿಸ್ಬೇಕು. ಮಹಾಸ್ವಾಮಿ, ಕೂತ್ಕೊಳ್ಳಿ. ಆ ಕಬ್ಬಿಣದ್ ಕಡಾಯಿ ಛೇ, ಆ ತಾಮ್ರದ...ಅಲ್ಲ...ಆ ಕಂಚು...ಒಳ್ಳೇ ಕಂಚು ಗ್ಯಾರಂಟಿ ಅಂತಾರಲ್ಲ. ಅದು, ಆ ಕಂಚ್ನಮಕ್ಗೇ ಮೇಲೆ ಕೂತ್ಕೊಳ್ಳಿ, ಅಲ್ಲ, ಅದ್ನ ಅಲಂಕರ್ಸಿ ! ನಾಚ್ಕೆ ಆಗುತ್ತೆ, ಹೇಳ್ಕೊಳ್ಳೋಕೆ. ಅಲ್ಲಾ, ಅನ್ಕೆ ಮಾಡೋಕೆ. ಅದ್ರೂನೂವೇ ತಮ್ಮತಮ್ಮ ಖಯಾಲೀಂತ ಹೇಳೋ ಅಧಿಕಪ್ರಸಂಗ್ನ ನನ್ಬಾಯಿಂದ ಹೊರಡದಿದ್ರೂನೂವೆ, ನನ್ನ ಮನಸ್ಸೂ ಹೊಳದದ್ದಕ್ಕೊಂಡು ದೃಷ್ಟಾಂತ ಹೇಳ್ತೀನಿ... ...ಮೇಜು, ಕುರ್ಚಿ, ನಿಲುಗನಡಿ, ಜಮಖಾನ, ಸೋಫಾ. ಇತ್ಯಾದಿಗಳು ಇರೋ ಕೋಣೇನಾ, ಅಲ್ಲ ರೂಮ್ನಾ, ಅತ್ನ ಸುಪರ್ದಿಗೆ ಅರ್ಪಿಸಿದ್ರೆ, ಈ ಕೋಣೇನೇ ಬೇಕೂಂತಾರಾತ ! ಇನ್ನು ಮುಗ್ಗಿ, ಬಿಸ್ಬೇಳೆ ಅನ್ನ, ಚಿತ್ರಾನ್ನ, ಇವ್ಗಳನ್ನ ಗುಡ್ಡಾ ಕಟ್ಟಿ, ಮೇಲಿಟ್ಟ ಜಿಲೇಬಿ. ಚಿರೋಟಿ. ಮುಂದ್ಗೆ, ಫೇಣೇನೂ ಪೇರ್ಸಿ ಸಾಲದ್ದಕ್ಕೆ ಸುರಳ್ಹೋಳೀನೂ ಜೋಡ್ಸಿ, ಕೈಕಟ್ಕೊಂಡು, ದಯಪಾಲಿಸಿ. ನಮ್ಮ ಹಸಿವುಗಾದ್ರೂ, ನಮ್ಮ ಸಂತೋಷಕ್ಕಾದ್ರೂ, ಇವುಗಳ್ನೆಲ್ಲಾ ಒಪ್ಪಿಸ್ಕೊಂಡು, ಈ ಅಡಿಗೇಸೆಲ್ಲ ಅಟ್ಟಿದ್ ನನ್ನ ಗೃಹಿಣೀ ಕೆಲ್ಸ ವ್ಯರ್ಥ್ವಾಗದ್ದಕ್ಕಾದ್ರೂ, ಒಪ್ಪಿಸ್ಕೋಬೇಕೂಂತ ಕೇಳ್ಕೊಂಡ್ರೆ, ದಂಪತಿಗಳು

ನಿಮ್ಮಿಬ್ಬರನ್ನೂ ತಾತ್ಸಾರಮಾಡಿ "ನನ್ಗೋಗ್ತೇಗೆ ಈ ಕೋಣೇನೇ ಸಾಕು, ತಂಗ್ಯನ್ನಾನೇ ಸಾಕೂಂ"ತ. ತವನ್ನಾಗೆ. ಅವರ್ಗ್ಯಿನಲ್ಲೊಬ್ಳ್ಯೇ ಹೋಳ್ತ್ಯೋ ಮಹಾಲಕ್ಷ್ಮೀ ಕಳೀನ ಸುಳ್ಳ್ ಮಾಡೋಕೆ ವ್ಯರ್ಥ ಪ್ರಯತ್ನ ಮಾಡೋ ತಮ್ಮ ತಮ್ಮ—ಅಲ್ಲ—ಅನುಜರ್ನ, ಏನೂರೀಂತ ತಾವಂದದ್ದು ಆಶಿಸೋಕ್ಕೆ ಅಲ್ಲಾಂತ್ ಹೇಳೋಕೆ, ತಮ್ ಸೇವಕ್ನಾದ ನನ್ಗೆ, ಯೋಗ್ತ್ಯೆ ಇಲ್ಲ—(ರಂಗಣ್ಣನು ಹಣೆಯನ್ನು ಬಡಿದುಕೊಳ್ಳುವುದನ್ನು ಗಮನಿಸಿ) ಇದ್ಯಾಕ್ ಮಹಾಸ್ವಾಮಿ ? ?

ರಂಗಣ್ಣ : ಯಾಕೇನು ! ? ಈ ಏಟಾಲೀ ತಮ್ಮ ಓಗ್ ಕಂಗೆಡ್ತಿದ್ರೆ, ನಮ್ಮ ತಾಯಿ ಗತಿಸ್ದಾರಭ್ಯ. ನಾನು ಕೈಕೊಂಡ ಜವಾಬ್ದಾರೀನ ತೀರ್ಸ್ಲೋ ಬಗೆ ಹ್ಯಾಗೇಂತ ಬಡ್ಕೊಳ್ತೀನೆ. ನನ್ನಣೇನ...ಗಂಡ್ಸು ಹಿಗ್ಗೋಳಾಡೋದ್ ತರವಲ್ಲ ! ಆದ್ರೂ ಗುಂಡ್ಗೆತುಂಬಾ ಕಟ್ಕೊಂಡಿರೋ ನನ್ ದುಃಖಾನ ಗುಟ್ಟಾಗಿಟ್ಕೊಂಡ್ ಕೊಬ್ಸೋದು, ನನ್ಗೂ ವಳ್ಳೇದಲ್ಲ. ಮನಸ್ಗೂ ವಳ್ಳೇದಲ್ಲ ...ಕಷ್ಟಾನ್ಮೇಲೆ ವಿಶ್ವಾಸ, ಕರುಣೆ, ಇರೋ ನಿಮ್ಮುಂದೆ ಕಕ್ಟೀ ನನ್ ಕೊರ್ತೇನ ಇಸ್ತಾರಮಾಡ್ತಾನೆ ಕಕ್ಕಿ ಶಾಂತಿಪಡ್ಕೊಂಡೇನು ನನ್ಮನಸ್ಗೆ...ನಾಲ್ಕುವರ್ಷಾನೂ ತುಂಬ್ದ ಬಾಲ್ಯ ನಾನಾಗ...ಕೈಕೂಸು ಕಪ್ಪು...ಅಂತ್ಯಕಾಲ ಅಮ್ಮನ್ಗೆ ; ಆ ಕೂಸಿನಂಗೈನೂ ನನ್ನಂಗೈನೂ ಜೋಡ್ಸಿ,...ಅವಳೇನೆ ಉಸಿರ್ನಲ್ಲಿ ಹೇಳ್ಕೊಂಡು...ಅಮ್ಮಾ....ಅವಳಾಶೇನ..."ರಂಗೂ...ಹೋಗ್ತಿಧೇನೆ. ನನ್ ಪರ್ಲೋಕದ್ಗತೀಗಿಂತ ಇಹ್ಲೋಕ್ದಲ್ಲಿ ಬಿಟ್ಹೋಗೋ ಈ ಕೂಸ್ನ ಮುಂದಿನಗತೀನೇ ಮುಖ್ಯ ನನ್ಗೆ. ನಿನ್ಗೀಗ ವಯಸ್ ಚಿಕ್ದಾದ್ರೂ, ಬುದ್ಧಿ, ಚಟುವಟ್ಕೆ ಹೆಚ್ಚು. ನನ್ಕಂದ...ಸಾಯೋವರ್ಗೂ, ನಿನ್ನೀ ಸಹೋದ್ರನ್ಗೆ, ತಂದೆ ತಾಯಿ, ಬಂಧು ಬಳಗ, ಗುರು, ಸ್ನೇಹ, ಸರ್ವಸ್ವೂ ನೀನೇ ಅಂಬೋದ್ನ ಮರೀ ಬೇಡ್ವನ್ ಕಂದಾ, ಮರಣಾಂತ್ವೂ ಮರೀಬೇಡಾ"ಂತ ನನ್ ತಬ್ಕೊಂಡು. ಕಪ್ಪಾನ ನನ್ಕೈಲಿಟ್ಟಿಟ್ಟು, ಇಹ್ಲೋಕ್ದಿಂದ್ ಹೋದ್ಳು...ನಮ್ಮಮ್ಮ. ನಮ್ಮಪ್ನೋ, ಇದನ್ನೋಡಿ ಕೊರ್ಗೀ, ಕೊರ್ಗೀ ಅವ್ರ್ ಸತ್ತಾರು ತಿಂಗ್ಳಲ್ಲೀ ಅಪ್ಪೂನ ಸತ್ತ...ಆಗ್ನಿಂದಾ ನೋಡ್ರಿ ಈಗಿನ್‌ವರ್ಗೂ, ನಾನೇ ಕಪ್ಪಣ್ಣಾಂತ ತಿಳ್ಕೊಂಡು ಬದ್ಕಿದೇನೆ ಹೊರ್ತು, ರಂಗಣ್ಣ, ರಂಡೋಲ್ ರಂಗಣ್ಣಾ ಅಂತ—ನಿಮ್ಮಂಥವರ ಮುಂದೆ ನಟಿಸ್ಬೇಕಾಗಿದ್ದೇ ಹೊರ್ತು, ನಮ್ಮವ್ ಸತ್ತಾಗ್ನಿಂದ ನಾನೇ ಕಪ್ಪಣ್ಣನ್ನಾಗೇ ಭಾವಿಸ್ಕೊಂಡಿದೇನೆ, ಈಗ.......[ಎಂದು ಬಿಕ್ಕಿ ಬಿಕ್ಕಿ ಅಳುತ್ತ, ಜೊತೆಯಲ್ಲಿಯೂ ಬಿಕ್ಕಿ ಅಳುವ ಧೋಂಡುವಿನ ಹೆಗಲ ಮೇಲೆ ತಲೆಯನ್ನು ಇರಿಸುವನು.]

ಧೋಂಡೂ : (ರಂಗಣ್ಣನನ್ನು ಎರಡು ಕೈಯಿಂದಲೂ ತಬ್ಬಿಕೊಂಡು ಬಾಷ್ಪಧಾರೆಯನ್ನು ಕಾರುತ್ತಾ) ಸ್ವಾಮಿ, ಸಂತೈಸ್ಕೊಳ್ಳಿ, ಸಂತೈಸ್ಕೊಳ್ಳಿ....... ಈ ನಿಮ್ಮ ತಮ್ಮನ್ನ. ಅತ್ನಂತಸ್ತೂಗ, ತವ್ಮ್ ಮನಶ್ಯಾಂತಿಗೂ ಸರಿಯಾಗ್ ತರೋಕೆ. ಸಹಾಯಮಾಡ್ಬೇಕೂಂತ ತಯಾರಾಗಿರೋ, ಧೋಂಡೂರಾಯ ನಾನಿರೋವಾಗ್ಯೆ, ನೀವ್ ಹೀಗೆ ನನ್ನನೇರಿ ಕಣ್ಣೀರ್ ಸುರ್ಸೋದು. ನನ್ನ ಹೃದ್ಯಾನ ಕರಗ್ಸುತ್ತೆ ; ಅಲ್ದೆ, ಹೀಗೆ ಕಣ್ಣೀರ್‌ಸುರ್ಸೋದು ಕಮ್ಮಿ.! ಮಹಾಸ್ವಾಮೀ. ನನಗ್ ತಮ್ಮೇಲೂ ತಮ್ಮ ತಮ್ಮನ್ ಮೇಲೂ ಇರೋ ಅಭಿಮಾನಕ್ಕೆ ಕಮ್ಮಿ !!

ರಂಗಣ್ಣ : ಧೋಂಡೂ,—ಇನ್ಮೇಲ್ ನಿನ್ನ, ರಾಯ್ರೇ ಅಂಬೋದು ಅಪ್ಮಾನ. ನಿನ್ಗೂ ನನ್ಗೂ...ಕಪ್ಪೂನ ಕಾಪಾಡೋ ಭಾರಾನ್ವಹಿಸ್ಕೊಂಡಿರೋ ನಮ್ಮಿಬ್ರಿಗೆ ಈಗ್ನುಟ್ಟಿರೋ ಪರಸ್ಪರ ಅನುರಾಗ ಬಂಧಕ್ಕೂ ಅಪ್ಮಾನ, ಧೋಂಡೂ. ಅಪ್ಮಾನ......... ಕಪ್ಪೂನ್ ಕಾಪಾಡೋದಕ್ಕೆ ವಂದೇ ದಾರೀ : ಯಾವ್ದಾರೀನ ನನ್ ಹಿರಿಯ್ರು. ನನ್ನಿಂದ ಹಿಡ್ದಿದ್ರೋ...ನೀವ್ ಯಾವ್ದಾರೀನ್ ಹಿಡಿದ್ರೋ. ಅದೇದಾರಿ...ಮದ್ವೆ, ಗೃಹಸ್ಥಾಶ್ರಮ....ಜವಾಬ್ದಾರಿ...ಮನೆ. ಮನೆ ಯಾಕೆ. ಮಕ್ಳು. ಕಷ್ಟ. ಸುಖ. ಗೀತೇಲ್ ಹೇಳೋಹಾಗೆ "ಲಾಭಾಲಾಭೌ ಜಯಾಜಯೌ"...ಕಪ್ಪೂ ತನ್ನ ಜವಾಬ್ದಾರೀನ ತಾನೇ ವಹಿಸ್ಕೊಂಡು. ತನ್ಕುಲ. ತನ್ಗೋತ್ರ. ತನ್ರಕ್ತ. ಇತ್ಯಾದಿಗಳಿಗೆ ಅನುವಾಗಿ ತನ್ನಂತನ್ನನ್ನ ಕಾಪಾಡ್ಕೊಳ್ಳೀಬೇಕೂಂಬೊ ಜವಾಬ್ದಾರೀನ ಧೋಂಡೂ. ನಮ್ಮಿಬ್ರ ಜವಾಬ್ದಾರೀನೂ ಬಿಡಿಸ್ಕೊಂಡು. ನಿಶ್ಚಿಂತ್ಯಾಗಿ, ನಮ್ಮಿಬ್ರ ಸರ್ವಸ್ವಕ್ಕೂ ಸಮ್ಮಾಗಿಯಾಗಿ ನಕ್ಲೇಶ್ಪೂರ್ವಕ ಸಕುಟುಂಬ ಸಂತೋಷ್ಪಡೋಕೆ ವಂದೇ ದಾರಿ........ಕಪ್ಪೂಗ್ ಮದ್ವೆ ....!!!

ಧೋಂಡೂ : ಹೌದ್‌ಸ್ವಾಮಿ ...... ಅತ್ಗಿಗೂ ವಯಸ್ಸು...ಬುದ್ಧಿ...!

ರಂಗಣ್ಣ : ವಯಸ್ಸು, ಬುದ್ಧಿ, ದೇವ್ರೇಗತಿ! ಅವ್ನ ಐದ್ನೆ ವಯಸ್ನಲ್ಲೇ ನಂ ಸೋದರ್ಮಾವನ್ ಮಗಳ್ನ ನಿಶ್ಚಯ್ಸಿದ್ರು ಹಿರಿಯ್ರು...ಈ ಗಂಟ್ನ ತಪ್ಪಿಸ್ಕೊಳ್ಳೋಕೆ ಎಂಥೆಂಥಾ ಘಟ್ಟಿಗ್ತನ ತೋರಿಸಿಧಾನೇಂತ ಕೇಳಿಧೀರಾ !! ಅಯ್ಯಯ್ಯೋ !!...ಈಗಾ ಹುಡ್ಗಿ ಓದಿ S.S.L.C. First classನಲ್ಲಿ ಪ್ಯಾಸ್ಮಾಡ್ಬಿಟ್ಟಿಧಾಳೆ...ಇವ್ನೋ, B.A. ವರ್ಗೂ ಬಂದಿದ್ರೂನೂವೆ "ನನ್ನ S.S.L.C. II class ನಲ್ಲೇನೇ ಪಾಸ್‌ಮಾಡಿದ್ದು...'ನಿನ್ಗಿಂತ ನಾನೇ ಘಟ್ಟಿಗ್ಳೂ'ಂತ ನನ್ನೆ ಹಂಡ್ತಿ ಮುಂದಕ್ಕೆ ನನ್ನೇ ಹೀಯಾಳ್ಸೋ ಅವಸ್ಥೆಯಿಂದ ತಪ್ಪಿಸ್ಕೊಳ್ಳೋದು ನನ್ ಗಂಡಸ್ತನದ ಭಾರಾಂ"ತ, ಕಲ್ಯಾಣದ ವಿಷ್ಯದಲ್ಲೂ, ಖಯಾಲಿತನಾನ ಸಾಧಿಸ್ತಿಧಾನೆ, ನಂಕಪ್ಪೂ.

ಧೋಂಡೂ : ಮತ್ ಹೀಗವ್ರು ಮುಷ್ಕ್ರ ಹಿಡದ್ರೆ ವಿವೋಹ್ಕೆ ಹೇಗ್ಸ್ವಾಮಿ ? ನಾವಿಬ್ರೂ ಎಷ್ಟ್‌ಕಷ್ಟಾದ್ರೂಗ್ಲೀ...ಎಷ್ಟ್ ಖರ್ಚಾಗ್ಲೀ ಮಾಡ್ಸೇಬಿಡ್ಬೇಕೂಂತ ನಿಶ್ಚಯ್ಸಿರೋ ಅತ್ನ ಮದ್ವೇಗೆ ದಾರೀ ಹೇಗೆ ?

ರಂಗಣ್ಣ : ನನ್ನಿಂದ್‌ಮಟ್ಟಿಗೇನೇ ಆಗ್ದ ಕೆಲ್ಸಕ್ಕೆ ನಿನ್ನ್ ಸಹಾಯಾನೂ ಸೇರಿದ್ರೆ, ಫಲ್ಸೇ ಬಿಡುತ್ತೆ, ನಿನ್ನಾ ನನ್ನ ನಿಮಿತ್ತ...ಮೊದ್ಲು ಕೆಲ್ಸ, ಕಪ್ಪೂನ ಸಕ್ಲೇಶ್ಪುರಕ್ಕ್ ಸಾಗಿಸ್ಬಿಡೋದು. ಈಗೊಳ್ಳೇ ನೆಪ ಸಿಕ್ಕಿದೆ ; ನನ್ ಸೋದ್ರಮಾವ್ನ ಮಗನ್ಮದ್ವೆ.........ಮನ್‌ತನ್ದ ಮುಖಂಡ್ರೆಲ್ಲಾ ಜಮಾಯಿಸ್ಲೇಬೇಕು...ನಮ್ಮನೇಯಿಂದ ನಾನ್ಮಟ್ಗೆ ಹೋಗ್‌ನಿಲ್ಲೋದು ಚನ್ನಾಗಿರೋದಿಲ್ಲ... ಕಪ್ಪೂನೂ ಹಾಜ್ರಾಗಿರ್ಬೇಕಾದ್ನ ಅವ್ನ ಮನಸ್ಗೆ ಮಂದಟ್ಮಾಡ್ಸೋದು ನಿನ್ಭಾರ.

ಧೋಂಡೂ : ಅಯ್ಯೋ ಮಹಾಸ್ವಾಮಿ, ನನ್ನಿಂದೇನಾದೀತು !

ರಂಗಣ್ಣ : ಮಾತ್ಯಾಡ್ಬೇಡ ಧೋಂಡು ! ಎಷ್ಟ್ ಖರ್ಚಾಗ್ಲೀ ನನಿಗೆ, ಇಲ್ಲಿಂದ್ ಹೊರಡ್ಸೇ ಬಿಡ್ಬೇಕು ಕಪ್ಪೂನ ! ಅವ್ನೀಗಿಲ್ಲೆಲ್ಲಾದ್ರೂ ಸಾಲ ಪಾಲ ಮಾಡಿರ್ತಾನೆ ! ಅದ್ನೆಲ್ಲಾ... ನಾನ್ಕೊಟ್ಹೋಗ್ತೇನೆ, ದುಡ್ಡು, ಅದ್ರಲ್ಲ್ ತೀರಿಸ್ಬಿಡು. ಬಾಕೀ ದುಡ್ನಲ್ಲಿ ಅವ್ನಿಗ್ಬೇಕಾದ ಸಾಮಾನ್ಸರಂಜಾಮು, ಬಟ್ಟೆಬರೆ ತರ್ಸೊಕ್ಕಟ್ಟು, ಕಾಲಿಂದ್ವೊದ್ದೋ, ಇಲ್ಲ ಕಾಲಿಗ್ಬಿದ್ದೋ ಕಳಿಸ್ಕೊಡೋದ್ ನಿನ್ಭಾರ .... (ಜೋಬಿನಲ್ಲಿ ಕೈಹಾಕುತ್ತಾ) ಸಾಲ, ಎಷ್ಟಿದ್ಯೋ,......... ಅವ್ನಿಗೆ ? ....

ಧೋಂಡೂ : ಏನ್ ಜಾಸ್ತಿಯಾಗೇನಿಲ್ಲ ಸ್ವಾಮಿ. ಬಾಡ್ಗೆ ಬಾಬ್ತು, ಒಂದೆಪ್ಪತ್ತೈದ್ರೂ ಪಾಯಿ, ಚಿಲ್ರೆ ಹದಿನಾಲ್ಕಾಣೆ........

ರಂಗಣ್ಣ : (ಜೋಬಿನಲ್ಲಿ ಕೈಹಾಕಿಕೊಂಡು ಗೊಣಗುತ್ತಾ) ರೈಲ್ವೆಛಾರ್ಜು ಚಿಲ್ರೆ ನೂರ್ರೂಪಾಯಿ ! ಕುದ್ರೆಗಾಡಿ ರೋಡ್ನಲ್ಲೇ ಬಂದ್ಬಿಡುತ್ತೆ. ಒಂದ್‌ಕುದ್ರೆ ಖುಲ್ಲಿ....,ಚಕ್ರಕ್‌ಚರ್ಬಿ... ಸಮಿಯತ್ಬೇಗ...ಲಾಳ, ಪಂದ್ಯದ್ಕುದ್ರೆ, ಗೊರ್ಸು ನಾಜೋಕು...ರಸ್ತೆ ಅನ್ಯಾಯ...ಒಂದ್ ನೂರ್ರೂಪಾಯಿ ! ಮೇಲ್ ಖರ್ಚೊಂದೈವತ್ತು. ಜುಮ್ಲಾ ಇನ್ನೂರೈವತ್ತು ! ಹಾಗಾರ್ ನನ್ ಸಾವಿರ್ರೂಪಾಯಿನ್ನೋಟ್ನಲ್ಲಿ ಬಾಕಿ ಏಳ್ನೂರೈವತ್ತು ಇದ್ಮೇಲೆ. ಕಪ್ಪೂನ್‌ಸಾಗ್ಸೋ ಖರ್ಚ್ಗೆ, ಸದ್ಯ ಕೊಡೋದ್ ಕಷ್ಟ...ಬಾಕೀ ಇದ್ರೆ, ಬೆಳಿಗ್ಗೆ wire ಮಾಡ್ಬೇಕಾಗುತ್ತೆ. (ಗಟ್ಟಿಯಾಗಿ)...ಎಷ್ಟೂಂತ ಹೇಳಿದ್ರಿ, ಬಾಡ್ಗೆಬಾಬ್ತು ?

ಧೋಂಡೂ : ಜಾಸ್ತಿ ಏನೂ ಇಲ್ಲ...ನೂರಹದ್ನೇಳ್ರೂಪಾಯಿ, ಹನ್ನೆರ್ಡಾಣೆ ಚಿಲ್ರೆ.

ರಂಗಣ್ಣ : (ಆ) ಹೂಂ ! ಹೂಂ ! ಚುಡಾಯ್ಸು ಚುಡಾಯ್ಸು (ಪ್ರ) ಆಂ ! ನೂರಕ್ಮೇಲೇ ....ಇನ್ನೂರು ಆಸ್ನಿ...ಚಿಲ್ರೆ ಏನೂ...ಇನ್ನಿದಲ್ದೆ ಏನಾದ್ರೂ ಸಾಲ ?...

ಧೋಂಡೂ : ಅಲ್ದೆ ಏನು ! ಅದೂ ಇದೂ, ಚಿಲ್ರೆ........

ರಂಗಣ್ಣ : ಸರಿ. ಇನ್ನೂರೈವತ್ತು ದಟ್ಟಲ್ಲಿ. ಇಟ್ಕೋಡು. ಧೋಂಡೂ. ನನ್ಹತ್ರ ಇರೋದು ಸಾವಿರ್ರೂಪಾಯಿ ನೋಟು ; ನಾನೂ. ಗಾಡಿ. ಕುದ್ರೆ. ಸಾರೋಟ್ನ ಬಾಡಿಗ್ಗೆ ರೊಕ, ಇನ್ನೂರೈವತ್ತಾದ್ರೂ ಬೇಕೇ ಬೇಕು ; ಬಾಕೀ ಏಳ್ನೂರೈವತ್ತು ನಿನ್ಹತ್ರ ಕೊಟ್ಟಿರ್ತೀನಿ (ಒಂದು leather purseನ್ನು ಹೊರಗೆ ತೆಗೆಯುತ್ತಾ) ಅದ್ರಲ್ಲಿರೋ ಸಾಲದಾ ಅಲ್ವಾ. ರೈಲ್ವೆ ಛಾರ್ಜು ವಗೈರೇಗೆ ಒಂದ್ನೂರ್ ರೂಪಾಯ್ನೂ ಕೈಲ್ಕೊಟ್ಟು. ಇನ್ನುಳಿದ್ದೆಲ್ಲಾ ಏಕೆ ಕೈಲಿ ಬರೋದಿಲ್ಲ ಅಪ್ಪ...... ಅದೂ ಮದ್ವೆ ಮನೆ...ಏನಾದ್ರೂ ಅದ್ರು ಮನಸ್ಸಿಗೆ ಗಾಭರಿ ಘಟ್ಟಸಿಧ, ಅವನ್ ಸ್ವಭಾವದಲ್ಲಿ......ಒಂದ್‌ಜೊತೆ ಧೋತ್ರ. ಒಂದ್ ಛಾಪೀ ಸೀರೆ. ಇಷ್ಟ ತಾ. ಕೊಂಡ್ಕೊಟ್ ಕಳಿಸ್ಬಿಡವನ್ಕ್ಯಲಿ ! ಬಾಕೀ ಏನು, ದುನ್ನೂರು ಕೂಡ ಮಿಗಬಾರ್ದು. ಅಲ್ಲಿದ್ದಂತೂ. ನಾಳೆ ಬೆಳಗ್ಗೆ ನಾನ್ ಪೋಗುತ್ಲು wire ಮಾಡ್ತೇನಲ್ಲ, ಒಂದೈನೂರುರೂಪಾಯಿ. ದಾರಿಸ್ತ್ಯ. ಅದ್ನೂವೇ ಸೇರಿಸ್ಕೊಂಡು, ನೀನು. ನಿನ್ ಗೃಹಿಣೀನೂ, ಮಕ್ಳೂ. ಸಕ್ಲೇಶ್ಪುರಕ್ಕೆ ಬನ್ನೇಳಿ. ನಾವಿಬ್ರೂ ಕೈಹಾಕಿರೋ ಕೆಲ್ಸಾನ ಸಾಂಗೋಪಾಂಗ್ವಾಗಿ ನೆರ್ವೇರಿಸ್ಕೊಡೋದೇ ಪರೀಕ್ಷೆ, ನಿನ್ನ ನನ್ನ ಸ್ನೇಹಕ್ಕೆ. ನನ್ಹತ್ರಿರೋ ಸಾವಿರ್ರೂಪಾಯಿ. ವಂದೇ ನೋಟು. ಇನ್ನೂರೈವತ್ರೂಪಾಯಿ ಕೊಟ್ಬಿಟ್ಟು ನನಗೆ, ಬೇಗ ಕಳಿಸಿಬಿಡು......ಇನ್ನವನ್ ಬರೋವಾಗ ನಾನಿಲ್ಲಿದ್ರೋ. ಏನ್ಮಾಡ್ತಾನೆ. ನನ್ಮುಖ ಕಣ್ಣಿಗ್ ಕಾಣಿಸ್ದಾಗೆ.

ಧೋಂಡೂ : ಇನ್ನೂರೈವತ್ರೂಪಾಯಿ ಎಲ್ಲಿಂದ್ ತರ್ಲಿ, ಮಹಾಸ್ವಾಮೀ!? ಇನ್ನಹೊತ್ತೆ Post-Officeoo ಇಲ್ಲ, Bankoo ಇಲ್ಲ !. ನಿಮ್ಮ ಸಾವಿರ ರೂಪಾಯಿ ನೋಟ್ನ ಮುರ್ಸ್ಕೋಕೆ !

ರಂಗಣ್ಣ : ಹಾಗಾರ್ ನನ್ನೋಟಿಟ್ಕೊಂಡು ಬೆಳಿಗ್ಗೆ ಚಿಲ್ರೆ ಮಾಡಸ್ಕೋ ಸದ್ಯ ಅವೇನ್ ದುಡ್ಡಿದ್ಯೋ, ಅದ್ನೆಲ್ಲಾ ಕೊಟ್ಬಿಡಿಲ್ಲಿ.

ಧೋಂಡೂ : ಬಾಡ್ಗೆ ವೊಬಲಗು ಇತ್ಯಾದಿ ಒಂದೆಪ್ಪತ್‌ರೂಪಾಯಿ ಚಿಲ್ರೆ ದೇರಿಲ್ಲ ಮಹಾಸ್ವಾಮಿ, ನನ್ನಕೈಲಿ, ಮನೇಲಿ. ಅಲ್ದೆ ನನ್ಹೆಂಡ್ತಿ ಹತ್ರ ಒಂದ್ ಮೂವತ್ರೂಪಾಯೋ. ಮುವ್ವತ್ತೈದ್‌ರೂಪಾಯೋ...

ರಂಗಣ್ಣ : ನೂರೈದ್‌ರೂಪಾಯಿ !...ಸಾಲ್ದು ಧೋಂಡೂ ! ನಿನ್ನೂರರೂಪಾಯ್ನ ನಾನ್ಕೊಡ್ದಿದ್ರೆ, ಸಾರೋಟು ಹಿಂದ್‌ಬಿದ್ಬಿಡುತ್ತೆ......ವರಪೂಜೆ, ಮೆರ್ವಣ್ಗೆ. ಎಲ್ಲಕ್ಕೂ car ಆಗೋದಿಲ್ಲ. ಸಾರೋಟೇ ಮನೆತನದ ಮಾಮೂಲು ! ಸಾರೋಟು ಕಳ್ಸಿದ್ರೋ, ನಾನ್ ಹಿಂದ್ಬೀಳ್ತೀನೆ. ಪರ್ವಾ ಇಲ್ಲ. ನನ್ನ ಜೊತೇಲಿ ಬಾ, Stationಗೆ ! ಚಿಲ್ರೆ ಮಾಡಿಸ್ಕೊಡ್ತೇನೆ ನೋಟ್ನ ! ಅಂ ! ...ಬೇಡ, ಬೇಡ ! ನಮ್ಮಿಬ್ರಲ್ಲಿ, ವಬ್ನೂವೆ ಕಪ್ಪ ಬಂದಾಗ ಇಲ್ಲಿ ಇಲ್ಲದಿದ್ರೆ ಅನಾಯಾಸೇ ಪರಾರಿ ಆದಾನು ! ಈಗ ಸಧ್ಯ ನಿನ್ನಹತ್ರ ಚಿಲ್ಲರೆ ಇದೆ. ನೂರೊ ನೂರೈದು ರೂಪಾಯೊ ! ಬೆಳಿಗ್ಗೆ ಹೋಗಿ ಸೇರತ್ಲೂನೂವೆ ಏಳ್ನೂರು ಐವತ್ತು ರೂಪಾಯಿಗೆ ಬದಲಾಗಿ ಸಾವ್ರಕೆ wire ಮಾಡ್ಬಿಡ್ತೇನೆ ! Post Officeನಿಂದಿಸ್ಕೋ ! ಏತನ್ಮಧ್ಯೆ ನಿನ್ನ ಚಿಲ್ರೆ ನೂರೈದು ರೂಪಾಯಿ ಕಪ್ಪಾಗೆ ಕೊಟ್ಟು ಅವನ್ನ ರವಾನಿಸಿ ಬಿಡು. ನೀನೂವೆ ಕೋಟಿಸ್ಕೋಬೇಡ...ಬರೀಕೈಲಿ ಬಂದ್ಸೇರ್ಬೇಡ ! ನನ್ನ ಸಾವಿರರೂಪಾಯ್ನ Freeಯಾಗಿ...ಖರ್ಚುಮಾಡು ! ಏನೂ ಇಲ್ಲ. ವಧೂವರರಿಗೆ. ಅರ್ಶಿನ ಕುಂಕ್ಮ. ಒಂದಿಷ್ಟು ಗಂಧ. ಒಂದು ಸೀರೆ. ಒಂದುಜೊತೆ ಪಂಚೆ. ಒಂದು ಕಾ ....ಯಥಾಶಕ್ತಿ...ಅದ್ಕೊಂಡುಮಟ್ಟಿಗೆ ಮರೀಬೇಡ ; ಕಪ್ಪಾನ ಮಟ್ಟಿಗೆ, ನಾನ್ಹೇಳ್ದಾಗೆ, ಕಾಲಿಂದ್ಕೊದ್ದೋ. ಕಾಲಿಗ್ಬಿದ್ದೋ ರವಾನ್ಸೇಬಿಡ್ಬೇಕು. ರಾತ್ರೆ ರೈಲ್ನಲ್ಲಿ...ಇನ್ನು ನಾನ್ಹೊರಟೆ... ಇಲ್ಲಿದ್ದು. ಅವನ ಕಣ್ಗಣ್ಣಿಗೆ ಬಿದ್ದನೋ. ಅಪಾಯ.......ಬರ್ತೇನೆ. ಧೋಂಡೂ !!

(ಧ್ಯೋಂಡೂವಿನ ಎರಡುಕೈಗಳನ್ನು ಜೋಡಿಸಿ ಹಿಡಿದುಕೊಂಡು)

ಕಪ್ಪೂನ ಕಾಪಾಡಿ ಅವನದೊಂದು ಸಂಸಾರಾನ ಕುದರ್ಸಿ, "ಕುಟುಂಬ ಮುರ್ದ ಕುಬೇರ್ರೂ"ಂತ, ನೆರೆಹೊರ್ನ್ಯೋರು ಹೀಯಾಳ್ಸೋ, ನಮ್ಮ ಮನೆತನದವರ ಮಾನಾನ ಕಾಪಾಡೋದು ನಿನ್ನಭಾರ. ಇನ್ನೇನು ಹೇಳೇನೂ...ನಿನ್ನ ಹೃದಯಕ್ಕೇನು ಗೊತ್ತೊ...ನಿನ್ನ ಹೃದಯಕ್ಕೇನೇ ಗೊತ್ತೂ. ನಿನ್ನ ಗುರ್ತಾಗಿ ಒಂದು ಮುಕ್ಕಾಲುಗುಂಟೆ ಕೂಡ ಇಲ್ಲ. ಆದ್ರೂನೂವೇ, ನಮ್ಮಿಬ್ಬರ್ನೂ ಸೇರ್ಸಿ, ಆಮರಣಾಂತ ಸ್ನೇಹವನ್ನು ಕಲ್ಪಿಸಿದ, ಆ ಕಪಟನಾಟಕ ಸೂತ್ರಧಾರ್ನ ಮಹಿಮೇನ ಎಷ್ಟು ಹೊಗ್ಳಿದ್ರು ಸಾಲ್ದು. ಬರ್ತೇನೆ. ಧೋಂಡೂ...ನಿನ್ನೈಲು, ಹನ್ನೊಂದುಘಂಟೇಗೆ ನಾಳೆ, ಮರೀ ಬೇಡ...whole compartment ಏ engage ಮಾಡ್ಕೋ............ಖರ್ಚುಮಾಡೋಕ್ ಹಿಂಜರೀಬೇಡ...wireoo ಹತ್ಘಂಟೇಹೊತ್ಗೆ ಬಂದು ಸೇರ್ಬಿಟ್ಟಿರುತ್ತೆ......Expressoo ! ordinary ಅಲ್ಲಾ. ಬರ್ತೇನೆ...ಮುಬ್ಬಿ ಕಪ್ಪೂವಿನ ಸುಖ...ನಮ್ಮಿಬ್ರ ಸೌಖ್ಯ !

(ಚಿನ್ನದ ಎರಡು ಗಡಿಯಾರಗಳನ್ನೂ ಮತ್ತೆ ತೆಗೆದುನೋಡುತ್ತಾ)

ಓಹೋ !!......ಓಹೋ......ಓಹೋ !!!......

[ಎಂದುಕೊಂಡು ನಿಷ್ಕ್ರಮಣ]

ಧೋಂಡೂ : (ಆತ್ಮಗತಂ) ಇದೇನಾಶ್ಚರ್ಯ ! ಇಹ್ಲೋಕ್ದಲ್ಲಿ......ಆ ಕೋಟು......... ಕರೀಬನಾತು............ಗಜ ಹದಿನೈದು ರೂಪಾಯೋ ! ? ಗಜ್ದ ಬೆಲೆ ಭಗವಂತನೇ ಬಲ್ಲ... ನಾಲಕ್ಕು ಬೆರಳಂಚಿನ ಜರ್ತಾರಿ......ರುಮಾಲ್ಗೆ......ಇನ್ನು ಜೋಬಿನಲ್ಲೊಂದು ಗಡಿಯಾರ... ಸರಪ್ಣಿ ಸರಾಸರಿ ಎಂಟು ಸವರನ್ನಾದರೂ ಆಗಿರ್ಬೇಕು...ಅಲ್ದೆ...ಕೈಗೊಂದ್ ಗಡಿಯಾರ... ಇನ್ನಲ್ದೆ ಆತ್ನ ಧೋತ್ರ...ಆತನ ಗಂಭೀರ...ಆತನಧ್ವನಿ...ಇಷ್ಟೂನೂ ಇಲ್ದೆ ಈ ಪ್ರಾಣಿ ಬಂದಿಧೆ ! ವಂದ್ವರ್ಷದಿಂದ ಬಾಡ್ಗೇನೂ ಕೊಡ್ದೆ, ಆರು ತಿಂಗಳಿಂದ, ಅರ್ಧಹೊಟ್ಟೇಗೆ ತಿಂತಾ ಬದಕ್ತಾ ಇರೋ ಕಪ್ಪಣ್ಣೋರೂಂತ್ಲೇ ತಿಳಕೊಳ್ತಿದ್ದೆ. ಈತನ ಮೂಗ್ನೂ...ಕಣ್ನೂ ನೋಡಿದರೆ !!...ಆದ್ರೇನು ?... ಅಶ್ವಿನೀಕುಮಾರ್ರಿರ್ಲಿಲ್ವೆ !...ನಕುಲ ಸಹದೇವರಿರಲಿಲ್ಲವೆ !...ಲವಕುಶರಿರಲಿಲ್ಲವೆ ! ...ಇದ್ರು... ಆದ್ರೂ, ಅವ್ರೆಲ್ರೂ ತಕ್ಕಮಟ್ಟಿಗೆ, ವಂದೇ ಸ್ವಭಾವ. ಇವ್ರಿಬ್ರಲ್ಲೋ ರಂಘೋಲ್ ರಂಗಣ್ಣೋರೆಲ್ಲಿ ? ಖಯಾಲಿ ಕಪ್ಪಣ್ಣೋರೆಲ್ಲಿ ?...ಇವಗೋತ್ರ ಕುಲ...ಮನ್ತನ...ಇವ್ರುಗಳ ಗೌರ್ವ ಮರ್ಯಾದೆ, ಇವ್ರುಗಳ ದುಡ್ಡು ದುಗ್ಗಾಣಿ, ಕಾಸು, ಖರ್ಚು, ವೆಚ್ಚ ಇವುಗಳ್ನೆಲ್ಲಾ ಹಿಂದಿಟ್ಟು, ಕಪ್ಪೂನ್ ಕಾಪಾಡ್ಬೇಕೂಂತ, ಸಕ್ಲೇಶ್ಪುರ್ದಿಂದಿಲ್ಗೆ...ಇಲ್ಲಿಂದ್ ಸಕ್ಲೇಶ್ಪುರಕ್ಕೆ ಹಾರಾಡ್ತಿರೋ ಅಗ್ರಜನ್ನೂ,......ಆ......

(ಹಗ್ಗದಿಂದ ಕಟ್ಟಿರುವ ಸಂದೂಕವನ್ನು ಸೂಚಿಸುತ್ತಾ)

ಸರ್ವಸ್ವಾನೂ ಬಿಟ್ಟು ಒದ್ದಾಡ್ತಿರೋ ಈ ಅನುಜನ್ನೂ ಗಮನಿಸ್ದ್ರೆ...ಅಣ್ತಮ್ಮಂದ್ರಾದ್ರೇನು, ಅಕ್ಕತಂಗೀರಾದ್ರೇನು ಬಾಡ್ಗೆ ಕೇಳೋನು, ಬಾಡ್ಗೆ ಕೊಡೋನು ಆದ್ರೇನೂ...ಇದೆಲ್ಲಾ ಮಾಯೆ ! ಸಂಸ್ಕಾರ ವಾಸನೆ, ಪುರಾಕೃತ ಬಾಂಧವ್ಯ, ಕರ್ಮಾಂತರ ಪರೀಕ್ಷೆ!...ಆದ್ರೂನೂವೆ, ಈ ಮಹತ್ಪ್ರಾಣೀ ಯೋಗ್ತೇಗೆ ತಕ್ಕ ಸ್ವಾಗ್ತಾನ ಅರ್ಪ್ಸೋ ಯೋಗ್ತ್ಯೇ ನನಗಿಲ್ದಿದ್ರೂನೂವೆ, ಒಂದ್ ವರ್ಷ ಅಜ್ಞಾತ ವಾಸಾನ ನನ್‌ಗೃಹ್ದಲ್ಲಿ ತೀರಿಸ್ದ ಈ ಜಗದುತ್ಕೃಷ್ಟ ಜಂತು, ತಿರಿಗೀ ಕೋಣೇಗೆ ಈಗ್ಲೋ ಆಗ್ಲೋ ಬರೋವಾಗ... ತಿಲದಷ್ಟು ಕಾಷ್ಟ ಧೂಳೀನೂ ಬಿಡ್ದೆ. ಮತ್ತೆ ತಂಗ್ಬಾಳ್ಗೆ ತೆಗೆದು ಹಾಕೋದ್ ನನ್ನಾರ...ಖಯಾಲೀನೋ ಕಪ್ಪಣ್ಣೋರು ! ?......ಅದೇನ್ ಹಣೇಬರ್ಹವೋ ಕಾಣೆ ! ನಮ್ಜಾಗಿಲ್ದೆ ಇರೋರು ಹುಚ್ಚೂಂತ ನಮಗ್ತೋಚತ್ತಲ್ಲಾ, ಹಾಗ್ಯೇ ಆ ಹುಚ್ಚರ್‌ಕಣ್ಗೆ ನಾವು ಹುಚ್ಚೂಂತ ತೋಚಬಹ್ದೂಂಬೋದು ಹೊಳ್ಯೋದಿಲ್ಲ ನಂವಿಂದ್ಲಗೆ...ಮಹಾತ್ಮಾ ಗಾಂಧೀ ಇಲ್ವೇ...ಅಪ್ಪ ದಿವಾನ......ತಾತ ದಿವಾನ......ತಾನು ಬ್ಯಾರಿಸ್ಟ್ರು......ಇದ್ನೆಲ್ಲಾ ಬಿಟ್ಬಿಟ್ಟು "ಭಾರತಮಾತೆ ಹೆತ್ತಮ್ಮನ್‌ಗಿಂತ ಹೆಚ್ಚು, ದೇಶದ್‌ಸುಖ ನನ್ನುಖಕ್ಕಿಂತ ದೊಡ್ಡು"ಂತ್ಹಟಹಿಡ್ದು, ಲಾರ್ಡ್

ಗಾಂಧೀಂತಾಗ್ಬಹುದಾಗಿದ್ದ ಪದ್ವೀನ ಪದ್ರಿ. ಹಸ್ಗೋರ ಮಾಂಸ್‌ರಕ್ತಕ್ಕೆ ಮೋಹ್ದ ಕೋರ್ಸ್ನ್ದಿದ್ರೂ, ತಾನ್ಮಟ್ಗೆ ಯುಮಕೆ (M.K.) ಗಾಂಧಿಯಾಗಿರೋದ್ರಲ್ಲೆ ತೃಪ್ತಿಕಾಣ್ಲೋ. ಅಶ್ತಿಗಿಲ್ಲದ್ ಖಯಾಲಿತನ, ನಂ ಕಷ್ಟಗಳ್ನೋರ್ಗೆಲ್ಲಿಂದ ಬಂತೂ?—ಈ ಕೋಣೇನ್ನಾದ್ರೂ ಚೊಕ್ಕಟ್ವಾಗ್ಗೇ ಗುಡ್ಸಿ ಇಡಿಸಿದ ಮೇಲೆ, ಮುಂದಕ್ಕೆ ರಂಗಣ್ಣೋರು ನನ್ಗೆ ಹಾಗ್ಮಾನ ಮಾಡ್ದ ಐಶ್ವರ್ಯಾನ ಅನುಭವ್ಸ್ಗೋ ಅರ್ಹ್ತೆ ಎಲ್ಬಂದೀತೂ?...ಮಾಂಖ್ಯ, ರಕ್ತಾ ರಕ್ತಾನೇ...ಅಪ್ರಲ್ಲೂ ದೊಡ್ರಕ್ತಾ ದೊಡ್ರಕ್ತಾನೇ...ಚಕ್ರಾ, ಅಲ್ಲ ತಿಳೀರಕ್ತಾ...ತಿಳ್ಳೀರೇ...!

(ಮೂಲೆಯಲ್ಲಿರುವ ಕಸಪರಕೆಯಿಂದ ಕೋಣೆಯನ್ನು ಗುಡಿಸುತ್ತಾ)

...ಆದ್ರೂ, ಮನೆ, ಬಾಕ್ಲು......ವ್ಯಪ್ಹಾಸ್ನ ಭೋಜ್ನ......ಅದೆಂಥಾದ್ದು......ಹಂಸಾನ್ ತೂಗೋತಲ್ಲದಂಥಾ ಹಾಸ್ಗೆ, ಇವುಗಳನ್ನೆಲ್ಲಾ ಬಿಟ್ಬಿಟ್ಟು. ಓಗ್ ಹೊಟ್ಟೇಗಿಲ್ದೆ ಹಾರಾಡ್ತಾ ಹರ್ಕಲ್ ಚಾಪೆ ಮೇಲೆ ಹೊರಳ್ತಿರೋ ಕಷ್ಟಗಳ್ನೋರ್ನ ಕಸಿಕರ್ಲೋದ್ ಹ್ಯಾಗೆ?...ರಾಜ್ಯಾನ್‌ಬಿಟ್ಟ ರಾಮನ್ನೂ, ಧೃವನ್ನೂ....ಇಲ್ಲ. ಪ್ರಭುತ್ವಾನ್ ಬಿಟ್ಟ ಪ್ರತ್ಯೊಬ್ಬ ರಾಜನ್ನೂ ಗೆಡ್ಡೆ. ಗೆಣ್ಸು. ತಿಂದ್ಕೊಂಡು ಗೊಂಡಾರಣ್ಯದಲ್ಲಿ ಕಾಲಾನ್ ಕಳ್ಯೋದು ಪುರಾಣದಲ್ಲೇತ್ ತಿಳ್ಕೊಂಡಿದ್ದೆ...ಆದ್ರೆ ತ್ರೇತೆಯಿಂದ್ ಈಚ್ಗೆ ತಹಲ್ಪರ್ಲ್ಗೂ...ಅತ್ತ್ಯೇಳ್ವ್ಗೆ. ಅಷ್ಟ ಅಗ್ನೇವ್‌ಬಂದ ಅಮರತ್ವಕ್ಕಿಂತ್ಲೂ. ಸ್ವಾತಂತ್ರ್ಯಾನ್ ಕೊಡೋ ಸನ್ಯಾಸಾನೇ ಮೇಲೂಂತಂದ್ನಲ್ಲಾ ಈತ...ಈತ್ನ್ಹಾಗೆ...ಇಧಾರೆ! ಈ ಕಲ್ಯುಗ್ದಲ್ಲೂ....ಇಧಾರೆ!!...ಇಲ್ದಿದ್ರೆ ಮಳೆ ಎಲ್ಲೀದು?......ಬೆಳೆ ಎಲ್ಲೀದು?...ಸೂರ್ಯ ಚಂದ್ರರು ಯಾತಕ್ಕೆ ಸುತ್ತಿದ್ರು?...ನನ್ನಂಥಾ ಅಲ್ಪರ್ತುಂಬಿದ ಅಧ್ವಾನ ಪ್ರಪಂಚ್ದ ಸುತ್ಲೂ......

(ಕಸಪರಕೆಯನ್ನು ಕೈಕೊಂಡು ಪ್ರಯೋಗಿಸುತ್ತಾ)

ಈತ್ನೇನ್ ತಿಳ್ಕೊಂಡಾನು?......ಈತ್ನಿಂದ್ ಬರ್ಬೇಕಾದ್ ಬಾಡ್ಗೇಗೆ ಬಾಯ್ಬಿಡ್ತಾ ಬೊಗಳ್ತಿರೋ ಭಿಕಾರೀಂತಿಳ್ಕೊಂಡಾನೇ ಹೊರ್ತು. ನನ್ನ. ಈತ್ನ ರಕ್ತ. ಈತ್ನ ಯೋಗ್ತೆ ತಿಳ್ದು. ಈಗ್ಲಾದ್ರೂ ಯತ್ಸೌಕರ್ಯ. ಯತ್‌ಸನ್ನಕ್ತಿ...ಯತ್‌ನನ್ನಸ್ಥೂಲ...ಯತ್ ನನ್ಗೀಗಿರೊ ಸ್ಥಿತಿ. ತತ್‌ವರಿಗೂ...ಈತ್ನ ಶಮ, ಕ್ಷಮಾದಿ ಗುಣಾದಿಗಳ್ನ ಗಣಿಸ್ತಾ, ಈತ್ನಲಂಕರಿಸ್ತಿದ್ದ ಕೋಣೇನ ಕಸ್ವಿಲ್ದೆ ಗುಡ್ಸಿ, ಮಾಡೋದಾದ್ರೂ ನನಗ್ ಲಭ್ಯ!!

(ಕೋಣೆಯನ್ನು ಚೊಕ್ಕಟವಾಗಿ ಗುಡಿಸುತ್ತಾ)

ಆದ್ರೂ ವಟ್ನಲ್ಲ್ ತೋಚುತ್ತೆ............ಇಧಾರೆ............ಇಹ್ಲೋಕಾನ್ಸ್ಬೇಸ್ತಾ...... ಪರ್ಲೋಕಾನ್ ಬಯಸ್ತಾ......ಇಧಾರೆ......ನನ್ನಂಥಾ ಪಾಮರ್ರನ್ನಾ......ಪರಿತ್ರಯ್ಸೋಕೇ...... ಇಧಾರೆ......ಪರ್ಮಾತ್ಮನ್ ದೂತ್ರೂ, ಇಧಾರೆ!

(ಸಂದೂಕದ ಕಡೆ ನೋಡಿ)

ಮೊದ್ಲು. ಬಂಡವಾಳ ಹೋಗೋ ಹದ್ರಿಕೇಲಿ ಬಿಗ್ದು. ಕಟ್ಟ. ಈ ಹಗ್ಗಾನ ಹೊರಗೆ ಹಾಕ್ಬೇಕು.

(ಎಂದು ಹಗ್ಗವನ್ನು ಬಿಚ್ಚಿ ಹೊರಗೆ ಹಾಕುವನು)

...ಸಕ್ಲೇಶ್ಪರಾಂತಂದ್ನಲ್ಲಾ ಆತ...ಹವಾ ಹ್ಯಾಗಿದ್ಯೋ ಆತ್ಮದೆ...ಮಲ್ನಾಡೋ ಏನೋ ......ಮೈಗೊಂಟಿಸ್ಕೊಳ್ಳೇ ಬೇಕು......ಬ್ರಾಹ್ಮಣ್ನೇಗೇನು...ಹೊಟ್ಟೇ ತುಂಬೋದ್ ಹೋಂ ರೂಲು ಬಾಯಿಗೆ ಸಿಕ್ಕಿದ್ಕಡೆ ಭರತ್ಮಾತೆ... ....

[ಗುಡಿಸಲುಪಕ್ರಮಿಸುವನು]

ಕಪ್ಪಣ್ಣ : (from behind the scenes)

ಋಣಾಂಬೋದ್ನ ನೀಗಸ್ಲೇ ಬೇಕು, ನರ; ನರವಿರೋ ನರ...ಅದ್ರಲ್ಲೂ ಧನ್ಋಣ ಅಂಟ್ಕೊಂಡಿರೋವಾಗ...ಈ ಧಾಋಣೇನ್ಬಿಟ್ಟು...ದೇವಲೋಕಾನ್ಕೆದಿ ಪರಮಾತ್ಮನ್ನ ಪ್ರೇಕ್ಷ್ಸೋ ದೂಂದ್ರೇನು...ಆತ್ನಲ್ಲಿ ಐಕ್ಯ ಪೊಂದೋದೂಂದ್ರೇನು......ಅಸಾಧ್ಯ ಕನ್ಸೂ !! ಬ್ರಾಹ್ಮಣ್ನಾಗ್ ಹುಟ್ಟಿ, ಪ್ರಾಣ, ಬ್ರಹ್ಮವೃತ್ತೀನ್ಬಿಟ್ಟು, ಬಡ ಬ್ರಾಹ್ಮಣ್ರಿಂದ ಬಾಡ್ಗೆ ಬಿಚ್ಚಿ, ಆಹಾರ ನಿದ್ರಾದಿಗಳ್ನ, ಅನುಕರಿಸ್ತಿರೋ ಬ್ರಹ್ಮಹಿಂಸಿ...ರವರವಾದಿ ನರಕದಲ್ಲಿ front seat ಗೆ booked ಆಗಿರೋ ಈ ಧೋಂಡೂರಾಯ್ನಿಗೆ ರೂಪಾಯಿ ಬಾಬತ್ನಲ್ಲಿ ಋಣಿಯಾಗಿರೋ ನಾನು...ಅದ್ನ ಬಿಡಿಸ್ಕೊಳ್ಳೋಕೆ, ರೈಲೆ sleeper ತಿರ್ವ್ಹಾಕೋ ಕೆಲ್ಸಕ್ಕೊಪ್ಕೊಂಡಿರೋದು ನಮ್ಮ ಅಣ್ಣಂಗ್ ತಿಳ್ದು... ನಮ್ಮಣ್ಣಂಗೇನೂ...ಸಕ್ಲೇಶ್ಪುರ್ದ ಸರಹದ್ನ ತೆಂಗಿನ್ಮರಗೈಲ್ಲಾ, "ಹಯ್ಯೋ, ಚಿಕ್ಕಜ್ಮಾನ್ರು ಚಾಕ್ರೀ ಗಿಳಿದ್ಮೇಲೆ, ನಾವು ನೆಟ್ಟಗೆ ನಟ್ಕೊಂಡಿರೋದ್ ನ್ಯಾಯ್ವೇ''ಂತ ನೆಲ್ಸಮಕ್ ಬಿದ್ದು, ಕಾಯ್ಗ್ಳೂಂಬೋ ಹಣೆಗಳ್ನ ಬಡಕೊಂಡು, ನೆಲಕ್ಚಚ್ಕೊಳ್ತಾ........... ......ಕಾಯ್ಕಾಯ್ಗಿರೋ ತ್ರಿಣೇತ್ರಗಳಿಂದ್ಲೂ ಎಳೆವಾರಿ ಧಾರೆ ಸುರಸ್ತಾ, ನಮ್ಮಣ್ಣ annual ಕೋಕನಟ್ ಘಸ್ಲಿಗೆ ತುಂಡ್ಹಾಕೋ risk ಇದ್ರೂನೂವೇ, ದಿನದೊಂದೊಂದ್ರೂಪಾಯಿ ಕೂಲೀನಲ್ಲಿ, ಜಲ್ಪಾನಕ್ಕೂ, ವಂದ್ಕಾಸ್ನೂ ಮುಟ್ದೆ, ಅನುದಿನವೊಂದೊಂದಾಗಿ ಜಮಾಯ್ಸಿ, ಮೂವ್ವತ್ತೆರಡ್ಲರವತ್ತ್ ದಿನ್ದಲ್ಲಿ, ಬಾಡ್ಗೇನ್ ತೀರ್ಸಿ, ಎರ್ಡು ತಿಂಗ್ಳು ಅನ್ನನೀರು ಇಲ್ದೆ ನಾನು,...ಗಾಂಧೀಗಾದ್ರೋ ವೀಚಿವಾಟ್ರು...ಅದೂ ಕೂಡ ಸೇವನೆಯೆ ಇಲ್ಲ್ದ ನಾನು ಸಾಯೋ ಪಾಪಾನ, ಆತ್ಮಹತ್ಯಾಂತ ನನ್ತಲೇಗೇ ಏರಸ್ತಾನೋ...ಇಲ್ಲ, ಬ್ರಹ್ಮ ಹತ್ಯಾಂತ ತೀರ್ಮಾನ್ಸಿ, ಧೋಂಡೂರಾಯನ್ ಗಂಟ್ಗೆಗೆ ಕಾಸಿಟ್ಬಿರ್ತಾನೋ, ಹಂಡೇಹಂಡ್ಯಾಗಿ ಕರ್ಗಿಸಿದ ಸೀಸಾನ,......ಅದ್ನ ನಾವಿಬ್ರೂನೂವೆ, ಈ ದೇಹ್ಗಳ್ನ ವದ್ರಿ...ಇಹ್ಲೋಕಾನ್ಬಿಟ್ಟು ಯಮನೆದ್ರೂಗೆ ನಿಂತಿರೋವಾಗ್ಯೇ ಹೊರ್ತು......ಈಗಲ್ಲ...ಇತ್ಯರ್ಥವಾಗೋದು... **ಈಗಲ್ಲ ! ಮುಖ್ಯ ಬ್ರಾಹ್ಮಣ ಜನ್ಮ—ಕಲಿಯುಗದಲ್ಲಿ brute ಜನ್ಮ !** ಸರಿ, ಈ ಮೃಗಕ್ಕೇನಾದ್ರೂ ಹೃದಯಾಂಬೋದು ಇದೆಯೆ ಇಲ್ವೆ ಅಂಬೋದ್ನ ಇತ್ಯರ್ಥ ಮಾಡಿಕೊಂಡು.........

(ಎನ್ನುತ್ತಾ ಹೊಸಲನ್ನು ದಾಟುವನು)

[ಇದನ್ನು ಕೇಳಿ ನಡುಗುತ್ತಾ ಧೋಂಡುವು ಕೋಣೆಯ ಮೂಲೆಯಲ್ಲಿ ದೊಡ್ಡದೊಂದು ಹಂಡೆಯ ಮರೆಯನ್ನು ಹೊಗುವನು]

ಕಪ್ಪಣ್ಣ : (ಪ್ರವೇಶಿಸಿ)

ಇದೇನಿದು ?...ಈಗ್ತಾನೆ ಯಮಲೋಕ, ಯಮ, ಹಂಡೆಗ್ಳು...ಕಾಸಿದ್ಸೀಸ...ಧೋಂಡೂ ರಾಯ್ನ ಬಾಯಿ...ಅಂತಿದ್ದದ್ದೇನು ?...ಈ ಪಾರ್ವ, ಪಾತ್ಕಿ ನನ್ನ ಬಲೀಗೇಂತ ಬಚ್ಚಿಟ್ಕೊಂಡಿದ್ದೀ ಬೋನ್ನಲ್ಲೇ......ತಾನ್ ಮುಂದಕ್ಕೆ ಕುಡ್ಯೋ ಕಾಸಿದ್ಸೀಸಾನ್ ಕಾಯ್ಸೋಕೆ ಬೇಕಾದ್ ಹಂಡೆಗ್ಳ ಸಪ್ಲೈಯಿ ತಾನೇ contract ತಗೊಂಡು ಹಂಡೇಬಾಡ್ಗೆ ಕೊಡ್ಲಾರ್ದ ಯಮನ್ನೂ ನನ್ಪಾಡ್ಗೇ ತರೋಕೇಂತ್ಲೇ...ತುಂಬ್ಸಿರೋದು...ಹೀಗೆ !? ?

ಧೋಂಡೂ : (ಪರಕೆಯನ್ನು ಬಿಟ್ಟು) ಕ್ಷಮ್ಸಿ. ಸ್ವಾಮಿ.

ಕಪ್ಪಣ್ಣ : "ಸ್ವಾಮಿ !" ಇದೇನ್ಹುಚ್ಚು ಧೋಂಡೂರಾಯ್ರೆ ?......ಪರ್ಕೆ ತೊಕ್ಕೊಂಡು ಮುಸ್ರೆತಿಕ್ಕೊ ದೇವೇರಿ ಹಾಗೆ ಗುಡಿಸ್ತಿರೋ ಹುಚ್ಚಲ್ಲ ನಾನ್ಹೇಳಿದ್ದು......ಬಿಡ್ಗಾಸ್ ಬಾಳ್ದ ಬಂಧುಗ್ಳು ಬಿಟ್ಟೇ ಗ್ರಾಸವಾಸಾನ ತಿರ್ಕೊಂಡ್ ತಿನ್ಸೋವ್ನ, ಹೀಗೆಲ್ಲಾ ಆಪಾದಮಸ್ತಕ ಅಷ್ಟೋತ್ತ್ರಾಭಿಷೇಕ ಪನ್ಗೆ ಮಾಡ್ದ ನಿಮ್ಮ ತಿಕ್ಲಾಕ್ಗಿಯಿಂದ ನನ್ನ "ಸ್ವಾಮೀ"ಂದ್ರಲ್ಲಾ, ಆ ಹುಚ್ಚೇ ನಾನ್ಕೇಳಿದ್ದು ನೋಡೀ... ...

ಧೋಂಡೂ : ಒಪ್ದೆ ಸ್ವಾಮಿ, ಸ್ವಾಮಿ ಏನು ಮಹಾಸ್ವಾಮಿ......ನನ್ನ ಓಂದಾಗಿದ್ರು, ಈಗಾಳೊ ಅಲ್ದೆ ಮುಂದಾಳೊ ಮಹಾಸ್ವಾಮಿ, ಒಪ್ದೆ...ತಮ್ಮ ಚಿನ್ನದ ಕಮೀನ ! ನನ್ನ ಬೇಳ್ಕೆ ಅಲ್ಲ ....ಕಂಚು, ಓತ್ತಾಳೆ, ಕಬ್ಬಿಣ, ಸೀಸ ಬೇಡಬೇಡ ! ಮೋಸದ್ ನಾಲಿಗೆಯಿಂದ ತಿಳೀಪ್ಲಿ ಮಂಕು ...ಅಲ್ಲ......ಜ್ಞಾನವಿಲ್ದ ಅಜ್ಞಾನಿ, ಜೊಗ್ಗಿದಬೊಗಳ್ನ ಮರ್ರ್ಯೋದ್ ಸಂಭಾರ....ಅಪ್ನ ಬಗ್ಯೋ ತಿಳ್ಕೋದ್ ನನ್ಬಾರ....ಕ್ಷಮಿಸ್ಸಿ....ತಮ್ಮಣ್ಣಾವ್ರು ಬಂದಿದ್ರು....ಅಲ್ಲಾ......ಬಿಜಯ ಮಾಡಿದ್ರು ...ರಂಗಣ್ಣ...ರಂಢೋಲ್ ರಂಗಣ್ಣೋರು....ಸಾಲೇಶ್ಪುರದ ಸಕಲೈಶ್ವರ್ಯಪುರದ ಪ್ರಭು...... ರಂಡೋಲ್ ರಂಗಣ್ಣೋರು....ಅದೇನ್ ಪುರಾಕೃತಪಾಪ್ವೋ....ಕರ್ಮಫ್ಲೋ....ಅದನ್ನ್ ತೀರ್ಸ್ ಕೊಳ್ಳೋಕೆ ಈ (ಎದೆಯನ್ನು ಬಡಿದುಕೊಳ್ಳುತ್ತಾ) ಕಡುಪಾಪಿಯ ಮನೇಗೆ......ಅಲ್ಲಾ. ತಾವು ಅಭಿದಾನಿಸ್ದಾಗೆ...ಈ ಗೊಗ್ಗ್ರಯ್ಯ ಗುಹೇಗೆ, ತಾವಿಲ್ದಾಗ ಬಿಜ್ಯಾ ಮಾಡಿದ್ರು (ಕವಿತ ಕಂಚಿನ ಬಾನೆಯನ್ನು ಸೂಚಿಸುತ್ತಾ) ಇದೇ ಅತ್ನಲಂಕರ್ಸಿದ ಸುಖಾನ ಅನ್ಭವಿಸ್ತಿರೋ ವಸ್ತು. ಪಾತ್ರೆ !!

ಕಪ್ಪಣ್ಣ : (ತಾತ್ಸಾರಸ್ಮಿತನಾಗಿ) ಉಹುಃ ! "ಈ ಭಿಕಾರೀಗೆ ಅಣ್ಣನಂತೆ ! ಕೋಟೀಶ್ವರ ನಂತೆ !......ರಂಗಣ್ಣನಂತೆ !......ಇನ್ ರಂಡೋಲ್ ರಂಗಣ್ಣನಂತೆ !!......ಕೂಲೀಸಾಲೀ ಮಾಡೂ !" ಹಯ್ಯೋ ! ಇದೂ ಒಂದ್ ಪ್ರಪಂಚ್ವೆ ?...ಸ್ಥಿರವಲ್ಲಾ. ಸ್ಥಿರವಲ್ಲಾ ! ಬರೀ ಮಾಯೆ, ಧೋಂಡೂರಾಯ್ರೆ, ಪರೋಕ್ಷಾನ ಹುಡುಕುತ್ತಿರೋ ನನ್ಗೆ ತಾವು ಆಗ್ಲೇಳ್ದಾಗೆ ಭಿಕಾರೀಂತ್ ಬಯ್ದ್ಯೋದೂ ಆಗ ! ಈಗ ಸ್ವಾಮೀಂತ ಸ್ವಾಗತಾನ್ನೀಡೋದು !! ಇದು ಮಾಯಾ ಪ್ರಪಂಚ......ಇಹದ ಐಕ್ಯೀಯ ಭಾವದ ತಿರುಳು ತಿಳ್ದು ಪರಮಾತ್ಮನ ಲೀಲಾ ಹಾಸ್ಯವನ್ನು ಅರಿತು ಅನಂತಾನಂದವ್ರ ತುಂಬಿ ತುಳುಕುವ.......ತುಂಬಿತುಳ್ಕುವ ನನ್ನ ಮನಸ್ಸಿಗೆ....... ನಮ್ಮಣ್ಣ ರಂಗು....ನನ್ನ ತಮ್ಮ ಧೋಂಡೂ....ನಾನೂವೂನೂವೇ ಒಂದೇನೇವೆಯೋ ಅದ್ರೂ. ಅದನ್ನ್ ಅರ್ಯದ್ನೀನು ಸಕ್ಲೈಶ್ವರ್ಯಪುರದ ನಮ್ಮಣ್ಣ ಇಲ್ಬಂದಾಂತ ನನ್ಪರಿಹಾಸ ಮಾಡೋ ಚಿತ್ರ ಹಿಂಸೆಗೆ, ನನ್ನ ಗುರಿಮಾಡೋದು ಉಚಿತ್ವಲ್ಲ, ಧೋಂಡೂ......ಮಕ್ಕುಮರೀ ಇರೋ ನಿನಗೆ.... ಉಚಿತ್ವಲ್ಲ ! ಹೀಗ್ ಸುಳ್ಳ್ಹೇಳಿ ಸಾಧುಗಳ್ನ ಸತಾಯ್ಸೋದು ತರವಲ್ಲ......ನರಪ್ರಾಣಿಗಳ್ಗೆ ನ್ಯಾಯ ವಲ್ಲ, ನೀತಿಯಲ್ಲ.........ಸತ್ತು ಮುಂದೆ ಸೇರೊ ಸ್ವರ್ಗಕ್ಕೆ ಗತಿಯಲ್ಲ......ನರಕಾಸ ತಪ್ಪಿಸಿ ಕೊಳ್ಳೊ ದಾರಿ, ಇದಲ್ಲ.

ಧೋಂಡೂ : (ವಿಷಾದವನ್ನು ಪ್ರಕಟಿಸಿ. ತಲೆಯನ್ನು ಕೆದರಿಕೊಳ್ಳುತ್ತಾ ಮಸ್ತಕ ವಕ್ಷಸ್ಥ ಗಳನ್ನು ಬಡಿದುಕೊಳ್ಳುತ್ತಾ) ನಂಬಿ ಸ್ವಾಮಿ, ನಂಬಿ !! ನಿಮ್ಮಣ್ಣೋರು......ಬಂದಿದ್ರು...... ನಿಜ್ವಾಗ್ ಬಂದಿದ್ರು !]

ಕಪ್ಪಣ್ಣ : ಬಂದಿರಬಹುದು, ಧೋಂಡೂರಾಯ್ರೇ, ಯಾರೋ ಒಬ್ಬ ಪ್ರಾಣೀ...... ಹೇಳ್ಕೊಂಡ್ ಇರೋದು ನಮ್ಮಣ್ಣಾಂತ; ನಿಮ್ಗೆ ಹ್ಯಾಗ್ ನಂಬ್ಕೆ ?

ಧೋಂಡೂ : ನಿಮ್ಕಣ್ಣು ಸ್ವಾಮಿ, ನಿಂಕಣ್ಗುಡ್ಗಳ್ಕ ಕಿತ್ತು ಆತಂಗ್ ಇಟ್ಟಾಗೆ. ಆತನ್ನ್ ಕಣ್ಣುಗ್ಳು........ಅಲ್ದ ಮೂಗೋ, ತದ್ದ್‌ರೂಪು ತದ್ದೇವೇಯೆ sizeooo......(ಯೋಚಿಸುತ್ತಾ) ಆತ್ನೇನ್ ಹೇಳ್ದ ?......ಹೂಂ, ಮೂರುಪ್ಪರ್ಗೇ ಮನೆ......ಅವರ ಮೂಗು. ಇದೇ ಮೂಗು ಸ್ವಾಮಿ...ಆತನ ಮೂಗೂನೂವೆಯೋ...

ಕಪ್ಪಣ್ಣ : (ಭೀತಿಯನ್ನು ನಟಿಸುತ್ತಾ) ದೇವ್ರೇ ಗತಿ! ಇನ್ನಿಲ್ಲೂ ಬಂದು ಬಿಟ್ನೆ ನಮ್ಮಣ್ಣಾ! ...ಸರ್ವನಾಶ........ಸಿರಿಸೂಸಿದ್ಲೋ ಭುವಿನಾಶ! ಅವನ್ನಣ ಅವನಂತಸ್ತು. ಇದ್ನೆಲ್ಲಾ ನಿನ್ನ ಮುಂದೆ ಬೀರಿ! (ಕನಕರವನ್ನು ಸ್ವರನೇತ್ರಗಳಿಂದ ನಟಿಸಿ, ಧೋಂಡೂರಾಯನನ್ನು ದಿಗ್ಭ್ರಮಿಸಿಸಿ) ಧೋಂಡೂ, ಬೀಳ್ಬೇಡಾ. ಧೋಂಡೂ. ಈ ಧನ ಪಿಶಾಚೀಗೆ. ದಾಸಾನುದಾಸನಾಗಿ ಬೀಳ್ಬೇಡ ಧೋಂಡೂ !...ಧನ. ನಶ್ವರ! ನಮ್ಮಣ್ಣನ್ಗೋ ಚಿನ್ನಾಂದ್ರೆ ಚರಂಡೀ ನೀರು...ಪೋಕೇ

ಕಲ್ಲು...ನಿನ್ಗೋ ಬೆಳ್ಳೀ ನಾಣ್ಯ ಬೋಕೆಕಲ್ಲು—ಬರೀ ಬೋಕೆಕಲ್ಲು ಇಲ್ಲಿದ್ರೂನೂವೆ, ಹಣವಿಲ್ಲ ದಿದ್ರೂವೇ ಗುಣ ಇದೆ. (ಆತನ ಬೆನ್ನನ್ನು ಸವರುತ್ತ) ಆ ಮಾತ್ಯಾಕೆ ಈಗ!....ನಮ್ಮಣ್ಣಾ ಪೆದ್ದು...ಕುಬೇರ್ನ ಕನಕಭರಿತ ಕೊಂಪೇಗೆ ಸರಸ್ವತಿ ಸಂಚರಿಸಿದ್ದೂಂತ ಕೇಳಿದೀಯ ಎಲ್ಲಾದ್ರೂ ?...... ನಾಲ್ಕು ವೇದದಲ್ಲಿ ? ಹದ್ನೆಂಟು ಪುರಾಣದಲ್ಲಿ ?......ತೊಂಬತ್ತಾರು ತತ್ವದಲ್ಲಿ ? ಓದಿಧೀಯಾ ? ಕೇಳಿಧೀಯಾ ? ಇತಿಹಾಸೇತ್ಯಾದಿಗ್ಳಲ್ಲಿ ?......ನಮ್ಮಣ್ಣ ಇಲ್ಬಂದದ್ದೋ: ತಾನು ಸಿಕ್ಕೊಂಡು ಒದ್ದಾಡ್ತಿರೋ ಸಂಸಾರಸಾಗರದಲ್ಲಿ ನನ್ನೂವೆ ಡುಬಾಯ್ಸೋಕೆ!......ನಾನೋ ! ಇಹಲೋಕದಲ್ಲಿ ನನ್ನ ಪೂರ್ವಲೋಕಗಳ ಸಂಸ್ಕಾರದ ಸಾಲಾನ ತೀರ್ಸಿ ಪರಮಾತ್ಮನ ಪಾದಾರವಿಂದಾನ ಪಡೆಯೋಕೆ ಹುಟ್ಟ ಪಾಪರ್ ವೇಷಧಾರಿ, ನಾನು! ಹೀಗಿರೋವಾಗ್ಗೆ ನನ್ನ, ನಮ್ಮಣ್ಣನ ಜಗಳದಲ್ಲಿ. ನೀನ್ಯಾಕೆ ಬರ್ಬೇಕಪ್ಪಾ. ಧೋಂಡೂ ! (ಗಲ್ಲವನ್ನು ಸವರುತ್ತ ಥಟ್ಟನೆ) ಧೋಂಡೂರಾಯ್ರು; (ಬಿರುಸಾಗಿ) ಅಣ್ಣ ತಮ್ಮಂದ್ರು ನಾವಿಬ್ರು...ಅಗ್ರಜಾನುಜರು.......ಜಯವಿಜಯರು ಜಗಳವಾಡೋವಾಗ ಮಧ್ಯ ದಲ್ಲಿ ಬರೋ ಹಕ್ಕು ಮಹಾವಿಷ್ಣೂಗುಂಟು! ಮಹಾಲಕ್ಷ್ಮೀಗೂ ಉಂಟು, ನಿನಗುಂಟೆ ?........ ಬಿಟ್ಟಿ ಹಿಟ್ಟು ನೀರು, ಹಸಿದ ನನ್ನ ಹೊಟ್ಟೇಗಿಟ್ಟು ಬಿಡಕಾಸೂ ಬೇಡ್ದ, ಮಹಾತಾಯಿ, ನನ್ನ ತಂಗಿ, ನಿನ್ನ ಹೆಂಡ್ತೀ, ಆ ಪುನೀತ ಪತಿವರ್ತಾ ಪ್ರಾಣೀ ಆಕೆ! ನಿನಗುಂಟೆ ಈ ಹಕ್ಕು ಧೋಂಡೂರಾಯ ?

ಧೋಂಡೂ : ಸ್ವಾಮಿ........... ಸ್ವಾಮಿ...ನನ್ನ ಕುಟುಂಬಾನ ಮುಂದಾಳೋ ಮಹಾ ಸ್ವಾಮಿ ! ಹಕ್ಕಿಲ್ವೆ ನನಗೆ. ನಿಮ್ಮಿಬ್ರು ಭ್ರಾತೃಗಳ ಮಧ್ಯದಲ್ಲಿ ಬರೋಕೆ ? ಹಕ್ಕೇನಿದೇಂತ ಕೇಳಿ ದ್ರಲ್ಲಾ... ಇದೆ. ಶ್ರೀರಾಮ ಯಾರು ?...ವಿಷ್ಣು. ರಾವಣ ಯಾರು ?....ಜಯ. ಏತನ್‌ಮಧ್ಯೆ ಬರೋಕೆ ಮಾರುತೀಗೇನ್ ಹಕ್ಕು ?...ಭಕ್ತಿ ಸ್ವಾಮಿ, ಮಮತೆ ಸ್ವಾಮಿ! ಸ್ವಾಮಿ ಪ್ರೇಮ!... ತಿರಗೂ ಬನ್ನಿ...ಕಂಬ ಬಿರದು ಹೊರಬಂದ ನರಸಿಂಹ ವೇಷಧಾರಿಯಾದ ಅದೇ ವಿಷ್ಣು... ಕೊಲ್ಲೋಕೆ......ಹಿರಣ್ಯವೇಷಧಾರಿಯಾದ ಅದೇ ಜಯವ್ನ! ಅವರವರ ಗಲಾಟೆ ಮಧ್ಯದಲ್ಲಿ, ಮೂಗ್ತೂರಿಕಟ್ಟ ಪ್ರಹ್ಲಾದ ಪ್ರಾಣಿ ?...ಭಕ್ತಿ! ಪ್ರೇಮ!...ಸ್ವಾಮಿ!......ಮಮತೆ! ಇನ್ನು, ಧ್ರುವ ಕನಕದಾಸ...ಒಟ್ನಲ್ಲಿ ರಂಗಣ್ಣೋರೂ ತಾವೂ ಜಯವಿಜಯರ ಹಾಗೆ ಪರಂಧಾಮ ವೈಕುಂಠಾಂಬೋ, ಸಕಲೈಶ್ವರ್ಯಪುರ ಅಂಬೋ ಲಕ್ಷ್ಮೀ ಸಹ ಅಂಬೋ ಕಮ್ಮ ಜಹಗೀರು, ಕಾಫಿ, ಟೀ, ಕೋಕೋ ಅಲ್ದೆ ಏವಲ್ರೀ ಎಸ್ಟೇಟುಗ್ಳು ಇತ್ಯಾದಿ ವಿಷ್ಣುಪಾದಾನ ಹೊಂದಿ ಸಂತೋಷಪಡೋ ಸಂತೋಷಾನ ...ಆಂಜನೇಯ...ಪ್ರಹ್ಲಾದ...ಧ್ರುವ....... ಇತ್ಯಾದಿಗಳ ಹಾಗೆ ಕಣ್ಣುತುಂಬ ನೋಡಿ. ನನ್ನ ಸಂಭ್ರಮದಲ್ಲಿ...ಇದೆಲ್ಲ ಯಾಕ್ರೀ...ಜಹಗೀರ್‌ದಾರ್ ರಂಗಣ್ಣ ಕಪ್ಪಣ್ಣಗಳ ಮಧ್ಯೆ ಹೋಟಲ್ ಕೀಪರ್ ಪಾಪರ್ ಧೋಂಡೂ ಯಾಕ್ ಮೂಗಿಡತೀಯಾಂತ ಅಂಬೋದಲ್ವೆ ತಮ್ಮ ಪ್ರಶ್ನೆ ? "ಹೂವಿನ ಜೊತೇಲಿ ನಾರೂನು ನಾಕ ಸೇರ್ತ್ರೂ"ಂಬೋ ಸಾಮತಿ ಅಲ್ಲ ನಾ ಹೇಳತಿರೋದು. ನಾಲ್ಕು ಹೂವಾಗಲೀ ನಲವತ್ತು ಹೂವಾಗ್ಲೀ, ಪರಮಾತ್ಮನ ಕಂಠಕ್ಕೆ ಹಾರಾ ಹಾಕೋಕೆ ಪಾರಿಜಾತ ಪುಷ್ಪಗಳೇ ಆಗ್ಲಿ, ಅವುಗಳನ್ನೆಲ್ಲಾ ಸೇರಿಸಿ, ಪೋಣಿಸಿ ಹೊಂದಿಸೋಕೆ ನಾರಿಲ್ಲದಿದ್ರೆ ಹಾರಾ ಎಲ್ಲೀದು ? ಅರ್ಥಮಾಡ್ಕೊಳ್ಳಿ!

ಕಪ್ಪಣ್ಣ : ನೀರೇನು, ನಾರೇನು! ನಾಕಕ್ಕೆ ಹೋಗಬೇಕೂನ್ನೋ ಹೂವ್ಗಳಿಗೆ ದಾರಿ ತೋರಸೋನಾರು ಕೊಬ್ಬೀ ಕೊಬ್ಬೀ ದಪ್ಪವಾಗೀ ದಪ್ಪವಾಗೀ ಥಟ್ಟ ಹಗ್ಗವಾಗಿ ತನ್ನ ಕುತ್ತಿಗೇಗೆ ತಾನೆ ನೇಣುಹಾಕ್ಕೊಂಡು ಸತ್ತ್ರಂತೇಂಬೋ ಸಾಮತಿ ಕೇಳಿಧೀಯಾ ಧೋಂಡೂ ? ಹೂವೆಲ್ಲಿ ? ನಾರೆಲ್ಲಿ ? ಬಾಳೆಮರದ ನಾರು...ತನ್ನ ಪಾತಿ ದಂಟು, ತನ್ನ ಕಂಬ, ತನ್ನ ಹೂವು, ಹೀಗೆ ತನ್ನಷ್ಟಕ್ಕೆ ತಾನೇ ಇರ್ತೆ, ತನ್ನ ತನ್ನ ಕೊಂಪೇನ ಮರೆತು, ಈ ಬಾಳೇಮರ ತನ್ಗೆ ಅಂದದ...ಸಕಲೈಶ್ವರ್ಯಪುರ, ರಮ್ಮೋರ್ ರಂಗಣ್ಣೋರು, ಖಯಾಲಿ ಕಪ್ಪಣ್ಣೋರು ಕಾಫಿ ಎಸ್ಟೇಟು ಇತ್ಯಾದಿ ಕಲ್ಪದ್ರುಮಗಳ ಹಣ್ಣಿಗೆಕೈ ಚಾಚ್ತಾ, ತಾನು, ಹೋಟೆಲ್ ಕೀಪರ್ ಪಾಪರ್ ಧೋಂಡೂರಾಯಾಂಬೋದ್ನ ಮರ್ತು, ಕನಕದಿಂದ ಕನಕಾನ್ನುಂಗಿ, ಕೊಬ್ಬೀ ಕೊಬ್ಬೀ ತೇಗತಿರೋ ಕಪ್ಪಣ್ಣ ರಂಗಣ್ಣಗಳ ಸಹವಾಹ. ತಪ್ಪು! ಬೇಡ, ಧೋಂಡು ಬೇಡ! ಧೋಕಾ ತಿಂತೀಯ ಧೋಂಡೂ! ದುಡ್ಡೊಂದ್ರೆ ದೂರ ಹೋಗು.

ಹೃದಯಾಂದ್ರೆ ಹತ್ತಿರ ಬಾ ಇದು ತತ್ವ. ನಮ್ಮಣ್ಣನ ಬಾಯೆಲ್ಲ ತೂತು! ನಮ್ಮ ಕುಟುಂಬದ ಗುಟ್ಟನ್ನ ಏನೇನ್ ಬಯಲಿಗ್ಬಿಟ್ಟ ನಮ್ಮಣ್ಣ? ಸತ್ಯಂವದ! ದಿಟ ಬೊಗಳು!

ಧೋಂಡೂ : ತಮ್ಮ ದೊಡ್ಡ ಕುಟುಂಬದ ಗುಟ್ಟು ತಮ್ಮ ದೊಡ್ಡ ಕುಟುಂಬದ್ದು. ಆದ್ರೂನೂವೆ ತಮ್ಮ ಕುಟುಂಬದ ಸಂಬಂಧವಾದ ಒಂದು ದೊಡ್ಡ ಲಗ್ನಕ್ಕೆ ತಾವು ಸಕಲೈಶ್ವರ್ಯಪುರದಲ್ಲಿ ಇರಲೇಬೇಕು ಎಂದು ತಮ್ಮ ಅಗ್ರಜ ರಂಗಣ್ಣೋರು ಆಜ್ಞಾಪಿಸುತ್ತಿರುವಲ್ಲಿ ಶಿವಮೊಗ್ಗ ರೈಲು ೮-೩೦; ಈಗ ೭-೧೫ ಲಗ್ನ ಪ್ರಾತಃ ೯-೩೦ ದುರ್ಗೀ ಗುಡೀಂದ್ರು ವಧುವುನೆ! ದಮ್ಮಯ್ಯ ಹೊರಡಿ ಮದ್ವೇಗೆ! ಮುಂದೆ ತಮ್ಮನನ್ನ ಅನ್ಯೋನ್ಯ ಅನನ್ಯೋನ್ಯದ್—ಬಾಬ್ತುಗಳು ತಮ್ಮಣ್ಣಾವರೆದುರಿಗೆ! ಸಧ್ಯ ಶಿವಮೊಗ್ಗಾ ರೈಲು ಹತ್ತೇಬಿಡ್ಬೇಕು ಈವತ್ ರಾತ್ರಿ ತಾವು!!!

ಕಪ್ಪಣ್ಣ : ನನ್ನ fare ಉ?

ಧೋಂಡೂ : ನಾನ್ ಕೊಡ್ತೇನೆ!

ಕಪ್ಪಣ್ಣ : ಜಟ್ಕಾ ಛಾರ್ಜು?

ಧೋಂಡೂ : ನಮ್ಮ ಯಾಕೂಬೂ...ನಮ್ಮ ಹೋಟಲ್ ಯಾಕೂಬು... ಖಾಯಂ ಯಾಕೂಬು, ಕೆಳಗ್ಕಾದಿಧಾನೆ...ಛಾರ್ಜ್ ನನ್ನ ಭಾರ.

ಕಪ್ಪಣ್ಣ : ಹಾಗಾರೆ, ನಮ್ಮ ಜಹ್ಗೀರ್ ಪ್ರಾಂತ್ಯದಲ್ಲಿ ಲಂಗೋಟಿಧರನಾಗಿ ಇಳೀಲೇ ನಾನು! ನಮ್ಮಣ್ಣನ್ ತಮ್ಮ!...public platformನಲ್ಲಿ...D.C. ಇರ್ತಾರೆ. expect ಮಾಡ್ತಾ!....ದಾಯಾದಿಗಳ ಮನೇ ಮದ್ವೆ! ಒಂದು ಜೊತೆ ಧೋತ್ರ ಇಲ್ಲ ವರನ್ಗೆ. ಒಂದು ಭಾರಿ ಸೀರೆ ಇಲ್ಲ ವಧೂಗೆ...ಇವುಗಳ್ನ ಒಂದ್ ವೇಳೆ ಪರಮಾತ್ಮ ದಯಪಾಲಿಸಿದ್ರೂನೂವೆ? .... ಹರುಕು ಕೊಳಕ್ಲು ಪಂಚೆ ಸುತ್ಕೊಂಡು ಇಳಿಯೋದೆ ಮದ್ವೆ ಮಂಟಪ್ದಲ್ಲಿ?...ಇಲ್ಲಾ. ನಮ್ಮ ಕುಟುಂಬದ್ ಸಂಪ್ರದಾಯದ ಪ್ರಕಾರ ಹೊಸ್ನಾಹೊಸ ಹತ್ತು ಎಂಟು ಇಲ್ದಿದ್ರೂನೂವೆ. ಕನಿಷ್ಠ ಒಂದು ಎಂಟು ಆರು ಕೂಡ ಇಲ್ದೆ ಅರ್ಧಾಂಗಲವಾದ್ರೂ ಕಲಾಪತ್ತು ಅಂಚಿಲ್ದೆ! ಒಟ್ನಲ್ಲಿ ಧೋಂಡೂ, ಚರಂಡೀಲಿ ಹುಟ್ಟಿ...ಹೋಟಲ್ ಕೀಪರ್ ಆದರೂ ಆದ ನೀನು ಮಹನೀಯ. ಮಾನ್ಯ! ಮೂರುಪ್ಪರಿಗೆ ಮನೆತನ್ದಲ್ಲಿ ಹುಟ್ಟಿ ಲಕ್ಷಾಂತರ ಪಿತ್ರಾರ್ಜಿತ ಸ್ವತ್ತ್ನ ಧಿಕ್ಕರಿಸಿ ಚರಂಡೀಗೆ. "ಪರೋಪಕಾರಾಯ ಮಿದಂ ಶರೀರಂ" ಅಂಡ್ಹಾಗೆ ನೀನು ಹುಟ್ಟಿದ ಚರಂಡೀಲಿ. ನಿನಗೋಸ್ಕರಾ ಅವತರಿಸಿದೇನಲ್ಲ! ಇದೂ ಪರಮಾತ್ಮನ ಲೀಲೆ! ಪ್ರಹಸನ! ನೀನು ನನ್ನ ಕೈಲಿ ನೂರು ಜಿಲ್ರೆಯಾಗಿದ್ದರೂ ನಗದಾಗಿ ಇಟ್ಟೀಯ. ನಿನ್ನ ತಗರದ ಪೆಟ್ಗೇಲಿ ವರನಿಗೆ ಧೋತ್ರ ವಧೂಗೆ ಸೀರೆ ಅಲ್ದೆ. ನನಗೊಂದು ಎಂಟು-ಆರು ಹೊಸಾಹೊಸ ಇಟ್ಟು ರವಾನಿಸೀಯಾ! ಧೋಂಡೂ. ಯಾಕೀ ಭ್ರಾಂತಿ? ಯಾಕೀ ಬಿಸಿಲು ಕುದುರೆ ಮೇಲೆ ನನ್ನ ಹತ್ತಿಸ್ತಿದೀಯಾ? ನಮ್ಮಣ್ಣನ್ಗೋ ನಮ್ಮ ಒಸ್ಗೇಟ್ನಿಂದ ಹುಯ್ಯುತ್ತೆಸ್ವರ್ಣವೃಷ್ಟಿ! .... ಅವನಿಗೋ ನಿನ್ಮೇಲಿಷ್ಟ.............ಸಾವಿರ ಸಾವಿರ ನಿನಗ್ ಕಳಸ್ತಿರ್ತಾನೆ...ಸಂತೋಷ! ನಿನಗೂ, ನಿನ್ನ ಹೆಂಡ್ತೀಗೂ. ನಿನ್ನ ಮಕ್ಳಿಗೂ ಸಂತೋಷ! ತಿನ್ನಿ! ತೇಗಿ! ಕೊಬ್ಬಿ! ಆದ್ರೆ ನಿಮ್ಮ ಸಂತೋಷ್ದಲ್ಲಿ...... ಕೈಲೊಂದು ನೂರ್ರೂಪಾಯಿ ಕೊಡ ಇಲ್ದೆ. ವರನಿಗೊಂದ್ ಜೊತೆ ಪಂಚೆ, ವಧೂಗೊಂದು ಸೀರೆ. ತನಗೆ ಎಂಟು-ಆರು? ಒಂದೂ ಆರು–ನಾಲ್ಕು? ಬೇಡ ನಾಲ್ಕು-ಎರಡು? ಎರಡು-ಒಂದು?. ಕೂಡ ಇಲ್ದೆ ಒಂದು ಅರ್ಧ–ಅರ್ಧ ಲಂಗೋಟಿ ಉದ್ಧಾರ ಕೂಡ ಇಲ್ದ ನನ್ನ. ಧೋಂಡೂರಾಯ್ರೆ!. ದಾಯಾದಿಗ್ಳ ಅಪಹಾಸ್ಯಕ್ಕೇಂತ ರವಾನಿಸ್ತೀರಾ?

ಧೋಂಡೂ : (ಕಪ್ಪಣ್ಣನ ಪಾದಗಳಿಗೆರಗಿ) ದಮ್ಮಯ್ಯ. ನೀವಿಲ್ಲೇ ಇರಿ! ರುದ್ರೂ!

[Little Rudru, the servant enters]

ಯಜಮಾನ್ರನ್ನ ಹೊರಕ್ಬಿಡಬೇಡ!....... ಕೋಪಿಸ್ಕೋಬೇಡಿ.

[ನಿಷ್ಕ್ರಮಣ]

ರುದ್ರೂ : ಸ್ವಾಮಿ, ಆವತ್ತು ಬೀಡಿ ಕೊಟ್ರಲ್ಲಾ ನಂಗೆ! ಈಗ ಬೇಕಾ?...[Produces a beedi kattu] ಮಂಗಳೂರು ಲವಂಗ...

[ಬೀಡಿಯನ್ನು ನೀಡುವನು]

ಕಪ್ಪಣ್ಣ : ರುದ್ರೂ, ಎಷ್ಟುದಿನ ಈ ಹಾಳ್ ಬೀಡಿ ನಿನ್ನ ಹಣೇಬರ?...[ಜೋಬಿನಿಂದ 'ಸಿಸರ್ಸ್' ಪ್ಯಾಕೆಟ್ಟನ್ನೂ, ಬೆಂಕೀ ಪೆಟ್ಟಿಗೆಯನ್ನೂ ಹೊರತೆಗೆದು, ಸಿಗರೇಟನ್ನು ಹಚ್ಚಿಕೊಳ್ಳುತ್ತಾ] ಸಿಗರೇಟ್ ಯೋಗ್ಯತೆ, ಅದೂ 'ಸಿಸರ್ಸ್', ಯಾವಾಗ ಸೇದೋದೊ ನೀನು, ರುದ್ರೂ? (fingering in inner pocket) (aside)! Thank God! ಸುಬ್ಬೂ ಮರ್ತ್ಹೋಗಿ long coat pocketಲಿ ಬಿಟ್ಟಿದ್ದ 'ಸಿಸರ್ಸ್'; ಮ್ಯಾಚ್‌ಬ್ಯಾಕ್ಸು! ಕಕ್ಕಸ್ಸು, ಅಂಗಳ, ಹಜಾರ, ಜಗಲಿ, ರೂಂಗಳು ಗುಡಿಸಿಸಿಕೊಂಡು ಎಂಟ್ ತಿಂಗ್ಳ ಸಂಬ್ಳ ಬಾಕಿ ಇಟ್ಕೊಂಡಿರೋ ಈ ಕಿರಾತನಿಗೆ ಕೂಲಿಕೆಲ್ಸ ಮಾಡ್ತಿರೊ ರುದ್ರೂ, ನಿನಗೆ ಜಟ್ಕಾದೋರು ಸೇದೊ ಬೀಡಿ ಬಿಟ್ಟು, ಜಂಟಲ್‌ಮನ್ ಸೇದೊ 'ಸಿಸರ್ಸ್' ಸೇದೋ ಯೋಗ್ಯತೆ ಯಾವಾಗ ಬರೋದು, ರುದ್ರೂ?

ರುದ್ರೂ : ನನಗೆಂಗ್ ಗೊತ್ತ್ ಸ್ವಾಮಿ...ಯಾವಾಗಾಂತ?

ಕಪ್ಪಣ್ಣ : ನಾನ್ಹೇಳ್ತೇನೆ ರುದ್ರೂ, ಈವಾಗ! ಈ ಕ್ಷಣದಿಂದ...ನಾನು ಹೇಳೋ ಹಾಗೆ ಕೇಳೊ? !

ರುದ್ರೂ : ಅಂಗೇ ಆಗ್ಲಿ—ಸ್ವಾಮಿ!

ಕಪ್ಪಣ್ಣ : ನನ್ನ ಪೆಟ್ಗೇನ ಯಾಕೂಬ್ ಜಟ್ಕಾಲಿಟ್ಟು.......ಒಂದರ್ಧ ಗಂಟೆಯಾದ್ರೂ ರಾಯರ್ನ ಮಾತಾಡ್ಸ್ತಿರು. ಯಾಕೂಬ್ ಕೈಲಿ ಒಂದು ರುಪಾಯಿ ಕಳಸ್ತೀನಿ. ಒಪ್ತೀಯಾ? ನಂಬ್ತೀಯಾ?

ರುದ್ರೂ : "ಊ" ಸ್ವಾಮಿ!

(Enter ಧೋಂಡೂ with tin box)

ಧೋಂಡೂ : ಸ್ವಾಮಿ, ಇದು ತಮ್ಮ ಪೆಟ್ಗೆ ... ಬಂಗಾರ, ಬಂಢಾರಗ್ಳು ಇರೋ ಕುಟುಂಬ್ದಲ್ಲಿ ಉದ್ಭವಿಸಿದ ತಮಗೆ ಈ ತಗರದ ಪೆಟ್ಗೆ ಮೇಲೆ ಯಾಕೆ ಕ್ಯಾಸರಿಕೇನೋ ನನಗೆ ಗೊತ್ತಿಲ್ಲ! ತಾವು ತಮ್ಮ ಕುಟುಂಬದ ಲಗ್ನಕ್ಕೆ ತಾವಿರ್ಲೇಬೇಕಾದ ವಿಷಯಾನ ಅರಿತು ವಧೂ, ವರ, ಅಲ್ದೆ ತಮ್ಗೂ ಬೇಕಾದ ವಸ್ತ್ರಗಳೂ ......ಕಪ್ಪಣ್ಣೋರೆ.......ಹೊಸಾ ಹೊಸ್ದು! ನನ್ನ ಲಗ್ನದಲ್ಲಿ ನಮ್ಮಾವ ಕೊಟ್ಟ ಜೋಡಿ ಪಂಚೆ, ನಾಳಿನ ವರನ್ಗೆ!.......... ನನ್ನ ಹೆಂಡ್ತೀಗೆ ..... ಪುನೀತ ಪತಿವರತಾಂದ್ರಲ್ಲಾ ..ಆಕೆ ಜನ್ಕ ಕೊಟ್ಟ ಸೀರೆ! ಜನ್ಕಾಂತೀನಲ್ಲ?...ಆಶ್ಚರ್ಯ!...ಸೀತಾ ಬಾಯಿ ಪೆಸ್ರು!...ಸೀರಾಜಿ ಕುಪ್ಸಾ ಸಮೇತ ನಾಳಿನ ವಧೂಗೆ...ಅಲ್ದೆ...ನನ್ನ ಮೊದ್ಲ ದೀಪಾವಳೀಗೆ ನನ್ನ ಮಾವ ಕೊಟ್ಟ...ಪಿತಾಂಬರದ ಅಂಚು ಜರತಾರಿ 8–6ನ್ನ ತಮಗಾಗಿ ಹಾಕಿ ಇದೇ ಪೆಟ್ಗೇಲಿ ಕಟ್ಟಿಧೇನೆ. ಇಕೋ ನೆತ್ ನನ್ ಶಕ್ತಿ ಇರೋ ಸುವರ್ಣ 105 ರುಪಾಯಿ! ರುದ್ರು ಹೊತ್ಕೊಳ್ಲಿ! ಅಲ್ದೆ ಈ ಕೂಜಾ ತುಂಬ ಹಾಲು. ಊಟಾ ಆಗ್ಲಿಲ್ಲ ತಮಗೆ. ತುಂಕೂರ್ನಲ್ಲಿ ನೀರು ಸಿಕ್ಸುತ್ತೆ. ಈ ಟಿಫಿನ್ ಕ್ಯಾರಿಯರ್ ತುಂಬ ಎತ್‌ತನ್ ಶಕ್ತಿ, ಎತ್ ತನ್ನ ಭಕ್ತಿ ಪೂರ್ವಕವಾಗಿ ಅನ್ನ, ಹುಳಿ, ಸಾರು, ಮೊಸ್ರು........ಅಲ್ದೆ ಪಲ್ಯೇತ್ಯಾದಿ ವ್ಯಂಜನಗಳು ಸಹಿತ... ಕಾಣಿಕೆ ತಮ್ಗೆ........"ಪುನೀತ ಪತಿವರ್ತ ವಸ್ತು" ಅಂದ ತಮ್ಮ ತಂಗೀ ಕಾಣಿಕೆ. ಯಾಕೂಬ ತುರಾತ. ರುದ್ರು ಕೂದ್ರು...ತಮ್ಮ ಕೈಯಲ್ಲೇ ಎರಡ್ನೂ ಹಿಡಕೊಂಡು ತಮ್ಮ ಕುಟುಂಬಾನ ಸೇರಿ.

ನಿಮ್ಮ ಧರ್ಮಾನ ಸಲ್ಲಿಸಿ! ತಮ್ಮಣ್ಣನೋರ ತಂತೀಲಿ ನಾನ್ ಬರೋ ಸಪ್ತಾಯ ಸಹಸ್ರಾಷ್ಟದಿಂದ ನಮ್ಮ ಕುಟುಂಬ ರುದ್ರೂ ಸಮೇತ ಬಂದ್ ಸೇರ್ತೇವೆ! ದಯಮಾಡಿ!

[Places the box on Rudru's head, and Rudru exits; and then placing notes in Kappanna's hand and prostrating]

ಹರ್ಸೀ, ಮಹಾಸ್ವಾಮಿ! ನನ್ನೂ ನನ್ನ ಕ್ರಿಮಿ ಕುಟುಂಬಾನೂ ಹರ್ಸಿಬಿಟ್ಟು ಹೋಗಿ ಬನ್ನಿ ಮಹಾಸ್ವಾಮಿೂ. ಹೋಗಿ ಬನ್ನೀ ಏನು ? ಹೋಗಿ! ಬರ್ತೇವೆ!...ತಾವು ತೆರಳಿ, ನಾಳಿನ್ ಲಗ್ನಕ್ಕೆ...ನಾಳೆ ರಾತ್ರಿ ಬಂದ್ಸೇರ್ತೇವೆ ನಾವೆಲ್ಲಾರೂವೆ. ರಂಗಣ್ಣೋರ್ಗೆ ಹೇಳಿ. ಆತನ ಆಜ್ಞೇನ ಆಹಾದ ಮಸ್ತಕ ಅವಹಿಸಿಕೊಂಡು. ಆತನ ಅನುಜನ್ನ ಎದಾಜ್ಞಾ ರವಾನಿಸಿಧೇನೇ ಅಂಬೋ ನನ್ನ ಭಕ್ತಿ, ಪ್ರೇಮ ಇತ್ಯಾದಿಗಳ್ನ, ಅತ್ನ ಪಾದಪದ್ಮಗಳಿಗೆ ಸಲ್ಲಿಸಿಬಿಡಿ.

[ರುದ್ರುವು ಪೆಟ್ಟಿಗೆಯನ್ನೆತ್ತಿಕೊಂಡು ನಿಷ್ಕ್ರಮಿಸುವನು.]

ಕಪ್ಪಣ್ಣ : ಧೋಂಡೂ......ಚರಂಡೀಲಿ ಹುಟ್ಟಿದ್ರೂ ನೀನ್ ಜಂಟಲ್‌ಮನ್! ಹಂದಿಯಾಗಿ ಹುಟ್ಟಿದ್ರೂ ಹರಿ, ನರಹರಿ, ಜಂಟಲ್‌ಮನ್ನೇ! ತತ್ಕಾಲಕ್ಕೆ, ತತ್‌ಯುಗಕ್ಕೆ, ಪತ್ಕ್ಕೇತ ತತ್ಸಮಯಕ್ಕೆ ತತ್ತ್ ತತ್‌ಕ್ಷಣಕ್ಕೇ ಹ್ಯಾಗಿರ್ಬೇಕೋಹಾಗೇ ಇರ್ಬೇಕಾದ ಮೇಲ್ಲಂಗ್ನೀನ ಹಾಕಿದ್ದು ಮುಕುಂದ, ಮಾಧವ, ವಿಷ್ಣು...ಯಾಕೆ ? ಸ್ಥಿತಿಕರ್ತ! ಬ್ರಹ್ಮಾ ಸೃಷ್ಟಿಸ್ದ ಪ್ರಪಂಚಾನ ಮುಂದಕ್ಕೆ ಧೂರ್ಜಟಿ, ಲಯಕರ್ತ ಧ್ವಂಸ ಮಾಡೋಕೆ, ಪ್ರಕೃತೀನ ತಯಾರ್ಮಾಡೋದು ಸ್ಥಿತಿಕರ್ತನ ಧರ್ಮ! ಜಂಟಲ್‌ಮನ್ನಾಗಿಯೇ ಹುಟ್ಟಿದ ನನ್ನೂ ನನ್ನಗ್ರಜನ್ನೂವೆ ನೀನು ಸಂಧಿಸಿದ ಕ್ಷಣ್ವೇ ಈ ನಿನ್ನ ತಾರುಣ್ಯ ಕರುಣಾನ ಕನಕದ್ ಮೂಲ್ಯಾ ತೀರಿಸ್ತೀನಿ ಅದುವರೆವಿಗೂ, ನಮ್ಮಣ್ಣ ರಫ್ಫೋಲ್ ರಂಗಣ್ಣ, ರಂಗಣ್ಣನೇವೇ ಕಯಾಲಿ ಕಪ್ಪಣ್ಣ, ಕಪ್ಪಣ್ಣನೇವೇ ಸಕಲೈಶ್ವರ್ಯಪೂರ್ಣ ಧನೇಶ್ವರ ರಂಘೋಲ್ ರಂಗಣ್ಣ. ಧೋಕ ತಿಂದು, ಈಗ ತಿನ್ನಾ...... ಇನ್‌ಮುಂದಕ್ ತಿನ್ನೋ ಧೋಂಡು ಧೋಂಡೂ ನೀನೆ. ಈವತ್ ರಾತ್ರಿಯೆ ನಿನ್ ಕಣ್ಮುಂದ್ ನಿಂತು 'ಗುಂ' ಅನ ರಂಘೋಲ್ ರಂಗಣ್ಣಾ ರಂಗಣ್ಣ ನೇವೇ. ನಾನು ವಾನು ನಾನೇ. ಮುಖ್ಯ ಸಾಳಿ ರೈಲ್ನಲ್ಲಿ ಸೇರು. ಸಕಲೈಶ್ವರ್ಯಪೂರ್ಣಲ್ಲಿ ನಾವೆಲ್ಲಾ ಸಂವಾದಿಸೋಣ. ಅಲ್ಲಿ ನಮ್ಮಣ್ಣ ನಾನೂ—ನೀನೂ—ತ್ರಿಮೂರ್ತಿಗಳೂ........ಸೃಷ್ಟಿಸ್ಥಿತಿ ಲಯರ್‌ಗ್ಳೂ, ನಮ್ಮ ಕುಟುಂಬ್ದ ಮೂರು ಕೋಟಿ ಸ್ಥಿತಿಯ ವೆಚ್ಚಾನ ಇತ್ಯರ್ಥ ಮಾಡ್ಕೊಳ್ಳೋಣ.

ಧೋಂಡೂ : ನಾಳೇ ಮಾತ್ ನನ್ಪ್ರಾರ! ಈವತ್ತಿನ ರೈಲ್‌ಗೆ ನಿಮ್ಮನ್ನ ಸೇರ್ಸೋದು ನನ್ಗೊವಲ್ಲ್ನೇ ಭಾರಾ. ಹೊರಡಿ! ಯಾಕೂಬ್ ಕಾದಿದಾನೆ. ಕುದುರೆ ಚಪ್ಪಾಯ್ಸ್ತಿದೆ.

[ಎಂದು ಕಪ್ಪಣ್ಣನನ್ನೂ ಎಳೆದುಕೊಂಡು ಹೋಗುವನು.]

[ತೆರೆಯು ಬೀಳುವುದು. ನಿಧಾನವಾಗಿ ಅದೇ ಸ್ಥಾನದ ದ್ವಿತೀಯ ರಂಗಕ್ಕೆ ತಿರುಗಿ ಏಳುವುದು]

ದ್ವಿತೀಯ ರಂಗ

[Found discovered ಧೋಂಡೂ, squatting on an inverted ಹಂಡೆ and ರುದ್ರೂ standing in abject attendance]

ಧೋಂಡೂ : ಹಾಗಾದರೆ ನಿಮ್ಮಜ್ಜಿ ತಯಾರಿ? ನಾಳೆ ರೈಲ್ಗೆ ! ಇಲ್ಲ ... .ಹೇಗೋ ರುದ್ರು ! ಜಹ್ಗೀರ್‌ದಾರ್ ಕಪ್ಪಣ್ಣೋರು ? ಹೇಗೋ ? ಆ ?

ರುದ್ರೂ : ಚಿನ್ನದಂತಾ...ಮನ್ಸ...ಸ್ವಾಮಿ !

ಧೋಂಡೂ : ನಾನು ?

ರುದ್ರೂ : ಬೆಳ್ಳಿ ಅಂಥಾ ಮನಸ್ಸು ! ಯಾಕೂಬ್ ಕಬ್ಣ ! ನಾನೊಬ್ನೇ ಸ್ವಾಮಿ, ಇತ್ತಾಳೆ ಅಂಗೆ ಅಲ್ಲಾಡ್ತಿರೋದು ; ಅಜ್ಜಿ ಅಟ್ಟೀಲಿ, ತಾವು ಇಲ್ಲಿ, ಇಂಗೆ ಅಂಗೆ ಅಲ್ಲಾಡ್ತಿರೋದು.

ಧೋಂಡೂ : ರುದ್ರಾ, ನಿನ್ನೂ ನಿಮ್ಮಜ್ಜೀನೂ ನನ್ನೂ, ನನ್ಕುಟುಂಬಾನ್ನೂ ಕಾಪಾಡೋ ಪ್ರಾಣೀನೂ ನಾಳೆ ತೋರಿಸ್ತೇನೋ !

ರುದ್ರೂ : ನಾಳೇನ ಸ್ವಾಮಿ ?

ಧೋಂಡೂ : ಹೌದೊ, ನಾಳೆ ಬೆಳಗ್ಗೆ ನೀನೂ, ನಿಮಜ್ಜಿ, ನಾನೂ, ನನ್ನ್ ಕುಟುಂಬ ಅರಸೀಕೆರೆ ರೈಲ್‌ಹತ್ತಿ ಸ್ವರ್ಗಾನ್ ಸೇರ್ತೇವ್ಮೋ......ಮಂಕು...... **ಯಾರದು ?**

[Enter ಯಾಕೂಬ್—ಕರೀಕುಚ್ಚು ವಿರಾಜಿತ ಕೆಂಪು ಕುಲಾವಿ ಬಿಳಿಯ ಕುರ್‌ಥಾ, ಡೀಲಾಷರಾಯಿ ಸಮೇತ, ಬಿದುರು ಕೋಲಿಗೆ ಕಟ್ಟಿದ ಹೊಸೆದ ನೂಲಿನ ಕಂಚಿ ಆಯುಧವನ್ನು circus ring masterನಂತೆ "ಛಟಾರ್" "ಪಟಾರ್" ಎಂದು ಬಾರಿರುತ್ತಾ]

ಯಾಕೂಬ್ : ಕ್ಯಾ ಸಾಮಿ ಕಾಲಾಭೈ ಸಾಮಿ....ಕಪ್ಪಣ್ಣಾ ಅವ್ರು......ವ್ಯೆಕ್ಯಾ ಬೋಲುಂ ? !

ಧೋಂಡೂ : (ಚಮಕಿತನಾಗಿ) ಯಾಕೂಬಾ !...ಬೇಕೂಫಾ (ಎನ್ನುತ್ತಾ ತಾನು ಕೂತಿದ್ದ ಹಂಡೆಯ ನಿತಂಬವನ್ನು ಬಿಟ್ಟು ಲಂಘಿಸಿ) ರೈಲ್ ಸಿಕ್ತೇನೋ ?

ಯಾಕೂಬ್ : ಜೀ !......ಹಾಂ !......ಸಾಮಿ !

ಧೋಂಡೂ : ಸೀಟ್ ಸಿಕ್ತೇ !

ಯಾಕೂಬ್ : ಜೀ !.......ಹೂಂ !........ಸಾಮಿ.

ಧೋಂಡೂ : ಸಂದೂಕ, ಟಿಕೆಟ್ ವಗೈರೆ......?

ಯಾಕೂಬ್ : ಕ್ಯಾ ಸಾಮಿ ? ಕ್ಯಾ ಕಂಬ್ಖತ್ತ್ ಸಮಜ್ಲಿಯ...ಕಾಲಾಭೈಸಾಮಿಕೂ ? ವ್ಯೆಕ್ಯಾ ಕಹೂಂ......! ಇಸೆಕೆಂಡ್ ಕ್ಲಾಸ್ ಗಾಡಿ ಸಾಮಿ ! ಕಪ್ಪಣ್ಣ ಸಾಮಿ ಹತ್ಕೊಂಡಿ ಮೂರು ಗೋರ ಸಾಹೇಬುಂ......ಫಿರಂಗಿ ಅಫೀಸರ್‌ಲೋಗ್...ಗೋರಾಲೋಗ್...ಸಾತ್‌ಮೆ...ಜೊತೇಲಿ ! ...ಧೋಂಡು ಸಾಮಿ !...ಸಾಬ್‌ಪೂಛೆ......"ಏನು ಯಾಕೂಬ್, ನಿನ್ನೂಡ್ಗೆ ಜೋಡಿ ಕುದ್ರೆ, ನಾಲ್ಕು ಕುದ್ರೆ, ಡಬ್ಬಲ್ ಜೋಡಿ ಕುದ್ರೆ, ಹಕಾಲ್ನೇಕು ಬರ್ತೈತೆ ?"......ವಿನು ಮತ್‌ಲಬ್ ಸಾಮಿ ! ?

ಧೋಂಡೂ : ಓಃ ! ಓಹೊ ! ನೀನೂವೆ ಸೇರ್ಬಿಟ್ಯಾ ! ನಾನು, ನನ್ ಕುಟುಂಬ, ರುದ್ರಾ ಅನ್ನಜ್ಜಿ, ಯಾತ್ರೇಲಿ ? ಹೇಳ್ತೀನ್ ಕೇಳೋ ? ಯಾಕೂಬಾ ! ಬೇಕೂಫಾ...ನರೀ ಮುಖ ನೋಡಿದ್ದೆಯೋ ಈವತ್ ಬೆಳಗ್ಗೇ ! ನಾನು, ಕಾಫಿ ಎಸ್ಟೇಟ್ ಏಜಂಟು. ರುದ್ರು, ಅವರಜ್ಜಿ. ಜಹಗೀರ್‌ದಾರ್ ರಮ್ಜೋಲ್ ರಂಗಣ್ಣೋರ ಒಂದುವರೆ ಕೋಟಿ ರೂಪಾಯಿ ಭಾರ ಯಾಕೂಬ. ನಿನ್ನಣೇಲಿ ಬರೆದಿದಾನೆ, ನಿಮ್ಮ 'ಅಲ್ಲಾ', ಎಲುಬು ತೋರಸ್ಕೊಂಡಿರೋ ಸಾಯೋ ಕುದ್ರೇನೂ ಅದು ಎಳೀತಿರೋ ಮುರುಕಲ್ ಗಾಡೀನ್ನೂ ಧರ್ಮಾಂಬುದೀಲ್ ಒಗ್ದು, ನಾಲ್ಕು ಕುದ್ರೆ ಸಾರೋಟ್ನ........

ಯಾಕೂಬ್ : ಹಕಾಲ್ನೇಕಾ......?

ಧೋಂಡೂ : ಹೌದು......ಹಕಾಲ್ಸೋದು......ನಿನ್ನ ಹಣೇಲಿ......

ಯಾಕೂಬ್ : ಕಿಸ್ಮತ್ ? (ದಂತಾವಳಿಯನ್ನು ಪ್ರದರ್ಶಿಸಿ ನಗುವನು)

ಧೋಂಡೂ : ಯಾಕೂಬಾ, ನಾಳೆ! ರುದ್ರೂ, ಅಜ್ಜೀ ಸಮೇತಾ; ನಾನು ನನ್ಹೆಂಡ್ತಿ ಸಮೇತ; ನೀನು ನಿನ್ಹೆಂಡ್ತಿ ಮಕ್ಕಸಮೇತ...

ಯಾಕೂಬ್ : (ಅಡ್ಡವಾತಾಗಿ) ಮಾಫ್ ಕೀಜಯೆ. ಚಾರ್ ಪೆಂಡ್ತಿ, ಒಂದು ಬಚ್ಚಾ ...ಬೇಟ—ನಾಕ್ ಕಾನೋ ಆಂಖೊ......ಮೇರೆ ಸರ್ಕಾ ಬೇಟ.........!

ಧೋಂಡೂ : ಓಹೋಹೊ ! ರುದ್ರು, ಅವಸಜ್ಜಿ; ನಾನು ನನ್ನ ಕುಟುಂಬ : ನೀನು' ನಿನ್ನ ಘೋಷಾ ಯಾತ್ರೆ.........ಸಕಲೈಶ್ವರ್ಯಪುರಕ್ಕೆ ಬೆಳಗ್ಗೆ ನೀನೂ, ನಿನ್ ಕುಟುಂಬಾ' ಯಾಕೂಬಾ; ನೀನು, ನಿವ್ವಜ್ಜಿ, ರುದ್ರಾ !, ನಾನು ನನ್ ಕುಟುಂಬ, ಹಾಜರಾಗ್ಬೇಕು. ರೈಲ್ವೆ ಸ್ಟೇಷನ್ನಲ್ಲಿ. ಖರ್ಚು ನನ್ಹಾರ, ಹಾಜರಾಗೋದು ನಿಮ್ಮಿಬ್ಬರ ಭಾರ ! ಇಷ್ಟೊತ್ತಿಗೆ......ಯಶ್ವಂತ್ ಪುರ ದಾಟಿರತ್ತೆ, ಕಪ್ಪಣ್ಣ ಮಹಾತ್ಮ.

ಯಾಕೂಬ್ : (ಶಾತ್ಸಾರದಿಂದ ನಗುತ್ತ) ಕ್ಯಾ ಸಾಮಿ ? ಕ್ಯಾ ಸಾಮಿ ? ಕಂಟೋನ್ ಮೆಂಟ್ ಚ್ಹೋಡ್ಕೆ...ಕಂಸೆಕಂ...ಕಿಷ್ಣಾಜ್‌ಪೇಟ್...

ಧೋಂಡೂ : ಏನೊ ಯಾಕೂಬಾ ? ಯಶವಂತ್‌ಪುರ ದೊಡ್ಡಬೇಲಿ ತುಂಕೂರು ಅರಸೀ ಕೆರೆ ಹಾಸನ ಹೋಗೋ ರೈಲ್ನ, ದಂಡಿನಕಡೆ ತಿರ್ಗಿಸ್ದ್ಯಲ್ಲೋ ?

ಯಾಕೂಬ್ : (Smiling equally intensely) ಕ್ಯಾ ಸಾಮಿ ? ಕಂಟೋನ್ ಮೆಂಟ್, ಬೋರಿಂಗ್‌ಪೇಟೆ, ಜೋಲಾರ್‌ಪೇಟೆ, ವಾಣಿಯುಂಬಾಡಿ ಹಮಾರ ಲೋಗೊ ಹೈ ವಹಾ —ಮೇರಾ ಸಾಲಾ ಸುವರ್, ಓಹೈ ಅಲಾದಾ ಕಾಮ್ ಕರ್ಕೆ...ಮದರಾಸ್ ಜಾನೇಕ ಗಾಡೀಮೇ ಹಮಾರ ಕಪ್ಪಣ್ಣಾಸಾಬ್ ಚಡೇಸೊ. ಮದರಾಸ್ ರೈಲ್ಕೂ ತುಂಕೂರ್ ಪೂನಾ ತರಫ್ ಫೀರಾ ತೀನಾ ?......ಏನು, ಸಾಮಿ...ಮಿಷ್ಟೇಕ್ ಇದ್ದಾದೆ ?

ಧೋಂಡೂ : (Aghast) ಹಾಗಾದ್ರೇನು, ಮದರಾಸ್ ರೈಲ್ ಹತ್ತಿಸ್ ಬಿಟ್ಯಾ ? ಹಾಸನಕ್ಕೆ ಹೋಗೋವರ್ನಾ ? (Takes Yakoob by the shoulders and shakes him like a rat) ಬಗ್ಳೋ ಬೇಕೂಫಾ !

ಯಾಕೂಬ್ : ಕ್ಯಾ ಸಾಮಿ ? ನಾನೇನು ಹತ್ತೀಸೋದು....? ಸಾಬ್‌ಬಾತ್ರೆ –ಪ್ರೋಗ್ರಾಮ್ಕಾ ಬೋಲೆ. ಬಿಚಾರಿ ಸಂದೂಕ್ ಲೇಗಯಾ...ಮುಝೆಭೀ ಜೋಲೆ ಹಾತ್‌ಮೇ ಬಂದಾಣೆ ಕೊಟ್ಟು “ಪಲಾಟ್‌ಫಾರಂ ಟಿಕೆಟ್ ತಕಂಡೀ ಸಾಮಾನ್ಕೆ ಸಾತ್ ಬಾ’ ಕರ್ಕೆ. ವೈಸಾಚ್ ಕಿಯಾ ಮೈ. ಮದರಾಸ್ ರೈಲ್ ಛಡ್ಕೆ...“ಸೆಕೆಂಡ್‌ಕ್ಲಾಸ್” ಬೈಟ್ಕೆ...ಪ್ರೋಗ್ರಾಮ್ಕಾ ಚಾರ್ ಆಣಾ ದೇಕೆ.. ಪಾಕಿಟ್‌ಸೆ ಪೈಸಾ ನಿಕಾಲ್ಕೆ......(ವೇಸ್ಟ್ ಕೋಟ್ ಜೋಬಿನಿಂದ ನೋಟುಗಳನ್ನು ತೆಗೆದು) ರುದ್ರೂ ! ಕೇಕ್ದಿರೇ ! ತುಜ್ಹೆ ಏಕ್ ರುಪಾಯ್ (ರುದ್ರೂಗೊಂದು ರುಪಾಯಿ ಕೊಟ್ಟು. ರುದ್ರೂ “ನಾನೇಳ್ಲಿಲ್ವಾ ! ಜಿಸ್ಟನ್ನಾತ ದಣಿ” ಎನ್ನುತ್ತಿರುವಲ್ಲಿ) ಮುಝೆಭೀ ದೋ ರುಪಾಯ್ ದಿಯಾ ! ಆಪ್‌ಕು ! ... . **ಅರ್ರೆ ! ರ್ರೆ ! ರ್ರೆ ! ರ್ರೆ ಯಾಖೂಬಾ !...ಬೇವಖೂಫಾ ಭೂಲ್ ಗಯಾನಾ ಮೈ !**....ನಿಮ್ಗೋಸ್ಕರಗೆ—ಸಾಮಿ ! **ಏಕ್ ಖತ್ ಖಬರ್....ಕಾಲಾಭಾಯ್ ಸಾಮಿ ದಿಯೇಸೋ—ಕಾಗಸ್ !** [ಎನ್ನುತ್ತಾ ಕಿಸೆಯಿಂದ ಒಂದು ಲಕೋಟೆಯನ್ನು ಹೊರತೆಗೆದು. ದಿಗ್ಭ್ರಮಿತನಾದ ಧೋಂಡೂವಿನ ಪಕ್ಕಿಣ ಮಾಡಲ್ಲಿ ಇಡು ವನು.]

ಧೋಂಡೂ : (ಹಸನ್ಮುಖನಾಗಿ ಲಕೋಟೆಯನ್ನು ಒಡೆದು ಒಳಗಿನ ಪತ್ರವನ್ನು ಹೊರ ತೆಗೆದು ಕಾಗದದ ಮಡಿಕೆಗಳನ್ನು ಬಿಡಿಸಿ, ಕಾಗದವನ್ನು ಓದ್ತಾ ನಗುತ್ತಾ) ಹಾಗಾದ್ರೆ, ಘೋಷಾ ರೈಲ್ ಬಿಟ್ಟು, ಮದರಾಸ್ ರೈಲ್ ಹತ್ತಿದ, ಪ್ರೋಗ್ರಾಂ changeoo ! ಮಾಗಡ್ರೂನಾವೆ

ನಾವೆಲ್ಲೂ ನಾಳೆ ನಿಶಿ ಸಕಲೈಶ್ವರ್ಯಪುರ ಸೇರೊ......programme ತಪ್ಪೀಲ್ಲ ಏವರ್ನಿ ಇರ್ತಾ ರೇಂತ ಅಂಬೋದು ನನ್ನ ಭಿಪ್ರಾಯು! (ಓದಲುಪಕ್ರಮಿಸಿ).............

—ರೈಲ್ವೆ ಸ್ಟೇಷನ್

ನನ್ನ ಪ್ರಿಯತಮನಾದ ಧೋಂಡೂವಿಗೆ, ಕಪ್ಪಣ್ಣನ ಹೃದಯಪೂರ್ವಕವಾದ ವಿಜ್ಞಾಪನೆ.

ನಿನಗೂ ನನಗೂ ಪ್ರಿಯತಮವಾದ ವಸ್ತು ಒಂದು, ಕ್ಷಣಮಾತ್ರ ನಿನ್ನ ನನ್ನ ಅಕ್ಷಗಳಿಗೆ ಕಂಡ್ಬಂದು, ಆಕ್ಷಣವೆ ಅದೃಶ್ಯವಾದ, ರಂಥೋಲ್ ರಂಗಣ್ಣ......ನನ್ನಗ್ರಜನ, ಪಂಚತ್ವವನ್ನು, ನಿನಗೆ ನಾನು. ನನ್ನ ಹೃದಯವು ಬೇಯುತಿರುವಲ್ಲಿ ಹ್ಯಾಗೆ ಹೇಳುವುದು ?......

"ಪಂಚಭಿರ್ ನಿರ್ಮಿತಂ ದೇಹಂ।
ಪಂಚತ್ವಂತು ಗತೇ ಸತಿ॥
ಸ್ವಾಂಸ್ವಾಂ ಯೋನಿಮನುಪ್ರಾಪ್ತಂ।
ತತ್ರಕಾ ಪರಿದೇವನಾ॥"

ಎಂಬಂತೆ! ಧೋಂಡೂ ಪ್ರಪಂಚ ನಶ್ವರ; ನಾನೂ, ನೀನೂ, ನಮ್ಮ ಅಣ್ಣಾ. ರುದ್ರಾ' ಯಾಕೂಬೂ ಕೂಡಾ ನಶ್ವರ! ನಮ್ಮಣ್ಣ ಈಗ ಬಂದ್ಹಾಗಿದೆ. ಈಗ್ಲೇ ಹೋದ್ಹಾಗಿದೆ. ಆದ್ರೂ ನೂವೆ ಅವನ ಸರ್ವಸ್ವವೂ ಪಂಚಭೂತಗಳ ಪಾಲಾದ್ರೂನೂವೇ. ಒಂದು ಹತ್ತು ನಿಮಿಷ ಭುಪಂಗತ ದಿವಂಗತನಾದ ರಂಥೋಲ್ ರಂಗಣ್ಣನ ಮೇಲೆ ನನಗಿದ್ದ ಪ್ರೇಮವನ್ನು ನಿನಗೆ ಆತನ ಮೇಲಿದ್ದ ಪ್ರೇಮವನ್ನೂ ಅರಿತೂ, ನಿನ್ನ ಪ್ರೇಮಿ, ಖಯಾಲಿ ಕಪ್ಪು, ಆತನು ಸತ್ತಗಲಾಟೆಯಲ್ಲಿ ತನ್ನ ತಮ್ಮನ ಅನುಕೂಲಕ್ಕಾಗಿಯೇ ಮಡಿದ ನಮ್ಮಣ್ಣನ ಶ್ಮಶ್ರುವನ್ನು ನಿನಗೆ ಜ್ಞಾಪಕಾರ್ಥವಾಗಿ ಈ ಸಂದೇಶವನ್ನು ಒಳಗೊಂದಿರುವ ಲಕೋಟೆಯಲ್ಲಿ ಇಟ್ಟಿರುವೆನು! ಮುಖ್ಯ........

ಬದುಕು ನಿಮಿತ್ತಂ ಬಹುವಿಧ ವೇಷಃ॥

ಅರ್ಥಾ ಮಾಡ್ಕೊ!

ಇತಿ

ಖಯಾಲಿ ಕಪ್ಪಣ್ಣ.

[ಏತತ್ ಪತ್ರವನ್ನು ಉತ್ಸಾಹದಿಂದ ಓದುತ್ತಾ, ಓದುತ್ತಾ, ಧೋಂಡೂವಿನ ಮುಖವು, ಮಧ್ಯಾಹ್ನ ದೇದೀಪ್ಯವಾಗಿ ಬೆಳಗುತ್ತಾ ಪಶ್ಚಿಮಾದ್ರಿಯನ್ನು ಕ್ರಮಕ್ರಮೇಣ ಸಮೀಪಿಸುತ್ತಾ, ಸಮೀಪಿಸುತ್ತಾ, ತದೇವ ಕ್ರಮೇಣ, ಮಟಮಟ ಮಧ್ಯಾಹ್ನದಲ್ಲಿ ಬೀರಿ ಬೂದಿ ಮಾಡುತ್ತಿದ್ದ ರಶ್ಮಿಗಳು ಪೂರ್ವೋಕ್ತ ಕ್ರಮಕ್ರಮೇಣ ಸುಸ್ತು ಸುಸ್ತಾಗಿ ಪಶ್ಚಿಮಾದ್ರಿ ಸಮೀಪಿಸುತ್ತಲೇ ತಾನೇ ಬಾಡಿ. ಬೆಂದು. ಕುಗ್ಗಿ, ಕಣ್ಮರೆಯಾಗುವಂತೆ, ಧೋಂಡುವು ಕಪ್ಪಣ್ಣನ ಪತ್ರವನ್ನು ಆದಿಯಿಂದ ಅಂತ್ಯದ ವರೆಗೂ ಪಠಿಸುತ್ತಿರುವಾಗ್ಗೆ ಆತನ ವದನ ಕಮಲವು ಸೂರ್ಯನಾರಾಯಣನ ಪ್ರಭಾತ ಉಪ್ಪಮಿಸಿ ಸಾಯಂ ಸಂಧ್ಯಾ ಅಸ್ತಮಿಸುವ ಪ್ರತ್ಯಹಸ್ಸಂಪ್ರದಾಯವನ್ನು ಸೂಚಿಸುತ್ತಾ ಇರಲು ಓದಿ ಮುಗಿಸಿ]

ಧೋಂಡೂ: ಶ್ಮಶ್ರು?... ಶ್ಮಶ್ರು?.... ಶ್ಮಶ್ರು?.... ಶ್ಮಶ್ರು?....

ಅನ್ದ್ರೇನು ?

ಯಾಕೂಬ್ : ಅರ್ರ್ರ್ ರ್ರ್ರ್ ರ್ರ್ರ್ ರ್ರ್ರ್ ರ್ರ್ರ್ ರ್ರ್ರ್!....

ಸಾಮೀ...ಏತೊ ನಾಟಕ್ ವಾಲೋಂ ಲಗಾನೇಕಾ ಮಜ್ಕೂಂ!

ಧೋಂಡೂ : ನಾಟ್ಕಾ! ?............ಮಿಾಶೇ ! ?........................

[ಕೂತಿದ್ದ ಹಂಡೆಯ ನಿತಂಬದಿಂದ ಜಾರಿಬಿದ್ದು ಮೂರ್ಛಿತನಾಗುತ್ತಾ]

ಘಾಳೀ !........ಘಾಳೀ !!........ **ಘಾಳೀ !!**

[ಯಾಕೂಬನು ಧೋಂಡೂವಿನ ಮುಖದ ಮೇಲೆ ತನ್ನ ಬಾಯಿಂದ ಉಚ್ಛ್ವಾಸಿಸಲು]

ತುಂಡ್ಹಾಕೋ ತುರುಕ? ನಿನ್ನ ಬಾಯ್ನ ಹಾಳು ಘಾಳಿ ಅಲ್ಲ! ಘಾಳೀ....... ದೇವರ ಘಾಳೀ !!

ಯಾಕೂಬ್ : ಸಮಜ್‌ಲಿಯಾ ಸಾಮಿ ! (ಕೆಂಪು ಕುಲಾವಿಗೆ ತಗಲಿಸಿರುವ ಕರೀ ಕುಚ್ಚನ್ನು ಬೆರಳುಗಳಿಗೆ ಬಟವಾಡೆ ಮಾಡಿ, ಬೀಸಣಿಗೆಯಂತೆ ಬೀಸುತ್ತಾ) ಸುಧಾರ್ಲೊ! ಸಾಮಿ. ಸುಧಾರ್ಲೋ !

ಧೋಂಡೂ : ನೀರು ! ನೀರು...(ಯಾಕೂಬನ್ನು ತನ್ನ ಬಾಯಿನೀರನ್ನು ಬಿಡಲುದ್ಯುಕ್ತನಾಗಲು) ದಮ್ಮಯ್ಯ ನಿನ್ನ ಬಾಯಿ ನೀರಲ್ಲ...........ದಮ್ಮಯ್ಯಾ ಉಗೀಬೇಡ!...ರುದ್ರಾ... ನೀರು !.... **ನೀರೂ !!!**

ರುದ್ರೂ : (ಕೋಣೆಯಲ್ಲಿ ಇರುವ ಒಂದೊಂದು ಪಾತ್ರೆಗಳಲ್ಲೂ ತಂಬಿಗೆಯೊಂದನ್ನು ಕುಕ್ಕಿ ಕುಕ್ಕಿ "ಢಂಗ್ ಢಂಗ್" ಶಬ್ದಗಳೊಂದಿಗೆ) ಪಾತ್ರೆಗ್ಳೆಲ್ಲಾ...ಖಾಲಿ...ಮಾಸ್ವಾಮಿ !

ಧೋಂಡೂ : ನೀರೇ ಇಲ್ಲವೇನೋ ? ! ಅಯ್ಯೋ ಪಾಪಿ ! **ನೀರಿಲ್ಲ್ದೇವೇ ನೀರು ಕುಡಿಸ್ತಿಧಾನಲ್ಲೋ ? ಹಯ್ಯಯ್ಯೋ !**

[ಘರದೆಯು ನಿಧಾನವಾಗಿ ಜಾರುವುದು]

ನಮ್ ಕಂಪನಿ

ಅಥವಾ

ಶೂರ್ಪನಖಾ ಕುಲವಧು

ಪಾತ್ರಗಳು

ಸೂತ್ರಧಾರ
ನಟ
ರಾಜ (೧)
ರಾಜ (೨)
ಮಂತ್ರಿ
ಸೇನಾನಿ
ವಿಪ್ರ
ವಂದಿಮಾಗಧರು
ಋಷಿ
ಸಖಿಯರು
ರಾಣಿ
ಶೂರ್ಪನಖಾ
ಕುಮಾರಿ
ಕುಮಾರ

ಪ್ರೇಕ್ಷಕರು (Audience)
ಕಿಟ್ಟಿ
ಪುಟ್ಟು, ತಮ್ಮು, ಸುಬ್ಬು, ಡಾಕ್ಟರು
ಘರದೆ ಚಿಕ್ಕಣ್ಣ
ಇತರರು. ಬೇಕಾದವರು. ಇತ್ಯಾದಿ

ಸಂಸ್ಥೆ : ನಾಟಕವಾಡುವ "ಕೂತ್ಕಡೆ ಕಂಪ್ನಿ"
ಸ್ಥಳ : ಥಿಯೇಟರು
ಭಾಷೆ : ಮಿಶ್ರ
ಕಾಲ : ಆಧುನಿಕದ ಓಬೀರಾಯನದು

ಅಂಕ
೧
ರಾಕ್ಷಸರಾಜನ ಆಸ್ಥಾನದ ಸೀನ್
ಕಾಡುಹಾದಿಯ ಸೀನ್

ಅಂಕ
೨
ಅಧ್ಯಾನವನದ ಸೀನ್
ಪ್ರೇಕ್ಷಕ ಸಭೆಯ ಸೀನ್

ನಾಂದಿ

ಪ್ರವೇಶ—ಸೂತ್ರಧಾರ

(ಗುಂಡೂ ವೃತ್ತ)

ಸೂತ್ರಧಾರ : ಶ್ರೀ ರಾಮಾ ದಶರಥತನುಜಾ ಕೌಸಲ್ಯಾತ್ಮಜಾ
ತಾಟಕಾ ಭಂಜನಾ ಸೀತಾಪತೇ ಪಿತೃವಾಕ್ಯ ಪರಿಪಾಲಕಾ।
ವನವಾಸೇ ಶೂರ್ಪನಖಾ ಕರ್ಣನಾಸಿಕ ಭಂಜನಾ ವಾಲೀಮರ್ದನಾ
ರಾವಣಸಂಹಾರೀ ಅಯೋಧ್ಯಾಪತೇ ಲವಕುಶ ಜನಕಾನಮೋಸ್ತುತೇ ॥

ರಾಗ—ಕಮಾಚು ತಾಳ—ಆದಿ

ರಘುಪತೇ ರಾಮಾ ರಕ್ಷಿಸೂ ॥ ಪ ॥
ಸೀತಾಪತೇ ಎ ಎ ಎ ಎ ಎ ಎ ॥ ಅ ॥
ಇನಕುಲತಿಲಕ ಜನಕಾತ್ಮಜಾ ಕಾಂತಾ।
ವನದೊಳು ವಾಸಿಪರ ಮನಕೆ ಸಂತೋಷವೀವ ॥ ೧ ॥

(ಅಂಜಲಿಯಲ್ಲಿನ ಪುಷ್ಪಗಳನ್ನು ಸಭಿಕರಿಗೆ ಎರಚಿ, ಪುನಃ ಕೈಮುಗಿದು. ಅಭ್ಯಾಸಿಸಿರುವ ಒಂದೆರಡು ಕೀರ್ತನೆಗಳನ್ನು, ಅವುಗಳ ತಾಳರಾಗಛ್ಛಾಯೆಗಳನ್ನು ಅಂಗ ವಿನ್ಯಾಸಗಳಿಂದ ಸಭಿಕರ ಮನಸ್ಸಿಗೆ ತಟ್ಟುವಂತೆ ತೋರ್ಪಡಿಸಿ ಹಾಡಿದ ಅನಂತರ)

(ನೇಪಥ್ಯವನ್ನು ಗಮನಿಸಿ)

ಸುಬ್ಬು, ಲೇ!...........ಅಲ್ಲಾ...ಆರ್ಯೆ ! ನಿನ್ನ ಅಲಂಕಾರ ಹಾಗಿರ್ಲಿ! (ಸೂಚಿಸುತ್ತ) ಸರ್ವಗುಣ ಸಂಪನ್ನರಾದ ಸಭಾಸದರು ಸರ್ವಜ್ಞನ್ಸರ್ವರೂವೆ ಸಮಯಕ್ಕೆ ಸರಿಯಾಗಿ ಸಂಗ್ರಹಿಸಿರ್ವ ಸಮಯದಲ್ಲಿ ನಿನ್ನ ಅಲಂಕಾರಕ್ಕೇಂತ ಎಷ್ಟೊಹ್ತ್ತೇ ಕಾದಿರೋದು ?........ಹ್ಯಾಗಿದ್ರೂನೂ ಸರಿ ತ್ಥಟ್ನೆ ಇಲ್ಬಾ!........ಮನೇಲಿ ನೀನ್ಹೇಳಿದ್ದಕ್ಕೆ ಪ್ರತಿಯಾಗಿ ಜರುಗ್ಸೋಕೆ ನಂಗ್‌ಧೈರ್ಯವಿಲ್ದಿದ್ರೂ ನೂವೆ ಇಲ್ಲಾದ್ರೂ ಹತ್ತು ಜನದೆದ್ರುಗೆ ನಾನ್ ಹೇಳ್ದಾಗ್ಗೆ ನೀನ್ಕೇಳ್ತೀ ಅಂಬೋ ಧೈರ್ಯ ನನಗೆ ಇರೋದ್ರಿಂದ........(ಪ್ರಕಾಶ) ಆರ್ಯೆ! ನಿನ್ನ ಅಲಂಕಾರವಂತಿರಲಿ ಇತ್ತಬಾ!!

(ಪ್ರವೇಶ ಅವಸರದಿಂದ, ಮುಕ್ಕಾಲಲಂಕೃತಳಾದ ನಟಿ)

ನಟಿ : ಏನೂಂದ್ರಿ!........ಅಲ್ಲಾ......ಆರ್ಯಪುತ್ರ! ನೀನು ನನ್ನನ್ನು ಆಹ್ವಯಿಸಿದ ಈ ಸಂತೋಷ ಸಂಭ್ರಮದಲ್ಲಿ ಯಾವ ಋತುವನ್ನು ವರ್ಣಿಸಲಿ ?

ಸೂತ್ರಧಾರ : (ನಟಿಗೆ) ಅಲ್ವೋ ಅಲಂಕಾರವಂತಿರಲೀ ಅಂದ್ರೆ ಅಂತೇ ಇರೋದೇ ? ಆ ಓವರ್‌ಕೋಟು ಆದ್ರೂ ಹಾಕ್ಕೊಂಡ್ ಬಾರೋ!...(ನಟಿಯು ನಿಷ್ಕ್ರಮಣ)...........ಒಳ್ಳೇ ಆಕ್ಬುಗಳು!!

(ಪುನಃ ಪ್ರವೇಶ—ಓವರ್‌ಕೋಟು ತಗಲಿಸಿಕೊಂಡ ನಟಿ)

ಸೂತ್ರಧಾರ : ಹಾಗೆ ಬಾ! (ಪ್ರಕಾಶ) ಸರ್ವಪುಷ್ಪಫಲ ಪ್ರಾಣಿಗಳಿಗೂ ಆಹ್ಲಾದವನ್ನೊದಗಿಸುವ ಬೇಸಿಗೆಯನ್ನು ಶ್ಲಾಘಿಸು.

ನಟಿ : ಹಯ್ಯೋ!......ಸರೀಂದ್ರೆ .... ಅಲ್ಲಾ, ಪ್ರಿಯತಮನೆ! ನೀನು ಆಜ್ಞಾಪಿಸಿದಂತೆಯೇ ಆಗಲಿ!

ರಾಗ-ಕಮಾಚು ತಾಳ-ರೂಪಕ (ಚತುರಶ್ರ ಲಘು)

ರಾರಾಜಿಸುತ್ತಿಹುದು ಬೇಸಿಗೆ ॥ಪ॥
ಹುದು ಬೇಸಿಗೆ ॥
ತ್ತಿಹುದು ಬೇಸಿಗೆ ॥
ಸುತ್ತಿಹುದು ಬೇಸಿಗೆ ॥
ಜಿಸುತ್ತಿಹುದು ಬೇಸಿಗೆ ॥
ರಾ...ಜಿ, ಸುತ್ತಿ...ಹುದು ಬೇಸಿಗೆ ॥
ರಾ ರಾ ಜಿ ಸು ತ್ತಿ...ಹು ದು ಬೇ ಸಿ ಗೆ ॥
ಸುಮಬಾಣನ ಸುವ ಸೌರಭ ಭರದಿಂದಲಿ ವಿರಾಜಿಸುತ್ತ....॥ಅ॥
ಕೀರಂಗಳು ಕಿರಲೂತಲಿ
ಭ್ರಮರಂಗಳು ಭ್ರಮಿಸುತ್ತಲಿ
ಪುಷ್ಪಂಗಳ್ ಪುಷ್ಪೂತಲಿ
ವೃಕ್ಷಂಗಳು ವೃಕ್ಷೀಸುತ ॥ಚ॥ —ರಾರಾಜಿಸುತ್ತಿಹುದು ॥

ಸೂತ್ರಧಾರ : (ಮಧ್ಯೆ ಬಾಯಿಹಾಕಿ) ಅದಿರಲಿ! ಪುಷ್ಪಗಳು ಪುಷ್ಪುವುದು ಎಂದರೇನು?

ನಟಿ : ಆರ್ಯನೆ, ನಿನಗೆ ತಿಳಿಯದೆ? "ಕಮಲೇ ಕಮಲೋತ್ಪತ್ತಿಃ" ಎಂದು ಕಾಳಿದಾಸನ ವಾಕ್ಯವೇ ಇಲ್ಲವೇ ?

ಸೂತ್ರಧಾರ : ಸರಿಯೇ! ಆದರೂ ನಿನ್ನ ಹಾಡಿನ ತಿರುಳು ಅತಿ ಅಂತರ್ಗರ್ಭಿತವಾಗಿರುವುದಲ್ಲಾ! ?

ನಟಿ : ಅಷ್ಟೇನೂ ಅಂತರ್ಗರ್ಭಿತವಲ್ಲ! ವಸಂತರಾಜನ ಪ್ರಭಾವದಲ್ಲಿ ಸಮಸ್ತ ಜಂತು ಜಲಚರ ಪಾದಪಗಳು ಸ್ವ–ಸ್ವ ಗುಣಕರ್ಮಗಳನ್ನು ನೈಸರ್ಗಿಕವಾಗಿ ಪ್ರಕೃತಿಯಲ್ಲಿ ವ್ಯವಸ್ಥೆಗೆ ತರುತ್ತಿದ್ದವೆಂಬುದೇ ನನ್ನ ಹಾಡಿನ ತಾತ್ಪರ್ಯ.

ಸೂತ್ರಧಾರ : ಓ! ಸರಿ!......ಸುಮಯಳೆ! ನಿನ್ನ ಸವಿಗಾನದಿಂದ ಸಭಿಕ ಸರ್ವರೂ ಸಂತುಷ್ಟರಾಗಿರುವರು. ಇವರನ್ನು ಸಂತೋಷದಲ್ಲಿ ಮತ್ತಷ್ಟು ಮಗ್ನಿಸಲು ಯಾವ ನಾಟಕವನ್ನು ಪ್ರದರ್ಶಿಸೋಣ ?

ನಟಿ : (ತನ್ನಲ್ಲಿ) ...ಇದೇನ್ ಹುಚ್ಚೂಂತಂದ್ರೆ!......"ಶೂರ್ಪನಖಾಕುಲ ವಿಲಾಸ" ಅಂತ ನೋಟೀಸಿನಲ್ಲಾಕಿಬಿಟ್ಟು ಕಾಸು ಕಸ್ಕೊಂಡು ಜನಗಳನ್ ಜಮಾಯಿಸಿಬಿಟ್ಟು (ಆಣಕಿಸುತ್ತ) ಈಗ್ಯಾವ ನಾಟ್ಕ ಆಡೋಣಾಂತಂದ್ರೆ...? ಅದು ನಮ್ಮ ಕೈಲಿಧೆಯೆ ? ಎಲ್ಲಾ ನನಗೆ ಬಿಟ್ಬಿಡಿ! (ಪ್ರಕಾಶ) ಪ್ರಿಯತಮನೆ! ರುಂಡಮುಂಡೋತ್ಪನ್ನನಾದ ಗುಂಡೂ ಕವಿಯಿಂದ ವಿರಚಿತವಾದ ಶೂರ್ಪನಖಾಕುಲವಿಲಾಸವನ್ನು ಪ್ರದರ್ಶಿಸುವುದೇ ಉಚಿತವಲ್ಲವೇ ?

ಸೂತ್ರಧಾರ : (Sotto) ಪಾರ್ಟುಗಳೆಲ್ಲ ಬಂದಿದ್ದಾರೆಯೋ?......ಹಾಗಿದ್ರೆ ಷುರುತಾನೆ ?

ನಟಿ : (Sotto) ಹೂ!......

ಸೂತ್ರಧಾರ : ಮಂಗಳಾರ್ತಿ! ?

ನಟಿ : ಆಯ್ತು!

ಸೂತ್ರಧಾರ : ಕಾಯಿ ಪೊಪ್ಪುಗಳು ಹಣ್ಣು ಯಥಾಪ್ರಕಾರ ಯಜಮಾನ್ರಿಗೇನೋ?

ನಟಿ : ವಾ?......

ಸೂತ್ರಧಾರ : ಕಾಯ್ಹಣ್ಣು ಪೂಜೇ ಆದ ಪ್ರಸಾದ ಹೇಳ್ತೀನೆ...ಏನಾದ್ರೂ ಜಾತಾ ಬಾಕೀ ಉಂಟೋ? ಇಲ್ಲಾ ಯಥಾಪ್ರಕಾರ ತುಂಡೋ!? ,

ನಟಿ : (Sotto) ತುಂಡೇ! (ಕೈ ಬೆರಳಿನಿಂದ ಸೂಚಿಸುವಳು)

ಸೂತ್ರಧಾರ : ಇನ್ನ್ ಕಲೆಕ್ಷನ್ನು ?

ನಟಿ : (Sotto) ಅದೂನೂ (ತುಂಡನ್ನು ಸೂಚಿಸುವಳು) ತುಂಡೇ!

ಸೂತ್ರಧಾರ : (Sotto) ಸರಿ, ಇನ್ನೇನು? ಇದ್ದೇಇದೆ ಹಣೆ ಬರಹ! (ಪ್ರಕಾಶ) ಆರ್ಯೆ! ಇನ್ನು ವಿಳಂಬಿಸಬಾರದು......ಮುಂದಿನ ಕಾರ್ಯಗಳನ್ನು ಏರ್ಪಡಿಸಿ ಈ ಸಭಿಕರ ಮನೋಭೀಷ್ಟವನ್ನು ನೆರವೇರಿಸಲು ಯತ್ನಿಸುವಾ! ಪೊರಮಡು! ಪೊರಮಡು! ನೀಂ ಮುಂ ಪೊರಮಡು, ನಾಂ ಪಿಂ ಪೊರಮಡುವೆನು.

ನಟಿ : — ಆರ್ಯಪುತ್ರ! —

ಪೊಪಲ್ ನೀಂ ಮುಂ ಮುಂ ಪೊರಮಡು! ನಾಂ ಪಿಂ ಪಿಂ ಪೊರಮಡುವೆನು!

[ನಿಷ್ಕ್ರಮಣ]

ಅಂಕ ೧

ದೃಶ್ಯ ೧

ರಾಕ್ಷಸ ರಾಜನ ಆಸ್ಥಾನ

[ಸೈನ್ಯಾಧಿಪತಿಯು ಪ್ರವೇಶಿಸಿ ಸಿಂಹಾಸನಕ್ಕೆ ನಮಸ್ಕರಿಸಿ ಸ್ವಪೀಠವನ್ನು ಅಲಂಕರಿಸುವನು ; ಮಂತ್ರಿಯೂ ಪ್ರವೇಶಿಸಲು ಸೈನ್ಯಾಧಿಪತಿಯು ಎದ್ದು ನಿಲ್ಲುವನು ....ಇಬ್ಬರೂ ಭದ್ರಾಸನಕ್ಕೆ ಕೈಮುಗಿದು ಸ್ವಸ್ಥಾನಗಳನ್ನು ಅಲಂಕರಿಸುವರು.]

ನೇಪಥ್ಯದಲ್ಲಿ—
ಸ್ವರ್ಗಮರ್ತ್ಯ ಪಾತಾಳಪ್ರಭು ಮಂಡಲಾಗ್ರೇಸರ ಕೇಸರೀ!
ಅಹರ್ನಿಶಿದೇದೀಪ್ಯ ಜಾಜ್ವಲ್ಯಮಯೀ ।
ರಿಪುಗಣ ಮಂಡಲ ತಂಡಖಂಡೀ! ತ್ರಿಲೋಕೇಶ್ವರ ರಾವಣೇಶ್ವರ
ನಾಗರ್ಭೋದ್ಭವ ಶೂರ್ಪನಖಾ ಕುಲಾಂತ್ಯ ಮಕುಟ ಮಣೀ!
ರಾಜರಾಜೇಂದ್ರ ಕುಲೋದ್ಭವ ಮಾರ್ತಾಂಡ ಮಯೀ!

ಪ ರಾ ಾ ಾ ಾ ಾ ಕ್!

[ಸಕಲ ಸಾಮಂತ ಸಮೇತನಾಗಿ ಮಹಾರಾಜನು ಪ್ರವೇಶಿಸುವನು............ಮಂತ್ರಿ ಸೈನ್ಯಾಧಿಪತಿಗಳು ಎದ್ದು ತಲೆಬಾಗಿ ಕೈ ಮುಗಿಯುವರು.]

ಮಹಾರಾಜ : ಎಲ್ಲೈ ಮಂತ್ರಿಯೇ! ನನ್ನ ರಾಜ್ಯವು ಹ್ಯಾಗಿರುವುದು ?

[ಎನ್ನುತ್ತಾ, ಅತಿ ರಭಸದಿಂದ ಸಿಂಹಾಸನವನ್ನು ಅಲಂಕರಿಸುವ ಗಡಿಬಿಡಿಯಲ್ಲಿ ಹಿಂದಿನ ಓಂಗಾಲುಗಳು ಕುಸಿದು, ಭೂಪತಿಯು "ಪಲ್ಟಿ"ಯೆಂದೇ ವರ್ಣಿಸಲು ಸಾಧ್ಯವಾದ ಅನಾಮತ್ತಾಗಿ ಮತಿಯಾಗಿ ಸಿಂಹಾಸನದೊಡನೆ ರಂಗಸ್ಥಲದ ಹಿಂಭಾಗದಲ್ಲಿ ಅಧೋಮುಖನಾಗಿ ಅವತರಿಸುವನು. ರಾಜಸಭೆಯ ಸಭಿಕರು ದಿಗ್ಭ್ರಮಿತರಾಗಿ ಸ್ತಂಭಿತರಾಗುವರು]

o o o o

[**ಕಿಟ್ಟಿ :** (audience ಇಂದಲೇ) ಅಯ್ಯಯ್ಯೋ! ಬಿಳ್ಳೀ ಗಂಡಸ್ರೋ ನೀವು! (ರಂಗಸ್ಥಳಕ್ಕೆ ಲಂಘಿಸಿ) .... ತಲ್ಕಾಯ್ ಮುಕೊಂಡ್ ಬಿದ್ದಿದ್ದಾನೇನೋ ಕಾಣೇ ತಂಮ್ಮ! ತೆಪ್ಪನ್ನ್ ನಿಂತ್ಕೊಂಡಿದ್ದೀರಲ್ಲೋ.....ಕುಮ್ಮಕ್ಕೇ ಕೊಡ್ದೆ! (ರಾಜನ ಸಮೀಪಕ್ಕೆ ಹಾರುವನು) ಏಟೇ ತಂಮ್ಮಾ! ? (ಸುತ್ತಮುತ್ತಲೂ ನೋಡಿ ಸಭಿಕರನ್ನು ಗಮನಿಸಿ......ಕಣ್ಣುಗಳಲ್ಲಿ ಭೀತಿಯನ್ನು ತೋರ್ಪಡಿಸುತ್ತಾ)......ಓಹೋ! ಸೀನು! ಮರೆತಿದ್ದೆ! (ಉಚ್ಚ ಧ್ವನಿಯಿಂದ) ಚಿಣ್ಣಾ! ಲೇ!!! **ಸೀನ್ ಕೆಟ್ಹೋಯ್ತು! ಪರದೆ ಬಿಡೋ ಥ್ಫೂತ್!**]

[ತೆರೆಯು ಥಟ್ಟನೆ ಬೀಳುವುದು]

[ಒಳಗಿನಿಂದ ಬಂದು ರಂಗಸ್ಥಳದ ಒಂದು ಪಾರ್ಶ್ವದಲ್ಲಿ ನಿಂತು audienceಲ್ಲಿ ತನ್ನೊಂದಿಗಿದ್ದ ಸ್ನೇಹಿತನಿಗೆ]

ಪರ್ವಾ ಇಲ್ಲಾಕಣೋ! ಎಲ್ಲಾ ಸರ್ಹೋಯ್ತು! ಬೇರೆ ಬರುತ್ತೆ ರಾಜಾಪಾರ್ಟು .. .. ಬಿದ್ದು Casualty (ಕ್ಯಾಷುಯಲ್ಟಿ ಲಿಸ್ಟ್) listಗೆ ಸೇರಿಕೊಂಡೋವ್ನು ತಂಮ್ಮ! ಈಗ ಬರೋ ಬಾಬತ್ ಬೇರೆ ಕಾಣೋ! ಅದು ಬ್ರಿಬಿರಿ ಬಾಳು!...ಕಂದ hopelessoo!...ಹಾಡು ತಕ್ಕಟ್ಟೆ! ಅ ...ಬ್ರಿಬಿರೀಂದ್ರೇನೇ ? ಲಂಚ ತಕ್ಕೊಳ್ಳೋದು ಕಾಣೋ......ಲಂಚ! ಬಾಳೂ......ಮೊದ್ಲು ಆತಾರಾ ಕಚೇರೀಲಿ ಪಾಪೀಷ್ಟ್ರ ಕೆಲ್ಸ ಮಾಡ್ತಿದ್ದ!...ಆ ? ಪಾಪೀಷ್ಟ್ರೂಂದ್ರೇನೆ? .... ಬಂದೋವರ್ಗೆಲ್ಲಾ ಬರ್ಕೊಡೋದು...ನಕಲು...ಕಾಪೀ ಅಂತಾರಲ್ಲಾ ಅದು...ಅಯ್ಯಯ್ಯೋ! ಪಾಪೀಷ್ಟ್ರಲ್ಲ ಕಾಣೋ...ಕಾಪೀಷ್ಟ್ರು!...ಆಮೇಲೆ ಅದೆಂಥಾದ್ದೋ ಕೆಲ್ಸಾ!...ಕೈಲಿ ಸರ್ಕಾರದ್ ದುಡ್ನು ಓಡಾಡೋ ಕೆಲ್ಸಾ **ಕೈತೊಳಕೊಳ್ದೇನೆ ಓಡಾಡಿಸ್ದ ಸರ್ಕಾರಿ ದುಡ್ನ ಕೈಲಿ!**... ಅದ್ರೇ ಇವನ್ ತೊಳೆಯದ್ಕೈಲಿ ಅದೆಂಥಾ ಗೋಂದ್ ಅಂಟಿಕೊಂಡಿತ್ತೋ......ಅದೆಂಥಾ ಮೇಣ ಮೆತ್ಕೊಂಡಿತ್ತೋ!. ಓಡಾಡ್ತಿದ್ದ್ ಸರ್ಕಾರದ್ದುಡ್ನಲ್ಲಿ ಸಾವಿರವೋ ಏನೋ ರೂಪಾಯಿಗಳು ಇವನ್ಕೈಗೇ ಅಂಟಿಕೊಂಡ್ಬಿಟ್ಟುವು......... **ಅಂಟು ಬಿಡಿಸಿಕೊಳ್ಳುವಷ್ಟರಲ್ಲೇ ಅರೆಸ್ಟು!** "ಬ್ರಾಹ್ಮಣ! ಬಿಡ್ನೋಣ!" ಅಂತಂದ್ರೋ........ರೆಪ್ಪೆವಗೂ ರುಜುವಾತೂ!...ಸರಿ! ಜೈಲು! ಅದರೇನು!...ಅವನಲ್ಲಿದ್ದದ್ದು.... ಆರೇ ತಿಂಗ್ಳು!...ಹೆಚ್ಚಿಲ್ಲ!...ಈಗ ಕ್ರಾಪ್ ಬೆಳೆದ್ಬಿಟ್ಟಿವೆ!! ಅಲ್ದೇ. ಅದ್ವರೆಗೂ ಅವಮಾನೇರಿ object ಮಾಡ್ತಿದ್ದ ಕ್ರಾಪೂ........ಅಲ್ಲಿ ಲಭ್ಯ! ಈಗ ಬೆಳ್ದದೆ!!

(ಪರದೆಯು ಹತ್ತುವುದನ್ನು ಗಮನಿಸಿ)

........ಹೀಗ್ಬಾ......ತಿರ್ಗ್ಾ ಷುರು!......

(ಪಕ್ಕಕ್ಕೆ ಹೋಗಿ ಸ್ವಸ್ಥಾನದಲ್ಲಿ ಇಬ್ಬರೂ ಕೂಡುವರು.)

ದೃಶ್ಯ ೨

ಅದೇ ರಾಕ್ಷಸರಾಜನ ಆಸ್ಥಾನ

[ಪರದೆಯು ಏಳುತ್ತಲೇ ಯಥಾಪೂರ್ವಕ, ಮಂತ್ರಿ ಸೇನಾಧಿಪತಿಗಳು ಪ್ರವೇಶಿಸಿ, ಅನಂತರ ಸಮಸ್ತ ಸಾಮಂತರೊಡನೆ ಪೂರ್ವೋಕ್ತ ರಾಜಭಟ ವಂದಿಮಾಗಧರ ಪರಾಕನ್ನು ಮುಂದಿಟ್ಟುಕೊಂಡು ಮತ್ತೊಬ್ಬ ರಾಜನು ಪ್ರವೇಶಿಸಿ, ಸಿಂಹಾಸನದ ಮೆಟ್ಟಲನ್ನು ಅತಿಜಾಗರೂಕತೆಯಿಂದ ಹತ್ತಿ, ಆಸನ ವನ್ನು ತಟ್ಟಿ ಚಲಿಸಿ, ಆಸನದ ಭದ್ರತೆಯನ್ನು ಸಂದೇಹಿಸುತ್ತಿರುವ ಹೃದಯದ ವ್ಯವಸ್ಥೆಯನ್ನು ಭಗ್ನಪಡಿಸಲು ಸಿಂಹಾಸನದ ಕಾಲುಗಳನ್ನು ಜಗ್ಗಿಸಿ, ಅವುಗಳ ಸ್ಥಿರತೆಯನ್ನು ದೃಢಪಡಿಸಿಕೊಂಡು ....ಆದಾಗ್ಯೂ ಅಪನಂಬಿಸುತ್ತಾ......ಆಸನದ ಅಂಚಿನ ಅಗ್ರಾಂಶವನ್ನು ಅಲಂಕರಿಸುವನು.]

ಕಿಟ್ಟಿ : [ಓಹೋ! ಬಿರಿ ಬಿರಿ (bribery) ಬಾಳು ಇವತ್ತು ಚಕ್ಕರ್ ಅಂತ ಕಾಣುತ್ತೋ! ಇವನು ಯಾರೊ ? ! ಬಾಯಿ ಬಿಡ್ಲಿ, ತಿಳಿಯುತ್ತೆ !]

ರಾಜ : ಎಲೈ ಮಂತ್ರಿಯೇ ನನ್ನ ರಾಜ್ಯವು ಹೇಗಿರುವುದು ? ಕಾಲಕಾಲಕ್ಕೆ ತಕ್ಕ ಮಳೆ ಬೆಳೆಗಳಾಗುತ್ತಿರುವುವೇ ?

[ಮಾತುಮಾತಿಗೂ ಆಸನದ ಭದ್ರತೆಯನ್ನು ಪರೀಕ್ಷಿಸುತ್ತ ಹೇಳುವನು.]

ಮಂತ್ರಿ : [ಹಾಡು ಪ್ರಾರಂಭಿಸುವ ಮುನ್ನ, ಹಾರ್ಮೋನಿಯಮ್ ಬಾರಿಸುವವನಿಗೆ ತನ್ನ ತಲೆಯ ಮೇಲೆ ಬಲಗೈನ ತೋರ್ಬೆಟ್ಟು ಮಧ್ಯದ ಬೆಟ್ಟುಗಳನ್ನೂ ಇಟ್ಟು, **'ಕರೀ ಎರಡು'** ಶೃತಿ ಹಿಡಿಯಬೇಕೆಂದು ಸೂಚಿಸುವನು. ಆದರೆ ತನ್ನ ತಲೆಯ ಮೇಲೆ ಬಿಳಿಯ ಪಾಗು ಇದ್ದುದರಿಂದ ಹಾರ್ಮೋನಿಯಮ್ ಅವನು 'ಎರಡು ಬಿಳಿ' ಶೃತಿ ಹಿಡಿದು ಬಾರಿಸಲಾರಂಭಿಸುತ್ತಲೇ ಮಂತ್ರಿಯು ಪಲ್ಲವಿ ಹಾಡಲು ಪ್ರಾರಂಭಿಸಿ, ಶೃತಿ ಸೇರದಿರಲು ವಾದ್ಯಗಾರನ ಕಡೆ ಕೆಂಗಣ್ಣಿನಿಂದ ನೋಡಿ, ಪುನಃ ತಲೆಯ ಮೇಲೆ ಕೈಯಾಡಿಸಲು ಹೋದಾಗ ಬಿಳುಪಾಗಿದ್ದುದು ಜ್ಞಾಪಕಕ್ಕೆ ಬಂದು, ಅದನ್ನು ತೆಗೆದು ತೋರಿಸಲಾಗದೆ, ಕೈಕೈ ಹಿಸುಕಿ, ಕೊನೆಗೆ ಕಣ್ಣಿನ ಹುಬ್ಬಿನ ಮೇಲೆ ಎರಡು ಬೆರಳನ್ನಾಡಿಸು ವನು. ಅಲ್ಲಿಗೂ ವಾದ್ಯಗಾರನು ಸರಿಹೊಂದದಿರಲು ಕೊನೆಗೆ ತನ್ನನ್ನೇ ತಾನು ನೋಡಿಕೊಂಡು ಕರೀ ನಿಲುವಂಗಿ ಹಾಕಿಕೊಂಡಿದ್ದುದನ್ನು ನೋಡಿ ಎಡತೋಳಿನ ಮೇಲೆ ಎರಡು ಬೆಟ್ಟಾಡಿಸಿ ತೋರಿಸುವನು. ವಾದ್ಯಗಾರನು ಆಗ ಸರಿಮಾಡಲು, ಹಾಡಲು ಪ್ರಾರಂಭಿಸುವನು. ಹಾಡಿನಲ್ಲಿ "ಯಮ್ಮೆಯ" ಎಂಬ ಪದವನ್ನು, "ಎಮ್ಮಯ" ಎಂದು ಮೊದಲನೆಯ ಸಲ, "ಎಮ್ಮೆಯ" ಎಂದು ಎರಡನೆಯ ಸಲ ಹೇಳುವನು. 'ಪ್ರಜೆಗಳು' ಎಂದು ಹೇಳುವಾಗ ಚಿಕ್ಕಮಕ್ಕಳಿಂದ ಯುವ ಕರು ಎಂದು ಹೀಗೆ ಎತ್ತರ ವ್ಯತ್ಯಾಸವಿರುವ ಜನಗಳು ಎಂಬರ್ಥ ಬರುವಂತೆ, ಬಲಗೈಯಿಂದ ಅವರವರ ಎತ್ತರವನ್ನು ಸೂಚಿಸುವನು. "ಗರುಡಿಯ ಸಾಧನೆ" ಹೇಳುವಾಗ ತಾನೇ ಮೂರುನಾಲ್ಕು ಸಲ ಬಸ್ಕಿ ಹೊಡೆದು ತೋರಿಸುವನು.]

ಹಾಡು- ರಾಗ—ಕಮಾಚು ತಾಳ-ಆದಿ

ಲಾಲಿಸು ಭೂವರಾ, ಹೇಳ್ವೆನು ನಾ। ನೀ ||ಪ||
ಕಾಲಕಾಲದಿ ಇಹ ಧರ್ಮವ ನೀ ಇ ಈ ||ಅ||
ಯಮ್ಮೆಯ ದೇಶದೊಳ್ ಇರುತಿಹ ಪ್ರಜೆಗಳು
ಸಂಮ್ಮದಗೊಳ್ಳುತ್ತಾ ಸುಖಿಪರು ನೀ ||೧||
ಕ್ಷೋಣಿಯೊಳೆನ್ಮಯ ಕಪ್ಪಕಾಣಿಕೆಗಳ

ಕ್ಷೋಣಿಸುತ್ತಿರ್ಪರು ಸರ್ವರೂ ನೀ ॥೨॥
ಕ್ಷತ್ರಿಯರೆಲ್ಲರೂ ಗರುಡಿಯ ಸಾಧನೆ
ನಿತ್ಯವೂ ಗೆಯ್ಯುತಾನಂದಿಪರ್ । ನೀ ॥೩॥

ಮಹಾರಾಜನೇ ! ನಮ್ಮ ರಾಜ್ಯವು ಈ ಪ್ರಕಾರವಾಗಿಯೇ ಇರುವುದು.

ರಾಜ : ಮಂತ್ರಿಯೇ ! ನಿನ್ನ ಮಂತ್ರಿತ್ವಕ್ಕೆ ಮೆಚ್ಚಿದೆನು !

(ಒಂದು ಗಂಟನ್ನು ಕೊಟ್ಟು)

ಇದರಲ್ಲಿರುವ ಪಾರಿತೋಷಕವನ್ನು ಪರಿಕಿಸಿ ಸ್ವೀಕರಿಸು.

* * * *

[**ಕಿಟ್ಟಿ :** (ತನ್ನ ಸ್ಥಾನದಿಂದಲೇ) ಇದ್ಯಾರ್ ಗೊತ್ತೇನೋ !...... ಯಾರೋ ಅಂತಿದ್ದೆ ! proprietoroo ! ಶಾಮಾಚಾರಿ ! ಸದಾರೋತಿ !! ಸಾವಿರ್ ರೂಪಾಯಿ ಟ್ಯಾಕ್ಸ್ collectionoo !......ಸದಾರೋತಿ ! ಇನ್ನು ಆ ಮಂತ್ರೀನೋ ?......ಫ್ರೆಂಡರ್ ಬುಲ್ಸ್ಸು !...... ಬೊಬ್ಬಿಕಟ್ಟೇಲಿ ಕಾಳಿದಾಸ ಚರಿತ್ರೇಲಿ, ಭೋಜನ್ನ ಮಾಡೋ ಬಾಬ್ತು......ಕಂಟ್ರ್ಯಾಕ್ಟರ್ ಹೊಟ್ಟೆ ಉರುದ್ರೇನೇ ತಂಣ್ಣು ಇವನ್ನೊಟ್ಟೇಗೆ !......ಗಂಟ್ನಲ್ಲಿ ಏನಿದ್ಯೇ ?...ಏ ಫಳ್ಗಾ ಅಂಬೋ ಬಾಬ್ತೆಲ್ಲಾ, ಹಿರಣ್ಯಕಶಿಪು ಚೆಸ್ಟು ! ಅವನ್ಗಲ್ಲಾ ಅದು ! ಸೈಡ್‌ಪಿಂಗೆಲ್ಲಾ ಗಂಟಿನೊಳಗಿನಿಂದ ಕಸ್ಕೊಂಬಿಡ್ತಾನೆ ಕಂಡಕ್ಟರು !!!]

* * * *

ರಾಜ : ಎಲೈ ಸೈನ್ಯಾಧಿಪತಿಯೇ ! ನನ್ನ ಸೈನ್ಯವು ಹೇಗಿರುವುದು !

ಸೈನ್ಯಾಧಿಪತಿ : (ಅಡಿಯುಗಲ ಚಂದ್ರಾಯುಧವನ್ನು ಝಳಪಿಸುತ್ತಾ)

ರಾಗ—ಕಮಾಚು ತಾಳ—ಮಿಶ್ರ ಗತಿ—ತೀವ್ರ

ಭೂವರನೇ ಲಾಲಿಸೈ ॥ಪ॥

ಈವಿಧದೊಳ್ ನಾನೊರೆವೆನು ॥ಅ॥
ಚಂಡ ಖಂಡಗಳ ತಂಡದಿಂದ
ರಿಪು ಮಂಡಲಂಗಳಂ ಖಂಡಿಸುತಂ ।
ಮಂಡಲೇಶಾ । ಖಳತಂಡಗಳ ನಾವ್
ಖಂಡಿಸುತ್ತ ಮಿಗೆ ಖಂಡಿಸುತ್ತ........॥ಚ॥ **ಭೂ....**

ಕಂದ॥ ಪ್ರತಿಪತ್ ಪ್ರತಿ ಕಕ್ಷಿಗಳಂ ।
ಕೌಂಕ್ಷೇಯುಕದಿಂದ ಶಿಕ್ಷೀಸೆಮ್ಮಯ ಸೈನ್ಯಂ ॥
ರಕ್ಷಾಪೇಕ್ಷಗರ್ಗಳಂ
ಸಂರಕ್ಷಿಸಿ ನಿಷ್ಪಕ್ಷಪಾತದುಕ್ಷೇಂದ್ರಂ॥

(ಎನ್ನುತ್ತ, ರಾಜನ ವದನವನ್ನು ಸಮೀಪಿಸುತ್ತಿರಲು, ರಾಜನು, ಸೈನ್ಯಾಧಿಪತಿಯ ಬಾಯಿಂದ ಬರುವ ಎಂಜಲಿನ 'ಮುಂಗಾರು' ಹನಿಯ ವರ್ಷವನ್ನು ತಾಳಲಾರದೆ, ಮುಖ ಮುಚ್ಚಿಕೊಳ್ಳಲಾಗದೆ, ಅತ್ತಿತ್ತ ತಿರುಗಿನೋಡಿ. ಕೊನೆಗೆ ತನ್ನ ಸಿಂಹಾಸನಕ್ಕೆ ಸಿಕ್ಕಿಸಿದ್ದ ಶ್ವೇತಛತ್ರವನ್ನು

ಹೋಲುವ ಕೊಡೆಯನ್ನೇ ಕಿತ್ತು ಸೈನ್ಯಾಧಿಪತಿಯ ಮುಖ ವರ್ಷವನ್ನು ತಡೆಯಲು ಹಿಡಿದುಕೊಳ್ಳು ವನು. ಇದನ್ನು ಕಂಡು ಸೈನ್ಯಾಧಿಪತಿಗೆ ಮತ್ತಷ್ಟು ರೇಗಿ)

ಕತ್ತಿಯಂ ಝುಳಪಿಸಿ । ಅತ್ತಿತ್ತ । ಶತ್ರುವಂ ಸುತ್ತಮುತ್ತಿ । ಭಯವಂ ಬಿತ್ತಿ ಕತ್ತರಿಸಿ ....ಯೇ....·...ಯೇ ....ಯೇ

(ಎನ್ನುತ್ತ ರಂಗಸ್ಥಳದಲ್ಲಿ ಅಲ್ಲಿಂದಿಲ್ಲಿಗೆ ಹಾರುತ್ತ ಆವೇಶದ ಭರದಲ್ಲಿ ರಾಜನ ಮೇಲೂ ಕೈಮಾಡಲು ಮುಂದುವರಿಯುವನು)

ರಾಜ : (ಕೊಡೆಯನ್ನು ಸ್ವಸ್ಥಾನದಲ್ಲಿಟ್ಟು ಸೈನ್ಯಾಧಿಪತಿಯ ಕೈಹಿಡಿದು ಸಮಾಧಾನಪಡಿಸಿ, ಮೃದವವೃತ್ತ) ಸೈನ್ಯಾಧಿಪತಿಯೇ ! ಸಂತುಷ್ಟನಾದೆನು ! ಸಂತುಷ್ಟನಾದೆನು ! ನಿನ್ನ ಸಾಮರ್ಥ್ಯವು ಯುದ್ಧರಂಗಕ್ಕಿರಲಿ ! ಈಗ ಇಲ್ಲಿ ಸ್ವಲ್ಪ, ಸಮಾಧಾನವನ್ನು ತಂದುಕೋ ! ಈ ಪಾರಿತೋಷಕ ವನ್ನು ಪರಿಕಿಸಿ ಸ್ವೀಕರಿಸು !

(ಮಂತ್ರಿಗೆ ಕೊಟ್ಟಂತೆಯೇ ಸೈನ್ಯಾಧಿಪತಿಗೂ ಒಂದು ಗಂಟನ್ನು ಕೊಟ್ಟು, ಪರಿಕಿಸಿ ಸ್ವೀಕರಿಸಲಾಜ್ಞಾಪಿಸುವನು)

[ಕಿಟ್ಟಿ : (ಹೆದರಿದ ಸ್ನೇಹಿತನಿಗೆ) ಹೆದರ್ಬೇಡ್ವೋ, ಲೇ, ಹೆಣ್ಣೆಕ್ಸ್ ! ಕತ್ತಿ ಅಲ್ಲಾ ಕಾಣೋ ಅದು......ಜಾಕಾಯ್ ಹಲ್ಗೆ !...ಆ ಪ್ರೊಪ್ರೈಟರ್ ಸೇದ್‌ತಾರಲ್ಲಾ !......ಆ ಸಿಗರೇಟ್ ಪ್ಯಾಕೆಟ್ಟಿನ ಸಿಲ್ವರ್ ಕಾಗ್ದಾ ಅಂಟಿಸಿರೋದು,—ಆ ಆಯುಧಕ್ಕೆ !...ನಿಜವಾದ ಕತ್ತೀನ ಎಂಪರ್ಲಾಮೆಂಟ್ನೋಕೇ ಎಲ್ಲಿದೋ ತಾಕ್ಸತ್ತು ಆ ಹಲ್ಲೀಗೆ?...ಅವನ್ ಮೈಯೆಲ್ಲ ಬರೀ ಚಮ್ಡಾನೂ ಎಲುಬೂ !...Fifth form historyಲಿ ನೆಪೋಲಿಯನ್ Bonyparte ಅಂತಾರ್ ನೋಡು ! ಆ ಪೂರ್ವಾರ್ಧದ ಜಾಬ್ತು !...ಅವನ್ ಮೈಯಿ ಉಬ್ಬಿಸಿರೋದೆಲ್ಲಾ, ಭೀಮನ ಪಾರ್ಟಿಗೇಂತ ಮಾಡಿಸ್ದ ಸುಪ್ಪತ್ಗೆ ಷರ್ಟು !!]

ರಾಜ—

ರಾಗ—ಜುಂಜೋಟಿ—ತಾಳ—ಮಿಶ್ರಛಾಪು. ಹಾಡು—

ಭಾಪು ! ಭಾಪು ! ಸೈನ್ಯಾಧಿಪತಿಯೇ ॥ಪ॥
ಭಾಪುರೆ ! ಭಾಪುರೆ ! ಭಾಪು ಮಂತ್ರೀಯೇ ॥ಅ॥
ಅರಿಕುಲ ಭೀಮನೇ ! ವರಸೇನಾಪತಿಯೆ ನೀ
ಈಪರಿಯೆನ್ನ ಸೈನ್ಯವಾ ಸಲಹೊ ಧೀರಾ ॥
ಮಂತ್ರಿಚಾಣಿಕ್ಯ ನೀನು। ಮಂತ್ರಿತ್ವವನ್ನು ಮಾಡೆ।
ಮಂತ್ರದೊಳುವೆ ಸ್ವೈತಂತ್ರ ನಿಂತಿಹುದೈ॥
ನೀವೀರ್ವರೆನ್ನನು। ಈ ವಿಧದೊಳುಮಿಗೆ
ಭಾವಿಸೆ ಕೀರ್ತಿಯು ಧರೆಯೊಳು ಮೆರೆಯೇ ॥ಭಾಪು ! ಭಾಪು !

ನನ್ನ ಸಕಲೈಶ್ವರ್ಯಗಳೂ ನಿಮ್ಮದೆಂದೇ ಭಾವಿಸಬೇಕು.

* * * *

[ಕಿಟ್ಟಿ : (ಯಥಾಪೂರ್ವಂ) ಆ ಕೋಟೇ ಅವನ್ದಲ್ಲಾ ! ಕಂಪ್ನೀದು...Act ಮಾಡೋ ವಾಗ ಭುಜಗಳು ಹಾಸ್ನಿ ಹರ್ಪ್ಯಾಕಿದ್ನೋ ದರ್ಜಿ ಛಾರ್ಜ್ ಕಟ್ಬೋದವನ್ ಜುಟ್ಗೇನೆ......... ಕ್ರಾಪಾಗಿದ್ರೂನೂಪೆ]

(ನೇಪಥ್ಯದಲ್ಲಿ)

ಕಂದ: ರಾಗ — ಬೇಹಾಗ್

ಹರಿತಾಂ ಪಿಂಬಲವಾಗಿರೆ
ವರಮುಷಿ ಸತಿಯರ ಕೆಡಿಸಿದಾ ಕ್ಲೈಬ್ಯಂ ।
ಪರಮಾನಿನಿಯರ ನರಿಯದ ನಿನ್ನ
ಅರಸಗೆ ಪುರಪುರವ ನಾಳ್ವಾಪಾಪಿಯು ಸಾಟಿಯೇ ॥ ?

(ರಾಜನು ಇದನ್ನು ಕೇಳಿದ ಕೂಡಲೇ ತನ್ನ ವಂಶಪಾರಂಪರ್ಯವಾಗಿ ಬಂದಿರುವ ಕರ್ತವ್ಯವನ್ನು ಜ್ಞಾಪಿಸಿಕೊಂಡು ಸಿಂಹಾಸನದಿಂದ ಇಳಿದು ರಂಗಸ್ಥಳದ ಮಧ್ಯೆ ಬಂದು ನಿಂತು)

ಪದ್ಯ — ರಾಗ — ಹಂಸ ಧ್ವನಿ

ನರನಿರ್ಜರರ ನರನರುಕಿ,
ಧರನಾಕಗಳ ನರಕಗೊದ್ದೊದರಿ,
ಹರಗೌರಿಯರ ಥರಥರಿಸಿಸಿ,
ಹರಿಯು ಜರಿದಿಂದೆರೆಯು ನಿಜಮಂದಿರ ಕೆಳತಂದಿರಿಸಿ,
ಬಂಧಿಸಿದ ದಶಕಂಧರನ ಸಹೌರಸೆಯ
ವರಪ್ರಸಾದ ಪ್ರತಾಪ ಪ್ರಭಾವ ಪ್ರಸೂತನು ನಾಂ ॥

—ಹಾಡು — ರಾಗ — ಬೇಹಾಗ್ — ಏಕತಾಳ—

ದಿತಿಕುಲದ ಧೀರರ ಆ ಅತಿರೌದ್ರಾಗ್ನಿಗೆ
ಪ್ರತಿಭಟರೆನಿಪರು ಕ್ಷಿತಿಯೊಳಾರಿಹರೇ ? ॥ಪ॥
ಪ್ರತಿಭಟರೆನಿಪರು ಪೃಥಿವಿಯೊಳಿಹರೇ ? ॥ಪ॥
ಭುಜವಿಕ್ರಮದಿ ದಿಗ್ಗಜಗಳ ನಿರ್ರಿಯುತೆ
ಅಜವರಬಲದಿಂ ತ್ರಿಜಗವ ಮುರಿಯುತೆ

(ಕೈಮುಗಿಯುತ್ತ)

ಗಜಮುಖ ಜನಕನ ಭಜಿಸಿ ತುಷಿಸುತೆ

(ರೌದ್ರದಿಂದ)

ಭುಜಗಶಯನನ ಮನುಜರಂಗಕೆಸೆಳೆವ ॥ದಿತಿ॥

(ಚಾರನು ಅತ್ಯವಸರದಿಂದ ಪ್ರವೇಶಿಸುವನು)

ಚಾರ : ಮಹಾರಾಜನಿಗೆ ವಿಜಯವಾಗಲಿ ! (ಅವಸರದಲ್ಲಿ) ದ್ವಾರಸ್ಥನೋರ್ವನು ವಿಪ್ರೋತ್ತಮನಾಗಿರುವನು !!

ರಾಜ : ಚಾರನೇ ! ಭಯವನ್ನು ಬಿಟ್ಟು ತಂದಿರುವ ಸಮಾಚಾರವನ್ನು ಒರೆ !

ಚಾರ : (ಪುನಃ ಹೋಗಿಬಂದು) ಮಹಾರಾಜನಿಗೆ ವಿಜಯವಾಗಲಿ ! ವಿಪ್ರೋತ್ತಮನೋರ್ವನು ದ್ವಾರಸ್ಥನಾಗಿರುವನು !

ರಾಜ : ಸರಿ ! ಆತನನ್ನು ಮರ್ಯಾದೆಯಿಂದ ಆಹ್ವಯಿಸು ! (ಮಂತ್ರಿಯ ಕಡೆಗೆ ತಿರುಗಿ) ಮಂತ್ರಿವರ್ಯನೇ ! ವಿಪ್ರ ಸತ್ಕಾರ ಸಾಮಗ್ರಿಗಳನ್ನು ಸಜ್ಜುಗೊಳಿಸು !

(ಮಂತ್ರಿಯು ಹಾಗೆಯೇ ಮಾಡುವನು : ವಿಪ್ರನ ಪ್ರವೇಶ)

ರಾಜ : (ವಿಪ್ರನನ್ನು ಸಮೀಪಿಸಿ) ವಿಪ್ರೋತ್ತಮನೇ ! ಸ್ವಾಗತವು ! ಈ ಪೀಠವನ್ನಲಂಕರಿಸಿ ಯಮ್ಮೆಯ ಶುಶ್ರೂಷೆಯನ್ನಂಗೀಕರಿಸಬೇಕು...

(ವಿಪ್ರನಿಗೆ ನಮಸ್ಕರಿಸುವನು)

[ಕಿಟ್ಟಿ : (ಯಥಾಪೂರ್ವಂ) ಕುರ್ಚಿ ಮೇಲ್ ಕುಕ್ಕರ್ಸೂಂತರ್ಪ......ವಿಪ್ರನ್‌ಪಾರ್ಟೀ ? ನೋಡ್ರೆಗ್ಗಿ ನಾಗಪ್ಪ !......ಗುಣ ಒಳ್ಳೇದು !..........ಜಸಿವಾರಾನೇ ! ? ಪ್ರೊಪ್ರೈಟರ್ರೂ ! ಸೋಪ್ಬಾಕ್ ತೊಳ್ಕೊಳ್ದೀನೇ ತಿರ್ಗ್ಹಾಕ್ಕೊಳ್ಳೋದವ್ರು !......Broad mindedoo !]

ರಾಜ : ಎಲೈ ವಿಪ್ರ ತಂಡ ತೇಜಃಪುಂಜನೇ ! ನಾನು ಮನಃಪೂರ್ವಕವಾಗಿ ಗೈದ ಈ ಶುಶ್ರೂಷೆಯಿಂದ ಸಂತುಷ್ಟರಾಗಿಯೂ ತೃಪ್ತರಾಗಿಯೂ ಇರುವಿರೆಂದು ನಂಬಿರುವೆನು.

ವಿಪ್ರೋತ್ತಮ : ರಾಜೇಂದ್ರಾ ! ಸವಿನಯದಿಂದ ಸಮರ್ಪಿಸಿದ ನಿನ್ನೀಸತ್ಕಾರ್ಯಗಳಿಂದ ಸಂತುಷ್ಟನಾದೆನು, ಆದರೆ ರಕ್ತಮಾಂಸ ಮಿಳಿತವಾದ ಈ ಮೃತ್ಪಿಂಡದಿಂದ ಮಾಡಲ್ಪಟ್ಟ ಈ ಸೆರೆ ಮನೆಯಲ್ಲಿ ಸಿಲುಕಿಕೊಂಡು ಸಂಕಟಪಡುವ ನಮ್ಮ ಜೀವಾತ್ಮಗಳು ಪರಮಾತ್ಮನನ್ನು ಅರಿತು, ಹೊಂದಿ, ಅವನಲ್ಲಿ ಐಕ್ಯವನ್ನು ಪಡೆಯುವವರೆಗೂ ತೃಪ್ತಿ ಎಂದರೇನು ! ತೃಪ್ತಿಯೆಂದರೇನು ? ಆದರೆ ನಿನ್ನ ಮರ್ಯಾದೆಗೆ ಮೆಚ್ಚಿದೆನು. ನಿನ್ನ ಸಕಲೈಶ್ವರ್ಯ ಸಂಪೂರಿತವಾದ ಈ ಸಭೆಯನ್ನು ನೋಡಿ ಸಂತುಷ್ಟನಾದೆನು. ಆದರೂ ನನ್ನ ಮನೋವ್ಯಥೆಯನ್ನು ಹೀಗೆ ಹೊರಪಡಿಸುವೆನು.

ಶ್ಲೋಕ–ರಾಗ–ತೋಡಿ

ಕಿಂತೇನಮ್ರತಯಾ ಕಿಮುನ್ನತತಯಾ ಕಿಂವಾ ಘನಚ್ಛಾಯಯಾ
ಕಿಂವಾ ಪಲ್ಲವ ಲೀಲಯಾ ಕಿಮನಯಾ ಚಾಶೋಕ ಪುಷ್ಪಶ್ರಿಯಾ ।
ಯತ್ವನ್ಮೂಲನಿಷಣ್ಣ ಖಿನ್ನ ಪಥಿಕಸ್ತೋಮಸ್ತು ವನ್ನನ್ನಹಂ
ನಸ್ವಾದೂನಿ ಮೃದೂನಿ ಖಾದತಿ ಫಲಾನಿ ಆಕಂಠ ಮುತ್ಕಂಠಿತಃ ॥

ರಾಜೇಂದ್ರಾ ! ನನ್ನ ಮಾತನ್ನು ತಾಳ್ಮೆಯಿಂದ ಲಾಲಿಸಬೇಕು....ನಿನ್ನ ನಮ್ರತೆಗೂ ನಿನ್ನ ರಾಜೌನ್ನತ್ಯಕ್ಕೂ, ನಿನ್ನ ರಕ್ಷಣೆಯೆಂಬ ಘನಚ್ಛಾಯೆಗೂ......ನನ್ನಂಥವರನ್ನು ಮೃದುಮಧುರ ವಚನಗಳಿಂದಲೂ ಉಪಚಾರ ಸತ್ಕಾರಗಳಿಂದಲೂ, ಆಹ್ವಯಿಸಿ ಆಹ್ಲಾದಿಸುವ ನಿನ್ನ ಪಲ್ಲವ ಲೀಲೆಗೂ, ಪುರುಹೂತನ ಧ್ವಜವನ್ನು ಧಿಕ್ಕರಿಸುವ ನಿನ್ನೀ ದೇದೀಪ್ಯ ಸೌಂದರ್ಯಮಯವಾದ ಪುಷ್ಪಶ್ರೀಗೂ ಮೆಚ್ಚಿದೆನು......ಆದರೆ ನಿನ್ನೆಡೆಗೆ ಬಂದವರ ಮನೋಭೀಷ್ಟವೆಂಬ ಕ್ಷುತ್ತನ್ನು ಪೋಗಲಾಡಿಸುವ ಫಲವನ್ನು ಈಯದಿರುವಾಗ್ಯೆ ತೃಪ್ತನೆಂದು ಹೇಗೆ ತಾನೇ ಹೇಳಿಕೊಳ್ಳಬಲ್ಲೆನು ! ?

ರಾಜ : ವಿಪ್ರೋತ್ತಮನೇ ! ಅದೇನಭೀಷ್ಟವು ನಿನ್ನದು ! ನಾನು ನನ್ನ ವಂಶಕ್ಕೆ ಕುಂದಕ ಬಾರದಂತೆ ಯಥಾಧರ್ಮರೀತ್ಯಾ ಪ್ರಯತ್ನಿಸಿ ಹೋಗಲಾಡಿಸುವೆನು.

ವಿಪ್ರೋತ್ತಮ : ರಾಜೇಂದ್ರ ! ನಾನೊಂದು ಯಜ್ಞವಂ ಮಾಡಲುಸಿರುವೆನು. ಅದಕ್ಕೆ ನಿನ್ನಿಂದಾಗಬೇಕಾದ್ದು ಸುವರ್ಣ ಸಹಾಯವೇ ಹೊರತು ಮತ್ತೆ ಬೇರೆ ಇಲ್ಲ.

ರಾಜ : ಆಹಾ ! ಇದಕ್ಕೆ ಚಿಂತೆಯೇ ?...ಯಾರಲ್ಲಿ ?

[ಚಾರನ ಪ್ರವೇಶ]

ಚಾರ : ಮಹಾರಾಜನಿಗೆ ವಿಜಯವಾಗಲಿ ! ಏನಪ್ಪಣೆ ?

ರಾಜ : ಸ್ವರ್ಣರತ್ನ ಭರಿತವಾದ ಥೈಲಿಗಳನ್ನು ಸ್ವರ್ಣಪಾತ್ರದ ಮೇಲಿಟ್ಟುಕೊಂಡು, ಕೋಶಾಧ್ಯಕ್ಷನನ್ನು ಕ್ಷಿಪ್ರದಲ್ಲಿಯೇ ಸಮೀಪಿಸಬೇಕೆಂದು ಹೇಳು !

ಈಶ್ವರನೇ ! ಸರ್ವ ಸೌಂದರ್ಯ ಸಂಪನ್ನನಾದ ಸುಮುಖನನ್ನೇ ಸುತನೆನಗೆ ಸಾಧಿಸ್ತ್ಯ ನಾದ ನನ್ನಲ್ಲಿ ಕನಿಕರವೆಂದರೇನು ? ನಿನ್ನನ್ನು ಬೇಡುವುದು ವ್ಯರ್ಥವು !

"ಅವಶ್ಯ ಮನುಭೋಕ್ತವ್ಯಂ ಕೃತಂಕರ್ಮ ಶುಭಾಶುಭಂ" ಎಂಬಂತೆ ನನ್ನ ಕರ್ಮ ಲಾಭಾ ಲಾಭಗಳನ್ನು ಅನುಭವಿಸಿಯೇ ತೀರಬೇಕು ! ಈಗೇನು ಮಾಡಲಿ ? (ಎಂದು ಮುಖವನ್ನು ತಗ್ಗಿಸಿ, ಎರಡು ಕೈಗಳಿಂದಲೂ ಆಧರಿಸಿ ಯೋಚಿಸುವನು)

[ಕಿಟ್ಟಿ : ಕೇಳ್ದ್ರಾ ! ಶ್ಲೋಕ ?..........ಸಂಸ್ಕೃತದಲ್ಲಿ ಪಾಕ್ಯಾ...ಇವರಪ್ಪ ವೈದೀಕಾ ? ! ....ನಿತ್ಯಾನೂ ಬಿದ್ದೇ ಬಿಡ್ದ್ದ ಬಿಡ್ತಾನೆ.......ಒಂದ್ ನಿಮಂತ್ರಣ.........ದಿನಕ್ಕೆ ಒಂದ್ ಧೋತ್ರಾನ ಮಾರ್ಕ್ಯೇ.......ಜರುಗಿಸ್ಬೇಕ್ ಸಂಸಾರ]

ರಾಜ : ಏನೂ ತೋಚದಲ್ಲಾ ! ಏಕಾಂಗಿಯಾಗಿ ಅರಣ್ಯವನ್ನು ಸೇರಿ........ಅದೃಷ್ಟ ವಶಾತ್ ಯಾವನಾದರೂ ತಪಸ್ವಿಯನ್ನು ಸಂಧಿಸಿ ಆತನ ಕರುಣೆಯಿಂದ ನನ್ನೀಕಷ್ಟ ವಿಮೋಚನೆಗೆ ದಾರಿಯನ್ನು ಹಿಡಿಯಲು ಹೋಗುವೆನು. ನಾನು ಹಿಂತಿರುಗುವವರೆಗೂ......ಮಂತ್ರಿವರ್ಯನೇ !.... ನನ್ನ ರಾಜ್ಯವನ್ನು ಸೇನಾನಿಯ ಸಹ ಯಥಾಧರ್ಮ ರಕ್ಷಿಸುತ್ತಾ ಇರು !...ಈ ವಿಷಯವನ್ನು ನಾನು ಪೊರಮಟ್ಟನಂತರ ರಾಣೀವಾಸಕ್ಕೇ ತಿಳುಹಿಸು.

(ಸಭೆಯೆಲ್ಲವೂ ಅಂಬೆಗಾಲೂರಿ)

ಸಭೆ :

ಹಾಡು—ತೋಡಿ —ಏಕತಾಳ

ಬೇಡ ಬೇಡ ಭೂಮಿಪಾಲ–ಬೇಡಿಕೊಂಬೆವು ! ಒಡೆಯಾ ಬೇಡಿಕೊಂಬೆವು !
ಬೇಡ ಬೇಡ ನಾಡಿನೊಡೆಯ–ಬೇಡಿಕೊಂಬೆವು ! ಒಡೆಯಾ ಬೇಡಿಕೊಂಬೆವು !
ಕಾಡಿಗೆ ನೀಂ ಪೋಗಲ್ಯಾಕೆ–ಕಾಡು ಭೀಕರಂ ! ಒಡೆಯಾ ಕಾಡು ಭೀಕರಂ !
ಭೂಪಾ ! ಕಾಡು ಭೀಕರಂ ॥
ನಾಡಬೀಟ್ಟು ನಮ್ಮನೀಟ್ಟು ! ವೋಡಿಪೋಪುದೇ ॥
ಒಡೆಯಾ ! ಓಡಿ ಪೋಪುದೇ ?

(ರಾಜನು 'ನಿಲ್ಲೆನು' ಎಂದು ಸೂಚಿಸುವಂತೆ ತಲೆಯಾಡಿಸಲು)

(ಮತ್ತೊಮ್ಮೆ ಗಟ್ಟಿಯಾಗಿ ರೋದನ ಧ್ವನಿಯಲ್ಲಿ)

ನಾಡಬೀಟ್ಟು ! ನಮ್ಮನೀಟ್ಟು ! ಓಡಿಪೋಪುದೇ ! ?
ಪಾಡುಪಾರ್ವ ನುಡಿದ ನುಡಿಗೇ
ನಾಡಬಿಡುವುದೇ ! ಭೂಪಾ ! ನಾಡಬಿಡುವುದೇ ? ॥

[ರಾಜಸಭಿಕರಲ್ಲೊಬ್ಬನು ಎಲ್ಲರಿಗಿಂತ ಗಟ್ಟಿಯಾಗಿ. "ನಾಡ**ಬು**ಡುವುದೇ ! ಭೂಪಾ ! ನಾಡ**ಬು**ಡುವುದೇ" ಎಂದು ಹಾಡುವನು.]

(ನೇಪಥ್ಯದಲ್ಲಿ) ಕಂಡಕ್ಟರು, "ಲೋ ! ಬೆಪ್ಪೇ ! 'ಬು' ಅಲ್ಲಾ ಕಾಣೋ 'ಬಿ' " ಎಂದು ಕಿರುದನಿಯಲ್ಲಿ ಕೂಗಿಕೊಳ್ಳುವನು.

ಎಲ್ಲರೂ ಇದನ್ನು ಮತ್ತೊಮ್ಮೆ ಹೇಳುವಾಗ, ಅದೇ ಒಬ್ಬನು "ನಾಡಬುಡುವುದೇ !" ಭೀಪಾ ! ನಾಡಬುಡುವುದೇ !" ಎಂದು ಹಾಡುವನು.

ಪ್ರನಃ ಕಂಪಕ್ಪರು, "ಆ 'ಭೂ' ಅಲ್ಲಾ ಕಾಣೋ ! ಮೊದಲ 'ಬು'ಗೆ 'ಬಿ' ಸಾಕೋ" ಎನ್ನುವನು.

ಪ್ರನಃ ಹಾಡಿದಾಗ, "ನಾಡಜಿಡುವುದೇ ! ಭೀಪಾ । ನಾಡಬುಡುವುದೇ !" ಎನ್ನುವನು.

ಕಂಪಕ್ಪರಿಗೆ ರೇಗಿ, "ದಮ್ಮಯ್ಯಾ ಲೋ ! ನಿನ್ನ ಸ್ವರತಗ್ಲೋ, ಪೋಗ್ಲೀ !" ಎಂದು ಕಿರಿಚಿ ಕೊಳ್ಳುವನು.

(ಎಲ್ಲರೂ) **ಪಾಡು ಪಾರ್ವ ನುಡಿದ ನುಡಿಗೇ । ನಾಡಬಿಡುವುದೇ**

ಭೂಪಾ । ನಾಡಬಿಡುವುದೇ ॥

ರಾಜ : ನಿಮ್ಮ ಮಮತೆಗೆ ಮೆಚ್ಚಿದೆನು. ಆದರೂ ನನ್ನ ಧರ್ಮವನ್ನು ಮರೆಯಲಾರೆನು. ರಾಜ್ಯದಲ್ಲಿ ಸರ್ವಸೌಖ್ಯಗಳನ್ನನುಭವಿಸುತ್ತಿದ್ದರೂ ನನ್ನ ಧರ್ಮವನ್ನು ಮರೆಯಲಾರೆನು ! ಮಂತ್ರಿ ಶ್ರೇಷ್ಠನೇ ! ನನ್ನ ಆಜ್ಞೆಯನ್ನು ನೆನಪಿಟ್ಟು ನೆರವೇರಿಸು.

[ನಿಷ್ಕ್ರಮಣ]

ರಾಜಸಭಿಕರು : ಹಾಡು-

ರಾಗ—ಕಾನಡ ಆದಿತಾಳ

(ಅತಿವಿಳಂಬ)

ಪೋಪೆಯಾ ಭೂಪಾ । ಭೂಪಾ । ವಿಪಿನಕ್ಕೆ
ಈಪರಿ । ತಾಪವಾ । ತಪ್ಪಿಸಲ್ । ಆಪದೀ
ಪಾಪಿಗಳ್ । ಬಿಟ್ಟು । ಪೋಪೆಯಾ ॥

[ಥರದೆ ಥಟ್ಟನೆ ಬೀಳುವುದು]

ದೃಶ್ಯ ೩

(ಕಗ್ಗಾಡಿನಲ್ಲಿ ಒಂದು ಕಾಡುಹಾದಿ)

ರಾಜ : ಇದು ಗೊಂಡಾರಣ್ಯ ! ಅಬ್ಬರವೇ ಇಲ್ಲದ ಈ ಕಗ್ಗಾಡಿನಲ್ಲಿ ಒಬ್ಬಂಟಿಗನಾಗಿಯೇ ಕಗ್ಗತ್ತಲೆಯಲ್ಲಿ ನಡೆಯಬೇಕೆಂದು ಬರೆಯಿತೇ ನನ್ನ ಫಾಲಪಟ್ಟದಲ್ಲಿ ! ಸೂರ್ಯನ ಕಿರಣಗಳಾದರೋ ಆಪಾದಮಸ್ತಕವೂ ಹಸಿದು ಸೋತಿರುವ ನನ್ನನ್ನು ದಹಿಸುತ್ತಿರುವುದು........(ಶೋಕಮುಖವಾಗಿ)

ರಾಗ — ಬೇಹಾಗ್

ವಕ್ರಕಂದ ॥ ಅನ್ನಾಹಾರಗಳಿಲ್ಲದೆ
ಬನ್ನವ ಪಡುತೀರ್ಪ ವಿಧಿಕೃಪರಹಿತನೆನಗೆ ।
ಮುನ್ನಾನ ರೀತಿಯು ತೋರದು
ಯನ್ನ ಮೇಲೇತಕೀ ಕಡುಕೋಪವು ವಿಧಿಯೇ ॥

ರಾಗ — ಕಾಪಿ — ಏಕತಾಳ

ಅಕಟಾ ಏನಮಾಡಲಿ—ಸಾಹಸವೆನೆಂತು ಗೈಯಲೀ ।
ಪಾಡು ವಿಧಿಯು ಹತಿಯಿಂ ಕಡುಕ್ರೂರ ತಾಪವೆ
ಪಡುವೆನ್ನ ತಾಪವ ಬಿಡಿಸಿ ಸಂತೈಸಲು

[ಸಭಿಕರಲ್ಲೊಬ್ಬನು ಚಪ್ಪಾಳೆಯನ್ನು ತಟ್ಟುತ್ತಾ "once more please!" ಎನ್ನಲು ಹಸ್ತತಾಡನದಿಂದ ಹರ್ಷಮಗ್ನನಾಗಿ ರಾಜನು ಉತ್ಸಾಹವನ್ನೂ ಮನೋಹರ್ಷವನ್ನೂ ಮುಖದಲ್ಲಿ ಸೂಚಿಸುತ್ತಾ ಕಂದವನ್ನು ಮತ್ತಿರುಗಿ ಹಾಡಿ ಅನಂತರ ಬರುವ ಹಾಡನ್ನು ಹಿಗ್ಗುತ್ತಾ ಹಾಡಿ ಪದಾರ್ಥ ಭಾವಗಳಿಗೆ ಗಮನವನ್ನು ಕೊಡದೆ. ಹರ್ಷ ಧ್ವನಿಯಿಂದ ಹಾಡುವನು.]

ಹಾಡು— ರಾಗ — ನೀಲಾಂಬರೀ ಆದಿತಾಳ

ಎಂತು ಸೈರಿಪೆ ನಾನೂ । ಇಂತು ತಾಪವಾನೀಗಳ್ ।
ಅಂತು ತೊರೆದು ರಾಜ್ಯೀಯನಾ ಎಂತು ಮರಳಿ ಸೇರ್ವೆ ನಾನು ॥
ಬಿಟ್ಟು ರಾಜ್ಯವ ನಾನು ಕಷ್ಟಪಡುವೆನ್ನೈ ದೇವಾ ।
ಸೃಷ್ಟಿ ಕರ್ತನೆ ನಿಂನ್ನಾಗಿಷ್ಟನಿಷ್ಟವೇ ಪ್ರಷ್ಟಾ ॥ ?

ಕಷ್ಟ ! ಕಷ್ಟ ! ಕಾಲುಗಳೋ ನಿಲ್ಲಲಾರವು ! ಕಣ್ಣುಗಳೋ ನೋಡಲಾರವು ! ಕೈಗಳೋ ಕದಲಲಾರವು ! ತಲೆಗೋ ತೋಚುವುದಿಲ್ಲ ! ಈ ಭೂಮಾತೆಯ ಮೇಲೆ ಮೂರ್ಛಿಸಿ ಬೀಳುವೆನು.

೦ ೦ ೦ ೦

[ಶೆಟ್ಟಿ : (Sotto) ಹುಷಾರೋ ಲೋ ! ಹುಷ್ಟೂ......ಗುಡಿಸಿಲ್ಲ ಕಾಣೋ ಸ್ಟೇಜು ! ಹೊಸ ಕಸಬುದಾರಲ್ಲ ಹೊರ್ಳಾಡಿ ಹೊಲಸ್ಮಾಡು ! ಅಗಸ್ರುವನ್ ಛಾರ್ಜು ನಿನ್ನ್ ಜುಟ್ಟೀನೇ ! ಕಲೆಕ್ಷನ್ನೋ ಮೊದಲೇ ತುಂಡು !.........ಇನ್ ಫೇಟಾನೋ ಆ ಜಪ್ಪೀ ಶೆಟ್ಟೀಗೆ complimentary ಕೊಟ್ಟು ಗಿಲೀಟ್ ಮಾಡಿ ಎರವಲ್ ತಂದದ್ದು ! ಮೂರ್ಖ !! ಹುಷಾರು !!!]

ರಾಜ : (Sotto) ಹೂಸೋ ! ಮರ್ತಿದ್ದೆ ! [ಕೈ ಚೌಕದಿಂದ ರಂಗಸ್ಥಳವನ್ನು ಒಡಿದು ಗುಡಿಸಿ ಚೊಕ್ಕಟಮಾಡಿ ಪಾಗನ್ನು ಹುಷಾರಾಗಿ ತೆಗೆದು ನೆಲಕ್ಕಿಳಿಸಿ ತಾನೂ ಕಳೆಯಿಜಾರುಗಳು ಮಾಸದಂತೆಯೂ, ಮಡಿಸದಂತೆಯೂ ಪವಳಿಸುತ್ತಾ]......(ಪ್ರಕಾಶ) ಮಹಾದೇವಾ ! ಮೂರ್ಛಿತನಾಗಿರುವೆನು ! ಮೂರ್ಛಿತನಾಗಿರುವೆನು !

(ಋಷಿಯ ಪ್ರವೇಶ)

ಋಷಿ : (ವಿಹಜ್ಮೃಭಿನಾಗಿ) ಆಹ್ಹಾ ! ತಮೋಭರಿತವಾದ ಇಹಲೋಕದಲ್ಲಿ ಪ್ರತಿಯೊಬ್ಬ ಮನುಜನೂ. ಕೇವಲ ಬಾಹ್ಯದೃಷ್ಟಿಯನ್ನು ಮಟ್ಟಿಗಿಟ್ಟುಕೊಂಡು ತಡವರಿಸುತ್ತಿರುವಲ್ಲಿ ನಾನು ನನ್ನ ತಪೋಬಲದಿಂದ ಸಂಪಾದಿಸಿಕೊಂಡ ದಿವ್ಯದೃಷ್ಟಿಯಿಂದ ಭೂಲೋಕವೇ ಅಲ್ಲದೆ ಮಿಕ್ಕ ಹದಿಮೂರು ಲೋಕಗಳಲ್ಲಿಯೂ ಅಹರ್ನಿಶಿಯೂ ಸಂಭವಿಸುತ್ತಿರುವ ವಿಷಯಗಳನ್ನು ಅಂಗೈಯಲ್ಲಿಯೇ ನೋಡಿ ಆನಂದಪಡುತ್ತಿರುವಾಗ್ಗ್ಯೆ ಸಾಮಾನ್ಯ ಮನುಜರಿಗಿಂತಲೂ ಉತ್ತಮನಲ್ಲವೇ ! ಈ ನನ್ನ ದಿವ್ಯ ದೃಷ್ಟಿಯನ್ನು ಪ್ರಯೋಗಿಸಿ ಪ್ರಾಪ್ತಫಲನಾಗುವೆನು (ಕ್ಷಣ ಮಾತ್ರ ಆಕಾಶವನ್ನು ನೋಡಿ ಮತ್ತೆ ಅಂಗೈಯನ್ನು ದುರುಗುಟ್ಟಿ ನೋಡುತ್ತಾ) ನಕ್ಷತ್ರ ಲೋಕದಲ್ಲಿ ನಡೆಯುತ್ತಿರುವುದನ್ನು ನೋಡುವಾ !......ಆಹಾ ! ಇಗೋ ಬರುತ್ತಿರುವರು !.........(ಹರ್ಷಮುಖನಾಗಿ) ಈ ನಾಕ್ಷತ್ರೀಕರು ಎಷ್ಟು ನಾಗರಿಕರು ! ಹಿಟ್ಟಿಲ್ಲದೆ ಹೊಟ್ಟೆ ಬೆಂದು ಬಟ್ಟೆಗಿಲ್ಲದೆ ಬೆಳೆ ಬಾಡಿ ದಿಗಂಬರರಾಗಿ ದಿಕ್ಕೆಟ್ಟು ನಕ್ಷತ್ರ ನಗರಗಳ ದರಿದ್ರರೂ ಕೂಡ ಮೈಮುಚ್ಚಲು ವಸನರಹಿತರಾದಾಗ್ಯೂ ...."ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನಂ" ಎಂಬ ದೇವೋಕ್ತಿಯನ್ನು ಬೆಳಗುತ್ತಾ ಗಾತ್ರಗೂಢನ ಗೌರವಕ್ಕೆ ಲಾಘವವು ಲಭಿಸಿದರೂ ಶಿರೋಪಗೂಹನದ ಗಾಂಭೀರ್ಯವನ್ನರಿತು ಪ್ರತಿಯೊಬ್ಬ ಪಾಮರನೂ ಪ್ರಜ್ವಲಿಸುವ ಪಾಗನ್ನು ತಲೆಗೂ. ಫಳಫಳಿಸುವ ಸುಲೋಚನಗಳನ್ನು ನೇತ್ರಗಳಿಗೂ ಧರಿಸಿಕೊಂಡು ಚಲಕಾಷ್ಠವನ್ನು ಹಸ್ತದಲ್ಲಿ ಹಿಡಿದು ಬೀಸುತ್ತಾ ಚಲಿಸುತ್ತಿರುವರು ! ಇನ್ನು ನಾಕ್ಷತ್ರಿಕೆಯರೊ ! (ದುರುಗುಟ್ಟಿ ನೋಡುತ್ತಿದ್ದವನು)...ಅದಿರಲಿ ! (ಥಟ್ಟನೆ ಕಣ್ಣುಮುಚ್ಚಿಕೊಂಡು)

ಆಹಾ ! ನನ್ನ ಬ್ರಹ್ಮಚರ್ಯಕ್ಕೆ ಭಂಗಬಂದೀತು ! ಶಾಂತಂ ಪಾಪಂ ॥ (ಎಡಗೈಯಿಂದ ಬಲಗೈಯನ್ನು ಸವರುತ್ತಾ)........ಅರಿಷಡ್ವರ್ಗಗಳ ಚೇಷ್ಟೆಗೆ ಅಣು ಮಾತ್ರವೂ ಅವಕಾಶಕೊಡದೆ ಶಾಂತಿಯಲ್ಲಿಯೇ ಸ್ವಸ್ಥಾನವನ್ನು ಸ್ಥಿಗ್ಧಿಸಿ ಆನಂದವನ್ನು ಅನುಭವಿಸುವಾ ! ಸಾಂಬನ ಸಾಮ್ರಾಜ್ಯವನ್ನು ತೋರಿಪ ಶಿವಲೋಕವನ್ನು ನೋಡಿ ಸಂತೋಷಿಸುವಾ! ಇದೇನದ್ಭುತ ! ಚೋರನ್ನು ನೋಡಿ ಪುರವಾಸಿಗಳು ಓಡುವಂತೆ ಅದು ಯಾರ್‍ಯಾರು ಒಬ್ಬರ ಹಿಂದೊಬ್ಬರು ಓಡುತ್ತಿರುವರು !... ... ಕೈಲಾಸದಲ್ಲಿ ಚೋರನೆಂದರೇನು! ಓಡುವುದೆಂದರೇನು! ....(ಅಂಗೈಯನ್ನು ಹುರುಗುಟ್ಟಿಕೊಂಡು ನೋಡುತ್ತಾ).......... ಪ್ರಾಣಭೀತಿಯಿಂದ ಪುರತಃ ಪಲಾಯಿಸುತ್ತಿರುವ ಪ್ರಾಣಿಯು ಮೂಷಕದಂತೆ ಕಾಣುವುದು! .... ಇದನ್ನು ಹಿಂದಟ್ಟಿ ಹೋಗುತ್ತಿರುವ ಪ್ರಾಣಿಯು ಸರ್ಪವೇ ಸರಿ!......ಅದರ ಬೆನ್ನು ಹತ್ತಿ ಕರಿಮುಖ ವ್ಯಕ್ತಿಯೊಬ್ಬನು ಬರುತ್ತಿರುವನು! ಇನ್ನಾತನ ಹಿಂದೆಯೋ, ರತಿರೂಪವಂ ಧಿಕ್ಕರಿಸುವ ಸುಂದರಿಯೊಬ್ಬಳು ಓಡಿಬರುತ್ತಿರುವಳು!......ಇನ್ನೀಕೆಯು ಈ ಮಹತ್ಪರ್ವತ ಶೃಂಗದಿಂದ ಜಾರಿಬಿದ್ದು ಪೆಟ್ಟು ತಿಂದಾಳೊ ಎಂಬ ಭಯದಿಂದ ಇವಳ ಸೆರಗಂ ಹಿಡಿದು ನಿಲ್ಲಿಸಲು ಯತ್ನಿಸುತ್ತಿರುವ ಜಟಾವಲ್ಕಲಧಾರಿಯಾದ ಈತನನ್ನು ಫಾಲಪಟ್ಟದಲ್ಲಿ ಪ್ರಜ್ವಲಿಸುವ ಪ್ರಳಯಾಗ್ನಿಯಿಂದ ಸಾಕ್ಷಾಚ್ಚಂದ್ರಶೇಖರನಾದ ಧೂರ್ಜಟಿಯೆಂದೇ ಗುರ್ತಿಸಬಹುದು?! ಹಾಗಾದರೆ ಮುಂದೋಡುವವರು ಯಾರು? (ತಲೆಯನ್ನು ಕೆರೆಯುತ್ತಾ ಪರ್ಯಾಲೋಚಿಸಿ) ಆಹಾ! ಈಗಲೀಗ ಇತ್ಯರ್ಥವಾಯಿತು! ಪರಶಿವನ ಸರ್ಪಭಯದಿಂದ ಓಡುತ್ತಿರುವ ತನ್ನ ವಾಹನವನ್ನು ರಕ್ಷಿಸಲೋಸುಗ ಹಿಂಬಾಲಿಸುವ ಪುತ್ರ ಗಜಾನನನನ್ನು ಕಾಯಲುದ್ಯುಕ್ತಳಾದ ಪಾರ್ವತಿಯು ಕೈಲಾಸ ಶೃಂಗದಿಂದ ಜಾರಿಬಿದ್ದು ಪೆಟ್ಟು ತಿಂದಾಳು ಎಂಬ ಕಳವಳದಿಂದ ಆಕೆಯ ಸೆರಗನ್ನು ಹಿಡಿದು ನಿಲ್ಲಿಸಿರುವ ಮಹೇಶ್ವರನ ಅವಸ್ಥೆಯನ್ನು ತಿಳಿದು ಜಟಾವಾಸಿಯಾದ ಭಾಗೀರಥಿಯು ಮಾತ್ಸರ್ಯ ಮಗ್ನಳಾಗಿ ಸವತಿಯನ್ನು ಕಳೆದುಕೊಳ್ಳಲು ಸರಿಯಾದ ಸಮಯವು ಸಿಕ್ಕಿತೆಂದು ನಿಶ್ಚಯಿಸಿ ವಾರಿರಾಶಿಯನ್ನು ಕಾರಿ ಹರನ ಹಿಡಿತವನ್ನು ಜಾರಿಸುತ್ತಿರುವಳು! (ಕಣ್ಣನ್ನು ಮುಚ್ಚಿಕೊಂಡು) ಶಾಂತಂ ಪಾಪಂ। ಶಾಂತಂ ಪಾಪಂ।...ಶಿವಶಿವಾ! ಮಹೇಶ್ವರ ಮಂದಿರದಲ್ಲಿಯೇ ಮತ್ಸರಾದಿ ಅರಿಷಡ್ವರ್ಗಗಳು ತುಂಬಿರುವಲ್ಲಿ.......ಮರ್ತ್ಯರ ಗತಿಯೇನು!..........(ಕೈಗಳನ್ನು ಸವರುತ್ತಾ) ....ಅನಿಮಿಷರ ಆಸ್ಥಾನವನ್ನು ನೋಡುವಾ!...(ಕ್ಷಣಮಾತ್ರಗಗನವನ್ನೀಕ್ಷಿಸಿ ದಕ್ಷಿಣ ಹಸ್ತವನ್ನು ಮುರುಗುಟ್ಟಿ ನೋಡುತ್ತಾ) ....ಇದೇನಿದು!? ಕಣ್ಣುಗಳನ್ನು ಕೊಕ್ಕರಿಸುವ ಕಾಂತಿಮಯವಾದೀ ಪ್ರವೇಶ! (ಅಂಗೈಯನ್ನು ಮತ್ತಷ್ಟು ನೇತ್ರಗಳಿಗೆ ಸಮೀಪಿಸುತ್ತಾ)...ಈಗ ಸ್ಪಷ್ಟವಾಯಿತು! ಓಃ! ಓಃ ಹೋಃ!! (ಅತಿ ಹರ್ಷದಿಂದ) ಶಕ್ರನ ಸಾಮ್ರಾಜ್ಯ!.......ಆ ಜಾಜ್ವಲ್ಯ ಜ್ಯೋತಿ ತುಂಬಿದ ಮೂಲವು ಸಭೆಯ ಹಿಂದೆ ಕಾಣುವ ಸ್ವರ್ಣಮೇರು ಪರ್ವತವು! ...... ಸರ್ವವರ್ಣ ವರ್ಣಶಾಲಿಯಂತೆ ಪ್ರಭಿಸುತ್ತಿರುವುದು ಪುರುಹೂತನ ಧ್ವಜಾದೇದೀಪ್ಯವು! .... ಶಿವಲೋಕದ ವೈಭವವನ್ನು ಅತಿಶಯಿಸುವ ಈ ಸಿತಮಯೂಖಶ್ರೇಣಿಯೇ ಅನಂತವೇತ್ರನಾದ ಅಮರರಾಜನ ಅಗಳ ರೋಮಕೂಟವು!...........ಸರ್ವಪಕ್ಷಿ ಪ್ರದರ್ಶನ ಶಾಲೆಯಲ್ಲಿ.......ಸರ್ವವರ್ಣ ತೋರಣಗಳಾದ ಸ್ವರ್ಣಪರ್ಣಾವಳಿಗಳನ್ನು ಪ್ರಸರಿಸಿ ಪ್ರದರ್ಶಿಸುವ ಸಹಸ್ರ ಬರ್ಹಗಳ ಬಂಧನ ಪ್ರಾಸಾದದಲ್ಲಿರುವ ದೇಹಸ್ಫೂರ್ತಿಯಿಂದ ವಿರಾಜಿಸುತ್ತಾ ಅಗ್ರಪೀಠವನ್ನು ಅಲಂಕರಿಸುವ ಈ ವ್ಯಕ್ತಿಯು ಮಹೇಂದ್ರನಾದ ಬಿಡೌಜಸನೇ ಸರಿ!

(ಭ್ರುಕುಟಿರಚನೆಯನ್ನು ಮಾಡುತ್ತಾ ಬಲ ಅಂಗೈಯನ್ನು ದೂರೀಕರಿಸುತ್ತಾ) ಇದೇತಕ್ಕೆ!? ಮುಂದು ನೋಡೋಣವೆಂದರೆ ಮನಸ್ಸು ಹಿಂದೆಗೆಯುವುದು!...ಸಾತ್ವಿಕ ಬ್ರಹ್ಮಚಾರಿಗೆ ಸ್ವರ್ಗಸಂದರ್ಶನವೆಂದರೆ ಸಂಕೋಚವೇ! (ತಾತ್ಸಾರದಿಂದ ನಗುತ್ತಾ) ದಿವ್ಯದೃಷ್ಟಿಯನ್ನು ತಪೋಬಲದಿಂದ ಆರ್ಜಿಸಿ ಅದನ್ನನುಭವಿಸುವುದರಲ್ಲಿ ಅಧೈರ್ಯಪಡುವುದೇ!.......ಎಂದಿಗೂ ಇಲ್ಲ! (ಹಲ್ಲುಗಳನ್ನು ಕಚ್ಚಿಕೊಂಡು ಬಲ ಅಂಗೈಯನ್ನು ನೋಡಲು, ಅದು ಹಿಂಜರುಗುವುದನ್ನು ಎಡಗೈಯಿಂದ ನಿಲ್ಲಿಸಿ ಬಲಾತ್ಕಾರದಿಂದ ಸ್ವಲೋಚನಗಳಿಗೆ ಸಮೀಪಿಸಿ ನೋಡುವನು.......ಥಟ್ಟನೆ ದಕ್ಷಿಣ ಹಸ್ತದನು

ಒದರುತ್ತಾ) ಆಹ್ಹಾ! ಅರ್ಥವಾಯಿತು!...ಅಪ್ಸರಾಂಗನೆಯರ ಅಭಿನಯ!...ಇದರ ದರ್ಶನ ಮಾತ್ರದಿಂದಲೇ ವಿಶ್ವಾಮಿತ್ರಾದಿ ತಪೋಕೇಸರಿಗಳು ಅಪಜಿತೇಂದ್ರಿಯರಾಗಿರುವಲ್ಲಿ ಕೇವಲ ಮಯವಾದ ನಾನು ಬದುಕಿದ್ದೇನೇ!? ಈ ಪರೀಕ್ಷೆಯಲ್ಲಿ ಅಂಥವರೇ ಅನುತ್ತೀರ್ಣರಾಗಿದ್ದಲ್ಲಿ ನಾನು ಉತ್ತೀರ್ಣನಾದೇನೇ!?...ಎಂದಿಗೂ ಇಲ್ಲ! ಉಪೇಕ್ಷೆಯೇ ನನಗೆ ದಾರಿ (ಕೈಗಳನ್ನು ತಟ್ಟಿ ಒದರುವನು...... ಕ್ರಮೇಣ ಪರ್ಯಾಲೋಚನಾ ಚೇಷ್ಟೆಗಳನ್ನು ಮುಖದಲ್ಲಿ ತೋರಿಸುತ್ತಾ) ಹೇನೂ! ಅಬಿರಲಿ!? ಈ ನನ್ನ ಉಪೇಕ್ಷಾ ಸಾಧನಾವೇಶದಲ್ಲಿ—ಸುರಾಂಗನೆಯರ ಸಾಹಸವನ್ನೂ ಅವರ ಅಗ್ರಾಗ್ರಹವನ್ನೂ ಮರೆತು ಅನಾಹುತಕ್ಕೆ ಗುರಿಯಾಗುವೆನೋ ಏನೋ ಕಾಣೆನಲ್ಲಾ!...ನನ್ನೀ ತಿರಸ್ಕಾರವನ್ನು ಅವರೇನಾದರೂ ತಿಳಿದರೋ, ಜಿತೇಂದ್ರಿಯನಾದ ಪಾರ್ಥನ ಪರಿತ್ಯಾಗದಿಂದ ಕೋಪಗೊಂಡ ಊರ್ವಶಿಯು ಕೊಟ್ಟ ಶಾಪವನ್ನು ಆತನ ಸಖನಾದ ಕೃಷ್ಣನೇ ತಪ್ಪಿಸಲು ಅಶಕ್ತನಾಗಿದ್ದಲ್ಲಿ...ಇನ್ನು ನನ್ನ ಗತಿಯೇನು?...(ಎಡಗೈಯಿಂದ ಬಲಗೈಯನ್ನು ಬಲಾತ್ಕಾರದಿಂದ ಕಣ್ಣುಗಳ ಮೇಲೆ ಏರಿಸಿ ನಿಲ್ಲಿಸಿ) ಊರ್ವಶಿ ಪ್ರಭೃತಿಗಳಾದ, ಈ ದೇವಾಂಗನೆಯರನ್ನು ಸಭಕ್ತಿಯಿಂದ ಗಮನಿಸಿ, ಅವರ ಅಭಿನಯಾದಿ ಶಾಸ್ತ್ರಪ್ರದರ್ಶನಗಳನ್ನು ದೃಢಮನಸ್ಕನಾಗಿ ಸ್ವಧರ್ಮತಃ ಅನುಭವಿಸಿ ಸಂತೋಷಪಡುವೆನು...ಆಹಾ! ಅಮರಾಂಗನೆಯರ ಮಧ್ಯೆ ಮಿಕ್ಕವರ ಗಾನವಾದ್ಯಗಳಿಗೆ ಅನುವಾಗಿ ನರ್ತಿಸುತ್ತಿರುವ ಈ ಸುಂದರಿಯು ಕಾಯಗೌರವತೆಯನ್ನು ಗಮನಿಸಿ ಪರ್ಯಾಲೋಚಿಸಲು, ಭರತಜನನಿಯನ್ನು ಹೆತ್ತ ಮೇನಕೆಯಾಗಿಯೇ ಇರಬೇಕು!........ಎಷ್ಟು ರಮಣೀಯವಾಗಿರುವುದು ಇವಳ ನರ್ತನವು! (ಮೋರೆಯನ್ನು ಸೊಟ್ಟೆ ಮಾಡುತ್ತಾ)........... ಆಹ್ಹಾ! ಈ ನನ್ನ ಅಲ್ಪದೃಷ್ಟಿಯಿಂದ ಈ ದಿವ್ಯಕಾಕ್ಷಿಗಳನ್ನು ನೋಡಲಾಪನೇ ಅಲ್ಲದೆ ಇಲ್ಲಿ ಜರುಗುತ್ತಿರುವ ಸಂಗೀತವನ್ನು ಕೇಳಲು ಆಗುವುದಿಲ್ಲವಲ್ಲ! ...... ಇರಲಿ! ನನಗೀಗಿರುವ ತಪೋಶೇಷದಿಂದ ದಿವ್ಯ ಶ್ರವಣವನ್ನು ಸಂಪಾದಿಸಿ ಅಮರಾವತಿಯ ಆಮೋದ ವಿಶಿಷ್ಟವನ್ನು ನೋಡಿಯೂ ಕೇಳಿಯೂ ಆನಂದಪಡುವೆನು...ಕ್ಷಿಪ್ರದಲ್ಲಿ ಈ ನರ್ತನಕ್ಕೆ ನನಗೆ ತಿಳಿದ ಸಂಗೀತಾಲ್ಪವನ್ನು ಸಮಂಜಸವಾಗಿ ಸಂಯೋಗಿಸಿ ಆನಂದ ಪಡುವೆನು ...(ಮುಖದಲ್ಲಿ ಅತ್ಯಾಹ್ಲಾದವನ್ನು ತೋರಿಸುತ್ತಾ)

ರಾಗ — ಕಾಪಿ ... ತಿಲ್ಲಾನ —

ಧೀಂ ತತ್ತಾರಿ ತಾನಿ ತನ ಧೀರನಾ
ಧೃಕ್ನಾಂ ಧೃಕ್ನಾಂ ಧೃಕ್ನಾಂ
ಧೀಂ ತತ್ತಾರಿ ತಾನಿ ತನಧೀರನಾ ॥

(ಎಂದು ತಾನೇ ನರ್ತಿಸುವ ಸಂಭ್ರಮದಲ್ಲಿ ಮೂರ್ಛೆ ಬಿದ್ದಿರುವ ರಾಜನ ಶರೀರಕ್ಕೆ ತನ್ನ ಕಾಲು ತಾಕಿ ಅಧೋಗತನಾಗುವನು)......ಆಹ್ಹಾ! ನನ್ನ ದಿವ್ಯ ದೃಷ್ಟಿಯ ಪ್ರಭಾವವನ್ನು ಪರೀಕ್ಷಿಸುವ ಸಂಭ್ರಮದಲ್ಲಿ ನನ್ನ ಅಧಮ ದೃಷ್ಟಿಯ ಉಪಯೋಗವನ್ನು ಮರೆತೇ ಹೋದೆನಲ್ಲಾ!...ನನ್ನೀ ಅವಸ್ಥೆಗೆ ಕಾರಣವೇನು? (ಪಾರ್ಶ್ವದಲ್ಲಿ ಮಲಗಿಸಿರುವ ಮೂರ್ಛಿತನಾದ ಕಥಾನಾಯಕನನ್ನು ಕೈಹಾಕಿ ಒದರುತ್ತಾ) ಆಹಾ! ನಡುಪಥದಲ್ಲಿ ನಿದ್ರಿಸುತ್ತಿರುವ ಈ ನೀಚನಿಂದಲ್ಲವೆ ನಾನು ಪತಿತನಾದೆನು! (ಹುಬ್ಬುಗಳನ್ನು ಹಾರಿಸುತ್ತಾ ಕಣ್ಣುಗಳಿಂದ ಕೋಪದ ಕಿಡಿಗಳನ್ನು ಕಾರುತ್ತಾ)........

ಹಾಡು :

— (ರಘುಪತಿ ರಾಘವ ಎಂಬಂತೆ) —

ನಡುಪಥದಲಿ ನಾ ನಟಿಸುತಿರೇ । ಪತೀತನಾದೆನು ಪಾಪಿಯಿಂದಾ
ಖಗಪತಿ ವೇಘವ ಚಲಿಸುವವೋಲ್ । ಅತೀ ತ್ವರಿತದಿ ಬರುತಲಿರೇ
ನಡುಪಥದಲ್ಲಿ ಶಯಿಸಿರ್ಪನಿಂ। ಪತೀತ ನಾದೆನೀ ಪಾತಕಿಯಿಂ

ಕಂದ — ರಾಗ — ಬೇಗಡೆ

ಸುಂಡಿಲಿಯು ಸುಳಿಯುತಿರೆ
ಮುಂಡಿಯನೊಡ್ಡಿ ಅದನ ನೆಲಕೆ ಕೆಡಹಿದ ವೋಲ್।
ತೊಂಡರ ಗಾಲನೆನಗಿತ್ತೆ
ಭಂಡನೆ ! ನಿನ್ನ ದಹಿಪೆನೆನ್ನ ಕೆಂಡಕೋಪದಿಂ॥

ಎಲವೆಲವೋ ನರಾಧಮಾ! ತಪಸ್ವಿಯಾದ ನನ್ನನ್ನು ಕಾಲಿನಲ್ಲಿ ಒದ್ದು ಕೆಡಹಿದ ನಿನ್ನ ಮಹಾಪಾತಕಕ್ಕೆ ತಕ್ಕ ಶಾಪವನ್ನು, ನಾನೀಗಿರುವ ಅವಸ್ಥೆಯಲ್ಲಿ ನಿನಗೆ ನೀಡಲು ಅಶಕ್ತನಾಗಿರುವುದರಿಂದ ನನ್ನನ್ನು ಕೈಗೊಟ್ಟು ಎಬ್ಬಿಸಿ ನಿಲ್ಲಿಸಿ ತಕ್ಕ ಶಾಪವನ್ನು ಹಿಡಿ!!

[ರಾಜನು ಎದ್ದು ಪತಿತನನ್ನು ನಾಜೂಕಾಗಿ ಎಬ್ಬಿಸಿ ಮೈದಡವಿ ನಿಲ್ಲಿಸುವನು]

ರಾಜ : ಪೂಜ್ಯರೇ! ..... ಕ್ಷಮಿಸಿ! ಕ್ಷಮಿಸಿ!

ಋಷಿ : ಹಿಡ್ಡೀ!! (ರಾಜನು ಹಸ್ತವನ್ನು ಒಡ್ಡುವನು)

ರಾಗ — ಅಠಾಣ

ಕಂದ :

ಹಿಡೀ ಶಾಪವಾ......ಹಿಡೀ ಹಿಡೀ ಶಾಪವ....

(ಥಟ್ಟನೆ ನಿಲ್ಲಿಸಿ) ಆಹಾ! ದಿವ್ಯ ಶ್ರವಣವನ್ನು ಸಂಪಾದಿಸಲೋಸುಗ ಶೇಖರಿಸಿ ಇಟ್ಟಿರುವ ನಾನು ಈ ದುರುಳನಿಗೆ ಶಾಪವನ್ನು ಕೊಡುವ ಆವೇಶದಲ್ಲಿ........ವೃಥಾ ತಪೋವ್ಯಯವನ್ನು ಮಾಡುವುದು ಕೇವಲ ಮೌಢ್ಯ! ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳುವೆನು! (ಶಾಂತಿ ತಂದು ಕೊಂಡು) ಎಲೈ ದುರಾತ್ಮನೆ ಎಂದು ಕರೆಯಬಾರದ ವ್ಯಕ್ತಿಯೇ ! ನಿನ್ನ ಕುಲವು ನರಕದಲ್ಲಿ ನರಳಿ ಕೊಳೆತು ಕಂಗೆಡಲೆಂದು ನಾನೇಕೆ ಶಪಿಸಲೀ ? ಶಾಂತೀ! ಶಾಂತೀ! ಆದರೂ ನಾಲ್ಕಾರು ಜನ ನಡೆ ಯುವ ಈ ಪಥದಲ್ಲಿ ಬಿದ್ದುಕೊಂಡು ದಾರಿಹೋಕರನ್ನು ದಬ್ಬಿಸಲು ಉದ್ಯುಕ್ತನಾಗಿರುವ, ನೀನಾರು ?............ನಿನ್ನ ಹಾಳು ಹೆಸರೆಂದು ಕರೆಯಬಾರದ ನಿನ್ನ ನಾಮಧೇಯವೇನು ? ನಿನ್ನ .... ಅಧಮವೆಂದು ಕರೆಯಬಾರದ ನಿನ್ನ ಕುಲಗೋತ್ರಗಳಾವುವು ?

ರಾಜ : (ಮುನಿಯ ಕಾಲಿಗೆ ಬಿದ್ದು)

ಹಾಡು :

ರಾಗ–ಕಾನಡಾ–ವಿಳಂಬಗತಿ

ಕೋ ಪೀ ಸಾ ಬೇ ಡಾ ವೀ ಪ ರಿ ತಾ ಪಾ ಸೀ ನೀ ನೂ

(ಎಂದು ನಿಧಾನವಾಗಿ ಪ್ರಾರಂಭಿಸಿ ಋಷಿಯ ಮುಖದಲ್ಲಿ ಯಾವ ಬದಲಾವಣೆಯೂ ಇಲ್ಲದ್ದನ್ನು ನೋಡಿ, ಈ ಹಾಡನ್ನು ನಿಲ್ಲಿಸಿ, ತೀವ್ರಗತಿಯ ಮುಂದಿನ ಹಾಡನ್ನು ಹಾಡುವನು)

ರಾಗ–ಶಂಕರಾಭರಣ– ತ್ರಿಪುಟ–ಚತುರಶ್ರ

ಮೂಢನ ಮನ್ನಿಸಲೈ । ಮುನಿಯೇ ।
ಮಾಡೀದಪರಾಧಕೆ ॥
ಪಾಡೂ ವಿಧೀ ಪೆಟ್ಟ – ತಡೆಯದೆ ನಾಕೆಟ್ಟ।

ನಾಡನು ತಾ ಬಿಟ್ಟು–ಕಾಡೊಳು ಕಾಲಿಟ್ಟ ॥
ಮೂಢನ ಮನ್ನಿಸಲೈ॥ (ಈ ಹಾಡನ್ನು ಮಾತ್ರ ಮಂಡಿಗೊಂಡು ಕುಳಿತುಕೊಂಡು ಋಷಿಗೆ ಪ್ರದಕ್ಷಿಣೆ ಹಾಕುವನು)

ಋಷಿ : ಆಗಲಿ............ಆದರೆ ಇದಕ್ಕೆ ತಾನೇ ಕಾರಣವೇನು ?

ರಾಜ : (ಹಾಡು ಮುಂದುವರಿಸುತ್ತ)

ಮಕ್ಕಳಿಲ್ಲದೆ ನಾ । ಬ್ಬಿಕ್ಕೀ ಬ್ಬಿಕ್ಕೀ ಅತ್ತು
ದಿಕ್ಕೊಂದು ತೋರದೆ । ಹೊಕ್ಕೆನೀ ಕಾನನವ ॥ಮೂಢನ॥

ಋಷಿ : ಹೌದೂ, ಇದಕ್ಕೆ ನಾನೇನು ಮಾಡಲಿ! ?

ರಾಜ : ಶಾಂತಾ ಮೌನಿಯೇ ಈ । ಚಿಂತೆಯನು ತೊಲಗಿಸಿ
ಸಂತಾನಕೆ ದಾರಿ । ಎಂತಾದರೂ ತೋರಿ ॥

(ಇದನ್ನು ಅತಿ ವಿಳಂಬವಾಗಿ ಹೇಳಿ) **॥ ಮೂಢನ ॥**

ಪೂಜ್ಯನೇ! ತಪಸ್ವಿಯಾದ ನೀನು ನನ್ನೀ ಅವಸ್ಥೆಯನ್ನು ಪರಿಹರಿಸಿ ನನ್ನ ದುಃಖದಿಂದ ಹೋಗಲಾಡಿಸಬೇಕು.

ಋಷಿ : ರಾಜೇಂದ್ರ! ಅನ್ಯನಿಮಿತ್ತಕ್ಕಾಗಿ ಶೇಖರಿಸಿಟ್ಟಿರುವ ನನ್ನ ತಪಸ್ಸನ್ನು ನಿನ್ನ ವಿಷಯದಲ್ಲಿ ವೆಚ್ಚಮಾಡಲು ನನ್ನಿಂದಾಗದು ; ಆದಾಗ್ಯೂ ನಿನ್ನ ಕಷ್ಟವನ್ನು ಕಂಡು ನಾನು ಹೇಳುವ ವಚನಗಳನ್ನು ತಾಳ್ಮೆಯಿಂದ ತಕ್ಕೈಸಿ ವ್ಯವಸ್ಥೆಗೆ ತರುವವನಾಗು!...... ನಿನ್ನ ಸಂತಾನ ಸುಖದಲ್ಲಿಯೂ ...... ಲಾಭದಲ್ಲಿಯೂ....... ಸಭಾಗಿಗಳಾದ ನಿನ್ನ ಪಿತೃಗಳನ್ನಾಗಲೀ ನಿನ್ನ ಕುಲ ದೇವತೆಯನ್ನಾಗಲೀ ಸವಿನಯದಿಂದ ಕೇಳಿಕೊಳ್ಳುವುದೇ ಸಾಧನವಲ್ಲದೇ ಸ್ವಗತಿ ಲುಪ್ತಚಿತ್ತನಾಗಿಯೂ 'ನಾವಿಷ್ಣುಃ ಪೃಥಿವೀ ಪತಿಃ' ಎಂಬ ದೈವೋಕ್ತಿಯನ್ನು ನಿರಾಕರಿಸಿಯೂ ನಿನ್ನ ರಕ್ಷಣೆಗೆ ನಿನ್ನ ಪೂರ್ವ ಜನ್ಮ ಸಂಸ್ಕಾರ ವಶಾತ್ ನೀನೇ ವಹಿಸಿಕೊಂಡಿರುವ ನಿನ್ನ ಪ್ರಜೆಗಳನ್ನು ಒಡೆಯನಿಲ್ಲದೆ ಕಂಗೆಡಲು ಬಿಟ್ಟು ಹೀಗೆ ಅಕಾಲ ವಾನಪ್ರಸ್ಥವನ್ನು ಅವಲಂಬಿಸಿರುವುದು ಅನುಚಿತವು! ಕೂಡಲೇ ಹಿಂತಿರುಗಿ ರಾಜ್ಯವನ್ನು ಸೇರಿ ಪ್ರಜಾಪಾಲನವನ್ನು ಜರುಗಿಸಿ ಅದರಿಂದ ಉತ್ಪದ್ಯವಾದ ತಪೋಬಲದಿಂದಾಗಲೀ ಅಥವಾ ನಿನ್ನ ಕುಲದೇವತಾ ಪ್ರಭಾವದಿಂದಾಗಲೀ ಸಂತಾನವನ್ನು ಹೊಂದಿ ಸುಖಿಸು!! (ಎರಡು ಕೈಗಳನ್ನು ಎತ್ತಿ ಅರಸನನ್ನು ಆಶೀರ್ವದಿಸಿ ಅದೃಶ್ಯನಾಗುವನು)

ರಾಜ : (ಏಕಾಂಗಿಯಾಗಿ, ವಿಸ್ಮಯ, ವಿಷಾದಗಳನ್ನು ಸೂಚಿಸುತ್ತಾ)

ಹಾಡು ರಾಗ — ಕಾಪಿ ತ್ರಿಪುಟ — ಚತುರಶ್ರ

ಆಹಾ ಏನು ಮಾಡಲಿ। ಸಾಹಸವನೆಂತು ಗೆಯ್ಯಲೀ ॥ಪ॥

ಆಹಾ ಇನ್ನು ಮಾಡುವುದೇನು ? ಮುನಿಪುಂಗವನ ಮಾತುಗಳನ್ನು ಆಲೋಚಿಸಿ ಅಂಗೀಕರಿಸಿ ರಾಜ್ಯವನ್ನು ಸೇರುವುದೇ ಲೇಸು! ಹಾಗೆಯೇ ಮಾಡುವೆನು! ಎನ್ನ ಕುಲದೇವತೆಯೇ! ಈಗಲಾದರೂ ನಿನ್ನ ಕುಲೋತ್ಪನ್ನನಾದ ಈ ನಿರ್ಭಾಗ್ಯನಲ್ಲಿ ಕರುಣೆಯಿಟ್ಟು ಈ ದುಃಖದಿಂದ ವಿಮುಕ್ತನನ್ನಾಗಿ ಮಾಡುವುದು ನಿನ್ನ ಕರ್ತವ್ಯವು.

(ನಿಷ್ಕ್ರಮಣ)

[ಅಂಕದ ಪರದೆಯು ಬೀಳುವುದು]

ಅಂಕ ೨

ದೃಶ್ಯ ೧

ಅಧ್ವಾನವನದ ಸೀನ್

[ಅನೇಕ ಪುಷ್ಪಕರಂಡಗಳಲ್ಲಿ, ಪ್ರತಿಯೊಂದು ಪುಷ್ಪಕರಂಡದಲ್ಲಿಯೂ ಒಂದೊಂದು ಕೋಲನ್ನು ನೆಟ್ಟು, ಕೋಲಿಗೆ ಈ ಕೆಳಗೆ ಕಂಡಂತೆ ಬರೆದು ಬೋರ್ಡುಗಳನ್ನು ನೇತು ಹಾಕಿರುವರು. ಇಂಡಿಕವ್ ಬಲೀಜೇರಂ ; ರೋಸಂ ಏರಂಗುಂ ; ನೆಲಸಂಪಿಗಂ ನೆಲಸಮಂ ; ಸಂಪಿಗಂ ಸತ್ರಂ ; ತಿಪ್ಪಾಹರ್ಣಿಳ್ಳಿಸ್ ಎಲೆಹೂಪಿಲ್ಲಸ್ ; ಮಲ್ಲಿಗಂ ಮಣ್ಣಂ ; ಇರುವಂತಿಕಸ್ ಉರುವೇ ಇಲ್ಲಸ್ ; ಮೊಲ್ಲುಂ ಮೊಳೆಯೇ ಇಲ್ಲಸ್.]

(ರಾಣಿಯ ಐವರು ಸಖಿಯರಲ್ಲಿ ಕರ್ಣಾಟಕ ಸಖಿಯು ಪ್ರವೇಶಿಸಿ ಸುತ್ತಮುತ್ತಲೂ ನಲಿದು ವನದ ಸೌಂದರ್ಯಕ್ಕೆ ಮನಸೋತು)

ಕರ್ನಾಟಕ ಸಖಿ :

ರಾಗ ಕಾಫಿ — ತಾಳ — ತ್ರಿಪುಟ (ಚತುರಶ್ರ ಲಘು)

ಬನ್ನಿರಿ ಭಾಮೇಯರೆಲ್ಲ। ರನ್ನತೋಟದೊಳಾಡುವಾ ॥ಪ॥
ಪೊನ್ನುಲತೆಗಳ ಸೊಬಗಿಗೇ ಮನ। ವನ್ನು ಸೋತು ಪಾಡುವಾ ॥ಅ॥
ಕಾಮುಶರಗಳ ಬತ್ತಳಿಕೆ ಶಿವ। ಕಾಮಿಶಯಿಸುವ ಪದ್ಮವೂ।
ಪ್ರೇಮಯುಗ್ಮದ ಪ್ರಣಯಕಲಹವ। ಹರಿಸಿಹರ್ಷಿಪ ವರ್ಷವೂ।
ಸುಮವರ್ಷವೂ ॥ಚ॥

ಹಿಂದೂಸ್ತಾನಿ ಸಖಿ : (ಪ್ರವೇಶಿಸಿ)

ರಾಗ — ತಾಳ — ಪೂರ್ವೋಕ್ತಂ

ನಿಕಹಾಂಕೇ ಬಾಗ್‌ಬೆಹಾನೋ। ಗುಲ್‌ಬಗ್ಗೈರ್ ಬುಲ್ ಬುಲ್ ಬಗ್ಗೈರ್।
ದಿಲ್ಲ್ ಎ ವೈರಾನ್ ಕುಲ್‌ಗುಮಾನೇ ಖುಲ್ಲೆ ಖುಲ್ಲೆ ಪೂಲ್ ಬಗ್ಗೈರ್ ॥೧॥
ಲಾಹಿಲಾಕೇ ಬಾಗ್ ಬರೀಚ। ಇಲ್ಲ್ ಅಲಾಕೆ ಪೂಲ್
ಹೂರೋಸೆ ಬಂದೆಹಸೊ ಸೇಹರಾ। ಸೇಹನಾರಸೂಲ್ ॥೨॥

Up-to-date ಸಖಿ : (ಅದೇ ಧಾಟಿಯಲ್ಲಿ ಅಭಿನಯಪೂರ್ವಕ)

ಏನೀ garden ಉ ಬಹಳ silly
ನೋಡಲೂ not a rose or lily ॥
waste of time ಊ walking ಇಲ್ಲೀ
Rotten garden Surely ॥
Follow me maiden ಗಳೆಲ್ಲಾ flowery ವಿಲಾಯ್ತಿಗೇ।
Frost and Snow and cold ಅ ತಡೆಯದೆ fog ಅನಲ್ಲಿ
shiver ಉವಾ ॥೩॥

ಅಯ್ಯಂಗಾರ್ ಸಖಿ : (ಅದೇ ರೀತಿ, ಕರಂಡಗಳಿಗೆ ನೀರು ಸುರಿಯುವ ಅಭಿನಯಪೂರ್ವಕ)

ವಾಂಗ್ರೋಣೇ ಭಾವೋಂಗಳೆಲ್ಲಾ । ಪಾಂಗ್ರಣೇ ಅನ್ಯಾಯುಗೋಳ್ ॥ಪ॥
ಪಾಳುವಾಲಿಯು ಗೋಳುಕೊಟ್ಟ । ತೋಟತಿನ್ನುವಳಿಕಟ್ಟಲಾ ॥ಅ॥
ಜಲವೆ ಬಿಟ್ಟಲ್ಲಿ ಬಳ್ಳಿಕಿ । ಬಾಡಿಯಿಕ್ಕದ್ರ್ಗ ಬಾಗೆಪೂ।
ಬಡ್ಡಿ ಹೈದೋಂ ತೋಟಕಾರಣ್ಣೇ । ವುಡ್ಡಿ ಕೆಲಸೋಂ ಪಾಂಗ್ರಣೇ ॥ಚ॥೪॥

ಕೇರಳ ಸಖಿ :

ತೇಂಜ ಚಕ್ಕೆ ವೊಳಹು ವಿಲ್ಲ ಊಣುಕಳಿಕ್ಕಾಂ ಅರಿಯು ವಿಲ್ಲ ॥ಪ॥
ಕಳಿಚಿ ಕುಳಿಕ್ಕಾಂ ಕೊಳಮುವಿಲ್ಲ । ಎಂದ ತೋಟವೋ ರಾಘವಾ ॥ಅ॥
ಪನ್ನಿರೀಪಾಮೇಹಳಿಲ್ಲ ಎಂಡೆ ತರವಾಡ್ ತೋಟಕೇ।
ಎಳಿಚಿ ಅಣ್ಣೆಲಿ ಕಳಿಚಿಕುಳಿಕಿ ಚಕ್ಕಪ್ರಥಮನ್ ಕಳಿಕ್ಕ್ಯವಾ ॥ಚ॥

ಕರ್ನಾಟಕ ಸಖಿ : ಶ್ಯ...ಶ್ಯ ! ಸಖಿಯಿರಾ ! ಸದ್ದುಮಾಡದೇ ಹೀಗೆ ಬನ್ನಿ ! ಮಹಾರಾಣಿಯು ವಿರಹಶೋಕಮಗ್ನಳಾಗಿ ಇಲ್ಲಿಗೆ ಬರುತ್ತಿರುವಳು.

(ಪ್ರವೇಶ : ಮಹಾರಾಣಿ)

ಮಹಾರಾಣಿ :

ರಾಗ — ಅಠಾಣ ತಾಳ — ತ್ರಿಪುಟ (ಚತುರಶ್ರ ಲಘು)

ಕ್ರೋಶಿಸಿಫಲವೇನೇ ಕೃಶಾಂಗೀ
ಎನ್ನಾಶೇಯಾ ಈಶನಲ್ಲವೆ ತೀರಿಪುದು ॥ಪ॥
ಶಶಿರೇಖೆಯೋ ಪೇಳ್ ॥ಅ॥
ಕ್ಷಿತಿಯೊಳವತರಿಸಿ ದಿತಿಧೀರನವರಿಸಿ ।
ಸುತರತ್ನವಿಲ್ಲದೆ ಮತಿವಿಾರಿ ಮರುಗುತೆ ॥ಚ॥

ಆಹಾ ! ಇದೆಲ್ಲ ವಿಧಿಯ ವಿಪರೀತ ಶೋಧನೆಯು. ವಿಧಿಯ ಪರಿಪಾಕವನ್ನುಲಂಘಿಸಲು ಯಾರಿಂದ ತಾನೇ ಸಾಧ್ಯ ! ?

ಕಂ॥ ರಾಗ — ಶಹಾನ

ಅಜನಂ ಕುಲಾಲನಂ ಗೈದು
ಭುಜಗಶಯುನನಂ ನರಳಲ್ ದಶಪರಿಭುವಿಗಟ್ಟೀ।
ತ್ರಿಜಗಮಂ ದಹಿಸ ರುದ್ರನ (ಮಂದರದಲ್ಲಿ)
ನಿಜಪಾಣಿಯುಲಿ ಕಪಾಲಮನಿತ್ತ ವಿಧಿಯೇ ॥ (ತಾರಕದಲ್ಲಿ ಹಾಡನ್ನು ಎತ್ತುವಳು)

ರಾಗ — ನೀಲಾಂಬರಿ ತಾಳ — ಝಂಪೆ

ಇಂತೇಕೆ ಕಾಡಿಪೆ ನೀ । ಹತವಿಧಿಯೇ ॥ ॥
ಕಾಂತನನು ತೊಲಗಿಸಿ ॥ಅ॥
ಸಂತಾನವಿಲ್ಲದೆ ಭ್ರಾಂತಳಾದ ಯೆನಗೇ
ಕಾಂತನನಗಲೀದಾ । ಕ್ಲಾಂತಾವನೀದಗಿಸಿದೆಯಾ ॥೧॥

(ಆಹಾ ! ಎಂದು ರಾಣಿಯು ಬೀಳುವಳು. ಸಖಿಯರು ಅವಳನ್ನು ಅಲ್ಲಿರುವುದಾಗಿದ್ದ ಲತಾಶಯನದ ಮೇಲೆ ಮೆಲ್ಲಗೆ ಒರಗಿಸುವರು.)

ಕನ್ನಡ ಸಖಿ : (ಚಾಮರವನ್ನು ಬೀಸುತ್ತಾ)

ರಾಗ — ಹಿಂದೂಸ್ತಾನಿ ತೋಡಿ — ತಾಳ ?

ಸೈಸು ಸೈಸು ಸುಮುವದನಾ
ಸೇರುವನೂ ನಿನ್ನ ರಮಣಾ ॥
ಪತಿವ್ರತವನು ಆಚರಿಪಾ
ಸತಿವ್ಯೂಹದ ಮುಂದೆನಿಪಾ ನಿನ್ನ
ಅತಿಧರ್ಮವ ಪೊಂದಿ ನೆನೆಪಾ
ಪ್ರತಿಫಲವೀವನು ವಿಧಿಯೂ ॥

Up-to-date ಸಖಿ :

ಹಿಂದೂಸ್ತಾನಿ ತೋಡಿ (ಅದೇ ಧಾಟಿ)

ನನ್ನ idea **ಕೇಳಿ** your majesty
weepingoo uselessoo you must see
crying in publicoo shocking taste**ಊ**
ಅಲ್ಲೆ, tearsoo such a bitter waste **ಊ** sodium
chloride and calcium phosphate **ಊ**
suffering a woman in her fateoo !

ಚೇಟಿ : (ಹಠಾತ್ತಾಗಿ ಪ್ರವೇಶಿಸಿ) ಮಹಾರಾಣಿಗೆ, ನಿತ್ಯ ಮಂಗಳವಾಗಲಿ !

ರಾಣಿ : ಕಾಂತನು ಕಾಡು ಪಾಲಾಗಿರುವಲ್ಲಿ ನಿಮ್ಮ ಮಹಾರಾಣಿಗೆ ನಿತ್ಯ ಮಂಗಳ ವೆಂದರೇನು ?

ವಸಂತಿಕೆ : (ಬಿರುಸಾಗಿ) ಚೇಟಿ ! ಅದೇನದು ವರ್ತಮಾನ ! ಶೀಘ್ರವಾಗಿ ಒರೆ !

ಚೇಟಿ : ಸರ್ವಸಾರ್ವಭೌಮನಾದ ಮಹಾರಾಜನು ಪಟ್ಟಣವಂ ಪ್ರವೇಶಿಸಿ ಅಂತಃಪುರ ವನ್ನೇ ಸಮೀಪಿಸುತ್ತಿರುವಂತೆ ಕಾಣುವುದು !

ರಾಣಿ : (ಥಟ್ಟನೆದ್ದು) ಆಹಾ ! ವಿಧಿಯೇ ! ನಾನಿಟ್ಟ ಮೊರೆಯು ಮೊಳೆತು ಪುಷ್ಪಿಸಿ ಫಲಕಾರಿಯಾಯಿತೇ ! ಈ ಸಂತೋಷವನ್ನು ಹೇಗೆ ತಾನೇ ತೋರಿಸಲಿ ? (ಎಂದು ಆನಂದ ಬಾಷ್ಪವನ್ನು ಕಾರುತ್ತಾ ಮೂರ್ಛಿಸಿ ಬೀಳುತ್ತಿರುವ ರಾಣಿಯನ್ನು ಕೈಗೊಟ್ಟು ಪುನಃ ಅದೇ ಲತಾಶಯನದಲ್ಲಿ ಮಲಗಿಸುವರು)

[ಮಹಾರಾಣಿಯೂ ಮೂರ್ಛಿಸಿ ಥಟ್ಟನೆ ಬಂದ ಸಂತೋಷವಾರ್ತೆಯಿಂದುಂಟಾದ ಹೃದಯಸ್ತಂಭನದಿಂದ ಮೃತಳಾಗುವಳು.]

ಸಖೀಕೂಟ : ಅಯ್ಯೋ ! ನಮ್ಮ ರಾಣಿಯ ಸೇವೆಯು ಇನ್ನು ಲಭ್ಯವಿಲ್ಲದ ಮೇಲೆ ನಾವು ಬದುಕಿ ತಾನೇ ಏನು ಪ್ರಯೋಜನ ! (ಎಂದು ಕೆಲವರು ಬಾಕಿನಿಂದ ತಿವಿದುಕೊಂಡು, ಮತ್ತೆ ಕೆಲವರು ಕರಂಡದ ಕೋಲು ಬಳ್ಳಿಗಳಿಂದ ಕುತ್ತಿಗೆಯನ್ನು ಬಿಗಿದುಕೊಂಡು ಎಲ್ಲರೂ ಮೃತ ರಾಗಿ ಬೀಳುವರು. ಮಂತ್ರಿಯು ಅನಂತರ ಪ್ರವೇಶಿಸುವನು.)

ಮಂತ್ರಿ : ಏನು ಅನಾಹುತ ! ಆಹಾ ! ನಮ್ಮ ಮಾತೃ ಸಮಾನಳಾದ ಮಹಾರಾಣಿಯೂ ಸಖೀಸಮೂಹವೂ ಮೃತರಾದ ಮೇಲೆ ನಾನು ಬದುಕಿ ಪ್ರಯೋಜನವೇನು ? (ಎಂದು ಅವನೂ ಬಾಕಿನಿಂದ ತಿವಿದುಕೊಂಡು ಸಾಯುವನು. ಅನಂತರ ಸೈನ್ಯಾಧಿಪತಿಯು ಬರುವನು. ಅವನೂ ಇದೇ ರೀತಿಯೇ ಸತ್ತುಬೀಳುವನು. ಅನಂತರ ಬಂದ ಪುರಜನ ಸಮೂಹವು "ಹಾಹಾಕಾರಪಟ್ಟು"

ಕೆಲವರು ಬಾಕಿನಿಂದ ತಿವಿದುಕೊಂಡು ಮತ್ತೆ ಕೆಲವರು ಒಬ್ಬರ ಕತ್ತನ್ನೊಬ್ಬರು ಕಿವಿಚಿಯೂ ಎಲ್ಲರೂ ಸಾಯುವರು. ಅನಂತರ ರಾಜನು ಪ್ರವೇಶಿಸುವನು.)

ರಾಜ : ದೇವಿ ! ನೀನು ನಿತ್ಯಮಂಗಳೆಯಾಗಿ (ಥಟ್ಟನೆ ಮೂರ್ಛಿತಳಾದ ರಾಣಿಯನ್ನು ಗಮನಿಸಿ ಚಮಕಿತವದನದೊಂದಿಗೆ) ಇದೇನಿದು ? ನನ್ನ ಪ್ರಿಯತಮೆಗೀಗತಿಯೇ............? ಆಹಾ !........

ಪದ್ಯ : ರಾಗ : ಪೂರ್ವಿ

ದಿತಿಕುಲದ ಧೀರಕುಲಕೇಸರಿಯ ಸತಿರತ್ನವಾ............
ಹತವಿಧಿಯ ವಜ್ರಸಮುಹೇತಿಯು ಹತಿಗೆಡಗೈದೂ
ಅತಿದುರ್ಭರ ಗತಿಗಾಹುತಿಯನಿತ್ತೀ............
ಹತಜನ್ಮವ ದಹಿಂತರೇನೂ............

ಹಾಡು—ರಾಗ : ಫರ್ಜು — ಆದಿತಾಳ ಮಧ್ಯಮ ಗತಿ

ಇನ್ನು... ನಿನ್ನ....ಆಗ್ರಹವೇ ಏ............॥ಪ॥ ಇನ್ನು ನಿನ್ನ ॥
ಪನ್ನಗಧರಹರಾ ಎನ್ನದೇವಾ ಶಿವಾ ॥ ಅ ಪ ॥
ದಿತಿಮಾತೆಯ ಕುಲಕೆ
ಚ್ಯುತಿಯೊಂದು ಬಾರದೆ
ಕ್ಷಿತಿಯಪಾಲಿತುದಕೆ
ಪ್ರತಿಫಲವೇ ದೇವಾ....ಪಶುಪತೇ....ಪಾರ್ವತೀ...ಪತೇ ॥ಚ॥

ರಾಜ : ಆಹಾ ! ಎಲ್ಲಿ ಹೋದರೂ ಶೋಕವೇ ! ನನ್ನ ಕರ್ಮಫಲಾನುಭವಕ್ಕೆ ನನ್ನನ್ನು ಕೈಹಿಡಿದ ನನ್ನ ಪ್ರಿಯತಮೆಯೂ ಸಭಾಗಿಯಾಗುವುದನ್ನು ನೋಡಿ ನರಳಬೇಕೆಂದು ವಿಧಿಯು ನನ್ನ ಫಾಲದಲ್ಲಿ ಲಿಖಿಸಿದನೇ ! ಆಹಾ !........ಆಹಾ ! ಕುಲದೇವತೆಯೇ ನೀನೆನ್ನ ಕೈಯನ್ನು ಬಿಟ್ಟಮೇಲೆ ಜೀವಿಸಿ ಏನು ಫಲ ! ಇನ್ನು ಮರಣವೇ ಲೇಸು ! (ಎಂದು ಕೂಪವನ್ನು ಸಮೀಪಿಸಿ ಸೊಂಟದಲ್ಲಿದ್ದ ಬಾಕನ್ನು ಎಳೆದು ಝಳಪಿಸುತ್ತಾ ತಿವಿದುಕೊಳ್ಳಲು ಉದ್ಯುಕ್ತನಾಗುತ್ತಾ ಸ್ವಲ್ಪ ಯೋಚಿಸಿ ತಡೆದು) ಆಹಾ ! ನನ್ನ ಸುಖದುಃಖಗಳಲ್ಲಿಯೂ ಸಂತೋಷ ಶೋಕಗಳಲ್ಲಿಯೂ ಸಭಾಗಿಯಾಗಿಯೂ, ಪಾತಿವ್ರತ್ಯ ಧರ್ಮದಲ್ಲಿ ಮಾನವಲೋಕದ ಮಾನಿನಿಯರಿಗೆ ಮೇಲ್ಪಂಕ್ತಿಯಾಗಿಯೂ ತನ್ನ ಇಹಪರ ಇಷ್ಟಾರ್ಥಗಳೆಲ್ಲವೂ ಪತಿಯೇ ಎಂದೂ ನಂಬಿದ್ದ ಈಕೆಯನ್ನು ಬಿಟ್ಟುಹೋದರೆ ನನಗೆ ನರಕ ಪ್ರಾಪ್ತಿಯು ನಿಸ್ಸಂದೇಹವು !.......... ನನ್ನ ದುರಾದೃಷ್ಟದಿಂದ ಈಕೆಯು ಈಸ್ಥಿತಿಗೆ ಬಂದರೂ......

ಶ್ಲೋಕ—ರಾಗ—ಕಾನಡ

ತಿಸ್ರಃ ಕೋಟ್ಯೋರ್ಧ ಕೋಟೀಚಯಾನಿ ರೋಮಾಣಿ ಮಾನವೇ ॥
ತಾವತ್ಕಾಲಂ ವಸೇತ್ಸ್ವರ್ಗೇ ಭರ್ತಾರಂ ಯಾನುಗಚ್ಛತಿ ॥

ಎಂಬ ಆರ್ಯೋಕ್ತಿಗೆ ಸರಿಯಾಗಿ ಈಕೆಯು ಪಾತಿವ್ರತ್ಯದಿಂದಲೂ, ನನ್ನೊಂದಿಗೇ ಇಹಲೋಕವನ್ನು ಬಿಡುವುದರಿಂದಲೂ ನಾನು ನರಕವನ್ನು ತಪ್ಪಿಸಿಕೊಳ್ಳುವುದು ಈಕೆಯಿಂದಲೇ ಅಲ್ಲದೆ ಮತ್ತಾವ ದಾರಿಯಿಂದಲೂ ಅಲ್ಲ............(ಮಹಾರಾಣಿಯನ್ನೆತ್ತಿ ತೊಡೆಯ ಮೇಲೆ ಮಲಗಿಸಿಕೊಂಡು ಬಾಕನ್ನು ಝಳಪಿಸುತ್ತಾ)

ಹಾಡು— ರಾಗ—ನವರೋಜು– ತಾಳ–ತ್ರಿಪುಟ–ತ್ರಿಶ್ರ

ಕಾಂತಾಮಣಿ । ಕೊಲುವೆನೇ ನಿನ್ನಾ ॥ಪ॥
ದೋಷಿಯು ನಾನಾದೆ । ನಿರ್ದೋಷಿಯು ನೀನಾದೆ ॥ಅ॥
ಅಹಾ । ಮಡದೀ । ಕೊಲುವೆನೇ । ನಿನ್ನ ಕೊರಳಾ।
ಪಾತಕಿ ನಾನಾದೆ । ಪೂತಳು ನೀನಾದೆ ॥ಚ॥

ನಾನಿನ್ನೇನು ತಾನೇ ಮಾಡಲಿ !? ನನ್ನ ಕೈಹಿಡಿದೀಕೆಯ ಜೀವಾತ್ಮನನ್ನು ದೇಹಬಂಧನದಿಂದ ಬಿಡಿಸಿ ನಾನೂ ಆಕೆಯನ್ನು ಹಿಂಬಾಲಿಸುವೆನು ! (ಬಾಕಿನಿಂದ ಕೊಲ್ಲುವನು)

ರಾಜ : (ಎದ್ದು) ಇನ್ನು ನನ್ನ ಕುಲದೇವತೆಗೆ ಪ್ರಾರ್ಥನಾ ಪ್ರಣಾಮವನ್ನು ಮಾಡಿ ನನ್ನ ಪ್ರಾಣಗಳವನ್ನು ಆಕೆಗೆ ಅರ್ಪಿಸುವೆನು. (ಶವವನ್ನು ಕುರಿತು) ದೇವೀ ! ಸ್ವಲ್ಪ ತಾಳು, ನಿನ್ನನ್ನು ಹಿಂಬಾಲಿಸಿ ಇದೋ ಬಂದೆ.

ಇನ್ನು ವಿಳಂಬಿಸಲಾಗದು. ನನ್ನೀ ಕಾರ್ಯವು ದುಷ್ಕಾರ್ಯವೆಂದು ನಿನಗೆ ತೋಚಿದರೆ ಇದಕ್ಕೆಲ್ಲಾ ನಿನ್ನ ನಿರ್ದಯವೇ ಕಾರಣವೆಂದು ತಿಳಿ...

(ತನ್ನನೇ ಶಿವಿದುಕೊಳ್ಳಲು ಉದ್ಯುಕ್ತನಾಗಿ ಸುತ್ತಮುತ್ತಲೂ ನೋಡಿ) ಪಂಚಭೂತಗಳಿರಾ ! ಪೋಗಿಬರುವೆನು.

ಕಂದ—ರಾಗ—ಕಾನಡಾ

ನವಮೋಹಿನಿ ನೀಂ ವರಿಸಿದ
ಅವನೀಪತಿಯ ಕರವಂ ಬಿಟ್ಟು ಪೋಗದಿತಾ ॥
ಭುವಿಯೊಳ್ ನಿನಗೀಗತಿ ಘಟಿಸೆ
ಶಿವಪುರಿಯೊಳಾದರು ಸಂತೈಸಲಿದೊ ನಾಂಬಂದೆಂ ॥

(ಕುಲದೇವತೆಯನ್ನುದ್ದೇಶಿಸಿ)

ಶೂರ್ಪನಖಾ ದಂಡಕ ಚೂರ್ಣಿಕಾ : ಕರ್ಣನಾಸಿಕ ಮಾತ್ರೇಣ ಸೌಮಿತ್ರೀ ಚಂದ್ರಾಯುಧ ಪ್ರಾಂತ ಭಂಜಿನೀ— (ಮುಗಿಸುವುದರೊಳಗೇ ಸ್ಫೋಟನ ಶಬ್ದವಾಗಿ, ಘರದೆಯ ಕೆಳಗಿನ ಕೂಪದಿಂದ ಶೂರ್ಪನಖಾ ದೇವತೆಯು ಒಬ್ಬ ಯುವಕನನ್ನೂ ಯುವತಿಯನ್ನೂ ಕರೆದು ಕೊಂಡು ಏಳುವಳು. ಸರ್ವರೂ ಬೆಚ್ಚಿಬಿದ್ದು ಬದ್ಧೈಕ ಚಕ್ಷುಗಳಾಗಿ ಆಕೆಯನ್ನು ಭಯವಿಸ್ಮಯ ಭರಿತವದನಗಳೊಂದಿಗೆ ನೋಡಿ ಕೈಮುಗಿದು ನಿಲ್ಲುವರು)

ಶೂರ್ಪನಖಾ :

ಕಂದ — ರಾಗ — ಮೋಹನ

ವತ್ಸನೇ ನಿಲ್ಲು । ನಿಲ್ಲಿಸು ।
ಕುಲಧರ್ಮವ ಮರೆತು ನೀ ।
ಕೊಲೆಪಾತಕನಾಗುವೆಯಾ ।
ಲಲನೆಯ ಕೊಂದು ಎನ್ನಯ
ಕುಲಕೆ ಕುಂದನು ತರುವೆಯಾ ॥೧॥

ವತ್ಸನೆ ! ಇದೇನೀ ದುರ್ಬುದ್ಧಿ ! ? ಅಹರ್ನಿಶಿಯೂ ನನ್ನ ಕುಲಮಕುಟಾಂತ್ಯ ಮಣಿಯಾದ ನಿನ್ನಲ್ಲಿ ನನಗಿರುವ ಮಮತೆಯುಲ್ಲಿ ನಂಬಿಕೆ ಇಡದೇ ಈ ದುಷ್ಕಾರ್ಯಕ್ಕೆ ಉದ್ಯುಕ್ತನಾಗುವುದು ನಿನಗಾಗಲೀ. ನಿನ್ನ ಧರ್ಮಕ್ಕಾಗಲೀ. ನಿನ್ನ ಕುಲಕ್ಕಾಗಲೀ ಸರಿಯೇ ! ವತ್ಸನೇ ! ?

ರಾಜ : ಎನ್ನ ಕುಲದೇವಿಯೇ ಎನಗೆ ಸಂತಾನವಿಲ್ಲದೆ ಎನ್ನ ಧರ್ಮಾಚರಣೆಗೆ ಆತಂಕವು ಸನ್ನಿಹಿತವಾದುದರಿಂದ ಸಂಭವಿಸಿದ ಮತಿಭ್ರಮವಶಾತ್ ನಾನು ಹೀಗೆಲ್ಲ ಮಾಡಬೇಕಾಯಿತು : ಈಗಲಾದರೂ ನಿನ್ನ ಕುಲೋತ್ಪನ್ನನಾದ ಈ ನಿರ್ಭಾಗ್ಯನಲ್ಲಿ ಕರುಣೆಯಿಟ್ಟು ಈ ಅವಸ್ಥೆಗಳಿಂದ ವಿಮುಕ್ತನನ್ನಾಗಿ ಮಾಡುವುದು ನನ್ನ ಪ್ರಾರ್ಥನೆಯನ್ನು ಮನ್ನಿಸಿ ಪ್ರತ್ಯಕ್ಷಳಾದ ನಿನ್ನ ಕರ್ತವ್ಯವು !!

ಶೂರ್ಪನಖಾ : ವತ್ಸನೆ ! ನನಗೆ ನಿನ್ನಲ್ಲಿರುವ ವಾತ್ಸಲ್ಯಾತಿಶಯವನ್ನು ಈಗಲೀಗ ಪ್ರದರ್ಶಿಸುವೆನು ! ನೋಡು ! ಸರ್ವಶಾಸ್ತ್ರ ಪ್ರವೀಣನಾಗಿಯೂ, ಬಾಹುಬಲದಲ್ಲಿ ನನ್ನ ಮರಿಮಗ ಮೇಘನಾದನನ್ನೂ ಮೀರಿಸುವೀ ಮನ್ಮಥಾಕಾರನಾದ ಪುತ್ರರತ್ನವನ್ನು ತಂದಿರುವೆನು. ಇನ್ನು ಮುಂದೆ ಈತನಿಗೆ ತಕ್ಕ ಪತ್ನಿಯನ್ನು ತಂದೊದಗಿಸುವ ತೊಂದರೆಯೂ ನಿನಗೆ ತಾಕದ ಹಾಗೆ ಸಂತತಿ ವೃದ್ಧಿಗೆ ಸಾರ್ಹಳಾದ ಸ್ನುಷೆಯನ್ನೂ ಕೂಡಾ ತಂದಿರುವೆನು. ಇನ್ನು ಸಂತೋಷವಾಗಿರಿ !

(ಪುತ್ರನೂ ಸ್ನುಷೆಯೂ ಮೊಣಕಾಲೂರಿ ತಂದೆಗೆ ತಲೆಬಾಗುವರು. ಇವರನ್ನಾಶೀರ್ವದಿಸುತ್ತ)

ಕಂದ : ರಾಗ : ಕಾನಡಾ

ಧೀರನು ಭುವಿಯೊಳುದ್ಭವಿಸೆ
ಘೋರಸ್ಥೈರ್ಯವ ತಳೆದು ಕುಲಧರ್ಮವ ಪೊರೆದ ।
ವೀ ಇಇಇ ಈರನೆಂಬ ಬಿರುದನುಳಿದೂ
ಭೀ ಇಇಇ ಈರುವೋಲು ಪಾರುವುದೇ ಸ್ಥಿತಿಯ ಹೃತಿಸಿದ ಗ್ಥತಿಗೆ ॥

(ಬಿಕ್ಕುವಳು) ?

ಆದರೂ ಚಿಂತೆಯಿಲ್ಲ. ನಿನ್ನಲ್ಲಿ ನನಗಿರುವ ವಾತ್ಸಲ್ಯವನ್ನು ಲೆಕ್ಕಿಸಿ—"ಧರ್ಮೇಚ–ಕಾಮೇಚ–ಅರ್ಥೇಚ–ಮೋಕ್ಷೇಚ ನಾತಿಚರಾಮಿ" ಎಂದು ನಿನ್ನ ಪತ್ನಿಗೆ ಈ ಕಮಂಡಲುವಿನ ಜಲದಿಂದ ಪ್ರೋಕ್ಷಿಸಿ ಬದುಕಿಸುವೆನು. ವತ್ಸಾ ! ಚಿಂತಿಸಬೇಡ. ನಿನ್ನ ಕಷ್ಟಸುಖಗಳನ್ನೂ, ನಿನ್ನ ಮನೋವ್ಯವಸ್ಥೆಗಳನ್ನೂ ಸದಾಗಮನಿಸುತ್ತಿರುವ ನನಗೆ ನಿನ್ನ ಮನೋಗತವೆಲ್ಲವೂ ಮುಂದಟ್ಟಾಯಿತು.........
............ನಿನ್ನ ಸಹಾಯಕ್ಕೂ ರಕ್ಷಣೆಗೂ ಅಲ್ಲದೆ ನಿನ್ನ ಅಮೋಘವಾದ ಕುಲಮಾತಾ ಭಕ್ತಿಗೂ ಮೆಚ್ಚಿ ಪ್ರಥಮತಃ ಪಾತಿವ್ರತ್ಯ ಧರ್ಮಕ್ಕೆ ಆಚಂದ್ರಾರ್ಕವೂ ಮೇಲ್ಪಂಕ್ತಿಯಾಗಿ ಮೆರೆದ ಸುಚರಿತ್ರಾಕಯಾದು, ಮಂಡೋದರಿ, ಸುಲೋಚನಾ, ಇತ್ಯಾದಿ ಪುಣ್ಯಜನ ಪತಿವ್ರತೆಯರನ್ನು ಹೋಲುವ ನಿನ್ನ ಅರ್ಧಾಂಗಿಯಾದ ನನ್ನ ವತ್ಸೆಯನ್ನು ಪುನರುಜ್ಜೀವನ ಮಾಡಿ ಸಂತೈಸಿ ಅನಂತರ ನಿನ್ನ ಮನೋರಥಗಳನ್ನು ನೆರವೇರಿಸುವೆನು...(ಕರತಾಡನ ಮಾಡಿ ಕೂಪದಿಂದ ಕರಗತಮಾಡಿಕೊಂಡ ಕಮಂಡಲದಲ್ಲಿನ ಉದಕವನ್ನು ಮಹಾರಾಣಿಯ ಶವದ ಮೇಲೆ ಸಂಪ್ರೋಕ್ಷಿಸಿ ಆಕೆಯನ್ನೆಬ್ಬಿಸುತ್ತಾ)

ಕಂ॥ ಅರಿದ ಬಾಯಿಗೆ ಸೀ ತಿಳಿ
ನೀರೆಂತಂತೆನಗೆ ಸುಖಮೆ ನೀಡುವ ನುಡಿಯಂ
ಓರೊರ್ವೆಯು ಪೇಳುವೆಯಾ
ಸಾರಂಗಡ ನಿನ್ನಯ ವಿಮಲ ವಾಕ್ ಚಾತುರ್ಯಂ॥

ವತ್ಸೆ ! ನಿನ್ನ ಪಾತಿವ್ರತ್ಯಕ್ಕೆ ಮೆಚ್ಚಿದೆನು. ಪತಿಯನ್ನು ಸೇರಿ ಸಂತುಷ್ಟಳಾಗು.

ರಾಣಿ : (ಅಂಬೆಗಾಲೂರುತ್ತಾ)

ರಾಗ — ಶಂಕರಾಭರಣ ತಾಳ — ರೂಪಕ

ನಂಜಿದವರ ವ್ಯಸನಗಳನು । ಇಂಬಿನಿಂಪರಿ ಹರಿಸಿ ನೀ । ತುಂಬುವೇ ಮುದದಿಂ ದಲಿಯು ।ನ್ನಂಬೆ ಕರುಣಾಕರೀ । ದಿತಿಕುಲದ ದೇವಿಯೆ ನೀಂ ।

ಕ್ಷಿತಿಯೊಳಿಂತವತರಿಸಿ।

ಗತಿವಿಹೀನಭಕ್ತರ ನಿನ್ನತಿಮಹಿಮೆಯಿಂ ಪೊರೆದೆಯಾ ॥

ಕುಲದೇವಿ, ನನ್ನ ಅನಿವಾರ್ಯದಾವೇಶದಲ್ಲಿ ನಿನ್ನ ಮಹಿಮಾತಿಶಯವನ್ನು ಅರಿತು ಪ್ರಾರ್ಥಿಸದೇ ಇದ್ದ ನನ್ನ ಅಪರಾಧವನ್ನು ನಿನ್ನ ಕರುಣಾಸಾಗರದಲ್ಲಿ ಮುಳುಗಿಸಿ, ತೊಲಗಿಸು.

ಶೂರ್ಪನಖಿ : ವತ್ಸೆ ! ಶಂಕೆಯನ್ನು ಬಿಡು......ನನ್ನ ಕುಲಪುತ್ರನೊಂದಿಗೆ ದೀರ್ಘ ಸುಮಂಗಲಿಯಾಗಿಬಾಳು ! ನಿಮ್ಮಿಬ್ಬರ ಸಂತಾನಶ್ರೀ ಎಂಬ ಪಿಪಾಸೆಯನ್ನು ನನ್ನ ಮಾಯಾ ಬಲ ದಿಂದ ತೀರಿಸಿರುವೆನು. ಇದಿಗೋ ನಿನ್ನ ಮಗ ಮತ್ತು ಸೊಸೆಯರು ನಿಮಗೆ ನಮಸ್ಕರಿಸು ತ್ತಿರುವರು. ಸಂತುಷ್ಟಳಾಗು !

[Auditorium Scene]

[ಶೂರ್ಪನಖಿಯು ಆರ್ಭಟಿಸುತ್ತಾ ಅಧೋಲೋಕಕ್ಕೆ ಅವತರಿಸಿದಾಗ ಅಂಜಿದ ಸಭಿಕ ನೋರ್ವನು ಭಯಾವೇಶಾಧೀನನಾಗುವನು. ಹಾರ್ಮೋನಿಯಂ ತಬಲದವರು ಬೆಚ್ಚಿಬಿದ್ದು ಬಾಜಾ ಬಜಂತ್ರಿಯ ಬಾವಿಯ ಗೋಡೆಯನ್ನು ಧುಮುಕಿ ಆವೇಶ ಬಂದ ವ್ಯಕ್ತಿಯನ್ನು ಸಮೀಪಿಸಿ ಭ್ರಮಿತ ರಾಗಿ ರಂಗಸ್ಥಳದ ಕಡೆಗೆ ತಿರುಗಿ "ಮಂಗ್ಳಾರ್ತಿ ! ಮಂಗ್ಳಾರ್ತಿ !" ಎಂದು ಅರಚುವರು. ಶೂರ್ಪ ನಖಿಯು ಕರ್ಪೂರವು ಉರಿಯುತ್ತಿರುವ ತಟ್ಟೆಯನ್ನು ಕರದಲ್ಲಿ ಪಿಡಿದು ರಾಜಕುವರನು ಘಂಟಾನಾದ ವನ್ನು ಮಾಡುತ್ತಾ ರಂಗಸ್ಥಳದಿಂದ ಸಭೆಗೆ ಇಳಿಯುವರು. ಮೂರ್ಛಿತನನ್ನು ಸಮೀಪಿಸಿ ಮಂತ್ರ ವನ್ನು ಪಠಿಸುತ್ತಾ ಮಂಗಳಾರತಿಯನ್ನೆತ್ತುವರು. ಆದರೂ ವ್ಯಕ್ತಿಯು ನಿಶ್ಚಲವಾಗಿಯೇ ಇರುವುದನ್ನು ಗಮನಿಸಿ.]

ರಾಜಪುತ್ರ : (ವ್ಯಕ್ತಿಯನ್ನು ಒದರುತ್ತಾ) ಹೆದರಬೇಡ್ರಿ, ಲ್ರೀ !....ನಾವೆಲ್ಲಾ ಇದ್ದೇವೆ ....ಕಚ್ಚೋದಿಲ್ಲಾ ಶೂರ್ಪನಖೀ !...ಮನೇಲ್‌ಸಾಕಿದ್ದು ! ಅಲ್ಲಾ ತಮ್ಮು....ತರ್ಕಟಾಲ್ ತಮ್ಮ ...ತಮ್ಮುಲೋ! ಟೋಪ್ಪ ತೆಗೆಯೋ ಧ್ಥೂಃತ್!....ಪ್ರಾಣೇ ಪ್ರಾಣಬಿಡ್ತಿದ್ದಾನೆ......ಬೆದರ್ಕೊಂಡ್ ಬಾಯಿಬಿಡ್ತಿದ್ದಾನೆ.......ಟೋಪ್ಪನ್ ತೆಗ್ದು...ತೋರ್ಸಿ ಸಮ್ಝಾಯ್ಸೋದು ಬಿಟ್ಟು ಥರಾಯಿಸ್ತಾ ನಿಂತಿದ್ದೀ ಯಲ್ಲೋ ! ನಿನ್ನ ದೆವ್ವದಗಣ್ ಫಿರಾಯಿಸ್ತಾ......(ಟೋಪ್ಪನ್ನನ್ನು ಕಿತ್ತು ಮೂರ್ಛಿತನಿಗೆ)...... ಲ್ರೀ ! ಹೆದರಬೇಡ್ರೀ !...ರಾಕ್ಷಸಿಯಲ್ಲಾ ಕಾಣ್ರೀ !...ಇದು ತರಕಟಾಲ್ ತಮ್ಮು !....ಮನುಷ್ಯ ...ಕಂಪ್ನಿಯವ್ನು...hopelessoo ಕಾಣೋ...ಡಾಕ್ಟರೇ ಬರ್ಬೇಕು !!

ಸಭಿಕರಲ್ಲೊಬ್ಬ : I am a doctor ನಾನು ಡಾಕ್ಟ್ರು......I shall come ನಾನು ಬರ್‍ತೇನೆ...if you like ಬೇಕಾದ್ರೆ...

ರಾಜಪುತ್ರ : ಡಾಕ್ಟರೇ ನೀವು ! ಹಾಗಾರ್ ಬನ್ನಿ......(ಡಾಕ್ಟರು ಮುಂದೆ ಬಂದು ರೋಗಿಯನ್ನು ತಟ್ಟಿ, Stethoscope ಕೊಳವೆಯಿಂದ ಸರ್ವಾಂಗವನ್ನೂ ಸವರುತ್ತಾ ಕೊನೆಗೆ ಎಡಬೆನ್ನಿಗಿಟ್ಟು....)

ಡಾಕ್ಟರು : Say ೯೯...ತೊಂಭತ್ತೊಂಬತ್ತು ಅನ್ನಿ !...

ರಾಜಪುತ್ರ : ಅಲ್ಲಾ...ಇಹಲೋಕಾನೇ ಮರ್ತು ಮೂರ್ಛೇಲ್ ಬಿದ್ದೋವ್ನ ಇಂಗ್ಲೀಷ್ ಮಾತಾಡೂಂತ ಅಂತೀರಲ್ರೀ...ಒಳ್ಳೇ ಡಾಕ್ಟ್ರು !

ಡಾಕ್ಟರ್ : Yes. yes...ಹೌದ್ದೌದು...I had forgotten ನಾ ಮರೆತಿದ್ದೆ ...excuse me ಕ್ಷಮ್ಸಿ...The patient is unconscious ರೋಗಿಗೆ ಜ್ಞಾನತಪ್ಪಿದೆ ....but there is nothing to fear ಹೆದರೋಕೇನೂ ಇಲ್ಲ...I am here ನಾನಿಲ್ಲಿದ್ದೇನೆ...Don't fear—ಹೆದರ್ಬೇಡಿ !

ರಾಜಪುತ್ರ : Sir ಅಯ್ಯಾ Doctor ವೈದ್ಯರೇ you ನೀನು I ನಾನು mine ನನ್ನದು he ಅವನು his ಅವನದೂಂತ your ನಿಮ್ಮ third class ಮೂರ್ನೆ ಕ್ಲಾಸ್ translation ತರ್ಜುಮೇನ lesson ಪಾಠಾನ repeating ಒಪ್ಪಿಸ್ತಾ eye eye leaving ಕಣ್‌ಕಣ್‌ಬಿಟ್ತಾ standing ನಿಂತು buy ಕೊಂಡು if be ಇದ್ದರೆ patient ರೋಗಿಯು dead ಸತ್ತು may go ಹೋದಾನು...please ದಯುವಿಟ್ಟು on your work ನಿಮ್ಮ ಕೆಲ್ಸದ್ಮೇಲೆ...attention ಗಮನಾನ...give ಕೊಟ್ಟು... this ಈ animal ಪ್ರಾಣೀನ...... careful ಹುಷಾರ್...make ಮಾಡಿ.

ಡಾಕ್ಟರು : Speaking like this ಹೀಗ್ಮಾತಾಡೋದು...has become a habit with me ಒಂದಭ್ಯಾಸವಾಗ್ಹೋಗಿ ಬಿಟ್ಟಿದೆ...can't break it off easily ಸುಲಭವಾಗಿ ನಿಲ್ಲಿಸೋಕಾಗ್ದು...forgive me ಕ್ಷಮ್ಸಿ...But don't worry about the patient ರೋಗಿ ವಿಷಯ ಆತಂಕಪಡಬೇಡಿ...I shall see to him ನಾನ್ ಅವನಿಗೆ ನೋಡ್ಕೋತೇನೆ.

ರಾಜಪುತ್ರ : If happens like that ಹಾಗಾದ್ರೆ...yes ಸರಿ...you what want ನಿಮಗೇನಾಗ್ಬೇಕು ? For cold service ಶೈತ್ಯೋಪಚಾರಕ್ಕೆ what want ಏನು ಬೇಕು ?

ಡಾಕ್ಟರು : Brandy ಬ್ರಾಂದಿ !

ರಾಜಪುತ್ರ : Brandy ! bottle ಸೀಸೆ...for one ಒಂದಕ್ಕೆ price ಬೆಲೆ..... dear ಪ್ರಿಯ ಐದು ರೂಪಾಯಿ......collection ಕಲೆಕ್ಷನ್ನು less ಕಮ್ಮಿ......therefore ಆದ್ರಿಂದ Brandy ಬ್ರಾಂದಿ piece ತುಂಡು ! For medicine ಮದ್ದಿಗೆ...separate ಬೇರೆ...road ದಾರೀನ...catch ಹಿಡೀರಿ.

ಡಾಕ್ಟರು : It's no good saying like that ಹಾಗ್ಹೇಳಿ ಪ್ರಯೋಜನವಿಲ್ಲ ...must get it somehow...ಹ್ಯಾಗಾದ್ರೂ ತರಿಸಲೇ ಬೇಕು.

ರಾಜಪುತ್ರ : (ರೋಗಿಯ ಜೇಬಿನಿಂದ ಟಿಕೆಟ್ಟನ್ನು ತೆಗೆದು ಚಮಕಿತನಾಗಿ) ಒಳ್ಳೇ ಬ್ರಾಂದೀರಿ! ...ಹೋಲ್ಡ್ಸರ್ವರ್ಡ್ ಕಾಂಪ್ಲಿಮೆಂಟ್ರೀನ ತೋರ್ಸಿ...ಗೇಟ್ keeperನ ಗೋರ್ಲ ಮಾಡಿ. door keeperಗೆ ಫೋಕಾಬಿಲಾಯ್ಸಿ proprictorನ ಗುಗ್ಗು ಬನಾಯ್ಸಿ sofa classನಲ್ಲಿ ಕೂತ್ಕೊಳ್ಳೋರು ಈ ಪಾರ್ಟಿಗೆ brandy ಬೇರೇನೋ ಈ ಬಾಯ್ಗೆ ?..... ತಣ್ಣೀರೆರಚ್ರೀ ! ಏನು ಕೊಡ ಎರಚೋಷ್ಟರಲ್ಲೀ ಏಳ್ದಿದ್ರೆ ಆಮೇಲ್ ನೋಡ್ಕೊಳ್ಳೋಣ...(ಶೂರ್ಪನಖಿಯನ್ನು ಕುರಿತು) ತಮ್ಮಯ್ಯರೇ! ಆ ಗ್ರೀನ್ ರೂಂ ಕಡಾಯಿ ತುಂಬ ನೀರ್ ತುಂಬ್ಕೊಂಡ್ಬಾರೋ !!

ರೋಗಿ : (ಥಟ್ಟನೆದ್ದು ರೌದ್ರದಿಂದ ರಾಜಪುತ್ರನನ್ನು ಅವಲೋಕಿಸಿ ಘರ್ಜಿಸುತ್ತಾ) What is this I say. ಈಗ ಮೂರ್ಛೆ ಬಿದ್ದಿರೋದ್ ನೀನೋ, ನಾನೋ?...ನೀನ್ಬಿದ್ರೆ ಬೇಕಾದ್ರೆ ತಣ್ಣೀರೆರಚಿಸ್ಕೊ......ನನ್ನ ವಿಷ್ಯದಲ್ಲೇನೂ interfere ಮಾಡಬೇಡ...Mind your own business...ನಿನ್ನ ನಾಟ್ಕ ನೀನಾಡ್ಕೊ....ನನ್ನ ಮೂರ್ಛೆಯಿಂದ ಎಬ್ಬೋದು ಡಾಕ್ಟರಿಗೆ ಬಿಟ್ಟದ್ದು ....(ಅತಿದೈನ್ಯದಿಂದ ಕೈಗಳನ್ನು ಚಾಚುತ್ತಾ ವೈದ್ಯನಿಗೆ) ಡಾಕ್ಟ್ರೇ !...ನನ್ನ ಪ್ರಾಣಗಳೆಲ್ಲಾ ನಿಮ್ಕೈಲಿ ! All my lives in your hand ! (ಶೂರ್ಪನಖಿಯನ್ನು ಥಟ್ಟನೆ ನೋಡಿ

ಭೀತಿಪಟ್ಟು (ಅತ್ತರಿಸುತ್ತಾ)...ಹಯ್ಯೋ! ಹಯ್ಯೋ! ಹಯ್ಯೋ! ರಾಕ್ಷ್ಸೀ, ರಾಕ್ಷ್ಸೀ, ರಾಕ್ಷ್ಸೀ... Mrs. Giant! Mrs. Giant! ಹೆದರ್ಕೆಯಾಗುತ್ತೆ...Fright happened...... ಮೂರ್ಛೆ ಬಂದ್ಬಿಡ್ತೇ...ಬಂತು ಬಂತು...ಹಯ್ಯೋ! ಮೂರ್ಛೆ ಬಂದೇಬಿಡ್ತು! Doctor, I have got ಮೂರ್ಛೆ! It has come ಏ come—ಮೂರ್ಛೆ ಬಂದೇ ಬಿಡ್ತು... (ಮೂರ್ಛಿತನಾಗುವನು).

ರಾಜಪುತ್ರ: ಇದಕ್ಕೆಲ್ಲ, ಒಂದೇದಾರಿ ಡಾಕ್ಟ್ರೇ! ಅವನಿಗೋ ಮೂರ್ಛೆ has come ಏ come! ನೀವು ಹೇಳಿದ್ದೋ ಬ್ರಾಂದಿ ಬೇಕೇಬೇಕು–ಇನ್ನ್ ನಾಟ್ಕಾನೋ must walk ಏ walk...ನಡೀಲೇಬೇಕು.........ನೀವು ಹೇಳಿದ್ದಾಗೆ ಬ್ರಾಂದಿ ತರಸ್ಕೊಡ್ಲೇಬೇಕು! (ತಮ್ಮುಗ್ನವನ್ನು ಪಕ್ಕಕ್ಕೆಳೆದು)...ತಮ್ಮುಲೇ! ಇವನಿಗಿಡ್ಲೇಬೇಕು ಇಂಗು! ಆ ಕಲಂದರಂಗ್ಡಿಯಿಂದ ಅರ್ಧ್ವಾಣೆ ಕಚರಾಕಲರ್ ಬಂದ್ಬಾ.........ಒಂದ್ ಟಂಬ್ಲರ್ನೂ ತಕ್ಕೊಂಡ್ಬಾ! (ತಮ್ಮ ಹಾಗೆಯೇ ಮಾಡುವನು ತಂದ ಕಲರ್ ಸೋಡಾವನ್ನು ಒಡೆದು...ಪಂಚಪಾತ್ರೆಗೆ ಬಗ್ಗಿಸಿ...ನೀಡುತ್ತಾ) ತಕ್ಕೊಳ್ಳಿ ಡಾಕ್ಟ್ರೇ! ಕಂಪ್ನೀಗ್ ಮೂರ್ ರೂಪಾಯಿ ಖರ್ಚು.........ಆದ್ರೂವೆ ಈ ಹೆಗ್ಗಣಕ್ಕೆ ಕಾಲೀಂದ ಕಪಾಲದವರೆಗೂ ಕುಡ್ಸಿ.....................ಆವೇಶ ಬಂದವರ್ನ ಆದಸ್ರೋದೇ ಕಂಪ್ನಿಗೆ ಕಾಸ್ಟ್ಲು......(ವೈದ್ಯನು ರೋಗಿಯ ಬಾಯಿಗೆ ಬಣ್ಣದ ಸೋಡಾವನ್ನು ಸುರಿಯುತ್ತಲೇ ಸೊಟ್ಟಮೋರೆಯೊಂದಿಗೆ ರೋಗಿಯು ಏಳುವನು)

ರೋಗಿ: (ಬಾಯಲ್ಲಿ ತುಂಬಿದ್ದ ಬಣ್ಣದ ಸೋಡಾವನ್ನು ಡಾಕ್ಟರ ಮೋರೆಗೆ ಪೀಚಿ)...... .... ಒಳ್ಳೇ ಡಾಕ್ಟರ್ರೀ, ನೀವು! ಥ್ಥೂತ್.........Brandy Brandy ಅಂತ ಕಲಂದರಂಗಡಿ ಚರಂಡಿ ಸೋಡಾನ ಕುಡಿಸ್ತೀರಾ! ನಿಮ್ಮ ವೈದ್ಯಾನ್ ಹೆಗ್ಣಕ್ಹಾಕಾ! ನಿಂಕೊಳವೀವ ತತ್ತೂರಿ ವಾಲಾ! ಬ್ರಾಂಡಿ ಅಂತೆ! ಬ್ರಾಂಡಿ!.......ನಿಂ ಕಂಪ್ನಿ ಹಾಳ್ ನಾಟ್ಕಾನೂ ಸಾಕು......... ಈ ಶೂರ್ಪನಖೀ ಸೊಟ್ಟಮೋರೇನೂ ಸಾಕು! (ಎನ್ನುತ್ತಾ ಶೂರ್ಪನಖಿಯನ್ನು ತಾನೇ ದಾರಿಯಿಂದಾಚೆಗೆ ತಳ್ಳಿ ಸಭೆಯಿಂದ ನಿಷ್ಕ್ರಮಿಸುವನು)

ರಾಜಪುತ್ರ: Doctor ವೈದ್ಯರೇ! Still start ಇನ್ನು ಹೊರ್ಡಿ......Drama must walk......ನಾಟ್ಕಾ ನಡೀಬೇಕು...ತಿರ್ಗೂನೂವೆ ಯಾರಿಗಾದ್ರೂ ಆವೇಶ ಬಂದ್ರೆ this ಈ Brandy ಕಲಂದರ್ ಚರಂಡೀ ನೀರು your near only ನಿಮ್ಮ ಹತ್ರಲೇ let be ಇರ್ಲಿ. Good night ಸದಿರುಳು! Go and come ಹೋಗಿ ಬನ್ನಿ......I shall come ಬಾರ್ತ್ರೇನೆ...............(ಶೂರ್ಪನಖಿಯನ್ನು ಕುರಿತು) ತಮ್ಮುಲೇ! ಕೂವ್ವಾಸೇರ್ಕೋ! (ತಮ್ಮುವನ್ನು ಬಾಜಾಬಜಂತ್ರಿ ಬಾವಿಗಿಳಿಸಿ ರಂಗಸ್ಥಳವನ್ನು ಹತ್ತಿ ನೇಪಥ್ಯವನ್ನು ಪ್ರವೇಶಿಸುವನು)

[ಪುನಃ ಪರದೆಯು ಬಿದ್ದು ಏಳುತ್ತಲೇ ನಾಟಕವು ಮುಂದುವರಿಯುವುದು]

o o o o

ಹಿಂದಿನದೇ ಸೀನ್

ರಾಣಿ: ಸಖೀ! ಆಸೆಗೆ ಎಲ್ಲೆಯುಂಟೇ! ಅಳವುಂಟೆ! ಸಂತಾನರಹಿತವಾಗಿದ್ದ ಆರ್ಯಪುತ್ರರ ಕುಲವು ಮುಂದುವರಿಯುವಂತೆ ಪುತ್ರದಾನವನ್ನು ಕುಲದೇವಿಯು ಕರುಣಿಸಿದರೂ...ನನ್ನ ತಂದೆಗೆ ನಾನೊಬ್ಬಳೇ ಕುವರಿಯಾದುದರಿಂದ ನನ್ನ ಪುತ್ರನು ದೇವಿಯ ಮಾಯಾ ಪ್ರಭಾವದಿಂದಲ್ಲದೆ ನನ್ನ ಜಠರದಲ್ಲಿಯೇ ಜನಿಸಿದ್ದ ಪಕ್ಷಕ್ಕೆ ನನ್ನ ಜನಕನ ಕುಲವು ಅಳಿಯುತ್ತಿರಲಿಲ್ಲವೆಂಬುದೇ ನನ್ನ ಮನಃಕ್ಲೇಶ.........ಆದರೆ ದೈವದತ್ತ ಕರಗತ ಸುಖವನ್ನು ಅನುಭವಿಸುತ್ತಾ ಭಗ್ನಾಶೆಗಳನ್ನು ಬಾಹ್ಯತಃ ತೋರಿಸದಿರುವುದೇ ಉಚಿತ......ಬಾ ಅಂಬಾಲಯವನ್ನು ಸೇರಿ, ಮಹಾದೇವಿಯನ್ನು ಭಜಿಸುವ.

[ಶೋಕವದನಾಕ್ರಾಂತಳಾಗಿರುವ ರಾಣಿಯ ಕಣ್ಣುಗಳನ್ನು ವಸಂತಿಕೆಯು ಸಖಿಯು ಕೈಚೌಕದಿಂದ ಒರೆಸುವಳು.]

ವಸಂತಿಕೆ :

ಕಂದ — ರಾಗ — ಭೈರವಿ

ಆಸೆಯನುಳಿ ಮಹಿಳಾ ಮಣೀ
ಕ್ಲೇಶಕೆ ಆಸೆಯೇ ಮೂಲವೆಂದು ಕೇಳ್ದಿ ಹೇಳುಕ್ಕುಂ ।
ಪಾಶದ ಬಂಧವ ಮುರಿಯುತೆ
ಈಶನ ಪಾದಕಮಲದಿ ಮನವ ನಿಲಿಸೆ ದೇವೀ ॥

ದೇವಿ ! ನೀನೊರೆದಂತೆಯೇ ಆಶಾಪೂರಣಕ್ಕೂ ಆಶಾಭಂಗಕ್ಕೂ, ಈಶನೇ ಕಾರಣನಾಗಿರುವಲ್ಲಿ ...ಈ ನಿನ್ನ ಅಶ್ರುಪ್ರವಾಹವನ್ನು ಸ್ತಂಭಿಸಿ ಈಶ ಪ್ರಾರ್ಥನೆಯೇ ಕರ್ತವ್ಯವಲ್ಲವೇ ?

ರಾಜ : ಆಹಾ ! ವಿಧಿಯ ಪೆಟ್ಟು ಎಂತಹುದು ! ರಾಣಿಯ ಚಿಂತೆಯು ಇನ್ನೂ ಹರಿಯಲಿಲ್ಲವಲ್ಲಾ ! ?

ಕಂದ — ರಾಗ — ಶಹನಾ

ಹಕ್ಕಿಯುಮರಿ ಎಳೆಯದಾಗಿರೆ
ರೆಕ್ಕೆಯುದಕ್ಕೆ ಬರುವನಿತರೋಳ್ ।
ಆದರ ಮೇಲ್ ಬೆಕ್ಕಂ ಛೂಬಿಟ್ಟವೊಲು ।
ರಕ್ಕಸಸೂನುವಾದೆನ್ನ ಮೇಲ್ನಿನ್ನ ಸೊಕ್ಕೆ ! ವಿಧಿಯೇ !!
ವಿಧಿಯೇ....ವಿಧಿಯೇ.... ॥

ಎನ್ನ ಕುಲದೇವತೆಯೇ ನೀನೇ ಕಾಪಾಡಬೇಕು !

ಶೂರ್ಪನಖಿ : (ಹಿಂದಿನಂತೆಯೇ ಸ್ಫೋಟನಪೂರ್ವಕ ಉದ್ಭವಿಸಿ) ಭಕ್ತನೇ ! ಭಕ್ತೆಯೇ ! ನಿಮ್ಮ ಕಷ್ಟಸುಖಗಳನ್ನೂ, ನಿಮ್ಮ ಮನೋವ್ಯವಸ್ಥೆಗಳನ್ನೂ ಸದಾ ಗಮನಿಸುತ್ತಿರುವ ನನಗೆ ನಿಮ್ಮ ಮನೋಗತವೆಲ್ಲವೂ ಮುಂದಟ್ಟಾಯಿತು. ನನ್ನ ಮಾಯಾಬಲದಿಂದ ನಿಮಗೆ ಒದಗಿಸಿಕೊಟ್ಟಿರುವ ಈ ಮಕ್ಕಳಿಂದ ಇನ್ನು ನೀವು ಸುಖಿಗಳಾಗಬೇಕೆಂದು ಆಶೀರ್ವದಿಸಿ ಇನ್ನು ನಾನು ನನ್ನ ಲೋಕಕ್ಕೆ ತೆರಳುವೆನು.

[ಸರ್ವರೂ ಪುಷ್ಪವನ್ನೆರಚುವರು]

ಕಲ್ಯಾಣ ಮಂಗಳ — ರಾಗ – ಸುರಟಿ — ತಾಳ ?

ಈ ದಿನವೇ ಸುದಿನವು ನಮಗೆ ॥
ನಿನ್ನಾನನವ ನೋಳ್ಪ ಎಮಗೆ ।
ಸಂತಾನವಿಲ್ಲದೆ ಕ್ಲಾಂತರಾದ ನಾವು
ಸಂತಸವಾ ಕಂಡೆವು ॥

[ಶೂರ್ಪನಖಿ ಆರ್ಭಟಿಸುತ್ತಾ ಕೂಪವಂ ಇಳಿಯುವಳು]

ಸರ್ವರೂ—

ಮಂಗಳಂ — ರಾಗ — ಇಂಗ್ಲೀಷ್ ನೋಟು

ಕರುಣಿಸೆ ಕುಲದೇವಿಯೇ
ಕರುಣಿಸಿ ಪೊರೆಯೇ ॥
ಧರಣಿ ಸ್ವರ್ಗ ನರಕಗಳಿನ
ಪರರ ಸೊಕ್ಕ ಮುರಿದು ಮೆರೆವ
ವರವ ನೀಡಿ ಪಾಲಿಸೆ
ವರವನೀಡೆ ನೀ ನಿಶಾ
ಚರ ವರಕುಲದವರ ಹರಿಸಿ
ಪೊರೆಯೆ ದೇವಿ ನೀ॥

[ನಾಟಕ ಮುಗಿದುದು]

—ಭರತವಾಕ್ಯ—

ಎಲ್ಲರೂ

ಕಲೆಕಷನ ಘನಪಡಿಸಿ
ಕಂಪೆನಿಯ ಬದುಕಿಸೋ ॥
ಕಾಂಪ್ಲಿಮೆಂಟರಿ ಕಟಾಯಿಸಿ
ಕ್ರೆಡಿಟರ ಗುವಮಾಯಿಸಿ ॥
ಈ ಕುರಿಗಳ ಜಮಾಯಿಸಿ ॥
ಕಲೆಕಷನ ಘನಪಡಿಸಿ
ಕಂಪೆನಿಯ ಬದುಕಿಸೋ ॥

[ಅಂಕದ ಪರದೆಯು ಬೀಳುವುದು.]

ಸಂಪೂರ್ಣಂ

ನಮ್ಕಳಬ್ಬ

ಪಾತ್ರಗಳು

ಅಶ್ವತ್ಥ

ರಂಗಣ್ಣ		
ಸಂಪತ್		
ಬದರಿ		
ಸುಬ್ಬಣ್ಣ		
ವೆಂಕಟೇಶ	}	Memberಗಳು
ಅಹೋಬ್ಳು		
ಶೇಷು		
ಪಿಲ್ಲೂರಾವ್		

ಶಾಸ್ತ್ರಿ

ಸ್ಥಾನ : ಬುಳ್ಳಾಪುರದ ರಾಜಬೀದಿ

ಕಾಲ } ಆಧುನಿಕ
ಭಾಷೆ

ಪ್ರಥಮ ರಂಗ

ರಂಗಣ್ಣ : Good God! Aswath!

ಅಶ್ವತ್ಥ : ಯಾಕೆ ರಂಗೂ ? God ಯಾಕೆ ಈಗ ?

ರಂಗಣ್ಣ : ಅಲ್ಲ Aswath! Convocation ನಲ್ಲಿ ನೋಡಿದ್ದು ನಿನ್ನ. ನೋಡಿದ್ದು ಅಂದರೆ ಏನು ಬರಿ B. A., ನಾನು ; ಡಿಗ್ರೀಗೆ ಅಂದುಕೊಂಡಿದ್ದೆ ; ನೀನೋ M. Sc., Gold-medalಉ. ನನ್ನ ಹಣೇಬರಹ B.A.,L.L.B. ನೋ clerkship ಓ according to father-in-law's fiscal policy. But Aswath, (ಅಶ್ವತ್ಥನನ್ನು ತಬ್ಬಿಕೊಳ್ಳುತ್ತಾ) Room matesಉ ನಾವು....father...father-in-law...ಇಬ್ರೂ disappoint ಮಾಡಿದಾಗ ನಿನ್ನ elocution prize forty rupees ನನ್ಕೈಲಿಟ್ಕೈಲ್ಲಾ!...ಅದೇನು obligationಏ! loanಏ!...you disappeared suddenly! ನಾನ್ ತಿಳ್ಕೊಂಡೇ Tata Institute, Bombay, Research workಉ ಈ lineನಲ್ಲಿ......perhaps foreignಉ ಹೀಗೆಲ್ಲಾ ತಿಳ್ಕೊಂಡಿದ್ರೆ.......... Here you are in benighted Bullapur!.......Scantily dressed! Do you know Aswath ? ನಿನ್ನ arrest ಮಾಡಿಸ್ಬಲ್ಲೆ under the Vagrancy Act ? ಅಲ್ಲಾ Aswath...ನಿನ್ನ brainಉ, ನಿನ್ನ peopleಉ ಇಷ್ಟೆಲ್ಲ backing ಇಟ್ಕೊಂಡಿರೋ ನೀನು...How long ? ...I mean ಎಷ್ಟು ದಿವಸ, ಈ ಊರ್ಗೆ ಬಂದು ?

ಅಶ್ವತ್ಥ : ಹೌದು Rangu! growing grey at 38! Bad signಉ, ಮಗು. one year my juniorಉ (ಘಕಘಕನೆ ನಗುವನು). I used my...what you call gold-medal brainoo and ನಾನ್ collegeನ್ಲ್ಲೈಲ್ಲ science in business. and agriculture.

ರಂಗಣ್ಣ : Aswathoo, Road ನಲ್ಲಿ celebrate ಮಾಡೋದೆ, old friend's meetingoo ? best placeಉ ನಮ್ಮ ಕ್ಲಬ್ಬು, for our talkoo ...... ಅಲ್ಲಿಗೆ ಹೋಗೋಣ! you must be a member of our cluboo! Businessoo, agricultureoo, ಅಂದೆಯಲ್ಲಾ...therefore ನಿನಗೆ more permanent locus standi than usಉ, birds of passageoo...in public serviceoo. ಈವತ್ತು ಈ ಡಿಸ್ಟ್ರಿಕ್ಟು, ನಾಳೆ ಆ ಡಿಸ್ಟ್ರಿಕ್ಟು. Never never know where you are in public serviceoo only thing permanentoo......pensionಉ plus insuranceಉ. ನಮ್ಮ clubಗೆ ಹೋಗೋಣ.

ಅಶ್ವತ್ಥ : ಕ್ಷಮಿಸು dear boy. Watch ಮಾಡ್ತಾಲೆ ಇಧೇನೆ ನಿಮ್ಮ ಕ್ಲಬ್ನ. Lawyerಈಗ್ಳು, doctorಉಗ್ಳು, engineerಗ್ಳು, etcetera plus of course your lone lone selfಉ Judge you know ?...in a manner of speaking in the club and yet out of it!!!......Poor Rangoo ನೀನೋ ನಿಮ್ಮ ಕ್ಲಬ್ಬೋ!

ರಂಗಣ್ಣ : ಅಲ್ಲಾ Aswathoo ನಿನ್ಗೆ club life ಏ ಗೊತ್ತಿಲ್ಲಾ ಯಾವಾಗ್ಲೂ college ನಲ್ಲಿ hostel ನಲ್ಲಿ lone wolfoo ನೀನು...club ಗೆ ಬಾ, club life ಉ ಅಂದ್ರೆ you are thinking that lawyerಉಗ್ಳು doctorಉಗ್ಳು engineerಗ್ಳು etcetera will go on talking "Shopoo" ಅಂತ ತಿಳ್ಕೊಂಡಿಧೀಯಾ ? we

officersoo and professional menoo in our respective professions ದಿನದ್ದಾಗೆ day ಎಲ್ಲಾ ದುಡ್ಡೂ ದುಡ್ಡೂ. ದಣ್ವೂ ದಣ್ವೂ..............ದಣ್ವೂ ದಣ್ವೂ! Saaame bungalow saaame gateoo saaame portico...saame wifeoo. saaame ಕಿಲ್ಲಿಂಗ್ ಮಕ್ಳು. Six o'clock to sleeping ten o'clock ವಾಗೆ spend ಮಾಡೋದು time್ವ ? Of course ಬಂಗ್ಲೆ ಬೇಕು. servants ಬೇಕು. wife ಬೇಕು, childrenoo ಬೇಕು. But "possession is nine points of ಪಾಲ್ಯಾರಿಕೆ"! The price of success in service is "ಬೇಜಾರು". Therefore, club ಇರೋದು, to forget our pensionಉ...ಸಂಬ್ಳಾನೂ and positionsಊ for two hours in the day. Come on dear boy!...

[A Car arrives. Ranganna and Aswath get in and the car drives off.]

ದ್ವಿತೀಯ ರಂಗ

[The Reading room of the Multipolitan Club. Members scattered haphazard round a table heavily laden with journals and magazines.]

ಸಂಪತ್ : ಏನ್ ಶಾಸ್ತ್ರಿ, ಮೇಲ್-paperಏ ಇಲ್ಲಾ ?

ಶಾಸ್ತ್ರಿ : ಏನ್ ಹೇಳ್ಲಿ ಸಾರ್. Pilloo ರಾಯ್ರು, Head Masteroo ..... ಬೆಳಗ್ಗೆ ತೆಗೊಂಡ್ಹೋದೋವ್ರು........

ಸಂಪತ್ : ಯಾರಿಗೆ ಹೆಡ್? ಯಾರಿಗ್ಮಾಸ್ಟ್ರು? ನನಗೋ? ನಿನಗೋ? ಎಲ್ಲಾರ್ ಬದ್ರಿ? Head masterಉ ಅನಾಕಾಲ್ದೇ........ಅವಂಡೆ ಸ್ಕೂಲ್ಕೆಡ್ಡು...... ಅವಂದೆ ಬಡ್ಡಿ ಫಸಲ್‌ಕಿ ಮಾಸ್ಟರು! .... ಉಸ್ಸೆ ಎಷ್ಟೆ ಹೆಡ್ಡಾ........ಉಸ್ಸೆ ಎಷ್ಟೆ ಮಾಸ್ಟ್ರಾ ...... ಏನ್ ಸುಬ್ಬೂ? ಏನ್ ವೆಂಕಟೇಶ್ ?........Good God, ನಾನ್ ಮೊದ್ಲೇ ಹೇಳ್ದೆ! Non-gazetted mennoo, ನಮ್ಮ clubಗೆ........ಬೇಡ ಅಂತ.

ಹಿರಿಯಣ್ಣಯ್ಯ : Gentlemen! Stopit! This is a club!.......officials or non-officials, gazetted or non-gazetted ...I mean..... ಥೂ! But (ಫಕ್ಕನೆ ನಕ್ಕು)...you know what I mean ?

All the rest at the table | Quite so, sir !

ಬದರಿ : (rising) But still sir...last month's Strand Magazine... ten days ಇಟ್ಕೊಂಡೂ...ಯಾಕೇಂತ explanation ಕೇಳಿದ್ರೆ "ಹಾಮೋನಿಯಂ out of orderoo : ಅದ್ನ ರಿಪೇರಿ ಮಾಡ್ಕೊಂಡು, ಆಮೇಲೆ magazine ಓದ್ದೆ. therefore ತಡ. delay......ಕ್ಷಮಿಸಬೇಕು—apologies" ಅಂತಂದವ್ರು...ಬೆಳಗ್ಗೆ ಬಂದು ಮೇಲ್ paperಉ ಮನೇಗೆ ತೊಗೊಂಡ್ಹೋಗಿ...Still he has got it, sir! As common members, up to date with subscriptions...(ಶಾಸ್ತ್ರಿ ಕಡೆ ತಿರುಗಿ) ಏನ್ ಶಾಸ್ತ್ರೀ ?

ಶಾಸ್ತ್ರಿ : ತಾವುಗಳೆಲ್ಲ up-to-dateಉ ಸಾರ್ subscription ನಲ್ಲಿ !...ಆತ up ಏನೂ ? to ಏನೂ ? date ಏನೂ ? ಒಟ್ನಲ್ಲಿ sirs. ಕಮಿಟಿ ಮೆಂಬರು, ಇನ್ನೇನು ಹೇಳ್ಲಿ ?

ವೆಂಕಟೇಶ್ : ಹೇಳೋದೇನು ? ಕೇಳಿ ? Mail paper ಏಕೆ ಇನ್ನೂ ಬರಲಿಲ್ಲಾಂತ.

ಶಾಸ್ತ್ರಿ : (approaching Hiriyanniah) ಕ್ಷಮ್ಸಿ. ಸನ್ನಿಧಾನದಲ್ಲಿ ಅರಿಕೆ ಮಾತ್ರೇನೆ. ಬಡವ. ಎಂಟು ರೂಪಾಯಿ ಸಂಬ್ಳ. ಒಂದು Tuition ಇಟ್ಕೊಂಡಿದ್ದೇನೆ; ಸಂಸ್ಕೃತ; ಐದು ರೂಪಾಯಿ. ಹದಿಮೂರು ! ಎರಡು ರೂಪಾಯಿ promotion incrementಗೆ application ಹಾಕಧೇನೆ committeeಗೆ... ಆತ committee ಮೆಂಬರು ಪ್ರಾಮುಖ್ಯ ಮೆಂಬರು...ನನ್ನ ಅನಿವಾರ್ಯಗಳ್ನ ಸನ್ನಿಧಾನ...ಮನಸ್ಸಿಗೆ ಇಂಗಿತ ಮಾಡ್ಕೊಂಡು... ಈಗ ಆತನ್ನ...ಈ paper ವಿಷಯದಲ್ಲಿ ಪ್ರಶ್ನಿಸಿದ್ನೋ...?

ಸುಬ್ಬು : It's all right, ಶಾಸ್ತ್ರಿ ! We will manage him.

ಹಿರಿಯಣ್ಣಯ್ಯ : I doubt it.

[Enter ಪಿಲ್ಲೂರಾವ್. ಶಾಸ್ತ್ರಿ abjectly approaches him and whispers]

ಶಾಸ್ತ್ರಿ : ಸ್ವಾಮಿ, ...ದೊಡ್ಡಸಾಹೇಬ್ರು, ಚಿಕ್ಕಸಾಹೇಬ್ರು, engineer ಸಾಹೇಬ್ರು, doctor ಸಾಹೇಬ್ರು ಒಟ್ನಲ್ಲಿ ಸಾಹೇಬ್ರುಗಳ್ಗೆಲ್ಲಾ ಈ ಹೊತ್ತೇ ತಾವು ಒಯ್ದು Mail paper ಮೇಲೆ ವ್ಯಾಮೋಹ ಹುಟ್ಟಿದೆ. ದಯುಮಾಡ್ಬು ನನ್ನವಸ್ಥೆ ಮರೀದೆ...ಅವ್ರು ಅವಸ್ಥೇನ... ಹೇಗಾದ್ರೂ ಸ್ವಾಮಿ, ತಮಗೇನು ಬುದ್ಧಿ ಕಡಿಮೆಯೇ...ಸಾಹೇಬ್ರು ನೀವಾಗಬೇಕಾಗಿತ್ತು ! ಆಗದ್ದು ನನ್ನ ಪಾಪ ! ಆದ್ರೂ ನಿಮ್ಮ High School ಹುಡುಗ್ರು ಪುಣ್ಯ ! ದೊಡ್ಡ ಸಾಹೇಬ್ರಿಂದ D. S. P. ಸಾಹೇಬ್ರುವರೆಗೂ ಹೊಂಚು ಕಾದಿದೆ—ಈ ಕೇವಲ English Mail paper ನೆವ ಇಟ್ಕೊಂಡು ತಮ್ಮನ್ನ ಮುತ್ತಿ ಮುಳುಗಿಸೋಕೆ.

ಪಿಲ್ಲೂರಾವ್ : (In a loud whisper) ಶಾಸ್ತ್ರಿ ನಿನ್ನ two rupees increment ಬಾತ್ರಿ, ಎಂಟು ಘಂಟೆಗೆಲ್ಲಾ ಹೊರಟು ಹೋಗ್ತೇವಲ್ಲ ! ಒಂದು petromaxಗೆ ಒಂದೊಂದು ರಾತ್ರಿಗೆ ಒಂದೊಂದು bottle kerosene oil ಖರ್ಚು ಇರಬಹುದು. ಆದ್ರೆ ನಮ್ಮನೇಲಿ...ಯಪ್ಪತ್ತೈದು ರೂಪಾಯಿ ಸಂಬ್ಳ...ಹತ್ತು ರೂಪಾಯಿ allowanceಉ... ದೀಪ...?

ಶಾಸ್ತ್ರಿ : ಅದು ಚಿಲ್ರೆ ಬಾಬ್ತು. ಆ ವಿಷಯದಲ್ಲಿ ನಾಳೆಯಿಂದ !...ಎಲ್ಲಾ ತಿಳಿದ ನೀವು ಮುಂದಕ್ಕೆ ಅರ್ಥಮಾಡಿಕೊಳ್ಳಿ !...ಏರ್ಪಾಡು ಆಗುತ್ತೆ !!...

ಪಿಲ್ಲೂರಾವ್ : Thank you. Sastry ! (Loudly) Mail paper ಕೇಳ್ತೀಯಾ ಶಾಸ್ತ್ರಿ ? Let me explain : ದೊಡ್ಡ ಮನುಷ್ಯ ಒಬ್ಬ jailಗೆ ಹೋಗ್ತಾನೆ, for what he thinks is the Country's cause. ನಾನ್ನೋಡ್ದೆ ! ಮಿಕ್ಕ prisoners ಜೊತೇಗೆ ಇವ್ರು jailಗೆ ಹೋಗೋ procession ನಲ್ಲಿ........ "left-right, left-right"....... ಶಂಕರಾಭರಣ. ಒಂದು English note ಹಾಗೆ.

ಸಗ್ಗಾ, ಸಗ್ಗಾ, ಸಗ್ಗಾ, ಮಗರಿಸ ।
ನಿರ್ರೀ, ನಿರ್ರೀ, ನಿರ್ರೀ, ಗರಿಸನಿ ।
ಸಗ್ಗಾ, ಸಗ್ಗಾ, ಸರಿಗಮಪಾ ।
ಧಪಮಗ ಪಮಗರಿ, ಸಸ್ಸಸ್ಸಾ !,

ಅಂತಾ ದೊಡ್ಡಿಡೋಣಾಂತ ನೋಡ್ದೆ. ಅವನ ದೊಡ್ಡ ಮನುಷ್ಯಕೇಗೆ ಸರಿಯಾಗಿ ! But then Sastry. ಎಷ್ಟು ದೊಡ್ಡ ಮನುಷ್ಯನಾದ್ರೂ JAILಗೆ ಹೋಗ್ತಾನೆ. Therefore dignityಊ ಇಟ್ಕೋ ......ಕೇದಾರ etc. hopelessoo ! Jailoo !...ನೀಲಾಂಬರಿ ಮಯೂರಿ ಅದೂ ಆಗ್ದು. Therefore dignity plus depression ಎರಡೂ ಇರೋವಾಗ ಮುಖೇರಿ ಮಾಂಜಿರಿ ಈಗ ಯಾವ್ದಾದರೂ ರಾಗ ಜುನಾಯಿಸ್ಕೊಂಡು ಓದಿಬಿಟ್ಟು ನಾಳೆ ತಿರುಗಿ ತೊಗೊಂಡು ಬರೋಣಾಂತ Mail paperನ ಮನೇಲೇ ಬಿಟ್ಟಿಟ್ಬಂದೆ.

ವೆಂಕಟೇಶ
ಸಂಪತ್
ಬದರಿ
ಸುಬ್ಬಣ್ಣ
(Suddenly shooting up in one indignant voice)

ಎಲ್ರೀ ಇದೂ. Head masterರ್ರೆ !—ನಮಗೆ head ಏ ನೀವ್. ನಮ್ಗ master ಏ ? Public Reading roomಉ !...private subscriptionsಉ...paper ಫೋಗಕ್ಕೆ ತಗೊಂಡ್ರಾ ಇಲ್ಲಾ ಭೋಗ್ಯಕ್ಕೋ ?......ನಿಮ್ಮು ಖಾಲೀಗೂ. Mail paperಗೂ ಎಲ್ಲಿ ಸಂಬಂಧ ?......ನೀಲಾಂಬರಿ ಎಲ್ಲಿ News paper ಎಲ್ಲಿ ?......are you mad...or are we all mad ! ?

ಹಿರಿಯಣ್ಣಯ್ಯ : Don't include me gentlemen. in your intriguing Mise-en-Scene !

ಪಿಲ್ಲೂರಾವ್ : Forgive me sir ! ತಮ್ಮ uprightness. probity. rectitudeಊ, Veracity. Willingnessಉ world knownಊ. ತಾವು meticulously, succinctly. punctiliously striving to uphold the motto of our beloved sovereignಊ needless to remind gazetted officersಉ "ಸತ್ಯಮೇವೋದ್ಧರಾಮ್ಯಹಂ"................Humble ನನ್ನ motto—"Get what you getಉ and while you get itಊ. make the most of itಊ !" But "ಅಹಿಂಸಾ ಪರಮೋ ಧರ್ಮಃ"; which is the same as ಸತ್ಯಾನ್ನ ಪರೋ ಧರ್ಮಃ : ಒಂದೊಂದು ಸಾರಿ difficult to reconcileಉ. ಸುಳ್ಳು ಹೇಳ್ಬಾರ್ದು. ಹಿಂಸೇನು ಮಾಡ್ಬಾರ್ದು. ನಮ್ಮ High School ಸಂಸ್ಕೃತ ಪಂಡಿತ್. ಹುಡುಗರಿಗೆ ಹೇಳುತ್ತಿದ್ದಾಗ. ಕೊನೇಲಿ ನಾನು ಈ English burdened ಭಾರತದ ಒಂದು lineಉ ಪೋಣಿಸ್ದೆ ! ಆತ ಹೇಳ್ಕೊಡ್ತಿದ್ದದ್ದು :—

"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್
ನಬ್ರೂಯಾತ್ ಸತ್ಯಮಪ್ರಿಯಂ
ಪ್ರಿಯ್ಯಂಚ ನಾಽನೃತಂ ಬ್ರೂಯಾತ್ ಅಂತ.

ನಂದು Or'ware o' th' world's opprobrium!

But coming down to practical factsಉ gentlemen. officers but fellow members of up-to-date or out-of-date in subscriptionsಉ. I ask you a question ! Subscription ಕೊಟ್ಟು ಓದುತ್ತಿರೋ papersಉ. magazinesಉ ! : ಮನಸ್ಸಿನಲ್ಲಿ memoryಲಿ ನಿಲ್ಲಬೇಕಾದ್ರೆ. music ಇದ್ದ

ಹೇಗೆ manage ಮಾಡ್ತೀರಾ ? ಗಮಕಿಗಳು ಸಂಗೀತವಿಲ್ದೆ ಮಹಾಭಾರತ ಬೊಗಳ್ಲಿ ನೋಡೋಣಾ ! ಕಂತೆ ಇಲ್ದೆ,...ಪುರಾಣಗಳ್ನ ಓದ್ಲಿ ! ಆಗೋದಿಲ್ಲ gentlemen ! Music ....ಇದ್ರೆ memorize ಆಗುತ್ತೆ ! ಅದುರ music ಇಲ್ದೆ memorize ಹೇಗೆ ಸಾರ್ ಆಗುತ್ತೆ ? metreಉ ಛಂದಸ್ಸು etc.,......? ನೋಡಿ...!

ಲೊ ಟಾ ಟಾ ಲೋ ಟ ಟಾ ಟಾ ಟ !
ಲ ಂ ಟ ಟಾ ಲ ಟ ಟಾ ಟ ಟಾ !

ಇದು boysಉ boyhood ನಲ್ಲಿ ಬಡಕೊಂಡ್ರೆ...ಎಂಭತ್ತು ವಯಸ್ಸಾದ್ರೂ, death-bedನಲ್ಲಿ din......ಆಗ್ತಿರುತ್ತೆ......ಲಂಟಟಾ ಲಂಟಟಾ ಟಾಟ ! ಲಂಟಟಾ ಲಟಟಾ ಟಟಾ ! ಅಂತ.

Paper ನಲ್ಲಿ ಬಂದ್ದಾಬ್ಬುಗಳ್ನೆಲ್ಲಾ ಓದೋದು ಜ್ಞಾಪಕ ಇಟ್ಕೋಬೇಕು ಅಂದ್ರೆ musicವೇ first and last resourceಉ. Artoo develop'doo; up-to-date politicsoo, Social lifeಊ. ಸರ್ವನೂ kept in touchoo ! I shall give you a practical demonstrationಉ because, I teachಉ just what I practiseoo, meaning. I practiseoo just what I preachoo ! ಶಾಸ್ತ್ರಿ ! ಹಳೇ paper ಯಾವುದಾದ್ರೂ ತೆಗಿ !!

[Sastry hands over an old news paper]

ಪಿಲ್ಲೂರಾವ್ : Old paperoo, and of last waroo, delusion of old peaceoo, resultoo—deluge of present waroo...... ; (ಪೇಪರಿನಿಂದ ಓದುತ್ತ)

[Newspaper :—A poor unknown warrior dying in far away France shedding his blood for his king and his country was buried in Westminister Abbey.......................................A

His Most Gracious Majesty the king Emperor with Her most Gracious Majesty the Queen Empress with His Royal Highness the Prince of Wales, were the chief mourners............B

The British army was **there**. Ths Fusiliers were **there**. The Gold stream guards were **there**, The house guards were **there**...... Indian Army...the black guards were **there**..........................C

Declaration of peaceoo... ! We, delegates and representatives of all nations in meeting assembled declare **Universal** Peace...... the basis of all religionsಊ ....universal Loveಊ.......... ಲಾವ್ವೂ................ಲವ್ವೂ..D

[ಮೊದಲು ಸಾಧಾರಣವಾಗಿ ಮೇಲ್ಕಂಡ A.B.C.D. ಭಾಗಗಳನ್ನು ಓದುವನು.]

ಪಿಲ್ಲೂರಾವ್ : ಈಗೇನ್ ಅರ್ಥವಾದ್ದಾಗಾಯ್ತು......ಎಷ್ಟೊತ್ತಿರುತ್ತೆ ತಲೇಲಿ ? ತಿರುಗಿ ಬನ್ನಿ. ಸಂಗೀತ ಹಾಕಿ sing ಮಾಡ್ತೇನೆ !! [ಮೇಲ್ಕಂಡ Aನ್ನು ನೀಲಾಂಬರಿಯಲ್ಲೂ, Bನ್ನು

ಕೇದಾರದಲ್ಲೂ, Cನ್ನು ಆಠಾಣದಲ್ಲೂ, Dನ್ನು ಸುರುಟಿಯಲ್ಲೂ ಪಾಡುತ್ತಾ ಕೊನೆಯು ಬಪ್ಪ್ಪಾ ಲವ್ವೂ...ಎಂಬ ಪದಾರ್ಥದ ಆವೇಶದಲ್ಲಿ club ನಲ್ಲೆಲ್ಲಾ ಕುಳ್ಳನಾದ member ನ ತಬ್ಬಿಗಿಸಿ ಆತನ ಫಾಲಪಟ್ಟವನ್ನು ಚುಂಬಿಸುವನು.]

ಕುಳ್ಳ : ಏನ್ರೀ ಇದು ! Member Member ನ ಮುತ್ತಿಡೋದೂ !?

ಪಿಲ್ಲೂರಾವ್ : ಕ್ಷಮ್ಸಿ ! ರಸ !...ಯmotionsoo !

ಒಬ್ಬ ಮೆಂಬರು : ಏನ್ರಸ್ವೊ !...ಎರಡು ಕೊಡ ಎಂಜಲು !...ಸಾರ್...(to Hiriyanniah) ಏನ್ಸಾರ್ ನೀವೂ ಸುಮ್ನಿದ್ದೀರ ! I will appeal to the committee !

[Hiriyanniah exits with handkerchief stuffed in his mouth, by door R. Pillu Rao approaching door L, confronts Sastry and speaks Sotto-Voce.]

ಪಿಲ್ಲೂರಾವ್ : ಶಾಸ್ತ್ರಿ ! ನಿನಗೆ ಸಂಸ್ಕೃತ ಗೊತ್ತು ! ಇನ್ನು ಐದು ನಿಮಿಷ ಕೂಡಾ ಇಲ್ಲಾ ...ಹತ್ತು ನಿಮಿಷ...perhaps ಅರ್ಧ ಘಂಟೆ petromax ಉರಿದೀತು. ಜಾತಾ ಜಾಕೆ...... ಸಿಲ್ಕು......ಸೀಮೆಯೆಣ್ಣೆ.

ಮಯಾಪ್ಯರ್ಧಂ । ತ್ವಯಾಪ್ಯರ್ಧಂ
ಮಾವಿಘ್ನಂ । ಕುರುಶಾಸ್ತ್ರರೀ ।।

ಅರ್ಥ್ವೇ ?

ಶಾಸ್ತ್ರಿ : ಏನ್ಸಾರ್ ನೀವು ನೀವೇಯೇ ? ತಾವು ಈ ಊರ್ಗೆ ಬಂದ ತಕ್ಷಣದಿಂದ ತಹಲ್ ವರೆಗೂ ನಮ್ಮ ನಮ್ಮಲ್ಲಿ....ತಮ್ಮ ನನ್ನಲ್ಲಿ...ಪರಸ್ಪರ ಪ್ರಕೃತಿ ಲಾಭಾರ್ಥದ ಅನುಕೂಲಾನ ಅರಿತ ನನ್ನ, "ಅರ್ಥವೇ ? ಶಾಸ್ತ್ರೀ !" ಅಂತೀರಲ್ಲಾ ! ಆಶ್ಚರ್ಯ ! ಸೀಮೆಯೆಣ್ಣೆ ಸಲ್ಲಿಸ್ತೀನಿ ! ನನ್ನ ಎರಡು ರೂಪಾಯಿ increment applicationಉ!.........ಬಿಟ್ಟಿಲ್ಲಿ.........committee meetingoo...ನಾಳೆ !...ನಾಲ್ಕುವರೆ ಘಂಟೆಗೆ ! ನಮ್ಮ ಅಪ್ಪ ಅಮ್ಮ...ಮುದಿ ಗೊಡ್ಡುಗಳು ...ನನ್ನ ಮಕ್ಳು...ಇವರೆಲ್ರ ಜೀವಗ್ಳು ತಮ್ಮ ಕೈಲಿದೆ ಮರೀಬೇಡಿ...ನಾನೂ ಮರೆಯೋದಿಲ್ಲ... ಸೀಮೆಯೆಣ್ಣೆ ಸಲ್ಲಿಸೋದ್ನ...ನಾಳೆ ಪ್ರಭಾತಕ್ಕೆ ಮುಂಚೆ......ದೊಡ್ಡ ಮನುಷ್ಯನೋ !...... ಚಿಕ್ಕ ಮನುಷ್ನ್ಯೋ !......ಜೈಲೋ ಬಂಗ್ಲೇನೋ ! ಮೇಲ್ paperನ್ನ ಕಳಿಸ್ಬಿಡಿ. ದಮ್ಮಯ್ಯಾ !

ಪಿಲ್ಲೂರಾವ್ : ಕಳಿಸೊದೇನು ! ಜಿಡೋದೇನು ? ಶಾಸ್ತ್ರೀ ! ನನ್ನ ದಬಾಯಿಸ್ದ ಈ ದೊಡ್ಡ ಮನುಷ್ಯರನ್ನ double ದಬಾಯಿಸಿದ್ನೇ ಹೊರ್ತು...ನಿನ್ನ ಬಿಟ್ಕೊಟ್ಟೇನೇ ಶಾಸ್ತ್ರೀ ? (ಕಿಸೆಯಿಂದ Mail paperನ್ನ ಹೊರ ಹಾಕಿ ಶಾಸ್ತ್ರಿ ಕೈಯಲ್ಲಿಟ್ಟು) ಶಾಸ್ತ್ರೀ ಇದು ಅನ್ಯೋನ್ಯ.... ...ಅರ್ಥವೇ ?

ಶಾಸ್ತ್ರಿ : ಸಾರ್ ! ಅನ್ಯಾಯ ಸಾರ್ ! ಅನ್ಯಾಯ ಬುದ್ಧಿ ತಮ್ಮದು !!

[Exit Pillu Rao]

ಬದರಿ : Do you see doctor ? ನಾವುಗ್ಳೆಲ್ಲಾ ಇಷ್ಟರ ಮಟ್ಟಿಗೆ ಕೃಷ್ಟಿ. one for all; all for one...ಹೀಗೆ organise ಮಾಡಿ...presidentಉ. committee, membersoo ಹೀಗೆಲ್ಲಾ arrange ಮಾಡಿದ್ರೆ...Strand Magazine kept back because ಮನೇ ಹಾರ್ಮೋನಿಯಮ್ ಮುರುಕ್ಲು. Mail paper not available for members...because correct ರಾಗ ತೋಚಲಿಲ್ಲಾ ! ಹೀಗೆಲ್ಲಾ ಈ ಪಿಲ್ಲೂರಾಯ ನಮ್ಮ

Multipolitan club ಪ್ರಂಗೀ ಬಾರ್ಲ್ನೀ ಹಾವಾಡಿಗ ಹಾವನ್ನ ಫಿರಾಯ್ಸ್ನೀ ಹಾಗೆ... ನಮ್ಮನ್ನೆಲ್ಲಾ...ಫಿರಾಯ್ಸೋಕೆ...!,...ಆ !

ವೆಂಕಟೇಶ್ : Why not get him transferred I say?

ಸುಬ್ಬಣ್ಣ : ಪ್ರಯೋಜನ್ವೇನು ! ......some other districtoo ! ಅಲ್ಲಾನೇ ಏನೂ ..some other cluboo...and some other membersoo...same victimisation as us...ಒಟ್ನಲ್ಲಿ we are all martyrs to Pilludom !!

ವೆಂಕಟೇಶ್ : ಹೌದೂ,...ಪಿಲ್ಲೂ...public pestoo...! But so is plagueoo...! Let us forget him !...ನೆನ್ನೆ press telegramsoo...oh ! here is Sastry.

ಶಾಸ್ತ್ರಿ : (ಮಡಿಸಿದ Mail paper ನ್ನು ವಿಸ್ತರಿಸಿ ಮೇಜಿನ ಮೇಲಿಟ್ಟು)...ಕ್ಷಮ್ಸಿ ! Sirs ! ಬಂದ್ಬಿಟ್ತು Mail paperoo !

[Herein enter Aswatha & Ranganna]

ರಂಗಣ್ಣ : Come straight in, dear boy...(ಮೇಜಿನ ಸುತ್ತಲೂ ಕುಳಿತು ಕೊಂಡಿರುವ ಆರು memberಉಗಳಿಗೆ ಒಟ್ಟಾಗಿ introduce ಮಾಡುತ್ತಾ)

My friend Aswath you know, gentlemen !
My friends you know, Aswath !

[The sextette at the table arise and bow to Aswath's bowing, and resume their absorption in the papers.]

ರಂಗಣ್ಣ : **Come on dear boy**...[leads him to a teapoy with chairs around. The two seat themselves.]

ರಂಗಣ್ಣ : ಶಾಸ್ತ್ರೀ...............(Sastry comes up with a 'Sir?') ಏನ್ tiffin ಊ?

ಶಾಸ್ತ್ರಿ : ಇಷ್ಹೊತ್ತಿಗೇ ? ಏಳೂವರೆ ಆಗ್ತಾ ಬಂತು ! ಆದರೆ ಮಹಾಸ್ವಾಮಿ ತರ್ಸೇ ಬಿಡ್ತೀನೆ ತಡ ಇಲ್ದೆ...ಬುಳ್ಳು ಭವನ್ ಇದೆ ಪಕ್ದಲ್ಲೇ ! coffee...tea...ಇಲ್ಲಾ... crushಗಳೋ ? !

ಅಶ್ವತ್ಥ : ಇದೇನ್ರಂಗೂ ! ನಿಮ್ಮ್ಕಟವನ್ನಲ್ಲಿ ದಿನಾದಿನಾ ದುಡ್ದು ಕಸಬ್ನ ಮರ್ಯೋಕೆ ನಿಮ್ಮ ಬ್ಲಿ brainಗೆ restoo, recreationoo ಅಂಬೋದ್ನ demonstrate ಮಾಡೋಕೆ ಕಲ್ಕೊಂಡ್ಬಂದ್ನಸ್ಗೆ....tiffin ಏನೂ ? tea ಏನೂ ಇಷ್ಹೊತ್ಗೆ ! ?

ರಂಗಣ್ಣ : All right Aswath (to Sastry) two crushesoo orangeoo...!

[Sastry brings two glasses and two aerated "crushes" and an "opener", opens the bottles and empties them into the glasses and departs.]

ಬದರಿ : ಇಂಗ್ಬಾರ್ ಸಂಪತ್ತೂ ! concrete test ಪಣ್ಣೋದೂ ನಾನೆ. ಇನ್ supervising ಏ ಏಣ್ಣೆ overseerಉ. ಕಣ್ರೆಪ್ಪೆ ಮುಚ್ಚಾದೆ ರಾತ್ರಿ ಪಗಲು ಕುಕ್ರಿಚ್ಕೊಂಡು

ಇನ್ನಾನು breach ಆದ bridge ಮೇಲೆ. ಇತ್ಲ precautionsಊ ಮಂಗ್ಮಾದು ಮಟ್ಟಿದ್ದೂ ಅಲ್ಲಾದೆ ಎಂಗಲ್ಲೆ department departmentಕೇ ಗೂಟ್ಮಾದು ಮಟ್ಟಿಕ್ರುದೇ ಇಂದ contractor ಬಿಡ್ಡಿದ್ಯದೂ ! ಇಪ್ಪೊ ಎಣ್ಣೆ position ಏನ್ನಾ.....before portfolio ministeroo !

ಸಂಪತ್ : ಬದ್ರೀ, ಉಂಡೇ affairs ಓ public affairsoo; ಪಾತಾಯ್ ಪೋಗಟ್ಟುoom !! ಎಂಡೆ private affairs ಕೇಳು ಬದ್ರೀ ? Best of materials ತರ್ಸಿಟ್ಟೊಂಡು....beautiful mansion ಕಟ್ಟೊಂಡೇ ಮಲ್ಲೀಸ್ವರತ್ಲೇ ! ಎನ್ನom ಪಾಳೆ ಪೊನ್ನೂರ್ ಪಕ್ಕುom...ಕಳಸಾ...ಅನ್ನಕ್ಕು, ತೆರಂಜಿಕ್ರದೆ ಉಸ್ಕು ಮಾಲೆನಾಡು mosquito curtain ಸಮೇತಂ ಪೋಯಿಕ್ರಪ್ಪೋ....ಮನೇ ಪಾಡಿಕ್‌ಗೇ ಕುಡ್ಮಾಕಾಲೇ...ಎಂಡೇ ಬಡ್ಡೀ tenantsಉ...ಮುಂದಿನ್ drawing room ಕೋಣೆ ಗೋಡೇಲೆ......ಗೂಟಂಗ್ಳು......ಗಜ ಗಜುದ್ದೂom ಗೂಟಂಗ್ಳು, ಬಡಿಚ್ಚೊಂಡು ಪಗ್ಗಂಗಳ್ ಕಟ್ಟೊಂಡು......ಪಟ್ಟೆ ಪಾವಾಡೆ ಒಣತ್ತೊಂಡು ! ಇರ್ಕಟ್ಟು !! ಎಂಡೇ special glazed sunlight terrace ಇಕ್ರದೇ. ಮೂರ್ನೇ ಮಹಡಿ...ಅದ್ಮೇಲೆ ಹಪ್ಪಂಗೋಳ್ ಹಚ್ಚಿಂದೂom ಹಚ್ಚಿಂದೇ.........ಸಂಡ್ಗೇಗಳ್ ಒಣ್ತೀಂದೂom ಒಣತಿನ್ದೇ ! ಇಸಮಾದ್ರಿ ಮಣ್ಣಾಲಾಚ್ಚೊ ಎಂಡೇ mansionಉ ?.........

ಇನ್ನೂ ಎಂಡೇ garden ಪಟ್ಣಗೋಳ್ ಕೇಳು. ಮಾಂಗಾಮರೂom ಇಕ್ರದೇ ಕಪಿ ! ಎಂಡೇ ಬಂಗ್ಲೇಲ್ ಇಕ್ರ ಮಾಂಗಾ ಮರೂಂ...ಗಂಗಾಪಾಣಿ ತೇಂಗಾ ಮರೂಂ...ಮಗ್ಲೇ ಇಕ್ರದು ಮಾಂಗಾ ಮರುom...ಕಸೀ ಮಾಂಗಾ ಮರೂಂ. Mysore Stateಲೇ ಇಲ್ಲಾದ ಅದ್ಭುತ ಮಾಂಗಾ ಮರುಂ......ಈ ಮರೊom ಕಾಯ್ಚಿಟ್ಟಿರಂದಾಲೆ ಎಂಡೇ ಬಡ್ಡೀ tenants ಹೈಕ್ಳೂ ಅಂದ್ಮರೂಪ್ ಪತ್ತಿಂದೂ ಹತ್ತಿಂದೇ ಹಾರಿಂದೂ ಹಾರಿಂದೇ ! ಕೊಂಬೆ ಕೊಂಬೇ ಮುರಿಂಜ್ಪೋನಾಲೂom ಎಗ್ರಿಂದೂom ಎಗ್ರಿಂದೇ ! ಇನ್ನೂ, ಖಾರ್ಪುಡಿ ಪೊಟ್ಟೊಂಡು. ಕಾಯೀ. ಹಣ್ಣೂಂ ಹೀಚ್ ಸಮೇತ ಬಾಕಿ ಇಲ್ಲಾದೆ ಸರ್ವಮೂ. ಗದಕಿಂದೂ ಗದಕಿಂದೇ !!

o o o

ವೆಂಕಟೇಶ್ : ಏನ್ Subboo ? ನಾನು D.M.O.. ಆದ್ದು...only through circumstancesಊ...happy marriageಊ....father-in-laws money...ಇವೆಲ್ಲಾ, saw me through. ಅಲ್ಲದೆ ನೀನು anatomy, physiology, histology ನನಗೆ coach ಮಾಡಿದೆ !,....because and only because ನಿನ್ನ father-in-law...did not see YOU through !......never mind ಈಗ ನನ್ನ position ನೋಡೋ....!!

ಸುಬ್ಬಣ್ಣ : What is it ?...go ahead !, fire away !

ವೆಂಕಟೇಶ್ : ನೋಡು Subboo ! Patientಉ wrestlerಉ !, beautiful body but ಗಾಂಜಾ addict ಉ ! ನಾನು ಸೊರಬದಲ್ಲಿ Assistant Surgeon ಆಗಿದ್ದಾಗ ಬಂದ patientಉ ! Right leg at knee, gangrene ! ಮಾಡೋದೇನೂ ?, ನಿನಗೂ ಗೊತ್ತು ನನಗೂ ಗೊತ್ತು !. amputation ! ಕುಸ್ತೀ career out off ! warn ಮಾಡ್ದೆ "ಗಾಂಜಾಬಿಡೂ ! ಬದಕ್ತೀಯಾ !, ಇಲ್ಲಾ limb limboo ಹೋಗ್ಬಾಯಿರುತ್ತೇ"ತ. Again ನೋಡೋ, at Tumkur ತಿರ್ಗೂ ಬಂದಿದಾನೆ !! Same ಗಾಂಜಾ. same gangrene but left legoo; same amputationಉ at left knee !! ಆಯ್ತೀ ! When I was in Nanjangud,— ಅತ್ಕಡೆ peopleoo horribly uneducatedoo !— ಅತ್ಕಡೆ ಇತ್ಕಡೆ cholera ಇತ್ತು. sporadicಉ !. But importedಉ But then

the local illiterate foolsಉ who suffered from diarrhoea, mistook it for cholera and voluntarily died !! A clean case of mass-follows-de-so ! ನನಗೋ ಸತ್ತ ತೋಪ್ನೆ post-mortem ಗಲಾಟೆ ಏತನ್ಮಧ್ಯೆ the same ಗಾಂಜಾ gangrene patientಉ ಒಂದು wheel-barrow ಮೇಲೆ push ಮಾಡಿಸ್ಕೊಂತಾ ಬಂದ. with both arms gangrene troubled ! As per usual amputation !! This was two years ago ! ಈಗ್ನೋಡು Subboo, ಈವತ್ತುಬಂದಿದ್ದಾನೆ the same old patientಉ, legless and armlessoo, but with gangrene on the trachea working into the aesophagus !,......of course ನನ್ನ duty amputation of headoo ! But medical jurisprudence ! Gribble & Hiheir ಎಲ್ಲಾ ತಿರ್ಗಿತಿರ್ಗಿ ಓದ್ದೆ....Subboo ! to save him from gangrene. Neck amputation ಮಾಡಿದ್ರೆ legal troubleಉ, ಏನಾದ್ರೂ ಉಂಟೇ ಇಲ್ವೇ ? Public D. M. O. ನಾನು ! Thirty years serviceoo !, pension, provident fund plus insurance impending ಇನ್ನು one yearನಲ್ಲಿ ......ಏತನ್ಮಧ್ಯೆ ಇದು, my operation of gangrene at the throatoo !, riskಉ patient ದು and ampution of the headoo certain deathoo so far as science knows-and yet death is deathoo ! Clear duty ಒಂದ್ಕಡೆ !, certain death ಅತ್ಕಡೆ ! ಈಗ ನಾನು D. C. ನ consult ಮಾಡ್ಲೋದೇ, D. S. P. ನ್ನೇ, ಇಲ್ಲಾ...public prosecutorನ್ನೇ ? ಇಲ್ಲಾ patientನೇ discharge ಮಾಡಿ. chief surgeon ರೇಗಿ, dissmiss ಮಾಡಿಸ್ಕೊಳ್ಳೋದೇ ? and myself, family ನಡ್ಬೀದೀಲೇ ? !! advise me dear boy !

ಸುಬ್ಬಣ್ಣ : ನಿನ್ನ predicamentoo peculiaroo .... Prospectsಓ ನಿನ್ನ problem ನೋಡ್ದ್ರೆ precariousoo. My best adviceoo is for you to take a trip to Bullappa ನ ಹಳ್ಳಿ. Three cases of ptomaine poisoningoo. Twentytwo into two, forty four milesಉ plus three day's haltage. T. A. ನೂ ಆಯ್ತು. ತಿರುಗಿ ಬರೋಷ್ಟ್ರಲ್ಲಿ gangrene patientಏ ಗೋತಾ !!! What do you think......good idea ಅಲ್ಲವೇ ?

ವೆಂಕಟೇಶ್ : Dear boy ! ಬದಕ್ದೆ ನಾನು ! Thanks to you ! But then let me congratulate you......ನಾನು M. B. B. S. ಉ...Mysore double Bahadur serviceಉ...ನಾನಾದ್ರೂ......ನನ್ಗತಿ ಹೀಗೆ. ನೀನೋ a common or garden L. M. P. ಅಂತ ನಾನ್ ತಿಳ್ಕೊಂಡಿದ್ದೆ—"Licensed to Murder Promiscuously" ಅಂತ ! But I hear you are miniting money !...more than I the D.M.O. !!

ಸುಬ್ಬಣ್ಣ : ಶ್... ! ಹುಷಾರೋ ! ಚೆಪ್ಪ ! Incometax officerಊ ಅತ ! ಆತನ್ ಕಿವಿಗೇನಾದ್ರೂ ಬಿದ್ರೋ ಬೀಳುತ್ತೆ ಬುರುಡೇಗೆ !

ವೆಂಕಟೇಶ್ : Ohh !...I......understand !...

o o o

ಶೇಷು : But, ಅಹೋಬ್ಬ ! Circumstancesಉ alter casesಉ ! So also circumstantial evidenceಉ !!

ಅಹೋಬ್ಳ : ಇರೋವುದು ಶೇಷು! But then ನಮ್ಮ professionನಲ್ಲಿ ಮುಖ್ಯ ಚೀಜ! circumstantialitiesಉ in point of evidenceಉ...not only alter criminal casesಉ!. But also...alter ಆಗೋಗಲಾಟೇಲಿ, client ಕುತ್ತಿಗೆಗೇ halterನೂ ಸಿಕ್ಸುತ್ತೆ! Therefore...you never....know where your client is. But as a lawyer take care to know where you are!...I mean fees firstoo...became ನಮ್ಮ law. is the only profession in worldಉ wherein the professional may not sue his client for services rendered!! Therefore ಸೀಸಾಯ್ತು ನಿನ್ನ ಫೀಸಾಯ್ತು, ಆಮೇಲೇನೇ...client ಆಯ್ತು ಅವನ Judge ಆಯ್ತು!......ಕೇಳು ನನ್ನ principleoo: principal firstoo! principle lastoo!!

ಶೇಷು : By the bye ಅಹೋಬ್ಳ.... open and shut caseಉ...so far as prosecuting evidence shows......Prima facie Witnessoo!, ಮಾಲು ಕದ್ಕೊಂಡ್ಹೋದ್ದು record ಆಗಿದೆ. Still...ಅದ್ಹ್ಯಾಗೆ ನಿನ್ನ client acquit ಮಾಡ್ಸ್ಕೊಂಡೆ? wonderful brainoo ನಿಂದು! ಅಷ್ಟು grey matter ನಿನ್ನ್ಕ್ರೇನಿಯಂನಲ್ಲಿ!

ಅಶ್ವತ್ಥ : ನನ್ cranium grey matter ಅಲ್ಲ......... that stood me in good stead. Magistrate craniumನಲ್ಲಿ ತುಂಬ್ಕೊಂಡಿದ್ದ adi-pose matteroo empty fatಉ!, ಬರೀಕೊಬ್ಬು!, ಕುಚೋದ್ಯ!, ಕಿಲಾಡಿತನ! ಅದ್ನ advantage ತೊಗೊಂಡೆ ನಾನು! ಬದಕ್ದೆ! ಬದಕಸ್ದೆ ಕಕ್ಷಿಗಾರನ್ನ! ಕಳ್ಳ of course!...But then law is law despite justice being justiceoo. Details ಕೇಳು! ಮುಟ್ಟಿಟ್ಟಿದ್ಹಾಗೆ! ಮನೇಲಿ ಅಮ್ಮಾವ್ರು; ಯಜಮಾನ್ರಾಫೀಸ್ಲಿ: ಮಕ್ಳುಸ್ಕೂಲ್ಲಿ: ಜವಾನ ಹೋಗಿದಾನೆ ಊಟಕ್ಕೆ: ಬಾಗಿಲು ತೆಗೆದಿದೆ; Situationನ...... many many previous studies ನಿಂದ study ಮಾಡ್ಕೊಂಡಿದ್ದ ನನ್ನ್ಕ್ಲೈಂಟು...also a professional in his line. which is all breadth and no lengthಉ...cool ಆಗಿ went in!, quite ಆಗಿ drawing room table ಮೇಲೇ ಇಟ್ಟಿದ್ದ ಕಾಸಿನ ಸರಾನ ಬಲಗೈ "ತೋರ್ಬೆಟ್ಟಿಗೆ" ತಗ್ಲಿಸ್ಕೊಂಡ... ತೆಪ್ಗೆ ಹೊರಕ್ಬಂದ!, gateooದಾಟ್ದ......public roadoo ತಳ್ದ: ಹೊರಗಿಲ್ಕೋ ಸಂಚರಿಸ್ತಿದ್ದ ಅವರ್ಮನೆ bull dogoo ಬಂದು ಒಂದೇ ಧುಮ್ಕು....attached itself to my client's calfoo ಪಕ್ಕದ್ಮಂಗ್ಲೆ ಆಕೆ with her servants ಹೊರಕ್ಬಂದು scene ನೋಡಿದ್ರಾರೆ. ಕಾಲನ್ನ ಕಚ್ಕೊಂಡಿದೆ bull dogoo ಬಲಗೈ ತೋರ್ಬೆಟ್ಟಲ್ಲ್ಯಾಗ್ಲೂ ಸರ ತೂಗಾಡ್ತಿದೆ! An open and shut case...... prosecutionಗೆ!; client ಓ advance ನಾನೂರು ರೂಪಾಯಿ ನಗದು ನನ್ಕೈಲಿಟ್ಟು acquit ಆದ್ರೆ 600 ರೂಪಾಯಿ ಕಾದಿದೆ ಅಂದ! I was on velvetoo in any caseoo!, so far as feesoo! But then. so far as my reputationoo as criminal lawyeroo. not on velvetoo! I found myself climbing up and down on a ಮುಳ್ಳುತ್ತುಗ್ದ ಮರ. ಯಾವದ್ದಯ!...Judgeಓ!! with a reputation for joking!, witticisms etc. etc.!, advantage ತೊಗೊಂಡೇ: ಕೇಳು ನನ್ನ summing upoo..."your honour, despite the overwhelming evidence adduced by the prosecution. I feel that this whole case depends upon one principal based on equity which in itself is the basis of all law.

May I put it to your honour, in all humility, a problem ? Hypothetically assuming that a single member of a community, an assembly or a club or a body of members commits a cognisable act against law, would your honour incarcerate the whole community, assembly or a club or a body of members, as the case may be?" ಜಡ್ಜಿ ಹೇಳ್ತಾನೇ:—"Not at all, learned counsel! No public body of members may be inculpated for any misdemeanour of a single integrant member." ......ಶಿಕ್ಕು ಸುಬ್ಬು...pointoo ನನ್ಗೆ! ಹೊಡ್ದ... "I welcome the words 'body and member' in your honour's just and wise dictum. My client is a body of members. It may seem childish to quote that the oldest of authorities is Æsop of the Fables fame. Nevertheless, my client is a body of members. The prosecution evidence has proved that but one member of his body, to wit, his right fore-arm, bore away exhibit No. 1. ರಾಶಿನನ. On your honour's own asseveration, would it be justice to imprison the whole body of my client for a criminal act of but one of the members that make up his body ? "—ಅಂದೇ!.... ಅದ್ನು brainy! twinkling eyesoo! sneering lipsoo! sarcastic tongueoo! .....ಹೇಳ್ತಾನೆ!......"I quite appreciate your point, learned counsel, without going a syllable back on whatever I have averred before. I sentence the fore-arm of the prisoner in the dock to six month's rigorous imprisonment. If the rest of th members that make up the body of your client cannot help sympathetically following their erring fellow member, that would be no fault of this court!"...ಜಡ್ಜ್ಮೆಂಟ್ ಕೇಳುತ್ಲೂ. ಕೋರ್ಟ್ ಕೋರ್ಟ್ ಗಾತ್ರೆ ನಸ್ನೋಡಿ! ; But ಕೊನೇ ಹಾಸು ಆಡಿದ್ದು ಜಡ್ಜಿ!.....goodoo. But ಕೊನೇ ತುರುಫ್ ಕರ್ಚ್ ನನ್ಕೈಲಿ! sweet ಆಗಿ ಸೋಕಿಸ್ದೆ! ತುರುಫ್ ಖರ್ಚ್ನ ಜಡ್ಜಿ ಹಾಸಿನ ಮೇಲೆ! ನನ್ನ ಕೇಸ್ನ! ಅಗ್ನೋಡಬೇಕಾಗಿತ್ತು ನೀನು ಕೋರ್ಟ್ನವರ ಮೂತೀನ! ಒಟ್ನಲ್ಲಿ ಆ ಆರ್ನೂರ್ರೂಪಾಯೂ ಸೇರ್ತು current accountಗೆ!!

ಶೀಮ : ಅರ್ಥವಾಗ್ಲಿಲ್ಲ! fore-arm ಜೊತೇಗೆ......rest of the body clientನು, ಹೇಗ್ತಾನೆ follow ಮಾಡ್ಲಿಲ್ಲ ? ?

ಅಣ್ಣಬ್ಬು : ನನ್ನ್ಯೂಟೂ......ಗಾಂಜಾ friendಉ ; an old patient of the self same doctoroo the...ಗಾಂಜಾ amputation specialistoo forearm ಕಟಾಯಿಸ್ಕೊಂಡು cork ನಲ್ಲಿ ಮಾಡ್ದ ಪ್ರಾಂಶ ಬಾಹು ! ಕೊನೇಗೆ ಉಕ್ಕಿನ ಕೊಕ್ಕೆ ಸೆಕ್ಕಿದೆ !! ನನ್ನ last wordsಉ ಆ ಕೋರ್ಟ್ನಲ್ಲಿ !. Prisoner's dockoo ಸಮೀಪಸ್ತಾ "I abide by your honour's edict pregnant with forensic erudition" ಅಂತಾಲೇ. ಈ cork forearm, buckles ಬಿಚ್ಚಿ ಆ constable ಕೈಲಿ ಕೊಟ್ಟು client, support ಮಾಡ್ತಾ court ಹೊರಗಡೆ ಹೊತ್ಕೊಂಡ್ಬಂದೆ clientನ......! ಆ ಆರ್ನೂ ರೂಪಾಯಿ ಸಿಲ್ಕಗೆ ! ತಿಳೀತೇ ಈಗ !!

ಶೇಷು : ಸತ್ಯವಾಗಿ ಹೇಳ್ತೇನೆ, ಅಹೋಬ್ಳು, ಇದು [illegible] ! [illegible] ವಿಪರೀತ.

ಅಹೋಬ್ಳು : "ಬುದ್ಧಿಃ" ಅಂತೀಯಾ. ಅದೂ ಬುದ್ಧಿ ಬೇಕೇ ಬರಪ ! ನನಗೋ ಹೆದರಿಕೆ "ಸಿದ್ಧಿಃ" ! ಅಂತ ಆಗಿದೆಯಲ್ಲಾ ಅಂತ !!

○ ○ ○

[ಇದುವರೆಗೂ ಜರುಗಿದ ಜೋಡಿ ಜೋಡಿಗಳ ಸಂವಾದ ಸಂಭಾಷಣೆಗಳು ಎಲ್ಲಾ ಕೇಳಲು ರಂಗಣ್ಣನು ಪೆಚ್ಚಾದ ಮುಖವನ್ನು ತಿರುಗಿಸಿಕೊಳ್ಳುತ್ತಲೂ, ಅಶ್ವತ್ಥನು ತುಂಬಿ ತುಳುಕುತ್ತಿರುವ ನಸುನಗುವನ್ನು ನುಂಗುತ್ತಲೂ. ಕೊನೆಗೆ ಜೋಲು ಮುಖವನ್ನು ತೂಗುವ ರಂಗಣ್ಣನಿಗೆ ಅಶ್ವತ್ಥ]

ಅಶ್ವತ್ಥ : ರಂಗೂ ! ಎರಡ್ಲಾಯ್ರು ; ಎರಡ್ಡಾಕ್ಟ್ರು ; ಎರಡಿಂಜಿನೀರು , ಒಬ್ಬೊಬ್ರಿಗೆ ಸಂತೋಷವಾಗಿ ಅನ್ಯೋನ್ಯವಾಗಿ ಅವ್ರವ್ರ ಕಸಬ್ನ ಮಾತ್ರ್ನ ಪರಸ್ಪರ ಪ್ರಶಂಸೆ ಸಂಭಾಷಣೆ ಸ್ವಸ್ವಸಮಾರಾಧನೇಸ ಸಲ್ಲಿಸ್ಕೋಳೋ ಸಂಭ್ರಮದಲ್ಲಿ............District District ಗೆ ಎರಡ್ಡಿಸ್ಟ್ರಿಕ್ Munsiff ಗ್ಳು, ಎರಡೆರಡು D. C.ಗ್ಳನ್ನ ಸಮ್ಮಸ್ಸಾಳುವ [illegible] ಏರ್ಪಡಿಸೋ ವರ್ಗೂ, District Magistrate D.C.ನೂ District Munsiff ನೀನೂವೇ Hopeless ಲೀ isolated, ಇಲ್ಲಾ insalated ಉ ? ಈ ನಿನ್ನ [illegible] ನನ್ನ ಇಲ್ಲಿ ಕರ್ಕೊಂಡ್ಬರೂವಾಗ್ಲೆ ನನಗೆ gurantee ಮಾಡ್ದ Mental Recreation [illegible] ...ಇನ್ನೊಬ್ಬ...merchant ನ member ಮಾಡ್ಕೊಂಡು..."ಮೆಣಸಿನಕಾಯಿ [illegible] ಏರ್ತಿದೆಯೋ? ಇಳ್ದಿದಿಯೋ ? ಕಾಫೀನ ಕರ್ಣಾಟಕರ್ಗೇನೇ ಒದಗ್ಸಿದ್ರೆ ನನ್ನ current account ತುಂಬುತ್ತೇ ? ಇಲ್ಲಾ outside ಕರ್ಣಾಟಕ export ಮಾಡಿ current account ನ fixed deposit ಗೆ ಏರ್ಸ್ಬೋದೇ !" ಹೀಗೇವೇ ರಂಗೂ, you find another District Munsiff ಉ for mental recreation.........to discuss shop" with you and enjoy this cluboo !

In the meanwhile I also shall try and find a fellow merchant to discuss merchandise with me ! And then, dear boy. this will really be a multipolitan club !!

[ಎನ್ನುತ್ತಾ "MULTIPOLITAN CLUB" ಎಂದು ಗೋಡೆಯ ಮೇಲೆ ತಗಲಿ ಹಾಕಿರುವ ನೋಟೀಸನ್ನ ತೋರು ಬೆಟ್ಟಿನಿಂದ ತೋರುತ್ತಿರುವಲ್ಲಿ ಘಟನೆಯು ಕ್ರಮೇಣ ಮಾಯುವುದು]

FINIS

ನಮ್ಬ್ರಾಹ್ಮಣ್ಕೆ

ಒನ್ದು

ಪ್ರ ಚೋ ದ ಕ ಪ್ರ ಕ ರ ಣ

'NAMMBRAHMANKAY'

A

Satirical Farce

to

titilate & ventilate

To day - Orthodoxy

ಇದೇನು !? ಧರ್ಮ್ವೇ ಇಲ್ಲಾ ಕರ್ಮ್ವೇ ಇಲ್ಲಾ ಮರ್ಮ್ವೇ !?

ಪಾತ್ರಗಳು

ಸಾಹೇಬ್ರು	...	ಹೈಕೋರ್ಟು ಜಡ್ಜು, ಶ್ರೀಮನ್ತ, ವಿದಾರ
ಕಿಟ್ಟು	...	ಶ್ರೀಮನ್ತರ ಪುತ್ರ-ಇಂಟರ್ ವಿದ್ಯಾರ್ಥಿ
ಸರೋಜ	...	ಶ್ರೀಮನ್ತರ ಪುತ್ರಿ-ಎಂ. ಎ. ಕ್ಲಾಸ್-ವಿತಂತು
ವೃಷೂರ್ಕ್ಯಂ	...	ಸರೋಜಳ ಕಾಲೇಜ್ ಗೆಳತಿ-ಕಾನ್ವೆಂಟ್ ವಾಸ
ಹಸ್ಸನ್ಅಲಿ	...	ಕೋರ್ಟು ಜಮೇದಾರು
ಶಾಸ್ತ್ರಿ	...	ಮನೆ ಪುರೋಹಿತ-ವಿಶಿಷ್ಟ ಮಂತ್ರತಂತ್ರ ವಿಚಕ್ಷಣ
ನಾರಾಯಣ	...	ಅಡಿಗೆಯುವ
ಯಾಲಕ್ಕಿ	..	ನಾಯಿನ್ದ

ಸಾಹೇಬರ ಸಹ ಶ್ರೀಮಂತರು, ಬ್ರಾಹ್ಮಣರು, ಜವಾನ.

ಕಾಲ—ಭಾಷೆ—ಸನ್ನಿವೇಶ—ಆಧುನಿಕ

ಚಾತುರ್ವರ್ಣ್ಯಂ ಮಯಾ ಸೃಷ್ಟಂ
ಗುಣ ಕರ್ಮ ವಿಭಾಗಶಃ॥

—THE LORD (C IV : S 13)

When Greed, the demon, djinn or elf,
Obsesses Brahmin's Soul,
'Its lust of flesh or pow'r or pelf
Distorts his God-bound soul!
Poor fool! Confusing sense for Self,
He plays dread Satan's role!!

—'K'

* * *

ಭೋಗದಾಸೆಗೆ ಸೋತು ಬ್ರಾಹ್ಮಣರೀಗ ಹರಹರ !,
ದುಷ್ಟಿನಾಳುಗಳಾಗಿ ನಿಂತಿಹರೆಲ್ಲರೆದುರಿಗೆ ನಗೆಗೆ ಗುರಿಯಾಗಿ !
ತ್ಯಾಗವೃತ್ತಿಯೆ ದಿವ್ಯ ಸಂಪತ್ತಾಗ ವಿಪ್ರರದಿತ್ತು !
ಧರೆಯೊಳು ತ್ಯಾಗಿಗಳೆ ಸಿರಿವಂತರವರೇ ಲೋಕಬಂಧುಗಳು॥

—'ಸಾಲಿ ರಾಮಚಂದ್ರ'

* * *

A Craft? No!: graft! A Creed? No!: greed!,
Gang North, gang South, gang West, gang East,
The foulest foe of man indeed,
This pest!!...inhuman beast...this priest!

—'K'

ದೃಶ್ಯ ೧

[The Scene opens on a drawing-cum-sitting room, choked with bed-room cheval glasses, library book-cases, dining room side-boards and dinner waggons, and a whole crowd of chairs and settees thrown about haphazard, and the walls supporting pictures of every school of art ;......in short recalls an auction room of European effects: the typical "drawing" room of a "*thousand four hundred rupees per mensem drawing gentleman*", the appointment recording the Comfortable Circumstances of the Owner rather than according comfort to the visitor.

A big enlargement of a handsome matron with a one year old boy and a five year old girl is suspended on top of "C." Resting on the stand of the picture are two brass bowls with "Fan-Palms", R & L.

Kittoo is discovered R foreground, seated in abandon in a 'Chesterfield', his latherred face relegated to the tender mercies of a razor-flourishing—arrack—breathing—barber "ಏಲಕ್ಕಿ", on the day of the Shraadha Ceremony of the late lamented-lady of the house, his mother, whose picture is suspended on top of "C"]

ಕಿಟ್ಟು : ಹುಷಾರೋ ಹುಚ್ಚೂ !! (sniffing with a wry face) ...ನಿನ್ನ ಹೆಸರೇನೋ ?

ಯಾಲಕ್ಕಿ : ಯಾಲಕ್ಕಿ ಬುದ್ದೀ !

ಕಿಟ್ಟು : ಯಾರೋ ನಿನಗೆ ಈ ಹೆಸರಿಟ್ಟದ್ದೂ ?

ಯಾಲಕ್ಕಿ : ನಮ್ಮಜ್ಜ ಬುದ್ದೀ !........ಸಾಯಾಕ್ಮುಂಚೆ !

ಕಿಟ್ಟು : ಇನ್ನೂ ಬದ್ಕಿದ್ದಾನೇನೋ...ನಿಮ್ಮಜ್ಜಾ ?

ಯಾಲಕ್ಕಿ : ಇಲ್ಲಾ ಬುದ್ದೀ !...ಮಣ್ಣಾಗೋದಾ ಆಗ್ಲೇ !!

ಕಿಟ್ಟು : ಡಿಟ್ಟೋ ನಮ್ಮಜ್ಜನೂನೂ...ಆದ್ರೆ...ಬೂದಿಯಾಗ್ಹೋದ ! Goodoo ಮಗೂ Goodoo ! ಮಾಕೇಂತೀಯೋ ? ಸಾರಾಯಿ ವಾಸ್ನೇ ಸೂಸೋ ನಿನ್ಗೆ ಏಲಕ್ಕೀ ಅಂತ ಹೆಸರಿಟ್ಟ ನಿಮ್ಮಜ್ಜನೂ, ಶಿವಂಗಿಮೋರೆ ಇರೋ ನನ್ಗೆ (ರಾಗವಾಗಿ) "ಮದನಮೋಹನ ಶ್ಯಾಮಸುಂದರ" ಬಾಬ್ಬು ಶ್ರೀ ಕೃಷ್ಣನ ಹೆಸರಿಟ್ಟ ನಮ್ಮಜ್ಜನೂ (shake hands) ಷೇಕ್‌ಹ್ಯಾಂಡ್ಸ್ ಮಾಡೋ ೞ (ರಾಗವಾಗಿ ತಿರುಗಿ) "ಆ ದಿನಮೇ ಸುದಿನಾಮೂ." ಸ್ವರ್ಗದಲ್ಲೀ—if brahmin souls and barber souls *may* meet at all in ಸ್ವರ್ಗ—like Napoleon and Blucher shaking hands—if ಕೆಂಪು ಚಪ್ರಾಸ್ get to our swarga at all——in the meanwhile—ಹುಷಾರೋ ಲೋ ! ಹಜಾಮಾ !! ಸ್ವಲ್ಪ ತಡಿ ! (ಥಟ್ಟನೆ ಮಗ್ಗುಲಲ್ಲಿಟ್ಟಿದ್ದ ಗಾಜಿನ ಲೋಟದ ನೀರನ್ನು ಬಾಯಿಗೆ ಹಾಕಿಕೊಂಡು ಮುಕ್ಕಳಿಸುತ್ತಾ

ಪಕ್ಕದಲ್ಲಿರುವ ಮೀಸ್ನೆಗೆ ಹೀಚಿ) ಪಿಷ್ಟ !! side ತೂತುಗಳಲ್ಲಿ ಪಾರ್‌ಕ್ !!.... ಮೊದಮೊದಲು ಬುದ್ಧಿ ಕಿವ್ಗೆಲ್ಲಾ ಕನ್ನಾಹಾಕಿ ಅವನು ಮಾಡಿದ ಹುಣ್ಣುಗಳ ಸ್ಥಳದಲ್ಲಿ ಈಗ ಬಾಳು ಮುಕ್ಕಳಿಸೋದಾಗೆಲ್ಲ ನೀರು ಸೂಸ್‌ತಿತ್ತು—ಕಿವ್ಗೆ ತೂತುಗಳ್ನೆ ! regular ಸ್ಪ್ರಿಂಕ್ಲರ್ ಬೃಂದಾವನ ಮಾಡಿಬಿಟ್ಟೋದ ! ಹುಷಾರು !!......ಇಲ್ಲಿ ಕಟ್ಬಿಟ್ಟ !...ಬ್ಲಡ್ ಕಟ್ಬಿಟ್ಟ ?

ಯಾಲಕ್ಕಿ : ಇದೇನ್ ಬುದ್ಧೀ ...ಇಂಗೆ ಕೇಳ್ತೀರಾ ! ನಮ್ಮಾವ ಬುದ್ಧೀ ಮುಂದೆ ಕಲ್ತ ಕಲ್ಸೆನ್ಗೆ ! ಅವನು 'ಸ್ಲೂನು' ಇಟ್ಟಿವನೇ ಬುದ್ಧೀ 'ಸ್ಲೂನೂ' ! ಯೂರೋಪ್ ಸ್ಟೈಲೂ !!

ಕಿಟ್ಟಿ : ಸ್ಲೂನೂ ! ?......ಓಹೋ......ಸೆ....ಲೂ....ನೇ...?...ಹೇರ್ ಕಟ್ಟಿಂಗ್ ಸೆಲೂನೇನೋ...?...'ಹಡಪದಂಗಡಿ' in reality but disguised in civilised British garboo ! ಸರಿ ಸರಿ !......ಊ ! ಸೋಪ್ ಹಾಕೋ... ಇನ್ನೂ......

ಯಾಲಕ್ಕಿ : (ಸೋಪನ್ನು ಬ್ರಷ್‌ನಿಂದ ಜೋರಾಗಿ ಬಳಿಯುತ್ತ) ಬುದ್ಧೀ ! ಏನ್ ಮಾಡ್ತೀರ್ರಾ ಚೌರಾನ !...ಎಂತೆಂತಾ ದೊಡ್ಮನಸ್ರಿಗೆ ಎಂಗೆಂಗ್ ಮಾಡ್ತಾನೆ ಅದೊಂದನ್ನೇ ಕಾಗಾಕಲ್ಲ...ಅದ್ನೂ ಎಂಗ್ಮಾಡ್ತಾನೆ ? !...ನೋಡೀ ಬುದ್ಧೀ...(suiting action to word) ಇಂಗೆ ಕೈಲಿ ಒಂದೆಂಡ್ಸಲ...ತಿರ್‍ವ್ಸಿಬಿಟ್ಟು ಕತ್ತೀನಾ ಒಂದ್ಕೈಲಿ ಗಲ್ಲಾ ಇದ್ಕೊಂಡು ಇನ್ನೊಂದ್ಕೈ ಯಿಂದ ಆರೋ ಅಕ್ಕಿ ನೆಲಕ್ಕಿಳ್ಸಂಗೆ ನಾಜೂಕಾಗಿ ಕತ್ತೀನ ಕೆನ್ನೇಮ್ಯಾಗೆ... ಇಂಗಿಂಗೆ ಎಳೆದ್ನಾ ಅಂದ್ರೆ ಸೌರ್ದಾಗ್ಲೇ ಚೌರಕ್ಮಾತ್ಕೊಂಡೌವ್ರು .... ಕೂತ್ಕೊಂಡಂಗೇ...ನಿದ್ದೆ ಒಯ್ದ್ಬಿಡ್ತಾರೆ ಬುದ್ಧೀ ! ಕುರ್ಜೀಮ್ಯಾಗೆ ಎಂಗೆಂಗಿದ್ರೋ ಅಂಗಂಗೇ...ನಿದ್ದೆ ! ಚೌರ ಮುಗ್ಸಿ... ತಟ್ಟಿ ಎಬ್ಬಿಸ್ತೀನಿ...ಎಬ್ಸಿ...ಆಮೇಗೇನೇ ಕಾಸಿಸ್ಕೋಳ್ಳೋದು...ನಮ್ಮಾವ !!

ಕಿಟ್ಟಿ : ನಿದ್ರೆ ಅಲ್ಲಾ ಕಾಣೋ. ಮೂರ್ಛೆ !! loss of Bloodoo !...... haemorrhajeಊ ! (ಹೇಮರೇಜೂ)......ಅವನು ಏರಚೋ ನೀರು......ಕೈಕೊಡ್ತದಲ್ಲಾ !! ಊ !! ಮುಂದುವರಿಸೋ ಚೌರಾನಾ !!!

ಯಾಲಕ್ಕಿ : (ಕ್ಷೌರ ಮಾಡುತ್ತ) ನೋಡೀ ಬುದ್ಧೀ ! ಎಂತೆಂತಾ ಕಿಲಾಡಿಗೋಳಿದ್ರು ——ಈ ಆಳು ಊರ್‍ನಲ್ಲೀ? ! ನಮ್ಮಾವ ನೋಟೀಸಾಕಿದ್ದ .... ಸ್ಲೂನ್ ಗೋಡೇಗೆ : 'ಯಾರಾದ್ರೂ ಚೌರಕ್ಕೊಂಡಾಗ—ಮುಕ್ಕೆ ಕತ್ತೀ ತಗುಲ್ದ್ರೆ......ನನ್ನ ಕೈಯಿಂದ ಏಟ್ಕೊಂಡಾಗ' ಅಂತ ! ನೋಡೀ ಬುದ್ಧೀ ! ಈ ಊರಿನ್ ರುಸ್ತುಂಗೋಳು ಬಂದ್ಕೂತ್ಕೊಂಡು ಚೌರಮಾಡಿಸ್ಕೊಂಡು ರೊಕ್ಕಾ ಚಾರದ್ ಪರಕಾರ ಎಂಡಾಣೆ ಕೊಟ್ಟುಬಿಟ್ಟ್ರು......ಆಮೇಗೆ ಅದೇ ನೋಟೀಸ್ ನಲ್ಲಿ .... (ಪ) ಅತ್ತೇಟು...... (ಹ) ಅನ್ನೊಂದೇಟು......ಇನ್ನ್ ಕರ್ಚಿಗೇಟೇಟು ಪೇಕೋ ಅಂತ ಎಲ್ಲಾ ಮೊಕ ಅಲ್ಲಾಡ್ಸಿ ಕರ್ಚಿಗೇಟಾಣೆ ಬೇಕೋ ಅಟ್ಸಲ ಕತ್ತಿ ತಾಕ್ಸಿಸ್ಕೊಂಪ್ ಮುಕ್ಕೆ... ನಮ್ಮಾವನ್ ಕೈಯಿಂದ್ಲೆ...ಅತ್ತು...ಅದಿನ್ನೈದು ಆಣೆ...ಇಲ್ಲ...ಒಂದೊಂದ್ಸಲ ಒಂದು ರೂಪಾಯಿನ್ನೈದ ಹೊಡ್ಕೊಂಡ್ ಓಯ್ತಾರೆ ಬುದ್ದಿ........ನಮ್ಮಾವನ್ ಕೈಯಿಂದಾ........!!

ನಾರಾಯಣ : (ಮಧ್ಯದ ಬಾಗಿಲಿಂದ ಬಂದು) ರಾಯ್ರೆ ! ಸಾಹೇಬರ ಕೋರ್ಟು ಹನ್ನೊಂದು ಘಂಟೆ ! ಈಗ ಹತ್ತ್ಹತ್ರ ಹತ್ತು ! ಸ್ನಾನಕ್ಕೆ ನೀರು ತೋಡಿದಾರೆ ! ಅಮ್ಮಾವ್ರ ಶ್ರಾದ್ಧಕ್ಕೆ ಎಲ್ಲಾ ಏರ್ಪಾಡಾಗಿದೆ ! ಶಾಸ್ತ್ರಿಗಳು....ಈಗೇನು....ಬಂದ್‌ಬಿಡ್ತಾರೆ. ತಾವು ಸ್ನಾನ ಮಾಡಿ....ಸಿದ್ಧವಾಗೋದೊಂದೇ ತಡ !!

ಕಿಟ್ಟಿ : ಸ್ನಾನ ? ! Yes of course ! ಅಮ್ಮನ ಶ್ರಾದ್ಧ...... Say A !, Constantoo !......father's Courtoo say C !, more constantoo !! But ನನ್ನ Cricket matchoo say B !......most constantoo ! Elevenಗೆ readyಯಾಗಿರ್ಬೇಕು ನಾನೂನು ! ಈಗ ಮೂರೂನು Constant ಆದರೆ absurdoo ! Therefore ಮೂರ್ರಲ್ಲಿ ಒಂದು...must become variableಊ !

High Court ಕಷರ್ಲೋ ಹಾಗಿಲ್ಲ ; Cricket fieldoo fixtureೞ ; So also the matchoo ! ಅಮ್ಮನ ಶ್ರಾದ್ಧ put off ಮಾಡಿ......variable ಮಾಡೋದು impossibleೞ ; so, ಮೂರೂ Constant ಆಗಿರಲೇ ಬೇಕಾಗಿದೆ ! Therefore... fourth factor ಸ್ನಾನ......must be variableಊ ! ಆದ್ರಿಂದ ಮೊಗುಟಾನ ಇಲ್ಲೇ ತಂದ್ಬಿಡು. ಸುತ್ಕೊಂಡ್ ಸಿದ್ಧ...Ceremonyಗೆ........ತಿ ಥಿ ೯ ಗೆ !

ನಾರಾಯಣ : (appealingly) ಕ್ರಿಷ್ಣಿ, ರಾಯ್ರೆ ! ಕ್ಷೌರಮಾಡ್ಕೊಂಡೂ....ಸ್ನಾನ ಇಲ್ದೇ ಮೊಗ್ಗಾ ಕಟ್ಕೊಂಡೂ...ಶ್ರಾದ್ಧಾ ! ?? ಹೋಮಾ ! ? ಮಡೀ ! ?......?

ಕಿಟ್ಟಿ : ಮೊಗ್ಗ...ಸಿಲ್ಕು !...ಸದಾ ಮಡಿ ! ಇನ್ನು ಸ್ನಾನ ? (dipping his fingers into the bowl of lather and flinging a spate of foamy, frothy, curdy, lather on to Narayana's face) ದಧಿಕ್ರಾವುಣೋ ಅಕಾರಿಷಜ ...ಸುರಭಿನೋ ಮುಖಾಕರತ್ಊ !, ಕೇಳಿದ್ಯಾ ? ಶಾಸ್ತ್ರದಲ್ಲೇ ಬರತ್ತೇ......ದಧೀನ ಹಚ್ಕೊಂಡು ...."ಮುಖಾಕರತ್" ಅಂದ್ರೆ ಮುಖಾ ಮಾಡಿಸ್ಕೊಂಡ್ರೆ......ಸ್ನಾನಕ್ಕಸಮಾನಾಂತ ! ತಂದ್ಬಿಡು ಇಲ್ಲೇ......ಮೊಗುಟಾನ ! ಶಾಸ್ತ್ರಿಗಳೂ,......ಆಗಾಗ್ಯೆ ಆಚಾರಗಳು upset ಆದಾಗ, "ಪರವಾಯಿಲ್ಲ ಆಪದ್ಧರ್ಮ" ! ಅಂತ ಹೇಳ್ತಾಲೇ ಇಧಾರೆ ! ನಾನೂ ಎಷ್ಟೋ ಸಲಾ ಕೇಳ್ತಾಲೇ ಇದ್ದಿಧೇನೇ ! ತಕ್ಕೊಂಬಾರೋ ಇಲ್ಲೇ ಮಗುಟಾನಾ !!

ನಾರಾಯಣ : (exits muttering) ಸರಿ ! ನನಗೇನೋ ಇದೂ ಒಳ್ಳೇದಕ್ಕೇ ! ...(Re enters with a silk dhothy of sanguinary hue.) (ಕಿಟ್ಟಿ who has in the meanwhile lit a cigarette, snatches the cloth from Narayana and exits by 'C' shouting, "ಆ ಹಜಾಮನಿಗೆ ಒಂದ್ಪಾವ್ಲಿ ಕೊಟ್ಬ್ಬಿಡಪ್ಪ").

ನಾರಾಯಣ : (recovering a small brass pill-box from the folds of his cloth, opens it........and dropping a coin into ಯಾಲಕ್ಕೀ's palm) ತಗೋ ನಿನ್ನಾಮಸೂಲು. ಇನ್ನಿನ್ಷಪ್ಪ ಹೊತ್ಕೊಂಡ್ಬೊರ್ಡು !

ಯಾಲಕ್ಕಿ : (ರೇಗಿ) ಇದೇನ್ಸುದ್ದೀ ಎಂಡಾಣೆ ? ! ಅಲ್ಲಾ !........ಚಿಕ್ಕಾಯೋಬ್ರು ಪಾವಲಿ ಅಂತ ಅಂದಪ್ಷೇನು ?,.......ನೀವು ಎಂಡಾಣೆ ಕೊಡೋದೇನೂ ? ಇದಕ್ಕೇ ಏಳೋದು ಇರಿಯ್ರು : "ಅಣ್ಣ ,ಮ್ಮ ಕೊಟ್ರೂ ಹಸರ್ಗಾದ....ಅರ್ವಾ ಕೊಡಾ" ಅಂತ. ನಾನೇ ಕೇಳ್ಸುತ್ತೀನಿ ಐಡೀ ಬುದ್ಧೀ......ಓಹೊ ! ? (takes a wide stride towards door 'C' shouting ಬುದ್ಧೀ !!)

ನಾರಾಯಣ : (Alarmed and in consternation) ಮೋಗ್ಬಾರ್ದ್ದೋ ಒಳಗೇ ಹಜಾಮಾ ! ಚಿಕ್ಕರಾಯರಾದ್ರೋ, ಏನ್ನ್ ಅನಾಹುತ ಮಾಡಿದ್ರೂ ಅದಕ್ಕೆಲ್ಲಾ ಸಂಸ್ಕೃತದಲ್ಲಿ ಏನಾದ್ರೂ ಹೇಳ್ಕೊಂಡು ಅದ್ನೆಲ್ಲಾ ಸರಿಮಾಡ್ಬಿಡ್ತಾರೆ, ಶಾಸ್ತ್ರಿಗಳು !! ನಿನಗೇನ್ ಶಾಸ್ತ್ರ ಗೊತ್ತೋ?, ಹೀಗೆ ಬಾರೋ !

ಯಾಲಕ್ಕಿ : ನನಗೊಂದೇ ಗೊತ್ತು ಸೋಮೀ ! ಇನ್ನೊಂದೆಂಡಾಣೆ ಬರಬೇಕ್ರಾ ! ಅಟ್ಟೇ ! ಅದ್ಗೊತ್ತು !

ನಾರಾಯಣ : (flinging a two anna bit at the barber) ತಗೋ... ಇದೋ ಈ ಕುರ್ಚೀನ ಇದ್ದಡೇ ಹಾಕಿ. ನಿನ್ನ ಹಡಪಾನ ಹೊತ್ಕೊಂಡು ಹೊರಡು ಬೇಗ ! [Both exit : Barber " R " and ನಾರಾಯಣ "C"]

ಕಿಟ್ಟಿ : (Entering by 'C', puffing his cigarette, reaches the centre of the room and almost jostles into "ಶಾಸ್ತ್ರಿ" who has just entered by door 'R', disgusted with the exitting barber who has brushed past him) ಕ್ಷಮಿಸ್ಬೇಕು !, ಶಾಸ್ತ್ರಿಗಳೇ !! (hides the cigarette behind his back).

ಶಾಸ್ತ್ರಿ : (Aghast for a moment, but with quick presence of mind controlling himself and mustering a smile, blandly and suavely) ಪರವಾಯಿಲ್ಲಾ ! ಲೌಕೀಕ !....ನೋಡಿ. ಸೃಷ್ಟೀ ಸಂಹಾರಣೇಗೆ ಪರಮಾತ್ಮ ಎತ್ತಿದ ಹತ್ತು ಅವತಾರಗಳಲ್ಲಿ ಒಂದೊಂದೂ ಒಂದೊಂದು ತರಹಾ ವೇಷಗಳು : ಹಿರಣ್ಯಾಕ್ಷನ್ನ ಕೊಂದು ಧರಿತ್ರೀನ ನಮಗೆ ಗಿಟ್ಟಿಸೋಕೆ ಹಂದೀ ಹಾಗೂ....ಅವನ ಅಣ್ಣನ ಜರದ ಒಗೆದು ಭೂಭಾರ ಇಳಿಸೋಕೆ ನರಹರಿ ಹಾಗೂ...ದಶಕಂಧರನ ಹಿಂಡಿದ್ಹಾಕುಗಳನ್ನ ಗಹಿಂದ ಸಮೇತ ಕಿವಿಯೋಕೆ ಕೇವಲ ಮಾನವಾಗಿಯೂ........"ರಕ್ತಾ" ಯೋಗಾನ ತೊರೆದು "ದಕ್ಷಾ" ಯೋಗಾನ ಅಂಟಿಯುಂಡ ಕ್ಷತ್ರಿಯರ ಕೊಬ್ಬನ್ನ ಕುಗ್ಗಿ ಕರಗ್ಸೋಕೆ....ಗೋಟೀ ಸಮೇತ ಸನ್ಮಾತ ಕೇವಲ ಕಮಾವಿನ ಹಾಗೂ ......ಹೀಗೆಲ್ಲಾ ಪರಮಾತ್ಮ ಅವತರಿಸಿ. ಕಾಲ, ದೇಶ. ವರ್ತಮಾನ, ಪ್ರಕೃತಿ. ಪುರುಷ. ಪಂಚಪ್ರಾಣ ಪಂಚಭೂತ ಇತ್ಯಾದಿ ಸಮಸ್ತ ಬಾಬತ್ತನ್ನೂ ಪೂರ್ವಾಲೋಚನೆ. ಉತ್ತರಾಲೋಚನೆ ಮೊದಲೇ ಮಾಡಿಯೇ ಒಂದು ವ್ಯವಸ್ಥೇಗೆ ತಂದು, ತನ್ನ ಮಹಿಮೇನ ಇವನಲ್ಲಿ ಧರ್ಮ ಸಂಸ್ಥಾಪನೇ ಮಾಡೋದ್ರ ಮೂಲಕ ಹೇಗೆ ಪ್ರಚುರಪಡಿಸ್ತಾನೋ...ತದೇವ ರೀತ್ಯಾ ಪರದೇಶ ..ಪಾಶೀಯರು... ಇವುಗಳ ಸಂಪರ್ಕದಿಂದ....ನಮ್ಮ ನಾಗರೀಕತೆ, ನಮತೆ ಆಚಾರ ವಿಚಾರ ಇವುಗಳ...ಅಲ್ಪ ಸ್ವಲ್ಪ ವ್ಯತ್ಯಾಸಗಳಿಗೆ ಸರಿಯಾಗಿ, ನಮ್ಮ ಸಂಸ್ಕೃತಿ, ಶಾಸ್ತ್ರ. ಧರ್ಮ. ಕರ್ಮಗಳೂ ಅಲ್ಪಸ್ವಲ್ಪ ವ್ಯತ್ಯಾಸ ಆಗಲೇಬೇಕು! ಪರದೇಶ.. ನಮ್ಮ ದೇಶ...ಅಂಬೋ ವ್ಯತ್ಯಾಸಗಳು ನಾವು ಇಟ್ಕೊಂಡಿದ್ರೆ........ **"ಸಮೋಽಹಂ ಸರ್ವ ಭೂತೇಷು ನಮೇದ್ವೇಷೋಽಸ್ತಿ ನ ಪ್ರಿಯಃ"...ಅಂಬೋ ತನ್ನ ವಿರುದ್ಧ ಬೆಳಗೋಕೆ, ಭೂತಾಳದಲ್ಲಿ "ಈ ದೇಶ ಬೇರೇ ಆ ದೇಶ ಬೇರೇ" ಅಂಬೋ ಪಕ್ಷಪಾತ ಇಲ್ದೇನೇ, ಸಾಕ್ಷಾತ್ ಸೂರ್ಯ ನಾರಾಯಣ..ಸರ್ವಲೋಕಗಳಿಗೂ, ಸರ್ವ ದೇಶಗಳಿಗೂ ಸರ್ವ ಪ್ರಾಣಿ ಪಾದಪಗಳಿಗೂ ತನ್ನ ಬೆಳಕನ್ನು ಬೀರ್ತಾನೆ!** ಇದು ದ್ವಂದ್ವಮಯ ಪ್ರಪಂಚ. ವೈದೀಕದಲ್ಲಿ ಸ್ವಲ್ಪ ಹೆಚ್ಚು ಕಮ್ಮಿ ಆದ ಅಂಶಗಳು ಲೌಕೀಕ ರೀತ್ಯ ಸರಿಹೋಗುತ್ತೆ. ಲೌಕೀಕದಲ್ಲಿ ಹೆಚ್ಚು ಕಮ್ಮಿ ಆದದ್ದ ವೈದೀಕ ರೀತ್ಯ "ಪರವಾಯಿಲ್ಲಾ" ಅಂದ್ಬಿಡ್ತೇವೆ ನಾವು! **ಹೀಗೆ ಸಮಾಜ...ಸಂಸಾರ....ಈ "ಗಜಗುಜಿ"ಯಲ್ಲಿ "ಇದು ತಪ್ಪು ಇದು ಒಪ್ಪು" ಅಂಬೋ ಹಟಾನೆಲ್ಲಾ ಬಿಟ್ಬಿಟ್ಟು, ವ್ಯಕ್ತಿಗಳು ಅನ್ಯೋನ್ಯವಾಗಿ ಹೊಂದ್ಕೊಂಡು ಹೋದ್ರೇನೇ....ಸೌಕರ್ಯ....ಸುಖ....ಶುಭ....ವ್ಯಷ್ಟೀಗೂ...ಸಮಷ್ಟೀಗೂ !!**......... ಅಕ್ಕೋ ನಾರಾಯಣ !...ಎಲ್ಲಾ ಸಿದ್ಧವಾಗಿದೇಂತ ಕಾಣುತ್ತೆ...ದಿವಂಗತ ಮಾತೋಶ್ರೀಯವರ...ಶ್ರಾದ್ಧ ದಿವಸಕ್ಕೆ !

ಕಿಟ್ಟಿ : ಕ್ಷಮಿಸಿ !!, ಶಾಸ್ತ್ರಿಗಳೇ !...Logicoo...ನನ್ನ special subjectoo! ಮಿಕ್ಕ subjectsನಲ್ಲಿ ಗೋತ ಹೊಡೆದ್ರೂವೆ. Logicoo...ನನ್ನ ಗಾಂಡೀವ! ಈಗ..ನೀವು ಹೇಳೋದು...ಸಂಸ್ಕೃತದಲ್ಲಿ...... authority ಸಮೇತ ಹೇಳಿದ್ರೂವೇ...ಸ್ವಲ್ಪ...fallacy... ಅಂದರೇ...ಅಸಂಬದ್ಧ...ಅಲ್ಲಾ...ಆ...ಹ್ಯಾಗ್‌ಹೇಳ್ಳೀ......?

ಶಾಸ್ತ್ರಿ : ಅಸಂಬದ್ಧ ??

ಕಿಟ್ಟಿ : ಅಲ್ದೇ ಏನೂ ? ಈಗ ನೋಡಿ ! ನೀವು ಹೇಳೋ ಪ್ರಕಾರ...ದೇವ್ರು ಅಂಬೋ ಒಂದು ಹಾಡ್ತು ಇರೋ ಹಾಗೂ ಆ ಬಾಬ್ತಿಗೆ ಸಂಸ್ಕೃತ ಭಾಷೆ ಬಿಟ್ಟು ಬೇರೆ ಯಾವ ಭಾಷೇನೂ ತಿಳಿಯದ ಹಾಗೂ !.........

ಶಾಸ್ತ್ರಿ : (Scandalised) ದೇವರಿಗೇ ? ಬೇರೇ ಭಾಷೆ ಗೊತ್ತಿಲ್ಲವೇ ?? .... ದೇವ್ರೇ ಗತಿ ! ಸರ್ವಾಂತರ್ಯಾಮಿ ಸರ್ವಜ್ಞ ಮೂರ್ತಿ....ಸರ್ವಕ್ಕೂ ಆದಿ ಅಂತ ! ಆತನಲ್ಲಿಂದೇ ಸರ್ವವೂ ಅತಾರೋಪಾಗ......ಭಾಷೇ ಗೊತ್ತಿಲ್ಲಾಂದ್ರೇ ?

ಕಿಟ್ಟಿ : ರೇಗ್ಬೇಡಿ ಶಾಸ್ತ್ರಿಣಃ ! ಈ ಸಂಸ್ಕೃತ ಹೇಳಿ ದಬಾಯ್ಸಬೇಡಿ ! **Cool & cautious** ಅಲ್ಲ ಕೂಲಂಕುಶವಾಗಿ ಕೇಳಿ ! ದೇವರಿಗೆ ಸಂಸ್ಕೃತ ಒಂದೇ ಭಾಷೆ ಬರೋದೂಂತ ಯಾಕೆ ಹೇಳ್ದೇಂದ್ರೆ........ನೀವು ನೋಡಿ....ನೀವೇನು...ನಿಮ್ಮ ವೈದೀಕ ವರ್ಗದವರೆಲ್ಲಾ...ಲೌಕೀಕ ವರ್ಗದವರ ಮನೆಗಳಿಗೆ........ಒಂದು ಪೂಜೆ ಒಂದು ಪುರಸ್ಕಾರ....ಜರುಗಿಸೋವಾಗ...''ಚೊಕ್ಕಟವಾಗಿ ನೀರಿನಲ್ಲಿ ಕೈಯನ್ನು ತೊಳೆದು ಕೊಳ್ಳೊಂಡು'' ಅಂತ ಕನ್ನಡದಲ್ಲಿ ಹೇಳಿದ್ರೋ...ಜಡಿಗಾಸು ಗಿಟ್ಟೋದಿಲ್ಲ ದಕ್ಷಿಣೆ !! ಅದ್ನೇ ''ಅಪಃಉಪಸ್ಪೃಶ್ಯ'' ಅಂದ್ರೋ, ಆಗ ಧೈರ್ಯ ಬರುತ್ತೆ ದಕ್ಷಿಣೆ ಕೊಡೋವರಿಗೆ...ದೇವರ ಕಿವೀಗೆ ಮುಟ್ಟತ್ತೆ ನಿಮ್ಮ ಮಂತ್ರಾಂತ ! ಆಯ್ತೇ, ಒಂದು **Pointoo, first fallacy** ? ಇನ್ನ್ second **fallacy**ನೋ ? ವೈದೀಕ ವಿಚಾರ ಆಚಾರಗಳಿಗೆ ವ್ಯತಿರಿಕ್ತವಾಗಿ ನಡೆದ್ರೇ, ಲೌಕೀಕ ರೀತ್ಯ ''ಸರಿ ಸರಿನಾಯಿಲ್ಲಾ'' ಅಂತೀರಾ ! ಲೌಕೀಕ ರೀತ್ಯಾ ''ತಪ್ಪು'' ಅಂತ ನಾವು ಹೇಳೋ ನಿಮ್ಮ ಐಬುಗಳೆಲ್ಲಾ ವೈದೀಕ ರೀತ್ಯ ''ಸರಿ'' ಅಂಬೋದಕ್ಕೆ ಶಾಸ್ತ್ರಗಳು Quote ಮಾಡ್ತೀರಾ ! ಹಾಗಾದರೆ ವೈದೀಕಕ್ಕೂ ಲೌಕೀಕಕ್ಕೂ ವ್ಯತ್ಯಾಸವೇಸೂ ಅಂತೇನೆ?

ಶಾಸ್ತ್ರಿ : ರಾಯರೇ ! ನಾಲ್ಕು ವೇದ, ಆರು ಶಾಸ್ತ್ರ, ಹದ್ನೆಂಟು ಪುರಾಣ, ತೊಂಭತ್ತಾರು ತತ್ವ, ಇಷ್ಟನ್ನೂ ನಮ್ಮ ಮೆದುಳಿನಲ್ಲಿ ಇಳಿಸಿ ಕಾಯಿಸಿ ಗಸಿಯಾಗಿ ಮಾಡಿ ಟ್ಕೊಂಡು, ಸಮಾಜದ ಆಚಾರ ವಿಚಾರ ಮುಂತಾದುವುಗಳ್ನ ಈ ಗಸೀಗೆ ಒರೆಹಚ್ಚಿ ಒಂದೊಂದು ಧರ್ಮ ಕರ್ಮಕ್ಕೂ 'ಕ್ರಮ' ಅಂಬೋದ್ನ ಏರ್ಪಡಿಸಿ, ಅದರ ಪ್ರಕಾರ ಬ್ರಾಹ್ಮಣ್ಕೆ ಜರುಗ್ಸೋದು ವೈದೀಕ !!...ಲೌಕೀಕಕ್ಕೆ ಅಸ್ತಿಭಾರವೇನೂ ಇಲ್ಲ ಪಿತ್ರಾರ್ಜಿತ ವಾದ ಇಲ್ಲ ಸ್ವಾರ್ಜಿತವಾದ ''ಆಸ್ತಿ''ಯ ಭಾರದ ಮೇಲೆ ಜರುಗುತ್ತೆ ಲೋಕ ! ವೈದೀಕಕ್ಕೆ ಜೀವಾಳ ''ಕ್ರಮ'' !...''ಶಾಸ್ತ್ರೋಕ್ತ ಕ್ರಮ'' ! ಲೌಕೀಕದ ಜೀವಾಳ... ಸನ್ನಿವೇಶ...ಪರಿಸ್ಥಿತಿ...ಇತ್ಯಾದಿಗಳು....ಹ್ಯಾಗೆ ತಿರುಗಿಸ್ತವೆಯೋ ಹಾಗೆ ! ಈ ಲಗಾಮು ಗಳಿಂದ ತಿರುಗೋ ಕುದುರೆ ಅದು ! ವೈದೀಕದಲ್ಲಿ...ಈ ಕಾರ್ಯ ಹೀಗೆಯೇ ಮಾಡ್ಬೇಕು; ಈ ಪಾತ್ರೇನ ಹೀಗೆಯೇ ತಕೋಬೇಕು ; ಈ ಕೈಲೇ ತಕೋಬೇಕೂ, ಇತ್ಯಾದಿಗಳ್ನೆಲ್ಲಾ ತಪ್ಸೀಲಾಗಿ ವಿವರಿಸಿದೆ...ವಿಧಿಸಿಧೆ !

ಕಿಟ್ಟಿ : ಹಾಗಾದ್ರೆ...ಈ ತಕರಾರೆಲ್ಲಾ ಯಾಕೇ ? ಲೌಕೀಕ ಕಾರ್ಯಗಳನ್ನೆಲ್ಲಾ...ವೈದೀಕ ಭಾಷೆ ಸಂಸ್ಕೃತದಲ್ಲಿ ಕ್ರಮೇಣ "ಕ್ರಮ" ಅಂದ್ರುಲ್ಲಾ...ಅದರ ಪ್ರಕಾರ ಹೇಳ್ತಾ...ವೈದೀಕಕ್ಕೆ ಬದಲಾಯಿಸಿಬಿಟ್ರೆ...ಯೋಚನೇನೇ ಇಲ್ಲವಲ್ಲಾ ? ಮಸಲ, ನೋಡಿ ! (bringing out the cigarette from behind him) ಈ ಬಾಬ್ತು "ಪರವಾಯಿಲ್ಲಾ ! ಲೌಕೀಕ" ಅಂತ ...(ಸಮಾಧಾನ್ತ) ದೊಡ್ಡ ಮನಸ್ಸುಮಾಡಿ ಮನ್ನಿಸಿ ಬಿಟ್ರೆ....ತಾವು ! ಹಾಗಾದ್ರೆ...ವೈದೀಕ ರೀತ್ಯಾ ಈ ಲೌಕೀಕ ಕಾರ್ಯಕ್ಕೆ ಸಂಸ್ಕೃತದಲ್ಲಿ ಒಂದು "ಕ್ರಮ" ಕವನ ಮಾಡ್ಕೊಡಿ ! ಒಂದು ಶ್ವೇತ......ತಾಂಬೂಲ ಸಮೇತ ಅರ್ಪಿಸಿಬಿಡ್ತೇನೆ ! (aloud to 'C') ನಾರಾಯಣಾ ! ತಟ್ಟೇಲಿ ವಿಳೆ ಅಡ್ಕೆ ತೆಂಗಿನಕಾಯಿ. ಹಣ್ಣು. ಒಂದು ರೂಪಾಯಿ !...ಬೇಗ !...(ತಿರುಗಿ)...ಸಿದ್ಧವೇ... ಶಾಸ್ತ್ರಿಗಳೇ ?

(throws out the fag end in his hand)

ಶಾಸ್ತ್ರಿ : ಸದ್ಭಾನೇ !! (ಅಭಿನಯಪೂರ್ವಕ, ರಾಗವಾಗಿ) ನೋಡಿ !

(Loudly)	(Softly)
ಸವಿಧಮಾದಾಯ	ಅವುಗಳಲ್ಲಿ ಒಂದು ತಗೊಳ್ಳೋದು ಕೈಗೆ
ಮುಖೇನಿಕ್ಷೇಪ್ಯ	ಬಾಯಲ್ಲಿಟ್ಟುಕೊಳ್ಳೋದು
ವಾಯುಮಾಕರ್ಷತಃ	ಘಾಳಿ ಎಳೀತಾನೇ ....
ಅಗ್ನಿಮ್ಸ್ಪೃಶಾವ್ಯ	ಬೆಂಕಿ ತಾಕ್ಸೋದು...........
ಧೂಮಮುಚ್ಛಾವ್ವಸ್ಯಾ	ಹೊಗೆ ಎಳೆದು ಹೊರಗೆ ಬಿಡೋದು...
ಇದಂ ತಬಾಕೂ ಪತ್ರ	ಈ ತಂಬಾಕು ಪತ್ರೋತ್ಪನ್ನ
ಜೋಧೂಮಃ	ಹೊಗೆಯು
ಅಗ್ನಯೇ ಇದಂ ನಮಮ	ನನಗಲ್ಲ !, ಇದನ್ನು ಪಾಕಶಾಸನನಿಗೆ
ಅಗ್ನ್ಯೆರಿಸ್ವಾಹಾ !	ಅರ್ಪಿಸಿರುತ್ತೇನೆ.

[Narayana enters with a silver salver loaded as per ...'s orders.]

ಕಿಟ್ಟು : (Taking the salver and Emptying its contents into the Sastry's readily spread shawl) ಶಾಸ್ತ್ರಿಗಳಃ ! ಇದು ಒಂದು ... ...ನಿಮ್ಮ Genius ಗೆ ! ಲಕ್ಷ ಶ್ವೇತ......ಅಂದರೆ......ನಮ್ಮನ್ನಾಳುವ ಜಯರಾಜ ಸಾಮ್ರಾಟರ ರಜತ ಪ್ರತಿಮೆಗಳು ಒಂದು ಲಕ್ಷ...ಸಿಗೋ Noble prize ಊನೂ ತಮಗೇ ... ! ಸಧ್ಯ ಶ್ರಾದ್ಧಾನ Express speed ನ...mail train ಹಾಗೆ ಅರ್ಧ ಘಂಟೇಲಿ ಮುಗಿಸಿ ಬಿಡಬೇಕು...ಈವತ್ತು ! ಆ...?

ಶಾಸ್ತ್ರಿ : ಟ್ರೈನು !!...ಚನ್ನಾಗಿಧೆ ! ನಮ್ಮ ಕ್ರಮದ ವಾಯುವೇಗ ಮನೋವೇಗದ ಮುಂದೆ......ಟ್ರೈನೆಲ್ಲಿ ? ಮೋಟಾರೆಲ್ಲಿ ? ಏರೋಪ್ಲೇನುಗಳು ತಾನೆ ಎಲ್ಲೀ ರಾಯ್ರೆ ?

ಕಿಟ್ಟು : ಅದ್ಸರೀ ! ಈಗ ನೋಡೀ ! ದೊಡ್ಡ ಸಾಹೇಬರಿಗೆ ಕೋರ್ಟ್ ...ನನಗೆ cricket matchoo ! ಒಂದು ಯಾವ ಲೌಕೀಕಕ್ಕೆ ವೈದೀಕದ ಕ್ರಮಾನ ಅಟ್ಟ್‌ಮೊ... ಕೋರ್ಟಿಗೂ ಕಷ್ಟ !...ಕ್ರಿಕೆಟ್‌ಗೂ ಕಷ್ಟ ! ಅದ್ರೂ ಒಂದ್ಸೆ ನೋಡೇಬಿಡ್ತೀನಿ. (suiting action to word) **Bat ಏವ್ ಧೃತ್ವಾ, Bowlera ಮವಲೋಕ್ಯ, ದಾ...ಲ್ ಸಾಚನೇನ, Cricket ಕಂದುಕವ್ Boundary ಪ್ರಾಂತ್ಯವ್ ಪ್ರತಿ ಪ್ರಚೋದಯ್ಯಾಮಿ ಹ್ಯಾಗೆ....ಶಾಸ್ತ್ರಿಗಳೇ...ಪ್ಸರ್ವಾಇಲ್ವೇ ಶಿಷ್ಯಾ ?**

ಶಾಸ್ತ್ರಿ : ಸ್ವಾಮಿ ! ನಾನೇನ್ ಹೇಳ್ಲೀ ? ಸಿಂಹದ ಹೊಟ್ಟೇಲಿ ಸಿಂಹದ ಮರೀನೇ ಹುಟ್ಟೋದು ! ಅಲ್ವೇ ? ಬನ್ನಿ ! ಬೇಗ ಮುಗಿಸೋಣ !

ಕಿಟ್ಟು : ಹಾಗಾರೆ **roaring successoo** ಅನ್ನಿ...ನನ್ನ ಕ್ರಮ ! ಆ ? [Sastry Exits nodding "ಆಹಾ" !] ಸರಿ ! ಈ ಸಿಗರೇಟು ಲೌಕೀಕದ ವೈದೀಕ ಮುಗಿಸೇಬಿಡೋಣ !... **ಜೀರ್ಣಂ....ಕಶ್ಮಲದೂಷಿತ ಮಿದಂ ದಗ್ಧ ತಬಾಕು ಪತ್ರ ಸಮಿಧವಶಿಷ್ಟಂ, ವಿಸರ್ಜಯ್ಯಾಮಿ** [ಸಿಗರೇಟಿನ ಕೊನೆಯ ತುಂಡನ್ನು ಹಿಸುಕಿ ಬಿಸುಟು ನಿಷ್ಕ್ರಮಣ "C"]

—ಪರದೆ—

ದೃಶ್ಯ ೨

A STREET

[Discovered walking "R" & "L" ಸರೋಜ and her class mate Miss ವೈಢೂರ್ಯಂ, both dressed in a modern up-to-date 'Style' with vanity bags, parasols etc.]

ಸರೋಜ : ಹಯ್ಯೋ...Miss ವೈಢೂರ್ಯಂ !...ನಮ್ಮ so called orthodoxy ಏಲ್ಲಾ...ಏರೀ bluffoo? From times immemorial priestsoo ಹ್ಯಾಗೆ each person's individuality ನ........efface ಮಾಡಿ ತಮ್ಮ ಬಸಿರು fill ಮಾಡ್ಕೋತಾ ಇದ್ರೋ in manner like wiseಊ ನಮ್ಮ priest-hoodoo, 'hood' ಏನೂ 'craftoo', ಒಂದು professionoo ! ನಿಮ್ಮ religious priest-hood ನಲ್ಲಿ rules and regulationsಉ stiff and rigid as iron ಆಗಿದ್ರೂ, ಒಂದು limittoo, ಒಂದು ಮಿತಿ, ಒಂದು moderation, ಒಂದು tolerance for other faithsoo, human sympathy, ಭೂತದಯೆ, blindness to caste and class distinctions ಇದೆ ! ನಮ್ಮ Brahmin Caste ಓ, stiff ಅಲ್ಲಾ pliantoo ! rigid as iron ಅಲ್ಲಾ .....supple as steeloo ! ನಮ್ಮ Brahmin priestಓ, priest hood ಓ...mostly ritual and leastly spiritualoo. ಈ rituality ಬಲು elasticoo ; religionoo...resilientoo ; Adjustable according to customers, clients, and patronssoo ! and also variableಊ remuneration ಪ್ರಕಾರ ! ಈ ಕಾಲದ I mean modern, remnants and oldments surviving of atrophied religions descended from ancient selfless ಋಷಿಗಳು !.....ಈಗಿನ techniqueಏ ಬೇರೆ ! old ಮಂತ್ರಾಸ್ ಚಾರ್ಸ್ಸೂರು ಬಿಡ್ಡೆ ಸಾವಿರ ವರ್ಷಕ್ಕಿಂದೆ ಹ್ಯಾಗೋ ಹಾಗೇನೇವೇ ಈಗ್ಲೂವೆ ಒಪ್ಪಿಸ್ತಿದ್ರೂನೂವೇ, in the implementing of these mantras for practical society lifeಉ,... ಒಂದೊಂದು ಮಂತ್ರಾನೂ......is corrected, checked, tuned up and garbed with suitable tantras...to pan out...priest ನ ಹೊಟ್ಟೇಗೆ ಬೇಕಾದ where withal ನ ! ಬಡವರು, **bullied by priests into brass bound orthodoxy ! ...ಭಾಗ್ಯವಂತರ ಮನೇಲಿ ಅದೇ priestಉ condoning heart-approving religion-breaking heterodoxy !** ಭಾಗ್ಯವಂತನ ಮನೆಗಳಲ್ಲೋ....ಭಾಗ್ಯ ಸಂಪಾದ್ಸೋ, ಶೇಖರ್ಸೋ, ಗಲಾಟೇಲಿ brahminismಉ ಹಿಂದ್ಬಿದ್ದಿರುತ್ತೆ. ಮಧ್ಯಾನ್ನ ಕೋರ್ಟಿಗೆ ಹೋಗ್ಲೇ ಬೇಕಾದ ಮುನ್ಸೀಫರೂ ಲಾಯುರಿಗಳ್ಗೆ, ಮಧ್ಯಾನ್ಹಕೆ ಮರೆತ್ಹೋಗತ್ತೆ ! Early morning town inspection ಓ...ತರ್ಕಾರಿ ಸೌದೆ ಕೊಂಡ್ಕೊಂಡ್ ಬರೋದೋ...ಇನ್ನು ಸಾಯಂಕಾಲ Club ಓ, ಗಿಜ್ಸೋ, ಸಿನಿಮಾನೋ, ನಾಟ್ಕಾನೊ, social duties discharge ಮಾಡೋ ಸಂದರ್ಭದಲ್ಲಿ ಸಂಧ್ಯಾವಂದನೇಗೆ ಬಿಡುವಿರೋದಿಲ್ಲ ! ಆದ್ರೂ...ಅಪ್ಪಂದೋ...ಅಮ್ಮಂದೋ ಅಜ್ಜೀದೋ ಶ್ರಾದ್ಧದ ದಿನ...ರಾಮನೋ ಕೃಷ್ಣನೋ ಹುಟ್ಟಿದ್ದಿನ......ದೊಡ್ಡ ದೊಡ್ಡ ಆಚಾರ್ರುಗಳ ಪುಣ್ಯದಿವಸ...ಇವುಗಳ್ನೆಲ್ಲಾ, ಭಾಗ್ಯವಂತ್ರು ಮರತ್ರೂ...ಶಾಸ್ತ್ರಿಗ್ಳು, ಸರ್ಕಾರೀ Calendarಗಳೂ ಜ್ಞಾಪಿಸಿ..... well to do brahmin families ನಲ್ಲಿ ಈಗ್ಲೂ ಕೂಡ ಇರೋ vestigial spider-thread religious beliefsನ rudiments ನೆಲ್ಲಾ......ಶಾಸ್ತ್ರಿ ಪೊಸ್ಟ್ರು.....ಪಗ್ಗ ಮಾಡಿ, ಮನೇಲಿ ಅಜ್ಜಿಗಳಿಗೋ ಅಮ್ಮಗಳಿಗೋ ಇರೋ religious

superstition ಅಂಥೋ: ಪಾತಾಳ ಗರುಡನ ಇದಕ್ಕೆ ಸಿಕ್ಕಿ, ಬಿಡಿ ಬಿಡಿಯಾಗಿ ಬರಡಾದ ಭಂಡಾರ ಅಂಥೋ: ಭಾಮೀದಿ ಇಳೀ ಬಿಡ್ತಾನೆ! ಇನ್ನು ಅವರೋ...ತಿಂಗಳು ತಿಂಗಳು ಗಟ್ಲೆ... ಶ್ರಾದ್ಧ...ತರ್ಪಣ...ರಾಕ್ಷಸ ಪಾಡ್ಯಮಿ......ಬಳ್ಳಿಯ ದೇವರ ಬಿದಿಗೆ....ತ್ರಿಪಕ್ಷ್ಯ ತದಿಗೆ... ವಿನಾಯಕನ ಚೌತಿ...ಸಪ್ತ ರುಷಿಗಳ ಪಂಚಮಿ...ಸುಬ್ರಹ್ಮಣ್ಯ ಷಷ್ಠಿ...ರಥ ಸಪ್ತಮಿ... ಕೃಷ್ಣಾಷ್ಟಮಿ........ಮಹಾಕಾಳಿ ನವಮಿ....ವಿಜಯದ ದಶಮಿ... ದೊಡ್ಡ ಏಕಾದಶಿ...ಕ್ಷೀರಾಬ್ಧಿ ದ್ವಾದಶಿ....ನಾಗ ತ್ರಯೋದಶಿ....ನರಕ ಚತುರ್ದಶಿ......ಮಹಾಲಯ ಅಮಾವಾಸ್ಯೆ....ಗೌರೀ ಪೌರ್ಣಮಿ...ಹೀಗೆ ಮುನ್ನೂರರ್ರವತ್ತೈದು ದಿನದಲ್ಲಿ ವರ್ಷವರ್ಷಾ ಮುನ್ನೂರು ...... ಯಾವದಾದ್ರೂ ಒಂದು ceremony ಏರ್ಪಡಿಸ್ಕೊಂಡ ಈ ಶಾಸ್ತ್ರಿಗಳಿಗೆ ನಮ್ಮ ಸುವರ್ಣ ಸುದರ್ಶನ. every year is ರಜತ ವೃಷ್ಟಿ a recurring silver Jubilee for him !; ಅಯ್ಯೋ ! ? ಇನ್ನು ಇವಳ್ದು....victim ನ, ಕೂತ್ಕಡೇನೆ ಕೂತ್ಕೊಂಡಾಗ ಮಂತ್ರ ಸ್ನಾನ !...ಅಂದ್ರೇ—ಇವನು ಮಂತ್ರ ಹೇಳೋವಾಗ ಇವನ ಬಾಯಿಂದ ಹಾರೋ ಎಂಜಲ "ಮುಂಗಾರು" ಪ್ರಕ್ಷಾಳನ ಬಿಟ್ಟು ಬೇರೊಂದ್ ನೀರೂ ತಾಕ್ದೆ—ಗಂಗಾ, ಯಮುನಾ, ಕೃಷ್ಣಾ, ಗೋದಾವರೀ, ಕಾವೇರೀ, ಹೇಮಾವತೀ, ಲೋಕಪಾವನೀ, ಹೀಗೆ ಅಷ್ಟು ನದಿಗಳನ್ನೂ ...... alluvial geography refresh ಮಾಡಿದ memory prizeಊ ಕೊಟ್ಟನೆ ! at 8 annas per river recalled !......! ನದಿ ಗೆಂಟಾಣೆ ಲೆಕ್ಕ ! ಒಟ್ಟು ......ರೂಪಾಯಿ ಕ್ಷೌರ ಏಕ್ಟಿಂಗೆ ! ಅಷ್ಟಾದರೂ ಇವನಿಗೆ ಕ್ಷೌರವಾದ ಮುಡ್ಡು ...... ಶ್ವೇತ ಸ್ನಾನಾ ! ರೂಪಾಯಿನಲ್ಲೀ ! ಅಯ್ತೋ !!

ವೈಢೂರ್ಯಂ : Dear ಸೀಮೆಟಿ ಸರೋಜಾದೇವೀ !......truthoo ಸತ್ಯ... ಅಲ್ಲವೇ...religion ನಿಗೆ basisoo ?

ಸರೋಜ : ಹೌದು ! **truth ಏ basisoo !, theoretical, theoritical, plinthoo !** ನಮ್ದೇನು...ನಿಮ್ದೇನು...**of all religions in the world!!** But, ನಮ್ಮ religion ನ್ನಲ್ಲಿ, in practiceಊ, ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಂ ॥ ಪ್ರಿಯಂಚ ನಾನೃತಂ ಬ್ರೂಯಾತ್ or beware of the world's opprobrium ಅಂತಾ—ನಿಜಾನೂ ಹೇಳ್ಬೇಕು ; **But** ನಿಜಾ ಹೇಳ ಕೈನ್ಲಿ ಕೋ **ನಾಲ್ಕಾಕೇನೂ ಕಳ್ಕೋಬಾರ್ದು !........** ಅಂಥೋದೇ principleಊ !! ಇನ್ನು ನಮ್ಮನೇಗೆ....ನಮ್ಮ mother's ceremony ಈವತ್ತು ! ...presided over by ನಮ್ಮ family priestoo ! Practical demonstration ಕೊಡ್ತೀನಿ......ಆ aforesaid assertions ನ uphold ಮಾಡೋಕೆ ! (ಗಟ್ಟಿಯಾಗಿ) In short, I shall prove, **"Greed ! thy name is 'orthodoxy'"**

[ಇಬ್ಬರೂ ಎಡಗಡೆ ನಿಷ್ಕ್ರಮಣ]

—ಪರದೆ—

ದೃಶ್ಯ ೩

[The curtain rises with the door 'C' wide open disclosing the priest and his two confreres sitting, dining before banana leaves, and served by Narayana. Kittu is standing before them reiterating satstry's, "ಯಥಾ ಶಕ್ತಿ, ಸಾವಕಾಶವಾಗಿ ......ದಕ್ಷಿಣೆ" !—

At this moment ದೊಡ್ಡ ಸಾಹೇಬ್ರು enters with a cosmopolitan crowd of half a dozen, suited, booted, hatted or turbaned satellites.]

ಸಾಹೇಬ್ರು : Come in De Gama ! ಅಯ್ಯೋ ಪ್ಯಾರ್ ಸಾಹೇಬ್ !... ತಷ್ರೀಫ್ ಲಾಯಿಯೆ ! .....ಬಸ್ಸಿ ಬುಶ್ಕೆ ಪ್ಹೋರೆ!......ರಾಂಜೀ ನಾಯ್ಡುಗಾರು...ಸಂಕೋಚದೋಯಿ ಮನಿಂಚ್ಕೋ ? !

[Soon as the Gentlemen are within, ಸಾಹೇಬ್ರು approaches Door 'C', pops in his head and taking a survey of the happenings inside......sums up in a complacent smiling fashion.]

Good !...good !...very goodoo ! ಹಾಗಾರೇ...ಬಂದ guestsದ ಬರೀ ಹೊಟ್ಟೇಲಿ ಕಳಸ್ಬೇ !,—ಈ too late for coffee and too early for meals timeನಲ್ಲಿ......"ತೃಪ್ತೋಸ್ತು :" ವಡೆಗಳರತ್ತ್ವ......ಎಳ್ಳುಂಡೆಗಳೂ ಸಜ್ಜಿಗೇಸ್ Etc., (To Narayana) ನಾರಾಯಣಾ ! ಒಂದಷ್ಟು ವಡೆಗಳು ಉಂಡೆಗ್ಳು ಇತ್ಯಾದಿ ಭಕ್ಷ್ಯ !' ಬೆಣ್ಣೇನೊ ...... ತುಪ್ಪಾನೋ...ಜೊತೇಗೆ ಚಟ್ನಿ. ಅರ್ಧ dozen cupsoo ಸಾಸರ್ಸೂ...ದೊಡ್ಡ ಬೆಳ್ಳಿ ಚೊಂಬು ಪಾಯ್ಸಾ ! ಮೋಲಕ್ಕಳ್ಸೂ ! ಆ ?...ಯಾರೋ ಅಲ್ಲೀ ?

ಸೇವಕ : (entering) ನಾನು ಬುದ್ದೀ ಜಾಫ್ಫರ್ !

ಸಾಹೇಬ್ರು : ಬಾವರ್ಚಿ ಸಾಮಿ ಜೋದೇತೇ ಹೈ...ಅದ್ನ ಮಹಡೀಗೆ ಪಠ್ಸೊಂಬಾ ! ಆ ?......(Jaffer bows : ಜೀ ! ಹಾಂ !...ಸಾಹೇಬ್ರು, again addresses his friends) ನೋಡೀ Gentlemen ! Civilisations may come and civilisations may go ; services might go and retirements may come. But ಬೊಮ್ಮನ್ ಶ್ರಾದ್ಧಾ's and ceremonies must go on for ever !! ಕಿಟ್ಟುವನ್ನು ತೋರಿಸುತ್ತ) My young hope-fulloo...My son, you know !......Duffer...at schooloo dutiful at homeಊ ! deputes for me as proxy......ನಮ್ಮ ಪಿತೃ's ಗೆ ಪಿಂಡಾ'sನ remit ಮಾಡೋ ceremonies ನಲ್ಲಿ ......through of course the unavoidable commission agency of the priestoo coaxed into good humour for playing the entrepreneur between Gods and men !,...ಹೊಟ್ಟೆ ತುಂಬಾ ತಿನ್ನಿಸಿ, ಬೆಚ್ಚಗೆ ಮಾಡಿದ ಕೈಯಿಂದ ಈ priestsoo...ಸಾಪಿಟ್ಟ ಪಿಂಡಾsನ ಪಿತೃಗಳ್ಗೆ ತಲಪಿಸ್ಬಿಡ್ತಾರೆ...Come up ! (leads the way up and his following follows).

ಶಾಸ್ತ್ರಿ : (stepping out of 'C') ಶಾಸ್ತ್ರಿಗಳೇ...ಅರ್ಧ ಕ್ಷಣ ಬಿಡುವು ಉಂಟೇ ? ....ಆ ?

ಕಿಟ್ಟಿ : (From inside) ಅರ್ಧವಾಯ್ತು......ಮಡಿಕಟ್ಕೊಂಡಿದ್ದೀರಾ...... ಆದ್ರಿಂದ........"ನಮಃಧಮಾದಾಯ" ಇತ್ಯಾದಿ "ಕ್ರಮ" ಮರೀಬೇಡಿ !!

ಕಿಟ್ಟಿ : ಸರಿ, ಶಾಸ್ತ್ರಿಗಳೇ ! (walking up to the mid-ground and extracting a cigarette from a silver case hither-to tucked away in his waist) ನಾರಾಯಣಾ ! ದೀಪ, ಧೂಪ...at least ಮುಖಕ್ಕೆ ಸ್ವಲ್ಪ... ..ಬೆಂಕಿ ತೋರ್ಸು !

[Loudly shoutiug "ಬಂದೆ ರಾಯ್ರೆ"! ನಾರಾಯಣ enters and holds a flaming sacred ನೀರಾಂಜನ at which ಕಿಟ್ಟು lights the cigarette and mutters softly "thanksoo! ...... but ಬೇಗ ಆ ಬ್ರಾಹ್ಮಣನ್ನ ರವಾನ್ಸ ಬಿಟ್ಟಾಕು; matchಗೆ ಹೊತ್ತ್ಯಾಯ್ತು!". ನಾರಾಯಣ "C" exits and re-enters with two huge salvers, the one holding half a dozen tumblers of ಪಾಯಸಮ್, and the other, plates of ವಡೇs ಸಜ್ಜಿಗೇs etc., and hands them over to the waiting Jaffer, who carries them up via Door "L". As the fag-puffing ಕಿಟ್ಟು's eyes sweep over 'R'......his face lights up]

ಕಿಟ್ಟು: ಓ ಹೋ ಹೋ!...ಇದೇನು sudden inundationoo! invasion of a galaxy of beauties ಓ......ಇಲ್ಲ bevy ನೋ ಅಕ್ಕಾ!...ಯಾವುದು appropriate collective nounನೋ?! Logicoo ನನ್ನ speciality! ಬಿಟ್ಟರ್ ನಿಂದು! ಯಾರದೂ......ಜೊತೇಲಿ? (as the two enter) ಓಹೋ! ಸಿಸ್ಟರ್...Miss ಜಾಜ್ವಲ್ಯಂ?!

ವೈಢೂರ್ಯಂ: Excuse me!...ವೈಢೂರ್ಯಂ...ನನ್ನ nameಊ!

ಕಿಟ್ಟು: Forgive me!...ವ್ಯತ್ಯಾಸವೇನು? What is in a nameಊ!? "A Gem—like you—shines as bright by any other nameಊ." ಹೋ! ಸತ್ತ! Shakespereಊ! ಅಕ್ಕಾ!. Literature ನನ್ನ speciality! Gemಉ, crystallised......carbon......ಅಲ್ಲ...matteroo mere inorganic matteroo! ಅಲ್ವೇ? (putting out his hand) Anyhow! welcome to our homely hovel!!

ವೈಢೂರ್ಯಂ: ನಿಮ sister ಏಳಿದರು...to-day...ನಿಮ ಟಾಯಿಯ annual...... ceremony ಡಿನಾಂತ! ಅಲ್ಲವೇ?......therefore ನೀವು ಮಡೀ ಅಲ್ಲವೇ? shake hands ಮಾಡುವುದು...ಪಾಪ....ಅಲ್ಲವೇ?

ಕಿಟ್ಟು: ಪಾಪ!, ಹೌದು! under normal circumstancesoo! ಪಾಪ! But ಈಗ abnormaloo in point of my clothoo! ನಾನು ಉಟ್ಕೊಂಡಿರೋ ಮೊಗಟ silkoo...therefore ಸದಾ ಮಡಿ. prove ಮಾಡ್ತೀನಿ......ಬೇಕಾದ್ರೆ! First of all,...Logicಉ ನನ್ನ speciality...though ಡುಮ್ಕಿ in other subjects in Intermediate......! ನಿಮ್ಮ subjectoo Logicoo for M.A. Honoursoo! **But mannersoo before M.A. Honoursoo!** ಕ್ಷಮಿಸಿ! unconscious Punoo!......Coming back to mannersoo,......ಕೂತ್ಕೊಳ್ಳಿ! (points out a chair; Miss ವೈಢೂರ್ಯಂ sits down) ನಮ್ಮಕ್ಕನಿಗೆ manners ಮರೆತ್ಹೋಯ್ತೂಂತ......menಗಿರೋ chivalry...womenಗೆ ಇಲ್ಲ! Modern society civilisation ಹೇಳ್ತೀನಿ...manನಿಗೆ womenನ್ನಿನ weal and woe ನೋಡ್ಕೋಳೋಕೆ fellow manನಿಗಿರೋ ಮುತುವರ್ಜಿ fellow womanನಿಗಿಲ್ಲ! ನೀನೂ ಕೂತ್ಕೋ ಅಕ್ಕಾ!! ನೋಡಿ! ಅದ್ನೂ ನಾನೇ ಹೇಳ್ಬೇಕು!!

ಸರೋಜ: (to ವೈಢೂರ್ಯಂ) ವೈಢೂರ್ಯಂ! ನನ್ನ brotheroo... chatter-boxoo...of the family! But his heart is as soft as his brain!...

...... Intermediate Examinations ಗೂ ಇವನ್ದೂ Three years of correspondence ಆಮಿತು ! Still, Examinersಗೆ convince ಆಗ್ಲಿಲ್ಲ, the cogency of my brother's Logicoo !! ಇವನ್ನ ಕೇಳಿದ್ರೋ...explanationಉ......hand-writing badoo ! ನಮ್ಮಜ್ಜಿ explanationನೋ...Head writingoo ..... Fore-head writingoo......worseಊ ಅಂತ !! ಏತನ್ಮಧ್ಯೆ ಯಾವ subject ಎತ್ತಿದ್ರೂ ಅದಕ್ಕೆ ಇವನು ತರೋ Logicನಲ್ಲಿ......ಹತ್ತಿರೋವ್ರೆಲ್ಲರಿಗೂ......head acheಊ! Thank God, for a change ! ಹೊಸ victim ನೀವು ಈ ಹೊತ್ತು ! white is really blackoo and black is really whiteಊ ಅಂತ prove ಮಾಡೋದಲ್ದೆ both are really pinkoo ಅಂತ ವಾದಿಸಿ ಸಾಧಿಸ್ತಾನೆ !! I am going in, to change ! Try if your brain......ನಮ್ಮ ಕಿಟ್ಟೂ's onslaught of logicನ ......ತಡ್ಕೊಂಡು......lunatic asylumನ ನೀವು ತಪ್ಪಿಸ್ಕೊಳ್ಳೋದು ಸಾಧ್ಯವೇಂತ!,... though he should be there himself ! (ನಗುವಳು)

ಕಿಟ್ಟು : ಸಾಕಕ್ಕಾ !...please disappear !

ಸರೋಜ : ಬಂದೆ ! in a jiffy !! [Exit]

ಕಿಟ್ಟು : (ತಿರುಗಾಡುತ್ತ) ನಮ್ಮ sister's ಮಾತ್ನ mind ಮಾಡ್ಬೇಡಿ ! ನನ್ನ mad ಅಂತಾಳೆ ... ...ಇರಬಹುದು. But she is madderoo ! ಅವಳ madness more dangerous, because methodical madnessoo !...ನೋಡೀ ! Logic both of usಗೆ speciality ! ನಮ್ಮಕ್ಕಾ dogಗೂ dogಗೂ "ಛೂ" ಬಿಡೋ ಹಾಗೆ... ನಮ್ಮಿಬ್ರದ್ದೂ ಒಂದು logical fightಗೆ commit ಮಾಡ್ಬಿಟ್ಟೋಗಿದಾಳೆ, ತನ್ನಲಂಕಾರ ಬದಲಾಯಿಸೆ ನೆಪ ಇಟ್ಕೊಂಡು !...**Dogsoo** ಅಂದೆ...brings me back to our **bone of contention** ! ಮೊಗ್ಗಾ ಉಟ್ಕೊಂಡು...mother's ತಿಥೀನ halfಅಂದhalf ಆಗಿ ಪೂರೈಸಿ straight from college ಬಂದ non-brahmin ladyಗೆ shake hands ಕೊಡೋದು ಮಡೀನೇ ? ಇದಲ್ವೇ issue ? ನೋಡೀ, Logicalಲ್ಲಾಗಿ ಒಪ್ಪಿಸ್ತೇನೆ, ನನ್ನ Silk is ಸದಾ ಮಡಿ ! its ಮಡಿness is therefore...ಮೈಲಿಗೇ proof... ಎಂಜಲ್ proof and so...non-brahmin's contact, conversation etc., proofoo ! also, ಕೇಳಿ : God is goodoo...ಒಪ್ಪೀರಾ ? Rightಓ ! Therefore everything that god does must be goodoo ! ಒಪ್ಪೀರಾ ?...... Rightho !....ತಿರುಗೂ ಬನ್ನಿ : God made all creatursoo......Bible ಹೇಳತ್ತೇ ಅಲ್ವೇ ? But Brahmins are also creaturesoo...plain ಅಲ್ವೇ ? Therefore again. God made Brahmins also.........Again plainoo ?......... ಆಯ್ತೇ ??

But God being goodoo every thing that God makesoo must be goodoo ! Therefore men or worms, God ಮಾಡಿದ್ದೆಲ್ಲಾ Goodoo !

But silkoo was also a worm at birthoo ! Therefore silkoo made by silk wormoo which again was made by good godoo must also be goodoo ! Again. ಮೈಲ್ಗೆ is badoo !......ಮಡಿ is goodoo! Therefore silkoo already proved to be goodoo must also be always ಮಡಿ ; equals goodoo...and,...**always** in Englishoo is the

same as "ಪದಃ" in ಸಂಸ್ಕೃತ—sacred language್ದ (triumphantly) Therefore **Silkoo ಪದಾಮುಡಿ!**...Logicoo...ಅದು, Subject್ [Kittu's eyes settle on Miss Vaidhuryam's wrist-let watch and he starts aghast] ದೇವ್ರೇಗತಿ ! ಹತ್ತೂವರೆ. [illegible] [illegible] [illegible] [illegible] ಬಿಟ್ಟು...ನಮ್ಮ princeಪಾಲು ಹೇಳೋ "flannelled fool" in field[illegible] [illegible] ಆಗ್ಬೇಕು...ಔಟೋಂಬಾಕ್ ಹನ್ನೊಂದು ಘಂಟೆಗೆ: therefore [illegible] disappearance[illegible] ನೀವು excuse ಮಾಡ್ಬೇಕು ! (handing her an illustrated magazine from on top of a tea-poy near by) [illegible] enjoy [illegible]......[illegible]teroo (turns towards 'R') ...... ಅಕ್ಕೋ. ಇದೇ [illegible].......in fresh war-paintoo ? ಅಕ್ಕ ! take over charge ನಮ್ಮ Gem of our lady friend್ !

[exits 'C']

ಸರೋಜ: (Sailing in,...in a salmon pink saree and blouse to match her creeper-like ivory arms set off by jet bangles: her wavy mid-night woman's crowing glory playing foil to the snow and gold jasmines and chrysanthemums in her coiled plait) Still alive ! and sane ! ವೈಢೂರ್ಯಂ ?

ವೈಢೂರ್ಯಂ : ಯಾಟಕ್ಕೇ ?

ಸರೋಜ : ಯಾತಕ್ಕೇನೂ ?...ನನ್ನ...impossible. irrepressible brother —usually—ಒಂದು ನಿಮಿಷ್ದಲ್ಲಿ bores the most patient [illegible] to death or dementia !

ವೈಢೂರ್ಯಂ : ನಿಮ Brother nice boy, but just ಸ್ವಲ್ಪ eccentric— Peculiar...ಅಲವೇ ?

ಸರೋಜ : **Eccentricity**, ಅವನ peculiarity ಅಲ್ಲ......**family traitoo! ಕಿಟ್ಟೂನೇ ಹೇಳ್ದಾಗೆ...madness !. but...... methodical madness ! runs in our family !**

ವೈಢೂರ್ಯಂ : Shall I take my leave now ?

ಸರೋಜ : Not at all...just ...ಐದಾರು ನಿಮಿಷಾನ್ !.......**You will see the finale of our circumspect adherence to ceremony without spirito, sanctimony without sanctity, a demonstration of religion-ising without ಎಳ್ಳಷ್ಟೂ—ಸಂಬಂಧ—of even the essence of real religion; ಈಗಿನ 20th Century A. D. Brahminic activities ಎಲ್ಲಾ a childish pantomimic re-hash of the genuine rituals of Gods-inspired Hinduism which took its genesis long before 20th century B. C. !! ;** But alas !......now **expounded and exploited by greed-obsessed professional priests with no faith in their own preachings which they do NOT practise !** (with a heavy sigh drops into a settee)

ವೈಧೂರ್ಯಂ : ನೀವು ಚರ್ಚು ..argue ಮಾಡಿದರೂ...considering that ನಮ್ಮ Lord Christಅವರ Commandment **"Thou shalt not tell an untruth"** ಎಂಬುವ **"ಸತ್ಯ" is ಧರ್ಮ**...is also your ಧರ್ಮ...ಅಲ್ಲವೇ ? !

ಸರೋಜ : (interrupting) ಹೌದು..."ಸತ್ಯಾನ್ನಪರೋಧರ್ಮಃ" ಅಂತ್ಲೀನೇ ಅದು !...**but...but...please go on !...**

ವೈಧೂರ್ಯಂ : **ಈ universal truth for all religions**...ನಿಮ್ಮ **religion**ಗೂ **foundation** ಆಗಿ ಇರುವಾಗ...ಅದು ಈ **condition**ಗೆ ಈಗ ಬಂದಿರುವುದಕ್ಕೆ **cause** ಏನು ? ನಿಮ್ಮ **caste system**ಏ ಅಲ್ಲವೇ ?

ಸರೋಜ : **CASTE**ಉ,...**SYSTEM** ಅಲ್ಲ ! **Divinely deliberated organizationoo ! Caste** ಅಂಬೋದು **society**ಯ **well-being**ಗೆ ಅಂತ **conceive** ಮಾಡ್ದ **planoo !, organization of society !!** ಸಿಸ್ಟಮ್ ಅಲ್ಲ !

ವೈಧೂರ್ಯಂ : ಯಾರು...ಹೀಗೆ...castesನ organize ಮಾಡಿದ್ದು ?

ಸರೋಜ : ಕೇಳಿ ಹೇಳ್ತೀನೆ ! ನಿಮಗೆ Bible ಹ್ಯಾಗೆ sacredಓ ಹಾಗೆಯೇ ನಮಗೆ, ನಮ್ಮ ಭಗವದ್ಗೀತೆ! ......ನಮ್ಮ Lord Krishna's songoo. ಭಗವದ್ಗೀತೇಲಿ ಹೇಳಿರೋದೆಲ್ಲಾ ನಮಗೆ Gospelloo. Our Lord says :

"ಚಾತುರ್ವರ್ಣ್ಯಂ ಮಯಾಸೃಷ್ಟಂ" 'Ts I that brought about four castes !, ಅಂತ !...societyನ caste caste ಆಗಿ ವಿಂಗಡಿಸಿದ್ದು...Lord Krishna!!

ವೈಧೂರ್ಯಂ : ಹಾಗಾದರೆ...**Lord Krishna**......ನೀವು ಹೇಳುವ ಹಾಗೆ........ **Lord of all the worldsoo, caste system**ನ ವಿಂಗಡಿಸಿದ್ರೆ, ಯಾಕೆ **caste system...or organization...only peculiar to India ?** ಮಿಕ್ಕ ದೇಶಗಳಲ್ಲಿ ಇಲ್ಲವಲ್ಲಾ ?

ಸರೋಜ : ಅದೇ **difference** ಊ, **"Man made Local, Communal, Provincial, Insular, Peninsular systems"** ಗೂ... **"God made.... universal ... caste organization"** ಗೂ,......ಇರೋ ವ್ಯತ್ಯಾಸ ! **CASTE ORGANIZATIONOO,......ACCORDING TO THE** ಭಗವದ್ಗೀತ, **OBTAINS TO-DAY OF ALL DAYS IN EVERY PART OF THE WORLD, EXCEPT IN INDIA !** Explain ಮಾಡ್ತೀನೆ ಕೇಳಿ :

Every body-politicನಲ್ಲಿ, **"The Greatest good of the greatest number"** ಅಂಬೋ ನಿನ್ನೆ ಮೊನ್ನೆ "Benthamite" Cryಇ, is but a feeble echo of the "ಸರ್ವೇಜನಾಃ ಸುಖಿನೋಭವಂತು" ..... **The Vedic dictum that reverberated from end to end of this Earth!** The basis of the relation of the individual entity, ವೈಧೂರ್ಯಂ!, to the Communal entirety of a gathering of gregarious man...**is,** ಬೇರೆ ಏನು ? ...... **to so use the talents that god has given him for ITS good, in requital of his receiving the benefits from the community as an approved unit thereof!!** ಇನ್ನು ಏನೂ ಇಲ್ದೆ ಬರೀ Brainಏ ಇದ್ರೆ ಬ್ರಾಹ್ಮಣನಾಗಿರ್ತಾನೆ....... Brainಗಿಂತ Muscles ಇದ್ರೆ ಕ್ಷತ್ರಿಯನಾಗಿರ್ತಾನೆ.......

ಇದರ ಇಲ್ಲದೂ...........Milton ಹೇಳ್ದಾಗೆ "They also serve who stand and wait...ಅಂತ ಕೃಷ್ಣ ಇದ್ದರೆ ....ಶೂದ್ರನಾಗಿಯೂ .... ದೇವ್ರು ಕೊಟ್ಟಿರೋ talentsನ societyಗೇ ಸಲ್ಸೋದೇ **human's duty!! THUS, NO PARTICULAR CASTE IS SUPERIOR TO ANY OTHER CASTE.** ಈಗ ನೋಡು. with war raging, every **man who fights** ...is a 'ಕ್ಷತ್ರಿಯ' irrespective of his birth: every **priest who prays** that "Well befall the right" and cheers the fighter is a ಬ್ರಾಹ್ಮಣ; **Every** tiller ..sower... reaper...cook... **merchant**...**that provides the "sinews of war"** is a ವೈಶ್ಯ or a ಶೂದ್ರ!! ಇದು Lord Krishna organize ಮಾಡ್ದ ancient organization of casteಊ!! ಈಗ ನಮ್ಮ Indiaಗೇ peculiar ಆಗಿರೊ caste systemoo...for generations...is the subtlety of priest-hoodoo, which, turning into priest-craftoo has dominated the 92 percent of illiterate Indiansoo to the extent of giving the lie to Lord Krishna's organization by making the small detail of Location of Birth in society to determine one's caste, while *THE LORD KRISHNA, HIMSELF A NON-BRAHMIN BY BIRTH, INSTITUTED FOR ALL TIME THE TRUE CRITERION OF REAL CASTE: NOT THE INTEGRANT INDIVIDUAL'S LOCATION OF BIRTH IN SOCIETY!, BUT HIS PARTICULAR VOCATION'S WORTH FOR SOCIETY! NOT ACCIDENTAL BIRTH, BUT INTRINSIC WORTH!!* ಈಗ. ನಮ್ಮ ಟ್ರಿಬ್ಬಲ್ ಡುಮ್ಮಿ ಕಿಟ್ಟಿ........ಜಡ್ಜಿಗಳ ಮಗಾ ಅಂತ "ಯುವ ಜಡ್ಜೂ"ಅಂತಾರ್ಯೇ?........ಗ್ರಾಮದ ಮುನಸೀಫ್ ಕೋರ್ಟ್‌ನಿಂದ ಒದ್ದೋಡಿಸ್ತಾರೆ! But ಅವನೂನೂ ನಮ್ಮ father ಹಾಗೆ **ಓದಿ, ಕ್ವಾಲಿಟೀಸ್, ಕ್ವಾಲಿಫಿಕೇಷನ್ಸ್ ಸಂಪಾದಿಸಿದ್ರೆ,** ಆಗ ಜಡ್ಜು! ರಾಜರ ಮಕ್ಕಳು **"ಯುವರಾಜ"** ರಾದಾಕ್ಷಣವೆ, ... ಜಗದ್ವಂದ್ಯ — ಸತ್ಯಮೂರ್ತಿ—ಮಹಾತ್ಮ ಗಾಂಧೀ ಮಕ್ಕಳು "ಯುವಮಹಾತ್ಮರೆ"? ಈಗ...ಅಲ್ಲ ... ಆದರೆ...ಮುಂದೆ ...... ಆಗ ಬಹುದು: But by SERVICE but not by parentage! So the Lord Sree Krishna's allocation of humans into the various castes: ಚಾತುರ್ವರ್ಣ್ಯಂ ಮಯಾಸೃಷ್ಟಂ। ಗುಣಕರ್ಮ ವಿಭಾಗಶಃ ॥ was based on the qualities and the actions of a human in his or her worth for society with scant respect to the blue-red-yellow or other-hued blood of his forefathers, coursing his viens!!...clearಆ?

ಗೈಢೂರ್ಯಂ: Yes, You have put the subject in a nut-shell!, really!!

ಕಿಟ್ಟಿ: (From inside) Nut-shelloo? ಒಳ್ಳೇ Nut-shelloo? ಆರ್ಧ ಘಂಟೆ ಅಷ್ಟು ಹೊತ್ತ ಲೆಕ್ಚರೂ...ಅಡಿಕೆ nut-shell ಅಲ್ಲ..... ಗಂಗಾಪಾರ Cocoanut-shelloo! ತೆಂಗಿನಕಾಯಿ ಷೆಲ್ಲೂ !!

[Like a jack in the Box ಕಿಟ್ಟು catapults himself into the room through 'C' flourishing his "Autograph" 'Harrow Size".

garbed in all the Glory of blending blazer,—Crimson scarf,—snow white pants and—"Blancoed" boots.] ಏನ್ ಜಗಜ್ಜ್ಯೋತೀ ಬಣ್ಣ... ಆಹ್ಹಾ...ನಿನ್ನ saree ? ಏನ್ colour ಇದೂ ?

ವೈಢೂರ್ಯಂ : ಗೋಟು ಇಲ್ಲವೇ ?............ಇದು salmon pink ! (ಸ್ಯಾಮನ್ ಪಿಂಕ್.)

ಕಿಟ್ಟು : ಸ್ಯಾಮನ್ನು ? ಏನರ್ಥ ?

ವೈಢೂರ್ಯಂ : ಅಡೂ...Name of a fish!

ಕಿಟ್ಟು : ಅನ್ಯಾಯ...ಈ magnifiಷ್ಯಂಟ್ colourಗೆ...what a "ಮೀನ್" nameಊ! ? ನಮ್ಮಲ್ಲೇನ್ ಹೆಸರು ?

ಸರೋಜ : "ಕೇಸರೀ" ಅಂತಾರೆ.

ವೈಢೂರ್ಯಂ : ಹಾಗೆ ಅಂಡರೇ ?

ಕಿಟ್ಟು : ಸಿಂಹಾ ಅಂತ...Lionoo ! But Lionoo ಈ colourಏ ? Not in ಕ್ವಾಷ್ಟಂಗ್ಲೆ!...But may perhaps be in ಕಾಡು !!

ಸರೋಜ : ತಪ್ಪು ಕಿಟ್ಟು! ನೋಡೋಣ...guess again ?

ಕಿಟ್ಟು : "ಕೇಸರೀ"......"ಕೇ . . ಸ . . ರೀ" ? ಕೇಳೀದೇನೆಲ್ಲೋ ! ಅದೂ, recently! It is on the tip of my tongueoo...... tongue ಏನೂ mouthoo! (his eyes suddenly flash remembrance) mouth ಏನೂ stomachoo!! ಈಗ್ಗಾನೆ ಮೂರ್ಹೊನ್ನೆ ಕುಡ್ಡೆ! ಪಾಯ್ಸದಲ್ಲಿತ್ತು! ದ್ರಾಕ್ಷೆ, ಏಲಕ್ಕಿ, ಬಾದಾಮಿ...ಓಹೋ........ ಕ್ಕೇಸ್ಸರ್ರೀ!! Faymous ಕೇಸರೀ!...ಸರಿಸರಿ! ಆದ್ರೆ...ಏನ್ miss ವೈಢೂರ್ಯಂ ನಮ್ಮ ಪಾಯಸ್‌ಸದ ಕೇಸರೀ ಎಲ್ಲೀ ?........ನಿಮ್ಮ fish pink ಎಲ್ಲಿ ?

ಸರೋಜ : ಯಾಕೋ ? ಕೇಸರೀ ಅಂದ್ರೆ fishoo ಅಂತ್ಲೂ ಅರ್ಥವಲ್ಲವೇನೋ! ? ಜ್ಞಾಪಿಸ್ಕೊಳ್ಳೋ ತಿರ್ಗೀ!

ಕಿಟ್ಟು : ಹ್ಯಾಗಕ್ಕಾ ?...ಕೇಸರೀ ಅಂದ್ರೆ...ಮೀನೂ ?

ಸರೋಜ : (to ವೈಢೂರ್ಯಂ) sanskritನಲ್ಲಿ cypher ಆಗಿರೋ ಇವನು ಮಾಡಿದ ಶ್ರಾದ್ಧದಿಂದ ಏನು profitಓ...ನಮ್ಮ fore-fathers' spiritsಗೆ ?....... ಕೇಳೋ ಮಂಕು! ....'ಕಾ' ಅಂದ್ರೆ ಸಂಸ್ಕೃತದಲ್ಲಿ wateroo ಅಂತ! 'ಕೇ' ಅಂದ್ರೆ ಅದ್ರ locative caseಊ! Therefore means "in the water" ನೀರಿನಲ್ಲೀಂತ! 'ಸೃ' or "ಸರ್" ಅಂದ್ರೆ to move! Therefore ಕೇ–ಸರತೀತಿ...ಕೇಸರೀ!—"That which moves in the water" !—ನೀರಿನಲ್ಲಿ ಓಡ್ಯಾಡೋ ಜಲಚರ!...Therefore a fish!! (Giving a gentle but firm slap on Kittu's near cheek, ನಗುತ್ತ) Logic ನಿನ್ನ subjectಏ ?...Logic ನಿನ್ನ specialityನೇ ?

ವೈಢೂರ್ಯಂ : Sanskrit ನನಗೆ ಗೋಟು ಇಲ್ಲಾ, But French ಗೋಟು! "Poissam" ಅಂಡರೇ ಜ್ಞಾಪಕ ಬಂಟು. Frenchನಲ್ಲಿ........ನೀವು ಈಗ ಟಾಪೀ ನಿಮ್ಮ ಶ್ರಾದ್ಧಡಲ್ಲಿ ಮೂರು ಡೊನ್ನೆ Drink ಮಾಡಿದ ..... ಅಡು ಏನು ಸಂಸ್ಕೃಟಡಲ್ಲಿ ?

ಕಿಟ್ಟು : "ಪಾಯಸಮ್".

ವೈಢೂರ್ಯಂ : Yes !, that is French for fish!

ಕಿಟ್ಟು : ದೇವ್ರೇ ಗತಿ, ಹಾಗಾರೆ! Though I am a vegetarian in sanskrit I am an "animahar". ಅಲ್ಲಾ a "fisherian" in frenchoo ? In short ...ಸಂಸ್ಕೃತದಲ್ಲಿ ಹಾಯುಸ ಕುಡಿದರೆ ಫ್ರೆಂಚ್‌ನಲ್ಲಿ ಮೀನು ತಿಂದ್ಹಾಗೇನಾ... Logic ನಿಮ್ಮ subjectಾ?.. ಹೋಲ್ಸಿ ಈ ಕಾಂಟ್ರಡಿಕ್ಷನ್ನ...ನೋಡೋಣ! ನಿಮ್ಮ 'ಸ್ವಾಮೀನ್ನು' English fishoo ಅಕ್ಕ ಹೇಳ್ದ 'ಕೇಸರೀ'ನೂ Sanscrit fishೂ! ನಾನು ಕುಡ್ದ 'ಹಾಯುಸ'ನೂ French fish ೂ!!...ಹ್ಯಾಗೆ ಹೋಲುತ್ತೋ ? ಈ "fishious circle" ಅಂತಾರಲ್ಲ ಅದನ್ನ ? (ಅಷ್ಟರಲ್ಲಿ to Narayana who has entered by "C") ಏನೋ ??

ನಾರಾಯಣ : (in a whisper) ಏನೂ ಇಲ್ಲ.... ಅಮ್ಮಾವ್ರೆ!...(approaching-Saroja) ಅಮ್ಮಾ! ಒನ್ದು ಮಾತು!

ಸರೋಜ : (Rising) Excuse me ವೈಧೂರ್ಯಂ!...(moves up to ನಾರಾಯಣ) ಏನೋ ?

ನಾರಾಯಣ : ಏನೇನ್ತಾಯೀ! ?......ಎಲ್ಲಾ......ಸಾಂಗೋಪಾಂಗವಾಗಿ ಜರುಗ್ತು... ಶ್ರಾದ್ಧ!... ಮಾತೋಶ್ರೀಪ್ರು...ಹೆಸ್ರು ...... ನಕ್ಷತ್ರ ... ಹೇಳಿ...ಮನೇದೇವ್ರು ಸಹಸ್ರನಾಮ — ಪೂಜೇನೂ ಆಗಿ......ಮಂಗ್ಳಾರ್ತಿ ಕರ್ಪೂರ ಸಮೇತ......ಕಾಫಿಧಾರೆ...ಪುರೋಹಿತ್ರೂ!... ಸಾಹೇಬ್ರೂ! ?

ಸರೋಜ : ಸಾಹೇಬ್ರೇನು...ಬರ್ತಾರೆ!!

ನಾರಾಯಣ : ಹೌದ್ತಾಯೀ! ತಟ್ಟೇಲಿ......ಹಾ...ಕೋ...ಕೆ...ಯ್ತಾರಾ...? ಎಷ್ಟೆಷ್ಟು?...ಅಂತ?

ಸರೋಜ : ಚೆಪ್ತಾ! ಹೋದ್ವರ್ಷ ಮತ್ತೊರ್ಗೇಯಿದ್ರೇನೋ......ಸಾಹೇಬ್ರ ಕೈಲಿ...ಎರಡು ಹತ್ತು ರೂಪಾಯಿ ನೋಟುಗ್ಳು! ಕಿಟ್ಟೂ ಕೈಲಿ...ನನ್ಕೈಲಿ...ಒಂದೊಂದು ಹತ್ತು ರೂಪಾಯಿ ಇರ್ಲಿ! ಅದ್ಸರೀ......ಬ್ರಾಹ್ಮಣ್ರು, ಭೋಜ್ನ...ಎಲ್ಲಾ......ಸರ್‍ಯೇ ?

ನಾರಾಯಣ : (ವಸ್ತ್ರದಿಂದ ಬಾಯಿ ಮೂಗು ಮುಚ್ಚಿ ನಿಟ್ಟುಸಿರಿಡುತ್ತ)...ವರ್ಷ ವರ್ಷ ಆಗೋ ಹಾಗೇಯೇವೇ!...ತಾಯೀ !

ಸರೋಜ : ಸರಿ......ಹಾಗಾರೆ!......(semi-low to Kittu) ಕಿಟ್ಟೂ!...ಅಪ್ಪನ್ನ ಕರೀ! ...ಬ್ರಾಹ್ಮಣರು ಹೊರಡ್ತಾರೇಂತ! [Kittu, at door-step "L" shouts: ಅಪ್ಪಾ ! ಮನೇ ದೇವರ್ಗೆ, ಮಂಗ್ಳಾರ್ತಿ! ಬ್ರಾಹ್ಮಣ್ರೂ ಹೊರಡ್ತಾರೆ! ನಿನ್ನ Courtಗೂ ನನ್ cricket matchಗೂ fifteenಏ ಮಿನಿಟ್ಸು; Buck up ಅಪ್ಪಾ!...ಇಳಿವ್ಯಾ ? I mean Buck down! (to ವೈಧೂರ್ಯಂ) Logicoo...you see! ಆ ? (to ಸರೋಜ)......ಅಪ್ಪಾ... Dressing for courtoo ಅಂತ್ಕಾಣುತ್ತೆ! perhaps ಇಳಿತ್ಧಾನೆ !

ವೈಧೂರ್ಯಂ : If you will excuse me I...shall...disappear now! ನನಗೂ time ಆಯ್ತು !

ಸರೋಜ : Don't be silly! "Orthodoxy"ನ practical ಆಗಿ Demonstration ಕೊಡ್ತೇನೂ ... ನಿಮ್ಮನ್ನು ಕರ್ಕೊಂಡ್ ಬನ್ದ್ರೆ...ಈಗ...just at the critical moment...finale ಬರೋ ಈ momentನಲ್ಲೀ......disappear ಆಗೋದು ...ನೀವು ? (Gently but firmly pushing ವೈಧೂರ್ಯಂ behind a huge brass ...bowl...holding palm) ಇಲ್ಲಿಂದ...watch ಮಾಡೀ!

ಸಾಹೇಬ್ರು : (in snow-white shirt, in ಕಚ್ಚೆ ಧೋತ್ರ, bare bald-headed with a fringe of grey hairs at the back and sides)…ಇಥೇರಾ Kids ?…good!…ನಾರಾಯ್ಣಾ…ಎಲ್ಲಿ…ಮಂಗ್ಳಾರ್ತೀ ?

ನಾರಾಯಣ : ಇಕೋ! (going to door step "C") ಶಾಸ್ತ್ರಿಗ್ಳೇ!

ಶಾಸ್ತ್ರಿ (from inside) ಬಂದ್ನೇ! [ಒಳಗಡೆ ಗಂಟೆ ಶಬ್ದದೊಡನೆ ಮಂಗಳಾರತಿ ನಡೆದು ಶಾಸ್ತ್ರಿ, enters reverently holding with both hands a huge, intricately carved and chased antique salver bearing a big piece of burning camphor. The salver also bears saffron turmeric and a small heap of ashes. Sastry approaches ಸಾಹೇಬ್ರು, who mechanically receiving two tenners from ನಾರಾಯಣ, drops them into the salver as if in a trance and taking a modicum of the ashes in the salver and gingerly fixing them to his brow surreptitiously lifts his eyes aloft to the portrait over "C" and sighs! Then ನ…ಮ…ಸ್ಕಾ…ರಾs to Sastry.]

ಶಾಸ್ತ್ರಿ : ದೀರ್ಘಾಯುಷ್ಮಾನ್ ಭವಾ!……(ಸಾಹೇಬ್ರು Rises.) [Kittoo follows suit with a tenner, So does Saroja and her ನಮಸ್ಕಾರ reaps a "ದೀರ್ಘ ಸುಮಂಗಲೀಭವ".]

ಸಾಹೇಬ್ರು : ಶಾಸ್ತ್ರಿಗಳ!……ಎಲ್ಲಾ……ಯಾವಾಗಿನ ಹಾಗೇ……"ತೃಪ್ತೋಸ್ತು" ತಾನೇ ?

ಶಾಸ್ತ್ರಿ : ಹೌದು, ಮಹಾಸ್ವಾಮಿ! ಸರ್ವಾಂಶದಲ್ಲೂ……ಮಹಾಮಾತೋಶ್ರೀಯವರ ಶ್ರಾದ್ಧ… ವರ್ಷೇವರ್ಷ…ತೃಪ್ತಿಯಾಗಿ ನಡೀತಿಧೆ!…ಆ ಮಹಾತಾಯಿ….ಕಣ್ಮುಚ್ಚಿ ನಮ್ಮನ್ನೆಲ್ಲಾ …ತಬ್ಬಲಿಗಳನ್ನಾಗಿ ಬಿಟ್ಟಬಿಟ್ಟು…ಹೋದಾಗಿನಿಂದ…(turning his face to the portrait over "C" sobs into his shawl)……

ವನ್ನು ಕುಡಿದು, ಗಾಜನ್ನು ಸುಬ್ಬುವಿನ ಕೈಗಳಿಗೆ ಜಾರಿಸಿ)....... ಆಗೂಸೂವೆ ಅಮ್ಮಾ. ಪೇಕ್ಕ್ರೀಸಿ .... ಈಗರ್ತಿಯರ್ಗ್ ಏಷ್ಟುಜಂಭಾಂತೀಯಾ ?...ಇಷ್ಟಕ್ಕೂ ಮೂವತ್ತ್ಮುಟ್ಟೋಕ್ಕುಂಚ ಏಟು-ಹತ್ತು ಮರೀಹಾಕಿ ಮೂತಿ ಮೈಯೆಲ್ಲಾ ಉಬ್ಬಿ. ಅಕ್ಕಿ ಮೂಟೇ ಮೇಲ್ಕಂಷ್ಟೆ ಕುಪಿತ್ತಾಗೂ .... ಇಲ್ಲ ಹೊತ್ತೂ, ಹೆತ್ತೂ, ದುಡ್ಡೂ, ದುಡ್ಡೂ, ಕುಗ್ಗೀ ಕುಗ್ಗೀ ಹಂಚೀಕಡ್ಡಿಗೆ ಸೀರೆ ಸುತ್ತಿದ್ಹಾಗೆ ಒಣ್ಗೀ ಹಲ್ಲೀ ಹಾಗಿರೋದಲ್ದೆ ತಲೆಯೆಲ್ಲಾ ನರ್ತು...ಕಣ್ಣು ಆಳಾಕ್ಹೋಗಿ ಇಳ್ದು...ಇನ್ನಾ ಮೂತಿ ಯೆಲ್ಲಾ ಉಬ್ಬಿ. ಗಲ್ಲದ್ಮಳಗೆಲ್ಲಾ ನಾಲ್ಕು ಗಲ್ಲಗ್ಳು ಜೋಲಾಡ್ತಾ...ಮದ್ದೆ ಅದಕ್ಕೆ. ಬಯ್ಕೊಂಡ್ ಮುತ್ತಿಟ್ ಸಾಕೋಕೆ ತನ್ಹೊಟ್ಟೇಲಿ ಒಂದ್ ಮಗೂನೂ ಹೆರ್ದೇನೇ ಅನೋ ಹಾಗೆ ಮಾಡಾಡ್ತಾ ಇರೋ ಈ ಗರ್ತೀರ್ಗ್ ನಮ್ಮೇಲಿರೋ ತಾತ್ಸಾರಾ....... ನಗೂ ಬರತ್ತೇ ಅಮ್ಮಾ ಗರ್ತಿ ಏನೂ...ಸೂಳೆ ಏನೂ...ಹೆಂಗ್ಸುಂಗ್ಸೇ...ಹೆಣ್ಣುಣ್ಣೇ...ಹುಲಿಯಾಗ್ಲೀ ಹಂದಿಯಾಗ್ಲೀ ಕೋತಿ ಯಾಗ್ಲೀ ಕಿರುಬನಾಗ್ಲೀ ಹೆಣ್ಣಿಷ್ಟ್ವದ್ರೇನೆ, ಗಂಡು ಹತ್ರಾ....ಬಂತೋ ಇಷ್ಟ್ವಲ್ಲಾಗ....ಪಚಾ! ಈಗರ್ತೀಹರ್ಣೇಬರಹಾ (ನಸುನಗುತ್ತಾ) ಹೆಣ್ಮೃಗಗಳ್ಗಿಂತ ಬೀಳು! ತನ್ಹೊಟ್ಟೇಗೆ ಕೂಳ್ಗೂ ಮೈ ತನ್ಮೈಮುಚ್ಚೋಕೆ ಬಟ್ಟೇನೊದಗ್ಸೋ ಗಂಡ್ಸಿನ್ಕೈಲಿ ಸಿಕ್ಕೊಂಡು ತನ್ನವಷ್ಟೆ ತನಗೇನೇ ತಿಳೀದೆ ನರಳ್ತಿದ್ರೂನೂವೆ, ತಾನು........ನಮ್ಮಗ್ಳಿಗ್ಗಲ್ಲಾಂಬೊ ಜಂಭ....ಗರ್ತೀದ್ರ್...ಒದ್ದೋಡ್ದೋ ಭಾತಿ ನನ್ಗಿರೋದು. (ಪಕಪಕನೆ ನಗುತ್ತಾ) ಒದ್ದೋಡ್ದೋ ಭಾತಿ ನನಗಿರೋದು ನನ್ಗಂತೂ...... ಈ ನಮ್ಮಿಬ್ರು ಜಂಭ್ಗಳಲ್ಲೀ....ಗರ್ತೀನರ್ೂ, ಸೂಳೇನರ್ೂ...... ಗೊಂಬೆಗ್ಳಾಗೆ ನಮ್ಮಿಬ್ಬರ್ನೂ ತನ್ಸುಖಕ್ಕೆ ಆಡಿಸ್ತಿರೋ ಅನ್ಯಾಯ ಪಾಪಿ ಗಂಡ್ಸಂಬೋನು ಮೃಗಕ್ಕಿಂತ ಬೀಳಾದ ಪ್ರಾಣೀಯೋದ್ನ ತಿಳೀದೆ...ನಾವ್ನಾವೆ......ನಮ್ಜಂಭದಲ್ಲಿ ಹೋರಾಡ್ತಾ ಇರೋದು........ಅವತ್ತೊಂದೂಮ್ಮಾ ....ಸುಬ್ಬೂ ! ಜ್ಞಾಪಕ್ವೇ ?.......ಮ್ಯಾಟ್ನೀನೋ! ಮೂರ್ರೂಪಾಯಿ ಟಿಕೆಟ್ಟೂನ್ನಾ ನನಗೆ ಸುಬ್ಬೂ, ಅವನ ಹಳೇ Navy Blueನೋ ಅದೆಂಥಾದ್ದೊ ಕೋಟ್ನಾ ಹಾಕಿ. ಮೂರ್ರೂಪಾಯಿ ಟಿಕೇಟ್ನಲ್ಕುಕ್ಕರ್ಸಿ ನಾಟ್ಕಕ್ಕೋದ್ವಿ...ನನ್ಸೀಟು ರಿಸರ್ವ್......ಮ್ಯಾನೇಜರ್ಮೊದ್ಲೆಂದು ತೋರಿಸ್ದಾ ಸೀಟ್ನ ನನಗೆ......ಮೊದಲ್ನೇ ಸೀಟೂಮ್ಮಾ....ಎಲ್ಲರ್ಗಿಂತಾ stageಗೆ ಹತ್ರಾ!...ಹೋಗ್ತೇನೆ ಕೂತ್ಕೊಳ್ಳೋಕೆ...ತಿರಗ್ದೆ .... ಏನ್ಹೇಳ್ಲೀಮ್ಮಾ!...ಎಡರ್ರೂಪಾಯ್ಸೀಟ್ನಲ್ಲಿ ನೆಸಿಸ್ದ ಅರಳೀಪೇಟೆ ಉಟ್ಕೊಂಡು...ತುರುಬಿನೋಲೆ ಇಟ್ಕೊಂಡು ಕೂತಿದ್ದಾಳೆ!....ಯಾರೂಂತೀಯಾ ? (ತನ್ನ ಕುತ್ತಿಗೆ ಯಲ್ಲಿರುವ ಸೀಮೆ ಕಮಲ ವಜ್ರದ ಶರಡನ್ನೂ. ಮೂಗಿನ ಮೇಲೆ ಪ್ರಜ್ವಲಿಸುವ ಮೂಗುತಿ ಬೇಸರಿಗಳನ್ನೂ ಬಲಗೈ ಮುಂಬೆಟ್ಟಿನಿಂದ ಸೂಚಿಸಿ)......ಇವ್ಳ್ಯಾಬ್ತು!! ಹೊಟ್ಟೆ ಉರೀತೂಮ್ಮಾ ನನಗೇನೇ............ಹ್ಯಾಗಿದ್ರೂನೂವೆ "ಪತ್ನೀ ಪತ್ನೀನೇ!............ಉಪಪತ್ನಿ ಉಪಪತ್ನೀನೇ" ಅನ್ಕೊಂಡು....ಮ್ಯಾನೇಜರ್ಗೆ "ಇಲ್ಲೆಲ್ಲಾ ಆಕ್ಟರ್ ಪೌಡರ್ ಕಾಣ್ಸುತ್ತೆ......ಟಿಕೆಟ್ ಪಡ್ಗಿಲ್ಲಾ ......ಆ ಒಂದ್ರುಪಾಯಿ ಸೀಟ್ಹತ್ರ ಈ ಕುರ್ಚೀನ ಹಾಕಿಸ್ಬಿಡೀ"ಂತ......ಈಕೆ ಮರ್ಯಾದೆ ಕಾಪಾಡೋ ಕ್ಕೇಂತ ನಾನು ಹಿಮ್ಮೆಟ್ಟೋಪ್ಟ್ರಲ್ಲೇಮ್ಮಾ!............ಎಲ್ರಿಗೂ ಕೇಳ್ಸೋಹಾಗೆ....ಆ ಮೂಗ್ತಿ ಇಲ್ಲದ ಮೊಂಡ್ಮೂಗ್ನ ಸೂರ್ಗೆ ಎತ್ಕೊಂಡು ಉಸುರು ಹೀರ್ತಾ........"ಇಂಥಾವರು ಬರ್ತಾರೇಂತ ತಿಳಿದಿದ್ರೆ ಇಲ್ಲಿಗೆ ಬರ್ತಾ ಇರ್ಲಿಲ್ಲಾ"ಂತಾಳೇಮ್ಮಾ....ಇಲ್ಲಾದ್ರೇನೂ...ನನಗ ಪೇಳ್ಳೀ ಬೇಕೂಂತಿತ್ತು......"ಇಂಥಾ ಜನರೇನು. ಅಂಥಾ ಜನರೇನು ?......ನಿನ್ನೀ ಹರಕ್ಲು ಅರಳೀಪೇಟೆ ಸೀರೇನಾ ನಿನ್ನ ಬೊಂಬ್ಕೀ ಮಾಸ್ ಮೈಯಿಗೆ ಚೊಕ್ಕೊತನ ಘಟಕ್ಕೆ ಸುತ್ತಿ. ನಿನ್ಮೊಂಡ್ಮೂಗಿಗೆ ಮೂಗ್ತೀನೂ ಇಲ್ದೇನೆ. ನಿನ್ನಾನೇ ಕಿವೀಗೆ ಪುಷ್ಪರಾಗದ್ಹೋಲೆ ಪೋಣಿಸಿ. ನಿನ್ನ ಘನಾಪಾಟಿದೋ ಗಂಡ್ನೇ. ನನ್ನರತಾರೀ ಸೀರೇನೂ. ನನ್ನೀಮೋ ಕಮಲದ ಜ್ಯೂಯಲ್ಲೂ. ನನಗೇಂದ್ರೆ ನನ್ನ ಕಾಲಿಗ್ಬಂದು ಬೀಳೋನೂ. ನಿನ್ನ ನನ್ನ ಟಿಕೆಟ್ಗೆ ದುಡ್ಡು ಕೊಟ್ಟೋನೂ ಅವನೇ" ಅಂತ ಒಪ್ಪಿಸ್ದೋ ಣಾಂತಾ ತೋಚ್ತೂಮ್ಮಾ (ಪುನಃ ಶರಡನ್ನು ಮುಟ್ಟಿ ತೋರಿಸುತ್ತಾ) ಅದ್ರೇನ್ಮಾಡೋದು... ಈತ್ನುಪ್ಪಿಂದಿಧೇನೆ. ತಿನ್ನುತ್ತೂ ಇಧೇನೆ......ಇನ್ನುಂದಕ್ಕೂ ತಿಂತೇನೇಂತ ಬಂದ್ಯೋಹಾಗೆ ಮೇಷ್ಟ್ರು ಪೆದ್ದನ ಮಗುಹಾಗೆ ನುಂಗ್ಕೊಂಡು ತೆಪ್ಗೆ ಕೂತೇಮ್ಮಾ. ನನ್ನ ಮೂರ್ರುಪಾಯಿ ಕೊಟ್ಟು ಒಂದ್ರೂ ಪಾಯಿ ಸೀಟ್ನಲ್ಲಿ. (Sofaವಿನಲ್ಲಿ ಹಿಂದೊರಗುತ್ತಾ) ಯಾಕೋಮ್ಮಾ......ಯಾವತ್ತೂ ಇಲ್ಲದ

ಸುಸ್ತು ಇವತ್ತು......(ತನ್ನೆರಡು ಕೈಗಳಲ್ಲಿ ತಾಯಿಯ ಕೈಯೊಂದನ್ನು ಮುಖಕ್ಕೆಳೆದು ಚುಂಬಿಸುತ್ತಾ) ನಮ್ಮಮ್ಮಾ!...ಊಟಮಾಡಿದ್ಯಾ ?......ಕೇಳೋದೇನೂ...ಮಾಡೇ ಇರ್ತೀಯ....(ತಾಯಿಯ ಕೈಯನ್ನು ಸುಡುವ ವಸ್ತುವನ್ನು ಒದರುವಂತೆ ಒದರಿ)......ಅಬ್ಬ! ನಿನ್ನಹೇಬರಹ....ನೀನ್ಸೊಟ್ಟೆ ಹೊರ್ಕೊಳ್ಳೋದೇ! ಹೋಗ್ಮಲಕ್ಕೋಮ್ಮಾ......ಸುಬ್ಬೂ ಸಾಗ್ಸು...ಅಮ್ಮನ್ನಾ! ವಳ್ಳೇ ಜಿಗ್ಣೆ ಬಂದ್ಬೇರ್ಕೊಂಡ್ಳು (ಸುಬ್ಬುವು ಸೂಕ್ಷ್ಮವಾಗಿ ಅಸಮಾಧಾನಪಡುವ ತಾಯಿಯನ್ನು ಸಂಜ್ಞೆಗಳಿಂದ ಸಮಾಧಾನಪಡಿಸಿ, ಕರೆದುಕೊಂಡು ಕೋಣೆಯ ಬಾಗಿಲಿನಿಂದ ಒಳಕ್ಕೆ ತಳ್ಳುವನು.)

ಸೂಳೆ : Time ಎಷ್ಟೋ ಸುಬ್ಬು ?

ಸುಬ್ಬು : Wrist-watch ಏನ್ನಿಂತ್ಹೋಗಿದ್ಯೋ ? ಓಡೋದಿಲ್ವೇ ?

ಸೂಳೆ : ವಾಚೇನೂ ಓಡೋದು ? ಕುಡ್ಸ ನನ್ನಕಣ್ಗೆ ನೀನ್ ಓಡೋ ಹಾಗಿದೆ...(ಸಮೀಪಿಸಿದ ಸುಬ್ಬುವಿಗೆ) ಅನ್ಯಾಯ......Drinkಒ (ಎನ್ನುತ್ತಾ ಮುಂದಿರುವ Dressing table ಅನ್ನು ಸಮೀಪಿಸಿ, ಕುರ್ಚಿಯ ಮೇಲೆ ಕುಸಿಯುತ್ತಾ) Ponds Creamಒ (ಸುಬ್ಬುವು ಒದಗಿಸುವನು. ಸೂಳೆಯು ಕೈಯಿಂದ ಮುಖಕ್ಕೆ ಅಂಜನವನ್ನು ತೀಡಿ. ಇದುವರೆಗೂ ಹೇಮದಂತೆ ಜ್ವಲಿಸುತ್ತಿದ್ದ ಮುಖದ ನೈಸರ್ಗಿಕ ಕಪ್ಪು ತೊಗಲನ್ನು ತೋರ್ಪಡಿಸುತ್ತಾ, ಥಟ್ಟನೆ ಎರಡು ಬಾಹುಗಳೂ ಕುಸಿದುಬಿದ್ದು...ತಲೆಯನ್ನು ಕುರ್ಚಿಯ ಬೆನ್ನಿಗೆ ಒರಗಿಸಿ ನಿಟ್ಟುಸಿರನ್ನು ಬಿಡುತ್ತಾ) ಸುಸ್ತೋ .... ಅನ್ಯಾಯ ಸುಸ್ತು........ಸುಬ್ಬೂ ! (ಸುಬ್ಬುವು ನಾಜೂಕಾಗಿ ಸೂಳೆಯನ್ನು ಸೋಫಾವಿಗೆ ಸಾಗಿಸಿ, ಮಲಗಿಸಿ, ಬಲಬಾಗಿಲಿನಿಂದ ನಿಷ್ಕ್ರಮಿಸಿ ಪುನಃ ಕೈಯಲ್ಲೊಂದು Oil clothಅನ್ನು ಹಿಡಿದುಕೊಂಡು ಪ್ರವೇಶಿಸಿ, ಅದನ್ನು ಸೂಳೆಯ ತಲೆಯ ಕೆಳಗೆ ಇಟ್ಟು, ಮೇಜಿನಿಂದ ಅಂಜನವನ್ನು ತಂದು ಸೂಳೆಯ ಮುಖಕ್ಕೆ ಸವರಿ, ಮುಖದ ಬಣ್ಣವನ್ನು ತೆಗೆಯುತ್ತಲೂ, ಕೈಚೌಕದಿಂದ ಬಣ್ಣೇತ್ಯಾದಿಗಳನ್ನು ಒರಸುವನು.)

ಸುಬ್ಬು : ಇನ್ನೂಟಾ ಯಾವಾಗ ಮಾಡೋದು ?

ಸೂಳೆ : (ಮುಚ್ಚಿದ ಕಣ್ರೆಪ್ಪೆಗಳನ್ನು ಬಿಚ್ಚದೆ) ಇನ್ನೂಟಾ ಬೇಡ!

ಸುಬ್ಬು : ಮತ್ತಿನ್ನು ಮೈಯಿ ?...ನಾಳೆ ಗತಿ!

ಸೂಳೆ : ಮೈಗೊಳ್ಳೇದು ಉಪವಾಸ!...ನಾಳೆ ಗತಿ ನಾಳೇದು!

ಸುಬ್ಬು : ಹಾಲಾದ್ರೂ...?

ಸೂಳೆ : ಬೇಡ ಸುಬ್ಬೂ ! ನಿದ್ರೆ! ಸುಬ್ಬು! ಒಂದ್ಕಥೆ ಹೇಳು...... ಕಥೆ ಹೇಳೋದ್ರಲ್ಲಿ ರುಸ್ತುಂ ಅಲ್ವೆ ನೀನು...ಎಷ್ಟ್ವರ್ಷ ಆಯ್ತು ಸುಬ್ಬು ? ನಾನೇ ಹೇಳ್ತೀನೆ ಸರಿಯಾಗಿ ಹತ್ವರ್ಷ... ನನಗಾಗ ಹದ್ನಾಲ್ಕ್ವರ್ಷ....ನಿನಗೆ ಹತ್ತೊಂಬತ್ವರ್ಷ...ಎಷ್ಟ್ ಕಥೆ ಹೇಳಿದ್ದೀಯಾ ನನಗೆ!...ಈಗ ಹೊಸ್ದೊಂದು ಕಥೆ ಹೇಳ್ತಾ ಇರು..."ಹೂಂ" ಗುಟ್ತಾ ಇರ್ತೀನೆ........"ಹೂಂ" ಅನ್ನೋದು ನಿಲ್ಲುತ್ಲೂವೆ...ನೀನು ಮಲಕ್ಕೊ......ಮರೀದೆ ಹಾಲು ಕುಡ್ದೇ ಮಲಕ್ಕೊ (ಸುಬ್ಬು ಕೋಣೆಯ ದೀಪಗಳನ್ನೆಲ್ಲಾ Switch off ಮಾಡ್ಬಿಟ್ಟು. ಹಿತ್ತಾಳೆಯ Candle ಒಂದನ್ನು ಹಚ್ಚಿಟ್ಟು, ಸೋಫಾವನ್ನು ಸೇರಿ ನೆಲದ ಮೇಲೆ ಕುಳಿತುಕೊಂಡು, ಬೀಸಣಿಗೆಯೊಂದರಿಂದ ಸೂಳೆಯ ಮುಖಕ್ಕೆ ಬೀಸುತ್ತಾ, ಕಥೆಯನ್ನು ಹೇಳತೊಡಗುವನು.)

ಸುಬ್ಬು : ಅಳ್ಕಾಪುರೀ, ಅಳ್ಕಾಪುರೀಂತ ಒಂದ್ಪಟ್ಣ...ಅದಕ್ಕೆ ಅಳ್ಕೇಶ ಅಳ್ಕೇಶ ಅಂತ......

ಸೂಳೆ : ಅಳ್ಕಾಪುರಾ ?...ಕುಬೇರನ್ಪಟ್ಣಾ ಅಲ್ವೇ ?

ಸುಬ್ಬು : ಸರ್ಹೋಯ್ತು ? ಹೀಗೆ ವ್ಯಾಖ್ಯಾನಮಾಡ್ತಾ ಇದ್ರೆ ನೀನು......ಹಾಗಾರ್ಕೇಳು, ...ಮಥುರಾಪುರೀ ಮಥುರಾಪುರೀಂತ ಒಂದ್ಪಟ್ಣ.

ಸೂಳೆ : ಯಾವ್ದು ? ಕೃಷ್ಣ ಕಂಸಾನೇ........ಉಗ್ರಸೇನ......

ಸುಬ್ಬು : ದಮ್ಮಯ್ಯ ಕೇಳಿ....ಬುಳ್ಳಾಪುರೀ ಬುಳ್ಳಾಪುರೀಂತ ಇಟ್ಕೋ ಒಂದ್ಪಟ್ಣ.

ಸೂಳೆ : (ಕಣ್ಣುಗಳನ್ನು ಅರ್ಧ ಮುಚ್ಚುತ್ತಾ) ಹೂಂ, ಹೂಂ.

ಸುಬ್ಬು : ಅದ್ನ ಬುಳ್ಳೇಶ ಬುಳ್ಳೇಶಾಂತ ಒಬ್ಬ ರಾಜ ಸತ್ಯವ್ರತನಾಗಿ ಧರ್ಮದಿಂದ ಪಾಲಿಸ್ತಾ ಇದ್ದ.

ಸೂಳೆ : ಹೂಂ.

ಸುಬ್ಬು : ರಾಜನಿಗೆ ಸತ್ಯವತೀ ಸತ್ಯವತೀಂತ ಪಾತಿವ್ರತ್ಯದಲ್ಲಿ ಸೀತಾ ಸಾವಿತ್ರೀರ್ನೇ ಸೋಲಿಸೋ ಧರ್ಮಾನ ಆಚರಿಸ್ತಿರೋ ಪತ್ನಿ.

ಸೂಳೆ : (ಕಣ್ಣುಗಳನ್ನು ಮುಚ್ಚಿಕೊಂಡು ಘನಶ್ವಾಸವನ್ನು ಬಿಡುತ್ತಾ) ಹೂಂ.

ಸುಬ್ಬು : ರಾಜನಿಗೆ ಐವತ್ತು ವಯಸ್ಸಾಗುತ್ತಾ ಬಂತು. ರಾಣೀಗೂ ನಲ್ವತ್ತು ನಲ್ವತ್ತೈದು ...ಆದ್ರೆ ಇಬ್ರಿಗೂ ಒಂದೇ ಕೊರ್ತೆ. ಇಬ್ಬರ್ಗೆ ಏನೂ;—ಇವರಿಬ್ಬರ್ನೂ ಪೂಜೆ ಮಾಡ್ತಿದ್ದ ಪ್ರಜೆಗಳಿಗೆಲ್ಲಾ ಇದೇ ಕೊರ್ತೆ; ಇವರಿಗೆ ಮಕ್ಕಳಿಲ್ಲ..... ರಾಜ್ಯಾನ ಮುಂದಾಳೋಕೊಬ್ಬ ಮಗ ನಿಲ್ಲ. ಪೂಜೆಗಳೆಷ್ಟೋ ಸಂತರ್ಪಣೆಗಳೆಷ್ಟೋ, ಗೋದಾನ, ಭೂದಾನಗಳೆಷ್ಟೋ, ಇವೆಲ್ಲಾ ಅಲ್ದೆ ಕೋಟ್ಯಾಂತರ ವರಹಾ ಖರ್ಚುಮಾಡಿ ಪುತ್ರಕಾಮೇಷ್ಟೀನೂ ಆಯ್ತು...ಫಲವೇನೂ ಇಲ್ಲ...ರಾಜ ದಂಪತಿಗಳ ದುಃಖ ಹೇಳಕ್ಕಾಗದು...ಒಂದಮಾವಾಸ್ಯೆ ರಾತ್ರಿ ಉಪವಾಸ ಇದ್ದ ಮಹಾರಾಣೀಗೆ. ಮಧ್ಯರಾತ್ರೀ ಕನಸೊಂದ್ಬಿತ್ತು...."ರಾಜದಂಪತಿಗ್ಳು ಇಬ್ರೂನೂವೆ........ಪರಿವಾರವೇನೂ ಇಲ್ದೆ ......ಪಾದಚಾರರಾಗಿ ಒಂದ್‌ಗೊಂಡಾರಣ್ಯಾನ ಹೊಕ್ಕಾಗ್ಲೂ...ಸಿಂಹ, ಶಾರ್ದೂಲ, ಭಲ್ಲೂಕಾದಿ ಕ್ರೂರಮೃಗಗಳ ಅಪಾಯ ತಪ್ಪಿಸ್ಕೊಂಡ್ಹಾಗೂ, ಕೊನೇಗೆ ಶಾಂತಸ್ವರೂಪಿಯಾದ ಋಷಿಯೊಬ್ಬನ್ನ ಕಂಡಹಾಗೂ. ಆತ ಕೃಪೆಯಿಂದ—ನೀವಿಬ್ರೂ ರಾಜ್ಯವನ್ನು ಸೇರಿ, ಅಹೋರಾತ್ರಿ ಮೂರು ಮಂಡಲ ಗಳೂ.......ಮೂವತ್ತೊಮ್ರು ಹಗಲಿರುಳುಗ್ಳು ಮಹಾಕಾಳೀನ ಸೇವ್ಸಿದ್ರೆ ನಿಮ್ಮಿಷ್ಟಾರ್ಥ ಫಲಿ ಸುತ್ತೆ''—ಅಂದ್ಹಾಗೂ ಬಿದ್ದದ್ದು ಆ ಕನಸು. ಈ ಕನಸ್ನ ರಾಣೀ ರಾಜನಿಗೆ ಹೇಳುತ್ಲೂನೂವೆ ಮಂತ್ರಿ ಪುರೋಹಿತರ ಆಲೋಚನೆ ಪ್ರಕಾರ, ರಾಜದಂಪತಿಗ್ಳು ಗೊಂಡಾರಣ್ಯ ಹೊಕ್ರು. ರಾಜ ಧನುರ್ಧಾರಿಯಾಗಿ, ದುಷ್ಟ ಮನುಜ, ರಾಕ್ಷಸ, ಕ್ರೂರ ಮೃಗೇತ್ಯಾದಿಗಳನ್ನು ಶಿಕ್ಷಿಸುತ್ತಲೂ...... ಶಿಷ್ಟ ಮನುಜ ಮೃಗೇತ್ಯಾದಿಗಳನ್ನು ರಕ್ಷಿಸುತ್ತಲೂ......ಕೊನೇಗೆ ಒಂದು ಆಶ್ರಮವನ್ನು ಕಂಡು. ಧನುಸ್ಸಿನ ನಾಣನ್ನು ಬಿಚ್ಚಿಬಿಟ್ಟು. ಸತಿಪತಿಗಳಿಬ್ಬರೂ ಋಷಿಸೇವೆಯನ್ನು ಮಾಡತ್ಲೂ ಸಂತುಷ್ಟ ನಾದ ಆ ಋಷಿ. ನಿಮ್ಮ ಶಿಶ್ರೂಷೆಗೆ ಮೆಚ್ಚಿದೆ .... ನೀವಿಬ್ಬರೂ ಸ್ವರಾಜ್ಯಕ್ಕೆ ಪುನಃ ತೆರಳಿ. ಅಹೋರಾತ್ರಿ ಅರ್ಧ ಹೊಟ್ಟೆಗೆ ಮಟ್ಟಿಗೂ ಆಹಾರಾನ ಒದಗಿಸ್ತಾ ಈ ಹದಿನಾಲ್ಕು ಲೋಕಾನೇ ಹೆತ್ತ ಮಹಾಕಾಳೀನ ಔಪಾಸನೆ ಮಾಡಿ ಮುಗಿಸಿದ ಮುಹೂರ್ತ್ದೆ ರಾಜದಂಪತಿಗ್ಳು, ತಿರಗ್ತಮ್ಮ ರಾಜ್ಯಕ್ಕೆ ತಿರ್ಗಾಬರ್ತಾ ತಮ್ಗುಟ್ಟೋ ಮಗನ್ಮಾತೇ ಆಡೋ ಸಂತೋಷದಲ್ಲಿ ತಮ್ಮತ್ಲೂನೆ ಇರೋದು ಗೊಂಡಾರಣ್ಯ ಅಂಬೋದ್ನೇ ಮರ್ತು ಬರ್ತಿದ್ದಾಗ......ಇವ್ರೆದುರ್ಗೆ ಒಂದ್ಸಂಜೆ ಸೂರ್ಯಾಸ್ತಮಯದ ಕಾಲದಲ್ಲಿ ಮುಳುಗದ್ ಸೂರ್ಯನ್ ಮುಚ್ಕೋ ಕಪ್ಪಂಕಪ್ಪನೆ ನೆಳಲೊಂದ್ ಕಂಡ್ಬಂತು. "ಇದೇನೋ ?" ಅಂತ ಅನ್ನುವಷ್ಟ್ರಲ್ಲೇ ಆ ನೆಳಲು ಆಕಾಶ ಭೂಮಿಾನ ಆವಲಂ ಬ್ಸಿರೋ ಬ್ರಹ್ಮರಾಕ್ಷಸ್ನಾಗಿ ತೋರ್ಪಡಿಸ್ಕೊಂಡು ಬರ್‍ತಾ ಬರ್‍ತಾ ಆ ಭೂತ ಕುಗ್ಗೀ ಕುಗ್ಗೀ ಕೊನ್ ಕೊನೇಗೆ ಇವ್ರೆದುರ್ಗೆ ಇವರಿಬ್ಬರ ಎರಡ್ರಷ್ಟು ಎತ್ರ ರಾಕ್ಷಸನಾಗಿ ನಿಂತು......"ಕ್ಷುದ್ಬಾಧೆ ನನಗೆ ......ಸರಿಯಾಗಿ ಆಹಾರವಾಗಿ ಬಂದಿಧೀರಾ" ಎಂದು ಕೈಗಳನ್ನು ಹರಡಿ, ಬಾಯನ್ನು ಬಿರಿದ ರಾಕ್ಷಸನ್ನೋಡಿ. ರಾಜಪತ್ನಿ, "ಅಯ್ಯೋ! ನಾವು ವೃದ್ಧದಂಪತಿಗ್ಳು...ಮಾಂಸರಕ್ತ ಬಹಳ ಕಮ್ಮಿ ನಮ್ಮ ದೇಹದಲ್ಲಿ, ಮುದಿ ದಂಪತಿಗಳ್ನ ಭಕ್ಷಿಸಿದಲ್ಲಿ ನಿನ್ನ ಕ್ಷುದ್ಬಾಧೆ ಶಮನವಾಗದು...ಅಲ್ದೇ... "ಪುತ್'' ಎಂಬ ನರಕಾನ್ನ ತಪ್ಪಿಸ್ಕೊಳ್ಳೋಕೆ ರಾಜ್ಯಾನ ಬಿಟ್ಟಿಂದು. ಸಂತಾನಕ್ಕೆ ವರಾನ್ನ ಪಡೆದು

ಓಂತಿಗೊರ್ೀ ನಮ್ಮನ್ನೀನ್ ತಿಂದ್ರೆ ನಿನ್ನ ಹಸಿವನ್ ತೀರ್ಸಿದ ಪುಣ್ಯಾ ನಮಗೇ ಸೇರತ್ತೆ. ಆದ್ರೆ ನಮ್ಮಿಬ್ಬರ್ಗೆ ತಪ್ಪೊ ಪುನ್ನರಕಾ ನಿನಗ್ ಲಭಿಸುತ್ತೆ" ಅನ್ನುತ್ಲೂವೆ ರಾಕ್ಷಸ ಬೆದ್ರಿ, "ಹಾಗಾದ್ರೆ ನಿಮ್ರಾಜ್ಯ ಸೇರಿ, ನಿಮ್ಮುತ್ರನ್ನೀವ್ ಹೆತ್ತು, ನಿಮ್ಸಂತೋಷ ನೀವನುಭವಿಸಿಕೊಳ್ಳಿ!...... ಆದ್ರೊಂದ್ಮಾತು, ಈವತ್ನಿಂದ ಹದಿನೆಂಟು ವರ್ಷ ಬಿಟ್ಟು, ಒಂದು ದಿನ ನಿಮ್ಮ ರಾಜ್ಯಕ್ಕೆ ಬಂದು, ನನಗ್ಬೇಕಾದ ಒಂದ್ವಸ್ತೂನ ಕೇಳ್ತೇನೆ...'ಅದ್ನ ಕೊಡ್ತೇನೆ' ಅಂತ ಈಗ್ಮಾತ್ಕೊಟ್ರೆ ಬಿಡ್ತೇನೆ ನಿಮ್ಮನ್ನ...ಇಲ್ವೋ ನೀವಿಬ್ರೂನೂವೆ...ಒಂದೇ ತುತ್ ನನ್ಬಾಯಿಗೆ" ಅನ್ನುತ್ಲೂವೆ, ಆ ರಾಜದಂಪತಿಗ್ಳು, "ಸಧ್ಯ ತಪ್ಪಿಸ್ಕೊಂಡ್ರೆ ಸಾಕು ...... ಮುಂದಿನ್ನು ಹದ್ನೆಂಟು ವರ್ಷ ಆಗೋ ಹೊತ್ತಿಗೆ ನಾವ್ಬದ್ಕಿರ್ತೇವೋ ಇಲ್ವೋ? ಹಾಗ್ಬದ್ಕಿದ್ರೂವೆ......ಮುಂದೊದ್ಗೋ ಅಪಾಯಕ್ಕೆ ಪ್ರತೀಕಾರ ಮುಂದ್ಮಾಡ್ಕೋ ಬಹ್ದು...ಸದ್ಯಕ್ಕೆ ಇವನ್ಬಾಯಿಗೆ ತುತ್ತಾಗೋದ್ನ ತಪ್ಪಿಸ್ಕೊಳ್ಳೋದೇ ಜಾಣ್ತನ" ಅಂತ ತೀರ್ಮಾನಿಸಿ, ರಾಕ್ಷಸಂಗೆ "ಹದ್ನೆಂಟ್ವರ್ಷ ನೀನ್ಯಾರ್ಗೂ ಗೆ ನಮ್ಮ ನ್ಯಾ ವಿಸಬೇಡ. ಆಮೇಲೆ ಬಂದು ನಮ್ಮಿಬ್ಬರನ್ನು ಬಿಟ್ಟು ನಿನಗ್ಯಾವ ವಸ್ತು ಬೇಕೋ ನಮ್ಮ ಸಾಮ್ರಾಜ್ಯದಲ್ಲಿ ಅದನ್ನ ಕೊಡ್ತೇವೇ!" ಅಂತ ಮಾತ್ಕೊಟ್ಟು ತಮ್ಮ ರಾಜ್ಯಕ್ಕೆ ಹಿಂತಿರುಗ್ಬಂದು ಒಂದು ಮಹಾಕಾಳೀ ಪೂಜೇನ ಋಷಿಗಳ್ ಹೇಳ್ದ್ಹಾಗೆ ಸಾಂಗೋಪಾಂಗವಾಗಿ ಜರಗ್ಸಿ, ಮಹಾಕಾಳೀನೂ ಸಂತುಷ್ಟಳಾಗಿ ರಾಣಿ ಗರ್ಭಧರಿಸಿ...ಹತ್ತು ತಿಂಗ್ಳು ಹೊತ್ತು, ಹೆತ್ತು ರಾಜಪುತ್ರಾನೂ ಹುಟ್ದ...ಅಲ್ದೆ ಪ್ರಹ್ಲಾದ, ಧ್ರುವ, ಅಭಿಮನ್ಯು ಇತ್ಯಾದಿ ರಾಜಪುತ್ರರ ಹಾಗೆ ಬೆಳ್ದ; ಇವನ ಹದಿನೆಂಟನೆಯ ವಯಸ್ಸಿನಲ್ಲಿ ವೃದ್ಧರಾದ ರಾಜ ರಾಜ್ಞಿಯರು, ಮಗನ್ನ ಕೊಟ್ಟ ಮಹಾಕಾಳೀ ಗುಡಿ ಗರ್ಭದಲ್ಲಿ ಮಂಗಳಾರ್ತಿ ತೊಗೊಳ್ತಿದ್ದಾಗ, ಬ್ರಾಹ್ಮಣ ಒಬ್ಬ ಇವರಿಬ್ಬರ್ಗೂ ಒಂದು ನೀಲೋತ್ಪಲ ಕೊಟ್ಟು ಆಶೀರ್ವದಿಸಿದ. ಇದಕ್ಸಂತೋಷಪಟ್ಟು, ಆ ಬ್ರಾಹ್ಮಣನ್ನ ಅರಮನೆಗೆ ಕರ್ಕೊಂಡ್ಬಂದು ಸತ್ಕರಿಸಿ "ತಮ್ಗೇನ್ಬೇಕೂಂ"ತ ಕೇಳುತ್ಲೂವೆ ನೆಲದಿಂದ ಸೂರಿನವರ್ಗೂ ಒಂದೇ ಸ್ವರೂಪಾನ ಅವಲಂಬ್ಸಿದ, ಹದ್ನೆಂಟ್ವರ್ಷಕ್ಮುಂಚೆ, ಗೊಂಡಾರಣ್ಯದಲ್ಲಿ ಕಾಣಿಸ್ಕೊಂಡ ಬ್ರಹ್ಮರಾಕ್ಷಸ..."ಕೊಟ್ಮಾತು ತಪ್ಪೋದು ನಿಮ್ಮ ಕುಲ ಗೋತ್ರದಲ್ಲೇ ಇಲ್ಲಾ. ನೀವ್ಕೊಟ್ಟ ವಾಗ್ದಾನ ನಡಿಸ್ಕೊಡೀ ಅಂತ ಕೇಳೋಕೆ ಬಂದಿದ್ದೇನೆ ನಾನು" ಅಂತ ಬಲಗೈನ ಚಾಚ್ದ ರಾಕ್ಷಸ .... ಬೆಚ್ಚಿಬಿದ್ದ ರಾಜದಂಪತಿಗ್ಳು ಹದ್ನೆಂಟ್ವರ್ಷಕ್ಕೆ ಮುಂಚೆ ನಡೆದದ್ದು ಅರ್ಧಂಬರ್ಧ ಜ್ಞಾಪಕಕ್ಕೊಚ್ಚಿ, "ಅದೇನಾ ವಾಗ್ದಾನಾ" ಅಂತ ಅಂದ್ರು. ರಾಕ್ಷಸ, "ನಿಮ್ಮ ರಾಜ್ಯದಲ್ಲಿ ನನಗ್ಬೇಕಾದ್ದು ಒಂದೇ ವಸ್ತು...ಅದನ್ಕೊಡ್ಬಿಟ್ರೋ ಕೊಟ್ಟ ಮಾತ್ತಪ್ಪೋ ನರಕಕ್ಕೆ ನೀವಿಬ್ರೆ ಅಲ್ದೆ ನಿಮ್ಮ ಪಿತೃಗಳೂ ಇಳೀತಾರೆ...... ಮರೀಬೇಡಿ......ನನಗ್ಬೇಕಾದ ವಸ್ತು ಒಂದೇ ಒಂದು : ನಿಮ್ಮ ಹದ್ನೆಂಟ್ ವರ್ಷ ತುಂಬಿದ ಕುಮಾರ!" ಅಂತ್ಹೇಳಿ, ವೃದ್ಧ ದಂಪತಿಗಳ್ನ ಮೂರ್ಛೆ ಹೋಂದ್ಸಿ......ಪಕ್ಕದಲ್ಲಿದ್ದ ನೀರಿನ ಹೂಜೇನ ಅವರ್ಮುಖದ್ಮೇಲೆ ಖಾಲಿ ಮಾಡಿ, ಚೇತರಗೊಳಿಸಿ,......ಮಂತ್ರಿ ಮಂತ್ರಾಲೋಚನಾ ಸಭೆಗಳಿಂದ್ಲೂ, "ಸತ್ಯವೊಂದೇ ಸ್ವರ್ಗ ಸಾಧನ" ಅಂಬೋದ್ನ ಅವರ ಬುದ್ಧಿಗೆ ಹಚ್ಚಿಸಿ, ಅವ್ರ ಹದ್ನೆಂಟು ವಯಸ್ಸಿನ ರಾಜಕುಮಾರನ್ನ ಗೊಂಡಾರಣ್ಯದಲ್ಲಿ ತನ್ನ ಮಾಯಾಶಕ್ತಿಯಿಂದ ತಾನು ನಿರ್ಮಿಸಿಕೊಂಡಿದ್ದ ಮಾಯಾಪಟ್ಟಣಕ್ಕೆ ತಗೊಂಡ್ಬಂದ. ರಾಜಕುಮಾರನ್ನ ಅವನ ರಾಜ್ಯಕ್ಕಿಂತಲೂ ಚೆನ್ನಾಗಿದ್ದ ತನ್ನ ಮಾಯಾಪುರದಲ್ಲಿ ಇಟ್ಕೊಂಡು ಅವನಿಗ್ಬೇಕಾದ ಸಂತೋಷ ಸುಖಗಳ್ನ ಒದಗಿಸ್ತಾ ಅವನ ಹತ್ತೊಂಬತ್ನೇ ವಯಸ್ನಲ್ಲಿ, "ದಿನಾ ಬೆಳಗ್ನಿಂದ ಸಾಯಂಕಾಲದವರ್ಗೂ ನಾನು ನನ್ ಸಂಚಾರಕ್ಹೋಗ್ಬೇಕಾಗಿದೆ. ನೀನು ನಿನ್ ಸಂತೋಷಕ್ಕೆ ಈ ಪುರದ ಹೊರಗಡೆ ಉತ್ತರ, ದಕ್ಷಿಣ, ಪೂರ್ವ ದಿಕ್ಕುಗಳಲ್ಲಿ ಎಲ್ಲಿ ಬೇಕಾದ್ರೂ ಸಂಚರಿಸು. ಕ್ಷಣಕ್ಷಣಕ್ಕೂ ಯೋಜನಾನ ಲಂಘಿಸೋ ಹಯ ನಿನ್ನದು...ಆದರೆ ಪುರಾನ ಬಿಟ್ಟು ಪಶ್ಚಿಮಕ್ಕೆ ಇರೋ ಮಾರ್ಗಾನ ಮಟ್ಗೆ ಓಡಿಸ್ಬೋಗ್ಬೇಡ" ಅಂತ್ಹೇಳಿ, ದಿನಾ ಬೆಳಿಗ್ಗೆ ಎದ್ದು ಹೊರಟ್ಹೋಗೋದು; ರಾತ್ರಿ ಪುನಃ ಪಟ್ಣ ಸೇರೋದು ಹೀಗ್ಮಾಡ್ತಾ ಇದ್ದ ರಾಕ್ಷಸ. ಹತ್ತೊಂಬತ್ನೇ ವಯಸ್ಸಾಗ್ದು ಆ ರಾಜಕುಮಾರನ್ನೇ ಇಪ್ಪತ್ನೇ ಹುಟ್ಟಿದ್ದಿನ ಮಾಯಾಪುರದ ಉತ್ತರ, ದಕ್ಷಿಣ, ಪೂರ್ವದ್ಬಾದಿಗಳ್ನ ಸಂಚರ್ಸಿ ಸಂಚರ್ಸಿ ... ಒಂದಿನ ಮಟ್ ಮಟ್ ಮಧ್ಯಾಹ್ನ ನಿತ್ಯ ಅರಮನೆ ಕಡೆ ತಿರಗ್ತಿದ್ದ ಕುದುರೆ. ಪಶ್ಚಿಮ ದಿಕ್ಕಿನ

ಕಡೆ ರಶ್ಮಿಗಳನ್ನು ಸೇರಿಯುತ್ತಾ ಹಟ ಹಿಡೀತು,......ಅದರ್ಪುಟ ಪರೀಕ್ಷೋಸ್ಕೋಸ್ಕೆ, ಆ ರಾಜಕುಮಾರ ರಶ್ಮಿಗಳ......ರಶ್ಮಿ......ಎದ್ದಿದ್ದಿಯಾ ಚಿನ್ನಾ ?

ಸೂಳೆ : ಹೂಂ! ಸುಬ್ಬು! ಈ ರಶ್ಮಿ ಬಾಬ್ತು ಬಿಟ್ಬಿಟ್ಟು, ಬರೀ ಲಗಾಮೂಂತನ್ನೂ! ......ದಮ್ಮಯ್ಯ, ಸುಬ್ಬು ಕಥೆ ಸ್ವಾರಸ್ಯವಾಗಿದೆ......ಮುಂದಕ್ಕೇಳಸು......ರಾಜಪುತ್ರನ್ಕುದ್ರೆ ......ಅವನ್ಹೋಗೋವಾಗ ಪಶ್ಚಿಮ ದಿಕ್ಗೇ ಸೇರಿತಿತ್ತು......ಅವ್ನು ಆಶ್ಚರ್ಯಪಟ್ಟು ಲಗಾಮ್ ಡೀಲಾಗ್ಬಿಟ್ಬಿಟ್ಟ......ಮುಂದೇನಾಯ್ತು ?

ಸುಬ್ಬು : ಆ ಮೇಲೆ ಕುದ್ರೆ ಹಾಗೇ ಪಶ್ಚಿಮಕ್ಕೆ ತಿರುಕ್ಕೊಂಡು ಹೋಗ್ತಿದ್ದಾಗ....... ನೋಡ್ತಾನೆ ಒಟ್ಟು ಒಂದೇ ಮರುಭೂಮಿ...ಹೋಗ್ತಾ ಹೋಗ್ತಾ ದೂರದಲ್ಲಿ ಕಂಡ್ಬುತು ಒಂದೇ ಒಂದು ಗುಡಿಸ್ಲು. ಹತ್ರಾ ಬರ್ತಾ ನೋಡ್ತಾನೆ, ಆ ಗುಡಿಸ್ಲಿಗೆ ಚೆಂಡುಗ್ಳಿಂದ ಮಾಡಿದಂಥಾ ಗುಂಡು ಗುಂಡು ಹೆಂಚುಗ್ಳು !...ಇನ್ನೂ ಹತ್ರಾ ಬರುತ್ಲೂವೆ ... ಆ ಗುಂಡು ಗುಂಡು ಹೆಂಚುಗಳೆಲ್ಲಾ ಮಾನುಷ ರುಂಡಗ್ಳು............ಅಲ್ದೇ ಜೀವಸಹಿತ ! ಇವ್ನು ಗುಡಿಸ್ಲು ಮುಟ್ಟು ತ್ಲೂವೇ ಆ ತಲೆಗಳೆಲ್ಲಾ ಇವನ್ಕಡೆ ತಿರುಗಿ, ಘಕಘಕಾಂತ ನಗ್ತಾ "ಹಾ ! ಹಾ !! ಹಾ !!! ಹಾ !!!! ಬಂದ್ಯಾ....... ಬರ್ತೀಯಾಂತೊಗ್ತು ನಮ್ಗೇ !" ಅಂತ ಆ ಮುಂಡಗಳಿಲ್ಲದ ರುಂಡಗ್ಳ ನಗೂನ ಕೇಳುತ್ಲೂವೆ, 'ಧನ್' ಅಂತು ಇವನ್ಗುಂಡ್ಗೆ !....... ಕುದುರೇನೂ ಹಿಮ್ಮೆಟ್ತು ! ಆದ್ರೂ ಲಗಾಮೂ ಬಿಗಿಹಿಡ್ದು, ಹಲ್ಕಚ್ಕೊಂಡು, ಆ ತಲೆಗಳ್ಕಡೆ ಕಣ್ಣೆತ್ತಿ...."ಯಾಕ್ನಗ್ತೀರಾ ?" ಅಂದ. ಮುಂದಿದ್ದ ತಲೆ, "ನಾವೆಲ್ಲಾ ನಕ್ಕದ್ದೂ ನೂರೇಳು ತಲೆಗ್ಳು ನಾವು........ಇನ್ನೊಂದ್ತಲೇಗೆ ಸ್ಥಳ ಇರೋದು ಇಲ್ಲಿ. ಈ ಖಾಲಿ ಯಾವತ್ತು ಭರ್ತಿಯಾಗುತ್ತೇಂತ ಇಷ್ಟಿದ್ನಾನೂ ಎದುರ್ನೋಡ್ತಿದ್ವಿ. ಈಗ ನಿನ್ತಲೇ ಕಾಣತ್ಲೂವೆ ನಗು ಬಂತು...ನಮ್ಗೆ !" ಅನ್ನೋದ್ನ ಕೇಳತ್ಲೂವೇ ಮೈಯೆಲ್ಲಾ ಬೆವರಿಟ್ಕೊಂಡ್ತು ನಮ್ಮ ರಾಜಕುಮಾರನ್ಗೇ ! ಇವನವಸ್ಥೇನ್ನೋಡಿ ಇನ್ನೊಂದ್ತಲೇ ಮೊದಲ್ನೇ ತಲೇಗೆ, "ಅಂಗರಾಜಕುಮಾರ ! ಇದು ಹಾಸ್ಯಕ್ಕೆ ಸಮಯವಲ್ಲ ; ಈ ರಾಕ್ಷಸನ ಮಾಯೆಯಿಂದ ನಮ್ಮ ರುಂಡಗಳು ಸೂರಿನಲ್ಲೂ, ಮುಂಡಗಳು ಕೆಳಗೆ ಕುಟೀರದಲ್ಲೂ ಬೇರೆ ಬೇರೆಯಾಗಿ ಬಿದ್ದಿವೆ ......ನಮ್ಮ ಅವಸ್ಥೇನಲ್ಲದೇ, ನಮ್ಮನ್ನು ಕಳೆದುಕೊಂಡ ನಮ್ಮ ಪುತ್ರ ವಿರಹಾವಸ್ಥೆಯನ್ನೂ ಹೋಗ ಗೊಳಿಸುವುದಕ್ಕೆ ನಮ್ಮನ್ನೂ ಹೆತ್ತವರನ್ನೂ ಕಾಪಾಡೋ ಧರ್ಮದೇವತೆಯೇ ಈತನನ್ನು ನೆಪವಾಗಿ ಕಳುಹಿಸಿರಬೇಕು...........ಹಾಸ್ಯಾನ ಬಿಟ್ಟು ಈತನನ್ನೂ ನಮ್ಮನ್ನೂ ಈ ರಾಕ್ಷಸನ ಕೈಯಿಂದ ಪಾರುಮಾಡಿ ನಮ್ಮ ಮಾತಾಪಿತೃಗಳನ್ನು ಕೂಡುವ ಬಗೆಯನ್ನು ಇತ್ಯರ್ಥಮಾಡೋದಲ್ಲವೇ ವಿವೇಕ !?"ತನ್ನತ್ಲೂವೆ ಎಲ್ಲಾ ತಲೆಗ್ಳೂ "ಹೌದು, ಹೌದು !" ಅಂತ ಬಾಗಿದವು. ಎರಡನೇ ತಲೆ ನಮ್ಮ ರಾಜಕುಮಾರನನ್ನು ನೋಡಿ, "ನಿನನ್ನು ಕರೆತಂದ ಮಾಯಾವೀ ರಾಕ್ಷಸನೇ ನಮ್ಮನ್ನೂ ಕರೆತಂದು, ನಮ್ಮ ಇಪ್ಪತ್ತೆರಡ್ನೇ ಹುಟ್ಟಿದ್ದಿನ ತಲೇನ ಮೈನ ಬೇರೆಮಾಡಿ ಈ ಗುಡಿಸಲ್ಮೇಳಕ್ಕೆ ಡಪಿ. ಶಿರಸ್ಸನ್ನು ಹೆಂಚಾಗಿ ಇಟ್ಟು, ಇದೇ ಪ್ರಕಾರ ನೂರೆಂಟು ರಾಜಕುಮಾರ ಶಿರಸ್ಸಿನಿಂದ ನಿರ್ಮಿಸಿದ ಸೂರೂ ಅಲ್ಲದೆ, ಅವರ ನೂರೆಂಟು ಮುಂಡಗಳು ತುಂಬಿದ ಕುಟೀರವನ್ನು ನಿರ್ಮಿಸಿ ಅವುಗಳನ್ನು ಅಗ್ನೀಪಾಲು ಮಾಡಿದ ಕ್ಷಣವೇ ಅಮರ ರಾಜ ಪದ್ವೀ ಸಿಕ್ಕುತ್ತೇಂತ ಬ್ರಹ್ಮನಿಂದ ವರ್ಗಳನ್ನು ಕೈಗೊಳ್ಳೋ ನಿಮಿತ್ತ, ನಮ್ಮನ್ನೂ ನಿನ್ನನ್ನೂ ಈ ಅವಸ್ಥೇಗೆ ತಂದ ರಕ್ಕಸನಿಂದ ನಾವೆಲ್ಲಾ ತಪ್ಪಿಸಿ ಕೊಳ್ಳುವ ಸಾಮರ್ಥ್ಯ ನಿನ್ನ ಕೈಯಲ್ಲೇ ಇದೆ" ಅನ್ನತ್ಲೂವೆ "ಅದೇನಸಾಧ್ಯವಾ ?" ಅಂದ ನಮ್ಮ ರಾಜಕುಮಾರ......ಆಗ ಆ ಎರಡ್ನೇ ತಲೆ, ಪಶ್ಚಿಮದಿಕ್ಕಿನಲ್ಲಿ ಇನ್ನೂ ಬಹ್ದೂರ್ದಲ್ಲಿ ಕಾಣೋ ದೊಡ್ಡ ಮರಾನ ಕಣ್ಣಿನಿಂದ ಸೂಚಿಸಿ........"ಕಾಣತ್ತೇ...ಆ ದೂರದಲ್ಲಿರೋ ಆಲದಮರ ?" ಅಂತು...........ಅದಕ್ಕೆ ರಾಜಕುಮಾರ, "ಹೂಂ !" ಅನ್ನುತ್ಲೂವೆ......(ಸೂಳೆಗೆ) ಇವ್ಯಾಕೇ ಚಿನ್ನಾ........"ಹೂಂ" ಗುಟ್ಲಿಲ್ಲಾ ?

ಸೂಳೆ : (ಅರೆನಿದ್ದೆಯಲ್ಲಿ ಅರ್ಧಮುಚ್ಚಿರುವ ಕಣ್ಣುಗಳನ್ನು ಥಟ್ಟನೆ ಬಿಟ್ಟು) "ಹೂಂ".

ಸುಬ್ಬು : "ಹಾಗೆ ನಿನಗಾವುದರ ಕಂಡ್ಬರೋದಾದ್ರೆ ನೆಟ್ಗೆ ನಿನ್ಕುದ್ರೇನ್ಸ್ವೋಡ್ಸಿ ಅಲ್ಲಿಗ್ಹೋಗಿ. ಕುದ್ರೇನ್ನಿಟ್ಬಿಟ್ಟು, ಅದ್ರ ಬುಡಾನ್ನೇರಿ.......... 'ಅಹಿಂಸಾ ಪರಮೋಧರ್ಮಃ' 'ಅಹಿಂಸಾ ಪರಮೋಧರ್ಮಃ' ಎಂದು ಬಾರಿಬಾರಿಗೂ ಜಪಿಸುತ್ತಾ, ಆ ಮರಾನ್ಹತ್ತಿ ಕೊನೇ ಕೊಂಬೇನ್ಸೇರು ತ್ಲೂವೆ ಅಲ್ಲೊಂದು ಪಂಚವರ್ಣದ ಗಿಳಿ ಕಾಣ್ಸತ್ತೆ. ಅದು ಸಾಧಾರಣದ್ಗಿಳೀಂತ ತಿಳ್ಕೋಬೇಡ...... ಸರ್ವಜ್ಞಳಾದ ಸರಸ್ವತಿಯ ಮುದ್ದು ಗಿಳಿ ಅದು...ನೀನದನ್ ಸಮೀಪಿಸುತ್ಲೂನೂವೆ ಅದು 'ಯಾರ್ನೀನು ?' ಅಂತ ಕೇಳುತ್ತೆ. ಆಗ ನೀನು ಮಂಕನ್ಹಾಗೆ ನಿನ್ನ ಗುಣಕಥನಮಾಡ್ದೆ, 'ನಾನ್ಯಾರಾದ್ರೇನು...ನೀನು ಎಲ್ಲಾನೂ ತಿಳಿದ ಗಿಣಿ' ಅಂತ ಹೇಳಿ... 'ಹತ್ಜನ ಹೇಳಿದ್ಕೇಳಿ ಹುಡುಕ್ಕೊಂಬಂದ ನನ್ನ ನೀನ್ಯಾರೂಂತ ಕೇಳ್ತೀಯೆಲ್ಲಾ ಹಾಗಾದ್ರೆ ಸರ್ವಜ್ಞ ಗಿಣಿ ಅಲ್ಲ ನೀನು, ಸರ್ವೇಸಾಧಾರಣ ಗಿಣಿ ನೀನು !' ಅಂತ ನೀನನ್ನತ್ಲೂವೆ, ಆ ಗಿಣಿ ರೇಗಿ, 'ನನ್ಜ್ಞಾನ ಹಾಗಿರ್ಲಿ ನಿನ್ಜ್ಞಾನ ಪರೀಕ್ಷಿಸಿ ನೋಡೋಣ ! ಈಗ ನನ್ನ ಮೈಯಲ್ಲೆಷ್ಟು ಬಣ್ಣಗಳಿವೆ ?' ಅಂತ ಕೇಳುತ್ತೆ ಆ ಪಕ್ಕಿ. ಅದಕ್ಕೇನುತ್ತ್ರ ಹೇಳ್ತೀಯಾ ?" ಅಂತ ಕೇಳ್ದೆರಡ್ನೇ ತಲೇಗೆ ರಾಜಕುಮಾರ......"ಅದೇ ನೀನ್ಹೇಳಿದ ಪಂಚವರ್ಣದ ಗಿಳಿ...ಐದು ಬಣ್ಣಗಳು...ಕೆಂಪು, ನೀಲ, ಹಸುರ್ರು ಇತ್ಯಾದಿ", ಅಂದದ್ದಕ್ಕೆ ಆ ಎರಡ್ನೇ ತಲೆ, "ಅಯ್ಯಯ್ಯೋ ಬೆಪ್ಪಾ ! ಹಾಗೇನಾದ್ರೂ ಬೊಗುಳ್ಬೇಯೇ ಸರ್ವನಾಶ ! ಆಹುತಿ ! ನೀನೂ ನಾವೆಲ್ಲರ್ರೂವೇ ಆ ರಾಕ್ಷಸನ ನಾಲ್ಗೇಗೆ !! ನಾನ್ಹೇಳೋದ್ನ ಗಮನ್ಸ್ಕೇಳು...ಆ ಗಿಳಿ ಕೇಳುತ್ಲೂ ಆ ಪ್ರಶ್ನೇನ ನೀನು ನಿನ್ ಜನಿವಾರ ಬಲಗೈಲ್ಹಿಡ್ಕೊಂಡು, 'ಮುಕ್ತಾ, ವಿದ್ರುಮ, ಹೇಮ, ನೀಲ, ಧವಳ......' " ಅಂತ ಹೇಳ್ತಿರುವಾಗ್ಲೇ...ನಮ್ಮ ರಾಜಕುಮಾರನ್ಮುಂದೆ ಆಕಾಶ ಭೂಮೀನೂ ಆವರ್ಸ್ಕೊಂಡಿರೋ ಕಪ್ಪಂಕಪ್ಪೆ ಆಕಾರ ಬಂದ್ ಧುಮುಕ್ತು. ಅದನ್ನೋಡಿ ಆ ನೂರೇಳು ರಾಜಕುಮಾರ್ರ ಮುಂಡಗಳಿಲ್ಲದ ರುಂಡ್ಗಳು, "ಹಯ್ಯೋ, ಕೆಟ್ಟೆವಲ್ಲಾ !!! ಇನ್ನೇನ್ ನಮ್ಮ್ಗತೀ"ಂತ ಕಿರ್ಲಿದ್ವು ......ಇದ್ಯಾಕ್ಟಿನ್ನಾ...ಹೂಂ ಗುಟ್ಲಿಲ್ಲಾ ! (ಸೂಳೆಯು ಸುಸ್ತಾಗಿ ನಿದ್ರಿಸುತ್ತಿರುವುದನ್ನು ಗಮನಿಸಿ) ಅಬ್ಬಾ ! ನಿದ್ರೆ !....ಪಾಪ ! ಹೀಗಾಗ್ತಾನೇ ಬಂದ್ರೆ ಎಷ್ಟ್ ದಿನಾ ತಡ್ಯತ್ತೇ **ಈ** ದೇಹ ! ?

[ಕೋಣೆಯನ್ನು ಬಿಟ್ಟು ಒಳಗೆ ಹೋಗಿ ಜರತಾರೀ ಅಂಚಿನ ಕಾಶ್ಮೀರ್ ಶಾಲೊಂದನ್ನು.... ಸೂಳೆಯು ನಿದ್ರೆಗೆ ಭಂಗಬರದಂತೆ ಹಗುರವಾಗಿ ಅವಳಿಗೆ ಹೊದಿಸಿ, ಮೂಲೆಯಲ್ಲಿರುವ ಜಮಖಾನ ವೊಂದನ್ನು ಸೋಫಾವಿನ ಕಾಲಿನಕಡೆ ಹರಡಿ, ಆರಾಮ ಕುರ್ಚಿಯೊಂದರಲ್ಲಿನ ದಿಂಬನ್ನು ಜಮಖಾನೆಯ ಕೊನೆಯಲ್ಲಿಟ್ಟು ಕೋಣೆ ಮೂಲೆಯಲ್ಲಿರುವ ಮೇಣದ ಬತ್ತಿಯನ್ನು ಹಿತ್ತಾಳೆಯ ಸ್ಟ್ಯಾಂಡ್ ಸಹಿತ ತಂದು ದಿಂಬಿನ ಪಾರ್ಶ್ವದಲ್ಲಿ ಇಟ್ಟು, ಕಿಸೆಯಿಂದ ತೆಗೆದ ಸಿಗರೇಟನ್ನು ಹಚ್ಚಿಕೊಂಡು, ಜಮಖಾನೆಯ ಮೇಲೆ ಮಲಗಿಕೊಂಡು ಸಿಗರೇಟನ್ನು ಸೇದಿ, ಸೂಳೆ ಮಲಗಿರುವ ಸೋಫಾವಿನ ತಳದಲ್ಲಿರುವ ಬಾಳಬಂದು ಲಿಪಿಯ ಭಗವದ್ಗೀತೆಯನ್ನು ತೆಗೆದು, ಆತ್ಮಗತಂ]

ಸಮೋಹಂ ಸರ್ವಭೂತೇಷು
ನಮೇದ್ವೇಷೋಽಸ್ತಿ ನ ಪ್ರಿಯಃ.

[ಎಂದು ಓದುತ್ತಿರುವ ಹಾಗೆಯೇ ತೆರೆಯು ಬೀಳುವುದು.]

Act 2.

Sc. 1.

ಹ ತ್ತು ವ ರ್ಷ ಗ ಳ ಅ ನ ೦ ತ ರ

[ಸ್ಥಳ : ಸೂಳೆಯ Sitting Room. ಕಾಲ : ಸಾಯಂಕಾಲ. Discovered ಸುಬ್ಬು (aged **thirty nine**) and ಸೂಳೆ (aged **thirty four**) ಪುಟ್ಟಾ (aged **four**).]

ಸುಬ್ಬು : ಇದೇನ್ ಚಿನ್ನಾ ?......ಬಂದು ಬಿಟ್ಟೆ ಇಷ್ಟ್ ಬೇಗ್ನೆ ? ಬ್ಯಾಂಡ್ ಬಾರ್ಸ್ತಿದ್ರೆ Cubbon Parkನಲ್ಲಿ ?

ಸೂಳೆ : ಬ್ಯಾಂಡ್ ಕೇಳ್ಕೊಂಡ್ತ......ನಿಂತಿತ್ತೀನೋ ಇಲ್ಲವೋ ? ನಿನಗೆ [illegible] ಮನುಷ್ಯರೊಬ್ರು ಒಂದು ವ್ಯಕ್ತಿ ಸಮೇತ ನೆಟ್ಟಗೆ ಎಲ್ಲಿರೆದುರ್ಗೆ ಬಂದ್ರು ನನ್ನ [illegible] ಹತ್ತಿರ......ಯಾರಿರ್ಬಹ್ದು ಹೇಳು...ಆ ಹೆಂಗ್ಸು ?......ನೋಡೋಣ ನಿನ್ನ ಘಟ್ಟಿಗತನಾ ?

ಸುಬ್ಬು : ನನ್ನ ಘಟ್ಟಿಗ್ತನಾ ಇರ್ಲಿ........ನೀನೇ ಹೇಳು.

ಸೂಳೆ : ಲೇಡಿ...........

ಸುಬ್ಬು : (ಚಮಕಿತನಾಗಿ) ಯಾರು ? ಲೇಡಿ ಶಿವದಾಸಯ್ಯರ್ರೇ ?

ಸೂಳೆ : ಮತ್ತ್ಯಾರೋ ಮಂಕು ! ಐವತ್ತು ವಯಸ್ಸು ! ಬೆಳ್ಳೀ ಕೂದ್ಲು. ಎಂಬ್ರು ಹದ್ನೈದ್ ವರ್ಷ ತುಂಬದ ಹುಡ್ಗೀಗಿಂತ Sweet faceಉ......ನಮ್ಮ ಪ್ರಟಾಣ [illegible]... ......ನೆಟ್ಟಗೆ ಬಂದು......... ಆ ರಾಮ್ರಾಯು ಅವನ ಉಬ್ಬಿಲ್ಲು ತುಂಬಿದ ಬಾಯಿಂದ "Let me introduce" ಅಂತ ಶುರು ಮಾಡಿರೋವಾಗ್ಲೇ...ಇವಳು ತನ್ನ ಸ್ವ [illegible] ಹಿಡ್ಕೊಂಡು (ಮುಖವನ್ನು ವಿಕಾರ ಮಾಡುತ್ತಾ) "ನಿಮ್ಮನ್ನು ನೋಡ್ಬೇಕೂ ಅಂತ ಅನೇಕ ದಿವಸ್ಗಳಾಸೆ ನನಗಿತ್ತು.......... ಆದರೆ ನಮ್ಮ City fathersಉ" ಈ ಮುನಿಸಿಪಾಲಿಟಿ Councillersಉ ಸುಬ್ಬೂ ! ಊರಿಗೆ ಅಪ್ಪಂದ್ರಂತೆ——"ನಮ್ಮ ಬೆಂಗಳೂರು ಮುನಿಸಿಪಾಲಿಟಿ Councillers ಮೂಲಕ ನಿಮ್ಮನ್ನು ನಾನು ಈವತ್ತು ಕಂಡದ್ದು ಬಹಳ ಸಂತೋಷ !" ಅಂದ್ಲು ......ನೋಡು ಸುಬ್ಬೂ ಅವಳೆಲ್ಲಿ !......ನಾನೆಲ್ಲಿ !......ಇದರಲ್ಲೇನೋ ಗೋಲ್‌ಮಾಲ್ ಇಧೇಂತ ಎತ್ಕೋತ ನನಗ್ ಗುಮಾನಿ.......... "ಸಂತೋಷಾಮ್ಮಾ ನಿಂತ್ಕೊಂಡು ಯಾಕೆ ಮಾತಾಡ್ತೀರ ......ಒಳಕ್ಕೆ ಬಂದು ಕೂತ್ಕೊಳ್ಳಿ. ಇಬ್ಬರಿಗೂ ಸ್ಥಳ ಇದೆ ವಿಕ್ಟೋರಿಯಾಲೀ!" ಅಂದೆ...... ಅನ್ನತ್ಲೂವೆ ಸುಬ್ಬೂ...........ಆತ "ಈಗ ಜಾಸ್ತಿ ಬಿಡುವಿಲ್ಲ ....ಲೇಡಿ ಶಿವ ದಾಸಯ್ಯರ್ರಿಗೆ Prostitution questionನಲ್ಲಿ interest ಇಧೆ...ಅದ್ನ ನಿಮ್ ಜೊತೇಲಿ ಮಾತಾಡೋಕೆ ಬರ್ಬೇಕೂಂತಿದ್ರೂ" ಅಂತ ಹೇಳ್ತಿದ್ದಾಗ್ಲೇ, ಆ Prostitution ಅನ್ನೋ ಪದ ಕೇಳತ್ಲೂವೇ, ಸುಬ್ಬೂ ನನ್ನ ಮೈ ಉರಿದಿದ್ದಲ್ದೆ, ನನ್ನ ಕಣ್ಣುಗಳು ಕಾರ್ತಿದ್ದ ಕಿಡಿ ನೋಡೋ ಏನೋ ಕಾಣೆ ಮುಖ ತಿರುಗಿಸ್ಕೊಂಡ ಆತ...ಅವನಿಗಡ್ಡ ಮಾತಾಗಿ ಆಕೆ......ನಮ್ ಧ್ವಾನ ಧ್ವನಿಯಿಂದೆ ನೋಡು ಅದಕ್ಕಿಂತ ನಯವಾಗಿ "Do not mind him...ಏನು ಅವರೂ ಅವರು ಗಂಡಸರು..........ಅವರಿಗೆ ಹೆಂಗಸಿನ delicacy" ಅಂತ ಅದೇನೋ ಇನ್ನೂ ಸ್ವಲ್ಪ ಇಂಗ್ಲಿಷ್ ಹೇಳ್ಕೊಂಡು......ಒಟ್ನಲ್ಲಿ..........."ರೇಗ್ಬೇಡಿ ! ಸೂಳೆಗಾರ್ಕೆ ನಮ್ಮ ದೇಶಕ್ಕೆ..." ಅದೇ ನೀ ಕೊಟ್ಟ ಲೆಕ್ಚರ್ ಸಾರಾಂಶ...ಅದೆಲ್ಲಾ ಶುಷ್ಕವಾಗಿ ಹೇಳಿ......ಅದ್ನ [illegible] ಬಗೆ ನನ್ ಜೊತೇಲಿ ಮಾತಾಡಿ ನಿರ್ಧರಿಸೋಕೆ ನಾಳೆ ಬೆಳಿಗ್ಗೆ ಒಂಬತ್ತ್ ಗಂಟೆ ಹೊತ್ಗೇ ನಮ್ಮನೇಗ್ ಬರ್ತಾಳಂತೇ !.........ಬೆಳಿಗ್ಗೆ ಅಷ್ಟ್ ಹೊತ್ಗೇ ಎದ್ದು. ಹೂವು. ಹಣ್ಣು. ಹಂಪಲು. ಅಡಿಕೆ. ಎಲೆ, ಕುಂಕುಮ. ಹಸೀಅರಿಶ್ನ ಅಮ್ಮನ ಪೂಜೇ ಸಾಮಾನ್ನಿಂದ ಬಾಚ್ಕೊಂಬಂದು......ಎಲ್ಲಾ ತಂದು ಮೂರು ಬೆಳ್ಳೀ ತಟ್ಟೆ ತುಂಬ ತುಂಬಿ, ಅವಳ್ ಹೋಗೋವಾಗ ಅವಳ್ ಕಾರ್ ತುಂಬ ಪೇರ್ಸಿ Pack off ಮಾಡ್ಬೇಕು,......ಅಲ್ವೇ ಸುಬ್ಬೂ ! ಮನೇಲಿರೋದು ಸಾಲ್ದಿದ್ರೆ...... ಬ್ಯಾಗ್ನಲ್ಲಿ ನೀನ್ ಹಾಕಿದ್ ದುಡ್ಡು ಹಾಗೇ ಇಧೆ !...ಅದೂ ಸಾಲ್ದಿದ್ರೆ ಕೈಪೆಟ್ಗೆ ಬೀಗದ ಕೈ ನಿನ್ನ ಹತ್ರವೆ ಇಧೆ ! ಅವಳ್ ಗಂಡ್ನ ಅಂತಸ್ತೆಲ್ಲಿ......ನಾವೆಲ್ಲೀ ! ಇಷ್ಟಕ್ಕೂ ಮಕ್ಕಳಿಲ್ಲಾ......I.C.S. ಒಬ್ಬ......ಇನ್ನೊಬ್ಬ್ನಿಲ್ಲೋ ದೊಡ್ಕೆಲ್ಸ...ಹೆಣ್ಮಕ್ಳೆಲ್ಲಾ ದೊಡ್ ದೊಡ್ ಕಡೇ ಕೊಟ್ಟಾರೆ... ಸಂತೋಷ್‌ವಾಗಿ "ನಾವಾಯ್ತು ನಮ್ ಬಂಗ್ಲೇ ಆಯ್ತು ನಮ್ ಸುಖ ನಮ್ಮದಾಯ್ತು" ! ಅಂತ ಇರ್ದೆ ಈ ಪ್ರಾಣೀಗೆ ಈ ವಯಸ್ನಲ್ಲಿ ತಾನು ಸುಖವಾಗಿದ್ರೂ ದೇವ್ರು ಎದುರ್ಗೆ ತನ್ನ ಹಾಗೇ

ಹೆಂಗಸ್ರಾಗಿ ಹುಟ್ಟಿ ನರಳ್ತಿರೋ ನನ್ನಂಥಾವ್ರ ಬೋಚ್ಚೆ ತಗಲಿರೋ ಈ ಹುಚ್ಚು ಯಾಕ್ ಹುಟ್ಟಿದ್ಯೋ ಕಾಣೆ ....ಮುಟ್ಯ ದೇವ್ರ ಸೃಷ್ಟಿ ವಿಚಿತ್ರ !! ಮರೀಬೇಡ........ ದೊಡ್ಡ ಬೀರು ಬೀಗದ್ ಕೈ ನಿನ್ನ ಹತ್ರವೇ ಇಲ್ವೇ ?......ಬೆಳಿಗ್ಗೆ ಏಳತ್ತೂ.......ತಟ್ಟೆ, ಪನ್ನೀರ್ ದಾನಿ, ಗಂಧದಾ ಬಟ್ಲು ಎಲ್ಲಕ್ಕೂ SILVO ಹಾಕಿ ಏಂಟ್ ಗಂಟೆ ಅಷ್ಟೊತ್ಗೇ ಸಿದ್ಧವಾಗಿಡ ಬೇಕೂಂತ ನಂಜನ್ಗೆ ಹೇಳ್ಬಿಟ್ಟು ನೀನ್ ಗಾಡೀಲಿ ಹತ್ಕೊಂಡ್ ಹೋಗಿ, ಮಾರ್ಕೆಟ್ನಿಂದ ಎಂಟೂ ವರೇಗೆ ಇಷ್ಟಿರ್ಬೇಕು......ಆಕೆ ಬರೋದು ಒಂಭತ್ಘಂಟೆ......ಮರೀಬೇಡ ! .....ಪುಟ್ಟಾ ಎಲ್ಲೀ ?......

ಸುಬ್ಬು : ಶನಿವಾರ ಸಾಯಂಕಾಲ....ಯಥಾಪ್ರಕಾರ ಮುನಿಸಿಪಲ್ ತೋಟ...... Pramಊ.

ಸೂಳೆ : ಜೊತೇಲಿ ?

ಸುಬ್ಬು : ನಂಜ.

ಸೂಳೆ : ಅಮ್ಮ ?

ಸುಬ್ಬು : ಅವ್ಳು ಯಥಾಪ್ರಕಾರ ಶನಿವಾರ......ಬೇರೆ ಈ ವಾರ ! ಆಂಜನೇಯನ್ ಗುಡೀಗೆ !

ಸೂಳೆ : ಇದ್ಯಾಕೋ !! ಅಮ್ಮನ್ಗೆ ಯಾಕೋ ಒಂದೊಂದ್ ಶನಿವಾರಾನೂ ಒಬ್ಬೊಬ್ಬ ಹೊಸ ದೇವ್ರು ! ಅವಳ ಆಪ್ಯೆರು ಶನಿವಾರದ್ದೇವ್ರು, ಶನೇಶ್ವರನ್ ಗುಡೀನೇ ! ಹಾಗೂ ಇಧೆಯೇನೋ ಒಂದ್ಗುಡಿ ?

ಸುಬ್ಬು : ಶನೇಶ್ವರನ್ಗೆ ಗುಡೀನೇ ?......ಪ್ರಾಕಾರ ಕಟ್ಟಿ ಒಳಗೆ ಪೆಟ್ಟಿಗೆ ಹಾಗೆ ಭದ್ರ ವಾಗಿ ಇಡೋದು, ಎಲ್ಲಾ ದೇವರ ಗುಡಿಗಳ್ನ ! ಶನೇಶ್ವರನ್ ಗುಡಿ ಈ ಲೋಕ್‌ಲೋಕಾನೇ !...... ಪ್ರಾಕಾರ ಎಲ್ಲಿದಕ್ಕೇ. (ಇಬ್ಬರೂ ನಗುವರು)

[ತೆ ರೆ]

Scene 2

[ಸ್ಥಾನ : ಯಥಾಪೂರ್ವಂ. ಕಾಲ : ಬೆಳಿಗ್ಗೆ ಒಂಭತ್ತು ಘಂಟೆ. Discovered ಸೂಳೆ, ನಾಲ್ಕು ವರ್ಷ ವಯಸ್ಸಿನ ಮತ್ತು pram ನಲ್ಲಿ ಕುಳಿತಿರುವ ಪುಟ್ಟಾ ; ಎರಡು ಹೆಜ್ಜೆ ಹಿಂದೆ ನಂಜಾ ಮತ್ತು 'ಬಾ ಮಗು' ಎಂದು ಕೈಚಾಚಿ ಪುಟ್ಟಾವನ್ನು ಕರೆಯುತ್ತಿರುವ ಲೇಡಿ ಶಿವದಾಸ ಅಯ್ಯರ್.]

ಸೂಳೆ : ಅಯ್ಯೋ ! ಹಾಗ್ ಬರೋದಿಲ್ಲಾಮ್ಮಾ ಅವಳು !...ಹೊಸಬ್ರು ಕರದ್ರೆ ಹಟ ಜಾಸ್ತಿ, ಹಂದಿ...ಪಿಗ್ಗೂ piggoo ಅಂತಾರಲ್ಲಾ ಹಾಗೆ........

ಲೇಡಿ ಶಿವದಾಸಯ್ಯರ್ : ಯಾಕೆ ಗಂಭೀರ್ವಾಗಿ Little Lady ಹಾಗೆ ಕೂತಿದ್ದಾಳೆ... [ಪುನಃ ಬಾಹುಗಳನ್ನು ಚಾಚುತ್ತಾ] ಬಾಮ್ಮಾ...ಬಾ ! ಬೆದರ್‌ಬೇಡ ಬಾ !

ಸೂಳೆ : ಹಯ್ಯೋ ! ಹಂದೀಂದ್ನಲ್ಲಾಮ್ಮಾ ಅದು. ಈಗೇನೋ ಇಂಗ್ಲಿಷ್ ಗೊಂಬೆ ! ರೆಪ್ಪೆ ಮುಚ್ಚಿದ್ದಾಗೆ ಕಣ್ಣುಗುಡ್ಡಗಳ್ನ ಬಿಟ್ಕೊಂಡು ಹೊಸ್ದಾಗ್ ಬಂದ ನಿಮ್ಮನ್ನ ಗಂಭೀರ್ವಾಗಿ ನೋಡ್ತಿದ್ದಾಳ್ಯೇ ಹೊರ್ತು. ನಾಳೆ ಬೆಳಿಗ್ಗೆ ನೋಡ್ಬೇಕು ಅವಳ್ನ ! Frockನ ಕಿತ್ತೆಸ್ದು......

ಬೆತ್ತ್ಲೆದ್ಮೆ ಬಿಟ್ಕೊಂಡು...ಈ ಬೀದಿ ಪಿಲ್ಲಾ ಓಡಾಡ್ತಾ ಬುಟ್ಬಿಟ್ಟು ಮಗೂನ್ನೂ ಪರ್ಸ್......ಅವ್ರುಗ್ಳ ಕೈಲೂ ಪರ್ಚೆಸ್‌ಕೊಂಡು......ಒಂದ್...ಚರಂಡಿ......ಒಂದ್ ಎಂಜಲ್ ತೊಟ್ಟೀ ಪಾಠ ಇಲ್ದೆ ಬಿದ್ದು ಹೊರಳಾಡಿ ಮನೇ ತಪ್ಪಿಸ್ಕೊಂಡದ್ದಕ್ಕೆ ನೆಪಾಂತ ಯಾವುದಾದರೂ ಬ್ಯಾಂಡ್ ಬಾಸ್ಸೋರ್ನ ಜಟ್ಕಾದ್ ಜೊತೇಲಿ ದೊಡ್ಡ್ ಬೀದಿಯುದ್ದಕ್ಕೂ ಓಡಿ ಒಂದು ಸಿನಿಮಾದ್ಕೊಟ್ಟೆಸೋ ಇಲ್ಲ ನಾಟಕದ್ನೋಟೀಸೋ ಬಿದ್ದದ್ನ ಕಸ್ಕೊಂಡ್ ಮನೇಗ್ ಬಂದ್ ಸೇರೋವಾಗ್...ಈಗ ನೀವ್ಹೇಳೋ "Little Lady" ಅಲ್ಲ? "ಈ ಸಾಧು ಬೆಕ್ಕಿನ್ ಮರಿ..... ಈ ಹಾಲ್ನ ಏನ್ಹಾಗಿ ಕುಡ್ದಿದ್ದೀತೆ ?" ಎಂಬೋ ಮುಖತೀನ್ ಇಟ್ಕೊಂಡೂ......(ಪುಟ್ಟಾವಿನ ಧ್ವನಿಯನ್ನು ಅಣಕಿಸುತ್ತಾ) "ನೋಟೀಸ್ ತಂದೇವ್ಮಾ, ನಿನ್ಗೆ ನಾಟ್ಕದ್ದು !!" ಅಂತ ಏಳ್ ಗಂಟೇಗೆ ಕಾಫಿ ಕುಡ್ದು ಮನೇ ತಪ್ಪಿಸ್ಕೊಂಡೋಳು ಹತ್ತ್ ಗಂಟೇಗೆ ಬಂದ್ ನಿಲ್ತಾಳೆ! ಚೆನ್ನಾಗಿ ಹೇಳದ್ರಿ..."Little Lady" ಈ ಅಂತ ! [ಪುಟ್ಟಾನನ್ನು pramನಿಂದ ಹೊರಕ್ಕೆತ್ತಿ ನಿಲ್ಲಿಸುವಳು.]

ಲೇಡಿ ಶಿವ : (ಮಗುವಿನ ಗಲ್ಲವನ್ನು ಮುಟ್ಟಿ ತಲೆಯನ್ನು ಸವರುತ್ತಾ) ಮಾತಾಡ್ತಾಳೇ?...

ಸೂಳೆ : ಸ್ಪಷ್ಟವಾಗಿ ಬೊಗಳ್ತಾಳೆ......ಬೈಗ್ಯಾದ್ರೆ ! ನಂಜನ್ನ, ಸುಬ್ಬೂನ. ನನ್ನೂ ಜಿಪ್ಪೆ !! ಮೈಸೂರ್ ಕಾಸ್ ಬಂಗ್ಲೆ ಇವಳ್ಗೆ ತೋರಿಸ್ದಾರಭ್ಯ ಅಲ್ಲಿರೋ ಮೃಗಪಕ್ಷಿಗಳ್ನ ಅವಳ ಪಾಟು ಕಣ್ಣಿಗ್ನಿಂದ ಗಮನಿಸಿ,......ಈಗ ನಮ್ಮ ಮನೇಲಿರೋರ್ಗೆಲ್ಲಾ ಆಯಾ ಮೃಗ ಜಂತು ಪಕ್ಷಿಗ್ಳ ಹೆಸ್ರೇ ಇಟ್ಟಿಧಾಳೆ ! (ಪುಟ್ಟಾವನ್ನು ಕುರಿತು) ನಾನ್ ಯಾರೇ ?

ಪುಟ್ಟಾ : ಹುಲೀಮ್ಮಾ !

ಸೂಳೆ : ಯಾಕೇ !?

ಪುಟ್ಟಾ : ಯಾಕೇನಮ್ಮಾ ?......ಹುಲೀನೇ !

ಸೂಳೆ : ನೋಡಿದಿರಾಮ್ಮಾ......ಹ್ಯಾಗೆ ಗಮನಿಸ್ತವೆ ಮಕ್ಕಳು. (ಪುಟ್ಟಾವನ್ನು ಕುರಿತು) ......ಅಜ್ಜೀ ?

ಪುಟ್ಟಾ : ರಣಹದ್ದು ! ಕೇಳೋದೇನಮ್ಮಾ......ಸುಬ್ಬೂ......ಜಿಂಕೆ ಅಲ್ಲ........... ನಮ್ಮೆಲ್ರನ್ನೂ ನೋಡ್ಕೊಳ್ತಾ ಹಾಲು ಕೊಡೋ ಹಸು !

ಸೂಳೆ : ಹೀಗೆಲ್ಲಾ ಬೈಯ್ಯೋ ಮಾತುಗ್ಳು ಮಟ್ಟಿಗೂ ಸ್ಪಷ್ಟ ! ಸಾಧಾರಣ ಸಂಭಾಷಣೇಯೋ ಕೊಚ್ಚೆ ! ಈ ಸಂಭ್ರಮದಲ್ಲೋ ಸುಬ್ಬು ಹೇಳ್ದ ಸಂಸ್ಕೃತ............ನಮ್ಮ ಸ್ನೇಹಿತ್ರು ಸೂಸ್ದ ಇಂಗ್ಲೀಷೂ ಕಲಸುಮೇಲೋಗರ ಆಗಿ [ಪುಟ್ಟಾವಿಗೆ] ಹೇಳೇ ! ಮಾಯಾ ಹಿಡಂಬೀ........ "ಮಾತಾ"......!?

ಪುಟ್ಟಾ : ಮಾಟಾ ನ್ಯಾಸ್ಟಿ......ಪಿಟಾ ನ್ಯಾಸ್ಟಿ......ನ್ಯಾಸ್ಟೀ......ಬಂಡು...

ಸೂಳೆ : (ಅಡ್ಡವಾಗಿ ಪುಟ್ಟಾನ ಬಾಯನ್ನು ಕೈಯಿಂದ ಮುಚ್ಚಿ ನಗುತ್ತಾ) ಸಾಕೇ ! ಸಾಕು ನಿನ್ನ nasty ! ನೋಡೀಮ್ಮಾ ಇವಳ ಕಣ್ಗೆ ನಮ್ಮನೇಲಿರೋರೆಲ್ಲಾ. ನಮ್ಮನೇಗ್ ಬರೋರು ಒಬ್ಬೊಬ್ಬ್ರೂ ಇಂಗ್ಲೀಷ್‌ನಲ್ಲೂ ಸಂಸ್ಕೃತದಲ್ಲೂ ಪ್ರಾಜ್ಞರು ಅಂತ ನನಗ್ ಕಂಡ್‌ಬಂದ್ರೂ ಪುಟ್ನಿನ್ ಕಣ್ಣಿಗೆ ಬಾಯಿಗೆ......nasty !!........... ಕರ್ಕೊಂಡ್ಹೋಗೋ ! (ನಂಜನು ಪುಟ್ಟಾವನ್ನು ಎತ್ತಿಕೊಂಡು ಎಡಗೈಯಿಂದ ಬಂಡಿಯನ್ನು ಎಳೆದುಕೊಂಡು ಕೋಣೆಯ ಹಿಂದಿನ ದ್ವಾರದಿಂದ ನಿಷ್ಕ್ರಮಿಸುವನು.)

ಕೂತ್ಕೊಳ್ಳೀಮ್ಮಾ ! ಈ ಪಟಿಂಗಿಯ ಪುರಾಣಾ ಹೇಳೋ ಗಲಾಟೇಲಿ ನಮ್ಮಾ ಹಾಳ್ ಕೊಂಪೇಗ್ ಬಂದು. ನಿಮ್ಮಂಥಾ ಪುಣ್ಯವಂತರ್ಗೆ ನನ್ ಕೈಯಿಂದ ಆಗೋ ಅಲ್ಪ ಸ್ವಲ್ಪ ಆತಿಥ್ಯ ಮರ್ಯಾದೇನೂ ಮರ್ತ್ ಬಿಟ್ಟೆ......ಆದ್ರೇನು......ಮಕ್ಕಳ್ ಹೆತ್ತೋರು......ನೀವೂನೂ !

ನಿಮಗ್ ಅರ್ಥವಾಗುತ್ತೆ......ಕೂತ್ಕೊಳ್ಳೀ......[ಪಕ್ಕದಲ್ಲಿರುವ Chesterfieldನ್ನು ಸೂಚಿಸಿ ಆಕೆಯು ಕೂಡುತ್ತಲೂ ಪಕ್ಕದಲ್ಲಿರುವ ಕುರ್ಚಿಯಲ್ಲಿ ತಾನೂ ಕೂಡುವಳು.]

ನೋಡೀಮ್ಮಾ (Sweeping her right arm to the Gods and Goddesses swung right around above her head) ನಿಮ್ಮ ಬಂಗ್ಲೆಗಳಲ್ಲಿ ಗೋಡೇಗ್ ತಗ್ಲಹಾಕೋ ಸೀತಾ ಸಾವಿತ್ರಿಗ್ಳ ಪಟಗಳ್ನೇ ನಮ್ ಮನೇಲ್ಲೂ ಗೋಡೇಗ್ ತಗ್ಲ ಹಾಕ್ಕೊಂಡಿರೋದು ಮನ್ನನ್ದ ಮಾಮೂಲು. ಇದೊಂದೇ ನಮ್ಮಿಬ್ರ ಬಾಂಧವ್ಯ. ನೀವೆಲ್ಲೀ?... ನಾವೆಲ್ಲೀ ? ಸಮಾಜದಲ್ಲಿ !?! ನೀವು ನನ್ನೀ ಕೊಂಪೇಗ್ ಬಂದಿದ್ದು ಬೆಳಕ್‌ಕಾಣ್ದ ಬಡವರ ಬಿಲಕ್ಕೆ ಸೂರ್ಯನಾರಾಯಣ್‌ನೇ ಹೊಕ್ಕ್‌ಹಾಗೆ ! ನಮ್ಮೀ ಸಮಾಜದ ವ್ಯವಸ್ಥೇಲಿ ಪಾಪಿಗಳು ಅಂಬಾ ದರ್ಶನಕ್ಕೆ ಗುಡಿಗ್ಹೋಗೋದು ಸಹಜಾಮ್ಮಾ. ಏನ್ ಹೇಳಿದ್ರೂನೂಮ್ಮಾ ನಿಮ್ ಚರಿತ್ರೆ ನನಗೇನೂ ......ನಮ್ಮ ದೇಶಕ್ಕೆಲ್ಲಾ ಬೆಳಕೂಮ್ಮಾ ! ನಿಮ್ ಗೃಹದಲ್ಲಿ ನಿಮ್ಮ ದರ್ಶನಕ್ಕೆ ನಾನ್ ಬರೋದು ಈ ಸಮಾಜ್ದ ಈ ಸ್ಥಿತೀಲಿ ಸಾಧ್ಯವೇಮ್ಮಾ ? ನನಗಿರೋ ಆಶ್ಚರ್ಯ ಪರಮಾತ್ಮನ್ ಕೃಪೆಯಿಂದ ನನ್ನ ಗೃಹದಲ್ಲೇ ತಮ್ಮ ದರ್ಶನ ಆದದ್ದು, ಆತನ ಕೃಪೆಯೋ ತಮ್ಮ ಕರುಣೆಯೋ.........ನನಗೊಂದೂ ತೋಚೋಲ್ಲಾ ! ಇಹಪರಗ್ಳೆರಡ್ರ ಗತೀನೂ ಸೊನ್ನೆಯಾಗಿರೋ ನಾನು ನನ್ ಕಸುಬನ್ನ ಸಲ್ಲಿಸೋ ಸೂಳೇರು ನಮ್ಗ್ಳ ಸಮಾಜಕ್ಕೆಲ್ಲಾ, ಗರತಿಯರು...ಕ್ಷಮ್ಸಿ...ಸಂಸಾರಿಗ್ಳು....ಇವರಿಗೆ ಮೇಲ್ಪಂಗ್ತಿ ಯಾಗಿರೋ ತಮ್ಗ್ಳ ಸಂಬಂಧ...(Sweeps her forefinger, pointing out the pictures swung amid the ceiling and the floor) ಈ ದೇವರುಗ್ಳು !! ಈವತ್ತು ತಾವು ಇಲ್ಲಿ ಬಿಜಯಮಾಡಿದ್ದ್ರ ಅರ್ಥ ನನಗಿನ್ನೂ ಗೊತ್ತಾಗ್ಲಿಲ್ಲ......ನೆನ್ನೆ ಸಾಯಂಕಾಲ ಈ Prostitution ಇಂಗ್ಲೀಷು......"ಸೂಳೇಗಾರ್ಕೆ"...ನಮ್ಮ ಭಾಷೆ ! ಈ ಬಾಬ್ತು...?......

ಲೇಡಿ ಶಿವ : ನೋಡೀ ! ನಮ್ಮ ಯಜಮಾನ್ರೂ......ದೊಡ್ಡ ಕೆಲಸದಲ್ಲಿದ್ದ್ರೂನೂ...... ದೊಡ್ಡ ಮನುಷ್ಯರ ಹೆಂಡ್ತಿಗ್ಳು ತಾವೂ ಸಮಾಜಕ್ಕೋಸ್ಕರ ಕೆಲಸಮಾಡಬೇಕೂ ಅಂತ ಹೇಳಿದ ಪ್ರಕಾರ, ನಮ್ಮೂರಿನಲ್ಲಿ ಇರುವ ದೊಡ್ಡ ಮನುಷ್ಯರ ಹೆಂಡ್ತೀಗ್ಳೆಲ್ಲಾ...ನಮ್ಮ ಗಂಡಂದಿರು ಎಲ್ಲರೂ ನಾವೂ ಸಂತೋಷವಾಗಿದ್ದರೂ......ನಮ್ಮ ಗಂಡಂದಿರ ಕೆಲಸ, ಸಂಬಳ ಇಲ್ಲದ ಗಂಡಸರ ಹೆಂಡತಿ ಯರನ್ನು ಸಹೋದರಿಯರಾಗಿ ಭಾವಿಸಿ ಅವರಿಗೆ ಸಹಾಯವನ್ನೂ ಮಾಡುವ ಸಂಘ ಒಂದು ಏರ್ಪಡಿಸಿ ಗಂಡಸರೇ ಇಲ್ಲದೆ ಸಮಾಜಕ್ಕೆ ದೇಹಾನ ಅರ್ಪಿಸಿ ಜೀವಿಸುವ ಸೂಳೆ...ಕ್ಷಮ್ಸಿ ! ನಿಮ್ಮ "Little Lady" ಯನ್ನೂ ನಿಮ್ಮನ್ನೂ ನೋಡಿದ ಮೇಲೆ ನೀವು ಎಷ್ಟಾಗಿದ್ದರೂ ನಿಮ್ಮ ಬುದ್ಧಿ......ಚೈತನ್ಯ ಇಲ್ಲದ ನಿಮ್ಮ ನಮ್ಮ (grasping ಸೂಳೇ's hand vehemently) ಸಹೋದರಿಯರಾದ ಇತರರಿಗೆ ಸಹಾಯ ಮಾಡುವುದಕ್ಕೇನೇ ನಾನು ನಿಮ್ಮನ್ನು ನಿನ್ನೆ ಸಾಯಂಕಾಲ Cubbon Parkನಲ್ಲಿ meet ಮಾಡಿ appointment fix ಮಾಡಿ ಈಗ ಬಂದಿರೋದು !

ಸೂಳೆ : ಏನ್ಸಹಾಯ ಮಾಡೀರಮ್ಮಾ ನೀವಾಗ್ಲೀ, ತಾವು ಹಿಂದೆ ಕುಳಿತು ನಿಮ್ಮನ್ನು ಮುಂದೆ ದಬ್ಬಿದ ನಿಮ್ಮ ಕಮಿಟೀ ಆಗ್ಲೀ ? ಅಲ್ಲಮ್ಮಾ ! ನಾವೆಲ್ಲಾ ಸಹೋದರಿಯರೂಂತ ನೀವು ಹೇಳಿದರೂ ಭೂಲೋಕದ ಸ್ವರ್ಗದಲ್ಲಿರೋ ಸೀಟುಗಳೆಲ್ಲಾ high societyಗೆ Reserve ಆಗ್ಹೋಗಿ ನಮ್ಮ ಗತಿ ಈ ಲೋಕದಲ್ಲೇ ನರಕಾ ! ಇಹಪರಗಳೆರಡರ ಗತೀನೂ ಸೊನ್ನೆಯಾಗಿರೋ ನನಗೂ ನನ್ನಂಥ ಲಕ್ಷಲಕ್ಷ ಹೆಂಗಸರಿಗೂ ಏನ್ ಸಹಾಯ ಮಾಡೀರಮ್ಮಾ ?

ಲೇಡಿ ಶಿವ : ನೀವೇನೋಮ್ಮಾ......ನೀವು ! ಆದ್ರೂ ನಿಮ್ಮ ಪುಣ್ಯ ಪ್ರಭಾವ ಇಲ್ದೆ ಹೊಟ್ಟೇಗೆ ಹಿಟ್ಟೂ ಮಲಗೋಕ್ ಸೂರೂ ಬೇನೆಗೆ ಔಷಧ್ವೂ ಇಲ್ದೆ ನಿಮ್ಮ ನಮ್ಮ ಹಾಗೆ ಹೆಂಗಸ್ರಾದ ಸಹಸ್ರ ತಂಗಿಯರ್ಗೆ ಸಹಾಯ ನಾನಾಗ್ಲೀ, ನನ್ನನ್ ಮುಂದಿಟ್ಟಿರೋ ಕಮಿಟಿಯಾಗ್ಲಿ, ನೀವ್ತಾನೇ ಆಗ್ಲಿ......ನಾವೆಲ್ರೂವೇ ಏಕಮನಸ್ಕರಾಗಿ ಸಹಾಯಮಾಡ್ಬೇಕು......ಅಂಬೋ ಉದ್ದೇಶ ತಪ್ಪೇ ? ಹೆಂಗ್ಸೂ ಮಕ್ಕಳ್ನ ಹೊತ್ತೂ, ಹೆತ್ತೂ ತಾಯಿಯಾಗೋದೇ ಪ್ರಕೃತಿಯ ನಿಮಿತ್ತ ! ಪೃಥಿವಿಯ ಅನಂತತ್ವ ! ನನಗೂ ನಿಮ್ಮ ಪುಟ್ಟಾ ವಯಸ್ಸು ಮಗಳು ಇಧಾಳೆ ! ಆದ್ರೂ ನಿಮ್ಮ

ಪುಟ್ಟಾ ಮುಖಾ ನಿಮ್ಮ ಸುಂದರ ಮುಖದ ಹಾಗೇ !......ಮೂಗೂ ಕಣ್ಣು ನಿಮ್ಮ ಹಾಗೇ!...... ಅಲ್ಲ.......ಆದರೂ—"ಅಲಮೇಲು" ಅವಳ ಹೆಸರು—ಅದ್ಯಾಕೊ ನನಗೆ ನಿಮ್ಮ ಪುಟ್ಟಾ ನಿಮಗೆ ಹ್ಯಾಗೋ ನನಗೆ ಅವಳು. "ಸೂಳೆ!" "ಸಂಸಾರಿ !" ಇದೆಲ್ಲಾ ಸಮಾಜ ತನ್ನ "ಜ್ಞಾನ" "ಅಜ್ಞಾನ"ದ ಆವೇಶದಲ್ಲಿ ಸ್ತ್ರೀಯರಿಗೆ ನಿರ್ಣಯಿಸುವ "ವೇಷ" ! ಸೂಳೆಯಾಗ್ಲೀ !....... ಸಂಸಾರಿಯಾಗ್ಲೀ ! ಮುಖ್ಯ ...... ಸ್ತ್ರೀ......ಸ್ತ್ರೀನೇ ! ಆದ್ರೆ ಸಂಸಾರ್ಸ್ತ್ರೀ ತಾನು ಅನುಭವಿಸೋ ಸುಖಾನ ಮರೆತು ಆ ಸುಖಿಗ್ಳು ಇಲ್ಲದ ಸಹೋದರಿಯರಿಗೆ ಸಹಾಯ ಮಾಡಬೇಕೂಂತ ಹತ್ತೆಂಟು ಹೆಂಗಸ್ರು ಸೇರಿ ನಿರ್ಧರಿಸಿ.......ನಿಮ್ಮಂಥಾ ಹೆಸರುವಾಸಿ...... ಅದೊಂದ್ ತಾಗೆ .... ಯಾವ ವಿಧವಾಗೀ ನಮ್ಮ ಸಹೋದರಿಯರಿಗೆ ನಮ್ಮಿಂದ ಆಗುವ...ಅಲ್ಪಸ್ವಲ್ಪ ಸಹಾಯಾನ ಮಾಡ್ಲೇ ಬೇಕೂ ಅಂತ ಸಂಘದ ಕಮಿಟಿಯವರು ನನ್ನನ್ನು, ನಿಮ್ಮನ್ನು Consult ಮಾಡೋಕೆ ಕಳ್ಸಿದ್ದು ತಪ್ಪೇ ?

ಸೂಳೆ : ತಪ್ಪಲ್ಲ! ಆದ್ರೆ........ಒಂದೇ ಒಂದು ಮಾತು ! ನೀವ್ ಹೇಳೋದೇನೂ ....ಈ ಮಾಯಾ ಪ್ರಪಂಚದಲ್ಲಿ ಗಂಡ್ಸಾಗ್ಲೀ, ಹೆಣ್ಣಾಗ್ಲೀ. ಸೂಳೆಯಾಗ್ಲೀ, ಗರ್ತಿಯಾಗ್ಲೀ ಹುಟ್ಟಿದ ಕಾರಣ ಸಮಾಜದ ಭಾರವಲ್ಲ ! ಆಯಾ ವ್ಯಕ್ತಿಯ ಭಾರ ! ಅಂತ ಆದ್ಲೂನೂವೇ ನನ್ನ ಕಸ್ಬಿಗ್ ತುತ್ತಾದ ನನ್ನ ತಂಗಿಯರ್ಗಿರೋ ಆಹಾರ, ನಿದ್ರಾ. ಭಯ. ಮೈಥುನ ಇತ್ಯಾದಿ ತಿರ್ಯಕ್ ಚತುಷ್ಟಯಗಳನ್ನು ಅರಿಯುತ್ಲೂನೂವೆ—ನೀವಾಯ್ತು ನಿಮ್ಮ ಚತುಷ್ಟಯಗಳಾಯ್ತು........ ನಾವಾಯ್ತು........ನಮ್ಮ ಚತುಷ್ಟಯಗಳಾಯ್ತೂಂತ........

ಲೇಡಿ ಶಿವ : ಅರ್ಥವಾಗ್ಲಿಲ್ಲ........ನೀವ್ಹೇಳೋದು ?

ಸೂಳೆ : ಅರ್ಥ್ವಾಗ್ಲಿಲ್ವೇ ? ನಮ್ಮ ಹಾಗ್ಯೇ ಗರ್ತಿಯರೂ......ಕ್ಷಮ್ಸಿ !......ಸಂಸಾರಿಗಳೂ ......ತಮ್ಮ ಆಹಾರ, ತಮ್ಮ ನಿದ್ರೆ, ತಮ್ಮ ಪ್ರಾಣಭಯ, ತಮ್ಮ ಮೈಥುನ ಇವುಗಳಿಗೋಸ್ಕರ ಒಬ್ಬ ಗಂಡಸ್ನ ಹಿಡ್ದು......ಸಂಸಾರ ಮಾಡೋದೂನೂವೇ "ಒಂದ್ ಕಸ್ಬೂ" ಅಂತ—"ಅದು ಗರತಿಯರ ಕಸುಬೂ !"........ಅಂತ ನಾನು ಹೇಳ್ತೀನೆ !...ವಾದಿಸ್ತೇನೆ......ನಿರ್ಧರಿಸ್ತೇನೆ !... ನಿಮಗೆ ಹೊಂದಿಸ್ತೇನೆ...ಈ ನಿಮ್ಮ ಗರ್ತಿಕಸಬ್ನಲ್ಲಿ....ಮೂವತ್ತೂ ತುಂಬ್ದೆ...ತಿಂಗ್ಳಿಗೆ ಹತ್ತೂ ರೂಪಾಯ್ನೂ ಸಂಪಾದ್ಸೋಕೆ ಯೋಗ್ಯತೆ ಇಲ್ಲ ಗಂಡನ ಕೈನೂ ಹಿಡ್ದು, ಒಂದು ಕಸ್ಬೂ ಸಮಾಜದಲ್ಲಿ ಸಂಪಾದಿಸದ ಅವನ್ನೂ ಹನ್ನೊಂದ್ನೇ ಮಗುವಾಗಿ ಭಾವಿಸಿ, ಆ ಹತ್ತೇ ರೂಪಾಯಿ ಸಂಬ್ಳದಲ್ಲಿ ಮನೇ ಬಾಡ್ಗೇನೂ ತೆತ್ತು ಮನೇಲಿರೋರ ಹೊಟ್ಟೇನೂ ತುಂಬಿ ತನ್ ಹೊಟ್ಟೆ ಮುಖ ಕಣ್ಣುಗ್ಳು ಇಂಗ್ತಿರೋದ್ನ ತಾನು ತಿಳುಕೊಳ್ಳೋಕೆ ತನಗೆ ಒಂದು ಕನ್ನಡೀಗ್ಯೂಡ ಗತಿ ಇಲ್ದೆ ತನ್ನ ಅಪ್ಪ ಅಮ್ಮ ಒಪ್ಪಿದ ಕೆಲಸಕ್ಕೆ ಬಾರ್ದ ಯಾರೋ ಒಬ್ಬ ಗಂಡ್ಸು ತನ್ನ ಕುತ್ಗೇಗೆ ಕಟ್ಟಿದ ಕರೀಮಣೀಂಬೋದೇ ..... ತಾನ್ ಸತ್ತ್ಮೇಲೆ ತನ್ನ ಹತ್ತಿಸ್ಸಿ ಸ್ವರ್ಗಕ್ಕೇ ಸೇರ್ಸೋ.....ಏಣೀ ಅಂದ್ಕೊಂಡು ದುಡೀತಾ ನರಳ್ತಿರೋ ಗರ್ತಿಯರ......ಲಕ್ಷಗಟ್ಲೆ ಗರ್ತಿಯರ ಏಳ್ಗೇಗೆ ಯಾವಮ್ಮಾ ....ಯಾವಾಗಮ್ಮಾ ಒಂದು ಕಮ್ಟೀಂತ ಏರ್ಪಾಡಾಗೋದು ? ಅವ್ರೂ ನಿಮ್ಮನಮ್ಮ ತಂಗಿಯರೇ ಅಲ್ವೇ ?

ಲೇಡಿ ಶಿವ : (ಸೂಳೆಯ ಉಕ್ತಿಯನ್ನು ಕೇಳುತ್ತಾ ಕೇಳುತ್ತಾ ಬೆಚ್ಚಿಬಿದ್ದು) ಅನ್ಯಾಯ ಬುದ್ಧೀ ಅಮ್ಮಾ ನಿಮ್ದು ! ಪ್ರಶಂಸೆ ಮಾತಲ್ಲಾ...ಸತ್ಯವಾಗ್ ಹೇಳ್ತೀನೆ !...ಸಂಸಾರಿ ಹೆಂಗಸ್ರಾದ ನಾವು...ನಮ್ಮ ನಮ್ಮಲ್ಲೇ ಇರೋ ಕೊರತೆಗಳಿಗೆಲ್ಲಾ ಕಣ್ಣು ಮುಚ್ಕೊಂಡ್......ನಮ್ ಕುತ್ಗೇಲಿರೋ ಚಿನ್ನದ ತಾಳಿಗಳ ಹೆಮ್ಮೆ......ನಮ್ಮ ತಲೇಗೆ ಹತ್ತಿ...

ಸೂಳೆ : ಹೆಮ್ಮೆಂದ್ರೇನಮ್ಮಾ ! ನಿಮ್ಗೆ ? ಹೆಮ್ಮೆ ?! ಹೆಮ್ಮೆಯ ಲವಲವಾಂಶವಾದರೂ ನಿಮ್ಗಿದ್ದಿದ್ರೆ......ನೀವು ಈ ನಮ್ ಕೊಂಪೇಗೆ......ಈ ನಮ್ಮ ಸೂಳೇಗೇರಿಗೆ ಬರ್ತಿದ್ರಾ ?...... ಸೂಳೇರ ಹೊಟ್ಟೇಲಿ ಹುಟ್ಟಿದ ನನ್ನ ಪುಟ್ಟಾನ "Little Lady" ಅಂತಿದ್ರಾ ?! ನಾನ್

ಹೇಳೋದು ಅದಲ್ಲಾವಮ್ಮಾ......ನನ್ನ ಕಸುಬಿಗೆ ತುತ್ತಾದ ನನ್ನ ತಂಗಿಯರಿಗೋ ಆಹಾರ, ನಿದ್ರಾ ಇತ್ಯಾದಿ ಕೊರತೆಗಳನ್ನು ನಾನಾದ ನಾನೂ, ನೀವಾದ ನೀವೂ, ನಿಮ್ಮ ಅದ್ಭುತ ಕಮಿಟೀನೂ ಪರಿಹರಿಸಬೇಕೂ, ಅಂಬೋದಲ್ವೇ ನಿಮ್ಮ ನಿಮಿತ್ತ ?

ಲೇಡಿ ಶಿವ : ಹೌದವ್ಮಾ ಹೌದು !

ಸೂಳೆ : ನೋಡೀ, ಕಷ್ಟಪಡೋ ಹಲಕೆಲವು ಸೂಳೆಗಳಿಗೆ ನೀವುಗ್ಳು ತಾನೇ ಆಗ್ಲಿ, ಹಲಕೆಲವು ಬಡ ಗರ್ತಿಯರ್ಗೆ ನನ್ನಂಥಾವ್ರು ತಾನೇ ಆಗ್ಲಿ......ಸಹಾಯ......ಕೇವಲ ಧನಸಹಾಯ ......ಎಷ್ಟೂಂತ ಮಾಡಿದ್ರೆ ತಾನೆ ಏನೂ ? ಈಗ್ಲೂನೂ, ಇನ್ನ್ ಮುಂದಕ್ಕೂನೂ ಇದೊಂದು "ವೇಷಾ"ಂತ ನೀವೇ ಹೇಳಿದ್ರೀ ಅಲ್ವೇ ?......ಗರ್ತಿ "ವೇಷ್ವಾ"ಗ್ಲಿ ಸೂಳೆ ವೇಷ್ವಾಗ್ಲೀ...... ಹೆಂಗ್ಸೂ ಅಂತ ಹುಟ್ಟಿದ್ ಮೇಲೆ ಈ ಎರಡು ವೇಷಗಳಲ್ಲಿ ಒಂದನ್ ವಹಿಸ್ಕೊಂಡು ಆಹಾರ, ನಿದ್ರೆ ಅಲ್ದೆ ಇತರ ತಿರ್ಯಕ್ ಪಶುಕರ್ಮಗಳ ಗಲಾಟೇಲಿ ನಾಯಿ ನರಿಗ್ಳ ಲೆವ್ವಾಚಾರಕ್ಕೆ ಸಿಕ್ಕೊಳ್ದೆ ಪುಣ್ಯ ಪ್ರಭಾವದಿಂದ ಹುಟ್ಟಿದ ಮನುಷ್ಯ...ಕಾಲ, ದೇಶ, ವರ್ತಮಾನ ಇಲ್ದೆ......ಮೈಥುನಕ್ಕೇ ಸರ್ವ ಕಾಲವೂ ಸಾಧಿಸ್ತಾ......ಹೆಂಗಸರ್ನ ತನ್ನ ಸುಖಕ್ಕೆ ಆಡಿಸ್ತಾ......ಪಾಪ ಪುಣ್ಯಕ್ಕೂ ಹೆದರ್ದೆ ನಿಮ್ಮನ್ನು "ನೀವೂಂ"ತ್ಲೂನೂನೇ ನನ್ನನ್ನು "ನಾನೂ"ಂತ್ಲೂನೂವೇ ವಿಂಗಡಿಸಿ......ಇಬ್ಬರ್ನೂ ಹೆಂಗ್ಸಾಗಿ ಹುಟ್ಟಿದ ಜನ್ಮಾನೆಲ್ಲಾ ತನ್ನ ಆಹಾರ ನಿದ್ರೆ ಮೈಥುನಕ್ಕೆ ಗರ್ತೀನೂ ಸೂಳೇನೂ ಗೊಂಬೆಗ್ಳ ಹಾಗೆ ಆಡಿಸ್ತಿರೋ ಗಂಡು ಮೃಗದಿಂದ್ಲೇ—ನಿಮ್ಮ...ನಮ್ಮಾ ಸ್ಥಿತೀಗೆ ಮೂಲಕಾರಣವಾದ ಈ ತಿಳಿದೂ ತಿಳಿಯಬೊಲ್ಲದ ಗಂಡು ಮೃಗ—ನೀವು ಶ್ಲೋಕದಲ್ಲೆ ಹೇಳೋಹಾಗೇ...... ಈ ಗಂಡೂಂಬೋ ......ಮೃಗ......ನೀವ್ ಹೇಳ್ದಾಗೆ......ಜಾಗರಿಸ್ಕೊಳ್ಳೋವರೆವಿಗೆ......ಏಳ್ಗೆ ಎಲ್ಲೀದವ್ಮಾ ಹೆಂಗಸರಿಗೆ ? ಈ ಗಂಡು ಮೃಗ ಆಡಿಸ್ತಿರೋ "ಗರ್ತೀ ಕಸಬ್ಗೆ" ಪ್ರತಿನಿಧಿಯಾದ ಲಕ್ಷಾಂತ್ರ ನಿಮ್ಮಗಳಿಗಾಗ್ಲೀ "ಸೂಳೆ ಕಸ್ಬಿಗೆ" ಪ್ರತಿನಿಧಿಯಾವ ನನ್ನಂಥಾ ಸಾವರಾಂತ್ರ ಸೂಳೆಗಳ್ಗಾಗ್ಲೀ......??? (ನಸುನಗುತ್ತಾ ಎದ್ದು ಇದುವರೆಗೆ ಸೂಳೆಯ ಮಾತಿಗೆ ಒಳಬಿದ್ದ ಲೇಡಿ ಶಿವದಾಸಅಯ್ಯರನ್ನು ಸಮೀಪಿಸಿ ಹೆಗಲನ್ನು ಸವರುತ್ತಾ "ಕ್ಷಮ್ಸೀಮ್ಮಾ" ! ಎಂದು ಹೇಳಿ ಮೊದಲಿನಂತೆ ಕುರ್ಚಿಯಲ್ಲಿ ಕುಳಿತು) ಒಟ್ನಲ್ಲೀವ್ಮಾ, ಹೆಂಗ್ಸಿನ ಯೋಗ್ತೆ ಗಂಡ್ಸು ತಿಳೀದೇನೂ ಗಂಡ್ಸಿನ ಅಯೋಗ್ಯತೇಗೆ ಹೆಂಗ್ಸು ಕಣ್ ಮುಚ್ಕೊಂಡೂನೂ ಇರೋದ್ರಿಂದ್ಲೇ ಈ ಅವಸ್ಥೆಗಳೆಲ್ಲಾ ಈಗಿರೋದು, ಸಮಾಜಕ್ಕೆ !

ಲೇಡಿ ಶಿವ : (ಚಮಕಿತಳಾಗಿ) ಹಾಗಾದ್ರೆ......ಗಂಡೆಸ್ರೆಲ್ಲಾ ಕಿರಾತ್ರೇ ?

ಸೂಳೆ : ಹೌದೂವ್ಮಾ ! ಎಲ್ಲಾ ಕಿರಾತ್ರೇ ! ನಿಮ್ಮ ಯಜಮಾನ್ರಂಥ ಒಬ್ಬಿಬ್ರನ್ ಮಟ್ಗೆ ಬಿಟ್ಟು, ಮಿಕ್ಕ ಹೆಂಗಸ್ರಿಗೆಲ್ಲಾ ಕಿರಾತ್ರೇ ಗಂಡಸ್ರು. ಒಬ್ಬಿಬ್ಬ ಗಂಡಸರ್ನ ಬಿಟ್ಟು, ಮಿಕ್ಕ ಗಂಡಸ್ರಿಗೆಲ್ಲಾ ಹೆಂಗ್ಸು ಕೇವಲ ಭೋಗ ಪದಾರ್ಥ........ಇದು ನಿಮಗ್ ಗೊತ್ತಿಲ್ಲ......ತನ್ನ್ ಭೋಗಕ್ಕೆ ಒದಗಿದೋಳು ......ಸೂಳೆಯಾಗ್ಲೀ......ಇಲ್ಲಾ......ತಾನು ತಾಳೀಕಟ್ಟಿ ಬೆಂಕಿಯೆದುರ್ಗೆ "ಧರ್ಮೇಚ ಕಾಮೇಚ ಅರ್ಥೇಚ ನ ಅತಿಚರಾಮಿ" ಅಂತ ತಾನು ಮಾತ್‌ಕೊಟ್ಟ ಹೆಂಡ್ತಿಯಾಗ್ಲೀ......ಭೋಗ ಪದಾರ್ಥದ ಆಹಾರಕ್ಕೆ. ನಿದ್ರೇಗೆ...ಆಗಾಗ್ಗೆ ದುಡ್ಡುಕೊಡುತ್ತಾ ಸಂಸಾರಿಯರನ್ನೂ...ಸೂಳೆಯರನ್ನೂ...ಈ ಡಬ್ಬಲ್ Zನಾನಾನ ಜರಗಿಸ್ತಾ......ಮೀಸೆ ಹೊಸೀತಿರೋ ಗಂಡ್ಸು ಕಿರಾತನಲ್ದೆ ಇನ್ನೇನು ? ಇವನ ಭೋಗಕ್ಕೆ ತಾಳೀಕ್ಕಟ್ಟಿಸ್ಕೊಂಡು ಬಿಳೋ ತುತ್ತೂ......ನೀವು ! ತಾಳೀಕ್ಕಟ್ಟಿಸ್ಕೊಳ್ಳದೇನೆ ಬೀಳೋ ತುತ್ತೂ ನಾವು ! ಈ ಗಂಡಿನ್ನ ನಮ್ಮ ಹಾಗ್ಯೇ ತೃಪ್ತಿಪಡಿಸದೆ ಇರೋ ಇವನ ಪತ್ನಿಗಳು ಎಷ್ಟು ದುಡ್ತಾನೆ ಮರ್ಕೆ, ಎಷ್ಟು ಕಮಿಟಿಗಳ್ನ ಏರ್ಪಡಿಸಿದ್ರೂನೂವೆ ಏಳ್ಗೇ ಎಲ್ಲೀದವ್ಮಾ......ನಮಗೇ ನಿಮ್ಮಿನ್ನಾ ?

ಲೇಡಿ ಶಿವ : ಇದೇನವ್ಮಾ ! ಹೀಗ್ಹೇಳ್ತೀರಾ ! ಯೌವನದಲ್ಲಿ ತಾಳೀಕಟ್ಟಿ, ತನ್ನ ಕೈ ಹಿಡ್ದ ಹೆಂಡ್ತೀ ಜೊತೇಲಿ ತನ್ನ ಯೌವನ...ವಾರ್ಧಿಕ್ಯ...ತನ್ನಾಯುಷ್ಯೆಲ್ಲಾನೂ ಕಳೀತಾಲೂ...ತನ್ನ ತನು ಮನ–ಧನಗಳನ್ನೂ ತನ್ನ ಕೈಹಿಡ್ದ ಸಹಧರ್ಮಿಣಿ ಕೈಲಿ...

ಸೂಳೆ : (Interrupting and indignantly) ತಪ್ಪ ಸಹಧರ್ಮಿಣಿ ! ತಪ್ಪೋ. ಬಿಡೀವಮ್ಮಾ ! ನಿಮ್ ಮನಸ್ಸು ಶುಭ್ರವಾದಾಕ್ಷಣವೇ......ತ್ರಿಲೋಕಾನೂ ಶುಭ್ರಾ...ೋ ಅವೇಶ ದಲ್ಲಿದೀರಾ ......ನೀವು ? ಸಮಾಜವೆಲ್ಲಾ ನಿಮ್ಮಾಗೆ ಇದ್ದಿಟ್ರೆ ಜೈಲುಗಳ್ಯಾಕೆ ?...ದಾ...ಗಳ್ಯಾಕೆ ? ...ಬೀಗಗಳ್ಯಾಕೆ ? ಮನೆ ಕಿಟ್ಕಿಗಳ್ಗೆ ಕಂಬಿಗಳ್ಯಾಕೆ, ಸಲಾಕಿಗಳ್ಯಾಕೆ ? ಪೋಲೀಸ್ಯಾಕೆ ?...ದ...ನ್ಯಾಕೆ? ಲಾಯರಿಗಳ್ಯಾಕೆ.......... ಸಮಾಜದಲ್ಲಿ ಅನ್ಯೋನ್ಯ ಜೀವ್ನಕ್ಕೆ ಬೇಕಾದ ಗದ್ದೆ. ತೋಟ. ಕೃಷಿ ಫಲಗಳ್ನ ಪರಸ್ಪರ ಕೊಟ್ಟು ತಕ್ಕೊಂಡು......ಸುಖವಾಗಿ ಜೀವಿಸಬಹುದಾದ ನಮ್ಮ ......ಕ್ಕೆ.... ಸವ್ರನ್ನು–ರೂಪಾಯಿ–ಆಣೆ–ಕಾಸು–ಬಿಡ್ಗಾಸು ಅಂಬೋ ನಾಣ್ಯಗಳ್ಯಾಕಮ್ಮಾ ನಮ್ಮ ದೇಶ್ದಲ್ಲಿ ?

ಲೇಡಿ ಶಿವ : ದೇವ್ರೇ ಗತೀವಮ್ಮಾ ? ಬೆಪ್ಪು ಹಿಡಿಸ್ಕಿಧೀರಾ ನನ್ಗ ! ? ...ಕೈಗಾರಿಕೆ ಕೃಷಿ ವ್ಯವಸಾಯ ದುಡ್ಡಿನ್ಮೇಂತ ಅಂಬೋದ್ನೆಲ್ಲಾ ನಮ್ಮ ಯಜಮಾನ್ರು......Finance Commissionಗೆ ಅಂತ ಡೆಲ್ಲೀಗ್ ಹೋಗಿ ತಿರಗ್ಬಂದು......ತಿಳುವಳ್ಕೆ ಇಲ್ದವ್ ನನ್ನ ಕಿವೀಗೆ ತುಂಬಿದ speechಉ ಜ್ಞಾಪ್ಕಕ್ಕೆ ಜರುತ್ತೆ !! ನೀವೆಲ್ಲಿ ಕಲಿತಿರವಮ್ಮಾ......ಇದ್ನೆಲ್ಲಾ ? !

ಸೂಳೆ : (ನಗುತ್ತಾ) ನಮ್ಮ್ ಸುಬ್ಬೂ ಕೂಡ ಓದಿದಾವಮ್ಮಾ ಅದೇ Speechoo...... B. A. ಅದೋನು ಅವನೂ......ನನ್ಗೆ ಅರ್ಥವಾಗ್ದಿದ್ರೂನೂವೇ ಅವನು ಓದಿದ ಇಂಗ್ಲಿಷ್ ಪದಗಳ ಭರಾಟೇಗೇನೇ ನಾನು ಬೆಚ್ಚಿದ್ದೇವಮ್ಮಾ !...ಆದ್ರೆ..."Financeoo" ಅಂಬೋ ಪದಕ್ಕೆ "ದುಡ್ಡು" ಅಂಬೋ ತರ್ಜುಮೆ ಮಾಡೋ ಇಂಗ್ಲೀಷಾದ್ರೂ ಸುಬ್ಬೂಗ್ ಗೊತ್ತಿರೋ ಹೊತ್ತ್ಗೇನೇ. ......ನನಗೂ ಹೇಳ್ಕೊಟ್ನವಮ್ಮಾ !......ಒಟ್ನಲ್ಲಿ ಇಂಡಿಯಾ ದೇಶ್ದ ಕೋಟ್ಯಾಂತ್ರ ರೂಪಾಯ್ನ ಜಮಾಖರ್ಚು............ನಿಮ್ಮ್ ಯಜಮಾನ್ರು ದೆಹಲೀಲಿ ವಾದಿಸ್ತಿದ್ದಾಕ್ಷಣ್ಗೇ......ನಮ್ಮ್ ದೇಶ್ದಲ್ಲಿ...ನಿಮ್ಮನ್ನ ಮುಂದೆ ತಳ್ಳಿರೋ committee ಹೆಂಗಸ್ರೂ, ನಾವು ಸೂಳೇರೂ...... ನಮ್ಮ ಏಳ್ಗೇಗೆ ಬೇಕಾದ ಲಕ್ಷಾಂತರ ರೂಪಾಯ್ನ ಒದಗ್ಸೋಕೆ ತಯಾರಾಗಿದ್ದೀರಮ್ಮಾ ?

ಲೇಡಿ ಶಿವ : ಇದೂ ....ದುಡ್ಡಿನ್ಮಾತಲ್ಲಾಮ್ಮಾ......!

ಸೂಳೆ : ನನಗ್ಗೊತ್ತೂವಮ್ಮಾ ! ದುಡ್ಡಿನ್ ಮಾತಲ್ಲಾ ! ನಿಮ್ ಮನಸ್ನ ಕಾವಲ್ಮಾತು ನಿಮ್ಮ ಸಂಘ ಸೂಳೇರೇಳ್ಗೇಗೆ ಎದ್ದ್ ನಿಂತದ್ದಾಯ್ತು ! ಅದರ ನಿಮಿತ್ತಾನ ನಾ...ನೋಕೇಂತ (ಮಾತನ್ನು ನಿಲ್ಲಿಸಲು ಪ್ರಯತ್ನಿಸುವ ಲೇಡಿ ಶಿವದಾಸಯ್ಯರ್‌ರ ಮಾತಿಗೆ ಅಡ್ಡವಾಗಿ) ನಿಮ್ಮನ್ನು ಮುಂದಿಟ್ಟಿರೋದು ಈ ಕಮ್ಟಿ ! ಹೌದೋ ಅಲ್ವೋ......? ನಮ್ಮೇಳ್ಗೇಗೇನ್ ಮಾಡ್ತೀರಮ್ಮಾ ನೀವು ?......ಮಸ್ಲಾ...ನಾವೆಲ್ರೂನೂವೆ......ನಮ್‌ಕಸ್ಬಿನೋರು ನಾವೆಲ್ರೂನೂವೇ...ನಿಮ್ ದೊಡ್ಡ ಬಂಗ್ಲೆ ಕಾಂಪೋಡಿನಲ್ಲಿ ಹಿಂಡು ಹಿಂಡಾಗಿ ಜಮಾಯಿಸ್ಕೊಂಡು, ನಿಮ್ಮ ದರ್ಶನವಾದ್ಮೇಲೆ ....ಈ ನಮ್ ಕಸ್ಬು ಬಿಟ್ಬಿಟ್ಟೂ ಅಂತಿಟ್ಕೊಳ್ಳಿ......ಮಸ್ಲ !......ನಾಬ್ಬಿಟ್ಟ ಮನೇಗ್ ಬದ್ಲಾಗಿ ಇನ್ನೊಂದು ಮನೇಕಟ್ಟಿ ನಾವೀಗ ತಿನ್ನಾ ಇರೋ ಅನ್ನ ಬಟ್ಟೇನ ನೀವು ಕೊಟ್ಟು ಲಕ್ಷಾಂತರ ಗಟ್ಲೆಯಾಗಿ ಈಗ ನರಳ್ತಿರೋ ನಮ್ಮನ್ನೆಲ್ಲಾ ಸುಖವಾಗಿಡೋಕೆ.......ಈ ಒಂದು planoo ಅಂತಾರಲ್ಲಾ......planoo......ಅದ್ನೇನಾದ್ರೂ ನಿಮ್ಮ committee ತಯಾರು ಮಾಡಿದ್ಯೋ?

ಲೇಡಿ ಶಿವ : ಹೌದಮ್ಮಾ ! ನಿಮಗ್ ಕೆಲ್ಸಾ ಕೊಡ್ತೇವೆ !

ಸೂಳೆ : (ನಸುನಗುತ್ತಾ) ನಿಮಗ್ ಗೊತ್ತಿಲ್ಲಾವಮ್ಮಾ ! ಕೆಲ್ಸ ಕೊಟ್ಟಿರೋದೂ ನಿಮಗೆ ? ...ನಿಮ್ಮ ಕಮ್ಟೀ !...ಕಾಮಧೇನೂ ಹಾಗೆ ಅಜನ್ಮಾಂತರ "ಸತ್ಯ" ಅಂತಾರಲ್ಲಾ ಆ ವಾರೀಲೇನೇ ಇದುವರೆಗೂ ಜೀವಿಸಿದ ನಿಮ್ಮನ್ನ ತಾವು ಹಿಂದೆ ಅಪಿತ್ಕೊಂಡು ಮುಂದೆ ಕಳಿಸಿದ ಆ ಕಮಿಟಿ ಹೆಂಗಸ್ರು...ಕೆಲಸ ಕೊಡೋದೂ...ನಮಗಲ್ಲ...ನಾವೂ too much ಘಾಟೀ ! ನಾನೂ ಸ್ವಲ್ಪ ಇಂಗ್ಲೀಷ್ನ, ಇಲ್ಲಿ ಬರೋ ಸ್ನೇಹಿತರಿಂದ ಕಲ್ತಿದೇನೆ ! ಅವರು ಕೆಲಸ ಕೊಟ್ಟಿರೋದು ತಮಗೆ ! ಚಿರತೆ ಅಂತಾರಲ್ಲಾ....ಆ ಜಾಬತ್ತು ಅವರುಗಳೂ ! ಕಾಮಧೇನು ಅಂದೆನಲ್ಲಾ.......ಆ ಬಾಬ್ತು ತಾವು ! ಚಿರತೆಯು ಕುತ್ತಿಗೇ ಬೆನ್ನನ್ನ ಮುರಿದು ಮೂಳೆಗೆ ಎಸಿಯೋ "ಹೆಬ್ಬುಲಿ" ಅಂತಾರಲ್ಲಾ

ಪ್ರಟ್ಪಾ ಆಂದ್ಪಾಗೆ...ಆ ಬಾಬತ್ತು ನಾವು!—ಸೂಳೆಗಳು! ಈ ಹೆಬ್ಬುಲಿಗಳು ನಾವು! ಮನುಷ್ಯಾಮ್ಮಾ! ನಿಮಗೆ ತಿಳಿಯುದ ಸಂಸ್ಕೃತ ಇಲ್ಲಾ!...ಆದರೂ ಹೇಳ್ತೀನೆ......."ಪುನ್ನಾಮೋ ನರಕಾದಸ್ಮಾತ್ ತ್ರಾಯತೇ ಇತಿ....ಪುತ್ರಃ!" ಹೀಗೇ ತಾನು ಸತ್ಮೇಲೆ ತನಗೂ ತನ್ನ ಪಿತೃಗಳಿಗೂ ಸಲ್ಲಿಸಬೇಕಾದ ಪಿಂಡಾನ ಕೊಡೋ ಪುತ್ರ ಬೇಕೂ ಅಂಬೋ ಧರ್ಮಾನ ಮುಂದಿಟ್ಕೊಂಡೂ ತನ್ನ ಪುತ್ರನ್ನ ಹೆರೋಕೆ...ಹತ್ತು ತಿಂಗಳು ಹೊತ್ತು ಜನಾನಾ ಹಾಸ್ಪಿಟಲ್ ಸಹಾಯವಿಲ್ಲದೆ ಹೆರೋ ನಿತಂಬಗಳು..."wet nurse" ಇಲ್ಲದೆ ಆ ಮಗೂಗೆ ಕುಡಿಸೋ ಮೊಲೆಗಳೂ...ಅಲ್ದೆ ತನ್ನ ಕುಟುಂಬದಿಂದ "Hysteria" ...... "Epilepsy" ಹುಚ್ಚು..."Diabetesಊ" ಇತ್ಯಾಧಿ ಯಾವ ರೋಗಗಳೂ ಕುಲಗೋತ್ರ, ಜಾತಿ ಸಮಾಜದಲ್ಲಿ ಇಲ್ಲದ ಹೆಂಗಸ್ನ ಚುನಾಯಿಸಿದ "ಮಗು ಬೇಕೂ"ಂಬೊ ಗಂಡ್ಸು! ಇದು ಒಂದು ತರಹ ಗಂಡ್ಸು...ತಮ್ಮಪ್ಪ ಸಂಪಾದಿಸಿದ ದುಡ್ಡು, ತನ್ನ ಅಪ್ಪ ಅಮ್ಮ ಕೊಟ್ಟ, ನೆಟ್ಟ ಮೂಗು, ಕೆಂಪು ಚಮ್ಡ, ಈ ಆಸ್ತಿಗಳ್ನ ವ್ಯವಸ್ಥೀಗೆ ತಂದು, ಸಮಾಜದಲ್ಲಿ ಇಲ್ಲದ ಹಾವಳಿ ಮಾಡಿ, ಹಲವಾರು ಕುಟುಂಬಗಳಿಗೆ ಹಾನಿಬೀರಿ ಕೊನೇಗೆ, ಹಾಸ್ಪಿಟಲ್‌ನಲ್ಲಿ ಸಾಯೋ ಗಂಡ್ಸು ಇನ್ನೊಂದು ತರಹಾ ಗಂಡ್ಸು! ಮೊದಲನೇ ಬಾಬ್ತು ಗಂಡಸ್ರುಗಳ ಗೋಷ್ಠೀಗೆ ಸೇರಿದವರು ತಾವು: ಈ ಎರಡ್ನೇ ಗೋಷ್ಠೀಗೆ ಸೇರಿದ ಕ್ರಿಮಿಗಳಿಂದ ಬದುಕಿಯೂ ಘಟ್ಟಿ ಪುಷ್ಟಿಯಾಗಿರೋವ್ರು ನಾವು! ಸಂಸಾರಗಳು ತಕ್ಕೊಳ್ಳೀಮ್ಮಾ!...ನಿಮ್ಮ ನಿಮ್ಮಂಥಾ ಎರಡೂ ಮೂರು ಸಂಸಾರಗಳ್ನ!......ಬಿಟ್ಟು......ಮಿಕ್ಕ ಸಂಸಾರಗಳನ್ನು ತಕ್ಕೊಳ್ಳಿ! ಮಸ್ಲ! ಮನುಷ್ಯ! ದೊಡ್ಡ ಮನುಷ್ಯ, ದುಡ್ಡು, ದಂಧ್ಯಾಗಿ ಧನಾನ ಸಂಪಾದಿಸೋ ಮನುಷ್ಯ ಅವ್ರೂನೂವೇ "ಆಹಾರ", "ನಿದ್ರಾ", "ಭಯ", "ಮೈಥುನ"....ಈ ಚವರ್ಾತ್ಮ ತಿರ್ಯಕ್ ಚತುಷ್ಟಯದಿಂದ ಕಟ್ಟಿರೋ ಮನೆಯಾಕೆ, ಮರುದಿನ, ಮೂರು ರಾತ್ರೆ...ಮೂರುಪ್ಪು ಮುಂದಾಗಿ ಹಾಕಿ ಬಡಿಸಲಿ! ......ಹೋಟೆಲಿಂದ ಅನ್ನ ತರಿಸ್ಕೊಳ್ತಾನೆ......office ಎಲ್ಲಾ ಅವನು business ಮಾಡೋ ಪಾಪಿನಲ್ಲೇ......ಇವನಿಗೇಂತ ಹೆತ್ತ ಹಸು ಮಗು ಮಧ್ಯರಾತ್ರೀಲಿ ಶೈಶವಾವಸ್ಥೀಲಿ ಕಿರ್ಲಿ ಇವನ "ನಿದ್ರಾ ಸುಖಾ"ನ ಭಂಗಿಸ್ತೋ ಬೇರೆ ಕಡೆ ಮಲಕ್ಕೊಳ್ಳೋಕೆ ಏರ್ಪಾಡು ಮಾಡುಕೋತಾನೆ ......ಇನ್ನು ಇವನ ಸಂಸಾರದಲ್ಲಿ, ಸಿಡುಬೂ ಗಿಡುಬೂ, ವಾಂತಿ ಬೇಧಿ, ಆಮಶಂಕೆ, ರಕ್ತಬೇಧಿ ಇವನ ಸಹಧರ್ಮಿಣೀಗೆ ಆಗ್ಲಿ, ಸುಪುತ್ರ, ಶ್ರೀಮಂತ ಪುತ್ರ ಶ್ರೀಮಂತ ಸುಪುತ್ರಿಯರಿಗೇ ಆಗಲಿ ತಗಲ್ತೋ, ತನ್ನ ಪ್ರಾಣ, ತನ್ನ ಭಯಾನಕದ ಬೆದರ್ಕೇಲಿ ಕುಟುಂಬಾನ್ನೇ ಆಸ್ಪತ್ರೇಗೆ ಜರಗಿಸ್ತೋ, ಇಲ್ಲಾ, ತನಗೆ "Business" "ಗಿಸಿನೆಸ್ಸೂ" "Camp duty"· "Calcutta Wire" ಊಂತ ಹೀಗೋ ಹಾಗೋ ತಪ್ಪಿಸ್ಕೋ ತಾನೆ ಮರಣದ ಅಪಾಯಾನ! ಇನ್ನು ಮೂರೂ ಆಯ್ತೀ!..."ಆಹಾರ" "ನಿದ್ರಾ" "ಭಯ!" ಇನ್ನು ನಾಲ್ಕನೇ ತಿರ್ಯಕ್ ಚಪಲಾನೂ ಹೀಗೇನೇ ವೇಸಿ. ನೆಟ್ಟ ಮೂಗು, ನೀಳ ಕೂದಲು, ತಲೆ, ಮೊಲೆ, ತೊಡೆ, ನಿತಂಬಗಳ್ನ ನೋಡಿ ತನ್ನ ತಿರ್ಯಕ್ ಸುಖಕ್ಕೇಂತ ಹೆಂಗಸನ್ನ ಮದಿವೆ ಮಾಡಿಕೊಳ್ಳೋ ಗಂಡ್ಸು ಒಂದು ರಖಮ್ಮು...... ನಾನು ಮೇಲೆ ಮೇಲೆ ಹೇಳಿದ "ಮಕ್ಕಳು ಬೇಕೂ"ಂತ ಮದುವೆ ಮಾಡಿಕೊಳ್ಳೋದು ತಮ್ಮ ಯಜಮಾನ್ರ ಹಾಗೆ ಇವನೊಂದು ರಖಮ್ಮು! ಈ ರಖಮ್ಮಿಗೆ ತನಗೆ "ಮಕ್ಕಳು ಬೇಕೂ"ಂತ ಮಕ್ಕಳನ್ನು ಹೊತ್ತೂ ಹೆತ್ತೂ ತನ್ನ ಪ್ರಾಣಗಳ್ನ ಪ್ರತಿಯೊಂದು ಹೆರಿಗೇಲೂ ಒತ್ತೆಯಿಟ್ಟು ಕುಗ್ಗೀ ಕುಗ್ಗೀ ಕೊನೇಗೆ ಹುಂಚಿಕಡ್ಡಿ ಹಾಗೆ ನಿಂತಿರೋ ಹೆಂಗ್ಸು 'ಸಮಾಜಕ್ಕೆ ಐದಾರು ಮಕ್ಕಳ್ನ ಹುಟ್ಟಿಸಿ ಶಿಕ್ಷಿಸಿ ಸಮಾಜಕ್ಕೆ ಸಲ್ಲಿಸಿದೇನೆ! ಸೇವೆ ಮಾಡಿದೇನೆ'ಂತ ಹಿಗ್ಗೋ ಗಂಡನಿಗೆ ಈ ಹುಂಚೀಕಡ್ಡೀ ಹೆಂಡತಿ, ದೇವತೆ—ದೇವತೆ ಹಾಗೆ ಕಂಡು ಬರ್ತಾಳೆ...ಅವನ ಕಣ್ಣಿಗೆ! ಆ ಮೊದಲನೇ ರಖಂ ಗಂಡ್ಸೂ, ತನ್ನ ಮಾಂಸ, ದುಡ್ಡಿನ ಕೊಬ್ಬಿನ ಕರಗಿಸಿಕೊಳ್ಳೋಕೇಂತ......ಕೆಂಪು ಚಮ್ಡ...... ತಲೆಮೊಲೆ...... ನೆಟ್ಟಗೂ. ಮೇಲೆ ಹೇಳಿದ ಬಾಬತ್ನೆಲ್ಲಾ ಮುಂದಿಟ್ಕೊಂಡು ತನ್ನ ಭೋಗ ಮೈಥುನಕ್ಕೇಂತ ಮದುವೆಯಾಗೋನಿಗೆ ಹುಟ್ಟೋ ಮಕ್ಕಳೆಲ್ಲಾ ಉಪಭೋಗ ಕ್ರಿಮಿಗಳು [By-Products] ಇವನು ಯಾವ ಯಾವ ಅಂಗಾಂಗಗಳಿಗೆ ತನ್ನ ಹೆಂಡತೀಗೆ ಸೋತು ತಾಳಿ ಕಟ್ಟಿದ್ನೋ ಆಯಾ ಅಂಗಾಂಗಗಳು ಕುಗ್ಗಿ

ಜೋಲು ಬೀಳತ್ಲೆ .... ಅದೇ ಅಂಗಾಂಗಗಳು ಘಟ್ಟಿಮುಟ್ಟಾಗಿರೋ ಇತರ ಹೆಂಗಸ್ರನ್ನ...ಅಂದ್ರೇನೂ...ನಮ್ಮಂಥಾವರ್ನ ಆರಿಸಿಕೊಂಡು...ಒಟ್ನಲ್ಲಿ ನಮ್ಮ Lineಗೆ ಬಂದು, ತನ್ನ ಸರ್ವಸ್ವಾನ್ನೂ—ಹೆಂಡತೀ, ಮಾನ ಮರ್ಯಾದೇ ಎಲ್ಲಾನ್ನೂ ಮರ್‍ತು—ನಮ್ಮ ಕಾಲಿಗೊತ್ತಿಸ್ತಾನೆ. ಸಮಾಜದ ಗಂಡಸರು ಬುದ್ಧಿವಂತರೇ ಆಗ್ಲೀ ಎಷ್ಟು ಎಷ್ಟು ಅಂತಸ್ತಿನವರೇ ಇರಲಿ ಎಷ್ಟು ಐಶ್ವರ್ಯವಂತರೇ ಇರ್‍ಲಿ ಇಲ್ಲಿಗೆ ಅವರವರಾಗಿಯೇ ಬಂದು ಅವರ ಮನೇ ಆಸೆಗಳಿಗೆ ಒಪ್ಪಿಸಲೇಬೇಕಾದ ದುಡ್ಡು ಇಲ್ಲಿ ಸುರಿದು ಅವರು ಕೊಡಲೇಬಾರದ ರಣ ರೋಗಗಳ್ನ ಇಲ್ಲಿ ಸಂಪಾದಿಸಿಕೊಂಡು ಹೋಗಿ, ಅವರ ಸಂಸಾರದಲ್ಲೀ ಕುಲ, ಗೋತ್ರ, ಪ್ರವರ, ಮಕ್ಕಳು, ಮೊಮ್ಮಕ್ಕಳು ಇನ್ನವರ ಮುಂದೆ ಮೂರು ತಲೆಮಾರುಗಳ್ಗೆ ಕಣ್ಣಲ್ಲಿ, ಮೂಗಿನಲ್ಲಿ, ಕೈಕಾಲಲ್ಲಿ ನರಳೋ ಶಿಶು ಸಹಸ್ರಗಳ ನಿಧೀನ ಮಾತ್ರ ಸಲ್ಲಿಸಿ ಸಮಾಜಾನೆಲ್ಲಾ ಒಂದೇ Syphillis Gonorrhea ಕೂಪದಲ್ಲಿ ದಬ್ಬಿದರೂನೂವೆ—ಇಂಥಾವರ ಹೆಂಡತಿಯರು—ಗರ್ತಿಯರು ಮಾತ್ರ ನಮ್ಮನ್ನು "ಸೂಳೆ ಮುಂಡೆ" "ಹಾದರಗಿತ್ತಿ" "ಗುಡಿಶೆಟ್ಟಿ"—ಕ್ಷಮಿಸ್ಬೇಕಮ್ಮಾ ಇದೆಲ್ಲಾ ನಿಮಗೆ ಗೊತ್ತಿಲ್ಲದ ಪದಗಳು—ಅದೂನ್ರಿ ಕಿರೀಗ್ ಹಾಕ್ಕೊಳ್ಳೋದು ಮೇಲು—ಹೀಗೇ ನಮ್ಮನ್ನು ಕೂಗೋ ಗರ್ತೀಗಳ ಮೇಲೇ ನಮಗಿರೋ ಸೇಡು ತೀರಿಸ್ಕೊಳ್ಳೋ ಹೆಬ್ಬುಲಿಗಳ್ಳಾ—ನಮ್ಮನ್ನಾ—ಈ ಗಂಡು ಕ್ರಿಮಿಗಳ ಬದಿಕೀಗೆ ಮುದುರಿಕೊಂಡು ಇರೋ ಹೇಡಿ ಕಿರುಬಗಳಾಗಿರೋ ಆ ಕ್ರಿಮಿಗಳು—ಗರ್ತಿಯರೂವಮ್ಮಾ! (Shaking ಲೇಡಿ ಶಿವದಾಸಯ್ಯರ್'s hand) ಯಾವ ಹೇಸಿಗೆ ಕಸುಬಿಗೆ ಸೇರಿಸ್ತಾರಮ್ಮಾ ನಮ್ಮನ್ನಾ...? ತನ್ನ ಹಸಿವಿಗೆ? ಹುಲ್ಲು! ತನ್ನ ದಾಹಕ್ಕೆ? ಕಾವೇರೀ ನೀರು!...ತಾನು ಜೀವಿಸಿರೋದು? ಸಮಾಜ ಸೇವೆಗೆ!...'ಸರ್ವಿಸ್ಸು' ಅಂತಾನಲ್ಲಾ ಸುಬ್ಬು ...... ನಮ್ಮ ಸುಬ್ಬು... ಅದಕ್ಕೆ ಅಂತ ಇರೋ ಹಸುವ್ನೋ, ಕರುವ್ನೋ, ಹುಲ್ಲೇನೋ ಅದು ತಾವೇ ಆಗಲಿ. ಸೂಳೇರ ಏಳಿಗೇಗೇಂತ ತಮ್ಮ ಏಳಿಗೆ, ತಮ್ಮ ಬೀಳಿಗೇನ ಮರೆತ ಹೆಂಗಸ್ರು. ತಮ್ಮ ಹಿಂದಿರೋ ಹೆಂಗಸ್ರು ಯಾವ ಹೇಸಿಗೆ ಕಸುಬಿಗೆ ತಾನೇ ನೇಮಿಸೀರಾಮ್ಮಾ?

ಲೇಡಿ ಶಿವ: (ಅಡ್ಡಮಾತಾಗಿ ಗಂಭೀರವಾಗಿ) ದೇವ್ರಿದ್ದುದಿಗೆ ನನ್ ತಂಗೀರೂಂತೆ ನಾನ್ಯಾಕೋ ನಿಮ್ಮನ್ನೆಲ್ಲಾ ನನಗೆ ಹೇಸಿಗೆ ಆದ ಕೆಲ್ಸಕ್ಕೆ...ನೇಮ್ಸೋನೆ ನಾನು!?

ಸೂಳೆ: ಅಮ್ಮಾ, ಸರಿ! ಈಗ ನಮ್ಮ ಕಸುಬು ಬಿಟ್ಟು ನಾವು, ದಿಸ್ಸಕ್ಕೆ ನೀವು ನೇಮಿಸೋ....ಮಸಲ ಎಂಟಾಣೆ ಕೆಲಸಕ್ಕೆ...ಒಪ್ಕೊಂಡ್ಬೋ...ಅಲ್ಲಾವಿನ್ನ ನಂಬಿ ಕುಲ್ಲಾವೀನ ಹಾಕಿದರೇ ಅಲ್ಲಾನೂ ಕುಲ್ಲಾವೀನೂ ಅಲ್ಬಿದಾಯೋ ಅಯಿತಂತೆ ಅಂದ್ಹಾಗೆ......ಆಗುತ್ತೆ.

ಲೇಡಿ ಶಿವ: ಕ್ಷಮ್ಸಿಮ್ಮಾ!..."Home of industry for fallen women" ಏರ್ಪಡ್ಸಿದ್ದೇವೆ.

ಸೂಳೆ: ನನಗೊತ್ತಮ್ಮಾ...ನಂದೀಗುಡಿ ಬಂಗ್ಲೆ...ಕೈವಲ್ಯಮ್ಮನ್ ಕಾರ್ಖಾನೆ. ಚಿತ್ರದ್ ಕಾರ್ಖಾನೆ...ನಮ್ ಕಷ್ಟ...ಸಾಧ್ನೋಕೆ ಕೈಲಾಗ್ದ ಸುಸ್ತಾದ ಹೆಂಗಸ್ರು ಕೈ ಬೆರಳುಗಳ್ಗೆ ಕಿತ್ಕೊಳ್ಳೋಗೋ ವಗೈರ ಪೇಪರ್ ಚಿತ್ರದ ಸಾಮಾನ್ಗಳು. ನಿಮ್ಮ Homeನೂ ಆಕೆ ಮನೇನೂ ತುಂಬಿ ತುಳ್ಕಿ, ತುಳುಕಿದ್ದಲ್ಲಾ, ಮಾರಿದ ದುಡ್ನಲ್ಲಿ ತನ್ನ ಹೊಟ್ಟೇ ಪಾಡ್ನ ಗಿಟ್ಟಿಸ್ಕೊಂಡು ನಿಮ್ಮ ಕಮಿಟೀ ನೇಮಿಸಿರೋ "ಗೌರವ ಕಾರ್ಯದರ್ಶಿ" ಆದೇ ಕೈವಲ್ಯಮ್ಮನ ಬಂಧುವರ್ಗಗಳ ಮನೆಗಳ್ನೂ ತುಂಬಿ... "ಚಿತ್ರವ್ಕೆಲ್ಸ ಸಾಕು ಹೆಂಗಸ್ರಿಗೆ ತರ್ಕಲ್ಲ" ಅಂತ್ಹೇಳಿ ತಮ್ಮ ಕೊಂಪೆಗಳಲ್ಲಿದ್ದ ಮೇಜು, ಕುರ್ಚಿ, ಬೆಂಚು ಇವ್ಗಳ್ನ ತುಂಬಿಸ್ಕೊಳ್ಳೋಕೆ "ಮರಗೆಲ್ಸಾ ಮೇಲು ಮನೆಗೆಟ್ಟಮಗೇ"ಂತಾ ಹೇಳಿ...ಆರ್ಡರ್ ಕೊಡ್ತಿ...ಸಪ್ಲೈಗೆ ನಿಮ್ ಕಮಿಟ್ಟಿಗೆ ಅಪ್ಲೈ ಮಾಡ್ತಿರೋ.........ಆ ಗತಿಗೆಟ್ಟ ಕೈವಲ್ಯಮ್ಮ, ಘೇಟಿಗಿಂತ ನಮ್ಮಾಗಿನ ಸ್ಥಿತಿನೇ ಮೇಲೂಮ್ಮಾ! ಇಲ್ಲಿ ನೋಡಿ! ಗರತಿಯರಲ್ಲಿ, ದೊಡ್ಡ ಮನುಷ್ಯನ ಹೆಂಡ್ತೀದೂ, ಕೂಲೀ ಹೆಂಡ್ತಿ, ಕಕ್ಕಸು ಬಾಚೋನ ಹೆಂಡ್ತೀ—ಹೀಗೆ ಗರತೀರಲ್ಲಿ ಅಂತಸ್ತು

"ತರಾತವೆ ಗಳು ಇರೋಹಾಗೆ ನಮ್ಮ ಸೂಳೇಗಾರಿಕೇಲೂ ಇದೇಮ್ಮಾ? ಕೋಪಿಸ್ಕೋ ಬೇಡೀಮ್ಮಾ! ಹೆಂಗ್ಸು ಹೆಂಗ್ಸಾಗಲೀ, ಗಂಡ್ಸು ಗಂಡ್ಸಾಗಲೀ, ಮಹಾಯುತ್ತು! ಆದರೇ ಹೊಸ ಹೊಸದಾಗಿ ಪರಸ್ಪರ ಮೈ, ಬಟ್ಟೆಗ್ಳು, ಸೀರೆ, ಒಡ್ವೆಗ್ಳೂ, ಈ ಬಾಬ್ತುಗ್ಳ ಏತ್ಕೋದೂ ತಪ್ಪು! ಆದರೂ, ಗತಿಯುರ ಸಮಾಜಕ್ಕೆ ಶಿಖರವಾಗಿದ್ದರೂ ಅಹಂಭಾವ ಇಲ್ಲದ—ತಾವ್ತೂ, ಸೂಳೇರ ಕಸುಬಿಗೆ ಈ ಊರಿನಲ್ಲಾದ್ರೂ ತಕ್ಕಮಟ್ಟಿಗೆ—"ಶಿಖರ" !—"ಕಲಶ" !—ನಾನೇ ಅಂತ ಹೇಳ ಬಹುದಾದ ನಾನೂ, ಅಪೂರ್ವವಾಗಿ, ಸಂಧಿಸಿರೋವಾಗ ಚಿಕ್ಕ ಚಿಕ್ಕ ಮರ್ಯಾದೆಗಳ್ನ ಒದರಿಬಿಟ್ಟು ಮಾತನಾಡೋಣ...ನೋಡೀಮ್ಮಾ! ನೀವು ಕಟ್ಟಿರೋ ಸೀರೆ ಹೊಸಾಪೊಸ ಧರ್ಮಾವರ! ಪೆಟ್ಟಿಗೇಲಿ ಸರಿಯಾಗಿ ಮಡಿಸದೆ ಅದುಮಿಟ್ಟು ಹೊರಗೆ ತೆಗೆದಿದ್ದು! ಎಲ್ಲಿ ನೋಡಿದ್ರೂ ನಲುಗಿದೆ! ......ನನ್ನ ಸೀರೆ ನೋಡೀಮ್ಮಾ!—ಜಂಬದ ಮಾತಲ್ಲಾ—ನಾವೀಗ ಮಾತಾಡೋ ಪಾಯಿಂಟ್‌ಗೆ ಸಂಬಂಧಪಟ್ಟಿದ್ದು—ಈ ನೀರಾಜಿ ಸೀರೆ ನೀರಿಗ್ಹಾಕಿದ್ದು! ಇಂಥಾದ್ದು ನಾಲ್ಕು ಒಣಗ್ತಿವೆ ಮಡಿ ಕೋಲು ಮೇಲೆ—ಹಿಂದಿನ ಕೋಣೇಲಿ! ಇವುಗಳಲ್ದೆ ರಾತ್ರಿ ಬರೋ ಸ್ನೇಹಿತರ ಸಂತೋಷಕ್ಕೆ ಇಂಥಾ ನೀರಾಜಿ ಸೀರೆಗಳು ಡಜನ್‌ಗಟ್ಲೆ ಟ್ರಂಕ್‌ನಲ್ಲಿವೆ! ಅಲ್ದೆ,...ನನ್ನ ಕಿವೀಲಿ ಹಾಕ್ಕೊಂಡಿರೋ ಬೆಂಡೋಲೆ, ಐದೇ ಕಲ್ಲಾದ್ರೂ ಮುಕ್ಕಾಲು ಕ್ಯಾರಟ್ಟು...ಒಂದೊಂದು ಕಲ್ಲೂ ಹಾಲೆಂಡು ಕಟ್ಟು! ಸೀಮೆ ಕಮಲ! ನನ್ನ ಮೂಗುತೀನೂ ಅಷ್ಟೇ......ಇದಲ್ದೆ...ನನ್ನ ಕುತ್ತಿಗೇಲಿರೋ ಅಡ್ಡಿಕೇಲಿ ೨೪ ಕಲ್ಲು...ಅರ್ಧ ಅರ್ಧ ಕ್ಯಾರೆಟ್ಟು ಒಂದೊಂದು! ಇನ್ನು ಪದಕದ ಮಧ್ಯದಲ್ಲಿರೋ ಪಚ್ಚೆ ಕಲ್ಲೂ...ಬೆಲೆ ಕಟ್ಟೋರಿಲ್ಲ! ಯಾವುದೋ ಒಂದು ರಾಜಕುಲದಿಂದ ಬಂದದ್ದು! ಈ ಮನೆ......? ಮೂವತ್ತು ಸಾವಿರ ರೂಪಾಯಿಗೆ ಕೇಳ್ತಾರೆ! ಬೆಳಕವಾಡಿ, ಕೊಳ್ಳೇಗಾಲದ ಕಡೆ ಗದ್ದೆಗಳಿವೆ! ತೋಟಗಳಿವೆ! ಬ್ಯಾಂಕಿನಲ್ಲಿ ಮೂವತ್ತು ಸಾವಿರ ರೂಪಾಯಿ fixed deposit ಇಧೆ! ಇವೆಲ್ಲಾಮ್ಮಾ ಸ್ವಯಾರ್ಜಿತ...ನನ್ನೀ ಸೂಳೆಗಾರಿಕೇಯಿಂದ! ನಾನೇ ಸಂಪಾದಿಸಿದ್ದು...ಇದೆಲ್ಲಾಮ್ಮಾ ...ದಾರೀ ಹೋಕರು, ಬೀದಿ ಹೋಕರು, ಕೂಲಿಗಳು, ಪುಂಡರೂ, ಸಾರಾಯಿ ಕುಡುಕರೂ, ಇವರಿಂದ ಸಂಪಾದಿಸಿದೇ ಅಂತ ತಿಳುಕೊಂಡಿಧೀರಾಮ್ಮಾ?...ಹೀಗೇ, ಸೂಳೆಗಾರಿಕೇಲೇ ಹುಟ್ಟಿ, ಬೆಳೆದು ಬಾಳೋ, ನನ್ನಂಥಾ ನಾನೂರು—ನಾಲ್ಕು ಸಾವಿರ ಸೂಳೇರಿಗೂ......**ನಮ್ಮ ಭಾಗ್ಯ ಇಲ್ಲದೆ, ಬೀಳಾಗಿ ಹುಟ್ಟಿ, ಬೀಳಾಗಿ ಬೆಳೆದು, ಬೀಳಾಗಿ ಬಾಳೋ ನಾಲ್ಕೋ ನಲ್ವತ್ತು ಲಕ್ಷವೋ ಆದ ಸೂಳೆಗಳ್ನೆಲ್ಲಾ**...ದಿನಕ್ಕೆ ಎಂಟಾಣೆ ಕೂಲಿ ಕೆಲ್ಸಕ್ಕೆ ನೇಮಿಸ್ತಾರಾಮ್ಮಾ ನೀವ್ತೂ ನಿಮ್ಮ ಕಮಿಟೀನೂ? ಮಸ್ಲ ಈ ಕೂಲೀ ಕೆಲ್ಸಕ್ಕೆ ಒಪ್ಕೊಂಡ್ರೇ, ನಾವುಗಳೆಲ್ಲರೂನೂವೇ ತಿಂಗಳ್ಗೆ ಹುಟ್ಟೋ ಹದಿನೈದು ರುಪಾಯ್ಲಿ ನಮ್ ಹೊಟ್ಟೇನ್ನೂ ಹೊರ್ಕೊಂಡು, ಅಲ್ದೆ ಸಾವಿರ್‌ಗಟ್ಲೆ ಪುಟ್ಟಾಣಿಗಳೂ—"Little Lady" ಅಂದ್ರಲ್ಲಾ—ಅಂಥಾ ಪುಟ್ಟಗ್ಳೂ, ನಮ್ಮನ್ನ ಈ ಕಸುಬಿನಲ್ಲಿ ಹೊತ್ತು ಹೆತ್ತು ಸಾಕಿ, ಸೂಳೆಗಾರ್ಕೇಗೆ ಮುಪ್ಪಿನಲ್ಲಿ ಲಾಯಖ್ಖಿಲ್ಲದೆ ಒದ್ದಾಡೋ ತಾಯಿಗಳೂ, ಇನ್ನೂ ಆಲ್ಲದೆ ಹೆಂಗಸ್ರಾದ ನಮ್ಮ ದುಡ್ಡು, ಒಡವೆಗಳ್ನೂ ವಿಟರ ವಿಪತ್ತಿನಿಂದ ಕಾಪಾಡೋ ಸುಬ್ಬುಗಳೂ......ಇವರೆಲ್ಲರ ಹೊಟ್ಟೆಗಳ್ನೂ ತುಂಬಿಸೋದು ಹ್ಯಾಗಮ್ಮಾ......ನೀವ್ರು ನೇಮಿಸೋ ಎಂಟಾಣೆ ಕೂಲಿ ಕೆಲ್ಸದಲ್ಲಿ? (ಬೆರಳುಗಳನ್ನು ತೋರಿಸುತ್ತಾ—ವೀಣೆಯಮೇಲೆ ಆಡಿಸುವಂತೆ ಆಡಿಸುತ್ತಾ) ಈ ಬೆರಳು ನೋಡೀಮ್ಮಾ!.........ನಿಮ್ಮನೇಲೂ ವೀಣೇ ಇಧೇ ಅಲ್ಲವೆ, !?...... ನಮ್ಮನೇ ವೀಣೇ......ನೂರೈವತ್ತು ವರ್ಷದ ಕಸುಬಿನೋರ ಮನೆತನದಿಂದ ಬಂದದ್ದು...! ಅದರ ದಂತದ ಕೆಲಸಕ್ಕೆ ಈಗ ಮುನ್ನೂರು ರೂಪಾಯಿ ಖರ್ಚಾಗುತ್ತೆ!...ಅದರಲ್ಲೀಮ್ಮಾ...! ಮೊದಲನೇ ಸುಷಮದಲ್ಲೀ...ಧೈವತ...ಕಾಕಲಿನಿ...ಕೈಶತಿ ನಿಷಾದ...ನುಡಿಯತ್ತಮ್ಮಾ...ಗಮಕದಲ್ಲಿ...ಇನ್ನು... ಸ್ವರಗಳ್ನ ಅನುಕಾಲದಲ್ಲಿ ಕಣ್ಣು ಮುಚ್ಚಿ ತೆಗೆಯೋದರೊಳ್ಗೆ ಅರವತ್ತನಾಲ್ಕು ಸ್ವರಗಳನ್ನ ಮೀಟು ಹಾಕಿ ಬಾರಿಸೋ ಗೈರತ್ತು ಇದೇಮ್ಮಾ ಇವಕ್ಕೆ! ಇಂಥಾ ಬೆರಳುಗಳು, ಬೆತ್ತದ ಕೆಲಸಕ್ಕೆ ಬಗ್ಗುತ್ತವೆ ಅಮ್ಮಾ...?......ಅದಕ್ಕೇ ನಾನು ಹೇಳಿದ್ದೂ......ಆ ಗತಿಗೆಟ್ಟ ಕೈವಲ್ಯಮ್ಮನ ಛೀಟಿಗಿಂತ ನಮ್ಮ ಈಗಿನ ಸ್ಥಿತೀನೇ ವೇಲೂ....ಂತ!!

ಲೇಡಿ ಶಿವ : (ಕೈಗಳನ್ನು ಹಿಸುಕುತ್ತಾ) ಮತ್ತೆ ಇನ್ನೇನ್ ತಾನೇ ಮಾಡೋದಮ್ಮಾ ನಾವು......ಸಹಾಯಕರಿಲ್ಲದ ತಂಗೀರ್ಗೆ ಸಹಾಯ ಮಾಡ್ಬೇಕೂಂತ ಹೇಳಾಬ್ತಿರೋ ನಿಮ್ಮಂಥ ನಿಮ್ಮ ಹಾಗಿರೋ ಅವರಿಗೆ. ತೀಕ್ಷ್ಣಬುದ್ಧಿ, ಅನುಭವ ಇರೋ ನೀವು. ನೀವೇ ದಾರಿ ಹೇಳ್ಕೊಡಬೇಕಮ್ಮಾ

ಸೂಳೆ : ಯಾಕ್ ನೊಂದ್ಕೊಳ್ತೀರೀಮ್ಮಾ ?...ನೀವಾಯ್ತು . ನಿಮ್ ಯಜಮಾನ್ರಾಯ್ತು ...ಮನೆ ತುಂಬ ಮಕ್ಳು...ಮೊಮ್ಮಕ್ಳು......ಸೌಖ್ಯ...ಸಂತೋಷಾ. ಇವೆಲ್ಲಾ ಕಣ್ಣಿಂದಾ ನೋಡಾ ನಿಮ್ಮ ಪುರಾಕೃತ ಪುಣ್ಯಾನ ಅನುಭವ್ಸಿ......ಪರಮಾತ್ಮ ಕೂಗತ್ಲೂವೇ ಶಾಂತವಾಗ್ಕೊಂಡು ಕಣ್ಮುಚ್ಕೋಕೆ ಸಿದ್ಧವಾಗ್ಬೇಕಾದ್ನೀವು...ಪುರಾಕೃತ ಪಾಪಾನುಭವಿಸ್ತಿರೋ ನಮ್ಮನ್ನ ನೋಡ್ಕೊಳ್ಳೋ ಆವೇಶದಲ್ಲಿ...ಯಾಕೆ ನಮ್ಮ ನಮ್ಮ ಮಧ್ಯದಲ್ಲಿ ಬರ್ತೀರಾ ?

ಲೇಡಿ ಶಿವ : ಸತ್ಯವಾಗಿ ಹೇಳ್ತೀನಮ್ಮಾ. ನಿಮ್ಮ ಬಾಯಿಂದ್ಲೇ ಬಂದ "ಕಾಂಚಿ". ನನ್ನ ಕೈಲಾದ ಮಟ್ಗೂ ನನ್ತಂಗಿಯರ್ಗೆ...ಜಾತಿ ಮತ ಅಲ್ದೆ ನೀವು ನನ್ನ ಮನಸ್ಸಿಗೆ ಹಾಗೆ ಹೊಂದಿಸ್ದ ಗಂಡಸ್ರು ಏರ್ಪಡಿಸಿದ ನಮ್ಮ "ಗರ್ತಿ" ಕಸುಬಾಗ್ಲೀ ಅದೇ ಗಂಡಸ್ರು ಏರ್ಪಡಿಸಿದ ನಿಮ್ಮ ಕಸುಬಾಗ್ಲೀ ಇವುಗಳಲ್ಲಿ ಸಿಕ್ಕೊಂಡು ಒದ್ದಾಡ್ತಿರೊ ತಂಗೀರ್ಗೆ—ನನ್ನ ಕೈಯಿಂದಾದ ಅಲ್ಪ ಸ್ವಲ್ಪ ಅಳಿಲ್ ಸೇವೇನಾದ್ರೂ ಮಾಡಿದ್ದೇ ಅಂತ ತೃಪ್ತಿ ಪಡೋ ವರ್ಗೂ ನನ್ಗೆ ಸಂತೋಷವೆಲ್ಲಿ ?...ನನ್ಗೆ ಸುಖವೆಲ್ಲಿ ?...ಸಂತೋಷವಿಲ್ಲಾ! ಶಾಂತಿ ಇಲ್ಲಾ!!...ಹೇಳ್ತೀನೆ ಕೇಳೀ! ನಮ್ಮೆಜಮಾನ್ರಿಗೂ ಅವ್ರ ಸ್ನೇಹಿತರ್ಗಳ್ಗೂ......ಎಲ್ರಿಗೂ, ಈ ಪುಣ್ಯ ಕರ್ಮದಲ್ಲಿ ತುಂಬಾ ಉತ್ಸಾಹ!...ನಿಮ್ ಬುದ್ಧಿ ಚುರುಕ್ತನದಲ್ಲಿ, ನನ್ಮಾತಿನ್ನೆಷ್ಟ್ ಎತ್ತಾಕಿದ್ರೂನೂವೇ......ಈ ಕಸ್ಬು ಬಿಟ್ಟ ತಕ್ಷಣ......ನಿಮ್ಮೆಲ್ಲರ್ಗೂ ಕೈಗಾರಿಕೆಯೋ......ಇಲ್ಲಾ ಏನಾದ್ರೂನೂವೋ......

ಸೂಳೆ : [Caressing the Old Lady's face and features with her right arm and her own eyes dripping dew drops of love of sisterhood] ಚಿನ್ನದಂಥಾ ಮಗೂವಮ್ಮಾ ನೀವು!........ಮೊಖಾನೂ ಚಿನ್ನ. ಮನಸ್ಸೂ. ಹೃದ್ಯಾನೂ ಚಿನ್ನ...ಚಿನ್ನದ್ಹಾಗೆ ನಯ......ಸರಳ......ನಿಮ್ ಸಂಸ್ಕಾರ ಫಲವಾಗ್ ದೊಡ್ಡ ಕುಟುಂಬದಲ್ಹುಟ್ಟಿ....ಬೆಳೆದು...ತಂದೆ ತಾಯ್ಗಳು ಓದೆ ಮುಂದೆ ಯೋಚ್ನೆ ಮಾಡಿ...... ಪ್ಯಾಸಾಗಿ ಮುಂದಕ್ಕ ಬರೋ ಬ್ರಹ್ಮಚಾರೀಗ್ ಕೊಟ್ಟು.......ಸಂಸಾರ್ದ ವಿಷಯವಾಗ್ಲಿ ಯಾವ ಕೊರತೇನೂ ಬರದ್ಹಾಗೆ ಏರ್ಪಾಟೆಲ್ಲಾ ಮೊದಲೇ ಮಾಡ್ಕೊಟ್ಟು......ನಿಮ್ಮ ಬಾಳ್ ಕುದರಿಸ್ಬಿಟ್ರೀ ನಿಮ್ಮ ದಾಂಪತ್ಯದಲ್ಲಿ, ನಿಮ್ಮ ವೃದ್ಧಾಪ್ಯದಲ್ಲಿ ಸಂತೋಷವಾಗಿ ಇರ್ತೀರಾ ನೀವು!! ನಿಮ್ಗಿರೋ ನಯ, ಸರಳವಾದ ಬುದ್ಧಿ, ಮನಸ್ಸು, ಹೃದಯ ನನಗಿದ್ದಿದ್ದಿತ್ತೋ. ಯಾರಾಗ್ಲೋ ಸಿಕ್ಕೊಂಡು ಚಿಟ್ಟೆ ಹುಳ್ದ ಹಾಗೆ "ಛಟ್" ಅಗ್ತಿದ್ದೆ ನಾನು...ಈ ಸಮಾಜಾಂಬೋ ಗಾಡಿಯ ಗ ಹತ್ತಿ ಆಳತಿರೋ ಈ ಮೆರವಣಿಗೆ ರಥದ ಚಕ್ರಕ್ಕೆ!! (ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ) ಕಬ್ಬಿಣವಾಗಿರಬೇಕಮ್ಮಾ ನಾವು! ನಿಮ್ಮ ಹಾಗೆ ಚಿನ್ನವಲ್ಲಾ! ಕಬ್ಬಿಣ!!......ಕಬ್ಬಿಣದ್ ಬುದ್ಧಿ. ಕಬ್ಬಿಣದ್ ಮನಸ್ಸು. ಕಬ್ಬಿಣದ್ ಹೃದಯ! ಇದೆಲ್ಲಕ್ಕಿಂತ ಕಬ್ಬಿಣದ್ ದೇಹ ಇರ್ಬೇಕಮ್ಮಾ ನಮ್ಗೆ! ನಮ್ಮ ಕಸಬ್ನ....ಸೂಳೆ ಕಸಬ್ನ.......ಕೊನೇವರಿಗೂ ನಿಭಾಯಿಸಿಕೊಳ್ಳೋಕೆ!!......ಹುಟ್ಟಿ ಹಸುಳೆಯಾಗಿ ಹೊಸಲ್‌ದಾಟಿ ಮನೆ ಮೆಟ್ಲು ಇಳಿದು ಸಮಾಜಾನ ಸೂಕ್ಷ್ಮಿಸುತ್ಲೂವೆ ಸಮಾಜದ ನಾಮಕರಣ ನಮಗೆ!......"ಸೂಳೇ"!...."ಸೂಳೇ"!..."ಸೂಳೇ"ಂತ!! ಪುರುಷರು ನಗುತಾ ಸುಬ್ಬೂ ಹೇಳೋಹಾಗೆ ... Challengeಊ...ನಮಗೂ ಸಮಾಜಕ್ಕೂ!... ನಾವೂ...... ಸೂಳೇಗರ್ಳ......ಗರತಿಯರ್ಗೂ! ಆ ಸಮಾಜದ ಸಂಸಾರ ಮರೆತ ಗಂಡಸ್ರ ದಾರಿಗೆ ಹುಟ್ಟಿದ ಆ ಮಗು ಬೆಳೆದು ಸೂಳೆಯಾಗಿ. ಬಂದ ವಿಟರು ಬಿಟ್ಟು ಹೋದ ರೋಗಗಳಿಂದ ಕೊಳೆತು ಸಾಯೋ ವರ್ಗೂ ಸವಾಲು! ಸೂಳೇದ್ರೂ! ಜವಾಬೇನೂ! ?......ಇದೇ ವಿಟರು ಅಗ್ನಿಸಾಕ್ಷಿಯಾಗಿ ತಾಳಿ ಕಟ್ಟಿದ ಗರ್ತೀರ ಜವಾಬೇನೂ ? ಅಗ್ನಿಂದಾ ಸಾಯೋವರ್ಗೂ ಸವಾಲು! ಜವಾಬ್......ಈಗ ನಿಮ್ಮನ್ನ ಮಟ್ಟಿಗೂ ಮುಂದ್ಬಿಟ್ಟು ತಾವೆಲ್ಲಾ ಹಿಂದೆ ಮುದಕೊಂಡು ಇರೋ ಧಾರಾಳ್ರಾದರು

"ಯಾರು ? ಏನೂ ? ಎತ್ತಾ ?" ಅಂತಾ ನನಗೆ ಸಾಂಗೋಪಾಂಗವಾಗಿ ಗೊತ್ತು ಅಮ್ಮಾ! ಅವರುಗಳ ವಿಚಿತ್ರ ಚರಿತ್ರೆ—ನನಗ್ಗೊತ್ತು! (Laughs sardonically) ನಿಮಗ್ಗೊತ್ತಿಲ್ಲಾ... ಹೆಂಗ್ಸಾಗಿ ಹುಟ್ಟಿದ್ದಕ್ಕೆ ಹೊತ್ತು, ಹೆತ್ತು, ಹೆತ್ತ ಕಂದಗಳು ಮುಂದಕ್ಬರೋದನ್ನೋಡಿ, ಕಣ್ತುಂಬ್ಕೋದೇ ಹೆಂಗ್ಸಿನ ಐಹಿಕಾರ್ಥ ಅಂಬೋದ್ನ..........ಅರಿತು ತೋರ್ಸಿ ಕೊಟ್ಟಿದ್ದೂ ನೀವೇ...ಸಮಾಜಕ್ಕೆ!! ಅಷ್ಟೋ ! ? (ಅಲ್ಪಸ್ಮಿತಳಾಗಿ) ನೀವು ಹಾಕಿದ ಮೇಲ್ ಪಂಕ್ತೀನ ಮರೆತು......ಗಂಡ ಚಿಕ್ಕ ಕೆಲ್ಸದಲ್ಲಿದ್ದಾಗ, ತಂತಮ್ಮ ಪುಟ್ಟ ಪುಟ್ಟ ಸಂಸಾರದಲ್ಲಿ ಒದ್ದಾಡ್ತಿದ್ದು ತಂತಮ್ಮ ಕೊರತೇಲಿ ಕೊರಗ್ತಿದ್ದ ಪ್ರಾಣೀ..........ಗಂಡಂಗೆ ದೊಡ್ಕೆಲ್ಸ ಒದಗುತ್ತೂನೂವೇ, ತಾನು ಸೇದೋ ಭಾವೀಗ್ ಬದ್ಲಾಗಿ ಪಂಪುಗಳೂ, ಪೈಪುಗಳೂ, ತಾನು ಮುದುರಿಕೊಂಡಿದ್ದ ಮಾವಳ್ಳೀ ಬಿಲ ತಪ್ಪಿ, ಬಸವನ ಗುಡೀ ಬಂಗ್ಲೇನೂ......ಶುಕ್ರವಾರ ಶನಿವಾರಾನೂ ತಪ್ದೇ ಕಾಲ್ನಡಿಗೇಲಿ ಹೋಗ್ತಾ ಇದ್ದ ಕಾಳಮ್ಮನ ಗುಡೀನೂ ತಪ್ಪಿ, ಮೋಟಾರ್ ಬಂಡೀಲಿ ಸುಳಿದಾಡ್ತಾ, ತನ್ನ ಕಸಬರಿಗೇನಾ....ಒಬ್ಬ ದೇವೇರಿಗೂ......ತನ್ನ ಸೌಟನ್ನ ಒಬ್ಬ ನಾರಾಯಣನ್ಗೂ, Charge ಒಪ್ಸಿ, ಗಂಡನ ಶುಶ್ರೂಷೆ ಗಲಾಟೆಗೆಲ್ಲಾ ತಪ್ಪಿಸ್ಕೊಳ್ಳುತ್ತೂನೂವೇ, ಇದುವರೆಗೂ ಇದ್ದ, ಕೆಂಪುವಾಲೇ ತಪ್ಪಿ ಹೊಸದಾಗಿ ಬಂದ ಸೀಮೆ ಕಮಲದ ಬೆಂಡೋಲೆ ಬೆಳಕ್ನ ಬೀರ್ತಾ, ಕೈಬಳೆ ಹೋಗಿ Wrist Watch ಬಂದ ಕೈಗಳ್ನೂ ಬೀಸ್ತಾ ಲಾಲ್‌ಬಾಗೂ! ಕಬ್ಬನ್‌ಪಾರ್ಕೂ! ಬುಳ್ಳಾಚಾರಿ ಭಾಗವತ, ಪುಳ್ಳಯ್ಯನ ಪೀಟೀಲು ನಾನಾ ವಿಧಾ ಚಾರಿ ನಾಟ್ಯ, ಮೂಗಯ್ಯನ ಮುರುಳಿ, ರಾಮಣ್ಣೋರ ರಂಧೋಲು...ಅಲ್ದೆ ಟಾಕಿ ಮೂಕಿ ಇವ್ಗಳ್ಗೆಲ್ಲಾ, ದನದ ಹಾಗೆ ಗಂಡ್ನ ದುಡ್ದು ತಂದ ದುಡ್ನ, ತನ್ನ ದುಡ್ನ ಹಾಗೆ ಸಿಕ್ಕಾಪಟ್ಟೆ ಖರ್ಚೀ... ಖರ್ಚೀ,...ಈ ವಿನೋದಗ್ಳೆಲ್ಲಾ ಬೇಜಾರಾಗಿ ತನ್ನ ಕಾಲಹರಣಕ್ಕೆ ತನ್ನ ಗಂಡನ ದುಡ್ಡೇ ಸುರ್ಯೋಕೆ ಇದೊಂದು ಹೊಸ ದಾರೀನ ನಿಮ್ಮ ಕಮ್ಟಿ ಹುಡುಕ್ತಿರೋ ಹಾಗಿದ್ಯೇ ಹೊರ್ತು [ಮುಷ್ಟಿಗಳನ್ನು ಬಿಗಿಯುತ್ತಾ] ಏನ್ ಸಹಾಯಾ ತಾನೇ ಮಾಡ್ತಾರಮ್ಮಾ ನಿಮ್ಮ ಕಮಿಟಿಯೋರೂ ?......ಇದ್ ವರ್ಗೂ ದೈವಾನ ಕಾಣಲಾರ್ದ ಪಾಪಿಗೇನೇ ಕಾಣಿಸ್ಕೊಳ್ಳೋಕೆ ದೈವಾನೇ ಪಾಪಿ ಹತ್ರ ಬಂದು ದರ್ಶನ ಕೊಟ್ಟದ್ದು ನನಗೆ ಹೆಮ್ಮೆ! ನಮ್ಮ ಕಸುಬಿಗೆ ಹೆಮ್ಮೆ! ನನ್ನ ಮನೇಗೆ ಹೆಮ್ಮೆ! ನಿತ್ಯ ಕನ್ನಿಕಾ ಪರಮೇಶ್ವರೀ ಹಾಗೆ ನನ್ನ ಕಣ್ಣಿಗೆ ಕಾಣಿಸ್ತಿರೋ ನಿಮ್ಮ ಸಂಸ್ಕಾರಕ್ಕೆ, ಕರ್ಮಫಲಕ್ಕೆ, ಹೆಮ್ಮೆ! ಆದರೆ ನಿಮ್ಮ ಕಮಿಟೀಗೆ ಮಾತ್ರ ಬುದ್ಧಿಗೇಡು! ನಾಚಿಗ್ಗೇಡು! ಹೆಂಗ್ಸ್ತನಗ್ಗೇಡು!...ನೀವೆಲ್ಲೀಮ್ಮಾ! ಅವರೆಲ್ಲೀಮ್ಮಾ ! (Laughs Sardonically) ಆ ಕಮಿಟೀ ಕ್ರಿಮಿಗಳೆಲ್ಲೀಮ್ಮಾ ! ? ಒಟ್ನಲ್ಲಿ ಇದು ವರ್ಗೂಮ್ಮಾ ಈ ದೇಶದಲ್ಲಿ ನನ್ಹಾಗಿರೋ ನಾವೂನೂವೇ .... ನಿಮ್ಹಾಗೆ ಈ ಕಾಲದಲ್ಲಿ ಅತಿ ವಿರಳವಾಗಿ ಇರೋ ನೀವೂನೂವೇ ಸಂಧಿಸ್ತಿರೋದು ಸಮಾಜಕ್ಕೇ ಒಂದು ಹೆಮ್ಮೆಯೋ ಅಲ್ವೋ......ಇಲ್ಲಾ......ನನ್ನೀ ಜನ್ಮಕ್ಕೇನೇ ಮೊದಲೋ...!......

ಲೇಡಿ ಶಿವ : "ನಾವು" !...."ನೀವು !"...ದೇವ್ರೇ ಗತಿ! ನಾನೇನೂ ? ನೀವೇನೂ ? (Puts both her hands on ಸೂಳೇ's shoulders) ಮಿಕ್ಕ ಹೆಂಗಸ್ರೇನೂ ? (ಸೂಳೆಯು ಸೂಚಿಸಿದ ಪಠಗಳನ್ನು ಸೂಚಿಸುತ್ತಾ)......ಇದೇ ಸೀತೆ......ಇದೇ ಸಾವಿತ್ರಿ ಅಲ್ದೆ........ಇಲ್ಲಿಲ್ಲದ ......ಮಂಡೋದರಿ ...... ಲೋಪಾಮುದ್ರೆ...ಅನಸೂಯೆ .... ಅರುಂಧತೀನೂ .... ಇವರೆಲ್ಲಾ ಯಾಕೇ ? "ಉಮಾ"......"ಮಾ"ಗಳನ್ನೂ ಇವರನ್ನೆಲ್ಲಾನ್ನೂ. ನಿಮ್ಮನ್ನೂ, ನಮ್ಮನ್ನೂ ಸೃಷ್ಟಿಸಿದ್ದು ಒಂದೇ ದೇವತೆ!—ಆದಿಶಕ್ತಿ!—ಆಕೇನೂ ಹೆಂಗ್ಸು! ನಿನ್ಹಾಗೇನೂ....ನಮ್ಹಾಗೇನೂ ಹೆಂಗ್ಸು! ಮೂರ್ ಕಣ್ಣಿದ್ರೂ ಒಂದೇ ಕಣ್ಣಿಂದ ನೋಡೋ ದೇವತೆ!......ನಾವ್ಹೆಂಗಸ್ರೆಲ್ಲೂ ಆಕೆ ಕಣ್ಗೆ ನಾವೆಲ್ಲಾ ಮಕ್ಳು ಅಂತ್ಲೂ, ಅಕ್ಕತಂಗಿಯರೂ ಅಂತ್ಲೂ, ನಂಬಿರೋ ನನ್ನ್ ನಂಬ್ಕೇ ಮೇಲೆ ಮಾತಾಡೋಕೆ ಬಂದಿರೋದು ನಾನು! "ಪಾಪೀತಂದ್ಕೊಂಡ್ರಲ್ಲಾ!" **ಪಾಪ ಯಾರದು ?** ......ನಮ್ದೂ ಅಲ್ಲಾ ...."ನಾವೆಲ್ಲೂ"ಅಂದ್ರಲ್ಲಾ ಆ ನಿಮ್ದೂ ಅಲ್ಲಾ. ಯಾರ್ದೂ ಅಲ್ಲಾ...... ಆದ್ರೂನೂವೇ **ನಮ್ಮೆಲ್ಲರ್ದು!!.... ನಮ್ಮ ಸಮಾಜದ್ದು !** ವ್ಯಕ್ತಿಗ್ಳು ಸಮಾಜ್ದಲ್ಲಿ ಹುಟ್ಟಿದ್ದಕ್ಕೆ......ತಂತಮ್ಮ ಸಾಮಾಜಿಕ ಜವಾಬ್ದಾರಿ ಅರಿಯುತ್ತೂನೂವೇ......ಪರಸ್ಪರ ಸಹಾಯ ಮಾಡ್ತೆ......ಕಾಪ್ಕೊಳ್ತ

"ಸಮಾಜ ಋಣ"ವಾದ..."ಸಮಾಜ ಸೇವೇ"ಂಬೋ ಸ್ವಧರ್ಮ ದ ಮಾತ್ತು ಮಾರೀಗೆ ಬಾರಿ ದ್ದಕ್ಕೆ...... ಪರಕೀಯ ಜನರ ಭಾಷೆ. ನಾಗರೀಕತೆ ಇತ್ಯಾದಿ ಸಂಗ ಕ್ಕೆ ಸೋತು. ಸ್ವಧರ್ಮಾನೇ ತೊರೆದ. ......"ಹೊಸ ನಡಿಗೆ ಬರ್ಲೇ ಇಲ್ಲ. ಹಳೇ ನಡಿಗೆ ಮರೆ ಹೋಯ್ತು"!......."ಪರ ನಡೆ ಕಲಿಯೋ ಆಸೇಲಿ. ಕಾಗೇ ನಡೆ ಮರಿಯೋದೇ!"?? ಅಂತ...ಟೀಗೆ ಬದ್ಲಾಯ್ತಿರೋದು ನಮ್ಮ ಈಗಿನ ಸಮಾಜದ ಪಾಪ!! (ಮುಗುಳುನಗೆಯಿಂದ) ನಾನೂ ನಿಮ್ಮಾಗೆ—ನಿಮ್ಮ Little Lady ...... ಫ್ರಟ್ಟಾನ ಹಾಗಿರೋ ಮಕ್ಕಳ್ನ ಹೆತ್ಕೊಳ್ಳು! ಒ ಗಲ್ಲ! ಪರವಾಗಿಲ್ಲ! ಬಂಧತ್ವ ಮಕ್ಕಳು!!.....ನಾನೂ ನೀವ್ಗೂ ಈ ಸಮಾಜದ ಕಣ್ಣಿಗೆ ಬೇರೆ ಬೇರೆಯಾಗಿದ್ರೂನೂವೇ ನಮ್ಮನ್ನೆಲ್ಲಾ ಸಮವಾಗಿ ಕಾಣ್ತಿರೋ ಆ ದೇವತೆ ಕಣ್ಗೆ (Pointing out with her forefinger to a Chamundi picture be-decked with flowers and begrimed with saffron & turmeric) ತನಗೆ ಇತರರು ತಾನೇಂತ. ನಾವೆಲ್ರೂ ಒಬ್ಬರಿಗೆ ಮತ್ತೊಬ್ರು ಒಬ್ರೇಂತ. ಅರಿಯಲಾರ್ದೆ ಒದ್ದಾಡ್ತಿದ್ದೇವೇಂಬೋದು ನನ್ನ ಹೃದಯಕ್ಕೆ ಹೊಳೆದ ಮೇಲೇನೇ ನಾನ್ ಬಂದಿರೋದು.......... ನಿಮ್ಮೊಂದಿಗೆ.......ಮಾತಾಡೋಕೆ!

ಸೂಳೆ : (ಭ್ರುಕುಟಿಗಳನ್ನು ರಚಿಸುತ್ತಾ, ಅಬ್ಬರಿಸುವಾಗಿ) "ಮಾತಾಡೋಕೆ"?!...ಅರ್ಥಾ ಗ್ಲಿಲ್ಲ!...ಏನ್ಮಾತವ್ಮಾ?...ದೇವರ್ ಕಣ್ಗೆ...ನೀವ್ಗೂ. ನಾನೂ. ಎಲ್ರೂ ಒಂದೇ ಒಂದೂಂತ ನೀವೆಷ್ಟ್ ಕೊಂಡಾಡ್ಕೊಂಡ್ರೂನೂವೆ. ಸಧ್ಯ ನಮ್ಮಿ ಊರಿನ ಸಮಾಜದ ಕಣ್ಗೆ. ಸೀತಾಪತಿ ರಾ ವರ್ಮನ ಪಠದಲ್ಲೇ!. ನೀವ್ರು ನಿಮ್ಮ ಯಜಮಾನ್ರ ಬಂಗ್ಲೇಲೇ! ನಾನು ನನ್ನೀ ಸೂಳೆ ಕೊಂಪೇಲೇ! (Pointing out the selfsame picture of Chamundi, ಬಿರುಸಾಗಿ) ಆದಿ —ಅನಂತ—ನಿತ್ಯ ಕನ್ನಿಕಾ ಪರಮೇಶ್ವರೀ ಪ್ರತಿಮೇನೂ ಅವರವರ ಮನೇಲೇ!! ಪೂಜೆ-ಅಲಂಕಾರ- ಸಮೇತ!! ಹ್ಯಾಗೆ ಬಿಡಿಸ್ತೀರಾಮ್ಮಾ ಈ ಒಗಟೇನಾ? ......(Laughs gurglingly)

ಲೇಡಿ ಶಿವ : (Stroking ಸೂಳೇ's hand and joining in the laughter) ನೋಡೀಮ್ಮಾ! ನನ್ ದೊಡ್ಮಗ್ಳು ಹೆಚ್ಚೂ ಕಮ್ಮಿ ನಿಮ್ಮ ವಯಸ್ಸು "ನಾವ್ರು" "ನೀವ್ರು" ಅಂದ್ರುಲ್ಲಾ!......ಆ ನಾವು ನಮ್ಮ ನಮ್ಮ ಐಹಿಕ ಸಂತೋಷಗಳಲ್ಲಿ ನಮ್ಮ ಹೊಟ್ಟೇಲಿ ಹುಟ್ಟು ಹೆತ್ತು ನಮ್ಮೆದ್ರಿಗೆ ನಲಿದಾಡೋ ಮಕ್ಕಳ್ನ ಸಂತೋಷಪಡ್ಸೋ ದಾಹಾನ ತೀರಿಸ್ಕೊಂಡು ನಂ ನಂ ಸಂತೋಷ್ದಲ್ಲಿ ಮುಳುಗಿರೋ ನಾವು......ಈ ಸಂತೋಷ ಇಲ್ಲದೇನೂ. ದೇವ್ರದುರ್ಗ, ತಂಗೀ ರಾಗಿ. ನಾವಿರೋ ಸಮಾಜಕ್ಕೆ ಒಳಪಟ್ಟಿದ್ರೂನೂವೇ. ದಿಕ್ಕಿಲ್ದೆ, ದೇವರ ದಯವಿಲ್ದೆ ಕುಗ್ತಿರೋ ...ನನ್ನ ತಂಗಿಯರ ಏಳಿಗೇಗೇಂತ ಏರ್ಪಾಡು.......ನಮ್ಮನಮ್ಮಲ್ಲೇ ಮಾಡ್ಕೊಂಡ ಹಲವು ಕೆಲವು ಅಕ್ಕತಂಗಿಯರ ಸಂಘಕ್ಕೆ ಪ್ರೆಸಿಡೆಂಟ್ ನಾನು!!....ಹ್ಯಾಗ್ಹೇಳ್ಲೀ!? ಕೋಪ್ಸ್ಕೋಬೇಡಿ! (ಕೈಯನ್ನು ದೂರವಮಾಡುತ್ತಿರುವ ಸೂಳೆಯ ಕೈಯನ್ನು ತನ್ನೆರಡು ಕೈಗಳಿಂದಲೂ ಹಿಡಿದು)......ಹಿಮಗೀತ ಒರಿಯಳು ನಾನೂಂತ ಮೊದಲೇ ಹೇಳಿದ್ದೇನೆ ನಾನೂ!.......ನಮ್ಮಂಗೀರಾದ ನಿಮ್ಮಂಗಳ ಏಳಿಗೇಗೆ ಧನಸಹಾಯವೇ ಅಲ್ಲದೆ. ಏನ್ ಸಹಾಯವೇ ಆಗ್ಲೀ......ಮಾಡೋಕೆ ಸಿದ್ಧ!! (ಸೂಳೆಯ ಕೈಯನ್ನು ಮತ್ತೆ ಸವರುತ್ತಾ) "ನೀವ್ರ ಹೀಗಿರುವುದು ಅನ್ಯಾಯ .....ಸಮಾಜದ ಅನ್ಯಾಯ......ಅವಮಾನ .... ಸಮಾಜಕ್ಕವಮಾನ...ಸಮಾಜದ ಪಾಪ" ಅಂತ ತಿಳ್ದು ಈ ನಿಮ್ಮ ಜೀವನವನ್ನು ಬಿಟ್ಟು ಏಳಿಗೆಯನ್ನು ಹೊಂದೋಕೆ ಬೇಕಾದ ಸಹಾಯನೆಲ್ಲಾ ಒದಗ್ಸೋ ಸಮಾಜ ಸೇವೇಗೇನೆ........... ಎದ್ದು ನಿಂತ್ರರಾಗಿ ನಮ್ಮಮ್ಮ ಹೆಂಗಸ್ರು ನಾವ್ನಾವೇ ಏರ್ಪಡಿಸ್ಕೊಂಡಿರೋ ಒಂದು ಕಮಿಟೀಯ ಪರವಾಗಿಯೇ ಅಲ್ದೆ......ನಿಮ್ಮ ಫ್ರಟ್ಟಾ. "ಎಲ್ರೂ Nasty" ಅಂದ ಹಾಗೆ "ಮಾತಾನಾಸ್ತಿ ಪಿತಾನಾಸ್ತಿ ನಾಸ್ತಿ ಬಂಧು ಸಹೋದರಾ। ಪುತ್ರನಾಸ್ತಿ ಕ್ಷಿತಿರ್ನಾಸ್ತಿ ತಸ್ಮಾತ್ ಜಾಗ್ರತ ಜಾಗ್ರತ।"— "ಇದ ಜೀವನ್ವೇ ಒಂದು ಕನ್ಸು! ಈ ಕನಸ್ನೇ ಕೊನರ್ಗ ಕಣ್ಣಿದೋದೇ ಮನುಷ್ಯನ ಕರ್ತವ್ಯಾ"ಂತ ತಿಳಕೊಂಡಿದ್ರೂನೂವೇ. ಇದೇ ಕನಸಿನ ನಾಟ್ಕದಲ್ಲಿ. ಆದೋ ನಾವು "ರಾಜ-ಮಂತ್ರಿ-ಪಾರ್ಟುಗಳ- ಹೊಟ್ಟೇವಾಡ್ಗೇ"ಂತ ಬಣ್ಣ ಬಳ್ಕೊಂಡು ಹಾಡಿ. ಮಾತಾಡಿ ಕುಣಿಯೋ ಹಾಗ್ನೇಂತ ನಮ್ಮಲ್ಲಿ

ನಾವು ತಿಳಿದ್ದೂನೂವೆ, ಅವರು ಮೆಟ್ಟಿದ ರಂಗ ಸ್ಥಳಾನಾ ಬಿಟ್ಟು ಬರೋವರ್ಗ್ಗೆ....ರಾಜನ ವೇಷ ರಾಜನ್ನಾಗೂ, ಕಟುಕನ ವೇಷಾ ಕಟುಕನ್ನಾಗೂ, ಮಂತ್ರಿ ವೇಷ ಮಂತ್ರಿ ಹಾಗೂ ತಾರತಮ್ಯದ ಅಭಾವವಿಲ್ದೆ ತಮ್ತಮ್ಮಲ್ಲಿ ವೇಷಗಳ್ನ ತಾವೇ ಒಪ್ಕೊಂಡು ವಹಿಸಿ, Stage ಮೇಲೆ ಸಮ್ಮಿ ಮುಗ್ಸಿ, ಎಲ್ಲೂ ಒಂದಾಗಿ ವೇಷಗಳ್ನ ನಾಟಕ್ದೋರು ಅಳಿಸ್ಕೊಳ್ಳೋ ಹಾಗೆ...ಈ ಸಮಾಜ ಅಂಬೋ ಕನಸಿನ ನಾಟಕಕ್ಕೆ ನಾವು ಇಳಿದೇ ಬಿಟ್ಟ ಮೇಲೆ ಸೂಳೇಯೇನೂ-ಗರ್ತೀಯೇನೂ! ನೀರಾಜಣೀನೂ!-ಪರಕಲು ಸೀರೆಯೇನೂ! ತಾಳೀ ಏನೂ?......ವಜ್ರದ ಅಡ್ಡಿಗೆ ಏನೂ........"ನಾವೂ"... "ನೀವೂ"..."ಇವರೂ"..."ಅವರೂ"!...ಹೀಗೇ...ನಮ್ಮ ನಮ್ಮ ವೇಷಗಳ್ನ ಪುರಾಕೃತ ಪಾಪ ಪುಣ್ಯಗಳಿಂದ ಗ್ರಹಿಸಿ ವಹಿಸ್ಬಿಟ್ಮೇಲೆ "ಕಷ್ಟ"..."ಸುಖ" ಅಂಬೋ ಮಾಯೆಗೆ ಅಧೀನರಾದ ನಾವು ......ಸುಖಾನನುಭವಿಸೋದು......ವ್ಯತ್ಯಾಸವಿಲ್ದ...ಶೋಕದಲ್ಲಿ ಒದ್ದಾಡೋ ಇತರ್ರಿಗೆ ಸಹಾಯ ಮಾಡೋದೇ ಆತ್ಮಧರ್ಮ ಅಂತ ನನ್ನ ಹೃದಯಕ್ಕೆ ಹೊಳೆದು ನಾನೂ, ಹಾಗ್ಯೇನೇ ನೀವೂನೂವೇ "Baby Welfare Fund"......ಅಲ್ಲದೆ ಇತರ ಧರ್ಮಗಳ ವ್ಯವಸ್ಥೆಗೆ ಕೊಟ್ಟಿರೋ ಧನ ಸಹಾಯಾನೂ ಅಲ್ಲದೆ ನೀವೇನೇ ನಮ್ಮೂರಿನ ಅಶಕ್ತ ಪೋಷಕ ಸಂಘಕ್ಕೆ ವೀಣೆ ಕಛೇರಿ ಮಾಡಿ ಸಂಪಾದಿಸಿ ಕೊಟ್ಟ...ನೀವೂ...ಸೇರಿ.......

ಸೂಳೆ : (Lady Sನ ಕೈಯನ್ನು ತಾನು ಕೂತಿರುವ ಕುರ್ಚಿಯನ್ನೂ ಥಟ್ಟನೆ ಬಿಟ್ಟು ...ಪಕ್ಕದಲ್ಲಿರುವ ದುಂಡು ಮೇಜಿನ ಅಪರ ಭಾಗದ ಕುರ್ಚಿಯ ಮೇಲೆ ಕೂತು, ಅಲ್ಪ ಕ್ರೂರ ಧ್ವನಿಯಲ್ಲಿ) ಕ್ಷಮಿಸ್ಸಿಮ್ಮಾ........ನನ್ದಾನ, ನನ್ಧರ್ಮ........ನನ್ದು! ಮಿಕ್ಕೋರ್ದಲ್ಲ ಕ್ಷಮಿಸ್ಸಿ! ನಿಮ್ದೂ ಅಲ್ಲ! ನನ್ದು! ಆ ಧರ್ಮದ ಮಾತೆಲ್ಲಾ ತುಂಡ್ಹಾಕಿ, ದಯವಿಟ್ಟು!......ಕ್ಷಮಿಸ್ಸಿ! ನನಗೇನೋ ತೋಚಿತು! ಸೂಳೆರಾದ್ರೂ ನಾವು, ಕಣ್ಣು, ಕೈ, ಕಾಲು, ಮೈ ದೇವರು ನೆಟ್ಟಗೇ ಕೊಟ್ಟಿದ್ದಾನೆ ನಮಗೆ! ಆದರೆ ಸೂಳೆಯಾದ ನಾನೂ ಕೂಡ ಕನಿಕರಿಸಬೇಕಾದ, ಪಂಚೇಂದ್ರಿಯಗಳು ಐಬಾಗಿರೋ ಪ್ರಾಣಿಗಳಿಗೆ, ನಾನು ಸಹಾಯ ಮಾಡೋ ಸ್ಥಿತೀಗೇ ಬಂತೇ? ಅಂಬೋ ಆವೇಶ್ದಲ್ಲೀಮ್ಮಾ ನನ್ನ ಕಚೇರಿ ಅಶಕ್ತ ಪೋಷಕ ಸಂಘದಲ್ಲಿ!......ವೀಣೆ ಬಾರಿಸಿದ್ದು ನಾನು, ಮೊದಲನೇ......ಕೊನೇ ಸಾರ್ತಿ ಅಲ್ಲೇ!!...ಇದೆಲ್ಲಾ ಯಾಕಮ್ಮ? ಒಡ್ದೇ ಹೇಳ್ಬಿಡ್ತೇನೆ (ಗಂಭೀರವಾಗಿ) ನೀವಿದುವರೆಗೂ ಹೇಳಿದ ಧರ್ಮಾಧರ್ಮದ ತಿರುಳು ಇಷ್ಟು! ನನಗೆ ತೋಚಿದ ಮಟ್ಟಿಗೂ ಇಷ್ಟು! ಸಮಾಜದಲ್ಲಿ ತಾವು ತಾವು ಕೊಟ್ಟು ಇಟ್ಟಿದ್ದ ಪುರಾಕೃತ ಪುಣ್ಯ ಪ್ರಭಾವದಿಂದ ತಾವು ತಾವು ಅನುಭವಿಸ್ತಿರೋ ಸುಖಗಳ್ನ ತಿಂದು ತೇಗ್ತಿರೋ ಗಲಾಟೇಲಿ, ಒಬ್ಬರೋ ಇಬ್ಬರೋ ಹೆಂಗಸ್ರು, ತಾವು ಅನುಭವಿಸೋ ಸುಖವಿಲ್ಲದ ಅನ್ಯರ ದುಃಖಾನ ನೀಗಿಸೋಕೆ......ತಮ್ಮನ್ನ ಮದುವೆಯಾದ ಗಂಡಸ್ರು ಸಂಪಾದಿಸಿದ ಧನಾನಾ ನಮ್ ಸಹಾಯಕ್ಕೆ ಸುರ್ಯೋಕೆ ಸಿದ್ಧವಾಗಿರೋರು ನಿಮ್ಮಂಥಾವ್ರು! ಇಂಥಾ ನಿಮ್ಮ "ಕಮ್ಟಿ"ನೂ ಸಾಕು; ಈ ಕಮಿಟಿ ಹೆಂಗಸ್ರ ಸಹವಾಸಾನೂ ಸಾಕು! ನಾವು ಮಾಡದ ತಪಸ್ಸಿನ ಫಲ, ಬೇಡದವರ ಕೈಯಿಂದ ಬೇಡ! ನಮಗೆ!...ಸೂಳೆಗಳಿಗೆ!!

ಲೇಡಿ ಶಿವ : [ಕುರ್ಚಿಯಿಂದೆದ್ದು, ಮೇಜನ್ನು ಬಾಗಿ...ಸೂಳೆಯ ಭುಜವನ್ನು ಸವರುತ್ತಾ] ಹಾಗಲ್ಲಾಮ್ಮಾ!!

ಸೂಳೆ : [ಎದ್ದು ನಿಂತು] ಕೋಪಿಸ್ಕೋಬೇಡಿಮ್ಮಾ! [ಅಲ್ಪಸ್ಮಿತ ಮುದ್ರಿತಳಾಗಿ] ಕೋಪಿಸ್ಕೋಬೇಡೀಮ್ಮಾ. ನಿಮ್ಮ ಪರಿಚಯ ಆದ ಈದಿನ ಸುದಿನವೇಂತ ನನ್ನ ಹೃದಯಕ್ಕೆ ತಾಕಿದ್ರೂನೂವೇ...ನೀವು "ಕಮ್ಟಿ"ಂದ್ರಲ್ಲ......ಆ ಹೆಂಗಸ್ರ ಪೂರ್ವಪಶ್ಚಿಮವಲ್ಲದೆ, ಉತ್ತರ ದಕ್ಷಿಣಾನೂ ನನಗ್ಗೊತ್ತೂ! ನಿಮಗ್ಗೊತ್ತಿಲ್ಲಾಮ್ಮಾ!! [Lady S ಅನ್ನು ಸಮವಾಗಿ ಕೂಡಿರುತ್ತಾ] ಕೂತ್ಕೊಳ್ಳೀಮ್ಮಾ! ಕೂತ್ಕೊಳ್ಳಿ. [ಇಬ್ಬರೂ ಕುಳಿತುಕೊಳ್ಳುವರು.]

ಲೇಡಿ ಶಿವ : (ಕುಳಿತ ಕುರ್ಚಿಯನ್ನು ಎಳೆದು ಕುಳಿತು, ಸೂಳೆಯನ್ನು ಸಮೀಪಿಸಿ ದಕ್ಷಿಣ ಹಸ್ತವನ್ನು ಸವರುತ್ತಾ) "ಸುದಿನ?" ನಿಮ್ಮ ಪರಿಚಯ ನಿಮ್ಮ ಪುಟ್ಟಾನ ಪರಿಚಯ ಆದದ್ದು ನನಗೆ ಸುದಿನ!

ಪುಟ್ಟಾ : (Re-entering with flushed and and scratched force. torn frock and yet with a triumphant gleam in her eyes: running into her mother's lap in Joyous Voice) ಅಮ್ಮಾ !.... ಇಲ್ನೋಡು ! (Points out a scratch on her cheek).

ಸೂಳೆ : ಏನೇ ಪಟಂಗಿ. ಏನ್ ಜಗಳಾನೇ ? ಯಾರ ಜೊತೇಲೇ ? ಇಲ್ನೋಡೇ (Pointing out to Lady S)........ಇವರ್‍ಯಾರೇ ?

ಪುಟ್ಟಾ : Stands up and folds her hands) ನಮಸ್ತೆ !

ಸೂಳೆ : ಯಾಕೇ ಇವರ್ಗೆ ನಿನ್ನ ನಮಸ್ತೇ ?....ಯಾರೇ ಇವ್ರು ?

ಪುಟ್ಟಾ : ದೊಡ್ಮನ್ಷ್ರು.

ಲೇಡಿ ಶಿವ : Gathering up Putta in her arms and hugging and kissing and re-kissing Putta's brows. eyes. lips. neck and eyes again) ನಾನು ದೊಡ್ಮನ್ಷ್ರು ಆದ್ರೆ,...ನೀನ್ಯಾರೆ, ಕಂದಾ ?

ಸೂಳೆ : ನಾನೂ......**ಚೂಳೇಮುಂಡೆ !** (laughs)

ಸೂಳೆ : (Dragging her from Lady S) ಯಾರೇ ಹೇಳಿದ್ದೂ ? (her eyes blaze and belch fire).

ಪುಟ್ಟಾ : ಬಿಡೂವಮ್ಮಾ !......ನೋಯುತ್ತೆ ! ನನ್ನ ಚೂಳೆಮುಂಡೆ ಅಂದದ್ದು ಎದುರ್ ಮನೆ ಚರ್ಚು ! ಅವಳ್ ಮುಖವೆಲ್ಲಾ ಪರಚ್ಬಿಟ್ಟೆ ! ಒಂದೇ ರಕ್ತ ! (in a triumphant harranguing blare) ಇದೇನು ! (Pointing to her cheek) ಅವಳ್ ಮೂತೀನ್ ನೋಡ್ಬೇಕು ! ಬಡುಕೊಳ್ತಿದಾಳೆ ಅವರಮ್ಮ ! ಅವಳ ಕೈಗೆ ಶಿಕ್ಕದಾಗೆ ಓಡಿ ಬಂದ್‌ಬಿಟ್ಟೆ ! (Strikes a dramatic attitude and laughs sardonically and whole-heartedly) ಬರ್‍ಲಿ, ನಾಳೆ ಬೀದೀಲಿ ! (grinding her teeth—her face like a young tiger-cub) ಕಣ್‌ಕಣ್ಣೇ ಪರ್ಚ್ತೀನೆ ! "ಚೂಳೆ" ಅಂತೆ ನಾನು ! "ಮುಂಡೆ" ಅಂತೆ ನಾನು ! ಬರ್‍ಲಿ ನಾಳೆ ಬೀದೀಗೆ !

ಸೂಳೆ : ಸುಬ್ಬೂ (Subbu enters)...ಎದುರ್‌ಮನೆ ಸರ್‍ಸು ಜೊತೆಗೆ ಜಗಳಾ ಆಡಿ ಪರ್‍ಚಿ, ಮುಖ ಪರ್ಚಿಸ್ಕೊಂಡ್ ಬಂದಿದಾಳೆ ! ರಕ್ತ ಕಂಡ್‌ಬರೋ ಜಾಗ್ದಲ್ಲಿ ಅಯೋಡಿನ್ ಹಾಕ್ಬಿಟ್ಟು ಎದುರು ಮನೇಗೆ ಹಾರಿಹೋಗಿ ಆ ಮಗೂಗೆ—ಏನಪಾಯ ಆಗಿದೆಯೋ...ಏನು ಬೇಕೋ...ಅಯೋಡೀನೋ. Iodoformಓ...ನೋಡ್ಕೊಂಡು ವಿಚಾರಿಸ್ಕೊಂಡು......cotton ಇಧೆ. Lint ಇದೆ...ಕೈಯಲ್ಲಿ ತಕ್ಕೊಂಡ್ ಹೋಗಿ ಮಾಡಬೇಕಾದ್ ಮಾಡೀ......"ಮಕ್ಕಳ ಜಗ್ಳಾ—ದೊಡ್ಡೋರು ಮನಸ್ತಾಪ ಪಟ್ಕೋಬಾರ್ದೂ"ಂತ ಸಮ್ಜಾಯಿಸ್ಕೊಂಡು ಬಂದು ಸೇರು ! ಓಡು ! ಒಂದೇ ಓಟ ಸುಬ್ಬೂ ! [Subbu picks up Putta and exits R precipitately] ನೋಡಿದ್ರಾಮ್ಮ ! (ಸೂಳೆ standing up to Lady S who also standsup) **ಷುರು !**......ನಮ್ಗೂ......ಸಮಾಜಕ್ಕೂ. ನಮ್ಮ ಪುಟ್ಟಾನ "Little Lady" ಅಂದ್ರಿ ನೀವು !......ಈ Little Ladyನ ಎದುರುಮನೆ ಸಂಸಾರಿಗಳು "ಸೂಳೆಮುಂಡೆ" ಅಂದದ್ದಕ್ಕೆ ನಮ್ ಪುಟ್ಟಾ ನೋಡಿ !..............ಎದುರ್ಮನೆ ಸರ್‍ಸು ಮುಖ ಪರ್ಚಿ ಬಂದಿದಾಳೆ ! ಇದೇ ನೋಡಿ ! ನಮಗೂ ಸಮಾಜಕ್ಕೂ ಇರೋ ಸನ್ನಿವೇಶ ! ಏನ್ ಹೇಳ್ತೀರಾ (Her eyes spitting sparks of fire) ನಿಮ್ಮ ಮೈಮುಖ ಹೃದಯ "ಚೆನ್ನಾ"ಗಿದೆ ! ನನ್ನ ಮೈಮುಖ ಹೃದಯ "ಕಚ್ಚಿಗಾ"ದೆ! ನಮ್ಮ ಪುಟ್ಟಾನ ಹೃದಯ. ಬುದ್ಧಿ. ಕೈ-ಮೈ ಬಿ. ಆತ್ಮಾನಾ

"ಉಕ್ಕು" ಗಾಡಿ, ಈ ಸಂಸಾರಿಗಳ ಸವಾಲಿಗೆ ಜವಾಬಾಗಿ ಮಾಡಿಬಿಟ್ಟೇ ಸಾಯ್ತೇನೆ ನಾನು! ಈಗೇನ್ ಹೇಳ್ತೀರಾಮ್ಮಾ ! ?

ಲೇಡಿ ಶಿವ : ನನಗೂ ನಿಮಗೂ ಒಂದು ವ್ಯತ್ಯಾಸಾನೂ ತೋಚೋದಿಲ್ಲಾಮ್ಮಾ ! (ಬಿಕ್ಕಿ ಬಿಕ್ಕಿ ಅಳುತ್ತಾ) ನನ್ನ್ ಮಕ್ಕಗೂ, ನನ್ನ್ ಅಲಮೇಲೂಗೂ, ನಿಮ್ಮ್ ಪುಟ್ಟಾಗೂ, ಏನೂ ವ್ಯತ್ಯಾಸವೇ ಕಾಣೋದಿಲ್ಲ ನನ್ ಕಣ್ಣಿಗೆ! ಈಗ ನೀವು "ಏನು ಹೇಳ್ತೀರಾ ?'' ಅಂದ ಪ್ರಶ್ನೇಗೆ...ಉತ್ತರ... ನನಗೆ ಒಂದೂ ತೋಚೋದಿಲ್ಲ ! ನಿಮ್ಮಗಳ ಸ್ಥಿತೀನ ಸ್ವಲ್ಪ ಮೇಲ್ಮಾಡೋಕೇಂತ ಬಂದೋಳು ನನ್ ಮನಸ್ಸೇ ಶೂನ್ಯವಾಗಿರೋವಾಗ ನನಗೆ ಒಂದೂ ತೋಚದ್ದು ! [Sobbing hysterically collapses on ಸೂಳೇ's shoulders. ಸೂಳೇ gathers her up tenderly] ಸುಬ್ಬೂ ಡ್ರೈವರ್ಗೆ ಹೇಳಿ "ಕಾರ್ ಸ್ಟಾರ್ಟ್‌ಮಾಡೂ'' ಅನ್ನು ! ತಟ್ಟೆ, ಹಣ್ಣು ಹಂಪಲು, ವಗೈರೆ ಕಾರಿಗೆ ಸಾಗ್ಸು. ನಮ್ಮನೇಗೆ ದೇವ್ರಹಾಗೆ ಬಂದ ಈ ಪ್ರಾಣೀನ ನಾನು ಕರ್‌ತರ್ತೇನೆ ! (ಗಟ್ಟಿಯಾಗಿ) ಅಮ್ಮಾ !! (ತಾಯಿಯು ಒಳಗಿನಿಂದ ಬರುವಳು.)

[Half leads and carries Lady Sivadasa Iyer caressingly mid L with help of her mother......After one minute the curtain drops slowly.]

Act 3

ಹತ್ತು ವರ್ಷಗಳ ಅನಂತರ

[ಸೂಳೇ is **Fourty four** now, and a recumbent mass of femineity putrefied in flesh through her calling and petrified in will by her experience of life. ಸುಬ್ಬು, the once wealthy heir in his 'teens, who, losing his heart to ಸೂಳೆ as depicted in the induction, but now a tottering pauper, in loyal attendance on his fate. The mother a dotard, is sitting on a bench—C—back ground.]

ಸೂಳೆ: [ತಲೆಯನ್ನು ಹೊರಳಿಸುತ್ತಾ] ಹಯ್ಯೋ ! ಈ ತಲೆ ಶೂಲೇಗಾನ ನಿಂತ್ಬಿಟ್ರೆ ನಿದ್ದೆ ಹೋಗ್ಬಹುದ್ದು !

ಸೂಳೆ ತಾಯಿ : ತಲೆಶೂಲೇ ಏನು ! ಹೊಟ್ಟೆ ಶೂಲೆ ಏನು ?......ನಿನಿಗೆ ಹೀಗೆ ಆಗಾಗ್ಗೆ ಆಗ್ತಿರೋದು ವಳ್ಳೇದಕ್ಕಲ್ಲ......ಒಟ್ನಲ್ಲಿ ವಳ್ಳೇದಕ್ಕಲ್ಲ......ಮನೇ ಬಾಕ್ಲು ಬಟ್ಟೇಬರಿ... ಒಡವೇ ವಸ್ತು......ದುಡ್ಡು ದುಗ್ಗಾಣೀ......ದಿಕ್ಕ್ ದಿಕ್ಕಾಗಿ ಬಿದ್ದಿರೋವಾಗ **ತಾನ್ ಹೆತ್ತ ಮಗ್ಳು, ತನ್ನ್ ಹೆತ್ತ ತಾಯಿ** ಇವ್ರು ಮುಂದೆ ಗತೀ ಕೆಡ್ದ ಹಾಗೆ, ಬುದ್ಧಿ ಓಡ್ತಿರೋವಾಗ್ಲೇನೆ ಮುಂದಿನ್ ಕ್ರಮಾನ ಏರ್ಪಾಟ್ ಮಾಡೋದ್ ಬಿಟ್ಟಿಟ್ಟು......ಈಗ ನಿದ್ರೇ ಚಿಂತೇನ್ ಮಟ್ಟಿಗೆ ಕಟ್ಕೊಂಡ್ರೇನ್ ಬಂದ್ಬಾಗಾಯ್ತು......ಮುಂದೆ ಬದ್ಕೋ ನಮ್ಗೆಲ್ಲಾ ?

ಸೂಳೆ : (sardonically) ಹಾಗಾದ್ರೆ ಖಾತ್ರಿಮಾಡೇಬಿಟ್ಟ್ಯಮ್ಮಾ? ನನ್ ಸಾವ್ನ !? ......ಸುಬ್ಬೂ : ಡ್ರಿಂಕೂ......! (ಸುಬ್ಬುವು, ಥಟ್ಟನೆದ್ದು, ಸೀಸೆಯಿಂದ ದ್ರಾವಕವನ್ನು ಗಾಜಿಗೆ ಸುರಿದು, ಬಿಡೆವ ಸೋಡಾವನ್ನು ಸೇರಿಸಿ, ಸೂಳೆಯ ಕೈಗಿಡುವನು. ಸೂಳೆಯು ಅದನ್ನು

sipಸ್ತ್ಸಾ) ನನ್‌ಪಾಡ್ನ...ಈಗ್ಲೋ. ಆಗ್ಲೋ ಹೊತ್ಕೊಂಡ್ಬೋಗೊ ಘಟೀಂತ ನಿರೀಕ್ಷಿಸ್ತಿದ್ದ ..... ನಾನ್ ಸತ್ಮೇಲೆ ನೀನ್ ಬದ್ಕೋ ನಿನ್ ಜೊತೆ ಅಲ್ದೇನಮ್ಮಾ ಹತ್ತಿರೋದು ! ಅದ್ ಹೇಗೆ ? ಅಲ್ಲೇ ಅಮ್ಮಾ ? ಹೊತ್ತು ಹೆತ್ತ ತಾಯಿಗೆ ಮೊದಲ್‌ಜಾತೇ......ಮೊದಲು ಗಂಡನು ..... "ಮಗಳು ಸಾಯ್ತಾಳಲ್ಲಾ !" ಅಂಜೋದು......ಸಹಜ...ಸಂಸಾರ್ದಲ್ಲಿ. "ಮಗಳು ಸತ್ತ್ರೇನೂ ? ನನ್ ಮುಂದಿನ್ ಬದ್ಕು ಗಿಟ್ಟಿಸ್ಕೋಬೇಕು !" ಅಂಬೋ ಸ್ಥಿತಿಂತೆ ನಿನಗಿದೇನು, ಅದ್ ತಪ್ಪಲ್ಲ, ಅಮ್ಮ ! ?...ನಿನ್ನ ಸೂಳ್ತನ್ಕೇಲಿ ನನ್ನ ಹೊತ್ತು ಹೆತ್ತ ಸೂಳ್ತನ್ಕೇನು ಪ್ರಧಾನ !

ಸುಬ್ಬು : ಕ್ಷಮಿಸ್ಸಿ ಚಿನ್ನಾ ! (ಬಾಹುವನ್ನು ಮುದುರಿಯ ಕಡೆಗೆ ನೋಡುತ್ತಾ) ಈ ಮುದಿ ಗೊಡ್ಡ್‌ಗಳು ಪಾಪ! ಹೊತ್ಕೊಟ್ಟೆ, ಹೆತ್ಕೊಟ್ಟೆ, ತೊಡಲ್ಪ್‌ವೇ...ಯಥಾ ಸಂಪ್ರದಾಯ!

ಸೂಳೆ : (ಗಾಜಿನ ದ್ರಾವಕವನ್ನು ಒಂದೇ ಗುಟುಕಿನಲ್ಲಿ ನುಂಗಿ, ಗಾಜನ್ನು ನೆಲಕ್ಕೆ ಬಿಸುಟು, ಥಟ್ಟನೆದ್ದು ಕೂತು ಉನ್ಮಾದಾಗ್ರಹದಿಂದ) "ಹೊತ್ಕೊಟ್ಟೆ?"......"ಹೆತ್ಕೊಟ್ಟೆ!" ...... ತೊಡಲ್ಲ!........(ಸುಬ್ಬುವಿನ ಕೈಯನ್ನು ಹಿಡಿದು) ಹಯ್ಯೋ......ಸುಬ್ಬು! ನನ್ನ "ಚಿನ್ನಾ" ಅಂದ್ಯಲ್ಲಾ! ದೊಡ್ಡ್ ಕುಲ್ದಲ್ ಹುಟ್ಟಿ, ದೊಡ್ಡ್ ಪದ್ವೀನ ಅನುಭವಿಸ್ತಿದ್ದ ನೀನು...ನನ್ನ ಮಾತ್ಗ ಮರ್ಳಾಗಿ, ನನ್ನ್ ಮೇಲಿನ ಹುಚ್ನಲ್ಲಿ......ಮನೆ, ಮನೆತನ, ಕುಲ, ಗೋತ್ರಾನೂ ಬಿಟ್ಬಿಟ್ಟು...... ಆಗ್ನಿಂದ....ಇದ್‌ವರ್ಗೆ....ಮೂವತ್ತ್ ವರ್ಷಾನೂ, ನನ್ನೀ ಅಂತ್ಯಾವಸ್ಥೇಲೂ ಶಿಶೂಷೆ ಮಾಡ್ತಿದೀಯಲ್ಲಾ!......**ನೀನು**......ಚಿನ್ನಾ!......**ನಾನಲ್ಲ!** ಹೊತ್ತದಗ್ಗೂ, ಹೆತ್ತವಗ್ಗೂ ಇರೋಕಾದ ಮಮ್ತೆ **ನಿನ್ಗಿದೆ!** ನನ್ನ ಹೊತ್ತು, ಹೆತ್ತ ಈ ಕಿರಾತ್ಗೀಗಿಲ್ಲ! ಇವಳು ಹೊತ್ತದ್ದೇಕೆ ? ಹೆತ್ತದ್ದೇಕೆ ? .... ತಾಯ್ತಾನ್ಕೆ ಮೇಲಾಶೆಪಟ್ಟೇ ?......ಎಂದ್ಗೂ ಇಲ್ಲಾ! ತನ್ನ್ ಹೊಟ್ಟೇಪಾಡ್ಗೆ! ನನ್ನ್ ಹೆತ್ತದ್ದೂ, ಬೆಳ್ಸಿದ್ದೂ, ಸೂಳ್ತಾನ್ಕೇಲೀ ಮುಂದಕ್ ತಂದಿದ್ದೂ......ಅವಳ್ ಹೊಟ್ಟೇ ಪಾಡ್ಗೆ! ನನ್ನ ಮೈ, ಮುಖ ನೋಡಿ, ಮನೆ ಮರ್ತೋರೋರು, ದುಡ್ಡ್ನ ಅವಳ್ ಕೈಗೆ ನೀಡ್ತಾ. ನನ್ನ್ ಮೈ ಮನಸ್ಸು, ಹೃದಯಾ, ಆತ್ಮಾನ್ನಾ ಹೊಲಸ್‌ಮಾಡ್ತಿದ್ದಾಗ ಇವಳು ನರ್ಸನಾಗ್ ಇದ್ದಿದ್ದೂ... ತನ್ ಹೊಟ್ಟೇ ತುಂಬೋಕೆ! ಈಗ ಅವಳವಸ್ಥೇ ಪಡ್‌ತಿರೋದೂ......ನಾನು ಸಾಯ್ತೀನೆ ಅಂಬೋದಕ್ಕಲ್ಲ......ತನ್ನ್ ಹೊಟ್ಟೆಪಾಡು ತಪ್ತೋ ಭಯದ ಮೇಲೆ!......ಅಷ್ಟೇ ? ನತ್ತು ನಾನ್ ಬಿಟ್ಬಿಟ್ಟ್ ಹೋಗೋ ದುಡ್ನಾ. ದಕ್ಕಿಸ್ಕೊಂಡು, ತನ್ನ ಬದುಕ್ನ ಗಿಟ್ಟಿಸ್ಕೊಳ್ಳೋಕೆ !! (ಕೆಲವು ನಿಮಿಷಗಳ ಕಾಲ ಕೆಮ್ಮುವಳು) ಡ್ರಿಂಕೋ ! ಮಂಕು ? (ಸುಬ್ಬುವು ಯಥಾಪೂರ್ವಂ, ಮತ್ತೊಂದು ಗಾಜನ್ನು ತಯಾರ್ ಮಾಡಿ ನೀಡಲು, ಸೂಳೆಯು ಅದನ್ನು ಒಂದೇ ಗುಟುಕಾಗಿ ನುಂಗಲು, ಕೈಯಿಂದ ಖಾಲೀ ಗಾಜನ್ನು ತೆಗೆದುಕೊಳ್ಳುವನು) ತಪ್ಪೇನೂ ಇಲ್ಲ ! ಯಾರ್ ಸತ್ರೆ ತಾನೆ ಏನು ? ...ಉಳ್ಕೋರ್ಗೆ ಯೋಚ್ನೆ ಇದ್ದೇ ಇರುತ್ತೆ ! ಆದ್ರೆ ನನ್ಗಿರೋ ಆಶ್ಚರ್ಯ, ಹೇಗ್ಲೂ ತನ್ನ್ ಹೊಟ್ಟೆಲ್ಹುಟ್ಟಿ ಹದಿನಾಲ್ಕು ವರ್ಷ್‌ವಾದ್ರೂ,...ಒಂದ್ ಕಲ್ಮಷಾನೂ ಕಾಣ್ದೆ ಇದ್ದ ತನ್ನ್ ಮಗೂನ ತನ್ನ ಹಾಳ್ ಹೊಟ್ಟೇಪಾಡ್ಗೋಸ್ಕರ ಈ ಸಮಾಜ್ದ ಮಾಂಸದ ಕೊಬ್ಬಿನ ಹದ್ದಿಗ್ ಕುತ್ತಾಗ್ ಕೊಟ್ಟು, "ಈ ಅವಸ್ಥೇಗ್ ನನ್ನ್ ಮಗಳ್ನ ತಂದಿಟ್ನಲ್ಲಾ !"ಂತ ಒಂದ್ ಕ್ಷಣವಾದ್ರೂ ಕೊರಗ್ತಾಳೇ? ......ಈ ಈ ಪಿಶಾಚಿಗೇಂತ ! ? (ಉನ್ಮಾದದಿಂದ ನಗುವಳು) ಹಯ್ಯೋ ಹೋಗವ್ವಾ ! ಯಾರ್ಗೆತ್ರ ಈ ಬೂಟಾಟ್ಕೆ !......ಹೆದರ್ಬೇಡ !...ಸಾಯ್ತೀನೆ ಹೌದು !......ಆದ್ರೆ ಸಧ್ಯಾ. ಪುಟ್ಟಾನ ಬಿಟ್ಟು ಹೋಗೋವಗ್ಗೂ ನಿನ್ ಬದುಕಿಗೇನೂ ಬೇನೇ ಇಲ್ಲಾ !...ಇನ್ನಿಲ್ಲೀ ಇದ್ದು ರೇಗಿಸ್ಬೇಡ !...... ಹೊತ್ತಾಯ್ತು !......ನನ್ ನೋಡ್ಕೊಳ್ಳೋಕ್ ಸುಬ್ಬು ಇಧಾನೆ !......ಬಿಟ್ಟ್ ಹೋಗಿ ಮುದುಕ್ಕೋ !......ಪುಟ್ಟಾ ಓದಿದ್ ಸಾಕೂ !......ದೀಪದ್ ಬೆಳ್ಕು ಕಣ್ಗೆ ಕೆಟ್ಟದ್ದು !.... ಅವಳ ಓದ್ನ ನಿಲ್ಲಿಸಿ, ಕಳಿಸಿಲ್ಲೀಗೆ !......(ಸೂಳೆಯ ತಾಯಿಯು ನಿಷ್ಕ್ರಮಣ) ಡ್ರಿಂಕೂ, ಸುಬ್ಬು ! (ಸುಬ್ಬುವು ಯಥಾಪ್ರಕಾರ ಉಪಚರಿಸುವನು)

[Enter ಪುಟ್ಟಾ fourteen of age, a fascinating picture of our "up-to-date" school going Karnataka girl : side parted hair ;

"ಸೆರಗು" caught up by jewelled brooch be-ribboned plait ; Watch bearing wrist, and so forth.]

ಪುಟ್ಟಾ : (ತಾಯಿ ಇದ್ದಲ್ಲಿಗೆ ಓಡಿಬರುತ್ತಾ) ಅಮ್ಮಾ ! ನಮ್ಮಮ್ಮಾ ! ಎದ್ದಿದ್ದೀಯಾ ? .... ಯಾಕ್ ನಿದ್ದೆ ಬರ್ಲಿಲ್ವೇ ?.........(ತಾಯಿಯನ್ನು ತಬ್ಬಿಕೊಂಡು, ತಲೆಯನ್ನು ಸವರುತ್ತಾ, ಮುಖವನ್ನು, "ಅಮ್ಮ ! ನಮ್ಮಮ್ಮಾ !"..."ನಮ್ಮಮ್ಮಾ" ಎಂದು ಉಸುರುತ್ತಾ, ಮುದ್ದಿಡುತ್ತಾ) ಅಜ್ಜೀ, ನಿನಗ್ ನಿದ್ದೇಂದ್ರು......ನನಗ್ ನಿದ್ದೆ ಇಲ್ಲ......ಓದ್‌ತಿದ್ದೆ. ನಾಳೆ examinationಉ ನಿನ್ ದಸಿ ಕೇಳಿಸ್ತು ! ಓಡ್‌ಬಂದೆ !......ನಮ್ಮಮ್ಮಾ ! (ಮುದ್ದಿಟ್ಟು)... ಯಾಕಮ್ಮಾ, ನಿದ್ದೆ ಇಲ್ಲ ಇನ್ನೂ ? ಯಾಕ್ ಸುಬ್ಬೂ ?......(to Subbu) ಸುಬ್ಬೂ ! ಡಾಕ್ಟ್ರು, "ಅಮ್ಮನ್ಗ ಔಷ್ಧ ಕೊಟ್ಟೋಗಿದ್ದೇನೆ......ಎಲ್ಲಾ ಸರ್‌ಹೋಗುತ್ತೆ" ಅಂತಂದ್ ಹೋದ್ರುಲ್ಲಾ !...... ಕೊಟ್ಟ್ಯಾ ?......ಕೇಳೋದೇನು ! ಕೊಟ್ಟೇ ಇರ್ತೀಯಾ !......(ಸುಬ್ಬುವಿನ ಕೈಯನ್ನು ಸವರುತ್ತಾ) ನಮ್ಮ್ ಸುಬ್ಬೂವಮ್ಮಾ !...ಹೌದೂ ? (ಸುಬ್ಬುವನ್ನು ಕುರಿತು) ನಿನಗ್ಯಾಕ್ ಊಟ ಇಲ್ಲಾ ?

ಸುಬ್ಬು : ಇದೇನ್ ಪುಟ್ಟಾ ? ನನ್ ಕೇಳ್ತೀಯಲ್ಲಾ ! ನಿನ್ ತಟ್ಟೆ ಮಧ್ಯಾಹ್ನದಿಂದ ಇಲ್ಲೇ ಇದೆ ?

ಪುಟ್ಟಾ : (ಸೂಳೆಯನ್ನು ಮುದ್ದಿಡುತ್ತಾ) ನನ್ಗೇನೋ ಅಮ್ಮ, ನೀನ್ ಬಿದ್ಕೊಂಡಾಗ್ಲಿಂದ ......ಹಸ್ವೇ ಇಲ್ಲ......ನಿನ್ಗೂ ಹಾಗೇನೇ ಸುಬ್ಬು ? ಅದ್ರೆ......ಅಜ್ಜಿ ಮಾತ್ರ !!...

ಸೂಳೆ : (ಥಕ್ಕನೆ ನಕ್ಕು) ನೋಡಿದ್ಯಾ ಸುಬ್ಬೂ......ಜೋಟುದ್ದ ಕೂಡ ಇಲ್ಲ ಮಕ್ಳು... ಎಷ್ಟು ಗಮನಿಸ್ತಾರೇಂಜೋದ್ನ !......ನಾನ್ನೀಗೆ ಬಿದ್ಕೊಂಡಿರೋದು, ನಿಮ್ಮಿಬ್ಬರ್ದ್ದೆ ಹೊಟ್ಟೆ ತೊಳ್ಸಿ ಹಸ್ವಿಲ್ಲದ್ದಾಗ್ ಮಾಡಿದರೂ....ನನ್ನೈತ್ತ ಆ ಭೂತ ಮಟ್ಗೆ ಘಂಟೆ ತಪ್ಪದ್ದಾಗೆ ಗದುಕ್ತಿರೋದ್ನ ಗಮನಿಸಿದ್ಯಾಳೆ ನೋಡು ?......(ಪುಟ್ಟಾನ ತಲೆಯನ್ನು ಸವರುತ್ತಾ) ಏನು ಓದ್ತಿದ್ದೆ ಕಂದಾ...... ನಾವಲ್ಲೇ?......ಬೇಡ ಕಂದ......ನಾಳೆ examinationಉ!...(ಗಲ್ಲವನ್ನು ಮುಟ್ಟಿ) ಕೋಪವೇ?

ಪುಟ್ಟಾ: (ನಗುತ್ತಾ) ಹಯ್ಯೋ !......ನಾವಲ್ ಅಲ್ಲಾಮ್ಮಾ......textoo...... Sanskrit textoo !!

ಸೂಳೆ: ಸಂಸ್ಕೃತಾನೇ ?...ಏನದು...Textoo...!

ಪುಟ್ಟಾ : ಬುದ್ಧ ಜನ್ಮಾ ಅಮ್ಮ......ಅದ್ರಲ್ಲಿ ಒಂದ್ partoo!

ಸೂಳೆ : ಯಾವುದಾದ್ರೂ ಒಂದ್ ಶ್ಲೋಕ ಹೇಳು ನೋಡೋಣ !

ಪುಟ್ಟಾ : (ರಾಗವಾಗಿ) ಜಾಗರ್ತಿ ಸಂಸಾರಗೃಹೇ ಮನೀಷೀ ।
ಮೋಹಾನ್ಧಕಾರೇ ಸ್ವಪತಿ ಪ್ರಮತ್ತಃ ॥
ಪ್ರಜಾಗರೋ ಜೀವಿತಯೇವ ಸುಪ್ತಃ ।
ಮೃತಸ್ಯ ಸುಪ್ತಸ್ಯಚ ಕೋ ವಿಶೇಷಃ ॥

ಸೂಳೆ: ಏನರ್ಥಾ, ಕಂದಾ ?

ಪುಟ್ಟಾ : "ಜಾಗರ್ತಿ ಸಂಸಾರ ಗೃಹೇ ಮನೀಷೀ" ಅಂದ್ರೆ ಸಂಸಾರ್ದಲ್ಲಿ ಜಾಗರ್ಣೆ ಮಾಡ್ತಾನೆ ಮನುಷ್ಯ ! ಅಂದ್ರೆ. ಈ ಸಂಸಾರಾನಾ ನಂಬಬಾರ್ದು ಅಂತ ಕಣ್ಬಿಟ್ಕೊಂಡಿರ್ತಾನೆ. ತಿಳ್ಕೋನು ! "ಮೋಹಾನ್ಧಕಾರೇ ಸ್ವಪತಿ ಪ್ರಮತ್ತಃ" ಅಂದ್ರೆ......ಪ್ರಮತ್ತ...ಮನಸ್ಸು ಮೈನ ಮದದಿಂದ ಕೊಬ್ಬಿರೋ ಮಂಕು. ಸಂಸಾರಾಂಬೋದು ಕನಸು, ಮೋಹ, ಮಾಯೆ ಅಂತ ತಿಳೀದೆ ....ಈ ಕತ್ಲೇಲಿ ಗೊರ್ಕೆ ಹೊಡೀತಿರ್ತಾನೆ ! "ಪ್ರಜಾಗರೋ ಜೀವಿತ ಏವ ಸುಪ್ತಃ" ಅಂದ್ರೆ ಕಣ್ಬಿಟ್ಕೊಂಡಿರೋದು ಬಿಟ್ಕೊಂಡ ಹಾಗೇ ಮಲಗಿದ್ದಾರೆ ! ಅದ್ದರಿಂದ ಸಂಸಾರದ ಕಣ್ಣಿಗೆ ಕಣ್ಣು ಬಿಟ್ಟಿರೋ ಈ ಮಂಕು. ಬದುಕಿರೋವಾಗ್ಲೇ ನಿದ್ದೆ ಮಾಡ್ತಿಥಾನೇಂತ ! "ಮೃತಸ್ಯ ಸುಪ್ತಸ್ಯ ಚ

ಕೋ ವಿಶೇಷಃ" ಅಂದ್ರೆ ಸತ್ತವನೂ, ನಿದ್ದೆ ಮಾಡೋನೂ ಇಬ್ಬರೂ ಒಂದೇ ! ಹೀಗೆ "ಬಹುಕಾಲಾ ಕುರುಡನ ಹಾಗೆ ಗೊರ್ಕೆ ಹೊಡ್ಕೋವನ್ಗೂ, ಸತ್ತವನ್ಗೂ, ವ್ಯತ್ಯಾಸವೇನೂ"ಂತ ಅರ್ಥ !...ಅಲ್ವೇ ಸುಬ್ಬೂ !

ಸೂಳೆ : ಇದು ನಿನ್ನರ್ಥ್ವೇ ?......ಪುಟ್ಟಾ !

ಪುಟ್ಟಾ : ದೇವ್ರೇ ಗತೀ ! ನನಗೆಲ್ಲಿ ಸಂಸ್ಕೃತ ಗೊತ್ತು ! ಈ ಅರ್ಥ ನೋಟ್ಸ್‌ನಲ್ಲಿ ಇರೋ translationಉ.........plus (ಸುಬ್ಬುವಿನ ಕೆನ್ನೆಗೆ ಒಂದೇಟು ಬಿಗಿಯುತ್ತಾ) ಸುಬ್ಬೂ.........ವ್ಯಾಖ್ಯಾನಾ ಅಮ್ಮಾ ! ನಾನು ಸಂಸ್ಕೃತದಲ್ಲಿ first class ಬರ್ಬೇಕೂಂತ ಆಶೆ ಅವನ್ಗೆ !

ಸೂಳೆ : ನೋಡ್ದ್ಯಾ, ಸುಬ್ಬೂ ? ಈ ಹಾಳು ಶ್ಲೋಕಾನ ಬರ್ದದ್ದು ಬುದ್ಧ !......ವಿಷ್ಣು ಅವತಾರ !,......ಲೋಕ ಸಂರಕ್ಷಣೇಗೆ !......"ಸಂಸಾರ ಗೃಹೇ...?"......ನೀನ್ ಬೊಗ್ಳು ?

ಸುಬ್ಬು : "ಜಾಗರ್ತಿ ಸಂಸಾರಗೃಹೇ ಮನೀಷೀ !"......

ಸೂಳೆ : ಸಮಾಜ್ದಲ್ಲಿ ಸಹಜವಾಗಿ ಇದ್ದು ಇರ್ಲೇ ಬೇಕಾದ ಸಂಸಾರಗಳಿಗೆ ನೀತಿ ಉಪದೇಶಿಸ್ತಾನಲ್ಲಾ ಬುದ್ಧಾ !?! ಸಮಾಜ್ದಲ್ಲಿ, ಸಂಸಾರ್ದ ಸುಖದುಃಖ ಸುಳಿವೇ ಸಲ್ಲದ ಸೂಳೇರ್ಗತಿ ಈ ಲೋಕೋದ್ಧಾರಕನ ಗೋಚರಕ್ಕೆ ಬರ್ಲಿಲ್ವಲ್ಲಾ !!! (ಕಣ್ಣಿನಲ್ಲಿ ನೀರು ಸುರಿಸುತ್ತಾ) ಹೀಗೇ...ನೋಡು...ಪರಮಾತ್ಮನ ಅವತಾರಗಳೆಲ್ಲಾ...ಪುಟ್ಟಾ ಹೇಳೋ ಪ್ರಮತ್ತರಿಗೆ ! ಸಂಸಾರ್ದ ಪ್ರಮತ್ತರಿಗೆ ! ನನ್ನಂಥ ಪಾಪಿಗಳಿಗಲ್ಲ !...ಡ್ರಿಂಕೋ ಸುಬ್ಬೂ ! (ಸುಬ್ಬುವು ಯಥಾಪೂರ್ವಂ ಸತ್ಕರಿಸುವನು.)

ಸುಬ್ಬು : ಚಿಂತೆ ಹಚ್ಕೋಬಾರ್ದೂಂದ್ರು ಡಾಕ್ಟ್ರು !......ಪುಟ್ಟಾ ! ಅಜ್ಜೀ ಮಲಕ್ಕೊಂಡ್ಳೋ ಏನೋ......! ಕಾಸಿದ್ಹಾಲಿಟ್ಟಿದೆ, ಒಲೇ ಮೇಲೆ !......ಅಮ್ಮನಿಗೆ !

ಪುಟ್ಟಾ : (ತಾಯಿ ಮಲಗಿದ್ದ ಮಂಚವನ್ನು ಬಿಟ್ಟೆದ್ದು) ತಂದ್ ಬಿಟ್ಟೇಮ್ಮಾ ! ಒಂದ್ ನಿಮಿಷ !...(ಓಡುತ್ತಾ ನಿಷ್ಕ್ರಮಿಸುವಳು)

ಸೂಳೆ : ಸುಬ್ಬು ! ಹತ್ತಿರ ಬಾ. (ಸುಬ್ಬುವು ಹತ್ತಿರಕ್ಕೆ ಬರಲು. ಅವನ ಕಿವಿಯಲ್ಲಿ) ನಿನಗೇನ್ ಹೇಳಿದ್ರು ಸುಬ್ಬೂ, ಡಾಕ್ಟ್ರು ! "ಮನಸ್ಸಿಗೆ ಚಿಂತೆ ಹಚ್ಕೋಬಾರ್ದೂ"ಂತ್ಲೇ ?...ನನಗ್ಹೇಳಿದ್ದಿಷ್ಟು ಕೂತ್ಕೊ! (ಮಂಚದ ಮೇಲೆ ಕುಳಿತ ಸುಬ್ಬುವಿನ ಕೈಯನ್ನು ಸವರುತ್ತಾ) ಕೇಳ್ ಸುಬ್ಬೂ ! "ಇನ್ನ್ ನೀನ್ ಬದ್ಕೋದಿಲ್ಲ......ಒಂದ್‌ವಾರ ದಾಟೋದು ಅಸಾಧ್ಯ" ಅಂದ್ರು. ಡಾಕ್ಟ್ರು ! ನಾನ್ ಹೋದ್ಮೇಲೆ, "ಮಕ್ಕೋವ್ರ ಗತಿ......ಏನೂ"ಂಬೋಪ್ನ ಖಾಯಿಲೆಯಾಗಿ ಬಿದ್ಕೊಂಡಾಗ್ನಿಂದ್ಲೇ ಚಿಂತಿಸ್ತಾ...ನೆನ್ನೆ ತಾನೇ ಎಲ್ಲಾ........arrange ಮಾಡಿದ್ದೇನೆ !...ಕೇಳು ! ......ಹತ್ರ ಬಾರೋ !......ಆ ಮುದ್ಕಿ ಹೊಂಚ್ಕೇಳ್ತಾಳು !......ನನ್ಗಿರೋ ದುಡ್ಡು ಮೂವತ್ತು ಸಾವಿರ ರುಪಾಯಿ. ಬ್ಯಾಂಕ್ನಲ್ಲಿ Fixedಉ ! ಅದ್ನೂ ನನ್ನೊಡವೆಗ್ಳ್ನೂ. ಈ ಮನೇ ಸಹಿತ ನಿನ್ನ್ ಹೆಸರಿಗೆ ಬರ್ದಿಟ್ಟಿದ್ದೇನೆ......ಬೆಚ್ಚ್‌ಬೀಳ್ಬೇಡ......ನೀನ್ ತಂದು. ನಾನ್ ತಿಂದು. ಕೊಟ್ಟಿದ್ದ್ರಲ್ಲಿ. ಎರಚಿದ್ದ್ರಲ್ಲಿ. ಕಾಲ್ಪಾಲೂ ಕೂಡ ಅಲ್ಲ !....ಇದೆಲ್ಲಾ !...ಈ ಮನೆ ಕಟ್ಕೊಂಡ್ ನನ್ಗೇನೂ ಪ್ರಯೋಜ್ನ ಇಲ್ಲ ! ಹನ್ನೆರಡ್ ಸಾವ್ರ ರುಪಾಯ್ಗೆ ಈ ಮನೇ ಮಾರೋ ಏರ್ಪಾಟ್ ಮಾಡ್ಬಿಟ್ಟಿದ್ದೇನೆ...ಈ ದುಡ್ನೂ. ಒಡವೆಗಳ್ನೂ, ಬ್ಯಾಂಕ್ನಲ್ಲಿರೋ ದುಡ್ನೂ. ಬೆಳಕವಾಡಿ ಕೋಳ್ಗಾಲ್ದ ಜಮೀನ್ನೂ. ಜೋಪಾನ ಮಾಡ್ಕೊಂಡು. ತಿರುಗ್ಹೋಗಿ ನಿನ್ನ್ ಕುಟುಂಬಾನ್ ಸೇರ್ಕೋ !

ಸುಬ್ಬು : ಚೆನ್ನಾಗ್ಹೇಳ್ದೇ ಚಿನ್ನ!......ನೀನೊಂದ್ಹೇಳೆ......ಮಾತಿಗ್ ಹೇಳ್ತೀನೇ......ನನ್ನೂ ಪುಟ್ಟಾನೂ ಬಿಟ್ಟು ದೇವರ್ ಪಾದಾನ ಸೇರೋ ಪಕ್ಷಕ್ಕೆ. ನೀನ್ ಬಿಟ್ಹೋಗೋ ಒಡವೆ ವಸ್ತುಗಳ್ನ. ನಿನ್ನೂ ಕಳ್ಕೊಂಡು ಹುಚ್ಚೂ ಹಿಡ್ದು. ಒದ್ದಾಡ್ತಾ, ತಿರುಗೋ ನನ್ಗೆ. ದುಡ್ಡೇನು ?....ಒಡವೆಯೇನು ?....ಪುಟ್ಟಾನ ಉಪ್ಯೋಗಕ್ಕೆ ಇಡು ! ಚೈತನ್ಯವಿರೋವಾಗ್ಲೇ ಇನ್ನೊಂದು ವಿಲ್‌ನ ಬರಿ !............ಈಗ್ಲೇ !!

ಸೂಳೆ : ಹಯ್ಯೋ ! ಮಂಕೂ ! ಸಾಯ್ತಿರೋಳ್ ಹೇಳ್ತಾಳೇಂತ ಕಿವಿಕೊಟ್ಟು ಕೇಳೋ !! ಇಷ್ಟ್ ವರ್ಷ, ನೀನೂ ಬಿಟ್ಟ್‌ಬಿಟ್ಟು ಪೇಚಾಡ್ತಿರೋ ನಿನ್ ಕುಟುಂಬಾನ ತಿರಿಗ್ಸೇರೋದು ನಿನ್ನ ಮೊದಲ್ ಕರ್ತವ್ಯ !........ಪುಟ್ಟಾನ, ಅವಳ ನಡ್ತೆ, ಗುಣದ ಪ್ರಕಾರ ಒಳ್ಳೇ ದಾರಿಗೆ ತರೋದು ನಿನ್ನ್ ಆಮೇಲಿನ ಭಾರ ! ಇದಕ್ಕೆ ಎಷ್ಟರಮಟ್ಟಿಗೊಡಂಬಡ್ತಾಳೋ ಅವ್ಳಜ್ಜಿ, ಅಷ್ಟರ ಮಟ್ಟಿಗೇನೇ ಆ ಮುದ್ಕೀಗೆ ಸಹಾಯ ಮಾಡೋದು ನಿನ್ನ್ ಮೂರ್ನೇ ಡ್ಯೂಟಿ !...ಆದ್ರೆ ನಾನ್ ಸಾಯುತ್ಲೂ ನೂವೇ ಮೊದ್ಲು—ನನ್ನ್ ಲಾಯರ್ ಹತ್ರ ಇಧೇ ನನ್ನ 'ವಿಲ್ಲು'......ದುಡ್ಡು, ಒಡವೆ, ಈ ಮನೆಯ title deedsಉ. **ನೀನೇ sole**......ಎಂಥಾದ್ದೋ...**ಅದು ?** ಇವೆಲ್ಲಾನೂ ಭದ್ರ ಪಡಿಸ್ಕೊಂಡು, ನಿಮ್ಮನೇಗೆ ಹೋಗ್ಸೇರು—ಮನೇ—ಸ್ವತ್ತು, ಇಟ್ಕೊಂಡು ಪುನಃ ಮನೆ ಬಂದು ಸೇರಿದ್ರೆ ಅಡ್ಡಿಮಾಡೋದಿಲ್ಲ ನಿಮ್ಮ ಜನಗ್ಳೂ !!....ಪುಟ್ಟಾನ ಓದ್ದಾಗ್ರ್‌ಕೇಲೇ ಹಾಕು !....ಎಷ್ಟು ಓದಿದ್ರೆ ತಾನೇ ಏನು !...ಸೂಳೇಗ್ ಹುಟ್ಟಿದ್ ಮಗೂನ ಸಮಾಜ ಸಹಿಸೋದಿಲ್ಲಾ !......ಮದ್ವೆ, ಮನೆ, ಮಕ್ಳೂ ಅವಳ ಪಾಲಿಗಿಲ್ಲದ ಪಾಪಾ...ಪುಟ್ಟಾನ್ ತಪ್ಪೋ ?,......ನನ್ನೀ ದಾರೀಗ್ ತಂದ, ನಮ್ಮಮ್ಮನ್ ತಪ್ಪೋ ?......ಇಲ್ಲಾ ಆ ಬುದ್ಧನೇ ಸಂರಕ್ಷಿಸೋ ಸಮಾಜದ ತಪ್ಪೋ ?...ಇಲ್ಲಾ, ಧರ್ಮ ಸಂಸ್ಥಾಪನೇಗೇ ಅಂತ ಯುಗಯುಗಾನೂ ತಪ್ದೆ ಅವತರಿಸೋ ಸೃಷ್ಟಿಕರ್ತನ ತಪ್ಪೋ ?... ಒಟ್ನಲ್ಲಿ ಇಂಥಾವರ್ದೇ ತಪ್ಪೂಂತ ನಿರ್ಧರಿಸೋ,......ನೀತಿ ನಿಪುಣರಿನ್ನೂ ಹುಟ್ಟಿಲ್ಲ !...... ಜಗತ್ನಲ್ಲಿ !! ಸಧ್ಯ, ಅವಳ ಬೆಳವಣ್ಗೆ, ವಿದ್ಯ, ನಡತೇನ ಗಮನಿಸ್ತಾ ನಾಲ್ಕ್ ಜನಕ್ಕೆ ಉಪಯೋಗ ಆಗೋಹಾಗೆ, ಒಬ್ಬ ನರ್ಸೋ, ಒಬ್ಬ ಟೀಚರ್ರೋ...ಇಲ್ಲ ಓದ್ದಾಗ್ರ್‌ಕೇಲಿ ಅವಳ್ ಬುದ್ಧಿ ಓಡಿದ್ರೆ ಒಬ್ಬ ಲೇಡಿ ಡಾಕ್ಟರ್ ಕಸಬಿಗೋ......ಲಾಯಖ್ಖಾಗಿ ಮುಂದಕ್ ತರೋದು ನಿನ್ಭಾರಾ ! (ಕಣ್ಣೀರು ಸುರಿಸುತ್ತಾ, ಆಡುವುದಕ್ಕೆ ಪ್ರಯತ್ನಿಸಿದ ಮಾತುಗಳು ಹೊರಹೊರಡದೆ, ತಲೆಬಾಗುವ ಸುಬ್ಬುವಿನ ಮುಖವನ್ನು ಸವರುತ್ತಾ) ಹೋಗಿ ಮಲಕ್ಕೋ ಸುಬ್ಬೂ !...ಒಂದ್ ವಮಟ್ಟಿಗೂ ......ಮರೀಬೇಡಾ !......ಈ ಸಂಸ್ಕೃತ ಇತ್ಯಾದಿಗ್ಳ ಗಲಾಟೇಲಿ......ನನಗೊಂದ್ಯೋಚ್ನೆ ಹೊಳೀತ್ತೆ. ಸುಬ್ಬೂ ! ಕೇವಲ ಕಲ್ಕುಟ್ಕ ಕುಟ್ಟಿ ಕೆತ್ತಿದ ಕರೀಕಲ್ನಲ್ಲಿ ಭಕ್ತರ ಆಶೇ ಅಂಬೋದು ದೇವ್ರಾಗಿ ಆ ಕಲ್ನಲ್ಲಿ ಅವಿತ್ಕೊಂಡಿರೋಹಾಗೇ...ಲೋಕ್ವೆಲ್ಲಾ ಎಷ್ಟು ಹೀಯಾಳಿಸಿದರೂ...... (ಎದೆಯನ್ನು ಬಿಗಿದ ದಕ್ಷಿಣ ಮುಷ್ಟಿಯಿಂದ, ಬಾರಿಬಾರಿಗೂ ವಾಮ ವಕ್ಷವನ್ನು ಬಡಿಯುತ್ತಾ) ಈ ಮನುಷ್ಯ ದೇಹದಲ್ಲಿ...ಈ ಕೊಳೆತ ಕಾಯದಲ್ಲೂ...ನಿನ್ನ ಭಕ್ತೀ, ನಿನ್ನ ಶುಶ್ರೂಷೆಯಿಂದ, ಇಲ್ಲೆಲ್ಲೋ ಸುಬ್ಬೂ, ನಿನ್ನ್ ದೇವ್ರು, ಅಡಗ್ ಕೊಂಡಿದೆ ! ಪ್ರಪಂಚದ ಪಾಪಿ ಪ್ರಯೋಜನಕ್ಕೆ ಹುಟ್ಟಿದ ನನಗೆ ಒಂದ್ ಹೆಮ್ಮೆ, ಸುಬ್ಬೂ !......ನಿನ್ನ್ ಭಕ್ತಿ, ಪ್ರೇಮ, ಸುಬ್ಬೂ !....ಇನ್ನೆರಡು ದಿನಕ್ಕ್ ಭಯವಿಲ್ಲ...ನನ್ ಜೀವಕ್ಕೆ !......ಇನ್ನ್ ನಾಳೆ ಬೇರೆ ಇಧೆ......ಓಡಾಡೋದು!,...... ಡಾಕ್ಟರ್ ಮನೆಗೂ ಇಲ್ಲಿಗೂ !......ಕೊನೇಗೊಂದು ಡ್ರಿಂಕ್ ಕೊಟ್ಬಿಟ್ಟು ಹೋಗ್ ಮಲಕ್ಕೋ, ಸುಬ್ಬೂ !...ಪುಟ್ಟಾ ತರ್ತಾಳೆ ಹಾಲು !

ಸುಬ್ಬು : ಆಗ್ಲಿ ಚಿನ್ನ! ಆದ್ರೇ......! ?

ಸೂಳೆ : (ಬಲಗೈಯಿಂದ ಕುತ್ತಿಗೆಯನ್ನು ನೀವುತ್ತಾ) ಅಬ್ಬಾಹ!......ಅನ್ಯಾಯ ಸುಬ್ಬೂ ......ಈ ತಲೆನೋವು! strong ಮಾಡು drinkನ!

ಸುಬ್ಬು : (apprehensively) ಸಾಲ್ದೇ ತಕ್ಕೊಂಡದ್ದು ?......ಒಳ್ಳೇದೇ ಮೈಗೆ... ಈಗ....?

ಸೂಳೆ : ಈಗ್ಲೋ. ಆಗ್ಲೋ ಸತ್ತು ಸುಟ್ಟು ಬೂದಿಯಾಗೋ ಈ ಕೊಳೆತ ಮೈಗೆ, ಒಳ್ಳೇದೇನೂ, ಕೆಟ್ಟದ್ದೇನೂ......ಕೊಡು ಮಗು!!

[ಸುಬ್ಬುವು ಬ್ರಾಂಡಿ ಬಾಟಲಿಂದ ಗಾಜಿಗೆ ದ್ರಾವಕವನ್ನು ಬಗ್ಗಿಸಿ, ಸೋಡಾವನ್ನು ಒಡೆದು ಸೂಳೆಯ ಕೈಗೆ ಕೊಟ್ಟು, ಗಟ್ಟಿಯಾಗಿ "ಪುಟ್ಟಾ! ಅಮ್ಮನಿಗ್ಹಾಲು!" ಎನ್ನುತ್ತಾ—"ಏರ್ಡೂವರೇಗೆ

ಔಷಧ ಕೊಡ್ಬೇಕು" ಎಂದು ತನಗೆ ತಾನೇ ಹೇಳಿಕೊಳ್ಳುತ್ತ 'ಅಲಾರಂ ಕ್ಲಾಕ್' ಅನ್ನು set ಮಾಡಿ ನಿಷ್ಕ್ರಮಿಸುವನು. ಸೂಳೆಯು ಮಲಗಿದ್ದ ಹಾಗೆಯೇ ಅರ್ಧವನ್ನು ಕುಡಿದು, ಮಿಕ್ಕ ಅರ್ಧ ಬಾಕಿ ಇರುವ ಗಾಜನ್ನು ಎದೆಯ ಮೇಲೆ ಇರಿಸಿಕೊಂಡು..."ಪುಟ್ಟಾ, ಹಾಲಿಲ್ಲವೇ...ಮನೇಲಿ?" ಎನ್ನುವಳು.]

ಪುಟ್ಟಾ : (ಹಾಲು ತುಂಬಿದ ಚೊಂಬು, ಟಂಬ್ಲರ್ ಸಹಿತ ಎತ್ತಿಕೊಂಡು ಬಂದು ಸೂಳೆಯ ತಲೆಭಾಗದಲ್ಲಿ ಇರುವ teapoy ಮೇಲಿರಿಸಿ, ಮಂಚದ ಮೇಲೆ ಕೂತು ಬಾಗಿ, ಸೂಳೆಯನ್ನು ಅಪ್ಪಿಕೊಳ್ಳುವಳು.)

ಸೂಳೆ : ಇದ್ಯಾಕ್ ಕಂದಾ ? ಇಷ್ಟೊಂದು ತ್ತು! ಈ ಹಾಲಿಗೆ ?

ಪುಟ್ಟಾ : ಹಾಲೇನಮ್ಮಾ!? (ಸೂಳೆಯ ಮುಂಗುರುಳ, ಫಾಲ, ಅಕ್ಷಿಗಳನ್ನು ಮುದ್ದಿಸುತ್ತಾ) ಅಮ್ಮಾ! ನಮ್ಮಮ್ಮಾ! ನನ್ನಮ್ಮಾ! ಹಾಲ್ ಕಾಯ್ತಿತ್ತು, ಒಲೇ ಮೇಲೇ!, ಆದ್ರೂ......ಬೇಗ್ ತರ್‍ತಿದ್ದೆ ಹಾಲ್ನ! ಆದರಜ್ಜೀಮ್ಮಾ! ಹೆದ್ರಿಸುದ್ಲೂಮ್ಮಾ......ನನ್ನ......!

ಸೂಳೆ : (Caresses ಪುಟ್ಟಾ's face and yet turning raged eyes spitting fire, to door C) ಹೆದ್ರಿಸ್‌ದ್ಳ!...ನಿನ್ನ!? ನನ್...ಪುಟ್ಟಾನ್ನಾ?...ಹೇಳು ಕಂದಾ! ಆ ಮುದಿ ಹದ್ದು ಹೇಳಿದ್ದಾ ?!

ಪುಟ್ಟಾ : (Atwining her creeper arms round ಸೂಳೆ's neck and kissing ಸೂಳೇ's forehead) ನೀನು ಎಲ್ಲೋ ಹೊರ್‍ಟ್ಹೋಗ್ತೀಯಂತೆ! ಅದಾ! ಅಜ್ಜೀ ಹೇಳ್ತಾಳೆ!, "ಅವಳ್ ಪಾಡ್ ಅವಳ ಪಾಡಾಯ್ತು...ಹೊರ್‍ಟ್ಹೋಗ್ತಾಳವ್ಳು" ಅಂದ್ಲು ಅಜ್ಜಿ! ನನ್ ಬಿಟ್ಬಿಟ್ಟು...ಸುಬ್ಬನ್ನೂ ಬಿಟ್ಬಿಟ್ಟು ಎಲ್ಲೋ ಹೋದೀಯಮ್ಮಾ ನೀನು ?...ಅಜ್ಜೀನ ನಂಬಿಲ್ಲಾಮ್ಮಾ, ನಾನು!!

ಸೂಳೆ : ದಿಟಾ ಮಗು! ಅಜ್ಜಿ ಹೇಳಿದ್ದೂ, ದಿಟಾ!...ದಿಟ್ವಾದ್ರೂ.........ಸುಳ್ಳು! ಅಜ್ಜಿ ಮೈಯೆಲ್ಲಾ ಸುಳ್ಳು! ಬೈಬಾರ್‍ದು ಹೆತ್ತ್‌ತಾಯೀನಾ! ಆದ್ರೂ ಮೈಯೆಲ್ಲಾ, ಮನಸೆಲ್ಲಾ ಸುಳ್ಳು! ನಿನಗೆ ನಿಮ್ಮಮ್ಮ ಹ್ಯಾಗೋ, ಹಾಗೇನೇವೇಯೇ ನನ್ನ ಹೆತ್ತ ತಾಯಿ ನನಗೆ...ಆ ರೂಪದ್ದು! ಆದ್ರೂನೂವೇ, ಸೂಳ್ಗಾರ್ಕೇಲಿ ಹೆತ್ತದ್ದು ನನ್ನ!.........ಸೂಳ್ಗಾರ್ಕೇಲೇನೇವೇಯೇ ಪುಟ್ಟಾ, ನಿನ್ನ ಹೆತ್ತದ್ದು ನಾನು!

ಪುಟ್ಟಾ : ಆದ್ರೆ ಅಮ್ಮಾ......ಅಜ್ಜಿ ಹೇಳಿದ್ಲು! ನೀನೆಲ್ಲೋ ಹೋಗ್ತೀಯಂತೇ...... ನಮ್ಮನ್ನೆಲ್ಲಾ ಬಿಟ್ಬಿಟ್ಟೂ.........! "ಸುಳ್ಳೂ"ಂದೆ! "ಯೆಲ್ಲ್ ಹೋಗೋದು ?" "ಯಾವಾಗ?" ಅಂತ ನಾನ್ ಕೇಳುತ್ಲೂ...ಬಾಯ್ ಬಿಗಿದ್ಳು! ನಾನು ಕೇಳೇ ಬಿಟ್ಟೆ! "ನನ್ನೂ ನಮ್ಮ ಬ್ಬನ್ನೂವೇ ಬಿಟ್ಬಿಟ್ಟು......ಎಲ್ಲ್ ಹೋದಾಳು...ನಮ್ಮಮ್ಮಾ!!" ಅಂತ...ನನ್ನೂ, ಸುಬ್ಬೂನ್ನೂ ಬಿಟ್ಬಿಟ್ಟು (ನಸುನಗುತ್ತಾ) ಹ್‌ಹ್ಹಾಹಾ!! ನೀನಂತೆ! ಓಡ್ಹೋಗೋದಂತೆ!...ಅಜ್ಜೀಗಮ್ಮಾ, ಬರ್‍ತಾ ಬರ್‍ತಾ ಬುದ್ಧಿ ಕೆಡ್ತಾ ಬರ್‍ತಿಧೆ! (ಫಕಫಕನೆ ನಗುವಳು) [ಪುಟ್ಟಾ ಸೂಳೆಯನ್ನು ಸಮೀಪಿಸಿದಾಗ ಎಲೆಕ್ಟ್ರಿಕ್ ದೀಪದ ಬೆಳಕು ಪುಟ್ಟಾನ ಮುಖವನ್ನು ಬೆಳಗುತ್ತಲೇ, ಸೂಳೆಯು ಪುಟ್ಟಾಳ ಮುಖವನ್ನು ಎರಡು ಕೈಯಲ್ಲೂ ಬಿಗಿದು, ಆದರಿಸುತ್ತಾ]

ಸೂಳೆ : ಆಶ್ಚರ್ಯ!! (ಬಿರುಸಾಗಿ) ಒದ್ದ್ ಎಬ್ಬಿಸ್ಕೊಂಡ್‌ಬಾ......ನಿಮ್ಮಜ್ಜೀನಾ!

ಪುಟ್ಟಾ : [ಅಲ್ಪ ಬೆದರಿ] ಇದ್ಯಾಕಮ್ಮಾ ? ಅಜ್ಜಿ ? ಈಗ ?

ಸೂಳೆ : [ಹಲ್ಲು ಕಡಿಯುತ್ತಾ ಕನಲಿ] ಹೇಳಿದ್ ಕೇಳು! ಪುಟ್ಟಾ! ನಿಮ್ಮಜ್ಜೀನ ಎಬ್ಬಿಸ್ಕೊಂಡ್ ಬಾ! [ಪುಟ್ಟಾ ನಿಷ್ಕ್ರಮಿಸುತ್ತಿರಲು] ಒಂದ್ ಡ್ರಿಂಕ್ ಕೊಟ್ಬಿಟ್ಟ್ ಹೋಗು [ಪುಟ್ಟ... ಸುಬ್ಬುವಿನ ಸತ್ಕಾರವನ್ನು ಅನುಸರಿಸಿ, ಸಲ್ಲಿಸಿ, ನಿಷ್ಕ್ರಮಿಸಿ, ಎರಡು ನಿಮಿಷಗಳಲ್ಲಿ ಅಜ್ಜಿಯೊಡನೆ ಪುನಃ ಪ್ರವೇಶಿಸುವಳು.] ಅಮ್ಮಾ! ನನ್ನ ಹೆತ್ತು ಹೊತ್ತು ಈ ಸ್ಥಿತೀಗೆ ತಂದಿಟ್ಟ ನಮ್ಮಮ್ಮಾ!

ಒಳ್ಳೇ ಸಿದ್ದೇ ಅಲ್ಲ್ವೇ ನಿಂಗೇ ? ಸೂಳ್ಗಾರ್ಕೇ ಕಷ್ಟೆಲ್ಲಾ ರಾತ್ರಿ ನಿದ್ದೆ ಕೆಡೋದು!...ಈಗ ಈ ರಾತ್ರಿ, ...ನಿನ್ ಮಗ್ಳು ಸಾಯ್ತಿರೋ ರಾತ್ರೀನೇ...ನಿನ್ಗೆ ಕಣ್ತುಂಬ ನಿದ್ದೆ! ಶಾಂತಿ! (laughs hysterically)......ನಿನ್ ಎಬ್ಸಿದ್ದು......ಯಾಕೇಂತೀಯಾ ?......ಇಲ್ಬಾ, ಪುಟ್ಟಾ! [ಪುಟ್ಟಾ obeys ಸೂಳೆ, turning ಪುಟ್ಟಾ's face to the full glare of the green-shaded electric lamp] ನೋಡ್ವ್ವಮ್ಮಾ...ಈ ಮೂತಿ? ಜ್ಞಾಪಕ ಏನಾದ್ರೂ ಬರುತ್ತ್ಯೇ? ...ನಿನ್‌ಗೇ!?

ಸೂಳೆ ತಾಯಿ : ಜ್ಞಾಪ್ಕ ?!...ಏನ್‌ಜ್ಞಾಪ್ಕ...!

ಸೂಳೆ : ಕುಕ್ಕರಿಸ್ಕೊ, ಪುಟ್ಟಾ! ನಾನ್ ಹೇಳೋದು ಕೇಳ್ತೀಯಾ ?

ಪುಟ್ಟಾ : (ಫಕ್ಕನೆ ನಗುತ್ತಾ) ಯಾವಾಗಮ್ಮಾ, ನೀನ್ ಹೇಳಿದ್ ಕೇಳ್ಲಿಲ್ಲಾ? ನಾನು ? ...ನೀನ್ ಹೇಳೋದಾಗ್ಲೀ...ನಮ್ಮ್ ಸುಬ್ಬು ಹೇಳೋದಾಗ್ಲೀ ?

ಸೂಳೆ : (crooringly) ಕೇಳು ಕಂದಾ...ನನ್ನ ದೊಡ್ಡ್ ಡ್ರೆಸ್ಸಿಂಗ್ ಕೇಸ್ ಒಳ್ಗೆ ತಳಾ ತಳದಲ್ಲಿ ಕಪ್ಪಂಕಪ್ಪು! ಸೀರಾಜಿ! ಚೌಕ್ಳಿ ಕಿರಿಗೆ! ಹದಿನಾರೇ ಮೊಳ!....ಅದ್ನ...ನಿನ್ನೀ "up-to-date" ಬಟ್ಟೆಗಳ್ನೆಲ್ಲಾ ಕಿತ್ತೆಸ್ದು, ಆ ಕಿರಿಗೇನ್ ಸುತ್ಕೊಂಡು...ನಿನ್ನೀ "ಸೈಡ್ ಪಾರ್ಟಿಂಗ್" ಬಿಟ್ಟು ಮುತ್ತೈದೇರ ಹಾಗೆ ನೆಟ್ಟ್ ಬೈತಲೆ......ಬಾಚ್ಕೊಂಡು......ಹಣೇಗೆ ದೊಡ್ಡದಾಗಿ ಕುಂಕ್ಮ ಹಚ್ಕೊಂಡು. ಬಾ ಕಂದ! ಹೋಗು...ಡ್ರೆಸ್ಸಿಂಗ್ ಕೇಸು...ಮೊಸಳೆ ತೊಗಲು ಡ್ರೆಸ್ಸಿಂಗ್ ಕೇಸು...... ಆ ಮೂಲೇಲೆ! (ಪುಟ್ಟಾ exits)

ಸೂಳೆ ತಾಯಿ : ಇದೇನು ? ಹುಚ್ಚೇ ? ಕುಡಿದದ್ ಭ್ರಮೇನೇ ? ಸಾಯೋಕ್ ಮುಂಚೆ, ದೇವರನ್ನ, ಮಿಂಡರ್ನ ಬೇಡಿಕೊಳ್ಳೋದು ಉಂಟು. ಇಲ್ಲ ಸತ್ತ್ಮೇಲೆ......ಬದ್ಕಿರೋರು...... ಮುಂದಕ್ ಬದ್ಕೋರು ಹ್ಯಾಗೇಂತ ಏರ್ಪಾಟ್ ಮಾಡೋದು ಉಂಟು! ನೀನೀಗಿರೋ ಗತೀಲಿ... ಸ್ಥಿತೀಲಿ......ನಿಮ್ಮಮ್ಮ ನಾನೂಂಬೋದ್ನ ಮರೀಬೇಡಾ!......ನೀನ್ ಸತ್ತ್ಮೇಲೆ ದೇವ್ರು ಕೇಳ್ತಾನೇ! : "ನಿನ್ನ ಹೊತ್ತು ಹೆತ್ತು ಮುಂದಕ್ ತಂದ ಅಮ್ಮನ್ ಗತೀಗೆ ಏನ್ ಏರ್ಪಾಟ್ ಮಾಡ್ಬಿಟ್ಟ್ ಬಂದಿದ್ದೀಯಾ ?" ಅಂತ, ದೇವರ್ ಕೇಳಿದ್ರೇ...ಏನ್ಹೇಳ್ತೀಯಾ ?

ಸೂಳೆ : 'ಮ್ಮಾ! ನಿನ್ ಹೊಟ್ಟೇಲಿ ನಾನ್ ಹುಟ್ಟಿದ್ದು ನಿನ್ ತಪ್ಪೋ, ನನ್ ತಪ್ಪೋ ಇಲ್ಲಾ ನಾನಿನ್ನೂ ಅರಿಯದ, ನೀನೂ ಹೇಳದ ನಮ್ಮಪ್ಪನ್ ತಪ್ಪೋ!...ಇಲ್ಲಾ...ನಾಗರೀಕರು ತುಂಬಿದ ಸಮಾಜದತ್ತಪ್ಪೊ ? ಇದ್ನ...ಅಮ್ಮಾ!......ನಿರ್ಧರಿಸೋರ್ ಯಾರು ? ಸತ್ತರೇನು ? ಸಾಯ್ದಿದ್ರೇನು ? ಗರ್ತಿ, ಗರ್ತೀನೇ! ಸೂಳೆ, ಸೂಳೇನೇ! ಅಮ್ಮಾ, ನೀನ್ ಹೀಗಿರೋದು......ನಾನ್ ಹೀಗ್ ಸಾಯ್ತಿರೋದು......ನಿನ್ ತಪ್ಪೋ ?...ನನ್ ತಪ್ಪೋ ? ಇಲ್ಲಾ ಸಮಾಜದ್ ತಪ್ಪೋ ? ನಿನ್ನನನ್ನ ತಪ್ಪುಗಳ್ನ ನಿರ್ಧರಿಸಿ ನ್ಯಾಯ ತೀರ್ಸೋದು ದೇವ್ರಿರೋ ಸ್ವರ್ಗದಲ್ಲಲ್ಲಾಮ್ಮಾ! ಇದ್ನ ನಿರ್ಧರಿಸೋದು...ನಾನ್ ಹೋಗೋ ನರಕದ ಯಮಧರ್ಮರಾಯ!...ಯಮ. ಯಮನಾದ್ರೂ ನೂವೇ. ಯಮ....ಧರ್ಮರಾಯ! "ಸತ್ಯಾನ್ನಪರೋಧರ್ಮಃ", "ಅಹಿಂಸಾ ಪರಮೋಧರ್ಮಃ!" "ಸುಳ್ಳೂ ಹೇಳಬಾರದು ಪರರಿಗೆ!" "ಹಿಂಸೇನು ತರ್ಬಾರ್ದು ಪರರ್ಗೇಂತ ಇವೆರ್ಡೂನೂ ಹೊಂದ್ಕೋಕೆ ವರ್ಷಗಟ್ಲೆ ತಪಸ್ಮಾಡ್‌ತಿಧಾನೆ ಆ ಮಹಾತ್ಮ, ಜೈಲಾಶ್ರಮದಲ್ಲಿ (points to a picture of Gandhi)! ತಪ್ಪಾರ್ಯರದೂ ? ಸೂಳೇನ್ನೂ ಗರ್ತೀನ್ನೂ ಸೃಷ್ಟಿಸಿದ ಬ್ರಹ್ಮಂದೇ? ಇಲ್ಲಾ...ಗರ್ತಿ ಬೇರೆ ಸೂಳೆ ಬೇರೆ ಆದರೂ, "ಗರ್ತೀಗ್ಗಂಡ—ಸೂಳೇಗ್ ಮಿಂಡಾ"ಂತ ಭೇದ ಮಾಡ್ಕೊಂಡು. ನಡೀತಿರೋ ಈ ಸಮಾಜದ್ದೇ ? ಯಾರ್ದು ಈ ತಪ್ಪು...? [ಪುಟ್ಟಾ re-enters; ಪುಟ್ಟಾ ನಾಪ್ಪು ಪ್ರಸ್ತಾಪನೆಯಲ್ಲಿ ಕಂಡ ಸೂಳೆಯ ತದ್ರೂಪಾಗಿರುವಳು.] ಬ್ಬಾಅಅಅ! ಕನ್ದಾಅಅಅ! [gulping the contents of the glass on her chest at one draught, ಸೂಳೆ flings the glass at the old hag. The glass splits into bits

on the arm of the chair, the mother is sitting on] ಪುಟ್ಟಾ! ಆ ಡ್ರಾಯರ್ ತಳಾತಳದಲ್ಲಿ ಒಂದು ಚಿಕ್ಕ ಫೋಟೋ ಇದೆ, ತೆಗಿ, ಕನ್ನಾ! [ಪುಟ್ಟಾ bewildered, mechanically pulls out the drawer of the dressing table and fumbling amid the contents therein, with her fingers, extracts, a carte-de-vesite of the old P.O.P. type.]

ಪುಟ್ಟಾ : (With Photo in hand, approaches mother, alternately looking at photo and her own image in the cheval glass and mother, with wondering look) ಅಮ್ಮಾ...! ನನ್‌... ಫೋಟೋ. ಅಲ್ವಾ...?

ಸೂಳೆ : ಒಳ್ಳೆ ಬೆಪ್ಪು, ಪುಟ್ಟಾ, ನೀನೂ! ಇಂಗ್ಲೀಷೂ ಓದಿದೀಯಾ! ಸಂಸ್ಕೃತದಲ್ಲಿ first classಉ ಅಂತಾನೆ ಸುಬ್ಬೂ! ಈ ನೀರಾಜಿಕಿರಿಗೆ ಯಾವಾಗಲಾದರೂ ಉಟ್ಟಿದ್ದ್ಯಾ? ತೊಟ್ಟಿದ್ದ್ಯಾ? ...ನೆಟ್ಟ ಬೈತಲೆ ಯಾವಾಗಲಾದ್ರೂ ತೆಗೆದಿದ್ದ್ಯಾ...ಏತನ್ಮಧ್ಯೆ, ನಾಳೆ ಸಂಸ್ಕೃತ examinationನ್ನೂ! I class ಅಂತ ಮೊದ್ಲೇ ಬೀರ್‌ತಿದೀಯಾ! ಈ ನಿನ್ನ memory ಅಹಂಕಾರದಲ್ಲೀ ಮರ್ತೇ ಬಿಟ್ಟೆಯಲ್ಲಾ!? ಶುಕ್ರಶುಕ್ರವಾರಾನೂ......ವಾಣಿ! ಗೀರ್ವಾಣಿ! (pointing with her right ತೋರಬೆಟ್ಟು, to Vani picture indignantly) ಹೂವೆಲ್ಲೀ? ಗಂಧದ ಕಡ್ಡೀ ಎಲ್ಲೀ?...ಏನಿದು ಪುಟ್ಟಾ? ನಿನ್ನ ಹಾಡೆಲ್ಲೀ?

ಪುಟ್ಟಾ : ದೇವ್ರೇ ಗತೀಮ್ಮಾ! ಕ್ಷಮಿಸು! ನಿನ್ನೀ ಸ್ಥಿತೀಲಿ ನನ್ನ ಸರಸ್ವತೀನ್ನೇ ಮರ್ತ್ ಬಿಟ್ಟೆ! (In a trice exits and re-enters with a garland of ಏಲುಸುತ್ತು ಮಲ್ಲಿಗೇs and joss-sticks and garlanding the Saraswathi picture, that the audience saw at the inception of the play, identically sings at the Harmonium, re-capitulating to the audience the song, —ತಾಯೆ ಭಾರತಿ—the tone that her mother displayed to the spectators two acts ago—in the induction—in **this** play and thirty years ago, in **her mother's play**. The devotional song finishing, she leaves the Harmonium and rushing up to her mother's arms.)

ಪುಟ್ಟಾ : ಅಮ್ಮಾ, ನನ್ನಹಾಗೇ ಇದೆಯಲ್ಲಾ ಇದು? ಈ ಕಿರಿಗೇನೂ ಉಟ್ಟಿದ್ದಿಲ್ಲಾ! ಈ ಬೈತಲೇನೂ ತೆಗೆದಿದ್ದಿಲ್ಲಾ! ಆದ್ರೂನೂವೇ, ನನ್ನಹಾಗೇ ಇಧೆಯಲ್ಲಾ ಈ ಹಳೇ ಫೋಟೋ? ...ಅಮ್ಮಾ! ಇದು ನಿನ್ನ ಫೋಟೋ! (ತಾಯಿಯನ್ನು ತಬ್ಬಿಕೊಂಡು ಚುಂಬಿಸುತ್ತಾ) ಹಾಗಾರೇ ಅಮ್ಮಾ ನನ್ನ ವಯಸ್ನಲ್ಲಿ ನೀನು ನನ್ನ ಹಾಗ್ಗ್ಯೇೀ ಇದ್ದೇೀ ಇರಬೇಕು.

ಸೂಳೆ : (ತಾಯಿಯನ್ನು ಕುರಿತು) ಹದ್ದೇ!!............ನನ್ನ ಹೆತ್ತ ಹದ್ದೇ. ಛೇ!! ರಣ ಹದ್ದೇ!! ರಾಕ್ಷಸಿಹದ್ದೇ!! ಈಗಲಾದ್ರೂ ನೆನಪೇನೇ! ನಿನ್ನ ಹಾಳು ಮೊವಳಿಗೇ? (grabbing ಪುಟ್ಟಾ, with her left arm and hand, dramatically points out to her mother with her index finger and thunders out) ಕುಲ ಕುಲಗಳ್ನೀ...... ಕುಟುಂಬ ಕುಟುಂಬಗಳ್ನೀ......ಕೊಂಪೆ ಕೊಂಪೆಗಳ್ನೀ......ಕಿಚ್ಚಿನಪಾಲು ಮಾಡಿದ ಕಿರಾತ್ಕೀೀ!! ...ಹೇಳೀಲೇ ಇವಳಿಗೆ! ಇವಳ ವಯಸ್ನಲ್ಲಿ ನಾನೂ ಹೀಗೇ ಇದ್ದೇ ಅಂತ! ಒಂದು ಪಾಪಾನ್ನೂ ಅರಿಯದೆ ಇದ್ದೆ ನಾನು ಆಗ!! ಹಾಗಿದ್ದ ನನ್ನ, ಈ ವಯಸ್ನಲ್ಲಿ, ಈ ಸ್ಥಿತೀಗೆ ತಂದಿಟ್ಟೆ...ನಿನ್ನ ಹೊಟ್ಟೆಪಾಡ್ಗೆ! ಈಗ್ ನೋಡು! (ಮುಷ್ಟಿಗಳನ್ನು ಬಿಗಿಯುತ್ತಾ addressing her mother in action of throwing the glass of whisky) ಇದೇ ಗಾಜ್ನಲ್ಲಿ ಕೊಂದ್‌ಹಾಕ್ ಬಿಟ್ಟೇನು!......ಒಳಗ್ ಹೋಗ್ ಮುದಕೀರ್ಮೀ! ಈ ಮುರಿದ ಗಾಜಿನ ಚೂರ್ನಲ್ಲಿ ದೊಡ್ಡ ಚೂರ್ನ

ನಿನ್ನ ಕುತ್ತಿಗೇಗೆ ಚುಚ್ಚಿ, ಹೆತ್ತ್ರ್ಗಳ್ನ ಸೂಳ್ಗ್ರಾರ್ಕೇಗೆ ಬಲಿಪ್ರೊಪ್ಸಿದ ತಾಯೀನಾ, ಸಾಯೋ ಸೂಳೆ, ಸಾಯೋಕ್ ಮುಂಚೆ ಕೊಂದ್‌ಬಿಟ್ಳೂ ಅಂತಾ, ನಾಳೆ ಊರು ಊರೇ ಡಂಗುರ ಹೊಡೆದು ನನ್ನ ಹೊಗಳೋಕ್ ಮುಂಚೇನೇವೇಯೇ......ಮುದುಕೋರ್ೀ ನಿನ್ನ್ ಮೂಳೇಲಿ!!! (mother exits precepitately)

ಪುಟ್ಟಾ : (caressing ಸೂಳೇ's face eyes and chin......sweetly ಅಮ್ಮಾ್ಮ! ನಮ್ಮ್ಮಮ್ಮ್ಮ!) ಅಮ್ಮಾ! ಹಾಗಾರಮ್ಮಾ! ನನ್ನ್ ವಯಸ್ನಲ್ಲಿ ನೀನು ನನ್ನ್ ಹಾಗ್ಯೇ ಇದ್ದ್ಯಾ! ? (glancing at ಸೂಳೆ, Cap a pie in ill disguised alarm) ಹಾಗಾರೆ...ನಿನ್ನ್ ವಯಸ್ನಲ್ಲಿ ನಾನೂವೇ ನಿನ್ನ್ ಹಾಗ್ಯೇ?!?!?! (Lumps the rest of the words, that creep into her thoughts) !!

!!ಸೂಳೇ's face undergoes just all the changes of emotions that poor little Putta's eyes and face undergo despite her efforts to hide her innate horror of feeling that feeling, that intrigues her soul to ask her mother, if the price to pay, for being like her loved mother in her teens, spell being like her too at 44!!;

ಸೂಳೆ : (ತನ್ನ ಮನಸ್ಸಿನಲ್ಲಿ ಆಗುತ್ತಿರುವ ಆಂದೋಳನಗಳನ್ನು ಮುಖದಲ್ಲಿಯೂ ಕಣ್ಣಿನಲ್ಲಿಯೂ ವ್ಯಕ್ತಪಡಿಸುತ್ತಾ) ......ತನ್ನಲ್ಲಿ ತಾನೇ......"ನನ್ನ ವಯಸ್ನಲ್ಲಿ!......ಅಲ್ಲ......ನಿನ್ನ ವಯಸ್ನಲ್ಲಿ...ನಾನು ಆಗಿದ್ದಾಗೇ ಇದ್ರೇ...ನನ್ನ ವಯಸ್ಸಿನಲ್ಲಿ .... ನೀನೂ...?...!...?...! ...?...!" ಎಂದು ಹೇಳಿಕೊಳ್ಳುತ್ತಾ...ಥಟಕ್ಕನೆ ಉನ್ಮಾದಾವಸ್ಥೆಯನ್ನು ತಾಳಿ ಮನಸ್ಸಿನಲ್ಲಿ ಏನೋ ಧೃಢನಿಶ್ಚಯ ಮಾಡಿದವಳಂತೆ "ಇಲ್ಲಾ ಪುಟ್ಟಾ! ನನ್ನ್‌ಕಂದಾ! ನೀನು ಬದುಕಿದ್ದು, ಈ ಮುದಿ ಹದ್ದಿನ ಹತೋಟೀಲಿದ್ರೆ, ನನ್ನ ವಯಸ್ನಲ್ಲಿ ನನ್ಹಾಗೆ ಆಗಲೇ ಆಗೋ ಅಪಾಯಾನ ಈಗಲೇ ತಪ್ಪಿಸ್ತೇನೆ" [ಎಂದು ಗೊಣಗಿ, ಅಗಲಿಸಿದ ನಟ್ಟ ಕಣ್ಣುಗಳಿಂದ ತನ್ನನ್ನೂ, ಪುಟ್ಟಾನನ್ನೂ ದುರುಗಟ್ಟಿ ನೋಡಿಕೊಂಡು......ನಿಟ್ಟುಸಿರಿಟ್ಟು...ಪುನಃ ಥಟಕ್ಕನೆ] ಆ ಮೆಡಿಸಿನ್ chest ತೆಗಿ! ಅಲ್ಲೊಂದು Brown bottle ಇದೆ ನೋಡು! ಏನೂ ಮಾರ್ಕಿಲ್ಲ ಅದರಮೇಲೆ! Drop Bottleಊ! (ಪುಟ್ಟಾ, chest ಬಾಗಿಲು ತೆಗೆದು ಕೈ ಆಡಿಸಿ ಕೈಲಿ ಹಿಡಿದು ಸೂಳೆಯಕಡೆ ತಿರುಗಲು) ಆ!... ಅದೇ! ಸುಸ್ತು ಹೆಚ್ಚಾಗಿ ತಡೆಯೋಕಾಗ್ದೇ ಇದ್ದರೆ ತಗೋಂತ ಹಿಂದೆ ಡಾಕ್ಟ್ರು ಹೇಳಿದ್ರು!...ನಿದ್ದೆ ಬರೋ ಔಷಧಿ!

ಪುಟ್ಟಾ : (ಸೂಳೆಯು ಸೂಚಿಸಿದ prussic acid ಇರುವ ಬಾಟ್ಲನ್ನು ತರುತ್ತ) ಸುಬ್ಬು, ಔಷಧೀಗೆ ಇನ್ನೂ ಸ್ವಲ್ಪ ಹೊತ್ತಿದೇಂದಿದ್ದ! ಈಗಲೇ ಹೋಗಿ ಕರೀಲೇಮ್ಮಾ? (ಹೋಗಲು ತಿರುಗುವಳು)

ಸೂಳೆ: (ಬೆಚ್ಚಿ ಹಠಾತ್ತಾಗಿ ಹಲ್ಲುಕಚ್ಚಿ...ಮೆಲ್ಲಗೆ) ಬೇಡ! ಹೇಳಿದ ಹಾಗೆ ಕೇಳು! ಇಲ್ಲಿ ತಕ್ಕೊಂಡು ಬಾ!! (ಅಷ್ಟರಲ್ಲಿ ಪುಟ್ಟಾ ಯಾವಾಗಿನಂತೆ ವಾಸನೆ ನೋಡಲು ಬಾಟ್ಲಿನ ಬಿರಡೆ ತೆಗೆಯುತ್ತಿರುವುದನ್ನು ನೋಡಿ) ಬಿರಡೆ ಯಾಕೆ ತೆಗೀತೀ...? ಇಲ್ಲಿ ಕೊಡು! (ಪುಟ್ಟಾನ ಕೈಯ್ಯಿಂದ ಕಿತ್ತುಕೊಂಡು ಬಿರಡೆಯನ್ನ ತಾನೇ ತೆಗೆದು pours the contents haphazard into the two milk laden glasses and hands one to ಪುಟ್ಟಾ)

ಪುಟ್ಟಾ : [ಗಾಜಿನ ಹಾಲನ್ನು ಸೂಚಿಸಿ] 'ಮ್ಮಾ್ಮ್ಮ! ಬಾದಾಮಿ ವಾಸ್ನೆ! ಹರುಬತ್ತೆ?

ಸೂಳೆ: ಅನ್ಯಾಯ ಚುರುಕೇ...ನಿನ್ನ್ ಪುಟ್ಟೊ್ಮಗೂ? ಅಷ್ಟರಲ್ಲೇ ಕಂಡುಹಿಡಿದ್ಯಾ ವಾಸ್ನೇನಾ...?!

ಪುಟ್ಟಾ : ಸೋಡಾ !?...ಸೋಡಾ...!? ಇವ್ಳಾಕಮ್ಮಾ. ಸೋಡಾ ಮತ್ತೆ? (bending over her mother reaches a bottle of half soda. and emptying the stale contents into her mother's glass, this while holding her-prussic acid–laden into milk filled glass in her left hand and then transferring it to her right) Cheerio. ಅಮ್ಮಾ ! ...Chin ! Chin ! (ತಾನು ಹಿಡಿದಿರುವ ಗಾಜನ್ನು ತಾಯಿಯ ಕೈಲಿರುವ ಗಾಜಿಗೆ ತಾಕಿಸುತ್ತಾ) ಮರ್ತ್ಯಾಮ್ಮಾ ?

ಸೂಳೆ : (ತಿರಿಗಿ ಬೆಚ್ಚಿ) "ಈ cheerio"ಗ್ಳು !....ಈ chin-chinಗ್ಳು ಈಗ್ಯಾಕೇ ? ....ಪುಟ್ಟಾ ?

ಪುಟ್ಟಾ : ಯಾಕೇಮ್ಮಾ ?......ಮರ್ತ್‌ಬಿಟ್ಯೇನಮ್ಮಾ ? ನಮ್ಮ ಮನೇ ಸ್ನೇಹಿತ್ರು ! ದೊಡ್ಡ್‌ಮನುಷ್ಯನ್ನಾರ್...Firstಉ ಆ ಚಿಕ್ಕ್ ದೊಡ್ಡ್‌ಮನುಷ್ರು !......ಜ್ಞಾಪ್ಕಾ ಇಧೇನಮ್ಮಾ ? ಅನ್ಯಾಯ ಗಲಾಟೆ...ಆದ್ರೂ Gentlemanಊ ! (pointing out to the ರವಿ ವರ್ಮಾ's "ವಾಮನ ಬಲೀ" picture, which the audience have seen before, in Act I) ಆ ಗೋಂಬೇನ್ ನೋಡಿ ಆತ ಹೇಳಿದ ಕಥೆ ಸುಬ್ಬು ನನಗ್ ಹೇಳಿದ. ನಕ್ಕೂ, ನಕ್ಕೂ, ಹೊಟ್ಟೆ ಹುಣ್ಣಾಯ್ತು ! ಅತ್ನೇ chin-chin ಅಂತ ಗಾಜಿಗೆ ಗಾಜು ತಾಕಿ ಕುಡೀತಿದ್ದದ್ದು ! ಮರ್ತ್ಯಾಮ್ಮಾ! ...ಇನ್ನೂ ಆ Cheerio ದೊಡ್ಡ ಮನುಷ್ಯ...ಮುದುಕ ! ನೀನ್ ಹೇಳ್ತಿದ್ದ್ಯಲ್ಲಾಗೆ 'ಬೂಯಿಕ್ ಕಾರು ' ಜ್ಞಾಪ್ಕಾವ ? ಆತ ಬರೋವಾಗ್ಲೆಲ್ಲಾ ನಿನ್ನ ಈ ಪ್ರಾಥಕದ ಜೊತೇಲಿ...ನನಗೆ ಒಂದು Raspberry ತಂದು, ತಾನೂ ನೀನೂ ಕುಡಿಯೋವಾಗೆಲ್ಲಾ "ಚ್ಚೀರ್ಯೋ" "ಚ್ಚೀರ್ಯೋ" ಅಂತಿದ್ದ. ಆಗ ನನಗೆ 'ರಾ' ಬರ್‍ತಾ ಇರ್ಲಿಲ್ಲ. "ಚ್ಚೀಡ್ಯೋ" "ಚ್ಚೀಡ್ಯೋ" ಅಂತಿದ್ದೆ! ಕೇಳ್ದೆ ಒಂದ್ದಿನ (Resuming her Childish droll) "ಏನ್ಸಾರ್..."ಚ್ಚೀಡ್ಯೋ" ಅಂದ್ರೆ ?" ಅದಕ್ಕಾತ, "ಚ್ಚೀರ್ಯೋ ! ಅಂತ ಹೇಳಿ ಬಿಟ್ಟು ಕುಡ್ದ್ರೆ ವಿಷಾನೂ ಅಮೃತ ಆಗುತ್ತೆ ! ಮೈಗೆ ಏನೂ ಕೆಡುಕಿರೋದಿಲ್ಲ !"...ಅಂತಂತಿದ್ರು. Therefore, ಅಮ್ಮಾ ನಾಳೆ ನನಗೆ examinationಉ. ನಾನು ಬೆಳಿಗ್ಗೆ ಬೇಗ ಏಳ್ಬೇಕು ! ಸುಬ್ಬು ಹೇಳ್ತಾನೆ : ನನಗೂ ಪಾಕಿಟ್ಟು "ಪರ್‍ವಾಗಿಲ್ಲಾ"ಂದ್ರಂತೆ. "ಚ್ಚೀರ್ಯೋ" ಅಮ್ಮಾ ! (Raises the glass higher than her head about to drink)

ಸೂಳೆ : [ಸೂಳೆ with horror in her eyes. springing up with difficulty is about to dash down (ಪುಟ್ಟಾ's) glass with hers. but. with all her will power evoked. suppresses the rising. lumps up from her breaking heart with set teeth grimly. raising her glass too with tears welling up in her eyes—(ಗದ್ಗದ ಸ್ವರದಿಂದ)] ಚ್ಚೀರ್ಯೋ ನನ್ನ್ ಕಂದಾ !!!

ಪುಟ್ಟಾ : (Turning her face to R. ವೈಮಾರಿತು ಸ್ಪಷ್ಟ ಘಟ್ಟಿಯಾಗಿ) ಚ್ಚೀರ್ಯೋ ! ಸುಬ್ಬೂ !!

ಸೂಳೆ : (Sharply) ಸುಬ್ಬೂನ ವಿಷ್ಯಸ್ ಬೇಡ್ವೇ. ಪಟಿಂಗೀ !!

ಪುಟ್ಟಾ : ಹಾದೂಮ್ಮಾ ! ಮರ್‍ತೆ ! ಸುಬ್ಬು ! ಪಾಪ ! ರಾತ್ರಿ. ಹಗ್ಲೂ ಸ್ವಪ್ನ ನೋಡ್ತ್ಯೋತಿದ್ದಾನೆ ! ಚ್ಚೀರ್ಯೋಮ್ಮಾ ; (ಮೆಲ್ಲಗೆ) ಚ್ಚೀರ್ಯೋ ಸುಬ್ಬು ! (Turning the glass to the right centre) ಅಮ್ಮಾ !......ಅಜ್ಜೀಗೆ ಚ್ಚೀರ್ಯೋ ಇಲ್ಲ !...ಕಾಸ್

ಬಂಗ್ಲೇಲಿ ಆ ಬೆಂಕಿ ಕೋಳಿ ನೋಡ್ದಾಗ್ನಿಂದ ಅಜ್ಜಿ ನನ್ಕಣ್ಗೆ ಅಗ್ನಿ !' ಪ್ಚ್ಚಾ ! ಅಂಜಿಕೆ ಯಾಗುತ್ತದಮ್ಮಾ ! ಅಜ್ಜೀನ್ ನೋಡಿದಾಗ್ಲೆಲ್ಲಾ ! (ಥಟಕ್ಕನೆ).........ನಾನು ಒಂದು ವೇಳೆ ನಿದ್ದೆ ಹೋದ್ರೆ, ನನ್ನ್ ಬಿಟ್ಟಿಟ್ಟು ಎಲ್ಲಾದ್ರೂ ಹೋಗ್ತೀಯಾಮ್ಮಾ, ಅಜ್ಜಿ ಹೇಳ್ದ್ಹಾಗೆ ?

ಸೂಳೆ : (ಅತಿ ಕಷ್ಟದಿಂದ) ಇಲ್ಲಾ ಕಂದ ! ಪುಟ್ಟಾ, ನಿನ್ನಾಣೆಗೂ !......ನನ್ನಾಣೆಗೂ !... ಅಜ್ಜ.. ಅಜ್ಜಿ...ಸುಬ್ಬೂ ಆಣೇಗೂ ! (giving a gentle: yet strong slap to ಪುಟ್ಟಾ's cheek) ಎಲ್ಲಾರಣೆಗೂ !......ದೇವ್ರಾಣೆಗೂ...ನಿನ್ನ್ ಬಿಟ್ಟು ಕಂದಾ, ನಾನೆಲ್ಲೂ ಹೋಗೋದಿಲ್ಲ ! chin-chin (ಗಾಜಿಗೆ ಗಾಜು ತಾಕಿಸಿ) ಚ್ಚೀರ್ಸ್ಯೋ, ನನ್ನಾಣೆ !! [The mother and daughter raise the glasses to their lips. At her very first gulp, ಪುಟ್ಟಾ drops her glass and collapses on her mother's breast hardly succeeding in murmuring "ಮ್ಮಾ... !"]

ಸೂಳೆ : [Gazing down at the prostrate ಪುಟ್ಟಾ brings down her unfinished glass, places it on the teapoy and empties the rest of the prussic acid in the little bottle into it ! Dropping the bottle, gathers up her dead child in her arms and with her hand caressing the dead face on her lips, kissing the dead lips and dead eyes indulges in a drunken apostrophe] ಈಗ್ ಹೆದರ್ಬೇಡ ನನ್ನ ಕಂದಾ! ನಿನ್ನ ವಯಸ್ನಲ್ಲೇ ನಿನ್ಹಾಗೆ ನಾನಿದ್ದೆ.........ನನ್ನ್ ಕಂದಾ ! ಆದ್ರೆ ನೀನ್ ಹೆದರಿದ್ಹಾಗೆ ನನ್ನ್ ವಯಸ್ನಲ್ಲಿ ನೀನು ನನ್ನ ಹಾಗೆ ಆಗೋದಿಲ್ಲ, ನೀನು ! ಈಗ ! ಆ ಹದ್ದು ನಿನ್ನ ವಯಸ್ಸಲ್ಲಿ ನಾನು ನಿನ್ಹಾಗಿದ್ದೋವ್ಳ್ನ ಈ ವಯಸ್ಸಲ್ಲಿ ಹೀಗ್ ತಂದ ಪಾಪ ಅವಳದ್ದೋ ? ಸಮಾಜದ್ದೋ ? ಇಲ್ಲ ನನ್ನ ಪ್ರಾಕೃತ ಪಾಪವೋ ? ಯಾರು ನಿರ್ಧರಿಸೋರು ? ಹ್ಯಾಗಿದ್ರೂನೂವೇ ನೀನು ಪುಟ್ಟಾ !' ಪುಟ್ಟಾ ! ನನ್ನ ಸ್ಥಿತೀಗೆ ಬರೋದಿಲ್ಲ ನೀನು ! (Laughs hysterically sobbing) **ಇದೊಂದು ಬಾಕಿ ಇತ್ತು ನನ್ನ್ಪಾಪಿ ಜನ್ಮಕ್ಕೆ! ಖೂನಿ! ಹತ್ಯ ; ಶಿಶುಹತ್ಯ. ನನ್ನ ಶಿಶುಹತ್ಯ ನಾನೇ ಮಾಡ್ದೆ** (ಉನ್ಮತ್ತಳಾಗಿ ಕಿರಿಚುತ್ತಾ) ಯಾಕ್ ಮಾಡ್ದೇ ? (In a sudden gust of anger pointing out to a picture of Gandhi) **ಅಹಿಂಸಾ ಸಾರ್ತಾನಲ್ಲಾ** ಅತ, ಆ ಅಹಿಂಸೇಲಿ ಕೊಂದದ್ದು ನನ್ನ್ ಪುಟ್ಟಾನ್ನ ! ತನು, ಮನ, ಹೃದಯದಲ್ಲಿ ಒಂದು ಪಾಪಾನೂ ಅರೀದೆ, ತೋಚ್ದೆ, ಹೂವಿನಹಾಗೆ ಅರಳ್ತಿರೋ ನನ್ನ ಕಂದನ್ನ, ನನ್ನೀ ಹಾಳು ಸ್ಥಿತೀಗೆ ತಂದ ಸಮಾಜಾಂಬೋ ಹದ್ದಿನ ಬಾಯಿಗೆ ತುತ್ತಾಗದೇ ಇರೋಕೇ ನಾನ್ ಹುಡ್ಗಿಯಾದಾಗ ಮಾಸದೆ ಬಾಡದೆ ಇದ್ದ್ಹಾಗೆ ಇದ್ದ ನನ್ನ ಪುಟ್ಟಾನ್ನ (hysterically kissing the dead face) ನನ್ನ್ ಕಂದನ್ನ ! ನಾನ್ಕೊಂದದ್ದು. ನನ್ಮುಖ ! ನನ್ರಕ್ತ ! ನನ್ ದೇಹ ! ಸ್ವಲ್ಪಿರೂ ಕಂದಾ ! ಬಂದೆ (Laughing) ಹ್ಹ ! ಹ್ಹ ! ಹ್ಹ ! ಒಳ್ಳೇ ಹುಚ್ಚು ನಾನು ಪುಟ್ಟಾ ! ನಿನ್ನ್ ಜೊತೇಗೆ ನಾನ್ ಬರೋದೆ ? ನನ್ನ್ ಪಾಪಕ್ಕೆ ನಾನಿಳಿಯೋ ನರಕವೆಲ್ಲಿ ! ಒಂದ್ ಪಾಪ ಅರೀದೆ ಸೂರ್ಯನರಶ್ಮಿ ಹಾಗೆ ಬೆಳಗ್ಸಿ, ಮನೇಲಿ ಇಳಿದು ಮನೆಯೆಲ್ಲಾ ಬೆಳ್ಳಂ ಬೆಳಗ್ಸಿ ಈಗ ನೀನು ತಿರುಗ್ಹೋಗ್ತಿರೋ ನಿನ್ನ ಲೋಕ ಎಲ್ಲಿ ? ನೀನ್ ಬಂದ್ ಲೋಕಾನ್ ನೀನ್ ಸೇರ್ಕೊಂಡೆ ! ನನಗ್ಗೇ ಕಾದಿರೋ ನರಕ ನಾನ್ ಸೇರ್ತೀನೆ ! (With her left hand as her right arm is hugging the dead child's body and neck, she grabs the poison-laden whisky glass and weirdly as in a mad trance) ಚ್ಚೀರ್ಸ್ಯೋ ಹೇಳೇ ಪುಟ್ಟಾ ! ನಾನೇ examination ತಪ್ಪಿಸ್ದೆ ನಿನ್ಗೇ ? ! ಸಂಸ್ಕೃತದಲ್ಲಿ 1st ಆಗ್ಬೇಕೂಂತ ಆಸೆ ಪಟ್ಟೆ ಅಲ್ವೆ, ಕಂದಾ ? ಈ ಹಾಳು ಲೋಕದ ಪರೀಕ್ಷೆ ನಿನಗ್ಯಾಕ್ ನನ್ ರಾಣಿ ಈಗ ! ? ನಿನಗೆ ತಿಳಿದ ಗೀರ್ವಾಣಿ, ಪರೀಕ್ಷೆಲೋಕೆ, ಸರಸ್ವತೀ, ಲೋಕಾನೇ ಸೇರಿದ್ರಿಯಾ, ಇಷ್ಟ್ಹೊತ್ತಿಗೆ ! ಎಲ್ಲಿ ಹೇಳು!

ಕಂದಾ ! (ನಿಧಾನವಾಗಿ ಪುಟ್ಟಾ ಕೆನ್ನೆ ತುಟಿಗಳಮೇಲೆ ತನ್ನ ಮುಖವನ್ನು ತೋರಳಿಸುತ್ತಾ ಅವಳನ್ನು ತಬ್ಬಿಕೊಂಡು ಮಗುವನ್ನು ಉಯ್ಯಾಲಾಡಿಸುವಂತೆ ಮೈ ತೂಗುತ್ತಾ.—drawling sings)

........ತಾ......ಯೆ......ಭಾ...ರ...ತೀ..........................ಬಾಲಕಿಯರ ತಿಳಿ । ನಾಲಗೆಯೊಳು ನೀ...................ನೋಲಗಿಸುತೆ ಪ್ರದು । ಲಿಂಗಗಳವೇ...............

(Weirdly) ನನ್ನ ಕಂದಾ ! ನಿನ್ನ ತಿಳಿ ನಾಲ್ಗೇಲಿಲ್ಲೇ ಇರೋ ಸಂಸ್ಕೃತ ಇನ್ನೆಲ್ಲಿದೆ ಕಂದಾ ! ಪುಟ್ಟಾ ! ಅಲ್ಲಿ ಹೇಳತಾ ಇದೀಯಾ ಇವ್ನಾ !? ಎಷ್ಟು ಇಂಪು ನಿನ್ನ ಕಂಠ !?.........ಎಷ್ಟು ತಿಳಿ ನಿನ್ನ ನಾಲಿಗೆ......ಎಷ್ಟು ಶುದ್ಧ...ನಿನ್ನ ಸಂಸ್ಕೃತ ? !...............................ನಿನ್ನ ಪರೀಕ್ಷೇ ಸತ್ಯಲೋಕದಲ್ಲಿ ! ಅಲ್ಲಿ ನೀ ಪಾಸಾಗೋದು first class ಉ ! ನಾನು first class ಆಗಿ ಪಾಸಾದದ್ದು ಈ ಸೂಳೇ ಲೋಕದಲ್ಲಿ......ಒಂದು ಚ್ಚೀರ್ಯೊ ಹೇಳೆ ! ಒಂದು chin chin ಹೇಳೇ ! ಎಲ್ಲ ಸಂತೋಷಕ್ಕೇ ಅಂತ ನೀನ್ ಕುಡಿಯೋಳಲ್ವೇ ನನ್ನ್ ಕಂದಾ ನಾನ್ ಹುಟ್ಟ ಬೆಳದದ್ದೂ ಸಮಾಜದ ಸಂತೋಷಕ್ಕೇ ನನ್ನ ಸಂತೋಷಕ್ಕೇ ? ನಿನ್ನ ಸಂತೋಷಕ್ಕೇ ?.........ಯಾರ ಸಂತೋಷಕ್ಕೂ ಅಲ್ಲ ......ನನ್ನ 'ಚ್ಚೀರ್ಯೋ' ನೀನ್ ನೀನೆ. ಕಂದಾ ! ಪುಟ್ಟಾ !! ಸುಬ್ಬೂ ಸುಬ್ಬೂ ನಾದಿನಿ ! ಅಮ್ಮಾ ಅಮ್ಮಾನೆ ! ಸಮಾಜ ಸಮಾಜಾನೇ ! ಆದ್ರೆ ನೀನೂ ನನ್ನಂವಾ ! chin chin ! (Taps her glass to the dead chin) ಚ್ಚೀರ್ಯೋ ಪುಟ್ಟಾ ! ನಿನ್ನ್ ಸಂತೋಷಕ್ಕೆ (Grabbing the dead face to her own face, rigidly and so hugging her that the dead body is on her own, gulps the glass and even before she drops the glass, her head drops down to her breast, dead]

[The scene is still for fully a minute and this death reigning scene, is fermented by the sweetly sonorous alarm of the clock that Subbu has set for 2–30 A.M. Precise.]

ಸುಬ್ಬು : (Entering) ಇದೇನಿದು. ದೀಪ ಇನ್ನೂ off ಮಾಡೇ ಇಲ್ಲ ! ಸುಸ್ತು ಚಿನ್ನಾ !! ಪಾಪ ! ದೇವ್ರದಯು !—ಡಾಕ್ಟರ್ ಹೇಳ್ದ ! worries ಎಲ್ಲಾ ಬಿಟ್ಟುಬಿಟ್ಟು "rest alone must rescue her" ಅಂತ !......ಒಳ್ಳೇ ನಿದ್ರೆ !.........ಅವರೂ medicine ಕೊಡ್ಲೇ ಬೇಕು (ತಿರುಗಿನೋಡಿ) ಪುಟ್ಟಾ ! ಪಾಪ. ನಾಳೆ ಪರೀಕ್ಷೇನೂ ಮರ್ತು ಬಿಟ್ಟು ಅಮ್ಮನಮೇಲೆ ಬಿದ್ಕೊಂಡಿಧಾಳೆ ! ಈಗ ಅವಳ್ನೆತ್ತಿ ನಿದ್ರೆ ಕೆಡದೆ ತಿರುಗಿ ಮಲಗ್ಸಿ ಬೆಳಗ್ಗೆ ಬೇಗ ಎಬ್ಬಿ ಆ sanskrit ಪಾಠ ತಿರಗೂ ಅವಳ ಬಾಯಿಂದ ಕಿರ್ಲ್ಸ್ಲೇ !......ಮಂಕು !...... ಹುಂ ! (Goes to the dressing table and holds an ounce glass up against the light) ಕೊಳೆ (Approaching a wash-basin, drops a piece of soap into the glass and dripping a few drops of water, whirls the soap in the glass. Rescuing the piece of soap and restoring it to the soap box, fills the ounce glass with water and cleans it with his forefinger. Snatching at a clean napkin, twists it into the glass and dries it. With the now crystal clear ounce glass glistening on the table, holds up a 12oz. bottle of medicine and glancing at the label, murmurs) "Directionsಉ !" (Replaces it on the table and exits R; and re-enters, almost immediately with a pair of spectacles on his nose and glancing around) ಅನ್ಯಾಯ. ಧೂಳು ! ಕನ್ನಡಕ ! (Removes his glasses and placing them on the

table exits and re-enters with a piece of Velvet and polishes his glasses : setting the glasses again on his nose opens the cork of the bottle of mixture and meticulously reads aloud the directions on the label: "One doze for every three hours ಏ ! ? ಈಗ already five minutes lateಉ": and pours out the doze directed in accordance with the instruction on the label. Placing the now-medicine filled ounce glass on the table re-corks the medicine bottle and carefully replacing it, his right hand takes up the medicine filled ounce-glass and approaches the corpses with the medicine glass in his left-hand, he gently taps ಸೂಳೇ's cheek) ಚಿನ್ನಾ !...ಚಿನ್ನಾ !...ಚಿನ್ನಾ !... **ಚಿನ್ನಾ !!........ಚಿನ್ನಾ !!**......................... **ಚಿನ್ನಾ !!**........ಹೋದ್ಯಾ!...ಹೋಗೇ ಹೋದ್ಯಾ......ತ್ಸ್...ತ್ಸ್...ತ್ಸ್...ತ್ಸ್!...ಪುಟ್ಟ ಪಾಪ! ನಾಳೆ ಪರೀಕ್ಷೆ ! ಊಂ?...ತಿಳೀಬಾರ್ದು, ಮೊದಲು ಇವಳ್ನ ಮೆಲ್ಲಗೆ ಎತ್ಕೊಂಡ್ ಹೋಗಿ ಮಲಗ್ಸಿ ಬಿಡಬೇಕು (his right-hand, touches ಪುಟ್ಟಾ and feeling the death-cold cheek and arm of ಪುಟ್ಟಾ, drops the ounce glass which crashes to the floor and suddenly yells out) ಹಯ್ಯಯ್ಯೋ ! ಪುಟ್ಟಾನೂವೇ !...... ನೀನೂವೇ ?.........ಪುಟ್ಟಾ ! ನಮ್ಪುಟ್ಟಾ ! (suddenly smelling the empty glass, in "ಸೂಳೆ's" prone hand and other near Putta's) ವಿಷ ಕುಡ್ದ್ರೂ ! Prussic Acidoo ! (sobbing collapses on the corpses whimpering) ಅಯ್ಯೋಯ್ಯೋಯ್ಯೋ ! ಇಬ್ಬರೂ ಹೋದ್ರಾ ? ! ಇ...ನ್ನ್ಯಾ...ಕ್...ನಾ...ನ್...ಬ...ದ್ಕ... ರೋ...ದೂ ! ?.........?......? (Raises himself up and meandering to ಸೂಳೇ's face and rubbing his face on the dead ಸೂಳೇ's face) ಚಿನ್ನಾ ! ಚಿನ್ನಾ ! (in heart-breaking sobs) ನೀನ್ ಹೋದ್ರೂನೂವೆ ಚಿನ್ನಾ !...ನಮ್ಮಿಬ್ಬರ ಜ್ಞಾಪಕ್ಕೇಂತ ಇದ್ದ ಇವಳ್ನೂವೆ......ಕರ್ಕೊಂಡ್ ಹೋಗ್ಬಿಟ್ಟ್ಯಾ ! ? ?...ಚಿನ್ನಾ ! ನ್ಯಾಯುವೇ ?! ...ನೀತಿಯೇ......ಧರ್ಮವೇ ? ಹಯ್ಯೋ ಚಿನ್ನಾ ! ನಿನ್ನ ಕೈಹಿಡಿಯೋಕೆ ಯೋಗ್ಯತೆ ಇಲ್ಲದ ನನ್ನ ಕೈನ ಹೀಗೆ ಬಿಟ್ಟಿಟ್ ಹೋಗಬಹುದೇ ?.........ತಪ್ಪು......ಚಿನ್ನ ....ನೀ ಮಾಡಿದ್ದು ...ತಪ್ಪು ! ಹಯ್ಯೋ ! ಇನ್ನೇನು ಗತಿ ! ಚಿನ್ನಾ !....ಚಿನ್ನಾ !...ಚಿನ್ನಾ !...ಚಿನ್ನಾ ! ನನಗೆ ಇನ್ನು ಏನ್ಸಂತೋಷ ಇಹದಲ್ಲೀ !! (Collapses shreiking out "ಚಿನ್ನಾ ! ಚಿನ್ನಾ ! ಚಿನ್ನಾ !") [Subbu's Shrieks having awaken the mother, she slowly stalks into the room.]

ಸೂಳೆ ತಾಯಿ : ಇದೇನು ಸುಬ್ಬೂ !...ಆಗ್ಹೋಯ್ತು...ಅವಳ ಕೆಲ್ಸ ?......ಬಡ್ಕೊಂಡೇನ್ ಫಲಾ ! ? ಕೀರ್ಲಿದರೇನ್ ಪ್ರಯೋಜ್ನ ? ಸತ್ತವ್ರು ತಿರುಗ್ ಬರೋದಿಲ್ಲ ! ಅವಳಾಯ್ತು! ಅವಳ ಕರ್ಮವೂ ಆಯ್ತು ! ಈಗ್ ಮನೇಲಿ......ನೀನೊಬ್ನೇ ಗಂಡ್ಸು ! ಅವಳ "ವಿಲ್ಲು" ನಿನಗೋ...ನನಗೋ......ಪುಟ್ಟಾಗೋ ಬರದೇ ಬರದಿರ್ತಾಳೆ ! ಯಾರಿಗ್ ಬರದರೇನು ! ಪುಟ್ಟಾನೂ, ನಾನೂ, ನೀನೂ !—ಸುಬ್ಬು ! ನೀನೂ...ಹೊಂದ್ಕೊಂಡಿರೋವರ್ಗೂ...ನಿನ್ ಚಿನ್ನನ್ ದುಡ್ಡೂ ನಮ್ಮೊತ್ರಲ್ಲಿರೋವ್ರೆಗ್ ? ! ಹೋದ ಪ್ರಾಣ ಹೋಯ್ತು ! ನಿನ್ ದುಡ್ಡೇನೂ ! ನನ್‌ದುಡ್ಡೇನೂ! ...ಪುಟ್ಟಾನ ದುಡ್ಡೇನೂ ?....ಈ ಮೂವತ್ತು ವರ್ಷ, ನಾನೂ, ನಿನ್ ಚಿನ್ನಾನೂ, ಬೆಳ್ದು ಬದುಕಿದ್ದು ನಮ್ಮ ನಮ್ಮ ಸ್ನೇಹದ್ದಲ್ಲಿ. ಚಿನ್ನಾ ಸತ್ತೂರ್ರ...ಪುಟ್ಟಾ ಇದಾಳೆ !...ಏಳು ಸುಬ್ಬೂ, ಅವಳ ಕಾಲ ಆಗ್ಹೋಯ್ತು ! ನನ್ನ ಕಾಲಾನೂ ಈ ಹೊತ್ತೋ ನಾಳೇನೋ ಆಗ್ಹೋಗತ್ತೆ ! ಆದರೆ ನನ್

ಮುಟ್ಟಿನಲ್ಲಿ ನನ್ನ ಜೀವನಕ್ಕೆ, ನನ್ ಕಸಬು...ಗಿರಾಕೀಗೆ...ಪುಟ್ಟಾ ಇದಾಳೆ......ಮೆಲ್ಲಗೆ ಪುಟ್ಟಾನ ಅವರಮ್ಮ ಹೆಣಾಂತ ತಿಳಿಯೋಕ್ ಮುಂಚೇ ಒಳಗ್ ಸಾಗ್ಸ್ಕೊಂಡ್ ಹೋಗು! ನಾಳೆ ಪರೀಕ್ಷೇಲಿ ಪಾಸಾದ್ರೆ...ಸೂಳ್ಯಾರ್ಕೇಲಿ...ಒಡೆದ್ ಸೂಳೇಂದ್ರೆ. ಗಿರಾಕಿ ಜಾಸ್ತಿ! ನನ್ಗೂ ಲಾಭ! ನನ್ಗೂ ಲಾಭ! (Gradually approaches the two corpses and in trying to gently lift up ಪುಟ್ಟಾ, feels ಪುಟ್ಟಾ's ice cold arms dropping dead: mechanically her fingers stray over ಪುಟ್ಟಾ and ಸೂಳೆ and finding both dead-cold n a frenzy) ಹಯ್ಯೋ! ಹಯ್ಯೋ!...ಮುಂಡೇ...ಮುಂಡೇ... ನಾನು ನಿನ್ನ ಹೊತ್ತು ಹೆತ್ತು ನಿನಗೆ ನನ್ನ ಕಸ್ಬ ಕಲ್ಸ್ಕೊಟ್ಟು ಮುಂದಕ್ಕೆ ತನ್ನ...ಮನೆ. ಬಾಕ್ಲು. ಹೊಲ, ಗದ್ದೆ ಮಾಡ್ಸ್ಕೊಟ್ಟು ನಿನ್ನ ಈ ಸ್ಥಿತೀಗ್ ತಂದಾಗ...ನನ್ನ...ಮುಟ್ಟಿನಲ್ಲಿ ನನ್ನ ಜೀವನಕ್ಕೇಂತಿದ್ದ ಈ ಪುಟ್ಟಾನ್ನೂ ಸೆಳಕೊಂಡು ಹೋದ್ಯಲ್ಲೇ!! ಮುಂಡೇ!! **ಮುಂಡೇ!!** **ಮುಂಡೇ!!** (ಪ್ರತಿಯೊಂದು "ಮುಂಡೇ"ಗೂ ಸೂಳೆಯ ಶವದ ಜಠರದ ಮೇಲೆ ತನ್ನ ಕೈಗಳಿಂದ ಬಾರಿಸುತ್ತಾ)......ನನ್ಮುಂದಿನ ಒಕ್ಲು......ನನ್ನ ಸೂಳ್ಯಾರ್ಕೆ ಕಸ್ಬು...ನಾನು ಗಿಟ್ಟಿಸ್ಕೊಳ್ಳೋಕೆ ನನಗೇಂತ ಇದ್ದ ಪುಟ್ಟಾನ್ನೂ....ಎಳ್ಕೊಂಡ್ಹೋದ್ಯಲ್ಲೇ...ಮುಂಡೇ...ಮುಂಡೇ ...ಮುಂಡೇ! ನನ್ನ ಮುಟ್ಟಿನಲ್ಲಿ ನನ್ನ ಜೀವನಕ್ಕೇಂತ ಇದ್ದ ಪುಟ್ಟಾನ್ನೂ ಸೆಳಕೊಂಡ್ಹೋದ್ಯಲ್ಲೇ! ...ಮುಂಡೇ...! ಮುಂಡೇ!...ನನ್ನ ಹೊಟ್ಟೇಲ್ಹುಟ್ಟಿದ **ಮುಂಡೇ**! (She suits to the word by beating bare palm resounding on the dead woman's stomach) "ಅಯ್ಯೋ, ಹಾಳ್ ದೇವರ್‌ಗಳ್ರಾ, ನಿಮುಗ್ಮಾಡದ್ಪೂಜೆ ಇಲ್ಲಾ! ನಿಮಗೊಪ್ಪಿಸದ ನೇವೇದ್ಯ ಇಲ್ಲ! ನಿಮ್ಮಾಳು ಬ್ರಾಹ್ಮಣ್ರು ತಿಂದು ತೇಗದ ಪ್ರಸಾದ ದಕ್ಷಿಣೆ ಇಲ್ಲ! ಅದ್ರೂ ನೀವು ನೋಡ್ತಿದ್ರಾ ಈ ಅನ್ಯಾಯಾನ! ನನ್ನ ಮುಟ್ಟಿನಲ್ಲಿ ನನ್ನ ಜೀವನಕ್ಕೇಂತ ಇದ್ದ ಈ ಹುಡಿಗೀನೂ ಎಳ್ಕೊಂಡು ಹೋದಾಗ ನೀವಾದ್ರೂ ಒಳ್ಳೇ ಬುದ್ಧಿ ಕೊಟ್ಟಿರಬಾರ್ದೆ ಈ ಪಾಪಿ ಮುಂಡೇಗೆ? ......(Resumes striking dead ಸೂಳೇ's stomach, screaming hysterically: "ಮುಂಡೇ! ಮುಂಡೇ! ನನ್ನ ಮುಟ್ಟಿನಲ್ಲಿ ನನ್ ಜೀವನಕ್ಕೇಂತಿದ್ದ ಹುಡಿಗೀನೂ ಎಳ್ಕೊಂಡ್ ಹೋದ್ಯಲ್ಲೇ!"

[ಸುಬ್ಬುವು ಸೂಳೆಯ ಶವದ ಪಾದಗಳ ಮೇಲೆ ತಲೆಯನ್ನು ಚಚ್ಚಿಕೊಳ್ಳುತ್ತಾ ಗೋಳಾಡುತ್ತಲೂ.........ಮುದುಕಿಯು ಪೂರ್ವೋಕ್ತಂ ಬಡಕೊಳ್ಳುತ್ತಾ ಶವದ ಜಠರದ ಮೇಲೆ ಹಸ್ತವನ್ನು ಸಭಿಕರು ಕೇಳಬರುವಂತೆ ತಾಡಿಸುತ್ತಿರಲು. ಫರದೆಯು ಮೆಲ್ಲನೆ ಜಾರಿದ ಅನಂತರವೂ ಮುದುಕಿಯು "ಮುಂಡೇ! ಮುಂಡೇ! ನಿನ್ನ ಹತ್ತಿಂಗಳು ಹೊತ್ತು ಹೆತ್ತು ಮುಂದಕ್ ತಂದದ್ದಕ್ಕೇ...ನನ್ನ ಮುಟ್ನಲ್ಲಿ ನನ್ ಜೀವ್ನಕ್ಕೆ...ಇದ್ದ ಈ ಹುಡುಗೀನ್ನೂ ಎಳ್ಕೊಂಡ್ಹೋಗಿ ನನ್ಗೊಟ್ಟೇ ಮೇಲ್ಹೋದ್ಯಲ್ಲೇ!" ಎಂಬ ಆರ್ತನವೂ ಕರತಾಡನವೂ ಕೇಳಬರುವುದು.]

FINISH

ತಾವರೆಕೆರೆ

ತಾವರೆಕೆರೆ

೧

ನಮ್ಮೂರು ತಾವರೆಕೆರೆ. "ಹೆಸರು ರಂಗಣ್ಣ, ಮುಸುಡಿ ಮಂಗಣ್ಣ" ಅಂದ್ಹಾಗಲ್ಲ ನಮ್ಮೂರು; ಕೆರೆಯಿದೆ. ಮೆಟ್ಲುಗ್ಳು ಮುರ್ದು ಕಟ್ಟೆಗಳು ಕುಸಿದಿದ್ರೂನೂವೆ, ಕೆರೆಯಿದೆ. ಇನ್ನೇನೋ! ಕಮಲಕ್ಕೆ "ಪಂಕೇರುಹ" ಅಂತ ಹೆಸರಿಟ್ಟ ಪ್ರಾಣಿ, ನಮ್ಮ ಕೆರೆ ನೀರ್ನ ನೋಡ್ಯೇ ಇಟ್ಟಿರಬೇಕು. ಬಿಳೀ ಧೋತ್ರಾನ ಕೆರೇಲಿ ಅದ್ದಿದ ಗೃಹಸ್ಥ, ಒಗೆದ ಧೋತ್ರಾನ ನೋಡಿ ವಾನಪ್ರಸ್ಥಕ್ಕೆ ಸೂಚನೇಂತ ಕಂಡ್ಕೊಳ್ಳೋ ಅಷ್ಟು ಕೆಂಪೇರುತ್ತೆ ಬಗ್ಗಡದ ಬಣ್ಣ, ಬಟ್ಟೇಗೆ!

ಇನ್ನು—"ತಾವ್ರೇ"ನೂ ಸುಳ್ಳಲ್ಲ...ದಡದಿಂದ ದಡದವರಿಗೂ ಧಂಡ್ಯಾಗಿ ಹರಡಿವೆ, ದಂಟುಗ್ಳು...ತಾವ್ರೆ ದಂಟುಗ್ಳು. ಈಜೋಕೇಂತ ಇಳ್ದ ಇಸುಮುಗಳು...ಈಜೋದ್ಮರ್ತು... ಮುಳುಗೋದ್ ಥಟ್ಟನೆ ಕಲ್ತು...ಇನ್ನೂ ಈಚೆಗೆ ಬರ್ತಿಧಾರೆ!

ಹಾಸನದ ಡಿಸ್ಟ್ರಿಕ್ಟು ಹೇಳ್ಬೇಕೇ ನಾನು, ಕೇಳ್ಬೇಕೇ ನೀವು! ಯಥಾಪ್ರಕಾರ ಕೆರೆಕಟ್ಟೆ ಮೇಲೆ ಗುಡಿ, ಜಕಣಾಚಾರಿನೋ ಡಕಣಾಚಾರಿನೋ ಕಡದದ್ದು, ಹೊಗರ್ು ಒಳ್ಗೂ, ಗೋಪ್ರ ಧ್ವಜಸ್ಥಂಭದಿಂದ ಗರ್ಭಗುಡಿ ಪ್ರತಿಮೆ ಸಹಿತ. ಮತ್ಯಥಾಪ್ರಕಾರ ದೇವ್ರು, ಶ್ರೀಕೃಷ್ಣ...ಕಡೆದವನ ಧ್ಯೇಯ. ಇನ್ನೂ ಯಥಾಪ್ರಕಾರ ವೇಣುಗೋಪಾಲಮೂರ್ತಿ. ಮತ್ತಿನ್ನೂ ಯಥಾಪ್ರಕಾರ ಮೈಸೂರು ಚರಿತ್ರೆಯ ಆರ್ಭಟದ ಭರಾಟೆ ಗಲಾಟೇಲಿ ಭಿನ್ನಮೂರ್ತಿ ಭೀಭತ್ಸುವಿನ ಸಾರಥಿ...ಮೂಗಿಲ್ಲದ ಮೂರ್ತಿ. ಆದ್ರೇನು...ಮುಕುಂದನ ಭಕ್ತರು...ಮುರಳೀಧರ ಬಾರ್ಸೋದು ಮೂಗಿಂದಲ್ಲ 'ಬಾಯಿಂದ' ಅಂಬೋದ್ನ ಮರ್ತೋ ಏನೋ ಕಾಣೆ...ಮುಖ್ಯ ಪೂಜೆಯಿಲ್ಲ, ಪುನಸ್ಕಾರ್ವಿಲ್ಲ ಪರಮಾತ್ಮನಿಗೆ. ಈ ಗುಡಿ, ಕೆರೆಯ ಈಚೆ ಕಟ್ಟೇಮೇಲೆ.

ಎದುರ್ ಕಟ್ಟೇಮೇಲೆ ಇನ್ನೊಂದ್ಗುಡಿ. ಕಾಳಮ್ಮಂದು! ಜಾಣೆ ಚಾಮುಂಡಿ! ಕೃಷ್ಣ ರಾಮ ಇತ್ಯಾದಿಗಳಿಗಿಂತ ಮುಂಚೇನೇವೇಯೇ ಇದ್ದ ಆದಿ ಶಕ್ತಿಯಾದ್ರೂನೂವೆ, ಈ ಗಂಡ್ಸು ದೇವರುಗಳ ಜೊತೇಲಿ ನಮ್ದೇಶ್ದಲ್ಲಿ ವಿಗ್ರಹವಾಗಿ ಹುಟ್ಟಿ ಮೂಗು ಮೈಯಿ ಕೈಕಾಲು ಮುರಿಸ್ಕೊಳ್ಳೊ ಅಪಾಯಾನ ಅರ್ತು ಮುಜ್ರಾಯಿ ಇಲಾಖೆ ಏರ್ಪಾಡಾದ ನಂತರವೇ ಉದ್ಭವಿಸಿದ್ದು. ಹೆಂಗಸಿನ ಬುದ್ಧೀನೇ ಬುದ್ಧಿ. ಆದ್ರೇನು,. ..... ಗಂಡಸರು ತುಂಬಿದೂರು. ಈಕೇಗೂ ಪೂಜೆ ಇಲ್ಲ!

ಊರಲ್ಲಿ ಪ್ಲೇಗೋ ಕಾಲ್ರಾನೋ ಸಿಡುಬೋ...ಇಲ್ಲ ಎಲ್ಲಾನೂವ್ರೋ ಎದ್ದು...ಬೀದಿ ಬೀದೀಗೂ ಹತ್ತಿಪ್ಪತ್ತು ಹೆಣಗಳು ಹೊರಳಾಡಿದ ಪಕ್ಷಕ್ಕೇನೇವೇಯೇ...ಅಭಿಷೇಕ, ಅಲಂಕಾರ, ಅರ್ಚನೆ, ಆರಾಧ್ನೆ, ಅಮ್ಮನ್ಗೆ! ಭಕ್ತರ ದರ್ಶನ ಆಕೇಗೆ! ಅದುವರಿಗೂ ಬೆಳಿಗ್ಗೆಲ್ಲಾ ದನ ಕುರಿ ಕಾಯೋ ಹುಡುಗರಿಗೆ ಬೀಡಿ ಸೇದೋಕೂ, ಮಧ್ಯಾಹ್ನವೆಲ್ಲಾ ಪರೇಲ ರಂಗ್ ಆಡೊ ಊರಿನ್ಪಟಿಂಗರಿಗೂ, ಸಾಯಂಕಾಲವೆಲ್ಲಾ ಒಬ್ಬರ ಪುರಾತನ ಚರಿತ್ರೆ ಒಬ್ಬರ್ಗೆ ಬೀರ್ಕೊಳ್ತಾ ಪರಸ್ಪರ ಪ್ರಶಂಸೇಂಬೊ ಸಂದೀಲಿ ಸ್ವಯಂ ಪೂಜೇಂಬೊ ಸಮಾರಾಧ್ನೇನ ಸಲ್ಲಿಸ್ಕೊಳ್ಳೋ ಊರಿನ ಮುದಿಗೊಡ್ಡುಗಳಿಗೂ ಸ್ಥಾನ–ಆಸ್ಥಾನ...ಆಶ್ರಮ...ಠಿಕಾಣಿ...ಕಾಳಮ್ಮನ್ಗುಡಿ. ಮುದಿಗೊಡ್ಡುಗಳೂಂತ ಮರ್ಯಾದೆಯಿಲ್ದೆ ಹೇಳಿದ್ದು ನನ್ನ ಮತಿ ಮೈ ಮರೆತ ತಪ್ಪು. ಇಲ್ಲಿ ಸಂಧ್ಯಾಕಾಲ ಸೇರೊ ಇಸಮುಗಳು ಐದೇ ಆದ್ರೂನೂವೆ, ಪಂಚಪ್ರಾಣಗಳು ತಾವ್ರೇಕೆರೆಗೆ. ಪಂಚಾಯಿತಿದಾರರು! ಶಾನುಭೋಗ ಸುಬ್ಬಾಭಟ್ಟರು, ಶೇಕ್ದಾರ್ ಶಾಮಣ್ಣ, ಬೆಲ್ಲದ ಕಂಟ್ರಾಕ್ಟ್ ಗಡF ಖಾನ್, ಚಿಲ್ರೆ ಅಂಗ್ಡಿ ಆದಿಮೂರ್ತಿಶೆಟ್ರು, ಗ್ರಾಮದಗೌಡ ದೊಡ್ಡಹಟ್ಟಿ ಬೋರೇಗೌಡ.

ಮಧ್ಯಾಹ್ನ ಭಟ್ರು ಮನೇಮೇಲೆ ಪ್ರಜ್ವಲಿಸಿ, ಶ್ಯಾಮಣ್ಣೋರ ಹೊಲ ಹಾಸಿ, ಖಾನ್ ಸಾಹೇಬ್ರ ಕಬ್ಬಿನ ಆಲೆ ಏರಿ, ಶೆಟ್ರ ವೀಳೆ ಬಳ್ಳಿಗಳ್ನ...ಬೆಳಗಿ...ಗೌಡನ ಗದ್ದೇ ಅಂಚಿನಲ್ಲಿ

ಮುಳುಗಬೇಕೂಂಬೋದ್ನ ಸೂರ್ಯನಿಗೆ ಜ್ಞಾಪಿಸೋಕೆ...ದಿನ ತಪ್ಪದೇ...ಒಂದೊಂದು ಸಾಯಂಕಾಲಾನೂ ಸೇರೋದು ಸಂಪ್ರದಾಯ...ಈ ಪಂಚಪ್ರಚಂಡರು ಕಾಳಮ್ಮನ ಗುಡೀಲಿ ! — ಭಟ್ರು ! ಶಾನುಭೋಗ ಸುಬ್ಬಾಭಟ್ರು, ದೊಡ್ಡ ಮನೆತನ ಹಿಂದಿನ್ಕಾಲ್ದಲ್ಲಿ ! ಸಧ್ಯ "ಮನೆ" "ಮಠ"ವೆಲ್ಲಾ ಶೆಟ್ರಿಗೆ, ಆದಿಮೂರ್ತಿ ಶೆಟ್ರಿಗೆ ! "ತನ" ಬಡತನ ! ಆದ್ರೇನೂ...ರಕ್ತ...ರಕ್ತಾನೇ ಬೇರೆ ! ...ಜನಿವಾರ ಜನಿವಾರನೇವೇಯೇ ! ಈತ್ನ ಹಿರಿಯರ ಕಾಲ್ದಲ್ಲಿ ಮನೆ ಬಾಗಿಲು ಧನ ಧಾನ್ಯ ಇತ್ಯಾದಿ ಸಂಪತ್ತಿನಿಂದ ಊರನ್ನೆಲ್ಲಾ ಕಿರುಬೆಟ್ಟಿನ್ಮೇಲೆ ಬಂಗರದ ಹಾಗೆ ಯಾವರೀತ್ಯಾ ತಿರುಗ್ಸಿದ್ರೋ —ಹಿರಿಯರ ಯಾವ ಬಾಬ್ತೂ ಇಲ್ದಿದ್ರೂನೂವೆ—ಅವರಿಂದ ವೈಯ್ಕೆಲ್ಲಾ ತುಳುಕ್ತಿರೊ ರಕ್ತದ ಪ್ರಭಾವದಿಂದ್ಲೂ...ತನ್ನ ಉಡಾಫಿ ಪ್ರಯೋಗದಿಂದ್ಲೂ...ತನ್ನಾಲಿಗೆ ತುದೀಲಿ ಊರು ಊರನ್ನೇ ತತ್ತದೇವರೀತ್ಯಾ ತಿರ್ರಂತ ತಿರುಗಿಸೊ ಅಪರೂಪವಸ್ತು ಭಟ್ರು, ಸುಬ್ಬಾಭಟ್ರು ! ಯಾರೇನು ಹೇಳಿದ್ರೂ ಕೊನೇಮಾತು ಈತನದೆ. ಉದಾಹರಣೆಗೆ ಹೇಳ್ತೀನೆ, ಒಂದು ಕಥೆ....

ಒಂದು ಸಾಯಂಕಾಲ ಶೆಟ್ರು ಎತ್ತಿದ್ರು ಮಾತು. "ನನ್ನ ಪೀಳೀಪೆಲೆ ತೋಟದಲ್ಲಿ ಸಿಕ್ಕಿದ ನಿಧಿ–ನಾನು ನನ್ನ ದುಡ್ಡಿನಲ್ಲಿ ಕೊಂಡುಕೊಂಡ ವೀಳೀದೆಲೆ ತೋಟದಲ್ಲಿ ಸಿಕ್ಕಿದ ನಿಧಿ—ತೋಟ ಕೊಂಡುಕೊಂಡ ಮೇಲೆ ತೋಟದಲ್ಲಿ ನಾನು ತೋಡಿದ ಭಾವೀಲಿ ಸಿಕ್ಕಿದ ನೀರು ನಂದು ಹೇಗೋ ಹಾಗೇನೇವೇ ನಾನು ತೋಡಿದಕಡೆ ಸಿಕ್ಕಿದ ನಿಧೀನೂ ನನ್ದೇವೇಯೇ!" ಅಂದ್ರು.

ಭಟ್ರು : ನಿಜ ಶೆಟ್ರೆ, ಆದ್ರೆ ಸರಕಾರಾಂಬೋದು ಒಂದು ಇಧೆ. ನಮ್ಮೆಲ್ಲರಿಗೆ ಸಿಕ್ಕಿದ ಬಾಬ್ತುಗಳಿಗೆಲ್ಲಾ ಸಭಾಗಿ !

ಶೆಟ್ರು : ಮಂಚಿ ಸರ್ಕಾರಮಯ್ಯಾ ಸೂವು ಚೆಪ್ಪೇದಿ !...ಕಾದಯ್ಯಾ. ತೋಟಾನ್ಕಿ ಡಬ್ಬಿಚ್ಚಿಂದೀಕಾಕ ಯಾಡಾದಿ ಯಾಡಾದಿಕೀನೀ ಇಚ್ಚೆಲೇದಾ ಕಂದಾಯಮು. ನೇನು ? ದಾಂಟ್ಲೋನೇ ತೀರ್ಪೋಯ ಸರ್ಕಾರ ಋಣಮು ! ನಾ ತೋಟಮುಲೋ ನೇನು ಕೊಟ್ಟಿಚ್ಚಿನ ಬಾವಿಲೋ ಚಿಕ್ಕಿನ ನೀಳ್ಳು ಏ ಐಕಟ್ಟು ನಾದ್ನಾದೊ, ನೇನು ಕೊಟ್ಟಿನಗುಂತ್ಲೊ ಚಿಕ್ಕಿನ್ನಿಧೀನೂ ಅದೇ ಐಕಟ್ಟು ನಾದ್ನಾದೆ! ಸರ್ಕಾರು ಎಕ್ಕಡ ಒಚ್ಚೆ ?

ಭಟ್ರು : 'ಶೆಟ್ರೇ, ನಿಧಿ ನಿಮಗೆ ಸಿಕ್ಕಿದ್ರೂ ಒಂದ್ಪೇಳೆ...ಮರೀಬೇಡಿ ಇಧೆ ಸರ್ಕಾರದ ಸನ್ನಿಧಿ ! ಹೇಳ್ತೇನೆ ಕೇಳಿ ಚಿಕ್ಕದೊಂದು ಕಥೆ,' ಅಂತ ಪ್ರಾರಂಭಿಸಿದರು.

ಭಟ್ರರ ಕಥೆ

ಶೆಟ್ರೇ ! ನೀವೂ ನಮ್ಮೂರಿಗೆ ಹೊಸಬ್ರು. ನೆನ್ನೆಮೊನ್ನೆ ಬಂದವ್ರು. ನಮ್ಮೂರಿಗ್ಬಂದು ಈಗ್ಗಾನೆ ಹತ್ತನ್ನೆರಡು ವರ್ಷ. ನಾನು ಹೇಳೊ ಕಥೆ ಈಗ ಸರಾಸರಿ ನಲವತ್ತೈದು ವರ್ಷಕ್ಕೆ ಮುಂಚೆ ನಡೆದದ್ದು. ಈಗ ಹುಡುಗೀರ ಸ್ಕೂಲು ಇದೆಯಲ್ಲ, ಮುನಿಸಿಪಲ್ ಸ್ಕೂಲು ! ಇದು ಆ ಕಾಲದಲ್ಲಿ ಮೂರಂತಸ್ತು ಮನೆ...ಗಂಧದ ಕಾಶೀಪತಯ್ಯಂದು. ಮಹಾಪ್ರಾಣಿ ಆತ. ಭಿಕ್ಷಾನ್ನ ಎತ್ತಿ ಹೊಟ್ಟೆ ಹೊರ್ಕೊಂಡು ಓಡಾಡುತ್ತಿದ್ದ ಬ್ರಹ್ಮಚಾರಿ...ಮೈಸೂರು ಅತ್ತಡೆಯೆಲ್ಲಾ ತಿರುಗಿ, ವ್ಯಾಪಾರಕ್ಕೆ ಷುರುಮಾಡಿ, ಸಾಂಬ್ರಾಣಿ ಕಡ್ಡಿ, ಬಿಲ್ಲೆ, ಕಸ್ತೂರಿಮಾತ್ರೆ ಇತ್ಯಾದಿಗಳು ಮಾರ್ತಾ ಮಾರ್ತಾ ಕೊನೇಗೆ ಮದರಾಸು ಬೊಂಬಾಯಿಗೆಲ್ಲಾ ಕಸ್ತೂರಿ ಗಂಧ ಸಪ್ಲೈ ಮಾಡೋದು. ಹೀಗೆಲ್ಲಾ ವ್ಯಾಪಾರ ಹಬ್ಬಿ—ಅವನ್ಭಿಕ್ಷಾನ್ನ ಬೇಡುತ್ತಿದ್ದ ಮನೆಗಳಲ್ಲೇ ಒಂದನ್ಕೊಂಡ್ಕೊಂಡು ಅದರ್ಮೇಲೆ ಎರಡುಪ್ಪರಿಗೆ ಕಟ್ಟಿ...

ಶೆಟ್ರು : ಅಯ್ತೆ ಯೇಮಿ...ಊರ್ಮುಂದ್ರ ಇಪ್ಪುಡು ಉಂಡೆ ಕಾಶೀಪತಿ ಛತ್ರಮು...?

ಭಟ್ರು : ಹೌದು ಆತನದೇ ಧರ್ಮ. ಅಲ್ಲದೇ ಊರೊಳಗಿರೋ ಶ್ರೀಕಂಠನ ಗುಡೀಗೆ ಧ್ವಜಸ್ತಂಭ, ಚಿನ್ನದ ಕಲಶ, ಬೆಳ್ಳೀವಾಹನ, ಪಾರ್ವತೀ ಪರಮೇಶ್ವರರಿಗೆ ಚಿನ್ನದ ಕಿರೀಟಗಳು, ಎಲ್ಲಾ ಆತನ ಧರ್ಮ. ಅದೇನು ಲೀಲೇನೋ ಪರಮಾತ್ಮನ್ದು. ಬಡಪಾಯಿಗೆ ಗುಡಿಕಟ್ಟುತ್ತಾ

ಚಟ್ನಿ. ಹೀಗೆ ತೀರ್‍ಕೊಂಡ್ರು ! ಇನ್ನು ಮಕ್ಕಳಿಲ್ಲದ ಆ ವಿತಂತು, ಅವಳ ತಮ್ಮನ ಸಮೇತ ಬಾಚ್ಕೊಳ್ಳೊರೊಕ್ಕ ಒಡ್ವೇನೆಲ್ಲಾ ಬಾಚ್ಕೊಂಡು ಬಾಕಿ ಮನೆ ಭೂಮಿ ಇತ್ಯಾದಿಗಳ್ನ ಧರ್ಮಕ್ಕೇಂತ ಬಿಟ್ಟಿಟ್ಟು ಹೊರಟುಹೋದಳು. ಮನೆ ಪಕ್ಕದಲ್ಲಿ ಈಗ ಬಯಲು... ಆಗ ....

ಗಡ್‌ಖಾನ್: ಓ ಬೊಮ್ಮಕ್ಕಾ...ಹೋಟಲ್ ಪುಟ್ಟಮ್ಮಾಕಿ, ಮಟ್ಟೀಕಘರ್ಬೀ ಜಮಿನ್ಸೀ ! ಬಡಾ ತಕರಾರ್ ಓ ಅಮ್ಮ, ಆ ಜಮಿನ್ಗ್ಗೆ ಕೇಳ್ದೆ, ಗನ್ನ ಜಮಾಯಿಸಿ...ಗೂಡ್ ಬನಾಯ್ಸೋಕೆ ಜಾಗ ಹೋನ ಕರ್ಕೆ. ಬಿಲ್ಕುಲ್ ಬಿಕ್ರಿಗೂ ಕೊಡಾಕೆಯಿಲ್ಲ, ಭಾಡಗೇಗೂ ಕೊಡಾಕೆ ಯಿಲ್ಲ. "ಖಾಲಿ ಜಮೀನ್ ! ನನ್ಗೆ ಬೇಕು !" ಅಂತ ಖಾಲಿ ಜಮೀನ್ ಇಟ್ಕೊಂಡಿಧಾಳೆ ! ನನ್ಗೆ ತಾಜೂಬ್ ! ಅಕೇಲ ಇದ್ದಾದೆ ಆ ಹೆಂಗ್ಸು, ಮಟ್ಕೀಘರ್ಮೆ. ಹೋಟೇಲ್ ದೋಸೆ ಬೇಪಾರ್‍ಮೆ...ಕ್ಯಾಂಓ ಬೊಮ್ನಿ ಕ್ಯಾ ಪಯ್ಸ ಕಮಾಯಿಂಗೀ....ಕಾಂಟzʼಂದಗೀ ಗುzರಾತೀ !... ನನ್ಗೆ ತಾಜೂಬ್ !

ಭಟ್ರು : ಸಾಹೇಬ್ರೇ ! ಬ್ರಾಹ್ಮಣರ ಸೂಕ್ಷ್ಮ ನಿಮಗಿನ್ನೂ ಗೊತ್ತಿಲ್ಲ. ನಿಮ್ಮಗಳ ಸಾಮ್ತಿ...* 'ಬೊಮ್ಮಕ್ಕಾಕೆ ಮರ್‍ನಾʼಂಬೋದೇ ಅಸ್ಥಿಭಾರ. ಆಕೆ ಮಾಡ್ತಿರೋ ದೋಸೆ ವ್ಯಾಪಾರದ ಗುಟ್ಟಿಗೆ 'ಮೆಂತ್ಯದದೋಸೆ ಪುಟ್ಟಮ್ಮ' ಅಂತ ಹೊಸೂರಿಂದ ಹರಿಹರ, ಕೋಲಾರದಿಂದ ಕೊಳ್ಳೇಗಾಲದವರೆಗೂ...ಹರಡಿರೋ ಪ್ರಾಂತಗಳ ಅಂಚೊನೂ, ಬೆಲ್ಲದ ಕಂಟ್ರಾಕ್ಟ್ ಗಡ್‌ಖಾನ್ ಸಾಹೇಬರ ಹೆಸ್ರು ಸೋಕೋದಿಲ್ಲ. ನೋಡಿ ; ಯಾವತ್ತು ಬೇಕಾದ್ರೂ ಹೋಗ್ನೋಡಿ. ಬೆಳಿಗ್ಗೆ ಆರು ಘಂಟೆಗೆ ಶುರುವಾದ ಮೆಂತ್ಯದ ದೋಸೆ ಕೊತ್ತಂಬರೀಚಟ್ನಿ ವ್ಯಾಪಾರ ಎಂಟೂವರೆಘಂಟೇಲೆ ಮುಗಿದು ಇನ್ಮಧ್ಯಾಹ್ನ ಅದೇ ದೋಸೇ ಅದೇ ಚಟ್ನಿ, ಮೂರು ಘಂಟೆಯಿಂದ ಐದು ಘಂಟೆ ಒಳ್ಗೆ ತೀರಿದ್ರೂನೂವೆ ಖರ್ಚೆಲ್ಲಾ ಜಾತ ಬಾಕಿ ದಿನದಿನಕ್ಕೆ ಕಮ್ಮಿಯಿಲ್ದೆ ಮೂರು ರೂಪಾಯಿ ಆದ್ರು ಗಿಟ್ಟಿ, ತಿಂಗಳಿಗೆ ನಮ್ಮ ತಾಲ್ಲೂಕು ಮಾಮಲೇದಾರ್ರ ನೂರು ರೂಪಾಯಿ ಸಂಬಳಕ್ಕಿಂತ ಐವತ್ತೋ ಅರವತ್ತೋ ಎಪ್ಪತ್ತೋ ಸಂಪಾದಿಸ್ತಿಧಾಳೆ, ಆ ವಿತಂತು–ತನ್ನಬರ್ಗೋ—ಮನೆ ತನ್ನೆ ಅಕ್ಕಿ ಅವರ ತಾತ ಇಟ್ಟೋದ ಗದ್ದೆ !...ಇನ್ನಿಂಗೇ ಕೂಡಿಹಾಕ್ತಿರೋ ದುಡ್ಡು !...ಮಕ್ಕಳಿಲ್ಲ ಮರಿಯಿಲ್ಲ.

ಬೋರೇಗೌಡ : ಎಲ್ಲಾ ಅವ್ರಜ್ಜಂಗೆ ಈಕೇನೂವೇ ಈ ಜಿಪುಣಗಾರ್ಕೆಲೇಯೋ ಜೈಲಿಗೆ ಹೋದದ್ದು. ಅವಯ್ಯ ಆ ಮುದುಕಯ್ಯ ! ನನಿಗ್ಗೊತ್ತು ಕತೆ. ಶೆಟ್ರಿಗೂ ಸಾಬ್ರಿಗೂ ಗೊತ್ತಿಲ್ಲ. ಯೇಳಿ. ಪುಟ್ಟಮ್ಮನಜ್ಜ...ಊರ್ನೆ ಕೊಂಡ್ಕೊಳ್ಳೋ ದುಡ್ಡು ಇಟ್ಕೊಂಡೂವೆ...ಮರ್‍ತೆ... ನಿಮ್ಕತೆ ನೀವೇಳಿದ್ರೇನೇವೇಯೆ ಚಂದ.

ಭಟ್ರು : ಬೋರಣ್ಣೋರು ಹೇಳ್ದಾಂಗೇ ಶೆಟ್ರೇ ! ಪುಟ್ಟಮ್ಮನ ಅಜ್ಜ...ನಮ್ಸಾಹೇಬ್ರು ಕಬ್ಬಿನಾಲೆ ಕಟ್ಟೋಕೆ ಬೆಲೆಗೋ ಬಾಡಿಗೆಗೋ ಕೇಳಿ ಇಲ್ಲ ಅನ್ನಿಸ್ಕೊಂಡ ಜಮೀನಿನ ಮೇಲೆ ಆಗ ಇದ್ದ ಮನೇಲಿ ನಿಧಿ ಸಿಕ್ಕಿದ ಗಲಾಟೇಲಿ ಸರ್ಕಾರ್‌ದ್ ಸನ್ನಿಧೀಲಿ ಸಿಕ್ಕೊಂಡು ಒದ್ದಾಡಿದ....ಲೇವಾದೇವಿ ಸುಬ್ಬಣ್ಣನ ಚರಿತ್ರೆ, ಹೇಳ್ತಿರೋದು ನಾನು. ನನಗೆ ಆಗ ಹನ್ನೆರಡು ಹದ್ಮೂರು ವಯಸ್ಸು. ಮನೆ ಬಾಕಿಲು ಪರಿಸ್ಥಿತಿ ಈಗ ಇದ್ದಾಗಲ್ಲ...ಜಮಾಖರ್ಚಿನ ಲೆಖ್ಖ ಇಟ್ಟ ಪ್ರಾಣಿಗಳಲ್ಲ, ನಮ್ಮಪ್ಪ, ನಮ್ಮಾತ...ಇರ್‍ಲಿ. ಒಟ್ನಲ್ಲಿ ಕುಟುಂಬದ ಜೋರ್‍ನಲ್ಲಿ...ಜವಾಬ್ದಾರಿಯಿಲ್ದೆ— ಸಾಹೇಬ್ರ ಭಾಷೇಲಿ 'ಅzಾದ್' ಆಗಿ ಓಡಾಡ್ತಿದ್ದೆ ಊರೆಲ್ಲಾ ! ಕಾಶೀಗೂ ರಾಮೇಶ್ವರಕ್ಕೂ ದಾರಿಯಲ್ಲಿ ನಮ್ಮೂರು ! ಬೈರಾಗಿಗಳು ಗೋಸಾಯಿಗಳು ಕಂಡುಬರೋದು ವಿರಳ ನಮ್ಮೂರ್‍ನಲ್ಲಿ ! ಆದ್ರೆ ಒಂದಿನ. ಈ ಎದುರ್ ಕಟ್ಟೇಮೇಲೆ. ಆ ಮೂಗು ಮುರಿದ ಗೋಪಾಲಸ್ವಾಮಿಗುಡಿ ಮುಂದೆ ಕೂತಿದಾನೆ, ಒಬ್ಬ ಬೈರಾಗಿ ! ಆಗ ಮೆಟ್ಲು ಭದ್ರ. ನೀರು ನಿರ್ಮಲ. ಕೆರೆ ತುಂಬಿ ಸ್ನಾನಪಾನಕ್ಕೂ. ಮುತ್ತೈದೆಯರ ಪೂಜೆ ಪುನಸ್ಕಾರಕ್ಕೂ ಜೀಡಿಘಾಟು ತುಂಬಿದ ಈ ದೇವಿಗುಡೀನೂ ಶುಭ್ರವಾಗಿದ್ದು...ನೂರಾರು ಜನ ಓಡಾಡ್ತಿದ್ದ ಪ್ರಾಂತ್ಯ ಇದು. ಆಗ. ಒಂದು ದಿನ ಪ್ರಾತಃಕಾಲ ಸೋರೆಬುರುಡೆಗಳು ಕಟ್ಕೊಂಡು ಇಳ್ದು ಈಜಿ ಹೊರಗ್ಬಂದು ಬಟ್ಟೇ ಹಿಂಡ್ತ ತಿರುಗಿದ್ವಿ : ನಾನು ನನ್ನ ಜೊತೇಲಿದ್ದ ನಾಲ್ಕೈದು ಹುಡುಗರು ! ತಿರುಗಿದ್ವಿ ! ಎದುರು ಕಟ್ಟೇಕಡೆ

ಕೂತಿದಾನೆ ಪ್ರಭು ! ಮೊಳದೆತ್ರ ಜಟೆ ಮಂಡೇಮೇಲೆ ; ಬತ್ತ್ಲೆ ಮೈಯ್ಯಿ ! ಮೈಯ್ಯೆಲ್ಲಾ ವಿಭೂತಿ. ಬೆಳ್ಳಗೊಂದು ಲಂಗೋಟಿ : ತೊಡೇ ಮೇಲೆ ದೊಡ್ಡದೊಂದು ಉಂಗ್ರದ ಸರ್ಮೋತ ಉಕ್ಕಿನ ಸಲಾಕೆ : ಕಣ್ಣುಗಳು ಮುಚ್ಕೊಂಡು....ಅವನ ದೊಡ್ಡ ಗಂಟಲಿನಲ್ಲಿ ಒಂದೇ ಮಂತ್ರ...ಈಗ್ಲು ಜ್ಞಾಪಕ ಬರುತ್ತೆ...'ಅಲಕ್ ನಿರಂಜನ್ ! ಭಂಡಾರ ! ಭರ್ಪೂರ್ ! ಕಾಲ್ಕಂಟಕದೂರ್ ! ಜೈ ಸೀತಾರಾಮ್ ನಾರಾಯಣ ಭಗವಾನ್ !' ಅನ್ನೋದೂ. ಎರಡು ಕೈಯಿಂದ...ಅದೇನ್ಹೇಳ್ತೀರ ಸಾಮೇತ್ರೆ... ಗಾಂಜ...ಭಂಗಿ ಬಾಬ್ತು ?

ಗಡF' ಖಾನ್ : ಗೊಡಾಹ್ಕ...?

ಭಟ್ಟ್ರು : ಹೂ...ಅದ್ನ, 'ಉಫ್ !' ಅಂತ ಸೇದೋದು. ತಿರುಗೂ 'ಅಲಕ್ ನಿರಂಜನ್—' ಇತ್ಯಾದಿ ; ಆಶ್ಚರ್ಯ ನಮಗೆಲ್ಲಾ ! ಹೀಗೆ ನಾಲ್ಕೈದು ದಿನ ಊರೆಲ್ಲಾ ನೋಡಿ, ಊರೊಳಕ್ಕೆಲ್ಲಾ ಆ ಗೋಸಾಯಿ. ಮಕ್ಕಳಿಗೆ ವಿಭೂತಿ ಕೊಟ್ಟು ಬೇಧಿ ಇತ್ಯಾದಿ ನಿಲ್ಸೋದು : ಇನ್ನು ತಾಯ್ತು.... ಯಂತ್ರ ಈ ಬಾಬ್ತುಗಳು, ದೆವ್ವ ಓಡ್ಸೋಕೆ. ಪಿಶಾಚಿ ಬಿಡ್ಸೋಕೆ, ಅಲ್ದೆ ಜೋಳಿಮ್ಮಂತ್ರ ಇತ್ಯಾದಿಗ್ಳು. ಹೀಗೆಲ್ಲಾ ಊರ್ಗೆ ನಾಲ್ಕೈದು ದಿನದಲ್ಲಿ ಮಾಡಿದ....ನೂರಾರು ಉಪಕಾರಗಳ್ನ, ಮಾಡಿದ್ರೂ ನೂವೆ, ಒಂದ್ಬಿಡಿಗಾಸು ಮುಟ್ಟದಹಾಗೆ, ಬಂದದ್ದ್ನ ತಂದೋರ್ಮ್ರೂತೀಮೇಲೆ ಎಸೀತಿದ್ದ ಈ ಬೈರಾಗಿ. ಥಟ್ಟನೆ ಒಂದು ದಿನ ಗಂಧದ ಕಾಶೀಪತಯ್ಯನ ಮನೆ ಎದುರಿಗೆ ನಿಂತು, ಆತ್ನೂ ಅತ್ನ ಹೆಂಡ್ತೀನೂ ಊರ್ಬಿಟ್ಟು ಮೈಸೂರಿಗ್ಹೋಗಿರೋ ವರ್ತ್ಮಾನಾನ ಮನೆಕಾವಲುಗಾರ, ತುರುಕ್ಸಾಹೆ ತೀಡ ಜಟ್ಟಿ ರಂಗಯ್ಯನ ಮುಖಾಂತ್ರ ತಿಳಿದು....ಅದ್ರ ಪಕ್ಕದ್ಮನೆ, ಈಗಿನ ಖಾಲಿ ಜಮೀನ್ ಮೇಲೆ ಆಗ ಇದ್ದ ಮಗ್ಗಲುಮನೆ. ಲೇವಾದೇವಿ ಸುಬ್ಬಣ್ಣನ ಮನೆ ಜಗಲೀಲಿ ಕೂತು... ನಾಸ್ಕೇಳಿದ್ದಾಗ...ದುಡ್ಡಿನ್ಮೇಲೆ ಆಶೆ ಇದುವರಿಗೂ ಇಲ್ದಿದ್ದೋನು...ಊರ್ಗೆಲ್ಲಾ ಜಿಪ್ರಣ ಅನ್ನಿಸ್ಕೊಂಡ ಸುಬ್ಬಣ್ಣನ್ನ ರಾಮೇಶ್ವರಕ್ಕೆ ರೈಲು ಛಾರ್ಜು ಕೇಳ್ದ...; ಮನೆಯಾತ್ನೋ...ಸಾವಿರಾಂತರ ರೂಪಾಯಿ...ಬ್ಯಾಂಕುಗಳ ಮೇಲೇನೂ ನಂಬ್ಕೆಯಿಲ್ದೆ...ಮನೇಲೇ ಇಟ್ಕೊಂಡು ಒಂದು ಬಿಡಿ ಕಾಸು ಖರ್ಚು ಮಾಡೋಕೆ ಓಜವೀತ ಕಾಸಿಗೆ ಕಾಸು ಕೂಡ್ಹಾಕ್ತಿದ್ದ ಲೋಭಿ...ಬೀದೀಲ್ಹೋಗೋ ಬೈರಾಗೀಗೆ ರಾಮೇಶ್ವರದ ರೈಲ್ ಛಾರ್ಜ್ ಕೊಟ್ಟಾನ್ಯೇ ? 'ನಾಸ್ತಿ ! ಹೊರಟುಹೋಗು' ಅಂದ. ಅದಕ್ಕೆ ಗೋಸಾಯಿ ಹಿಂದೀ ಭಾಷೇಲಿ 'ದುಡ್ಡಿಲ್ದಿದ್ರೆ ಬೇಡ. ದಾಹಕ್ಕೆ ಒಂದಿಷ್ಟು ನೀರು ಆದ್ರೂ ಕೊಡು' ಅಂದ. ಬ್ರಾಹ್ಮಣರ ಮನೆ, ಪಾತ್ರೆ. ಕಂಡೋರು ಕಾಣ್ದೋರ ಕೈಲಿ ಇಡೋದಿಲ್ಲ. ಅಂದದ್ದಕ್ಕೆ ಬಲಗೈ ಚಾಚಿ. 'ಈ ಅಂಗೈ ತುಂಬ ನೀರ್ಬಿಟ್ರೆ ಸಾಕು. ಇದೂ ಇಲ್ಲ ಅಂದ್ಯೋ...ನಾಳೆ ಯಮ ನರಕಕ್ಕೆ ಎಳೆದು ಕಾಸಿದ ಸೀಸ ನಿನ್ಗಂಟಲ್ಗೆ ಸುರ್ಯೋ ಶಾಪಾನ ಈಗ್ಲೇ ಕೊಡ್ತೀನಿ' ಅಂದ. ಜಗ್ಲೀಲಿ ಕೂತಿಧಾನೆ ಬೈರಾಗಿ. ಬೀದೀಲಿ ನಿಂತು ನೋಡ್ತಿಧೇವೆ ನಾವೆಲ್ಲಾ. ಗೋಸಾಯಿ ಬೆದರ್ಕೇಗೆ ಬೆಚ್ಚಿಬಿದ್ದು ಒಳಗ್ಹೋಗಿ ಒಂದ್ಪಂಚ್ಪಾತ್ರೆ ನೀರ್ತಂದು ಮುಂದೆ ಚಾಚಿದ ಆ ಗೋಸಾಯಿಯ ಬಲ ಅಂಗೈಯಲ್ಲಿ ಒಂದ್ನಾಲ್ಕೈ ದ್ಬೊಟ್ಟು ನೀರು ಬಗ್ಗಿಸ್ತಲ್ಲೇ 'ನಿಲ್ಸು ಬಸ್ ಬಸ್ !'—ಎಂದು ಎದ್ದುನಿಂತು ಮಡಚ್ತಾನೆ ಅಂಗೈನ ! ಆ ನಾಲ್ಕೈದ್ಬೊಟ್ಟು ನೀರು, ಪಾದರಸ ಎಗರ್ತಾಗೆ ಎಗುರುತ್ತೆ ಅವನ ಅಲ್ಲಾಡದ ಅಂಗೈಲಿ ! ಆ ನೀರು ಎಗರಿದ್ದಾಗೆಲ್ಲಾ ಹೆಜ್ಜೆಯಿಟ್ಟ ಮನೆ ಒಳಕ್ಕ್ಹೋಕ್ದ ಬೈರಾಗಿ. ಕಣ್ಣು ಮುಚ್ಕೊಂಡು. ಮೈಮೇಲೆ ಬಂದೋವ್ನ ಹಾಗೆ ತುರುಕ್ನಲ್ಲೇನೊ ಗೊಣಗುಟ್ಕೊಳ್ತಾ ಸುಬ್ಬಣ್ಣನ ಮನೆ ಕೋಣೆಯಲ್ಲಾ ಬೋನ್ನಲ್ಲಿ ಹುಲಿ ಓಡಾಡೋಹಾಗೆ ಸುತ್ತಾಡ್ತಿದ್ದ. ತುರುಕ್ಸಾಹೆ ತೀಡುವ ಸುಬ್ಬಣ್ಣ ಕಾಶೀಪತಯ್ಯನ ಮನೆ ಕಾವಲುಗಾರ ಜಟ್ಟೀವ್ರು ಮುದ್ಗ ರಂಗಯ್ಯನ್ನ ಕರೆದು 'ಅದೇನ್ಹೇಳ್ತಾನೆ ಕೇಳಿ ಹೇಳು' ಅನ್ನತ್ಲೂ...ಆ ಗೋಸಾಯಿ. ರಂಗಯ್ಯನ್ನ ಒಳಗೆ ಎಳಕೊಂಡು ಬಾಗಿಲು ಹಾಕಿ.—ಈ ಕಥೆ ರಂಗಯ್ಯ ಆಮೇಲೆ ಅಮಲ್ದಾರ ಕೋರ್ಟ್ನಲ್ಲಿ ಕೈಫೀಯತ್ ಕೊಟ್ಟ ಆಧಾರದ ಮೇಲೇನೇ ಹೊರಗ್ಬಿತ್ತು ಊರ್ಗೆಲ್ಲಾ...ರೆಕಾರ್ಡುಗಳು ಈಗ್ಲೂ ತಾಲ್ಲೂಕು ಆಫೀಸಿನ ಕಡತಗಳಲ್ಲಿ ತಯಾರಾಗ್ಬಿದ್ದಿವೆ ತನಿಖೇಗೆ—"ಇಸ್ ಮಕಾನ್ ಮೆ ಚಾಂದಿ. ಸುನ್ನ, ಹೀರಾ...ಕುಲ್ ನಿಧಿ ಹೈ. ಪೂಜ ಕರ್ಕೆ ನಿಕಾಲ್ನೇಕ ಉಮ್ಮೀದ್ ಹೈ. ಮೋಕ ಮತ್ತೇಯ ನಿಕಾಲ್ನೇಕ ತಾಖೀಖಾತ್ ಥೀ

ತಾಪಿತ್ ಥೀ ಪೈ ಮುರೆಘ; ಮಕಾನ್‌ಕಾ ಮಾಲೀಕ್ ಆದ ಆದ ಓಸ್ಸೇಕು ಮಂಜೂರ್ ಪೋತೆಪೀ.. ಪೂಜ ವಗೈರೆ ಚಿಲ್ಲರ್ ಖರ್ಚ್ ಛೋಡ್ತೇಪೀ...ನಿಧಿ ನಿಕಾಲ್ನೇಕೇಲಿಯೆ ಗೈರತ್ ಮುರೆಘ ಪೈ. ಮಗರ್ ಗರಜ್ ಏ ಬೊಮ್ಮನ್ಕು ಹೈ, ನಹಿ ತಲಾಷ್ ಕರೀಯೆ" ಅಂದ ಸಮಾಚಾರ ಸುಬ್ಬಣ್ಣನ ಕಿವೀಗೆ ಬೀಳೂತ್ಲೂವೇ...ರಂಗಯ್ಯನ ಮೂಲಕ ಆ ನಿಧಿ ಆ ಮುಂದಿ ನ್ಕೋಣೇರೇರೀಯೇ ಎಲ್ಲೋ ಹೂತಿರೋ ಸಮಾಚಾರ ಮಂಡೇಗ್ಬುತ್ತಿ...ನಿಧಿ ಹುಡ್ಕೊ ಗಲಾಟೇಲಿ ನೆಲ ಎಲ್ಲಾ ಅಗೀದ್ರೆ ಅಪಾಯ ಒಂದ್ಕಡೆ...ಅಗ್ಯೋದ್ರು ನಷ್ಟ ಒಂದ್ಕಡೆ...ಅಲ್ದೆ ಅಗ್ಬು ಸಿಕ್ಕಬಹುದಾದ ಗೋಸಾಯಿ ಪೇಳ್ತಿರೋ ಬೆಳ್ಳಿ, ಚಿನ್ನ, ರತ್ನಗಳ ಲಾಭ ಒಂದ್ಕಡೆ, ಎದ್ರೆದುರ್ಗೆ ತೂಗ್ತಾ ಪೇಚಾಡಿ ಕೊನೇಗೆ ಪೂಜೆ ಪುನಸ್ಕಾರದ ಖರ್ಚು...ಅಂದಾಜು ಹಾಕಿದ ಐದು ರೂಪಾಯಿ ಸಮೇತ...ಅಗೆದ ನೆಲಾ ನೆಲ್ಲಾ ತಿರುಗಿ ತುಂಬಿ ಸರಿಮಾಡೋ ಖರ್ಚು...ತಿಂಗಳಿಗೆ ಏಳು ರೂಪಾಯಿ ಸಂಪಾದ್ನೇಲಿ ಬದುಕಿರೋ ರಂಗಯ್ಯಂದೂ...ನಿಧಿ ಸಿಕ್ಕಿದ ಪಕ್ಷಕ್ಕೆ ರೂಪಾಯ್ಲಿ ಎಂಟಾಣೆ ತನ್ಗೂ, ಆರಾಣೆ ಗೋಸಾಯಿದೂ ಎರಡಾಣೆ ರಂಗಯ್ಯಂದೂಂತ ಕ್ಲಿಷ್ಟಿಸ್ಕೊಂಡು...ಸುಬ್ಬಣ್ಣನೇ ಹನ್ನೆರಡಾಣೆ ಸ್ಟಾಂಪು ಹಚ್ಚಿದ ಕಾಗದದಮೇಲೆ ಇದ್ನೆಲ್ಲಾ ಬರೆದು...ಅಕ್ಕಪಕ್ಕದ ಮನೆ ಒದ್ಬರಹ ತಿಳಿಯದ ಇಬ್ರು ದನ ಕಾಯೊ ಕೆಲಸ್ದವ್ರ ಹೆಬ್ಬೆಟ್ಟು ಗುರುತ್ನ ಸಾಕ್ಷಿ ಹಾಕ್ಕೊಂಡು...ಪ್ರಾರಂಭ...ಮಾರನೆದಿನ ಶುಕ್ರವಾರದಿಂದ ನಿಧಿ ಬೇಟೇಗೆ !!

ನೆಲವೆಲ್ಲಾ ನಾಲ್ಕಡಿ ಅಗೆದದ್ದಾಯಿತು...ಅಟ್ಟಸೂರು ಕಿತ್ತದ್ದಲ್ದೆ ಹೆಂಚು ಹೆಂಚು ಬಿಡ್ಸಿ ಬಿಡ್ಸಿ ನೋಡಿದ್ದಾಯಿತು. ಒಟ್ನಲ್ಲಿ ಏಳು ದಿವಸದ ಕೆಲ್ಸದ ಫಲ ಪೂಜ್ಯ. ಸುಬ್ಬಣ್ಣ ಷುರು ರಂಗಯ್ಯನ ಮೇಲೆ ರೇಗೋಕೆ. ಗೋಸಾಯಿನೋ "ಹೈ ! ಕಹ್ತಾಹೂಂ, ಹೈ ! ಯೇಹೀಖಾನೆ ಮೇಜ್ ಪೈ ! ಭೂಮಿಭೀ ಖಾಲಿ ! ಆಕಾಶ್ ಭಿ ಖಾಲಿ, ತಾಹಂಭಿ, ಹೈ ಇಸ್ಬೋಲೀಮೇಜ್ ಹೈ ನಿಧಿ" ಅನ್ನೋಕೆ ಷುರು ! ಇನ್ನು ಸುಬ್ಬಣ್ಣನೋ "ಹಿರಣ್ಯಕಶಿಪು ಸಾವ್ತಪ್ಪಿಸಿಕೊಳ್ಳೋಕೆ ಬ್ರಹ್ಮನ ಹತ್ತಿರ ವರ ಬೇಡ್ದಾಗ್ಗೆ ಆಕಾಶದಲ್ಲೂ ಇಲ್ಲ; ಭೂಮಿಲೂ ಇಲ್ಲ; ರಾತ್ರೀಲೂ ಇಲ್ಲ, ಹಗಲೂ ಇಲ್ಲ, ಒಳಗೂ ಇಲ್ಲ, ಹೊರಗೂ ಇಲ್ಲ" ಅಂತ ತೀರ್ಮಾನಿಸಿ ಸೂರನ್ನು ಸೋರೋ ಹಾಗೆ ಮಾಡಿ ನೆಲವನ್ನೆಲ್ಲಾ ಅಗೆದು...'ನನ್ಗತಿ ಯೇನು'ಂತ ಸುಬ್ಬಣ್ಣ. 'ತಡೀರಿ ಸ್ವಾಮಿ ಬೈರಾಗಿ ಚಪ್ಪಲ್ಲ ! ತಿಳಿದ ಮನುಷ್ಯ !...ಸ್ವಲ್ಪ ಸುಧಾರ್ಸ್ಕೊಳ್ಳಿ'ಂತ ರಂಗಯ್ಯ...ಅಷ್ಟರಲ್ಲೇ ಗೋಸಾಯಿ 'ನಿಧೀತೋ ಪೈ ! ಜಮೀನ್ ಬಗೈರ್, ಆಕಾಷ್ ಬಗೈರ್, ಯಹೀ ಖೋಲೀಮೇ ರಹ್‌ನಾತೊ...ಆಂ !...ದಿವಾರ್‌ಮೆ ರಹ್ನ !' ಅಂದು ನಾಲ್ಕು ಗೋಡೆಗಳಲ್ಲಿ ಒಂದೊಂದನ್ನೂ ನೆಲದಿಂದ ಸೂರಿನವರಿಗೂ ಏಣಿ ಸಹಾಯ ಇಟ್ಕೊಂಡು ಮುಷ್ಟೀಲಿ ಗುದ್ದುತಾ ಬಂದೂಬಂದೂ ಒಂದೊಂದು ಗೋಡೇಲೂ ಇದುವರಿಗೂ 'ಢಕ್ !' 'ಢಕ್ !' ಅನ್ನಿತ್ತಿದ್ದ ಮುಷ್ಟಿ ಹೊಡೆತ ಒಂದ್ಕಡೇಲಿ ಮಟ್ಗೆ 'ಢಂಗ್ !' 'ಢಂಗ್ !!' ಅನ್ನುತ್ಲೂವೆ...ಉಸ್ರು ನಿಂತ್ಹೋಯ್ತು ಸುಬ್ಬಣ್ಣನಿಗೆ. ಗೋಸಾಯಿಯೋ, ಕರೀಮೀಸೆ, ಕರೀದಾಡಿ ಮಧ್ಯೆ ತುಟಿಗಳು ಬಿಚ್ಚಿ ಬೆಳ್ಳಂ ಬೆಳ್ಗೆ ಹೊಳೀತಿರೊ ಹಲ್ಲು ವರಸೇನ ಕಿರೀತಾ...'ಯಹಾಂಪೈ !...ಅಭಿ ಲಾವ್ ಲೋಹೇಕ ಸಲಾಕ್, ಅವ್ರ್‌ಪಾನಿ !' ಅಂದ ! ಇನ್ನೇನು ಕಬ್ಬಿಣದ ಗಡಾರಿ, ಹಂಡೆ ತುಂಬ ನೀರು, ಒದಗಿಸ್ದ ಸುಬ್ಬಣ್ಣ. ಜಟ್ಟಿರಂಗಣ್ಣ, ಗೋಸಾಯಿ ಇಬ್ರೂವೆ ಒಬ್ಬರಿಗೊಬ್ರು ಸರ್ದಿ ಬದ್ಲಾಯಿಸ್ತಾ ಸರಾಸರಿ ಎರಡಡಿ ಯಾದ್ರೂ ಇದ್ದ ಗೋಡೇನ ಕೈ ಸೋಲೋವರ್ಗೂ ಕೊಯ್ದೋದು; ಸುಬ್ಬಣ್ಣ ನೀರೆರಚೋದು, ಹೀಗ್ಮಾಡಿ ಗಡಾರಿ ಕಬ್ಬಿಣ ಆ ಇಟ್ಗೆ ಗೋಡೆ ಹಾಸಿ ಲೋಹ ಲೋಹಾನ ತಾಕಿದ 'ಠಂಗ್ !' ಅಂಬೊ ಶಬ್ದ ಕೇಳ್ತೋ ಇಲ್ವೊ...ಸುಬ್ಬಣ್ಣ ಮೂರ್ಛೆ ಬಿದ್ದದ್ದು ಆಶ್ಚರ್ಯವಲ್ಲ !!

ಮಧ್ಯರಾತ್ರಿ ! ಕೋಣೇಲೊಂದೇ ದೀಪ ! ಗೋಸಾಯಿ ಅರಶಿನಾನೂ ನೀರೂ ಕಲ್ಸಿಟ್ಟ ಮಹಾಲಿಂಗನ ಮುಂದೆ ತುಪ್ಪದಲ್ಲಿ ಉರೀತಿರೋ ನೀರಾಂಜನ ಒಂದೇ ದೀಪ. ರಂಗಯ್ಯ ಹಂಡೆನೀರ್ನ ಸುಬ್ಬಣ್ಣನ ಮುಖಕ್ಕೆರಚಿ ಆತನ್ನ ಕೊಡವಿ ಕುಕ್ಕರ್ಸಿಸಿ. ಬಳಿಕವನೂ ಚೇತರಿಸಿಕೊಂಡು ಕಣ್ಣು ಬಿಡೋದಕ್ಕೂತ್ತಿಗೆ ಸರಿಯಾಗಿ. ಗೋಸಾಯಿ ಗೋಡೆ ತೂತ್ನ ವಿಸ್ತರಿಸಿ ಗೋಡೆ ಒಳಗೆ

ಕೈಬಿಟ್ಟು, ಬೆಳ್ಳೀ ತಟ್ಟೆಗಳು, ಚೊಂಬುಗಳು, ಪಂಚ್ಪಾತ್ರೆಗ್ಳು. ಪನ್ನೀರ್‌ದಾನಿಗ್ಳು...ಚಿನ್ನದ್ದೆ ಒಟೆ, ಡಾಬು, ವಂಕಿ, ಬಾಜಬಂದು, ಜೋಮಾಲೆ, ಕಾಸಿನ್ಸರ ಇವುಗಳ್ನೆಲ್ಲಾ ಒಂದು ಗುಂಪ್ಮಾಡಿ ಇನ್ನು ಇವುಗಳ ಮುಂದೆ ಕೆಂಪು ಪಚ್ಚೆ ಪದಕ. ಸೀಮೆ ಕಮಲದ ಬೆಂಡೋಲೆ. ಕಡಕು. ಮುತ್ತಿ. ಪೇಸರಿ. ನಾಗಮುರಿ, ಈ ಬಾಬ್ತುಗಳನ್ನೂ ಪೇರ್ಸಿ..."ಅಭಿ ಖಿಲಾಸ್ ಸಿಧಿ. ಅಭಿ ಅಂದಾಜ್ ತೋಲ್ಕೆ ಮೇರ ಹಿಸ್ಸ ದೇದೇವ್. ಮುರೆಖು ರಾಮೇಶ್ವರಂ ಜಾನೆ ದೇವ್" ಅಂದ. ಚೀತರಿಸ್ಕೊಂಡು. ಸುಬ್ಬಣ್ಣ ಸಿಕ್ಕಿದ ನಿಧೀಲಿ ಒಂದೊಂದು ಅಸ್ಬಾಬನ್ನೂ ಪರೀಕ್ಷಿಸಿ ಕೈಯ್ಯಲ್ಲಿ ಎತ್ತಿ ತೂಗಿ ಅಂದಾಜು ಮಾಡ್ತಾ... "ಈ ಒಡವೆಗಳ್ನ ಒಪ್ಪಂದದ ಪ್ರಕಾರ ಹಿಸ್ಸೆ ಹಾಕಿ ಈಗೀಗ್ಲೇ ಹಂಚ್ಕೊಳ್ಳೋದು ಅಸಾಧ್ಯ: ರಂಗಯ್ಯಾ! ನಾನ್ಹೇಳ್ದೇಂತ ಹೇಳಿ ಅಕ್ಸಾಲೆ ವೆಂಕಣ್ಣಾಚಾರೀನ ಕರ್ಕೊಂಬಾ. ಹೊತ್ತೇರಿದ್ರೂನೂವೆ...ತುರುತ್ ಕೆಲಸ. ಇಪ್ಪತ್ತು ರೂಪಾಯಿ ಗಿಟ್ಟೋ ಅವಕಾಶ. ವರಗಲ್ಲು ತಕ್ಕಡಿ ಸರ್ವಾನ್ನೂ ತರ್ಕೊಂಬಾ"ಂತ ರಂಗಯ್ಯನ್ನ ಸಾಗ್ಸಿ...ಆ ಸಿಕ್ಕಿದ್ನಿಧೀಮೇಲೆ ಸಿಗ ತಪ್ಪದೇನೇ. ಹೊರಗ್ಹೋಗಿ ಒಸಗ್ಯೂಡ ಒಂದು ಚಿಪ್ಪು ಬಾಳೆಹಣ್ಣೂ, ಪಂಚಪಾತ್ರೆ ಹಾಲನ್ನೂ ಗೋಸಾಯಿ ಮುಂದಿಟ್ಟು...ಅತ ಫಲಾಹಾರ ಮಾಡಿ ಸಾಬ್ರು ಹೇಳಿದ 'ಗೊಡಾಹ್ಕ'ನ ಅರಿಶಿನದ ಲಿಂಗದ ಮುಂದೆ ಬೆಳಗೋ ದೀಪಕ್ಕೆ ಹಾಕ್ಕೊಂಡು ಎರಡು ಮೂರು ದಮ್ಮು ಸೇದೋಷ್ಟ್ರಲ್ಲೇ ಅಕ್ಸಾಲೆ ಸಮೇತ ರಂಗಯ್ಯನೂ ಬಂದು...ಸರ್ವ ಪರೀಕ್ಷೇನೂ ಮಾಡಿ ಒಟ್ನಲ್ಲಿ ಒಡವೆ ಪಾತ್ರೆಗಳು ಎಲ್ಲಾ ಸೇರಿ ಸರಾಸರಿ ಹತ್ತುಸಾವಿರ ರೂಪಾಯಿ ಅಂತ ಅಂದಾಜು ಹಾಕಿ ಬಂದ ಶ್ರಮಕ್ಕೆ ಆ ಲಿಂಗದ ಎದುರ್ಗೆ "ಸತ್ರೂ ಈ ಸಮಾಚಾರಾನ ಹೊರಗ್ಹಾಕೋದಿಲ್ಲಾಂ"ತ ಶಪಥಮಾಡಿ ಸುಬ್ಬಣ್ಣನ ಕೈಯಿಂದ ಇಪ್ಪತ್ತು ರೂಪಾಯಿ ಇಸ್ಕೊಂಡು ಅವನು ಹೊರಟುಹೋದದ್ದೂ...ಅವನು ಹೋದ್ಮೇಲೆ...ಇವುಗಳ್ನೆಲ್ಲಾ ದುಡ್ಡಾಗಿ ಮಾಡೋಕೆ ಒದಗುವ ಅನಾನುಕೂಲಗಳ್ನ ಸುಬ್ಬಣ್ಣ ಯೋಚಿಸಿ ಮನೆ ಒಳಗ್ಹೋಗಿ ಕಬ್ಬಿಣದ ಪೆಟ್ಟಿಗೆಯಿಂದ ಐದು ಸಾವಿರ ರೂಪಾಯಿ ನಗದು ತಂದು ರಂಗೈನ ಕೈಲಿ ಸಾವಿರಾನೂ. ಗೋಸಾಯಿ ಕೈಲಿ ನಾಲ್ಕು ಸಾವಿರಾನೂ ಇಟ್ಟು ಒಪ್ಪಂದದ್ ಪ್ರಕಾರ ಅವರ್ನ ಒಪ್ಸಿ. ರಂಗಯ್ಯನಿಗೆ "ನಾನೂ ನನ್ನ ಹೆಂಡ್ತೀನೂ ನಾಳೆ ಮನೆ ಬಾಗಿಲು ಹಾಕ್ಕೊಂಡು ನಿಧಿ ಸಮೇತ ದೂರ ದೇಶದಲ್ಲಿ ಬಂಡವಾಳಾನ ಚಕ್ರ ಮಾಡ್ಕೊಳ್ಳೋಕೆ ಬೆಳಕು ಹರಿಯೋಕೆ ಮುಂಚೇನೇವೇ ಹೊರಟುಬಿಟ್ಟಿರ್ತೇವೆ. ಕೇಳ್ದೋರಿಗೆ... 'ನಮ್ಮಾಮನ್ಗೆ ಖಾಯಿಲೇಂತ ವರ್ತಮಾನ ಬಂದು ನಾವು ಹೊರಟ್ವಿ' ಅಂತ ಊರಿಗೆಲ್ಲಾ ಹೇಳೋದು ನಿನ್ನ ಭಾರಾ"ಂತ—ಹೀಗೆ ಹೊರಟದ್ದು ಲೇವಾದೇವಿ ಸುಬ್ಬಣ್ಣ. ಹೆಂಡ್ತಿ. ಸಿಕ್ಕಿದ್ನಿಧಿ—ಸಮೇತ ಬೊಂಬಾಯಿಗೆ, ಹತ್ತಲ್ಲ ಹದಿನಾಲ್ಕುಸಾವಿರ ರೂಪಾಯ್ಗೆ ಸಿಧೀನ ನಿಧಾನವಾಗಿ ಅಲ್ಲೀಯಲ್ಲೀ ನೋಡಿನೋಡೀ ಬಿಕ್ರಿ ಮಾಡಿದ್ದು ಬೊಂಬಾಯ್ನಲ್ಲಿ. ಅಷ್ಟು ದುಡ್ನೂ ಇಟ್ಕೊಂಡು...ಊರ್ಬಿಟ್ಟು ಹೋಗಿ ಮೂರು ತಿಂಗಳು ಆದ್ಮೇಲೆ ಬಂದು ರೈಲು ಗಾಡಿಯಿಂದ ಬುಳ್ಳಾಪುರದ ಸ್ಟೇಷನ್ನಲ್ಲಿ ಇಳಿಯುತ್ತಾದೆ... ತಯಾರು!!...ತೋಡಾಸಮೇತ ಇನ್ಸ್ಪೆಕ್ಟ್ರು!! ಇನ್ನೇನು ಹಾತ್ಬೇಡಿಗಳು ಹಾಕಿ...ಮೈಮೇಲಿದ್ದ ಬಟ್ಟೆ, ಜೊತೇಲಿದ್ದ ಪೆಟ್ಟಿಗೆ ಎಲ್ಲಾ ಜಪ್ತಿಮಾಡಿ...ಸಿಕ್ಕಿದ ಹದಿಮೂರು ಸಾವಿರದ ಒಂಭೈನೂರು ಚಿಲ್ರೆ ನಗದ್ನ ಪ್ಲಾಟ್‌ಫಾರಂನಲ್ಲೇ ಪಂಚಾಯಿತರೆದುರಿಗೆ ಮಹಜರ್ ಮಾಡಿ ಪೋಲೀಸ್ ಸ್ಟೇಷನ್ಗೆ ಕರೆದುಕೊಂಡು ಹೋಗ್ತಿದ್ದಾಗ ಸುಬ್ಬಣ್ಣ..."ಈ ದುಡ್ಡು ನನಗ್ಸಿಕ್ಕಿದ್ದು....ನಿಧಿ ಮೂಲ್ಕ ಸ್ವಾಮಿ! ನಿಧಿಮೂಲ್ಕ!" ಅಂದದ್ದಕ್ಕೆ ಆ ಪೋಲೀಸ್ ಇನ್ಸ್ಪೆಕ್ಟ್ರು "ನಿಧಿಯಿದ್ರೆ ಸುಬ್ಬಣ್ಣೋರೆ ಸಧ್ಯ ಸೀದ್ ಸೇರೋದು ಸರ್ಕಾರದ್ ಸನ್ನಿಧಿ" ಅಂತಂದು....ಸೇರಿಸ್ದ ಲಾಕಪ್ಪಿಗೆ. ದಂಪತಿಗಳ್ನ!

ಅದೇ ನಾನ್ಹೇಳಿದ್ದು ಶೆಟ್ರೇ. ಅದೆ. ನಿಧಿ ನಿಮ್ದಾದ್ರೂನೂವೇ. ನಿಧೀ ಸಿಕ್ಕಿದ ನೆಲವು ನಿಮ್ದಾದ್ರೂವೇ, ಸರ್ಕಾರಂಬೋ ಸನ್ನಿಧಿ, ಸಭಾಗಿ. ಸದಾ ಕಾದಿರುತ್ತೇಂತ!

ಶೆಟ್ರು : ಇಂಕಾ ಮಂದಟ್ಕಾಲೇದು ಎವಾರು ಚಪ್ಪೇದಿ. ಲೇವಾದೇವೀ ಸುಬ್ಬಣ್ಣುಡು ವಾಣಿಇಂಟಂಟ ಗೋಡಲೋ ಚಿಕ್ಕಿನ್ನಿಧಿ ವಾಡು ಅಮ್ಮೊಂಟೆ...ಪೋಲೀಸ್‌ವಾಳ್ಳು ದೇನಿಕಾವ ಲಾಂಟ?

ಭಟ್ರು : "ದೇನಿಕೀ"ಂತೀರ ಶೆಟ್ರೆ? ದೇನ್ಕೀಂದ್ರೆ—ಸುಬ್ಬಣ್ಣನಿಗೆ ತಿಳಿಯದ ಅಂಶಗಳು

ಏಷ್ಟೋ ಇಟ್ಬಿಟ್ರು. ಮೊಟ್ಟಮೊದಲು ಆ ಗೋಸಾಯಿ,...ದೇಶವೆಲ್ಲಾ ತಿರುಗಿ ಪಂಚಭಾಷೇನೂ ಕಲಿತು. ಕೊಂಚ ದಿನ ಗಂಧದ ಕಾಶಿಪತಯ್ನ್ಯನ ಮನೇಲಿ ಅಡಿಗೆ ಮಾಡಿಕೊಂಡಿದ್ದು, ಬರ್ತ್‌ಡೆ ಆದದ್ದು—ಗೊತ್ತಿಲ್ಲ ಸುಬ್ಬಣ್ಣನಿಗೆ...ಅಲ್ದೆ ಗಂಧದ ಕಾಶಿಪತಯ್ಯ ಹೆಂಡ್ತಿ ಸಮೇತ ಊರ್ಬಿಟ್ಟು ಹೋಗಿದ್ದಾಗ ಕಾವಲುಗಾರ ಜಟ್ಟಿ ರಂಗಯ್ಯ. ಮನೆ, ಪಾತ್ರೆ, ಒಡವೆಗಳು ಇಟ್ಟು ಚಬ್‌ಸಲಾಕಿ ಬೀಗ (Chubb's lock) ಹಾಕಿದ ಗೋಡೆ ಅಲ್ಮಾರೇನ ಅತ್ಕಡೆಯಿಂದ್ಲೆ ಒಡೆದು ಮಾಲ್ನ ಕದ್ದು ಬಿಕ್ರಿ ಮಾಡಿ ನಿಭಾಯಿಸ್ಕೊಳ್ಳೋ ಅನಾನುಕೂಲಗಳನ್ನೂ ಅಪಾಯಗಳನ್ನೂ ಗ್ರಹಿಸಿ...ಪರಿಚಾರಕನಿಗೆ ಗೋಸಾಯಿ ವೇಷ ಹಾಕಿ...ಅಲಮಾರೆಯ **ಇತ್ಕಡೆಯಿಂದ** ಸುಬ್ಬಣ್ಣನ ಸಹಾಯದಿಂದ ಕನ್ನ ಹಾಕಿ...ಸಾಮಾನುಗಳ್ನ ಬಿಕ್ರಿಮಾಡೋ ಜವಾಬ್ದಾರಿ **ಅವನ್ತ**ಲೇಗೆ ಕಟ್ಟಿ...ನಗದ್ನ ಕೈಗೆ ಹಾಕ್ಕೊಂಡು...ಒಟ್ನಲ್ಲಿ ಇವರಿಬ್ರೂ...ದೆಹಲಿ, ಕಾಶಿ, ಕಡೆ ಪರಾರಿಯಾಗಿ...ಪೋಲೀಸ್ ಕೈಗೆ ಸಿಕ್ಕೋ ಅಷ್ಟು ಹೊತ್ತಿಗೇ...ಸುಬ್ಬಣ್ಣ ಸರ್ಕಾರ ಹೇರಿಸಿದ ಆತಿಥ್ಯದ ಮೂರು ವರ್ಷದಲ್ಲಿ...ಎರಡು ವರ್ಷ ಅನುಭವಿಸಿ ಬಿಟ್ಟಿದ್ದ. ಯಾಕ್ಹೇಳ್ತೀನೇ! ನನ್ನ ಮನೆ, ನನ್ನ ಹೊಲ, ನನ್ನ ಗದ್ದೆ, ನನ್ನನಿಧೀಂತ ನಾವು ನಾವುಗಳು ಎಷ್ಟು ನಿರ್ಧರಿಸ್ಕೊಂಡ್ರೂನೂ, ಶೆಟ್ರೇ, ಈ ಹಾಳು ಸರ್ಕಾರ ತೋಡಾ ಸಮೇತ ತಯಾರಿ ತನ್ನ ಹಿಸ್ಸೇಗೆ !

೨

ಸಮುಶ್ಪೋಯಿನ ದಂಬ್ಡಿ

ಸೇರಿದೆ ಗೋಷ್ಠಿ—ಕಾಳಮ್ಮನ ಗುಡೀಲಿ. ದೊಡ್ಡುಟ್ಟಿ ಬೋರೇಗೌಡ ಎಕ್ಕಡ ಹೊರಗಿಟ್ಟು ಒಳಗ್ಬರ್ತ ಗುಡಿ ಹೊಸಲ್ದಾಟಿ ಒಳಗೆ ಹೆಜ್ಜೆ ಇಡತ್ಲೂವೆ, ಪಾದದ ಹೆಬ್ಬೆಟ್ಟು ಚಿಮ್ಮಿ ಎದುರು ಗೋಡೆವರ್ಗ್ಗೂ. "ಚಂಗ್ ! ಚಂಗ್ ! ಚಂಗ್ !" ಅಂತ ಶಬ್ದಮಾಡ್ತಾ ಎದುರ್ಗೋಡೆ ಸೇರಿ ನಿಂತ ಬಿಡಿಕಾಸ್ನ, ಬೆಲ್ಲದ ಕಂಟ್ರಾಕ್ಟರು ಗಡF'ಖಾನ್ ಸಾಹೇಬರು ಬಗ್ಗಿ ಎತ್ತಿ, "ಅರೇರೇರೇ ಏ ಕಾಸ್ ಕಹಾಂ ಆಯಾ ಯಹಾಂ" ಅನ್ನುತ್ಲೂವೆ, ಭಟ್ರು, "ಕಹಾಂ ಏನೂ, ಯಹಾಂ ಏನೂ; ಮಧ್ಯಾಹ್ನವೆಲ್ಲಾ ಪರೇಡಾಡ್ತ ಪಟಿಂಗ್ರು ಜೂಜಿನ್ಗಲಾಟೇಲಿ ಬಿಟ್ಬಿಟ್ಹೋದ ಬಿಡಿಗಾಸು ! ಶೇಕದಾರ್ ಶಾಮಣ್ಣೋರ ಕೈಗೇ ಕೊಡಿ. ನಮ್ಮ್ಯವರ ಹೆಸ್ರು ಹೇಳಿ...ನಮಗ್ಸಿಕ್ಕಿದ ಈ ನಿಧೀನ...ಸರ್ಕಾರೀಗೆ ಹಿಸ್ಸೆ ಕೊಡದೆ ಊರೊಳಗಿನ ಶ್ರೀಕಂಠೇಶ್ವರನಿಗೆ ಮಂಗ್ಳಾರ್ತೀಲ್ಹಾಕ್ಲೀ," ಅಂದ್ರು. "ಅಚ್ಛ ! ಹೋನೆದೇವ್" ಅಂತ ಖಾನ್ ಸಾಹೇಬ್ರು ಶಾಮಣ್ಣೋರ ಕೈಗೆ ಕೊಡೊ ಬಿಡಿಗಾಸ್ನ ಶೆಟ್ರು ಕಸ್ಕೊಂಡು. "ಮಂಗ್ಳಾರ್ತೀಕಿ ವೇಸ್ತಾರಾ ! ಐತೆ ಇಕ್ಕಡೀಯುಂಡ. ಅದೀ...ಮಂಚಿಕಾಸೂ" ಅಂತ ಕಿಸೆಯಿಂದ ಮತ್ತೊಂದು ಬಿಡಿಕಾಸ್ನ ಶಾಮಣ್ಣೋರ ಕೈಯಲ್ಲಿಟ್ಟು. "ದೀನಿ ವೇಯುಂಡ ಮಂಗ್ಳಾರ್ತೀಲೋ. ಸಮುಶಿಪೋಯಿನ ಕಾಸೂ! ದೇವುಣಿಕೀ....ಪರವಾಲೇದೂ! ಕಣ್ಣುನ್ನಾವಾ ಚೂಶೇಕೀ! ಲೇಕಾ...ಕೊನೇ ದಾನ್ಕೇಮಿ....ಅಂಗಡೀಕೆ ಪೋತಾಡಾ? ಮಂಚಿ ಕಾಸೂಂಟೆ....ಮನಕಿ ಉಪಯೋಗಮು...ಶ್ರೀಕಂಠುಣಿಕಿ ಕಾಸು ಎಟ್ಲುಂಟೇ ಯೇಮಿ?...ಜಗಮಂತ ವಾಣಿದೇ ಕದಾ?" ಅಂದ್ರು.

ಭಟ್ರು : ಶೆಟ್ರೇ! ಒಳ್ಳೇ ಕಾಸಿಗೆ ಸಮಕಲು ಕಾಸು ನೀವು ಕೊಟ್ಟದ್ದಾಶ್ಚರ್ಯವಲ್ಲಾ! ಸಮಕಲು ಕಾಸು ನಿಮ್ಹತ್ರ ತಯಾರಾಗಿದ್ದದ್ದು ಆಶ್ಚರ್ಯ!

ಶೆಟ್ರು : ಯಿಾಕಾಶ್ಚರ್ಯಮೇಮೋ...? ಮಾವಾಳ್ಳಕು ಲೇದೂ! ಮಾಕುಟುಂಬಮಂತಾ ಮುಂದಾಕಿ ವಚ್ಚೆಂದಿ. ಒಕ್ಕೇ ಒಕ್ಕ ಸಮುಶಿಪೊಯ್ಯಿನ ದಮ್‌ಬ್ಡಿನಿಂಚೇ! ನೇನು ಈ ಊರ್ಲೋ, ಮೀ ಎದ್ರೂಗಾನೆ. ಅಂಗ್ಡೀ. ಇಲ್ಲೂ. ವಾಕ್ಲು. ತೋಟಮು ಕಾಕ, ಇಂಟಾಡಿದಿ ಪೈನ ಉಂಡೇ ಸೊಮ್ಮು,

ದೀನಿಕಂತ ಅಸ್ತಿಭಾರಮು. ಮೇಮು ನಾಚಿನ್ನದಾಂಟ್ಲೊ ತಿರುಪತೀಕಿ ವೆಂಗಟರಮಣ ಸ್ವಾಮಿ ದರ್ಶನಾನ್ಕಿ ಪ್ರೋಯಿನಪ್ಪುಡು. ಮಾಯಕ್ಕ ಚೇತ್ಲೋ ಒಕ್ಕ ಸಮುತ್ಲೋ ಮಿನ್ಗಿಂಚಿ ಉಂಡನೋ ಇಪ್ಪುಡು ಈ ಮಂಚಿಸ್ಥಿತೀಲೋ ಉನ್ನಾನು ನೇನು!

ಗೌಡ : ಎಂಗಾದಾತು ಶೆಟ್ರೇ?

ಶಾಮಣ್ಣ : ಶೆಟ್ರು ಹೇಳೋದು, ಸಮುಕಲು ಕಾಸಿಂದ್ಲೇ ಅವರ ಸಂಸಾರವೆಲ್ಲಾ ಇಷ್ಟುಮಟ್ಟಿಗೆ ಮುಂದಕ್ಕೆ ಬಂದಿದ್ರ ಅಸ್ತಿಭಾರಾಂತ: ಚಿಕ್ಕಂದ್ನಲ್ಲಿ ಶೆಟ್ರು ಅವರ ಕುಟುಂಬಸಮೇತ ತಿರುಪತಿಗೆ ಯಾತ್ರೆ ಹೋಗಿದ್ದಾಗ ಅವರಕ್ಕಾವ್ರ ಕೈಲಿ ಒಂದು ಸಮುಕಲುದಮ್ಮು ಇಟ್ಟಿದ್ರಿಂದಲೇ. ಶೆಟ್ರಿಗೆ ಸಮುಕ್ಲಿರೋ ಮನೆ, ಬಾಕಿಲು, ದನ, ಕರು, ಅಂಗಡಿ. ತೋಟ, ಈ ಸಂಪತ್ತುಗ್ಳೆಲ್ಲಾ ಲಭಿಸಿದ್ದೂಂತ ಹೇಳ್ತಾರೆ.

ಗಡF' ಖಾನ್ : ವಾರೆ! ಯಾರ್!...ಏಕ್ ಸಮುಕಲ್ದಮ್ಮಿ ಬಸಿಯಾದ್ಲೆ ಬಂದೆ ಸೋಕ್ಯಾ... ನಿಮ್ದೂಗೆ...ಈಗ ಇರೋ...ಮನೇ ತೋಟ...ಯೆಲ್ಲಾ...

ಭಟ್ರು : ಸ್ವಲ್ಪ ಸುಧಾರಿಸ್ಕೊಳ್ಳಿ ಸಾಬ್ರೇ...ಶೆಟ್ರು ತಾವೇ ಹೇಳ್ತಾರೇ...ಅವರಕ್ಕಾವ್ರ ಕೈಲಿ. ತಿರುಪತಿ ವೆಂಕಟರಮಣಸ್ವಾಮಿ ಸನ್ನಿಧೀಲಿ. ಸಮುಕಲು ಕಾಸು...ಅದೇನ್ಕಥೆ ಶೆಟ್ರೇ... ಕೇಳ್ಬಹುದೇ...?

ಶೆಟ್ರು : ಅಡಕ್ಕಂಡ ಏಮಿ...ಅಡಗಂಡ...ಏನೇವಾಳ್ಳು ಉಂಡೇಟಪ್ಪು ಚೆಪ್ಪಡಾನ್ಕೇಮಿ ಅಭ್ಯಂತರಮು ನಾಕೀ ! ಪೆದ್ದ ಕಥ...ಐತೇನೂ ಚೆಪ್ತಾನು...ಕೂಚೊಂಡ !

ಎಲ್ಲರೂ ಕುಳಿತುಕೊಂಡು ಆರಾಮವಾಗಿ ಕೇಳುವರು.

ಶೆಟ್ರು ಕಥೆ

ಚಪ್ತಿತ್ನೇ...ತಿರುಪತೀಕಿ ಪ್ರೋಯಿಂಟ್ಮೀ ಅನಿ ! ಮಾಅಯ್ಯ. ನೇನು ಒಕ್ಕೇ ಕೊಡ್ಕು. ಮಾಯಕ್ಕ ಒಕ್ಕೇ ಕೂತ್ರು ; ಮಾಯಮ್ಮ ಪ್ರೋಯ್ಯಿ ಶಾನಾ ದಿನಾಲು ಐಯ್ಯಿಂಡ...ಮಂಗ್ಯಾರ್ತೀಕಿ ನಿಲ್ಚೊನ್ಕೀನುಂಡಾಮು...ಪೂಜಾರಿ ಕುಡಿಚ್ಕೈತೊಟ್ಟು. ಎದುರು ವರಸಲೋ...ಒಕ್ಕ ಮುಶಿಲಾಯನ. ಆಡ್ದಿ, ಒಕ್ಕ ಚಿನ್ನೋಡು ;—ಅಂದ್ರೂ ಮಾವಾಳ್ಳೆ—ಆ ಚಿನ್ನೋಡು, "ಮಂಗ್ಯಾರ್ತೀಲೋ ವಿಡಿಕಾಸುಂಟೇ ವೇಯಯ್ಯಾ"....ಅನೆ. ಮುಶಿಲಾಯನ. ತಿತ್ತಿ ವಿಪ್ಪಿ. ವಿಡಿಗಾಸು ತೀಟಿಕಿ ಕರ್ಪೂರ್ಮುರ್ತಿ ಕಾಲ್ತುಂಡೇ ತಟ್ಲೋ ವೇಸೇಲೋಪಲ್ನೇ. ಮಾಯಕ್ಕ..."ಮಂಚಿಕಾಸ್ಕೆ ತೀ...ಇಕ್ಕಡೀ ಯಂಡ !...ಮಂಗ್ಯಾರ್ತೀಕೀ ಸಮುಶಿಪ್ರೋಯಿನ ದಮ್ಮಡೀ ನಾದಗುಂದ್ರೀ...ನೇನಿಸ್ತಾ" ಅನಿ ಚಪ್ತೂನೇ, ಸಮುಶಿಪೋಯಿನ ಒಕ್ಕಾಸು ಆ ಮುಶಿಲಿವಾಣಿ ಚೇತ್ಲೋ ಪೆಟ್ಟೇದಾನ್ಕಿ ಪೋಯಿನ ಚೈನಿ. ಆ ಮುಶಿಲಾಮೆ ಬಿಗುವ್ವಗ ಪಟ್ಕೋನಿ..."ಉಷಾರು ಅಂಟೇ...ಇದಿ ! ಪಿಂಟೂ ಉಂಡಾರಾ ! ಎವ್ವರಿಂಟಿ ಪಡ್ಲೋ ಗೊತ್ಲೇದೂ !...ಅಯ್ತೆ ಇಟ್ಲುಂಡವಲ...ಮಸಿಲು ಕೊಡಾಲು! ವಿಚಾರಿಚ್ಚಂಡ" ಅನಿ ಮೊಗುಣ್ಣೆ ಮಾತೊಟ್ಟು ಪಬ್ಬಿ. "ದಾಮ್ಮಾ ಮಾಟಾಡ್ಕು ದಾ" ಅನಿ. ಈಡ್ಚೊಕ್ಕನೇ ಮಾಯಕ್ನಿ. ಇಂಕೇಮಿ ಆ ಮುಶಿಲವಾಡು ವಚ್ಚಿ ಮಾಯಮ್ಮಕಿ ಪ್ರಾಕಾರಾನಿಕಿ ತೋಡುಕೊನಿಪ್ರೋಯಿ. ಇದ್ರೂ. "ಪಿಸಿಪಿಸಿಪಿಸಿಪಿಸೀ" ಅನಿ ಅದೇಮಿ ಮಾಟ್ಲಾಡ್ತಾನಿರೋ... ಛತ್ರಮು ಮೇಮು ಚೇರಿತಿಮೋ ಲೇದೋ...ಮಾಯಪ್ಪ...ಚೆಪ್ಪೇ—"ಅದಿಮಾಟೇ ! ಮೀ ಅಕ್ಕುಕು ರೇಪ್ರ ತಿರುಪತೀಲೋನೇ ಪೆಂಡ್ಲಿರಾ ! ವೆಂಕಟರಮಣಸ್ವಾಮಿ ಮಹಿಮಾನೇ ಮಹಿಮ ! ಇದು ವೆಕ್ಕುರ್ತಿ ಅಲ್ಲುಡ್ನಿ. ವೆದ್ಕೀ ವೆದ್ಕೀ ಚಿಕ್ಕಾ ಚೈಚೈ ಪಿಸುಕ್ಕೊನಿ. ಕಂಡ್ಕು ಕಂಪ್ಕು ವಿಸ್ಕೋನಿ ಉಂಡಿನ ನನ್ನೀ ತಿರುಪತೀಕೇ ತೆಪ್ಪಿಚ್ಕೋನೀ...ಮನ ಅಂಡಾಳುಕಿ ಮಂಗ್ಯಾರ್ತೀಲೋ ಸಮುಶಿನಕಾಸು ವೇಶೇ ಬುದ್ದಿನಿಚ್ಚಿ ದಾನ್ನಿ ಚೂರ ಕೋಡಾಲುಗಾ ಚೇಸ್ಕೋವಲಾ ಅನಿ ಮನ್ಸೈಕಟ್ಟಿ ದರ್ಶನಾನ್ಕಿ ವಚ್ಚಿವುಂಡೇ ಬಲರಾಮಶೆಟ್ಟಿಗಾರು ಭಾರ್ಯ ತಲಕಾಯ್ಲೋ ಬುದ್ಧಿ ಪುಟ್ಟಿಂಚಿ...ರೇಪು ತೆಲ್ವಾರೆ ಬ್ರಾಹ್ಮಣ್ಣಿ ಪಿಲ್ಪಿಂಚಿ...ತನ ಸನ್ನಿಧಾನಮುಲೋನೇ ಲಗ್ನಮು ಚೇಪಿಚ್ಚೇ. ವೆಂಕಟರಮಣಸ್ವಾಮಿ

ಮುಹಿಮುನೇ ಮುಹಿಮು !" ಅನಿಂದಿ. ಇಂಕೇಮಿ ? ಪೆಂಡ್ಲಿ ಜರುಗೆ...ಸಾಂಗೋಪಾಂಗಮುಗ ! ಲಗ್ನಾನಿಕಿ ವಚ್ಚಿನ ಬ್ರಾಹ್ಮಣುಲಂತಾ ಏಮಿ ಘಾಟೀ ಅಂಟಾರು !...ಭೂರಿದಕ್ಷಿಣ ಇಚ್ಚೇತಪ್ಪುಡು, ಮಾ ಊರಿನಿಂಚೀ ತೆಚ್ಚಿನ ಸಮುಶಿಪ್ರೋಯಿಸ ಕಾಸುಲ್ಲೋ ಒಕ್ಕಟಿಕೂಡ ಖರ್ಚು ಕಾಲೇದು. ಮಾಂಗಲ್ಯಧಾರಣಮು ಐಯ್ಯೋ ಲೇದೋ, ಪ್ರಾರಂಭಮಾಯು ಜಗಡಾಲು ; ಮೊದಟಿ ಜಗಡಮು... ಮಾಂಸಪ್ಪಾ ಬಲರಾಮುಶೆಟ್ಟಿವಾಳ್ಳೂ ಮೇಳಮು ವಾಯಿಂಚಿನ ವಾದ್ಯಗಾರುಡುಪೈನ ನಕ್ಕೆಲ್ಲ ಕಟ್ಟಿ ಎಗಿರ್ರಿ ! ಗಲಾಟಪೈನ ಗಲಾಟ ! "ಮೇಳಮುವಾಡು 'ಇದಿ ನ್ಯಾಯಮಾ ಶ್ರೀರಾಮಚಂದ್ರ' ಅನೇ ಕೃತಿ ವಾಯಿಂಚಿಂದಿ ಅಮಂಗಳಕರಮು...ವಾದ್ಯಮು ವಾಳ್ಳ ಕೂಲಿ ಇಚ್ಚೇಲೇದೂ," ಅನಿ ಚೆಪ್ಪಿ. ಆ ಜಗಡಮು ನಿಲಿಪಿಚ್ಚೇದಾನಿಕಿ ಭಗೀರಥ ಪ್ರಯತ್ನಮಾಯು. ಆ ಗಲಾಟ ನಿಲಿಚಿನೋ ಲೇದೋ, ಬಲರಾಮ ಶೆಟ್ಟಿ...ಬ್ರಾಹ್ಮಣ್ಣಿ, "ಲಗ್ನಮು ಸಮಾಪ್ತಮಾಯ್ನ್ನ" ಅನಿ ಅಡಿಗಿ ಆತಡು "ಐಪೋಯು" ಅನಿ ಚೆಪ್ಪಿನೋ ಲೇದೋ...ಎಗಿರೆ....ಒಕ್ಕೇ ಎಗ್ಗ್ರು ದೂಲಾನ್ನಿ ! ಚಪ್ಪಾರು ಮಾಯಪ್ಪಣ್ಣಿ ಚೂಶೀ...."ಗೆಲಿಸ್ತಿಸಿರಾ ವೆಧವಾ ಗೆಲಿಸ್ತಿನೀ...ಎಕ್ಕಡ ವೆದಕಿನಾನೂ ಚಿಕ್ಕಕುಂಪಾ ಉಂಡಿನ ಕೋಡಾಲು ಇಕ್ಕಡ ಚಿಕ್ಕೆ !...ಚೂಡ್ರಾ ! ನೀ ಅಲ್ಲುಡೂ ಕಂಟ್ಕೀ ಲೇನಿ ಅಂಧುಡು !!!'' ಅನಿಯೆ. ಮಾಅಯ್ಯ ಪಕಾಪಕಾ ಅನಿ ನವ್ವಿ. ಸಂಬಂಧಿಕನ್ನ ಇಂಕಾ ಪೈಕಿ ಎಗಿರೀ. "ಮವರ್ನಿರಾ ವೆಧವಾ ಅಂಟಾವು. ಡಬ್ಬಲ್ ವೆಧವಾ !...ಸೋಲಿಪೋಯಿನ ಬಿಡ್ಡಿ ನೀದೀ ...ಸೂವು ಗೆಲಿಶಿ ಮುಂಡುಮೋಚಿತಿವೀ ! ಇಕ್ಕಡ ಚೂಡೂ...ಗೆಲಿಶಿನದಿ ಉಂಡನೀ !!" ಅನಿ ಚಪ್ಪ್ಟೆ. ಮಾಯುಕ್ಕ ತಲಪೈನ ಚೆಯ್ಯಿಪೆಟ್ಟಿ ಎತ್ತತಾಡೂ ಚೆಯ್ಯೀ ! ವೆಂಟಿಕಲಂತ ಒಕ್ಕೇ ಗಂಟ್ಗ ಒಚ್ಚೆಸ್ತ ಚೇತ್ಲೋ !! ನಾಟಕಂವಾಂಡ್ಲು ಆಡವಾಂಡ್ಳ ಪಾರ್ಟಿಕಿ ತಲಕು ಪೆಟ್ಕೋನೇ ಟೋಪನ್ನೂ !!। ಮಾಯುಕ್ಕಕಿ ಪುಟ್ಟಿನಪ್ಪಟ್ನಂಚಿ ವೆಂಟಿಕಲೇ ಲೇವು !! ಇಂಕೇಮಿ...ಮೋಸಾನಿಕಿ ಮೋಸಮು ! ಠಕ್ಕಾನ್ಕಿರಿಕ್ಕಿ ! ಎವರ್ನಿ ಎವರು ತಿಟ್ಟೇದಿ ?...

ಅಪ್ಪಟಿನಿಂಚಿ ಅಲ್ಲುಣ್ಣಿ ಚೈಪಟ್ಟಿ ಒಕ್ಕೊಕ ಆಸ್ಪತ್ರಕೂ ಒಕ್ಕೊಕ ವೈದ್ಯುಡ ದಗ್ಗಿರಾನೂ ಪಿಲಿಚಿಕೊನಿಪ್ರೋಯಿ ಎಂತೋ ಡಬ್ಬು ಖರ್ಚುಚೇಶ ಮಾಯುಪ್ಪ. ಅಯ್ತೇಯೇಮಿ ! ವಾಡು ಚಚ್ಚಿ. ಅಲ್ಲುಡು ಚಚ್ಚೇವರ್ಕು ಧೃತರಾಷ್ಟ್ರುಡೇ, ಮಾಭಾವ !

ಇದಿಕಾಕ ಮಾಯುಕ್ಕಕಿ. ದಾನಿ ಅತ್ತೆಮ್ಮ. ತಲಕಾಯಿಕಿ...ಕೇಶರಂಜನ್ನೇಮಿ. ಜಬಗುಸುಮೇಮಿ ...ಘೂಮಿಲೋ ಉಂದಿನದಿ ಲೇನ್ನಿ. ತೈಲಮುಲ್ಲಾ. ನೂನ್ಲೂ ತಲಕಾಯಿಕಿ ರುಬ್ಬೀರುಬ್ಬೀ. ಬುರುಡ ಪೈನ ಜಪ್ಪು ಎಗತ್ರೂ ಒಚ್ಚಿನೇ ಕಾಕ. ವಾಸನಕೀ ಒಕವೆಂಟಿಕನು ಲೇದು!...ಏಮಿ ರುಬ್ಬಿತೇ ಏಮಿ ...ಇಸುಕುಲೋ ಪಾತಿ ಕಟ್ಟಿ. ಗೊಬ್ಬಮು ವೇಸಿ. ವಿತ್ತ್ನಾಲು ವಿತ್ತಿ. ಎಂತ ನೀಳ್ಳು ವೇಸ್ತೇ ಏಮಿ ? ಅಟ್ಲನೇ ಮೊಗಡು ಉಂಡಿನಾನೂ, ಗೊಂತಲೋ ಮಾಂಗಲ್ಯಮುಂಡಿನಾನೂ ಟೋಫನ್‌ಲೋಪಲ್ಲೋ ...ಜೋಡಿ. ಮಾಯುಕ್ಕ ! ಪರಮಾತ್ಮುಣಿ ಲೀಲನೇ ಲೀಲ ! ಕಂಡ್ಲು ಲೇನಿ ಕೊಡುಕ್‌ಕೀ. ಕಂಡ್ಳು ರಾವಲಾ ಅನಿ ತಿರುಪತೀಕಿ ವಾಂಡ್ಲು ಯಾತ್ರ ಚೇಸಿಂದೇಮೋ ಸರೇ !...ಅಯ್ತೆ ಏಮಿ... ಆಡವಾಂಡ್ಲು ತಿರುಪತೀಕಿ ಪ್ರೋಯಿ ತಲಕಾಯಿ ಜೋಡಿಚ್ಕೋನೇದಿ ಕದ್ದೂ ! ಅಯ್ತೆ ಏಮು... ವೆಂಟಿಕಲು ಲೇಕ ಜೋಡಿಗ ಉಂಡಿನ ಮಾಯುಕ್ಕ ತಲಕಾಯ್ಲೋ, ವೆಂಟಿಕಲು ಪೆರುಗುವಲಾ ಅನಿ, ತಿರುಪತೀಕಿ ಪ್ರೋಯಿಂದಿ ಆಶ್ಚರ್ಯಮೂ !...ಲೇದೂ...ಅಲ್ಲುಣಿಕೀ ಕಂಡ್ಲೂ ರಾಕ. ಅಕ್ಕಕಿ ವೆಂಟಿಕಲೂ ಪೆರುಗಕ ಇದ್ದರಿಕೂ ಗಂಟೇಶಿನ ಪರಮಾತ್ಮುಣಿ ಲೀಲನೇ ಲೀಲ !

ಇಟ್ಲು ಮೋಸಮುಪೋಯಿನ ದುಃಖಮುಲೋನೇ ಚಚ್ಚಿಪ್ರೋಯಿರಿ ಮಾತುದ್ರೀನೂ, ಮಾಯುಕ್ಕ ಮಾಮಾ. ಅತ್ತ. ಭಾವಕಿ ಉಂಡಿನ ಆಸ್ತಿ ಪಾಸ್ತಿ ಚೂಸ್ಕೋನೇಕಿ ನೇನುಕಾಕ ವೇರೆವ್ವರೂ ಲೇರು. ಮಾಭಾವಕಿ ಲೇನಿಕಂಡ್ಲೂ ನೇನೆ, ಮಾಯುಕ್ಕಕಿ ಲೇನಿ ವೆಂಟಿಕಲೂ ನೇನೇ ! ಮೆಲ್ಲಿಮೆಲ್ಲಿಗ ಭಾವ್ರಣಿ ಅನ್ನೀ ಅಂತ ಚೇತ್ಕಿ ತೀಸ್ಕೊನಿ. ವಾಣಿ ವ್ಯಾಪಾರಮಂತ ನೇನೇ ಜರಿಗಿಸ್ತ ವಸ್ತಿ. ವಾಡು ಚಚ್ಚೇಟಪ್ಪುಡು...ಚಚ್ಚೇಕಿ ಇಷ್ಟಮು ಲೇಕ ಉಂಡಿನ ವಾಣ್ಣಿ ನೋಟ್ಲೋ...ನರಕಮು ತಪ್ಪಿಚ್ಚಿಕೋನೇ ದಾನ್ಕಿ..."ನಾರಾಯಣ" ಅನಿ. ಉಚ್ಚಾರಣ ಚೇಪಿಚ್ಚೇದೇ ಪೆದ್ದಪನಿ ಅಯ್ಪೋಯು !

ಪಾಪಾಪ ಪಂಡುಕೋ ಉನ್ನಾಡು..."ಅಯ್ಯೋ! ಪೋತಾನೇ! ಒಕ್ಕ ಜಿಡ್ಡನೂ ನಾಕಡುಪುಲೋ ಪುಟ್ಟಿಕ ಪೋತಾನೇ! ಈ ವೆಂಟಿಕಲು ಲೇಸಿ ಜೋಡಿನಿ ಪೆಂಡ್ಳಾಡಿನಪ್ಪುಡು...ಮೋಳಮುವಾಪು... "ಇದಿ ನ್ಯಾಯಮಾ" ವಾಂಚ್ಛೇ ಅಪ್ಪುಡೇ ಗೊತ್ತು...ಇಟೌಟ್ಟುತಾನೂ" ಅನಿ ಭಾವ ಒಕ್ಕಿತಟ್ಟು—

ಅಕ್ಕ!..."ಮೀರು ಚೆಪ್ಪಿನಾಯುಕಟ್ಟೇ ಕಂಡ್ಳುಲೇನಿವಾಣ್ಣಿ ಜ್ಜೆ ಪಟ್ಟಿನ ಪಾಪ ಏಧಿ ಗೊತ್ತುಂಡ್ಯೋನೇ ವಾಡು ವಾಯಿಂಚಿಂದಿ ಆ ಕೃತಿ" ಅನಿ ಮಾಯಕ್ಕ ಒಗತಟ್ಟು. ಈ ಇದ್ರ ಜಗಡಮು ಸಮಾಧಾನಮು ಚೇಸೇ ಲೋಪಲ, ಅಕ್ಕಪಕ್ಕಮುವಾಳ್ಳು ವಚ್ಚಿ ಹಜಾರಮುಲೋ ನಿಲುಚುಕೊನಿ, ನನ್ನು ಪಿಲಚಿ, "ಬಲರಾಮ ಶೆಟ್ಟಿವಾಳ್ಳ ಕೊಡುಕಿಕಿ... ಒಟ್ಳೋ ಇಟ್ಲ ಉಂದೇ? ...ವೈದ್ಯುಡ್ಡಿ ಪಿಲಿಪಿಚ್ಚಿ ಮಂದು ಇಪ್ಪಿಚ್ಚಕೂಡ್ದಾ"—ಅನಿ ನನ್ನು ದಬಾಯಿಂಚ್ರಿ. ನೇನೇಮಿ ಚೆಪ್ಪುದು? ಕಂಡ್ಳು ಲೇನಿ ರೋಗಿ ಉಂಟೇ ಏಮಿ. ಪೋತೇಏಮಿ! ಉಂಡಿನ ಅಸ್ತಿನಿ ಅನುಭವಿಂಚೇಕೇ ನೆತ್ತಿಲೋ ಎಪ್ಪುಡು ರಾಯಲೇದೋ. ಇಂಕ ಬದುಕಿ ಏಮಿ! ವಚ್ಚಿನವಾಳ್ಳಂತ... "ವೈದ್ಯುಡು ವಚ್ಚಿ ಚೇಸೇದೇಮುಂದೀ! ನಾರಾಯಣುನಿ ಪೈನ ಭಾರಮು ವೇಸಿನಾಮು! ವಾಡೆ ಇಷ್ಟಮೊಸ್ತ್ಲನೋ ಅಟ್ಲೌತಿಂದಿ! ಗಲಾಟ ಚೇಯಕ ಪೋಯಿರಾಂಡ!" ಅನಿ ತರಿಮಿತಿನಿ ಅಂದ್ರನೂ.

ಇಂಕೇಮಿ, ಭಾವಕಂತ್ಯಕಾಲಮು! ಪೋತಾ ಉಂಡಾಡು! ಮಾಯಕ್ಕ. "ಪೋತಾವೇ, ನೋಟ್ಲೋ 'ನಾರಾಯಣಾ' ಅನಿ ಚೆಪ್ತೇಗಾನಾ ಸದ್ಗತೀ." ಅನಿಂದಿ ಪಿಸ ಮಾಭಾವ. 'ಚಸ್ತೇ ಚಚ್ಚಿಪೋತಾನೋ ಏಮೋ' ಅನೇ ಭಯಮುಲೋ ಚಪ್ಪುಡು! ದಾನಿಕೊಕ್ಕ ಸೂತ್ರಮು ಚೇಸ್ತಿ. ಟೆಂಕಾಯಿ ನಿಂಚಿ ಒಕ್ಕ ಅಂತ ಪಿಂಜು ಪೀಕ್ಕೊನಿ ಭಾವಚೇತ್ಲೋ ಪೆಟ್ಟಿ. ಇಂಕೊಗಚೇತ್ಲೋ ಒಕ್ಕ ಅಣ ಪೆಟ್ಟಿ. "ಭಾವಾ. ನೀಕಿ ಜ್ಞಾನಮು ತಪ್ಪಿಂದಾ. ಲೇದಾ. ಚೂಸ್ತಾಮು!" ಈ ಚೇತ್ಲೋ ಏಮುಂದಿ?" ಅಂಟ್ನಿ. "ನಾರು" ಅನ್ನೆ. "ಆ ಚೇತ್ಲೋ?" ಅಂಟ್ನಿ. "ಅಣ" ಅನ್ನೆ—ರೆಂಡು ಚೇತ್ಲೂ ಜೋಡಿಚ್ಚಿ..."ರೆಂಡೂ ಚೇರ್ಚಿ ಚೆಪ್ಪು, ಚೂಸ್ತಾಮು!" ಅಂಟ್ನಿ. "ನಾರು ಅಣ! ಅಯ್ಯಯ್ಯೋ! ನಾರಾಯಣ ಅನ್ನಿಡಿಸ್ತೇ...ಇಂಕ ಐಪೋಯ!" ಅನುಂದೆ. ಪಾಪಮು... ಪ್ರಾಣಮು ಪೋಯ...ಮಾ ಬಾವ್ಕಿ.

ಇಂಕೇಮಿ! ಚೇಸೇದಂತಾ ಚೇಸಿ, ಆ ಊರ್ಲೋ ಉಂಡಿನ ಅಸ್ತಿ ಪಾಸ್ತುಲಂತ ಅಮ್ಮಿ ರೊಕ್ಕಮು ಚೇಸ್ಕೊನಿ ಅಕ್ಕ ಜೊತ್ಲೋ ಈ ಊರಿಕಿ ವೆಳ್ಳೇದಾನಿಕಿ ಎಕ್ಕಿಂಡಾಮು ರೈಲು! ಅಪ್ಪುಡು ಕೂಡ ಊರವಾಂಡ್ಲು ವಿಡುವಲೇ ನನ್ನು! ಅಪಿಗ್ಗೇ ಅಡಿಗಿರಿ! "ಏಮೋ. ಇಟ್ಲ ಐಪೋಯ! ಅಯ್ತೇನೂ ಒಕ್ಕ ವೈದ್ಯುಡುಗಾನಾ ತಮ ಭಾವ್ನಿ ಚೂಪುಂಟೇ...!" ಅನಿ.

ದಾಂಟ್ಲೋನೇ ನೇನು..."ಮೇಮೇಮಿ ಚೇಸೇದಿ?...ನಾರಾಯಣುಡು ಪೈನ ಭಾರಮು ಮೇಮು ವೇಸ್ತೇ...ಭಾವ್ನಿ ಭಾರಾನ್ನಿ ನಾರಾಯಣುಡು ನಲುಗರು ಪೈನ ವೇಶಿಡಿಚ!" ಅನಿ ಚಪ್ಪಿ. ಮಾಯಕ್ಕಿ ತೋಡ್ಕೊನಿ ಮಿಾ ಊರುಕೊಚ್ಚಿ. ವ್ಯಾಪಾರಮು ಪುರುಚೇಸಿ. ಪದಿ ಏಂಡ್ಲುಕು ಪೈನನೇ ಆಯ!

ಯಾಲ ಚಪ್ತಾನೂಂ...ಟೇ...ದೇವುಡುಗಾನಾ ದಯಪೆಟ್ಟೇ, ಸಮಶಿಪೋಯ್ನಿ ದಂಡ್ಲಲೋ ಉಂಡೇ ಮಹಿಮ ಸವರನ್...ಸವರನ್‌ಲೋನೂ ಲೇದೂ...ಅನೇದಾನಿಕಿ...!

ಅಕ್ಕಡಚೂಡಂಡ! ಸೂರ್ಯುಡು ಮುಳುಗುತೂ ಉನ್ನಾಡೂ! ಗಿರಾಕಿ ಕಾಂದು! ಕುರ್ರೋಡು ಒಕ್ಕಡೇ. ಊರೋಳ್ಳು ಘಾತುಕಲು' ಪೋದಾಮು...ರಾಂಡಾ!

೩

ಮುದ್ದೂ ಇಲ್ಲ ಕದ್ದೂ

ಪಾಡ್ಯಾನೋ ಬಿದಿಗೇನೋ ಶುಕ್ಲಪಕ್ಷ—ಶೆಟ್ರು ಕೊರತೆ ಕಾಳವ್ವನ ಗುಡೀಲಿ, ಗೋಷ್ಠಿ ಮುಂದೆ! ಶೇಕ್ದಾರ್ ಶಾಮಣ್ಣ "ಬೇಡ, ಬೇಡ!"ಂತ ಎಷ್ಟು ಬಡುಕೊಂಡ್ರೂವೆ...'ದೂಲ, ವಾಸ್ಕಾಲು, ಕಟ್ಕಗ್ಳು—ಎಲ್ಲಾ ಸಾಗ್ವಾನಿ, ಗೋಡೆಗ್ಳು ಭದ್ರ...ಸೂರೆಲ್ಲಾ ಮಂಗ್ಳೂರು ಹೆಂಚು, ನೆಲವೆಲ್ಲಾ ಕಡಪಕಲ್ಲು; ಆದ್ರೂ ನಾಲ್ಕುಸಾವಿರ ರೂಪಾಯಿ ಬಾಳೋ ಮನೆ, ಎರಡು ಸಾವ್ರಕ್ಕೆ ಸಿಕ್ಕೋವಾಗ ಯಾಕೆ ಬಿಡಬೇಕು ?...ದೆವ್ವ ಪಿಶಾಚೀಲಿ ನನಗ್ನಂಬ್ಕೆ ಇಲ್ಲಾ'...ಂತ ಮುಷ್ಕರ ಹಿಡ್ದು ಶಿವಲಿಂಗಪ್ಪನ ಮನೇನ ಕೊಂಡ್ಕೊಂಡ ಶೆಟ್ರಿಗೆ—,...ಆ ಹೊತ್ತಿನ್ಂದ ಈ ಹೊತ್ತಿನ್ವರಿಗೂ ಒಂದೇ ಗೋಳು!—ಅಸಲು ಇರ್ಲಿ, ಬಡ್ಡೀ ಕೂಡ ಹುಟ್ಟಲಿಲ್ಲ, ಬಾಡ್ಗೇ ಮೂಲ್ಕ!...ಇನ್ನು ರಿಪೇರಿ, ಸುಣ್ಣ, ಮುನಿಸಿಪಲ್ ತೆರಿಗೆ, ಹೀಗೆ ಕೈಕಚ್ಚಿದ್ದದ್ದು ಅಷ್ಟಿಷ್ಟಲ್ಲ! ಬಾಡಿಗೇಗೆ ಬಂದೋರು...ಶುಕ್ಲಪಕ್ಷ ವೆಲ್ಲಾ ಸಾವಧಾನವಾಗಿ ಇದ್ದು...ಕೃಷ್ಣ ಪಕ್ಷ ಹುಟ್ಟುತ್ಲೂ ಮೊದಲು ಗೊಣಗುಟ್ಕೋಕೆ ಪ್ರಾರಂಭ ಮಾಡಿ...ಕ್ರಮೇಣ ಗದರಿ...ಕೊನೇಗೆ ಅಮಾವಾಸ್ಯೆ ರಾತ್ರೀಗೆ, ಮನೇಲಿದ್ದೋರೆಲ್ಲಾ ಹುಚ್ಚು ಹಿಡಿದೋರಹಾಗೆ ನಡುರಾತ್ರೀಲೇ ಕಿರಿಲಿಕೊಂಡು ಬೀದೀಗೆ ಬಂದು, ಅಕ್ಕಪಕ್ಕದೋರ ಆಶ್ರಯದಲ್ಲಿ ಉಳಿದ ರಾತ್ರಿ ಕಳೆದು, ಮಾರನೇ ಬೆಳಿಗ್ಗೆ...ಮನೆ...ಬೀಗದ ಕೈ...ಬಾಡ್ಗೆ ಸಮೇತ...ಶೆಟ್ಟರಿಗೆ ಒಪ್ಸೋದು : ಶೆಟ್ರು, ಬೀಗದಕೈ ಸ್ವೀಕರಿಸಿ, ಮನೆಬಿಟ್ಟು ಹೋಗೋರಕೈಲಿ. "ಅಯ್ಯಿಂದಿ ಅಯ್ಪೋಯ ...ಪೋಯ್ನೆವಾಳ್ಳು ಪೊಯ್ಯೆಪೋತಾರು ತಾಮು. ಅಯ್ತೆ, ನಾಕಡುಪುಮೀದ ಕೊಟ್ಟೊದ್ದಂಡ... ದೇನಿಕಿ ಇಲ್ಲು ವಿಡಿಚಿ ಪೋತಾರೋ ಚಪ್ಪೊದ್ದಂಡ ಯುವ್ವರಿತೋನೂ!"ಂತ ಶಪಥ ತಕ್ಕೊಳ್ಳೋದೂ : ಇನ್ನು ಮೂರೋ ಆರೋ ತಿಂಗಳು ಮನೆ ಬಾಡ್ಗೆ ಇಲ್ದೇ ಖಾಲಿ ಬೀಳೋದು...ಮತ್ತೆ ತಿರುಗಿ ಯಥಾ ಪ್ರಕಾರ. —ನಾನು ಹೇಳಿದ್ಹಾಗೆ ಶುಕ್ಲಪಕ್ಷ; ಪಾಡ್ಯಾನೋ ಬಿದಿಗೇನೋ.

ಶೆಟ್ರು : ಕಾದಂಡೀ! ದೆಯ್ಯಾಲೂ ಪಿಶಾಚಲೂ, ಉಂಡ್ನೀ ಲೇಕಪೋನಿ! ರೊಂಡುವೆಯ್ಯಿ ರೂಪಾಯಿಲ್ಲು ಇಚ್ಚಿ ಕೊನಿನ ಇಂಟ್ಲೋ ಬಾಡಿಗಕಿ ಉಂಡೇವಾಳ್ಳನಿ...ವಾಂಡ್ಲು..."ಚೂಸ್ತಿಮಾ" ಅನಿ ಚೆಪ್ಪೇ ದೆಯ್ಯಾಲು...ಚೇತ್ಲೋ ಕೊಟ್ಟಿನಾ ?...ಕಾಳ್ಳತೋ ತನ್ನಿನಾ ?...ಕೊರಿಕಿನಾ ?... ಚಂಪಿನಾ ? ದೆಯ್ಯಾಲು ತಮಂತಕು ತಾಮು ಉಂಡಿನ, ವೀಳ್ಳು ವೀಂಡ್ಳಂತಕು ಬಾಡಿಗಿಸ್ತಾ ಉಂಡ ರಾದಾ ? ಪಿರಿಕಿಲು ಅಂಟೇ ಮೇಮು! ಬೆಲ್ಲಂ ಸಾಬು! ! ದೀನ್ಕೆ ಮಮ್ಮುಲ್ನಿ...ಹಿಂದೂಲ್ನಿ ಪಿರಿಕಿಲೂ ಅನೇದಿ...ಮಾರಂತ.

ಶಾಮಣ್ಣ :ಒಳ್ಳೇ ವಾದ ಶೆಟ್ರೇ ನಿಮ್ದು! ಕೈಯಿಂದ್ಲೂ ಹೊಡೀದೆ, ಕಾಲಿಂದ್ಲೂ ಒದೀದೆ, ಯಾರ್ನೂ ಕೊಲ್ಲೆ, ಇದ್ರೂನೂವೆ ದೆವ್ವ...ಮಲಗಿರೋವಾಗ ಬಾಗಿಲ ತಾಪಾಳಾನ ಅಲ್ಲಾಡ್ಸಿಯೋ... ಕಂಚಿನ ಜೋಂಪ್ನ ಉರಳಿಸ್ಯೋ...ಎಬ್ಸಿ...ಎದ್ದೋನು ದೀಪ ಹಚ್ಕೊಂಡು ಸುತ್ತಮುತ್ತ ನೋಡೋವಾಗ...ನಡುರಾತ್ರೇಲಿ...ಕಾಲಿಗೆ ಗೆಜ್ಜೆ ಕಟ್ಕೊಂಡು "ರಘಲ್ ರಘಲ್" ಅಂತ ಹೆಜ್ಜೆಗ್ಳಿಡ್ತಾ ಹಜಾರ ದಾಟಿ ತಾಪಾಳ್ನು ಹಾಕಿದ ಮುಂದಿನ ಬಾಗಿಲು ತೂರಿಕೊಂಡು ಹೋದ್ಹಾಗೆ ಒಬ್ಬ ಹೆಂಗ್ಸು ನಡುರಾತ್ರೆ ಅಮಾವಾಸ್ಯೇಲಿ ಕಂಡು ಬಂದ್ರೇ...ನಿಮಗೆ ಹೇಗಿರುತ್ತೆ ?...ಅದೇ ...ಬೇಡ ಬೇಡಾಂತ ನಾನು ಬಡ್ಕೊಂಡ್ರೂವೆ ಹುಚ್ಚುಹಠ ಹಿಡ್ದು ನೀವು ಕೊಂಡ್ಕೊಂಡ ಮನೇಲಿರೋ...ಐಬು !

ಶೆಟ್ರು : ಅಬ್ಬಬ್ಬಾ! ದೇವ್ನೇಗತಿ! ಅಟ್ಟಲ್ನಾ...ಗೆಜ್ಜುಲು ಕಟ್ಕೋನಿ ಕುಲ್ಕೇ ಅಡುದೆಯ್ಯಮಾ ಉಂದೇದಿ...ಆ ಯಿಂಟ್ಲೋ ?...ಅಯ್ತೇ...ಬೆಲ್ಲಂ ಸಾಬೂ!! ನೀ ಐಕಟ್ಟು ಯಿನುಪ್ರ ಗುಂಡಿಗ ವಾಡಿಗಕಿ ಉಂಟೇ ಅಮಾಸ್ ಅಮಾಷ್ಕೂ ರೆಯ್ಯಿರೆಯ್ಯಂತ ಒಕ್ಕ ಕಾಸಿವ್ವಕ ತಾಘ ಚೂಡವಚ್ಚನು ಕಾದ!...ಇಂಕ...ಪಾಡುತುಂದಾ ಆ ಆಡಿದಿ ?...

ಶಾಮಣ್ಣ : ಇಷ್ಟು ಮಾತೇಕೆ...ಇಷ್ಟೊತ್ತು ಸಪ್ತಮಿ ಚಂದ್ರ ಕಾಣೋವಾಗೂ ಅದೇ ಗಲಾಟೆ ಆ ಮನೇಲಿ. ಬೇಕಾದ್ರೆ...ಶೆಟ್ರೇ!...ಈ ಹೊತ್ತು ರಾತ್ರೆ ಅಲ್ಲೇ ಮಲಕ್ಕೊಂಡು ಕೇಳಿ ನೋಡಿ.

ಶೆಟ್ರು : ತಿರುಪತಿ ವೆಂಗಟ್ರಮಣಾ ಅಂಟು. ನಾಕ್ಕೇಲ ಈ ಗಲಾಟಲೋ ನೇನು ಆ ಪಾಡಿಲ್ಲು ಕೊಸಂದಿ ಬಾಡಿಗಕು ಇಚ್ಚಿ ..ಬಡ್ಕೇದಾನ್ಕೇ ಕಾಕ ನೇನುಂಟಿ ಅಕ್ಕಡ ಉನ್ನೇದಾನ್ಕಿ ಕಾದು! ಅದಿ ಉಂಡನೇ!...ಐತೆ...ವೀಕಂದಲಕೂ . ದಯ್ಯಾಲೂ..ಅಟು ಗಾಲಿನಾ ?... ಬೆಲ್ಲಂ ಸಾಬ್ಲೂ! ತಾಮು ಚೆಪ್ಪಂಡ!

ಗಡFಖಾನ್ : ದೆವ್ವ!....ಸೈತಾನ್! ....ಅಲ್ಲ್ಲಾ ...ಜಿಲ್ಲಾಲ್ ಬಲಿ ... ಹಮೇಷಿ ನಮ್ಮೂಗೇಲೂ ತುಮ್ಮೇಷೀ ನಿಮ್ಮೂಗೇಲೂ ..ಐತೆ. ಏಕ್ ಘೋಡಾ ಕಾಸಿ ಬೋಲ್ತಾಹೂಂ ಕೇಳೀಕೆ ಬೇಕೂ ನೀವು...

ಸಾಬರ ಕಥೆ

(ಭಟ್ಟರಿಗೆ) ಸ್ವಾಮಿ! ಪುಟ್ಟಮಲ್ಲ ಜಾಣ್ತಿ ನಹೀ ಆಪ್?.. ನಾನು ಗನ್ನ ಜಮಾನೆ ದಿಲ್ಲಿ ಕಮಾಯಿಸ್ಸಿ...ಬೇಪಾರ್, ಇಸ್ಮೆ ಸೊಬ್...ನನ್ಗೆ ದಳ್ಳಾಳ್ ಥಾ...ದಳ್ಳಾಳ್ ಇದ್ದ ಪುಟ್ಟಮಲ್ಲಪ್ಪ... ಅವನ್ಗೆ ಜೋರು ಔವ್ರ್ ಜೋಟ ಬಚ್ಚ ಮಗ ಇದ್ದ. 'ಮುದ್ದು' ಹೆಸ್ರು ಹುಡ್ಗಾಗೆ ಹೆಸ್ಸ್ರು; ದೇಖಿಯೇ!...ಹರ್ ಏಕ್ ಅಮಾಷ್ಯ ರಾತ್ ಪುಟ್ಮಲ್ಲಾಕೆ ಘರ್ ಸಾಮ್ನೆ ಹುಣ್ಸೇ ಜಾಡ್ಕೇ ಕೊಂಬೆಮೇಲೆ ಕೂತ್ಕೊಂಡಿ, "ಮುದ್ದು! ಮುದ್ದು! ಮುದ್ದು!" ಅಂತ ರಾತ್ ಸೊಬ್ ಅಲ್ಲಾಯ್ಸಿತಿತ್ತು...ಏಕ್ ಬಡಾ ಗುಗ್ಗು!...ಕ್ಯಾ ಬೋಲ್ತೇ ಕನ್ನಡ್ಮೆ ಸಾಮಿ ?

ಭಟ್ರು : ಪುಟ್ಟಮಲ್ಲಪ್ಪನ ಮನೆ ಮುಂದಿನ ಹುಣಿಸೇಮರದ ಕೊಂಬೇಲಿ ಕೂತ್ಕೊಂಡು ಅಮಾವಾಸ್ಯೆ ರಾತ್ರೀಯೆಲ್ಲಾ ಪುಟ್ಮಲ್ಲಪ್ಪನ ಮಗ ಕೈಕೂಸು...ಅದ್ರ ಹೆಸರ್ನ "ಮುದ್ದೂ! ಮುದ್ದೂ! ಮುದ್ದೂ!"ಂತ ರಾತ್ರಿಯೆಲ್ಲಾ ಕಿರುಲ್ತಿತ್ತು ಒಂದ್ಗೂಬೆ...ದೊಡ್ಡ ಗೂಬೆ...ಅಲ್ವೇ ಸಾಬ್ರೇ ?

ಶೆಟ್ರು : ಮಂದಟ್ಟಾಯು...ಚೆಪ್ಪಂಡ ಸಾಬ್ಲು...ಈ ಕಸಿ ದಯ್ಯಮುಲ ದಾರಿ ದೇನಿ ಕೊಚ್ಚಿನೋ ಆ ವೆಂಗಟರಮಣುಡಿಕೇ ವೆಲುಗು!

ಗಡFಖಾನ್ : ಜೀ ಹಾಂ! ಪಹಲಾರಾಮೇ ಗುಗ್ಗೂ...ಗೂಬೆ...ನಹೀಂ...ಸತ್ತು ಹೋಗೂದೂಗೆ...ನಿಷಾನಿ...ಗುರ್ತು ಆಯ್ತೆ. ಪುಟ್ಟಮಲ್ಲಪ್ಪ ಓ...ಬಿ ಚಾರಿ ಹಮ್ಕೋಂಡಿ ನನ್ಗೆ ಕೇಳ್ತಾನೆ ಗುಗ್ಗು ಅಲ್ಲಾಯಿಸ್ತದ್ಕೆ ಮತ್ಲಬ್! ನಾನು ಖಾಜಿಸಾಬ್‌ಗೆ ಕೇಳ್ದೆ. ಓ ಬೋಲ್ತಾಹೈ —'ಗುಗ್ಗು...ಕಬ್ರಸ್ತಾನ್ಮೆ...ಮಸಾಣ್ದಲ್ಲಿ ಮುರ್ದಾ ಹೆಣ...ತಿಂದು ಬದ್ಕೋ ಜಾನ್ವಾರ್. ಕೊಡಿ ಕೊಡಿ ಯಾರು ಯಾರು ತಿನ್ಸೋಕೆ ಬೇಕು ಅವರ್ಗೆ ಸಾಯೋಕೆ ಅವ್ವಲ್ ಖಬರ್ ಕೊಡಾಕೆ ಹೇಳ್ತೈತೆ! ಪುಟ್ಟಮಲ್ಲಾಕೆ ಬೇಟಾಕು ಖಾನೇಕ ಇರಾದ ಹೈ—ಪುಟ್ಟಮಲ್ಲಾಗೆ ಹೇಳು...ಏಕ್ ಅZಾಬ್...ಚೀಸ್ ಕಫ್ನದಲ್ಲಿ ಲಪಟ್ಕೇ...ಸುತ್ಕೊಂಡಿ...ಘರ್ಮೆ ಎಲ್ರೂ 'ಮುದ್ದು ಮರ್ಗಯಾ! ಮುದ್ದು 'ಮರ್ಗಯಾ'! ಅಂತ ಅಳ್ಕೊಂಡಿ ಕಪ್ಡಾಮೆ ಲಪ್ಟೇಸೆ ಚೀಸ್ ಮಸಾಣ್ಗೆ ತಕೊಂಡ್ಹೋಗಿ ಮಟ್ಟೀಮೆ ಮಿಲಾಯ್ಸಿ ಆಗಯಾತೋ...ಹೋ ಗಯಾ ಗುಗ್ಗೂಕಾ ಗಲಾಟಾ'—ಕರ್ಕೆ. ಮೈ ಖಾಜೀ ಮಾತು, ಪುಟ್ಟಮಲ್ಲಾಗೆ ಪೌಂಛಾಯ್ಸಿ...ಉಸೇಷಿ ವೈಸ್ಸಾಚ್ ಕಿಯಾ. 'ಘರ್ ಮೇ ಎದ್ದು ಎಲ್ರೂ "ಮುದ್ದು ಸತ್ತ! ಮುದ್ದು ಸತ್ತ!" ಅಯ್ಸ ಅಲ್ಲಾಯಸ್ತಾ...ಏಕ್...ಕ್ಯಾ ಬೋಲ್ತೇ ತುಮಾರಾಮೇ ?...ಹಾಂ! ಸೋರೇಕಾಯಿ ಲೇಕೇ...ರುಮಾಲ್‌ಮೇ ಲಪಟ್ಕೇ ಬಾದ್... ಸಾ... ಮನೆ ಎಲ್ರೂವೆ...ರೋತೇರೋತೇ ಮಸಾಣ್ಗೆ ಹೋಗಿ ಕಪ್ಡೇಕೆ ಸಾತ್ ಸೋರೇಕಾಯಿ ಮಟ್ಟೀ ಮಾಡ್ಬಿಟ್ಟೀ ಫಿರ್ ಆಗಯೇ...ಬಂದ್ಬಿಟ್ರು ಮನೇಗೆ. ಅವತ್ತು ರಾತ್‌ನಿಂದ ಬರೋಬರ್ ಗುಗ್ಗೂ ... ಅದೇ ಗೂಬೆ...ಅದೇ ಹುಣ್ಸೇ ದಖಾಡ್ಮೇ ಕೂತ್ಕೊಂಡೀ "ಮುದ್ದೂ ಇಲ್ಲ! ಕದ್ದೂ!— ಮುದ್ದೂ ಇಲ್ಲಾ. ಕದ್ದೂ!" ಅಯ್ಸಾ ಅಲ್ಲಾಯ. ಫಿರ್ ಪುಟ್ಟಮಲ್ಲಪ್ಪಾ "ಕ್ಯಾ ಬೋಲಾ! ಕ್ಯಾ

ದಿವಮ್ಮಾಕ್ ಜೇ ಗುಗ್ಗೂಕು! ಮುಮ್ಮೂಕು ಕನ್ಹೂ ಬಗೇಸೋ ಪಿಕ್ಚರ್ ಸಮಜ್‌ಲಿಯಾನಾ! ಕ್ಯಾ ಅಜಬ್ ಗುಗ್ಗೂ!" ಕರ್ಕೆ ಓ ಬೀಚಾರಿ ಫಾಬ್ರ ಹೋಕೆ, ಕಾವ್ ಛೋಡ್ಕೇ ಜೋರು ಬಚ್ಚೇಕೆ ಸಾತ್ ಗಾವ್ ಛೋಡ್ದಿಯಾ, ಮೈ ತೋ ಹೈರಾನ್‌ಹೂಂ...ಈ ಗುಗ್ಗೂಗೆ ಕೈ ಶಾಮಾಲುಂ ಹುವಾ ?..."ಮುದ್ದು ನಹಿ, ಕದ್ದೂ"....ಂತ...ದೆವ್ವ ಶೈತಾನ್ ಪೇಳಿ ಇರ್ಪೇಕು.

ಬೋರ : ಇದೇನ್ನಾಬ್ರೇ! ವಸ್ಕಿರಿಗೇನ ಯೇಳಿದ್ದು ಕತೆ!...ದೆವ್ವ...ಪಿಶಾಚಿ...ಮೋಹಿನಿ... ಮುನೀಸ್ವರ...ಯಾವಾಗಲಾರೂ ಕೇಳಿವ್ವಾ್ರ ? ಕಂಡಿವ್ವಾ್ರ ?

ಗಡ್‌ಫ್ ಖಾನ್ : ಇಲ್ಲ ಬೋರಣ್ಣ!...ಕಭಿ ನೋಡಿದ್ದಿಲ್ಲಾ ದೆವ್ವ. ನನ್ಗೆ ಕಾಣೆಸ್ಸಿದ್ರೇಭೀ ದೆವ್ವ ಇಲ್ಲಾನೇ ಇಲ್ಲಾ ಕರ್ಕೇ ಮೈ ಕೈಸ ಭಾಯಿಸ್ ಕರೂಂಗ!

ಬೋರ : ಕೇಳಿ ಸಾಪ್ರೇ...ಶೆಟ್ರೇ, ನೀವೂನೂವೆ ಕೇಳಿ ಭಟ್ರಿಗೂ ಶಾಮಣ್ಣೋರಿಗೂ ಓಟೋಟು ತಿಳಿದಿರಬೈದು ಅದ್ರೂ...

ಭಟ್ರು
ಶಾಮಣ್ಣ } —ಹೇಳಿ ಬೋರಣ್ಣೋರೆ ಹೇಳಿ.

ಶೆಟ್ರು : ಇದೇಮಿ! ವಿಪರೀತಮೈಪೋಯಿ! ಚಪ್ಪಂಡ ಗೌಡವಾಳ್ಳು! ನಾಕೇ...ಮಿ ಅಭ್ಯಂತರಮು ಲೇದು! ವಿನೇವಾಳು ಉಂಡೇವರ್ಕೂ ಚಪ್ಪೇವಾಳ್ಳೂ ಚಪ್ತಾನೇ ಉಂಟಾರು. ಅಯ್ತೆ ದೆಯ್ಯಮ್ಮೈತೇ ಏಮಿ! ಆಡದಿ ಅಷ್ಟೇ!—ಇಲ್ಲು ಬಾಡಿಗಕಿ ತೀಸ್ಕೋವುಂಟೇ ಪೊಗವಾಡು ಆಡು ದೆಯ್ಯಾನಿಕಿ ಬೆದರಿ ಇಲ್ಲಿಡಿಚಿ ಪೊಯ್ಯೇದಿ ಮೊಗತನಮಾ ? ಅದೀನು ..ಕಾಳ್ಳಕಿ ಗೆಜ್ಜಲು ಕಟ್ಟೋನಿ ಕುಲುಕೀ ಕುಲುಕೀ ತಾಫ ಚೇಸೇ ಆಡದೆಯ್ಯಮು ಉಂಡೇ ಇಲ್ಲಿಕಿ ಡಬ್ಬುಲ್ ಬಾಡಿಗ ಇವ್ವಲಾ ನನ್ನಿ ಅಡಿಗಿತೆ!...

ಬೋರಣ್ಣ : ಶೆಟ್ರೆ! ನೀವೇಳೋ ಅಂಗೆ, ಅಮಾಸೆ ಇಂದ ಏಳು ರಾತ್ರೆ ಕಾಲಿಗೆ ಗೆಜ್ಜೆ ಕಟ್ಕೊಂಡು ಯೆಂಗ್ಸು ಕುಣಿಯೋದು ನೋಡಾಕೆ, ಬಾಡ್ಗೆ ಕೊಟ್ಕೊಂಡು ನಿಮ್ಮನೇಲಿರಪೌದು!... ಆದ್ರೆ ನಿಮ್ಮನೆ ದೆವ್ವ ಅಂಗಲ್ಲ. ಆ ನಾಯಕ್ಸಾನಿ ಕುಣೀತಿರೋವಾಗ, ಕತ್ತು ಕುಯ್ಯೋಗಿ...ಕುದು ಗೋಲಿಂದ ಕಟಾಯಿಸ್ದಂಗೆ ಚಿಮ್ಕೊಂಡು...ರಕ್ತ ಮೈಯಲ್ಲಾ ಸುರೀತ...ಮೊಕ ಎಲ್ಲಾ ನಸ್ನಗ್ತಾ.... ತಾಫೆ ಕಟ್ಟೋದು ಒಂದು ಚೆಂದ!...

ಶೆಟ್ರು : ಏಮಿ! ಗೊಂತುಕೋಶಿ ಪೋಯಿ ರಕ್ತಮು ಕಾರುತುಂಟುಂಡ ಕುಲಕೇಟಪ್ಪಾ...

ಬೋರಣ್ಣ : ಆದ್ರೂನೂವೆ...ಐಬಿಲ್ಲ...ಅಪಾಯ ಇಲ್ಲಾ...ಮನೇಲಿದ್ದೋರ್ಗೆ...ಏಟು ಬೆದರಿದ್ರೂವೆ...ಇದುವರೆಗೂ ಒಂದು ಜೀವ ಸಾಯ್ಲಿಲ್ಲಾ ಶಿವಲಿಂಗಪ್ಪನ ಮನೇಲಿ!...ಈಗ ನಿಮ್ಮನೇಲಿ ಶೆಟ್ರೆ. ಈ ದೆವ್ವದ ಚರಿತ್ರೆ ನಮಗೆ ಗೊತ್ತು ಅಳಬರಿಗೆ. ಇವಳು ಊರಿಗೆ ಬಂದಾಗ ...ನಲವತ್ತು ವರ್ಷದ ಮಾತು ನಾನಾಡ್ತಿರೋದು ನಾನು ಪ್ರಾಯದ ಉಡ್ಗ. ಚಿಕ್ಕನಿಂಗಪ್ಪನ ಮನೆ ಮದುವೇಗೆ ಕರ್ಸಿದ್ದು...ಅವಳ್ನ...ಕಂಚಿ ಕಡೆಯಿಂದ ಅವಳು ಬಂದದ್ದು ಗೊತ್ತು ಊರ್ಗೆಲ್ಲಾ. ಓವದ್ದು ಗೊತ್ತಿಲ್ಲಾ. ನಿಂಗಪ್ಪನ್ಗೂ ಕಾಯಿಷ್ಟು! ಬೀಗ...ಕಾಫೀ ತೋಟದ ಕೆಂಚಪ್ಪನಿಗೂ ಕಾಯಿಷ್ಟು. ಇವ್ರಕ್ಕಿದ್ದಂಗೆ ಗುಮ್ಮ್ ನಾಯಕ್ಸಾನಿ. ಯೆಣಾನೂ ಸಿಕ್ಕಿಲ್ಲ ಇಲ್ಲಿ...ಕಂಪ್ಲೇಂಟೂ ಇಲ್ಲ. ಮಾದರಾಸು ಕಡೇಯಿಂದ ತಿಳಿದೂನೂವೆ ಕಯಾ ಡಿಸಾಕಾಗ್ದೆ ಕಣ್ಣು ಕಣ್ಣು ಬಿಡ್ತಿತ್ತು ಪೋಲೀಸು. ಆದ್ರೆ ಊರ್ಗೆಲ್ಲಾ ಗೊತ್ತು. ಲಕ್ಷಾಂತರ ರೂಪಾಯಿನ ಆಸ್ತೀನ ಕಳ್ಕೊಂಡು ಅರಾಜಾದ ಮನೆ...ನಿಮ್ಮ ಪಾಲಿಗೆ ಬಂತು ಶೆಟ್ರೆ! ಇನ್ನು ಕಾಪಿ ತೋಟ್ವೋ ಸೋ! ಮನೆ ಬಾಕ್ಲು ಮಕ್ಕಳು ಮರಿ ತೋಟದ ಸಮೇತ ಮಣ್ಣಾಗೋದ! ಆದ್ರೆ ಈ ಉಡ್ಗಿ ಅಮಾಸೆ ಬರುತ್ಲು, ಕತ್ತಿಂದ ರಕ್ತ ಸುರಸ್ತಾ... ಎಜ್ಜಾಬು..."ರಫಿಲ್! ರಫಿಲ್!"ಂತ ತಾಫಾ ಕಟ್ತಾ ಇವತ್ತಿಗೂವೆ...!

ಶೆಟ್ರು : ಚಾಲೂಂಟಿ...ಗೌಡವಾಳ್ಳು! ಚಾಲೂಂಟಿ!...ಐತೇನೂ ಇಂಟ್ಲೋ ಉಂಡೇ ವಾಳ್ಳಕಿ ಅಪಾಯಮು ಯೇಮಾನ ಚೇಸಿನ...ಆ ದೆಯ್ಯಮು ? ...ಪಾಬುಲು ಚೆಪ್ಪಿನ ಗೂಬ

ಪುಟ್ಟಮುಲ್ಲಪ್ಪನಿ ಬಿಡ್ಡ ಕೊಡಕು ಮುದ್ದೂನಿ ..ಕೊಡಕುನಿ ಕೊರಿಕಿನಾ ? ಒಟ್ಟೋ ಚೆಪ್ಪಾನು ..ದೆಯ್ಯಾಲು ದೇನಿಕಿ ಭೂಮಿಲೊ...ಉಂಡಿವೋ ದೇವುಣಿಕೇ ವೆಲುಗು...ಅಯ್ತೇ ದೆಯ್ಯಾಲ್ನಿಂಚೇ ಯೆವ್ವರಿಕೂ ಏಟು ಪಡಲೇದು ಕದಾ! ದೆಯ್ಯಮುಂಡೇ ಯಿಂಟ್ಲೊ ಉಂಟಿನವಾಳ್ಳು ಬೆದರಿ ಉಂಡಾರೆ ಕಾಕ—ಎವ್ವರೈನ ಚಚ್ಚಿರ...ಇದಿವರ್ಕೂ ?

ಬೋರಣ್ಣ : ಯಾಕ್ಲೆಟ್ರೀ? ದೆವ್ವ ಇರೋ ಮನೇಲಿ ಒಬ್ರಾನಾ ಸತ್ತಿದಾರಾಂತಲ್ವೇ ಕೇಳ್ತೋನು ನೀವು! ಒಂದಲ್ಲ, ಎಲ್ಡಲ್ಲ, ಅತ್ತಲ್ಲ, ಇಪ್ಪತ್ತಲ್ಲಾ—ತಿಳಿದು ಮಾತಾಡ್ತಿದ್ದಿ!—ಮೂವ ತ್ತೊಂಬತ್ತು ಜೀವ ತಿಂದ ಮನೆ ನಮ್ಮೂರೊಳ್ಗೇ ಅಯ್ತು!! ನನ್ನ ಪ್ರಾಯದಲ್ಲಿ..."ಸುಂಕದಕಟ್ಟೇ"ಂತ ಯೆಸ್ರು ಮನೇಗೆ; ಒತ್ತು ಮುಳುಗುತ್ಲೂ ಆ ಬೀದಿ ಬೀದೀನೆ ತಿರುಗಾಡಾಕೆ ಬೆದರ್ತಿದ್ರು ಗಂಡಸ್ರು! ...ಈಗ್ಲೂವೆ ಮನೆ ಆಳು ಬಿದ್ದಿದ್ರೂವೆ...ದರಣಯ್ನ ಓಣೇಲಿ ಕಾಲಿಕ್ಕೋರು ಇಲ್ಲ ನಮ್ಮೂರ್ನಿ!

ಶೆಟ್ರು : ಏಮಿ! ಸುಂಕಂಕಟ್ಟನಾ! ಊರು ಲೋಪ್ಲಾ! ಅದೆಟ್ಲಯ್ಯಾ! ಅದೇಮಿ ಸುಂಕಮು ! ?

ಬೋರಣ್ಣ : ಜೀವಾನೇ ಸುಂಕ. ದರಣಯ್ನೋರೂಂತ ಇದ್ರು ಶೆಟ್ರೆ...ನಲವತ್ತು ವರ್ಷದ ಹಿಂದೆ...ದೊಡ್ಡಮನತನ...ಈಗ ಅವರ ಹೆಸರಿಗೆ ಆ ಆಳುಬಿದ್ದ ಮನೆ ಓಣಿ ಅಷ್ಟೇ ಬಾಕಿ! ಆ ಮನೇಲಿ ಜನಗ್ಳು ತಂಗಿದ ಒಂದೊಂದು ರಾತ್ರೀನೂ ಒಂದೊಂದು...ಇಂಗೆ ಮುವ್ವ ತ್ತೊಂಬತ್ತು ಜೀವ ತಿಂದ್ಮೇಲೆ ಆ ಆಳುಮನೆ. ಅದ್ಕೇ ಸುಂಕದ ಕಟ್ಟೇಂತೆಸ್ರು ಮನೇಗೆ. ಯೋಳ್ತೀನಿ ಕೇಳಿ...

ಶೆಟ್ರು : "ವಿನುವಲಾ ಅನಿ ನಾಕೂ ಆಶ ಗೌಡವಾಳ್ಳು. ಅಯ್ತೆ ಪೊದ್ದು ಮುಣಿಗಿ ಶ್ಯಾನಾ ಸೇಪಾಯ ಅಮಾವಾಶ್ಯ ದಿನಮು. ಚೀಗಟಿ. ಅಂಗಡ್ಲೋ ಪಿಲ್ಲವಾಡು ಒಕ್ಕಡೇ ಇಂಟ್ಲೋನೂ ಅದೀನೂ ಏಕಾಂಗಿಕಾಕ ಇಕ್ಕಡಂತ ಕಟ್ಟ ಮೆಟ್ಲಲು ಅಂತೇಮಿ ಭದ್ರಮು ಕಾದು. ತಮ ಕಥ... ಮುಪ್ಪೈತೊಂಬಿದಿ ಜೀವಾಲ್ನಿ ಭಕ್ಷಣಂ ಚೇಸಿನ ದೆಯ್ಯಾಲು ಕಥ...ಎಲುಗುಲೋ ವಿನುವಲನೇಗಾಕ ...ಇಪ್ಪುಡು...ಇಂತಪೊದ್ಲೋ!...ಕಾವಲಿಶಿ ಉಂಟೇ...ಪೀಂಪ್ಮಂತಾ ವಿನನಿ....ನೇನು ಪೋತಾನು ...ಮೀಕೇಮಾನಾ ಭಯಮುಂಟೇ...ಉಂಟೇಯೇಮಿ...ಲೇಕಪೋತೇಯೇಮಿ...ಚೀರೇ ವಸ್ತಿಮಿ... ಮಳ್ಳ ಚೀರೇ ಪೊಯಿ ಇಳ್ಳು ಚೇರುತಾಮು....ಬೆದರುಪೊದ್ದಂಡ!...ಜೀವಾಲು ತಿನೇ ದೆಯ್ಯಮುನಿ ಕಥ ರೇಪು ವಿಂಟಾಮು. ನನ್ನು ಪಟ್ಕೋನಿ ರಾಂಡಾ."...ಎನ್ನುತ್ತಾ ಗಡಗಡನೆ ನಡುಗುತ್ತಿರುವ ಎರಡು ಬಾಹುಗಳಿಂದಲೂ ಸಾಬ್ರನ್ನೂ ಗೌಡರ್ನೂ ಒಂದ್ಕಡೇ, ಭಟ್ರನ್ನೂ ಶಾಮಣ್ಣೋರನ್ನೂ ಮತ್ತೊಂದು ಕಡೇ ಭದ್ರವಾಗಿ ಅಪ್ಪಿಕೊಂಡು...ಅವರ ಮಾತುಕತೆಗಳಿಗೆ,—"ನಿಲ್ಬಿಚ್ಚಂಡ ಅಂಟೇ! ಇಕ್ಕಡ ಯಾಲ ಮಾಟ್ಲು! ಮೊಬ್ಬುಲೋ ನನ್ನ ವಿಡುವಕ ಪಟ್ಕೋನಿ...ಚೆರುವುದಾಟಿ....ಊರ ಲೋಪಲ ಮಾಟ್ಲಾಡಿಕೊಂಟಾಮು"..ಎನ್ನುತ್ತಾ ಕಾರ್ತವೀರ್ಯಾರ್ಜುನನಂತೆ ಮಿಕ್ಕವರ್ನೆಲ್ಲಾ ಅಪ್ಪಿ ಕೊಂಡು ಅವರ ಸಹಾಯದಿಂದ ನಡುಗ್ತಿರೋ ತನ್ನ ಕೈಕಾಲುಗಳ್ನ ನೆಟ್ಟಗಿಡ್ತಾ ನಿಧಾನವಾಗಿ ಮನೇ ಕಡೇ ನಿಷ್ಕ್ರಮಿಸಿದ್ರು.

೪

ಸುಂಕದ ಕಟ್ಟೆ

ಯಥಾಪ್ರಕಾರವಲ್ಲ ! ನಾಟಕದವರು ನಾಚಿಕೆ ಪಡಬೇಕು ! ಅಂಥ ಸೀನು ಕಾಳಮ್ಮನ ಗುಡಿ ಮುಂದೆ !

ಶೆಟ್ರು : "ದ್ಯೂತಮಾಡ್ತುಂಡಾರು ದುಡ್ಡು ಪೆಟ್ಟಿ ! ನಳಮಹಾರಾಜು ರಾಜ್ಯಂ ಪೋಗೊಟ್ಟು ಕೊಸಿಂದುಂಡ್ನೀ...ಪಾಂಡವುಲು. ಒಕ್ಕರ್ನೊಕ್ಕರೂ ಪೆಂಡ್ಲಾಮ್ನು ಮರವಕ ಅನ್ಯಾಯಮ್ಮೆಯ್ಯಿಂದೀ ಉಂಡ್ನೀ. ಆಕಾಲಮುಲೋ ಸರ್ಕಾರಾ ? ಪೋಲೀಸಾ ? ಅಡುಗೇವಾಳ್ಳೆವರು ಏಸೇವಾಳ್ಳೆವರು ! ಇಪ್ಪುಡು. ಸರ್ಕಾರ ಡಬ್ಬು ಮಿಂಗ್ಕೊನಿ ಮೀರು ಉಂಡಿನಾನೂ (ಪೋಲೀಸ್ ಕಾನ್‌ಸ್ಟೆಬಲ್ ಪುಳ್ಳಯ್ಯನಿಗೆ) ಊರು ಪಟಂಗುಲಂತ ಪರೇಲ ಆಡ್ತೂ. ದೇವೀ ಗುಡ್ಲೊ, ಪಾಡಯ್ಯೇದಿ ಜೂಸ್ತಾ ಉಂಡೇದಾನ್ಕಾ ಪೋಲೀಸ್ಲು ಉಂಡೇದಿ ? ಮೀರು...ಮಾರಾಜ್ಲು ಡ್ರಸ್ಸು ವೇಸ್ಕೊನಿ ?"

ಪುಳ್ಳಯ್ಯ : ಅಲ್ಲ್ರೀ ಶೆಟ್ರೇ...ಯಾವ್‌ಸೆಕ್ಷನ್ ಮೇಲೆ ಅರೆಸ್ಟ್ ಮಾಡೋದು ನಾನು ? ಹಾಳುಬಿದ್ದ ಗುಡಿ. ಹೇಳುವರಿಲ್ಲ. ಕೇಳುವರಿಲ್ಲ. ಐವ್ವತ್ತುಜನ...ಪಟಂಗರೇ ಆಗ್ಲೀ ಪ್ರಭುಗ್ಳೇ ಆಗ್ಲೀ...ಇಸ್ಪೇಟು ಆಡ್ತಿದ್ರೆ...ನಾನು...? ?

ಶೆಟ್ರು : ಸರಿಪೋಯಿ ! ದಾನ್ಕೇ ಕಾನ್‌ಸ್ಟೇಬಲ್ಲು, ಕಾನ್‌ಸ್ಟೇಬ್ಲೇ ! ಇನ್‌ಸ್ಪೆಕ್ಟ್ರುಲು ಇನ್‌ಸ್ಪೆಕ್ಟ್ರುಲೇ ! ಒಕ್ಕು ಕುಕ್ಕಕಿಂದ ನೂರು ಗೊರ್ರಲು ಕುರಬೋಡು ಪೆಟ್ಟೇ ಐಕಟ್ಟು...ಒಕ್ಕ ಇನ್‌ಸ್ಪೆಕ್ಟರ್ ಕಿಂದ...ಮಿಮ್ಮಲ್ನಂತ ಪೆಟ್ಟುಂಡೇದಿ ಸರ್ಕಾರು ಎಂದು ಹೇಳುತ್ತಿರುವ ಪುಳ್ಳಯ್ಯನು ರೇಗಿ ಸೋಟಾವನ್ನು ಬೀಸುತ್ತ ಗುಡಿಯನ್ನು ನುಗ್ಗಲು ದೇವೀ ಸನ್ನಿಧಾನದಲ್ಲಿ ಜಪಾನ್ "ಇಮಿಟೇಷನ್ ಲಿಲಿ" ಕಟ್ಟನ್ನು ಹಂಚಿಕೊಂಡು ಮುಂದಿರುವ ಆದಿಶಕ್ತಿಯನ್ನು ತಿರಸ್ಕರಿಸಿ ಈಗಿಸೀಚೆಗೆ ನಿನ್ನೆ ಮೊನ್ನೆ ಹುಟ್ಟಿದ, ಕೇವಲ ಮಹಾಲಕ್ಷ್ಮಿಯ ದಯೆ ಹಾರೈಸುತ್ತಾ ಒದ್ದಾಡುತ್ತಿದ್ದ, ಪಟಂಗರು, ಕೈಲಿದ್ದ ಎಲೆಗಳನ್ನು ಎಸೆದು...ಹಿಮ್ಮಡಿ ಕಚ್ಚಿ ಬರುತ್ತಿರುವ ಪುಳ್ಳಯ್ಯನ ಸೋಟಾ ಏಟುಗಳನ್ನು ತಪ್ಪಿಸಿಕೊಂಡು ಚಿಮ್ಮುತ್ತಿರುವ ಕಾಲಿಗೆ ತಮಗಿಲ್ಲದ ಬುದ್ಧಿಯನ್ನು ಉಪದೇಶಿಸುತ್ತ ಕಂಬಿ ಕೀಳುತ್ತಲೂ...ಏಕಾಂಗಿಯಾಗಿದ್ದ ದೇವಿಯ ಗುಡಿಯನ್ನು ಶೆಟ್ರು ಪ್ರವೇಶಿಸಿ ಗೋಷ್ಠಿಯನ್ನು ಪೂರೈಸಲು ಮಿಕ್ಕ ನಾಲ್ವರು ಬರುವಷ್ಟರಲ್ಲಿ, ದಿವಾಕರನು ಖಾನ್‌ಸಾಹೇಬ್ರ ಆಲೆಯನ್ನು ಹಾಸಿ ಆಗತಾನೆ ಶಾಮಣ್ಣನವರ ಗದ್ದೆಯನ್ನು ಬೆಳಗುತ್ತಿದ್ದನು.

ಭಟ್ರು : ಇದೇನು ಶೆಟ್ರೇ, ಇನ್ನೂ ಐದು ಘಂಟೆಯಿಲ್ಲ ; ನೋಡಿದ್ವಿ ಪುಳ್ಳಯ್ಯ ಪಟಂಗರ್ನ ಅಟ್ಕೊಂಬರ್‍ತಿದ್ದದ್ದು ! ಸಾಹೇಬ್ರು ಆಲೇನೂ ಬಿಟ್ಟು...ಶೇಕ್ದಾರ್ರು ಆಫೀಸ್‌ನೂ ಬಿಟ್ಟು ನನ್ನೂ ಬೋರಣ್ಣೋರ್ನೂ...ನಮ್ಮೆಲ್ಲರನ್ನೂ ಸಂಪ್ರದಾಯ ತಪ್ಪಿ ಇಷ್ಟುಹೊತ್ಗೇನೇವೇ...ಸೇರೋ ಹಾಗೆ......?

ಶೆಟ್ರು : ಯೇಮಿಲೇದೂ, ನೆನ್ನ ಮುಪ್ಪೈತೊಂಬಿದಿ ಜೀವಾಲು ಮಿಂಗಿನ ದೆಯ್ಯಮು ಉಂಡೇ ಧರಣಯ್ಯಗಾರಿ ಯಿಲ್ಲು, ಪಾಡಯ್ಯಿಪೋಯಿನಿಲ್ಲು...ಕಥ ಚಪ್ತಾನು ಅನೆ ಗೌಡ್ಲು...ಏನೇದಿ ವಿನುವಲಾ...ಅಯ್ತೆ ನೆನ್ನೈಕಟ್ಟು ಮಬ್ಬುಲೋ ಲೇಕ...ಎಲುಗುಲೋನೇ ಏನಿ ಎಲುಗುಲೋನೆ ಇಂಟಿಕಿ ಪೋಯೇದಿ ಮಂಚಿದೀನಿ ಪಿಲ್ಚಿಂದಿ ಮಿಮ್ಮಲ್ನಂತ. ಯವರೇಮಿ ಚಪ್ತೇನೂ ಪ್ರಾಣ ಭಯಮು...ತಜ್ಞನ್ಮಮು...ಮನುಷಿಕಿ...ಕಾದಾ ಗೌಡೋಳ್ಳು !? ಚಪ್ಪಂಡ ಕಥ.

ಬೋರೇಗೌಡನ ಕಥೆ

ನಾನೇಳ್ದಂಗೇ...ಬಟ್ರಿಗೆ ಓಟೇ ಓಟು ಗೊತ್ತು. ಚಿಕ್ಕ ಐದ ಆಗ. ಶಾಮಣ್ಣೋರೂ ನಾನೂ ಪ್ರಾಯದ ಉಡುಗರು. ಸಾಬ್ರೆ ; ಈಗ ಕುಗ್ಗವ್ರೆ ಶಾಮಣ್ಣೋರು. ಆಗ್ನೋಡಿರ್‍ಬೇಕಾ ಅವರ ಜಿಸುಮು. ಉಕ್ಕು ಜಾತಿ ಕಾಲುಕೈಯ್ಯಿ ಗರ್ದನ್ನು. ಒಂದೇ ಗಲ್ಡಿ ನಾವಿಬ್ರೂ. ಕಲೀಫ್ ಪೀರ್‌ಪಾಚಂದು. ಧರಣಯ್ಯನೋರ್‍ದ್ದು ಎದುರು ಗಲ್ಡಿ. ಎಲ್ಲಾ ಗಲ್ಡೀನೂ ನಮ್ಮ ಕಲೀಫನ್ನ ಬುಡ್ರು. ಖಿಸಾಬ್ ಮುರ್ತುಜಾಲಿ ಅವಂದೊಂದುಗಲ್ಡಿ ಮುಸಲ್ಮಾನರ್‍ದ್ದು. ಇಜೀದಶಮಿ ದಿನ ನೋಡ್ಬೇಕ್ರ ದೊಡ್ಡಳೇ ಕುಸ್ತಿ. ನಲವತ್ತೆಂಟು ಜೋಡಿ ತೀರಿದ್ಮೇಲೇನೇವೇಯೇ ಮನೇಗ್ಬರೋದು. ಪರ್‍ಸಾದರ್‍ಸಾನೂ ಆದತ್ತು: ಗಲ್ಡಿ ಗಲ್ಡೀಗೂ ದುಸ್ಮನಿ ಯೇಟಿದ್ರೂನೂವೇ...ದೋಸ್ತೀನೂ ಇತ್ತು. ಈ

ಮೂರು ಗಲ್ಲಿಲೂವೆ ಕಲಾಪಿ ದರಣಯ್ಯನೋರ ಗಲ್ಲಿ ಕಲೀಫ ಫೇಕ್ ರಂಗಯ್ಯ. ರುಸ್ತುಂ. ಕುಸ್ತಿ ಆಗ್ಲಿ ಈಜೋದಾಗ್ಲಿ ಪಟ್ಟವರ್ಸೆ ಆಗ್ಲಿ...ಅವನ್ನ ಮಾರಿಸ್ಕೋರು ಒಬ್ರಿಲ್ಲ ಇಸ್ಪಿಟ್ಟಾಕಿಲ್ಲ. ಬಾರಿಲ್ದ ಕೋಲು ಕೈಲಿ ಇದ್ಬಿಟ್ರೆಗಾನ ಊರೆಲ್ಲಾ ಕಲ್ಲುಗಳು ಬೀರ್ತಿದ್ರೆ ಒಬ್ನೇ ಲಾಗ್ತೆ ಓಡಾಡಿಸ್ಕೊಳ್ಳೋನು ...ರುಸ್ತುಂ. ಆದ್ರೆ ದುಡ್ಕೋದು ಅವನ ಐಬು. ವೈನೂ. ಗುಂಡ್ಗೇನೂ. ಬಿಸ್ಕ್. ಓದುದಂಗೆ. ಛತ್ರದ್ಕೋಡ ತೊಟ್ಕೊಂಡು ಕಾಲ್ಗ. ಉಲಿಯಾಸ ಕಟ್ಟೈನೆ ಮೂರು ಗಲ್ಲೀ ಮುಂದೂನೂ. ಕುರಿಮರಿಗಳ್ನ ಬುಟ್ರೇ ಅಂಗಂಗೆ ಬಾಯಾಗೆ ಕಚ್ಕೊಂಡು ಛಿರ್ರಾಯಿಸ್ತಿದ್ದ...ಫೇಕ್ ರಂಗಯ್ಯ !

ಗಂFಖಾನ್ : ಹಾಂ ಬೋರಣ್ಣಾ. ಬಕ್ರಿಯೋಂಕೂ ದಾತೋಮೆ ಚಾಕ್ ಲೇಕೇ ಸಬ್ಬ ಬಚ್ಚನ್ ಮೆ ದೇಖ್ಯಾಹೂಂ ! ಥೇ ರುಸ್ತುಮೋ ಉನ್ ದಿನೋಮೇ...ಈವಾಗ ಹಂಗೆ ಯಾರೂ ಬೋರಣ್ಣಾ ?!

ಬೋರಣ್ಣ : ಈಗಲಾ !? ಅಂಚೇಕಡ್ಡೀ ಅಂಗೆ ಜಸ್ಟ್ ಇರೋ ಬಣಕಲ್ಲನ್ಸ್ ಕೈಲ್ಲಾ ಉಸ್ತಾದಗಳು...ಈ ಜೈಸ್ಕಲ್ಲೂ ಬಂದೂಕೂ ಬಂದ ಕಾಲ್ದಲ್ಲಿ...ಆವರಿದ್ಕೋಳ್ರು...ಜುಮಾರತ್ತು... Fಂತ್ಯ ; ನಮ್ಗಲ್ಲೀಲಿ ಮುರ್ತುಜಾಲೀನೂ ಇದ್ದ...ರಂಗಯ್ಯನೂ ಇದ್ದ. ಫಕ್ಕರ್ ಫಾತ್ಯಾಕೊಡಿಸಿ ಒರಗ್ಬಂದು...ಕೂತ್ವಿ. "ಇದ್ಯಾಕಿಂಗೇ"? ಅಂದ ರಂಗಯ್ಯ. ಪೀರ್ಸಾಬಾ "ನಮ್ಗಲ್ಲೀಲಿ ಆವತ್ತು : ಜುಮ್ಮಾರತ್ ಫಾತ್ಯಾ ತೀರ್ಸ್ಕೊಂಡು ದೀಪ ಆರ್ಸಿ ಒರಕ್ಬಂದು ಬಾಕ್ಲಾಕ್ಕೊಂಡು ಕೂತ್ಕೊಳ್ಳೋದು. ಗಲ್ಲೀಬಳ್ಗ ಅನುಮ ಭೀಮ ಇಬ್ರು ಲಡತ್ ಸದ್ದು ಕೇಳ್ತೈತೆ" ಅಂದ. ಯೋಳ್ತಾನೇವೆ ಒಳ್ಗ ಗರದನ್ಮೇಲೆ ಕಂಚಿ, ತೊಡೇಮೇಲ್ಕೈ, ಬುಜಕ್ಬುಜ, ಲಗಾಯ್ಸ್ಕೊಂಡು ದೊಡ್ಡೋಡಿ ಕುಸ್ತಿ ಆಗೋ ಸದ್ದು ಆಗ್ತಾಅಯ್ತೆ ! ಒಳ್ಗ ! ನಂಬ್ಕೆಯಿಲ್ಲ ರಂಗಯ್ಯನ್ಗ. "ಇದು ಸುಳ್ಳು ! ಏನೋ ಇತ್ತೆ ಶ್ರೆತ್ತು... ಸಾಬೀತಾಗ್ಬೇಕು ಈಗ !" ಅನ್ಕೊಂಡು ಒಂದೇ ಗುದ್ದು....ಬೀಗ ಸಲಾಕಿ ಸಮೇತ ಬೂಪ ತಿರುಗ್ಲಿ ಎಸ್ದು ಒಳಕ್ನುಗ್ದ ! ಬೆದರ್ಕೊಂಡು ನಿಟ್ಟುಸ್ರು ಬುಡ್ತಾ ಕೂತ್ಕೊಂಡಿದ್ದ ನಮ್ಗೆವೀಗೆ ಕೇಳ್ತಂತು ಒಂದೆಳ್ಡ್ ನಿಮಿಸ್ದಲ್ಲಿ ಒಂದ್ಕಿರ್ಲು...ರಂಗಯ್ಯಂದು "ಅಯ್ಯೋ" ಅಂತ. ಬೆಂಕಿ ಕಡ್ಡಿ ಗೀಚ್ಕೊಂಡು ಒಳಕ್ನುಗ್ಗಿದ್ವಿ. ದೀಪ ಅಚ್ಚಿದ್ವಿ. ಸುತ್ಮುತ್ತ ನೋಡಿದ್ರೇನೋ ಯಾವಾಗ್ಲೂ ಯಂಗೋ ಅಂಗೆ ! ಮಲ್ಕಂಬ ಇದ್ಕಡೇನೇವೆ. ಅಕಾಡಲಾಲ್‌ವಟ್ಟೀ ತುಂಬ ಬಾರ್ ಬಾರ್ ಅಗ್ಲ ಎಜ್ಜೆಗ್ಳು ಅನುಮಂತಂದು ಬೀಮ್ಸೇನಂದು. ಅಲ್ದೆ ಅವರಿಬ್ರೂ ಮೆಟ್ಟಿದ ಕಡೆಯೆಲ್ಲಾ ಬಿದ್ದ ಅಳ್ಳಗ್ಳು. ಆದ್ರೆ ಯಾವ ಜುಮ್ಮಾರತ್ತೂ ಇಲ್ಲದ್ದು ಒಂದು. ನಮ್ಗಲ್ಲೀಲಿ, ಗೋತ ಆಕ್ಟ ಸಾದ್ನೆ ಮೂಲೇಲಿ. ಯಿಣ ! ರಂಗಯ್ನೋಣ ! ಬಾಯ್ತುಂಬ ರಕ್ತ ! ಎದೆ ಎಲುಬೆಲ್ಲಾ ಚೂರ್ಚೂರು ! ಅಂಗಾತ ಬಿದ್ದವ್ನೆ. ಅವನ್ಮೇಲೆ ಬೆಟ್ಟ ಬಿದ್ದಿದ್ರೆ ಎಂಗೋ...ಅಂಗೆ ! ಇನ್ಯಾರೇನು ಮಾಡೋದು ! ಪೋಲೀಸ್ ಬಂದ್ರೆ ಯೇನು ಡಾಕ್ಟ್ರು ಬಂದ್ರೆ ಏನು ! ಗಲ್ಲೀ ಗಲ್ಲೀನೆ ! ಸಾಕ್ಷಿಗಳು ಒರ್ಗ. ಒಳಕ್ನುಗ್ದೋನು ಯಿಣ ! ಗಲ್ಲೀಲಿ ಯಾರೂ ಇಲ್ಲ ! ಮುಚ್ಕೊಂಡೋಯ್ತು. ಆದ್ರೆ ದರಣಯ್ನೋರು ತನ್ನ ಗಲ್ಲಿ ಕಲೀಫ ನಮ್ಗಲ್ಲೀಲಿ ಸತ್ತಾಂಬೊ ಸೇಡು ಇಟ್ಕೊಂಡು...ಕೇಸಾಕ್ದ್ರು ನಮ್ಮೇಲೆಲ್ಲಾ. ಊರೆಲ್ಲಾ ಅವರ್ಕಡೆ. ಆದ್ರೆ ಕಚೇರೀಲಿ ಕುಲಾಸೆ ನಾವೆಲ್ಲಾ ಆದ್ರೂನೂವೆ ಮೂವತ್ತೊಂಬತ್ತ್ದಿನ ಲಾಕಪ್‌ನಲ್ಲಿದ್ವಿ ನಮ್ಗಲ್ಲಿ ಬೋರೂ ಕಸಾಬ್ ಮುರ್ತಿಜಾಲಿ ಗಲ್ಲಿಯುವ್ರೂ. ಒಟ್ಟುಮ್ವತ್ತೊಂಬತ್ನ ದಿನ ಮಕ್ಳೂ ಮರೀ ಬುಟ್ಟು... ಒಬ್ಬನ್‌ಸಾಪ್ಗ ಮೂವತ್ತೊಂಬತ್ನ ಗಲ್ಕೋಗ್ತೇವ್ರೂ ಅಂಬೋ ಎದರ್ಕೇಲಿ ನಡುಗ್ತಾ ಬಿದ್ದಿದ್ವಿ ಲಾಕಪ್ ನಲ್ಲಿ. ಊರೂರೇ ದರಣಯ್ಯನ ಕಾಲಿಗ್ಬಿದ್ದು ಬೇಡ್ಕೊಂಡ್ರೂವೆ ಕೇಳವಲ್ಲ. ದುಡ್ಡು ನೀರು ಸುರಿದಂಗೆ ಸುರಿದು...ಮದರಾಸ್ ಕಡೆಯಿಂದ ಲಾಯ್ರುಗಳ್ ತನ್ಸಿ..."ನನ್ಗಲ್ಲಿ ಫೇಕ್ ರಂಗಯ್ಯ ಸತ್ತದ್ದಕ್ಕೆ ನಿಮ್ಮಬ್ರಗಲ್ಲೀನೆಲ್ಲಾ ಗಲ್ಲಿಗೆ ಸಾಗಸ್ದಿದ್ರೆ ಗಂಡ್ಸಲ್ಲಾ ನಾನೂ"ಂತ ನೀರು ಸುರಿದಂಗೆ ದುಡ್ಡುಸುರ್ಸಿ ನಡಸ್ದ ಮೊಕದ್ದಮೆ. ದೇವ್ರು ಏಟು ಐಸ್ವರ್ಯ ಕೊಟ್ರೂ...ಮಕ್ಳುಮರಿಯೋನು ...ತನ್ನಂಗೇ ಮಕ್ಳು ಮರಿ ಇರೊ ಗರೀಬರಮೇಲೆ ರೋಷ ಕಟ್ಬಾರ್ದು ! ದೇವರ್‌ದಯ... ನಮಗ್ನಾವೆ ಸಾಕ್ಷಿ...ಸೆಷನ್ ಕೋರ್ಟ್ನಲ್ಲಿ. ಕಾಲಿಗಲ್ಲಿ...ಒರಗ್ನಾವು. ಒಳಕ್ನುಗ್ಗೋನೊಬ್ಬ !... ಯೆಣಾನ ಅಜ್ಮಾಯಿಷಿಮಾಡ್ದ ಪರಂಗಿ ಡಾಕ್ಟ್ರು...'ಸೂರ್ಜನ ಮೇಲ್ಬಿದ್ದಿದ್ರೂ ಇಂಗ್ಮುರ್ಕಿಲ್ಲ ಈಟು

ಗಟ್ಟಾಗಿದ್ದ ಮನಸ್ಸನಜಾತಿ ಎಲ್ಟುಗ್ಳು'ಂತ ಕೈಪೀತು...ಇನ್ನೇನು ಕುಲಾಸೆ ನಾವೆಲ್ಲೂವೆ. ಅವತ್ತಿಂದ ಅದೇನ್ಪಿಶಾಚಿ ಬಿಡೀತೊ ದರಣಯ್ಯನ್ನ, ಅವನ್ಮನೆತನಾನೆ ಮಣ್ಣು. ನೆನ್ನೆ ಯೇಳ್ದಂಗೆ ಆ ಓಣಿ, ಆ ಅರ್ದನಾರ್ದ ಸುಂಕದಕಟ್ಟೆ...ಮೂವತ್ ನಲವತ್‌ಜನ ಅಗ್ಲೂ ರಾತ್ರೀ ಎರಡೊತ್ತೂನೂವೆ ಒಟ್ಟೆ ತುಂಬ ಉಂಡು ಕೈತೊಳೀತಿದ್ದ ಆ ಮನೆ ಯೆಳ್ಡೀ ಅಲ್ದೆ, ಮೂವತ್ತೊಂಬತ್‌ಜೀವ ಓದ ಆ ಮನೆ, ಈಟೆ ಬಾಕಿ.

ಶೆಟ್ರು : ಅದ್ಸಿ ಯೇಮಿ...ಮುಪ್ಪೈತ್ತೊಮ್ಮಿದಿ ಜೀವಾಲು ಫಡ್ಚಾನಾ...ಆ ಯಿಂಟ್ಲೋ?

ಬೋರಣ್ಣ : ಹೂಂ, ಅದೇ ಕತೆ ಯೇಳೋದು ನಾನು.

ಶೆಟ್ರು : ಯೇಮಿ ಒಕಿಂಟ್ಲೊ ಮುಪ್ಪೈತ್ತೊಮ್ಮಿದಿ ಪೀನಿಗಿಲಾ! ದೇವುಡೇ ಗತಿ! ಗೌಡ್ರು, ಚಪ್ಪೇದೈತೆ...ವೇಗ್ರ ಚಪ್ಪಂಡ...ಕಥ.

ಬೋರಣ್ಣ : ಮೂಪತ್ತೆಂಟೆಣಗ್ಳು ಬಿದ್ದಿದ್ದು ಕೇಳಿವ್ನಿ...ಮನೆಯಿಂದೊರ್ಗ್ಗೊಟ್ರ್ ಅಮಲ್ದಾರ್ರು ಪಂಚಾಯ್ತಿ ಬುಟ್ಟು ತನ್ಖೆ ಮಾಡಿ ಮಸಾಣಕ್ಕೋ ಮಣ್ಣಿಗೋ ಸಾಗ್ಸಿದ್ದು ನೋಡಿವ್ನಿ. ನನ್ಗೆ ಖುದ್ದಾಗಿ ತಿಳ್ದು ಓದ ಮೂವತ್ತೊಂಬತ್ನೇ ಜೀವದ್ಕತೆ ಯೇಳ್ತಿರೋದು ಈಗ. ಇಲ್ಲಿರೊ ಈ ನಮ್ಮ ಸಾವುಣ್ನೋರು ಒಬ್ರೇ ಸಾಕ್ಸಿ...ಒಂದ್ರಾತ್ರಿ ನಮ್ಕಣ್ಣೆದ್ರುಗೇನೇ ಒಂಜೀವ ಓದ ನನ್ಕತೇಗೆ.

ಫೇಕ್ ರಂಗಯ್ಯ ಸತ್ತು ಒಂದ್ವಾರೊಳ್ಗೆ...ನಾವೆಲ್ಲಾ ಲಾಕಪ್‌ನಲ್ಲೇ ಇದ್ವಿ...ದರಣಯ್ಯನ ತಮ್ಮನ ಮದುವೆ ಆದ ರಾತ್ರಿ ಮನಿಕ್ಕೊಂಡವ್ರೆ ನೂರಾರ್ ಜನ. ಬೆಳಿಗ್ಗೆ ಏಳೊತ್ಲೂ ಮದವಣಿಗ-ಮದವಣಗಿತ್ತಿ. ಬೀಗ-ಬೀಗ್ತೀರು ಆರು ಜನ ಒಟ್ನಲ್ಲಿ ಯೆಣಗ್ಳು ಬೆಳಕರೀತ್ಲೂವೆ! ಅಪ್ನೂ, ಅಮ್ಮೂ, ತಮ್ಮೂ, ಒಸೆಂಡ್ತೀನೂ, ಅವಳಪ್ನೂ, ಅಮ್ನೂ, ಮಸಾಣಕ್ಕೆ ಸಾಗಿಸ್ತಿದ್ದಾಗ್ಲೇ... ಶ್ರೀಕಂಟದೇವ್ರ ಪೂಜಾರಿ ಬಡ್ಕೊಂಡ! "ಮನೆ ಬುಟ್ಬುಡು ಆ ಮನೇಲಿ ಒಂದ್ರಾತ್ರಿ ಇರ್ಬ್ಯಾರ್ದು"ಂತ. ದರಣಯ್ಯನಟ ಕೇಳ್ಲಿಲ್ಲ. ಮಾರನೆ ಬೆಳಿಗ್ಗೆ ಎಂಡ್ತೀನೂ ಮಗನೂ...ಒಬ್ನೇ ಮಗ...ವಾಂತಿಬೇದೀಲಿ ಫಟ್ಟ. ಮನೆ ಬಿಟ್ಟ ಆ ಮೇಲೆ. ಅಂಗೋ ಇಂಗೋ ಮುವ್ವತ್ತೇಳ್ಜನ ಒಟ್ಟು ತಿಂದದ್ದು ಬಲಿ ಆ ಮನೇಲಿ ಇದ್ದ ಭೂತ. ಅಟೋತ್ಗೆ ದರಣಯ್ಯನೂ ಇಲ್ಲ; ಮನೆಯೋರೂ ಇಲ್ಲ. ಅವರ ದಾಯಾದಿ ಚನ್ರಾಯ್‌ಪಟ್ನ! ವಾರಸ್‌ದಾರ...ಮನೆ ಮಾರಾಕೋಗಿ ಕೊಂಡ್ಕೊಳ್ಳೋಯರ್ಯಾರೂ ಬಿಲ್ದೆ ಮನೇಸ್ಕೋಳಸ್ಲೇಕೂಂದ. ಅವನಿಳ್ದಿದ್ದದ್ದು ಊರು ಮುಂದಿನ ಗಂಧದ ಕಾಶಿಪತಯ್ಯನ ಛತ್ರ. ಛತ್ರದ ಕಾವಲುಗಾರ ಏಳಿದ್ನಷ್ಟೆಲ್ಲಾ ಸಂಬ್ಳಾರ್ದೆ ನನ್ನೂ, ಕಸಾಬ್ ಮುರ್ತಿಜಾಲೀನ್ನೂ ಇಲ್ಲಿರೋ ಸೇಕ್ದಾರ್ ಸಾವುಣ್ಣಾವರ್ನೂ ಕರಸ್ದ. ಓದ್ವಿ. ಮನೆ ಕತ್ಯೆಲ್ಲಾ ಏಳಿದ್ವಿ. ಆದ್ರೇನು? ದರಣಯ್ಯನ ರಕ್ತ...ಅಲ್ಲ! ನಂಕತೆ ನಂಬ್ಲಿಲ್ಲ! "ನಿಮ್ಮನೇಗೆ ಸುಂಕದ ಕಟ್ಟೇಂತ ಯೆಸ್ರು. ರಾತ್ರಿ ತಂಗಿದ್ರೆ ಒಂಜೀವನಾದ್ರು ತಿನ್ನೊ ದೆವ್ವ ಇರೋ ಮನೇ"ಂತ ಏಟೇಳಿದ್ರೂ ಕೇಳ್ಲಿಲ್ಲ. "ದೇವ್ರಮುಂದೆ ದೆವ್ವಾನೆ?"ಂತ ಅಂದು "ಈವತ್ತು ರಾತ್ರಿ ಆ ಮನೇಲೇ ಮನೀಗ್ಕೊಳ್ಳೋದ್ನಾನು...ನೀವು ಮರ್ದು ಗಣಾದ್ರೆ ಮೂವ್ರೂ ಬನ್ನಿ! ನೋಡೇಬಿಡೋಣ ಈ ದೆವ್ವದ ಜೂರತ್ನ!" ಅಂತ ಶಾಲೊದ್ಕೊಂಡು ಒಂದ್ಕೈಲಿ ಒಂದಿಂಬು, ಇನ್ನೊಂದ್ಕೈಲಿ ಒಂದು ಲಾಟಿಂಗು ಇಡ್ಕೊಂಡು ಬಂದೇಬುಟ್ಟ ಬೂಪ! ಈಗ್ನಾವೇನ್ಮಾಡೋದು? ಓದ್ರಾಳಾಗೋಗ್ಲೀಂತನ್ಕೊಂಡು ನಮ್ಮಟ್ಗೆ ಬಂದ್ಬುಟ್ರೋ ಊರ್ಗೆಲ್ಲಾ ಪಿರ್ಕಿಪಟ್ಟ ಚನ್ನರಾಯಪಟ್ಣದೋನ್ಕೈಲಿ? ಯಿಲ್ಲಾ ಈ ಉಚ್ಚನ್ ಜೊತೇಗೆ ನಾವ್ವೂ ಓದ್ವೋ... ನಮ್ಮಲ್ಲೊಬ್ರು ಯೆಣ ಅಂದ್ರೋದು ಗುಂಡ್ಗೆ ಯೇಳ್ತದೆ. ಅದ್ರೆ ಮಾಡೋದೇನು? ಮರದ್‌ಗಳು ನಾವ್ಮೂವರು ಚನ್ರಾಯಪಟ್ನಾಕ್ಕ ಬುಟ್ಕೊಡೋದು ನಂಬುಳ್ಳಾಪ್ರರದ ಗೈರತ್ನ! ಒಂಟ್ವಿ ಅವಯ್ಯನ್ ಜೊತೇಲಿ! ಆ ಆಳ್ ಮನೇಗೆ ಒಗ್ತಿದ್ದಾಗ್ಲೇನೇವೇಯೇ ಸಾವುಣ್ಣೋರು ಏಳಿದ್ರು. ಎಂಗೋ ಬಯ, ಏಗ ತಪ್ಪು ಏನ್ದ ಮಾಡಿದ್ರೇನೇ ಅಪಾಯ. ಎಂಗಾದ್ರೂವೆ ಅಲ್ಕಡ್ಕೊಂಡು ಜಾಗರ್ನೆ ಮಾಡ್ಕೊಂಡಿದ್ರೆತ್ರಿ ಮೈಯಿಲ್ಲದೆನ್ನ ನಮ್ಮನ್ನೇನ್ಮಾಡೀತು. ಒಂದಿಸ್ಪೇಟ್ ಕಟ್ಟು ಇಟ್ಕೊಂಡು... ಪಟ್ಟಾಂಟೆತ್ತು ಇಪ್ಪತ್ತೆಂಟೋ ಆವತ್ತ ರಾತ್ರಿ ಕಳೆದ್ಬಿಡೋಣ ಅಂತೇಳಿದ್ದಕ್ಕರಿಯಾಗಿ ಇಸ್ಪೇಟಾಡ್ತಾ

ಕೂತಿದ್ವೀವಿ ನಾನೂ ಮನೆಯಾತ್ನೂ ಜೊತೆ. ನಮ್ಮೆದ್ರು ಮುರ್ಕಿಜಾಲಿ ಸಾಮಣ್ಣೋರು. ಮತ್ತ ಕರಿ ಕಪ್‌ಸೆಟ್ ಆಯಿತು ಅವರ್ಗೆ. "ಇದೇನ್ರೋ ? ಕಾಸಿಲ್ಲಾಟ ! ಜೋರಿಲ್ಲ"ಂತ ಮನೆಯಾತ ಜೇಬಿಂದ ನಲವತ್ತು ರೂಪಾಯೆತ್ತಿ...ನಾವು ಅತ್ತತ್ರೂಪಾಯಿ ಅಂಡ್ಕೊಂಡು ತಿರ್ಗಾ ಶುರು ಮಾಡ್ದ್ವಾಟಾಕೆ. ಆಡ್ತಾ ಆಡ್ತಾ ಇದ್ವಿ...ಗೆಟ್ಟಿ ಐತಾ ಸಾಮಣ್ಣೋರೇ...ಮುರ್ಕಿಜಾಲಿ ತಲೆಮ್ಯಾಗೆ ಒಕಳಸ್ತ ಅವನ್ರುಂಬಿದ್ರೂಪಾಯಿಗಳ್ನ ನಮ್ಕಡೆ ತಳ್ಳಿ "ನೀವಾಡ್ಕೊಳ್ಳಿ...ಅಲ್ಲಾ ಹೊ ! ಅಲ್ಲಾ ದೊ !" ಅಂತಾನೆ ಬಿದ್ಕೊಂಡು ನಿದ್ದೆ. ತಿರ್ಗ್ನೂನೂವೆ ಸಾಬಿದುಷ್ನ ಮೂವ್ರೂ ಅಂಡ್ಕೊಂಡು ಆಡ್ತಿದ್ವಿ... ಸಾಮಣ್ಣೋರು ಆಕ್ತಿದ್ದ ಒಂದೊಂದೆಲೇಗೂ ಆಕಳಸ್ತ "ರಾಗ್ವಾ ! ರಾಗ್ವಾ !"ಂತ ಮಾದ್ಕಿ ಚುಟ್ಕಿ ಒಪ್ಪಿಸ್ತಾ..."ದಿನವೆಲ್ಲಾ ಬಿಸುಲಿನಲ್ಲಿ ತಿರುಗ್ದೆ...ನಿದ್ದೆ...ನೀವ್ನೇವೇ ಸೂರೆಂಟು ಆಡ್ಕೊಳ್ಳಿ"ಂತ ಗೊಣಗುಟ್ಟಿ ಬಿದ್ಕೊಂಡು, ನಾನು ಕಟ್ಟು ಕಲ್ಸಿ ಕಟ್ ಮಾಡಿಸ್ಕೊಂಡು ನನ್ಗೆ ಮನೆಯಾತನ್ಗೂ ಅಂಚ್ತಿರೊ ನನ್ಗೆ ಬೆಳ್ಳು-ಭುಜಾನೂ ಸೋತ್‌ಬೀಳ್ತಿದ್ದದ್ನ...ನನ್ನತೆ ನಿದ್ದೇಲಿ ತೂಗೋದ್ನ ನೋಡ್ದ ಅವಯ್ಯ...'ಇದೇನ್ರಿ ದೆವ್ವ ಇರೋ ಮನೆ ಅಂದ್ರಿ...ನನ್ಜೊತೇಲಿ ಬಂದ ನಿಮ್ಮೂರವ್ರೆ ಇಬ್ರೂ ನಿದ್ದೆವೋಗಿ ನೀವೂನೂ ತಲೆತೂಗ್ತಿರೋದು...ಇದೇನು ನನ್ನ ಬೆದರ್ಸೋಕೆ ಅಂತ ಮಾತಾಡ್ಕೊಂಡು ಮಾಡ್ತೀರೋ ತಮಾಸೇನಾ?' ಅಂದ. ನನಗ್ಯಾಕೋ ಕಣ್ಣು ಒಂದ್ಕಡೆ ಕಟ್ಟಿಕಡ್ಡಂಗೆ ಆಗ್ತಿದೆ ನಿದ್ದೆ ಬಾರ. "ಅಲ್ಲಾ ಸ್ವಾಮಿ ಸತ್ವಾಗೂನೂ ನಿದ್ದೆ. ದೀಪ ಇಳಿಸಿ ಮಲಿಕ್ಕೊಳ್ಳಿ ನಮ್ಗಂಗೇನೆ" ಅನ್ಕೊಂಡು ಕಾಲುಗ್ಳು ಚಾಚ್ದೆ ; ಆವಯ್ಯನ್ಮಕ ಕಣ್ಣುಗ್ಳು ಕತ್ಲೆಕಂಡ ಕೂಸಿನ್ಮಕದಂತೆ ಆಗಿ...ಕೈ ನಡಗ್ತ ನಾಲ್ಗೆ ತೊದಲ್ತ..."ಅಯ್ಯೋ...ಗೌಡ ! ನಿಮ್ಮೆಮ್ಮಲ್ಲಿ ಇದೇನ್ರೋ ಮೋಸ ! ದೆವ್ವಾಂತೀರಾ ಮನೇಲಿ ಹತ್ಮೂವ್ವತ್ತು ಹೆಣಗ್ಳು ಬಿದ್ವು ಅಂತೀರ ನಡ್ರಾತ್ರೀಲಿ ನಂಜೊತೇಲಿ ಬಂದ್ನೀವು ನಿದ್ರೆ ಅಂತ ನಟ್ಸಿ ಬೆದರ್ಸೋಕ್ನೋಡ್ತಿರಾ ನನ್ನ !.........ಬದ್ರೋನಪ್ಪ ನಾನು !" ಅನ್ಕೊಂಡು ಒಂದು ಸಿಗರೇಟು ಜೇಬಿನಿಂದ ತೆಗೆದು ಬಾಯಾಗಿಟ್ಕೊಂಡು ಒಂದ್ಬೆಂಕೀ ಕಡ್ಡಿ ಗೀಚಿ ನನ್ನಗ್ತ ನನ್ನೋಡ್ತ...ಕಡ್ಡೀನ ಸಿಗ್ರೇಟ್ಗೆ ಅಚ್ತಿದ್ದಾಗ್ಲೇನೇವೇ ಅಜಾರ್ದಲ್ಲಿ ಒಳ್ಳೆ ಕಂಚಿನ ಸರಪ್ಳಿ ಕದಲಸ್ದಂಗೆ ಸದ್ದು ಆಗತ್ಲೂವೇ ನನ್ಕೈಕಾಲುಗ್ಳು ನಡುಗ್ತ "ದೇವ್ರೇ ! ಶ್ರೀಕಂಟಾ ! ಇವನ್ಕಾಯೊ ! ಕಾಪಾಡಪ್ಪಾ ! ನನ್ತಂದೇ !" ಅಂತ್ಕಿರಲ್ದೆ ನನ್ಬೆದರ್ಕೇಲಿ. ಅವಯ್ಯೋ ತಟ್ಟಿದ್ದು...... ದೀಪಾನ್ಕೈ ಲೆತ್ಕೊಂಡು ... "ಕತ್ಲೇಲಿ ಸಾಯ್ರಿ....... ಮೂರು ಪ್ರಾಣಿಗ್ಳು ನಿದ್ದೇಲಿ ಬಿದ್ದಿರೋವಾಗ ನಾನೊಬ್ನೇ ಇಲ್ಲಿರೋದು ಆನಿ" ಅನ್ಕೊಂಡು...ದೀಪದ್ನವೇತ ...... ಏಣಾಕೆ ಮರ್ತೆ : ಮನೆಮಾಡಿ ಮೇಲ್ನ ದಿವಾನ್ಖಾನೇಲಿ ಕೂತಿದ್ವು ನಾವು—ಏಳ್ದಂಗೇ ದೀಪದ್ನವೇತ ಕಿರುಬ ಅಟ್ಟಿದ ಕಿಸಬಂತೆ ಬಡಬಡಾಂತ ಮಾಡಿ ಮರದ್ಮೆಟ್ಲು ಇಳ್ದೋದ ! ಕೋಣೇನೂ ಕತ್ಲೆ. ನಾನೂ ಸುಮ್ನೆ. ಅಂಗೇ ಬಿದ್ಕೊಂಡು. ಕಣ್ಣು ಬಿಟ್ಟಾಗ ಬೆಳಕರ್ದು ಪಟೋ ಒತ್ತಾಗಿತ್ತು. ಸಾಬಿ ಒಂದ್ಕಡೆ. ಇವಯ್ಯ ಒಂದ್ಕಡೆ ಇನ್ನೂ ಗೊರ್ಕೆ ! ಇಬ್ಬರ್ನೂ ಜಗ್ಗಿ ಎಬ್ಬಸ್ದೆ. ಒಬ್ಬರ್ನೊಬ್ರು ನೋಡಿ ನಕ್ಕ್ರು. ಸಾಬಿ "ಅಂಗಾದ್ರೆ ಯಾರೂ ಸಾಯ್ನಿಲ್ಲ ನಾವು?" ಅಂದ. ಅಟ್ರಲ್ಲಿ ಶೇಕ್ದಾರ್ರು "ಮನೆಯಾತ ಎಲ್ಲಿ ?" ಅಂದ್ರು. ನಾನು "ರಾತ್ರೀನೇ ಯಾರೊ ಸರ್ಪಣಿ ಆಡಿಸ್ದಂಗೆ ಕೇಳ್ಬರೂತ್ಲೂ ಎದ್ಕೊಂಡು ದೀಪಾನೂ ಎತ್ಕೊಂಡು ಕಿತ್ಕೊಂಡ ಆವಯ್ಯ...ಛತ್ರಕ್ಕೇ !"ಂದೆ. ಶಾಮಣ್ಣೋರು..."ಅಗಾದ್ರೆ... ಈ ಆಳ್ಮನೇಗೆ ಒಂದ್ರಾತ್ರಿಯಾದ್ರೂ 'ಸುಂಕ' ಕೊಡದೆ ಕಳೆದ್ದಲ್ಲ ಅಂದದ್ನಂತೋಪ!" ಅಂದ್ರು. ನಾವೂನೂ ಒಪ್ಪಿ ಎದ್ದು ಇಳಿದು ಬಂದ್ವಿ ಮೆಟ್ಲು ಕೆಳಗೆ. ಕೊನೇಮೆಟ್ಲು ಮೆಟ್ರೋ ಅಪ್ಪೊತ್ತಿಗೆ ಕಂಬ್ದಂಗೆ ನೆಟ್ಕೊಂಡು ಮೂರ್ಜನಾನೂ ಕಂಡ್ವಿ ; ಕೈಲಿದ್ದ...ದೀಪ ಒಂದ್ಕಡೆ ಮುರಿದ್ಬಿದ್ದು ತಾನೂ ಕುತ್ಗೆ ಮುರ್ಕೊಂಡು ಬಿದ್ಕೊಂಡಿದ್ದ ಮನೆಯಾತ್ನ ಯೆಣಾನಾವ !

ಶೆಟ್ರು : ಆಯ್ತೆ ಯೇಮಿ...?

ಬೋರಣ್ಣ : ಯೇಮಿಯೇನು ಶೆಟ್ರೇ...ಕೊನೇಗೂ ಆ ಮನೇಗೆ ಸುಂಕ ಪಾವತಿ ಆಯಿತು !!

೫

ಶಾಮಿಯ ಸೇಡು

ಗೋಪಿ ಗುಡಿ ಸಮೀಪಿಸಿದೆ. ಎಕ್ಕಡ ಜೋಡುಗಳ್ನ ಇರುವವರಿಗೂ ಮೆಟ್ಟಿಲ ಮುಂದೆ ಬಿಟ್ಟಿಟ್ಟು ಗುಡಿಯೊಳಕ್ಕೆ ಕಾಲಿಡೋ ಪದ್ಧತಿ, ಈ ಹೊತ್ತುಂಟ್ಗೇ ಈ ಪಂಚಪ್ರಾಣ್ಕಿಗೆ ತಪ್ಪ ಬೇಕಾಗಿ ಬಂತು.

ಮೆಟ್ಟಿಲ ಸುತ್ತ ಹತ್ತಡಿವರೆಗೂ ಚೊಕ್ಕಟವಾಗಿ ಗುಡಿಸಿ, ಸಾರಿಸಿ ರಂಗೋಲೆಯಿಟ್ಟು ಕೆಮ್ಮಣ್ಣಿನ ಚೌಕಟ್ಟು ಹಾಕಿದ್ದೇ ಅಲ್ದೆ ಇನ್ನು ಮೆಟ್ಟಿಲುಗಳ ಅತ್ತಿತ್ತಡೆ ರಂಗೋಲೆ, ಇನ್ನು ಹೊಸ್ಲೀ, ಅರಿಸಿನದಲ್ಲಿ ತೊಳೆದು ಮಧ್ಯದಲ್ಲಿ ರಂಗೋಲೆ ಪದ್ಮ !

ಶೆಟ್ಟಿ : "ಇದೇಮಿ ಇದುವರಕೂ ಪಾಡುಪಡಿ ಉಂಡಿನ ಕಾಳಮ್ಮಕು ಈಪದ್ದೇಮಿ ಪ್ರೊಚ್ಚ ಭಾಗ್ಯಮು ? ಸಾಬ್ಲು ಇಕ್ಕಡ್ನೇ ಉಂಡಂಡ. ಲೋಪ್ಲನ ಪೋಯಿ ಚೂಸಿ ಚಪ್ತಾ !" ಎನ್ನುತ್ತಾ ಒಳಹೊಕ್ಕು ಮತ್ತಿರುಗಿ "ಬಾಧಕಂ ಲೇದು ರಾಪ್ರೊಚ್ಚನು ಸಾಬ್ಲು. ಮಿಾರಂತಾನೂ ಅಟ್ಲೆ. ಇಪ್ಪಿಪ್ಪೇ ಮೆಪ್ರು ಬೀದೀಲು ತಾಗಿ ಪೋಯಿನ ಘಾಟು ಇಂಕ ಉಂದಿ." ಎಲ್ಲರೂ ಒಳಹೊಕ್ಕು ನೋಡುತ್ತಲು...ಒಂದು ಹೊಸ ಅರಳೇಪೇಟೆ ರೌಕೇಕಣವನ್ನು ನಡುವಿಗೆ ಸುತ್ತಿ ಹಣೆಗೆ ಹರಿದ್ರ ಕುಂಕುಮಗಳನ್ನು ಬಳಿದು ಶಾಮಂತಿಗೆ ಹುವ್ವಿನ ಹಾರವೊಂದನ್ನು ಕೊರಳಿಗೆ ಹಾಕಿ ಅಮ್ಮನನ್ನು ಅಲಂಕರಿಸಿದ್ದ ಅದ್ಭುತಾಕಾಕ್ಷಿಯನ್ನು ಕಂಡು ಬೆಚ್ಚಿಬಿದ್ದವರಲ್ಲಿ...

ಖಾನ್‌ಸಾಹೇಬ್ರು: ಆಜ್ ಕ್ಯಾ ಕಾಳಮ್ಮ ಬಡಾ ಖಿದರ್ಮೆ ಹೈ! ಹರ್ರೋಸ್ ಬಚ್ಚೋಂಕೆ ಮೋಫಕ್ ನಂಗಾ ಥೀಸೋ ಅವ್ಮಾಕು ಕೊಯಿ್‌ಕೀ ಲಂಗ ಪೇಹನಾಕೆ ಫೂಲೋಂಕುಂಕುಂಭಿ ರಹೀಂ ! ಆಜ್ ಕ್ಯಾ ಖುಬ್ದುಹೈ ಅವ್ಮಾಕೆ ?...ಹಬ್ಬ ಇದಾದೆ ?...

ಶಾನುಣ್ಣ : ಹಬ್ಬವೇನೂ ಇಲ್ಲ ಈ ಹೊತ್ತು. ಯಾರೋ ಪಾಪ ಹೆಂಗ್ಸು ಮಗೂಗೆ ಸಿಡುಬೋ ಗಿಡುಬೋ ಎದ್ದಿರಬಹುದೂ ! ಎಂದೂ ಮರೆತ ಮಹಾಕಾಳೀ ಇಂದು ಜ್ಞಾಪಕ ಬಂದು ಅಲಂಕಾರ ಮಾಡಿ ಹೋಗಿರಬೇಕು.

ಶೆಟ್ಟಿ : ಕಾದಾಮರಿ ! ಸಂಕಟಮು ವೊಚ್ಚೇತಪ್ಪೇ ವೆಂಕಟರಮಣಾ ಅನ್ನೇದಿ ಮೇಮಂತ. ಸಂಸಾರಮುಲೋ ಸಮಸ್ತಮೂ ಸಲೀಸ್ಗ ಸಲ್ಲುತುಂಡೇವರಿಕೂ ದೇವುಡು ಯಾಲ ! ಎವ್ವರು ಯಾಲ ! ಮನುಷ್ಯುಡು ಜ್ವೈಡಿಾರಿ ಪೋಯಿನಪ್ಪುಡೇಕಾದ ದೇವುಡುರಾವಲ ! ಒಳ್ಳು ಬಾಗುಂಡೇ ವರ್ಕು ವೈದ್ಯುಡ್ನಿ ಪಿಲಿಪಿಸ್ತಾರಾ ! ಯೇಮಸ್ನಾಬ್ಲು ?

ಗಡF್ ಖಾನ್ : ಬರೋಬರ್ ಶೆಟ್ಟೀ ನೀನು ಹೇಳಿದ್ದೇ ಠೀಕ್. ಆದ್ರೆ ಮೈ ಕೈ ದಿಮಾಕ್ ಜರೂರತ್ ಗೈರತ್ ಗರಸ್ ಇರೋ ಮರದ್‌ಕೈಲಿ ಆಗದ್ ಕೆಲ್ಸ...ಪತ್ಥರ್‌ನಲ್ಲಿ ಬನಾ ಮಸ್ತ ಸನಂಕೈಲಿ ಆಗ್ತೈತೆ ಕ್ಯಾ ? ಕ್ಯಾ ಸಾಮಿಾ ಆಪ್ ಬೋಲಿಯೆ ! ಖುದಾಕೆ ಖುದರತ್ ಹೋನಾಜ್ ಹೋನ ! ಅಲ್ಲಾಕೆ ಕುಮ್ರುಕ್ ಬಗ್ಯರ್. ಕುಚ್ಛ್ ನಹಿ ಕರ್‌ಸಕ್ತಾಯ್ ಆದ್ಮಿ ! ತಾಪಂಘೀ ಸಾಮಿ. ಅಸ್ಸು ಪತ್ಥರ್‌ಕೆ ಸನಮ್ಕು ಪೂಜ ಕರ್ನೇಮೆ ಕುಚ್ ಮತ್ಲಬ್ ಹೈ ಕ್ಯಾ ? ಇಲಂ ಹೈ ಕ್ಯಾ ? ಇನ್ಸಾಫ್ ಹೈ ಕ್ಯಾ ? ಇಮಾನ್ ಹೈ ಕ್ಯಾ... ಮೈತೊ ಹೈರಾನ್ ಹೂಂ ! ಜೆಮುಜ್ಜತ್ನೆ ನಹಿ ಮೈ ಪೂಛ್ಟೇಕ ಸಾಮಿ, ಆಪ್ಸೆ ಸಮಜ್ನೇಕೇಲಿಯೇ !

ಶೆಟ್ಟಿ : ನೀವ್ ಕೇಳೋ ಪ್ರಶ್ನೆ ಸಾಬ್ರ ಹೊಸ್ದಲ್ಲ. ಸಾವಿರಾರು ಜನಗಳು ಕೇಳಿದ ಪ್ರಶ್ನೆ. ಅದಕ್ಕೆ ತಕ್ಕ ಉತ್ತರ ಇದೆ ! ಆದ್ರೆ ಆ ಕೇಳೋ. ಸಾವಿರ ಜನಗ್ಳ ಸಾವಿರ ಪ್ರಶ್ನೆಗಳ ಸಾವಿರ ರೂಪಗಳಿಗೆ ಸರಿಯಾಗಿ ಉತ್ತರಕ್ಕೂ ಸಾವಿರ ರೂಪಗಳು. ಆದ್ರೆ ಒಟ್ನಲ್ಲಿ ಪ್ರಶ್ನೇನೂ ಉತ್ತರಾನೂ ಒಂದೇ ರೂಪಕ್ಕೆ ಇಳಿಸಿಕೊಳ್ಳೋಕೆ ಮುಂಚೆ...ಒಂದು ಅಭಿಧಾನ ಬೇಕು...ಪ್ರಶ್ನೆ ಕೇಳೋನೂ ಉತ್ತರ ಹೇಳೋನೂ...ಆಸ್ತಿಕರಾಗಿರಬೇಕು.

ಶೆಟ್ರು : ಏಮಿ ? ಆಸ್ತಿ ಉಂಡವಲ್ನಾ ? ಅಯ್ತೆ ಪೇದವಾಳ್ಳ ಗತಿಯೇಮಿ ? ದಾನಿಕಿ ಲೆಕ್ಕಾಚಾರಮುಯ್ನಾ ನೀದಿ ! ಆಸ್ತಿ ಉಂಡೇವಾಳ್ಳು ದಾನ್ನಿ ಅನುಭವಿಂಚೇ ಗಲಾಟ್ಲೋ ಉಂಡಾಗ ....ಪ್ಯಾದವಾಳ್ಳ ಗತಿಯೇಮಿ ಅಂಟಿ. ಪೇದವಾಳ್ಳಕೇ ಕದಾ ಪುಟ್ಟೇದಿ ಪರಮಾತ್ಮುಡು ಯುಗ ಯುಗಾನ್ಕೂ ?

ಭಟ್ರು : ಏಗರಾಡ್ಬೇಡಿ ಶೆಟ್ರೆ. ಶಾಂತಿ ತಗೊಳ್ಳಿ. ಆಸ್ತಿಕರು ಅಂದರೆ ಹಣವಂತರಲ್ಲ. 'ಆಸ್ತಿ' ಅಂದ್ರೆ...

ಶೆಟ್ರು : ಗೊತ್ತು ಬಾಗ್ಗೊತ್ತು...ಏಮಂಕಲು! ಅಯ್ತೆ ಏಮಂಕಲು ಏಕ್ಕಡಯ್ಯ ಒಚ್ಚಿ ಇಕ್ಕಡ ?

ಶಾಮಣ್ಣ : ಏಮಕೆಗಳಲ್ರೀ ! ಭಟ್ರು ಹೇಳೋದ್ನ ಕೇಳಿ, ಕಿವಿಗೊಟ್ಟು ಕೇಳಿ.

ಭಟ್ರು : 'ಆಸ್ತಿ' ಅಂದ್ರೆ ದೇವ್ರೂಂತ ಒಂದು ಪ್ರಾಣಿಯಿಧೆ ಅಂತ ನಂಬೋವ್ರೆಲ್ಲಾ ಆಸ್ತಿಕರು ! "ನನಗೆ ದುಡ್ಡು ಕಾಸು ಗದ್ದೆ ತೋಟ ಬೇಕಾದಷ್ಟಿವೆ ! ನನಗ್ಯಾರಿಂದ್ಲೂ ಏನೂ ಆಗ ಬೇಕಾದ್ದಿಲ್ಲಾ"ಂತ ಉಬ್ಬಿ ! ಐಹಿಕ ನಶ್ವರ..."ಈ ಹೊತ್ತಿದ್ದು, ನಾಳೆ ಐಶ್ವರ್ಯವನ ಬಿಟ್ಟು ನಾನೋ ನನ್ನ ಬಿಟ್ಟು ಐಶ್ವರ್ಯಾನೋ ಹೋಗ್ಬೇಕಾಗುತ್ತೆ" ಎಂಬೋದ್ನ ತಿಳಿದೇನೂ...ತನ್ಗೂ ತನ್ನ ಟಿಕ್ಕೆ ಒದಗಿರೊ ಐಶ್ವರ್ಯಾನ್ನೂ ಸೃಷ್ಟಿಸಿ ಸುಡೋ ದೇವ್ರು ಒಬ್ಬಿದಾನೆ ಅಂಬೋದ್ನ ನಂಬ್ದೇನೂ ಇರೋವ್ರೆಲ್ಲಾ ನಾಸ್ತಿಕರು. ಈ "ಅಲ್ಲಾ"ನಲ್ಲಿ ನಂಬಿಕೆಯಿರೋ ಸಾಬರು. ಪರಮಾತ್ಮನಲ್ಲಿ ನಂಬಿರೋ ನಾವು, ಯೆಲ್ರೂ ಆಸ್ತಿಕರು. ನಾಸ್ತಿಕರ ಮಾತು ನಮಗ್ಯಾಕೆ.

ಸಾಬ್ರು : ಮಾಫ್ ಕರೀಯೇ ನಾವು ಎಲ್ಲ್ರೂ ಒಂದೇ ಅಲ್ಲ. ನಮ್ಮ ಅಲ್ಲಾಗೂ... ನಿಮ್ಮ ರಾಮು, ಕಿಷ್ಣಾಗೇನೂ ಫರಕ್ ಇದ್ದಾದೆ. ನಮ್ಮ ಅಲ್ಲಾಗೆ ಜಿಸಂ ಇಲ್ಲ. ಮೈಯ್ಯಿ ಕಣ್ಣು ಮೂಗು ಇಲ್ಲ, ನಿಮ್ರಾಮ ಕಿಷನ್ಗೆ ನಾಲ್ಕುಕಾಲು ಎಂಟುತಲೆ ಇಪ್ಪತ್ತು ಕೈ......ಅಯ್ಯ ಬೇಡೇ ವಾಲೂಂಕು ಡರ್ರ್ರಾನೇಕೇಲಿಯೆ........ಬೊಮ್ಮೋಂಕೆ ಓಕ್ಮತ್...

ಭಟ್ರು: ಅನ್ಯಾಯ ಸಾಬ್ರೆ ! ನೀವ್ಹೇಳೋದು ಶುದ್ಧ ಅನ್ಯಾಯ. ನಿಮ್ದೇವರ ಹಾಗೇ ನೇವೇ ನಮ್ಮ ದೇವ್ರೂವೇ. ಕೈಯಿಲ್ಲ ಕಣ್ಣಿಲ್ಲ ಕಾಲಿಲ್ಲ...

ಶೆಟ್ರು : ಅದೆಟ್ಲಯ್ಯಾ ? ಸಾಬುಲು ಚೆಪ್ಪೇದಿ ಸರಿಕದಾ. ಬ್ರಹ್ಮಣಿಕಿ ನಾಲುಗು ತಲಕಾಯಿಲು ಲೇವಾ ? ವಿಷ್ಣುಡಿಕಿ ನಾಲುಗು ಚೆಯ್ಯಿಲು ಕಾದಾ ? ರಾವಣುಡಿಕಿ ಪದಿ... ಉಂಡ್ನಿ ; ವಾಡು ರಾಕ್ಷಸುಡು............ಕುಮಾರುನಿಕಿ...ಸಾಬ್ಲೂ ಮಾ ಸಹವಾಸಮುಲೋ ಮನದೇವತುಲಪೈನ ಮರ್ಯಾದನೇ ಪೋತುಂದಿ...ಕೊಮಾರಸ್ವಾಮಿ ದೇವ್ರುಡುಗಾರಿಕಿ ಆರು ತಲ ಕಾಯಿ...ವದನಮುಲು ಕಾದಾ ? ಇದಂತ ಮಮ್ಮಲ್ನಿ ಬೆದರಿಚ್ಚೇದಾನ್ಕೇ ಕಾದಾ... ಏರ್ಪಾಡಯ್ಯಿಂದಿ ?

ಭಟ್ರು : ಅದೇ ಸೂಕ್ಷ್ಮ ಶೆಟ್ರೇ ನಮ್ಮೂಸೂಕ್ಷ್ಮ ಏರ್ಪಾಡೊಂದ್ರಲ್ಲ...ಅದೇ ಆಸ್ತಿಭಾರ ನಮ್ಮ ಮುವ್ವತ್ತಮೂರುಕೋಟಿ ದೇವತೆಗಳಲ್ಲಿ ಒಬ್ಬೊಬ್ಬರಿಗೂ ಮೈಯ್ಯಿ ಕಣ್ಣು ಕಾಲು ಈ ಬಾಬ್ತುಗಳಲ್ಲೂ ಸಿಡುಬಿಗೆ ಕಾಳಿ, ದುಡ್ಡಿಗೆ ಲಕ್ಷ್ಮಿ. ಪ್ಯಾಸು ಮಾಡೋಕೆ ಸರಸ್ವತಿ. ಭಾವಿ ನೀರು ಬತ್ತಿದ್ರೆ ಗಂಗಾಧರ. ಹೀಗೆ ಡಿಪಾರ್ಟ್‌ಮೆಂಟ್ ಡ್ಯೂಟಿ ಹೇರ್ಲಿದ್ದೆಲ್ಲಾ ಏರ್ಪಾಟು ಅದೂರ್ನೂವೆ ...ಈ ಮನುಷ್ಯ ರೂಪ ಧರಿಸಿರೊ ದೇವತೆಗಳಿಗೆ ಮನುಷ್ಯನೇ ಹುಟ್ಸೋಕೆ ಮುಂಚೆ ನೀವು ಹೇಳಿದ ವಿಕಾರ ಆಕಾರಗ್ಳು ಇಲ್ಲ. ದೊಡ್ಡ ದೊಡ್ಡ ಪರ್ವತಗಳ್ನ ಸೃಷ್ಟಿಸಿದ ದೇವ್ರು ಪ್ಕಿಲುದ್ದ ಕೈಕಾಲು ಇಟ್ಕೊಂಡ ಧಾಂಡಿಗನೂ ಅಲ್ಲ... ಚೀಮೆ ಚಿಗಟಾನ ಸೃಷ್ಟಿಸಿದ ಅದೇ ದೇವ್ರು ಕ್ರಿಮಿನೂ ಅಲ್ಲ. ಮನುಷ್ಯನಿಗೆ ಆಸೆಯೆಂಬೋದು ತಜ್ಜನ್ಮ. ತಜ್ಜನ್ಮವೇನೂ-ಅವನ ಜನ್ಮಕ್ಕೇ ಕಾರಣ! ಈ ಆಶೇನ ತೀರಿಸಿದಪರಮಾತ್ಮನ್ನ ತನ್ನಿಷ್ಟದ ಪ್ರಕಾರ ತನ್ಮನಸ್ನಲ್ಲಿ ತಾನೆ ನಿರೂಪಿಸ್ಕೊಳ್ಳಾನೆ. ವ್ಯಕ್ತಿ ತನಗೆ ಬಣ್ಣ ಬಳಿಯೋಕೋ ಕಲ್ಲು ಕೆತ್ತೋಕೋ ಬಾಯಿಂದ ಹೇಳೋಕೋ ಹಾಡೋಕೋ ತಿಳಿದ ಪ್ರಕಾರ...ಒಂದು ಚಿತ್ರ ಒಂದು ಪ್ರತಿಮೆ ಒಂದು ಭಾಷಣ ಒಂದು ಗೀತೆ ಇವುಗಳಿಂದ ಚಿತ್ರಿಸ್ಕೊಳ್ಳಾನೆ ತನ್ನ ಧ್ಯೇಯದ

ಜ್ಞಾಪಕಕ್ಕೆ. ಸಾಬ್ರು ಅಲ್ಲಾಗೆ ರೂಪವಿಲ್ಲಾಂತ ಎಷ್ಟ ವಾದಿಸಿದ್ರೂ...ಕಣ್ಮುಚ್ಕೊಂಡು ಅಲ್ಲಾನ ಅವರು ಧ್ಯಾನಿಸಿದ್ರೆ ಮುಖಮೋರೆಯಿಲ್ದಿದ್ರೂ...ಒಂದು ದೊಡ್ಡ ಬೆಳಕಿನ ಹಾಗಾದ್ರೂ ಕಂಡೇ ಬರುತ್ತೆ ಅವರು ಮುಚ್ಚಿದ ಕಣ್ಣಿಗೆ. ಆದರೆ ಮಕ್ಕಳು ಬೆದರಿದ್ರೆ 'ಅಪ್ಪಾ!' 'ಅಮ್ಮಾ!'ಂತ ತಂದೆತಾಯಿಗ್ಳ ಹತ್ತಿರ ಓಡಿಬಂದ ಹಾಗಾಗ್ಲೀ ತನ್ಮಗೂಂತ ಆಡಿಸ್ತಿದ್ದ ಗೊಂಬೆ ಮುರಿದ್ರೆ 'ಅಮ್ಮಾ! ಮುರಿದ ಗೊಂಬೇನ ಸರಿಮಾಡ್ಕೊಡು' ಅಂತ ತಾಯಿ ಹತ್ರ ಓಡ್ಬಂದ ಹಾಗೆ...ಈ ಹೊತ್ತು ಮಗು ಸಿಡುಬೆದ್ದು ನರಳೋದನ್ನ ನೋಡಿ...'ಅಮ್ಮಾ! ಮಹಾಕಾಳಿ!...ನನಗಿರೋದು ಒಂದು ಕುಪ್ಪಸದ ಖಣ ನನ್ನ ಕೈಲಾಗೋ ಅಲಂಕಾರ ಇಷ್ಟೇ. ಇಷ್ಟರಲ್ಲೇ ಸಂತೋಷಪಟ್ಟು ನನ್ನ ಮಗೂನ ಸರಿ ಮಾಡ್ಕೊಡೂ'ಂತ ಯಾವ್ದೇಂಗ್ಸೊ ಈ ಹೊತ್ತಿನಲಂಕಾರ ಅಮ್ಮನಿಗೆ ಮಾಡಿ ಹೋದದ್ರಲ್ಲಿ ಅರ್ಥ ವಿಲ್ಲ, ನ್ಯಾಯವಿಲ್ಲ, ಸಾಬ್ರೆ...ಆದ್ರೂ ನಂಬಿಕೆಯಿದೆ. ಆಶೆ ಇದೆ. ಮಮತೆ ಇದೆ. ನೀವು ಧ್ಯಾನಿಸೊ ಅಲ್ಲಾಗೆ ಕೈಕಾಲಿಲ್ದಿದ್ರೂನೂವೆ...ಆತ ರಹಂ ಅಂತೀರಲ್ಲ, ಆ ಕನಿಕರ, ಮಮತೆ, ಆತ ಇಟ್ಟಿರೊ ನಿಮಗೆ ಕೈಕಾಲಿಧೆ, ಅಲ್ವೇ? ಕಣ್ಣುಗಳು ಇವೇ ಅಲ್ವೇ? ಹೀಗೇ ಸಾಬ್ರೇ ತನಗಿಷ್ಟ ವಿದ್ದ ಪದಾರ್ಥವನ್ನು ತನ್ನಿಷ್ಟದ ಪ್ರಕಾರೇನೇ ರಚಿಸ್ಕೊಳ್ಳೊ ಅಭ್ಯಾಸ ಮನುಷ್ಯನಿಗೆ ತತ್ಸ್ವಭಾವ. ಆದ್ದರಿಂದ ಪ್ರತಿಮೆಗಳು ಬರೀಕಲ್ಲು ಮಣ್ಣಾದ್ರೂನೂವೆ ಅವುಗಳಿಗಿರೋ ಯೋಗ್ಯತೆ ಅವುಗಳ್ನ ಪೂಜೆಮಾಡೊ ಭಕ್ತನ ಯೋಗ್ಯತೇನೇ ಅಲ್ದೆ...ಬರೀ ಕಲ್ಲಿಗೆ ನಮಗಿಲ್ಲದ ಬುದ್ಧೀನೂ, ಶಕ್ತೀನೂ, ಏನೂ ಇಲ್ಲ.

ಶೆಟ್ರು : ಅಯ್ತೆ ಯೇಮಿ. ದೇವುಂಡ್ಲಂತ...ಮೇಮ್ಮೇಮೋ ಚೇಸ್ಕೊನಿಂದೇವುಂಡ್ಲಾ, ಏಂ ಬೋರಣ್ಣಾ ಅಂತಾ ವಿನಿ ಊರ್ಕುಂಡಾವೇ?

ಬೋರಣ್ಣ : ಅಲ್ಲ ಸೆಟ್ರೆ ಗುಡಿ ಮನಸರೇ ಕಟ್ಟಿದ್ದು. ಯಿಗ್ರಾನೂ ಕಲ್ಲುಕುಟಿಗ ಕಡೆ ದದ್ದು. ಆದ್ರೂನೂವೆ...ಕಡೆದ ಕಲ್ಗೊಂಬೇನ, ದೇವ್ರೂಂತ ಅತ್ತೃಜನಗಳ ನಂಬ್ಕೆ ಮೇಲೆ ಇರೋದು ಜೀವಾಳ!

ಶಾಮಣ್ಣ : ಗುಡೀಂತ ಕಟ್ಟಿ ಒಂದು ಪ್ರತಿಮೇನ ಸ್ಥಾಪ್ಸಿ ಸಾವಿರಜನ ಸಾವಿರಾರು ವರ್ಷ ಗಳಿಂದ ಆ ಪ್ರತಿಮೇನ ಪೂಜೆಮಾಡ್ತ ಬರ್ತಿರೋದ್ರು ಸರಿ ತಪ್ನ ವಾದಿಸ್ತಿದೀರಲ್ಲಾ ನೀವು. ಚಿಕ್ಕ ದೊಂದು ಚಾಮುಂಡೇಶ್ವರಿ ವಿಗ್ರಹ ಅತ್ಕಡೆ ಯಿತ್ಕಡೆ ಬೆಳ್ಳೀಲಿ ಮಾಡಿದ ಗಣೇಶ ಪಾರ್ವತಿ ಈಶ್ವರ ರಾಮಕೃಷ್ಣರು ಕೆಳಗೆ ಲಕ್ಷ್ಮೀ ಸರಸ್ವತಿ ಇವೆಲ್ಲಕ್ಕೂ ಮೇಲೆ ಇಂಗ್ಲಿಷ್ ಮೋಜ ಹಾಕ್ಕೊಂಡು ಬಣ್ಣದ ಕಾಲ್ಚೀಲ ಬಣ್ಣದ ಷರಟು ಬಣ್ಣದ ಅರ್ಧ ಷರಾಯಿ ತಲೆ ಕ್ರಾಪು ಬಾಯಲ್ಲಿ ಒಂದು ಸಿಗರೇಟು ಇಟ್ಕೊಂಡಿರೊ, ಒಬ್ಬ ಈ ಕಾಲದ ಮನುಷ್ಯನ ತಸ್ವೀರ್ನ ನಾನು ಹೇಳಿದ ಪ್ರತಿಮೆಗಳ ಮೇಲೆ ತಗಲು ಹಾಕಿ ಹಗಲೂ ರಾತ್ರಿ ಅಲ್ದೆ ಒಂದೊಂದು ಪುಣ್ಯದಿವಸಾನೂ ಮೊದಲು ಆ ತಸ್ವೀರಿಗೆ ಪೂಜೆ ಮಂಗಳಾರತಿಯಾಗಿ ಆ ಮೇಲೆನೇವೇ ಕೆಳಗಿರೋ ದೇವರುಗಳ್ಗೆ ಮರ್ಯಾದೆ ಈಗಿನವರ್ಗೂ ಆಗ್ತಿದೆ; ನಮ್ಮೆಂಟ್ರಲ್ಲಿ ಒಬ್ಬರ ಮನೇಲಿ, ಅಂದ್ರೆ ನಂಬೀರ ನೀವುಗ್ಳು?

ಶೆಟ್ರು : ಯೇಮಿ? ದೇವುಂಡ್ಲು ಪ್ರತಿಮೆ ಪೆಟ್ಟಿದಾನ್ನಲ್ಪೈನ ಮೋಜಾವೇಸ್ಕೋನಿ ಕ್ರಾಪು ಜೇಸ್ಕೋನಿನ ಮನುಷ್ಯನಿ ತಸ್ವೀರಿನಿ ಪೂಜ ಚೇಸೇದಾ? ಅದೀನೂ ಬ್ರಾಹ್ಮಣುಲು ಇಂಟ್ಲೋನಾ! ಪಾತಕಮಯ್ಯಾ. ಮಹಾಪಾತಕಮು; ಕುಲಕುಲಮೇ ಕಾಲಿಪೋವನು. ಇಂಟಾಡಿದಿ ತಾಲಿ ತಾಲೀನೆ ಪೀಕಿಪೋವುನು.

ಶಾಮಣ್ಣ : ಅದೇ ನಂಬ್ಕೆ ಅನ್ನೋದು. ಈ ಮನೆ ಇಂಟಾಡಿದೀ ಅಂದ್ರಲ್ಲಾ ಆಕೆಗೆ ಇಷ್ಟು ದೇವರುಗಳು ಇದ್ರೂವೆ ತಾಲಿ ಕಿತ್ಕೊಳ್ಳೋಗ್ತಿದ್ದ ಅಪಾಯಾನ ತಪ್ಸಿ ಮಾಂಗಲ್ಯ ರಕ್ಷಿಸಿದ ಅವನು, ಅವನ ರೂಪ ವೇಷ ಹೇಗಿದ್ರೂನೂವೆ ಸತ್ತ ಸತ್ಯವಾನನ ಪ್ರಾಣಗಳು ತಿರುಗಿ ಕೊಟ್ಟ ಯಮನ ರೂಪ ಎಷ್ಟು ಘೋರವಾಗಿದ್ರೂ ಆತ್ನೇ ತನ್ನ ಸರ್ವಸ್ವಾಂತ ಸಾವಿತ್ರಿ ನಂಬಿದಹಾಗೆ... ಈಕೇನೂ ಆ ತಸ್ವೀರ್ನಲ್ಲಿ ನಂಬ್ಕೆ ಇಟ್ಟಿರೋದು ಆಶ್ಚರ್ಯವೇ? ತಪ್ಪೆ? ಯೇನ್ಸಾಬ್ರೆ.

ಖಾನ್‌ಸಾಬ್ : ಯೇತೊ ಮೊಹಬತ್‌ಕೀ ಬಾತ್ ಹೈ...ಉಲ್‌ಫತ್ ಕೀ...ಫರವಸ್ ಕೀ ಬಾತ್ ಹೈ...ಹೇಳಿ ಹೇಳಿ...ಕಾನಿ ಹೇಳಿ !

ಶೆಟ್ರು : ಕಥನಾ?...ಚಪ್ಪಂಡಿ...ಯಮಧರ್ಮರಾಜು ಒಕ್ಕಡೆ! ಮೀರು ಚೆಪ್ಪೆ ಕ್ರಾಪ್ ಚೇಸ್ಕೋನಿ ಮೋಜುವೇಸ್ಕೋನಿ ಸಿಗರೇಟ್ ಕಾಲ್ಚೇ ಚಿನ್ನೋಡು ತಪ್ಪೇರು ಚಿನ್ನಿಗ. ವಾಂಕೆ ಪ್ರಾಜಾಂಟೇ ಯೇಮಿ...ನಾಕೇಮಿ ದುಂದಟ್ಲಾಲೇದು! ಅಯ್ತೇನೂ ಚೆಪ್ತಾಂದೆ! ಕಥ ಚೆಪ್ತಾವಾಡು! ನೆನ್ನ ಮೊನ್ನ ಐಕಟ್ಟು ರಕ್ತಂ ಕಾರ್ತ ದಯ್ಯಾಲು ಈ ಕಥಲೋ ಒಚ್ಚೇದೈತೆ...ನಾಕೇಮಿ ಭಯಂ ಲೇದು...ಅಯ್ತೇನೂ ನೆನ್ನ ರೆಯ್ಯ ಒಕ್ಕ ಕಲಗಂಟಿಸಿ! ಗೊಂತೆ ಕೋಸ್ಕೋನಿ ರಕ್ತಮುಕಾರ್ಚ ಗೆಜ್ಜಲು ಕಟ್ಟಿನ ಕಾಳ್ಳೋ ಕುಲುಕ್ತಾ ನಾ ಪಾಡಗಿಲ್ಲುಲೊ ಕುಲ್ಕೆ ಅಪ್ಪಿ ನಾಲ್ಗು ಚೆಟ್ಟಿನ ಗೂಟಕ್ಕೆ ನಿಲ್ಚೊನಿ...ಮುದ್ದೂಕದ್ದೂ...ಅನಿ ಪಲ್ಲವಿ ಪಾಡ್ತಾ ಚಿಕಗೋಸಾಯಿಮೇಕ "ಇಧಾಥ" ಅನಿ ತಾಳಂ ವೇಸ್ತ ಮಾಯಿಂಟಿಕೊಚ್ಚಿ...ನಡು ರಾತ್ರಿಲೊ 'ಬಟ್' ಪುಟ್ಟಿಮ್ಮ ಅಂಗಡಿಯಿಂದ ಮೆಂತ್ಯಾಲು ದೋಸ ಕೊತ್ತ್ರಿರಿ ಚಟ್ನಿ ಇಪ್ಪೇ ತೆಪ್ಪಿಚ್ಚಿಸ್ತಾವ. ಲೇಕಪೋತೆ ನೀ ಗೊಂತ ಪಿಸುಕುತ್ತಾ ಅನಿ ನನ್ನು ದಬಾಯಿಂಚಿನ ಐಕಟ್ಟು ಕಲಲೊ ಚೂಸಿ...ರಲ್ಲಿ ಮಾಯಿಂಟಾವಿದಿ. ಬಾಟಿಲ್ಲೋನು... ಬಳ್ಳಾರಿ ಬೋಯಿಲು ಅಂದ್ರೂ ಒಚ್ಚಿನವಿಾಟ್ನೆ ನಾಕಿ ಗಾಬರಿ ಪೋಯಿ...ಇಂಕವಿಾಟ ಗುಂಡೆ ದಯ್ಯಾಲು ಕಥ ವಿನ್ನಾದು ಅನಿ ಮನಸು ಗಟ್ಟೇಸ್ಕೊಂಟ್ನಿ. ನೇನೇಮಿ ಪಿರಿಕಿವಾಡು. ಅಯ್ತೇನೂ ನಡುರಾತ್ರೀಲೊ. ರಕ್ತಮು ಕಾರ್ತ ಮುದ್ದೂ ಕದ್ದೂ ಅನಿ ಗೂಟಕ್ಕೆನ ನಿಲ್ಚೊನಿ ಮೇಕೊಂಗ ವೈರಾಗಿ ನಿಧಿನಿಧೀನಿ ತಾಳಮು ವೇಸ್ತ ನಿದ್ರೆಲೊ ಒಸ್ತೆ ಒಕ್ಕಾಪಿದಿ...ಯಿಸಪ್ಪ ಗುಂಡಿಗ ಉಂಡಿನ ದೊಂಗ ವಾಡುಕೂ...? ಶಾಮಣ್ಣಗಾರು ಈ ಮಿಾ ಕಥಲೋ ದಯ್ಯಾಲು ಗಿಯ್ಯಾಲು ಯೇಮನ್ನ...?

ಶಾಮಣ್ಣ : ಬೆದ್ರಬೇಡಿ ಶೆಟ್ರೆ. ದೆವ್ವ ಪಿಶಾಚಿ ಯೇನೂ ಇಲ್ಲ ಸ್ವಸ್ಥೇಲಿ ಕೇಳಿ.

ಶಾಮಣ್ಣನ ಕಥೆ

ಬಹಳ ದಿನದ ಮಾತಲ್ಲ. ಈಗೀಗ ಐದು ವರ್ಷದ ಮಾತು ಕ್ಯಾತ್ಸಂದ್ರ ಅಂತ ಕೇಳಿರ ಬಹುದು. ತುಮಕೂರು ಡಿಸ್ಟ್ರಿಕ್ಟು. ಅಲ್ಲಿ ಕೊಟ್ಟೆ ನನ್ನ ತಂಗೀನ. ಆಸ್ತಿ ಪಾಸ್ತಿ ತಕ್ಕಮಟ್ಟಿಗೆ ಇದೆ ಅಳಿಯನಿಗೆ. ಒಬ್ಬನೇ ಮಗ ತಂದೆಯಿಲ್ಲ; ತಾಯಿ ಹೆಸರಲ್ಲೇ ತಕ್ಕಮಟ್ಟಿಗೆ ನಗದು ಇಟ್ಟ್ಬಿಟ್ಟು ಹೋದ ತಂದೆ. ಅಳಿಯನ ಚಿಕ್ಕಂದ್ನಲ್ಲಿ. ಸಂಬಂಧ ಒದಗಿದ್ದು ಬಲು ಅದೃಷ್ಟ ನಮಗೂ ನನ್ತಂಗೀಗೂ. ಅಳಿಯ ವೈಮುಖಿ ಬಣ್ಣ ಗುಣ ಅಚ್ಚುಕಟ್ಟು...ಅಲ್ದೆ ಮಗು ಹಾಗೆ ಸ್ವಭಾವ. ಇನ್ನು ತಾಯಿಾನೋ ಹೆಣ್ಣು ಹೆತ್ತೋಳಲ್ಲ...ಸೊಸೆ ಅಂದ್ರೆ ಪ್ರಾಣ...ಮದುವೆಯಿರಲಿ. ಪ್ರಸ್ತ ವಿರಲಿ. ಅದಲ್ಲ ಕಥೆ. ತಂಗಿ ಆರು ತಿಂಗಳ ಗರ್ಭಿಣಿ. ತವರು ಮನೆಗೆ ಪ್ರಸವಕ್ಕೆ ಕರೆತರೋಕೆ ಹೋಗಿದ್ವಿ ನಾನೂ ನಮ್ಮಮ್ಮೂ ಕ್ಯಾತ್ಸಂದ್ರಕ್ಕೆ. ಇಳಿದದಿನ ಸುಬ್ರಾಯನಷಷ್ಠಿ. ಮೊದಲೇ ಹೇಳಿದ್ದೇನೆ ಮನೆಮಠ ಹೊಲ ಗದ್ದೆ ತೋಟ ಮಗನಿಗಿದ್ರೂನೂವೆ...ನನ್ನ ತಂಗಿ ಅತ್ತೇಗೆ ನಗದು ಇಟ್ಕೊಂಡಿದ್ದ ಗಂಡಾಂತ...ದೇವ್ರುದಿಂಡ್ರು. ವ್ರತ–ನಿಯಮ ಯಾತ್ರೆ ಇತ್ಯಾದಿಗಳಲ್ಲಿ ನಂಬ್ಕೆ ಆ ಚಿನ್ನ ದಂಥ ಹೆಂಗಸಿಗೆ. "ಮಗನಿಗೆ ಬೇಕಾದಷ್ಟಿದೆ! ನಾನು ಇದಬೇಕಾದ್ದೇನೂ ಇಲ್ಲ! ಇವರಿಟ್ಟ ದ್ರವ್ಯಾನ ಸದುಪಯೋಗಮಾಡಿ...ಇವರ್ಗೆ ಸೇರೋ ಬಗೆ ಮಾಡ್ತೇನೆ" ಅಂಬೊ ಅಭಿಪ್ರಾಯಾನ ಮುಂದಿಟ್ಕೊಂಡು ಕಾಶಿವಿಶ್ವೇಶ್ವರನ ದರ್ಶನವಾಯಿತು. ಕಂಚಿ ಕಾಮಾಕ್ಷಿ ದರ್ಶನವಾಯಿತು! ರಾಮೇಶ್ವರದಲ್ಲಿ ರಾಮಪ್ರತಿಷ್ಠಿಸಿದ ಸಹಸ್ರ ಲಿಂಗಕ್ಕೂ ಸಹಸ್ರ ರೂಪಾಯಿಗಳ ಅರ್ಚನೆ ಆಯಿತು. ಅಲ್ದೆ ಮಧುರ. ದ್ವಾರಕಿ. ಹರಿದ್ವಾರ. ಗಯ ಈ ಬಾಬ್ತುಗಳೂ ಆಯ್ತು. ಇದ್ದದ್ದೆಲ್ಲಾ ಮೊತ್ತ ಚಿನ್ನದಲ್ಲಿ ನಾಗಸರ್ಪ ಮಾಡಿ ಬ್ರಾಹ್ಮಣನಿಗೆ ದಾನ ಮಾಡಿದ್ದಾಯಿತು. ನಾನು ಹೇಳಿದ್ಹಾಗೆ. ನಾನೂ ನಮ್ಮಮ್ಮ ನಮ್ಮ ತಂಗೀನ ಪ್ರಸವಕ್ಕೆ ಕರೆತರೋಕೆ ಹೋದದ್ದು. ಇತ್ತಮಧ್ಯೆ ಇನ್ನೊಂದು ಉಪಕಥೆ. ನನ್ನ ಹೆಸರು ಶಾಮಣ್ಣ. ಮೆಟ್ರಿಕ್ಯುಲೇಷನ್‌ವರೆಗೂ ಹೈಸ್ಕೂಲಲ್ಲಿ ಓದುತ್ತಿದ್ದಾಗ ನಮ್ಮ ತಂದೆ ಕಣ್ಣು ಮುಚ್ಕೊಂಡ್ರು. ಸ್ಕೂಲುಬಿಟ್ಟು ನನ್ನ ಜೀವನೋಪಾಯನ ನೋಡ್ಕೊಳ್ಳೋಕೆ

ಹಳ್ಳಿಗೆ ಹಿಂತಿರುಗಿ ಬಂದೆ. ಸ್ಕೂಲಿನಲ್ಲಿದ್ದಾಗ ನನ್ನ ಹೆಸರು ಟಿ. ಎ. ಶಾಮಣ್ಣ. ಟಿ. ತಾವರೆಕೆರೆ, ಎ. ನಮ್ಮ ತಂದೆ ಹೆಸ್ರು ಅಶ್ವತ್ಥ. ಸ್ಕೂಲಿನಲ್ಲಿ ನನ್ನ ಪಕ್ಕದಲ್ಲಿ ಇನ್ನೊಬ್ಬ ಶಾಮಣ್ಣ. ಅವನೂ ಟಿ. ನೆ ತರೀಕೆರೆ. ಮಲ್ನಾಡುಕಡೆ. ಭಾಗ್ಯವಂತರ ಹುಡುಗ ; ಕಾಫಿ ಎಸ್ಟೇಟುಇತ್ಯಾದಿ. ಬಿ. ಎ. ನೂ ಪಾಸ್ ಮಾಡಿ ಅಗ್ರಿಕಲ್ಚರ್ ಅಂತಾರಲ್ಲ ವ್ಯವಸಾಯದ ಇಲಾಖೆ. ಆ ಬಾಬತ್‌ನಲ್ಲಿ ಕೆಲ್ಸ ಕಲ್ತ್ಕೊಂಡು ತಿರುಗಿ ಹಳ್ಳಿಗೆ ಬಂದು ಧಾನ್ಯ ಸಸ್ಯಾದಿಗ್ಳು ಕಾಫಿ ಉತ್ಪತ್ತಿ ಇತ್ಯಾದಿಗ್ಳು ತನಗೂ ತನ್ನ ಸುತ್ತಮುತ್ತ ಇರುವವರಿಗೂ ಒಂದಕ್ಕೆರಡು ಉತ್ಪತ್ತಿ ಮಾಡಿಸ್ತಾ ಇದಾನೆ. ಈಗ ತಹಲ್‌ವರಿಗೂ ಸ್ಕೂಲಿನಲ್ಲಿ ಇಬ್ರೂ ಶಾಮಿ, ಇಬ್ರೂ ಪತ್ರಾತ್ರಲೇ ಕೂತ್ಕೊಳ್ಳೋದು, ಅಲ್ದೆ ಭಾಗ್ಯವಂತನ ಬಡಾಯಿ ಅವನಿಗಿಲ್ಲ. ಬಡತನದ ಬೆದರಿಕೆ ನನಗಿಲ್ಲ. ಹೀಗೋಹಾಗೋ ನಮ್ಮಿಬ್ರಿಗೂ ಅದು ಹೇಳೋಕೆ ಅಸಾಧ್ಯ...ಅನ್ಯೋನ್ಯ. ಸ್ನೇಹ ಅಂತ ಅಂತೇವೇ ಹೊರ್ತು ಇವೆಲ್ಲಾನ್ನೂ ಮೀರಿಸಿದ ಒಂದು ಬಾಂಧವ್ಯ ನಮಗೆ. ಕಥೆ ಯಾಕೆ ಬೆಳಸಬೇಕು. ಮೆಟ್ರಿಕ್‌ಲೇರ್ಷ ಮುಂಚೇನೇವೇ ಮನೇ ಬಂದು ಸೇರಿದೆ ನಾನು. ಶಾಮಿನೂ ಹಾಸನದಿಂದ ಬೆಂಗಳೂರು, ಬೆಂಗಳೂರಿಂದ ಮದರಾಸು. ಅಲ್ಲಿ ಬಿ.ಎ. ಆಗುತ್ಲೂ ಯಥಾಸ್ಥಾನಂ ಪುನಃ ಬೆಂಗಳೂರು, ಹೆಬ್ಬಾಳ. ಆಮೇಲೆ ತನ್ನೂರು ತರೀ ಕೆರೆ. ಅವನಾಯಿತು ಅವನ ಕಾಫಿ ಎಸ್ಟೇಟು ಆಯಿತು. ಆದ್ರೂನೂವೇ ನೋಡಿ ! ಅನ್ಯೋನ್ಯ ಸ್ನೇಹ ಇವುಗಳ್ನ ಮೀರಿಸಿದ್ದೇ ಬಾಂಧವ್ಯ. ನಮ್ಮ ಬಾಲ್ಯಸ್ನೇಹಕ್ಕೆ ಸೂಚನೆ ಹೇಳ್ತೀನೆ. ಆಗಿಂದ ತಿಂಗಳು ತಿಂಗಳೂ ಬಿಡದೆ ಕಾಗದಗಳು ಬದಲಾಯಿಸ್ಕೊಳ್ತಾ ಈಗಿನವರಿಗೂ ಬೆಳೆಸ್ತಿದೇವೆ. ಆದ್ರೆ ಈಗ ಹೇಳೋ ಕಥೆ ಈಗಿಂದೀಚಿನದು. ಕ್ಯಾತ್ಸಂದ್ರದಲ್ಲಿ ನಾನೂ ನಮ್ಮಮ್ಮೂ ಆರು ತಿಂಗಳು ಗರ್ಭಿಣಿಯಾದ ನನ್ನ ತಂಗೀನ ಪ್ರಸವಕ್ಕೆ ಕರೆತರೋಕೆ ಹೋದದ್ದು ಸುಬ್ರಾಯನಷಷ್ಠೀ ದಿನ, ಅಂತಲ್ವೇ ಪ್ರಾರಂಭಿಸಿದ್ದು ನನ್ನ ಕಥೆ ?

ತಕ್ಕಮಟ್ಟಿಗೆ ದೊಡ್ಡ ಹಳ್ಳಿ ಕ್ಯಾತ್ಸಂದ್ರ. ಬೀಗ್ರಿಮನೆ ಊರಿಗೆಲ್ಲಾ ದೊಡ್ಡದು. ಅವತ್ತಿನ ಖರ್ಚು...ಪೂಜೆ ಪುನಸ್ಕಾರ ಗೋದಾನ ಭೂರಿ ಸಂತರ್ಪಣೆ ಅಲ್ದೆ ಈ ಗಾಂಧಿ ಮಹಾತ್ಮರ ಗಲಾಟೇಲಿ ಹೊಲಗೇರಿ ಮಾದಿಗಕೇರಿ ಇಲ್ಲೆಲ್ಲಾ ಊಟ, ಅಲ್ದೆ ಊರ ಗುಡೀಲಿ ಅಭಿಷೇಕ, ಸಹಸ್ರಾರ್ಚನೆ, ಏತನ್ಮಧ್ಯೆ ಮನೇ ಪುರೋಹಿತನಿಗೆ ಸುಬ್ರಾಯನ ಸ್ವರ್ಣಪ್ರತಿಮೆ ದಾನ...ಅಲ್ದೆ ಮುತ್ತೈದೆಯರಿಗೆ ಕರಿಗೆ ಕಣ ದಾನಗ್ಳು ; ನಮ್ಮ ತಾಯಿಗೆ ನಾರ್ಮಡಿ. ನನಗೆ ಜರ್ತಾರಿ ಅಂಚು ಧೋತ್ರ, ವಲ್ಲಿ...ಯಾಕೆ ಹೇಳ್ತೀನಿ ಅಂದ್ರೆ ೨ ಸಹಸ್ರ ಶ್ವೇತಗಳಾದ್ರೂ ಮುಟ್ಟಬೇಕು ಆ ಮುದುಕಿ ಕೈಯಿಂದ ಖರ್ಚು. ನಾನು ಹೇಳೋ ಕಥೆ ದಿನವೆಲ್ಲಾ ಆದ ಗಲಾಟೆ ವರ್ಣನೆ ಅಲ್ಲಾ ; ಆ ದಿನ ರಾತ್ರಿ ಒಂಭತ್ತು ಘಂಟೆ ಸರಾಸರಿ ಪ್ರಾರಂಭವಾದದ್ದು...ನಿಮ್ಮಿಮ್ಮಲ್ಲಿ ಪೂಜೆಯತಪ್ಪು ನೆಪ್ಪು ವಾದದ ಮಧ್ಯ ನಾನು ನುಗ್ಗಿ ಹೇಳಿದ ತಣ್ಣೀರಿನ ಪೂಜೆಯ ಕಥೆಯ ಪ್ರಕರ್ಣ. ಹೇಳಿದ ಹಾಗೆ ಒಂಭತ್ತು ಘಂಟೆ ಸರಾಸರಿ. ಗಂಡಸರಿಗೆಲ್ಲಾ ಊಟ ಆಗ್ಹೋಗಿತ್ತು. ಮುಂದಿನ ಕೋಣೇಲಿ...ಎಲೆಯೆಲ್ಲಾ ಎತ್ತಿಹಾಕಿ ಗೋಮ ಹಚ್ಚಿ ಕೈ ತೊಳಕೊಂಡು ಆಗ್ತಾನೆ ಹೆಂಗಸ್ರು...ಪರಿಚಾರಕರಿಲ್ಲ. ಮನೆ. ಮನೇವ್ರು, ನೆಂಟ್ರು, ನೆರೆ ಹೊರೇವ್ರು...ಹೆಂಗಸ್ರೇ ಕೆಲ್ಸ ; ಹೇಳಿದ ಹಾಗೆ. ಗಂಡಸ್ರೂಟದ ಗಲಾಟೆಯೆಲ್ಲಾ ತೀರಿ ಆಗ್ತಾನೆ ತಮ್ಮ ಊಟಗಳ್ಗೆ ಏರ್ಪಾಡು ಹಿಂದಿನ ಅಂಗಳದಲ್ಲಿ ಮಾಡ್ತೀರೋ ಗಜಗುಜಿ. ಹಾವ ಅಂದ್ರೆ ನಾನು, ಆತನು, ಆತನ ಸೋದರಮಾವ, ಇನ್ನಿಬ್ಬರು ಮೂವರು ನೆಂಟ್ರು, ಜಗಲಿಗೆ ಬಂದು ಕೂತು ತಾಂಬೂಲ ಆಗೀತಿಧೇವೆ. ಕಗ್ಗತ್ಲೆ. ಗುಡಿ ಶಿಖರದ ಮೇಲಿನ ಲಾಂದ್ರದ ಬೆಳಕು ಇದ್ದ ಕತ್ಲೇನ ಇನ್ನೂ ಕಪ್ಪಾಗಿ ತಿದ್ದ್‌ತಿದೆ. ಜಗಲಿ ಗೋಡೆ ಗೂಡ್ನಲ್ಲಿ ಇಟ್ಟಿದ್ದ ಒಂದು ಹಣತೇ ಬೆಳಕಿನಲ್ಲೇ ನಮ್ಮ ನಮ್ಮ ಸಂಭಾಷಣೆ. ಮೊದಲು ಮಾತು ಎತ್ತಿದ್ದು ಪುರೋಹಿತರು ; ಸುಬ್ರಾಯನ್ನ ಷಷ್ಠಿ ದಿನಾ ಹೇಳಿ ಬಾಗಿನದಸಮೇತ ಹೊರಟುಹೋದ ಕಥೆ. ಆಮೇಲೆ ಮಾತಿನ ಮೇಲೆ ಮಾತು ಬಂದು. ಕಂಡ ಹಾವೂ. ಕಾಣದ ಹಾವೂ. ಕಡಿದ ಹಾವೂ. ಕಡಿಯದ ಹಾವೂ. ಮಲಯಾಳೀ ಮಂತ್ರ, ಬೇರಿನ ಸೊಪ್ಪು, ಬೇಗ ವಿಷ ಇಳಿಸೋದು. ಹೀಗೆಲ್ಲ ಹಾವುಗಳ ಕಥೇಗೆ ಪ್ರಾರಂಭ. ಏತನ್ಮಧ್ಯೆ ಒಬ್ಬ ಹುಡುಗ. ಬಲು ಚಟುವಟಿಕೆ. ದೂರದ ಸಂಬಂಧ ಅಳಿಯನಿಗೆ ; ಹೇಳಿದ—ಅವರ

ಇಸ್ಕೂಲ್‌ನಲ್ಲಿ ಎರಡು ಮೂರು ದಿನಕ್ಕೆ ಒಂದೆ ಕ್ಲಾಸುಗ್ಳು ಜರಿಗ್ತಿರೋವಾಗ್ಲೇನೇ ಒಂದು ನಾಗರ ಹಾವು ಕಂಡ್ಬಂದು ಹುಡುಗರೆಲ್ಲ ಬೆದರಿ, ಎದುರು ಬಂಗ್ಲೇಲಿದ್ದ ಮಿಷನರಿ ದೊರೆ ಬಂದೂಕ್ ಸಮೇತ ಬಂದು ಆ ಹಾವ್ನ ಕೊಂದ ಅನ್ನುತ್ಲೂವೆ...'ಶಾಂತಂ ಪಾಪಂ! ಶಾಂತಂ ಪಾಪಂ! ಕೃಷ್ಣಕೃಷ್ಣ!' ಅಂದ ನಮ್ಮ ಅಳಿಯನ ಸೋದರಮಾವ. 'ಯಾಕ್ರೀ' ಅಂದದ್ದಕ್ಕೆ...'ಹಾವಾಗ್ಲೀ ಹಸುವಾಗ್ಲಿ ವಾಗ್ಲೀ ...ಹಿಂಸೇ ಹಿಂಸೇನೆ' ಅಂದ ಆತ. ನನಗೆ ಶಾಮಿ ಜ್ಞಾಪಕ ಬಂತು. ಪಕಪಕನೆ ನಕ್ಕೆ. 'ಇದೇನ್ನಗೋಂತ ಕೇಳಿದ್ದಕ್ಕೆ ನಾನ್ಹೇಳಿದ್ದು : "ಹಿಂಸೆ ಅಂದ್ರಲ್ಲಾ, ಹಾಪಿರಬೇಕಾಗಿದ್ದು ಅದರ ಹುತ್ತದಲ್ಲಿ. ತಿಳುವಳಿಕೆ ಅದಕ್ಕಿಲ್ಲದ ಪಕ್ಷಕ್ಕೆ ಹುತ್ತ ಬಿಟ್ಟು ಹೊರಕ್ಬಂದು ಹತ್ತ್ನೂರು ಹುಡುಗ್ರು ಓಡಾಡೋ ಸ್ಕೂಲಿಗೆ ಬಂದು ವಿಷದ ಹಲ್ಲು ಇಟ್ಕೊಂಡು ಹೆದರ್ಸೋ ಪ್ರಾಣೀನ ಕೊಲ್ಲೋದು ಹಿಂಸೆ ಅಲ್ಲ. ಅದ್ರ ಅವರ ಜನ್ಮಕ್ಕೂ ಮೋಕ್ಷ. ಹುಡುಗರ ಹೆದರಿಕೇಗೂ ಮೋಕ್ಷ, ಪಾಪ ಎಲ್ಲೀದೂ?" ಅಂದಷ್ಟಕ್ಕೆ "ಆ ಮಿಷನರಿ ದೊರೆಯೇನೊ ಬಂದೂಕಿನಿಂದ ನೋವಿಲ್ದೆ ಒಂದೇ ಗುಂಡಿನಲ್ಲಿ ಕೊಂದ ಆ ಹಾವ್ನ! ನಮ್ಮ ಶಾಮಿಗಾನ ಇದ್ದಿದ್ದಿದ್ರೆ ಆ ಹಾವ್ನ ಹೇಗಾದ್ರು ಜೀವಸಮೇತ ಹಿಡ್ದು ನರನರ ಕಿತ್ತು ಕೊನೇಗೂ ಕೊಲ್ಲೋಕೆ ಹಿಂಜರಿದು ಕೊಲ್ತಿದ್ದ. ಮುಖ್ಯ ನಮ್ಮ ಶಾಮಿಗೆ ನಾಗರಹಾವಿನ ಮೇಲಿರೋ ಸೇಡು ಈ ಮಿಷನರಿ ಸಾಬ್‌ಗೆ ಇಲ್ಲದಿದ್ದದ್ದು ಆ ಹಾವಿನ ಪುಣ್ಯ"ಂತ ಹೇಳಿ ನಮ್ಮ ಶಾಮಿ ಚರಿತ್ರೆ ಹೇಳೋಕೆ ಪ್ರಾರಂಭಿಸ್ತಿದ್ದೆ. ಅಷ್ಟರಲ್ಲಿ ಅಳಿಯ ದಿನವೆಲ್ಲಾ ಓಡಾಡಿ ದಣಿದು ಹೊಟ್ಟೆ ತುಂಬಾನು ತಿಂದು...ಆಕಳಿಸೋ ಬಾಯಿಗೆ "ರಾಘವಾ! ರಾಘವಾ!"ಂತ ಚಿಟಿಕೆಗಳು ಒಟ್ಟಿಸ್ತ..."ನೀವೆಲ್ಲ ಮಾತಾಡ್ಕೊಳ್ತಿರಿ, ನನಗೆ ನಿದ್ದೆ ಬರುತ್ತೆ, ಹೋಗಿ ಬಿದ್ಕೋತೇನೆ" ಅನ್ಕೊಂಡು ಒಳಕ್ಕೆ ಹೋದ. ನಾನೊ ಹಾವಿನ್ಮೇಲೆ ಸೇಡಿಟ್ಟಿರೋ ನಮ್ಮ ಶಾಮಿ ಯಾರು, ಏನು, ಎತ್ತ, ಅಂಬೋದ್ನೆಲ್ಲಾ ವಿವರಿಸ್ತಿ ಧೇನೆ. ನಿಶ್ಶಬ್ದವಾಗಿ ತಿರಿಗಿ ತೆರಿಯ್ತು ಅಳಿಯ ಆಗ್ತಾನೆ ಮುಚ್ಕೊಂಡ್ಹೋಗಿದ್ದ ಬೀದಿ ಬಾಗಿಲು! ತಿರುಗ್ತೇನೆ! ನನ್ನ ತಂಗಿ ಬಾಯ್ಬಿಡ್ದೇನೆ ಬಲಗೈಯ್ಯಿಂದ ಬಾ, ಬಾಂತ ಸೌಂಜ್ಞೆ ಮಾಡ್ತಿದಾಳೆ. ಅರ್ಥವಾಗದೆ ಜಗಲೀಲಿದ್ದೋರಿಗೆ "ಬಂದೆ"ಂತ ಹೇಳಿ ಜಗಲಿ ಇಳಿದು ತೆಗೆದ ಬಾಗಿಲು ದಾಟಿ ಒಳಗೆ ಹೋದ್ನೋ ಇಲ್ವೋ...ನನ್ತಂಗಿ ಕುತ್ಗೇನ ಎರಡು ತೋಳುಗಳಿಂದ ಬಿಗಿದು. ಮುಖಾನ ನನ್ನೆದೇ ಮೇಲಿಟ್ಟು "ಅಣ್ಣಾ! ಬಂತಲ್ಲಾ ಕೇಡು ನನ್ನ ತಾಳೀಗೆ ಇನ್ನೇನ್ಗತಿ!" ಅನ್ನುತ್ತ ತನ್ನ ಭಾರಾನೆಲ್ಲಾ ನನ್ನಮೇಲೆ ಹಾಕಿ ಗೋಳಾಡ್ತಿದಾಳೆ! ಒಂದೂ ಅರ್ಥವಾಗಲಿಲ್ಲ ನನಗೆ ಮೈಗೇನಾದ್ರು ಬಂದ್ರೆ...ತಾಳೀ ಗಪಾಯ ಎಲ್ಲೀದು ? ಒಂದೂ ತೋಚಲಿಲ್ಲ. ಮೆಲ್ಲಗೆ ಅವಳ ತಲೆ ಸವರ್ತ "ಇದೇನ್ಕೆಂಚು"...ಅನ್ನತ್ಲು "ಮೆಲ್ಲಗಣ್ಣ ಮೆಲ್ಲಗೆ ಮಾತಾಡು ನಿನ್ನ ಧ್ವನಿಗಾನ ಎತ್ತಿದ್ಯೋ...ನಾನು ಕೆಟ್ಟಹಾಗೆ!" ಎಂದು ಅಂದು ನನ್ನ ಎಳಕೊಂಡುಹೋಗಿ...ಮೊದ್ಲೇ ಹೇಳಿದ್ನಲ್ಲಾ ಮುಂದಿನ್ಕೋಣೆ ಗಂಡಸ್ರು ಊಟಮಾಡಿದ್ದು ...ಅಂತ ಅದ್ರಪಕ್ಕದಲ್ಲಿ ಒಂದು ಕೋಣೆ : ಅಲ್ಲಿಯೇ ನನ್ನ ತಂಗಿ ಮೆಲ್ಲಗೆ ಎಳಕೊಂಡು ಹೋಗಿ ಹೊಸಲಿಂದ ಹತ್ತೆಜ್ಜೆ ಈಚೇನೆ ನಿಲ್ಲಿಸಿ "ಅಲ್ನೋಡಣ್ಣ! ಇನ್ನೇನ್ಗತಿ! ನನ್ನ ಗತಿ! ನನ್ನ ತಾಳಿ ಗತಿ! ನನ್ನ ಹೊಟ್ಟೇಲಿರೊ ಮಗುವಿನ ಗತಿ!" ಅಂತ ಬಿಕ್ಕಿ ಬಿಕ್ಕಿ ಬರುವ ಅಳುವನ್ನು ನುಂಗುತ್ತಾ ಎರಡು ತೋಳಿಂದ್ಲೂ ನನ್ನ ಕುತ್ಗೇನ ಬಿಮ್ಮನೆ ಬಿಗಿದು ನನ್ಮೇಲೆ ಬಿದ್ಕೊಂಡ ನನ್ತಂಗೀನ ಎಡಗೈಯಿಂದ ಹಿಡ ಕೊಂಡು ತಿರುಗ್ತೇನೆ ಅವಳು ತೋರಿಸಿದಕಡೆ ನೋಡೋಕೆ. ನನಗೀಗ್ಲೂ ಆಶ್ಚರ್ಯ! ನಾನು ಆಗ ನೋಡಿದ್ನ ನೋಡುತ್ಲೂವೆ ನನ್ನ ಮೇಲೆ ಒರಕ್ಕೊಂಡಿದ್ದ ತಂಗಿ ಸಮೇತ ನಾನು ಹೇಗೆ ಮೂರ್ಛೆ ಬೀಳ್ದೆ ನೆಟ್ಕೊಂಡು ನಿಂತಿದ್ದೇಂಬೋದು ಈಗ್ಲೂ ನನಗಾಶ್ಚರ್ಯ! ಕೋಣೆ ಕತ್ಲೇಂತ್ಲೇ ಹೇಳ್ಬೇಕು! ಇರೋ ಬೆಳ್ಕು ಪುಟ್ಟದೊಂದು ನೀರಾಂಜನ. ಎದರು ಗೋಡೇಲಿ ಚಿನ್ನದ ಚಿಕ್ಕದೊಂದು ಚಾಮುಂಡಿ ಅಕ್ಕಪಕ್ಕದಲ್ಲಿ ರಾಮ, ಕೃಷ್ಣ, ಪಾರ್ವತಿ ಪರಮೇಶ್ವರರು, ಕೆಳಗೆ ಸರಸ್ವತಿ ಲಕ್ಷ್ಮಿ. ಎಲ್ಲಾ ಬೆಳ್ಳಿ! ಫಳಫಳಾಂತ ಪ್ರಜ್ವಲಿಸ್ತಿವೆ! ಇವುಗಳ ಕಡೆ ಅರ್ಧ ಕತ್ಲೇಲಿ ಬಿದ್ಕೊಂಡಿದಾನೆ, ಅಳಿಯ. ನಿದ್ದೆ. ಸ್ವಲ್ಪ ಗೊರಕೆ. ಇವನ್ನಲೇಗೂ ಪ್ರತಿಮೆಗಳು ಹಾಕಿರೋ ಗೋಡೆಗೂ ಒಂದಡಿ ಕೂಡ ಇಲ್ಲ. ಆ ಒಂದಡೀಲಿ ಯಾದ್ರು ಎತ್ಕೊಂಡು ಹೆಡೇನ ಒಂದ್ಕರೀ ನಾಗ್ರಹಾವು ಹಿಂದಿರೊ ಗೋಡೇಗೂ ಮುಂದಿರೊ ಅಳಿಯನ ಮುಖಕ್ಕೂ ಆಡಿಸ್ತಿದೆ. ಅದ್ರ ಕಣ್ಣುಗ್ಳು ಆ ಒಂದು ನೀರಾಂಜನದ ಬೆಳಕ್ನಲ್ಲಿ...ಚಾಮುಂಡಿ ಚಿನ್ನದ ಪ್ರತಿಮೇಗಿನ್ನ ಜಾಸ್ತಿ ಜ್ವಾಲೆ ಕಾರ್ತಿದೆ! ನನ್ಗತಿಯೇನು! ಹೆಣವ್ಹಾಗೆ ನನ್ಮೇಲೆ ಒರಗ್ಕೊಂ

ಡಿರೋ ನನ್ನ ತಂಗಿ ಗತಿಯೇನು! ಹೆಡೆ ತೂಗ್ತ ಇರೋ ಆ ನಾಗರಹಾವ್ಗೆ ಮುಖ ಬಿಚ್ಕೊಂಡು ಒಂದೂ ತಿಳಿಯದೆ ಮಗುವಿನ ಹಾಗೆ ನಿದ್ದೆ ಮಾಡ್ತಿದ್ದ ಅಳಿಯನ ಗತಿಯೇನು ? ಯಾವ ದೇವರ್ನ ಕೂಗೋದು ? ದೇವ್ರುಗ್ಳೆಲ್ಲಾ ಚಿನ್ನದಲ್ಲೂ ಬೆಳ್ಳೀಲೂ ಅಲ್ಲೇ ಇದಾರೆ...ಆ ಹಾವಿನ ಪಕ್ಕದಲ್ಲೇ! ಜಗಲೀಲೋ ಮಾತುಗಳ ಗಲಾಟೆ. ಹಿಂದಿನ ಹಜಾರ ಹೆಂಗಸ್ರು ಗಜಗುಜಿ. ಇಲ್ಲೋ ನಾನು ನನ್ತಂಗಿ. ನಮ್ಮೆದ್ರುಗೆ ಕೋಣೇಲಿ ಹೆಡೆಬೀಸ್ತಿರೋ ನಾಗಸರ್ಪ, ಅಳಿಯ. ಒಂದೂ ತೋಚ್ದೆ ನನ್ನ ಬೆದರ್ಕೇಲಿ...ಆ ಹಾಳು ನೋಟಾನು ನೋಡ್ಲಾರ್ದೆ ಕಣ್ಣು ಮುಚ್ಕೊಂಡು ನನ್ನ ತಂಗೀನ ತಬ್ಕೊಂಡೆ. ಎಷ್ಟು ನಿಮಿಷಗಳು, ಎಷ್ಟು ಘಳಿಗೆಗಳು, ಇಲ್ಲ ಎಷ್ಟು ವರುಷಗಳು ಹಾಗೆ ನಿಂತಿದ್ದೆವ್ರೋ ನಾನೂ ನನ್ನ ತಂಗೀನೂ, ಈಗ್ಲೂ ನನಗ್ಗೊತ್ತಿಲ್ಲ. ಒಂದು ಚೆಲ್ಲು ಅಲ್ದೆ "ಶಾಮಿ" ಶಾಮೀಂತ ನನ್ಹೆಸ್ರು ಬೀದಿಯಿಂದ ಯಾರ್ದೋ ಕೂಗು ಕೇಳ್ಬಂದು ಬಿಚ್ತೇನೆ ನನ್ಕಣ್ಣು, ಅದೇ ಸೀನು ಎದ್ರುಗೆ! ಅದೇ ಕೋಣೆ. ಅದೇ ನೀರಾಂಜನದ ಬೆಳಕ್ನಲ್ಲಿ. ಅದೇ ಚಿನ್ನ ಬೆಳ್ಳಿ ಪ್ರತಿಮೆಗಳು, ಅದೇ ಹೆಡೆಯೆತ್ತಿದ ಸರ್ಪ, ಅದೇ ಅಳಿಯನ್ಮುಖ. ಆದ್ರೊಂದು ವ್ಯತ್ಯಾಸ. ಬೀದಿಯಿಂದ ಬೈಸ್ಕಲ್ ಘಂಟೆ ಬಾರಿಸ್ತ "ಶಾಮಿ ಶಾಮೀಂತ ಕಿರುಲ್ತಿರೋ ಧ್ವನಿ ನಮ್ಶಾಮೀದು"...ಅಂತ ತಿಳಿಯತ್ಲೂವೆ...ಈ ಎದ್ರು ಕೋಣೇನೇ ಮರ್ತುಕೆಂಚೂನ ಅರ್ಧ ಎಳ್ಕೊಂಡು ಅರ್ಧ ಎತ್ಕೊಂಡು ಬೀದಿ ಬಾಕಿಲು ಹೊಸಲು ಸೇರಿ "ಶಾಮಿ! ಶಾಮಿ! ಇಲ್ಲೇ ಇಧೇನೆ ಮೆಲ್ಲಗೆ ಬಾ! ಬೇಗ ಬಾ!" ಅಂದ ಜ್ಞಾಪಕ. ಅವನು ಈ ಕತ್ಲೇಲಿ ಒಂದು ಎಲೆಕ್ಟ್ರಿಕ್ ಟಾರ್ಚಿನ ಬೆಳಕನ್ನು ಬಾಕಲಿಗೆ ತಿರುಗಿಸಿ ನನ್ನ ಮುಖದಲ್ಲಿ ಕಂಡ ಹೆದರಿಕೇನೂ ನನ್ನ ಮೇಲೆ ಮೂರ್ಛೆ ಬಿದ್ದು ಒರಗಿದ್ದ ನನ್ನ ತಂಗೀನ್ನೂ ನೋಡಿ ನೆಟ್ಟಗೆ ಬಂದು "ಏನು ಶಾಮಿ ಇದು?" ಅಂದದ್ದು ಜ್ಞಾಪಕ. "ನಿಶ್ಶಬ್ದವಾಗಿ ಒಳಗ್ಬಾ" ಅಂದು ಅವನ ಕೈಹಿಡ್ಕೊಂಡು ಒಳಗೆ ಕರೆದೆ. ಕೋಣೇಲಿ ಇರೋ ಸ್ಥಿತಿ ತೋರಿಸಿ...'ನಮ್ಮಳಿಯ ಶಾಮಿ!' ಅನ್ನುತ್ಲೂವೆ... ಅದೇನು ಗಂಡ್ಸು! ಒಂದು ಕ್ಷಣದಲ್ಲಿ ತಿಳುಕೊಂಡ ಸನ್ನಿವೇಶದ ಜೀವಾಳಾನ. ಟಾರ್ಚ್ನ ಆರಿಸ್ದ. ಹಿಂದಿನ ಬಾಕಿಲು ತೆಗೆದು "ನಿನ್ನ ತಂಗೀನ ಹೆಂಗಸ್ರು ಹತ್ತಿರ ಒಪ್ಸಿ...ಹೇಳೀ ಬಿಡು. 'ಹಾವು'! ನೀವೇನಾದ್ರು ಗಲಾಟೆ ಮಾಡ್ದೆ ಇದ್ರೋ ಅಪಾಯವೇನೂ ಇಲ್ಲ. ನಿಮ್ಮಗಳ ಕಿರ್ಲಾಟ ಕೇಳಿ ಹಾವು ರೇಗಿತೋ ಗಂಡಸರಿಗೆ ಹಾನಿ, ಅಂಬೋದ್ನ ಹೇಳ್ಬಿಟ್ಟು ಬೇಗ ಬಾ!" ಅಂದ. ಇವನು ಹೇಳಿದ್ನ ಬೀಗ್ತಿಗೆ ಹೇಳಿ ತಂಗೀನೊಪ್ಸಿ ಬಂದೆ. 'ಹಿಂದಿನ ಬಾಕಿಲು ಹಾಕು' ಅಂದ ಶಾಮಿ. 'ಬೀದೀ ಬಾಕಿಲು ಹಾಕು' ಅಂದ: ಎರಡೂಬಿಗಿದೆ. ನಾವು ಊಟ ಮಾಡಿ ಗೋಡೇಗೇ ವಾಲಿಸಿದ ಮಣೆಗ್ಳಲ್ಲಿ ಒಂದನ್ನೆತ್ಕೊಂಡು, ರಬ್ಬರ್ ಬೂಡ್ಸುಹಾಕ್ಕೊಂಡಿದ್ದದ್ದು,—ನಿಶ್ಶಬ್ದವಾಗಿ ಕೋಣೇನ ಸಮೀಪ್ಸಿ— ಈಗ ನನ್ನೆದ್ರುಗೆ ಆಗ್ತ ಇರೋ ಹಾಗೆ ಇದೇ ಥಟ್ಟನೆ ಟಾರ್ಚ್ನ ಸ್ವಿಚ್ ಮಾಡಿ ಮಣೇನ ಗುರಾಣಿ ಹಾಗೆ ಮುಂದಕ್ಕೆ ಹಿಡುಕೊಂಡು ಟಾರ್ಚಿನ ಬೆಳಕ್ನ ಹಾವಿನ ಮುಖಕ್ಕೆ ಹಿಡೀತ "ಹುಸ್ ಹುಶ್" ಅನ್ನುತ್ಲೂವೆ ಶಾಮಿ. ನಿಂತಿದಾನೆ ಇವನು, ಸರಾಸರಿ ಇವನೆತ್ರ ಎದ್ದಾಗಿತ್ತು ಆ ಹಾವು! "ಫಟ್" ಅಂತ ಶಾಮಿ ಕಡೆ ಹೊಡೆದ ಜ್ಞಾಪಕ. ಆ ಪೆಟ್ಟು ಶಾಮಿ ಕೈಲಿದ್ದ ಮಣೆಗೆ ತಗುಲಿದ್ದು ಜ್ಞಾಪಕ! ಮತ್ತಿರುಗಿ ಹೊಡೆಯೋಕೆ ಆ ಹಾವು ಹೆಡೇನ ಹಿಂದಕ್ಕೆ ಬೀಸೋವಾಗ ತಾಕಿದ ಗೋಡೆ ಬಿಡೋಷ್ಟರಲ್ಲೇ ಒಂದೇ ಹಾರು ಶಾಮಿ ಹಾರಿ ಆ ಗೋಡೆ ಸಮೇತ ಆ ಹಾವ್ನ ಮಣೆಯಿಂದ ಅದುಮ್ಕೊಂಡ. ಅರ್ಧಡಿ ಕೂಡ ಇಲ್ಲ ಮಣೇ ಮೇಲೆ ಹಾವಿನ ಹೆಡೆ. ಮಿಕ್ಕದ್ದೆಲ್ಲಾ ಅಮುಕ್ಕೊಂಡಿಧಾನೆ ಗೋಡೇಗೆ ಮಣೆಯಿಂದ ಶಾಮಿ. ಕೆಳಗೆ ಬಾಕಿ ಒದ್ದಾಡ್ತಿದೆ ಹಾವಿನ ಬಾಲ. ಮಲಗಿದ್ದ ಅಳಿಯನ್ನ ಒಂದೇ ಒದೆ ಒದ್ದು ಎಬ್ಸಿ, ತಲೆ ತಿರುಗಿಸ್ದ. "ಶಾಮಿ, ಎಳಕೊಂಡು ಹೋಗು ಇವನ್ನ! ಹೊರಗ್ಬಿಟ್ಬಿಟ್ಟು ಮನೇಲಿರೋ ದೀಪಾನೆಲ್ಲಾ ತಂದ್ಬಿಡು, ಅಳಿಯಂದಿರ ಪ್ರಾಣಗಳ ಮೇಲೆ ಆಸೆ ಬಿದ್ದಿರೋ ಈ ಹಾವ್ಜಾತೀನ ಜೀವ ಸಹಿತ ಬಿಡಬಾರ್ದು. ಒಂದು ಗಳು ಒಂದ್ಹತ್ತಡಿ ನೂಲು ಹಗ್ಗ" ಅಂದ. ಬೆಚ್ಚಿದ್ದು ಎದ್ದ ಅಳಿಯ ಸುತ್ತಮುತ್ತ ನೋಡೋಕೆ ಮುಂಚೆ ಹೊರಗೆಳಕೊಂಡು ಹೋಗಿ ಜೀವ ಸಹಿತ ನನ್ನ ತಂಗೀ ಕಾಲಿಗೆ ಕೆಡವಿ. ಶಾಮಿ ಹೇಳಿದ ಹಾಗೆ ಎರಡು ಸೀಮೆಯೆಣ್ಣೆ ದೀಪಗ್ಳು, ನೂಲು ಹಗ್ಗ, ಒಂದು ಗಳು ತಂದಿಟ್ಟೆ. ಇನ್ನು ಆ ಹಾವ್ನ...ಸುಮಾರು ಆರಡಿಯಾದ್ರೂ ....ಇದ್ದಿರಬೇಕು. ಗೋಡೇಗೆ ಮಣೇ ಸಮೇತ ಅದುಮಿಕೊಂಡಿದ್ದಾನೆ ಶಾಮಿ. ಈ ಗಳೂನ

ಮಣೇಗೆ ಸರಿಯಾಗಿ ಮಧ್ಯದಲ್ಲಿಟ್ಟು ಆ ಹಾವ್ನ ಮಣೇನೂ ಗಳೂನ ಗೋಡೆಗೆ ಕಾಲಿಂದ ಅದುಮಿ ಕೊಂಡು ಎರಡು ಕೈಯಿಂದ ನೂಲೇಣೀನ ಸುತ್ತ್ಕ ಸುತ್ತ್ಕೀ ಅದ್ಕೇಗೆ ಬಿಗಿದ್ನೋ... ಅಲ್ಲೇ ನಿಂತಿದ್ದ ನನಗೆ ಅರ್ಥವೇ ಆಗ್ಲಿಲ್ಲ. 'ಆ ಕೊನೇ ಹಿಡಕೋ ಹುಷಾರೂಂತ ಗಳೂನ ಒಂದು ಕೊನೆ ನನ್ನ ಕೈಲಿ ಕೊಟ್ಟದ್ದು ಜ್ಞಾಪಕ. ಇನ್ನೊಂದ್ ಕೊನೆ ಅವನೆತ್ಕೊಂಡದ್ದು ಜ್ಞಾಪಕ. ಮಣೇಗೂ ಗಳುಗೂ ನೂಲೇಣಿ ಹಾಗೆ ಬಿಗಿದು ಬಿಟ್ಟಾಡ್ತಿರೋ ನಾಗರಹಾವ್ನ ಅವಸ್ಥದ ಪ್ರಕಾರ ಮೊತ್ಕೊಂಡ್ಹೋದ್ರು. ಬತ್ತಲಿ ತೋಟಕ್ಕೆ ಇಳಿಸಿದ್ರು. ಆಗ್ಲಾದ್ರೂ ಕಲ್ಲೋ ದೊಣ್ಣೆನೋ ತಗೊಂಡು ಚಚ್ಚಿ ಕೊಲ್ಲಾರಾಗಿತ್ತೇ ಆ ಹಾವ್ನ! ಉಹುಂ! ಶಾಮಿಯ ಸೇಡು ತೀರ್ಲೇಇಲ್ಲ. ಜೇಬಿಂದ ಒಂದು ಪೆನ್ನೈಫ್ ತೆಗೆದು ಅಲ್ಲೇ ಇದ್ದ ಹುಣಸೇ ಮರದಲ್ಲಿ ನಾಲ್ಕಾರು ಛಡಿಗಳು ಕತ್ತರಿಸ್ಕೊಂಡು ಮಣೇನ ನೆಲದ್ಮೇಲೆ ಕಟ್ಟಿದ. ಹಾವು ಮೇಲ್ಗಡೆ. ಹೊಡೆದಾ ಹೊಡೆದಾ ಹೊಡೆದಾ ನೋಡು ಆ ಹಾವ್ನ! ಆ ನಾಲ್ಕು ಛಡಿಗ್ಳು ಕಿತ್ತು ಕಟ್ಟಿಯಾಗೋವರ್ಗೂ ಹೊಡೆದಾ ...."ಸಾಯಿ ಸಾಯಿ ...ಆದ್ರೆ ನಮ್ಮನೇಲಿ ಈಗ್ಲೂ ನರಳೋ ಹಾಗೆ ನೊಂದೂ ನೊಂದೂ ಸಾಯಿ! ನೀನಷ್ಟೇ ಕಣಯ್ಯಾ! ನೀನಲ್ದಿದ್ರೇನೂ ನಿಮ್ಮಪ್ಪ, ನಿಮ್ಮಣ್ಣ ನಿಮ್ಮಮ್ಮ ಕಚ್ಚಿರಬಹುದು. ನಿನ್ನೀ ಹಾಳು ಹಾವಿನ ಜಾತೀ ಜಾತೀನೆ ನಿರ್ಮೂಲವಾಗೋವರಿಗೂ ನನ್ನ ಸಿಟ್ಟು ತೀರೋದಿಲ್ಲ" ಅಂತ ಆ ಹಾವ್ನ ಹೊಡೆದೂ ಹೊಡೆದೂ "ಒಂದೆಂಟ್ಹತ್ತು ಸೌದೆ ಒಂದು ಸೀಸೆ ಸೀಮೆಯೆಣ್ಣೆ ತಾ" ಅಂದ. ಒಂದೂ ತೋಚ್ದೆ ಅವನು ಕೇಳಿದ್ನ ತಂದಿಡುತ್ಲು ಮಣೇಗೆ ಕಟ್ಟಿ ಇವನ ಹೊಡೆತದಲ್ಲಿ ಒಂದೊಂದು ನರಾನು ಕಿತ್ತು ಛಿದ್ರವಾಗಿ ತೊಯ್ದು, ಇನ್ನೂ ಬುಸುಗುಟ್ತಿರೋ ಹಾವಿನ್ಮೇಲೆ ಸೌದೇನ ಪೇರ್ಸಿ ಸೀಮೆಯೆಣ್ಣೇನೂ ಸುರ್ದು ಜೋಬಿಂದ ಬೆಂಕಿಪೆಟ್ಟಿಗೆ ತೆಗೆದು ಕಡ್ಡಿಗೀಚಿ ಸೌದೇಗಿಟ್ಟು. ಅದೇ ಉರೀಲಿ ಒಂದು ಸಿಗರೇಟ್ನ ಹತ್ತಿಸ್ಕೊಂಡು ಸೇದ್ತಾ ನಿಂತಿದಾನೆ ಶಾಮಿ. ಹಿಂದಿಲ್ಲಿ ಮನೆವ್ರು. ಒಬ್ಬದ ಅಳಿಯ್ನ ಅಪಾಯ ದಿಂದ ಪಟ್ಟಿದ ಬೆದರ್ಕೆ ಇನ್ನೂ ಹೋಗ್ಲಿಲ್ಲ. ಅವನು ಬದುಕಬಂದ ಸಂತೋಷ ಇನ್ನೂ ಹತ್ತಿಲ್ಲ ಮನಸ್ಗೆ. ಇನ್ನೊಂದು ಕಡೆ ಅಳಿಯನ್ನ ಬದುಕಿಸ್ದ ಶಾಮಿಮೇಲಿನ ಮಮತೆ—ಅವನು ಕೈಗೆ ಸಿಕ್ಕಿದ ಹಾವ್ಗೆ ಮಾಡ್ತಿರೋ ಚಿತ್ರಹಿಂಸೆಯ ಅಸಹ್ಯದಲ್ಲಿ ಕೊಚ್ಕೊಂಡೇ ಹೋಯ್ತು! ಎಲ್ರೂ ನೋಡ್ತಿದಾರೆ. ಬೀಗಿತಿ ಮಟ್ಟೋಗ ಮುಂದಕ್ಕೆ ಬಂದು "ಇದೇನ್ಮಗು? ಹಾವು ಇವತ್ತು ಇವ ಆಪತ್ತಿನ ಪರಿಹರಿಸೋಕೆ ಪರಮಾತ್ಮನೇ ಕಳುಹಿಸಿದ್ದಿರಬೇಕು ನಿನ್ನ. ನಮ್ಮ ಹಿತ್ಯಗಳಿಗೆ ಒಬ್ನೆ ಹಾವಿ ನನಗೊಬ್ಬನೇ ಮಗ. ಅವನ್ನೂ ಅಪಮೃತ್ಯು ಬಾಯಿಂದ ತಪ್ಸಿದ್ದೆ. ನನ್ನ ಸೊಸೆ ಮಗನ್ಗಿಂತ ಜಾಸ್ತಿ ನನಗೆ. ನಿನ್ನ ಸ್ನೇಹಿತನ ತಂಗಿ! ಅವಳ ಮಾಂಗಲ್ಯಾನೂ ರಕ್ಷಿಸ್ದೆ. ಆದರೂ ಇದಕ್ಕೆಲ್ಲಾ ಕಾರಣ ಆ ಹಾವು: ಅರಿಯದ ಜಂತು. ಏನೋ ನಮ್ಮ ಭಕ್ತಿ ಸುಬ್ರಾಯನ ಹತ್ತೀ ದಿನ ಪರೀಕ್ಷಿಸೋಕೇ ಆ ಹಾವ್ನ ಕಳಿಸಿ. ರಕ್ಷಿಸೋಕೆ ನಿನ್ನೂ ಕಳುಹಿಸಿದ ದೇವ್ರು—ಈ ಅನ್ಯಾಯ ಹಿಂಸೆ ಒಪ್ತಾನೇ? ಹಾವಾಗ್ಲಿ ಹುಲಿಯಾಗ್ಲಿ...ದುಷ್ಟಮೃಗಗಳ್ನ ಕೊಲ್ಲೋದು ಪಾಪವಲ್ಲ. ಜೀವ ಸಹಿತ ಹೀಗೆ ದಹಿಸೋದ್ನ ದೇವ್ರೊಪ್ತಾನೇ ಮಗು?" ಅನ್ನುತ್ಲೂ ನಮ್ಮ ಶಾಮಿ ಕಣ್ಣಿಂದ ಕಿಡಿ ಹಾರಿಸ್ತಾ "ಈ ಹಿಂಸೆ ಒಪ್ಪಾಸೆ ಅಂತೀರಾ ದೇವ್ರು? ಹಮ್ಮಯ್ಯ! ಇದಕ್ಕಿಂತ ಅನ್ಯಾಯ ಹಿಂಸೆ ನನಗೂ ನನ್ನ ತಂಗೀಗೂ ನಮ್ಮನೇಗೆಲ್ಲಾ ತಂದಿಟ್ಟು ನಗ್ತಿದ್ದ ದೇವ್ರು ಈ ಹಿಂಸೆಗೇನೂ ಹೆದ್ರಿ ಹಡೋದಾಗಿಲ್ಲ!" ಅಂತಾ ಶಾಮಿ ಎರಡು ಕೈಯಿಂದಲೂ ಮುಖವನ್ನು ಮುಚ್ಕೊಂಡು ಬಿಕ್ಕಿಬಿಕ್ಕಿ ಅಳ್ತ ಕೂತ್ಕೊಂಬಿಟ್ಟ. ಬೀಗ್ತಿ ಚಿನ್ನದಂಥ ಹೆಂಗ್ಸು. ಚಿನ್ನದಂಥ ಹೃದಯ. ಹೇಗದ್ರೂ ಹೊತ್ಕೊಂಡ್ಬಿಟ್ಟೆ ಹೆತ್ತೊಟ್ಟೆ. ಧಾಂಡಿಗನಾದ ಗಂಡ್ಸು ನನಗೆ ತಿಳಿಯದ ವಿಷಯ ಏನು ಮಾಡಿದ್ನೋಯಿನೋ ಕಾಣೆ ಆಕೆಯ ಮನಸ್ಸಿಗೆ: ಶಾಮಿ ಹತ್ತಿರ ತಾನೂ ಕೂತು. "ಮಗೂ. ನೀನೇನು ಮಾಡಿದ್ರೂ ನಾವು ಹೇಡ ಅನ್ನೋದಾಗಿಲ್ಲ. ನೀನು ಯಾರೂಂತೋದು ನನಗನ್ನೂ ಗೊತ್ತಿಲ್ಲ. ಆದ್ರೂ ಹೋಗೀಯಪ್ಪ ನಮ್ಮ ಹುಡುಗ ನಿನ್ನಿಂದ ಬದುಕಿದ. ನೀನು ಯಾರಾದ್ರೂ. ನಮ್ಮನೇಗೆ. ನನ್ನ ಭಾಗಕ್ಕೆ ದೇವ್ರು. ಆದರೂ ಈ ಹಾವಿನ ಮೇಲೆ ನಿನಗಿರೋ ಛಲಾನ ಗಮನಿಸಿದ್ರೆ...ನಿಮ್ಮನೇಲಿ ಏನೋ ಅನಾಹುತ" ...ಶಾಮಿ ಮುಖಾನ ಸವರ್ತ "ಹೇಳು ಮಗು...ದುಃಖಾಂಬೋದು ಮನಸ್ನಲ್ಲೇ ಇಟ್ಕೊಂಡ್ರೆ ಹೃದಯಾನ ತಿಂದುಬಿಡುತ್ತೆ. ಇಷ್ಟ್ರಗೆ ಹೇಳ್ಕೊಂಡ್ರೆ...ಕಮ್ಮಿ ಆಗುತ್ತೆ ದುಃಖ! ಹೇಳು ಮಗು!"

ಅನ್ನೊತ್ತೂ ಶಾಮಿ "ಹೇಳೋವೇನಿದೆಯಮ್ಮಾ! ನಾನೂ ನನ್ತಂಗಿ ಅವಳಿಜವ್ಳಿ. ನಮ್ಮ ಚಿಕ್ಕ ವಯಸ್ಸಿನಲ್ಲೇ ತಂದೆತಾಯೀನ ಕಳಕೊಂಡ್ವಿ. ನಮ್ಮಿಬ್ಬರ್ನ ತಮ್ಮಕ್ಕಳ ಹಾಗೆ ಎತ್ತಿ ಆಡ್ಸಿ ಬೆಳಸಿ ಮುಂದಕ್ಕೆ ತಂದೋಳು, ನಮ್ಮ ಸೋದರತ್ತೇನೂ ಆಕೆ ಗಂಡ್ನೂವೆ. ನಮ್ತಂದೆ ಬಿಟ್ಟಿಟ್ಟುಹೋದ ಭೂಮಿ ಕಾಣೀನೂ ತಮ್ಮಾಸ್ತೀಗಿಂತ ಹುಷಾರಾಗಿ ನೋಡ್ಕೊಳ್ತ ತಮಗೆ ಮಕ್ಕಳಿಲ್ದಿದ್ರೂವೆ ನನ್ನೂ ನನ್ತಂಗೀನ್ನೂ ತಮ್ಮಕ್ಕಳ ಹಾಗೆ ಬೆಳಸಿದ್ರೂ ನಮ್ಮ. ನಾನು ನಿಮ್ಮ ಶಾಮಿ ಜೊತೇಲಿ ಓದ್ತಿದ್ದೆ ಹೈಸ್ಕೂಲ್ನಲ್ಲಿ. ಆಗ ವರ ನಿಶ್ಚಯ ಆದ್ದು ನನ್ತಂಗೀಗೆ. ಜಹಗೀರ್ದಾರ್ರ ಮಗ. ಮೈಯಿ ಮುಖ, ಬುದ್ಧಿ, ಗುಣ ಚೆನ್ನವಹಾಗೆ. ನಮ್ಮತ್ತೆ ಮಾವನ ಸಂತೋಷಕ್ಕೆ ಎಣೆಯೇ ಇಲ್ಲ. ಸಾವಿರಾರು ರೂಪಾಯಿ ಖರ್ಚು ಮದುವೇಗೆ. ಬೀಗರಿಗೂ ಬೀಗರಿಗೂ ಪೋಟಾಪೋಟಿ ಖರ್ಚು. ಮದುವೇನೂ ಆಯ್ತು. ನಾಗೋಲೀದಿನಾಮ್ಮಾ; ನಮ್ಮ ಬಂಗಲೇ ಎದುರು ಬಂಗಲೇಲಿ ವರ ಇಳಿದಿದ್ದದ್ದು. ಕೊನೇ ಉರವಣೆ ಒಂದಾಗಬೇಕು ನಮ್ಮನೇಲೀಂತ ಆಸೆ ನಮ್ಮ ಸೋದರತ್ತೆಗೆ. ಸಾಯಂಕಾಲ ನಮ್ಮನೇ ಮಂಗಳ್ವಾದ್ಯದ್ಸಮೇತ ಕರೆತಂದ್ರು ಅಳಿಯನ್ನ. ನಮ್ಮ ಬಂಗ್ಲೆ ಸೇರಿ ಮೆಟ್ಲು ಮೇಲೆ ಕಾಲಿಡ್ತಾನೆ ಅಳಿಯ "ಹಯ್ಯೋ, ಎಡಗಾಲು ಮೊದಲು ಇಡಬೇಡಿ"ಂತ ಒಬ್ಬ ಮುದಿ ಮುತ್ತೈದೆ ಹೇಳುತ್ತಿದ್ದ ಹಾಗೇನೇವೇ ಆ ಮೆಟ್ಲಂಚಿನ ಮೇಲೆ ಎಡಗಾಲಿಟ್ಟು ಬಿಟ್ಟ—ನಮ್ಮ ಭಾವ ಮೆಟ್ಲಂಚಿನ ಪಕ್ಕ ಗುಲಾಬೀ ಗಿಡಗಳ ಪೊದರು. ಅಳಿಯ ಕಾಲಿಟ್ಟದ್ದು ನೋಡಿದೆ. ಇಟ್ಟಕಾಲ್ನ ರೋಜಾ ಪೊದರಿಂದ ಒಂದು ಹಾವಿನ ಹೆಡೆ ಕುಕ್ಕಿ ಕಣ್ಮರೆಯಾದ್ದು ನೋಡ್ದೆ. ಹಯ್ಯೋಂತ ಬೀಳ್ತಿದ್ದ ಭಾವನ್ನ ಹಿಡುಕೊಂಡ್ವಿ. ಇನ್ನೇನು ಡಾಕ್ಟ್ರು ಬಂದದ್ದಾಯಿತು, ಮಂತ್ರವಾದಿಗಳಾಯ್ತು, ಏನಾದ್ರೆ ಏನು? ಬೆಳಕು ಹರಿಯೋಕೆ ಮುಂಚೆ ತಾಲಿ ಕಟ್ಟೋವ್ನು ನನ್ತಂಗಿ. ಐದು ದಿನದ ಹೆಂಡ್ತಿ. ಹುಡ್ಕಿದೀನಿ ಹುಡ್ಕಿದೀನಿ ನೋಡೀಮ್ಮಾ ಆ ತೋಟವೆಲ್ಲಾ; ನನ್ನ ಅವಳಿಜವಳಿ ತಂಗಿ ಜನ್ಮಾನ್ನೇ ನುಂಗಿದ ಆ ಹಾವ್ನ; ಸಿಕ್ಲಿಲ್ಲ: ಈ ದುಃಖದಲ್ಲೇ ಕೊರಗೀ ಕೊರಗೀ ಸತ್ರು ನಮ್ಮ ಸೋದರತ್ತೇನೂ ಮಾವ್ನೂ! ನಮಗಿನ್ಯಾರೂ ದಿಕ್ಕಿಲ್ಲ. ಧನ ಧಾನ್ಯ ಎಷ್ಟಿದ್ರೂನೂವೆ ನನಗೆ ನನ್ತಂಗಿ, ನನ್ತಂಗೀಗೆ ನಾನು; ಆದೇಮ್ಮಾ ನಮ್ಮ ಭಾವನ್ನ ಕೊಂದ ಹಾವಿಗೆ ನಾವಾಗ್ಲೀ ನಮ್ಮ ಭಾವನಾಗ್ಲೀ ಒಂದು ಪಾಪವ್ನೂ ಮಾಡಲಿಲ್ಲವಲ್ಲಮ್ಮಾ? ಆದ್ರು...ಏನೋಮ್ಮಾ ಆ ಹಾವು ಜಾತೀಂದ್ರೆ...ಪ್ರಾಣ ಸಹಿತ ಬಿಡೋಕೆ ನನ್ನಿಂದ ಆಗದು..."!

ಯಾಕೆ ಹೇಳ್ತೀನೆ ಗುಡಿಕಟ್ಟಿ, ವಿಗ್ರಹಾನ್ನ ಬ್ರಾಹ್ಮಣರು ಪ್ರತಿಷ್ಠಿಸಿ, ವರ್ಷ ವರ್ಷಾನೂ ಪೂಜೆ, ಅಗ್ತಿರೋ ಕಲ್ಲುಗೊಂಬೇನ ಪೂಜೇ ಮಾಡೋದು ಸರಿಯೇ ತಪ್ಪೇಂತ ವಾದಿಸ್ತಿದೀರಲ್ಲ ನೀವೆಲ್ಲಾ! ಇಂಗ್ಲೀಷ್ ಮೋಜ ಹಾಕ್ಕೊಂಡು ಬಣ್ಣದ ಕಾಲ್ಚೀಲ, ಬಣ್ಣದ ಷರಟು, ಕ್ರಾಪ್ ತಲೆ, ಬಾಯಲ್ಲಿ ಸಿಗರೇಟು,—ನಮ್ಮ ಶಾಮಿ ಮದರಾಸ್‌ನಲ್ಲಿ ಫುಟ್‌ಬಾಲ್ ಆಡ್ತಿದ್ದಾಗ ತೆಗೆದು ನನಗೊಂದು ಕಾಪಿ ಕಳಿಸಿದ ಫೋಟೋ,—ಅದ್ನ ಕಟ್ಟಾಕ್ಕಿ ಅದೇ ಕೋಣೇಲಿ ಅದೇ ಚಿನ್ನ ಬೆಳ್ಳಿ ಚಾಮುಂಡಿ ಪ್ರಭಾವಳಿಗಳ ತಲೇ ಮೇಲೆ ತಗುಲ ಹಾಕಿದ ತಸ್ವೀರ್ನ ನನ್ನ ತಂಗೀನೂ ಭಾವ್ನೂ ಪೂಜೆ ಮಾಡೋದು ತಪ್ಪೇ ಸರಿಯೇಂಬೋದ್ನ ನಾನ್ನಿಷ್ಕರ್ಷಿಸಲಾರೆ. ಒಂದು ವೇಳೆ ನೀವುಗಳು..........!

ಶೆಟ್ರು : ಮಂಚಿ ಮಾಟಾಂಟೆ! ತಪ್ಪೆಕ್ಕಡವಚ್ಚೆ? ರಾಮುಡೇಮಿ, ಕೃಷ್ಣುಡೇಮಿ, ಪೆದ್ದ ಪೆದ್ದ ಯುಗಮುಲೋ ವಚ್ಚಿನ ಪೆದ್ದಾವತಾರಮುಲು ಪೇದವಾಳ್ಳ ರಕ್ಷಣಾನಿಕಿ ಪರಮಾತ್ಮುಡು ಪೆದ್ದಾವತಾರಮು ಎತ್ತಿನ ಸಂಗತಿ. ಈ ಚಿನ್ನ ಯುಗಮುಲೋ ಕಲಿಯುಗಮುಲೋ ಚಿನ್ನ ಚಿನ್ನ ಅವತಾರಮುಲು ಎನ್ನಿಯೋ ಎತ್ತುತಾಡು. ಮೋಜ ವೇಸ್ಕೊಂಟೆ ಯೇಮಿ, ಸಿಗರೇಟು ತಾಗ್ತೆ ಯೇಮಿ? ಮನಿ ಜಾನ್ನಿ ಬದುಕಿಂಚ್ತೆ...ಪರಮಾತ್ಮುಡುನಿ ಅವತಾರಮು ರೂಪೂ ಎಟ್ಟುಂಟೆ ಯೇಮಿ; ಪರಮಾತ್ಮುಡು ಎಕ್ಕಡ ಮಾದಿರೂಪಮು ಎಟ್ಲುಂಟಿನ ಯೇಮಿ ಭೂದೇವಿನಿ ಬದುಕಿಂಚ ಲೇದಾ? ಈ ಕಲಿಯುಗಮುಲೋ ಚಿನ್ನ ಚಿನ್ನ ಅವತಾರಮುಲು ಎನ್ನಿಯೋ ಎತ್ತುತಾನೇ ಉಂಟಾಡು ದೇವುಡು-ಲೇಕಪೋತೆ ಮಾಕ ಕೂಡ್ಕಿವೇಸ್ಕಿ? ಏಮಿ ಪೋತ ನಲ್ಲಗ ಉಂಡೇದಾನ್ಕ? ಕಾದು. ನ್ಯಾಲ ತಪ್ಪಿ ಪೈರು ಪಂಟ ಮಾನವಾಲ ಕಡುಪು ನಿಂಡೇದಾನ್ಕಿ. ಪೆದ್ದಾಳ್ಳು...ವಿಶಾರು ಚೆಪ್ತಿತ್ರೇ ಶಾಮಣ್ಣವಾಳ್ಳು

ಕಥ...ಅಟುವಂಟಿ ಪದಿ ಜಿತಾರವುಲು ಇಪ್ಪುಡು ಕೂಡಾ ಉಂಡುಟ್ನೇ ವಾಸ ಕೊಟ್ಟೇದಿ. ಗುಡ್ಲೋ ರಾಯ್ಳೋ ಚೇಸ್ತೇ ಯೇಮಿ ಇಂಡ್ಲಲೋ ತಸ್ಬೀರು ಪೆಟ್ಟೇಯೇಮಿ...! ?

ಶಾಮಣ್ಣ : (ಗುಡಿಯ ಬಾಕಿಲನ್ನು ಇಣಿಕಿ ಹೊರಗೆ ನೋಡಿ) ಇಕೋ ಶಾಮಿ ಬಂದ...

ಶೆಟ್ರು : ಇದೇವಿಂದಿ! ಈ ಪಿಲ್ಲಕಾಯಾ...? ಬೀ. ಯೆ. ಪಾಸ್ಟೇಸಿ ಪಾಮುನಿ ಚಂಪಿಂದಿ...!?

ಶಾಮಣ್ಣ : ಬೆಚ್ಚು ಬೀಳ್ಬೇಡಿ! ಇವನವನಲ್ಲ...[ಘಟ್ಟಿಯಾಗಿ] ಮೆಲ್ಲಗೋ ಶಾಮಿ, ಮುರಿದ ಮೆಟ್ಲು...ಜಾರಿಬಿದ್ದು ಮೊಣಕಾಲು ಮುರಕೊಂಡೀಯ! ಮೆಲ್ಲಗೆ ಬಾ (ಪ್ರಕಾಸಿಂತು) ಈ ಶಾಮಿ ಆ ಶಾಮಿ ಅಲ್ಲ. ನನ್ನ ಸೋದರಳಿಯ. ನನ್ನ ತಂಗಿಯ ಮಗ! ಆಗ ಗರ್ಭದಲ್ಲಿದ್ದ! ಆ ಶಾಮಿ ಹಾಗೇ ಆಗ್ಬೇಕೂಂತ ಆಶೆ ಇಟ್ಕೊಂಡು ಶಾಮಿ ಹೆಸರ್ನ ನಮ್ಮ ಭಾವ್ನಾ ನಮ್ತಂಗೀನೂ ಇವನಿಗಿಟ್ಟದ್ದು. ನಮ್ಮೂರಿಗೆ ಬಂದಿಧಾರೆ ಇಬ್ರೂ! ಎಳೀಬೇಡ್ರೋ! ಎಳೀಬೇಡ್ರೋ! ಬಂದೆ! ಬರ್ತೀರಾ ? ಎಲ್ಲ್ರೂ ಹೋಗೋಣವೇ ?

ಕವನಗಳು

೧ ತಿಪ್ಪಾರ್‌ಹಳ್ಳಿ

ಬೋರೇಗೌಡನೆಂಬೊ ಗೌಡ ಬಂದ ಬೆಂಗ್ಳೂರ್ಗೆ
ಬಳೇಪೇಟೆ ಬಾಟೆಮೇಲೆ ಬರುತಿದ್ದಾಗ
ಪೌಡರ್ ಗಿವ್ಡರ್ ಹಾಕಿಕೊಂಡ ಮನುಷ್ಯಳೊಬ್ಬಳು
ಕಣ್ಣುಗಿಣ್ಣು ಮಿಟಕ್ಸಿ ಗಿಟಕ್ಸಿ ನೋಡಿ ನಕ್ಕಾಗ—

(ಹಾಡ್ಬ) ತಿಪ್ಪಾರಳ್ಳಿ ಬಲುದೂರ
ನಡಿಯಾಕ್ ಬಲುದೂರ
ತಿಪ್ಪಾರಳ್ಳಿ ಬಲುದೂರ
ನನ್ನೆಂಡ್ರಿರೋ ತಾಕೇ......
ಬೇಡವ್ವಾ ಬಳೇಪೇಟೇ
ನಮಸ್ಕಾರ ನಗರ್ತ್‌ಪೇಟೇ
ನಂ ತಿಪ್ಪಾರಳ್ಳಿ ಬಲು ದೂರ—
ಆದರ್ ನಂ ಬಸವ್ಯಲ್ಲವ್ವೆ.

ತಮಾಷ್ ನೋಡಾಕ್ ಬೋರ ಪೋಂಟ ಲಾಲ್‌ಬಾಗ್ ತೋಟಕ್ಕೆ
ವುಲೀನ್ ನೋಡಿ ಬರೇ ಆಕಿದ್ ದೊಡ್‌ಬೆಕ್ ಅನ್ಕೊಂಡ
ಬೋನ್ನೊಳಕ್‌ನುಗ್ಗಿ ವುಲೀನ್ ಸವರ್ತ ಪುಸ್‌ಪುಸ್ ಅಂತಿದ್ದ
—ಬೋರ ಪುಸ್‌ಪುಸ್ ಅಂತಿದ್ದ
ವುಲೀ ರೇಕ್ಕೊಂಡ್ ಬೋರನ್ ಕೆಡವ್ಕೊಂಡ್ ಅಲ್ಗಳ್ ಬುಟ್ಟಾಗ
ಬೋರ ಬೆದಕೊಂಡ್ ಕಣ್ಣೀರ್ ಸುರಸ್ತ ಕೈಮುಗ್ದ್ ಕಿರಿಚ್ದ—
ತಿಪ್ಪಾರಳ್ಳಿ ಬಲುದೂರ
ನಡಿಯಾಕ್ ಬಲುದೂರ
ತಿಪ್ಪಾರಳ್ಳಿ ಬಲುದೂರ
ನನ್ನೆಂಡ್ರಿರೋ ತಾಕೇ......
ಬುಟ್ಬುಡಪ್ಪಾ ಬೆಕ್ಕಿನ್‌ರಾಯಾ
ನಮಸ್ಕಾರ ನನ್ ಒಡೆಯಾ
ತಿಪ್ಪಾರಳ್ಳಿ ಬಲುದೂರ—
ಆದರ್ ನಂ ಬಸವ್ಯಲ್ಲವ್ವೆ.

ಬಸ್ವೀನ್ ಕರ್ಕೊಂಡ್ ಮೈಸೂರ್ಗ್‌ಬಂದ ಯಿಜೇದಸ್ಮೀಗೆ
ಅರ್ಮನ್ ಗೇಟ್ಮುಂದ್ ಅಂಬಾರ್‌ಕಟ್ಟಿದ್ ಆನೇನ್ ನೋಡಿದಾ
ಅಂಬಾರ್ ಮೆಟ್ಲ್‌ಮೇಲ್ ಬಸವೀನ್ ಅತ್ಸ್‌ಬುಟ್ ತಾನೂ ಅತ್ಬುಟ್ಟ
—ಬೋರ ಬುರ್‌ಬುರ್ನ ಅತ್ಬುಟ್ಟ
ಮಾವ್ತರ್ ಮಂಕಾಗ್ ಗುರಿಕಾರ್ರ್ ಗುಮ್ಮಾಗ್ ಇಳೀಂತ್ ಕಿರ್ಚ್ದಾಗ
ಆನೆ ಕೊರಳಾಗ್ ಒದೀತ್ ನಡಸ್ತ ಆಡ್ತ ಓಗ್ತಿದ್ದ—

ತಿಪ್ಪಾರಳ್ಳಿ ಬಲುದೂರ
ನಡಿಯಾಕ್ ಬಲುದೂರ
ತಿಪ್ಪಾರಳ್ಳಿ ಬಲುದೂರ
ನಾಪಿಬ್ರು ಇರೋ ತಾಕೇ........
ಗಂಟ್ಗೆ ಉಳಿಸ್ಕೊಳ್ರಪ್ಪಾ ಗುರಿಕಾರ್ರು
ಮನೇಗೋಗಿ ಮಾವುತ್ಸಾಬರ್ರು.
ತಿಪ್ಪಾರಳ್ಳಿ ಬಲುದೂರ—
ಅಲ್ಲಿಗ್ ನಡಿವೊಲ್ಲು ನಂ ಬಸ್ವಿ.

೨ ಕೋ೯೯ಳೀಕೆ ರಂಗಾ

ನಾನ್ ಉಟ್ಟಿದ್ದು ಒಡ್ರಳ್ಳಿ
ಬೆಳದದ್ದು ಬ್ಯಾಡ್ರಳ್ಳಿ
ಮದವೆ ಮಾದನ್ಅಳ್ ನನ್ ಒಲಗೊಳ್ ಆರನ್ನಳ್ಳಿ
ನಂ ಶ್ಯಾನ್‌ಬೋಗಯ್ಯ
ಅಲ್ದೆ ಸೇಕ್‌ದಾರಪ್ಪ
ಇವ್ರು ಎಲ್ರೂ ಕಂಡವ್ರೆ ನನ್ನಾ......

ಇನ್ ದನಗೊಳ್ನು ಮಕ್ಕಳ್ನೂ ಎಂಡರ್ನೂವೆ
ಅಟ್ಟಿ ಅವ್ವೇನೂ ಬುಟ್ಟು
ಬಂದಿವ್ನಿ ನಾ ನಿಮ್ಮುಂದ್ ನಿಂತಿವ್ನಿ ನಾ
ನಮ್ಮಳ್ಳಿ ಕಿಲಾಡಿ ವುಂಜಾ.

ನಾನ್ ಕೋ೯೯ಳೀಕೆ ರಂಗಾ
'ಕೋ'ನು 'ಳೀ'ನು 'ಕೆ'ನು 'ರ'ಏನು 'ಸೊನ್ನೆ' 'ಗಾ'
ನಾನ್ ಕೋ೯೯ಳೀಕೆ ರಂಗಾ

ನಂ ತಿಪ್ಪಾರಳ್ಳಿ ಬೋರನ್ ಅಣ್ಣನ್ ತಮ್ಮನ್ ದೊಡ್ಡಮ್ಮಗಾ.
ಕಕೋತ್ವ–ಳೀ, ಕಕೇತ್ವ—ರ, ಮತ್ಸೊನ್ನೆಯೂನು—ಗಾ
ಇದ್ನ ಆಡಾಕ್ ಬರ್ದೆ ಬಾಯ್‌ಬುಡಾನು ಬೆಪ್ಪನಮ್ಮಗಾ
ಕೊ೯೯೯ಳೀಕೆ ರಂಗಾ—
'ಕೋ'ನು 'ಳೀ'ನು 'ಕೇ'ನು 'ರ'ಏನು 'ಸೊನ್ನೆ' 'ಗಾ'

ಎತ್ತು ಕುದುರೆ ಇಲ್ದ ಗಾಡಿಗ್ನೂವೆ
ಬತ್ತಿ ಯೆಣ್ಣೆ ಇಲ್ದ ದೀಪಗ್ನೂವೆ
ಕುದ್ರೆಯಿಲ್ದ ಗಾಡಿಗ್ನು ಎಣ್ಣೆ ಇಲ್ದ ದೀಪಗ್ನು
ತುಂಬಿದ್ ಮೈಸೂರಿಗ್ ಬಂದೆ

ದೊಡ್ ಚೌಕದ್ ಮುಂದೆ
ಗಡಿಯಾರದ್ ಹಿಂದೆ
ಕಟ್‌ತಂದಿದ್ ಬುತ್ತೀನ್ ತಿಂತ್ತಿದ್ದೆ

ಅಲ್ಲ್ ಕುದುರೆ ಮೇಲ್ ಕುಂತಿದ್ದೊಬ್ ಸವ್ವಾರಯ್ಯ
ಕೆದ್ರಿದ್ ತನ್ ಮೀಸೇಮೇಲ್ ಆಕ್ತ್ರ ಕೈಯ
ಬೆದ್ರಿಸ್ತಾಲೀ–ನನ್ನ
ಗದ್ರಿಸ್ತಾಲೀ...
"ನೀನ್ ಯಾರೋ ?"..."ನೀನ್ ಯಾಕೋ !"
ನಾನ್ ಕೋ೦೦ಳೀಕೆ ರಂಗಾ—
'ಕೋ' ನು 'ಳೀ' ನು 'ಕೆ'ನು 'ರ'ಂನು 'ಸೊನ್ನೆ' 'ಗಾ'

೩ ನಂಜೀ ನನ್ ಅಪರಂಜೀ

ನೋಡಿದ್ರಾ ನಂ ನಂಜೀನಾವ
ನಂ ಗಜನಿಂಬೆ ನಂಜೀನಾವ
ಅವ್ಳ್ ನಕ್ರೆ ಗುಂಡ್ಗೆ ಗುಡಗ್ತೈತೆ ಜುಂ ಜುಂ ಜುಂ
ಅವ್ಳ ವಾರ್ಗಣ್ಣಿನ್ ನೋಟಕ್ಕೇವ
ಅವ್ಳ್ ಕೀಟ್ಲೆ ಆಟದ್ ಕಾಟಕ್ಕೇವ
ನಂ ಅಳ್ಳೀಲಿರೋ ಐದರೆಲ್ಲ ಗುಂ ಗುಂ ಗುಂ

(ನಂಜಿ) ನೀರಿಗ್ ಬರೊ ರೆಘೋಕ್ನಾವ
ನೀರ್ ಸೇದೊ ಷೋಕ್ನಾವ
ಮೀರ್ಸಿದ್ ಉಡಿಗೀರ್ ಅಳ್ಳೀಲೇ ಇಲ್ಲಾ
ಅವ್ಳ್ ಅಟ್ಟೆ ಸಾರ್ಸೊ ಅಂದಾನಾವ
ಅವ್ಳ್ ತಟ್ಟಿದ್ ಬೆರ್ಣೆ ಚಂದಾನಾವ
ನೋಡಿ ನೋಡಿ ಸುಸ್ತಾಗಿವ್ನಿ—ನಾನೇನೇಳ್ಲಿ

ಚಿನ್ನದ್ ಗೊಂಬೆ ನಂಜಿ
ರನ್ನದ್ ಗೊಂಬೆ ನಂಜಿ
ನಿನ್ ಕಣ್ಣು ಮೋರೆ ತಾವ್ರೆ ಕಾರಂಜಿ
ನಿನ್ ಮೂತಿಗೆ ನಾ ವುಚ್ಚು
ನಿನ್ ಮಾತಿಗೆ ನಾ ಬೆಚ್ಚು
ನಂಜೀ ನನ್ ಅಪರಂಜೀ೦೦

ನೋಡಿವ್ರಾ ನಂ ನಂಜೀನಾವ
ನಂ ಗೌಡನ್ ಮಗಳ್ ನಂಜೀನಾವ
ಅವ್ಳ್ ಅಟ್ಟೀಲೆಲ್ಲ ಅವಳ್ದೇ ದರ್ಬಾರ್

ಅವ್ರ್ ಐನೆಟ್ಲಿ ರೇಗ್ಲಿ
ಅವ್ರ್ ಅವ್ವೆ ಏಟ್ಲಿ ಕೂಗ್ಲಿ
ನಂಜಿ ಬುಟ್ರೆ ಬಾಯಿ ಅಳ್ಳಿ ಅಳ್ಳೀನೆ ಉಜಾರ್

ನಂಜೀನ್ ಮದ್ವೆ ಮಾಡ್ಕಳ್ಳಾಕೆ
ನಂಜೀನ್ ಅಟ್ಟೀಗ್ ತಂದ್ಕಳ್ಳಾಕೆ
ನಾನ್ ಪಟ್ಟಿದ್ದೆಲ್ಲಾ ಸಿವನೇ ಬಲ್ಲಾ
ಈಗ್ ನನ್ನೂ ನನ್ ನಂಜೀನೂವೆ
ನಮ್ಮಿಬ್ರೈದ್ನ್ಲ ಪುಟ್ನಂಜೀನ್ವೆ
ಮೀರ್ಸಿದ್ ಅಟ್ಟಿ ಅಳ್ಳಿಲೇ ಇಲ್ಲಾ

ಚಿನ್ನದ್ ಗೊಂಬೆ ದೊಡ್ನಂಜಿ
ರನ್ನದ್ ಗೊಂಬೆ ಪುಟ್ನಂಜಿ
ನಿಮ್ಮಿಬ್ಬರ್ ಮೋರೆ ತಾವ್ರೆ ಕಾರಂಜಿ
ನಿಮ್ ಮೂತಿಗೆ ನಾ ವುಚ್ಚು
ನಿಮ್ ಮಾತಿಗೆ ನಾ ಬೆಚ್ಚು
ಇಬ್ರೂ ನನ್ ಅಪರಂಜೀ೯೯

೪ ಕಾಶೀಗ್ ಹೋದ ನಂ ಬಾವ

ಕಾಶೀಗ್ ಹೋದ ನಂ ಬಾವ
ಕಬ್ಬದ್ ದೋಣೇಲಿ
ರಾಶೀ ರಾಶೀ ಗಂಗೆ ತರೋಕ್
ಸೊಳ್ಳೇ ಪರದೇಲಿ

ತಂಗಿ ಯಮುನಾದೇವಿಯಳ
ಸಂಗವಾಯ್ತೆಂದುಬ್ಬಿ ಉಬ್ಬಿ
ಗಂಗಾದೇವಿ ಉಕ್ಕಿ ಉಕ್ಕಿ
ಬೀಸಿ ಬೀಸಿ ದೋಣಿ ಕುಕ್ಕಿ
ಬಾವ ಅತ್ತು ಬಿಕ್ಕಿ ಬಿಕ್ಕಿ
ಬಂಡೆ ತಾಕಿ ದೋಣಿ ಒಡ್ದು
ಸೊಳ್ಳೆಪರದೆ ಬಾವನ್ ಬಡ್ದು
ಮಂಡೆ ದವಡೆ ಪಟ್ಟಾಗೊಡ್ದು
ಕಾಶೀ ಆಸೆ ನಾಶವಾಗಿ
ಮೀಸೇ ಉಳಿದದ್ ಎಷ್ಟೋ ವಾಸೀಂತ್
ಕಾಶೀಂದ್ ಬಂದ ನಂ ಬಾವ

೫ ಬೋರನ ಭಾರ

ಅರ್ಪಣೆ: ಮರಣಮಂಡಲ ಮಧ್ಯದೊಳಗೆ
ಕರುಣರಹಿತರ ಬಸಿರ ತುಂಬಲು

ತೆರುವ ತೆರಿಗೆಯ ಹೊರೆಯ ತಡೆಯದೆ
ಸುರುಳಿಬಿದ್ದನು ಬೋರನು

ಅಪಹರಣ : ಬಿದ್ದ ಬೋರೇಗೌಡನನ್ನು
ಎದ್ದು ನಿಲ್ಲಿಸಿ ತಡವಿ ತಟ್ಟಿ
ಮುದ್ದುವಚನದಿ ಮರುಳುಗೈದು
ಕದ್ದರಿದ್ದುದನೆಲ್ಲವ

ತೃಷ್ಣಾ : ಅಯ್ಯ ನೀನು ದುಡಿಯಲೇಕೆ
ಕೈಯ ನೇಗಿಲಿಗಿಕ್ಕಲೇಕೆ
ಮೈಯ್ಯ ಕುಗ್ಗಿಸಿ ಮಡಿಯಲೇಕೆ
ಜೀಯ ಲಾಲಿಸು ಪೇಳ್ವುದ

ಕಂಠಾಭರಣ : ಮರಳುಮಡುವನು ಗದ್ದೆ ಮಾಡುವೆ
ಹರಳು ಹೊನ್ನನು ನೆಲದಿ ತೋಡುವೆ
ಕೊರಳ ತಾ ಎನ್ನ ತರಳ ಎನ್ನುತ
ಸರಳ ಬಡ್ಡಿಯ ತೊಡಿಸಿದ

೬ ಅಲ್ಪಜ್ಞನ ಪದ

ಕಲ್ಲಲ್ಲಿ ಸಿಗುವುದೇ ಕಲ್ಲಿದ್ದಿಲೆಂದೆನಿಸಿ
ಕಲ್ಲನ್ನು ಕೊರೆಯುಲು—ಎಲ್ಲೆಲ್ಲಿ ಕೊರೆದರೂ
ಕಲ್ಲಲ್ಲದೊಂದಿಲ್ಲ ! ಬಲ್ಲೆ—
ಕಲ್ಲೇ ಇದ್ದಿಲೆಂದನಲ್ಪಜ್ಞ.

೭ ಅರಿವು

ಬಳಿಬಳಿದು ಬಣ್ಣಗಳ
ಬಳಲುವುವು ಬೆರಳುಗಳು
ತಳಿರುಗಳ ಪೊನ್‌ಸೊಬಗ ಪೊಗಳತೊಡಗೆ !

ಬಿಳಿಗಿಲ್ಲ ಕಡೆಕಡೆದು
ಬೀಳುವುವು ತೋಳುಗಳು
ಕುಳಿರ್ವನೆಯ ಬಿಳಿಮುಡಿಯ ಬೆಳಗತೊಡಗೆ !

ತಿಳಿಗನಡ ನುಡಿನುಡಿದು
ತಳರುವುದು ನಾಲಗೆಯು
ಗಿಳಿಯ ಪಾಲ್ನುಡಿಗಳನು ಪಳಗತೊಡಗೆ !

ಬಳಿದರೇನ್ ಬಣ್ಣಗಳ ?
ತಿಳಿಗನಡ ನುಡಿದರೇನ್ ?
ಬಿಳಿಗಲ್ಲನುಳಿಗಳಿಂ ಕಡೆದರೇನು ?

ತಿಳಿವಿನೊಡೆಯನನರಿದು
ಗಳಿಸದೆವು ತಾಯ್ನಾಡ—
ಇಳೆಯು ಕುಸುರಿಗ ಕುಟಿಗರರಿವರೇನು ?

ಭಾಷಣಗಳು

೧. ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ*

ಕನ್ನಡನಾಡಿನ ಪ್ರತಿನಿಧಿಗಳೆ,

ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ತಾವು ಹೊಸಗನ್ನಡ ನಾಟಕದ ಮೇಲೆ ತಮಗಿರುವ ಆದರವನ್ನು ವ್ಯಕ್ತಪಡಿಸಿದ್ದೀರಿ. ಅಲ್ಲವಾದರೆ ನಾನು ಈ ಗೌರವಕ್ಕೆ ತಕ್ಕವನೆ? ತಾವು ತೋರಿಸಿದ ಈ ಗೌರವ ನಮ್ಮ ನಾಡಿನ ಸಾತು, ಪಾತು, ನಾಗತ್ತೆ, ಫೋಲಿಕಟ್ಟೆ ಇತ್ಯಾದಿ ನನ್ನ ಬಸುರಿನ ಕೂಸುಗಳಿಗೆ ಸಂದ ಗೌರವ. ನಾನೋ? ಬರಿ ನಿಮಿತ್ತ! ನೆಪ! ಸಾತು ಪಾತುಗಳನ್ನು ನಿಮ್ಮ ಮುಂದೆ ಒಪ್ಪಿಸುವ ಸೂತ್ರಧಾರ. ಆ ಪಾತ್ರಗಳ ಪರವಾಗಿ, ಸಮಾಜ ಬಳಸುತ್ತಿರುವ ಕನ್ನಡ–ನಾಟಕದ-ಪ್ರಪಂಚದ ಪರವಾಗಿ ತಮ್ಮನ್ನು ನಾನು ವಂದಿಸುತ್ತೇನೆ.

ಈ ಬಗೆಯ ಸಭೆ ಸಮ್ಮೇಳನಗಳಲ್ಲಿ ಭಾಗವಹಿಸುವುದು ನನಗೆ ಹೊಸ ಅನುಭವ. ನನ್ನ ಜೀವಕ್ಕೆ ಇದು ಒಗ್ಗುವುದಿಲ್ಲ! ನನ್ನ ಮನಸ್ಸು ಇದಕ್ಕೆ ಬಗ್ಗುವುದಿಲ್ಲ! ನಿಮ್ಮಗಳ ಮುಂದೆ ಬಂದು ನಿಂತು, ಕರ್ಮವೀರನೋಪಾದಿಯಲ್ಲಿ ಆಡಿ, ಮಾತಾಡಿ, ಸಮಾಜದ ರಥಕ್ಕೆ ರಥ್ಯನಾಗಿ ನಿಲ್ಲುವ ಸ್ವಭಾವ ನನ್ನದಲ್ಲ. ನನ್ನ ಸಮಾಜಸೇವೆಯೋ—ಎಲ್ಲೋ! ಯಾವ ಮೂಲೆಯಲ್ಲೋ! ಮುದುರಿ ಕೊಂಡು...ದಾರಿಹೋಕರಿಗೆ ದಾರಿತಪ್ಪಿಸಿ ಎರಡಾರು ಮಾತುಗಳಾಡಿ, ಸುತ್ತಲೂ ನಡೆವುದನ್ನು ಕಣ್ಣಿಂದ ನೋಡಿ ಕಿವಿಯಿಂದ ಕೇಳಿ ಯಾವಾಗಲೋ ಒಂದು ಸಲ ಮನಸ್ಸಿನ ಯಾವುದೋ ಒಂದು ಮೋಡಿಯಲ್ಲಿ, ಕಂಡು–ಕೇಳಿದ ಕೆಲವು ಅಂಶಗಳಿಗೆ ಕಳೆ ತುಂಬಿಸಿ, ನಾಟಕ ಕಟ್ಟಿ, ನಾನೇ ಆನಂದಪಟ್ಟು, ಅದನ್ನು ನಾಲ್ಕಾರು ಜನ ರಸಿಕಮಿತ್ರರಿಗೆ ಹೇಳಿ, ಅವರನ್ನೂ ಆನಂದಪಡಿಸುವ ಸಾಮಾನ್ಯಜೀವಿ ನಾನು! ನನ್ನ ಲೋಕ ಧೀರಕರ್ಮದ ಕರ್ಕಶಲೋಕವಲ್ಲ! ನನ್ನದು–ಮೃದುಲೋಕ! ಹಾಸ್ಯದ ಮೃದುಲೋಕ! ಆದುದರಿಂದ ಕನ್ನಡನಾಡಿನ ಸಾಹಿತ್ಯ ಪ್ರಪಂಚದಲ್ಲಿ ದೊಡ್ಡ ಮೋಡಗಳಾಗಿ ಹರಡಿ ಕೊಂಡಿರುವ ಒಗಟೆಗಳನ್ನು ಬಿಡಿಸಲು ನನ್ನಿಂದ ಸಹಾಯವಾಗದಿದ್ದರೆ ಕ್ಷಮಿಸಬೇಕೆಂದು ಪ್ರಾರ್ಥಿಸು ತ್ತೇನೆ.

ಕಲೆಯ ವಿಷಯವಾಗಿ ಈಗ ಹಲವಾರು ಚರ್ಚೆ ನಡೆಯುತ್ತಿವೆ. ಆದರೂ ನನ್ನ ಮನಸ್ಸಿನಲ್ಲೇನೋ ಕಲೆಯ–ಧ್ಯೇಯ–ಗಮ್ಯ–ಗುರಿ–ಸ್ಪಷ್ಟವಾಗಿದೆ. ಕಲೆ ವ್ಯಾವಹಾರಿಕವಾದುದನ್ನು ವಾದಿಸಿ ಸಾಧಿಸಲು ಕಂಕಣ ಕಟ್ಟುವುದಿಲ್ಲ. ಉಪದೇಶ, ಸಮಾಜ ಸುಧಾರಣೆ, ರಾಜಕೀಯ ಪ್ರಚಾರ–ಯಾವುದೂ ಅದರ ನಿಮಿತ್ತವಲ್ಲ. ಯಾವುದೋ ಅವ್ಯಕ್ತ ರೀತಿಯಲ್ಲಿ ಅದೆಲ್ಲವೂ ಸಾಹಿತ್ಯ ದಿಂದ ಆಗಬಹುದು; ಆಗಿದೆ! ಆಗುತ್ತಲೇ ಇದೆ! ರಾಮಾಯಣದಿಂದ ಏಕದಾರಾವ್ರತ, ಏಕಪತ್ನೀವರ್ತನೆ, ಸತ್ಯಸಂಧತೆ, ಪಿತೃವಾಕ್ಯ ಪರಿಪಾಲನೆ, ಭ್ರಾತೃಪ್ರೇಮ, ಪರಸ್ತ್ರೀವಿಮುಖತೆಗಳ ಪಾಠ, ಓದುವವರ ಮನಸ್ಸಿನಲ್ಲಿ ಮಿಂಚಿನ ಹಾಗೆ ಹೊಳೆದುಬರಬಹುದು–ಶ್ರೀಮದ್ರಾಮಾಯಣ ದಿಂದ! ಆದರೆ ವಾಲ್ಮೀಕಿಯ ಪ್ರತಿಭಾಮೂರ್ತಿಯ ಉದ್ದೇಶ ಆ ಪಾಠ ಕಲಿಸುವುದಲ್ಲ. ಅದಕ್ಕಾಗಿಯೇ ಇಷ್ಟು ದೊಡ್ಡ ಕಾವ್ಯ ಬರೆಯಬೇಕಾಗಿರಲಿಲ್ಲ. ತನ್ನ ಆತ್ಮದ ಅಭಿರುಚಿಗೆ ಕಂಡುಬಂದ ಕೆಲಹಲವು ಪಾತ್ರಗಳನ್ನು ಸೃಷ್ಟಿಸಿಕೊಂಡು ಆದಿಕವಿ ಅದಕ್ಕೆ ಜೀವ ಉಸಿರಿದ! ಆದ್ದರಿಂದ 'ಸತ್ಯಂ ವದ! ಧರ್ಮಂ ಚರ'! ನೀತಿಯನ್ನು ಮರೆತು 'ಮಿಥ್ಯಂ ವದ! ಮರ್ಮಂ ಚರ!' ಎಂಬವ ನಿಗೂ ಶ್ರೀರಾಮ ಬೇಕು! ಅತಿಕಾಮಿಗೂ ರಾಮಾಯಣ ಇಷ್ಟ. ಬಹುಪತ್ನೀಕನಿಗೂ ಅಷ್ಟೇ ಇಷ್ಟ.

ನಮ್ಮ ಈ ವಿಶಾಲ ಮೇದಿನಿಯನ್ನೇ ತೆಗೆದುಕೊಳ್ಳೋಣ. ಇದನ್ನು ಸೃಷ್ಟಿ ಮಾಡಿದ ಬ್ರಹ್ಮನಿಗೇನು ಉದ್ದೇಶ? ಅವನೇ ಹುಟ್ಟಿಸಿದ ಮಲ್ಲಿಗೆ ಘಮಘಮಿಸುವುದರಲ್ಲಿ ಏನು ಉದ್ದೇಶ?

---

* ಮದರಾಸು (೧೯೪೫)

ಏನು ನೀತಿ ? ಅಂತಃಕರಣವನ್ನು ಅಲುಗಾಡಿಸುವುದು ! ಇದೇ ಕಲೆಯ ಕೆಲಸ. ವ್ಯವಹಾರದ ಜಡತೆಯಿಂದ ಜೀವವನ್ನು ಎಚ್ಚಿಸಿ, ಅರಸಿಕತೆಯ ಸೆರೆಯಿಂದ ಸರರನ್ನು ಬಿಡಿಸುವುದು ಅದರ ಗಮ್ಯ. ಉತ್ತಮ ಅಪ್ರತಿಮ ವ್ಯಕ್ತಿಗಳನ್ನು ಅರಸುವುದು ಜೀವನದ ಗುರಿ ಎಂದು ಸಮಾಜಶಾಸ್ತ್ರ ಹೇಳುತ್ತದೆ. ಇದರ ಗುರಿ, ವಿಕಾಸ–ಕಲೆಯಲ್ಲೂ ಇಷ್ಟೆ. ಕಲಾಧರ್ಮವು ಆಯಾ ಕಾಲದ ವ್ಯಕ್ತಿಗಳನ್ನು ಆರಿಸಿ ರೂಪಿಸುತ್ತದೆ ! ಕಲಾಕೋವಿದನ ಕೈವಾಡದಿಂದ ಸಾಧಾರಣ ವ್ಯಕ್ತಿಗಳೂ ಅಪ್ರತಿಮರಾಗುತ್ತಾರೆ. ಪಾತ್ರಗಳು ನೀತಿವಂತರಾಗಿರಬಹುದು, ದುರ್ನೀತಿವಂತರಾಗಿರಬಹುದು : ಕಲಾವಿದನ ಸಂಸ್ಕಾರವನ್ನು ಅನುಸರಿಸಿಯೇ ಈ ಆಯ್ಕೆ. ಇದಕ್ಕೆ ಯಾರ ಸಮರ್ಥನೆಯೂ ಬೇಡ ! ಕಾಲಕ್ರಮೇಣ ಆಯಾ ಗ್ರಂಥಗಳಿಗೆ ಸಿಗುವ ಮನ್ನಣೆಯೇ ಸಮರ್ಥನೆ. ಆನಂದದಾಯಕವಾದ ಭಾಸನ ಕಲೆ ಎಂದಾದರೂ ಕಂದೀತೇ ? ಇದಕ್ಕೆ ಕಾರಣ–ಸ್ರಷ್ಟೃವಿನ ಚಿತ್ತನೆಯಿದ್ದಂತೆ. ವಿಚಾರ ಪ್ರಚಾರವಲ್ಲ ! ಕುಯಿಲು–ಬಿತ್ತಿ ಬೆಳಸಿದಂತೆ, ಬಯಸಿದಂತಲ್ಲ !

ನಾನು ನಾಟಕ ಬರೆಯಲು ಮೊದಲು ಮಾಡಿದ್ದು–ನಾಟಕ ಬರೆಯುವ ಬಯಕೆಯಿಂದಲ್ಲ ! ಸಮಾಜವನ್ನು ಪ್ರತಿಬಿಂಬಿಸಲೋಸುಗ ! ಇದನ್ನು ಮೊದಲು ಮಾಡಿದಾಗ–ಈಗ ನನ್ನದೆಂಬ ನಾಟಕಗಳಲ್ಲಿ, ನಮ್ಮೀ ಸಮಾಜದಲ್ಲಿ...ಬಳಕೆಗೆ ಬಂದಿರುವ ಭಾಷೆಯನ್ನು–ಕನ್ನಡ, ಆಂಗ್ಲೋ, ತೆಲುಗು, ತಮಿಳು, ಉರ್ದು, ಕೇರಳಗಳನ್ನು–ಉಪಯೋಗಿಸಬೇಕೆ ? ಬೇಡವೆ ? ಉಪಯೋಗಿಸಿದರೆ ಸರಿಯೆ ? ತಪ್ಪೆ ? ಎಂಬ ತೊಡರುಗಳು ನನಗಿರಲಿಲ್ಲ ! ಏಕೆಂದರೆ ಜನಜೀವನ ಪ್ರತಿಬಿಂಬನ ನನ್ನ ಗುರಿ. ಸಾಹಿತ್ಯೋಪಾಸಕನಲ್ಲ ನಾನು ! ಭಾಷೆಯು ಗ್ರಂಥಕ್ಕೆ ಯೋಗ್ಯವೆ ? ಅಯೋಗ್ಯವೆ ? ಎಂಬ ವಾದ–ವಿಮರ್ಶಕರ ಕಸುಬು ! ನನ್ನ ನಾಟಕದ ಭಾಷೆ ತಪ್ಪಾದರೆ, ನಮ್ಮ ಶಿಷ್ಟಜನ ನುಡಿಯುವ ನುಡಿಯೇ ತಪ್ಪು ! ತಪ್ಪು –ನನ್ನದಲ್ಲ ! ಟೊಳ್ಳುಗಟ್ಟಿಯ ಸಾತು, ಪಾತು, ನನ್ನ ಮನಸ್ಸಿನ ಅಂಗಳದಲ್ಲಿ ಹುಟ್ಟಿ ಬೆಳೆದವರೇ ಅಲ್ಲದೆ ಅವರು ಆಡಿದ ಮಾತಿನ ವೈಖರಿ. ಅವರ ಭಾಷೆ ನನ್ನ ಮನಸ್ಸಿನಲ್ಲಿ ಹಾಗೆಯೇ ಮೂಡಿ ಗಟ್ಟಿಸಿತು. ನಮ್ಮ ಮನೆಗಳಲ್ಲಿ ನಮ್ಮವರು ಮಾತಾಡುವಾಗ ಅವರ ಮಾತುಕತೆಗಳು ನಮ್ಮ ಮನತಟ್ಟುತ್ತವೆ. ಏನೆಂದರೂ 'ನೆರೆಹೊರ್ಕೆ ನೆರೆಹೊರ್ಕೆನೇವೇಯೇ'. ಕಲಾಕೋವಿದ ಅದನ್ನು ಗಮನಿಸುತ್ತಾನೆ. ಅದೇ ಜನ ನಾಟಕದಲ್ಲಿ ಬಂದು ಮಾತನಾಡಿದರೆ ಅವರ ಭಾಷೆ ಹೇಗೆ ಬದಲಾದೀತು ? ಸಾಹಿತ್ಯದೃಷ್ಟಿಯಲ್ಲಿ ಬದಲಾಯಿಸಲಾದೀತೆ ? ಕತೆ ಕಾದಂಬರಿಯ ಮಾತು ಹೇಗಾದರೂ ಆಗಲಿ, ಪರದೆ ಸಂಗೀತ ಇತ್ಯಾದಿ ಉಪಕರಣಗಳ ಓನ್ನೆಲೆಗಳಲ್ಲಾಗಲಿ ಪಾತ್ರಗಳ ನೈಸರ್ಗಿಕತೆ ಹ್ಯಾಗ್ಯ್ಯಾಗೋ ಹಾಗ್ಹಾಗೆ–ಉಡುಪು ನುಡಿ ಇತ್ಯಾದಿಗಳು ನಾಟಕ ಕರ್ತೃವಿನ ಸಂದೇಶವನ್ನು ಸಲ್ಲಿಸುವ ನಿಮಿತ್ತಕ್ಕೆ...ನಾಟ್ಯಕಲಾ ಸಾರ್ವಭೌಮ ಕಾಳಿದಾಸನು ಸೂತನ ಬಾಯಲ್ಲಿ 'ವಸಂತತಿಲಕ' ಶ್ಲೋಕವನ್ನು ನುಡಿಸಿದರೂ ಕಥಾನಾಯಕಿಯಾದ ಶಕುಂತಲೆಯ ಬಾಯಲ್ಲಿ...ಇಡೀ ಕರ್ನಾಟಕದಲ್ಲಿ ಒಂದೊಂದು ನಾಟಕದ ಒಂದೊಂದು ನಾಯಕಿಯೂ ನುಡಿಯುವ...'ಆರ್ಯಪುತ್ರ' ಎಂಬುದನ್ನು ಬಿಟ್ಟು 'ಅಜ್ಜವುತ್ತ' ಎಂದು ನುಡಿಸಿದ್ದೇ ಕೈಲಾಸಂ ನಾಟಕಗಳ ಭಾಷಾವೈಖರಿಗೆ ಮೇಲ್ಪಂಕ್ತಿ. "ನಾಟಕೋ ರಮ್ಯಂ ! ಭಾಷೋ ಆಭಾಸಂ !" ಇತಿ ಕೈಲಾಸಂ.

ಸೃಷ್ಟಿ ಯಥಾಪೂರ್ವವಲ್ಲ. 'ಇತಿಹಾಸವು' ಪುನಃಪುನಸ್ಥ 'ಸಂಭವಾಮಿ again and again' ಮಾಡ್ಕೊಳ್ಳಿ ! ಆದ್ರೆ...ಅನುಭವದಲ್ಲಿ ತಂದೆಯ ಹಾಗೆಯೇ ತದ್ವತ್ ಮಗ ಹುಟ್ಟಿದ್ದಿಲ್ಲ ! ಹುಟ್ಟಿಲ್ಲ ! ಹುಟ್ಟೋಲ್ಲ ! 'ಮಗನಲ್ಲಿ ಏನೋ ಹೊಸ ವಿಲಕ್ಷಣತೆ ಇದೆ' ಅನ್ನುತ್ತಾನೆ ಅಪ್ಪ. 'ಅಪ್ಪನಲ್ಲಿ ಏನೋ ವಿಲಕ್ಷಣತೆ ಇದೆ' ಅನ್ನುತ್ತಾನೆ ಮಗ'! ಹುಟ್ಟಿದ ವ್ಯಕ್ತಿಯು ಸಮಾಜದಲ್ಲಿ ಒಂದು ಅಂಶ. ಸಮಾಜದಲ್ಲಿ ತಂದೆ ತಾಯಿ ಬಂಧು ಬಳಗ ಈ ಮಮತಾ ಜಾಲವನ್ನು ತಪ್ಪಿಸಿಕೊಂಡು ವ್ಯಕ್ತಿತ್ವವನ್ನು ಅಳಿಸಿಕೊಂಡು ಸಮಾಜವನ್ನು ದೃಷ್ಟಿಸಿದಾಗ 'ಅಹಂ'ಕಾರ ದಮನವಾಗಿ, ಪ್ರಕೃತಿಯ ಸಹಜ ಸಮರಸವು ಅಂಕುರಿತವಾಗಿ, ಆ ಕ್ಷಣದಿಂದ ಹೊಸ ಬದುಕು, ಹೊಸ ಸೃಷ್ಟಿ ಹುಟ್ಟುವುದು ! ಬದುಕಿನಲ್ಲಿ ಮೊಬ್ಬಾಗಿ ಮುಸುಕಾಗಿ ಮುಸುಕುಮುಸುಕಾಗಿ ಸಾಧಾರಣ ಜನರಿಗೆ ಜೀವನದಲ್ಲಿ ಕಂಡು ಬರುವ ಸಮಾಜವು ಕಲಾಕೋವಿದನ ಕಣ್ಣುಗಳಿಗೆ ಸ್ಪಷ್ಟವಾಗಿ ಕಂಡುಬರುವುದು. ಜನರ ಮಾತಿನಲ್ಲಿ,

ಅಲ್ಲಿ, ಇಲ್ಲಿ, ಆಗ, ಈಗ, ಬಿಡಿಬಿಡಿಯಾಗಿ ಕೇಳಿಬರುವ ಒಂದು ಬಗೆಯ ಮಾತಿನ ಧಾಟಿ, ಇತ್ಯಾದಿ, ಇವುಗಳನ್ನು ಇಂಗಿತಮಾಡಿಕೊಂಡು ಕವಿಕಾವ್ಯದ ಮೂಲಕ ನೂಲಿನಂತೆ ನೀಳನೀಳಕ್ಕೂ ನೂತುಕೊಂಡು ಆತ್ಮೋಲ್ಲಾಸದ ಫಲವನ್ನು ಸಮಾಜಕ್ಕೆ ಒಪ್ಪಿಸುತ್ತಾನೆ. ಅವರಿವರಲ್ಲಿ ಸೂಕ್ಷ್ಮವಾಗಿ ಕಾಣುವ ಗುಣಹೀನತೆ ಒಟ್ಟಿಗೆ ಹೊಸೆದುಕೊಂಡು ಹುರಿಯಾಗಿ ಹಾವಿನಂತೆ ಹೆಡೆಯೆತ್ತುತ್ತದೆ. ಗುಣಸಂಪನ್ನತೆ ಒಟ್ಟಿಗೆ ಸೇರಿ ವ್ಯಕ್ತವಾಗುತ್ತದೆ. ರಕ್ತದೊಳಗಿನ ರೋಗಾಣು ಬರೀ ಕಣ್ಣಿಗೆ ಕಾಣುವುದಿಲ್ಲ ; ವೈದ್ಯರು ಅದನ್ನೇ ಭೂತಗನ್ನಡಿಯ ಅಡಿಯಲ್ಲಿಟ್ಟರೆ ಆಗ ಅದು ಬೃಹತ್ತಾಗಿ ಕಾಣಿಸುತ್ತದೆ. ನಮ್ಮ ಗುಣಾವಗುಣ, ಸತ್ಯಾಸತ್ಯ–ವ್ಯವಹಾರದಲ್ಲಿ ಆ ಅಣುವಿನಂತೆ–ಕಾವ್ಯದ ಭೂತಗನ್ನಡಿಯಲ್ಲಿ ಬೃಹದ್ರೂಪಿ. ಹಾಗಲ್ಲದಿದ್ದರೆ ಕಾವ್ಯಸೃಷ್ಟಿ ಗಿರಣಿಯ ಮಾಲಿನ ಹಾಗೆ. ಬರೀ ತತ್ತ್ರದ್ರೂಪೇ ಆದರೆ ವಿಕಾಸವು ತೊಲಗಿಹೋಗುತ್ತದೆ ! ಜಡಸೃಷ್ಟಿಯಲ್ಲೂ ಇದೇ ರೀತಿ.

"ಸಾಹಿತ್ಯದಲ್ಲಿ ಯಾವ ರಸ ಶ್ರೇಷ್ಠ ?" ಎಂದು ಕೆಲವರು ಕೇಳುತ್ತಾರೆ. "ಲೋಕೋ ಭಿನ್ನರುಚಿಃ." ರುಚಿಯಂತೆ, ಅದರ ಇದರ ಉಪಯುಕ್ತತೆಯಂತೆ, ತೀರ್ಮಾನ. ಸಂಸ್ಕಾರ ಜೀವನ ಪರಿಸ್ಥಿತಿಗಳಂತೆ ಉಪಯುಕ್ತತೆ, ರುಚಿ. 'ರುಚೀಣಾಂ ವೈಚಿತ್ರ್ಯಾತ್ ಋಜುಕುಟಿಲ ನಾನಾ ಪಥಯುಷಾನ್' ಎಂದಂತೆ. 'ನಮ್ಮ ದೇಶವನ್ನು ಪುನಃ ನಿರ್ಮಿಸುವ ಈ ಕಾಲಕ್ಕೆ ವೀರರಸವೊಂದೇ ಬೇಕು' ಎನ್ನುವವರಿದ್ದಾರೆ, 'ಈಗ ಬೀಭತ್ಸ ಕರುಣೆಗಳು ಅಗತ್ಯ' ಎಂಬವರೂ ಇದ್ದಾರೆ. ಶೃಂಗಾರಕ್ಕಂತೂ ಯಾವಾಗಲೂ ಭಕ್ತರು ಇದ್ದೇ ಇದ್ದಾರೆ. ನನ್ನ ಮಟ್ಟಿಗೆ ನನಗೆ ಹಾಸ್ಯದ ಮುಖವಾಡವೇ ಬೇಕು ಎನಿಸಿತು. ನನಗೆ ಅದು ಸಹಜ, ನನಗೊಂದು ವಕ್ರದೃಷ್ಟಿ ಇದೆ. ಐರಾವತಕ್ಕೂ ಅಡಿ ಜಾರುತ್ತೆ. ಸಮಾಜದಲ್ಲಿ ದೊಡ್ಡವರ ಕೊಂಕುಗಳೂ ಬಡಬಗ್ಗರ ನಮ್ರತೆಯಿಂದ ಹುಟ್ಟಿದ ಔನ್ನತ್ಯವೂ ಕಾಣತ್ತದೆ. ಸಮಾಜ ಸರಿ ಎಂದು ಮೆಚ್ಚುವ ಕಡೆ ಎಲ್ಲೋ ಐಬು ಕಾಣುತ್ತದೆ, ನನ್ನ ಕಣ್ಣಿಗೆ. ಸಮಾಜದಲ್ಲಿ ಈ ನನ್ನ ವಕ್ರದೃಷ್ಟಿ ಇರುವುದಿಲ್ಲ. ಸಾಧಾರಣವಾಗಿ ನಿರ್ದೋಷವೆಂದು ಕಂಡವರಲ್ಲಿನ ಲೋಪ ಈ ನನ್ನ ವಕ್ರದೃಷ್ಟಿಗೆ ಎದ್ದು ಕಾಣುತ್ತದೆ. ದೋಷವೆನಿಸಿಕೊಂಡದ್ದರಲ್ಲಿ ಗುಣವಿದ್ದರೆ ಅದೂ ಕಾಣುತ್ತದೆ. ಬಿಳಿಯ ಬಣ್ಣದಲ್ಲಿ ಅಡಗಿದ ಏಳು ಬಣ್ಣಗಳಂತೆಯೇ ಅನೇಕಾನೇಕ ಪರೆ ಇವೆ, ಜೀವನದಲ್ಲಿ. ಸಾಧಾರಣ ದೃಷ್ಟಿಗೆ ಈ ಒಂದೇ ಬಿಳಿಯ ಬಣ್ಣವು ಕಂಡುಬಂದರೂ ನನ್ನ ವಕ್ರದೃಷ್ಟಿಗೆ ಸಹಸ್ರಾರು ಬಣ್ಣಗಳು ಕಂಡುಬರುತ್ತವೆ. ಹಾಸ್ಯದೃಷ್ಟಿಯ ಭೂತಗನ್ನಡಿಯಲ್ಲಿ ಜನರು ನಿಸ್ಸಂಕೋಚವಾಗಿ ತಮ್ಮನ್ನು ತಾವೇ ನೋಡಿಕೊಳ್ಳುವುದು ಬಹಳ ಸುಲಭ. ತಮ್ಮನ್ನು ನೋಡಿ ತಾವೇ ನಗುತ್ತಾರೆ. ಹಾಸ್ಯದ ಗಮ್ಯ–ಉಲ್ಲಾಸ; ರೋಗಿಗೆ ಪಥ್ಯವಿದ್ದಂತೆ. ಜನಕ್ಕೆ ಮನಸ್ಸು ಕುಗ್ಗಿದಾಗ, ಹಾಸ ಅದನ್ನು ಅರಳಿಸುತ್ತದೆ. ಲೋಕ ಜಡವಾದಾಗ, ಹಾಸ್ಯ ಅದನ್ನು ಚೇತರಿಸುತ್ತದೆ.

ಹಾಸ್ಯದ ಶಕ್ತಿ—ಕ್ಲಾಂತಿಯಿಂದ ಮುಕ್ತಿ. ವ್ಯಷ್ಟಿತ್ವವನ್ನು ಮರೆಸಿ ಸಮಷ್ಟಿತ್ವವನ್ನು ಗೋಚರಪಡಿಸುವ ಶಕ್ತಿ—ಹಾಸ್ಯ. ಅದನ್ನು ಕಾವ್ಯದಲ್ಲಿ ಬಳಸಿದರೆ ಪ್ರಯೋಜನವುಂಟು. ಆಂಗ್ಲರಲ್ಲಿ ಹಾಸ್ಯ ಬೆಳೆದ ಹಾಗೆ ನಮ್ಮ ಕಾವ್ಯಗಳಲ್ಲಿ ಬೆಳೆದಿಲ್ಲ. ನಮ್ಮ ಜನರಲ್ಲಿ ಹಾಸ್ಯಪ್ರಿಯತೆಯೇನೂ ಕಡಮೆಯಿಲ್ಲ. ಆದರೆ ಅದನ್ನೇ ಕ್ರಮವಾಗಿ ಬಳಸಿ. ಅದರಿಂದ ಫಲವನ್ನು ನಾವು ಪಡೆದಿಲ್ಲ. ಕೇವಲ ಹಾಸ್ಯವನ್ನೇ ಆಧಾರ ಮಾಡಿಕೊಂಡು ಕತೆಗಳನ್ನು ಬರೆದವರು ನಮ್ಮಲ್ಲಿ ಕಡಮೆ. ಆಂಗ್ಲೇಯರ ಅಣಕವಾಡು, ಲಿಮೆರಿಕ್ (ಪಂಚಪಂಕ್ತಿ), ಇತ್ಯಾದಿ ಆಯುಧಗಳು ನಮ್ಮಲ್ಲಿ ವಿರಳ. ಬರೀ ಹಾಸ್ಯದ ನಾಟಕ ಹೆಚ್ಚಾಗಿ ಬೆಳೆದಿಲ್ಲ. ಮೊದಲಿನಿಂದ ಕೊನೆಯವರೆಗೂ ಪುರಾಣ, ಇತಿಹಾಸ, ಕಾದಂಬರಿಗಳೇ ಇವೆ. ನಿರ್ಮಲ ಹಾಸ್ಯ ಸೃಷ್ಟಿ ಹೆಚ್ಚಾಗಿ ಆಗಬೇಕು.

ಇದು ವ್ಯಂಗ್ಯಚಿತ್ರಗಳ ಕಾಲ. ವ್ಯಂಗ್ಯಚಿತ್ರ ಮಾತನ್ನು ಮನಮುಟ್ಟುವಂತೆ ತಿಳಿಸುತ್ತದೆ. ಇದು ವಿದೂಷಕ ಸಮ್ಮಿತಿಯ ಕಾಲ. ಜನಪದಸಾಹಿತ್ಯದಲ್ಲಿ ಈ ಸಮ್ಮಿತಿಯೇ ಮುಖ್ಯ. ರಾಜಸಮ್ಮಿತ ಕಾಂತಾಸಮ್ಮಿತಗಳಿಗಿಂತ ಪ್ರಕೃತದಲ್ಲಿ ಈ ಸಮ್ಮಿತವನ್ನು ಬಳಸಿ ಸಾಧಿಸಬೇಕು.

ಹಾಸ್ಯವು ಮಿಂಚಿನಂತೆ. ಅದನ್ನು ಬೆಳಕಾಗಿ ಉಳಿಸಲಾಗದು. ಆದರೆ ಅಂಧಕಾರಮಗ್ನರಿಗೆ ಕ್ಷಣಮಾತ್ರ ಪರಿಸ್ಥಿತಿಯನ್ನು ತೋರುವುದು—ಇದೇ ಹಾಸ್ಯ. ಹಾಸ್ಯ ನಿರ್ಮಲವಾಗಬೇಕು. ಹಾಸ್ಯ ಅಪಹಾಸ್ಯವಾಗಿ ಆಘಾತವಾಗಿ ಪರಿಣಮಿಸುತ್ತದೆ. ಶಸ್ತ್ರವೈದ್ಯನ ಶಸ್ತ್ರದಂತೆ ಹಾಸ್ಯ ಅಸ್ವಚ್ಛವಾಗಿರಬೇಕು. "ಕಂಡದ್ದು ಕಾಣಿಸದ ಹಾಗೆ ಕಾಣಿಸಿದರೆ, ಕಜ್ಜಿಇದ್ದಂತಹ ಸ್ನೇಹ."

ಹಾಸ್ಯವು ವಿಕಟತನವಲ್ಲ. ಕೇವಲ ಕುಚೋದ್ಯಕ್ಕಾಗಿ, ಪರಿಣಾಮದ ಕಡೆಗೆ ಲಕ್ಷ್ಯಕೊಡದೆ ಮಾಡಿದ ಹಾಸ್ಯ ಬಹುವೇಳೆ ಅನರ್ಥಕಾರಿ ! ಆದ್ದರಿಂದಲೇ

The barque of humour often veers
From shoals of smiles to seas of tears.

ನನ್ನ ನಾಟಕದಲ್ಲಿ ವಿಲಕ್ಷಣವಾದ ಮಾರ್ಪಾಟಾಗಿ ನೂತನ ಮಾರ್ಗವೇ ಒಂದು ರೂಢವಾದಂತೆ ಸಾಹಿತ್ಯದ ಇತರ ಭಾಗಗಳಲ್ಲಿ ಇನ್ನೂ ಹೆಚ್ಚಿನ ಕೆಲಸ ನಡೆಯಲವಕಾಶವಿದೆ. ಎಂದು ನನ್ನ ಮಿತ್ರರೂ ಅಲ್ಲದೆ ಕನ್ನಡನುಡಿಯ ಹಿತೈಷಿಗಳೂ ಸಾಧಿಸಿ ವಾದಿಸಿ ನನ್ನನ್ನು ಒಡಂಬಡಿಸಿದ್ದಾರೆ. "ಹಿರಿಯರು ಹೊಸಕಾಲದ ಭಾವನೆಗೆ ಹೊಸ ಜನಾಂಗದ ರಸಭಾವಕ್ಕೆ ರೂಪುಕೊಡದೆ ತಮ್ಮ ನೇತೃತ್ವವನ್ನು ಆಳಿಸುತ್ತಿದ್ದಾರೆ" ಎಂದು ಕಿರಿಯರು ದೂರುತ್ತಿದ್ದಾರೆ. ಲೋಕವೆಲ್ಲ ಪರಿವರ್ತನವಾಗುತ್ತಿದೆ. ಇಷ್ಟು ದಿನ ಕೇಳಿಬಾರದೆ ಇದ್ದ ಲೋಕದ ದುಃಖಸಂಕಟಗಳು ಈಗ ಕಿವಿ ಸೀಳುವ ಹಾಗೆ ಕೇಳುತ್ತಿವೆ. ಭಕ್ತಿಗಾಗಿ ಕಣ್ಣಪ್ಪ ಕಣ್ಣುಕೊಟ್ಟಂತೆ ಈಗ ತಮ್ಮ ಧ್ಯೇಯಕ್ಕೆ ತರುಣರು ಪ್ರಾಣ ಒಪ್ಪಿಸುತ್ತಿದ್ದಾರೆ. ಅನೇಕ ಪುರಾತನ ಸಂಪ್ರದಾಯ ಈಗ ಸೋತುಬಿದ್ದಿವೆ! ನಮ್ಮ ನಾಗರಿಕತೆ ನಮ್ಮ ಮುಂದೆಯೇ ಪಾಳು ಬೀಳುತ್ತಿದೆ. ಆದರೂ ಮತ್ತೊಂದು ಬೆಳೆಯುತ್ತಿದೆ. ಅದರಲ್ಲಿ ಸರ್ವಸಮಸಮಾನತೆಯೇ ಮುಖ್ಯ ಸೂತ್ರ. ಇದಕ್ಕೆಲ್ಲ ಹಿರಿಯರು ವಿಮುಖರಾಗಿ ಇದ್ದುಕೊಂಡು ಪ್ರಾಚೀನ ಗಾದೆಗಳಲ್ಲೇ ಮುಳುಗಿದಾರೆಂದೂ ಗತವೈಭವ ಸ್ಮರಣ—ಆ ವೇಷ—ಗಳಲ್ಲೇ ಇದ್ದಾರೆಂದೂ ಕಿರಿಯರು ಆಕ್ಷೇಪಿಸುತ್ತಿದ್ದಾರೆ. ಇದು ದಿಟವಾದರೂ. ಅಪಕ್ವಾನುಭವದ ಅಸಂಪೂರ್ಣಚೇತನದ ಎಳೆಯರು ಸಾಹಿತ್ಯಕ್ರಾಂತಿಗೆ ಕೈಹಾಕಿ ಹೀಚುಮಿಡಿಗಳನ್ನು ತಂದು ಬಾಯಿರುಚಿಯನ್ನೇ ಕೆಡಿಸುತ್ತಿದ್ದಾರೆಂದೂ ಕೇಳಿದೇನೆ. ಇದು ನಿಜವೋ ಅಲ್ಲವೋ ಎಂಬುದನ್ನು ನಾನರಿಯೆ.

ಹೊಸದು ಎಂಬುದು ನಮ್ಮನ್ನು ಹೆದರಿಸಬೇಕಾಗಿಲ್ಲ. ಹಳದೆಲ್ಲವೂ ಕಹಿಯೇ ಅಲ್ಲ. ಅದನ್ನೂ ಇದನ್ನೂ ಧಾರಾಳವಾಗಿ ಬಳಸಿಕೊಂಡೇ ನಾನು ನನ್ನ ಕೆಲಸವನ್ನು ಮಾಡಿದೇನೆ. ಲೋಕದಲ್ಲಿ ನಿಜವಾಗಿಯೂ ಹೊಸದು ಯಾವುದು ? ಹಳದು ಯಾವುದು ? ಸರ್ವಜ್ಞನ ಪದ್ಯ ಎಂದಿಗೆ ಹಳೆಯದಾಗಬೇಕು ? ಹಳೆಯದನ್ನೂ ಹೊಸದನ್ನೂ ಸರಿಯಾಗಿ ಹೊಸೆಯುತ್ತ ಹೋಗುವುದೇ ಜಾಣತನ ; ಸಮಾಜಕ್ಕೆ ಲಕ್ಷಣ, ಉಪಕಾರ. "ಅತಿ ಸರ್ವತ್ರವರ್ಜಯೇತ್."

ನಾಟಕದ ತುಂಬ ಶ್ರಮಜೀವಿಗಳನ್ನು ತುಂಬಿ ಅವರಿಂದ ನಿಟ್ಟುಸಿರು ಬಿಡಿಸಿದ ಕ್ಷಣವೇ ನಾಟಕ ಆನಂದದಾಯಕವಾಗುವುದಿಲ್ಲ. ಅಥವಾ, ಚಮಕಿ ಅಂಗರೇಖೆ ಸುರುವಾಲು ನೀರಾಜಿ ರುಮಾಲುಗಳ ರಾಜರನ್ನು ತಂದು ಕುಣಿಸಿದರೂ ಫಲವಿಲ್ಲ.

ಹಾಗಲ್ಲದೆ ಬರೀ ವಾದವಿವಾದದಲ್ಲಿ ತೊಡಗಿದರೆ ಆಗುವುದು ಸಮಾಜ ನಿಂದೆ—ನಾಟಕವಲ್ಲ.

ಗುಣಕ್ಕೆ ಮತ್ಸರವಿಲ್ಲವೆಂಬುದು ಎಷ್ಟು ನಿಜವೋ. ಮತ್ಸರಕ್ಕೆ ಗುಣವಿಲ್ಲವೆಂಬುದು ಅದಕ್ಕಿಂತಲೂ ನಿಜ. ವಿಮರ್ಶೆ ವಿಮರ್ಶಕರಿಗಿರಲಿ. ಅದು ಅವರ ಕಸುಬು. ಕಲೋಪಾಸಕರಿಗೆ ಕಲಾದೃಷ್ಟಿಯೊಂದೇ ಲೋಕ, ಆತ್ಮೋಲ್ಲಾಸ.

ರಸಗಳೆಲ್ಲ ಒಂದಕ್ಕೊಂದು ಜೊತೆಯಾಗಿ ಆನಂದವರ್ಧಕವಾಗುವಂತೆ. ನಮ್ಮ ಬಾಳು. ನಮ್ಮ ಕನ್ನಡನಾಡಿನಲ್ಲಿ ನಾನಾ ಭಾಷೆಯ ಜನರಿದ್ದೇವೆ. ಅದರಲ್ಲೂ ತಮಿಳು. ತೆಲುಗು. ತುಳು.

ಕೊಂಕಣಿ, ಮರಾಠಿ, ಉರ್ದು, ಇಂಗ್ಲಿಷು—ಇತಿ ನಾನಾ ವಿಧದ ಜನ ಕನ್ನಡನಾಡಿನ ಜನರನ್ನು ಸೇರಿ ಕರ್ಣಾಟಕಸ್ಥರಾಗಿದ್ದಾರೆ. ಇವರಲ್ಲಿ ಯಾರನ್ನೂ ಕರ್ಣಾಟಕರಲ್ಲವೆನ್ನುವಂತಿಲ್ಲ. ಎಲ್ಲರಿಗೂ ಕನ್ನಡವೇ ಪ್ರಧಾನ. ತಮ್ಮ ತಾಯಿನುಡಿ ಯಾವುದೇ ಇರಲಿ, ಎಲ್ಲರೂ ಸಾಧ್ಯವಿದ್ದ ಮಟ್ಟಿಗೆ ತಮ್ಮ ತಮ್ಮ ಕ್ಷೇತ್ರದಲ್ಲಿ ಕರ್ನಾಟಕದ ಕೆಲಸ ಮಾಡಿದ್ದಾರೆ. ನಾನೇ ತಮಿಳ. ಪರಿಷತ್ತಿನ ಉಪಾಧ್ಯಕ್ಷರಾದ ನನ್ನ ಹಿರಿಯ ತಮ್ಮ ಮಾಸ್ತಿಯವರೇ ತಮಿಳರು. ಈ ಸಮ್ಮೇಳನವನ್ನು ಉದ್ಘಾಟಿಸಿದ ನನ್ನ ಹಿರಿಯ ಅಣ್ಣ ರಾಜಾಜಿ ಅವರೂ ತಮಿಳರು.

ಕರ್ನಾಟಕವನ್ನು ಒಂದೇ ಪ್ರಾಂತವನ್ನಾಗಿ ಕಟ್ಟಬೇಕೇದು ನಾವು ಕಾತರರಾಗಿದ್ದೇವೆ. ಅದಕ್ಕೆ ಅಡ್ಡ ಬರುತ್ತಿರುವುದು ನಮ್ಮ ನಾಡಿನ ಚರಿತ್ರೆ. ಮುಸಲ್ಮಾನರ ಕೈಕೆಳಗೆ 60–70 ವರ್ಷ, ಪೇಷವೆಯವರ ಅಧೀನದಲ್ಲಿ ಕೆಲವು ಕಾಲ, ಬ್ರಿಟಿಷರ ಕೈಯೊಳಗೆ 150 ವರ್ಷ—ಹೀಗೆ ಪರಕೀಯರ ಆಡಳಿತಕ್ಕೆ ಒಳಗಾದ ನಮ್ಮ ಚರಿತ್ರೆಯೇ ನಮಗೆ ಆತಂಕ. ಇದನ್ನು ಜಯಿಸಲು ಹೊಸಾ ಹೊಸ ಇತಿಹಾಸವನ್ನೇ ಹೂಡಬೇಕು.

ಇದೀ ಕನ್ನಡ ಪ್ರಾಂತವನ್ನು ಕಟ್ಟಬೇಕೆನ್ನುವುದೇತಕ್ಕೆ ? ಇದರಂತೆಯೇ ತಮಿಳು, ತೆಲುಗು, ಮಹಾರಾಷ್ಟ್ರ, ಕೇರಳ ಪ್ರಾಂತಗಳೂ ಆಗಲಿ, ಎಂದಲ್ಲವೆ ? ದಕ್ಷಿಣ ದೇಶದ ನಾಲ್ಕು ಪ್ರಾಂತಗಳೂ ನಾಲ್ಕು ಭುಜದಂತೆ ಚತುರಂಗ ಬಲದಂತೆ ಏಕವಾಗಿ ಐಕಮತ್ಯದಿಂದ ವರ್ತಿಸಬೇಕೆಂದಲ್ಲವೆ ? ಇಲ್ಲವೆ, ಪರಸ್ಪರ ವೈಷಮ್ಯಕ್ಕಾಗಿಯೆ ? ತಮಿಳೇನು, ತೆಲುಗೇನು, ಮಲೆಯಾಳವೇನು ? ಕನ್ನಡಕ್ಕೆ ಅಣ್ಣ ತಮ್ಮ. ಎಲ್ಲವೂ ದ್ರಾವಿಡ ಭಾಷೆಯೇ. ಒಂದು ಅಕ್ಷರ ಬದಲಾದರೆ ತೆಲುಗು ಶಬ್ದವಾಯಿತು. ಇನ್ನೊಂದು ಅಕ್ಷರ ಬದಲಾದರೆ ತಮಿಳಾಯಿತು. ಕನ್ನಡ–ತೆಲುಗುಗಳಿಗೆ ಬೇರೆಬೇರೆ ಲಿಪಿಯಿಲ್ಲ: ಎರಡೂ ಒಂದೇ. ಕೇರಳ ವರ್ಣಮಾಲೆ ಕನ್ನಡಕ್ಕೆ ಸಮೀಪವಾಗಿದೆ. ಇನ್ನು ಆಚಾರ ವ್ಯವಹಾರ, ಧರ್ಮ ದೈವ, ಋಣಾನುಬಂಧ—ಎಲ್ಲದರಲ್ಲೂ ಈ ದಾಕ್ಷಿಣಾತ್ಯರಲ್ಲಿ ಅಷ್ಟೇನೂ ಭೇದವಿಲ್ಲ. ನಾವು ಕರ್ಣಾಟಕರು ಎಲ್ಲಾ ದ್ರಾವಿಡ ಸಂಪ್ರದಾಯಕ್ಕೂ ಒಕ್ಕಲು; ಎಲ್ಲಾ ದ್ರಾವಿಡ ಭಾಷೆಗೂ ಆಶ್ರಯ ಕೊಡುವವರು. ತೆಲುಗು, ತಮಿಳು, ಕೇರಳ ಪ್ರಾಂತಗಳಲ್ಲಿ ಕಾಣದ ಭಾಷಾತೀತ ಕರ್ಣಾಟಕತ್ವ ನಮ್ಮಲ್ಲಿ ಹಿಂದಿನಿಂದಲೂ ಬೆಳೆದುಬಂದಿದೆ. ಇದು ನಮ್ಮ ವೈಶಿಷ್ಟ್ಯ. ಈಗಿನ ಪ್ರಾಂತೀಕರಣದ ರಭಸದಲ್ಲಿ ಈ ವೈಶಿಷ್ಟ್ಯವನ್ನು ತೊಲಗಿಸಬಾರದು. ಈ ಭೇದಭಾವನೆ ನಮ್ಮ ರಾಜಕೀಯದ ದುಷ್ಫಲ; ಅಖಂಡಭಾರತದ ನಿರ್ಮಾಣಕ್ಕೆ ಮುಂಚೆ ನಮ್ಮ ನಮ್ಮ ಪ್ರಾಂತಗಳಲ್ಲಿ ನಮ್ಮ ನಮ್ಮ ಪರಸ್ಪರ ದ್ವೇಷ ದಮನವಾಗಬೇಕು. ಒಳಗೂ ಹೊರಗೂ ಎಲ್ಲರೊಡನೆ ಸಮರಸವಾಗಿ ನಡೆದು, ಕನ್ನಡಿಗರು ಭಾರತಕ್ಕೇ ಮೇಲ್ಪಂಕ್ತಿಯಾಗೋಣ ! ನಮ್ಮ ನೆರೆಯವರನ್ನು ಬಿಟ್ಟು ನಮಗೆ ಪ್ರಾಂತ ಬಂದರೂ ಕಣ್ಣೂರಿ. ನಮಗೆ ಇಲ್ಲದೆ ಅವರಿಗೆ ಬಂದರೂ ಕಣ್ಣೂರಿ. ಎಲ್ಲರಿಗೂ ಒಂದೇ ಮೋಕ್ಷ. ಇದು ಸಮಷ್ಟಿ ರಾಜಕೀಯ.

ರಾಜಕೀಯವಾದ ಏಕೀಕರಣಕ್ಕಿಂತ ಮುಖ್ಯವಾದುದ್ದು ನಮ್ಮ ಜನತೆಯ ಏಕೀಭಾವ. ಆ ಏಕೀಭಾವವೇ ನಮ್ಮ ನಾಡಿನ ನಿಜವಾದ ಅಸ್ತಿಭಾರ. ಆ ಮನೋಭಾವವಿಲ್ಲದಿದ್ದರೆ ರಾಜಕೀಯ ಏಕೀಕರಣ ಫಲಕಾರಿಯಲ್ಲ. ಆ ಏಕೀಭಾವಕ್ಕೆ ಕನ್ನಡ ಸಾಹಿತ್ಯ ಸಮ್ಮೇಳನವು ಸಹಕಾರಿಯೆಂದು ಎಣಿಸಿದ್ದೇನೆ. ಕಲಾವಿದರ ಮನಸ್ಸು ಮತ್ಸರವಿಲ್ಲದೆ ಪಕ್ಷಪಾತವಿಲ್ಲದೆ ಅಭೇದವಾಗಿ ಐಕಮತ್ಯದ ಹೊಮ್ಮನ್ನು ಸೂಸಿದರೆ ಕನ್ನಡದ ನಾಡು ನಾಡೇ ಕಬ್ಬಿಗರ ಕೂಟ !

ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದಾಗಲೇ ಇಡಿಯ ಕನ್ನಡನಾಡನ್ನು ತನ್ನ ಕಣ್ಣಿನ ಮುಂದೆ ಇರಿಸಿಕೊಂಡಿತ್ತು. ಪರಿಷತ್ತು ಆಗಿನಿಂದ ಸದ್ದಿಲ್ಲದೆ ಕರ್ನಾಟಕವನ್ನು ಒಂದುಮಾಡುತ್ತಿದೆ. ಪರಿಷತ್ತನ್ನು ಮೊದಲು ಮಾಡಿದ ದಿವಂಗತ ಶ್ರೀ ಎಚ್. ವಿ. ನಂಜುಂಡಯ್ಯನವರಿಂದ ಪ್ರಾರಂಭವಾಗಿ ಈಗ ಅದರ ಭಾರವನ್ನು ಹೊತ್ತು ನಡೆಸುತ್ತಿರುವ ಮಾಸ್ತಿ ವೆಂಕಟೇಶ ಐಯಂಗಾರ್ಯರವರೆಗೂ ಈ ಪರಿಷತ್ತನ್ನು ನಡೆಸಿದ ಎಲ್ಲರೂ ಕರ್ಣಾಟಕದ ನಿರ್ಮಾಣದಲ್ಲೇ ತಮ್ಮ ಆಯುಷ್ಯ ಕಳೆದಿದಾರೆ.

ಕನ್ನಡನುಡಿಯೇ ಮೊದಲಿನ ಹಾಗೆ ಪ್ರಾಂತೀಯ ವಿಲಕ್ಷಣಗಳಿಂದ ತುಂಬಿಲ್ಲ. ಒಂದಾಗುತ್ತಿದೆ. ಮೈಸೂರು ನಾಟಕದ ಮಾತು ಉಳಿದ ಕಡೆ, ಉಳಿದ ಕಡೆಯ ಮಾತು ಮೈಸೂರಿನಲ್ಲಿ ಅರ್ಥವಾಗುತ್ತಿದೆ. ಕಾವ್ಯದೃಷ್ಟಿಯಲ್ಲಿ ಆಗಬೇಕಾಗಿರುವ ಹೊಸ ಪೋಷಣೆಗೆ ಈ ಸಮ್ಮೇಳನ ಸಹಾಯಕಾರಿ. ಎಲ್ಲಕ್ಕಿಂತ ಮಿಗಿಲಾಗಿ ಕಲಾವಿದರ ಏಕೀಭಾವಕ್ಕೆ ಸಾಧನವಾಗುತ್ತದೆ.

ಕನ್ನಡ ಬೆಳೆಯುತ್ತಿದೆ. ಈಗ ಆಗುತ್ತಿರುವ ಅಸಂಖ್ಯ ಗ್ರಂಥರಾಶಿಗಳ ನಿರ್ಮಾಣದಿಂದ ನನಗೆ ಸಂತೋಷವಾಗಿದೆ. ಅನೇಕ ಪತ್ರಿಕೆಗಳು ಹುಟ್ಟಿವೆ. ಲೇಖಕರು ಇದ್ದಾರೆ. ಎಲ್ಲರೂ ಒಂದೊಂದು ಕೆಲಸ ಮಾಡಿ ನಾಡನ್ನು ಮುನ್ನಡೆಸಬೇಕು.

ತಾವು ಈ ಚಿನ್ನಪಟ್ಟಣದಲ್ಲಿ ನಡೆದ ಈ ಸಮ್ಮೇಳನಕ್ಕೆ ನನ್ನನ್ನು ಆಹ್ವಾನಿಸಿ ಅಧ್ಯಕ್ಷನನ್ನಾಗಿ ಮಾಡಿ, ತಮ್ಮ ಆನಂದವನ್ನು ವ್ಯಕ್ತಪಡಿಸಿದೀರಿ. ಆದರೆ. ನಿಜವಾಗಿ, ಸಾತು ಪಾತು ಮಾಧು ಅಶ್ವತ್ಥರು—ಅವರ ಪರವಾಗಿ ನಾನು ಬೇಡುವುದು :*

A Poet's guerdon is not gold,
Not Parian bust, not trappings brave !
A tear, a titter from young and old
Is all the meed I meekly crave !

---

* ಹೊನ್ನೆ ? ಬಲ್‌ಬಿರುದುಗಳೆ ? ಹಾಲುಗಲ್ ವಿಗ್ರಹವೆ ?
ಕವಿ ಬಯಸನಿಂಥದೇ ಪ್ರತಿಫಲವೆ ಬೇಕು !
ಹಿರಿಯರುಂ ಕಿರಿಯರುಂ ಕಿಲಕಿಲನೆ ನಕ್ಕಿರಡು
ಕಣ್ಣ ಹನಿಯಿತ್ತರೆನಗದು ಅನಿತೆ ಸಾಕು !

೨. ಮದರಾಸು ಆಕಾಶವಾಣಿಯಲ್ಲಿ ಮಾಡಿದ ಭಾಷಣ*

ಸಾಹಿತ್ಯ ಅಂಬೋದು ಕಲೆಯ ಒಂದು ಶಾಖೆ. ಚಿತ್ರಗಳು ಬರೆಯೋದು, ಕಲ್ಲುಗಳ್ನ ಕೊರೆಯೋದು, ಹಾಡುಗಳ್ನ ಕಟ್ಟೋದು ಇವೆಲ್ಲಾ ಕಲೆಯ ಶಾಖೆಗಳು. ಈ ಬೇರೆ ಬೇರೆ ರೂಪಗಳ್ನ ಕಲೆ ತಾಳೋದಕ್ಕೆ ಕಾರಣ : ಕಲಾವಿದನ ಕೈಕೆಲಸವೊ, ಬಾಯ್ಕೆಲಸವೊ. ಇವುಗಳಲ್ಲಿ ಅವನಿಗೆ ಸಾಧಾರಣವಾಗಿ ಸುಲಭವಾಗಿ ಹುಟ್ಟುಗುಣವಾದ ಘಟ್ಟಿಗ್ತನ. ಆದರೆ, ಒಂದೇ ರೂಪಾನ ಎಂಟು ಕಲಾವಿದ್ರು ಈ ಮೇಲ್ಕಂಡ ಎಂಟು ಶಾಖೆಗ್ಳಾಗಿ ನಿರೂಪಿಸಬಹುದು. ಏನಾದರೂ, ಕಲೆ ಒಂದು ಕಲಾವಸ್ತುವಾಗಿ ಕೊನೆಗಾಣುವ ಬಗೆ ನನಗೆ ತಿಳಿದಮಟ್ಟಿಗೂ ಹೀಗೆ: ತಲೇಲಿ ಪ್ರತಿಭೆ ಇರೋ ಮನುಷ್ಯ ತನ್ನ ಮಾಂಸಖಂಡ, ರಕ್ತ, ವ್ಯಕ್ತಿತ್ವವನ್ನ ಅಳಿಸಿಕೊಂಡು, ಅಂತಃಕರಣಚತುಷ್ಟಯಗಳಾದ ಬುದ್ಧಿ, ಮನ, ಚಿತ್ತ, ಅಹಂಕಾರ—ಇವುಗಳಲ್ಲಿ ತಲ್ಲೀನನಾಗುತ್ತಲೇ ಪರಿಸ್ಥಿತಿಯು ಪ್ರಕೃತಿಯಲ್ಲಿ ಯಾವುದೋ ಒಂದು ಭಾವವನ್ನು ಉದ್ರೇಕಿಸುತ್ತದೆ. ಅನಂತರ ಕ್ರಮೇಣ ಇದೇ ಭಾವಭರಿತವಾದ ಒಂದು ಸಾಕಾರ ಪ್ರತೀಕೆಯೇ ಕಂಡುಬರುವುದು. ಮೊಟ್ಟ ಮೊದಲು, ಕನಸಿನಲ್ಲಿ ಕಂಡ ಚಿತ್ರದಂತೆ ಇದು ಇವನ ಅಂತರಿಂದ್ರಿಯಗಳಿಗೆಯೇ ಗೋಚರವಾಗುವುದು. ಆಗ, ಜನನಿಯು ಹತ್ತು ತಿಂಗಳು ಜಠರದಲ್ಲಿ ಇದ್ದು ತನಗೆ ಪ್ರತೀಕೆಯಂತೆ ಇದ್ದ ಕೂಸನ್ನು ಹೆತ್ತು ತನ್ನ ಬಹಿರಿಂದ್ರಿಯಗಳ ಗೋಚರಸ್ಪರ್ಶನಕ್ಕೆ ಬಂದಂತೆ, ಕಲಾವಿದನು, ತಾನು ಕಂಡ ಪ್ರತೀಕೆಯನ್ನು ಕೊರೆದ ಕಲ್ಲಾಗಿಯೊ, ಬಣ್ಣಿಸಿದ ಚಿತ್ರವಾಗಿಯೊ, ಕಟ್ಟಿದ ಕಾವ್ಯವಾಗಿಯೊ ಬಹಿರಂಗದ ಇಂದ್ರಿಯಗಳ ಗೋಚರಕ್ಕೆ ತಂದುಕೊಂಡು, ಆತ್ಮೋಲ್ಲಾಸಪಡುವನು. ಕಲೆಯ ಶಾಖೆಯಾದ ಸಾಹಿತ್ಯವು ಹೀಗೆ ಹುಟ್ಟುತ್ತೆ.

ಆದರೆ, "ಯಾವುದು ಉತ್ತಮಸಾಹಿತ್ಯ" ಅನ್ನೋ ಪ್ರಶ್ನೆ ಯಾವಾಗ್ಲೂ ಇದ್ದೇ ಇದ್ದಿದೆ. ಕವಿ ತನಗೆ ತೋಚಿದ್ದನ್ನ ಬರೀತಾನೆ, ಚಿತ್ರಿಸ್ತಾನೆ. ಆದ್ರೆ ಯಾವುದು ಸಾಹಿತ್ಯರೀತ್ಯಾ ಉತ್ತಮ ಅನ್ನೋದನ್ನ ತೀರ್ಮಾನಿಸೋದು—**ಕವಿ ಅಲ್ಲ**—ಜನಸಮಾಜ. ಮುಂದೆ ನಡೆಯೋಕೆ ಯಾವುದು ಅವರಿಗೆ ಸಹಾಯ ಆಗ್ತದೋ, ಅದು ಅವರ ದೃಷ್ಟೀಲಿ ಉತ್ತಮಸಾಹಿತ್ಯ. ಅಂದ್ರೆ, ಸಮಾಜಕ್ಕೆ ಯಾವುದು ಉಪಯೋಗ್ವೋ ಅದೇ ಉತ್ತಮಸಾಹಿತ್ಯ. ಸಾಹಿತ್ಯ ಆಗಲಿ, ವಿಜ್ಞಾನ ಆಗಲಿ, ಯಾರು ಯಾವ ದಾರೀನೇ ಹಿಡೀಲಿ, ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸ್ಬೇಕಾದ ಋಣ—ಸಮಾಜಸೇವೆ—ಅಂತ ಶಾಸ್ತ್ರ ಹೇಳುತ್ತೆ. ಆದ್ರಿಂದ ಸಮಾಜಕ್ಕೆ ಉಪಯೋಗವಾಗಿರೋದೇ ಉತ್ತಮ ಸಾಹಿತ್ಯದ ಲಕ್ಷಣ.

ಸರಿ. ಸಾಹಿತ್ಯ ಸಮಾಜಕ್ಕೆ ಉಪಯೋಗವಾಗಬೇಕಾದರೆ—"ಜನರಿಗೆ ಏನು ಬೇಕು ?" ಅನ್ನೋದನ್ನ ಸಾಹಿತಿ ತಿಳಕೊಳ್ತಾನೆ. ಇದೇ ಪ್ರತಿಬಿಂಬನ ಸಾಹಿತ್ಯದ ಧರ್ಮ. ಈ ಬಿಂಬನದಲ್ಲಿ ಪುರಾಣಗಳ, ನಾವು ಕಾಣದ ಹರಿಶ್ಚಂದ್ರ, ರಾಮಕೃಷ್ಣಾದಿ ಅವಧೂತರನ್ನ ಪ್ರತಿಬಿಂಬಿಸಬೇಕೆ ? ಅಥ್ವಾ ಇತಿಹಾಸದ, ಅಗ್ನಿಕುಲದ ಶಿವಾಜಿ ಮೊದಲಾದ ಕರ್ಮವೀರರನ್ನು ಬಿಂಬಿಸಬೇಕೆ? ಇಲ್ಲ —ನಮ್ಮೆದುರ್ಗೆ ನಾವು ಕಾಣೋ ಸಮಾಜಾನ ಪ್ರತಿಬಿಂಬಿಸ್ಬೇಕೆ ? ಇವು ಮೂರರಲ್ಲಿ ಯಾವುದು ಉತ್ತಮಸಾಹಿತ್ಯ ?

ವಾಲ್ಮೀಕಿ ರಾಮಾಯಣ ಬರೆದು ಪಾತ್ರಗಳ್ನ ಸೃಷ್ಟಿಸಿ, ಸಮಾಜದ ಜೀವನಧರ್ಮಾನ ತೋರಿಸ್ದ. ಶ್ರೀ ರಾಮಚಂದ್ರನಿಂದ ಜನ ತಮ್ಮ ಪಿತೃಭಕ್ತಿಗೆ ಒಂದು ಮೇಲ್‌ಪಂಗ್ತೀನ ಕಂಡು

---

* ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ, 'ಜನಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯವೇ ಉತ್ತಮ ಸಾಹಿತ್ಯ' ವ್ಯಾಖ್ಯಾನ ಮಾಲೆಯಲ್ಲಿ ಮದರಾಸು ಆಕಾಶವಾಣಿ ನಿಲಯದಿಂದ ಮಾಡಿದ ಪ್ರಸಾರ ಭಾಷಣ (೧೯೪೫).

ಕೊಂಡ್ರು. ಸೀತೇನ ನೋಡಿ ನಾರೀರು ತಂ ನಡತೇನ ತಿದ್ದಿಕೊಂಡ್ರು. ಅದೇ ರಾಮಾಯಣದ ತಿರುಳು. ಆ ಉಪಯೋಗ ಅದಕ್ಕೆ ಉತ್ತಮಕಾವ್ಯದ ಪದವೀನ ಕೊಡ್ತು.

ಹಿಂದೆ. "ರಾಜಾ ರಾಷ್ಟ್ರಸ್ಯ ಕಾರಣಂ" ಆಗಿದ್ರು. ರಾಷ್ಟ್ರದ ಪಾಪ ತಮ್ದೇ ಅಂತ ಭಾವ್ಸಿ ಪ್ರಜೆಗಳನ್ನ ತಮ್ ಮಕ್ಕಳಿಗಿಂತ ಮುದ್ದಾಗಿ ಸಾಕ್ತಿದ್ರು. ಈಗ ಹಾಗಿಲ್ಲ. ಆರ್ಯಾವರ್ತದಲ್ಲಿ, "ಆಡಳಿತಾನ ಪ್ರಜೆಗಳಿಗೋಸ್ಕರ ಪ್ರಜೆಗ್ಳೇ ನಡಸ್ಬೇಕು" ಅನ್ತ ಜನ ಭಾವ್ಸಿ ಸಾಧಿಸ್ತಿದಾರೆ. ಇಡೀ ಭಾರತಾನೇ ಅದಕ್ಕೋಸ್ಕರ ಹೋರಾಡ್ತಿದೆ. ಈಗ್ಲೋ—"ರಾಷ್ಟ್ರೋ ರಾಷ್ಟ್ರಸ್ಯ ಕಾರಣಂ". ಹೀಗಿರೋವಾಗ, ಹಳೇ ಪುರಾಣ ಇತಿಹಾಸಗಳ ರಾಜಾ ರಾಣೀರ ಕಥೆಗಳ್ನ ಹೇಳಿದ್ರೆ, ಅವಧೂತ ಪ್ರತಿಮೆಗಳ್ನ ಪ್ರತಿಬಿಂಬಿಸಿದ್ರೆ, ಅದು ಉಪಯೋಗವಾದೀತೇ???

ವ್ಯಕ್ತಿಗೆ ದೈವ ಕೊಟ್ಟ ಯಾವ ಅಂಶಾನೇ ಆಗ್ಲಿ, ಕ್ಷಿಪ್ರದಲ್ಲಿ ನಮ್ಮ ದೇಶಕ್ಕೆ "ಸರ್ವೇ ಜನಾಸ್ಸುಖಿನೋ ಭವನ್ತು" ಅನ್ನೋ ಗಮ್ಯಕ್ಕೆ ದಾರಿ ಮಾಡೋ ಅನೇಕಾನೇಕ ಕಲಾಮಾರ್ಗಗಳ ಶಾಖೆ ಆದ ಸಾಹಿತ್ಯದಲ್ಲಿ ಜನಜೀವನದ ಕುಂದುಕೊರತೆಗಳನ್ನ, ತಪ್ಪುನೆಪ್ಪುಗಳನ್ನ ಪ್ರತಿಬಿಂಬಿಸಿ, ತಾವ್ತಾವೇ ತಿದ್ಕೊಳ್ಳೋಕೆ ಸಹಕಾರಿಯಾಗಿ ಸತ್ಯ—ಅಹಿಂಸೆಗಳನ್ನ ಪ್ರತಿಬಿಂಬಿಸೋ ಕಾವ್ಯಾನೇ ಉತ್ತಮಕಾವ್ಯ; ಅತ್ಯುತ್ತಮ ಧರ್ಮ.

LITTLE LAYS & PLAYS

A Poet's guerdon is not gold,
Not Parian bust, not trappings brave.
A tear, a titter from young and Old
Is all the meed I meekly crave!

The Dramatist

A Brahma designs! A Vishnu sustains!
A Cinder-grim'd SIVA doth slay!
The dramatist deigns when Durga ordains,
The Trinity's Play to display!

* * *

The yellow stragglers of all setting moons
Do linger but to vex a risen Sun—

Eternal Cain

IF luscious fruit begat of tree
Beget but its own dam the tree,
May weal of Man begat of woe
Beget aught else for him but woe?

* * *

Since blood-red dawn of fateful day
This Brute-Divine saw light of day,
Whilst **God** in man, sees Right from Wrong,
'Tis **Brute** in him, to right a wrong,
That spills the blood of brother man
And stills the Voice of **God** in man!

Truth Naked

WE call thee 'brother', Scavenger;
We lie, believe us not :
Would we dare set our kindred on
The task that is thy lot ?

We call thee 'friend', O Scavenger;
We lie, believe us not:
Thy **Home** reeks ranker than **Latrines,**
And we reck not a jot,

We call thee 'hero', Scavenger ;
We lie, believe us not :
A soul that conquers flesh is not
A carrion-feeding sot.

Until we callous callid brutes
For dread of Wrath Divine,
Desist from crime of coz'ning thee
To play the human swine ;

Until thy sodd'n eyes do awake
To thine own manliness,
Our cant of "brother", "hero", "friend",
Is balderdash, no less !

The Lake

WHEN Night had wav'd her magic wand
And bid the Moon awake
The Moonbeams 'lighted hand in hand
Upon a lonely Lake.

And as their tiny twinkling feet
Dip trip and skip in glee,
The Lake in mournful tone did greet
Her guests so gay and free :

"You're welcome friends," the Lake did say
"To find your happiness,
On what there is of me to day !
Tomorrow I'll be less !"

"Oh, shame ! But why ?" the Beams did pause
To ask in sympathy ;
"Kind friends you'll hardly guess the cause
That's slowly killing me !

"On less and less of me each night
Your feet will trip and tread !
And one sad night your steps will 'light
On just my clayey bed!"

"Oh cruel, sad ! It can't be right !"
The Beams vowed tearfully ;
"Do let us know please of your plight !
We'd like to, awfully !"

"Not very very long ago
You'll scarcely believe me,
This mouldy muddy mass of woe
Was not me really !

"A bluer hue of blue was I
Than blue of sky or sea;
Each fleecy cloud that floated by
I mirror'd faithfully ;

"And graceful swans with necks of snow
On me did glide and race;
And lilies white, gold, pink did blow
Upon my limpid face !

"And Sun and Moon! Stars big and wee
And things that bide the Earth,
Came night and day to bathe in me
And praise my worth and birth !

"Though bless'd in ev'ry way to live
In happy calm content,
My mind did now and then misgive
My heart with resentment :

"Whilst ev'rything above, around
Could run or swim or soar,
My wretched lot did keep me bound
To banks for evermore !

"The very stars and clouds so free
I mirror'd faithfully,
Did seem to mock imprison'd me;
Oh ! How I shrieked to flee !

"This yearn for freedom set my heart
Abrooding night and day ;
And moodily I played my part
To guests that came my way.

"Though kind alike to ev'ry guest
Polite to ev'ry one,
Ere long, I grew to like one best,
Mad fool ! I lov'd the Sun!

"I don't know if you know Love's way ?
It's dreadful, really !
In chips you fling your heart away
For chunks of misery !

"Why! Lambs that tickle a tiger's side
And moths that flirt with flames
Are wise without a doubt beside
The mug that plays Love's games !

"In Love's deft hands I was clay
Forgetting wrong and right ;
I hugg'd and kiss'd the Sun all day
And dream'd of him all night !

"His broiling hug and burning kiss
Did thrill me all ablaze,
And things around seem'd in my bliss
But shadows in a haze !

"Mad giddy chump ! I little guess'd
I'd live to rue the day
I fell in love, nor had assess'd
The price I'd have to pay !

"For when I woke from Love's mad dream
I found to my dismay
My mossy velvet banks did seem
Mud-brown and miles away !

"My water's hue, a blue no more
Had turn'd a clammy green !
Of swans and bathers, shore to shore
Not e'en a sign was seen !

"My lilies white, gold, pink and blue—
Alas ! I weep to state—
Were boil'd burn'd and turn'd to stew !
My Love had seal'd their fate !

"And even Pigs that pass my way,
Say 'We're afraid it's time
We went around elsewhere to play ;
Why, this is worse than slime !'

"Thus loath'd and lonely brink to brink
I weep in misery
Against the day my Love will drink
What little's left of me!"

Whilst thus in woe the Lake poured out
Her piteous history,
Sore helplessly she look'd about
As though for sympathy!

But strange to say, to her dismay
The Moonbeams did but grin!
And peal on peal of laughter gay
Did fill the air with din!

The Lake enrag'd thro' wounded pride
Remark'd in caustic tone:
"I'm glad my plight doth well provide
My guests with food for fun!"

The Beams forthwith with looks contrite
Suppress'd their ill-tim'd mirth,
But said "Dear Lake, we're sure you're quite
The blindest thing on earth!

"You little guess'd we Beams so gay
That prance on you by night
Are but the Sun's hot rays by day
That brought you to this plight!

"The Sun you love so faithfully
Doth love thee too, dear friend,
And day by day works manfully
Your prison'd state to end!

"And drop by drop he drinks his love
To carry her on high,
Until amidst the clouds above
A cloud she'll roam the sky!

"And far and wide, and high and low,
You'll wander gay and free;
'Tis then dear Lake you'll surely know
How true the **Sun** loves thee !

"And then, somewhen, like things possess'd
For long do cloy at last,
Your yearn to flee, which once obsess'd
Your heart and mind, dies fast;

"And thoughts of happy nights and days
You spent as Lake on earth
Return, and turn your heart Earthways;
Again you'll take your birth

"As some huge sea, Earthbound but free
To heave and roll your fill,
Bounded by banks but built by thee
To break or make at will !

"On moonlit nights as bright as this
Your mem'ry will awake
To other moonlit nights of bliss
You spent on Earth as Lake !

"With joyous hiss, rejoicing roar,
You'll seethe and shoot on high
To greet us Beams your friends of yore
Ere e'en we quit the sky !

"And thus you see you are, dear Lake,
Not what you think you are :
'Tis lilies, swans and banks that make
You feel a lake, and bar

"The light to know thyself as **One**
Not **Lake** nor **Cloud** nor **Sea**
But each a guise **You** will to don
To hide **Thyself** from **Thee** !

"But lo! Thy love doth mount the East
And lures us from the Moon
To light and warm earth, plant and beast
And free you too ere noon!"

And as they spoke, the Beams did turn
To blinding scorching rays
That set about the lake to burn
Her free of 'prison'd days.

Kaikeyee

O Hapless Queen! Illfated child of Fame!
Thy husband's love, his dotage-born obsession!
How well thy life illumes the dreadful lesson
That fleshbound love is one consuming flame!
O dauntless soul in woman's fragile frame,
In days of yore thy **love for lord** did burn
Thine inborn fears, thy sex to ashes turn
The while thy daring snatch'd the Gods from shame
Of dire defeat; anew, thy **love for son,**
Thy love to see him all Ayodhya's king,
Did burn the Queen the Wife in thee! How brief
Is joy in fleshbound love! How fraught with grief
This luring flame, this soul-consuming thing!
How grave its toll, how dire the havoc done!
A righteous monarch's death of broken heart:
A woman's anguish lorn of lord and child:
A kingdom's mourn and yearn for heir exil'd:
All these thou wrought! And yet were these no part
Of plan of thy devise: The ruthless art
That rain'd red ruin o'er the Raghu land
Was work of Fate whose woeful vengeful hand
Sent e'en thy dream to crown thy son athwart!
Thy wiles brought gall to all and joy to none.
Misguided queen, Ambition's thoughtless fool,

The Hunch thy mentor, Hell's vile myrmidon
That fann'd a mother's 'spiring spark to flame,
That fiend in guise and guile, thy friend in name
Was imp of Fate, nonelse. and thou her tool ! !

Relentless Fate, when she did turn her face
In wrath upon the Raghu clan and land,
Her blackest look she cast, her gravest hand
She laid on him thy son, whose prowess, grace
And wisdom mark'd him noblest of his race :
Ador'd of parent, brother, kin and spouse,
Admir'd of friend, afear'd of foe, his House
Ne'er gender'd greater son ! Yet fast apace
Did fate's dire darts descend his sinless head.
Fate's femine freaks, alack, were ever so :
The guilty left unscath'd, the guileless bled
Of heart or burnt of soul ! At one fell blow
Was he bereft of sire and kin, and thou
His best-lov'd mother loose'd this flood of woe !

Calamity's touchstone to assay
True worth of humankind. Whilst craven hearts
Do rage and rave, the brave their nobler parts
Convoke and calmly brunt their woe. The sway
Of grief or vengeful ire unveils the way
Of churls: thy son, had he been base of breed
Or faint of heart or mean of soul, thy deed
Had surely charg'd his reeling brain to slay,
Nay, tear thee limb from limb, to vent his ire
And venge a widow'd mother's broken heart,
A eople's mourn and death of godly sire !
But e'en a madden'd woman's monster crime
Could scarcely ruffle his soul serene, sublime:
Sore Pity 'twas replac'd Revenge's part !
In Pity's light it is that **God** doth view
All human sins. And Pity's light doth shed
No purple rays of Pride: nor Ire's blood-red
Nor Envy's green nor Fear's jaundice hue
Mars Pity's flame whose lambent limpid blue
Reveals the **God** in **Man** ! The burden grave
Prince Bharatha in Pity bore to save

His mother's burning soul in kindly dew
Of Chaste Kausalya's forgiveness, did start
A wail of woe for all eternity !
And cleft in twain to con thy life, my heart.
Like marg'ret-shell athirst for Swaathee's rain
Did gasp agape and froze my tears of pain
Into this song of soul-deep sympathy !

Drona

THY flaunted virgin phalanx cleft a two
By but a stripling, thine own pupil's son
Whose bow abash'd his sire's preceptor ! You,
In pain of tortur'd vanity, let run
Thine ire to blind thee to the blackest deed
Besmirch'd the scroll of Aryan Chivalry !
The while thy master's ghoulish hate did feed
And fatten on thy victor's butchery,
Thy father's heart had it bore some pity
For Partha in his dire calamity,
Dread Nemesis had spar'd thine aged brain
The searing, killing agony accrued
Of death of **thine own** son. Thou didst but drain
The bitter gall thy **vanity** had brewed !

Commiseration

FLUNG adrift by very mother at birth :
Accurs'd of anger'd tutor in thy youth :
Forlorn of friend and kith and kin : in sooth,
A nameless, aimless waif on earth.
Relentless Fate swoop'd thee to serve Her aim,
And veer'd thy steps into a nest of plots
And feuds: A Royal house of power-drunk sots,
Perdue to Pity, Chivalry, e'en shame !

Beguil'd with bribe of crown to battle in cause
Of king, who match'd thee 'gainst thy very kin,
Thy valour, bounty, innocence of sin
Avail'd thee naught 'gainst unjust death. Alas!,
Befooled babe 'gainst Fate's bewild'ring odds !
Bejewell'd bauble of the jeering Gods !

Mother-Love

ALL love is is blind ! Is mad ! And what of love
Sees cygnet Kinglings in unlovely ducklings ?–
Rainbow-plumed dulcet warblers in
Her uncouth croaking raven's sooty chicks ?–
Why, blindest, maddest love of all, I ween,
Is certes, weird and wondrous Mother-Love !

The Sixth Columnist 1943

WITH Boche and Bolshie "Up the Pole"
"Appeasement" off its perch,
The Bull-Frog in his Latin hole
Left crockless in the lurch,

With Nazis slaying East end West
To spread their kult of Peace-
Their Vaterland a prey to pest
Of Hitler's brain disease.

With Jappie chewing "China" bits
Far more then he can lump
And throwing chronic colic fits
The greedy, giddly chump !

With Indians touring Lands O' West
In search of civ'lis'd ease;
To find too late that "Home is best"
with no body to please;

With Muslim breaking Hindu pate
And vice versa too,
With potentate of native State
A tiger or cuckoo,

With Gandhi caged safe in quod,
Away from pals and mates,
To Meditate upon his God-
On soya beans and dates

The talk in train or tram or bus
Is all of war and gore!
To ME, why, all this war-time fuss
Is but a beastly bore!

For what care I for Europe's war
Or India's dream "Swaraj"?
A host of Hitlers may not mar
My own, my PERSONAL Raj!

Let Britain boast of battleships,
The Boche of blitzkriegs brag,
Let Europe's dire dictatorships
Prove John Bull's reddest rag;

Let India e'er in fatal clutch
Of famine, pest and best
Suffer a-fresh as n'er so much
Through squabbling priest and priest.

Let patriots pop in and out
Of cabinet and jail,
Let Shibboleth and slogan shout
Drown the ryot's wail;

Let 'Parties' 'wings', 'sabhas' and 'blocks'
Revel in plots and cliques !
Let congressites pull up their socks
At risk of bursting breeks;

Let "Leaguers" spout of "Palkistans"
With tongues in brazen cheeks,
Let "Crackistans" and "Talkistans"
Absorb political freaks;

To ME, to whom Earth itself is
But land surrounding ME
MY food, MY bed, domestic bliss,
MY job with guarantee

Of pension when I'm old and gray,
Are all that ME worry !
Thus, whiche'er way this world may sway,
On velvet is THIS ME !

*Woman the Eternal sufferer and
Man the conventional consoler*

A Monologue

(These scenes, these words, you've seen, you've heard)

—As the curtain rises, found entered—
The Man in the Foreground

(Enter R, a little child sobbing over a broken doll)

The Man

Don't cry little child, don't cry !
They have broken your doll, I know !
Your Playhouse new, this dolly too

Are things of the long ago !
These Childish troubles will soon go by,
And Books and Pictures will soon come by :
So there, little child, don't cry.

[Leads the child and gently pushes her out-L]

(Enter R, a little girl sobbing over a broken Slate and tattered Picture Books)

The Man

Don't cry little girl, don't cry !
They have broken your slate, I know !
And your picture books, your chubby looks
Are things of the long ago !
These sad wild ways
Of school-girl days
Will soon be things of the long ago
And silks and gems will soon come by
So there, little girl don't cry !

[Girl exits-L]

(Enter R, a maid in Grey sobbing over a broken necklace)

The Man

Don't cry little maid, don't cry !
They have broken your necklace, I know !
And your silken things, your gem-set rings
Are things of th' long ago !
But these were made t' be seen and hurled :
Th' glittering tinsels of a passing world !
Why, Life and Love, will soon come by ;
So there, little maid, don't cry.

[Maid exists-L]

(Enter R, a Young woman, in widow's robe)

The Man

Don't cry, Little Woman, don't cry !
They have broken your heart, I know !
And the rainbow gleams

O' your Love's young dreams,
Are things of th' long ago !
Fate turn'd your short liv'd joy to dull despair !
And bid you tread this darken'd world alone !
You pass through life, hopeless and desolate,
Your Love : the memory of a star eclips'd !
It is not given to every one of us, Little Woman
To bask in the brilliance of the dawn, or to revel
In the splendour of the noon of the day of our life !
But we shall All find, if only we will,
a sweet calm sunset
And of peaceful blessedness at the end of
this day of our Life !
And peace, no more but peace, is all yours ! And
After the end of this day of your life...?...
...Why ! Heaven holds all for which you sigh !
So there Little Woman, don't cry! don't Cry !
[Young Woman exits]

CURTAIN

The Recipe

INTO a bare handful of bones and skin
Pour just an ounce or so of flesh and blood ;
Put in a heart love-full as SEA in flood ;
Likewise a mind sea-deep and free from sin ;
Fix on two jumboo ears,...two goo goo eyes ;
Paint on a smile of babe at mothers' breast ;
Inclose a soul that caps Himavat's crest
And speaks with tongue which honey's sweet defies !;

"The Stuffing ?" : Goat's milk, soya beans and dates ;
Now, cover to brim with suff'ring human's tears
And bake this dish in gaol for one score years ;
Take out and "garnish" it with pariah mates ;
Wrap up in rag, prop up with lithe bamboo
And serve : **The World Redeemer : Our Baapoo !**

The Swallerus And The Clothvendor

With apologies to......Lewis Carrol

The Smilin' Seven

1930

—**A Retrospect**—

THE Sun bereft o' reason, rhyme
Was shining day and night;
He dar'd not jib at overtime
Because of Empire's might
Whose sway in every land and clime
God fear'd to trust sans light!

Traders' Tory, vendor's Whig
Did confer tete-a-tete;
They wept to see a Brownland big
Oozing oof to sweat,
The human rights of freedom twig
From rebels brown and jet!

" 'Tis naughty of the natives brown"
